ಸ್ವದೇಶಾಭಿಮಾನಿ

[ಸಂಪುಟ ೩೨] ತಾರೀಕು ೧ನೇ ಏಪ್ರಿಲ್ ೧೯೩೮ (1-4-1938.) [ಸಂಚಿಕೆ ೧೨

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಅನುಕ್ರಮಣಿಕೆ

ಪ್ರಾಂತ್ಯದಲ್ಲಿ ಮದ್ಯನಿರೋಧ ಚಳವಳ

ಬಂಗಾಳದಲ್ಲಿ ಕಾಂಗ್ರೆಸ್ ಸರಕಾರ ಮಾರ್ಪಾಟು

ಫೆಡರೇಶನ್ ವಿರೋಧದ ಕುರಿತು ಕವಿ ರವೀಂದ್ರರ ಅಭಿಪ್ರಾಯ

ಹರಿಪುರ ಕಾಂಗ್ರೆಸಿನಲ್ಲಿ ಮಹಾತ್ಮಾಜಿಯವರಿಗೆ ಸಮಾಧಾನವಿಲ್ಲ

ಗ್ರಾಮ್ಯ ಸ್ತ್ರೀಯರಿಗೆ ಕಾಂಗ್ರೆಸ್ಸಿನ ಸಂದೇಶ.

ಪತ್ರಿಕೆಗಳಿಗೆ ನಿರ್ಬಂಧವಿಲ್ಲ

ಪು. 1

ಇಂದಿರಾದೇವಿ.

ಈಕೆಯು ಇಂಡಿಯಾ ಫಿಲ್ಮ್ ಕಾರ್ಪೊರೇಶನಿನವರು ತಯಾರಿಸುತ್ತಿರುವ 'ಅಪರಾ' ಎಂಬ ವಾಕ್ಚಿತ್ರದಲ್ಲಿ ಪಾತ್ರವಹಿಸಿರುವಳು.

"OUR EXPERIENCE IS YOUR BENEFIT."

A Successful man often confers with his banker about his business problems and every depositor in our bank has the same facility. Especially in these troublous times we wonder if some of our customers are not missing something by failing to come into the bank occasionally, just to talk things over.

OUR OFFICERS ARE ALWAYS GLAD TO SEE YOU.

RESOURCES OF A CRORE.

ESTD: 1906

CANARA BANK, LIMITED.

ಬರೇ 36 ತಾಸುಗಳೊಳಗೆ

ಅತ್ಯಲ್ಪ ಖರ್ಚಿನಿಂದ ಮುಂಬ್ಯಾಗೆ ಅತಿ ಶೀಘ್ರವಾಗಿ ಪ್ರಯಾಣ ಮಾಡಲಿಚ್ಛಿಸುವವರು

ಮಂಗ್ಳೂರಿನಿಂದ

ನಮ್ಮ ಬಸ್ಸುಗಳ ಮೂಲಕ ಕಡೂರು ಮಾರ್ಗವಾಗಿ ಮುಂಬಾಯಿಗೆ ಬರೇ ಒಂದೂವರೆ ದಿವಸಗಳೊಳಗೆ (36 ತಾಸು) ತಲ್ಪಬಹುದು

ಮಂಗಳೂರಿನಿಂದ ಬೆಳಿಗ್ಗೆ 5 a. m.ಗೆ ಹೊರಡುವ ನಮ್ಮ ಕಡೂರು ಸರ್ವಿಸಿನಲ್ಲಿ ಹೊರಟು, ಮಧ್ಯಾಹ್ನ 1 45 p. m.ನ ವೇಳೆಗೆ ಕಡೂರಿಗೆ ತಲುಪಿ, ಕಡೂರಿನಿಂದ 2 p. m. ಗೆ ಹೊರಡುವ ರೈಲಿನಲ್ಲಿ ಹೊರಟು ಮರುದಿನ ಸಂಜೆ 7 15 p. m.ನ ವೇಳೆಗೆ ಮುಂಬಾಯಿಗೆ ತಲುಪುವಿರಿ

ಅಂತೆಯೇ ಮುಂಬಾಯಿಯಿಂದ ಬೆಳಿಗ್ಗೆ 8 a. m. ಗೆ ಹೊರಡುವ ರೈಲಿನಲ್ಲಿ ಹೊರಟು ಮರುದಿನ ಮಧ್ಯಾಹ್ನ 12 35 p. m ಗೆ ಕಡೂರಿಗೆ ತಲುಪಿ ಕಡೂರಿನಿಂದ ಆ ಕೂಡ್ಲೆ 12 45 p. m ಗೆ ಹೊರಡುವ ನಮ್ಮ ಬಸ್ಸಿನಲ್ಲಿ ಹೊರಟು ಅದೇ ದಿನ ಸಾಯಂಕಾಲ 8 50 p. m. ಗೆ ಮಂಗಳೂರಿಗೆ ತಲಪುವಿರಿ.

ಬಸ್ಸು ಪ್ರಯಾಣದಷ್ಟು ಸುಖಕರವಾದ—ನಿರಾಯಾಸಕರವಾದ ಪ್ರಯಾಣವು ಬೇರೊಂದಿರಲಾರದು

ಊರುಗಳ ಬದಲಾವಣೆ—ನೋಟಗಳ ಬದಲಾವಣೆ—ಜನತೆಯ ಸಂಪರ್ಕ—ಆಹಾರದ ಅನುಕೂಲತೆ—ಇವೆಲ್ಲವೂ ಬಸ್ಸು ಪ್ರಯಾಣದಲ್ಲಿದೆ

Joint Managers.

The C. U. B. Agency,
CHICKMAGALUR.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced

Manufactured by –
The West Coast Soap Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದಂದರ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents
Panchmal Krishnaya Shenoy & Son,
Bunder MANGALORE

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents –

The Kerala Tea Syndicate,
PONANI–(S. Malabar)

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಕಾಲಾಮೃತ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2– 8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡ ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್
ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಸ್ವ, ಚಿಕಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡ 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು — ಡಾ। ಬಿ ವಿ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಪುರ, ಬಾಕೀ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಗುಣಬಾರದಿದ್ದರೆ ಕ್ರಯ ರೂ ೪–೦–೦ ವಿ ಪಿ ಅಂಚೆ

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ (S. M. C.)

ರಕ್ಷೈರ್ವರ್ಗಹಾರ್ಯೈಸ್ತುತುರ್ಗನ ದೇವಾ ನ ಭೇಜಿರೇ ಭೀಮ ವಿಶೇಣ ಭೀತಿನ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥

ದೊರೆಯಲನುಪಮ ರತ್ನಗಳು ಸಾಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ! ಸುಕೆ ಭಿಶ್ವವ ಸುಡುವ ಬರುತಿರುವ ॥

ಸ್ವದೇಶಾಭಿಮಾನಿ

SWADESHABHIMANI

ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾ. ೧ನೇ ಶುಕ್ರವಾರ ಏಪ್ರಿಲ್ ೧೯೩೮

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.)

ತಾರೀಕು 1—4—1938.

ಮೊದಲಾಗಿ, ಪಾಶ್ಚಾತ್ಯರು ತಿಳಿದುಕೊಂಡಿರುವ 'ಫೆಡರೇಶನ್' ಎಂಬ ಶಬ್ದದ ಅರ್ಥವು, —ನಮ್ಮಲ್ಲೀನೋ ಪಟಾಹತುಗಳಷ್ಟೆ ಸ್ವಾತಂತ್ರ್ಯವನ್ನು ಕೊಡತಕ್ಕ ರಾಜ್ಯಭಾರ ಕ್ರಮವೆಂದು ಸೂಚಿಸುತ್ತಿಲ್ಲ ಎಂದೇ ನಾನು ನಿಮ್ಮನ್ನು ತಿದ್ದಬೇಕಾಗಿದೆ ಜಪಾನೂ ಈ ಶಬ್ದವನ್ನೆ ಚೀನವನ್ನು ಕುರಿತಾಗಿ ಆಡುತ್ತ, ಪ್ರಯೋಗಿಸುತ್ತಇದೆ ಇಂಗ್ಲಿಷರು ಜಪಾನಿನಂತೆಯೆ ಆ ಶಬ್ದಾರ್ಥವನ್ನು ಇಲ್ಲಿ ಪ್ರಯೋಗಿಸುವುದರಲೇ ತೃಪ್ತಿ ಹೊಂದುವಂತಾಗಲೆಂದು ಮೂಲದಲ್ಲೇ ಸೂಚಿಸಿಕೊಳ್ಳುವೆನು

ಈ ಸುಲಭ ಮತ್ತು ಸ್ಪಷ್ಟವಾಗಿರುವ ಪ್ರಶ್ನೆಯೊಂದನ್ನು ಕೇಳುವೆನು?—ಯಾವ ದೇಶದ ನಿವಾಸಿಗಳಿಗೆ ಸ್ವರಕ್ಷಣೆಗೆ ಬೇಕಾಗಿರುವ ಆಯುಧಗಳನ್ನು ಧರಿಸಲು ಅಧಿಕಾರವಿಲ್ಲವೋ, ಸರಕಾರದ ಕಂದಾಯದ ಪದಂಶದಲ್ಲಿ ನಾಲ್ಕಂಶದ ಮೇಲೆ ವ್ಯಯಾಧಿಕಾರವಿಲ್ಲವೋ, ಪರರಾಷ್ಟ್ರನೀತಿಗೆ ಯಾರಿಗೆ ಅಧಿಕಾರವೇ ಇಲ್ಲವೋ, ಅಂತಹ ನಿವಾಸಿಗಳಿಗೆ 'ಸ್ವರಾಜ್ಯ ಕೊಡಲಾಗಿದೆ ಎನ್ನುವುದಕ್ಕೇನು ಅರ್ಥವಿದ್ದೀತು? ಇದಕ್ಕೆ ದೂರದಲ್ಲಿ ಎಂದರೆ ಕೆಂಬಿಡಂಶದಲ್ಲಿ ಸಮಾನವಾಗಬಹುದಾದ ವ್ಯಾಸ್ತ ಮಾಡಿದಲ್ಲಿ ಬ್ರಿಟಿಷರು ಇದನ್ನು ಅಂಗೀಕರಿಸುವ ಬದಲಾಗಿ, ತಮ್ಮನ್ನು ಇದರಿಂದ ಬಿಡಿಸಿಕೊಳ್ಳುತ್ತಿರಲಿಲ್ಲವೆ? ಇಂಗ್ಲೆಂಡಿಗೆ ಇಂತಹ ತೆರದ ಔದಾರ್ಯವನ್ನು ತೋರಿಸಿದ್ದರೆ ಅವರು ಹೇಗೆ ಅದನ್ನು ಕಾಣುತಿದ್ದರಂತೆ?

ಆದರೆ ನಮ್ಮ ಜಾಣ್ಮೆಯು, ನಮ್ಮಲ್ಲಿ ತುಂಬಾ ಕನಿಕರವನ್ನೂ ಪ್ರೇಮವನ್ನೂ ಇಟ್ಟಿರುವರೆಂದು, ಇಲ್ಲಿ ಕಾನೂನು ಕ್ರಮವನ್ನು ಬಲುಕಷ್ಟದಿಂದ ಊರ್ಜಿತವಿಡುವ ಅಖಂಡ ಭಾರವನ್ನೆ ಹೊತ್ತಿರುವರೆಂದೂ ಮೊದಲಾಗಿ ನಮ್ಮ ವಿಷಯ ತಾಂಗಿ ಹೇಳುವರೆನ್ನುವುದರಲ್ಲಿ ಸಂದೇಹವಿಲ್ಲ ನಮ್ಮಲ್ಲಿ ಕೆಲವರು, ಅವರನ್ನು ನಂಬಿ,—ಇದುವರೆಗೆ ದೀರ್ಘಕಾಲ ನಮ್ಮನ್ನು ಆಳಿರುವುದರ ಪರಿಣಾಮವಾಗಿ ಉಂಟಾದ ಪರಿಣಾಮಗಳ ಹೊತ್ತಿಗೆಯಲ್ಲಿ, ನಿರಂತರವಾದ ದಾರಿದ್ರ್ಯವೂ ಅಜ್ಞಾನವೂ ನಿರ್ಜೀವಭಾವವೂ ಜನಧನದ ಅಪ್ರತಿಮ ಕ್ಷೀಣದೌರ್ಬಲ್ಯವೂ ತೋರುತ್ತಿರುವುದಲ್ಲಾ ಎಂದು ತೋರಿಸುವ ಅಗೌರವ ತೋರಿದರೆ, ಅಂತಹರನ್ನು ಕಠಿನವಾಗಿ ದಂಡನೆಗೆ ಒಳಪಡಿಸಬಹುದು. ಆದರೂ, ಶಿಕ್ಷಣ ಕ್ಷೇಮಸಾಧನೆ ಸಾಂಪತ್ತಿಕ ಅಭ್ಯುದಯಗಳಿಗಾಗಿ ನಮ್ಮ ಜನಸಂಖ್ಯೆ ಆಧಿಕ್ಯದ ದೃಷ್ಟಿಯಿಂದ ಸರಕಾರವು ವ್ಯಯಿಸುವ ಮೊಬಲಗನ್ನು ಹೋಲಿಸಿ ಯಾರೂ ನೋಡಿದಲ್ಲಿ, ಮತ್ತು ಅದನ್ನು ಜಪಾನಿನೊಡನೆ ಹೋಲಿಸಿದಲ್ಲಿ, ನಮ್ಮವರ ವಿಮರ್ಶೆಯ ತಥ್ಯವು ತಾನಾಗಿ ಸ್ಪಷ್ಟವಾಗುವುದು ಅಷ್ಟೆ ನಮಗೆ ಖಂಡಿತವಾಗಿ ದೊರೆತ ಉಪಕಾರವೆಂದು ತಿಳಿದುಕೊಳ್ಳಲು ಯಾವ ಕಷ್ಟವೂ ಇರದು

ಬ್ರಿಟಿಷರಿಗೆ ಸ್ಪಷ್ಟವಾಗಿ ನಾನಿಷ್ಟೇ ತಿಳಿಸಬೇಕೆಂದಿರುವೆನು ನಮ್ಮನ್ನು ನಿಮ್ಮ ಕೈಯಲ್ಲಿ ಬಿಗಿಹಿಡಿದಿರುವಷ್ಟು ಕಾಲಕ್ಕೆ, ನಮ್ಮ ಮೈತ್ರಿಯನ್ನಾಗಲಿ ವಿಶ್ವಾಸವನ್ನಾಗಲಿ ನೀವು ಸಂಪಾದಿಸಿಕೊಳ್ಳಲಾರಿರಿ ನಿಮ್ಮ ಮನೆಗಳಲ್ಲಿ ನೀವೆಷ್ಟೇ ಸದ್ಗುಣಿಗಳೂ ನ್ಯಾಯವಾದಿಗಳೂ ಯಥಾರ್ಥವೃತ್ತಿಯುಳ್ಳವರೂ ಎಂದು ನಾವು ತಿಳಿದೇ ಇರುತ್ತೇವೆ ನಿಮ್ಮ ಇಂತಹ ಉತ್ತಮ ಲಕ್ಷಣಗಳಿಗೆ

ಶ್ರೀ ರವೀಂದ್ರನಾಥ ಠಾಕೂರರ ಅಭಿಪ್ರಾಯ

ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯಶಾಹಿ!

ಯುರೋಪವೆಲ್ಲ ಮೃತ್ಯುಮುಖಿ

★

[ಬ್ರಿಟಿಷ ಮಿತ್ರರು ಕೆಲವರು ಕವೀಂದ್ರರನ್ನು, ನಮಗೆ ಈಗ ಕೊಟ್ಟಿರುವ ರಾಜಕೀಯ ಶಾಸನವನ್ನು ಕುರಿತಾಗಿ ಅಭಿಪ್ರಾಯ ಕೇಳಿದರು ನಮ್ಮನ್ನಾಳುತ್ತಲಿರುವ ಶಾಸನಕ್ರಮದಿಂದ ಬ್ರಿಟಿಷರಿಗೆ ಎಂತಹ ಹಾನಿ ತಟ್ಟುವುದು ಎಂಬುದನ್ನು ಕುರಿತು ಕವೀಂದ್ರರು ಹೀಗೆ ಬರೆದಿರುವರು.—]

ಕವಿ ರವೀಂದ್ರರು

ವಿರುದ್ಧವಾಗಿ ಬ್ರಿಟಿಷರು ಇಲ್ಲಿ ಆಚರಿಸುತ್ತಾರೆಂದರೆ ನಮಗೆ ಆಶ್ಚರ್ಯವುಂಟಾಗಲೂ ಇದೇ ಕಾರಣವಾಗಿರಬಹುದು ಆದರೆ, ಸಾಮ್ರಾಜ್ಯದ ಗಳಿಕೆಯೇ ಲಕ್ಷಣಗಳನ್ನು ಕೆಡಿಸುವುದೆಂದೂ ಅದೇ ನಿಮ್ಮನ್ನು ಕೆಡಿಸಿರುವುದೆಂದೂ ಮರೆಯದಿರಬೇಕು.

ಇಂತಹ ಸಾಮ್ರಾಜ್ಯವಿಸ್ತಾರಕ್ಕಾಗಿ, ನೀವು ಕೊಟ್ಟಿರುವ ಬೆಲೆ ಭಯಂಕರವಾಯಿತೆಂದು ತಿಳಿದಿರುವವರೂ ತುಂಬ ನಿಮ್ಮಲ್ಲಿರುವರೆಂದು ನಾನು ಖಂಡಿತ ಬಲ್ಲೆನು. ಆದರೆ ನಿಮ್ಮ ಸದ್ಗುಣಗಳಲ್ಲಿ ಹೆಚ್ಚಿನವನ್ನು ನೀವು ಕಳೆದುಕೊಂಡು ಈ ಸಂಪಾದನೆ ಸಾಧಿಸಿದ ಕಾರಣವೇ, ನಿಮಗೆ ವಶವಾದ ಸಾಮಾನ್ಯರಿಗೆ ಅಸಾಧ್ಯವಾದ ಧ್ಯೇಯವನ್ನು ಸಾಧಿಸಲು ತೊಡಗಿದೆಯೆಂದೂ ತಿಳಿಯಬೇಕಾಗಿದೆ

ರಾಜಕೀಯ ನಿರ್ಮಲತೆಯನ್ನು ತೊರೆದುದು ನಿಮ್ಮ ಹಿತಕ್ಕೂ ಗೌರವಕ್ಕೂ ಹಾನಿತಟ್ಟುವಂತೆ ಕೆಲವು ಜನಾಂಗಗಳು ಮುಂದರಿಯುವಾಗ ಅವರನ್ನು ಎದುರಾಡಲು ನೀವು ಬಲಹೀನರಾಗುವಂತೆ ಈ ವಿನಾಶಮುಖರಾಗಿರುವ ಸಾಮ್ರಾಜ್ಯದ ಭಾರವೇ ಕಾರಣವಾಗುವದಾಗಿ ನೀವು ತಿಳಿದಿರುವಿರಾಗಿ ನಾನು ಭಾವಿಸುತ್ತೇನೆ. ಕೇವಲ ಬಲಮಾತ್ರದಿಂದಲೇ ಸ್ಥಾಪನೆಹೊಂದಿರುವ ಈ ಸಾಮ್ರಾಜ್ಯದ ಗೌರವವೆಂಬುದನ್ನು ತ್ಯಜಿಸುವುದಕ್ಕೆ ನಿಮ್ಮಲ್ಲಿರುವ ವಿವೇಕಿಗಳೂ ಧೀರರೂ ಅಲ್ಪಸಂಖ್ಯಾಕರೂ, ಸ್ವನಾಶಕ್ಕೆ ಮುಂದೋಡುವ

ಕರಡು ಅಧಿಕಾರ ಲಾಲಸೆಯನ್ನು ಪೆಣಗಾಡಲು ಸಲಕರಣೆಗಳಿಲ್ಲದವರೂ ಆಗಿದ್ದಾರೆ

ನನ್ನ ಸ್ವಕೀಯವಾದ ಅಭಿಪ್ರಾಯವನ್ನು ಕೇಳುವಿರಾದರೆ,— ಈ ಮೃತ್ಯುಸಂಕಟವನ್ನು ತಪ್ಪಿಸುವುದು ಕಷ್ಟವಾಗಿದೆ ಎನ್ನುವೆನು, ಏಕೆಂದರೆ, ಯುರೋಪಿನ ಎಲ್ಲ ಜನಾಂಗಗಳೂ ಈಗ ಭಯಂಕರ ಭ್ರಾಮಕ ಆಸಕ್ತಿಯಿಂದ ಉತ್ಸಾಹಗೊಂಡು ವರ್ತಿಸುವ ಪ್ರಯತ್ನಗಳು ಒಬ್ಬರನ್ನೊಬ್ಬರು ನಿರ್ನಾಮ ಮಾಡುವುದಕ್ಕಾಗಿಯೆ ನಡೆಯುತ್ತವೆ ಆದರೂ, ಇಂತಹ ದುರ್ಭಾಗ್ಯವೂ ವಿಪತ್ತೂ ಒದಗ ವಾಗಲಾದರೂ ನಮಗೆ ಸಲ್ಲಬೇಕಾದ ಪ್ರತೀಕಾರದ ಮುಕ್ತಿಯನ್ನು ಮೀರಿದ ಭವಿಷ್ಯದ ಸುಧಾರಣೆಯನ್ನು ಕಸಿಯುತ್ತೊಡದೆ ಇರುವಂತಾಗಲೆಂದು ಹಾರಯಿಸುವೆನು ಏಕೆಂದರೆ, ಈ ಸುಧಾರಣೆಯಲ್ಲಿ ಗೌರವಯುಕ್ತವೂ ಜೀವಿತವಿರಬೇಕಾದುದೂ ಮಹತ್ವದ ಅಂಶವಿದೆ ಹಾಗಿದ್ದರೂ, ಮೃತ್ಯುವನ್ನು ಕೆಣಕಿದರೆ, ಅದು ಹೇಗೆ ಎರಗೀತೆಂದು ಹೇಳುವುದು ನಮಗೆ ಅಸಾಧ್ಯವಾಗಿದೆಯಲ್ಲವೆ?

ನಮ್ಮ ಭಾಗ್ಯವೂ ನಿಮ್ಮ ಭಾಗ್ಯದೊಡನೆಯೆ ಸಮ್ಮಿಲಿತವಾಗಿಯೆ ಇದೆ ನಿಮ್ಮ ಸಾಮ್ರಾಜ್ಯವು ಕುಸಿದುಬಿದ್ದಲ್ಲಿ, ಅಸಹಾಯರಾಗಿ ನಿಮ್ಮನ್ನೆ ಅವಲಂಬಿಸಿರುವ ನಮ್ಮ ಜನಾಂಗವು ಮೃತವಾಗುವುದಾದರೂ, ನಿಮ್ಮಲ್ಲಿನ ಉತ್ತಮಾತ್ಮರೊಡನೆಯೆ ನಾವೂ ಕಳೆದಿರುವ ಎಷ್ಟೆಷ್ಟೋ ಆಶಾಕಾಂಕ್ಷೆಗಳು ಎಂದಿಗೆ ಕೈಗೂಡುವುವೋ ಎಂದು ನಾವು ನಿರೀಕ್ಷಿಸಿರುವುದೂ ಕುಸಿದು ಬೀಳುವುದಲ್ಲವೆ? ನಮ್ಮಲ್ಲಿಯೂ ನಿಮ್ಮಲ್ಲಿಯೂ ಅವಿವೇಕಿಗಳಾದವರನ್ನೂ ಎದುರಾಡುವವರನ್ನೂ ನಾವು ಐಕ್ಯಮತ್ಯದಿಂದ ಒಂದಾಗಿ ಸೇರಿಯೇ ತಡೆಯಬೇಕಲ್ಲವೆ?

ಬ್ರಿಟಿಷರಿಗೆ ವಿರೋಧಿಗಳಾಗುವೆವೆಂದು ಭಾರತಜನಾಂಗವು ಎಂದೂ ಪ್ರತಿಜ್ಞೆಮಾಡಿಲ್ಲ; ಜಾಗ್ರತವಾದ ಭಾರತವು ಜಾಗ್ರತವಾದ ಬ್ರಿಟನಿನೊಡನೆ ಸೇರಿದ್ದು, ಇಬ್ಬರನ್ನೂ ಧ್ವಂಸವಾಗುವಂತೆ ಅವಿವೇಕದಿಂದ ವರ್ತಿಸುವವರನ್ನು ವಿರೋಧಿಸಬೇಕಾಗಿದೆ

ನಮಗೆ ಕೊಟ್ಟಿರುವ ಹೊಸ ರಾಜ್ಯಾಂಗರಚನೆಯ ವಿಚಾರದಲ್ಲಿ, ನಿಜವಾಗಿಯೂ ಅದರ ವಿಷಯ ಆಲೋಚಿಸುವುದೇ ಅಗತ್ಯವಿಲ್ಲ. ರಾಜತಂತ್ರಜ್ಞರೂ ಆಳರಸರೂ ಸೇರಿ, ಒರೆದು ಕಡೆ ನಮ್ಮಲ್ಲಿನ ಪ್ರಮುಖ ಸ್ತ್ರೀಪುರುಷರನ್ನು ಕೈದು

ಮಾಡುತ್ತಲೂ (ವಿಶೇಷವಾಗಿ ವಿಚಾರ ಮಾಡದೆಯೆ) ಆತ್ತ ರಾಜ್ಯಾಂಗರಚನೆಯ ಶಾಸನ ಬರೆಯುತ್ತಲೂ ಇದ್ದರಷ್ಟೆ ಇದರಿಂದ, ಅವರಲ್ಲಿನ ಕೃಪಣತೆ ಅವಿಶ್ವಾಸ ಸಂಕುಚಿತ ಬುದ್ಧಿ ವಿಪರೀತ ಸ್ವಾಧಿಕಾರ ಲಾಲಸೆ—ಇವೆಲ್ಲವೂ ಆ ಕಾನೂನಿನಲ್ಲಿ ತೋರುತ್ತವೆ.

ಇಂತಹ ಯಾವ ಕೃತಕ ಸುಧಾರಣೆಯಿಂದಲಾದರೂ ನಮಗೆ ಶಾಶ್ವತವಾದ ಹಿತವು ಉಂಟಾಗಲಾರದು, ಸರ್ವಥಾ ಉಂಟಾಗದು ಒಬ್ಬನನ್ನು ಮತ್ತೊಬ್ಬನೂ, ಒಂದು ಜನಾಂಗವನ್ನು ಮತ್ತೊಂದು ಜನಾಂಗವೂ ಸ್ವಲಾಭಕ್ಕಾಗಿ ಉಪಯೋಗಿಸುವ ಮಾರ್ಗವನ್ನು ಎದುರಿಸುವವರು ಎಲ್ಲಿದ್ದರೂ ಅವರೊಡನೆ ನಮ್ಮ ಬಲವನ್ನು ಸೇರಿಸಿ ನಡೆಯಲು ನಾವೆಲ್ಲರು ಕಲಿತುಕೊಳ್ಳುವುದೇ ನಮ್ಮ ಭವಿಷ್ಯವನ್ನು ಉತ್ತಮ ಸ್ಥಿತಿಗೆ ತರುವುದೆನ್ನುವೆನು

ನಿಷ್ಕಲಂಕ ಸತ್ಯಶೋಧನೆ

ಮಹಾತ್ಮಾಜಿಯವರ ವಿಮರ್ಶೆ

ಯಾವುದೊಂದು ಕಾರ್ಯಕ್ರಮವನ್ನು ಸ್ವಲ್ಪವೂ ಪಕ್ಷಪಾತವೂ ಇಲ್ಲದೆ ಸತ್ಯಶೋಧನೆ ಮಾಡುವುದರಲ್ಲಿ, ಕಾರ್ಯೋದ್ಯಮಿಗಳಲ್ಲೇ ಒಬ್ಬರಿದ್ದರೆ, ಅದರಷ್ಟು ಉತ್ತಮವಾದ ಪ್ರಗತಿಗೆ ಬರುವುದು. ಹೊರಗಣವರು ಹೇಳುವುದರಲ್ಲಿ ಎಷ್ಟು ಸತ್ಯವಿದ್ದರೂ, ಅದೊಂದು ಬಗೆಯ ಪಕ್ಷಪಾತ ದೃಷ್ಟಿಯಿಂದ ವಿರೋಧಭಾವದಿಂದ ಹೇಳುವ ಮಾತಾಗಿದೆ ಎಂದು ಊಹಿಸಲೂ ಕಾರಣವಾಗುತ್ತದೆ ಕಠಿನ ಮತ್ತು ತೀವ್ರ ಸ್ವವಿಮರ್ಶೆಯಷ್ಟು ಚೆನ್ನಾಗಿ ಇತರ ಎಂತಹ ವಿಮರ್ಶೆಯೂ ಸಾರ್ಥಕವಾಗುವುದಿಲ್ಲ

ಇದೇ ಕಾರಣದಿಂದ, ಕಾಂಗ್ರೆಸ್ ಮಂತ್ರಿಮಂಡಲಗಳ ಕಾರ್ಯನಿರ್ವಹದ ಪರಿಣಾಮಗಳನ್ನು ಕುರಿತು, ಮಹಾತ್ಮಾಜಿಯವರೇ ತೀಕ್ಷ್ಣ ಟೀಕೆಯನ್ನು ಮಾಡುತ್ತಿರುವುದನ್ನು, ವಿರೋಧಪಕ್ಷದವರ ಮಾತೆನ್ನದೆ, ಮಂತ್ರಿಗಳು ಅಂಗೀಕರಿಸಿ ತಾವೂ ಸ್ವಲ್ಪ ವಿಮರ್ಶಿಸಿಕೊಂಡು ತಿದ್ದಿಕೊಳ್ಳುವುದರಲ್ಲಿ ಆಕ್ಷೇಪವಿಲ್ಲದಷ್ಟೆ

ಈ ವಿಮರ್ಶೆ ಯಾವುದೆಂದು ಒಗೆದು ರಾಜತಂತ್ರವಲ್ಲ. ಕಾಂಗ್ರೆಸಿನಲ್ಲಿ ಭಕ್ತಿಯಿರುವ ಕಾರಣವೇ ಇದು ಹೊರಟಿದೆ

ಧ್ಯೇಯವು ಎಷ್ಟು ಉಚ್ಚವೋ, ಊನಗಳೂ ಅಷ್ಟೇ ನ್ಯೂನವಾಗಿ ತೋರುವುದು ಸಹಜ.

ಅಲ್ಲಹಾಬಾದಿನಲ್ಲಿ ಸಮಾಜದ್ವೇಷಿಗಳ ದಂಗೆಗಳೇನೂ ಕಡಿಮೆಯಾಗದೆ ಹಾವಳಿ ಎಬ್ಬಿ

(೧೧ನೇ ಪುಟಕ್ಕೆ ಮುಂದುವರಿಯುವುದು)

ಚಿತ್ರ-ವಿಚಿತ್ರ

★

ಐರಿಶ್ ವೀರ ಕೆಸ್‌ಮೆಂಟ್

ಸ್ವತಂತ್ರ ಐರ್ಲೆಂಡಿಗಾಗಿ, ತನ್ನ ಪ್ರಾಣವನ್ನು ಅರ್ಪಿಸಿದ ಕೆಸ್‌ಮೆಂಟ್‌ನೆಂಬ ಐರಿಶ್ ವೀರನ ಕುರಿತು ಒಂದು ಲೇಖವು ನೀವು ಓದಿರಬಹುದು. ಆತನನ್ನು ಧಂಗೆಗಾಗಿ 1916ರಲ್ಲಿ ಗಲ್ಲಕ್ಕೇರಿಸಿದ್ದರು. ಇಂಗ್ಲಾಂಡಿನ ಪೆಂಟನ್‌ವಿಲೆ ಜೈಲಿನಲ್ಲಿ ಆತನ ಶವಸಂಸ್ಕಾರ ನೆರೆಯಿಸಲಾಗಿತ್ತು. ಆತನ ಶವಕ್ಕಾಗಿ ಐರಿಶರು ಬಹಳ ಸಮಯ ಹೋರಾಡಿದ್ದರು. ತನ್ನ ಕಳೇಬರವು ತನ್ನ ಸ್ವನಾಡಿನಲ್ಲಿ ಸಂಸ್ಕಾರ ಹೊಂದಬೇಕೆಂದು ಕೆಸ್‌ಮೆಂಟನ ಮರಣಸಮಯದ ಅಪೇಕ್ಷೆಯಾಗಿತ್ತು. ಆ ಮೇರೆಗೆ ಡಿವೆಲರನು, ಇಂಗ್ಲೀಷರಿಂದ ಈ ಕಳೇಬರವನ್ನು ಪಡೆದಿರುವನು. ಅದನ್ನು ಸದ್ಯದಲ್ಲಿ ಸ್ವದೇಶಕ್ಕೆ ಸಾಗಿಸಿ, ಅಲ್ಲಿ ಅದರ ಶವ ಸಂಸ್ಕಾರವನ್ನು ನಡೆಯಿಸುವನಂತೆ.

ರೈತನ ದುರ್ಭಾಗ್ಯ.

ಬೆಲ್‌ಗ್ರೇಡಿನಲ್ಲಿ ಮಂತ್ರಗಾರನೊಬ್ಬನು ರೈತನೊಬ್ಬನಿಗೆ ನಿಧಿ ಸಾಧಿಸುವ ಸುಲಭ ಉಪಾಯವನ್ನು ಕಲ್ಪಿಸಿಕೊಟ್ಟ ವಾರ್ತೆ ಬಂದಿರುತ್ತದೆ.

ಕೋಳಿ ತತ್ತಿಯನ್ನು ಕಂಕುಳಲ್ಲಿ ಕಾವು ಕೊಟ್ಟು ಮರಿಮಾಡಿ, ಆ ಮರಿಯನ್ನು ತಿರುಗ ಬಿಟ್ಟಾಗ ಅದು ನೇರಾಗಿ ನಿಧಿ ಇದ್ದ ಕಡೆ ಹೋಗುವುದೆಂದು ಮಂತ್ರಗಾರನ ಭೋದನೆ.

ಸಂಪತ್ತು ಪಡೆಯುವ ಉತ್ಸಾಹದಿಂದ ರೈತನು ತನ್ನ ಕಂಕುಳಡಿಯಲ್ಲಿ ಒಂದು ಕೋಳಿ ತತ್ತಿಯನ್ನು 40 ದಿನಗಳ ವರೆಗಿಟ್ಟು, ಕೊನೆಗೆ ಒಂದು ದಿವಸ ಅದರಿಂದ ಮರಿಯು ಹೊರಟಿತು. ಆದರೆ ರೈತನ ದುರ್ಭಾಗ್ಯದಿಂದಾಗಿ ಮರಿಯು ಸ್ವಲ್ಪ ಸಮಯದಲ್ಲಿ ಮೃತವಾಯಿತಂತೆ. ಅದರಿಂದ ರೈತನಿಗೆ ಉಂಟಾದ ಶೋಕವು ಅಷ್ಟಿಷ್ಟಲ್ಲವಂತೆ.

ಕಾಸಿಗೊಂದು ಮುತ್ತಿನ ಹಾರ.

ಮಿಸ್ ಪೆಟ್ರೇಶಾ ರಾಯನ್‌ಳು ನ್ಯೂಯೋರ್ಕಿನ ಪ್ರಸಿದ್ಧ ರೇಡಿಯೊ ಗಾಯಕಿ. ಕೃತಕ ಮುತ್ತಿನ ಹಾರವೊಂದನ್ನು ಪಡೆಯಲು ಒಂದು ಅಂಗಡಿಗೆ ಹೋದಳು. ಬರೇ ಎಂಟಾಣೆಗೆ ಒಂದು ಮುತ್ತಿನ ಹಾರವನ್ನು ಪಡೆದಳು. ಆ ಹಾರವನ್ನು ತನ್ನ 5000 ರೂಪಾಯಿ ಕ್ರಯ ಬಾಳುವ ಮುತ್ತಿನ ಹಾರದೊಂದಿಗೆ ಸರಿಹೋಲಿಸಲು ಅಲ್ಲಿ (ಅಂಗಡಿಯಲ್ಲಿ) ಹೊರಗೆ ತೆಗೆದು, ಅದನ್ನು ಅಲ್ಲಿ ಮೇಜಿನಲ್ಲಿ ಮರೆತು ಬಿಟ್ಟು ಹೊರಗೆ ನಡೆಯುವವಳಾದಳು. ಹೊರಗೆ ಹೋದ ಸ್ವಲ್ಪ ಸಮಯದೊಳಗೆ ತನ್ನ ನಿಜವಾದ ಮುತ್ತಿನ ಹಾರವು ಮಾಯವಾದುದನ್ನು ತಿಳಿದು, ಮರಳಿ ಅಂಗಡಿಗೆ ತೆರಳಿ, ಆ ಹಾರವನ್ನು ಕೇಳಲು, ಅದು ಆಗಲೆ ಎಂಟಾಣೆಗಳಿಗೆ ಮಾರಾಟವಾಗಿದೆಂದು ತಿಳಿಯಬಂತು.

ಸೋಡ್ತಿ ಸಂಪತ್ತಿನಿಂದ ಬೇಸರ ಹಿಡಿದವನು.

ಸ್ಮಿತ್‌ನೆಂಬ ಕೂಲಿ ಕೆಲಸದವನಿಗೆ ಮೊನ್ನೆ ಈಚೆಗೆ ಒಂದು ಫುಟ್‌ಬೋಲ್ ಸೋಡ್ತಿಯಲ್ಲಿ 15,000 ಪವನುಗಳು, ಬಹುಮಾನ ದೊರಕಿದುವು. ಬರೇ ಕೆಲವಾಣೆ ಟಿಕೇಟಿಗೆ ತಕ್ಷಣವೆ ಆತನು ತನ್ನ ವೃತ್ತಿಯನ್ನು ತ್ಯಜಿಸಿ, ವಿರಾಮದ ಜೀವನವನ್ನಾಚರಿಸಿದನು.

ಆದರೆ ಕೆಲವೇ ದಿನಗಳಲ್ಲಿ ಆತನಿಗೆ ವಿರಾಮ ಜೀವನದ ಕುರಿತು ಬೇಸರ ಉಂಟಾಗಿ, ಆತನೀಗ ಮತ್ತೊಮ್ಮೆ ತನ್ನ ಮೊದಲಿನ ಕೆಲಸವನ್ನು ಪ್ರಾರಂಭ ಮಾಡಿರುವನೆಂದು ತಿಳಿದು ಬರುತ್ತದೆ.

ಚೆಕ್ಕಿನ ಜನನ ದಿವಸ ಸಮಾರಂಭ.

ನ್ಯೂಯೋರ್ಕಿನ ಟೂಮಿ ಕ್ಲಾರ್ಕ ಎಂಬ ಚೆಕ್ಕಿನ ಇಪ್ಪತ್ತಮೂರನೇ ಜನನೋತ್ಸವವು ಮೊನ್ನೆ ದಿವಸ ಆಚರಿಸಲ್ಪಟ್ಟಿತು. 700ಕ್ಕೆ ಮಿಕ್ಕಿದ ಅತಿಥಿಗಳು ಈ ಸಮಾರಂಭಕ್ಕೆ ಸೇರಿದ್ದರು. ಚೆಕ್ಕಿಗೆ ಅಂದು ಅನೇಕ ಪಾರಿತೋಷಕಗಳು ಬಂದಿದ್ದವಂತೆ.

ಪೌರ್ವಾತ್ಯದ ಹೊಲಿವುಡ್ ನಗರ

ಮದ್ರಾಸು ನಗರದಲ್ಲಿ ಇತ್ತೀಚೆಗೆ ಚಲಚಿತ್ರ ತಯಾರಿಸುವ ಸ್ಟೂಡಿಯೊ ಸಂಸ್ಥೆಗಳು ಹೆಚ್ಚುತ್ತಾ ಬಂದುದು ಕಾಣಿಸುತ್ತದೆ. ಹಿಂದೂದೇಶದ ಪ್ರತಿಯೊಂದು ನಗರದಲ್ಲಿ ಈ ತರದ ಸ್ಟೂಡಿಯೊಗಳಿರಬಹುದು. ಆದರೆ ಮದರಾಸಿನಲ್ಲಿ, ಆ ಬದಿಗಾದರೂ ಹೋಗಿ,—ಅಲ್ಲೊಂದು ಫಿಲ್ಮ್ ಸ್ಟೂಡಿಯೋವನ್ನು ನೀವು ಕಾಣುವಿರಿ. ಹಿಂದೂದೇಶದಲ್ಲಿರುವ ಫಿಲ್ಮು 'ಸ್ಟೂಡಿಯೋ'ಗಳ ಈಗಿನ ಸಂಖ್ಯೆಯನ್ನು ನೋಡಿದರೆ, ಫಿಲ್ಮು ವ್ಯವಸಾಯವು ಒಳ್ಳೆ ಉರ್ಜಿತ ಅವಸ್ಥೆಯಲ್ಲಿ ಧುಕ್ಕತದೆ ಎಂದು ಹೇಳಬೇಕಾಗಿದೆ. ಈ ವ್ಯವಸಾಯಕ್ಕೆ ಒಳ್ಳೆ ಉತ್ತೇಜನವಿದೆ.

ಸಮಾಜ ನಾಯಕರಿಗೆ ಕಾರಾಗೃಹ.

ಕಳೆದ ತಿಂಗಳಲ್ಲಿ ಲಂಡನಿನ ಕೋರ್ಟಿನಲ್ಲಿ ಅತಿ ನೆ ಹತ್ತಾದ ಮೊಕದ್ದಮೆಯೊಂದು ವಿಚಾರಿಸಲ್ಪಟ್ಟಿತು. ಓರ್ವ ರತ್ನ ವ್ಯಾಪಾರಿಯನ್ನು ಮೋಸಗೊಳಿಸಿ ಆತನಿಂದ ಬಲಾತ್ಕಾರದಿಂದ ಆಭರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿದುದಕ್ಕಾಗಿ ಲಂಡನಿನ ಪ್ರಸಿದ್ಧ ಕುಟುಂಬಗಳ ವ್ಯಕ್ತಿಗಳು ತಪ್ಪಿತರೆಂದೂ ಕಂಡುಹಿಡಿಯಲ್ಪಟ್ಟು, ಅವರು ವಿವಿಧ ಅವಧಿಯ ಕಾರಾಗೃಹ ಶಿಕ್ಷೆಗೆ ಒಳಗಾಗಿರುವರು.

ಬೆಲೆಂಗರನೆಂಟ ರತ್ನ ವ್ಯಾಪಾರಿಯೊಬ್ಬನನ್ನು ಆಭರಣಗಳನ್ನು ಪಡೆಕೊಳ್ಳುವ ನೆವನದಿಂದ ಒಂದು ಕಡೆಗೆ ಬರಮಾಡಿಕೊಂಡು, ಆತನು ಆ ಸ್ಥಳಕ್ಕೆ ಬಂದೊಡನೆ ಆತನ ಮೇಲೆ ಬಲಾತ್ಕಾರ ನಡೆಯಿಸಿ, ಆತನಿಂದ ಆಭರಣಗಳು ಅಪಹರಿಸಲ್ಪಟ್ಟಿದ್ದುವಂತೆ.

ತಪ್ಪಿತವನ್ನು ನಡೆಯಿಸಿದವರ ಲಂಡನಿನ, ಪ್ರಸಿದ್ಧ ಸಂಗ್ರಾಮಾಧಿಕಾರಿಗಳು, ಇತರ ಮಹಾ ಪುರುಷರ ಮಕ್ಕಳೆಂದು ತಿಳಿದು ಬರುತ್ತದೆ.

ಶ್ರೀಮಂತ ನಾಯಿ

ಅಮೇರಿಕಾದ ಚಿಕಾಗೊ ಪಟ್ಟಣದಲ್ಲಿ ಎಸ್ತರೊ ಎಂಬ ಹೆಸರಿನ ಒಂದು ನಾಯಿಯಿದೆ. ಇದು ಈಗ ವರ್ಷಕ್ಕೆ ಆರು ಸಾವಿರ ಪವನು ಉತ್ಪತ್ತಿಯಿರುವ ಒಂದು ಆಸ್ತಿಯ ಹಕ್ಕುದಾರನಾಗಿರುತ್ತದೆ. ಮೊನ್ನೆ ಈಚೆಗೆ ಮಡಿದ ಈ ನಾಯಿಯ ಶ್ರೀಮಂತ ಯಜಮಾನಿಯ ಉಯಿಲು ನಾಮೆಯ ಪ್ರಕಾರ ನಾಯಿಗೆ ಈ ಆಸ್ತಿಯು ಪ್ರಾಪ್ತವಾಗಿರುತ್ತದೆ.

ಮೀನು ಹಿಡಿಯುವುದಕ್ಕೆ ವಿಮಾನ.

ಚೀನಾ ದೇಶದ ಕೋರಿಯಾ ಎಂಬಲ್ಲಿ ಬೆಸ್ತರು ಮೀನು ಹಿಡಿಯುವ ತಮ್ಮ ವೃತ್ತಿಯಲ್ಲಿ ಅತ್ಯಂತ ಆಧುನಿಕ ತರದ ಉಪಕರಣಗಳನ್ನು ಉಪಯೋಗಿಸುತ್ತಿದ್ದಾರೆ. ಮೊನ್ನೆಯಿಂದ ತಮ್ಮ ವ್ಯವಸಾಯದಲ್ಲಿ ವಿಮಾನಗಳನ್ನುಪಯೋಗಿಸಲು, ಪ್ರಾರಂಭ ಮಾಡಿರುವರೆಂದು ವಾರ್ತೆಯಿದೆ.

ಅತಿ ಪ್ರಾಚೀನವಾದುದು

ಐಗುಪ್ತದ ಮತ್ತು ಬೆಬಿಲೋನಿಯಾದ ನಾಗರೀಕತೆಗಳು ಅತಿ ಪ್ರಾಚೀನವಾದವುಗಳೆಂದು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯವು. ಆದರೆ ಇದು ತಪ್ಪು ಅಭಿಪ್ರಾಯ. ಇದನ್ನು ಚೀನಿಯರ ಚರಿತ್ರೆಯ ಕುರಿತು ಅಜ್ಞಾನವೆನ್ನಬೇಕು. ಕಾರಣ ಚೀನಿಯ ಸಂಸ್ಕೃತಿಯು ಮೇಲಿನ ಎರಡೂ ಸಂಸ್ಕೃತಿಗಳಿಗಿಂತ ಹೆಚ್ಚಿನ ಪ್ರಾಚೀನವಾಗಿರುತ್ತದೆ.—(ಪ್ರಭುದ್ಧ ಭಾರತದಲ್ಲಿ ಪ್ರೊ| ಟಾನಯಾನ್ ಶ್ಯಾನರವರ ಲೇಖನದಿಂದ)

ನೋಟಗಳು.—Note.......s

★ ★ ★

ಹನ್ನೆರಡು ಗೇರುಹಣ್ಣುಗಳ (ಬೆಲೆ ಎರಡು ಕಾಸು, ಅಥವಾ ಹತ್ತು ಕಲ್ಲು) ರಸದಲ್ಲಿ ಸುಮಾರು 4 ರೂಪಾಯಿ ಬಾಳುವ C ವಿಟಮಿನ್ ಜೀವನಾಧಾರಕ ಸತ್ವವಿದೆ ಎಂದು ನಮ್ಮಲ್ಲಿನ ಡಾ| ಕೆ. ಎಮ್. ಶಿಕ್ಷೆಯುವರು ಕಂಡುಕೊಂಡುದನ್ನು ಸರಕಾರದ ಆಹಾರ ವಿಜ್ಞಾನ ಪರಿಶೋಧಕ ಡಾ| ಎಕ್ರೊಯಿಡ್‌ರವರೂ ಒಪ್ಪಿಕೊಂಡಿದ್ದಾರೆ. ಇದೂ ಅಲ್ಲದೆ, ಆರು ಕಿತ್ತಳೆಗಳಲ್ಲಿನ ಸತ್ವವನ್ನು ಒಂದೇ ಒಂದು ಗೇರುಹಣ್ಣು ಹಿಡಿದೇ ಬನ್ನವೆತ್ತುತ್ತದೆ. ಇದುವರೆಗೆ ಕಿತ್ತಳೆಯೆ C ವಿಟಮಿನ್‌ಗಾಗಿಯೇ ಸುಪ್ರಸಿದ್ಧವಾಗಿತ್ತು. ನಮ್ಮಲ್ಲಿ ಕಾಡು ಮರವಾಗಿ ಬೆಳೆವ ಗೇರು ಕಿತ್ತಳೆಯ ಮಾನವನ್ನೇ ಕಿತ್ತಿದೆ. ಜನರಲ್ಲಿ ಸಾಧಾರಣವಾಗಿ ಫೆಬ್ರವರಿಯಿಂದ ಮೇ ತಿಂಗಳ ವರೆಗೆ ಈ ವಿಟಮಿನ್ ಸತ್ವವು ಕಡಮೆ, ಆಗಲೆ ಗೇರಿನ ಹಣ್ಣು ಸರ್ವತ್ರ ವಿರಾಜಮಾನ! ಇನ್ನು ಮರನ್ನುನೆಯಲ್ಲೂ ಬೆಳೆಸಬೇಕಾದುದು,—ತುಲಸೀ ಗಿಡದ ಒಳ್ಳೆ, ಗೇರು ಮರ. ತಿನ್ನ ಬೇಕಾದುದು ಗೇರು ಹಣ್ಣು, ಎಪ್ಲ್ ಅಲ್ಲ.

o o o o

ಗೇರುಹಣ್ಣು ನಗರಗಳಲ್ಲೂ ಕಾಸಿಗೆ ೬, ಇದರ ಸತ್ವ ೧೨ ಕಿತ್ತಳೆಗೆ ಸಮಾನ, ಒಂದು ಕಿತ್ತಳೆಗೆ ಕಾಸಿನ ಎಷ್ಟಂಶ ಬೆಲೆಯಾಯಿತು

o o o o

ಜಪಾನಿನಲ್ಲಿ ಹೀಗೆಯೆ ಸರಕಾರೀ ಆಹಾರ ವಿಜ್ಞಾನಿಗಳು ಸಂಪೂರ್ಣ ಭೋಜನದಿಂದಾಗತಕ್ಕ ಫಲಿತಾಂಶವನ್ನು ಹುಟ್ಟಿಸುವ ಆಹಾರವು ಅರ್ಧಾಣೆ ಬೆಲೆಯೊಳಗೆ ಪ್ರಾಪ್ಯಕ ಹೊಂದುವಂತೆ ರಚನೆ ಮಾಡಿಟ್ಟಿದ್ದಾರೆ. ಅಕ್ಕಿ, ಹಿಟ್ಟು, ಗಡ್ಡೆಗಳು ಹೀಗೆ ವ್ಯಯ ಕಡಮೆಯಾಗಿ, ತುಂಬ ಪ್ರಯೋಜನವಿರುವ ಆಹಾರ ಯೋಜನ ಮಾಡದಿದ್ದರೆ, ಜನಸಂಖ್ಯೆ ಸೇನೆಗಳನ್ನು ಚೀನದಲ್ಲಿ ಬೆಳೆಸುವುದಕ್ಕೆಲ್ಲಿಂದ ತಾನೆ ಹಣವು ಸರಕಾರಕ್ಕೆ ದೊರೆಯುತ್ತಿತ್ತು?

o o o o

ಮೈನೊರಿಟಿ (ಅಲ್ಪ ಸಂಖ್ಯಾಕರು)ಗಳ ಹಿತವನ್ನು ಸಾಧಿಸುವುದು ಅಧಿಕಬಲರ ಕರ್ತವ್ಯವೇನೋ ನಿಜವೇ ಆಗಿರುವುದಾದರೂ, ಅಧಿಕಬಲರ ಮನೋಭಾವನೆಗಳನ್ನು ಪರಿಗಣನೆಗೆ ತಾರದೆ ಮೈನೊರಿಟಿಗಳು ಕೂಗುವುದರಲ್ಲಿ ಅರ್ಥವಿಲ್ಲವೆಂದು, ಪಂಜಾಬಿನ ಮಂತ್ರಿ ಸರ್ ಸಿಕಂದರರು ಎಂದರು. ಈಗ, ಯಾವಾಗಲೂ ಸ್ವಪಕ್ಷವಾಗಿ ದಡದಡಿಸುತ್ತಿದ್ದ ಹುಕ್ಕರೂ ಬಂಗಾಳದಲ್ಲಿ ಈ ತತ್ವವನ್ನು ಅನುಸರಿಸುವರೇ ಇಲ್ಲವೆ? ಅಥವಾ ಜಗತ್ತಿನ ಸಕಲ ಸಂಕಷ್ಟಗಳಿಗೂ (ಉದಾಹರಣೆಗಳಿಲ್ಲದೆ ಇದ್ದರೂ) ಕಾಂಗ್ರೆಸೂ ಹಿಂದೂಗಳೂ ಮಾತ್ರ ಕಾರಣರೆನ್ನುವರೋ!

o o o o

ಚುನಾವಣೆ ಕಾಲದಲ್ಲಿ ಪಲಾಯನ ಮಾಡಬೇಕಾಗಿ ಬಂದಿದ್ದ ಕಾರಣವೇ ಕೆಲಜನ ತಾವು ಯಾವ ಬಗೆಯಾಗಿ ಕೊಂಗ್ರೆಸನ್ನು ಎದುರಿಸಬಹುದು ಎಂಬ ದುರ್ಬ್ಯವು ದುರಾಗ್ರಹದಿಂದ ಪೀಡಿಸ ಹತ್ತಿದೆ. ತಮಿಳು ಪ್ರೀತಿಯಿಂದ ಹಿಂದೀ ವಿರೋಧವಲ್ಲ, ಕಾಂಗ್ರೆಸ್ ವಿರೋಧದಿಂದ, ಗವರ್ನರರು ಸಹ ಹಿಂದೀ ಕಲಿಸಲು ಅಪ್ಪಣೆ ಕೊಟ್ಟಲ್ಲಿ ರದ್ದುಪಡಿಸಬೇಕೆಂದು ಇವರ ಒತ್ತಾಯ. ಆದರೆ, ಮಂತ್ರಿಕೂಟಕ್ಕೇ ಒಪ್ಪಿಸಲಾಗಿರುವ ಈ ವಿಷಯದಲ್ಲಿ ಗವರ್ನರರು ಕೈಯಿಕ್ಕುವ ಹಾಗಿಲ್ಲವಲ್ಲ!

o o o o

ಇನ್ನೊಂದು ವಿಚಿತ್ರವೆಂದರೆ,—ಬಂಗಾಳದ ಎಸೆಂಬ್ಲಿಯಲ್ಲಿ ಮದ್ಯಪಾನ ನಿರೋಧಕ್ಕೆ ಶಾಸನ ಮಾಡಿರೆಂದರೆ, ಮುಖ್ಯಮಂತ್ರಿಗಳು [illegible] ಅಷ್ಟಿಲ್ಲವೆಂದೂ, ಸಂಪೂರ್ಣವಾಗಿಯೂ ಮದ್ಯ ನಿಷೇಧವನ್ನು ಕುರಿತು ಇಸ್ಲಾಮಿನ ಮೊದಲನೆ ವರ್ಷಗಳಲ್ಲೇನೂ ಕಟ್ಟಪ್ಪಣೆ ಇದ್ದಿಲ್ಲವೆಂದೂ ನೊದಲಾಗಿ ಹೇಳಲು, ಮುಸ್ಲಿಮರೇ ಈ ಮಾತನ್ನು ಎದುರಾಡಿ, ಇಸ್ಲಾಂ ಧರ್ಮದ ಮೂಲತತ್ವಗಳಲ್ಲಿ ಸಂಪೂರ್ಣ ಮದ್ಯಪಾನ ನಿಷೇಧವೇ ಒಂದಾಗಿದೆ ಎಂದು ರುಜುವಡಿಸಿದರು. ಸರಕಾರದ ಮುಖ್ಯಮಂತ್ರಿಗಳಾದ ಕೂಡಲೆ, ಸ್ವಧರ್ಮವನ್ನು ಮರೆತೂ ಕಂಡಾಯದ ಮೇಲೆ ಕಣ್ಣಿಡುವುದೂ ಪ್ರಜಾಹಿತಕ್ಕೆ ದೂರವಾಗುವುದೂ ಒಂದು ಧರ್ಮವಾಗುವುದಲ್ಲವೆ?

o o o o

ಮುಸ್ಲಿಂ ಲೀಗು ಚುನಾವಣೆ ಕಾಲದಲ್ಲಿ ಮದ್ಯಪಾನ ನಿಷೇಧ ಮಾಡುವ ಕಾರ್ಯಕ್ರಮವನ್ನು ಪ್ರಕಟಿಸಿದ್ದಿಲ್ಲ, ಬಂಗಾಳದಲ್ಲಿ ಜನತೆಯೇನೂ ಮದ್ಯಪಾನದಲ್ಲಿ ಆಸಕ್ತವಾಗಿಲ್ಲ—ಆದುದರಿಂದ ಇದೇನೂ ಮುಖ್ಯವಲ್ಲ ಎಂದು ಹುಕ್ಕರ ಮಾತು! ಆದರೂ ನವಖಾಲಿಯಲ್ಲಿ ಇದೇ ಬರುವ ಎಪ್ರಿಲ್‌ನಿಂದ ಮದ್ಯನಿಷೇಧಕ್ಕೆ ಪ್ರಯತ್ನಿಸಿ ಅದರಲ್ಲಿ ಶುಭಕೋರಿದಲ್ಲಿ ಚಿತ್ತಗಾಂಗದಲ್ಲಿ ಮುಂದಣ ವರ್ಷ ಜ್ಯಾರಿಗೆ ತರಬಹುದೆಂಧರು. ಚುನಾವಣೆಯ ಕಾಲದಲ್ಲಿ ಇಷ್ಟರ ಮಾತಿದ್ದಿತೇ? ಅಥವಾ, ಚುನಾವಣೆಯ ಕಾಲದಲಿ ವೋಟರರಿಗೆ ಹೇಳಿದ ಕಾರ್ಯಕ್ರಮವನ್ನೆಲ್ಲಾ ಜ್ಯಾರಿಗೆ ತಂದಾಗಿದೆಯೆ?

o o o o

ವಿದ್ಯಾರ್ಥಿಗಳ [illegible] ಹಿಡಿಯುವ [illegible] ಕಲಿಕೆ [illegible] ಯೊಂದು [illegible] ಸರಕಾರ [illegible] ಇನ್ನು [illegible] ನಿಷಿದ್ಧುಬಿಟ್ಟಿದ್ದಾರೆ [illegible] ಗಳೇ ಕಾನೂನು [illegible] ಸ್ಥಾನಕ್ಕಾಗಿ ಸತ್ಯಾಗ್ರಹವನ್ನೆ ಕೈಕೊಳ್ಳುವುದನ್ನು ವಿದ್ಯಾರ್ಥಿಗಳು [illegible] ಸಲು ಯತ್ನಿಸಬೇಡವೆ? ಆದರೂ, ವಿದ್ಯಾರ್ಥಿಗಳು ಅವರಿಗೆ ಮಾರ್ಗದರ್ಶಕರಾಗಿ ತಾವು ವಿನಾಕಾರಣ ಅಥವಾ ಅಲ್ಪ ಕಾರಣಗಳಿಂದ ಸತ್ಯಾಗ್ರಹಿಗಳಾಗದೆ ಇರುವರೆಂದು ನಂಬಲೇಬೇಕು.

o o o o

ನಮ್ಮ ಮುಖ್ಯಮಂತ್ರಿಗಳು ತಮ್ಮ ವಸ್ತ್ರಗಳನ್ನು ಒಗೆಯುವಾಗ ಎತ್ತಿದ್ದ ಚಿತ್ರಗಳನ್ನು ನೋಡಿಯೊ, ಮಂತ್ರಿಮಂಡಲದ ಕರಣಿಯನ್ನು ಟೀಕಿಸ ತೊಡಗಿದ ಶ್ರೀ| ಪನ್ನೀರ ಸೆಲ್ವಮ್‌ರವರು ಮಧ್ಯಪ್ರಾಂತ್ಯದ ಮೆಂಬರರಾಗಿರಬೇಕಾಗಿತ್ತು. ಅಲ್ಲಿನ ಮಂತ್ರಿಗಳು ಪಾಯಖಾನೆಯನ್ನು ಶುಚಿಗೊಳಿಸುವ ಕೆಲಸವನ್ನು ಮಾಡಿ ತೋರಿಸಿ, ಹರಿಜನರಲ್ಲಿ ಧಿಕ್ಕಾರವಿರದಂತೆ ಮಾದರಿ ತೋರಕೊಟ್ಟರು. ಶ್ರೀ| ಸೆಲ್ವಂರವರು ಅಲ್ಲಿ ಸ್ವಲ್ಪ ಟೀಕಾ ಪನ್ನೀರನ್ನು ಚೆಲ್ಲಬಹುದಾಗಿತ್ತು.

o o o o

ಕೇರಳ ಪ್ರಾಂತ್ಯವು ಅಗತ್ಯವಾಗಿಯೂ ನಿರ್ಮಾಣ ಹೊಂದಲೇ ಬೇಕು. ಎಸೆಂಬ್ಲಿಯಲ್ಲಿ ಕೇರಳ, ಕರ್ನಾಟಕ, ಆಂಧ್ರ ಪ್ರಾಂತ್ಯಗಳು ರಚನೆ ಹೊಂದುವಂತಾಗಲು ಸೂಚನೆ ಮುಂದೆ ಒದಗಿದೆ. ಆದರೆ ಕಲ್ಲಿಕೋಟೆಯಲ್ಲಿ ಒರುಗಿದೊಂದು ಸಭೆಯಲ್ಲಿ,—ಮಲಬಾರು, ದಕ್ಷಿಣ ಕನ್ನಡ, ನೀಲಗಿರಿ, ಅಂಜನಗಾಂವ, ಕೊಯಮುತ್ತೂರು ಜಿಲ್ಲೆಯ 'ತಮಿಳೇತರ ಪ್ರಾಂತ್ಯ'ಗಳು, ಮತ್ತು ಕೊಡಗನ್ನು ಸೇರಿಸಿ, ಇದು ಪಶ್ಚಿಮ ಘಟ್ಟಗಳಿಗೂ ಕಡಲಾಚೆಗೂ ನಡುವಣ ಒಂದೇ ಪ್ರದೇಶವಾಗುವ ಕಾರಣ (1) ದಕ್ಷಿಣ ಕೊಚ್ಚಿ ತಿರುವಾಂಕೂರು ಸಂಸ್ಥಾ

೧೧ನೇ ಪುಟಕ್ಕೆ ಮುಂದುವರಿದಿದೆ

★ ನಮ್ಮ ಬಜೇಟುಗಳು ★

(ಲೇಖಕರು:- ಶ್ರೀ ಜೆ. ಸಿ. ಕುಮಾರಪ್ಪನವರು)

ಪ್ರಜಾಸತ್ತಾತ್ಮಕ ಎಲ್ಲಾ ರಾಜ್ಯಗಳಲ್ಲಿ ಸರಕಾರವು ಮುಂದಿನ ವರ್ಷದ ಬಜೇಟು ಅಥವಾ ಆಯವ್ಯಯದ ಅಂದಾಜುಪಟ್ಟಿಯನ್ನು ತಯ್ಯಾರಿಸಿ, ಅದನ್ನು ಮಂಜೂರಾತಿಗೋಸ್ಕರ ಶಾಸನ ಮಂಡಳಿಗಳ ಮುಂದಿಡುತ್ತದೆ ಮುಂದಿನ ವರ್ಷದಲ್ಲಿ ಸರಕಾರವು ಏನೇನು ಮಾಡಲಿದೆ, ಅದರ ರೀತಿನೀತಿ, ಕಾರ್ಯ ಧೋರಣೆಗಳು ಯಾವುದಿರುತ್ತವೆ ಎಂಬುದೆಲ್ಲಾ ಬಜೇಟಿನ ಮೂಲಕ ತಿಳಿಯಬಹುದಾದ್ದರಿಂದ ಜನತೆಯು ಈ ಬಜೇಟನ್ನು ಬಹು ಆತುರ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತ ಇರುತ್ತದೆ ಸರಕಾರದ ಬೊಕ್ಕಸದ ಮೇಲೆ ಸಂಪೂರ್ಣ ಸ್ವಾತಂತ್ರ್ಯವಿರುವ ಮಂತ್ರಿಮಂಡಲಗಳು ತಯ್ಯಾರಿಸುವ ಬಜೇಟುಗಳ ಕುರಿತು ಜನರು ಹೀಗೆ ಆತುರ ಮತ್ತು ಕುತೂಹಲದಿಂದ ಇರುವದು ಸಹಜವಾಗಿರುವದು. ಆದರೆ ಗವರ್ನಮೆಂಟ ಆಫ್ ಇಂಡಿಯಾದ 1935ನೇ ಇಸ್ವಿಯ ಕಾನೂನು ಪ್ರಕಾರ ಇಂಥ ಸಂಪೂರ್ಣ ಸ್ವಾತಂತ್ರ್ಯವು ಕೇಂದ್ರ ಸರಕಾರಕ್ಕೆ ಮಾತ್ರ ಇದೆ ಆದರೆ ಆ ಕೇಂದ್ರ ಸರಕಾರವು ಪ್ರಜಾಮತಕ್ಕೆ ಜವಾಬುದಾರವಾಗಿರುವದಿಲ್ಲ ಪ್ರಾಂತೀಯ ಸ್ವಾತಂತ್ರ್ಯವು ಸಿಕ್ಕಿರುವದೆಂಬ ಪ್ರಾಂತ್ಯಗಳಲ್ಲಿ ಕೂಡ ಮಂತ್ರಿಮಂಡಲಗಳಿಗೆ ಕೆಲವು ಚಿಲ್ಲರೆ ಖರ್ಚುಗಳನ್ನು ಮಾತ್ರ ಮಾಡುವ ಸ್ವಾತಂತ್ರ್ಯವು ಇರುತ್ತದೆ ಅದ್ದರಿಂದ ಈ ಮಂತ್ರಿಮಂಡಲಗಳು ತಮ್ಮ ಬಜೇಟುಗಳಲ್ಲಿ ತಮ್ಮ ದೂರ ಧ್ಯೇಯವು ಯಾವುದಿದೆ ಎಂದು ಸ್ಪಷ್ಟಮಾಡಬಹುದಾಗಿದೆಯೇ ಹೊರತು, ನಾಳಿಯ ಧೋರಣವು ಯಾವುದಿದೆ ಎಂದು ಹೇಳಿ, ಅದರ ಸಾಧನೆಯ ಉಪಾಯವನ್ನು ಸೂಚಿಸಲು ಅಸಮರ್ಥವಾಗಿರುವವು

ಕಾಂಗ್ರೆಸು ಪ್ರಾಂತ್ಯಗಳಲ್ಲಿ ಬಜೇಟುಗಳು

ಅನೇಕಾನೇಕ ಎಡರುತೊಡರು, ವಿಘ್ನ ಪರಂಪರೆಗಳು ಇದ್ದರೂ, ಕಾಂಗ್ರೆಸು ಮಂತ್ರಿಮಂಡಲಗಳು ಮೂಕಜನತೆಯ ಸೇವೆ ಮಾಡುವದಕ್ಕೆ ಕಂಕಣಬದ್ಧವಾಗಿರುವವೆಂಬುದು ಅವುಗಳ ಬಜೇಟುಗಳಿಂದ ಸ್ಪಷ್ಟವಾಗುತ್ತದೆ ಸೀರಿನ ಪುರವಟ್ಟಿ, ಮದ್ಯನಿಷೇಧ, ಗೋಚರಾವು ಫೀಸಿನಲ್ಲಿ ಕಡಿತ, ಸುಧಾರಿತ ಉಪಕರಣಗಳ ಪೂರೈಕೆ, ಕೆಲಸಗಾರರ ತರಬೇತಿ, ಶಿಕ್ಷಣ ಸುಧಾರಣೆ, ಗ್ರಾಮೋದ್ಧಾರ, ಮನೆ ಕೈಗಾರಿಕೆಗಳಿಗೆ ಸಹಾಯ ಮುಂತಾದ ಅನೇಕ ಬಾಬ ಗಳಲ್ಲಿ ಈ ಮಂತ್ರಿಮಂಡಲಗಳು ಕೆಲಸ ಮಾಡಲಿವೆ ಎಂಬುದು ಅವುಗಳ ಬಜೇಟುಗಳ ಪರಿಶೀಲನೆಯಿಂದ ಗೊತ್ತಾಗುತ್ತದೆ ಅನೇಕಾನೇಕ ಪ್ರತಿಕೂಲಗಳು, ತಡೆಗಳು ಇದ್ದರೂ, ಇಷ್ಟು ಕಾರ್ಯಗಳನ್ನು ಸಾಧಿಸುವ ಕಾರ್ಯಕ್ರಮವನ್ನು ಅವುಗಳು ಇಟ್ಟುಕೊಂಡಿರುವದು ದೊಡ್ಡ ಸಾಹಸವೆಂದೇ ಹೇಳಬೇಕು ಸರಕಾರದ ಖರ್ಚನ್ನು ಕಡಿಮೆ ಮಾಡುವದರ ಕಡೆಗೂ ಅವುಗಳು ಲಕ್ಷ್ಯ ಕೊಡದೆ ಇಲ್ಲ ಗಿರಿ ನಗರಗಳಿಗೆ ಪ್ರಯಾಣ ಖರ್ಚು ದೊಡ್ಡ ದೊಡ್ಡ ತಲಬುದಾರರ ಸಂಬಳ ಇವೇ ಮೊದಲಾದುವುಗಳಲ್ಲಿ ಅವುಗಳು ಸಾಧ್ಯವಿದ್ದಷ್ಟು ಕಡಿತ ಮಾಡಿವೆ ಪ್ರಾಂತೀಯ ಸರಕಾರಗಳ ಆಯದ ಬಾಬುಗಳು ಪರಿಮಿತವಾಗಿ ಇರುವವಾದರೂ, ಮದ್ಯ ನಿಷೇಧದಿಂದ ಜನತೆಗಾಗುವ ಮಹೋಪಕಾರವನ್ನು ಮನಗಂಡು ಈ ಕಾಂಗ್ರೆಸ ಮಂತ್ರಿಮಂಡಲಗಳು, ಸರಕಾರಕ್ಕಾಗುವ ನಷ್ಟದ ಕಡೆಗೆ ಲಕ್ಷ್ಯಕೊಡದೆ, ಮದ್ಯ ನಿಷೇಧವನ್ನು ಪೂರ್ತಿಯೇ ಮಾಡುವೆವೆಂದು ಸೊಂಟಕಟ್ಟಿ ನಿಂತಿರುತ್ತವೆ

ಅಜ್ಞನಷ್ಟ ಗೋಳೀಮರ

ಹೀಗಿದ್ದರೂ ಅಜ್ಞನಷ್ಟ ಗೋಳೀಮರವೆಂದು ಆದಕ್ಕೇ ನೇಣು ಹಾಕಿಕೊಳ್ಳುವ ಮನೋವೃತ್ತಿಯು ಈ ಪ್ರಾಂತ್ಯಗಳಿಂದ ಸಂಪೂರ್ಣ ನಾಶವಾಗಿರುವುದಿಲ್ಲ ಒಂದೆರಡು ಕಾಂಗ್ರೆಸ ಮಂತ್ರಿಮಂಡಲಗಳು ಗ್ರಾಮಾಂತರಗಳಲ್ಲಿ ರೇಡಿಯೋ ಸೆಟ್ಟುಗಳನ್ನು ಇಡುವ ಮತ್ತು ವಿಮಾನ ಸಂಚಾಲಕರನ್ನು ತರಬೇತುಗೊಳಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡಿವೆ ಈ ಸಂದರ್ಭದಲ್ಲಿ ನಾವು ಕೆಳಗಿನ ಮಾತುಗಳನ್ನು



ಶ್ರೀ ಜೆ ಸಿ ಕುಮಾರಪ್ಪನವರು

ನೆನಪಿನಲ್ಲಿಟ್ಟುಕೊಳ್ಳುವದು ಅಗತ್ಯವಾಗಿದೆ ರೇಡಿಯೋ ಸೆಟ್ಟುಗಳು ವಿಶೇಷವಾಗಿ ಪರದೇಶಗಳಿಂದಲೇ ನಮ್ಮ ದೇಶಕ್ಕೆ ಆಮದಾಗುತ್ತವೆ ರೇಡಿಯೋ ಸೆಟ್ಟುಗಳ ವ್ಯಾಪಾರದಲ್ಲಿ ಸ್ವಾರ್ಥವಿರುವ ಜನರೇ, ನಮ್ಮ ದೇಶದಲ್ಲಿ ಇವುಗಳ ಪ್ರಚಾರವಾಗಬೇಕೆಂದು ಬಹಳವಾಗಿ ಸಾಧಿಸುತ್ತಾರೆ ಅದರಿಂದ ಅವರಿಗೆ ಲಾಭವೇ ಹೊರತು ನಷ್ಟವಿಲ್ಲ ರೇಡಿಯೋ ಸೆಟ್ಟುಗಳ ಪ್ರಚಾರದಿಂದ ಗ್ರಾಮವಾಸಿಗಳಿಗೆ ದೊರೆಯುವ ಪ್ರಯೋಜನವು ಬಹು ಸ್ವಲ್ಪ ಗ್ರಾಮವಾಸಿಗಳಿಗೆ ಕೇಳುವ ಆತುರವು ಇರುವದಿಲ್ಲ ಎಂದಲ್ಲ ಆದರೆ ಒಂದು ಕಿವಿಯಿಂದ ಅವರು ಏನನ್ನು ಕೇಳುತ್ತಾರೋ, ಇನ್ನೊಂದು ಕಿವಿಯಿಂದ ಅದನ್ನು ಹೊರಗೆ ಬಿಟ್ಟುಬಿಡುವದೇ ಹೆಚ್ಚು ಅದ್ದರಿಂದ ರೇಡಿಯೋ ಸೆಟ್ಟುಗಳನ್ನಿಡುವುದಕ್ಕಿಂತಲೂ ಅಗತ್ಯದ ಬೇರೆ ಎಷ್ಟೋ ಕಾರ್ಯಗಳನ್ನು ಗ್ರಾಮವಾಸಿಗಳ ಹಿತಾಭಿವೃದ್ಧಿಗಾಗಿ ಮಾಡಲಿಕ್ಕಿರುವಾಗ ರೇಡಿಯೋ ಸೆಟ್ಟುಗಳಿಗಾಗಿ ಸರಕಾರವು ಹಣ ಖರ್ಚು ಮಾಡುವದು ವಿಹಿತವಾಗಿ ಇರುವದಿಲ್ಲ ರೇಡಿಯೋ ಸೆಟ್ಟುಗಳಿಂದಾಗಿಯೇ ಪ್ರಾಯಸ್ಥರ ಶಿಕ್ಷಣ ಪ್ರಚಾರವಾಗುವದೆನ್ನುವದು ತಪ್ಪು ಅಭಿಪ್ರಾಯ ಅನುಭವಿಕರೂ ದೂರದರ್ಶಿಗಳೂ ಆಗಿರುವ ಕೆಲಸಗಾರರು ಹಳ್ಳಿಹಳ್ಳಿಗಳಲ್ಲಿ ನೆಲೆಸಿ ಭಗೀರಥ ಪ್ರಯತ್ನಗಳನ್ನು ಮಾಡುತ್ತಿದ್ದರೆ ಮಾತ್ರ ಅದು ಸಾಧ್ಯವಾಗುವದು. ಅಂಥ ಆದರ್ಶ ಜೀವಿಗಳ ಜೀವನ ಕ್ರಮವೇ ಗ್ರಾಮವಾಸಿಗಳಿಗೆ ಜೀವನದ ಮಾದರಿಯಾಗುವದು ಯಾವ ಉತ್ಕೃಷ್ಟ ರೇಡಿಯೋ ಆದರೂ ಆ ಕೆಲಸವನ್ನು ಮಾಡಲಾರದು ಆದರೆ ಕೆಲವು ಸಂದರ್ಭಗಳಲ್ಲಿ

ಕೇಂದ್ರ ಸರಕಾರವು ಈ ಸೆಟ್ಟುಗಳನ್ನು ಗ್ರಾಮಾಂತರಗಳಲ್ಲಿ ಪ್ರಚಾರಕ್ಕೋಸ್ಕರ ಕೊಡುತ್ತಿದೆಯೆಂಬುದು ನಿಜ ಆ ಸಂದರ್ಭದಲ್ಲಿಯಾದರೂ ಕೂಡ ನಮ್ಮ ಅಭಿಪ್ರಾಯದಲ್ಲಿ ವ್ಯತ್ಯಾಸವಾಗುವದಿಲ್ಲ ಕೇಂದ್ರ ಸರಕಾರದ ಹಣವಾದರೂ ಜನತೆಯು ಕೊಟ್ಟ ಕರ ಕಂದಾಯಗಳಿಂದಲೇ ಒಟ್ಟಾದುದಾದ್ದರಿಂದ, ಕೇಂದ್ರ ಸರಕಾರವು ಕೂಡ ರೇಡಿಯೋ ಸೆಟ್ಟುಗಳಿಗಾಗಿ ಹಣ ಹಾಳುಮಾಡುವದು ಸಮಂಜಸವಾಗಿರುವದಿಲ್ಲ

ಆಧುನಿಕತೆಯ ಹುಚ್ಚು

ಆಧುನಿಕತೆಯ ಹುಚ್ಚು ಕೆಲವು ಪ್ರಾಂತ್ಯಗಳ ಮಂತ್ರಿಮಂಡಲಗಳಿಗಿದ್ದಂತೆ ಕಾಣುತ್ತದೆ ವಿಮಾನ ಸಂಚಾಲನದ ತರಬೇತಿಯನ್ನು ಕೊಡಲಿಕ್ಕೆ ಬಜೇಟುಗಳಲ್ಲಿ ಹಣ ವಿನಿಗಡಿಸಿಟ್ಟಿದ್ದು ಆ ಹುಚ್ಚಿನ ಫಲವಾಗಿದೆ ಇದು ರೇಡಿಯೋ ಸೆಟ್ಟುಗಳಿಗಾಗಿ ಹಣವಿನಿಗಡಿಸಿಟ್ಟಿರುವದಕ್ಕಿಂತಲೂ ಹೆಚ್ಚಿಗೆ ಅನರ್ಥಕಾರಿಯಾಗಿದೆ ಹೆಚ್ಚಿಗೆ ಚಾರ್ಜು ಮಾಡದೆ ಕೆಲವು ದೇಶಗಳೊಡನೆ ವಿಮಾನದ ಮೂಲಕ ಟಪಾಲು ಮುಟ್ಟಿಸುವ ಸೌಕರ್ಯವನ್ನು ನಮ್ಮ ಕೇಂದ್ರ ಸರಕಾರವು ಮಾಡಿರುವದು ನಮ್ಮ ಬಡ ಹಳ್ಳಿಗರು ವಿದೇಶಗಳಿಗೆ ಕಾಗದ ಪತ್ರಗಳನ್ನು ಬರೆಯುವದೇ ಇಲ್ಲ ಅದ್ದರಿಂದ ಈ ಸೌಕರ್ಯವು ಅವರಿಗೆ ನಷ್ಟವನ್ನುಂಟುಮಾಡುವದು ವಿದೇಶ ವ್ಯಾಪಾರದಲ್ಲಿ ತೊಡಗಿರುವವರು ಮತ್ತು ವಿದೇಶಿಯರಿಗೆ ಮಾತ್ರ ಈ ಸೌಕರ್ಯದ ಪ್ರಯೋಜನವಿರುತ್ತದೆ ಇವರು ತಮ್ಮ ಕಾಗದ ಪತ್ರಗಳಿಗೆ ಹೆಚ್ಚಿಗೆ ಚಾರ್ಜನ್ನು ಕೊಟ್ಟು ವಿದೇಶಗಳೊಡನೆ ವಿಮಾನಗಳ ಮೂಲಕ ಪತ್ರವ್ಯವಹಾರ ಮಾಡಲು ಸಮರ್ಥರಾಗಿದ್ದಾರೆ ಸಂಪನ್ನರ ಸೌಕರ್ಯಕ್ಕಾಗಿ ಜನತೆಯ ಕರಕಂದಾಯಗಳನ್ನು ಖರ್ಚು ಮಾಡುವದು ಅಧರ್ಮವಾಗಿದೆ ಹಾಗೆಯೇ ನಾವು ರೈಲ್ವೆಗಳ ಇತಿಹಾಸವನ್ನು ಸ್ವಲ್ಪ ತಿಳಿದಿರಬೇಕು ಇಂಗ್ಲಂಡಿನ ಉಕ್ಕಿನ ಕೈಗಾರಿಕೆಯ ಬಡಾವಣೆಯ ಒಂದೇ ಒಂದು ಉದ್ದೇಶದಿಂದ ನಮ್ಮ ದೇಶದಲ್ಲಿ ರೈಲ್ವೆಗಳು ಉಂಟಾದುವು ಈಗ ಅವೇ ರೈಲ್ವೆಗಳು ನಮ್ಮ ದೇಶದಲ್ಲಿ ಬೆಳೆಯುವ ಹಸಿ ಪದಾರ್ಥಗಳನ್ನು ಪರದೇಶಗಳಿಗೆ ರಫ್ತು ಮಾಡಲಿಕ್ಕೂ ಅಲ್ಲಿ ಸಿದ್ಧ ಸಾಮಗ್ರಿಗಳನ್ನು ತಂದು ಇಲ್ಲಿ ಮಾರಲಿಕ್ಕೂ ಉಪಯೋಗಿಸಲಾಗುತ್ತವೆ ಇದರಿಂದ ದೇಶೀ ಶಿಲ್ಪವಾಣಿಜ್ಯಾದಿಗಳ ಪ್ರಗತಿ ಎಷ್ಟು ಅಪಕಾರವಾಗಿದೆ ಎಂದು ಆಲೋಚಿಸಿರಿ ಇವತ್ತು ಪರದೇಶೀ ವ್ಯಾಪಾರ ಸರಕುಗಳನ್ನು ಕೊಂಡೊಯ್ಯಲಿಕ್ಕೆ ಉಪಯೋಗಿಸಲಾಗುವ ಈ ರೈಲ್ವೆಗಳನ್ನೇ ನಾಳೆ ಸೈನ್ಯ ಸರಂಜಾಮುಗಳನ್ನು ಸಾಗಿಸಲಿಕ್ಕೆ ಉಪಯೋಗಿಸಲೂಬಹುದು ಅದೇ ರೀತಿಯಲ್ಲಿ ಜನತೆಯ ಹಣ ಕಾಸುಗಳಿಂದ ಅಭಿವೃದ್ಧಿಗೆ ತಂದ ವಿಮಾನ ಸರ್ವಿಸುಗಳನ್ನು ಕೂಡ ನಾಳೆಗೆ ದೇಶಕ್ಕೆ ಅಪಕಾರಕ ಸಂಗತಿಗಳಿಗಾಗಿಯೇ ಉಪಯೋಗಿಸಬಹುದು. ಜನತೆಯು ಕರಕಂದಾಯಗಳಿಂದ ಇಟ್ಟ ವಿಮಾನ ಸರ್ವಿಸುಗಳು ನಾಳೆಗೆ ಆ ಜನತೆಯ ಮೇಲೆಯೇ ಬಾಂಬುಗಳನ್ನು ಸುರಿಸುವದಿಲ್ಲವೆಂದು ಯಾರು ಹೇಗೆ ಹೇಳಬಹುದು? ಅದ್ದರಿಂದ ವಿಮಾನ ಸರ್ವಿಸುಗಳ ಬಡಾವಣೆಗಾಗಿ ತಿಳಿದು ಅಥವಾ ತಿಳಿಯದೆ ಸಹಾಯ ಮಾಡುವ ಪ್ರಾಂತಿಕ ಸರಕಾರವು ನಿಶ್ಚಯಕ್ಕೂ ಕೇಂದ್ರ ಸರಕಾರದ ಮಿಲಿಟರಿ ಬಜೇಟಿಗೆ ಸಹಾಯ ಮಾಡಿದಂತಾಗುತ್ತದೆಂದು ನಿರ್ವಿವಾದವಾಗಿ ಹೇಳಬಹುದು ಆಧುನಿಕತೆಯ ಈ ಹುಚ್ಚು ಪ್ರಾಂತಿಕ ಮಂತ್ರಿಮಂಡಲಗಳಿಗೆ ಇರುವದು ಬೇಡ

ಕೇಂದ್ರ ಬಜೇಟಿನ ಕೊರತೆ

ಕಾಂಗ್ರೆಸ ಮಂತ್ರಿಮಂಡಲಗಳು ಎಲ್ಲ ಸಂಪದಭಿವೃದ್ಧಿಯ ಯೋಜನೆಗಳನ್ನು ಸಿದ್ಧಗೊಳಿಸಿ ಕಾರ್ಯರೂಪಕ್ಕೆ ಹಚ್ಚಲಿಲ್ಲವೆಂದು ಕೆಲವರು ಆಕ್ಷೇಪವೆತ್ತುತ್ತಾರೆ ಆದರೆ ಅಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ಹಚ್ಚಬೇಕಾದರೆ ಮಂತ್ರಿಮಂಡಲಗಳು ಒಂದು ನಿಶ್ಚಿತ ಅವಧಿಯ ತನಕ ಅಧಿಕಾರದಲ್ಲಿರುವ ಸಂಭವವಿರಬೇಕು ಆದರೆ ಇಂಥ ಸಂಭವವು ಕಾಂಗ್ರೆಸ ಮಂತ್ರಿಮಂಡಳಗಳಿಗೆ ಇರುವದಿಲ್ಲ. ಬೇಜವಾಬುದಾರವಾದ ಫೆಡರಲ್ ಸರಕಾರವು ಕೇಂದ್ರದಲ್ಲಿ ಸ್ಥಾಪಿತವಾಗುವ ಭಯವಿರುವಾಗಲೂ, ಅನೇಕಾನೇಕ ಅರ್ಥರಹಿತ ರಕ್ಷಣೋಪಾಯಗಳು ಮಂತ್ರಿಗಳ ಕೈಗಳನ್ನು ಕಟ್ಟುತ್ತಿರುವಾಗಲೂ ಅವರು ಎಷ್ಟು ದಿನಗಳು ಅಥವಾ ಎಷ್ಟು ವರ್ಷಗಳ ತನಕ ಅಧಿಕಾರದಲ್ಲಿರುವರೆಂದು ಹೇಳುವದು ಅಸಾಧ್ಯ, ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಕಾರ್ಯಧೋರಣೆ ಮತ್ತು ಧ್ಯೇಯಾದರ್ಶಗಳು ಒಂದೇ ಆಗಿದ್ದ ಹೊರತು ಸಂಪದಭಿವೃದ್ಧಿಯ ಯಾವದೇ ಯೋಜನೆಯನ್ನು ಕಾರ್ಯರೂಪಕ್ಕೆ ತರುವದು ಸುಲಭವಲ್ಲ ಈಗಿನ ಕೇಂದ್ರ ಸರಕಾರವು ತನ್ನದೇ ಆದ ಬೇರೆ ಧೋರಣೆಯಿಂದ ಕಾರ್ಯ ಸಾಧಿಸಲು ಬಹಳ ಎಚ್ಚರಿಕೆಯಿಂದ ಇದೆ ಆ ವಿಷಯದಲ್ಲಿ ಅದು ಯಾರ ಸಹಕಾರಗಳನ್ನು ಪರೆಯ ಬಿಚ್ಚಿಸುವದಿಲ್ಲ ಎಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳ ಬಜೇಟಿನ ಆಯವನ್ನು ಒಟ್ಟು ಕೂಡಿಸಿದರೂ ಅದು ಕೇಂದ್ರ ಸರಕಾರದ ಆಯದ ಅರ್ಧದಷ್ಟು ಕೂಡ ಆಗುವದಿಲ್ಲ ಮಾತವಲ್ಲ, ಪ್ರಮುಖವಾದ ಆಲಾಯಿಗಳು ಕೇಂದ್ರ ಸರಕಾರದ ಕೈಯಲ್ಲಿ ಇರತಕ್ಕವೆ ಮಿಲಿಟರಿ, ಕಸ್ಟಮುಗಳು ರೈಲ್ವೆಗಳು, ಪೋಸ್ಟು ಮತ್ತು ತಂತಿ, ಕರೆನ್ಸಿ ಇವೆ

(೬ನೇ ಪುಟಕ್ಕೆ ನೋಡುವರಿಸಿದೆ)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೋಕಿಲರ್ (ರಿಜಿಸ್ಟರ್ಡ)



ಪ್ರಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸುತ್ತಿದ್ದ ತೀವ್ರರೋಗವಾಗಿದ್ದರೂ, ಗೋನೋರಿಯಾ, ಗ್ಲೀಟ್, ಸ್ತ್ರೀಪುರುಷರ ಎಲ್ಲ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಒಳಭಾಗದ ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾವದೇ ಸ್ಥಿತಿಯಲ್ಲಿರಲಿ), ಸೋಜು, ಮೂತ್ರದಲ್ಲಿ ಉರಿ ಮತ್ತು ತೀವ್ರ ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಸ್ರಾವ ಮೊದಲಾದವು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊರಿಯಾದಿಂದಾದ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ಅಂಚೆ ಖರ್ಚು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer· Dr. D. N JASANI, Vithalbhai Patel Road, BOMBAY 4.

ನಮ್ಮ ಬಿಕ್ಕಟ್ಟುಗಳು.

(೫ನೇ ಪುಟದಿಂದ ಮುಂದುವರಿಸಿದುದು.)

ಲ್ಲವುಗಳು ಕೇಂದ್ರ ಸರಕಾರದ ಅಧೀನದಲ್ಲಿದ್ದು ಯಾಂತ್ರೀಕರಣದ ಕೈಗಾರಿಕೆಗಳಿಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಮಾಡುವಂಥವುಗಳಾಗಿವೆ. ಯಂತ್ರಾಲಯಗಳಲ್ಲಿ ಸಿದ್ಧವಾಗುವ ಸಾಮಾನುಗಳು ಕೈಕೆಲಸದಿಂದ ಆದವುಗಳಿಗಿಂತಲೂ ಸುಲಭ ದರದಲ್ಲಿ ಮಾರುತ್ತವೆ ಎಂದು ಹೇಳುವದು ಅಜ್ಞಾನವಾಗಿದೆ ಈಗಿನ ಸರಕಾರದ ರೀತಿನೀತಿಗಳಿಂದ ಮನೆಕೈಗಾರಿಕೆಗಳಿಗೆ ಯಾವ ತರಹದ ರಕ್ಷಣೆಯೂ ದೊರೆಯುವದಿಲ್ಲ. ಈ ರೀತಿನೀತಿಗಳಿಗೆ ಮನೆ ಕೈಗಾರಿಕೆಗಳಿಗೆ ಹಾನಿಯೇ ಅಲ್ಲದೆ ಲಾಭವಿಲ್ಲ. ಪ್ರಯೋಜನ ದೊರೆಯುವದು ಕೇವಲ ಯಾಂತ್ರೀಕೃತ ಕೈಗಾರಿಕೆಗಳಿಗೆ, ಅವಕ್ಕೆ ಕೇಂದ್ರ ಸರಕಾರದ ಮಿಲಿಟರಿ ಮೊದಲಾದ ಖಾತೆಗಳು ಸಹಾಯಕ್ಕೆ ಇವೆ. ಹೀಗೆ ನಮ್ಮ ದೇಶದ ವಾರ್ಷಿಕ ವಿದೇಶ ವ್ಯಾಪಾರವು ಕೇವಲ 860 ಕೋಟಿ ರೂಪಾಯಿಗಳಷ್ಟಿರುವಾಗ, ಅದಕ್ಕೆ ಮಿಲಿಟರಿ, ರೈಲ್ವೆ, ಕಸ್ಟಮ್ಸ ಮೊದಲಾದವುಗಳಿಂದ ದೊರೆಯುವ ರಕ್ಷಣೆಯು 210 ಕೋಟಿ ರೂಪಾಯಿಗಳಾಗಿದೆ ಹೀಗೆ ನೂರು ರೂಪಾಯಿ ಬೆಲೆಯ ಒಂದು ವಸ್ತುವನ್ನು ಮಾರುವದಾದರೆ, ಸರಕಾರವು ಆ ವಸ್ತುವಿನ ಸಿದ್ಧತೆ ಮತ್ತು ಮಾರಾಟದಲ್ಲಿ ಎರಡು ರೂಪಾಯಿಗಳಷ್ಟು ಸಹಾಯ ಮಾಡುತ್ತದೆ. ಹಾಗಿರುವಾಗ ಈ ಸಾಮಾನುಗಳು ಅಗ್ಗದಲ್ಲಿ ಮಾರುವದರಲ್ಲಿ ಏನಾಶ್ಚರ್ಯ?

ಸಾಮಾನು ಅಗ್ಗದಲ್ಲಿ ಮಾರುವ ಗೂಢ

ಕೆಲವು ತಿಂಗಳುಗಳ ಹಿಂದೆ ನಾನು ಕೊಯಮುತ್ತೂರಿನಲ್ಲಿದ್ದಾಗ — ಮಂಗಳೂರಿನಲ್ಲಿ ಜಪಾನು ಅಕ್ಕಿಯು ಸೇಲಂ ಮತ್ತು ಕೊಯಮುತ್ತೂರು ಅಕ್ಕಿಗಿಂತಲೂ ಅಗ್ಗವಾಗಿ ಮಾರುತ್ತದೆಂದು ಕೇಳಿದೆನು. ಸೇಲಂ ಕೊಯಮುತ್ತೂರಿಗಿಂತಲೂ ಬಹು ದೂರದಲ್ಲಿರುವ ಜಪಾನು ಮಂಗಳೂರಿನಲ್ಲಿ ಅಕ್ಕಿಯನ್ನು ಕಡಿಮೆ ದರದಲ್ಲಿ ಮಾರುವದು ಹೇಗೆ ಸಾಧ್ಯವೆಂದು ನನಗೆ ಆಶ್ಚರ್ಯವಾಯಿತು. ಬಹಳ ಶೋಧನೆಗಳನ್ನು ಮಾಡಿದ ತರುವಾಯ ನಿಜತ್ವವು ಹೀಗಿರುವದೆಂದು ತಿಳಿಯಿತು—ಜಪಾನಿನಲ್ಲಿ ಬೆಳೆ ಕಟಾವು ಆಗುತ್ತಿರುವ ಕಾಲಕ್ಕೆ ಅಕ್ಕಿ ದರವನ್ನು ಒಂದು ಸ್ಥಿತಿಗೆ ತರುವದಕ್ಕೋಸ್ಕರ ಜಪಾನು, ರಂಗೂನು ಅಕ್ಕಿಯನ್ನು ಕೊಂಡಿಟ್ಟು ದಾಸ್ತಾನು ಮಾಡಿತು. ಜಪಾನಿನಲ್ಲಿ ಅಕ್ಕಿ ಧಾರಣೆ ಒಂದು ಸ್ಥಿತಿಕ್ಕೆ ಬಂದ ನಂತರ, ತಾನು ಕೊಂಡಿಟ್ಟ ರಂಗೂನು ಅಕ್ಕಿಯನ್ನು ಮಂಗಳೂರಿನಲ್ಲಿ ಯಾವ ದರ ಬಂತೋ ಆ ದರಕ್ಕೆ ಮಾರಿತು. ಮಂಗಳೂರಿನಲ್ಲಿ ಅಕ್ಕಿ ದರದ ಹೆಚ್ಚುಕಡಿಮೆಯಾದುದರಿಂದ ಜಪಾನಿಗೆ ಆಗೇನೂ ನಷ್ಟವಾಗುವಂತಿರಲಿಲ್ಲ. ಆದ್ದರಿಂದ ಜಪಾನಿನಲ್ಲಿ ಕೃಷಿ ಕೃಷಿಕ್ರಮವು ಉತ್ತಮವಾಗಿದ್ದುದರಿಂದ ಅದು ಮಂಗಳೂರಿನಲ್ಲಿ ಅಕ್ಕಿಯನ್ನು ಕಡಿಮೆ ದರದಲ್ಲಿ ಮಾರಲಿಕ್ಕೆ ಸಮರ್ಥವಾದುದಲ್ಲ. ವ್ಯಾಪಾರಿಗಳ ಸ್ವಾರ್ಥಸಿದ್ಧಿಗಾಗಿ, ಆದರೆ ಜಪಾನಿನ ಅಕ್ಕಿ ವ್ಯಾಪಾರಿಗಳಿಗೆ ರಕ್ಷಣೆ ಕೊಡುವದಕ್ಕೋಸ್ಕರ ಅದು ತಾನು ಕೊಂಡುಕೊಂಡ ಅಕ್ಕಿಯನ್ನು ಮಂಗಳೂರಿನಲ್ಲಿ ಕಡಿಮೆ ದರದಲ್ಲಿ ಮಾರಿ ನಷ್ಟವಾದ ಹಣವನ್ನು ಜಪಾನಿ ತೆರಿಗೆದಾರನು ಕೊಟ್ಟ ತೆರಿಗೆಯಿಂದ ತುಂಬಿಸಿ ಭರ್ತಿ ಮಾಡಿತು. ಹಾಗೆಯೇ ಇಲ್ಲಿಂದ ಇಂಗ್ಲಂಡಿಗೆ ಹಸಿ ಪದಾರ್ಥಗಳನ್ನು ಕಳುಹಿಸಿ ಅಲ್ಲಿಂದ ಸಿದ್ಧ ಸಾಮಗ್ರಿಗಳನ್ನು ಇಲ್ಲಿ ಬಹು ಅಗ್ಗದಲ್ಲಿ ಮಾರಲಿಕ್ಕೆ ಸರ್ಕಾರವು ಕೊಡುವ ವಿವಿಧ ರಕ್ಷಣೆಗಳೇ ಕಾರಣವಲ್ಲದೆ, ಇಂಗ್ಲಂಡಿನ ಜನರ ರಚನಾಚಾತುರ್ಯ ಅಥವಾ ವ್ಯಾಪಾರ ಕುಶಲತೆಯು ಅಲ್ಲ. ಮಿಲಿಟರಿ, ಕಸ್ಟಮ್ಸ ವಿಮಾನ, ಜಹಜು, ರೈಲ್ವೆಗಳ ಅನುಕೂಲತೆ, ಲೇವಾದೇವಿ ಸೌಕರ್ಯ ಇವುಗಳನ್ನೆಲ್ಲ ತೆಗೆದುಬಿಟ್ಟರೆ ನಮ್ಮ ದೇಶದಲ್ಲಿ ಪರದೇಶಿ ಮಾಲುಗಳನ್ನು ಆಮದುಮಾಡಿ ಅಗ್ಗದಲ್ಲಿ ಮಾರುವದು ಸರ್ವಥಾ ಶಾಧ್ಯವಾಗಿರುವದಿಲ್ಲ. ಸುಂಕನೀತಿಯು ಮನೆಕೈಗಾರಿಕೆಗಳಿಗೆ ಅನುಕೂಲವಾಗಿದ್ದರಂತೂ, ಹಾಗೆ ಮಾರುವದು ದುಸ್ಸಾಧ್ಯವಾಗುವದು ಕೊಂಚಮಟ್ಟಿಗೆ ಯಾಂತ್ರೀಕೃತ ಕೈಗಾರಿಕೆ ಸಾಮಾನುಗಳನ್ನು ಸುಲಭ ದರದಲ್ಲಿ ಮಾರಬಹುದೆಂಬುದು ನಿಜವಾಗಿದ್ದರೂ, ಕೈಕೆಲಸದಿಂದಾದ ಸಾಮಗ್ರಿಗಳಿಗೆ ಹೆಚ್ಚಿನ ಬೇಡಿಕೆ ಇರುವದರಿಂದ, ಆ ಪ್ರಯೋಜನವು ಯಾಂತ್ರೀಕೃತ ಸಾಮಾನುಗಳಿಗೆ ದೊರೆಯುವದಿಲ್ಲ.

ಈ ರೀತಿಯಲ್ಲಿ ಕೃತಕ ಉಪಾಯಗಳಿಂದ ಸಾಮಾನುಗಳನ್ನು ಅಗ್ಗದಲ್ಲಿ ಮಾರಿಸಲಿಕ್ಕೆ ಅಧಿಕಾರ ಸ್ವಾತಂತ್ರ್ಯಗಳು ಕೇಂದ್ರ ಸರಕಾರದಲ್ಲಿ ಜನತೆಗೆ ದೊರೆಕಿದ ಹೊರತು ಕೈಗಾರಿಕೆಗಳ ಯಾಂತ್ರೀಕರಣ ಅಥವಾ ಸಂಪದಭಿವೃದ್ಧಿಯ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಳ್ಳುವದು ಸಾಧ್ಯವಾಗುವದಿಲ್ಲ. ಇಂಥ ಅಧಿಕಾರ ಸ್ವಾತಂತ್ರ್ಯಗಳು ದೊರೆಯದಿರುವಂಥ ಕಷ್ಟಗಳು ಕಾಂಗ್ರೆಸ ಮಂತ್ರಿ ಮಂಡಲಗಳಿಗೆ ಇದ್ದರುವಾಗಲೂ ಅವು ಮನೆ ಕೈಗಾರಿಕೆಗಳ ಪ್ರೋತ್ಸಾಹಕ್ಕೆ ಅಲ್ಪ ಸ್ವಲ್ಪವಾದರೂ, ಪ್ರಯತ್ನಪಟ್ಟಿರುವದು ಸ್ತುತ್ಯವಾಗಿದೆ ಎಂಬುದರಲ್ಲಿ ಯಾವ ಸಂದೇಹವೂ ಇರುವದಿಲ್ಲ.

'ಹರಿಜನ'ದಿಂದ

ಹೊಟ್ಟೆಪಾಯಿಸು

ಖಾರ ಮತ್ತು ರುಚಿ ಆಹಾರದಿಂದ ಹೊಟ್ಟೆನೋವು, ಅಜೀರ್ಣ ಮುಂತಾದವುಗಳು ಉಂಟಾಗುತ್ತವೆ. ಹೊಟ್ಟೆಯು ಅಕ್ರಮ ಹೊಂದುತ್ತಲೇ ಒಂದು ಗ್ಲಾಸು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಕುಡಿಯಿರಿ. ಅದು ಬಹಳ ರುಚಿಕರ ರಕ್ತವನ್ನು ತಣ್ಣಗಿರಿಸಿ, ಹೊಟ್ಟೆಯನ್ನು ಕ್ರಮವಾಗಿರಿಸುತ್ತದೆ ಅದು ಅನ್ನಕೋಶವನ್ನು ಏನೊಂದು ಅಪಾಯವಿಲ್ಲದೆ ಹೊಕ್ಕು ಸಾವಧಾನದಿಂದ ತನ್ನ ಕೆಲಸ ಮಾಡುತ್ತದೆ.

ಜಗತ್ತಿನ ಎಲ್ಲಾ ಡಾಕ್ಟರರಿಂದ ಶಿಫಾರಸು ಮಾಡಲ್ಪಟ್ಟಿದೆ. ಒಳ್ಳೇ ಮಾಗಿದ ಫಲ ಮೂಲ ಮತ್ತು ಅನೇಕ ಔಷಧಿ ಮಿಶ್ರಿತವಾದ ಈ ಲವಣವು ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುವುದು

"ಇಮಿಟೇಶನನ್ನು ಬಹಿಷ್ಕರಿಸಿ ಒಳ್ಳೆಯ ಖಾತ್ರಿ ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಗಳಲ್ಲಿ ಮಾರಲ್ಪಡುತ್ತದೆ ನಮ್ಮ ಎಪ್ಪತ್ತು ವರ್ಷಗಳ ಅನುಭವದಿಂದ ಅದು ಕ್ರಮಪ್ರಕಾರ ತಯಾರಿಸಲ್ಪಡುವುದು."



ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಮಿತವಾದ ದರಗಳು! ಸಭ್ಯ ನೌಕರರು!

ನಿಯಮಿತ ಕಾಲಕ್ಕೆ ಬಿಡಲ್ಪಡುವ ಬಸ್ಸು ಸರ್ವಿಸುಗಳು

ಇವುಗಳಿಂದಲ್ಲವೇ

ಪ್ರಯಾಣ ಸೌಕರ್ಯವು ಹೆಚ್ಚುವುದು?

ನಮ್ಮ
ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ನಿಶ್ಚಿತ ಸಮಯಕ್ಕೆ ಹೊರಡುವುವು.
ನೌಕರರು ವಿನಯ ನಮ್ರತೆಗಳಿಂದ ನಿಮ್ಮನ್ನು ಸ್ವಾಗತೀಕರಿಸುವರು.
ಮಿತದರಗಳು ಎಲ್ಲಾ ತರಗತಿಯ ಪ್ರಯಾಣಿಕರಿಗೂ ಬಸ್ಸು ಪ್ರಯಾಣಕ್ಕೆ ಆಸ್ಪದವೀಯುವುದು.

ಪ್ರಯಾಣಿಕರಿಗೆ ಉಂಟಾಗಬಹುದಾದ ಅಸೌಕರ್ಯಗಳನ್ನು ನಮಗೆ ತಿಳಿಸಿದ್ದಲ್ಲಿ ತಕ್ಷಣ ಗಮನ ಕೊಡಲಾಗುವದು.

JOINT MANAGERS,

The Combined Booking Agency, **MANGALORE.**

The Joint Booking Office, **KODIALBAIL.**

★ ಚೀನದ ಕ್ರಾಂತಿಕಾರಿಗಳು!!

★ ಗುಪ್ತ ಸಮಿತಿಗಳಲ್ಲಿ ಅವರ ವ್ಯವಹಾರಕ್ರಮ!

★ ★

ಚೀನವು ಅಫೀಮುಖೋರ ಎಂದು ಜಗತ್ಪ್ರಸಿದ್ಧವಾಗಿದೆ. ಅಲ್ಲಿಯ ಜನರು ನಿರಕ್ಷರರು ನಾಗರಿಕತೆಯಲ್ಲಿ ಹಿಂದುಳಿದವರು ಎಂದು ಹೆಸರಾಗಿದ್ದಾರೆ. ಆದರೆ ದೇಶಾಭಿಮಾನವು ಮಾತ್ರ ಇತರ ದೇಶೀಯರಲ್ಲಿರುವದಕ್ಕಿಂತ ಕಡಿಮೆಯಾಗಿಲ್ಲ. ಬಹುಕಾಲದಿಂದ ವಿದೇಶೀಯರು ಬಂದು ಚೀನದಲ್ಲಿ ಒಳಕೊಳ್ಳಲಾರಂಭಿಸಿದ್ದರು. ಅಲ್ಲಿ ವ್ಯಾಪಾರ ಉದ್ಯೋಗಗಳನ್ನು ಮಾಡಿ ಜೀವನವನ್ನು ಸಾಗಿಸತೊಡಗಿದ್ದರು. ಚೀನೀಯರಿಂದ ಉಪಕೃತರಾಗಿ ಅವರಿಗಿಂತ ಹೆಚ್ಚು ಸುಖಿಗಳೂ ಸಂಪನ್ನರೂ ಆಗಿದ್ದರು.

ಹತ್ತೊಂಭತ್ತನೆ ಶತಮಾನದ ಉತ್ತರಾರ್ಧದಲ್ಲಿ ಈ ವಿದೇಶೀಯರು ಸೊಕ್ಕಿದರು. ಚೀನದ ಉಪಕಾರವನ್ನು ಮರೆತು, ಅವಳ ಹುಟ್ಟುಮಕ್ಕಳು, ಚೀನಿಯರನ್ನು ದ್ವೇಷಿಸಿದರು. ಚೀನಿಯರಿಗೆ ಸ್ವದೇಶದಲ್ಲಿ ನ್ಯಾಯವಾಗಿ ಪ್ರಾಪ್ತವಾಗಿದ್ದ ಸ್ಥಾನಮಾನ ಹಕ್ಕು ಅಧಿಕಾರಗಳನ್ನು ಮೆಲ್ಲಮೆಲ್ಲಗೆ ಅಪಹರಿಸಿಕೊಂಡು ವಿದೇಶೀಯರೇ ಅವುಗಳ ಅನುಭೋಗಮಾಡತೊಡಗಿದರು. ಚೀನಿಯರು ಚೀನದಲ್ಲಿ ಚೀನದವರಲ್ಲದವರಂತೆ ಇರಬೇಕಾಯಿತು.

ಸ್ವದೇಶದಲ್ಲಿ ಪರದೇಶಿಗಳಂತೆ ಇರಬೇಕಾದ ತಮ್ಮ ದುಃಸ್ಥಿತಿಯನ್ನು ಕಂಡು ನಿದ್ರಿಸುತ್ತಿದ್ದ ಚೀನಿಯರು ಎಚ್ಚತ್ತರು. ವಿದೇಶಿಯರು ಅವರಿಗೆ ಕೊಡುತ್ತಿದ್ದ ಪೀಡೆಯು ಅವರನ್ನು ಎಚ್ಚರಿಸಿತು. ಅವರು ತಮ್ಮ ಹಕ್ಕು ಅಧಿಕಾರ ಸ್ಥಾನಮಾನಗಳನ್ನು ಪುನಃ ತಾವೇ ಪಡೆದುಕೊಳ್ಳಲಿಕ್ಕೆ ಪ್ರಯತ್ನಿಸಿದರು. ಚೀನದ ಕ್ರಾಂತಿಕಾರಿಗಳು ಗುಪ್ತಸಮಿತಿಗಳನ್ನು ಸ್ಥಾಪಿಸಿಕೊಂಡು ವಿದೇಶಿಯರನ್ನು ಸ್ವದೇಶದಿಂದ ಹೊರಗಟ್ಟುವ, ಅವರ ಕೊಲೆ ಸುಲಿಗೆಮಾಡಿ ಬುದ್ಧಿಕಲಿಸುವ ಇತ್ಯಾದಿ ಕಾರ್ಯಗಳಲ್ಲಿ ನಿರತರಾದರು. ತಮಗೆ ಯುಕ್ತಕಂಡ ರೀತಿಯಲ್ಲಿ ದೇಶಹಿತವನ್ನು ಸಾಧಿಸುವ ಮಹತ್ಕಾರ್ಯದಲ್ಲಿ ಬದ್ಧಕಂಕಣರಾದರು.

ಕಾರ್ಯಸಾಧನೆ.

1900ರಿಂದಾರಂಭಿಸಿ ಕ್ರಾಂತಿಕಾರಿಗಳ ಈ ಗುಪ್ತಸಮಿತಿಗಳು ಚೀನದ ಪ್ರತಿಯೊಂದು ಸಣ್ಣ ದೊಡ್ಡ ಪೇಟೆ ಪಟ್ಟಣಗಳಲ್ಲಿ ಹರಡಿದ್ದವು. ಸರಕಾರವೂ ಸರಕಾರದ ಅಧಿಕಾರಿಗಳೂ ಕೂಡ ಈ ಕ್ರಾಂತಿಗಳೊಂದಿಗೆ ಸೇರಿದ್ದರು. ಹೊರಗಿನಿಂದ ವಿದೇಶಿಯರ ಮಿತ್ರರಂತೆ ನಟಿಸಿಕೊಂಡು ಒಳಗಿಂದೊಳಗೆ ಕ್ರಾಂತಿಕಾರಿಗಳೊಂದಿಗೆ ಕೂಡಿ ಸರಕಾರದ ಅಧಿಕಾರಿಗಳು ಕೆಲಸಮಾಡುತ್ತಿದ್ದರು. ಚೀನದಲ್ಲಿ ವಿದೇಶಿಯರು ಸರಕಾರಕ್ಕೆ ಕಪ್ಪದಬೇಡಾದವರಾಗಿದ್ದರು. ಸರಕಾರದ ಆಡಳಿತ ಕಾರ್ಯದಲ್ಲಿ ಹಸ್ತಕ್ಷೇಪಮಾಡಿ, ಅದರ ಕಾನೂನು ಕಾಯಿದೆಗಳನ್ನು ಉಲ್ಲಂಘಿಸಿ, ವಿದೇಶೀಯರು ಸ್ವೇಚ್ಛಾಪರರಾಗಿ ನಡೆಯುತ್ತಿದ್ದುದರಿಂದ ಸರಕಾರಕ್ಕೆ ಅವರನ್ನು ಹೇಗೂ ಮಾಡಿ ಅಂಕೆಯಲ್ಲಿಡಬೇಕೆಂಬ ತಾತ್ಪರ್ಯವಿದ್ದಿತು. ಪ್ರಕಟವಾಗಿ ವಿದೇಶಿಯರನ್ನು ಪರಿಶೋಧಿಸುವಷ್ಟು ಸರಕಾರವು ಬಲಿಷ್ಠವಾಗಿರಲಿಲ್ಲ. ಆದ್ದರಿಂದ ಬಹಿರಂಗವಾಗಿ ವಿದೇಶಿಯರು ಹೇಳಿದುದನ್ನೆಲ್ಲ ಅದು ಹೌದು ಅನ್ನುತ್ತಿದ್ದು ಅಂತರಂಗದಲ್ಲಿ ಕ್ರಾಂತಿಕಾರರ ಸಂಪೂರ್ಣ ಸಫಲತೆಯನ್ನು ಇಚ್ಛಿಸುತ್ತಿದ್ದಿತು. ಇತರ ಕ್ರಾಂತಿಕಾರಿಗಳಿಗೆ ಕಾರ್ಯಸಾಧನೆಯು ಒಳ್ಳೆಯ ಅನುಕೂಲವಾಯಿತು.

ಚೀನದಲ್ಲಿ ಬಟ್ಟ ಬಯಲಿನಲ್ಲಿ ನಡುಹಗಲಿನ ಸಮಯಕ್ಕೆ ಕ್ರಾಂತಿಕಾರಿಗಳಿಂದ ಕೊಲೆ ಸುಲಿಗೆಗಳಾಗುತ್ತಿದ್ದರೂ ಅವರ ಪತ್ತೆ ಹಚ್ಚುವುದು ತೀರ ದುಸ್ತರವಾಗಲಿಕ್ಕೆ ಸರಕಾರದ ಈ ಗುಪ್ತಸಹಾಯವೇ ಕಾರಣವಾಗಿತ್ತು. ವಿದೇಶಿಯರ ಅನುಗ್ರಹಕ್ಕೆ ಪಾತ್ರಳಾಗಿದ್ದ ಚೀನದ ಮಹಾರಾಜ್ಞಿಯು ಕ್ರಾಂತಿಕಾರರ ಹುಟ್ಟಡಗಿಸಬೇಕೆಂದು ಶತಪ್ರಯತ್ನಗಳನ್ನು ಮಾಡಿದಳು. ಆದರೆ ಏನೂ ಫಲ ದೊರೆಯಲಿಲ್ಲ. ಅವಳು ಕೊಡುತ್ತಿದ್ದ ಆಜ್ಞಾಪತ್ರಗಳು ಒಂದೇ ಕಸದ ಬುಟ್ಟಿಯನ್ನು ಸೇರುತ್ತಿದ್ದವು. ಅಥವಾ ಕ್ರಾಂತಿಕಾರರ ಕೂದಲು ಕೊಂಕದಹಾಗೆ ಅವುವಿರೂಪಗೊಂಡು ಅಧಿಕಾರಿಗಳ ಕೈಸೇರುತ್ತಿದ್ದವು. ಅರಮನೆಯ ಕಂಬ ಜಂತಿಗಳು ಕೂಡ ಕ್ರಾಂತಿಕಾರರನ್ನು ಸೇರಿಕೊಂಡಿದ್ದುದರಿಂದ, ಮಹಾರಾಜ್ಞಿಗೆ ಸ್ವತಂತ್ರಿಸಿ ಕೆಲಸಮಾಡುವುದು ಯಾವದೂ ಸಾಧ್ಯವಾಗಲಿಲ್ಲ.

ವ್ಯವಹಾರ ಕ್ರಮ.

ಕ್ರಾಂತಿಕಾರಿಗಳ ವ್ಯವಹಾರಕ್ರಮವು ರೋಮಾಂಚಕಾರಿಯಾಗಿರುವುದು. ಅವರು ದೇವಾಲಯಗಳ ಗರ್ಭಗುಡಿಗಳಲ್ಲಿ ಅಥವಾ ಬೇರೆ ಗುಪ್ತಸ್ಥಾನಗಳಲ್ಲಿ ವಿಶೇಷವಾಗಿ ನಡುರಾತ್ರಿಯ ಕಾಲಕ್ಕೆ ಸಭೆಗೂಡಿ ತಮ್ಮ ಕಾರ್ಯಕ್ರಮವನ್ನು ರೂಪಿಸಿಕೊಂಡು, ಅದರಂತೆ ನಡೆದುಕೊಳ್ಳುತ್ತಿದ್ದರು. ಈ ಸಭೆಗಳಲ್ಲಿ ಸೇರಿ ಕೆಲಸ ಮಾಡುವುದು ಚೀನಿಯರಿಗೆ ಒಂದು ಹೆಮ್ಮೆಯ ವಿಷಯವಾಗಿದ್ದಿತು. ಸರಕಾರದ ಅಧಿಕಾರಿಗಳು ಕೊಡುವ ಸಹಾಯವು ಅತ್ಯಂತ ಗುಪ್ತವಾಗಿರುತ್ತಿತ್ತು.

ಯಾರಾದರೊಬ್ಬನು ಗುಪ್ತಸಮಿತಿಯ ಸದಸ್ಯನಾಗಬೇಕೆಂದರೆ ಮೊದಲು ಅವನು ಸಮಿತಿಯ ಪ್ರಧಾನನಿಗೆ ಅರ್ಜಿಮಾಡಬೇಕು. ಪ್ರಧಾನನು ಅಗತ್ಯವುಳ್ಳ ವಿಚಾರ ಅನುಭವಗಳನ್ನು ತೆಗೆದುಕೊಂಡು ಮುಂದಿನ ಸಭೆಗೆ ಅರ್ಜಿದಾರನನ್ನು ಕರೆಸುವನು. ಸಭೆಕೂಡಿದಾಗ ಅವನು ಎಲ್ಲರ ಮುಂದೆ ನಮ್ರನಾಗಿ ಕೈಜೋಡಿಸಿಕೊಂಡು ನಿಂತಿರಬೇಕು. ಪ್ರಧಾನನೂ ಇತರ ಸದಸ್ಯರೂ ಕೇಳುವ ಪ್ರಶ್ನೆಗಳಿಗೆ ತಕ್ಕುದಾದ ಉತ್ತರಗಳನ್ನು ಕೊಡಬೇಕು. ಆ ಮೇಲೆ ಪ್ರೇಮಸ್ಸೂಚಕ ಎಲ್ಲರೂ ಕೂಡಿ ಹುಕ್ಕ ಸೇದುವರು. ಅರ್ಜಿದಾರನೂ ಅವರೊಂದಿಗೆ ಹುಕ್ಕ ಸೇದಬೇಕು.

ಇದಾದನಂತರ ಅರ್ಜಿದಾರನೂ ಪ್ರಧಾನನೂ ಪುನಃ ಮುಖಕ್ಕೆ ಮುಖಮಾಡಿ ನಿಂತುಕೊಳ್ಳುವರು. ಪ್ರಧಾನನು ಸಮಿತಿಯ ನೀತಿನಿಯಮಗಳನ್ನು ಓದಿಹೇಳಿ ಅರ್ಜಿದಾರನಿಂದ ಪ್ರತಿಜ್ಞಾಪತ್ರಕ್ಕೆ ಸಹಿ ತೆಗೆದುಕೊಳ್ಳುವನು. ವಿದೇಶಿಯರ ದ್ವೇಷವು ಮೊದಲನೆ ಪ್ರತಿಜ್ಞೆ, ಅಕಾಲ ಅಥವಾ ಆಕಸ್ಮಿಕ ಮರಣಕ್ಕೆ ತುತ್ತಾದ ಸದಸ್ಯನ ಅನಾಥ ಕುಟುಂಬಕ್ಕೆ ತನುಮನಧನಗಳಿಂದ ಸಹಾಯಮಾಡುವದು ಎರಡನೆಯ ಪ್ರತಿಜ್ಞೆ. ಪ್ರತಿಜ್ಞಾಪತ್ರಕ್ಕೆ ಸಹಿಹಾಕಿದ ನಂತರ ಆ ಕಾಗದವನ್ನು ಸುಟ್ಟು, ಬೂದಿಯನ್ನು ಒಂದು ತಟ್ಟೆಯಲ್ಲಿ ಇಡುವರು. ಆ ಮೇಲೆ ತಟ್ಟೆ ತುಂಬಾ ಸಾರಾಯಿ ಸುರಿಯುವರು. ಅರ್ಜದಾರನು ತನ್ನ ಬೆರಳಿಗೆ ಸೂಜಿಯ ಮೊನೆಯಿಂದ ಗಾಯಮಾಡಿ ಮೂರು ಹನಿ ರಕ್ತವನ್ನು ಆ ತಟ್ಟೆಯಲ್ಲಿ ಚೆಲ್ಲಬೇಕು. ಆನಂತರ ಒಂದು ಗುಟುಕು ತಾನು ಕುಡಿದು, ಉಳಿದುದನ್ನ ಎಲ್ಲರಿಗೂ ಸ್ವಲ್ಪ ಸ್ವಲ್ಪ ಕುಡಿಯಕೊಡಬೇಕು.

ಈ ಪ್ರಾರಂಭವಿಧಿಗಳು ಮುಗಿದ ಮೇಲೆ ಪ್ರಧಾನನು ಅರ್ಜದಾರನನ್ನು ಒಂದು ಗುಪ್ತ ಕೋಣೆಗೆ ಕರೆಕೊಂಡು ಹೋಗುವನು. ಆ ಕೋಣೆ ನೋಡಲಿಕ್ಕೆ ಬಹು ಭಯಾನಕವಾಗಿರುವುದು. ಅಲ್ಲಿ ಶಸ್ತ್ರಾಸ್ತ್ರಗಳು ಚಿತ್ರವಿಚಿತ್ರವಾಗಿ ಇಟ್ಟಿರುತ್ತವೆ. ಹತ್ತಾರು ಖಡ್ಗಗಳು ರೇಶ್ಮೆದಾರದಿಂದ ತೂಗಿರುತ್ತವೆ. ಅರ್ಜದಾರನ ಯೋಗ್ಯತೆಯ ಪರೀಕ್ಷೆಯು ಇಲ್ಲಾಗುವುದು. ಆ ಖಡ್ಗಗಳು ಸ್ವಾಣೆ ಆಗಿ ಚೆನ್ನಾಗಿ ಹರಿತವಾದವುಗಳು. ರೇಶ್ಮೆದಾರವು ಕಡಿದು ಅವು ಯಾವಾಗಬೇಕಾದರೂ ಕೆಳಗೆ ಬೀಳಬಹುದು. ಅಂಥವುಗಳ ಕೆಳಗೆ ಅರ್ಜಿದಾರನನ್ನು ನಿಲ್ಲಿಸಿ ಪ್ರಧಾನನು ಕೆಲವು ವಿಚಿತ್ರ ಮತ್ತು ರೋಮಾಂಚಕಾರಿ ಮಂತ್ರಗಳನ್ನು ಉಚ್ಚರಿಸುವನು. ಒಂದು ಕೈಯಿಂದ ಕೆಲವು ಅಕ್ಕಿಯ ಕಾಳುಗಳನ್ನು ಅರ್ಜಿದಾರನ ತಲೆಯ ಮೇಲೆ ಚೆಲ್ಲಿ, ಒಂದು ಹರಿತವಾದ ಖಡ್ಗದಿಂದ ಅವನ್ನು ಹಾರಾಡಿಸುತ್ತ ಇರುವನು. ಆ ಖಡ್ಗವು ಅರ್ಜಿದಾರನ ಮುಖಕ್ಕೆ ಬಹು ಸಮೀಪದಲ್ಲಿ ಸುಯ್ಯ ಸುಯ್ಯ ಎಂದು ಬೀಸುತ್ತಿರುತ್ತದೆ. ಆದರೆ ಅರ್ಜಿದಾರನು ಅದನ್ನು ನೋಡಿ ಹಿಂದೆ ಮುಂದೆ, ಎಡಬಲ ಸರಿಯಬಾರದು, ಮೈ ತೆಗೆಯಲಿಕ್ಕೂ ಕೂಡದು. ಹೀಗೆ ಮಾಡಿದನಾದರೂ, ಕರ್ಮಧರ್ಮ ಸಂಯೋಗದಿಂದ ತಲೆಮೇಲೆ ತೂಗುವ ಖಡಗಳ ನೂಲು ಕಡಿದು ಕೆಳಗೆ ಅಥವಾ ಅವನ ತಲೆಯ ಮೇಲೆ ಬಿದ್ದರೂ, ಅರ್ಜಿದಾರನ ಸದಸ್ಯನಾಗಲು ಅಯೋಗ್ಯನಾಗುತ್ತಾನೆ. ಕೆಲವೊಮ್ಮೆ ಈ ಖಡಗಳು ಮೈಮೇಲೆ ಬಿದ್ದು ಅರ್ಜಿದಾರರಿಗೆ ಪ್ರಾಣಾಂತಿಕ ಗಾಯಗಳಾದುದಿದೆ. ಅಂಥವರನ್ನು ಸಮಿತಿಯು ದುರ್ಭಾಗ್ಯಶಾಲಿ ಎಂದು ತಿಳಿದು ಸಮಿತಿಯಿಂದ ಹೊರಗೆ ಇರಿಸುತ್ತದೆ.

ಪರೀಕ್ಷೆಯಲ್ಲಿ ಸಫಲನಾಗಿ ಅರ್ಜಿದಾರನು ಹೊರಗೆ ಬಂದ ತರುವಾಯ ಅವನು ಸಮಿತಿಯ ಸದಸ್ಯನಾಗುವನು. ಆಗ ಅವನಿಗೆ ಸಮಿತಿಯ ಸಾಂಕೇತಿಕ ಚಿನ್ಹವು ಕೊಡಲ್ಪಡುವುದು. ಉಳಿದ ಸದಸ್ಯರು ಅವನನ್ನು ತಮ್ಮವನೆಂದು ಗಾಢಾಲಿಂಗನ ಮಾಡುವರು. ಮುಂದೆ ಅವನ ಇತರ ಸದಸ್ಯರೊಂದಿಗೆ ಎಲ್ಲಾ ಚಟುವಟಿಕೆಗಳಲ್ಲಿಯೂ ಭಾಗವಹಿಸಿ ಸಮಿತಿಗೆ ಯುಕ್ತತೋರಿದ ದೇಶಹಿತ ಕಾರ್ಯಗಳಲ್ಲಿ ಅದರಿಂದ ಆಜ್ಞಾಪಿತನಾಗುವನು. ಅವನು ಸಮಿತಿಗೆ ವಿಧೇಯನಾಗಿಯೂ ನಂಬಿಗೆಯವನಾಗಿಯೂ ಕಾರ್ಯನಿರ್ವಾಹಮಾಡುತ್ತ ಇರಬೇಕು.

ಕಡೆಯ ಎರಡು ಮಾತುಗಳು.

ಚೀನವು ಪ್ರಜಾಸತ್ತಾತ್ಮಕ ರಾಜ್ಯವಾಗಲು ಈ ಕ್ರಾಂತಿಕಾರಿಗಳ ಗುಪ್ತ ಕಾರ್ಯಸ್ಥಾನಗಳೇ ಮುಖ್ಯ ಕಾರಣಗಳಾಗಿದ್ದುವೆಂದು ಹೇಳುತ್ತಾರೆ. ದೇಶದ ಸ್ವಾತಂತ್ರ್ಯಗಾಗಿ ಚೀನಿಯರು ಹಿಡಿದ ಹಿಂಸಾತ್ಮಕ ಮಾರ್ಗವು ತಪ್ಪಾಗಿದೆ ನಿಜ. ಸತ್ಯ ಅಹಿಂಸೆಯಿಂದಲೇ ಮನುಷ್ಯತ ಮನುಷತ್ವವು ಪ್ರಕಾಶಕ್ಕೆ ಬರಬೇಕಲ್ಲದೆ, ಅಹಿಂಸೆ ಅಸತ್ಯದಿಂದಲ್ಲ. ಆದರೆ ಚೀನದ ಕ್ರಾಂತಿಕಾರಿಗಳ ಕಾರ್ಯನಿರ್ವಾಹ ಕ್ರಮದ ಅಧ್ಯಯನದಿಂದ ತುಂಬ ಮನೋರಂಜನವಾಗುತ್ತದೆ. ಅವರು ಹಿಡಿದ ಮಾರ್ಗವು ತಪ್ಪಾಗಿದ್ದರೂ ಉದ್ದೇಶವು ಪವಿತ್ರವಾಗಿತ್ತೆಂದು ಗೊತ್ತಾಗುತ್ತದೆ. ಅಷ್ಟು ಮಾತ್ರವಲ್ಲ, ಚೀನಿಯರ ಧೈರ್ಯಸಾಹಸ, ಸದ್ಭಕ್ತಿ ಉತ್ಸಾಹಗಳೂ ತ್ಯಾಗಬುದ್ಧಿಯೂ ಅನುಕರಣೀಯವಾಗಿರುತ್ತದೆಂಬುದೂ ತಿಳಿಯುತ್ತದೆ.

ಎಸ್. ಎಸ್. ಎಲ್. ಸೀ.

ವಿದ್ಯಾರ್ಥಿಗಳ ಪರೀಕ್ಷೆ ಮುಗಿಯುತ್ತಲೇ, ಪರೀಕ್ಷಕರ ಪರೀಕ್ಷೆಗೆ ವಿದ್ಯಾರ್ಥಿಗಳು ಅಗತ್ಯವಾಗಿಯೂ ತೊಡಗಬೇಕಾಗುವಂತಹ ಸಂದರ್ಭಗಳು ಉಂಟಾಗಿವೆ.

ಪರೀಕ್ಷೆಗಳು ಒಂದು ಅವಾಂತರ, ಪರೀಕ್ಷಕರು ಮತ್ತೊಂದು ಗಂಡಾಂತರ—ಹೀಗಾಗಿರುವಂತೆ ಏಕೆ ವಿಧಿ ನಿರ್ಮಿಸಿರುವನೋ ಎಂದು ವಿದ್ಯಾರ್ಥಿಗಳೆನ್ನುತ್ತಾರೆ.

ಪಾಸಾಗಿ ದೊರೆವುದೊಂದು ಜಾತಕಪುಸ್ತಕ ನಿರುದ್ಯೋಗವಂತೂ ಹಣೆಯಲ್ಲೇ ಬರೆದಿದೆ. ವಿದ್ಯಮಾನಗಳು ನಿರಾತಂಕವಾಗಿ ಕಲಿಯಲು ಸಮಕೂಟವಾಗಿಲ್ಲ. ಹೀಗಿದ್ದರೂ, ಪರೀಕ್ಷೆಗೆ ಕೂತವರಿಗೆ ಈ ಪರೀಕ್ಷಕರ ಬಾಧೆ ಅದೆಂತಹದು?

ಪಾಠಕ್ಕಿಲ್ಲದುದನ್ನು ಕೇಳುವುದು, ನಿರುಪಯುಕ್ತ ವಿಷಯಗಳಲ್ಲೇ ಪ್ರಶ್ನೆ, ನಿರೀಕ್ಷಿತ ಪ್ರಶ್ನೆಗಳು ಇಲ್ಲದಿರುವುದು, ಹಿಂದಣ ಕ್ರಮ ಮೀರಿ ಸವಾಲು, ಸಮಯ ಕಡಮೆ, ಪ್ರಶ್ನಾವಳಿಗಳ ಪತ್ರಾವಳಿಗಳು ಉದ್ದ, ಅರ್ಥ ತಿಳಿಯದ ಮಾತುಗಳಲ್ಲಿ ವಾಕ್ಯ ರಚಿಸಿ ಪ್ರಶ್ನೆ ಹೊರಡಿಸುವುದು,—ವಿದ್ಯಾರ್ಥಿಗಳು ದರ್ಶನಕ್ಕೆ ನಿಂತು ಆವೇಶ ತುಂಬಿರುವ ಪಾತ್ರಿಗಳಲ್ಲವಷ್ಟೆ ಇವನ್ನೆಲ್ಲ ತಿಳಿದು ಉತ್ತರಕೊಡಲು!

ಇಂಗ್ಲಿಷಿನ ಮೊದಲನೆ ಮತ್ತು ಎರಡನೆ ಪ್ರಶ್ನಾಪತ್ರಗಳಲ್ಲಿಯೂ ಪುನಃ ಪುನಃವಾಗಿ ಕೇಳಲಾಗುವ ಪ್ರಶ್ನೆಗಳೇಕೆ? ಎರಡೆರಡು ಸಲ ಇವನ್ನೆಷ್ಟು ಕೇಳಬೇಕು? ಸಾಮಾನ್ಯ ಭಾಷಾ ಜ್ಞಾನಕ್ಕೂ ಕೂಲಂಕಷವಾದ ಪಠ್ಯಪುಸ್ತಕಗಳ ಜ್ಞಾನಕ್ಕೂ ತಾರತಮ್ಯವಿಲ್ಲವೆ? ಭಾಷಾರೂಢಿಗಳೆಂದರೆ, ಕೆಲವನ್ನು ಆರಿಸಿಯೇ ತೆಗೆದು ಅರ್ಥವಾಗದ ವಾಕ್ಯಗಳಲ್ಲಿ ಕೊಡಬೇಕೆ? ಇಂಗ್ಲೆಂಡಿನಲ್ಲಿಯೆ ಕೇಳಬಾರದ ಪ್ರಶ್ನೆಗಳಿಗೆ ಇಲ್ಲೇಕೆ, ಪರಭಾಷಾ ಪ್ರಾಂತ್ಯದಲ್ಲಿ ಮಹತ್ವ? ಯಾರು ಬಲ್ಲರು?

ಗಣಿತವನ್ನು ಭಾಸ್ಕರಾಚಾರ್ಯರಾಗುವವರೇ ಕಲಿಯಬೇಕೆಂಬುದು ಸ್ಪಷ್ಟವೇ? ವ್ಯವಹಾರಿಕವಲ್ಲದ ಗಣಿತ, ಎರಡು ಶತಮಾನಗಳ ಹಿಂದಣ ಮತ್ತು ಪರೀಕ್ಷಕರು ತಾವೇ ಪರೀಕ್ಷೆಗೆ ಕೂತಾಗ ಎಂದೋ ಅದು ಕಲಿತ ಗಣಿತದ ಪ್ರಶ್ನೆಗಳ ಕೂಟ, ಪಾಠಕ್ಕಿಲ್ಲದ ವಿಷಯ ಅರ್ಥವಾಗದ ಪ್ರಶ್ನೆ—ಹೀಗೆಲ್ಲ ಗಣಿತ ರೂಪದಲಿ ಹೊರಟರೆ, ಉತ್ತರಿಸುವವರು ಯಾರು? ವರ್ಷ ವರ್ಷಗಳಿಂದ ಕೇಳಿದ ಮಾದರಿಯನ್ನು ದೂರ ತಳ್ಳಿ ಹೊಸರೀತಿಗೆ ಕೈಹಚ್ಚಿ, ಹಳಬರ ಪುರಾತನದ ಪಾಂಡಿತ್ಯ ಪ್ರದರ್ಶನವೇ ಆಗಿದೆ. ಇದಾದರೂ ಧೈರ್ಯವೆ? ನಾಳೆಗೇ ಮತ್ತೊಂದಾಗುವುದು. ಹಾಗಿದ್ದರೆ, ಕಲಿಸುವುದೇನು, ಕಲಿಯುವುದೇನ? ಸಂಸ್ಥಾನದ ಸರಾಸರಿ ಗುರುತ್ತಿಳಿದರೆ, ಎಣಿಕೆ ಕಡಮೆ ಫೈಲಾದರೆ,—ಪರೀಕ್ಷಕರು ಏನು ಪಾಸಾದ ಮಾಡಿದ ಹಾಗಾಯಿತು?

ಐಚ್ಛಿಕ ಗಣಿತದ ಪ್ರಶ್ನಾಪತ್ರವು ಈ ತರಗತಿಯದೇ ಅಲ್ಲ. ಕಾಲೇಜಿಗೆ ಹೋಗುವ ದಾರಿ ತಪ್ಪಿ ಹೈಸ್ಕೂಲಿಗೆ ಬಂದ ಭೂತವಿದು. ಎಷ್ಟೆತ್ತಿದರೂ ಕಪ್ಪು ಕಪ್ಪಾಗಿ, ಮಕ್ಕಳೆಲ್ಲ ಬೆಪ್ಪು ಬೆಪ್ಪಾದರು. ಇನ್ನು ಈ ತರಗತಿಯಲ್ಲಿ ಗಣಿತದ ಮಾತೇ ಬೇಡ.

ಪರೀಕ್ಷಕರಿಗೆ ತರಗತಿಯ ಜ್ಞಾನವಿರಬೇಕು. ಮಕ್ಕಳಿಗೆ ದೊರೆವ ಶಿಕ್ಷಣದ ಪರಿಚಯವಿರಬೇಕು. ಪರಂಪರೆಯ ಪ್ರಶ್ನಾವಳಿಗಳ ದೃಷ್ಟಿ ಇರಬೇಕು. ಮೂರು ವರ್ಷಗಳಿಗೊಮ್ಮೆ ಹೊಸ ಮನ್ವಂತರ ಸೃಷ್ಟಿಸುವಾಗ್ಯದಯೆಯಿಟ್ಟು ಹಿಂದಿನ ಶತಮಾನದಿಂದ ಇಂದಿನ ಕಡೆಗೆ ನಡೆಸಿಕೊಂಡು ಹೋಗಬೇಕಲ್ಲದೆ, ಇಂದಿನಿಂದ ಹಿಂದಿರುಗಬಾರದು. ವಿದ್ಯಾರ್ಥಿಗಳು ಪರೀಕ್ಷೆಗಾಗಿ ಓದುತ್ತಾರೆ, ಪರೀಕ್ಷಕರ ಸ್ವಪಾಂಡಿತ್ಯ ಪ್ರದರ್ಶನಕ್ಕಾಗಿ ಜೀವಿಸಬಾರದ. ಪದವಿಯೂ ಹಣವೂ ಲೋಕದಲ್ಲಿ ಬೇಕಾದಷ್ಟು ರೀತಿಯಲ್ಲಿ ಸಂಪಾದಿಸಬರುತ್ತವೆ, ಸೇವೆ, ಭಾವೀ ಜನಾಂಗದ ಸೇವೆ ದೊರೆವುದೂ ಸುಲಭವಲ್ಲ, ಸೇವೆಯೆಂದು ಅತ್ಯಾಚಾರ ನಡೆಸಿ ಹಿಂಸೆಗೇ ಕೈಯೊಡ್ಡುವುದು ಬಲ್ಲವರಿಗೆ ಭೂಷಣವಲ್ಲ.

ಪರೀಕ್ಷೆ ಕೊಟ್ಟಾಯಿತು. ಇನ್ನು ಮಾರ್ಕು ಕೂಡಿಸಿ, ನಾನಾ ಎಡ್ಜಸ್ಟ್‌ಗಳನ್ನು ಸೃಷ್ಟಿಸಿ ಫ್ರೊಮೋಷನ್ ಲಾ ತಯಾರಿಸಿ ಪಾಸುಗಳ ಸಂಖ್ಯೆ ನಿರ್ಧರಿಸಿದರಾಯಿತು. ಭಾಗ್ಯವುಳ್ಳವರು ಪಾಸಾಗಿ ದೊರೆತವರು. ಬಡಾವು, ಮಿಕ್ಕವರು ನಾಪಾಸು.

ಇದಕ್ಕೆ ಪರೀಕ್ಷೆಯೆನ್ನುವುದು ಅನ್ಯಾಯ. ಭಾಗ್ಯಶಾಲಿಗಳಾದ ಕೆಲವು ಹಿರಿಯರು, ಭಾಗ್ಯವನ್ನೇ ಪಡೆಯಲು ಹುಟ್ಟಿರುವ ಭಾರತೀಯರಲ್ಲಿ ಎಳೆಯರನ್ನೇ ಮುಗುಳಲ್ಲಿ ಚಿವುಟುವ ಅರಣ್ಯದಂತೆ ಮಾಡುವ ಚಿತ್ರಹಿಂಸೆಯ ಡಂಭಾಚಾರದ ಮಾರೀಪೂಜೆ. ಇದು ಪರೀಕ್ಷೆಯೇ ಅಲ್ಲ.

ನಿರ್ದಿಷ್ಟವಾದ ಪಾಠಪಟ್ಟಿಯಂತೆ ನಿರ್ದಿಷ್ಟವಾದ ಸಂಖ್ಯೆಯ ಮಾರ್ಕು ಗಳ (ಆನೇ ಪುಟವನ್ನು ನೋಡುವುದು.)

ಭಾಗ್ಯಾಧೀನರಾಗಿ ಯಾಕಿರಬೇಕು?

ಕೈಯಿಂದ ಕಾರ್ಯದ ಸಫಲತೆ ಅಥವಾ ಅಸಫಲತೆಗೆ ಭಾಗ್ಯವೇ ಕಾರಣ. ಭಾಗ್ಯವು ಅನುಕೂಲವಾಗಿದ್ದರೆ ಮಣ್ಣನ್ನು ಹಿಡಿದರೂ ಅದು ಚಿನ್ನವಾಗುವದು; ಅದೇ ಭಾಗ್ಯವು ಪ್ರತಿಕೂಲವಾಗಿದ್ದರೆ ಚಿನ್ನವು ಕೂಡ ಮಣ್ಣಾಗುವದು. ಮನುಷ್ಯನು ತಾನು ಮಾಡುತ್ತೇನೆನ್ನುವದು ಎಲ್ಲಾ ಸುಳ್ಳು ನಿಜವಾಗಿ ನೋಡಿದರೆ ಮನುಷ್ಯನ ಕಾರ್ಯಗಳನ್ನು ಮಾಡಿಸುವಂಥಾದ್ದು ಭಾಗ್ಯವೇ ಆಗಿದೆ" ಎಂದು ಎಷ್ಟೋ ಮಂದಿ ಹೇಳುತ್ತಿರುವದನ್ನು ನಾವು ಅನುನಿತ್ಯ ಕೇಳುತ್ತಿರುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಜೀವನದಲ್ಲಿ ಸಫಲವಾಗಬೇಕು, ಸುಖಿಯಾಗಬೇಕು; ದಿಗಂತ ವ್ಯಾಪ್ತವಾದ ಕೀರ್ತಿಯನ್ನು ಸಂಪಾದಿಸಬೇಕು ಎಂಬ ಮಹತ್ವಾಕಾಂಕ್ಷೆ

ಮುಸಲೀನಿ

ಯಿಂದ ಇದ್ದೇ ಇರುತ್ತಾನೆ ಪರಂತು ಎಲ್ಲರೂ ಜೀವನದಲ್ಲಿ ಸಫಲರಾಗುವದಿಲ್ಲ, ಸುಖಿಗಳಾಗುವದಿಲ್ಲ, ದಿಗಂತ ವ್ಯಾಪ್ತವಾದ ಕೀರ್ತಿಯನ್ನು ಸಂಪಾದಿಸಿ ಅಮರರಾಗುವದಿಲ್ಲ ಯಾಕೆಂದರೆ ಪ್ರಾಯಶಃ ಜೀವನದಲ್ಲಿ ಅಸಫಲವಾಗಿ ಇರುವವರೆಲ್ಲರೂ, ಭಾಗ್ಯವನ್ನು ನಂಬಿಕೊಂಡು ಇರುವವರಾಗಿದ್ದಾರೆ ಅವರಲ್ಲಿ ಉನ್ನತಿಯನ್ನು ಹೊಂದಬೇಕೆಂಬ ಇಚ್ಛೆಯು ಬಲವತ್ತರವಾಗಿ ಇರುವದಾದರೂ, ಉನ್ನತಿಯ ಮಾರ್ಗದಲ್ಲಿ ಇರುವ ಎಡರು ತೊಡರುಗಳನ್ನು ನೋಡಿಯೇ, ಅಥವಾ ಕಾರ್ಯಾರಂಭದಲ್ಲಿ ಉಂಟಾಗುವ ವಿಘ್ನಗಳನ್ನು ಕಂಡು, ಭಾಗ್ಯವು ತಮಗೆ ಪ್ರತಿಕೂಲವಾಗಿರುವದೆಂದ ಭ್ರಮಿಸಿಯೇ ಮುಂದಕ್ಕೆ ಯಾವ ಕಾರ್ಯಗಳನ್ನು ಮಾಡದೆ ಪಶು ತುಲ್ಯ ಜೀವನವನ್ನು ಸಾಗಿಸುತ್ತಾರೆ ಭಾಗ್ಯವನ್ನು ನಂಬಿಕೊಂಡಿರುವವರಲ್ಲಿ ಸಾಹಸ ಮತ್ತು ಇಚ್ಛಾಶಕ್ತಿಯ ದೊಡ್ಡ ಅಭಾವವಿರುವದನ್ನು ಸರ್ವತ್ರ ಕಾಣಬಹುದೆ ಅಂಥವರು ತಮಗೆ ಮಾತ್ರ ಭಾಗ್ಯವು ಪ್ರತಿಕೂಲವಾಗಿರುವದೆಂದೂ, ಉಳಿದವರಿಗೆ ಅನುಕೂಲವಾಗಿರುವದೆಂದೂ ತಪ್ಪಾಗಿ ತಿಳಿಯುತ್ತಾರೆ ಸತ್ಯವನ್ನು ಹೇಳುವದಾದರೆ ಸಾಹಸ ಮತ್ತು ಇಚ್ಛಾಶಕ್ತಿ ಉಳ್ಳವರು ಜೀವನದಲ್ಲಿ ಸಫಲರು ಆಗಿಯೇ ಆಗುತ್ತಾರೆ ಅವರ ಮಟ್ಟಿಗೆ ಭಾಗ್ಯವು ಅನುಕೂಲವಾಗುವದೂ ಪ್ರತಿಕೂಲವಾಗುವದೂ ಇಲ್ಲ ಜೀವನದಲ್ಲಿ ಸಫಲರಾದವರು ಭಾಗ್ಯವನ್ನು ನಂಬುವದು ಕೂಡ ಇಲ್ಲ

ಸಾಹಸ, ಇಚ್ಛಾಶಕ್ತಿ, ಆತ್ಮವಿಶ್ವಾಸ, ಸತತ ಪ್ರಯತ್ನಗಳ ಭಾವವು ನಮ್ಮೆಲ್ಲರಲ್ಲಿ ಬೀಜರೂಪದಲ್ಲಿ ಇದೆ. ಅದರ ವಿಕಾಸವನ್ನು ಮಾಡುವದು ನಮ್ಮ ಕೈಯಲ್ಲಿದೆ. ಕಾರ್ಯಸಫಲತೆಗೆ ಉದ್ಯೋಗ ಮತ್ತು ಅಧ್ಯವಸಾಯ ಎಂಬಿವು ಅತ್ಯಂತಾವಶ್ಯಕವಾದ ಎರಡು ವಸ್ತುಗಳು ಜೀವನದಲ್ಲಿ ಇಚ್ಛಾ ಪೂರ್ತಿಯ ಅನುಕೂಲ ಸಂದರ್ಭಗಳು ಎಷ್ಟೋ ಬಾರಿ ಬಂದು ಹೋಗುತ್ತವೆ ಭಾಗ್ಯವನ್ನು ನಂಬಿಕೊಂಡಿರುವವರು ಮಾತ್ರ ಆ ಸಂದರ್ಭಗಳ ಸದುಪಯೋಗವನ್ನು ಮಾಡಿಕೊಳ್ಳುವದಿಲ್ಲ, ಅಥವಾ ಮಾಡಿಕೊಳ್ಳುವ ಕ್ಷಮತೆಯನ್ನು ಅವರು ಉದ್ಯೋಗ ಅಧ್ಯವಸಾಯಗಳ ಮೂಲಕ ಪಡೆದಿರುವದಿಲ್ಲ ಆದ್ದರಿಂದ ತಮ್ಮ ಅಜಾಗರೂಕತೆಯಿಂದ ಜೀವನದಲ್ಲಿ ಯಾರಾದರೂ ದುಃಖಕ್ಲೇಶಗಳನ್ನು ಅನುಭವಿಸುವರಾದರೆ, ಅದಕ್ಕಾಗಿ ಭಾಗ್ಯವನ್ನು ದೂರುವದು ಜಾಣತನದ ಲಕ್ಷಣವಲ್ಲ ಯಾರು ಮೇಲ್ಕಂಡ ಗುಣಾನ್ವಿತರಾಗಿ ಸಂದರ್ಭೋಚಿತವಾಗಿ ಸಮಯದ ಉಪಯೋಗ ಮಾಡಿಕೊಂಡಿದ್ದಾರೋ ಅವರು ಜೀವನದಲ್ಲಿ ಸಫಲರಾಗಿದ್ದಾರೆ.

ಇತಿಹಾಸವನ್ನು ನೋಡಿರಿ

ನೆಪೋಲಿಯನನ ಹೆಸರನ್ನು ನೀವೆಲ್ಲರೂ ಕೇಳಿದ್ದೀರಿ ಫ್ರಾನ್ಸ ರಾಜ್ಯ ಕ್ರಾಂತಿಯ ಸಮಯಕ್ಕೆ ಅವನು ಸೇನೆಯ ಒಬ್ಬ ಅತಿ ಸಾಧಾರಣ ಸೈನಿಕನಾಗಿದ್ದನು ಆಕಾಶದಲ್ಲಿ ಗೋಪುರಗಳನ್ನು ಕಟ್ಟಿ ಮನಸ್ಸಿನ ಮಂಡಿಗೆಗಳನ್ನು ತಿನ್ನುತ್ತಿದ್ದ ಅತಿ ಮರುಳನೆಂದು ಜನರು ಅವನ ವಿಷಯ ಅಭಿಪ್ರಾಯಮಾಡಿಕೊಂಡಿದ್ದರು. ಅವನು ತನ್ನ ಭಾಗ್ಯವನ್ನು ನಂಬಿಕೊಂಡು ಅದರ ಇಚ್ಛೆಯಲ್ಲಿ ಇದ್ದಂತಾಗಲಿ ಎಂದು ಒಂದು ಬಾರಿಗೆ ಯೋಚಿಸಿದಂತೆ ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿ ಹಿಂದೂದೇಶಕ್ಕೆ ಬರುತಿದ್ದುದಾದರೆ, 'ನೆಪೋಲಿಯನ' ಎಂಬ ಹೆಸರ

ಹರ್ ಹಿಟ್ಲರ್

ಇತಿಹಾಸದಲ್ಲಿ ಅಜ್ಞಾತವಾಗಿಯೇ ಉಳಿಯುತಿತ್ತು ಆದರೆ ನೆಪೋಲಿಯನನು ಭಾಗ್ಯಾಧೀನನಲ್ಲ, ಭಾಗ್ಯ ನಿರ್ಮಾತನಾಗಿದ್ದನು ಅನುಕೂಲ ಸಂದರ್ಭವನ್ನು ಕಾಯುತ್ತ, ಅದು ಬಂದೊಡನೆ, ಕಾರ್ಯಸಾಧನೆಗಾಗಿ ಸತತ ಪ್ರಯತ್ನಗಳನ್ನು ಮಾಡಿದನು ಜನರು ಅವನನ್ನು ಹುಚ್ಚನೆಂದರೂ, ಅವನು ಮಾತ್ರ ಹುಚ್ಚನಾಗಿರಲಿಲ್ಲ ಸಾಯುವ ಮೊದಲು ಇಡೀ ಯೂರೋಪವನ್ನು ಪಾದಾಕ್ರಾಂತ ಮಾಡಿ, ಜಗದೇಕವೀರ, ಫ್ರಾನ್ಸ್ ಸಾಮ್ರಾಜ್ಯಾಧಿಪತಿ ಎಂಬ ಕೀರ್ತಿ ಯಶಸ್ಸುಗಳ ಭಾಜನನಾಗಿ ಅಮರನಾದನು

ಮತ್ತೆ ಶಿವಾಜಿಯು ಮಾತೇನು? ಅವನು ನೆಪೋಲಿಯನನಂತೆ ಬಡ ಕುಟುಂಬದಲ್ಲಿ ಹುಟ್ಟಿರಲಿಲ್ಲ ಎಂಬುದು ನಿಜ. ಆದರೆ ಆ ಕಾಲದ ಮೊಂಗಲ ಬಾದಶಹರ ದರ್ಪ, ಹಿಂದೂಗಳ ಅವನತ ಸ್ಥಿತಿ ಇವುಗಳನ್ನೆಲ್ಲ ಪರ್ಯಾಲೋಚಿ

ಸ್ಟಾಲಿನ್

ಸಿದಾಗ, ಶಿವಾಜಿಯು ಗೋಬ್ರಾಹ್ಮಣ ಸಂರಕ್ಷಕ, ಹಿಂದೂ ಸಾಮ್ರಾಜ್ಯಾಧಿಪತಿ ಮತ್ತು ಸ್ವತಂತ್ರತಾ ದೇವಿಯ ಆದರ್ಶ ಪೂಜಾರಿ ಎಂದೆನ್ನಿಸಿಕೊಳ್ಳುವನೆಂದು ಆ ಕಾಲದಲ್ಲಿ ಕನಸು ಮನಸುಗಳಲ್ಲಿ ಎಣಿಸಿದವರ ಒಬ್ಬರೂ ಕೂಡ ಇರಲಿಲ್ಲ ಆದರೆ ಮುಂದೆ ಅವನು ಸ್ವಂತ ಪ್ರತಿಭೆ ಮತ್ತು ಕರ್ತೃತ್ವ ಶಕ್ತಿಯ ಮೂಲಕ ಜಗತ್ತಿನಲ್ಲೇ ಪ್ರಸಿದ್ಧಿಯನ್ನು ಪಡೆದು ನ ಹಾನ್ ಐತಿಹಾಸಿಕ ಪುರುಷನೆನ್ನಿಸಿಕೊಂಡನು

ಹಿಟ್ಲರ್ ಮುಸಲೋನಿ ಸ್ಟಾಲೀನ್

ಈಗ ಹಿಟ್ಲರ್ ಮುಸಲೋನಿ ಸ್ಟಾಲೀನ ಎಂಬ ಹೆಸರುಗಳ ... ಜಗತ್ತಿನಲ್ಲಿ ಶಾಂತಿ ಅಥವಾ ಅಶಾಂತಿಯನ್ನು ಹರಡುವ ಕೈವಾಡವು ಪ್ರಕೃತ ... ಕೈಯಲ್ಲಿಗುತ್ತದೆ ಆದರೆ ಬಾಲ್ಯದಲ್ಲಿ ಇವರು ಹೇಗಿದ್ದರು? ಏನಾಗಿದ್ದರು? ಇತರ ಸಾಮಾನ್ಯರಂತೆ ಇವರೂ ಜಾಡಿಕೂಡಿ ಬೆಳೆದು ಇದ್ದರು ಇತರರಂತೆ ಇವರೂ ಜೀವನದಲ್ಲಿ ಅನೇಕ ಬಗೆಯ ಕಷ್ಟ ನಿಷ್ಠುರ ಮಾನಸಿಕ ಕ್ಲೇಶಗಳಿಗೆ ತುತ್ತಾಗಿದ್ದರು ಇವುಗಳನ್ನು ನೋಡಿ ಹೆದರಿ ಇವರು ಜೀವನಪಥದಲ್ಲಿ ಮುಂದಕ್ಕೆ ಹೆಜ್ಜೆಯನ್ನಿಡುವ ಪ್ರಯತ್ನಗಳನ್ನು ಮಾಡದೆ ಇರುತ್ತಿದ್ದರಾದರೆ ಇಂದಿಗೆ ಅವರು ಜರ್ಮನ, ಇಟಲಿ ... ಗಳ ಭಾಗ್ಯವಿಧಾತರು ಆಗುತ್ತಿರಲೂ ಇಲ್ಲ ... ಹಾ ವಿಭೂತಿ ಪುರುಷರೆಂದು ಕೀರ್ತಿ ಪಡೆಯುತ್ತಿರಲೂ ಇಲ್ಲ ಭಾಗ್ಯವನ್ನು ನಂಬಿಕೊಂಡು ... ಮುಂದೆ ... ಸೇರದೆ ಅವರ ಸತತ ಪ್ರಯತ್ನಗಳನ್ನು ಮಾಡಿದ ದರಿಂದ ಈಗ ಅವರು ಕೀರ್ತಿ ಸಾಮ್ರಾಜ್ಯ ಸ್ಥಿತಿಯ ... ದ ಉಚ್ಚ ಶಿಖರದ ಪದವಿಗೆ ಏರಿ ಅಲ್ಲಿ ವಿರಾಜಮಾನರಾಗಿದ್ದಾರೆ

ರಾಜಕಾರಣದಲ್ಲಿ ಮಾತ್ರ ಸಾಹಸ ಇಚ್ಛಾಶಕ್ತಿ ಆತ್ಮವಿಶ್ವಾಸ, ಸತತ ಪ್ರಯತ್ನಗಳ ಮೂಲಕ ಜನರು ಸಫಲರಾಗಿದ್ದಾರೆ ದಲ ಪ್ರತಿಯೊಂದು ಕಾಲದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಹೀಗೆ ಜೀವನ ಸಫಲತೆಯನ್ನು ಪಡೆದವರ

ಅನೇಕಾನೇಕ ಮನೋರಂಜಕ ಕತೆಗಳನ್ನು ನಾವು ಇತಿಹಾಸದಿಂದ ಓದಬಹುದು, ಅವರ ಹೆಸರುಗಳನ್ನಷ್ಟೆ ಕೊಡುತ್ತ ಹೋದರೆ ಕೂಡ, ಈ ಲೇಖನವು ಹತ್ತಾರು ಪುಟಗಳಷ್ಟು ದೊಡ್ಡದಾಗಿ ಬೆಳೆಯಬಹುದು ಇವೆಲ್ಲವುಗಳನ್ನು ವಾಚಕರು ಸ್ವಪ್ರಯಾಸದಿಂದ ಓದಿ ತಿಳಕೊಂಡು ಅಂಥವರ ಜೀವನ ಸಫಲತೆಯ ರಹಸ್ಯವನ್ನು ತಿಳಕೊಂಡುದಾದರೆ ಅತ್ಯಂತ ಸಾಧಾರಣ ಪರಿಸ್ಥಿತಿಯಲ್ಲಿ ಪೋಷಿತರಾದವರು ಕೂಡ, ಈ ಪ್ರಪಂಚದಲ್ಲಿ ಉಚ್ಚತಮ ಸ್ಥಾನವನ್ನು ಸಂಪಾದಿಸಿರುವದಕ್ಕೆ, ಅವರು ಭಾಗ್ಯಾಧೀನರಾಗಿ ಇದ್ದುದು ಕಾರಣವಲ್ಲ, ಪರಂತು ಸ್ವಯಂ ಭಾಗ್ಯ ನಿರ್ಮಾತರಾಗಿ ಇದ್ದುದೇ ಕಾರಣವಾಗಿತ್ತೆಂಬುದು ಸ್ಪಷ್ಟವಾಗುವದು

ಪ್ರತಿಭಾ ಸಂಪನ್ನರಾದವರು ಅನುಕೂಲ ಸಂದರ್ಭ ದೊರೆತಾಗ ಅದರ ಸದುಪಯೋಗ ಮಾಡಿಕೊಂಡು ಉನ್ನತಿಯ ಸರ್ವೋಚ್ಚ ಶಿಖರವನ್ನು ಏರಿದ ನಂತೆ ಅವರು ಅಂಥ ಸಂದರ್ಭಗಳ ದುರುಪಯೋಗ ಮಾಡಿಕೊಂಡು ಅವನತಿಯ ನೀಚಾತಿ ನೀಚ ಗರ್ತೆಯಲ್ಲಿ ಬಿದ್ದು ಇದ್ದಾರೆ ಜರ್ಮನಿಯ ವಿಲಿಯಂ ಕೈಸರ, ಮೊಗಲ್ ಬಾದಶಾಹ ಅವರಂಗಜೇಬ್ ಮೊದಲಾದವರು ಹೀಗೆ ಪತಿತರಾದವರಾಗಿದ್ದಾರೆ ಆದಕಾರಣ ಭಾಗ್ಯವನ್ನು ನಂಬಿಕೊಂಡು ಅದಕ್ಕೆ ಅಧೀನರಾಗಿ ಇರುವದ ನಮ್ಮ ಕರ್ತವ್ಯವೂ ಧರ್ಮವೂ ಆಗಿರುವದಿಲ್ಲ ಪರಂತು ಸಾಹಸ ಇಚ್ಛಾಶಕ್ತಿ, ಆತ್ಮವಿಶ್ವಾಸ, ಸತತ ಪ್ರಯತ್ನಗಳ ಮೂಲಕ ಭಾಗ್ಯ ನಿರ್ಮಾತರಾಗುವದ ನಮ್ಮೆಲ್ಲರ ಕರ್ತವ್ಯ ಧರ್ಮವಾಗಿರುತ್ತದೆ ಭಾಗ್ಯ ನಿರ್ಮಾತರಾಗುವ ಶಕ್ತಿಯು ಕೆಲವು ಜನರಲ್ಲಿ ಮಾತ್ರ ಇರುವದಲ್ಲ, ಅದು ಎಲ್ಲರಲ್ಲಿ ಬೀಜರೂಪದಲ್ಲಿ ಇರುತ್ತದೆ ಅದರ ವಿಕಾಸ ಮಾಡುವದು ಎಲ್ಲರಿಗೆ ಸಾಧ್ಯವಿದೆ ಪರಂತು ಜೀವನ ಸಫಲತೆಯನ್ನು ಸಾಧಿಸುವ ಕ್ಷಮತೆಯನ್ನು ಪಡೆದ ಬಳಿಕ ಪತಿತರಾಗದಂತೆ ನಾವು ಬಹು ಎಚ್ಚರಿಕೆಯಿಂದ ಇರಬೇಕು ಎಂಬುದನ್ನು ಮಾತ್ರ ಎಂದೆಂದಿಗೂ ಮರೆಯತಕ್ಕದ್ದಲ್ಲ

ಎಸ್ ಎಸ್ ಎಲ್ ಸೀ

(ಕಿಸೇ ಪುಟದಿಂದ ಮುಂದುವರಿಸಿದ ದು)

ಮಾವನ ಪೂರ್ಣ ... ಆದರೆ ಪಾಸ ಫೈಲಿಗೆ ಒಳಗಾಗದೆ, ಇನ್ನು ಶಿಕ್ಷಣಕ್ಕೆ ದಲ್ಲ ಆಸಕ್ತಿ ಪಡೆವರೆ ಹೇಗೆ ಯೋಗ್ಯತೆ ನಿರ್ಧಾರವಾಗಬಹುದೆ? ಅದರ ಹೆಸರು ಪರೀಕ್ಷೆ ಅದರಲ್ಲಿ ಫೈಲಾದರೆ ಫೈಲಿಗೆ ನೊಂದುಕೊಳ್ಳುವವರಿಲ್ಲ ಇದರಲ್ಲಿ ಪಾಸಾದರೆ ಯೋಗ್ಯತೆ ತಿಳಿಯುದು

ಪರೀಕ್ಷಕರನ್ನು ಅವರು ಪರೀಕ್ಷೆಮಾಡಲು ಯೋಗ್ಯರೋ ಅಲ್ಲವೊ ಎಂದ ನಿರ್ಧರಿಸುವರೆ ಸರಕಾರವು ಅಥವಾ ವಿದ್ಯಾರ್ಥಿಗಳ ಹಿರಿಯರಲ್ಲಿ ಜಾಣರು ಒಂದು ಪರೀಕ್ಷೆಯನ್ನು ಏರ್ಪಡಿಸುವ ಅಗತ್ಯಕಾಲವು ಉಂಟಾಗುವುದ ಪರೀಕ್ಷಕರ ಪರೀಕ್ಷೆಯೊಂದಾಗುವ ಏರ್ಪಾಡಾಗುವವರೆಗೆ ಅವರ ಕಿರಿಯ ವಿದ್ಯಾರ್ಥಿಯರನ್ನು ಪರೀಕ್ಷಿಸುವ ಏರ್ಪಾಡಿರುವುದು ಸಮಾಧಾನಕರವಾಗಿಲ

ಭಾಗ್ಯವೆಂಬ ಒಂದು ವಸ್ತುವು ಈ ಜಗತ್ತಿನಲ್ಲಿ ಉಂಟೆಂದು ಹೇಳುವದಾದರೆ ಅಂಥ ಭಾಗ್ಯವನ್ನು ಉಂಟುಮಾಡುವವರು ನಾವಲ್ಲದೆ, ಅದನ್ನು ಉಂಟುಮಾಡುವ ಬೇರೊಂದು ವಸ್ತು ಅಥವಾ ಶಕ್ತಿ ಇರುವದಿಲ್ಲ. ಸಾಹಸ ಮತ್ತು ಇಚ್ಛಾಶಕ್ತಿ, ಆತ್ಮವಿಶ್ವಾಸ ಮತ್ತು ಸತತ ಪ್ರಯತ್ನಗಳಿದ್ದರೆ ನಮ್ಮ ಭಾಗ್ಯವು ನಮಗೆ ಅನುಕೂಲವಾಗುವದು. ಅದೇ ಈ ಗುಣಗಳ ವಿಕಾಸವನ್ನು ನಾವು ಮಾಡಿರುವದಿಲ್ಲವಾದರೆ ಭಾಗ್ಯವು ನಮಗೆ ಪ್ರತಿಕೂಲವಾಗುವದೂ ಆದ್ದರಿಂದ ಭಾಗ್ಯವು ನಮಗೆ ಅಧೀನವಾಗಿರಬೇಕಾಗಿದೆಯಲ್ಲದೆ ನಾವು ಭಾಗ್ಯಾಧೀನರಾಗಿ ಇರತಕ್ಕದ್ದಲ್ಲ

MIRA TOILET ARTICLES

Toilet Soaps, Hair Oils Brilliantine Cream Snow Powders
Milk of Rose Lime Juce Glycerine Shaving Stick,
Tooth Paste Cologne etc etc
and

Perfumes are the things to Augment your
beauty, they make
EVERY HOME A BEAUTY PARLOUR.

Wanted Stockists throughout S Kanara & Malbar on
decent terms

Sole Agents
The Modern Trading Company,
Opp City Press, MANGALORE
Wanted a Canvasser to Book orders for Mira Products on
pay or commission

ಮುಸೋಲಿನಿ

ಯುದ್ಧಾತುರನೇ? ಶಾಂತಿಪ್ರಿಯನೇ?

ಮುಂದಿನ ಮಹಾ ಯುದ್ಧದಲ್ಲಿ ಇಟಲಿಯ ಸ್ಥಾನ.

ಇಟಲಿಗೂ ನನಗೂ ಶಾಂತಿಯೇ ಬೇಕಾಗಿದೆ, ಯುದ್ಧವಲ್ಲ – ಎಂದು ಮುಸಲೋನಿಯು ಪುನಃ ಪುನಃ ಹೇಳುತ್ತಿರುವನು ಇದೇಕೆ? ಅಬಿಸೀನಿಯವನ್ನು ಗೆದ್ದು, ಸ್ಪೈಯಿನಿನ ದಂಗೆಗಾರರಿಗೆ ಸಹಾಯಮಾಡುತ್ತ, ಕ್ಷಣಾರ್ಧದಲ್ಲಿ ಯುದ್ಧಕ್ಕಾಗಿ ಸಿದ್ಧನಾಗುವಾತನು ತನಗೆ ಶಾಂತಿಬೇಕೆನ್ನುವುದೇಕೆ? ಇದು ಸುಳ್ಳೇ, ವಾಸ್ತವಿಕವೆ?

ಈತನು ಯುದ್ಧಾತುರನಾದಲ್ಲಿ, ಮೆಡ್ರಿಡ ನಿಂದ ಅಡ್ಡಿಸ್‌ಅಬಾಬದ ತನಕ ಇವನ ಸೇನೆಗಳು ಯುದ್ಧದಲ್ಲಿ ನಿರತರಾಗಬೇಕಾಗುವುದು ಇದು ೫೦೦೦ ಮೈಲು ದೂರಕ್ಕೆ ಸೇರುವುದು ಮಹಾಯುದ್ಧದಲ್ಲಿ ಆಸಕ್ತನಾಗುವವನು ಇಷ್ಟು ದೂರದ ರಣರಂಗಗಳನ್ನು ನಿರ್ವಹಿಸಲಾರನು ಇಷ್ಟು ಸೈನ್ಯಕ್ಕೆ ಸರಂಜಾಮು ಒದಗಿಸುವರೆ ಬೇಕಾಗಿರುವ ನಾವೆಗಳೂ ಇವನಲ್ಲಿದ್ದಾವೆಯೆ?

ಇಟಲಿಯು ನಾಲ್ಕು ಮಹಾನಾವೆಗಳು (ಇನ್ನೆರಡು ಸಿದ್ಧವಾಗುತ್ತವೆ)ಳ್ಳದಾಗಿದೆ ಫ್ರೆಂಚರು ಏಳು ಮಹಾನಾವೆಗಳುಳ್ಳವರು, ಇವರೀಗ ಇನ್ನೆರಡನ್ನು ಕಟ್ಟಿಸುತ್ತಾರೆ ಬ್ರಿಟಿಷರ ಮಹಾನಾವೆಗಳ ಸಂಖ್ಯೆ ೧೫, ಇನ್ನು ಐದು ಈಗ ಸಿದ್ಧವಾಗುತ್ತಲಿವೆ ಭಾರವಾದ ಫಿರಂಗಿಗಳುಳ್ಳ ನಾವೆಗಳ ಇಟಲಿಯಲ್ಲಿ 7, ಫ್ರಾನ್ಸನಲ್ಲಿ 7, ಇಂಗ್ಲೆಂಡಿನಲ್ಲಿ 16 ಇವೆ ವೇಗವಾಗಿ ಚಲಿಸುವ ಚಿಕ್ಕ ಯುದ್ಧನಾವೆಗಳು ಇವರಲ್ಲಿ 1೪, 37, 40 (ಕ್ರಮವಾಗಿ) ಇವೆ ಫ್ರೆಂಚರೂ ಇಟಲಿಯನರೂ ಸಮಾನ ಸಂಖ್ಯೆಯ ಡಿಸ್ಟ್ರೊಯರ್ (ನಾವೆಗಳನ್ನು ಕಾದಾಡುವ) ನಾವೆಗಳುಳ್ಳವರಾಗಿದ್ದಾರೆ ಬ್ರಿಟಿಷರಲ್ಲಿ ಇಂತಹ ನಾವೆಗಳು 200 ಇವೆ ಸಬ್‌ಮೆರೀನು (ಜಲಾಂತರ್ಗಾಮಿ) ನಾವೆಗಳು ಫ್ರೆಂಚರಲ್ಲಿ ಇಟಲಿಯಲ್ಲಿರುವುದಕ್ಕಿಂತ 100 ಹೆಚ್ಚಾಗಿವೆ, ಬ್ರಿಟಿಷರ ಈ ನಾವೆಗಳ ಸಂಖ್ಯೆ ಇಟಲಿಯ ನರಳ್ಳಾಗಿನ ಇವುಗಳ ಸಂಖ್ಯೆಗಿಂತ ಕಡಿಮೆ.

ಇಟಲಿಯೂ ಮಿತ್ರರಾಷ್ಟ್ರವೂ ಸೇರಿ, ಬ್ರಿಟನ್ನು ಮತ್ತು ಅದರ ಮಿತ್ರರಾಷ್ಟ್ರ (ಫ್ರಾನ್ಸ) ದೊಡನೆ ಯುದ್ಧಕ್ಕೆ ತೊಡಗಿದರೆ, ಫ್ರಾನ್ಸಿನ ಕರಾವಳಿಯಲ್ಲೆಲ್ಲ ಬ್ರಿಟಿಷ ಹಡಗುಗಳು ನಿಲ್ಲುವವು ಫ್ರೆಂಚರ ಯೂರೋಪಿನ ಮತ್ತು ಆಫ್ರಿಕದ ಕರಾವಳಿಯಲ್ಲಿ ಬ್ರಿಟಿಷ ನಾವೆಗಳು ತಂಗುವವು ಜಿಬ್ರಾಲ್ಟರ್, ಮಾಲ್ಟಾ, ಸುಯೇಜ್, ಸಾಯ್ಪ್ರಸ್ ದ್ವೀಪ—ಇದೊಂದು ಕೋಟೆಗಳ ಸಾಲಾಗುವುದು, ಮುಸೋಲಿನಿಯು ಇದನ್ನು ತಿಳಿದೇ ಸ್ಪೈನಿನ ಬಳಿಯ ಕೆಲ ದ್ವೀಪಗಳಲ್ಲಿ (ಮಜೋರ್ಕಾ) ತನ್ನ ಯುದ್ಧರಂಗಕ್ಕೆ ಶಿಬಿರವನ್ನು ಸ್ಥಾಪಿಸಬಹುದಾದರೂ, ಇವುಗಳಿಂದ ಶತ್ರುಗಳಿಗೆ ಕೈದಿಗಳನ್ನು ಒದಗಿಸಿಕೊಡುವುದೊಂದೇ ಪುಣ್ಯವಾದೀತು

ಯುದ್ಧದ ಸರಂಜಾಮುವಿದೆಯೇ?

ಇಟಲಿಯು ಅಷ್ಟು ಸಂಪನ್ನವಾಗಿಲ್ಲ ಫೆಸಿಸ್ಟ್ ಸರಕಾರವೇ ಆದರೂ, ದೇಶದ ದಾರಿದ್ರ್ಯವನ್ನು ಇನ್ನೂ ದೂರವಿಡಲಾರದಾಗಿದೆ. ಉತ್ತರ ಭಾಗದಲ್ಲಲ್ಲದೆ, ಜಮೀನು ಫಲವತ್ತಲ್ಲ. ಹೀಗಾಗಿ ತನಗೆ ಬೇಕಾಗುವ ಹತ್ತಿ, ತಾಮ್ರ ಎಣ್ಣೆಯಲ್ಲಿ ನೂರಕ್ಕೆ 90ನ್ನು ಪರದೇಶಗಳಿಂದ ಆಮದುಮಾಡಿಕೊಳ್ಳಬೇಕಾಗಿದೆ ಇದ್ದಿಲಲ್ಲಿ ಸೇಕಡಾ 95 ರಷ್ಟು, ಎಣ್ಣೆಯಲ್ಲಿ ಸೇಕಡಾ 80ರಷ್ಟು ಸಹಾ ಪರರಾಷ್ಟ್ರಗಳಿಂದಲೇ ತರಿಸಿಕೊಳ್ಳಬೇಕಾಗಿದೆ. ಇಟಲಿಯ ವಸಾಹತುಗಳು ಲಿಬಿಯಾ, ಇರಿಟ್ರಿಯಾ, ಸೋಮಾಲೀಲೆಂಡ್‌ಗಳ ಜನಸಂಖ್ಯೆ 28 ಲಕ್ಷ, ಇವರಿಂದ ಇಟಲಿಗೆ ಯಾವ ಅಂತಹ ಉಪಕಾರವೇನೂ ಇಲ್ಲ' ಭೂಪಟದಲ್ಲಿ ದೊಡ್ಡ ವಿಸ್ತೀರ್ಣವಾಗಿ ಮಾತ್ರ ಇವೆಯಲ್ಲದೆ, ಇವುಗಳಲ್ಲಿ ಹೋಯಿಗೆ ಮತ್ತು ಕಲ್ಲುಗಳು ಗಿಡಗಳು ತುಂಬಿ ಇವೆ, ಅಷ್ಟೆ.

ಪೊಲೇಂಡ್, ಸ್ಪೈಯಿನ್‌ಗಳಲ್ಲಿರುವ ಜನರಿಗಿಂತ ಇಟಲಿಯಾನರ ಜೀವನವು ಕಡಿಮೆ ಸುಖಮಯವಾಗಿದೆ ಕೂಲಿಗಳ ದುಡಿತವು ಸಹ ಇತರ ರಾಜ್ಯಗಳಲ್ಲಿನ ಸೇಕಡಾ ೧೦ರಷ್ಟು ಕಡಿಮೆ ದಕ್ಷಿಣ ಇಟಲಿ ಮತ್ತು ಸಾರ್ಡೀನಿಯದಲ್ಲಿನವರು ವರ್ಷದಲ್ಲಿ ಕೆಲವು ತಿಂಗಳು ಗಡ್ಡೆ ಗೆಣಸುಗಳನ್ನು ತಿಂದೇ ಜೀವಿಸಬೇಕಾಗಿದೆ ಎಂದು ಮುಸ್ಸೋಲಿನಿಯೇ ಹೇಳಿರುವನು.

ಇಟಲಿಯಲ್ಲಿ ಈಗಲೂ ಹತ್ತು ಲಕ್ಷ ನಿರುದ್ಯೋಗಿಗಳಿರುವರು ಸುಮಾರು ಇದರ ದುಬಾರಿ ಜನರಿಗೆ ಸರಕಾರವು ರೊಟ್ಟಿಯನ್ನು ಒದಗಿಸಬೇಕಾಗಿದೆ ರೊಟ್ಟಿ ಮತ್ತು ಆಶ್ರಯ ಸಿಗುವ 2828924 ಜನರನ್ನು ಸರಕಾರವೇ ಸಾಕುತ್ತಿರಬೇಕಾಗಿದೆ

ಇಂಗ್ಲೆಂಡಿನಲ್ಲಿ ಕೈಗಾರಿಕೆ ಕಾರ್ಖಾನೆಗಳಲ್ಲಿ ದುಡಿಯುವವರ ಸಂಖ್ಯೆ 12 ಮಿಲ್ಲಿಯ, ಇವರಲ್ಲಿ ಎರಡು ಮಿಲ್ಲಿಯ ಮಾತ್ರ ನಿರುದ್ಯೋಗಿಗಳು ಇಟಲಿಯಲ್ಲಿ ಕಾರ್ಖಾನೆಗಳಲ್ಲಿ ಗೇಯುವವರು 3½ ಮಿಲ್ಲಿಯ ಇವರೊಳಗೆ ಹತ್ತು ಲಕ್ಷ ಜನರಿಗೆ ಪ್ರತಿನಿತ್ಯವೂ ಇದ್ದಿದು ರೂಪಾಯಿ ಸಹಾಯವನ್ನು ಅವರು ನಿರುದ್ಯೋಗಿಗಳಾಗಿರುವ ಕಾರಣ, ಸರಕಾರವೇ ತೆರುತ್ತದೆ

ಇಟಲಿಯ ಸರಕಾರದ ಬಜೆಟಿನಲ್ಲಿ 270 ಮಿಲಿಯ ಪವನಿನಷ್ಟು ನಷ್ಟವೇ ಕಾಣಿಸಿದೆ ಸರಕಾರದ ಖರ್ಚಿನ ಎಷ್ಟೋ ಪಾಲನ್ನು ಮಿಲ್ಟರಿ ಸಿಪಾಯಿಗಳ ವೇತನ ಹೊರಿಸಲಾಗಿದೆ ಈಗ ಒಳಸಾಲವು ಒಂದು ಸಾವಿರ ಮಿಲ್ಲಿಯ ಪವನಾಗಿದೆ ಒನರಿಗೆ ಕೇಳಸಲ್ಲದೆ ಅವರ ದಂಗೆಗಳನ್ನು ತಡೆಯಲು ಮುಸ್ಸೋಲಿನಿಯು ಸೇರುವ ರಸ್ತೆ, ಕಾಲುವೆಗಳಿಗೆಂದು 500 ಮಿಲಿಯ ಪವನು ವ್ಯಯಿಸಿರುವನು, ಇದರಿಂದ ಕೆಲಸ 'ಉತ್ಪನ್ನವಾಗಿಲ್ಲ ಪಿಜಾನೆಯಲ್ಲಿ ಕೂಡಿಸಿಟ್ಟ ಹತ್ತು ವರ್ಷದ ಕೂಡಿಕೆಯ ಚಿನ್ನವು ಬರಿದಾಗುತ್ತಾ ಬಂದಿದೆ ಅಬಿಸೀನಿಯವನ್ನು ನುಗ್ಗುವಾಗ ಅದರಲ್ಲಿ 80 ಮಿಲ್ಲಿಯ ಪವನು ಇತ್ತು ಈಗ ಅದರ ಸುದ್ದಿಯೇ ಇಲ್ಲವಾಗಿದೆ ಬೇರೆ ಗಳಿಂದ ಸರಕಾರಕ್ಕೆ 450 ಮಿಲ್ಲಿಯ ಲೀರೆ ಯಷ್ಟು ಮುಂಗಡ ಕೊಡಬೇಕೆಂದು ಕಾನೂನು ಇತ್ತು, ಈಗ 1000 ಮಿಲ್ಲಿಯ 'ಲೀರೆ'ಯಷ್ಟು ಸಾಲಕೊಡಬೇಕೆಂದಾಗಿದೆ ಈಗ ಇಂಗ್ಲೆಂಡಿನಿಂದಲೂ ಸಾಲಎತ್ತುವುದಕ್ಕಾಗಿ (80 ಮಿಲ್ಲಿಯ ಪವನು) ಸಂಭಾಷಣೆಗಳು ಸಾಗುತ್ತವೆ

ಅಬಿಸೀನಿಯದ 'ವಿಜಯ'ಕ್ಕಾಗಿ ಸುಮಾರು 150 ಮಿಲ್ಲಿಯ ಪವನು ಖರ್ಚಾಗಿದೆ ದೇಶದ ವ್ಯಾಪಾರವು ವಾರ್ಷಿಕ 2 ಮಿಲ್ಲಿಯ ಪವನು ಆಯದ್ದು, ಜನರ ಸರಾಸರಿ ಆಯವು ಇಂಗ್ಲಿಷರ ಸರಾಸರಿಯ ತೃತೀಯಾಂಶ ಇಟಲಿಯು ವ್ಯಾಪಾರಕ್ಕಾಗಿ ತೆರಬೇಕಾಗಿರುವ ಸಾಲವು 50 ಮಿಲ್ಲಿಯಕ್ಕೆ ಮಿಗಿದೆ ಹೀಗಿರುವಾಗ ಯುದ್ಧ ಮಾಡಲು ಆಸಕ್ತಿ ಇದ್ದೀತೆ?

ಇಟಲಿ-ಜರ್ಮನಿಗಳ ಸಹಯೋಗ ರೋಮ್-ಬರ್ಲಿನ್ ಮೈತ್ರಿ.

ಅದೆಕ್ಕಾಗಿಯೇ, ಜರ್ಮನಿಯೊಡನೆ ಸ್ನೇಹ ಸಾರದ ಬಲದಿಂದ ಪರರಾಷ್ಟ್ರಗಳಲ್ಲಿ ಬೆದರಿಕೆ ಗೌರವಗಳನ್ನು ಉಂಟುಮಾಡುವ ಯತ್ನಗಳಾಗಿವೆ ಯುದ್ಧ ಮಾಡುತ್ತೇನೆಂದು ಹೇಳುವ ಮಾತು ಮುಂದರಿವುದಲ್ಲದೆ, ಯುದ್ಧವಾಗುವ ಕೈಮುಂದರಿವ ಹಾಗಿಲ್ಲ. ಹಿಟ್ಲರನ ಸಲುವಾಗಿ ಜರ್ಮನಿಯ ವಸಾಹತುಗಳನ್ನು ಹಿಂದೆ ಕೊಡಿರಿ ಎಂಬ ಪಕಾಲತ್ತನ್ನು ಮುಸ್ಸೋಲಿನಿಯು ವಹಿಸಿ, ತಾನು ಅಷ್ಟು ಹಿಟ್ಲರ ಮಿತ್ರನೆಂದು ತೋರಿಸಿಕೊಂಡು, ಇತರರಲ್ಲಿ ಭಯವನ್ನು ಉಂಟುಮಾಡಿರುವನು ಆದರೆ, ಮುಸ್ಸೋಲಿನಿಯ ವಿಜಯಯಾತ್ರೆಯು ಮೆರವಣಿಗೆಯು ಸಲುವಾಗಿ ಹಿಟ್ಲರನು ಎಂದೂ ಯುದ್ಧಮಾಡಿಕೆಯನೇ ಅಲ್ಲ ಯುದ್ಧ ಮಾಡೋಣವೆಂದರೂ ಜರ್ಮನರಲ್ಲಿ ಯುದ್ಧನಾವೆಗಳಿಲ್ಲ ಇಟಲಿಯ ಜತೆಗೆ ಸೇರಿದಲ್ಲಿ ಜರ್ಮನರು ಉತ್ತರ ಯುರೋಪಿನಲ್ಲಿ ಎಷ್ಟು ರಗಳೆಗಾಗಬಹುದು. ಆದರೆ, ಅದೇ ಕಾಲಕ್ಕೆ ಇಟಲಿಯು ಗಂಡಾಂತರಗಳಿಗೆ ಬಲಿ ಬೀಳುವಂತಾಗುವುದೂ ಖಾತ್ರಿತವೇ ಅದೂ ಅಲ್ಲದೆ ಇಟಲಿಯು ಮುಂದು ಕುಸಿದರೆ, ಪೂರ್ವ ಯುರೋಪಿನಲ್ಲಿ ಸೀಡಿಕೊಳ್ಳಬೇಕೆನ್ನುವ ಜರ್ಮನಿಗೂ ಸ್ವಲ್ಪ ಅವಕಾಶ ಸಿಗುವುದಿಲ್ಲವೆ? ಹೀಗಾಗಿ, ಜರ್ಮನಿರೇ ಮುತ್ತಿಗೆ ಯುದ್ಧವನ್ನು ಪ್ರಾರಂಭಿಸಿದರೂ, ಅದು ಇಟಲಿಗೆ ಎಂದೂ ಅನುಕೂಲವಾಗಿದೆ, ಪ್ರತಿಕೂಲವಾಗಿಯೇ ಪರಿಣಮಿಸುವುದು

ಆಸ್ಟ್ರಿಯವನ್ನು ಜರ್ಮನಿಯು ಸೇರಿಸಿಕೊಂಡಿರುವುದಕ್ಕೆ ನಾಂತಿಕವಾದ ರಾಷ್ಟ್ರೀಯವೂ ಸಂಸ್ಕೃತಿ ಪರಂಪರೆಗಳೂ ಕಾರಣ, ಅಂತೆಯೇ ಜರ್ಮನಿಯು ಟಿರೋಲ್ ಪ್ರಾಂತ್ಯಕ್ಕೂ ನುಗ್ಗುವ ಆಸೆಯುಳ್ಳ ಇರಬಹುದು ಈ ಪ್ರಾಂತ್ಯವು ಮಹಾಯುದ್ಧ ನಂತರದಲ್ಲಿ ಇಟಲಿಗೆ ಸೇರಿದೆ ಅಲ್ಲಿಯೂ ಜನಸಂಖ್ಯಾಕರಿಂದಲೇ ಜರ್ಮನರೇ, ಆಸ್ಟ್ರಿಯಕ್ಕೆ ಪುನಃ ಭಯೋಮ್ ಎಂದರನ್ನು ಇಟಲಿಯು ಕೊಡಬೇಕೆಂದೂ ಜರ್ಮನ ಹೇಳಬಹುದು

ಇಟಲಿಯ ಯುದ್ಧರಂಗಕ್ಕಿಳಿದರೆ, 18ನೆ ಶತಮಾನದಲ್ಲಿ ಪೊಲೆಂಡಿಗೆ ಉಂಟಾದ ಗತಿಯೇ ಚಿಕ್ಕ ಯುರೋಪೀಯ ರಾಷ್ಟ್ರಗಳ ಪಾಲಾಗುವುದೇ—ಇಟಲಿಗೆ ಉಂಟಾದೀತು ಈ ಅಪಾಯತಕ್ಕೆ ಮುಸ್ಸೋಲಿನಿ ಕಾರಣನಾಗಲಾರನು ಅದಕ್ಕಾಗಿಯೇ,—ಇಟಲಿಗೂ ನನಗೂ ಶಾಂತಿಯೇ ಬೇಕಾಗಿದೆ, ಯುದ್ಧವಲ್ಲ ಎಂದು ಅವನು ಹೇಳುತ್ತಿರುವುದು.

ಬರೆ ಅರ್ಧಾಣೆಗೆ—ಅತಿ ಆರೋಗ್ಯಕರ ಊಟ.

ಜಪಾನಿನ ಆಹಾರ ಖಾತೆಯ ಡೈರೆಕ್ಟರರಾದ ಪ್ರೊಫೆಸರ್ ಸೈಯುಕಿಯವರು ಜೀವನ ಖರ್ಚನ್ನು ಬಹಳವಾಗಿ ಇಳಿಸುವ ಉದ್ದೇಶದಿಂದ, ಅತಿ ಸುಲಭ ಬೆಲೆ—ಆದರೆ ಅತ್ಯಂತ ಆರೋಗ್ಯಕರವಾದ ಆಹಾರವನ್ನು ಕಂಡು ಹಿಡಿಯುವರೆ ಅವರು ಪರೀಕ್ಷೆಯನ್ನು ಕಾರ್ಯವನ್ನು ಪ್ರಾರಂಭ ಮಾಡಿರುವರು.

ಈಗಾಗಲೆ ಬರೆ ಅರ್ಧಾಣೆಗೆ ಆರೋಗ್ಯಕರವಾದ ಊಟವನ್ನು ಅವರು ಕಂಡು ಹಿಡಿದಿರುವರೆಂದು ತಿಳಿದು ಬರುತ್ತದೆ

MANGALORE

ಹಿಂದುಸ್ಥಾನ ಕೋ-ಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು ಕಲ್ಕತ್ತಾ	ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ	ಸ್ಥಾಪನೆ 1907
ಚಾಲ್ತಿಯಲ್ಲಿರುವ ವ್ಯವಹಾರ	ರೂ	12,00,00,000
ಆಸ್ತಿಪಾಸ್ತಿಗಳು		2 21,00 000
ನೂತನ ವ್ಯವಹಾರ	ರೂ	2 82 81 000

ಅತ್ಯಧಿಕ ಬೋನಸ್ಸು ಹಂಚಲಾಗಿದೆ

... ಪಾಲಿಸಿಗಳಿಗೆ ರೂ 1000 ವಿಮೆಯ ಮೇಲೆ ... ರೂ 21

... ವಿಮಾ, ಅವಧಿ, ... ಪಾಲಿಸಿಗಳು

For particulars please apply to

T ANANTACHARI, BRANCH MANAGER H C I S LTD POST BOX 223 MADRAS

K K MENON ... CALICUT

ಪರಮಾ

... ಭಯಂಕರ ... ರೋಗಗಳು ... ನಿಮ್ಮ ... ತಪ್ಪದೆ ...

ಗೊನೋರಿಕ್ಸ (ರಿಜಿಸ್ಟರ್ಡ್)

ತೆಗೆದ ... ರೋಗದಿಂದ ಮುಕ್ತ ... ಕಠಿಣ ... ರೋಗಗಳು ... ಉಪಯೋಗಿಸಿ ... ಪ್ರತ್ಯೇಕ ... ಎಲ್ಲ ... ಊರಲ್ಲಿಯೂ ...

ಸೋಲ್ ಏಜಂಟರು - ಸ್ಟಾರ್ ಏಜೆನ್ಸಿ, ... ರೋಡ್

... ಎಂ ಡಿ ... ಮತ್ತು ಕಂಪೆನಿ ...

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,16,58,706
1930	59,97,500	9,83,367	28,00,970	2,06,68,328
1933	94,16,500	15,12,692	50,04,871	3,07,96,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances. Family Safe Guard Policy a special feature.
Application for agencies will be received from honest and respectable gentlemen.
Organisers appointed with pay and allowance.
Gentlemen with organising ability and who can guarantee Business need apply.

Kochikar Brothers, Ltd.,
(Incorporating Messrs Kochikar Brothers),
Madras Branch Secretaries.
Post Box 337, Mount Road, MADRAS
Phone No 8245.

Apply to any of the following Offices:-

Ottapalam	Central Station Road Trivandrum	Visveshwarapuram Circle, Bangalore City.	Soumyalayam Puthiyara, Calicut	Car Street, Mangalore	Udipi, S. India.	Charni Road, Bombay No. 4

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಈಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೀರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇರದೆ, ಗ್ರಹಶಾಂತಿಯೊಂದೇಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ, ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸುಳ್ಳೆಂದು ಹೇಳುವ ಎದೆಗಾರಿಕೆ ಯಾರಿಗೂ ಇಲ್ಲ. ಈ ವಸ್ತುವಿನಿಂದ ಮುಖ್ಯ ಜನರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭ ಉಪಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳಬಯಸಿದರೆ ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಧಾರಣ ಗುಣದ ಒಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆತಿರುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಏನೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲ ವಿಧವಾದ ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ವರ್ಷ್ಯಾ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರಾರು-ಎಂಟೆಂಟು ಅಲ್ಲ, ಹನ್ನೆರಡು-ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಬೇಕಾದರೆ ತಿಕೀಟು ಕಳಿಸಿದ್ದಲ್ಲಿ ನಕಲು ಬರೆದುಕೊಡುವೆವು. ಇಷ್ಟೆಲ್ಲಾ ಇದ್ದೂ ಲಾಭವಾಗದೆ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ಮರಳಿ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸುಮ್ಮನೆ ದುಡ್ಡು ಹಾಳು ಆಗುವದೆಂಬ ಭಾವನೆಯಿಂದ ಈ ಜ್ಯೋತಿರಾತನ್ನು [illegible] ತಿರಸ್ಕರಿಸಿದರೆ ಜನ್ಮ ಜನ್ಮಾಂತರದಲ್ಲಿಯೂ ಪಶ್ಚಾತ್ತಾಪವನ್ನು ಪಡಬೇಕಾಗುವುದು. ಈ ಮಾತನ್ನು ನೆನಪಿನಲ್ಲಿ ಡಿರಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದಲ್ಲಿ, ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ ವೃದ್ಧ—ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷರ ಉಪಯೋಗಕ್ಕಾಗಿ ೩ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಮ್ಮೆಲೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪ್ಪಾಲು ಖರ್ಚು ೮ ಆಣೆ. ಬೆಳ್ಳಿಯ ಯಂತ್ರ ೩ ರೂಪಾಯಿ.



[illegible] ಬೇಕಾಗಿದ್ದರೆ ೩ ರೂಪಾಯಿ ೯ ಆಣೆ ಪ್ರತ್ಯೇಕ [illegible] ಸ್ಪೆಶಲ್ [illegible] ಬೆಲೆ ೧ ರೂ ೧೧ ಆ [illegible] ನಾಲ್ಕಕ್ಕಿಂತ ಹೆಚ್ಚು [illegible] ಬೇಕಾಗಿದ್ದರೆ ಸ್ಪೆಶಲ್ ನಂಬ್ರ [illegible] ಬೆಲೆ ೧ ರೂ ೧೧ ಆ [illegible] ಪ್ರತಿಯೊಂದಕ್ಕೂ ೮ ಆಣೆ [illegible] ಪ್ರತಿಯೊಂದಕ್ಕೂ [illegible] ಬೀಳುವುದು. ಈ ಯಂತ್ರಗಳಿಗೆ ಬೇರೆ ಯಾವ ಸಾಧನಗಳೂ ಬೇಕಾಗಿಲ್ಲ.

ಮೋಹಿನಿಸಿದ್ಧಿ — [illegible] ಧನಪ್ರಾಪ್ತಿಯಾಗಬೇಕೆನ್ನುವವರೂ ಬೇಗನೆ ಧನಪ್ರಾಪ್ತಿಯಾಗಬೇಕೆನ್ನುವವರೂ ಮೋಹಿನಿಸಿದ್ಧಿ ಕವಚವನ್ನು ತರಿಸಬೇಕು. ಇದನ್ನು [illegible] ಹಸ್ತದಲ್ಲಿ ಇಟ್ಟುಕೊಂಡ ಬಳಿಕ ಧನಪ್ರಾಪ್ತಿಯಾಗುವುದಲ್ಲದೆ [illegible] ಪರಿಸ್ಥಿತಿಯು ಸುಧಾರಿಸುವುದು. ಬೆಲೆ ೩ ರೂ. ಬೆಳ್ಳಿಯದು ೩ ರೂ. [illegible] ಪ್ರತಿಯೊಂದಕ್ಕೂ ಟಪ್ಪಾಲು ಖರ್ಚು ೮ ಆಣೆ.

ಹಸ್ತರೇಖೆ — ಹಸ್ತರೇಖೆಯನ್ನು ತೋರಿಸಲಿಚ್ಛಿಸುವ [illegible] ಬೆಳಗಿನ [illegible] ವರೆಗಿನ ನವ [illegible] ಬಿಟ್ಟುಕೊಳ್ಳಬೇಕು. ಹಸ್ತ [illegible] ಬಲಗೈಯು ಹಾಗೂ ಸ್ತ್ರೀಯರು ಎಡಗೈಯ [illegible] ಮೇಲೆ [illegible] ಕಳಿಸಿಕೊಡಬೇಕು. ಹಸ್ತರೇಖೆಯನ್ನು ನೋಡುವ ಚಾರ್ಜು [illegible] ಹಸ್ತದ [illegible] ೩ ರೂ ೧ ಆ [illegible] ಕಳಿಸಿಕೊಡಬೇಕು.

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ ಮಂತ್ರ, ಕವಚ ಎಂದು ಬೇರೆ ಬೇರೆ ಹೆಸರುಗಳನ್ನಿಡುತ್ತಾರೆ, ತಮ್ಮ ಮನಸ್ಸಿಗೆ ತೋಚಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:— ಪಂಜಾಬ್ ಸಿವಿಲ್ ಸೆಕ್ರೆಟರಿ [illegible] ಎ ಆರ್ [illegible] ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದನ್ನು ನನ್ನ ಸೋದರಳಿಗಾಗಿ ತರಿಸಿದ್ದೆ. ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವತ್ತಿರುವ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೩ ರೂ ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ ಪಿ ಯಿಂದ ಬೇಡಿದಲ್ಲಿ ೩ ರೂ ೧೦ ಆಣೆ ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS — BOMBAY MADRAS CALCUTTA

Edited Printed & Published By A. S. Kamath at the Sharada Press. Car Street Mangalore.

ಸ್ವದೇಶಾಭಿಮಾನಿ

[ಸಂಪುಟ ೩೨] ತಾರೀಕು ೮ನೇ ಏಪ್ರಿಲ್ ೧೯೩೮ (8 – 4 – 1938.) [ಸಂಚಿಕೆ ೧೪

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಅನುಕ್ರಮಣಿಕೆ

ಕಲ್ಕತ್ತಾದಲ್ಲಿ ಅ. ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲದ ಚರ್ಚೆ

ಮಹಾತ್ಮಾಜೀಯವರ ಉಜ್ವಲ ಭಾಷಣ

ಒರಿಸ್ಸಾ ಪ್ರಾಂತ್ಯದಲ್ಲಿ ಬಿಕ್ಕಟ್ಟು ಉಂಟಾಗುವುದೆ?

ಸ್ಪೈಯಿನಿನಲ್ಲಿ ದಂಗೆಖೋರರ ದಿಗ್ವಿಜಯ

ರಷ್ಯದ ರಾಯಭಾರಿಗೆ ಜಪಾನಿನ ಆಕ್ಷೇಪ

ಅರಬಸ್ಥಾನದ ಕಲಹಾವಳಿಯಲ್ಲಿ ಯುದ್ಧ ಸನ್ನಾಹ

ಕೊಲಂಬಿಯಾ ಕಂಪೆನಿಯವರ "ಜಂಟ್ಲಮನ್ ಸೈಡ್ ಇನ್" ಎಂಬ ಚಲಚಿತ್ರದಲ್ಲಿ ಮುಖ್ಯ ನಟರಾದ ಜಕ್ವೆಲಿನ್ ವೆಲ್ಸ್ ಮತ್ತು ರೋಬರ್ಟ್ ಸ್ಟೆಜ್.

"OUR EXPERIENCE IS YOUR BENEFIT."

A Successful man often confers with his banker about his business problems and every depositor in our bank has the same facility. Especially in these troublous times we wonder if some of our customers are not missing something by failing to come into the bank occasionally, just to talk things over.

OUR OFFICERS ARE ALWAYS GLAD TO SEE YOU.

RESOURCES OF A CRORE.

ESTD. 1906
CANARA BANK, LIMITED.

ಚಿತ್ರ-ವಿಚಿತ್ರ

★

ಕೃತಕ ರೀತಿಯಲ್ಲಿ ಫಲಾಭಿವೃದ್ಧಿ.

ಚಿಕಾಗೋ ಯುನಿವರ್ಸಿಟಿಯ ಇಬ್ಬರು ವಿಜ್ಞಾನಿಗಳು ಸಹಜವಾದ ಪರಾಗದ ಸಹಾಯವಿಲ್ಲದೆ, ರಸಾಯನಿಕ ಪರಾಗದ ಮುಖಾಂತರ ಅನೇಕ ಮರಗಿಡಗಳಿಗೆ ಹಣ್ಣುಗಳಾಗುವಂತೆಮಾಡಲು ಸಾಧ್ಯವಿದೆ ಎಂದು ಕಂಡುಹಿಡಿದಿರುವರು. ಈ ವಿಜ್ಞಾನಿಗಳು, ಕೆಲವು ಮರಗಳ ಹೂವುಗಳ ಮೇಲೆ ಇಂಡೋಲಿಯೇಟಿಕ್ ಎಸಿಡನ್ನು ಚಿಮುಕಿಸಿದರು. ಹೂವಿನ ಅಂಡಕೋಶಗಳು ಉಬ್ಬಿಕೊಂಡು, ಒಳಗಡೆ ಹಸುರಾದ ಹಣ್ಣುಗಳು ಬೆಳೆದು, ಕಾಲಕ್ರಮದಲ್ಲಿ ಹಣ್ಣಾದುವು. ತೋರಿಕೆಗೆ ಅವು ಸಹಜ ಪರಾಗದಿಂದ ಉಂಟಾಗುವ ಹಣ್ಣುಗಳಂತೆ ಇದ್ದುವು. ಆದರೆ ಅವುಗಳನ್ನು ಒಡೆದು ನೋಡಲಾಗಿ ಒಳಗಡೆ ಬೀಜಗಳು ಮಾತ್ರ ಇರಲಿಲ್ಲ.

★

ಸಾಹುಕಾರ ನಾಯಿ.

ಭೂಲೋಕದಲ್ಲಿ ಇರುವ ನಾಯಿಗಳಲ್ಲಿ ಅತಿ ಭಾಗ್ಯಶಾಲಿ ಮತ್ತು ಸಿರಿವಂತ ನಾಯಿಯೊಂದು ಚಿಕಾಗೋಪನಲ್ಲಿದೆ. ಮಿಸ್ ಮೆಕ್ಕರ್ನೋಟ್ ಎಂಬಾಕೆಯು ತನ್ನ ಸಂಪತ್ತೆಲ್ಲ ತನ್ನ ಪ್ರೀತಿಯ ನಾಯಿಗೆಂದು ಮೀಲು ಬರೆದಿಟ್ಟು ಮೃತಪಟ್ಟಳು. ಈಗ ಆ ನಾಯಿಗೆ ವರ್ಷಾವಧಿ ಆರು ಸಾವಿರ ಪವನುಗಳಷ್ಟು ಉತ್ಪತ್ತಿ ಇದೆ. ಮಿಸ್ ಮೆಕ್ಕರ್ನೋಟಳ ಇಬ್ಬರು ಸಂಬಂಧಿಕರು ಆ ಹಣವನ್ನು ತಮಗೆ ಕೊಡಿಸಬೇಕೆಂದು ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿದರು. ಆದರೆ, ನ್ಯಾಯಾಧೀಶರು ನಾಯಿಯ ಹಕ್ಕನ್ನೇ ಸಮರ್ಥಿಸಿ ತೀರ್ಪು ಕೊಟ್ಟರು.

★

11 ಅಂಗುಲದ ಮೊಟ್ಟೆ

ಮೆಸೆಚುಸೆಟ್ಸಿನ ವಿಲಿಯಮ್ ಮಾರ್‍ಕ್ಷಾಲ್ ಎಂಬವನ ಹೇಂಟೆಯೊಂದು ೧೧ ಅಂಗುಲ ಸುತ್ತಳತೆ ಇರುವ ಒಂದು ಮೊಟ್ಟೆಯನ್ನಿಟ್ಟು ಮರುದಿನ ಪ್ರಾಣಬಿಟ್ಟಿತು.

★

ಲಿಂಬೆಹಣ್ಣುಗಳಿಂದ ವಿದ್ಯುಚ್ಛಕ್ತಿ.

ಫಿಲಡೆಲ್ಫಿಯಾದ ಫ್ರೆಂಕಲೀನ್ ಇನ್ಸ್ಟಿಟ್ಯೂಟಿನ ವಿಜ್ಞಾನಶಾಖೆಯ ಕ್ಯುರೇಟರರಾದ ಡಾ। ಡಬ್ಲ್ಯು. ಸಾಮ್ಯುಲ್ ವೆಸ್ಟ್ ಎಂಬವರು ಲಿಂಬೆಹಣ್ಣಿನಲ್ಲಿ ವಿದ್ಯುಚ್ಛಕ್ತಿಯನ್ನು ಹುಟ್ಟಿಸಲು ಪ್ರಯತ್ನಿಸಿ ಕೃತಕೃತ್ಯರಾಗಿರುವರು. ಸಾಧಾರಣ ೬೦೦ ಲಿಂಬೆ ಹಣ್ಣುಗಳ ಸಹಾಯದಿಂದ ೩॥ ವೋಲ್ಟ್ ಫ್ಲೇಶ್ ಲೈಟ್ ಬಲ್ಬನ್ನು ಉರಿಸಲು ಸಾಧ್ಯವಿದೆಯಂತೆ.

★

ಆಹಾರಕ್ಕಾಗಿ ಪ್ರಾಣಾಪಹಾರ!

"ನನಗೆ ಪ್ರಿಯಕರವಾದ ವಸ್ತುಗಳನ್ನು ಊಟಕ್ಕೆ ಕೊಡುವ ಬದಲಾಗಿ, ನನಗೆ ಬೇಡವಾದುವುಗಳನ್ನು ಕೊಟ್ಟುದರಿಂದ ನಾನು ಹುಚ್ಚನಂತಾದೆನು". ತನ್ನ ಹದಿನೇಳು ವರ್ಷ ವಯಸ್ಸಿನ ಮಗಳನ್ನೂ, ೨೧ ವರ್ಷ ಪ್ರಾಯದ ಹುಡುಗನನ್ನೂ ಕೊಲೆಮಾಡಿದ ಅಪವಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟ ಓರ್ವ ಮನುಷ್ಯನು ಚಿಕಾಗೋ ಕೋರ್ಟಿನಲ್ಲಿ ತನ್ನ ಅಮಾನುಷ ನಡತೆಯ ಕುರಿತು ಕೊಟ್ಟ ಕಾರಣವಿದು. ಏನೋ ಪುಣ್ಯ! ಹೆಂಡತಿಯು ಅವನ ಕೈಯಿಂದ ಪಾರಾಗಿ ಉಳಿದಳು!

★

ಒಂದು ಶ್ವಾಸದಲ್ಲಿ ಎಷ್ಟು ಅಣುಗಳು?

ವಾತಾವರಣದಲ್ಲಿ ಕಣ್ಣಿಗೆ ಕಾಣದಂಥ, ಅಂದರೆ ಬಹು ಶಕ್ತಿಯುಳ್ಳ ಭೂತಕನ್ನಡಿಯಿಂದ ಕೂಡ ನೋಡಿ ಗುರುತಿಸಲಿಕ್ಕಾಗದಂಥ ಎಷ್ಟೊ ಜಾತಿಯ ಅತಿ ಸೂಕ್ಷ್ಮವಾದ ಜೀವಾಣುಗಳು ತೇಲಿಕೊಂಡಿರುತ್ತವೆ. ಒಮ್ಮೆಗೆ ಮೂಗಿನ ಮೂಲಕ ಶ್ವಾಸವನ್ನು ತೆಗೆದುಕೊಂಡು ಹೊರಬಿಡುವಷ್ಟು ಗಾಳಿಯಲ್ಲಿ ೪೦,೦೦೦,೦೦೦,೦೦೦ ೦೦೦,೦೦೦,೦೦೦,೦೦೦ ಜೀವಾಣುಗಳು ಇರುತ್ತವೆಂದು ಶೋಧಕರು ಕಂಡುಹಿಡಿದಿದ್ದಾರೆ. ಇಷ್ಟು ತಾನೇ ಅಲ್ಲ; ಈ ಜೀವಾಣುಗಳು ತಾಸಿಗೆ ೧೨೦೦ ಮೈಲುಗಳ ತ್ವರಿತಗತಿಯಿಂದ ಗಾಳಿಯಲ್ಲಿ ಸಂಚರಿಸುತ್ತಿರುವವೆಂದೂ ಅವರು ಗೊತ್ತುಹಚ್ಚಿದ್ದಾರೆ. ಏನಾಶ್ಚರ್ಯ!

★

ಶಬ್ದವಿಲ್ಲ.

ಗ್ರಾಮೊಫೋನ್ ಪ್ಲೇಟ್ ತಿರುಗುವಾಗ ಸೂಜಿಯ ಒತ್ತಾಟದಿಂದ ಉಂಟಾಗುವ ಶಬ್ದವು ಎಷ್ಟು ಸೂಕ್ಷ್ಮವಾದರೂ ಅದು ಸಂಗೀತದ ಸವಿಯನ್ನು ಕೆಡಿಸುತ್ತದೆಯಷ್ಟೆ! ಆದರೆ ಕೆಪ್ಟನ್ ರಿಚ್ಛರ್ಡ್ ರೇಂಜರ್ ಎಂಬವರು ಇಂತಹ ಶಬ್ದವಾಗದಂತಹ ಪ್ಲೇಟುಗಳನ್ನು ಕಂಡುಹಿಡಿದಿರುವರು, ಆ ಪ್ಲೇಟುಗಳನ್ನು ಇಟ್ಟರೆ ಸೂಜಿಯಿಂದಾಗುವ ಶಬ್ದವು ಕೇಳಿಸುವುದಿಲ್ಲ ಮಾತ್ರವಲ್ಲ, ಅವು ಹೆಚ್ಚು ಬಾಳಿಕೆ ಬರುವುವು.

ಕಣ್ಣಿನಿಂದ ಬೀಡಿ ಸೇದುತ್ತಿದ್ದಾನೆ.

ಆಲ್ಫ್ರೆಡ್ ಲಿಂಜವಿನ್ ಎಂಬಾತನು ಬೀಡಿ, ಸಿಗರೇಟು, ಪ್ಯಾಪು ಮೊದಲಾದವುಗಳನ್ನು ತನ್ನ ಕಣ್ಣುಗಳ ಮುಖಾಂತರ ಸೇದಿ, ಬಾಯಿಯಿಂದ ಹೊಗೆ ಬಿಡುತ್ತಾನೆ. ವಿಚಿತ್ರ!

★

ಹುಲ್ಲುಕಡ್ಡಿ ಮನುಷ್ಯನ ಆಹಾರ.

ಶಾಕಾಹಾರಿ ಪಶುಗಳು ಮಾತ್ರ ಇಷ್ಟರ ತನಕ ಹುಲ್ಲುಕಡ್ಡಿಗಳನ್ನು ತಿಂದು ಬದುಕಿ ಬಂದಿದ್ದುವು. ಆದರೆ, ಇನ್ನು ಕೆಲವೇ ವರ್ಷಗಳಲ್ಲಿ ಮನುಷ್ಯನು ಕೂಡ ಹುಲ್ಲುಕಡ್ಡಿ ತಿಂದು ಇರಬಹುದೆಂದು ಒಟೇರಿಯೋದ ಕೃಷಿ ಶಾಲಾ ಅಧ್ಯಕ್ಷ ಡಾಕ್ಟರ್ ಜಾರ್ಜ ಕ್ರಿಸ್ಟಿ ಎಂಬವರು ಹೇಳುತ್ತಾರೆ. ಎತ್ತಿನ ಗಾಡಿ, ಕುದುರೆ ಬಂಡಿಗಳನ್ನು ಬಿಟ್ಟು ಈಗ ಮನುಷ್ಯನು ಮೋಟಾರ ಕಾರುಗಳನ್ನು ಸಂಚಾರದ ಬಗ್ಗೆ ಉಪಯೋಗಿಸುವದು ಎಷ್ಟು ಸರಳ ಮತ್ತು ಸ್ವಾಭಾವಿಕವಾಗಿರುವದೋ, ಹಾಗೆಯೇ ಮನುಷ್ಯನು ಈಗಿನ ಅಡಿಗೆ ಮಾಡಿದ ಆಹಾರದ ಬದಲಿಗೆ, ಭವಿಷ್ಯದಲ್ಲಿ ಹುಲ್ಲುಕಡ್ಡಿಗಳ ಹದಮಾಡಿದ ಆಹಾರವನ್ನು ಉಪಯೋಗಿಸುವದೂ ಸರಳವೂ ಸ್ವಾಭಾವಿಕವೂ ಆಗುವದಂತೆ. ಇಷ್ಟು ಮಾತ್ರವಲ್ಲ, ಕ್ರಿಸ್ಟಿಯವರು ಮುಂದೆ ಹೇಳಿರುವುದೇನೆಂದರೆ: "ನನ್ನ ಶೋಧನಾಲಯದಲ್ಲಿ ಒಬ್ಬ ನೌಕರನಿದ್ದಾನೆ. ಅವನಿಗೆ ಯಾವಾಗ ಕಂಡರೂ ಹೊಟ್ಟೆನೋವು ಇರುತಿತ್ತು. ಆ ಹೊಟ್ಟೆ ನೋವಿನಿಂದ ಅವನಿಗೆ ಏಳು ಹನ್ನೊಂದು ಆಗುತಿತ್ತು. ನಾನು ಅವನ ನಿತ್ಯದ ಆಹಾರದೊಂದಿಗೆ ಎರಡೆರಡು ಚಮಚೆ ಒಣಗಿದ ಹುಲ್ಲುಪುಡಿಯನ್ನು ಕೊಡುತ್ತ ಬಂದೆ. ಈಗ ಅವನು ಬಹು ಸೌಖ್ಯಗೊಂಡಿರುವನು".

ಇರಬಹುದು; ಪರಂತು ಒಂದು ಮಾತಿನಲ್ಲಿ ಮಾತ್ರ ಸಂದೇಹವಾಗುತ್ತದೆ. ಮನುಷ್ಯರು ಹುಲ್ಲುಕಡ್ಡಿ ತಿನ್ನತೊಡಗಿದರೆ, ಮತ್ತೆ ಪಶುಗಳು ತಿನ್ನುವುದು ಏನನ್ನು? ಇದಕ್ಕೆ ಡಾ। ಕ್ರಿಸ್ಟಿಯವರು ಉತ್ತರ ಕೊಟ್ಟಿಲ್ಲ.

— —

ಈಜಿಪ್ತದ ಚುನಾವಣೆಯಲ್ಲಿ ಇದುವರೆಗೆ ತಿಳಿದುಬಂದಿರುವ ಪರಿಣಾಮಗಳನ್ನು ನೋಡಿದರೆ, ಉತ್ತರ ಈಜಿಪ್ತದಲ್ಲಿ ಸರಕಾರಕ್ಕೆ ಬೆಂಬಲ ಕೊಡುವದೆಂದು ತಿಳಿದುಬರುತ್ತದೆ. ಒಟ್ಟು ೬೫ ಪರಿಣಾಮಗಳಲ್ಲಿ ಇಬ್ಬರು ಮಾತ್ರ ವಫದ ಪಕ್ಷದವರಿರುವರು.

ರತ್ನೈರ್ಮಹಾರ್ಹೈಸ್ತುತುರ್ಷುರ್ನ ದೇವಾ । ನ ಭೇಜಿರೇ ಭೀಮ ವಿಶೇಷಣ ಭೀತಿವ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥದ್ವಿರಮಂತಿ ಧೀರಾ । ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿ ಗದರಿಂ । ಹರುಷವಾಯಿತೆ! ಮತೆ ವಿಶ್ವವ ಸುಡುವ ಬರುತಿರುವ ॥

ಸ್ವದೇಶಾಭಿಮಾನಿ
SWADESHABHIMANI

ಗರಲಕವರಂಜಿದರೆ! ಸುಧೆಯನು । ಮರೆತು ...ದ ಕುಳಿತರೆ । ತೆರಳ ಬಲ್ಲರೆ । ತೊರೆದು ಧೀರರು ನಿಶ್ಚಿತಾರ್ಥವನು ॥

ತಾ. ೮ನೇ ಶುಕ್ರವಾರ ಎಪ್ರಿಲ್ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾ...ಪಿತ...ದುದು.) | ತಾರೀಕು 8-4-1938

ಅ. ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲ-ಕಲ್ಕತ್ತದಲ್ಲಿ ಅಧಿವೇಶನ.

ಮಧ್ಯಪ್ರಾಂತ್ಯದ ಮಂತ್ರಿಯರ ಪ್ರಮಾದ

ಈ ವಿಷಯದ ಪರ್ಯಾಲೋಚನೆಗೆ ಒಂದು ದಿನ ಕಳೆಯಿತು. ಜಾಫರ ಹುಸ್ಸೇನನೆಂಬ ರಾಜಕೀಯವಲ್ಲದ ಶಿಕ್ಷೆಗೆ ಗುರಿಯಾಗಿ ಜೈಲನ್ನು ಅನುಭವಿಸುತ್ತಿದ್ದವನನ್ನು ಬಿಡುಗಡೆ ಮಾಡಿದ ...ಯೋ ಮೆಂಬರರ ವರ್ತನೆಯನ್ನು ಕುರಿತಾಗಿ ಕಾರ್ಯಕಾರೀ ಮಂಡಲವು ವಿಚಾರಕ್ಕಾರಂಭಿಸಿ ಆ ಮೆಂಬರರನ್ನು ಸ್ವತಃ ವಿಚಾರಣೆ ಮಾಡದೆ ಯಾವ ತೀರ್ಮಾನವನ್ನೂ ಕೊಡಲಾಗುವುದಿಲ್ಲೆಂದು ಗಾಂಧಿಜೀಯವರು ಎಂದಂತೆ, ಅವರನ್ನು ಟೆಲಿಫೋನ್ ಮೂಲಕವಾಗಿ ಕಲ್ಕತ್ತೆಗೆ

ಮಧ್ಯಪ್ರಾಂತ್ಯದ ಮುಖ್ಯ ಮಂತ್ರಿ ಬಿ ಎನ್ ಖಾರೆ

ಬರಮಾಡಿಕೊಂಡರು ಮುಖ್ಯಮಂತ್ರಿ ಖಾರೆಯವರು ಸಂಬಂಧಪಟ್ಟ ಎಲ್ಲ ವಿಷಯಗಳನ್ನು ವಿವರವಾಗಿ ತಿಳಿಸಿರುವರು ಅವರು ಈ ಪ್ರಮಾದವನ್ನು ತಿಳಿದ ಬಳಿಕ, ಇನ್ನು ಮಂತ್ರಿಗಳು ಹೇಗೆ ವರ್ತಿಸಬೇಕೆಂಬುದನ್ನು ಸ್ಪಷ್ಟವಾಗಿ ಸರ್ಕಿಲಾರು ಮೂಲಕ ಇತರ ಮಂತ್ರಿಗಳಿಗೆ ತಿಳಿಸಿರುವರು ಮಂತ್ರಿ ಶರೀಫರು ಬೇಡಿದ ಕ್ಷಮಾಪಣೆ, ಅವರು ಕೊಟ್ಟ ರಾಜೀನಾಮೆ ಮೊದಲಾದುವನ್ನೂ ಒಪ್ಪಿಸಿದ್ದಾರೆ, ಜನರ ಸಭೆ ಸೇರಿಸಿ, ಎಲ್ಲವನ್ನೂ ವಿವರಿಸಿದ್ದು ಸರಿಯಾಗಿಲ್ಲವೆಂದು ಕೆಲವರೂ, ಸರಿಯೇ ಆಯಿತು ಎಂದು ...ತರರೂ ಅಭಿಪ್ರಾಯಪಟ್ಟಿರುವಂತೆ ತೋರುವುದು. ಹೇಗಿದ್ದರೂ, ಈ ವರ್ತನೆಯನ್ನು ಖಂಡಿಸಿ, ಮುಂದೆ ಇಂತಹ ಸಂಭವಗಳಾಗದಂತೆ ನಿಯಮಗಳನ್ನು ಮಾಡಿ, ಸದ್ಯಕ್ಕೆ ಇವರಿತ್ತ ರಾಜೀನಾಮೆಯನ್ನು ಅಂಗೀಕರಿಸುವುದು ಬೇಡವೆಂಬಂತೆ ಒಂದು ನಿರ್ಣಯವಾಗಬಹುದು.

ಒರಿಸ್ಸಾ ಪ್ರಾಂತ್ಯದ ಆಕ್ಟಿಂಗ್ ಗವರ್ನರರು

ಮಂತ್ರಿಗಳ ಕೈಕೆಳಗಿದ್ದು ಕೆಲಸ ನೋಡುತ್ತಿದ್ದ ಒರಿಸ್ಸಾ ಸರ್ವಿಸಿನ ಒಬ್ಬ ಅಧಿಕಾರಿಯನ್ನು ಆಕ್ಟಿಂಗ್ ಗವರ್ನರ ಹುದ್ದೆಗೆ (ಖಾಯಂ ಗವರ್ನರರು ರಜೆಯ ಮೇಲಿರುವಾಗ) ನೇಮಿಸಿದುದು ಕಾಂಗ್ರೆಸ್ ಕಾರ್ಯಕಾರ್ಯಕಾರೀ ಮಂಡಲಕ್ಕೆ ಆಶ್ಚರ್ಯವೆನಿಸಿದೆ ಇನ್ನಾವ ದೇಶದಲ್ಲೂ ಈ ಬಗೆಯ ಒಳನೋಕರರನ್ನು ಮೇಲಾಧಿಕಾರಿಗಳನ್ನಾಗಿ ನೇಮಿಸುವ ಪದ್ಧತಿಯಿರದು,

ನಮ್ಮ ನೋಕರರಾಗಿದ್ದವರ ಕೆಳಗೆ ಕೆಲಸ ಮಾಡಲು ಮಂತ್ರಿಗಳಿಗೆ (ನೋಕರರು ಅಪ್ರೀತಿಬಾಹಿರರಾಗಿದ್ದ ಸಂದರ್ಭದಲ್ಲಿ) ಈ ಬಗೆಯ ಗ್ರಹಚಾರವೇ ಎನಿಸಬಹುದ ವಿಷ ಕಾರಣದಿಂದ, ಒರಿಸ್ಸಾ ಮಂತ್ರಿಗಳು ... ಯವನ್ನು ಆಕ್ಷೇಪಿಸಿ ಕೇಂದ್ರ ... ತಿಳಿಸಿರುವರು ಇದನ್ನೊಪ್ಪಲಾರೆ ಜನರಲ ದಾರಿ ಹೋಗಿರುವುದ... ದ ಗವರ್ನರ... ಅಥವಾ ಇಂಡಿಯಾ ... ಈ ನೇಮಕವನ್ನು ಪುನಃ ... ಆಕ್ಟಿಂಗ್ ಗವರ್ನ... ಹೈ... ಕ್ರಮವನ್ನೆ ಅನುಸರಿ... ನಿರ್ಣಯ ಕಾರ್ಯಕಾರೀ — ಮಾಡಿರುವುದ

ಶತ್ರು ಬರ್ಮಾ ಇಂಡಿಯಾ ... ಬರ್ಮಾದವರೊಡನೆ ನಮ್ಮಲ್ಲಿನ ಗಿರಬೇಕು?

ಹುಸೇನರೆಂಬವರ ಅವ... ಡಾ। ಕಾಲೇಜಿನಲ್ಲಿ ಅಧ್ಯಾಪಕರ. ರಿಕದೊಂದಿಗಾನೆ ರಂಗೂನಿಗೆ ಹೋದಾಗ ಅವರು ... ಪ್ರತಿನಿಧಿಗಳನ್ನು ಕಂಡ. — ಪತ್ರಕರ್ತರಿಗಳು ಕಾಂಗ್ರೆಸನ್ನು ಸೇರಬೇಕೆಲ್ಲನೂ ಮುಸ್ಲಿಮರು ಹಾಗೆ ಐಕ್ಯತೆ ಕಂಡುಕೊಂಡಿಸಿದರೆ, ದೇಶೋದ್ಧಾರವು ಸುಲಭವೆಂದೂ ಹೇಳಿದರು ಬರ್ಮಾವನ್ನು ಭಸಮಾದ ಶಸ್ತ್ರಪ್ರಯೋಗದಿಂದ ಇಂಡಿಯಾದಿಂದ ಬೇರ್ಪಡಿಸಿರುವರಾದರೂ, ಇದರಿಂದ ಯ ಹಿತವೇ ಅಹಿತವೇ ಎಂದು ಸ್ಪಷ್ಟಪಡಲ್ಲ ಆದರೂ, ಇಷ್ಟು ಕಾಲವೂ ಹೇಶಗಳು ಸನ್ಮಿತ್ರರಾಗಿಯೆ ಬಾಳಿವೆ ಸಂಸ್ಕೃತಿಯು ಇವೆರಡನ್ನೂ ಕಟ್ಟಿ, ಈ ಬಂಧನವು ಇನ್ನು ಚಿರಕಾಲ ಬಾಳುವುದಾಗಿದೆ ಹೀಗಿರುವಾಗ, ಲಕ್ಷಾತ್ರವೊಂದೇ ಮುಂದರಿದಲ್ಲಿ ಯಾವ ಬರ್ಹೊಂದಿದಲ್ಲಿ ಯಾವ ಪ್ರಯೋಜನ... ಇತರ ಜನಾಂಗಗಳಷ್ಟೇ ಚೆನ್ನಾಗಿ ನಮ್ಮಾತಂತ್ರ್ಯ ಹೊಂದಿದರೆ ಮಾತ್ರ, ಬರ್ಮಾವು ... ಅದು ಜಯಶೀಲತೆಯ ಇಂಡಿಯ ಗೌರವ ಪಡೆದೀತು ವುದು ಎಂದು ಅ...

ರದ್ದಾದ ಸ್ಟಾಂಪು

ಐವರು ಚ... ನಡೆಸಿದ ಒಂದ ಮಹತ್ವದ ಒ... ಇಬ್ಬರು ಸ್ಟಾ... ಸ್ಟಾಂಪುಗಳ... ರದ್ದಿನ ಗು... ಸ್ತಿಕವಾಗಿ ಸ್ಟಾಂಪು... ಲಾಗು...

...ವರು ಸ್ಟಾಂಪುವ್ಯಾಪಾರಿಗಳಾದರು ಒಂದು ಕೆಲಸವರ್ತಕಸಂಘವು ಬೊಂಬಾಯಿಯಲಿ ಇವರಿಂದ ೭೨,೦೦೦ ರೂಪಾಯಿಗಳ ಸ್ಟಾಂಪನ್ನು ಕೊಂಡು ಕೊಂಡಿದೆ ಇಂತಿರ ಪ... ಸೇ..., ಹಲವು ಕಂಪನಿಗಳಿಗೆ ಇವರು ಮಾರಿದ ರದ್ದು ಆದ ಮಾಸಿದ ಸ್ಟಾಂಪುಗಳ ಮೌಲ್ಯ ೪ ಲಕ್ಷ ರೂಪಾಯಿಗಳಿಗೆ ಮೀರಿದೆ ಈಗ ಇವರ ಮೇಲೆ ಮೊಕದ್ದಮೆ ಯಾಗಿ, ಒಂದು ವರ್ಷದಷ್ಟು ಕಠಿನ ಸಜೆ ... ದೊರೆಯಿತ ಈ ದಂಡನೆಯು ... ಮಾತ್ರ ಇವರು ಗಳಿಸಿ ಮೋಸ ... ಅದ... ಶಿಕ್ಷಾಧೀಶರಾದರ, ... ಗಳಿಸಿದ ಹಣಕ್ಕೆ ಒಂದ ಮೊಹರು ಒದ್ದು...

ಹಿಂದೀಯರ ಸೇನಾಂಗ

ಯುದ್ಧ ಕ್ರಮ ಶಿಕ್ಷಣ ಕೊಡುವ ಹೊಸ ವಿದ್ಯಾಲಯವು ನಮ್ಮ ಇತಿಹಾಸದಲ್ಲಿ ಈಗ ಮೊದಲನೆದಾಗಿದೆ

ಕಾಶೀ ವಿದ್ಯಾಪೀಠಕ್ಕೆ ಮಾಳವೀಯರು' ಯುದ್ಧವಿದ್ಯಾಲಯಕ್ಕೆ ಮೂಂಜೆಯವರು

ಭೋನ್ಸ್ಲೆ ಮಿಲಿಟರಿ ಶಾಲೆಯ ಸ್ಥಾಪನೋತ್ಸವವನ್ನು ಗ್ವಾಲಿಯರದ ಮಹಾರಾಜರೇ ಜರಗಿಸಿದರು 'ವಂದೇ ಮಾತರಂ' ಗೀತಧ್ವನಿಯೇ ಈ ಉತ್ಸವದ ಕಾರ್ಯಾರಂಭದ ಘೋಷವಾಗಿದ್ದಿತು ಬ್ರಿಟಿಷ ಸೈನಿಕರ ಆಧಾರದ ಮೇಲೆ ಊರಿಕೊಂಡಿದ್ದರೆ ಈ ದೇಶದ ರಕ್ಷಣೆಯಾಗಲಾರದು ಎಂದು ಪ್ರತಾಪ ಶೇಟರೆಂಬ ಸ್ವಾಗತಾಧ್ಯಕ್ಷರು ನುಡಿದರು ಲೋರ್ಡ ವಿಲ್ಲಿಂಗ್ಡನ್ ಮತ್ತು ಮುಂಬಾಯಿ ಗವರ್ನರರೇ ಹರಸಿ ಸಂದೇಶಗಳನ್ನು ಕಳುಹಿದ್ದರು ಗ್ವಾಲಿಯರ ಮಹಾರಾಜರು ಈ ಶಾಲೆಗಾಗಿ ಒಂದು ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟರು ಶಾಲೆಯ ಆಡಳಿತ ಮಂಡಲಿಯಲ್ಲಿ ಗ್ವಾಲಿಯರಿನ ಸೈನ್ಯಾಧ್ಯಕ್ಷರೂ ಇತರ ಮಂತ್ರಿಗಳೊಬ್ಬರೂ ಸೇರುವರು. ಇದರಿಂದ ಶಾಲಾ ಅಭಿವೃದ್ಧಿಯನ್ನು ಕುರಿತಾಗಿ ಮುಂದಣ ಕಾರ್ಯಗಳನ್ನು ನೋಡಿಕೊಳ್ಳಲು ಮಹಾರಾಜರಿಗೆ ಅನುಕೂಲವಾಗುವುದು ಬಂಗಾಳದಿಂದ ಒಬ್ಬ ಮಹನೀಯರು ತಮ್ಮವರ ಸಲುವಾಗಿ ೫೦೦೦ ರೂಪಾಯಿಗಳನ್ನು ವ್ಯಯಿಸಿ ಕೊಠಡಿ ಕಟ್ಟಿಸುವರೆ ದಾನ...

...ವೇ ನಾಸಿಕದಲ್ಲಿ ಪ್ರಚಂಡ ...ಂದ ಸುಮಾರು ೫೦೦೦... ಪ್ಪದ ಹಾವಳಿಯುಂಟಾ...ಲ್ಲ ಯುದ್ಧದ ಮೋಡವು ...ರಕ ದೃಶ್ಯವಿದು) ದ್ರಾಕ್ಷಿ ...ದಿಯೇದೂ ಇನ್ನೂ ಜಡಿ ...ಚುಗಳು ಬಲವಾಗಿವೆ ವಾರ್ತೆ.

...ರಿಜನರಿಗೆ ಕಷ್ಟ

...ದ ಶರಾ:

ಜನ ಸೇವಕ ...ಭಾಷಣಮಾ...ಕ್ಕಾಗಿ ಅಲ್ಲಿ...

ಬಂದಿದ್ದ ಸಾವಿರಾರು ಜನರಿಗೆ ತಮ್ಮ ವಿಮರ್ಶೆಯ ಅರಿವನ್ನು ಹುಟ್ಟಿಸಿದರು 'ಜಗನ್ನಾಥದ ಹೊರಗಣವರು ಯಾವ ಜಾತಿಯವರೇ ಅಲ್ಲಿಗೆ ಯಾತ್ರಾರ್ಥಿಗಳಾಗಿ ಬಂದಲ್ಲಿ, ಅವರಿಗೆ ಜಾತಿ ಭೇದವೇನೂ ಇಲ್ಲದೆ, ಒಂದೇ ಬಗೆಯಾಗಿ ನೋಡುವರು ಆದರೂ ಅದೇ ಊರಲಿರುವ ಹರಿಜನರನ್ನು ಅಸ್ಪೃಶ್ಯರೆಂದೇ ಜನರು ನೋಡುತ್ತಿರುವುದು ಪಶ್ಚಾತ್ತಾಪಕರವಾಗಿದೆ ಇವರಿಗೆ ದೇವಾಲಯದಲ್ಲಿ ಪ್ರವೇಶವಿಲ್ಲ, ಹೊರಗಣ ಹರಿಜನರಿಗೆ ಇಲ್ಲಿ ಭೇದವೇ ಇಲ್ಲ ಈಗ ರಾಜ್ಯವನ್ನು ಆಳುವವರು ಹೊರಗಣವರು, ರಾಜ್ಯ

ವಲ್ಲಭಭಾಯಿ ಪಟೇಲರು

ವನ್ನಾಳುವ ಅಧಿಕಾರವು ದೇಶೀಯರಿಗೇ ಸಿಕ್ಕು ಮಂತಾದಲ್ಲಿ ಸ್ವತಂತ್ರವಾದ ಭಾರತವರ್ಷದಲ್ಲಿ ಜಾತಿಭೇದದ ಮಾತೇ ಇಲ್ಲದೆ, ಎಲ್ಲ ಜಾತಿಗಳ ಸಹಕಾರದಿಂದ ರಾಜ್ಯವನ್ನಾಳಬೇಕಾಗುವ ಕಾರಣ, ಸರ್ವ ಸಮಾಜಗಳಿಗೂ ಸಮಾನತೆ ಸಿಗುವುದು ಇದಕ್ಕಾಗಿ — ಕಾಂಗ್ರೆಸಿಗೆ ಅದರ ಹೋರಾಟದಲ್ಲಿ ಸರ್ವರೂ ಸಹಕರಿಸುವುದಗತ್ಯ.

ಐವರು ಹಿಂದುಗಳನ್ನು ಗುಂಡಿಕ್ಕಿ ಕೊಂದರು'

ಹಿಸ್ಸಾರಿನಲ್ಲಿ ಘೋರ ದಂಗೆ!

ಶಾಂತಿಸಾಧಕನ ಮರಣ

ಲಾಹೋರಿನ ವಾರ್ತೆ—ಹಿಸ್ಸಾರಿನಲ್ಲಿ ಹಿಂದೂ ಮುಸ್ಲಿಮರೊಳಗೆ ದಂಗೆಯೆದ್ದು, ಐವರು ಹಿಂದುಗಳು—ಅವರಲ್ಲೊಬ್ಬರು ... ಮೆಜಿಸ್ಟ್ರೇಟರು— ಗುಂಡೇಟಿಗೆ ತುತ್ತಾದರು!

ಕೆಲವು ದಿನಗಳ ಹಿಂದೆ, ಒಂದು ಅಂಗಡಿಯನ್ನು ಸುಟ್ಟು ಹಾಕಿದ್ದರಂತೆ, ಅದು ಹಿಂದುವಿನದು, ಆದರ ನೌಕರನೇ ಒಬ್ಬ ಮುಸ್ಲಿಮನ ಗುಡಿಸಲಿಗೂ ಬೆಂಕಿ ಹಿಡಿಯಿತು. ಇದರ ಪರಿಣಾಮವಾಗಿ, ಇತ್ತಂಡಗಳೊಳಗೆ ಕ್ಷೋಭೆಯುಂಟಾಯಿತು. ನಿವೃತ್ತ ಒನರರಿ ಮೆಜಿಸ್ಟ್ರೇಟರಾದ ರಾಯಬಹದ್ದೂರ ಛಬಿಲದಾಸರು ದಂಗೆಕೋರರೊಳಗೆ ಶಾಂತಿಸಮಾಧಾನವನ್ನು ಸಾರುತ್ತಲಿರುವಾಗ, ಥಟ್ಟನೆ ಮುಸ್ಲಿಮರೊಬ್ಬರ ಮನೆಯಿಂದ ಗುಂಡುಗಳು ಹಾರಿದುವು. ಐವರು ಹಿಂದೂಗಳು ಸತ್ತೇ ಹೋದರು ಗಾಯ ಹೊಂದಿದವರ ಸಂಖ್ಯೆ ಎಷ್ಟೆಂದು ತಿಳಿದಿಲ್ಲ.

ಪೋಲೀಸರು ಕೂಡಲೆ ಅತ್ತ ಬಂದು ಗುಂಡುಹೊರಟ ಮನೆಯ ಇಬ್ಬರನ್ನು ಕೈದು ಮಾಡಿದರು. ಸರ್ಕಾರಿನ ಮೇಲೆ ಸಂಚಾರ ಮಾಡುತ್ತಿದ್ದ ಡೆಪ್ಯೂಟಿ ಕಮಿಶನರರು ಅಲ್ಲಿಗೆ ಬಂದು ನೆಮ್ಮದಿಯನ್ನುಂಟುಮಾಡಿರುವರು.

ಸ್ವದೇಶಿ ಕಾಗದಕ್ಕೆ ಪ್ರೋತ್ಸಾಹ

ನಮ್ಮ ದೇಶದಲ್ಲಿ ಕಾಗದ ಕೈಗಾರಿಕೆಯು ನಡೆದುಬಂದಿರುವುದು. ಆದರೆ ಈಗ ಮಾತ್ರ ಈ ಗ್ರಾಮೋದ್ಯೋಗವು ನಾಮಮಾತ್ರಶೇಷವಾಗಿದೆ. ಪರಂತು ಪ್ರಯತ್ನ ಪಟ್ಟರೆ ಅದನ್ನು ಉಜ್ಜೀವಿಸುವುದು ವಿಶೇಷ ಕಷ್ಟದ ಕೆಲಸವಾಗಿರುವುದಿಲ್ಲ. ಜನತೆಯಲ್ಲಿ ಮಿಲ್ಲು ಕಾಗದದ ಮೇಲಿರುವ ವ್ಯಾಮೋಹವು ತಪ್ಪಿ, ಕೈಯಿಂದ ಮಾಡಿದ ಕಾಗದದ ಮೇಲೆ ಅಭಿಮಾನವುಂಟಾದರೆ ಅದು ಬಹು ಸುಲಭ ಸಾಧ್ಯವಾಗುವುದು.

ಆದರೆ ಜನರು ಸ್ವದೇಶಿ ಮತ್ತು ಮನೆಕೈಗಾರಿಕೆಯಲ್ಲಿ ಅಭಿಮಾನಿಗಳಾಗುವುದರಿಂದಲೇ ಈ ಯಾಂತ್ರಿಕ ಯುಗದಲ್ಲಿ ಕೈಗಾರಿಕೆಯ ಉಜ್ಜೀವನವು ಪೂರ್ಣತಃ ಸಾಧ್ಯವೆನ್ನಿಸಿಕೊಳ್ಳುವದಿಲ್ಲ. ಕಾಗದ ಕೈಗಾರಿಕೆಯ ವಿಷಯವಾಗಿ ಹೇಳುವದಾದರೆ, ನಮ್ಮ ದೇಶದಲ್ಲಿ ಈ ಕೈಗಾರಿಕೆಯು ಬಹಳ ಹಳೆತಾದ ಕೈಗಾರಿಕೆಯಾಗಿರುವುದಾದರೂ, ಕಾಗದ ತಯಾರಿಸುವ ಕ್ರಮದಲ್ಲಿ ಈ ದೀರ್ಘಾವಧಿಯಲ್ಲಿ ವಿಶೇಷ ಸುಧಾರಣೆಗಳಾದ್ದುದಿಲ್ಲ. ನಮ್ಮ ದೇಶದ ಯಾವ ಯಾವ ಕಡೆಗಳಲ್ಲಿ ಈ ಕೈಗಾರಿಕೆಯೂ ಇನ್ನೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ನಡೆಯುತ್ತ ಬಂದಿರುವದೋ ಅಲ್ಲೆಲ್ಲ ಹಳೆಯ ಕ್ರಮಗಳಲ್ಲಿಯೇ ಈಗ ಕೂಡ ಕಾಗದವನ್ನು ತಯಾರಿಸುತ್ತಾರೆ. ಆದಕಾರಣ, ಹೀಗೆ ತಯ್ಯಾರಾಗುವ ಕಾಗದವು ಒಬ್ಬರು ನಿರೀಕ್ಷಿಸುವಷ್ಟು ಉತ್ಕೃಷ್ಟವಾಗಿಯಾಗಲೀ, ಬೇಕಾದ ಪ್ರಮಾಣದಲ್ಲಾಗಲೀ ಇರುವದಿಲ್ಲ. ಹಾಗೆಂದೂ ಇರಲಾರದು. ಈ ಕೈಗಾರಿಕೆಯು ಅಭಿವೃದ್ಧಿಗೆ ಬಂದು, ಅದು ಮೊದಲಿನಂತೆ ಜನರ ಒಂದು ಸ್ವತಂತ್ರ ಜೀವನೋಪಾಯವೆನ್ನಿಸಿಕೊಳ್ಳಬೇಕಾದರೆ, ಕಾಗದ ತಯ್ಯಾರಿಯ ಕ್ರಮದಲ್ಲಿ ಸುಧಾರಣೆಗಳಾಗುವದು ಅತ್ಯಗತ್ಯವಾಗಿರುತ್ತದೆ. ಆಕ್ರಮವನ್ನು ಆಧುನಿಕ ಸ್ಥಿತಿಗತಿಗೆ ತಕ್ಕಂತೆ ತಿದ್ದಿ ಬದಲಾಯಿಸಿಕೊಳ್ಳುವದು ಅಗತ್ಯವಾಗಿದೆ.

ಈ ವಿಷಯದ ಅಧ್ಯಯನವಮಾಡಲಿಕ್ಕೆ ಅಮೇರಿಕದಿಂದ ನಮ್ಮ ದೇಶಕ್ಕೆ ಬಂದಿರುವ ... ಹಂಟರ್ ಎಂಬ ಕಾಗದ ಕೈಗಾರಿಕೆಯ ... ಮೇಲೆ ಬರೆದಂತೆಯೇ ಅಭಿಪ್ರಾಯ ಪಡುತ್ತಾರೆ. ಕಾಗದ ಕೈಗಾರಿಕೆಗೆ ಉಪಯೋಗಿಸುವ ಹಸಿ ಪದಾರ್ಥಗಳು ಉತ್ಕೃಷ್ಟವಾಗಿರಬೇಕು. ಮತ್ತು ಈ ಕೈಗಾರಿಕೆಗಾಗಿ ಉಪಯೋಗಿಸ್ಕೆ ಬಾರದ ಹಳೆಯ ಚಿಂದಿಕಾಗದಗಳನ್ನು ಉಪಯೋಗಿಸುತ್ತಿರುವದರ ಬದಲಿಗೆ ... ಹರಿದುಹೋದ ಸಾಣಿನ ಚೀಲಗಳು, ... ಮೊದಲಾದುವನ್ನು ಉಪಯೋಗಿಸಿ, ಹದವಾ... ಕಾಗದದ ಅಂಟನ್ನು ತಯ್ಯಾರಿಸಲಿಕ್ಕಾಗುತ್ತದೆಂದು ಅವರು ಹೇಳುತ್ತಾರೆ. ಸುಧಾರಿತ ಕ್ರಮಗಳಿಂದ ಈ ಮನೆಕೈಗಾರಿಕೆಯನ್ನು ನಡೆಸಿಕೊಂಡು ಬಂದರೆ ಕರೆನ್ಸಿ ನೋಟುಗಳು ಸರ್ಟಿಫಿಕೇಟುಗಳು ಮೊದಲಾದವುಗಳಿಗಾಗಿ ಕೂಡ ಸ್ವದೇಶೀ ಮನೆಕೈಗಾರಿಕೆಯ ಮೂಲಕ ಆದ ಕಾಗದವನ್ನೇ ಉಪಯೋಗಿಸಬಹುದೆಂದು ಅವರ ಖಂಡಿತ ಅಭಿಪ್ರಾಯವಿರುವದು.

ಸರಕಾರದ ಹೊಣೆಗಾರಿಕೆ

ನಾಮಮಾತ್ರಶೇಷವಾಗಿರುವ ಈ ಮನೆಕೈಗಾರಿಕೆಯನ್ನು ಉಜ್ಜೀವಿಸುವದರಲ್ಲಿ ಸರಕಾರದ, ವಿಶೇಷವಾಗಿ ಪ್ರಾಂತಿಕ ಸರಕಾರಗಳ ಹೊಣೆಗಾರಿಕೆಯು ಬಹಳವಾಗಿರುವದು. ಜನರಿಗೆ ಈ ಉದ್ಯೋಗದಲ್ಲಿ ಒಳ್ಳೆಯ ಶಿಕ್ಷಣವನ್ನು ಕೊಟ್ಟರೆ, ಕಾಗದ ಕೈಗಾರಿಕೆಯು ಉನ್ನತಿಗೆ ಬರಲಿಕ್ಕೆ ಈ ದೇಶದಲ್ಲಿ ತುಂಬಾ ಅನುಕೂಲವಿರುವದು. ನಮ್ಮ ದೇಶದಲ್ಲಿ ರಾಜಮಹೇಂದ್ರಿಯ ಶ್ರೀ ವೆಂಕಾಜಿ ಎಂಬವರು ಈ ಕೈಗಾರಿಕೆಯಲ್ಲಿ ಒಳ್ಳೆಯ ಅನುಭವಿಗಳೂ ತಜ್ಞರೂ ಆಗಿದ್ದಾರೆ. ಅಪೇಕ್ಷಿಸಿಕೊಂಡು ಬಂದವರಿಗೆ ಎಲ್ಲ ವಿಧದ ಸಹಾಯ ಮಾಡಿ ಮಾರ್ಗದರ್ಶಕರಾಗಲು ಅವರು ಯಾವಾಗಲೂ ಸಿದ್ಧರಾಗಿದ್ದಾರೆ ಎಂದು ಮಿ| ಹಂಟರ್ ಇವರು ಹೇಳುತ್ತಾರೆ. ಸರಕಾರದ ಪ್ರಯತ್ನ, ಮುಂದಾಳುಗಳ ಕಾರ್ಯ ಮತ್ತು ಜನತೆಯ ಸಹಕಾರ-ಸಹಾನುಭೂತಿಗಳಿಂದ ಈ ಕೈಗಾರಿಕೆಯು ಒಳ್ಳೆಯ ಸ್ಥಿತಿಗೆ ಬಂದರೆ ಈಗ ನಿರುದ್ಯೋಗಿಗಳಾಗಿ, ಅನ್ನಬಟ್ಟೆಗಳಿಲ್ಲದೆ ಕಷ್ಟಪಡುವ ಸಾವಿರಾರು ಜನರಿಗೆ ಒಂದು ಉದ್ಯೋಗವನ್ನು ಕಲ್ಪಿಸಿಕೊಟ್ಟು ... ... ಕೊಟ್ಟಂತಾಗುತ್ತದೆ. ... ...

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by:—

The West Coast Soap Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ... ಗೌರವ. ಅವುಗಳು ೩೦ ವರ್ಷಗಳ ಅನುಭವದಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

... ಉಪಯೋಗಿಸಿ ಖಾತ್ರಿ ಪಡೆಯಿರಿ.

... P.

... mal Krishnaya Shenoy & Son.

Bunder MANGALORE.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ

Sole Agents:—

The Kerala Te...

...PONAN

... ಔಷಧಗಳು

... ಲೇಹ

... ಶಕ್ತಿವರ್ಧಕ ರಸಾಯನ. ... ಬಳಲಿಕೆ, ... ಬದ್ಧತೆ, ... ಜೀರ್ಣಶಕ್ತಿಯನ್ನು ... ದೇಹಪುಷ್ಟಿಯನ್ನೂ, ... ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ... ...

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-0.

ಕಸ್ತೂರಿ ... ದಶಮೂಲ

ಬಾಣಂತಿಯರಿಗೆ ಅತ್ಯುಪಯುಕ್ತ ಶಕ್ತಿವರ್ಧಕ ರಸಾಯನ ... ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1-8-0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

... ಸ್ಥಳ: ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ... ಶ್ರೀರಾಮಪೇಟೆ, ಕಾಸರಗೋಡು. ... 4. ... ಶ್ರೀನಿವಾಸ ...

... ಹಣ ವಾಪಾಸು

... ವೈದ್ಯರಾದ ಎಮ್. ಕೆ. ರಜಪೂತ ಇವರ

ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

...ದರಿಂದ ಹೆಂಗಸರ ... ಅಶಕ್ತಿಯಾಗುತ್ತದೆ. ... ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ... ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ... ಶರೀರಕ್ಕೆ ಏನೂ ಅಪಾಯವಾಗದೆ ... ಗರ್ಭಧಾರಣ ಉಂಟಾಗುವುದು. ... ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು:— ... ಈ ಚೂರ್ಣದಿಂದ ಯಾವ ತರದ ಅಪಾಯವಾಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ: ರೂ. ...

ಔಷಧಾಲಯ, ಮು. ಪೋ. ಮಿರಜ, (S. M. C

ಆಧುನಿಕ ರಷ್ಯದ ಮಕ್ಕಳ ಜೀವನ

ಜನತೆಯು ಅಶಿಕ್ಷಿತವಾಗಿರುವಷ್ಟು ಕಾಲ ಸಮಾಜವಾದಿ ರಾಷ್ಟ್ರದ ನಿರ್ಮಾಣ ಮಾಡುವದು ಅಸಾಧ್ಯ ಕೆಲಸವೆಂದು ರಷ್ಯದ ಭಾಗ್ಯ ವಿಧಾತನಾಗಿದ್ದ ಲೆನಿನನು ಒಮ್ಮೆ ಹೇಳಿದ್ದನು. ಲೆನಿನನ ಪ್ರಯತ್ನ ವಿಶೇಷಗಳಿಂದಲೇ 1918ನೆ ಇಸವಿಯ ಅಕ್ಟೋಬರ ತಿಂಗಳಲ್ಲಿ ರಷ್ಯದಲ್ಲಿ ಜನಕ್ರಾಂತಿಯು ಆಗಿ ಪೂರ್ವದ ರಾಜ್ಯ ಕುಟುಂಬವು ನಾಮಾವಶೇಷವಾಯಿತು. ಅಲ್ಲಿ ಸಮಾಜವಾದಿ ರಾಷ್ಟ್ರದ ನಿರ್ಮಾಣವಾಯಿತು. ಅಂದಿನ ತನಕ ಜನತೆಯು ಅಜ್ಞಾನ ಅಂಧಕಾರದಲ್ಲಿಯೇ ಮುಳುಗಿ ತೇಲಾಡುತ್ತಿತ್ತು. ಆದ ಕಾರಣ ಸಮಾಜವಾದಿ ರಾಷ್ಟ್ರವು ಜನತೆಯ ನಿರಕ್ಷರತೆಯ ಕಾರಣದಿಂದ ನಷ್ಟವಾಗದಂತೆ ಮಾಡುವದಕ್ಕೋಸ್ಕರ ಹೊಸ ಸರಕಾರವು ಶಿಕ್ಷಣ ಪ್ರಚಾರ ಪ್ರಸಾರಗಳ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡಿತು. ಮಕ್ಕಳ ಶಿಕ್ಷಣದ ಕಡೆಗೆ ಭಗೀರಥ ಪ್ರಯತ್ನಗಳನ್ನು ಕೈಕೊಂಡಿತು. ಈ ಕಾರ್ಯದಲ್ಲಿ ಸರಕಾರವು ಎಷ್ಟು ಸಫಲವಾಗಿರುವುದೆಂದರೆ, ಸರಕಾರದ ಇತರ ಕಾರ್ಯವಿಧಾನಗಳನ್ನು ವಿದೇಶೀಯರು ಎ... ದೃಷ್ಟಿಯಿಂದ ಟೀಕಿಸಿ ದೂಷಿಸಿದರೂ ಮಕ್ಕಳ ಶಿಕ್ಷಣ ಮತ್ತು ಅವರ ಉನ್ನತಿಗಾಗಿ ನಡೆಸಿದ ಪ್ರಯತ್ನಗಳನ್ನು ಯಾರೂ ಹೊಗಳದೆ ಇರಲಿಲ್ಲ, ಅದರ ಸಫಲತೆಯನ್ನು ಕಂಡು ಸಂತೋಷದಿಂದ ತಲೆದೂಗದೆ ಇರುವದಿಲ್ಲ.

ಶ್ರೀ ಡಿ. ಜಿ ಚೆಂಡೂಲ್ಕರರು ರಷ್ಯದಲ್ಲಿ ಎರಡು ವರ್ಷಗಳ ತನಕ ಉಳಿದು ಅಲ್ಲಿಯ ಮಕ್ಕಳ ಜೀವನದ ಗಾಢ ಅಧ್ಯಯನವನ್ನು ಮಾಡಿರುತ್ತಾರೆ. ಸಿನೇಮಾ ಕೈಗಾರಿಕೆಯ ವಿಷಯಕ್ಕೆ ಜ್ಞಾನವನ್ನು ಸಂಪಾದಿಸಲಿಕ್ಕಾಗಿ ಅವರು ರಷ್ಯಕ್ಕೆ ಹೋಗಿ... ಬಳಸದಿಂದ ವಿರಾಮ ದೊರೆತಾಗ ಅವರವರ ಕೆಲಸದ ಸ್ವರೂಪಕ್ಕನುಸಾರವಾಗಿ ಕೆಲವು ತಾಯಂದಿರು ಮಕ್ಕಳನ್ನು ಹಗಲಿನಲ್ಲಿ ಸಂಗೋಪನಾಲಯದಲ್ಲಿ ಬಿಟ್ಟು ರಾತ್ರಿ ಕಾಲಕ್ಕೆ ಮನೆಗೆ ಕರಕೊಂಡು ಹೋಗುವದಿದೆ, ಇನ್ನು ಕೆಲವು ತಾಯಂದಿರು ಹಗಲಿನಲ್ಲಿ ಮನೆಯಲ್ಲಿ ತಮ್ಮ ಮಕ್ಕಳೊಂದಿಗೇ ಇದ್ದು, ರಾತ್ರಿ ಕಾಲದಲ್ಲಿ ಅವನ್ನು ಸಂಗೋಪನಾಲಯದಲ್ಲಿ ಬಿಟ್ಟು ಬಿಡುವದಿದೆ. ಪಾಪದ ಕೆಲವು ತಾಯಂದಿರಿಗೆ ಕಾರ್ಯಾನಸರದಿಂದ ಕೆಲವು ದಿನಗಳು ಕೆಲವು ಬಾರಿ ಕೆಲವು ತಿಂಗಳುಗಳ ತನಕ ತಮ್ಮ ಹೆತ್ತ ಮಕ್ಕಳ ಮುಖ ನೋಡಿ, ಅವುಗಳನ್ನು ಲಾಲಿಸಿ ಪಾಲಿಸಿ ಮುದ್ದಾಡಿಸುವ ಪುಣ್ಯ ಸಮಯವು ದೊರೆಯುವದೇ ಇಲ್ಲ. ಆದರೂ ಕೂಡ ಎಲ್ಲ ತಾಯಂದಿರು ಸಂಗೋಪನಾಲಯದಲ್ಲಿ ಬಿಟ್ಟು ತಮ್ಮ ಮಕ್ಕಳ ಆರೋಗ್ಯ ಶಿಕ್ಷಣ ರಕ್ಷಣ—ಪಾಲನ ಪೋಷಣಗಳ ಕುರಿತು ಪೂರ್ಣ ನಿಶ್ಚಿಂತರಾಗಿ ಇರುತ್ತಾರೆ. ಯಾಕೆಂದರೆ ಸಂಗೋಪನಾಲಯಗಳಲ್ಲಿ ಅನುಭವಿಕ ಮತ್ತು ಯೋಗ್ಯ ದಾದಿಯರಿಂದಾಗುವ ಮಕ್ಕಳ ಪಾಲನವು ತಮ್ಮದಕ್ಕಿಂತಲೂ ಉತ್ಕೃಷ್ಟವಾಗಿರುತ್ತದೆಂಬುದು ಅವರು ಚೆನ್ನಾಗಿ ತಿಳಿದಿರುತ್ತಾರೆ. ದೊಡ್ಡ ಕಾರ್ಖಾನೆಗಳು ಕಾರ್ಯಾಲಯಗಳು ಇರುವಲ್ಲಿ, ಅವಕ್ಕೆ ಹೊಂದಿಕೊಂಡು ಶಿಶು ಸಂಗೋಪನಾಲಯಗಳೂ ಇರುತ್ತವೆ. ಅವಿರುವಲ್ಲಿ ಅಲ್ಲಿಯ ಕೆಲಸಗಾರತಿಯರು ಯಾವಾಗ ಬೇಕಾದರೂ ತಮ್ಮ ಮಕ್ಕಳನ್ನು ಮುದ್ದಾಡಿಸಿಕೊಂಡು ಬರಬಹುದು. ಅಂಥ ಶಿಶು ಸಂಗೋಪನಾಲಯಗಳು ಇಲ್ಲದ ಅನುಕೂಲ ಕೇಂದ್ರಗಳಲ್ಲಿ ಸರಕಾರವೇ ಅವುಗಳನ್ನು ಸ್ಥಾಪಿಸಿ ನಡೆಸುತ್ತದೆ. ಯಾಕೆಂ...

...ಜ್ಞಾನೇಂದ್ರಿಯಗಳ ಉಪಯೋಗವನ್ನು ಬಹು ಚೆನ್ನಾಗಿ ಮಾಡಲಿಕ್ಕೆ ಕಲಿಯುತ್ತವೆ. ಅಷ್ಟೇ ಅಲ್ಲ ಸೂಕ್ಷ್ಮವಾದ ಸಾಮಾನ್ಯ ವಸ್ತುಗಳ ಜ್ಞಾನವು ಆ ಮಕ್ಕಳಿಗೆ ಬಹು ಸುಲಭದಲ್ಲಿ ಆಗುವಂತಿರುತ್ತದೆ. ಸಂಗೀತ ಚಿತ್ರ ಮೊದಲಾದ ಕಲೆಗಳಲ್ಲಿ ಅಭ್ಯಾಸವು ಕೂಡ ಕೊಂಚ ಮಟ್ಟಿಗೆ ಅವರಿಗೆ ಆಗಿರುತ್ತದೆ.

ಆ ಮೇಲೆ ಮಕ್ಕಳು ಎಂಟು ವರ್ಷದವುಗಳಾಗುವ ತನಕ ಬಾಲವನಗಳೆಂಬ ಕಿಂಡರಗಾರ್ಟನ ಶಾಲೆಗಳಲ್ಲಿ ಇರುವರು. ಮಕ್ಕಳ ಸ್ವಾಭಾವಿಕ ಪ್ರವೃತ್ತಿ ಮತ್ತು ಮನೋವೃತ್ತಿಗನುಗುಣವಾಗಿ ಅವುಗಳನ್ನೇ ತಿದ್ದಿ ಬೆಳೆಸುವಂತೆ ಈ ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡಲಾಗುತ್ತದೆ. ಕಲಾಭ್ಯಾಸವು ಅಲ್ಲಿ ಪ್ರಾಥಮಿಕ ಶಾಲೆಗಳಲ್ಲಿಯೂ ನಡೆದೇ ಇರುತ್ತದೆ. ಮಕ್ಕಳಿಗೆ ತಮ್ಮ ಕಲಾಚಾತುರ್ಯವನ್ನು ವೃದ್ಧಿಸಲಿಕ್ಕೆ ಇಲ್ಲಿ ಎಲ್ಲಾ ಅನುಕೂಲತೆಗಳು ಇರುತ್ತವೆಂಬುದು ಎಷ್ಟು ಆನಂದ ವಿಷಯವಾಗಿರುವುದು. ಶಾಲೆಯಲ್ಲಿ ಶಿಕ್ಷಣವನ್ನು ಮುಗಿಸಿದ ಬಳಿಕ ಈ ಮಕ್ಕಳು ತಮ್ಮ ಮನ ಮೆಚ್ಚುವ ಅಥವಾ ಸ್ವಾಭಾವಿಕ ಪ್ರವೃತ್ತಿಗೊಪ್ಪುವ ಯಾವದೇ ಕಲಾ ಶಾಲೆ ಅಥವಾ ಉದ್ಯೋಗ ಮಂದಿರವನ್ನು ಸೇರಿ ಅವರು ತಮ್ಮ ಶಾರೀರಿಕ ಮಾನಸಿಕ ಶಕ್ತಿ ಸಾಮರ್ಥ್ಯಗಳ ಸಂಪೂರ್ಣ ವಿಕಾಸ ಮಾಡಿಕೊಳ್ಳಬಹುದು. ಮಕ್ಕಳಿಗಾಗಿ ಇಷ್ಟೆಲ್ಲ ಅನುಕೂಲತೆಗಳು ಮತ್ತು ಸೌಲಭ್ಯಗಳು ಪ್ರಾಯಶಃ ಇನ್ನಾವ ದೇಶದಲ್ಲಿಯೂ ಇರುವದಿಲ್ಲ.

ಹಣವಿಲ್ಲದ ಕಾರಣದಿಂದ ಮಕ್ಕಳಿಗೆ ಶಿಕ್ಷಣವನ್ನು ಕೊಡಲಿಕ್ಕಾಗಲಿಲ್ಲ ಅಥವಾ ಅವರು ಶಿಕ್ಷಣವನ್ನು ಪಡೆಯದೆ ಹೋದರು ಎಂಬ ಮಾತನ್ನು ರಷ್ಯದಲ್ಲಿ ಎಲ್ಲಿಯೂ ಕೇಳಲಾರಿರಿ. ಅಥವಾ ಅಲ್ಲಿ ಯಾರೂ ಉದ್ಯೋಗ ಸಂಪಾದನೆ ಅಥವಾ ಒಂದು ತುತ್ತು ಅನ್ನ ಮತ್ತು ಒಂದು ಗೇಣು ಬಟ್ಟೆ ಕುಡಿಗಾಗಿ ಶಾಲೆಗಳಿಗೆ ಹೋಗಿ...

...ಗಿಸುತ್ತದೆ. ಅದಕ್ಕೆ ಮೊದಲು ಪ್ರಾರಂಭಿಕ ಶಾಲೆಗಳಲ್ಲಿ ಆದ ಅಭ್ಯಾಸ ಮತ್ತು ದೊರೆತ ಅನುಭವವು ಅವರನ್ನು ಈ ಕಾರ್ಯನಿರ್ವಾಹಕ್ಕೆ ಯೋಗ್ಯರನ್ನಾಗಿ ಮಾಡಿಯೇ ಇರುತ್ತದೆ. ಉಳಿದವರು ತಮ್ಮ ಮನದೊಲವು ಮತ್ತು ಶರೀರ ಬಲವು ಇದ್ದ ಹಾಗೆ ತಮ್ಮ ಕಲಾಭ್ಯಾಸ ಅಥವಾ ವಿದ್ಯಾಭ್ಯಾಸವನ್ನು ಐದು ವರ್ಷ ಮೂರು ವರ್ಷಗಳಂತೆ ಎಷ್ಟು ವರ್ಷಗಳ ತನಕವಾದರೂ ಸರಕಾರಿ ಸಹಾಯ ಪ್ರೋತ್ಸಾಹಗಳನ್ನು ಪಡೆದು ಮುಂದರಿಸಬಹುದಾಗಿದೆ. ಹೀಗೆ ಮಕ್ಕಳ...

(...ನೆಯ ಪುಟವನ್ನು ನೋಡುವುದು.)

ಹೊಟ್ಟೆಯ ಪೀಡೆಯಿಂದ ನಿದ್ರೆಸಲಾಗುತ್ತಿರಲಿಲ್ಲ

ನಿಮಗೆ ನಿದ್ರೆ ಸರಿಯಾಗಿ ಬರುವುದಿಲ್ಲವೋ, ಹಾಗಾದರೆ ಮಿಸೆಸ್ ಆರ್ ಬಿ ಯವರ ಅನುಭವದಿಂದ ನಿಮಗೆ ಉಪಕಾರವಾಗಬಹುದು. ವಿಶ್ರಾಮವು ಎನೆಂಬುದು ಅನೇಕ ವರ್ಷಗಳ ಸಮಯ, ಈ ಸ್ತ್ರೀಗೆ ತಿಳಿದ ಇರಲಿಲ್ಲ. ಹೊಟ್ಟೆ ಪೀಡೆಯಿಂದ ಪ್ರತಿರಾತ್ರಿ ಅತೆಯು ನಿದ್ರೆಯಿಲ್ಲದೆ ಕಳೆಯಬೇಕಾಗಿತ್ತು. ಮೆಕ್ಲೀನ್ ಬ್ರೇಂಡ್ ಹುಡಿಯನ್ನು ಸೇವಿಸುವ ತನಕ, ಅವಳಿಗೆ ಇತರ ಯಾವತ್ತರಿಂದಲೂ ಶಮನ ದೊರಕಲಿಲ್ಲ.-

ಮೆಕ್ಲೀನ್ ಬ್ರೇಂಡಿನ ಸೇವನೆಯ ನಂತರ ಯಾವ ತರದ ಮಾರ್ಪಟಾಯಿತೆಂದರೆ, ಪ್ರಸಿದ್ಧವಾದ ಈ ಔಷಧಿಯು ರೋಗದ ಮೂಲವನ್ನೆ ಹುಡುಕಿ ಅದರ ನಾಶಮಾಡಿತು.

ಹೊಟ್ಟೆಯು ಪಚನಿಸ ಉಂತವು ಅದರಿಂದ ಮಾಯವಾಯಿತು ಉದರವಾಯುವು ಮಾಯವಾಯಿತು. ದ್ರಾವಕಾಧಿಕ್ಯವು ಸರಿಯೊಂದಿತು. ಹೊಟ್ಟೆನೋವೆ ಮಾಯವಾಯಿತು. ಒಳ್ಳೆ ವಿಶ್ರಾಮಯುಕ್ತ ನಿದ್ರೆಯು ಬರಲಾರಂಭಿಸಿತು.

ನಿಮಗೂ ನಿದ್ರೆಯು ಸರಿಯಾಗಿ ಬರದಿದ್ದರೆ, ಅನಾವಶ್ಯಕವಾಗಿ ಖಾತ್ರಿಯಿಲ್ಲದ ಔಷ...

ಆಧುನಿಕ ರಶ್ಯದ ಮಕ್ಕಳ ಜೀವನ

(ಕಳೆದ ತಿಂಗಳಿಂದ ಮುಂದುವರಿಸಿದುದು)

ಸ್ವತಂತ್ರ ಜೀವನಕ್ಕೆ ಆಧುನಿಕ ರಶ್ಯದಲ್ಲಿ ಯಾವದೇ ತರಹದ ಅಡ್ಡಿ ತೊಂದರೆಗಳು ಇರುವದಿಲ್ಲ. ಮೇಲಾಗಿ ಸರಕಾರವೇ ಅಂಥ ಸ್ವತಂತ್ರ ಜೀವನವನ್ನು ನಡೆಸಿ ತಮ್ಮ ಸರ್ವತೋಮುಖವಾದ ಉನ್ನತಿ ಮಾಡಿಕೊಳ್ಳಲಿಕ್ಕೆ ಪ್ರತಿಯೊಂದು ರೀತಿಯಿಂಥ ಆ ಮಕ್ಕಳನ್ನು ಪ್ರೋತ್ಸಾಹಿಸುತ್ತದೆ.

ಇದರಿಂದ ಪರಿಣಾಮ ಏನಾಗಿದೆ ಎಂದು ಸ್ವಲ್ಪ ನೋಡಿರಿ. ಕ್ರಾಂತಿಯಾಗುವ ಮೊದಲು ನೇಕಡಾ ೭೮ರಷ್ಟು ಜನರು ನಿರಕ್ಷರರಾಗಿದ್ದರು. ಕಡ್ಡಾಯ ಶಿಕ್ಷಣ ಕ್ರಮವು ಜ್ಯಾರಿಯಲ್ಲಿದ್ದಿರಲಿಲ್ಲ. ಕೇವಲ ೭,೮೦೦,೦೦೦ ಮಕ್ಕಳು ಮಾತ್ರ ಆ ಕಾಲಕ್ಕೆ ಶಾಲೆಗಳಿಗೆ ಹೋಗುತಿದ್ದರು. ಈಗ ನಿರಕ್ಷರತೆ ಎಂಬುದು ರಶ್ಯದಲ್ಲಿ ಇಲ್ಲವೇ ಇಲ್ಲ. ೩೮,೦೦೦,೦೦೦ ಮಕ್ಕಳು ಶಾಲೆಗೆ ಹೋಗುತ್ತಾರೆ. ಈ ಶಾಲೆಗಳು ಕೇವಲ ಪೇಟೆಪಟ್ಟಣಗಳಲ್ಲಿ ಮಾತ್ರ ಇರುವದಲ್ಲ. ಹಳ್ಳಿಪಳ್ಳಿಗಳಲ್ಲಿಯೂ ಹರಡಿವೆ. 1987ನೆ ಒಂದು ವರ್ಷದಲ್ಲಿ ಮಾತ್ರ ಕಟ್ಟಿದ 4809 ಶಾಲೆಗಳಲ್ಲಿ 1500 ಪಟ್ಟಣಗಳಲ್ಲಿಯೂ 2800 ಹಳ್ಳಿಪಳ್ಳಿಗಳಲ್ಲಿಯೂ ಇದ್ದುವು. ಇವು 1 600000 ಮಕ್ಕಳಿಗೆ ಶಿಕ್ಷಣ ಕೊಡಲಿಕ್ಕೆ ಸಾಕಾಗಿದ್ದುವು.

ರಶ್ಯದ ಮಕ್ಕಳ ಶಿಕ್ಷಣ ಕ್ರಮದಲ್ಲಿನ ಒಂದು ದೊಡ್ಡ ವೈಶಿಷ್ಟ್ಯವೆಂದರೆ ನಾಟಕಾಲಯಗಳು ಮತ್ತು ಸಿನೇಮಾಗಳ ಉಪಯೋಗವಾಗಿದೆ. ಮೊಸ್ಕೋ ಒಂದು ನಗರದಲ್ಲಿ ಮಕ್ಕಳ ಮೂರು ನಾಟಕ ಶಾಲೆಗಳಿರುತ್ತವೆ. ಒಟ್ಟು ರಶ್ಯದಲ್ಲಿ 100 ಇವೆ. ಇವುಗಳಲ್ಲಿ ಮಕ್ಕಳಿಗಾಗಿಯೇ ಬರೆದ ನಾಟಕಗಳ ಅಭಿನಯ ಕಾರ್ಯ ನಡೆಯುತ್ತದೆ. ಮೊಸ್ಕೋದಲ್ಲಿ ಮಕ್ಕಳ ಸಿನೇಮಾ ಗೃಹಗಳೂ ಉಳಿದ ಕಡೆಗಳಲ್ಲಿ 150 ಸಿನೇಮಾ ಗೃಹಗಳೂ ಇರುತ್ತವೆ. 16 ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳು ಪ್ರಾಯಸ್ಥರ ಸಿನೇಮಾಗಳಿಗೆ ಹೋಗಬಾರದೆಂಬ ನಿರ್ಬಂಧವು ಇರುತ್ತದೆ.

ಮಕ್ಕಳ ಓದುಗಾರಿಕೆಗಾಗಿ ಪುಸ್ತಕಗಳನ್ನು ಬರೆದು ಅಚ್ಚುಹಾಕಿಸಿ ಪ್ರಕಟಿಸುವ ಕಾರ್ಯವನ್ನು ವ್ಯವಸ್ಥೆಗೊಳಿಸುವದಕ್ಕಾಗಿ ಸರಕಾರವು ಪ್ರತ್ಯೇಕವಾದ ಒಂದು ಇಲಾಖೆಯನ್ನು ಇಟ್ಟಿರುತ್ತದೆ. ಈ ಇಲಾಖೆಯ ಮೂಲಕ 1987 ಒಂದೇ ವರ್ಷದಲ್ಲಿ 12,000,000 ಪುಸ್ತಕ ಪ್ರತಿಗಳು ಮಾರಾಟವಾಗಿದ್ದುವು. ರಶ್ಯದಲ್ಲಿ ಒಟ್ಟು ಮಾರಾಟವಾದ ಎಲ್ಲಾ ಪುಸ್ತಕಗಳ ಸಂಖ್ಯೆಯ ಅರ್ಧಾಂಶಕ್ಕಿಂತ ಇದು ಹೆಚ್ಚು ಆಗಿತ್ತು. ಇದ ಕಾರಣ ಮಕ್ಕಳಲ್ಲಿ ಓದು ಹಲವಲವಿಕೆ ಎಷ್ಟು ಇರುತ್ತದೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಫೆಸಿಜಂ ಮತ್ತು ಸೋಶಿಯಾಲಿಜಂ ಈ ಎರಡು ತತ್ವಗಳೊಳಗೆ ಈಗ ಘನಘೋರ ಸಂಗ್ರಾಮವು ನಡೆದಿರುತ್ತದೆ. 'ಸಂಸ್ಕೃತಿ' ಎಂಬ ಶಬ್ದವನ್ನು ಕೇಳಿದೊಡನೆಯೇ ಫೆಸಿಜಂ ಕತ್ತಿ ಹಿಂದು ಮುಂದಿನ ಬೀಳಲಿಕ್ಕೆ ಬರುತ್ತದೆ. ಆದ್ದರಿಂದ ಅದು ಮಕ್ಕಳಿಗೆ ಸ್ವತಂತ್ರತಾ ಪೂರ್ವಕ ಏನನ್ನೂ ಓದಲಿಕ್ಕೆ ಬರೆಯಲಿಕ್ಕೆ ಕೊಡುವದಿಲ್ಲ. ಮಕ್ಕಳ ಶಿಕ್ಷಣವು ಎರಕ ಹಾಕುವ ಹಾಗೆ ತೋರಿಸಿಕೊಟ್ಟ ಮಾರ್ಗದಲ್ಲಿಯೇ ನಡೆಯಬೇಕೆಂದು ಅದು ಬೋಧಿಸುತ್ತದೆ. ಆದರೆ 'ಸೋಶಿಯಾಲಿಜಂ ಹಾಗಲ್ಲ. ಪುಸ್ತಕವಿಲ್ಲದೆ ಜ್ಞಾನವಿಲ್ಲ. ಜ್ಞಾನವಿಲ್ಲದೆ ಸಮಾಜ ವಾದವಿಲ್ಲ' ಎಂದು ಹೇಳುತ್ತದೆ. ಆದ್ದರಿಂದ ಅದು ಮಕ್ಕಳ ಶಿಕ್ಷಣ ವಿಷಯದಲ್ಲಿ ತುಂಬ ಉದಾರವಾಗಿದೆ. ಆಧುನಿಕ ರಶ್ಯದಲ್ಲಿ ಶಿಕ್ಷಣವಾದ ಈ ಮಕ್ಕಳು ಸಮಾಜವಾದದ ಆಧಾರಸ್ತಂಭರು ಮತ್ತು ಲೋಕಶಾಂತಿ, ಸಂಸ್ಕೃತಿ, ಪ್ರಜಾಸತ್ತೆಗಳ ಸಂದೇಶ ವಾಹಕರು ಆಗುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಅವರ ಮೂಲಕವಾಗಿಯೇ ಸಮಾಜವಾದದ ಕೀರ್ತಿಜಯಗಳು ಕಟ್ಟಿ ಇರುತ್ತವೆ. 'ನಾಲ್ಕು ವರ್ಷಗಳ ತನಕ ಮಕ್ಕಳಿಗೆ ಶಿಕ್ಷಣ ಕೊಡಲಿಕ್ಕೆ ನನಗೆ ಸಮಯ ಕೊಡಿರಿ. ಅವ್ವರೊಳಗಾಗಿ ಅವರ ಹೃದಯ ಪಟಲದಲ್ಲಿ ಬಿತ್ತಿದ ಬೀಜವನ್ನು ಬೇರು ಸಹಿತ ಕಿತ್ತು ಹಾಕುವದು ಯಾರಿಂಗೂ ಸಾಧ್ಯವಾಗದು' ಎಂದು ಲೆನಿನ ಹೇಳಿದ ಮಾತು ಪೂರ್ಣ ಸತ್ಯವಿರುತ್ತದೆ. ಇಂದಿನ ಮಕ್ಕಳೇ ನಾಳೆಯ ಜನಾಂಗವಾಗುವರು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ)

GONO KILLER ORIGINAL

ವ್ಯಾಧಿಗೆ ಸಿದ್ಧೌಷಧ

ಇಂದಿನ ಅದ್ಭುತ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ [illegible] ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. [illegible]

ನಕಲಿ ಔಷಧಿಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಬೆಲೆ 50 ಮಾತ್ರೆ [illegible]

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ ಎನ್ ಜಸಾನಿ, ವಿಠ್ಠಲಭಾಯಿ ಪಟೇಲ ರೋಡ ಮುಂಬಯಿ 4

Sole Manufacturer **Dr D N JASANI,** Vithalbhai Patel Road BOMBAY 4

ಜರ್ಮನಿಗೆ ಬೇಕಾದುದು ವಸಾಹತು ಅಲ್ಲ ಜಯಮಾಲೆ!

ಯಾವ ವಿಧೇಯ, ಶಿಕ್ಷಿತ, ಸುಸಜ್ಜಿತ, ಕಾದು ಪ್ರಾಣಕೊಡಲಿಕ್ಕೆ ಸಿದ್ಧನಾದ ಜರ್ಮನಿಯು 1914ರಲ್ಲಿ ಪ್ರಪಂಚವನ್ನು ಯುದ್ಧಕ್ಕೆ ಆಹ್ವಾನಿಸಿದ್ದಿತೋ, ಇಂದು ಅದೇ ಜರ್ಮನಿಯು ತನ್ನ ಬಗ್ಗಿದ ಮಸ್ತಕವನ್ನು ಪುನಃ ಲೋಕದ ಎದುರಿಗೆ ಎತ್ತಿ ಹಿಡಿದು, ಅದೇ ಪ್ರಪಂಚವನ್ನು ಪಂಥಕ್ಕೆ ಕರೆಯುತ್ತಾ ಇದೆ. ಆದರೆ ಅಂದಿನ ಜರ್ಮನಿಗೂ ಇಂದಿನ ಜರ್ಮನಿಗೂ ತುಸು ಅಂತರವು ಕಂಡು ಬರುತ್ತದೆ. ಅಂದಿನ ಜರ್ಮನಿ ಯುದ್ಧವನ್ನು ತಾನಾಗಿ ಆಹ್ವಾನಿಸಿರಲಿಲ್ಲ. ಇತರ ದೇಶಗಳು ಅದನ್ನು ಯುದ್ಧಕ್ಕೆ ಕರೆಯುವಂತೆ ಮಾಡಿದುವು. ಬೇರೆ ಉಪಾಯವಿಲ್ಲದೆ ಅದು ಇತರ ದೇಶಗಳ ಮೇಲೆ ಯುದ್ಧಕ್ಕೆ ಹೋಯಿತು. ಆದರೆ ಇಂದಿನ ಜರ್ಮನಿ ಹಾಗಲ್ಲ. ಈಗ ಲೋಕಕ್ಕೇ ಯುದ್ಧವು ಬೇಡವಾಗಿದೆ. ಯುದ್ಧವೆಂದರೆ ಲೋಕವು ಕನಸಿನಲ್ಲಿ ವ್ಯತೆಗೆಯುತ್ತದೆ. ಪರಂತು ಜರ್ಮನಿಯು ಮಾತ್ರ ಯುದ್ಧಾತುರದಿಂದ ಕುಣಿಯುತ್ತಿದೆ; ನಲಿಯುತ್ತಿದೆ, ಈಗ ಅದು ತಾನಾಗಿ ಪ್ರಪಂಚವನ್ನು ಯುದ್ಧಕ್ಕೆ ಕರೆಯುತ್ತದೆ. ಈಗ ಜರ್ಮನಿಯಲ್ಲಿ ಸೇಡುತೀರಿಸುವ ಪ್ರತೀಕಾರ ಬುದ್ಧಿಯು ಬಲವತ್ತರವಾಗಿದೆ. ಹಿಂದೆ ತನ್ನನ್ನು ಸೋಲಿಸಿ ಪಾದಾಕ್ರಾಂತ ಮಾಡಿದ ರಾಷ್ಟ್ರಗಳ ಮೇಲೆ ದ್ವೇಷದಿಂದ ಉರಿಕಾರುತ್ತದೆ. ಈಗ ಜರ್ಮನಿ ಮೊದಲಿಗಿಂತಲೂ ಹೆಚ್ಚು ಭಯಂಕರ, ಹೆಚ್ಚು ಕ್ರೂರ, ಹೆಚ್ಚು ದುಷ್ಟವಾಗಿದೆ. ಅದು ತನ್ನ ಮಾನರಕ್ಷಣೆಗಾಗಿ ಅಲ್ಲ; ಪರಂತು ತನ್ನ ಕಳೆದು ಹೋದ ಮಾನವನ್ನು ಪುನಃ ಸಂಪಾದಿಸಲಿಕ್ಕೆ, ಲೋಕವನ್ನು ಯುದ್ಧಕ್ಕೆ ಕರೆಯುತ್ತಿದೆ. ಅದ್ದರಿಂದಲೇ ಜರ್ಮನಿ ಅಂದಾಗ ಪ್ರಪಂಚವು ಬೆಚ್ಚಿಬೀಳುತ್ತದೆ,

ಜರ್ಮನಿಗೆ ವಸಾಹತುಬೇಡ.

ಜರ್ಮನಿಗೆ ಬೇಕಾದುದು ಏನು? ಜರ್ಮನಿ ಗುಡುಗುಡಿಸಿ ಪ್ರಪಂಚವನ್ನು ಬೆದರಿಸುವದೇಕೆ? ಸಾಮ್ರಾಜ್ಯ ತೃಷ್ಣೆಯು ಅದಕ್ಕಿದೆಯೆ? ಪೂರ್ವದ ವಸಾಹತುಗಳನ್ನು ಪುನಃ ಸಂಪಾದಿಸಬೇಕೆಂಬ ಅಭಿಲಾಷೆಯು ಅದಕ್ಕಿರುವದೆ? ಅಲ್ಲ; ಅದಕ್ಕೆ ಇವುಗಳಿಗಿಂತಲೂ ಹೆಚ್ಚಿನದಾದ, ಇವುಗಳಿಗಿಂತಲೂ ಅಮೂಲ್ಯವಾದ ಇನ್ನೊಂದು ವಸ್ತುವು ಬೇಕು. ಅದೇ ಅದರ ಕಳೆದು ಹೋದ ಮಾನ: ಕೊರಳಿನಿಂದ ಬಿದ್ದುಹೋದ ಜಯಮಾಲೆಯು ಅದಕ್ಕೇ ಬೇಕು. ತನಗಾಗಿ ಬೇರೆಯೇ ಎಣ್ಣೆ ಬಾವಿಗಳು ಬೇಕು, ಕೈಗಾರಿಕೆಯ ಹಸಿ ಪದಾರ್ಥಗಳು ಬೇಕು ಎಂದು ಜರ್ಮನಿ ಹೇಳುವದಿಲ್ಲ. ಅಥವಾ ನಾಲ್ಕು ವರ್ಷಗಳ ತನಕ ಒಂದೇ ಒಂದು ಜರ್ಮನಿ, ಇಡೀ ಪ್ರಪಂಚದೊಂದಿಗೆ ಕಾದಿತು; ಅದರಂಥ ವೀರ, ಸಾಹಸಿ ರಾಷ್ಟ್ರವು ಬೇರೆ ಯಾವುದಿದೆ? ಎಂದು ತನ್ನ ಪ್ರಾಚೀನ ಗೌರವವನ್ನು ಪ್ರಪಂಚವು ಹಾಡಬೇಕೆಂದಾಗಲೀ, ಅದರ ವಿಜ್ಞಾನ ಉತ್ಕರ್ಷವನ್ನು ಮೆಚ್ಚಿ ಪ್ರಪಂಚವು ತಲೆದೂಗಬೇಕೆಂದಾಗಲೀ ಜರ್ಮನಿಯು ಇಚ್ಛಿಸುವದಿಲ್ಲ. ಅಂಥ ಅಲ್ಪ ವಿಷಯಗಳಲ್ಲಿ ತೃಪ್ತಿಯಾಗಲೀ, ಕೀರ್ತಿಗಾನದಲ್ಲಿ ಸಮಾಧಾನವಾಗಲೀ ಜರ್ಮನಿಗೆ ಇರುವದಿಲ್ಲ. ಕೇವಲ ತಾನು ಮಾನವನ್ನು ಸಂಪಾದಿಸಬೇಕು, ಅದು ಕೂಡ ಶಕ್ತಿಯ ಬಲದಿಂದಲೇ ತನ್ನ ಕಳೆದು ಹೋದ ಮಾನವನ್ನು ಸಂಪಾದಿಸಬೇಕೆಂಬ ಹಿರಿದಾಸೆಯು ಜರ್ಮನಿಗೆ ಇರುವದು.

ಜರ್ಮನಿಯ ಯುದ್ಧಾತುರ— ಅದೆಷ್ಟು?

ಜರ್ಮನಿಗೆ ಬೇಕಾದುದನ್ನು ಪ್ರಪಂಚವು ರಾಜಿಯಿಂದಲೇ ಕೊಟ್ಟಿತೆನ್ನೋಣ. ಯುದ್ಧವಿಲ್ಲದೆ ಪ್ರಪಂಚವು ಜರ್ಮನಿಯ ಆಸೆ ಪ್ರತ್ಯಾಸೆಗಳನ್ನು ಪೂರೈಸಿ ಕೊಟ್ಟಿತೆನ್ನೋಣ. ಆದರೆ ಜರ್ಮನಿಗೆ ನಿಜವಾಗಿ ಅದು ಯಾವುದೂ ಬೇಕಾಗಿಲ್ಲ. ಸಂಧಿ, ಸಮಾಧಾನ, ರಾಜಿ ಶಾಂತಿ ಎಂದರೆ ಜರ್ಮನಿ ಮೂಗು ಮುರಿದುಕೊಳ್ಳುತ್ತದೆ. ಅದಕ್ಕೆ ಆ ಶಬ್ದಗಳನ್ನು ಕೇಳಿದ ಮಾತ್ರಕ್ಕೇ ಅಸಹ್ಯವಾಗುತ್ತದೆ. ತನಗೆ ಬೇಕಾದುದು ಏನುಂಟೋ, ಅದನ್ನು ರಾಜಿಯಿಂದಲ್ಲ; ಪರಂತು ಯುದ್ಧ ಮಾಡಿ, ಯುದ್ಧದಲ್ಲಿ ತಾನು ಗೆದ್ದು, ಇತರರನ್ನು ಸೋಲಿಸಿ, ಆ ಇಚ್ಛಿತ ವಸ್ತುವನ್ನು ಸಂಪಾದಿಸಬೇಕೆಂಬ ಮಹತ್ವಾಕಾಂಕ್ಷೆಯು ಜರ್ಮನಿಗೆ ಇರುವದು. ಜರ್ಮನಿಗೆ ಡಾಂಜಿಗ್ ಕೊಡಿರಿ, ಅದು ಪೋಲೆಂಡನ್ನು ಕೇಳುವದು. ಅದಕ್ಕೆ ಹೋಲ್‌ಸ್ಟೀನನ್ನು ಕೊಡಿರಿ; ಅದು ಡೆನ್ಮಾರ್ಕನ್ನು ಕೇಳುವದು. ಹೀಗೆ ಜರ್ಮನಿಯು ಕೇಳುತ್ತಿರುವದಕ್ಕೆ ಮಿತಿ ಎಂಬುದಿಲ್ಲ. ಜರ್ಮನಿಗೆ ಜಯಮಾಲೆಯು

ಜೆಕೊಸ್ಲೊವಾಕಿಯದ ಅಧ್ಯಕ್ಷರಾದ ಡಾ। ಬೆನ್ನೆಸ್ ಇವರು

ಬೇಕೆಂದಾದರೆ, ಒಂದಲ್ಲ ಒಂದು ದಿನ ಯುದ್ಧವಾಗಲೇ ಬೇಕು; ಅಂತದ್ದೊಂದು ಯುದ್ಧವು ಆಗಿಯೇ ಆಗುವದಕ್ಕೋಸ್ಕರ ಜರ್ಮನಿಯು ಒಂದಾದಮೇಲೆ ಒಂದರಂತೆ, ಪ್ರತಿಯೊಂದನ್ನು ಕೇಳುತ್ತಿರಲೇ ಬೇಕು. ಹಿಟ್ಲರನು ಜರ್ಮನಿಯಲ್ಲಿ ಮಾಡುವದೇ ಅದನ್ನೀಗ! ವರ್ಸೆಲಿ ಸಂಧಿಪತ್ರವು ಈಗ ಕಸದ ಬುಟ್ಟಿಯನ್ನು ಸೇರಿದೆ. ಜರ್ಮನಿಯು ತನಗೆ ಬೇಕಾದಷ್ಟು ಅಲ್ಲ— ಸೈನ್ಯ ಸರಂಜಾಮುಗಳನ್ನು ಒದಗಿಸಿಕೊಳ್ಳುತ್ತಿದೆ. ಆ ದಿನ ರ್‍ಹೈನ್‌ಲೇಂಡನ್ನು ವಶಪಡಿಸಿಯಾಯಿತು. ಮೊನ್ನೆ ಆಸ್ಟ್ರಿಯವನ್ನು ಬಗಲಿಗೆ ಹಾಕಿಕೊಂಡಾಯಿತು. ಈಗ ಜೆಕೊಸ್ಲಾವೇಕಿಯದ ಮೇಲೆ, ನಾಳೆ ರಷ್ಯದ ಮೇಲೆ, ನಾಡದು ಫ್ರಾನ್ಸ್, ಇಂಗ್ಲಂಡ್, ಇಟಲಿ, ಸ್ಪೈನುಗಳ ಮೇಲೆ ಜರ್ಮನಿಯ ವಕ್ರದೃಷ್ಟಿ ತಪ್ಪಿದ್ದೇ ಅಲ್ಲ. ಅಂದಮೇಲೆ—ಮುಂದೊಂದು ಪ್ರಪಂಚ ಯುದ್ಧವು ಅನಿವಾರ್ಯವಾಗಿರುವದು!

ವರ್ಸೆಲಿಸಿನ ಅವಮಾನ.

ಜರ್ಮನಿಗೆ ವರ್ಸೆಲಿಸಿನಲ್ಲಿ ಆದ ಅವಮಾನವನ್ನು ಅದು ಈ ವರೆಗೆ ಮರೆತಿಲ್ಲ. ಮುಂದೆ ಯಾವಾಗಲಾದರೂ ಮರೆಯುವ ಹಾಗೆ ಕೂಡ ಇಲ್ಲ. ಬಲಾತ್ಕಾರದಿಂದೆಂಬಂತೆ ಮಿತ್ರರಾಷ್ಟ್ರಗಳು ವರ್ಸೇಲಿ ಸಂಧಿ ಪತ್ರದ ಮೇಲೆ ಜರ್ಮನಿಯ ಹಸ್ತಾಕ್ಷರವನ್ನು ಪಡೆದುವು. ಅದನ್ನು ನಿರಸ್ತ್ರವಾಗಿ ಮಾಡಿದುವು. ತಾನು ಯುದ್ಧದಲ್ಲಿ ಮೊದಲು ಗೆದ್ದ ಪ್ರದೇಶಗಳನ್ನು ತಾನೇ ಇಟ್ಟುಕೊಳ್ಳಬೇಕೆಂಬ ಮಹದಾಸೆಯು ಜರ್ಮನಿಗೆ ಬಹಳವಿದ್ದಿತು. ಆದರೆ ವರ್ಸೇಲಿ ಸಂಧಿಪತ್ರವು ಅದರ ಆಸೆಗಳನ್ನೆಲ್ಲ ಮಣ್ಣುಪಾಲು ಮಾಡಿತು. ಇದಕ್ಕೆ ಮುಖ್ಯ ಕಾರಣ ಫ್ರಾನ್ಸ್! ಫ್ರಾನ್ಸನ್ನು ಗೆದ್ದು ಮುಯ್ಯಿಗೆ ಮುಯ್ಯಿ ತೀರಿಸಿದರೆ ಮಾತ್ರ ಜರ್ಮನಿಯ ಹೋದ ಮಾನವು ಪುನಃ ಅದಕ್ಕೆ ಬರುವದು!! ಜರ್ಮನಿಯ ಎರಡು ವರ್ಷದ ಮಗುವಿನಿಂದಾರಂಭಿಸಿ 100 ವರ್ಷದ ಮುದುಕನ ವರೆಗೆ ಪ್ರತಿಯೊಬ್ಬನು ಆಲೋಚಿಸುವುದು ಇದನ್ನೆ! ಕೆಲಸ ಮಾಡುವದು ಇದಕ್ಕಾಗಿಯೆ!

ಹಿಟ್ಲರ ಅಂದರೆ ಜರ್ಮನಿ, ಹಿಟ್ಲರನಿಗೂ ಜರ್ಮನಿಗೂ ಸಂಬಂಧವಿಲ್ಲವೆನ್ನುವದು ಮೂರ್ಖತನ. ಹಿಟ್ಲರನು ಜರ್ಮನಿಯ ಪ್ರಾಣ; ಅದರ ಆಸೆ ಪ್ರತ್ಯಾಸೆ, ಭಾವವಿಚಾರಗಳ ಪ್ರತಿಮೂರ್ತಿ! ಹಿಟ್ಲರನಿದ್ದರೆ ಜರ್ಮನಿ ಇದೆ. ಜರ್ಮನಿಯ ಜನಾಂಗವಿದೆ. ಅವನಿಲ್ಲದಿದ್ದರೆ, ಏನೂ ಇಲ್ಲ. ಜರ್ಮನಿಯ ಅಸ್ತಿತ್ವ ಕೂಡ ಉಳಿಯುವದಿಲ್ಲ ಎಂದು ಜರ್ಮನರು ಚೆನ್ನಾಗಿ ಮನಗಂಡಿದ್ದಾರೆ. ಹಿಟ್ಲರನು ಏನು ಆಡುತ್ತಾನೋ, ಏನು ಮಾಡುತ್ತಾನೋ, ಅವೆಲ್ಲ ಜರ್ಮನಿಯ ವಿಚಾರ ಕೃತಿಗಳೇ ಆಗಿರುವವು. ಹಿಟ್ಲರನ ನಡೆನುಡಿ, ರೀತಿನೀತಿಗಳ ಕುರಿತು ಅತೃಪ್ತರಾಗಿರುವವರು ಜರ್ಮನಿಯಲ್ಲಿ ಬಹಳ ಮಂದಿ ಇರಲಿಕ್ಕೆ ಸಾಕು. ಆದರೆ ಅವರ ಸರಕಾರವನ್ನು ಕಿತ್ತೊಗೆದು ಬೇರೊಂದನ್ನು ಅದರ ಸ್ಥಾನದಲ್ಲಿ ಸ್ಥಾಪಿಸಬೇಕೆನ್ನುವ ಧೈರ್ಯ ಸಾಹಸಗಳು ಒಬ್ಬರಿಗೂ ಇಲ್ಲ. ಜರ್ಮನಿಯಲ್ಲಿ ಹಿಟ್ಲರನ ನೀತಿಯಿಂದ ಜೀನಸುಗಳ ಧಾರಣೆ ಏರಿದೆ. ಬೆಣ್ಣೆ ರೊಟ್ಟಿಗಳು ಸಾಕಾದಷ್ಟು ದೊರೆಯುವದಿಲ್ಲ; ಆದಾಯ ಸಂಪಾದನೆ ಕಡಿಮೆಯಾಗಿದೆ. ನಾಗರಿಕ ಹಕ್ಕು ಬಾಧ್ಯತೆಗಳು ಇರುವದಿಲ್ಲ. ಎಲ್ಲಾ ನಿಜ. ಪರಂತು ಅಲ್ಲಿ ಕ್ರಾಂತಿಯಾಗಬೇಕೆಂದಾಗಲೀ, ಹಿಟ್ಲರನನ್ನು ನೆಲಕ್ಕುರುಳಿಸಬೇಕೆಂದಾಗಲೀ ಒಬ್ಬನು ಕೂಡ ಹೇಳುವದಿಲ್ಲ. ಕಾರಣ, ಜರ್ಮನಿಗೆ ಹಿಟ್ಲರನಲ್ಲದೆ ಗತ್ಯಂತರವೇ ಇಲ್ಲ. ಹಿಟ್ಲರನು ಹೋದರೆ ಜರ್ಮನಿ ಕೂಡ ಪತನ ಹೊಂದಿಯೇ ಹೋಗುವದೆಂದು ಪ್ರತಿಯೊಬ್ಬರೂ ತಿಳಿದಿದ್ದಾರೆ. ಇಂಥ ಸಂದರ್ಭದಲ್ಲಿ ಯಾವ ಜರ್ಮನನು ತಾನೆ ಹಿಟ್ಲರನ ಅಹಿತವನ್ನು ಇಚ್ಛಿಸಬಹುದು?

ಜರ್ಮನರ ಆಜ್ಞಾಧಾರಕತ್ವ.

ಜರ್ಮನರಿಗೆ ಸ್ವಾತಂತ್ರ್ಯದ ಮೇಲಿರುವದಕ್ಕಿಂತಲೂ ಹೆಚ್ಚಿನ ಅಭಿಮಾನವು ಶಿಸ್ತು ವ್ಯವಸ್ಥೆಗಳ ಮೇಲೆ ಇರುವದು. ಶಿಸ್ತು ವ್ಯವಸ್ಥೆಗಳಿಗಾಗಿ ಜರ್ಮನರು ಪ್ರಸಿದ್ಧರಾದಷ್ಟು ಜಗತ್ತಿನ ಇತರ ಯಾವ ಭಾಗದ ಜನರೂ ಪ್ರಸಿದ್ಧರಾಗಿರುವದಿಲ್ಲ. ಅವರು ತಮ್ಮ ಈ ಪ್ರಸಿದ್ಧಿಗೆ ಕೊರತೆ ಬಾರದ ಹಾಗೆ ಈಗಲೂ ಎಚ್ಚರಿಕೆಯಿಂದ ನಡಕೊಳ್ಳುತ್ತಾರೆ. ಆಜ್ಞಾಧಾರಕತ್ವ ಎಂಬುದನ್ನು ಜರ್ಮನರು ವೇದಮಂತ್ರದಂತೆ ಪೂಜಿಸುವರು, ಜಪಿಸುವರು. ತಮ್ಮ ಮುಂದಾಳುಗಳಲ್ಲಿ ಅವರು ಒಂದು ರೀತಿಯಿಂದ ಅಂಧ ವಿಶ್ವಾಸ, ಕುರುಡು ಭಕ್ತಿಯನ್ನೇ ಇಡುತ್ತಾರೆನ್ನಬಹುದು. ವಿಚಾರಿಗಳು ಈ ಗುಣವನ್ನು ತೆಗಳಬಹುದಾದರೂ, ಒಂದೊಂದು ಪರಿಸ್ಥಿತಿಯಲ್ಲಿ ಈ ಗುಣಗಳು ಅದ್ಭುತಕಾರ್ಯಗಳನ್ನು ಸಾಧಿಸಬಿಡುತ್ತವೆ.

ಮೊದಲಿಂದಲೂ ಜರ್ಮನರು ಸೈನಿಕ ಕ್ರಮದಲ್ಲಿ ನಡಕೊಳ್ಳಲಿಕ್ಕೆ ಆಸೆಯನ್ನು ತೋರಿಸುವವರಾಗಿದ್ದರು. ಸೈನಿಕರಂತೆಯೇ ಜೀವಿಸುವದರಲ್ಲಿ ಅವರಿಗೆ ಸ್ವರ್ಗೀಯ ಆನಂದವು ಪ್ರಾಪ್ತವಾಗುತಿತ್ತು. ದೇಶದ ಆಡಳಿತದ ಮೇಲೆ ಬಹುಕಾಲದಿಂದ ಸೈನಿಕರ ಪ್ರಭಾವವೇ ವಿಶೇಷವಾಗಿ ಇರುತಿತ್ತು. ಯಾರೂ ಅದನ್ನು ವಿರೋಧಿಸಿರಲಿಲ್ಲ. ಆದರೆ ಮಹಾಯುದ್ಧವು ಮುಗಿದ 14 ವರ್ಷಗಳ ತನಕ ಜರ್ಮನರ ಜೀವನಕ್ರಮದಲ್ಲಿ ಅವರು ಸ್ವಭಾವಕ್ಕೆ ಪ್ರತಿಕೂಲವಾದ ಬದಲಾವಣೆಗಳಾಗ ಬೇಕಾಯಿತು.

ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ.—ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ. ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ. ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣಭೇದಿಗಳು, ಕೈಕಾಲುಗಳು ಸಣ್ಣವಾಗಿ ಡೊಣ, ಇವುಗಳಿಂದ ನರಳಿ, ಬಳಲಿಬತ್ತೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ನೊಯೋ ಎಂದಿರುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ.

ಎಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

ಬಾಲಭಾಸ್ಕರ

ಆಯುರ್ವೇದಾಶ್ರಮಂ,
[illegible] ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.

ದ. ಕ. ಜಿಲ್ಲೆಯ ಏಜಂಟರು:—
ಪೋಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

ಎಷ್ಟು ದಿನ ಹೀಗೆ ಅವರು ಇದ್ದುಕೊಂಡಾರು? ಹಿಟ್ಲರನು ಅವರ ಮೇಲೆ ಜಾದೂ ಕಡ್ಡಿಯನ್ನೇ ಬೀಸಿಬಿಟ್ಟನು. ಅವರ ಸಹಜಗುಣವು ಹೇಗಿತ್ತೋ ಹಾಗೆಯೇ ಅವರ ಜೀವನದ ಅನುಕೂಲತೆಗಳನ್ನು ಒದಗಿಸಿಕೊಟ್ಟನು. ಮೊದಲಿನ ಶಿಸ್ತು ವ್ಯವಸ್ಥಾಪೂರ್ಣವಾದ ಜೀವನವೇ ಬಳಕೆಗೆ ಬಂದಿತು. ಪ್ರತಿಯೊಬ್ಬನು ಸೈನಿಕನಂತೆ, ಯೋಧನಂತೆ ಬದುಕಿ ಬಾಳಬಹುದಾಯಿತು. ಶಕ್ತಿಯು ಜರ್ಮನರ ಆತ್ಮವಾಗಿತ್ತು. ಸಂಧಿಯಿಂದ ಹೋದ ಆತ್ಮವು ಹಿಟ್ಲರನಿಂದ ಅವರಿಗೆ ಮರಳಿ ದೊರೆಯಿತು.

ಜರ್ಮನರ ಗುಣಸ್ವಭಾವಗಳು ಎಂಥವು? ಅವರಿಗೆ ಬೇಕಾದುದು ಏನು? ಎಂಬುದನ್ನು ಅಮೇರಿಕವೂ ಇಂಗ್ಲಂಡೂ ತಿಳಕೊಂಡರೆ ಜರ್ಮನಿಯು ತಂದೊಡ್ಡುವ ಗಂಡಾಂತರಗಳಿಂದ ಪ್ರಪಂಚವನ್ನು [illegible]ವಾಗಿದೆ. ಜರ್ಮನಿಗೇ ಬೇಕಾಗಿರುವ ಯುದ್ಧಮೂಲಕ ಜಯಮಾಲಿಕೆ ಇಂಗ್ಲಂಡೂ ಅಮೇರಿಕವೂ ಒಟ್ಟಾಗಿ, ಒಕ್ಕಟ್ಟಾಗಿ ಜರ್ಮನಿಯ ಯುದ್ಧಾತುರವನ್ನು ವಿರೋಧಿಸುವದೆಂದು ಅದಕ್ಕೆ ಗೊತ್ತಾದರೆ, ಆಗ ಜರ್ಮನಿಯ ಮೇಲೆ ಒಳ್ಳೇ ಪರಿಣಾಮವಾಗುವದು. ಆಗ ಅದು ಹಿಂದುಮುಂದು ಆಲೋಚಿಸಿಯೇ ಯುದ್ಧಕ್ಕೆ ಪ್ರವೇಶಿಸೀತು. ಅಲ್ಲವಾದರೆ—ಪ್ರತಿಯೊಂದು ರಾಷ್ಟ್ರವು ಕೇವಲ ತನ್ನ ಸ್ವಾರ್ಥವನ್ನೇ ನೋಡಿಕೊಳ್ಳುವದಾದರೆ, ಜರ್ಮನಿಯು ಕ್ರಮಕ್ರಮವಾಗಿ ಒಬ್ಬೊಬ್ಬರ ಮೇಲೆಯೇ ಕೈಮಾಡುತ್ತ ಬಂದು, ಇಡೀ ಪ್ರಪಂಚವನ್ನು ಒಂದು ದಿನ ಪಾದಾಕ್ರಾಂತ ಮಾಡದೆ ಇರಲಾರದು. ಇಂಗ್ಲಂಡು ಅಮೇರಿಕಗಳು ಇದನ್ನು ಚೆನ್ನಾಗಿ ಆಲೋಚಿಸಿಕೊಳ್ಳಲಿ.

—'ಅಟ್ಲಾಂಟಿಕ ಮಂತ್ಲಿ'ಯಲ್ಲಿ ಎಮಿಲ್ ಲುಡ್ವಿಗ್ ಲೇಖದ ಭಾಷಾಂತರ.

THE
Canara Banking Corporation, Udipi, Ltd.
INCORPORATED IN BRITISH INDIA.
ESTD 1906

SEASON DEPOSITS
of
Rs. 500/- & above
Are Accepted
at
3½% p. a.
at
All Our Branches

ಅರಬಸ್ಥಾನದ ಕರಾವಳಿಯಲ್ಲಿ ಯುದ್ಧಸನ್ನಾಹ! ಸ್ಪೈಯಿನಿನಲ್ಲಿ ದಿಗ್ವಿಜಯ!

ಯೆಮೆನ್ ಪ್ರಾಂತ್ಯದ ಅರಬರು ಬ್ರಿಟಿಷರಿಂದ ಹತ್ಯಾರುಗಳನ್ನು ಕೊಂಡುಕೊಳ್ಳುವರು

★ ಒರಿಸ್ಸಾದಲ್ಲಿ ಬಿಕ್ಕಟ್ಟು ಉಂಟಾಗುವುದೆ? ★

ಸ್ವದೇಶಾಭಿಮಾನಿ

ಒರಿಸ್ಸ ಪ್ರಾಂತ್ಯದಲ್ಲಿ ಬಿಕ್ಕಟ್ಟು ಅಸಮಾಧಾನ

ಕಾಯಂ ಗವರ್ನರರು ರಜೇಮೇಲೆ ಹೋಗುವ ಸಂದರ್ಭಗಳು ಈಗ ತುಂಬಾ ಇವೆ ದೇವರ ದಯೆಯಿಂದ ಈಗಲೇ ಮೂರು ಸಂಸ್ಥಾನಗಳ ಗವರ್ನರರಿಗೆ ರಜಾ ಕೊಡಲಾಗುವಂತೆ ಏರ್ಪಾಡಾಗಿದ್ದು, ಇತರ ಐ ಸಿ ಎಸ್ ಅಧಿಕಾರಿಗಳನ್ನು ಆಕ್ಟಿಂಗ್ ಗವರ್ನರರ ... ಪದವಿಗೆ ನೇಮಿಸಲಾಗಿದೆ ಈ ಅಧಿಕಾರಿಗಳು ಆಯಾ ಪ್ರಾಂತ್ಯದ ಮಂತ್ರಿಮಂಡಲಗಳ ಮೇಲೆ ಗವರ್ನರರಾಗುವ ಕಾರಣ, ಅಂತಹರಲ್ಲಿ ಮಂತ್ರಿಗಳಿಗೆ ಭಕ್ತಿ ಶ್ರದ್ಧೆಗಳಿಲ್ಲದೆ ಗವರ್ನರ ಪದವಿಗೂ, ಮಂತ್ರಿಮಂಡಲಕ್ಕೂ ಕುಂದುಂಟಾಗುವ ಬೆದರಿಕೆಯಿದೆ ಈ ವಿಷಯವಾಗಿ ಇತರ ಕಡೆಗಳಲ್ಲಿ ಬರೆದುದನ್ನು ನೋಡುವುದು ಸಂಸ್ಥಾನದಲ್ಲಿ ಮಂತ್ರಿಗಳ ಕೈಕೆಳಗೆ ಕೆಲಸ ಮಾಡುತ್ತಿರತಕ್ಕವರನ್ನು ಎತ್ತಿ, ಮಂತ್ರಿಮಂಡಲಗಳ ಮೇಲೆ ಅವರನ್ನು ಕುಳ್ಳಿರಿಸಿದರೆ, ಇತ್ತಂಡಗಳಿಗೂ ಗೌರವವುಂಟೆ? ಒಳಕ್ಲೇಶಗಳು ಇದ್ದಿದ್ದಲ್ಲಿ, ಅವೀಗ ಹೇಗೆ ನಿವಾರಣೆ ಹೊಂದಬಹುದು? ಹಿಂದೆ ಕೆಳ ಅಧಿಕಾರಿಯಾಗಿದ್ದು ಕೆಲ ದಿನ ಗವರ್ನರನಾಗಿ, ಮುಂದೆ ಪುನಃ ಕೆಳ ಅಧಿಕಾರಿಯಾಗಬಹುದಾದ ಇಂತಹ ಅಧಿಕಾರಿಯನ್ನು ಮಂತ್ರಿಗಳು ಏನೆಂದು ಕಾಣಬೇಕು? ಆ ಅಧಿಕಾರಿಯೂ ಹೀಗೆ ಹಿಂದೆಮುಂದೆ ನೋಡಿ ವರ್ತಿಸಬೇಕಾದೀತು? ತನ್ನ ಹುದ್ದೆಗೆ ಸರಿಯಾದ ರೀತಿಯಲ್ಲಿ ತನ್ನ ಮೇಲಾಧಿಕಾರಿಗಳೊಡನೆಯೂ, ತನ್ನ ಕೆಳಗಿರುವ ಮಂತ್ರಿಗಳೊಡನೆಯೂ ಅವನು ಹೇಗೆ ನಡೆದುಕೊಳ್ಳಬಹುದು? ಕಾಯಂ ಸಿವಿಲ್ ಸರ್ವಿಸ್ಸಿಗೆ ಸೇರಿದಾತನಿಗೆ ಇದು ಒಂದು ಬಗೆಯ ಬಿಕ್ಕಟ್ಟಾಗದೆ? ಹಾಗೆಯೆ ಸದ್ಯದ ಮಂತ್ರಿಗಳಿಗೂ ಇದು ಅಡಚಣಿಯಲ್ಲವೆ? ಹೆಚ್ಚೇಕೆ? ಸಿವಿಲ್ ಸರ್ವಿಸ್ಸಿಗೇ ಸಂಬಂಧಪಟ್ಟ ತನ್ನ ಸೋದರ ಅಧಿಕಾರಿಯ ವಿಚಾರದಲ್ಲಿ ಅವನು ಮಂತ್ರಿಮಂಡಲದೊಡನೆ ಹೇಗೆ ತೀರ್ಮಾನ ಮಾಡುವನು? ಸೋದರ ಅಧಿಕಾರಿಯೂ ಇವನ ಕಡೆಗೆ ಹೇಗೆ ನಡೆದುಕೊಳ್ಳುವರು? ಎಂದಿನಂತೆ, ಪ್ರಾಂತ್ಯದ ಪ್ರಾಮುಖ್ಯ ನ್ಯಾಯಸ್ಥಾನದ ಪ್ರಾಮುಖ್ಯ ನ್ಯಾಯಾಧೀಶರನ್ನೆ ನೇಮಿಸುತ್ತ, ಅವರು ಆಕ್ಟಿಂಗ್ ಗವರ್ನರರಾಗುವಂತೆ ಮಾಡಿದರೆ ಯಾವ ರಗಳೆಗೂ ಸಂದರ್ಭವುಂಟಾಗಲಾರದು ಇದನ್ನೀಗ ಕೊಂಗ್ರೆಸ್ ಮಂತ್ರಿಮಂಡಲವೂ ಕಾರ್ಯಕಾರೀಮಂಡಲವೂ ಜಗಳದ ಸೂಚಿಸಿಯದೆ

ಆದರೆ, ಎಷ್ಟೋ ಪ್ರಾಂತ್ಯಗಳಲ್ಲಿ ಹೈಕೋರ್ಟುಗಳೇ ಇಲ್ಲ! ಹಾಗಿದ್ದಲ್ಲಿ ಕೌನ್ಸಿಲಿನ ಅಧ್ಯಕ್ಷರನ್ನಾಗಲಿ, ಎಸೆಂಬ್ಲಿಯ ಸ್ಪೀಕರರನ್ನಾಗಲಿ ಆರಿಸಿದಲ್ಲಿ ತೊಂದರೆ ಇರದು ಅವರು ಚುನಾಯಿತ ಮೆಂಬರರು ಯಾವ ಪಕ್ಷಕ್ಕೂ ಸೇರದ ಅಧ್ಯಕ್ಷರು ಅಂತೂ ಖಂಡಿತವಾದ ನಿರ್ಣಯವಾಗಬೇಕಾಗಿದೆ ಇಲ್ಲದಿದ್ದಲ್ಲಿ ಒರಿಸ್ಸಾ ಮಂತ್ರಿಗಳು ರಾಜೀನಾಮೆ ಕೊಡಬಹುದು

ಹಿಂದೂ ಮುಸ್ಲಿಂ ಸಮಸ್ಯೆ

"ಶ್ರೀ। ಜಿನ್ನಾರವರು ಮುಸ್ಲಿಂ ಲೀಗಿನ ಪರವಾಗಿ ಕೇಳಿಕೆಯೊಂದನ್ನು ಕೊಂಗ್ರೆಸಿಗೆ ಬರೆದಿರುವರೆಂದೂ, ಅದನ್ನು ಈಗ ಕೊಂಗ್ರೆಸ್ ಕಾರ್ಯಕಾರೀ ಮಂಡಲವು ವಿಮರ್ಶಿಸುತ್ತಿರುವರೆಂದೂ ತಿಳಿದು ಬಂದಿದೆ ಈ ಕೇಳಿಕೆಯಾವುದೆಂಬುದು ... ಪ್ರಕಟವಾಗಿಲ್ಲ "ಹಿಂದುಗಳಿಗೆ ಮುಸ್ಲಿಮರು ಕೇಳುವುದೇನೆಂದು ತಿಳಿದಿಲ್ಲದ ಕಾರಣ, ಕೊಂಗ್ರೆಸು ತಾನಾಗಿ ಈ ಸಂಧಾನ ಮಾಡಲೆತ್ನಿಸಿದರೆ, ಹಿಂದುಗಳು ಅದು ಏಕಪಕ್ಷೀಯವಾದ ತೀರ್ಮಾನವೆಂದು ಅದನ್ನು ಎದುರಿಸದೆ ಇರಲಾರರು ಕೊಂಗ್ರೆಸು ಹಿಂದುಗಳದೇ ಸಂಸ್ಥೆಯಲ್ಲ ಕೊಂಗ್ರೆಸಿನಲ್ಲಿರುವ ಮುಸ್ಲಿಮರು ಎಲ್ಲ ಮುಸ್ಲಿಮರ ಪ್ರತಿನಿಧಿಗಳೂ ಆಗಿಲ್ಲ, ಹಾಗೆಯೆ, ಕಾಂಗ್ರೆಸ್ಸಿನಲ್ಲಿರುವ ಹಿಂದುಗಳು ಎಲ್ಲ ಹಿಂದುಗಳ ಪ್ರತಿನಿಧಿಗಳಾಗಿಲ್ಲ ಕೊಂಗ್ರೆಸ್ಸು ಜನಾಂಗಿಕ ಸಂಸ್ಥೆಯಾಗಿರದ ಪ್ರಯುಕ್ತ ಹಿಂದುಗಳ ಹಕ್ಕುಗಳನ್ನು ಮೂಲೆಗಾಣಿಸಿ, ಮುಸ್ಲಿಮರನ್ನು ಮೆಚ್ಚಿಸಿ ಒಲಿಸಿಕೊಳ್ಳಲು ಕೊಂಗ್ರೆಸು ಪ್ರಯತ್ನ ಮಾಡಿದಲ್ಲಿ ಅದು ಹಿಂದುಗಳಿಗೆ ಸಮ್ಮತವಾಗಲಾರದು ಹಿಂದೂ ಮಹಾಸಭೆಗೂ ಮುಸ್ಲಿಮ ಲೀಗಿಗೂ ಈ ಸಂಧಾನವು ಆಗಲೇ ಬೇಕಾಗಿದೆ ಕೊಂಗ್ರೆಸು ಇವೆರಡು ಸಂಸ್ಥೆಗಳನ್ನು ಒಂದು ರಂಗಸ್ಥಳಕ್ಕೆ ತಂದು, ಇವರೊಳಗೆ ಒಪ್ಪಂದ ವ್ಯಕ್ತಿಗಳಾಗುವಂತೆ ಸಾಧಿಸಬೇಕು ಇಲ್ಲದಿದ್ದಲ್ಲಿ ಇವೆರಡು ಸಂಸ್ಥೆಗಳು ಮುಂದೆ ಜಗಳ ಹೂಡುತ್ತಿರಬೇಕಾಗುವುದು ಎಂದು ಡಾ। ಮೂಂಜೆಯವರು ಒಂದು ಹೇಳಿಕೆ ಹೊರಡಿಸಿದ್ದಾರೆ

ಇವರಿಗೆ ಬೆಂಬಲವಾಗಿಯೋ ಎಂಬಂತೆ, ಹಿಂದೂಮಹಾಸಭೆಯ ಅಧ್ಯಕ್ಷ ಡಾ। ಸಾವರಕಾರರು—ಲೋಕಲ್ ಬೋರ್ಡುಗಳು ಪ್ರತಿಯೊಂದು ಕಡೆ ಕಡ್ಡಾಯವಾದ ಸೈನಿಕ ತರಬೇತನ್ನು ಜ್ಯಾರಿಗೆ ತರಲು ಯತ್ನಿಸಬೇಕಾಗಿಯೂ, ಹಿಂದುಗಳ ಮಹಾಸಂಖ್ಯೆಯ ಹಕ್ಕುಗಳನ್ನುಳಿದರೆ ಸ್ವರಾಜ್ಯವೆಂಬುದೇ ಸಾಧ್ಯವಾಗಿಲ್ಲವೆಂದೂ, ಅಲ್ಪ ಸಂಖ್ಯಾಕರ ಹಿತಸಾಧನೆಯು ಅಗತ್ಯವಾದರೂ, ಪ್ರಬಲ ಸಂಖ್ಯೆಯವರನ್ನು ಮೂಲೆಗೊತ್ತುವ ಕರಾರು ಅಸಾಧ್ಯವೆಂದೂ, ಹಿಂದೀ ಭಾಷೆಯಲ್ಲಿ ಸರ್ವತ್ರ ರೂಢಿಗೆ ಬರುವಂತಾದಲ್ಲಿ ಹಿಂದೂಮುಸ್ಲಿಮರ ಐಕ್ಯಕ್ಕೆ ದಾರಿಯಾದೀತೆಂದೂ ಮುಸಿಮರೇ ಮಾತ...

ತಮ್ಮ ಹಕ್ಕುಗಳಿಗೆ ಮುಂದೆ ಬರುತ್ತಾರಲ್ಲದೆ ಹಿಂದುಗಳು ಇದುವರೆಗೆ ತಮ್ಮ ಹಕ್ಕುಗಳನ್ನು ಮುಂದೊತ್ತಿಲ್ಲವೆಂದೂ ಮೊದಲಾಗಿ ಒತ್ತಿ ಹೇಳಿರುವರು

ಎಂದರೆ,—ಈ ರಣರಂಗವು ಇನ್ನೂ ಕಚ್ಚಾಟದಲ್ಲೇ ನಿರತವಾಗುವುದಲ್ಲದೆ, ಮೈತ್ರಿಯಾದರೂ ಅದೊಂದು ಸಂಧ್ಯವಲ್ಲದ ಮೈತ್ರಿಯಾದೀತೆಂದು ಮಹಾಸಭೆಯು ಕೊಂಗ್ರೆಸಿಗೆ ನೋಟೀಸ ಕೊಟ್ಟಂತಾಗಿದೆಯಲ್ಲವೆ?

ಜನರಲ್ ಫ್ರೆಂಕೋ

ಸ್ಪೈಯಿನಿನಲ್ಲಿ ದಂಗೆಖೋರರ ದಿಗ್ವಿಜಯ

ಲೆರಿಡಾ ಪ್ರದೇಶವು ಸಂಪೂರ್ಣವಾಗಿ ಅವರದಾಯಿತು

ಇನ್ನು ಪೂರ್ವತೀರಕ್ಕೆ ಅವರ ಸೈನ್ಯವು ಮುಂದರಿದರೆ,—ಮತ್ತೆ!

ಸ್ಪೈಯಿನಿನಲ್ಲಿ ದಕ್ಷಿಣದಿಂದ ಮಧ್ಯ ದೇಶವನ್ನು ದಾಟಿ ಉತ್ತರಕ್ಕೆ ಹಬ್ಬಿ ಕೂಡು ಕರಾವಳಿಯನ್ನು ಮಾತ್ರ ಇನ್ನು ನ ಗ್ಗಲು ಉಳಿದಿರುವ ಫ್ರೆಂಕೋನ ದಂಗೆಖೋರರ ಸೈನ್ಯವು, ಮಾರ್ಚ ಕಡೆಯ ವೆಲಿಸ್ಸಿಯಾ ಪ್ರಾಂತ್ಯವನ್ನು ಇಷ್ಟರಲ್ಲೇ ನುಗುವ ರೀತಿ ಸುತ್ತಲೂ ಗೆದ್ದು ಮುಂದರಿಯುತ್ತಿದೆ ಈಡನ್ ಸಾಹೇಬರು ಲಂಡನಿನಲ್ಲಿ ಪರ ರಾಷ್ಟ್ರ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟಂದಿನಿಂದ ಜರ್ಮನಿ ಇಟಲಿಗಳೊಡನೆ ಬ್ರಿಟಿಷ ಮೈತ್ರಿಯು ಹೆಚ್ಚುತ್ತ ಬರುವುದರ ಫಲವಾಗಿ ಎಂಬಂತೆ ಫ್ರೆಂಕೋವಿಗೆ ಅವೆರಡು ದೇಶಗಳಿಂದ ದೊರೆಯುತ್ತಿದ್ದ ಹಿಂಬಲವೂ ಹೆಚ್ಚಿ, ಸರಕಾರವು ಎಷ್ಟು ಧೈರ್ಯದಿಂದ ಸಂರಕ್ಷಣೋಪಾಯ ಮಾಡಿದರೂ ವ್ಯರ್ಥವಾಗಿ, ಮೆಲ್ಲಮೆಲ್ಲನೆ ಫ್ರೆಂಕೋ ಟರುವೆಲ್ ಪ್ರಾಂತ್ಯವನ್ನು ಜಯಿಸಿರುವನು ಹಾಗೆ ಮಾಡುವಾಗ ಅಪಾರವಾದ ಹಾವಳಿಯೂ ಉಂಟಾಗಿದೆ ಅನಂತರ ಲೆರಿಡಾ ಪ್ರದೇಶವನ್ನು ಫ್ರೆಂಕೋವಿನ ಸೇನೆಗಳು 4ನೇ ತಾರೀಕಿಗೆ ನುಗ್ಗಿದುವು ಕೋಟೆ ಹೊರವಳಯಗಳನ್ನು ಹಿಡಿದು, ಮುಂದೊತ್ತಿ ರಾಜರಸ್ತೆಯನ್ನೂ ಆಕ್ರಮಿಸಿ, ಇನ್ನು ಸಮುದ್ರ ತೀರಕ್ಕೆ ... ಮೈಲು ಮಾತ್ರ ದೂರದಲ್ಲಿದೆ

ಸರಕಾರದ ಸೇನೆಯು ಎಷ್ಟೋ ಪ್ರಯತ್ನ ಮಾಡಿದರೂ, ಶತ್ರುಗಳಿಗೆ ೧೩೦೦೦ ಚದರ ಮೈಲು ಪ್ರದೇಶವು ವಶವಾಯಿತು ಈ ಪ್ರಾಂತ್ಯದಲ್ಲಿ, ಸರ್ವ ಪ್ರಾಯಸ್ಥರೂ ಯುದ್ಧಕ್ಕೆ ಬರಬೇಕೆಂದರೂ ಕಾಲಾಂಶ ಮಾತ್ರ ಸೈನಿಕರು ಹಾಜರಾದರು ಉಳಿದವರಿಗೆ ಸರಕಾರದಲ್ಲಿ ವಿಶ್ವಾಸವೇ ಇಲ್ಲ

ತಟಸ್ಥರಾಗಿರಬೇಕ, ಜರ್ಮನಿ ಇಟಲಿಗಳು ತಮ್ಮ ಸೈನಿಕರನ್ನು ಹಿಂದೆ ಕರೆಯಬೇಕು ...

ಥಾನ ಎಂದು ಈಡನರು ಬೊಬ್ಬಿರಿದರೂ ಅದೆಲ್ಲ ವ್ಯರ್ಥವಾಗಿ, ಈ ವಾರದಲ್ಲಿ ಇಂಗ್ಲೆಂಡು ಇಟಲಿಗಳೊಳಗೆ ಕರಾರು ಸಹಿ ಆಗುವಂತಾಗಿದೆ

ಆಸ್ಟ್ರಿಯವೂ ಜರ್ಮನರ ವಶವಾದುದನ್ನು ಬ್ರಿಟಿಷ ಸರಕಾರವು ಮನ್ನಿಸಿದೆ

ಅತ್ತ, ಆಸ್ಟ್ರಿಯ ಜರ್ಮನಿಗಳು ಒಂದಾದುದರಿಂದ, ಹಂಗೇರಿಗೂ ಸ್ವಲ್ಪ ಬೆದರಿಕೆಯುದಯಿಸ್ತೆ ಆದರೆ, ಅಲ್ಲಿನ ಈಗಣ ಸರಕಾರದ ವಿರುದ್ಧವಾಗಿ ಯಾರೂ ಚಳವಳಿಸಿದರೆ ಅವರನ್ನು ದಂಡಿಸಲಾದೀತು, ಇತರರೆಲ್ಲ ತಮ್ಮ ಮಿತ್ರರು ಎಂದೇ ಹಂಗೇರಿಯ ಪ್ರೆಸಿಡೆಂಟರ ಹೇಳಿಕೆ ಹಾಗೂ, ಹಂಗೇರಿಯ ಸ್ವಾತಂತ್ರ್ಯವನ್ನು ಮಾತ್ರ ಮುರಿದಿಕ್ಕುವ ಪ್ರಯ... ವವರು ಜಾಗ್ರತರಾಗಲಿ, ಅವರನ್ನು ಎದುರಿಸುವೆವು ಎಂದೂ ಶಾಸನವಾಗಿದೆ ಮಧ್ಯ ಯುರೋಪು ಹೀಗಿರುವಾಗ, ಫ್ರೆಂಕೋವಿಗ ಇನ್ನಾವ ಗಂಡಾಂತರ, ತಡೆ?



ಜಪಾನಿನ ಮುಖ್ಯ ಪಟ್ಟಣ ಟೋಕಿಯೋ

ಅರಬಸ್ಥಾನದ ಕರಾವಳಿಯಲ್ಲಿ ಯುದ್ಧಸನ್ನಾಹ

ಕೆಂಪು ಸಮುದ್ರದ ಕಣ್ಣೀರಿನ ಹೆಬ್ಬಾಗಿಲ ಕೋಟೆಯ ಭದ್ರತೆ

ಯೆಮೆನ್ ಪ್ರಾಂತ್ಯದ ಅರಬರು ಬ್ರಿಟಿಷರಿಂದ ಹತ್ಯಾರುಗಳನ್ನು ಕೊಂಡುಕೊಳ್ಳುವರು

ಮುಸ್ಸೊಲಿನಿಯು ಸುಯೆಜ್ ಕಾಲುವೆಯ ಆಚೆಯ ದಡದಲ್ಲಿ ಸೇನೆಗಳನ್ನಿರಿಸಿ, ಯುದ್ಧದ ಸಿದ್ಧತೆ ಮಾಡುತ್ತಿರುವಾಗ, ಕೆಂಪು ಸಮುದ್ರದೊಳಗೆ ನುಗ್ಗುವಲ್ಲಿಯೆ ಇರುವ ಯೆಮೆನ್ ಪ್ರಾಂತ್ಯದಲ್ಲಿ ಬೇಗಬೇಗನೇ ಯುದ್ಧರಂಗವೊಂದು ನಿರ್ಮಾಣ ಹೊಂದುತಲಿದೆ. 20000 ಸೈನಿಕರನ್ನು ಇರಿಸಿ ಕಾದುಬಹುದಾದ ಅಗತ್ಯವಾದ ಸುರಂಗಗಳನ್ನು ತೋಡಿರುವರು. ಸುರಂಗಗಳಲ್ಲಿ ಹತ್ಯಾರುಗಳನ್ನು ಮೊದಲೇ ಇರಿಸಲಾಗಿದೆ 15000 ಹೊಸ ಬೆಡುವಿನ್ ಅರಬರನ್ನು ಸೈನ್ಯಕ್ಕೆ ಸೇರಿಸಿಕೊಂಡು ಅವರು ಇತ್ತ ಬರುವಂತಾಗಿದೆ ಸುತ್ತಲಿನ ಪರ್ವತ ಪ್ರದೇಶವೆಲ್ಲ ದುರ್ಗಗಳಿಂದ ಬಲಗೊಂಡಿದೆ, ಹೊಸ ಹೆದ್ದಾರಿಗಳನ್ನು ಕಡಿಸಿ, ಬಾವಿಗಳನ್ನು ತೋಡಿಸಿ, ಬಂದರು ಸ್ಥಳಗಳಿಗೆ ತಲಪಲು ಸುಲಭವಾಗಿದೆ ನಾನಾ ವಿಷವಾತುಗಳಿಂದ ಹೇಗೆ ಕಾಪಾಡಿಕೊಳ್ಳಬೇಕೆಂದು ಸೈನಿಕರಿಗೆ ಮಜೀದುಗಳಿಂದ ಬೋಧಿಸಲಾಗಿದೆ ಇದರಲ್ಲಿಯ ಇರುವ ಇಟಲಿಯ ಪ್ರಾಂತ್ಯವಾದ ಇರಿಟ್ರೆ...

ಕೊಡೆಗಿದರೂ, ಹತ್ತು ಸಲ ಅವರನ್ನು ಆಕ್ರಮಿಸುವುದಕ್ಕೆ ಬೇಕಾಗುವಷ್ಟು ಮದ್ದುಗುಂಡುಗಳಿಗೆ/ಯೆಮೆನ್ ಸುಲ್ತಾನನು ಇಂಗ್ಲಿಷ ಕಂಪೆನಿಗಳಿಂದ ತರಿಸುವ ಏರ್ಪಾಡು ಮಾಡಿರುವನು ಇರಾಕ್ ಸರಕಾರದ ಕಡೆಯ ಸಿಪಾಯಿಗಳು ಇತ್ತ ಬಂದು ಈ ಹೊಸ ಸೈನಿಕರನ್ನು ತರಬೇತುಗೊಳಿಸಲೂ ಏರ್ಪಾಡಾಗಿದೆ ಯೆಮೆನ್ ಜನರು ಎಬ್ಬಿಸ್ ಅಬಾಬದಿಂದ ಹಿಂದೆ ಹೋಗುವಂತೆ ಇಟಲಿಯ ಸರಕಾರವು ಅಪ್ಪಣೆ ಕೊಟ್ಟಿದೆ ಯೆಮೆನ್ನಲ್ಲಿ ಇಟಲಿಯಾನರು ತಂತಮ್ಮ ಪಾಸುಪೋರ್ಟು ರಹದಾರಿಗಳನ್ನು ಕೂಡಲೇ ಹಾಜರ ಪಡಿಸಬೇಕೆಂದು ಸರಕಾರವು ಅಪ್ಪಣೆ ಕೊಟ್ಟಿದೆ ಯಾರೊಬ್ಬರ ಮೇಲೆ ಸಂಶಯವಿದ್ದಲ್ಲಿ ಅವನನ್ನು ಗಡೀಪಾರು ಮಾಡುವಂತೆ ಪೋಲೀಸ್ ಅಧಿಕಾರಿಗಳಿಗೆ ಎಚ್ಚರಿಕೆ ಹೇಳಲಾಗಿದೆ

ಏಡನಿನಿಂದ ಇಷ್ಟು ವಾರ್ತೆ ಬಂದಿದೆ ಏಡನ್ನು ಈಗ ಬ್ರಿಟಿಷ ಪಸಾಹತಗಳ ಮಂತ್ರಿಗಳ ಕೈಯಲ್ಲಿದ್ದು ಪರರಾಷ್ಟ್ರ ವಿಚಾರಗಳನ್ನು ತಿಳಿದೇ ಹೀಗೆ ವಾರ್ತೆ ಹಂಚಿಸಿರುವುದು

ಇಷ್ಟು ಆಕ್ಷೇಪಿಸಿ ... ಚೀನವನ್ನು ದೂರಿ ಮಾತಾಡುವುದು ವಿಚಿತ್ರ ಎಂದೂ ಅಟ್ಟಿಸೊವರು ತಿಳಿಸಿರುದರು

ವಾರ್ತೆಗಳು

ರಷ್ಯದ ರಾಯಭಾರಿಗೆ ಜಪಾನಿನ ಆಕ್ಷೇಪ

ಶೀಗೆ ಮಿಟ್ಸು ಎ ಬ ಜಪಾನಿನ ರಾಯಭಾರಿಯು ಮೊಸ್ಕೋವಿನಲ್ಲಿರುವ ರಷ್ಯದ ರಾಯಭಾರಿ ಅಟ್ಟಿನೊವ್‌ರೊಡನೆ ರಷ್ಯದ ಒಂದು ವಾಯುವಿಮಾನವು ಜಪಾನಿನ ಮೇಲೆ ಚೀನದಲ್ಲಿ ಯುದ್ಧ ಮಾಡಿತೆಂದೂ ಅದರಿಂದ ರಷ್ಯವು ಜಪಾನಿನ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಈ ದುಡುಕಾಟವು ಆಕ್ಷೇಪಕರವಾಗಿದೆಂದೂ ತಿಳಿಸಿದರು ಅಟ್ಟಿನೊವರು ತನಗೆ ಇದೊಂದೂ ಗೊತ್ತಿಲ್ಲವೆಂದರು ಅಂಥ ವಿಮಾನಚಾರಿಯ ಹೆಸರನ್ನೆ ಕೇಳಿದುದಿಲ್ಲವೆಂದರು ಹಾಗೆ ರಷ್ಯವು ಇದಕ್ಕೆ ಜವಾಬ್ದಾರಿಯನ್ನು ಹೊರಲಾರದೆಂದಾಯಿತು ಆದರೆ, ಇತರ ಜನಾಂಗಗಳೂ ದೇಶಗಳೂ ಚೀನಕ್ಕೆ ಬೇಕಾಗುವಷ್ಟು ಯುದ್ಧ ಹತ್ಯಾರುಗಳನ್ನು ಮಾರುತ್ತಿರುವ ಕಾರಣವೂ, ಚೀನವು ಹಣವನ್ನು ಹಿಂತೆರುವ ವಿಷಯದಲ್ಲಿ ಹಿಂತೆಗೆಯದ ಕಾರಣವೂ, ರಷ್ಯವು ಕೂಡ ಇಂತಹ ಸಾಮಗ್ರಿಗಳನ್ನು ಮಾರುವುದರಲ್ಲಿ ತಪ್ಪಿಲ್ಲ ಸೋವಿಯಟ್ ಸರಕಾರದ ಟಪ್ಪಾಲು ವಿಮಾನಗಳನ್ನು ಜಪಾನು ಅಟಕಾಯಿಸಿರುವುದು, ರಷ್ಯದ ಎಷ್ಟೋ ಹಡಗುಗಳನ್ನು ಆತಂಕಿಸಿಯದೆ, ಚೈನದಲ್ಲಿನ ರೈಲ್ವೆಯನ್ನು ಕೊಂಡುಕೊಂಡೂ, ಅದರ ಪೂರ್ತಿ ಹಣವನ್ನು ಇನ್ನೂ ರಷ್ಯಕ್ಕೆ ತೆರದೆ ಇದೆ ಇಂಥ ...



ಭಗವಾನ್ ದಾಸರು

ಇವರು ಕೇಂದ್ರ ಎಸೆಂಬ್ಲಿಯ ... ಶಾರದಾ ಮಸೂದೆ (ಅಪ್ರಾಪ್ತ ಸ್ಥರ ಮದುವೆಯ ...) ... ಹೊಂದಿಬತ್ತದೆ

ಚೀನ

... ವೈಲು ವಿಸ್ತೀರ್ಣ ... ದಲ್ಲಿ ಚೀನದಲ್ಲಿ ಯುದ್ಧ ನಡೆಯುತ್ತಲಿ ಇದು ಕಡೆ ಚೀ... ಸೇನೆಗಳು ಜಪಾನಿ... ಶಿಬಿರಗಳನ್ನು ನುಗ್ಗಿ ನುಚ್ಚುನೂರ ಮಾಡಿವೆ ... ಯುದ್ಧ ... [ಇಂಥ ಯುದ್ಧವು ಇದುವರೆಗೆ ... ನಡೆದ ...] ಭಯಕರವಾಗಿ ... ನುಗ್ಗಲೆತ್ನಿಸಿ, ಎರಡು ಸುಂದರವಾದ ನಗರಗಳನ್ನು ಈಗ ... ಗುಪ್ಪೆಗಳನ್ನಾಗಿ ಮಾರ್ಪಡಿಸಿರುವರು

ಜಪಾನಿಯರ ಹೇಳಿಕೆಯಂತೆ ಚೀನಿಯ ಸೇನೆಯ ೨೦೦೦೦ ಮಂದಿ ಇವೆರಡು ಊರುಗಳಲ್ಲಿ ಮಡಿದಿರುವರೆಂದು ತೋರುತ್ತದೆ ಜಪಾನಿಯರಲ್ಲಿ ಒಂದು ಲಕ್ಷ ಜನರಾದರೂ ಸತ್ತಿರಬೇಕೆಂದು ಚೀನದ ಅಂದಾಜು ಇನ್ನು ಕಾಲು ಮಿಲ್ಲಿಯ ಜನರು ಜಪಾನಿನ ಸೇನೆಗಳ ಮುತ್ತಿಗೆಯೊಳಗೆ ಸಿಕ್ಕಿಬಿದ್ದಿರುವರು ಇವರಿಗೆ ಹೊರಬರುವುದು ಬಲು ಸಂಕಷ್ಟಕರವಾಗುವಂತೆ, ಸೇನೆಗಳು ಚಕ್ರವ್ಯೂಹ ರಚಿಸಿವೆ ಇಷ್ಟು ಬಲವಾಗಿ ಯುದ್ಧವಾದುದಿಲ್ಲ

ಆದರೂ ಮತ್ತೊಂದು ಭಾಗದಲ್ಲಿ ಚೀನೀಯರು ಮೆಲ್ಲಮೆಲ್ಲನೆ ಮುಂದರಿಸುತ್ತ ಜಪಾನಿನವರು ಗೆದ್ದಂತಹ ಪ್ರದೇಶಗಳಿಂದ ಕೆಲವಂಶವನ್ನು ಹಿಂದೆ ಸೆಳೆದುಕೊಳ್ಳುತ್ತಲಿದ್ದಾರೆ

ಲಂಡನು.—ಹೌಸ್ ಒಫ್ ಕೊಮನ್ಸು ಸಭೆಯಲ್ಲಿ ತಾ 4ರಲ್ಲಿ ಒಬ್ಬ ಮೆಂಬರರು ಪಟ್ಟಾಗಿ ಮತ್ತೊಬ್ಬರ ಕೆನ್ನೆಗೆ ಥಪರಾಕು ಬಡಿದರು ಬಡಿದವರು ಭಾಷಣ ಮಾಡುತ್ತಿರುವಾಗ ಅಧ್ಯಕ್ಷರ ಅಪ್ಪಣೆ ಮನ್ನಿಸದಿದ್ದಾಗ ಗಂಭೀರ ನಡೆಯಿತು ನೀವು ಪೋಲೆಂಡಿಗೆ ಹಿಂದಿರುಗಿರಿ ಎಂದು ಯಾರೋ ನುಡಿದರು ಅದನ್ನು ಕೇಳುತ್ತಲೆ, ಹಿಂದೆ ನೌಕಾನಯನದಲ್ಲಿ ಜಟ್ಟಿಗಳಾಗಿದ್ದ ಮತ್ತೊಬ್ಬ ಸಭಿಕರನ್ನು ಇವರು ಹಾಗೆ ಆಕ್ರಮಿಸಿ ಕೆನ್ನೆಗೆ ಏಟು ಕೊಟ್ಟರು ಅವರು ಕೈತಡೆದು ಪ್ರತಿಯಾಗಿ ಬಡೆಯಲಿಲ್ಲ. ಅಧ್ಯಕ್ಷರು ಇಬ್ಬರಿಂದಲೂ ಕ್ಷಮೆಯಾಚಿಸಿ...

ಕೊಂಡರು ಅಲ್ಲಿಗೆ ಇಡೀ ಕಾಂಡವೇ ಮುರಿದು ಹೋಯಿತು

ಚೇಂಬರಲೀನರ ರಾಜತಂತ್ರವು ಪರರಾಜ್ಯಗಳ ವಿಷಯದಲ್ಲಿ ಸರಿಯಲ್ಲೆಂದು ಪಾರ್ಲಿಮೆಂಟಿನಲ್ಲಿ ಚರ್ಚೆಯುಂಟಾಗಿ ಅವರಲ್ಲೇ ವಿಶ್ವಾಸವಿದೆ ಎಂಬ ಠರಾವು ಮಂಜೂರಾಯಿತು ಎಷ್ಟೋ ಪರರಾಷ್ಟ್ರಗಳ ರಾಯಭಾರಿಗಳು ಈ ಚರ್ಚಾ ಕಾಲದಲ್ಲಿ ಹಾಜರಾಗಿದ್ದರು ಇಡೀ ಸಾಮ್ರಾಜ್ಯವೇ ಅಲ್ಲದೆ ಇತರ ರಾಜ್ಯಗಳೂ ಸಹ ಮಂತ್ರಿಗಳ ಬೆಂಬಲವಾಗಿದ್ದಾರೆಂದೂ ಫ್ರಾನ್ಸ, ರಷ್ಯ, ಬ್ರಿಟನ್ನುಗಳೇ ಸೇರಿ ಮೈತ್ರಿ ಸಂಬಂಧವನ್ನು ಕಟ್ಟಿಕೊಂಡರೆ ಇತರರೆಲ್ಲ ಬೇರೆಯಾಗಿ ಪಕ್ಷವಾಗಿ ಕಾದಲಿ ಯುದ್ಧಸಂಭವ ಹಚ್ಚುವುದೆಂದೂ ಮುಖ್ಯ ಮಂತ್ರಿಗಳು ನುಡಿದರು ಅವರದೇ ಬಹುಪಕ್ಷ

ಫ್ರಾನ್ಸ್.—ಫ್ರಾನ್ಸದ ಸಂಪತ್ತನ್ನು ಉಳಿಸಿಕೊಂಡು ಹೆಚ್ಚಿಸುವುದಕ್ಕಾಗಿ ಸರಕಾರವು ಕೆಲವು ಜಾದಾ ಅಧಿಕಾರಗಳನ್ನು ಪಡೆಯಲು ಠರಾವು ತಂದಿದೆ ಪ್ರತಿಯೊಬ್ಬರೂ ತಂತಮ್ಮ ಮೂಲಧನ ಎಷ್ಟೆಂದು ತಿಳಿಸಬೇಕಾಗಿಯೂ, ಅದರ ಮೇಲೆ ಸೇಕಡಾ 4ರಿಂದ 17ರ ವರೆಗೆ ತೆರಿಗೆ ತೆರಬೇಕೆಂದೂ ಸರಕಾರದ ತೀರ್ಮಾನವಾಗಿದೆ ಇದರಿಂದ ಹನ್ನೆರಡು ಮಿಲಿಯ ... ಸರಕಾರದ ಕಂದಾಯ ದೊರೆಯುವುದು

ಸ್ಪೈನ್ ಲೆರಿಡದಲ್ಲಿ ದಂಗೆಖೋರರು ಸುಮಾರು 8000 ಜನರನ್ನು ಕೈದ ಮಾಡಿರುವರು ಒಂದು ಆಸ್ಪತ್ರೆಯ ಮೇಲೆ ಬಾಂಬು ... 24 ಮಕ್ಕಳು 11 ನರ್ಸುಗಳೂ ಮಡಿದರು ಸ್ಪೈನಿನ ಪ್ರಾಂತ್ಯಗಳ 60 ರಾಜಧಾನಿಗಳಲ್ಲೀಗ 8 ಫ್ರೆಂಕೋವಿಗೆ ವಶವಾಗಿವೆ ನಿನ್ನೆಯ ದಿನ ದಂಗೆಖೋರರ ಸೈನ್ಯವು ಮತ್ತು 14 ಮೈಲು ಮುಂದರಿಸಿ, ಸಮುದ್ರ ಕರಾವಳಿಯ ಸಮೀಪಕ್ಕೆ ಬಂದಿವೆ ಹೀಗಾದಲ್ಲಿ, ರಾಜಧಾನಿಯನ್ನು ಧ್ವಂಸ ಮಾಡಿ ಉಳಿದೆಲ್ಲವನ್ನು ವಶಪಡಿಸಿಕೊಳ್ಳುವುದು ತೀರ ಸುಲಭವಾಗಿ ಫ್ರೆಂಕೋ ಸರ್ವಸ್ವತಂತ್ರ ಹೊಂದುವನು

ಅಮೇರಿಕಾ 45000 ಟನ್ನಿನ ಯುದ್ಧ ನಾವೆಗಳನ್ನು ಯುನೈಟೆಡ್ ಸ್ಟೇಟ್ಸ್ ಸರಕಾರವು ಕಟ್ಟುವುದು ಅಗತ್ಯವೆಂದೂ ಹಾಗೆ ಮಾಡಿದಲ್ಲಿ ಮಾತ ಮೂವರು ವಿಕ್ರೇಟರುಗಳ

ಯುದ್ಧ ಸನ್ನಾಹವನ್ನು ತಡೆಗಟ್ಟಬಹುದೆಂದೂ, ಬ್ರಿಟನ್ನಿಗೂ ಈ ರಾಜ್ಯಕ್ಕೂ ಯುದ್ಧರಂಗದಲ್ಲಿ ಒಂದಾಗಿಯೇ ಕಾದಾಡಬೇಕೆನ್ನುವುದಕ್ಕೆ ಅಂತಹ ಕರಾರು ಇಲ್ಲವೆಂದೂ, ಅಲ್ಲಿನ ಪಾರ್ಲಿಮೆಂಟಿನಲ್ಲಿ ವಿವರಿಸಲಾಗಿದೆ

ಹೊಲಿಗೆ ಯಂತ್ರವು ಜೀವನ ಸಂಪಾದನೆಯ ಉಪಕರಣವಲ್ಲ!

ಕೆಲವು ದಿನಸಗಳ ಹಿಂದೆ ಪಂಗಳಸಿನ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಬಿ ಗಿರಿಯಪ್ಪ ಎಂಬವರು ಅವರಿಗೆ ಬರಬೇಕಾದ ಹಣದ ಬಗ್ಗೆ ದುಜಾರಿಯೂ ... ಎಂಬವನ ಮೇಲೆ ಆದ ಡಿಕ್ರಿಯ ಬಾಬ್ತು ಅಮಲ್‌ಜಾರಿ ತೆಗೆದ ... ಕೆಲವು ಸಾಮಾನುಗಳನ್ನು ಜಪ್ತಿಮಾಡಿದುದರ ಸಂಗಡ ಅವನ ಹೊಲಿಗೆಯ ಯಂತ್ರವೂ ಕೂಡಾ ಇತ್ತು ಅದು ಅವನ ದಿನನಿತ್ಯದ ಸಂಪಾದನೆಯ ಸಾಧನವಾದ್ದರಿಂದ ಅದನ್ನು ಜಪ್ತಿಮಾಡಲಾಗದೆಂದು ಸಿಂಟೋವು ಅರ್ಜಿ ಮಾಡಿದ್ದನು ... ಹೊಲಿಗೆ ಯಂತ್ರವು ಸಂಪಾದನೆಯ ಒಂದು ಸಾಧನವಾದರೂ ಅದೊಂದು ಉಪಕರಣವಲ್ಲ, ಅದಿಲ್ಲದೆ ಒಬ್ಬನು ತನ್ನ ಸಂಪಾದನೆಯನು ಮಾಡಲಾಗುವುದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ ಆದ್ದರಿಂದ ಜಪ್ತಿಮಾಡಲ್ಪಟ್ಟ ಯಂತ್ರವನ್ನು ... ಮೇಲಿನ ಕೋರ್ಟುಗಳಲ್ಲಿ ... ಮೂರು ತಿಂಗಳ ಅವಧಿಯನ್ನು ಕೊಟ್ಟಿರುತ್ತಾರೆಯಾಗಿಯೂ ತಿಳಿಯುತ್ತದೆ

ದಿ ಕುಂದಾಪುರ ಬೇಂಕ್ ಲಿಮಿಟೆಡ್
ಕುಂದಾಪುರ.
ನೋಟೀಸು

ತಾ 21-2 38ರಲ್ಲಿ ಕೊಟ್ಟ ನೋಟೀಸಿನಂತೆ ಶೇರು ಒಂದರ ರೂಪಾಯಿ 10ರಲ್ಲಿ ಈ ವರೆಗೆ ರೂ 5/ರಂತೆ ತೆತ್ತದ್ದು ಹೋಗಿ 2ನೇ ಕಂತಿನ ಹಣ ರೂ 2 8-0 ತೆರದೆ ಬಾಕಿ ಮಾಡಿಕೊಂಡ ಪಾಲುದಾರರು, ಸದ್ರಿ 2ನೇ ಕಂತಿನ ಹಣ ಪಾಲು ಒಂದರ ರೂ 2 8-0 ರಂತೆ ಆಗುವ ಪಾಲುಗಳ ಮೊಬಲಗು ಮತ್ತು ... ನೋಟೀಸಿನ ತಾರೀಕಿನಿಂದ ವಸೂಲು ತಾರೀಕು ವರೆಗೆ ಶೇಕಡ 12½ಯಂತೆ ಆಗುವ ಬಡ್ಡಿ ಮತ್ತು ಈ ನೋಟೀಸಿನ ವಗೈರೆ ಖರ್ಚುಗಳನ್ನು ಅಪ್ರಿಲ್ 22ರಂತೆ ... ಈ ನೋಟೀಸಿನ ತಾರೀಕಿನಿಂದ 14 ದಿವಸಗಳೊಳಗೆ ಹೆಡ್ ಆಫೀಸಿಗೆ ಪಾವತಿ ಮಾಡದಿದ್ದರೆ ಅಪ್ರಿಲ್ 24ರಂತೆ ನಮ್ಮ ಶೇರಿನ ಹಣವನ್ನು ಫರ್ಫೀಟ್ ಮಾಡಿ ಅಪ್ರಿಲ್ 26ರಂತೆ ಡೈರೆಕ್ಟರ್ ಬೋರ್ಡಿನವರು ಯುಕ್ತ ಕಂಡ ರೀತಿಯಲ್ಲಿ ಮಾಡುವರು

ಅಪ್ಪಣೆ ಪ್ರಕಾರ
K SUNDRANATH KAMATH
ಬದಲಿ ಕಾರ್ಯದರ್ಶಿ

ವಿ ಸೂ—ಶನಿವಾರ 1 30 ಬಾಕಿ ದಿವಸ 3 ಘಂಟೆ ನಂತರ ಹಣ ತೆಕ್ಕೊಳ್ಳಲಾರದು.

Commonwealth
Assurance Company, Ltd.,
POONA.
Policies suit to Every
PURSE AND POCKET
WANTED ENERGETIC AGENTS
Apply to:
Gawankar & Sons,
Chief Agents,
163, Gandhi Nagar,
BANGALORE.

THE
Canara Banking Corporation, Udipi, Ltd.
INCORPORATED IN BRITISH INDIA
ESTD 1906

SEASON DEPOSITS
of
Rs. 500/- & above
Are Accepted
at
3½% p. a.
at
All Our Branches

ಸ್ವದೇಶಾಭಿಮಾನಿ

ಒರಿಸ್ಸ ಪ್ರಾಂತ್ಯದಲ್ಲಿ ಬಿಕ್ಕಟ್ಟು ಅಸಮಾಧಾನ

ಕಾಯಂ ಗವರ್ನರರು ರಜೇಮೇಲೆ ಹೋಗುವ ಸಂದರ್ಭಗಳು ಈಗ ತುಂಬಾ ಇವೆ ದೇವರ ದಯೆಯಿಂದ ಈಗಲೇ ಮೂರು ಸಂಸ್ಥಾನಗಳ ಗವರ್ನರರಿಗೆ ರಜಾ ಕೊಡಲಾಗುವಂತೆ ಏರ್ಪಾಡಾಗಿದ್ದು, ಇತರ ಐ ಸಿ ಎಸ್ ಅಧೀಸರರನ್ನು ಆಕ್ಟಿಂಗ್ ಗವರ್ನರ ಪದವಿಗೆ ನೇಮಿಸಲಾಗಿದೆ ಈ ಅಧೀಸರರು ಆಯಾ ಪ್ರಾಂತ್ಯದ ಮಂತ್ರಿಮಂಡಳಗಳ ಮೇಲೆ ಗವರ್ನರರಾಗುವ ಕಾರಣ, ಅಂತಹರಲ್ಲಿ ಮಂತ್ರಿಗಳಿಗೆ ಭಕ್ತಿ ಶ್ರದ್ಧೆಗಳಿಲ್ಲದೆ ಗವರ್ನರ ಪದವಿಗೂ, ಮಂತ್ರಿಮಂಡಲಕ್ಕೂ ಕುಂದುಂಟಾಗುವ ಬೆದರಿಕೆಯಿದೆ ಈ ವಿಷಯವಾಗಿ ಇತರ ಕಡೆಗಳಲ್ಲಿ ಬರೆದುದನ್ನು ನೋಡುವುದು ಸಂಸ್ಥಾನದಲ್ಲಿ ಮಂತ್ರಿಗಳ ಕೈಕೆಳಗೆ ಕೆಲಸ ಮಾಡುತ್ತಿರತಕ್ಕವರನ್ನು ಎತ್ತಿ, ಮಂತ್ರಿಮಂಡಲಗಳ ಮೇಲೆ ಅವರನ್ನು ಕುಳ್ಳಿರಿಸಿದರೆ, ಇತ್ತಂಡಗಳಿಗೂ ಗೌರವವುಂಟೆ? ಒಳಕ್ಲೇಶಗಳು ಇದ್ದದ್ದಲ್ಲಿ, ಅವೀಗ ಹೇಗೆ ನಿವಾರಣೆ ಹೊಂದಬಹುದು? ಹಿಂದೆ ಕೆಳ ಅಧೀಸರನಾಗಿದ್ದು ಕೆಲ ದಿನ ಗವರ್ನರನಾಗಿ, ಮುಂದೆ ಪುನಃ ಕೆಳ ಅಧೀಸರನಾಗಬಹುದಾದ ಇಂತಹ ಅಧೀಸರನನ್ನು ಮಂತ್ರಿಗಳು ಏನೆಂದು ಕಾಣಬೇಕು? ಆ ಅಧೀಸರನೂ ಹೀಗೆ ಹಿಂದೆಮುಂದೆ ನೋಡಿ ವರ್ತಿಸಬೇಕಾದೀತು? ತನ್ನ ಹುದ್ದೆಗೆ ಸರಿಯಾದ ರೀತಿಯಲ್ಲಿ ತನ್ನ ಮೇಲಾಧೀಸರರೊಡನೆಯೂ, ತನ್ನ ಕೆಳಗಿರುವ ಮಂತ್ರಿಗಳೊಡನೆಯೂ ಅವನು ಹೇಗೆ ನಡೆದುಕೊಳ್ಳಬಹುದು? ಕಾಯಂ ಸಿವಿಲ್ ಸರ್ವಿಸ್ಸಿಗೆ ಸೇರಿದಾತನಿಗೆ ಇದು ಬಂದು ಬಗೆಯ ಬಿಕ್ಕಟ್ಟಾಗದೆ? ಹಾಗೆಯೆ ಸದ್ಯದ ಮಂತ್ರಿಗಳಿಗೂ ಇದು ಅಡಚಣೆಯಲ್ಲವೆ? ಹೆಚ್ಚೇಕೆ? ಸಿವಿಲ್ ಸರ್ವಿಸ್ಸಿಗೇ ಸಂಬಂಧಪಟ್ಟ ತನ್ನ ಸೋದರ ಅಧೀಸರರ ವಿಚಾರದಲ್ಲಿ ಅವನು ಮಂತ್ರಿಮಂಡಲದೊಡನೆ ಹೀಗೆ ತೀರ್ಮಾನ ಮಾಡುವನು? ಸೋದರ ಅಧೀಸರರೂ ಇವನ ಕಡೆಗೆ ಹೇಗೆ ನಡೆದುಕೊಳ್ಳುವರು? ಎಂದಿನಂತೆ, ಪ್ರಾಂತ್ಯದ ಪ್ರಾಮುಖ್ಯ ನ್ಯಾಯಸ್ಥಾನದ ಪ್ರಾಮುಖ್ಯ ನ್ಯಾಯಾಧೀಶರನ್ನೆ ನೇಮಿಸುತ್ತ, ಅವರು ಆಕ್ಟಿಂಗ್ ಗವರ್ನರರಾಗುವಂತೆ ಮಾಡಿದರೆ ಯಾವ ರಗಳೆಗೂ ಸಂದರ್ಭವುಂಟಾಗಲಾರದು. ಇದನ್ನೀಗ ಕಾಂಗ್ರೆಸ್ ಮಂತ್ರಿಮಂಡಲವೊ ಕಾರ್ಯಕಾರೀಮಂಡಲವೂ ಸರಕಾರಕ್ಕೆ ಸೂಚಿಸಿಯದೆ ಆದರೆ, ಎಷ್ಟೋ ಪ್ರಾಂತ್ಯಗಳಲ್ಲಿ ಹೈಕೋರ್ಟುಗಳೇ ಇಲ್ಲ! ಹಾಗಿದ್ದಲ್ಲಿ ಕೌನ್ಸಿಲಿನ ಅಧ್ಯಕ್ಷರನ್ನಾಗಲಿ, ಎಸೆಂಬ್ಲಿಯ ಸ್ಪೀಕರರನ್ನಾಗಲಿ ಆರಿಸಿದಲ್ಲಿ ತೊಂದರೆ ಇರದು ಅವರು ಚುನಾಯಿತ ಮೆಂಬರರು ಯಾವ ಪಕ್ಷಕ್ಕೂ ಸೇರದ ಅಧ್ಯಕ್ಷರು ಅಂತೂ ಖಂಡಿತವಾದ ನಿರ್ಣಯವಾಗಬೇಕಾಗಿದೆ ಇಲ್ಲದಿದ್ದಲ್ಲಿ ಒರಿಸ್ಸಾ ಮಂತ್ರಿಗಳು ರಾಜೀನಾಮೆ ಕೊಡಬಹುದು!

ಹಿಂದೂ ಮುಸ್ಲಿಂ ಸಮಸ್ಯೆ

"ಶ್ರೀ। ಜಿನ್ನಾರವರು ಮುಸ್ಲಿಂ ಲೀಗಿನ ಪರವಾಗಿ ಕೇಳಿಕೆಯೊಂದನ್ನು ಕಾಂಗ್ರೆಸಿಗೆ ಬರೆದಿರುವರೆಂದೂ, ಅದನ್ನು ಈಗ ಕಾಂಗ್ರೆಸ್ ಕಾರ್ಯಕಾರೀ ಮಂಡಲವು ವಿಮರ್ಶಿಸುತ್ತಿರುವರೆಂದೂ ತಿಳಿದು ಬಂದಿದೆ ಈ ಕೇಳಿಕೆಯಾವುದೆಂದು ... ಪ್ರಸಿದ್ಧವಾಗಿಲ್ಲ ... ಗಳಿಗೆ ಮುಸ್ಲಿಮರು ಕೇಳುವುದೇನೆಂದು ತಿಳಿದಿಲ್ಲದ ಕಾರಣ, ಕಾಂಗ್ರೆಸು ತಾನಾಗಿ ಈ ಸಂಧಾನ ಮಾಡಲೆತ್ನಿಸಿದರೆ, ಹಿಂದುಗಳು ಅದು ಏಕಪಕ್ಷೀಯವಾದ ತೀರ್ಮಾನವೆಂದು ಅದನ್ನು ಎದುರಿಸದೆ ಇರಲಾರರು ಕಾಂಗ್ರೆಸು ಹಿಂದುಗಳದೇ ಸಂಸ್ಥೆಯಲ್ಲ ಕಾಂಗ್ರೆಸಿನಲ್ಲಿರುವ ಮುಸ್ಲಿಮರು ಎಲ್ಲ ಮುಸ್ಲಿಮರ ಪ್ರತಿನಿಧಿಗಳೂ ಆಗಿಲ್ಲ, ಹಾಗೆಯೆ, ಕಾಂಗ್ರೆಸ್ಸಿನಲ್ಲಿರುವ ಹಿಂದುಗಳು ಎಲ್ಲ ಹಿಂದುಗಳ ಪ್ರತಿನಿಧಿಗಳಾಗಿಲ್ಲ ಕಾಂಗ್ರೆಸ್ಸು ಜನಾಂಗಿಕ ಸಂಸ್ಥೆಯಾಗಿರುವ ಪ್ರಯುಕ್ತ ಹಿಂದುಗಳ ಹಕ್ಕುಗಳನ್ನು ಮೂಲೆಗಾಣಿಸಿ, ಮುಸ್ಲಿಮರನ್ನು ಮೆಚ್ಚಿಸಿ ಒಲಿಸಿಕೊಳ್ಳಲು ಕಾಂಗ್ರೆಸು ಪ್ರಯತ್ನ ಮಾಡಿದಲ್ಲಿ ಅದು ಹಿಂದುಗಳಿಗೆ ಸಮ್ಮತವಾಗಲಾರದು. ಹಿಂದೂ ಮಹಾಸಭೆಗೂ ಮುಸ್ಲಿಮ ಲೀಗಿಗೂ ಈ ಸಂಧಾನವು ಆಗಲೇ ಬೇಕಾಗಿದೆ ಕಾಂಗ್ರೆಸು ಇವೆರಡು ಸಂಸ್ಥೆಗಳನ್ನು ಒಂದು ರಂಗಸ್ಥಳಕ್ಕೆ ತಂದು, ಇವರೊಳಗೆ ಒಪ್ಪಂದ ಮೈತ್ರಿಗಳಾಗುವಂತೆ ಸಾಧಿಸಬೇಕು ಇಲ್ಲದಿದ್ದಲ್ಲಿ ಇವೆರಡು ಸಂಸ್ಥೆಗಳು ಮುಂದೆ ಜಗಳ ಹೂಡುತ್ತಿರಬೇಕಾಗುವುದು' ಎಂದು ಡಾ। ಮೂಂಜೆಯವರು ಒಂದು ಹೇಳಿಕೆ ಹೊರಡಿಸಿದ್ದಾರೆ

ಇವರಿಗೆ ಬೆಂಬಲವಾಗಿಯೋ ಎಂಬಂತೆ, ಹಿಂದೂಮಹಾಸಭೆಯ ಅಧ್ಯಕ್ಷ ಡಾ। ಸಾವರಕಾರರು—ಲೋಕಲ್ ಬೋರ್ಡುಗಳು ಪ್ರತಿಯೊಂದು ಕಡೆ ಕಡ್ಡಾಯವಾದ ಸೈನಿಕ ಶಿಕ್ಷಣವನ್ನು ಜಾರಿಗೆ ತರಲು ಯತ್ನಿಸಬೇಕಾಗಿಯೂ, ಹಿಂದುಗಳ ಮಹಾಸಂಖ್ಯೆಯ ಹಕ್ಕುಗಳನ್ನುಳಿದರೆ ಸ್ವರಾಜ್ಯವೆಂಬುದೇ ಸಾಧ್ಯವಾಗಿಲ್ಲವೆಂದೂ, ಅಲ್ಪ ಸಂಖ್ಯಾಕರ ಹಿತಸಾಧನೆಯು ಅಗತ್ಯವಾದರೂ, ಪ್ರಬಲ ಸಂಖ್ಯೆಯವರನ್ನು ಮೂಲೆಗೊತ್ತುವ ಕರಾರು ಅಸಾಧ್ಯವೆಂದೂ, ಹಿಂದೀ ಭಾಷೆಯಲ್ಲಿ ಸರ್ವತ್ರ ರೂಢಿಗೆ ಬರುವಂತಾದಲ್ಲಿ ಹಿಂದೂಮುಸ್ಲಿಮರ ಐಕ್ಯಕ್ಕೆ ದಾರಿಯಾದೀತೆಂದೂ, ಮುಸ್ಲಿಮರೇ ಮಾತ್ರ

ಅರಬಸ್ಥಾನದ ಕರಾವ...

ಯೆಮೆನ್ ಪ್ರ...

ತಮ್ಮ ಹಕ್ಕುಗಳಿಗೆ ಮುಂದೆ ಬರುತ್ತಾರಲ್ಲದೆ ಹಿಂದುಗಳು ಇದುವರೆಗೆ ತಮ್ಮ ಹಕ್ಕುಗಳನ್ನು ಮುಂದೊತ್ತಿಲ್ಲವೆಂದೂ ಮೊದಲಾಗಿ ಒತ್ತಿ ಹೇಳಿರುವರು.

ಎಂದರೆ,—ಈ ರಣರಂಗವು ಇನ್ನೂ ಕಚ್ಚಾಟದಲ್ಲೇ ನಿರತವಾಗುವುದಲ್ಲದೆ, ಮೈತ್ರಿಯಾದರೂ ಅದೊಂದು ಸಾಧ್ಯವಲ್ಲದ ಮೈತ್ರಿಯಾದೀತೆಂದು ಮಹಾಸಭೆಯು ಕಾಂಗ್ರೆಸಿಗೆ ನೋಟೀಸು ಕೊಟ್ಟಂತಾಗಿದೆಯಲ್ಲವೆ?

ಜನರಲ್ ಫ್ರಾಂಕೋ

ಸ್ಪೈಯಿನಿನಲ್ಲಿ ದಂಗೆಖೋರರ ದಿಗ್ವಿಜಯ

ಲೆರಿಡಾ ಪ್ರದೇಶವು ಸಂಪೂರ್ಣವಾಗಿ ಅವರದಾಯಿತು

ಇನ್ನು ಫ್ರಾನ್ಸ್ ತೀರಕ್ಕೆ ಅವರ ಸೈನ್ಯವು ಮುಂದರಿದರೆ,—ಮತ್ತ?

ಸ್ಪೈಯಿನಿನಲ್ಲಿ ದಕ್ಷಿಣದಿಂದ ಮಧ್ಯ ದೇಶವನ್ನು ದಾಟಿ ಉತ್ತರಕ್ಕೆ ಹಬ್ಬಿ, ... ಕೆಟಲೋನಿಯವನ್ನು ಮಾತ್ರ ಇನ್ನು ... ದಿರುವ ಫ್ರಾಂಕೋವಿನ ದಂಗೆಖೋರರ ಸೈನ್ಯವು, ... ತೆರೆಯ ... ಪ್ರಾಂತ್ಯವನ್ನು ಇಷ್ಟರಲ್ಲೇ ... ಗೆದ್ದು ಮುಂದರಿಯುತ್ತಿದೆ ಈಡನ್ ಸಾಹೇಬರು ಲಂಡನಿನಲ್ಲಿ ಪರ ರಾಷ್ಟ್ರ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟಂದಿನಿಂದ ಜರ್ಮನಿ-ಇಟಲಿಗಳೊಡನೆ ಬ್ರಿಟಿಷ ಮೈತ್ರಿಯು ಹೆಚ್ಚುತ್ತ ಬರುವುದರ ಫಲವಾಗಿ ಎಂಬಂತೆ, ಫ್ರಾಂಕೋವಿಗೆ ಆವೆರಡು ದೇಶಗಳಿಂದ ದೊರೆಯುತ್ತಿದ್ದ ಹಿಂಬಲವೂ ಹೆಚ್ಚಿ, ಸರಕಾರವು ಎಷ್ಟು ಧೈರ್ಯದಿಂದ ಸಂರಕ್ಷೋಪಾಯ ಮಾಡಿದರೂ ವ್ಯರ್ಥವಾಗಿ, ಮೆಲ್ಲಮೆಲ್ಲನೆ ಫ್ರಾಂಕೋ ಟೆರುವೆಲ್ ಪ್ರಾಂತ್ಯವನ್ನು ಜಯಿಸಿರುವನು ಹಾಗೆ ಮಾಡುವಾಗ ಅಪಾರವಾದ ಹಾವಳಿಯೂ ಉಂಟಾಗಿದೆ ಅನಂತರ ಲೆರಿಡಾ ಪ್ರದೇಶವನ್ನು ಫ್ರಾಂಕೋವಿನ ಸೇನೆಗಳು ... ನುಗ್ಗಿದುವು ಕೋಟೆ, ಹೊರವಳಯಗಳನ್ನು ಹಿಡಿದು, ಮುಂದೊತ್ತಿ, ರಾಜರಸ್ತೆಯನ್ನೂ ಆಕ್ರಮಿಸಿ, ಇನ್ನು ಸಮುದ್ರ ತೀರಕ್ಕೆ ೧೭ ಮೈಲು ಮಾತ್ರ ದೂರದಲ್ಲಿದೆ

ಸರಕಾರದ ಸೇನೆಯು ಎಷ್ಟೋ ಪ್ರಯತ್ನ ಮಾಡಿದರೂ, ಶತ್ರುಗಳಿಗೆ ೧೩,೦೦೦ ಚದರ ಮೈಲು ಪ್ರದೇಶವು ವಶವಾಯಿತು ಈ ಪ್ರಾಂತ್ಯದಲ್ಲಿ, ಸರ್ವ ಪ್ರಾಯಸ್ಥರೂ ಯುದ್ಧಕ್ಕೆ ಬರಬೇಕೆಂದರೂ ಕಾಲಾಂಶ ಮಾತ್ರ ಸೈನಿಕರು ಹಾಜರಾದರು ಉಳಿದವರಿಗೆ ಸರಕಾರದಲ್ಲಿ ವಿಶ್ವಾಸವೇ ಇಲ್ಲ

ತಟಸ್ಥರಾಗಿರಬೇಕು, ಜರ್ಮನಿ ಇಟಲಿಗಳು ತಮ್ಮ ಸೈನಿಕರನ್ನು ಹಿಂದೆ ಕರೆಯಬೇಕು ಅನಂತರವೇ ಇಟಲಿಯೊಡನೆ ವಾಣಿಜ್ಯ ಸಂ

ಧಾನ ಎಂದು ಈಡನರು ಬೊಬ್ಬಿಂದರು ಅದೆಲ್ಲ ವ್ಯರ್ಥವಾಗಿ, ಈ ವಾರದಲ್ಲಿ ಇಂಗ್ಲೆಂಡು ಇಟಲಿಗಳೊಳಗೆ ಕರಾರು ಸ... ಆಗುವಂತಾಗಿದೆ.

ಆಸ್ಟ್ರಿಯವೂ ಜರ್ಮನರ ವಶವಾ... ದನ್ನು ಬ್ರಿಟಿಷ ಸರಕಾರವು ಮನ್ನಿಸಿದೆ.

ಅತ್ತ, ಆಸ್ಟ್ರಿಯ ಜರ್ಮನಿಗಳು ಒಂದಾದುದರಿಂದ, ಹಂಗೇರಿಗೂ ಸ್ವಲ್ಪ ಬೆದರಿಕೆಯು... ಯಿತ್ತು ಆದರೆ, ಅಲ್ಲಿನ ಈಗಣ ಸರಕಾರ... ವಿರುದ್ಧವಾಗಿ ಯಾರೂ ಚಳವಳಿಸಿದರೆ ಅ... ರನ್ನು ದಂಡಿಸಲಾದೀತು, ಇತರರೆಲ್ಲ ತವ... ಮಿತ್ರರು ಎಂದೇ ಹಂಗೇರಿಯ ಪ್ರೆಸಿಡೆಂಟ... ಹೇಳಿಕೆ ಹಾಗೂ, ಹಂಗೇರಿಯ ಸ್ವಾತಂತ್ರ್ಯವನ್ನು ಮಾತ್ರ ಮುರಿದಿಕ್ಕುವ ಪ್ರಯ... ವವರು ಜಾಗ್ರತರಾಗಲಿ, ಅವರನ್ನು ಎದುರಿಸುವೆವು ಎಂದೂ ಶಾಸನವಾಗಿದೆ ಮಧ್ಯ ಯುರೋಪು ಹೀಗಿರುವಾಗ, ಫ್ರಾಂಕೋವಿಗೆ ಇನ್ನಾವ ಗಂಡಾಂತರ, ತಡೆ?

ಜಪಾನಿನ ಮುಖ್ಯ ...

ಅರಬಸ್ಥಾನದ ಕರಾವಳಿಯಲ್ಲಿ ಯುದ್ಧಸನ್ನಾಹ

ಕೆಂಪು ಸಮುದ್ರದ ಕಣ್ಣೀರಿನ ಹೆಬ್ಬಾಗಿಲ ಕೋಟೆಯು ಭದ್ರತೆ.

ಯೆಮೆನ್ ಪ್ರಾಂತ್ಯದ ಅರಬರು ಬ್ರಿಟಿಷರಿಂದ ಹತ್ಯಾರುಗಳನ್ನು ಕೊಂಡುಕೊಳ್ಳುವರು.

ಮುಸೊಲಿನಿಯು ಸುಯೆಜ್ ಕಾಲುವೆಯ ಆಚೆಯ ದಡದಲ್ಲಿ ಸೇನೆಗಳನ್ನಿರಿಸಿ, ಯುದ್ಧದ ಸಿದ್ಧತೆ ಮಾಡುತ್ತಿರುವಾಗ, ಕೆಂಪು ಸಮುದ್ರದೊಳಗೆ ನುಗ್ಗುವಲ್ಲಿಯೆ ಇರುವ ಯೆಮೆನ್ ಪ್ರಾಂತ್ಯದಲ್ಲಿ ಬೇಗಬೇಗನೇ ಯುದ್ಧರಂಗವೊಂದು ಸಿದ್ಧತೆ ಹೊಂದುತ್ತಲಿದೆ. 20000 ಸೈನಿಕರನ್ನು ಇರಿಸಿ ಕಾಪಾಡಲು ಅಗತ್ಯವಾದ ಸುರಂಗಗಳನ್ನು ತೋಡಿರುವರು. ಸುರಂಗಗಳಲ್ಲಿ ಹತ್ಯಾರುಗಳನ್ನು ಮೊದಲೇ ಇರಿಸಲಾಗಿದೆ. 15000 ಹೊಸ ಬೆಡುಯಿನ್ ಅರಬರನ್ನು ಸೈನ್ಯಕ್ಕೆ ಸೇರಿಸಿಕೊಂಡು ಅವರು ಇತ್ತ ಬರುವಂತಾಗಿದೆ ಸುತ್ತಲಿನ ಪರ್ವತ ಪ್ರದೇಶವೆಲ್ಲ ದುರ್ಗಗಳಿಂದ ಬಲಗೊಂಡಿದೆ. ಹೊಸ ಹೆದ್ದಾರಿಗಳನ್ನು ಕಡಿಸಿ, ಬಾವಿಗಳನ್ನು ತೋಡಿಸಿ, ಬಂದರು ಸ್ಥಳಗಳಿಗೆ ತಲಪಲು ಸುಲಭವಾಗಿದೆ ನಾನಾ ವಿಷವಾಯುಗಳಿಂದ ಹೇಗೆ ಕಾಪಾಡಿಕೊಳ್ಳಬೇಕೆಂದು ಸೈನಿಕರಿಗೆ ಮಹೇದುಗಳಿಂದ ಬೋಧಿಸಲಾಗಿದೆ ಇದರಲ್ಲಿಯೂ ಇರುವ ಇಟಲಿಯ ಪ್ರಾಂತ್ಯವಾದ ಇರಿತ್ರೆಯಾದಿಂದ ಇಟಲಿಯ ಸೈನ್ಯಗಳು ಯುದ್ಧಕ್ಕೆ

2ನೆಯ ಮಾರ್ಕಂಡೇಯ!

[ಬರೆದವರು ವ ಚಿತ್ರಕಾರರೂ—ಬಿ. ಆರ್. ಕಾಮತ್.]

“ಅಜ್ಜಾ, ಈಗ ದಿನೇ ದಿನೇ ಹೆಚ್ಚೆಚ್ಚು ದುರ್ಮರಣಗಳಾಗುತ್ತಿರಲು ಕಾರಣವೇನು?” ನಾನು ಅದೊಂದು ಆಷಾಢ ಮಾಸ ದಿನ, ಹೊರಗೆ ಜೋರಿನಿಂದ ಮಳೆ ಸುರಿಯುತ್ತಿರಲು, ಕೈಯಲ್ಲಿದ್ದ ಹಲಸಿನ ಹಪ್ಪಳದ ತುಂಡೊಂದನ್ನು ಬಾಯಿಯಲ್ಲಿ ತುರುಕಿಸಿ ನನ್ನ ಅಜ್ಜನೊಡನೆ ವಿಚಾರಿಸಿದೆ

ನನ್ನ ಅಜ್ಜನು ದೊಡ್ಡ ಕಥಿಕನು ಅವನಿಗೆ ಗೊತ್ತಿದ್ದ ಕಥೆಗಳು ಅಷ್ಟಿಷ್ಟಲ್ಲ ಅವನೊಂದು ಕಥೆಗಳ ಅಕ್ಷಯಪಾತ್ರ ಮಾತು ಮಾತಿಗೆ ಅವನ ಕೂಡೆ ಒಂದು ಕಥೆ ಇದೆ ನನ್ನ ಪ್ರಶ್ನೆಯನ್ನು ಕೇಳಿದೊಡನೆ, ಆತನು ತನ್ನ ಬಾಯಿಯಲ್ಲಿದ್ದ ತಾಂಬೂಲವನ್ನು ಉಗುಳಿ, ‘ಮಗೂ, ಯಾವುದಾದರೂ ಸರಿ ಕಾರಣವಿಲ್ಲದೆ ಒಂದು ಕೆಲಸವಾಗುವುದಿಲ್ಲ ಇತ್ತೀಚೆಗೆ ದುರ್ಮರಣಗಳು ಉಂಟಾಗುತ್ತಿರಲು ಕಾರಣವೇನೆಂದು ನೀನು ಕೇಳಿರುವೆ ಈಗಿನ ಮಾಗಣೆ ಶ್ಯಾನುಭೋಗರ ಕೆಲಸವೇನೆಂದು ನೀನು ಬಲ್ಲೆಯಾ? ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿದರೆ, ನಾನು ನಿನ್ನ ಪ್ರಶ್ನೆಗೆ ಉತ್ತರವನ್ನೀಯುವೆನು.’ ಎಂದನು

ಮಾಗಣೆ ಶ್ಯಾನುಭೋಗರ ಕೆಲಸಗಳೇನೆಂದು ನಾನು ನನಗೆ ಗೊತ್ತಿದ್ದ ಮಟ್ಟಿಗೆ ಹೇಳಿದೆನು ಆದರೆ ನನ್ನ ಅಜ್ಜನು ಅದನ್ನು ಸಮರ್ಥಿಸದೆ, ‘ಮಾಗಣೆ ಶ್ಯಾನುಭೋಗರ ಕೆಲಸವೇನೆಂದು ನಿನಗೊಂದಾ ತಿಳಿಯದು ಆ ಕಡೆ ಈ ಕಡೆಯಿಂದ ಲಂಚ ತಿನ್ನುವುದು, ಒಂದು ಕಡೆಯಲ್ಲಿದ್ದ ಸರ್ವೇ ಕಲ್ಲನ್ನು ಇನ್ನೊಂದು ಕಡೆಗೆ ವರ್ಗಾಯಿಸುವುದು ಒಬ್ಬನ ಜಮೀನನ್ನು ಇನ್ನೊಬ್ಬನಿಗೆ ಮಾಡಿಕೊಡುವುದು ತನಗೆ ಆಗದವರಾದರೆ, ಅವರಿಗೆ ಕಷ್ಟಂದಾದಷ್ಟು ತೊಂದರೆ ಕೊಡುವುದು, ಇವೇ ಮೊದಲಾದ ಅನ್ಯಾಯಗಳನ್ನು ಮಾಡುವುದು ಎಂದು ತಾನೇ ಮಾಗಣೆ ಶ್ಯಾನಭೋಗರ ಕೆಲಸವನ್ನು ವಿವರಿಸಿ ಹೇಳಿದನು

‘ಅಜ್ಜಾ, ಮಾಗಣೆ ಶ್ಯಾನುಭೋಗರ ಈ ಬಗೆಯ ನಡತೆಗೂ ನನ್ನ ಪ್ರಶ್ನೆಗೂ ಏನು ಸಂಬಂಧ?’ ನಾನು ಪ್ರಶ್ನಿಸಿದೆ

‘ನಿಕಟ ಸಂಬಂಧವಿದೆ ಈಗಿನ ಯಮಧರ್ಮನು, ಒಬ್ಬ ಮಾಗಣೆ ಶ್ಯಾನುಭೋಗರ ಯಮನ ಪಟ್ಟಕೊಟ್ಟುದು, ಅವರಿಗೆ ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಂತಾಗಿದೆ ಇಲ್ಲಿದ್ದಾಗ ಮಾಡಿದ ಹಾಗೇ ಅಲ್ಲಿಯೂ ಮಾಡುತ್ತಿದ್ದಾರೆ ಕಲ್ಲನ್ನು ಇನ್ನೊಂದೆಡೆ ಹಾಕುವಂತೆ ಒಬ್ಬನೆಂದು ಇನ್ನೊಬ್ಬನನ್ನು ಕೊಂಡು ಹೋಗುತ್ತಿದ್ದಾರೆ ಇದರಿಂದಾಗಿ ದಿನೇ ದಿನೇ ದುರ್ಮರಣಗಳು ಹೆಚ್ಚುತ್ತಿದೆ’ ನನ್ನ ಅಜ್ಜನೆಂದ

‘ಆ ಮಾಗಣೆ ಶ್ಯಾನುಭೋಗರಿಗೆ ಯಮಪುರಿಯ ಪಟ್ಟವು ಹೇಗೆ ದೊರಕಿತು?’ ನಾನು ಕುತೂಹಲದಿಂದ ವಿಚಾರಿಸಿದೆ

ಒಡನೆ ನನ್ನ ಅಜ್ಜನು ಯಮಪುರಿಯ ಪಟ್ಟವನ್ನು ಒದಗಿಸಿಕೊಂಡ ಆ ಮಾಗಣೆ ಶ್ಯಾನುಭೋಗರ ಕಥೆಯನ್ನು ನನಗೆ ಹೇಳ ತೊಡಗಿದನು

० ० ० ०

‘ಇದು ಅನೇಕ ವರ್ಷಗಳ ಹಿಂದಿನ ಕಥೆ ಆಗ ಮೂಡಬಿದರೆಯಲ್ಲಿ ಜೈನರ ಕಾರುಭಾರು ಬಹಳ ಜೈನರದೇ ರಾಜ್ಯವಾಗಿತ್ತು ಅದು ಆದರೆ ಪ್ರತಿಯೊಂದು ಊರಿನ ಕೇರಿ ಕೇರಿಯಲ್ಲಿ ‘ಶಾಡು ಬ್ರಾಹ್ಮಣರ ಊಟದ ಹೋಟೇಲು.’ ನೋಡಸಿಗುವಂತೆ, ಪ್ರತಿಯೊಂದು ಊರಿನಲ್ಲಿಯೂ, ಆಗ ಗೌಡ ಸಾರಸ್ವತರ ಬೀಜವು ಇದ್ದೇ ಇತ್ತು ಮೂಡಬಿದರೆಯು ಜೈನರ ರಾಜ್ಯವಾದರೂ ಅನೇಕ ಮಂದಿ ಗೌಡ ಸಾರಸ್ವತರು ಅಲ್ಲಿಯ ಅರಸನ ಕೈಕೆಳಗೆ ಅಧಿಕಾರಿಗಳಾಗಿದ್ದರು

ಇಂತಹ ಅಧಿಕಾರಿಗಳಲ್ಲಿ ನರಸಿಂಹ ಪ್ರಭುಗಳೊಬ್ಬರು. ಅವರು ಮೂಡಬಿದರೆಯ ಮಾಗಣೆ ಶ್ಯಾನುಭೋಗರಾಗಿದ್ದರು ಅವರ ಹೆಸರೆತ್ತಿದರೆ ಊರವರೆಲ್ಲರೂ ತಟಸ್ಥರಾಗುತ್ತಿದ್ದರು ಅಷ್ಟು ಕಾರ್ನಿಕ’ ಅವರದು. ‘ಉಗ್ರನರಸಿಂಹ’ನೆಂದೇ ಅವರಿಗೆ ಬಿರುದಾಂಕಿತವಿತ್ತು

ಒಂದು ದಿನ ನರಸಿಂಹ ಪ್ರಭುಗಳು, ರಾತ್ರಿ ಸಾಧಾರಣ 10 ಗಂಟೆಯ ಸಮಯಕ್ಕೆ ಯಾರದೋ ಜಮೀನಿನ ಒಂದು ನಕಾಶೆ”ನ್ನು ಬಿಡಿಸುತ್ತಿದ್ದರು ಅವರು ಮಂಚದ ಮೇಲೆ ಕುಳಿತಿದ್ದರು ಬಳಿಯ ಮೇಜಿನ ಮೇಲೆ ಲಾಂದ್ರವು ಉರಿಯುತಿತ್ತು ಕೆಲಸ ಮಾಡುತ್ತಾ ಸಮಯ ಕಳೆದುದು ಶ್ಯಾನುಭೋಗರಿಗೆ ತಿಳಿದುದೇ ಇಲ್ಲ ಸಾಧಾರಣ ಗಂಟೆ ಹದಿನೆರಡಾಗಿರಬಹುದು ಶ್ಯಾನುಭೋಗರು ಆಯಾಸದಿಂದ, ಮಂಚದ ಮೇಲೆ ಸ್ವಲ್ಪ ಕೈಕಾಲುಗಳನ್ನು ಬಿಟ್ಟು ವಿಶ್ರಮಿಸಿದರು ಅಲ್ಲಿಯೇ ಅವರಿಗೆ ನಿದ್ದೆ ಹತ್ತಿತು ಮೂಗಿನ ಕುಡಿಯಿಂದ ಬುಸುಗುಟ್ಟತೊಡಗಿತು ಕೈಯಲ್ಲಿದ್ದ ಪೆನ್ನ ಕೈಯಲ್ಲಿಯೇ ಉಳಿದಿತ್ತು ಬಳಿಯ ಮೇಜಿನ ಮೇಲೆ ಉರಿಯುತ್ತಿದ್ದ ಲಾಂದವು, ಎಣ್ಣೆಯಾರಿ ಸಮಯ ಹೋಗುತ್ತಾ ಸಣ್ಣದಾಗುತ್ತಿತ್ತು

ಮನುಷ್ಯನಿಗೆ ತಾನು ಎಂದು ಸಾಯುವೆನೆಂದು ತಿಳಿದಿರುವುದೇ? ಇನ್ನೊಂದು ಗಳಿಗೆಯಲ್ಲಿ ಪ್ರಾಣ ಹೋಗುವುದಾದರೂ, ಆತನು ತಾನು ಇನ್ನೂ ಬದುಕುವೆನೆಂದು ಆಶಿಸುತ್ತಾನೆ ಅದರಲ್ಲೂ ಅಕಸ್ಮಾತ್ತಾಗಿ ಮರಣವು ಸಂಭವಿಸುವುದಾದರೆ, ಸಾಯುವ ಸಮಯದಲ್ಲೂ ಆತನು ಹಸನ್ಮುಖಿಯಾಗಿಯೇ ಇರುತ್ತಾನೆ ಅದರಂತೆ ತನಗೆ ಮರಣ ಸಮಯವು ಸಮೀಪಿಸುವುದಾದರೂ ಮಾಗಣೆ ಶ್ಯಾನುಭೋಗರು ನಿರ್ಲಿಪ್ತರಂತೆ ನಿದ್ದೆಯ ಮದಿಲಲ್ಲಿ ಗೊರಕೆಯ ವಾದ್ಯವನ್ನು ಊದುತ್ತಿದ್ದರು ಆಗಲೆ ಕರಾಳಾಕೃತಿಯ ಇಬ್ಬರು ಯಮದೂತರು ಬಂದು, ಅವರ ಮಂಚದ ಬಳಿಯಲ್ಲಿ ಅದೃಶ್ಯರಾಗಿ ನಿಂತುಕೊಂಡರು.

ಶ್ಯಾನುಭೋಗರು ಮಂಚದ ಮೇಲೆ ಮಲಗಿದ್ದರು, ನಿದ್ದೆಯು ಚೆನ್ನಾಗಿ ಹತ್ತಿತ್ತು ನೆಲವನ್ನು ಬಿಟ್ಟು ಮಲಗಿದವರ ಪ್ರಾಣಾಪಹರಣ ಮಾಡಕೂಡದೆಂದು ಅವರಿಗೆ ತಮ್ಮ ಒಡೆಯನ ಕಟ್ಟಾಜ್ಞೆಯಿದ್ದುದರಿಂದ, ಅವರಿಗೆ ಮೊದಲು ಏನು ಮಾಡುವುದೆಂದು ತೋಚಲಿಲ್ಲ ಸ್ವಲ್ಪ ಸಮಯದ ತನಕ ಮಂತ್ರಾಲೋಚನೆಯನ್ನು ಮಾಡಿ, ಶ್ಯಾನುಭೋಗರನ್ನು ಮಂಚ ಸಮೇತ ಕೊಂಡು ಹೋಗುವುದಾಗಿ ನಿಶ್ಚಯಿಸಿದರು. ಒಡನೆ ಅವರು ಮಂಚವನ್ನು ಎತ್ತಿ ಗಗನ ಮಾರ್ಗವಾಗಿ ಯಮಪುರಿಯತ್ತ ಹೊರಟರು.

ಇವೆಲ್ಲ ಜೋಡವು ‘ನಡೆಯುತ್ತಿರಲು, ಶ್ಯಾನುಭೋಗರ ಸ್ವಸ್ಥಚಿತ್ತದಿಂದ ನಿದ್ದೆ ತೆಗೆಯುತ್ತಿದ್ದರು ಇತ್ತಣ ಅರಿವೇ ಅವರಿಗಿರಲಿಲ್ಲ ಯಮದೂತರು ಮಂಚವನ್ನೆತ್ತಿ ಹೊರಟವರ ಅನೇಕ ಮನೆ ಮರಗಳನ್ನು ಬಯಲು ಬೆಟ್ಟಗಳನ್ನು ದಾಟಿ, ಅತ್ಯುನ್ನತವಾದ, ಹಿಮಾಲಯದತ್ತ ಧಾವಿಸತ್ತೊಡಗಿದರು ಅದನ್ನು ದಾಟುತ್ತಿರಲು ಅಲ್ಲಿಯ ತಂಪಾದ ಗಾಳಿಯ ಸ್ಪರ್ಶದಿಂದ ಶ್ಯಾನುಭೋಗರಿಗೆ ಎಚ್ಚರವಾಯಿತು

ಎಚ್ಚೆತ್ತ ಅವರು ಸುತ್ತುಮುತ್ತಲೂ ನೋಡಿದರು ಅಲ್ಲಿಯ ದೃಶ್ಯಗಳನ್ನು ನೋಡಿ ಅವರು ದಿಗಿಲುಗೊಂಡರು. ತಾನು ಮಲಗಿದ್ದುದು ತನ್ನ ಮನೆಯ ಅದೊಂದು ಕೋಣೆಯಲ್ಲಿ? ಈಗ ತನ್ನ ಸುತ್ತುಮುತ್ತಲೂ ಅನಂತವಾದ ವಾಯುಮಂಡಲವು ಹಬ್ಬಿಕೊಂಡಿದೆ ಮೇಲೆ ನೀಲಿ ಮಾಕಾಶದಲ್ಲಿ ಅರ್ಧ ಚಂದ್ರನು ಕಿರುನಗೆಯನ್ನು ಬೀರುತ್ತಿದ್ದಾನೆ ಕೆಳಗಡೆ ಬಿಳಿಯಾದ ಕಾಗದವನ್ನು ಹರಡಿದಂತೆ ಹಿಮದರಾಶಿ ತಾನು ಮಲಗಿದ ಮಂಚವು ಮಾತ್ರ ತನ್ನಷ್ಟಕ್ಕೆ ಹಾರಾಡುತ್ತಿದೆ ಬಹು ಹೊತ್ತಿನ ತನಕ ಅವರಿಗೆ ಈ ವಿಚಿತ್ರವೇನೆಂದು ತಿಳಿಯದಾಯಿತು ಕಡೆಗೆ ವಿಸ್ಮಯದ ಬೆಡಗು ಅಡಗಲು, ಸ್ವಸ್ಥಿತಿಯು ನಡುಗ. ಅವರಲ್ಲಿ ಮೂಡಿತು. ತನ್ನನ್ನು ಯಮದೂತರು ಮಂಚಸಮೇತವಾಗಿ ನಿಧನಪುರಿಕೆ ಒಯ್ಯುತ್ತಿರುವರೆಂದು ಅವರು ಅರಿತರು. ಆದರೆ ಹಾಗೆಯೇ ಹೆಚ್ಚು ಹೊತ್ತು ಹೆದರುತ್ತ ಅವರು ಕುಳಿತಿರಲಿಲ್ಲ ಕಷ್ಟಗಳು ಬರುವುದು ಮನುಷ್ಯನಿಗಲ್ಲದೆ ಮರಗಿಡಗಳಿಗಲ್ಲವಷ್ಟೆ? ಪರಂತು ಬಂದ ಕಷ್ಟಗಳನ್ನು ಸಂತೋಷದಿಂದ ಎದುರಾಯಿಸಿ, ಅವುಗಳೊಡನೆ ಹೋರಾಡುವವನೇ ನಿಜವಾದ ಮಾನವನೆನಿಸುವನು ಶ್ಯಾನುಭೋಗರು ಈಗ ಅಪಾರವಾದ ಕಷ್ಟದಲ್ಲಿ ಸಿಲುಕಿರುವರಾದರೂ, ಅವರ ನಿರುಪಮವಾದ ಮೇಧಾಶಕ್ತಿಯು ಅವರಿಗೊಂದು ಯುಕ್ತಿಯನ್ನು ಸೂಚಿಸದೆ ಇರಲಿಲ್ಲ

ಒಡನೆ ಅವರು ತನ್ನ ಕಿಸೆಯಲ್ಲಿದ್ದ ಒಂದು ಕಾಗದದ ತುಂಡನ್ನು ತೆಗೆದು, ಕೈಯಲ್ಲಿದ್ದ ಪೆನ್ನಿನಿಂದ ಬಹಳ ಹೊತ್ತಿನ ತನಕ ಏನೇನೋ ಬರೆಯತೊಡಗಿದರು ಬರೆಯುತ್ತಿದ್ದಂತೆ, ಪ್ರೇಮ ಪತ್ರವನ್ನು ಬರೆಯುವ ಪ್ರಣಯಿಯ ಹಾಗೆ ಆಗಾಗ್ಗೆ ಅವರ ಮುಖ ಮುದ್ರೆಯು ಮಂದಹಾಸದಿಂದ ವಿಕಸಿತವಾಗುತ್ತಿತ್ತು. ಕಾಗದವನ್ನು ಬರೆದು ಮುಗಿಸಿ, ಶ್ಯಾನುಭೋಗರು ಅದನ್ನು ಕಿಸೆಯಲ್ಲಿ ಹಾಕಿ, ಮಾಡಿಯೂರಿ ಸುಮ್ಮಗೆ ಮಂಚದ ಮೇಲೆ ಕುಳಿತುಬಿಟ್ಟರು.

ಯಮದೂತರು ಮಂಚವನ್ನು ಯಮಧರ್ಮನ ಇದಿರಿನಲ್ಲಿ ಇಳಿಸಿದರು. ನನ್ನು ಕಂಡೊಡನೆ ಶ್ಯಾನುಭೋಗರು, ನಿಲ್ಲದೆ, ನಮಸ್ಕರಿಸದೆ, ಸುಮ್ಮನೆ ಕುಳಿತರು. ಇದನ್ನು ನೋಡಿ ನರಕಾಧಿಪತಿಗೆ ಕೆಂಡದಂತೆ ಕೋಪ ಬಂತು. ಒಡನೆ ಚಿತ್ರಗುಪ್ತರಿಗೆ ಶ್ಯಾನುಭೋಗರ ‘ಧಪ್ತರನ್ನು’ ಓದಿ ಹೇಳುವಂತೆ ತಿಳಿಸಿ, ಶ್ಯಾನುಭೋಗರಿಗೆ ಕಠಿಣ ದಂಡನೆಯ ವಿಧಿಸುವವನಾಗಿ ಗದರಿಸಿದನು. ಆದರೆ ಚಿತ್ರಗುಪ್ತರು ತಮ್ಮ ದಪ್ತರನ್ನು ಬಿಚ್ಚಬೇಕಾದರೆ ಶ್ಯಾನುಭೋಗರು ಅವರನ್ನು ತಡೆದು, ಯಮಧರ್ಮನನ್ನು ಕುರಿತು,

“ಎಲೇ, ನರಕಾಧಿಪತಿಯಾದ ಯಮಧರ್ಮನೇ, ನನ್ನನ್ನು ಕೊಲ್ಲುವುದು ನಿನಗೊಂದು ದೊಡ್ಡ ಕೆಲಸವಲ್ಲ. ಆದರೆ ನನ್ನ ಮೈಯನ್ನು ಮುಟ್ಟಿದರೆ ನಿನ್ನ ಗತಿಯು ನೆಟ್ಟಗಾಗಲಿಕ್ಕಿಲ್ಲ

(ಆನೇ ಪುಟವನ್ನು ನೋಡಿರಿ)

ರ್ಕಂಡೇಯ

ದೊರಕಲಿಕ್ಕಿಲ್ಲ; ದೊರಕನು. ನಿನ್ನಂತಹ ಕೊಲೆಗಡುಕನಿಗೆ ದೇಹಾಂತ ಶಿಕ್ಷೆಯೇ ತಕ್ಕ ಪ್ರಾಯಶ್ಚಿತ್ತವು. ಎಂದು ಹೇಳಿ ಕೂಡಲೆ ಆತನನ್ನು ಶೂಲಕ್ಕೇರಿಸುವಂತೆ ಚಾರರಿಗೆ ಆಜ್ಞೆಯನ್ನಿತ್ತನು.

ಈ ಆಜ್ಞೆಯನ್ನು ಕೇಳಿದ ಮಾಜಿ ಯಮಧರ್ಮನಿಗೆ ದಿಕ್ಕು ತೋಚದಾಯಿತು ತನ್ನ ಪ್ರಾಣವನ್ನು ಉಳಿಸುವಂತೆ ಹೊಸ ನರಕಾಧಿಪತಿಯನ್ನು ಪರಿ ಪರಿಯಾಗಿ ಬೇಡಿಕೊಂಡನು ಆದರೆ ಫಲಕಾರಿಯಾಗಲಿಲ್ಲ ಅಷ್ಟರಲ್ಲಿ ಚಾರರು ಶೂಲವನ್ನು ತಂದು ಅಲ್ಲಿ ಸಿದ್ಧಗೊಳಿಸಿದರು

ಯಾವನೊಬ್ಬನು ಮನುಷ್ಯನನ್ನಾದರೂ ಸರಿ ಆತನನ್ನು ಶೂಲಕ್ಕೇರಿಸಬೇಕಾದರೆ ಆತನ ಅಂತಿಮ ಕಾಂಕ್ಷೆಯನ್ನು ಪೂರೈಸುವುದು ಒಂದು ರೂಢಿಯಷ್ಟೆ! ಹಾಗೆಯೆ ಮಾಜಿ ಯಮಧರ್ಮನು ಸಾಯಬೇಕಾದರೆ ತನಗೆ ಶ್ರೀ ವಿಷ್ಣುವನ್ನು ನೋಡುವ ಇಚ್ಛೆಯಿದೆಯೆಂದು ತಿಳಿಸಿದನು ಮತ್ತು 'ಆತನ ಧ್ಯಾನವನ್ನು ಮಾಡಿದನು ಆದರೆ ಪಾಪ ವಿಷ್ಣುವು ಆತನಿಗೆ ಕಾಣಿಸಿಕೊಳ್ಳಲಿಲ್ಲ ಇದರಿಂದ ಮಾಜಿ ಯಮಧರ್ಮನಿಗೆ ಬಹಳ ವ್ಯಸನವಾಯಿತು ತಲೆಯನು ಬಗ್ಗಿಸಿಕೊಂಡು, ಕಣ್ಣೀರುವಿಡುತ್ತ ಆತನು ಸುಮ್ಮನೆ ಕುಳಿತುಬಿಟ್ಟನು ಆಗ ಅಭಿನವ ಯಮಧರ್ಮನಾದ ಮಾಗಣೆ ಶ್ಯಾನುಭೋಗರು ಆತನನ್ನು ಕುರಿತು,

"ಹುಚ್ಚಾ ನಿನ್ನ ಶಕ್ತಿಯೆಲ್ಲವೂ ನೀನು ಪದಚ್ಯುತನಾದಾಗ ಲೋಲುಪ್ತವಾಗಿರುವುದೆಂದು ನಿನಗೆ ತಿಳಿಯದೆ? ಈಗ ನನ್ನ ಬರಿಯ ಒಬ್ಬ ಆಳು ನಾನು ಧ್ಯಾನಿಸಿದೊಡನೆ ಶ್ರೀ ವಿಷ್ಣುವು ಪ್ರತ್ಯಕ್ಷನಾಗುವನು. ನೋಡ ಆಗ ಅವನೊನೆ ನೀನ ಮಾತನಾಡಬಹುದು ಎಂದು ಆತ ಗೆ ಸಮಾಧಾನ ಹೇಳಿ ಶ್ಯಾನುಭೋಗರ ಧ್ಯಾನತತ್ಪರರಾದರ ಒಡನೆ ಮಹಾವಿಷ್ಣುವು ಪ್ರತ್ಯಕ್ಷನಾಗಿ ಕರೆದುದೇಕೆಂದು ಕೇಳಿದನು. ಅದಕ್ಕೆ ಯಮಧರ್ಮರಾಯನೆ ಮಾಗಣೆ ಶ್ಯಾನುಭೋಗರು, ಮಾಜಿ ಯಮಧರ್ಮನ ಕಡೆಗೆ ಕೈ ಬೆರಳನ್ನು ತೋರಿಸಿ, ತಟಸ್ಥರಾದರು

ಒಡನೆ ಮಾಜಿ ನರಕಾಧೀಶನು ಮಹಾವಿಷ್ಣುವಿನೊಡನೆ ನಡೆದ ವಿದ್ಯಮಾನಗಳೆಲ್ಲವನ್ನೂ ತನ್ನ ಕಷ್ಟ ಸಂಕಷ್ಟಗಳನ್ನೂ ಅರಿಕೆ ಮಾಡಿದನು ಆಗ ಶ್ರೀಮನ್ನಾರಾಯಣನು ಕೋಪೋದ್ರಿಕ್ತನಾಗಿ, "ಎಲೇ ಹುಲುಮಾನವಾ, ನೀನು ನನ್ನ ಹೆಸರಿನಲ್ಲಿ ಈ ಬಗೆಯ ಅಕೃತ್ಯವನ್ನು ನಡೆಸಿದೆಯಾ? ಈ ನಿನ್ನ ಮಹದಪರಾಧಕ್ಕೆ ಯಾವ ಶಿಕ್ಷೆಯನ್ನು ಕೊಟ್ಟರೂ ಸಾಲದು" ಎಂದು ಶ್ಯಾನುಭೋಗರನ್ನು ಗದರಿಸಿದನು

ಶ್ರೀ ವಿಷ್ಣುವಿನ ಮಾತುಗಳನ್ನು ಕೇಳಿ, ಶ್ಯಾನುಭೋಗರು ದೀನ ಮುದ್ರೆಯಿಂದ ಕೈಗಳನ್ನು ಜೋಡಿಸಿ, 'ದೇವಾಧಿ ದೇವಾ, ನನ್ನಿಂದ ಅಪರಾಧವಾದುದೇನೋ ನಿಜ ಆದರೆ ನನ್ನ ಮೋಸವನ್ನು ಗೊತ್ತುಹಚ್ಚಲಾರದ ಈ ಮಂಧಬುದ್ಧಿಯ—ಕೋಣದ ಮೇಲೆ ಸವಾರಿಮಾಡುವ ಈ ಕೋಣನು—ಇಷ್ಟು ದೊಡ್ಡ ನರಕವನ್ನು ಆಳಲು ಯೋಗ್ಯನೇ ಎಂದು ನೀನೇ ಪರ್ಯಾಲೋಚಿಸಿ ನೋಡು ನನಗಿಂತ ಅವನೇ ಹೆಚ್ಚಿನ ಯೋಗ್ಯನೆಂದು ನೀನು ತೀರ್ಮಾನಿಸಿದ್ದಲ್ಲಿ ನೀನು ವಿಧಿಸಿದ ಶಿಕ್ಷೆಗೆ ಗುರಿಯಾಗಲು ನಾನು ಸಿದ್ಧನೇ ಇರುವೆನು ಎಂದು ಹೇಳಿದರು

ಈ ಮಾತುಗಳನ್ನು ಕೇಳಿ ಯಮಧರ್ಮನ ಕೋಪವು ಕೆದರಿದಂತಾಯಿ ತ ಸುರರಿಗೆ ಈ ಬಗೆಯ ಅಪಮಾನವನ್ನು ಮಾಡಿದ ನರನಿಗೆ ಯೋಗ್ಯದಂಡನೆಯನ್ನು ವಿಧಿಸಬೇಕಾಗಿ ಶ್ರೀ ವಿಷ್ಣುವಿನೊಡನೆ ಕೇಳಿದನ ಒಡನೆ ಶ್ರೀ ವಿಷ್ಣುವು ಶ್ಯಾನುಭೋಗರನ್ನು ಕುರಿತ ಹೀಗೆ ದನು.

ಎಲೇ ನ ಧವ ನ್ನ ಗೆ ಯನ್ನು ಸ್ವಲ್ಪ ಬಿಗಿದುಹಿಡಿ ಇವ ತನಕ ಗದ್ದಿರುವೆನೆಂಬ ಹೆಮ್ಮೆ ದ ಕ ದ ತೆ ಕೆಲಸ ಮಾಡಬೇಡ ನ್ನ ನ ನ್ನಿಗೆ ವಿರೋಧವಾ ವರ್ತಿಸಿದವನ ಗತಿಯೇನಾ ವು ದೆಂದು ಬಲ್ಲೆಯಾ? ನಿನ್ನನ್ನು ಈ ಕ್ಷಣವೇ ಭೂಲೋಕಕ್ಕೆ ತಳ್ಳಿಬಿಡುವೆನು.

ಶ್ರೀ ವಿಷ್ಣುವಿನ ಕ್ರೋಧಕಷಾಯಿತವದನವನ್ನು ನೋಡಿ ಶ್ಯಾನುಭೋಗರಿಗೆ ಒಮ್ಮೆ ಅಂಜಿಕೆಯಾಯಿತಾದರೂ ಅವರು ಎದೆಗುಂದಲಿಲ್ಲ ಕುಯುಕ್ತಿ ಸಂಪನ್ನರಾದ ಅವರು ಈ ರೀತಿ ಉತ್ತರವಿತ್ತರು

"ಭೊ ಸ್ವಾಮಿನ್, ನಿನ್ನ ಅಗಾಧ ಮಹಿಮೆಯು ಸುರಾಸುರರಿಗೂ ವಿದಿತವಾದುದು. ಆದುದರಿಂದ ಮಾನವನಾದ ನನ್ನ ಪಾಡೇನು? ನಿನಗೆ ಈ ಗಳಿಗೆಯಲ್ಲಿಯೆ ನನ್ನನ್ನು ಪುನಃ ಭೂಲೋಕಕ್ಕೆ ತಳ್ಳುವುದೊಂದು ದೊಡ್ಡ ಕೆಲಸವೆ? ಆದರೆ ನಿನ್ನನ್ನು ಕಾಣಬೇಕೆಂದು ಅಹೋ ರಾತ್ರಿ ತಪಸ್ಸನ್ನಾಚರಿಸುತ್ತಿರುವ ಆ ಋಷಿಗಳ ಪಾಡೇನು? ನಿನ್ನ ಚರಣಕಮಲಗಳನ್ನು ಕಂಡ ನನ್ನನ್ನು ನೀನು ಭೂಲೋಕಕ್ಕೆ ದೊಬ್ಬುವೆಯಾದರೆ ಅವರೇಕೆ ತಪಸ್ಸು ಮಾಡುತ್ತಿರಬೇಕು? ನಿನ್ನ ಭಕ್ತರೇಕೆ ನಿನ್ನ ಆರಾಧನೆಯನ್ನು ಮಾಡುತ್ತಿರಬೇಕು? ಇದೇ ರೀತಿಯಲ್ಲಿ ನಿನ್ನಿಂದ ಅಧೋಗತಿಯನ್ನು ಹೊಂದಲಿಕ್ಕೇನು? ಇದೇ ರೀತಿಯಲ್ಲಿ ನಿನ್ನಿಂದ ತುಳಿಸಿಕೊಳ್ಳಲಿಕ್ಕೇನು? ನೀನು ನನ್ನನ್ನು ಭೂಲೋಕಕ್ಕೆ ತಳ್ಳಿಬಿಡು! ನಾನು ಅಲ್ಲಿಯ ಎಲ್ಲಾ ದೇವಭಕ್ತರಿಗೂ ಮುನಿಜನರಿಗೂ ನಿನ್ನ ಈ ಮಹಿಮೆಯನ್ನು ತಿಳಿಯ ಹೇಳಿ, ನಿನ್ನ ಆರಾಧನೆಯನ್ನು ಬಿಟ್ಟುಬಿಟ್ಟು, ಆ ಗುಡ್ಡ ಬೆಟ್ಟಗಳ ಮೇಲೆ ವಾಸಿಸುತ್ತಿರುವ ಭೂತಪ್ರೇತಗಳ ಪೂಜೆಯನ್ನು ಕೈಕೊಂಡರೆ ಹೆಚ್ಚಿನ ಲಾಭವಾದೀತೆಂದು ಹೇಳುವೆನ

ಈ ಮಾತುಗಳನ್ನು ಕೇಳಿ ಶ್ರೀ ವಿಷ್ಣುವು ಚಿ ತಾಕ ಲನಾದನು ಶ್ಯಾನುಭೋಗರನ್ನು ಭೂಲೋಕಕ್ಕೆ ತಳ್ಳಿದರೆ ಜನರಿಗೆ ತನ್ನ ಮೇಲಿರುವ ಭಯಭಕ್ತಿ ವಿಶ್ವಾಸಗಳನ್ನೀತನ ಕೆಡಿಸಬಹುದೆಂದು ಹೆದರಿದನ ಇ ತರ ವಿವೇಕ ಶಾಲಿಯಾದ ಮನುಷ್ಯನನ್ನು ಶಾಶ್ವತವಾಗಿ ನರಕದ ಅಧಿಕಾರದ ಮೇಲೆ ಕಲ್ಪಿಸುವುದೇ ಲೇಸೆಂದು ಶ್ರೀ ವಿಷ್ಣುವು ತಾನೇ ಸ್ವಹಸ್ತದಿಂದ ಶ್ಯಾನುಭೋಗರಿಗೆ ಪುನಃ ನರಕದ ಪಟ್ಟಾಭಿಷೇಕವನ್ನು ಮಾಡಿ ಕ್ಷೀರಸಾಗರಕ್ಕೆ ಹೊರಟುಹೋದನ

ಮನ್ನಾರಾಯಣನ ಆಜ್ಞೆಯಲ್ಲವೆ? ಮೀರಲು ಯಾರಿಂದ ತಾನೆ ಸಾಧ್ಯ ವನ್ನು ಓದಿ ನೋಡಿ, ಯಮಧರ್ಮನು ಸನದಿಂದ ಇಳಿದು ಬಂದು, ಶ್ಯಾನುಭೋಗರ ಕೈಹಿಡಿದು ಅವರನ್ನು ತಾನೇ ಸಿಂಹಾಸನದ ಮೇಲೆ ಕುಳ್ಳಿರಿಸಿದನು ಬಳಿಕ ಯಥಾನುಕ್ರಮವಾಗಿ ಪಟ್ಟಾಭಿಷೇಕವು ನಡೆಯಿತು

ಪಟ್ಟಾಭಿಷೇಕವಾದೊಡನೆ ಶ್ಯಾನುಭೋಗರು ಮೊದಲು ಯಮಧರ್ಮನನ್ನು ಬಿಗಿದು ಹಿಡಿಯುವಂತೆ ಚಾರರಿಗೆ ಅಪ್ಪಣೆಯನ್ನಿತ್ತರು ಚಿತ್ರಗುಪ್ತರಿಗೆ ಆತನ 'ಜಾತಕ'ವನ್ನು ಓದಿಹೇಳುವಂತೆ ತಿಳಿಸಿದರು ಅದನ್ನು ಕೇಳಿಯಾದ ಬಳಿಕ "ಎಲೇ, ಮಾಜಿ ಯಮಧರ್ಮನೇ, ಅಹಹ! ನೀನು ಮಾಡಿದ ಕೊಲೆಗಳೆಷ್ಟೆಂದು ಬಲ್ಲೆಯಾ? ಕೋಟ್ಯಾಂತರ ಜೀವಿಗಳನ್ನು ನಾನಾ ಬಗೆಯ ಕ್ರೂರ ರೀತಿಯಲ್ಲಿ ಹಿಂಸಿಸಿ ಕೊಂದಿರುವೆ. ನಿನ್ನಂತಹ ಪಂಚಮ ಹಾ ಪಾತಕಿಯು ಈದೀ ಪ್ರಪಂಚದಲ್ಲಿ ಹುಡುಕಿದರೆ ಇನ್ನೊಬ್ಬನು

The Estates & Agency Co., Ltd.

Incorporated in England

ಮಿಶ್ರರಹಿತ ಟೀ ಬಗ್ಗೆ ಭದ್ರತೆ

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಈ ಕೆಳಗೆ ಸೂಚಿಸಿದ ನಿಶಾನಿ ಮತ್ತು ಅಡ್ಡಪಟ್ಟಿಗಳಿಂದ ಸುತ್ತಲ್ಪಟ್ಟು, ಸೀಲ್ ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲ್ಲರಿಗೂ ತಿಳಿಸಲು ಅಪೇಕ್ಷಿಸುತ್ತೇವೆ



PYKARA NO 1 DUST.
SEAFORTH NO 1 DUST
HIGHFOREST NO 1 DUST

ನಮ್ಮ ಜನಪ್ರಿಯವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡೆಕೊಳ್ಳುವಾಗ ನಮ್ಮ ನಿಶಾನಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡೆಕೊಳ್ಳುವದು

The Estates & Agency ompany Lid.
Head Office:-NADUVATAM P. O
Sales Branch:-COCHIN

ತಿಂಗಳ
ಬಜಾರಿನ
ಅಧ್ಯಕ್ಷಿಂ
ಕ್ಷತೆಯ
ಬೇಕಾಗಿ
ಗಿನ ಚಿ
ತಿಂಗಳಿಗೆ
ಪಡಿಸುವ
ವಾರ್ಷಿಕೊ
ರಣ, ಅ
ಟ್ಟಿತು
ಹಿಂದೀ-

ವುದೆಂದೂ, ಅದಕ್ಕೆ ತಾವೆಲ್ಲರೂ ಸಿದ್ಧರೆಂಬುದಾಗಿ ಅಂದು ಭಾಷಣವಿತ್ತರು. ನಂತರ, ಅಧ್ಯಕ್ಷೆಯರು ಕೆಲಸಗಾರರೆಲ್ಲರೂ ಒಟ್ಟಾಗಿ ಏನೊಂದೂ ಆತಂಕಗಳು ಬಂದರೂ ಅವನ್ನು ಧೈರ್ಯಗುಂದದೆ, ಆಗಾಗ್ಗೆ ಸಭೆಗಳನ್ನು ಜರಗಿಸಿ ಸಂಘದ ಚಳವಳವನ್ನು ಆದಷ್ಟು ಪ್ರಚಾರಗೊಳಿಸಿ ಅದನ್ನು ಬಲಪಡಿಸಿಕೊಳ್ಳಬೇಕಾಗಿ ವಿವರಿಸಿ ಭಾಷಣವಿತ್ತರು.

ಸಭಾಂತ್ಯದಲ್ಲಿ ವಾರ್ಷಿಕೋತ್ಸವಕ್ಕೆ ಎಲ್ಲಾ ಪ್ರೆಸ್ ಕೆಲಸಗಾರರೂ ಊರ ಮಹಾಜನರೂ ತನುಮನ ಧನದಿಂದ ಪ್ರೋತ್ಸಾಹಕೊಡಬೇಕೆಂದು ಕೇಳಿಕೊಳ್ಳಲಾಯಿತು.

ಮಂಗಳೂರು ಟೌನ್ ಕೊಂಗ್ರೆಸ್ ಕಮಿಟಿ ಚುನಾವಣಾ ಪತ್ರಿಕೆ.

ಈಗ ಮಂಗಳೂರು ಟೌನ್ ಕೊಂಗ್ರೆಸ್ ಕಮಿಟಿಯ ೫೦ ಸ್ಥಾನಗಳಲ್ಲಿ ೩ ಸ್ಥಾನಗಳು ಖಾಲಿ ಇವೆ. ಈ ಬಗ್ಗೆ ಇಬ್ಬರು ಪ್ರತಿನಿಧಿಗಳನ್ನು ಆರಿಸಬೇಕಾಗಿದೆ. ಈ ಎರಡು ಸ್ಥಾನಗಳ ಮತದಾರರ ಪಟ್ಟಿಯು ಆಫೀಸಿನಲ್ಲಿದೆ. ಅದನ್ನು ನೋಡಬಯಸುವವರು ಆಫೀಸು ಸಮಯದಲ್ಲಿ ಬಂದು ನೋಡಬಹುದು. ಈ ವಿಭಾಗಗಳಿಂದ ಉಮೇದುವಾರರಾಗಿ ನಿಲ್ಲಲಪೇಕ್ಷೆಯುಳ್ಳವರು ಆ ವಿಭಾಗದ ವರೇ ಆಗಿರತಕ್ಕದ್ದು. ಉಮೇದುವಾರರು ತಮ್ಮ ನಾಮ ಪತ್ರದೊಂದಿಗೆ ಟೌನ್ ಕೊಂಗ್ರೆಸ್ ಕಮಿಟಿಯ ಫೀಸು ಆಣೆ ಎಂಟನ್ನು ಕೊಡತಕ್ಕದ್ದು. ಉಮೇದುವಾರರು ಸತತ ಖದ್ದರ್ ಧರಿಸುವವರಾಗಿರಬೇಕು. ೮ನೇ ವಿಭಾಗ ೧೫ನೇ ನಂಬ್ರ ಸೆಂಟ್ರಲ್ ವಾರ್ಡ ೨೮ನೇ ಲಿಸ್ಟು. ೫ನೇ ವಿಭಾಗ ೧೮ನೇ ಸೌತ್ ಮಾರ್ಕೆಟ್ ೩೧ನೇ ಲಿಸ್ಟು. ಉಮೇದುವಾರರ ನಾಮ ಪತ್ರಗಳನ್ನು ಇದೇ ತಾ ೧೦—೪—೩೮ರ ಸಂಜೆ ಘಂಟೆ ೬ರ ವರೆಗೆ ಸ್ವೀಕರಿಸಲಾಗುವುದು. ಅದೇ ಕೂಡಲೇ ಅವುಗಳನ್ನು ಪರೀಕ್ಷಿಸಲ್ಪಟ್ಟು ಮಾರನೇ ದಿನ ಪ್ರಕಟಿಸಲ್ಪಡುವುವು. ನಾಮಪತ್ರವನ್ನು ಹಿಂತೆಗೆಯಲಿಚ್ಛಿಸುವವರು ತಮ್ಮ ನಾಮಪತ್ರಗಳನ್ನು ತಾ ೧೨—೪—೩೮ರ ಸಂಜೆ ಘಂಟೆ ೬ರ ಒಳಗೆ ಹಿಂತೆಗೆಯಬಹುದು. ಚುನಾವಣೆಯು ಅಗತ್ಯಬಿದ್ದಲ್ಲಿ ತಾ ೧೭-೪-೩೮ನೇ ದಿನ ಬೆಳಿಗ್ಗೆ ಘಂಟೆ ೮ರಿಂದ ೧೨ರ ವರೆಗೂ ಮತ್ತು ಮಧ್ಯಾಹ್ನ ೨ರಿಂದ ೬ರ ವರೆಗೂ ಗುಪ್ತಮತದಾನ ರೀತಿಯಿಂದ ನಡೆಸಲ್ಪಡುವುದು. ಮತ್ತು ಹೆಚ್ಚಿನ ಮಾಹಿತಿಗೆ ಟೌನ್ ಕೊಂಗ್ರೆಸ್ ಆಫೀಸಿನಲ್ಲಿ ವಿಚಾರಿಸಿ ಪಡೆಯಬಹುದು ಎಂದು ಯು. ಶ್ರೀನಿವಾಸ ಮಲ್ಯ, ಅಧ್ಯಕ್ಷ, ಮಂಗಳೂರ ಟೌನ್ ಕೊಂಗ್ರೆಸ್ ಕಮಿಟಿ ಇವರು ತಿಳಿಸುತ್ತಾರೆ.

ಹಿಂದೀ ಕಲಿಸುವರೆ ಸರಕಾರದ ಅಪ್ಪಣೆ.

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಶಾಲೆಗಳಲ್ಲಿ ಹಿಂದೀ ಕ್ಲಾಸುಗಳನ್ನು ತೆರೆದು ಕಲಿಸುವಂತೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಷನ್‌ರಿಂದ ಹುಕುಂ ಬಂದಿರುವುದಾಗಿ ತಿಳಿದುಬರುತ್ತದೆ. ಗವರ್ನಮೆಂಟ್ ಕಾಲೇಜು, ಗವರ್ನಮೆಂಟ್ ಸೆಕಂಡರಿ ಮತ್ತು ಟ್ರೈನಿಂಗ್ ಸ್ಕೂಲ್ ಫೊರ್ ವಿಮೆನ್, ದಿ ಸೈಂಟ್ ಎಲೋಸಿಯಸ್ ಕಾಲೇಜು ಕೆನರಾ ಹೈಸ್ಕೂಲ್, ಮುಲ್ಕಿ ಮತ್ತು ಪುತ್ತೂರು ಬೋರ್ಡ್ ಹೈಸ್ಕೂಲುಗಳಲ್ಲಿ ಮೊದಲನೆಯದಾಗಿ ಇದನ್ನು ಪ್ರಾರಂಭಿಸಬೇಕೆಂದು ಅಪ್ಪಣೆಬಂದಿರುತ್ತದೆ.

ಚೇಂಬರ್ ಆಫ್ ಕೊಮರ್ಸ್

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಮುಖ್ಯ ವರ್ತಕರು ಚೇಂಬರ್ ಆಫ್ ಕೊಮರ್ಸ್ ಎಂಬ ವರ್ತಕ ಸಂಘವು ಆವಶ್ಯಕವಿರುವುದನ್ನು ಮನಗಂಡು, ಇದೇ ಬರುವ ಆದಿತ್ಯವಾರ, ಕೆನರಾ ಬೇಂಕಿನ ವಠಾರದಲ್ಲಿ ಒಂದು ಸಭೆಯನ್ನು ಜರುಗಿಸಿ, ಸದ್ರಿ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಯೋಚಿಸುವರಾಗಿ ತಿಳಿದುಬರುತ್ತದೆ.

ವನ್ನು ಸಾರ್ವಜನಿಕರಿಗೆ ಶೀಘ್ರದಲ್ಲಿಯೇ ಒದಗಿಸಿಕೊಡುವರಾಗಿ ನಂಬುತ್ತೇನೆ.

ತಾ ೨೮—೩—೧೯೩೮ರ ದಿನ ಪಾವಂಜೆಯ ಶ್ರೀ ಯಸ್ ಯನ್. ಶಂಕರ ನಾರಾಯಣ ಹರಿದಾಸ ಎಂಬವರು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಸ್ವಾಮಿ ಪ್ರಭುಗಳ ಅಧ್ಯಕ್ಷತೆಯಲ್ಲಿ 'ಭಕ್ತ ಪ್ರಹ್ಲಾದ' ಎಂಬ ಸುಪ್ರಸಿದ್ಧವಾದ ಹರಿಕತೆಯನ್ನು ಮಾಡಿದರು. ಭಕ್ತಿಯ ಲಕ್ಷಣ ಮತ್ತು ಸಮಾಜದಲ್ಲಿ ಹರಿದಾಸರ ಸ್ಥಾನ ಮಾನಗಳ ಕುರಿತ ಅಧ್ಯಕ್ಷರು ಆ ಸಮಯಕ್ಕೆ ಒಂದು ಚಲೋ ಭಾಷಣವನ್ನು ಕೂಡ ಕೊಟ್ಟಿದ್ದರು.

ಕಾರ್ಕಳ ಗ್ರಾಮದ ಫೆಬ್ರವರಿ ಮಾರ್ಚ ತಿಂಗಳುಗಳ ಕಂದಾಯ ವಸೂಲಿಯು ಬಹಳ ತೃಪ್ತಿಕರವಾಗಿ ನಡೆದಿರುವುದು. ವಸೂಲಾಗಬೇಕಾದ ೫೦೦೦ ರೂಪಾಯಿಗಳಲ್ಲಿ ಕೇವಲ ೧೦೦ ರೂಪಾಯಿಗಳು ಬಿಟ್ಟು ಉಳಿದ ಹಣವೆಲ್ಲವೂ ಜನರು ಸ್ವಯಂ ಸ್ಫೂರ್ತಿಯಿಂದ ವಸೂಲು ಕೊಟ್ಟಿರುವರು. ಮುಂದಿನ ವಸೂಲಿಯೂ ಹೀಗೆಯೇ ನಡೆದೀತೆಂದು, ಅದಲ್ಲದೆ ಇದು ಕಾಂಗ್ರೆಸ ಸರಕಾರದ ಮೇಲೆ ಜನರಿಗಿರುವ ಅಭಿಮಾನ ಮತ್ತು ವಸೂಲಿ ಅಧಿಕಾರಿಗಳ ದಕ್ಷತೆಯ ಪ್ರಮಾಣವೆಂದು ಜನರಾಡಿಕೊಳ್ಳುತ್ತಾರೆ.

ಉಡುಪಿ

ತಾ ೩೧ನೇ ಸ್ಥಳೀಯ ಮ್ಯುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆ ... ವಿದ್ಯಾಭ್ಯಾಸವನ್ನು ಕಡ್ಡಾಯ ಮಾಡುವುದರ ಬಗ್ಗೆ ಆಲೋಚಿಸುವರೆ ನೆರೆದ ಸದಸ್ಯರು ಹಾಜರಿದ್ದರು. ಮ್ಯುನಿಸಿಪಲ್ ಅಧ್ಯಕ್ಷರಾದ ಶ್ರೀ ... ರಾಯರು ಸಭಾಧಿಪತಿಗಳಾಗಿದ್ದರು. ಸದರಿ ವಿಷಯ ಜಿಲ್ಲಾ ವಿದ್ಯಾಧಿಕಾರಿಗಳ ಸಲಹೆ ಸೂಚನೆಗಳನ್ನು ಕೇಳಿಕೊಂಡು ಮುಂದುವರಿಸಬೇಕೆಂದಾಯಿತು.

ಅದು ವಿಸರ್ಜನೆಯಾದ ಸ್ವಲ್ಪ ಹೊತ್ತಿನಲ್ಲಿ ಸಾಧಾರಣ ಸಭೆಯು ಪ್ರಾರಂಭವಾಯಿತು. ಮುನಿಸಿಪಾಲಿಟಿಯೊಳಗಣ ರಸ್ತೆ ಇತ್ಯಾದಿಗಳ ಬಗ್ಗೆ ಕಾಮಗಾರಿಗಳ

ಮ್ಯುನ್ಸಿಪಲ್ ಕೌನ್ಸಿಲಿನ ಸಭೆ

ತಾ ೩೧—೩ ೩೮ನೇ ಅಪರಾಹ್ನ ೮-೩೦ಕ್ಕೆ ಮ್ಯುನಿಸಿಪಲ್ ಕೌನ್ಸಿಲಿನ ಸಭೆಯು ಜರಗುವುದಾಗಿ ಕೊಟ್ಟ ನೋಟೀಸು ಮೇರೆಗೆ ಕೌನ್ಸಿಲರು ಸೇರಿದ್ದರು. ಆದರೆ ಅದೇ ದಿನ ೩ ಗಂಟೆಗೆ ಚೆಯರ್‌ಮೇನ್ ಮತ್ತು ಕೌನ್ಸಿಲರುಗಳ ಅವಧಿಯು ಮುಗಿದಿರುವದರಿಂದಲೂ ಮತ್ತು ಡಿಪ್ಯುಟಿ ಕಲೆಕ್ಟರರು ಅದೇ ದಿನ ಮಧ್ಯಾಹ್ನ ಚೇಯರ್ ಮೇನರ ಚಾರ್ಜು ವಹಿಸಿಕೊಂಡಿರುವುದರಿಂದ ಅವಧಿ ಮುಗಿದ ಮೆಂಬರರು ಸೇರಿ ಸಭೆ ಜರುಗಿಸಿ, ಪಾಸು ಮಾಡಿದ ನಿರ್ಣಯಗಳು ಸಿಂಧುವಾಗಲಿಕ್ಕಿಲ್ಲವೆಂಬ ಆರ್ಜಿಯಿಂದ, ಆ ಕುರಿತು ಮದ್ರಾಸಿಗೆ ಮೊದಲೇ ತಂತಿ ಕೊಟ್ಟಿತ್ತು. ಆದರೆ ಉತ್ತರ ಬರುವ ವರೆಗೆ ಈ ಮುಂಚೆ ನಿಶ್ಚಯಿಸಿದಂತೆ, ದಿವಂಗತ ಕಾರ್ನಾಡ ಸದಾಶಿವರಾಯರ ಭಾವಚಿತ್ರ, ಅನಾವರಣ ಕೆಲಸವನ್ನು ಮಾಡುವಂತೆ ನಿರ್ಣಯಿಸಿ ಸಭೆಯು ಆರಂಭವಾಯಿತು. ಶ್ರೀಗಳಾದ ಕಲ್ಕೇರಿ ರಂಗರಾವ್, ಎಮ್. ಮಾಧವ ರಾವ್, ಎಚ್. ಎಸ್. ಶ್ರೀಕಾ, ಡಾ। ಯು. ಪಿ. ಮಲ್ಯ, ಡಾ। ಗಿಂಡರರಾವ್ ಮತ್ತು ಜೆ. ಗುರುವನವರು ದಿವಂಗತ ಸದಾಶಿವರಾಯರ ಗುಣಕಥನ ಮಾಡಿ ಭಾಷಣಗಳು ಆದ ತರುವಾಯ ಡಾ। ಪಿಕ್ಕೆಲ್ ಶೆಟ್ಟಿ ದಿವಂಗತರ ಭಾವಚಿತ್ರವನ್ನು ಅನಾವರಣ ಮಾಡಿದರು. ಕೊನೆಗೆ ಮದ್ರಾಸಿನಿಂದ ಉತ್ತರವಾಗಿ, ಕೌನ್ಸಿಲರ ಅವಧಿಯನ್ನು ಮುಂದರಿಸುವರೆ ಸರಕಾರಕ್ಕೆ ಅಧಿಕಾರವಿಲ್ಲವೆಂದು, ತಂತಿ ಬಂದುದರಿಂದ ಕೌನ್ಸಿಲಿನ ಸಭೆಯನ್ನು ಜರುಗಿಸಲಾಗಲಿಲ್ಲ.

ಬಗ್ಗೆ ಹೊಸ ಟೆಂಡರುಗಳನ್ನು ಪತ್ರ ಮೂಲಕ ಪ್ರಕಟಣೆಯಿಂದ ಕರೆಯಬೇಕೆಂದಾಯಿತು. ಸ್ಥಳೀಯ ಮುನ್ಸಿಫ್ ಕೋರ್ಟನ್ನು ಸರಕಾರದವರು ತೆಗೆದುಹಾಕುವುದರಲ್ಲಿದ್ದಾರೆಂದು ತಿಳಿದು ಬಂದ ಸಂಗತಿಯಿಂದ, ಅದನ್ನು ತೆಗೆದರೆ ಜನತೆಗೆ ಬಹಳ ತೊಂದರೆಯುಂಟಾಗುವುದೆಂಬುದರ, ಸದರಿ ಕೋರ್ಟನ್ನು ಇಲ್ಲೇ ಇರಗೊಡಿಸಬೇಕಾಗಿ ಸರಕಾರವನ್ನು ವಿನಂತಿಸಿ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನ್ನು ಸರಕಾರದವರು ತೆಗೆದುಹಾಕುವ ಯೋಚನೆ ಮಾಡಲಿರುವರೆಂದು ತಿಳಿದು ತಮ್ಮ ವಿಷಾದ ಸೂಚಿಸಿ, ಸದರಿ ಕೋರ್ಟನ್ನು ಉಡುಪಿಯಲ್ಲೇ ಇರಗೊಡಿಸಬೇಕಾಗಿ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯ ಕಾರ್ಯನಿರ್ವಾಹಕ ಮಂಡಳಿಯು ತಾ ೧—೪—೩೮ರ ವಿಶೇಷ ಸಭೆಯ ಸರ್ವಾನುಮತದ ನಿರ್ಣಯದ ಮೇರೆಗೆ ಮಾನ್ಯ ಸರಕಾರವನ್ನು ಕೇಳಿಕೊಳ್ಳಬೇಕೆಂದಾಯಿತು. ಅಲ್ಲದೆ ತಾಲೂಕು ರಾಜಕೀಯ ಪರಿಷತ್ತಿಗೆ ಅಧ್ಯಕ್ಷೆಯಾಗಲು ತಮಗೆ ಅನಾನುಕೂಲವನ್ನು ಸೂಚಿಸಿ ಶ್ರೀಮತಿ ಕೃಷ್ಣಾಬಾಯಿ ಅವರ ಕಾಗ್ದ ಬಂದ ಮೇರೆಗೆ, ಸದರಿ ಪರಿಷತ್ತಿಗೆ ಅಧ್ಯಕ್ಷರನ್ನಾರಿಸಿ ನಿಶ್ಚಯಿಸಲು ತಾ ಕೊಂ ಕ ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು. ತಾ ೬ರಿಂದ ೧೩ರ ವರೆಗೆ ಅಖಿಲ ಭಾರತದಲ್ಲಿ ಆಚರಣೆಯಲ್ಲಿರುವ ರಾಷ್ಟ್ರೀಯ ಸಪ್ತಾಹದ ವೇಳೆಗೆ ಇತರ ಕಾರ್ಯಕ್ರಮಗಳನ್ನು ಎಂದಿನಂತೆ ನಡೆಸುವುದರ ಜೊತೆಯಲ್ಲಿ ವಿಶೇಷತಃ ಹೊಸ ವರ್ಷಕ್ಕೆ ಕೊಂಗ್ರೆಸು ಪ್ರಾಥಮಿಕ ಸದಸ್ಯರನ್ನು ಸೇರಿಸುವುದರಲ್ಲಿ ಹೆಚ್ಚಿನ ಉತ್ಸಾಹವನ್ನು ತಳೆಯಬೇಕೆಂದು ವಿನಂತಿಸಲಾಗುತ್ತಲ್ಲದೆ, ಕೇಂದ್ರ ಕೊಂಗ್ರೆಸು ಕಮಿಟಿಗಳಿಗೆ ಅವರಿರುವ ಕೊಂಗ್ರೆಸು ಸದಸ್ಯತನ ಫೋರ್ಮುಗಳ ಪುಸ್ತಕಗಳನ್ನು ತಾ. ಕೊಂ ಕಮಿಟಿ ಕಾರ್ಯದರ್ಶಿಗಳಿಂದ ಒದಗಿಸಿಕೊಳ್ಳಬೇಕಾಗಿಯೂ ಅಪೇಕ್ಷಿಸಲಾಗುತ್ತದೆ. ತಾ. ಕೊಂ ಕ ಕಾರ್ಯದರ್ಶಿ

ಉಡುಪಿ ಆಸುಪಾಸು ಹಳ್ಳಿಗಳಲ್ಲೂ ಉಡುಪಿ ಡಿ ಮು ಕೋರ್ಟನ್ನು ಸರಕಾರದವರ ತೆಗೆದುಹಾಕುವ ಯೋಚನೆಯಿಂದ ತೆಗೆದು ಹಾಕುವುದರ ... ಬಗ್ಗೆ ಆಕ್ಷೇಪಗಳು ಸಭಾ ಮತ್ತು ಜನವಿಗಳ ಮೂಲಕ ಪ್ರದರ್ಶಿಸಲಾಗಿ, ಸದರಿ ಕೋರ್ಟನ್ನು ಉಡುಪಿಯಲ್ಲೇ ಇಡಿಸಿ ... ಇರಬೇಕಾಗಿ ...

ವಠಿವಾಟುಗಳಿಗೂ ಕೇಂದ್ರವಾಗಿ ಸಮೀಪದ್ದಾಗಿರುವ ಉಡುಪಿಯಲ್ಲೇ ಕಾಯಮಾಗಿಡಬೇಕೆಂದು ಕೇಳಿಕೊಂಡು ನಿರ್ಣಯಗಳು ಆಗುತ್ತಲಿವೆಯೆಂದು ತಿಳಿದುಬರುತ್ತದೆ.

ಅಂಕಸಂಖ್ಯೆಗಳಿಂದೊಡಗೂಡಿದ ಮನವಿಯೊಂದು ತಯಾರಾಗುತ್ತಲಿದ್ದು, ಮಹಾಜನರ ಸಹಿಗಳಿಂದೊಡಗೂಡಿ, ಡೆಪ್ಯುಟೇಶನೊಂದು ಮುಖ್ಯ ಮಂತ್ರಿ ಮತ್ತು ಹೈಕೋರ್ಟಿನವರೊಡನೆ ಪ್ರತ್ಯಕ್ಷ ಅಹವಾಲೆಗಳನ್ನು ಬೇಡುವ ಹಡಿಸಲಿರುವರೆಂದು ತಿಳಿದುಬರುತ್ತದೆ.

ಪುತ್ತೂರು ತಾಲೂಕು ಕಾಂಗ್ರೆಸು ಕಮಿಟಿ ಬೆಳ್ಳಾರೆ, ದ. ಕ.

ಇದೇ ತಾ ೧೦—೪—೩೮ನೇ ದಿನ ಪೂರ್ವಾಹ್ನ ಗಂಟೆ ೧೦-೩೦ಕ್ಕೆ ಸರಿಯಾಗಿ ತಾಲೂಕು ಕಮಿಟಿಯ ಮಹಾಸಭೆಯು ಪುತ್ತೂರು ಸರಕಾರೀ ಸಂಘದ ಕಟ್ಟಡದಲ್ಲಿ ಜರಗಲಿಕ್ಕಿರುವುದು. ಆ ದಿವಸದ ಸಭೆಗೆ ಎಲ್ಲಾ ತಾಲೂಕು ಕಾಂಗ್ರೆಸು ಕಮಿಟಿಯ ಸದಸ್ಯರು ಬರಬೇಕಾಗಿ ಕೋಟಿ ಗಣೇಶ ಸುಬ್ಬಪ್ಪಯ್ಯ, ಕಾರ್ಯದರ್ಶಿ ಇವರ ವಿನಂತಿ.

ನಿಲೇಶ್ವರದಲ್ಲಿ ಮಿಂಚಿನ ಭಯಂಕರ ಅನಾಹುತ 11 ಜನರ ಮರಣ

ಕಳೆದ ಆದಿತ್ಯವಾರ ರಾತ್ರಿ ಕಥಕ್ಕಳಿ ಆಟವನ್ನು ನೋಡುವರೆ ಆಸುಪಾಸಿನ ಹಳ್ಳಿಗಳಿಂದ ಸುಮಾರು ಒಂದು ಸಾವಿರ ಜನರು ಬಂದು ನೆರೆದಿದ್ದರು. ೧೧ ಗಂಟೆಯ ಸಮಯಕ್ಕೆ ಮೋಡಗಳು ಕವಿದು, ಮಳೆ ಬರಲು ಪ್ರಾರಂಭವಾಯಿತು. ಜನರೆಲ್ಲರೂ ಕಕ್ಕಾಬಿಕ್ಕಿಯಾಗಿ ಚದರಲು ಸುರುವಾಯಿತು. ಇಷ್ಟಾಗುವಷ್ಟರಲ್ಲಿ ಭಯಂಕರವಾದ ಮತ್ತು ಕಣ್ಣು ಕುರುಡು ಮಾಡುವಷ್ಟು ಹೊಳಪಿನ ಮಿಂಚು ಹೊಳೆದು ಆಟದ ರಂಗಸ್ಥಳದ ಬಳಿಯಲ್ಲಿ ಹೊಡೆಯಿತು ಮತ್ತು ಅದರ ಹಿಂದೆಯೇ ಭಯಂಕರವಾದ ಗುಡುಗು ಕೇಳಿಸಿತು. ಇದಾದ ಕೂಡಲೇ ಯಾರಿಗಾದರೂ ಮಿಂಚು ತಗಲಿರಬಹುದಾಗಿ ದೂರದಲ್ಲಿದ್ದವರು ಊಹಿಸಿದ್ದರು. ಕಡೆಗೆ ಕೆಲವರು ಟೋರ್ಚ್ ಲೈಟುಗಳನ್ನು ಹಿಡಿದು ಧೈರ್ಯದಿಂದ ಮಿಂಚು ಒಡೆದ ಸ್ಥಳದ ಸಮೀಪ ಬಂದು ನೋಡುವಾಗ ಒಂದರಮೇಲೊಂದಾಗಿ ಕೆಲವು ಜನಗಳು ಬಿದ್ದಿದ್ದವು. ಮಾತ್ರವಲ್ಲದೆ ಜನರು ಮೂರ್ಛೆಯಾಗಿ ಬಿದ್ದಿದ್ದರು. ಕೂಡಲೇ ಡಾಕ್ಟರರನ್ನು ಕರೆಸಿ, ಹೆಚ್ಚಿನವರಿಗೆ ಪ್ರಥಮ ಚಿಕಿತ್ಸೆಯನ್ನು ಮಾಡಲಾಯಿತು. ಈ ಅನಾಹುತದಿಂದಾಗಿ ೧೧ ಮಂದಿ ಮರಣಹೊಂದಿ ಮತ್ತು ೪೦ ಮಂದಿಗೆ ಜಖಂ ಆಗಿರುವುದಾಗಿ ತಿಳಿದುಬಂದಿದೆ. ಈ ವರೆಗೆ ಇಷ್ಟು ಭಯಾನಕ ಅನಾಹುತವು ಯಾರೂ ಕೇಳಿರುವುದಿಲ್ಲವಾಗಿ ಹೇಳುವರು.

ಒಂದೇ ಸೀಸೆಯಿಂದ

ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!
ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯಲ್ಲಿದೆ
ಕೇಸರಿ ಕುಟೀರಂ—ರಾಯಪೇಟೆ—ಮದ್ರಾಸು.
ಮಂಗಳೂರು ಪ್ರವರ್ತಕರು — ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

ಗಾಂಧೀ ಸೇವಾ ಸಂಘ

ಮಹಾತ್ಮಾಜೀಯವರ ಆರಂಭ ಭಾಷಣ

ಅಹಿಂಸೆಯ ವಿಮರ್ಶೆ

ನನಗಿಂತಲೂ ಅಸೌಖ್ಯದಲ್ಲಿರುವ ಕಿಶೋರ್ ಲಾಲ್‌ಬಾಯಿಯವರು ದೀರ್ಘವಾದ ಮತ್ತು ಆಲೋಚನಾಪೂರ್ಣವಾದ ಭಾಷಣ ಮಾಡಿರುವರು. ನಮ್ಮೊಳಗೆ ಇರುವ ಊನ ನ್ಯೂನಗಳೂ ಮತ್ಸರ ಅಸೂಯೆಗಳು ಒಪ್ಪಿ ಕೆಲಸ ಮಾಡಲು ಹಿಂತೆಗೆವ ದುರ್ಗುಣಗಳು ಎಷ್ಟಿವೆ ಎಂಬುದನ್ನು ಅವರು ವಿವರಿಸಿರುವರು. ನಮ್ಮ ಅನುದಿನದ ಜೀವನದಲ್ಲಿ ನಮ್ಮ ವಿಶ್ವಾಸಗಳು ಕಾರ್ಯತಃ ಪ್ರಕಟವಾಗಲಾರವಾದರೆ, ನಮ್ಮ ಹೆಗ್ಗಳಿಕೆ ಎಲ್ಲ ಉಳಿಯಿತೆನ್ನುವರು. ನಮ್ಮ ಆದರ್ಶದ ಕಡೆಗೆ ನಾವು ದಿನದಿನಕ್ಕೂ ಮುನ್ನಡೆಯುತ್ತೇವೆಯೆ? ಒಂದು ವರ್ಷದ ಹಿಂದಿನಿಂದ ಈಚೆಗೆ ನಾವಿನ್ನೂ ಹಿಂಸಾಪರರಾಗಿ ಬೆಳೆದಿದ್ದೇವೆಯೆ? ಕ್ರೋಧವಶರಾದ ಸಂದರ್ಭಗಳು ಕಡಮೆಯಾಗಿದ್ದುವೆ? ಈ ಪ್ರಶ್ನೆಗಳನ್ನು ನಮಗೆ ನಾವೇ ಆಗಾಗ ಕೇಳುತ್ತಿರಬೇಕಾಗಿದೆ. ಅಹಿಂಸೆಯ ವ್ರತವು ಕತ್ತಿಯ ಧಾರೆಗಿಂತಲೂ ಸೂಕ್ಷ್ಮವೂ ತೀಕ್ಷ್ಣವೂ ಆಗಿದೆ. ಅದರ ಆಚರಣೆಯು ನಮ್ಮ ಅನುದಿನದ ಆಹಾರಕ್ಕಿಂತ ಉಪಕಾರಿಯಾಗಿದೆ. ಸರಿಯಾದ ಆಹಾರವು ದೇಹವನ್ನು ಪೋಷಿಸುವುದು; ಸರಿಯಾದ ಅಹಿಂಸೆಯ ಅನುಷ್ಠಾನವು ಆತ್ಮವನ್ನು ಸಾಕುವುದು. ದೇಹಕ್ಕೆ ಆಹಾರವನ್ನು ನಾವು ಆಯಾ ಕಾಲಕ್ಕೆ ಬೇಕಾದ ಪರಿಮಾಣದಲ್ಲೇ ತೆಗೆದುಕೊಳ್ಳುವೆವು. ಆದರೆ ಅಹಿಂಸೆಯ ತತ್ವವನ್ನು ನಾವು ಇಡೀ ಜೀವಮಾನದಲ್ಲೆಲ್ಲ ಅಂಗೀಕರಿಸಿ ನಿರುತರವಾಗಿ ಸೇವಿಸುತ್ತಿರಬೇಕು. ಅತ್ಮದ ಆಹಾರವನ್ನು ಎಷ್ಟು ಉಂಡರೂ ಅದರಿಂದ ತೃಪ್ತಿಯಾಗುವುದೆಂದಿಲ್ಲ. ಯಾವ ಧ್ಯೇಯದ ಕಡೆಗೆ ನಾವು ಮುಂದರಿಯುವೆವೊ ಆ ಕಡೆಗೆ ಯಾವಾಗಲೂ ಹೋಗುವಾಗ ನಮ್ಮ ನಡೆಯನ್ನು ನಾವು ವಿಮರ್ಶಿಸುತ್ತ ಇರಬೇಕು.

...ಲ್ಲಿ ಎಲ್ಲಕ್ಕೂ ಮೇಲಾಗಿ, ಸತ್ಯದ ... ಸತ್ಯ, ಧೈರ್ಯ, ಸಹನೆ ಸಹಾನುಭೂತಿ ದಯೆ ಮೊದಲಾದ ಗುಣಗಳು ...ಗಿ ತೋರುತ್ತಿರಬೇಕು. ಯಥಾರ್ಥ...ನ ನಿಜ ತಂತ್ರವೆಂದು ಇಂಗ್ಲಿಷ ಗಾದೆ. ಅಹಿಂಸಾ ಧರ್ಮವು ಒಂದು ತಂತ್ರವು ದಿನದಿನಕ್ಕೆ ಮಾರ್ಪಡಲಾರದು. ಹಿಂಸೆ ನಡೆವಾಗಲೂ ಅಹಿಂಸೆಯನ್ನೆ...ವುದು ಅಗತ್ಯ. ಏಕೆಂದರೆ ಅಹಿಂಸೆ...ಲಾದ ಮನುಷ್ಯನು ಅಹಿಂಸೆಯನ್ನು ...ವುದು ವಿಚಿತ್ರವಲ್ಲ. ಹಿಂಸೆಗೆ ಇದಿರಾಗಿ ಹಿಂಸೆ, ಹೋರಾಡುವಾಗ ಮಾತ್ರ, ಅದು ಬಲವು ಪ್ರಕಟವಾಗುವುದು. ಇದ...ನಾವು ಸದಾ ಎಚ್ಚರವಾಗಿದ್ದು ಪ್ರಯತ್ನಿಸುತ್ತಿರಬೇಕು.

ದಂಗೆಗಳ ವಿಚಾರ— ಯುಕ್ತಪ್ರಾಂತ್ಯದಲ್ಲಿ ನಡೆಯುತ್ತಿರುವ ದಂಗೆಗಳು ನನ್ನ ಮನಸ್ಸನ್ನು ಬಹಳವಾಗಿ ನೋಯಿಸಿವೆ. ಅಹಿಂಸೆಯ ದೃಷ್ಟಿಯಿಂದ ಈ ದಂಗೆಗಳು ಹೇಗೆ ಕಾಣುವುವೆಂದು ...ಲಾನಾ ಅಜಾದರೊಡನೆಯೂ, ಬೋಸರೊಡನೆಯೂ ಚರ್ಚಿಸಿರುವೆನು. ನಾವು ನಮ್ಮ ಆದರ್ಶದ ಕಡೆಗೆ ನಡೆವ ಬದಲಾಗಿ, ಇನ್ನೂ ದೂರ ಹೋಗುತ್ತೇವೆಂದು ತಿಳಿದು ಬಂತು. ಹರಿಪುರದಲ್ಲಿ ಇನ್ನೂ ನಾವು ಬಲಗೊಳ್ಳುತ್ತೇವೆ ಎಂದು ಧೈರ್ಯಹೊಂದಿದ್ದೆನು, ನಮ್ಮ ಕುಂದುಗಳೆಷ್ಟೋ ಇರಲಿ, ನಾವು ಖಂಡಿತವಾಗಿಯೂ ನನ್ನೀ ಜೀವಮಾನದಲ್ಲಿಯೆ ಸ್ವರಾಜ್ಯ ಹೊಂದುವೆವು ಎಂದು ನಂಬಿದ್ದೆನು. ನಮಗೆ ಬೇಕಾದ ಬಲವನ್ನು ಇಷ್ಟರಲ್ಲೇ ಸಂಪಾದಿಸುವೆವೆಂದೂ ತಿಳಿದೆನು. ಆದರೆ ಅಲ್ಲಹಾಬಾದು ಮೊದಲಾದ ಸ್ಥಳಗಳಲ್ಲಿ ದಂಗೆಗಳಾದುದು ನನ್ನನ್ನು ಕಠೋರವಾಗಿ ತಲ್ಲಣಗೊಳಿಸಿಯದೆ. ಪೋಲೀಸ ಮತ್ತು ಸೈನಿಕರ ಸಹಾಯವನ್ನು ಕೊಂಡು ದಂಗೆ ಅಣಗಿಸಬೇಕಾಯಿತೆಂದರೆ ಇದಕ್ಕಿಂತ ಹೆಚ್ಚಿನ ನಾಚುಗೆ ನಮಗೆಲ್ಲಿಂದ ಬಂದೀತು?

ವೈಸರಾಯರು ನಮ್ಮ ಕೊಂಗ್ರೆಸ್ ಅಧ್ಯಕ್ಷರನ್ನು ನಾಳೆಗೆ ಕರೆಯಿಸಿಕೊಂಡು, ಕೊಂಗ್ರೆಸು ಸ್ವರಾಜ್ಯವನ್ನು ವಹಿಸಿಕೊಂಡೀತೇ ಎಂದು ಕೇಳಿದರೆ, ಅಧ್ಯಕ್ಷರು,—'ನಾವೇ ನಮ್ಮ ಆಡಳಿತ ವಹಿಸಿಕೊಳ್ಳುವೆವು, ಬ್ರಿಟಿಷರು ಇಲ್ಲಿಂದ ತೆರಳಬಹುದು.' ಎಂದೆನ್ನಲು ಅವರಿಗೆ ಧೈರ್ಯ ವುಂಟಾದೀತೆ? ನಮಗೆ ಪೋಲೀಸರೂ ಸೈನ್ಯವೂ ಇಲ್ಲದೆನೆ ನಾವು ರಾಜ್ಯಾಡಳಿತ ನಿರ್ವಹಿಸಬಲ್ಲೆವು ಎನ್ನಲು ಧೈರ್ಯವಿದೆಯೆ? ರಾಜರುಗಳೊಡನೆ ನಾವು ಒಪ್ಪಂದ ಮಾಡಿಕೊಂಡೇವು, ಜಮೀನ್ದಾರರೊಡನೆಯೂ ಮುಸ್ಲಿಮರೊಡನೆಯೂ ನಮ್ಮ ಸಂಧಾನಗಳಾವುವು ಎನ್ನಲು ನಮಗೆ ಧೈರ್ಯವಿದೆಯೆ? ಇಷ್ಟು ಕರಾರುಗಳನ್ನೆಲ್ಲ ನಾವು ತೃಪ್ತಿಕರವಾಗಿ ಮಾಡಿಕೊಂಡೇವು ಎನ್ನುವುದಕ್ಕೆ ನಾವು ನಿಜವಾಗಿಯೂ ಶಕ್ತಿಯುಳ್ಳವರೆಂದು ನಾನು ನಂಬುವುದಿಲ್ಲ. ಆದರೂ ನಿಜವಾದ ಅಹಿಂಸಾ ಬಲವು ನಮ್ಮಲ್ಲಿಲ್ಲದಿದ್ದರೆ, ಇದೊಂದೂ ಕಷ್ಟವಾಗುತ್ತಿರಲಿಲ್ಲ, ವೈಸ್ರಾಯರಿಗೆ ಖಂಡಿತವಾಗಿ ನಾವು ವಚನಕೊಡಬಹುದಾಗಿದ್ದಿತು.

ಅಹಿಂಸಾಬಲವು ದುರ್ಬಲರಿಗಲ್ಲ—

ಬಲಶಾಲಿಗಳೇ ಮಾತ್ರ ಈ ಅಹಿಂಸಾ ವ್ರತವನ್ನು ಕೈಗೊಳ್ಳಬಹುದಲ್ಲದೆ, ನಿರ್ಜೀವ ದುರ್ಬಲರಲ್ಲ. ದುರ್ಬಲರ ಕೈಯಲ್ಲೂ ಅದು ಒಂದು ಸಾಧಕ ಶಕ್ತಿಯಾಗಬಹುದು. ಆದರೆ ನಮ್ಮ ದುರ್ಬಲತೆಯನ್ನು ಅಡಗಿಸಿಡುವ ಒಂದು ಅಂಗಿಯಂತಿರಬಾರದು. ಹಾಗಾದಲ್ಲಿ ಅದು ನಮ್ಮ ಪೌರುಷವನ್ನು ನಿರ್ನಾಮಗೊಳಿಸುವುದು. ಇಂತಹ ಅಪೌರುಷಕ್ಕಿಂತ ಪಶುಬಲಿಗಳ ಪ್ರಬಲತೆ ಹೆಚ್ಚಿನದು. ಹೇಡಿಯಾಗುವುದಕ್ಕಿಂತ, ಹೆಣಗಿ ಸಾಯುವುದೇ ಲೇಸು. ನಾವೆಲ್ಲರೂ ಮೂಲತಃ ಪಶುಗಳಾದಿಯೆ ಇದ್ದು, ಕ್ರಮೇಣ ಆ ರೀತಿಯಾಗಿ ಮನುಷ್ಯತ್ವವನ್ನು ಹೊಂದಿದುವೆವೆಂದು ನಂಬುತ್ತೇವೆ. ಪಶುಬಲವೇ ನಮ್ಮದಾಗಿದ್ದರೂ ದೈವತ್ವವೂ ನಮ್ಮಲ್ಲಿ ಕೊಂಚ ಇದೆ ಎಂಬುದನ್ನು ತಿಳಿದುಕೊಂಡು, ನಮ್ಮಲ್ಲಿನ ಪರಮಾತ್ಮನನ್ನು ತಿಳಿದುಕೊಳ್ಳಲು ನಾವು ಪ್ರಯತ್ನಿಸುತ್ತೇವೆ. ಇದೇ ನಮಗೂ ಪಶುಗಳಿಗೂ ಇರುವ ತಾರತಮ್ಯ. ದೇವರನ್ನು ತಿಳಿದುಕೊಳ್ಳುವುದೆಂದರೆ, ಜೀವಿತ ಸೃಷ್ಟಿಯಲ್ಲೆಲ್ಲ ಆತನ ಇರವನ್ನು ತಿಳಿದುಕೊಳ್ಳುವುದಾಗಿದೆಯಷ್ಟೆ. ನಾವೆಲ್ಲ ಒಂದೇ ಜಾತಿ ಎಂದು ತಿಳಿದುಕೊಳ್ಳುವುದೇ ನಮ್ಮ ಧ್ಯೇಯ, ಪರಮಾತ್ಮ ಜ್ಞಾನ, ಆದುದರಿಂದ ಮನಃಪೂರ್ವಕವಾಗಿ ಬೇಕೆಂದೇ ದೇಹಬಲ ಪ್ರಯೋಗ ಮಾಡಲು ಹಿಂದೆಗೆದು, ನಮ್ಮಲ್ಲಿರುವ ಅಹಿಂಸಾ ಬುದ್ಧಿಯನ್ನು ಜಾಗ್ರತಗೊಳಿಸುವುದು ನಮ್ಮ ಕರ್ತವ್ಯವಾಗಿರಬೇಕು. ಇದನ್ನು ಸಾಧಿಸಲು ಒಲಬೇಕು. ಬಲಶಾಲಿಗಳಲ್ಲಿರುವ ಅಹಿಂಸಾಬಲವು ನಮ್ಮಲ್ಲಿರುವುದೆ? ನಮ್ಮಲ್ಲಿಲ್ಲವೆಂದು ಖಂಡಿತವಾಗಿ ಹೇಳಲೂ ನಮಗೆ ಯಾರೂ ಬಾಯಿ ಕಟ್ಟಿಲ್ಲ, ನಾವೂ ಹಿಂಸಾಪರರಾಗಬಹುದು, ಅಡ್ಡಿಯಿಲ್ಲ. ಆದರೂ, ನಾವು ಹಿಂಸೆ ಅಹಿಂಸೆಗಳೊಳಗೆ ಯಾವುದನ್ನು ಅಂಗೀಕರಿಸುವೆವೆಂದೂ ನಿಶ್ಚಯವಾಗಬೇಡವೆ?

ಅಹಿಂಸಾಪರತೆಯು ಬಲಶಾಲಿಗಳದೇ ಆಗಿದೆ ಎಂದಾದರೆ, ಇನ್ನೂ ಕೆಲವು ತತ್ವಗಳನ್ನು ನಾವು ಅಂಗೀಕರಿಸಬೇಕು. ಹಿಂದೂ ಮುಸಲ್ಮಾನರೊಳಗಾಗುವ ವೈಮನಸ್ಸು ದಂಗೆ ಮೊದಲಾದುವನ್ನು ಅಣಗಿಸಲು ನಾವು ಸಮರ್ಥರಾಗಬೇಕು. ಈ ಪ್ರಕಾರ ನಡೆದುಕೊಳ್ಳುವ ಅಹಿಂಸಾ ವ್ರತಿಯು ಹೇಗೆ ವರ್ತಿಸುವನು? ಕೊಂಗ್ರೆಸ್ ಕಮಿಟಿಯೇ ಈ ದಂಗೆಗಳನ್ನು ಅಣಗಿಸಲು ಮೂಲ ಜವಾಬ್ದಾರಿಯುಳ್ಳದು. ಇಂತಹ ಸಂದಿಗ್ಧ ಸಮಯಗಳಲ್ಲಿ ಸಾವಿರಾರು ಸ್ವಯಂಸೇವಕರು ನಮಗೆ ಬೇಕು. 1921ರಲ್ಲಿ ನಾವು ಸ್ವಯಂಸೇವಕರ ದಳ ನಿರ್ಮಿಸುವಾಗ ಅವರ ಪ್ರತಿಜ್ಞೆ ಎಂತಹುದೆಂದು ನಿರ್ಧರಿಸಿದೆವು. ಮನೋವಾಕ್ಕಾಯಗಳಲ್ಲಿಯೂ ಅಹಿಂಸಾಪರರಾದವನೇ ನಮ್ಮ ಸ್ವಯಂಸೇವಕನು. ಖಿಲಾಫತ್ತಿನ ಸ್ವಯಂಸೇವಕರ ಪ್ರತಿಜ್ಞೆಯೂ ಹೀಗಾಗಿರುವಂತೆ ಆಗ ಅಧ್ಯಕ್ಷರಾಗಿದ್ದ ಹಕೀಮ ಸಾಹೆಬರು ಅಜ್ಮಲ್ ಖಾನರು ನಿರ್ಧರಿಸಿದ್ದರು. ಖಿಲಾಫತ್ತಿನ ಪರಿಷತ್ತೂ ಇದನ್ನು ಬಹಳ ವಿಮರ್ಶೆಯ ತರುವಾಯವೇ ಅಂಗೀಕರಿಸಿತು. ಹಲವು ಮೌಲಾನರು ಈ ಪ್ರತಿಜ್ಞೆಯು ಧರ್ಮಸಮ್ಮತವಾಗಿದೆಂದರು. ಆದರೆ ಎಲ್ಲರೂ ಹೀಗೆ ಅಹಿಂಸಾಪರರಾದಾರೆ ಎಂದು ನಂಬುವುದು ಕಷ್ಟ. ಅವರು ನನ್ನಿಂದ ಮುಸ್ಲಿಮ್ ಪ್ರಭುತ್ವವನ್ನು ನಾನು ಸ್ಥಾಪಿಸುತ್ತೇನೆ ಎಂದು ಅವರು ಗುಣುಗುಟ್ಟಿದರು. ಅಹಿಂಸೆಯೇ ಅವರ ನೀತಿ ಆಧಿಪತ್ಯದ ವರ್ತನೆಯನ್ನು ಬೆಳೆಸುವುದಾಗಿ ನಾನು ಎಂದೆನು. ಇಂದಿಗೆ 17 ವರ್ಷಗಳ ಅಂದಿನಿಂದ ಕಳೆದ ಬಳಿಕವೂ ನಾವು ಅಹಿಂಸೆಯ ಆಧಿಪತ್ಯವನ್ನು ಇನ್ನೂ ಬೆಳೆಸಿರುವುದಿಲ್ಲ. ಅಂತಹ ಸ್ವಯಂಸೇವಕರ ದಳವನ್ನು ಸರಿಯಾಗಿ ನಿರ್ಮಾಣ ಮಾಡಲು ನಾವಿನ್ನೂ ಪ್ರಯತ್ನಿಸಿಲ್ಲ. ನಾವು ಹಾಗೆ ಮಾಡಲಾರೆವಾದರೆ, ನಮ್ಮ ಪ್ರತಿಜ್ಞೆಯಂತೆ ನಡೆದುಕೊಳ್ಳಲಾರೆವಾದರೆ ನಾವು ನಮ್ಮ ವರ್ತನೆಯನ್ನು ವಿಮರ್ಶಿಸಿ ನೋಡುವುದು ... ಆ ಪ್ರತಿಜ್ಞೆ ಇಂದಿಗೂ ಕಾಂಗ್ರೆಸ್ಸಿನ ಮೇಲೆ ಬರೆದಿಟ್ಟ ಕಲೆಯ ... ಉಳಿದಿದೆ ಎಂಬುದು ಶೋಚನೀಯ. ಈ ಪ್ರತಿಜ್ಞೆ ಊರ್ಜಿತವಾಗಿ ವರ್ತನೆಯಲ್ಲಿ ಕಂಡು ಬರುವದಾದರೆ ದಂಗೆಗಳಾಗ ...? ... ಅಹಿಂಸಾ ಸೈನಿಕರು ಎಲ್ಲಿ? ಅವರು ಈ ದಂಗೆಗಳನ್ನು ಅಣಗಿಸುತ್ತಿದ್ದರು. ... ಹೀಗೆ ಪ್ರಯತ್ನಿಸಿ ... ಆತನ ಮರಣವು ಸ್ತುತ್ಯವೇ. ಆದರೆ ಸಾವಿರಾರು ಮಂದಿ ... ಹರಿದಲ್ಲಿ ನನ್ನ ಎದೆ ಉಬ್ಬುತ್ತಿತ್ತು.

ಶ್ರೀ ಪಶುಪತಿನಾಥ ಗುಪ್ತರು ಮೃತರಾದ ರೆಂಬ ವಾರ್ತೆ ತಿಳಿದು ಹೀಗೆಂದ. ದೇವರ ದಯೆಯಿಂದ ಅವರೀನೂ ಸತ್ತಿಲ್ಲ. ಅಹಿಂಸೆಯೆ ಅವರನ್ನು ಮೃತ್ಯುವಿನಿಂದ ಪಾರು ಮಾಡಿದೆ. ಇದು ಬರೀ ಕನಸೇ? ಅಹಿಂಸಾಪರ ಸೈನ್ಯದ ಸಹಾಯದಿಂದ ದಂಗೆಯ ನ್ನಣಗಿಸಬರುವುದಿಲ್ಲವೆ? ಚೆನ್ನಾಗಿ ಆಲೋಚಿಸಿದರೂ, ಅದರಿಂದ ಇದಾಗದು ಎಂದು ನಂಬುವಿರಾದರೆ, ಸ್ವರಾಜ್ಯವನ್ನು ಅಹಿಂಸೆಯಿಂದ ಸಾಧಿಸಬರುವುದಿಲ್ಲೆಂದೂ ಖಂಡಿತ ಮಾಡಿಕೊಳ್ಳಿರಿ.

ಜಪಾನಿನ ಗೂಢ ರಾಜತಂತ್ರ ಪ್ರವೀಣನ ಮರಣ

ಜಪಾನಿನ ಚಾತುರ್ಯ ಶಾಖೆಯ ಮುಖ್ಯಾಧಿಕಾರಿ ಜನರಲ್ ಡ್ಯೊಹಾರಾ ಎಂಬವರು ಪೇಪಿಂಗ್ ಹೊನ್‌ಕೋ ರೈಲ್ವೆ ಬಳಿಯ ಯುದ್ಧರಂಗದಲ್ಲಿ ಮಡಿದರು. ಅವರ ಶವ ಶವಸಂಸ್ಕಾರವು ಅಲ್ಲೇ ಯಥಾವಿಧಿ ಯುಕ್ತವಾಗಿ ನಡೆದ, ಶವಸಂಸ್ಕಾರ ವಿಭೂತಿಯನ್ನ ಜಪಾನಿಗೆ ಒಯ್ದಿರುವರು.

ಕುಳ್ಳಗಿನ ದೇಹ, ಅದಕ್ಕೆ ತಕ್ಕುದಾದ ದುಂಡಗಿನ ತಲೆ ವಿಶಾಲ ನೇತ್ರಗಳ, ಕರ್ರಗಿನ ಚೂಪಾದ ಮೀಸೆಗಳ, ಬಲಿಷ್ಟವಾದ ಸಣ್ಣ ಕಾಲುಗಳ, ಇದೇ ಜನರಲ್ ಡ್ಯೊಹಾರಾರವರ ಸಾಧಾರಣ ದೇಹಪ್ರಕೃತಿಯು.

ಹಲವು ವರ್ಷಗಳಿಂದಲೂ ಇವರು ಜಪಾನಿನ ಗೂಢ ರಾಜತಂತ್ರ ಕಾರ್ಯಭಾರವನ್ನು ವಹಿಸಿ, ಜಪಾನಿನ ಏಳಿಗಾಗಿ ಏಷ್ಯಾಖಂಡದ ಮುಖ್ಯ ದ್ವೀಪದಲ್ಲಿ ತನ್ನ ಕಾರ್ಯಕಲಾಪವನ್ನು ಸ್ವತಂತ್ರವಾಗಿ ನಿರ್ವಹಿಸುವ ಭರದಲ್ಲಿ ಇವರ ಅನೇಕ ವೇಳೆ ಮಂಗೋಲಿಯ, ಮಂಚೂರಿಯ, ತುರ್ಕಿಸ್ಥಾನವೇ ಮೊದಲಾದ ಪರರಾಷ್ಟ್ರಗಳನ್ನು ಸಂದರ್ಶಿಸಿ ಅಲ್ಲಿಯ ಪರಿಸ್ಥಿತಿಗಳನ್ನು ಚೆನ್ನಾಗಿ ತಿಳಿದಿದ್ದರು.

1932ನೇ ಇಸವಿಯಲ್ಲಿ ನಡೆದ ಶಪ್ಪನ್ ನಗರದ ... ಎಂಬ ... ಇವರನ್ನು ನೇಮಿಸಲಾಯಿತು. ಈ ... ಇವರ ಶೋಧನೆ, ... ತಪ್ಪಿತಸ್ಥರ ... 1932ನೇ ಇಸವಿಯಲ್ಲಿ ಜನರಲ್ ಡ್ಯೊಹಾರಾರವರು ... ನಗರದ ಮೇಲೆ ದಂಡಯಾತ್ರೆ ... ಚೀನೀ ಸೈನ್ಯವು ... ಮಾಡಿ, ಮಂಚೂರಿ ರಾಜ್ಯವು ಜಪಾನ್ ರಾಜ್ಯದಂಡಕೆಳಗೆ ಸೇರುವಂತೆ ಮಾಡಿದರು. ಇವರ ಹಲವು ... ಪ್ರಯತ್ನದಿಂದ ಮಂಗೋಲಿಯವು ಸ್ವತಂತ್ರ ರಾಜ್ಯವಾಯಿತು. ಇವರ ಗೂಢ ... ತುರ್ಕ ರಾಜ್ಯವು ಚೈನಾ ಸಾಮ್ರಾಜ್ಯದಿಂದ ... ಹೊಸ ರಾಜ್ಯವಾಗಿ ರಚನೆಯಾಗಿ ... ಇವರು ... ಜಪಾನ್ ಸ್ನೇಹಿತರಲ್ಲದೆ ಬಲಗೈ ಬಂಟರಾಗಿ ... ದ್ದರು.

1932ನೇ ಇಸವಿಯ ಅಂತ್ಯದಲ್ಲಿ ಚೈನಾ ದೇಶದವರೊಡನೆ ಒಪ್ಪಂದಕ್ಕಾಗಿ ಜನರಲ್ ಡ್ಯೊಹಾರಾರವರನ್ನು ಕಳುಹಿಸಿದರು. ಇವರು ಅಂದು ಚೈನಾದೇಶದವರೊಡನೆ ಮಾಡಿದ ಒಪ್ಪಂದದ ಶರ್ತಗಳನ್ನು ಇಂದಿನವರೆಗೂ ಗುಟ್ಟಿನಲ್ಲಿಟ್ಟಿರುವರು. ಅಂದಿನ ಒಪ್ಪಂದವೇ ಇಂದಿನ ಜಪಾನಿನ ಏಳಿಗೆ ... ಕಾರಣವಾದುದರಿಂದಲೇ ಮೇಲಿನ ಒಪ್ಪಂದಕ್ಕೆ ಡ್ಯೊಹಾರಾ ಒಪ್ಪಂದವೆಂದು ಕರೆಯುತ್ತಿರುವರು.

ಇಂದಿನ ಚೈನಾ ಜಪಾನ ಯುದ್ಧವು, ಅಂದಿನ ಡ್ಯೊಹಾರಾ ಒಪ್ಪಂದದ ಶರ್ತಗಳಿಗೆ ವಿರೋಧವಾಗಿ ವರ್ತಿಸಿದ ದುಷ್ಪರಿಣಾಮವಾಗಿ ಉಂಟಾಗಿದೆಯೆ ... ದೂರಿಕೊಂಡು ... ಯುದ್ಧವಾದ ತ್ತಿರುವುದಾದರೂ, ಆ ದಿನ ಡ್ಯೊಹಾರಾ ಒಪ್ಪಂದದ ಶರ್ತಗಳನ್ನು ಇಂದಿಗೂ ಇವರು ಇತರರಿಗೆ ತಿಳಿಸಿದೊಡನೆ ಗುಟ್ಟಿನಲ್ಲಿಡುವ ಕಾರಣವು ಸೋಜಿಗವೆನಿಸುತ್ತದೆ.

ಇಂತಹ ನಿಷ್ಣಾತವೀರ ಗೂಢ ರಾಜತಂತ್ರ ಪ್ರವೀಣನ ಮರಣದಿಂದಾಗಿ ಜಪಾನು ದುಃಖಕ್ಕೊಳಪಡದೆ ಇರದು.

ಮತ್ತೆ ಯುದ್ಧಸನ್ನಾಹ! ಸ್ಪೈಯಿನಿನಲ್ಲಿ ದಿಗ್ವಿಜಯ!

...ತ್ಯದ ಅರಬರು ಬ್ರಿಟಿಷರಿಂದ ಹತ್ಯಾರುಗಳನ್ನು ಕೊಂಡುಕೊಳ್ಳುವರು

ಒರಿಸ್ಸಾದಲ್ಲಿ ಬಿಕಟ್ಟು ಉಂಟಾಗುವುದೆ? ★

ತೊಡಗಿದರೂ, ಹತ್ತು ಸಲ ಅವರನ್ನು ಆಕ್ರಮಿಸುವುದಕ್ಕೆ ಬೇಕಾಗುವಷ್ಟು ಮದ್ದುಗುಂಡು ಗಳಿಗೆ ಯೆಮೆನ್ ಸುಲ್ತಾನನು ಇಂಗ್ಲಿಷ ಕಂಪೆನಿಗಳಿಂದ ತರಿಸುವ ಏರ್ಪಾಡು ಮಾಡಿರುವನು. ಇರಾಕ್ ಸರಕಾರದ ಕಡೆಯ ಸಿಪಾಯಿಗಳು ಇತ್ತ ಬಂದು ಈ ಹೊಸ ಸೈನಿಕರನ್ನು ತರಬೇತು ಗೊಳಿಸಲೂ ಏರ್ಪಾಡಾಗಿದೆ ಯೆಮೆನ್ ಜನರು ಎಡ್ನಿಸ್ ಅಬಾಬದಿಂದ ಹಿಂದೆ ಹೋಗುವಂತೆ ಇಟಲಿಯ ಸರಕಾರವು ಅಪ್ಪಣೆ ಕೊಟ್ಟಿದೆ ಯೆಮೆನ್‌ನಲ್ಲಿ ಇಟಲಿಯಾನರು ತಂತಮ್ಮ ಪಾಸ್‌ಪೋರ್ಟು ರಹದಾರಿಗಳನ್ನು ಕೂಡಲೇ ಹಾಜರು ಪಡಿಸಬೇಕೆಂದು ಸರಕಾರವು ಅಪ್ಪಣೆ ಕೊಟ್ಟಿದೆ ಯಾರೊಬ್ಬರ ಮೇಲೆ ಸಂಶಯವಿದ್ದಲ್ಲಿ ಅವನನ್ನು ಗಡೀಪಾರು ಮಾಡುವಂತೆ ಪೊಲೀಸ್ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಲಾಗಿದೆ.

ಏಡನಿನಿಂದ ಇಷ್ಟು ವಾರ್ತೆ ಬಂದಿದೆ ಏಡನ್ನು ಈಗ ಬ್ರಿಟಿಷ್ ವಸಾಹತುಗಳ ಮಂತ್ರಿಗಳ ಕೈಯಲ್ಲಿದ್ದು, ಸರಂಪ್ಪ ವಿಚಾರಗಳನ್ನು ತಿಳಿದೇ ಹೀಗೆ ವಾರ್ತೆ ಹಂಡಿಸಿರುವುದು

ಇಷ್ಟು ಆಕ್ಷೇಪವನ್ನೆತ್ತಿ, ಚೀನವನ್ನು ದೂರಿ ಮಾತಾಡುವುದು ವಿಚಿತ್ರ ಎಂದೂ ಅಟ್ಲೀನೊವರು ತಿಳಿಸಿರುವರು

ಭಗವಾನ್ ದಾಸರು.



ಇವರು ಕೇಂದ್ರ ಎಸೆಂಬ್ಲಿಯಲ್ಲಿ ಮಂಡಿಸಿದ ಶಾರದಾ ಮಸೂದೆ (ಅಪ್ರಾಪ್ತ ಸ್ತ್ರೀ ಮದುವೆಯ ಶಾಸನ) ಯು ಮಂಜೂರಾತಿ ಹೊಂದುತ್ತದೆ

ಕೊಂಡರು ಅಲ್ಲಿಗೆ ಇಡೀ ಕಂದವೇ ಮರೆತು ಹೋಯಿತು

ಚೇಂಬರಲೇನರ ರಾಜತಂತ್ರವು ಪರ ರಾಜ್ಯಗಳ ವಿಷಯದಲ್ಲಿ ಸರಿಯಲ್ಲೆಂದು ಪಾರ್ಲಿಮೆಂಟಿನಲ್ಲಿ ಚರ್ಚೆಯುಂಟಾಗಿ ಅವರಲ್ಲೇ ವಿಶ್ವಾಸವಿದೆ ಎಂಬ ಠರಾವು ಸಂಮತವಾಯಿತು ಎಷ್ಟೋ ಪರರಾಷ್ಟ್ರಗಳ ರಾಯಭಾರಿಗಳು ಈ ಚರ್ಚಾ ಕಾಲದಲ್ಲಿ ಹಾಜರಾಗಿದ್ದರು ಇಡೀ ಸಾಮ್ರಾಜ್ಯವೇ ಅಲ್ಲದೆ ಇತರ ರಾಜ್ಯಗಳೂ ಸಹ ಮಂತ್ರಿಗಳ ಬೆಂಬಲವಾಗಿ ದ್ದಾರೆಂದೂ ಫ್ರಾನ್ಸ್ ರಷ್ಯ ಬ್ರಿಟನ್ನುಗಳೇ ಸೇರಿ ಮೈತ್ರಿ ಸಂಬಂಧವನ್ನು ಕಟ್ಟಿಕೊಂಡರೆ ಇತರರೆಲ್ಲ ಬೇರೊಂದು ಪಕ್ಷವಾಗಿ ಕೂಡಲಿ ಯುದ್ಧಸಂಭವ ಹೆಚ್ಚುವುದೆಂದೂ ಮುಖ್ಯ ಮಂತ್ರಿಗಳು ನುಡಿದರು ಅದರಿಂದೇ ಬಹುಮತ...

ಯುದ್ಧ ಸನ್ನಾಹವನ್ನು ಕಡೆಗಟ್ಟಬಹುದೆಂದೂ, ಬ್ರಿಟನ್ನಿಗೂ ಈ ರಾಜ್ಯಕ್ಕೂ ಯುದ್ಧರಂಗದಲ್ಲಿ ಒಂದಾಗಿಯೇ ಕಾದಾಡಬೇಕೆನ್ನುವುದಕ್ಕೆ ಅಂತಹ ಕರಾರು ಇಲ್ಲವೆಂದೂ, ಅಲ್ಲಿನ ಪಾರ್ಲಿಮೆಂಟಿನಲ್ಲಿ ವಿವರಿಸಲಾಗಿದೆ



ಆ ಟೋಕಿಯೋ

ವಾರ್ತೆಗಳು

ರಷ್ಯದ ರಾಯಭಾರಿಗೆ ಜಪಾನಿನ ಆಕ್ಷೇಪ

ಶಿಂಗೆ ಮಿಟ್ಸು ಎಂಬ ಜಪಾನಿನ ರಾಯಭಾರಿಯು ಮೊಸ್ಕೋವಿನಲ್ಲಿರುವ ರಷ್ಯದ ರಾಯಭಾರಿ ಅಟ್ಲೀನೊವ್‌ರೊಡನೆ, ರಷ್ಯದ ಒಂದು ವಾಯುವಿಮಾನವು ಜಪಾನಿನ ಮೇಲೆ ಚೀನದಲ್ಲಿ ಯುದ್ಧ ಮಾಡಿತೆಂದೂ ಅದರಿಂದ ರಷ್ಯವು ಜಪಾನಿನ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಈ ಧುಡುಕಾಟವು ಆಕ್ಷೇಪಕರವಾಗಿದೆಂದೂ ತಿಳಿಸಿದರು ಅಟ್ಲೀನೊವರು ತನಗೆ ಇದೊಂದೂ ಗೊತ್ತಿಲ್ಲವೆಂದರು ಅಂಥ ವಿಮಾನಚಾರಿಯ ಹೆಸರನ್ನೇ ಕೇಳಿದುದಿಲ್ಲವೆಂದರು ಹಾಗೆ ರಷ್ಯವು ಇದಕ್ಕೆ ಜವಾಬ್ದಾರಿಯನ್ನು ಹೊರಲಾರದೆಂದಾಯಿತು ಆದರೆ-ಇತರ ಜನಾಂಗಗಳೂ ದೇಶಗಳೂ ಚೀನಕ್ಕೆ ಬೇಕಾಗುವಷ್ಟು <u>ಯುದ್ಧ ಹತ್ಯಾರುಗಳನ್ನು ಮಾಡುತ್ತಿರುವ</u> ಕಾರಣವೂ, ಚೀನವು ಹಣವನ್ನು ಹಿಂತಿರುವ ವಿಷಯದಲ್ಲಿ ಹಿಂತೆಗೆಯದ ಕಾರಣವೂ, ರಷ್ಯವು ಕೂಡ ಇಂತಹ ಸಾಮುಗ್ರಿಗಳನ್ನು ಮಾರುವುದರಲ್ಲಿ ತಪ್ಪಿಲ್ಲ. ಸೋವಿಯಟ್ ಸರಕಾರದ ಟಪಾಲು ವಿಮಾನಗಳನ್ನು ಜಪಾನು ಅಟಕಾಯಿಸಿರುವುದು; ರಷ್ಯದ ಎಷ್ಟೋ ಹಡಗುಗಳನ್ನು ಆತಂಕಿಸಿಯದೆ, ಚೈನದಲ್ಲಿನ ರೈಲ್ವೆಯನ್ನು ಕೊಂಡುಕೊಂಡೂ, ಅದರ ಪೂರ್ತಿ ಹಣಗನ್ನು ಇನ್ನೂ ರಷ್ಯಕ್ಕೆ ತೆರದೆ ಇದೆ ಇಂಥ ಜಪಾನು ಈಗ ಒಂದು ವಿಮಾನಿನ ಸಲುವಾಗಿ

ಚೀನ

ನೂರವತ್ತು ಮೈಲು ವಿಸ್ತೀರ್ಣ ರಂಗಸ್ಥಳದಲ್ಲಿ ಚೀನದಲ್ಲಿ ಯುದ್ಧ ನಡೆಯುತ್ತಲೇ ಇದೆ ... ಕಡೆ ಚೀನಾ ಸೇನೆಗಳು ಜಪಾನ ಶಿಬಿರಗಳನ್ನು ನುಗಿ ನುಚ್ಚುನೂರ ಮಾಡಿವೆ ಹೀಗೆ ಹದಿನಾರು ದಿನ ಯುದ್ಧ ದೆದುರಲ್ಲಿ [ಇಂಥ ಯುದ್ಧವು ಇದುವರೆಗೆ ಈ ಕಾಳಗ ಸಮಯದಲ್ಲಿ ನಡೆದುದಿ] ಭಯ ಕರವಾಗಿ ಕಾದಾಡಿ ಜಪಾನಿಯರ ... ನುಗ್ಗಲಿಕ್ಕಿಸಿ, ಎರಡ ಸುಂದರವಾದ ನಗರಗಳನ್ನು ಈಗ ಬರಿ ಕಲ್ಲುಗುಪ್ಪೆಗಳನ್ನಾಗಿ ಮಾರ್ಪಡಿಸಿರುವರು

ಜಪಾನಿಯರ ಹೇಳಿಕೆಯಂತೆ, ಚೀನಿಯ ಸೇನೆಯ ೨೦೦೦೦ ಮಂದಿ ಇವೆರಡು ಊರು ಗಳಲ್ಲಿ ಮಡಿದಿರುವರೆಂದು ತೋರುತ್ತದೆ ಜಪಾನಿಯರಲ್ಲಿ ಒಂದು ಲಕ್ಷ ಜನರಾದರೂ ಸತ್ತಿರಬೇಕೆಂದು ಚೀನದ ಅಂದಾಜು ಇನ್ನು ಕಾಲು ಮಿಲ್ಲಿಯ ಜನರು ಜಪಾನಿನ ಸೇನೆಗಳ ಮುತ್ತಿಗೆಯೊಳಗೆ ಸಿಕ್ಕಿಬಿದ್ದಿರುವರು ಇವರಿಗೆ ಹೊರಬರುವದು ಬಲು ಸಂಕಷ್ಟಕರವಾಗುವಂತೆ, ಸೇನೆಗಳು ಚಕ್ರವ್ಯೂಹ ರಚಿಸಿವೆ ಇಷ್ಟು ಬಲವಾಗಿ ಯುದ್ಧವಾದುದಿಲ್ಲ

ಆದರೂ ಮತ್ತೊಂದು ಭಾಗದಲ್ಲಿ ಚೀನೀಯರು ಮೆಲ್ಲಮೆಲ್ಲನೆ ಮುಂದರಿಸುತ್ತ, ಜಪಾನಿನವರು ಗೆದ್ದಂತಹ ಪ್ರದೇಶಗಳಿಂದ ಕೆಲವಂಶವನ್ನು ಹಿಂದೆ ಸೆಳೆದುಕೊಳ್ಳುತ್ತಲಿದ್ದಾರೆ

ಲಂಡನು:— ಹೌಸ್ ಒಫ್ ಕೊಮನ್ಸ ಸಭೆಯಲ್ಲಿ ತಾ. 4ರಲ್ಲಿ ಒಬ್ಬ ಮೆಂಬರರು ಸಿಟ್ಟಾಗಿ ಮತ್ತೊಬ್ಬರ ಕೆನ್ನೆಗೆ ಪೆಟ್ಟು ಬಡಿದರು ಬಡೆದವರು ಭಾಷಣ ಮಾಡುತ್ತಿರುವಾಗ ಅಧ್ಯಕ್ಷರ ಅಪ್ಪಣೆ ಮನ್ನಿಸದಿದ್ದಾಗ ಗಲಭೆ ನಡೆಯಿತು. 'ನೀವು ಪೋಲೆಂಡಿಗೆ ಹಿಂದಿರುಗಿರಿ' ಎಂದು ಯಾರೋ ನುಡಿದರು. ಅದನ್ನು ಕೇಳುತ್ತಲೆ, ಹಿಂದೆ ನೌಕಾಸೈನ್ಯದಲ್ಲಿ ಜಟ್ಟಿಗಳಾಗಿದ್ದ ಮತ್ತೊಬ್ಬ ಸಭಿಕರನ್ನು ಇವರು ಹಾಗೆ ಆಕ್ರಮಿಸಿ ಕೆನ್ನೆಗೆ ಏಟು ಕೊಟ್ಟರು. ಅವರು ಕೈತಡೆದು ಪ್ರತಿಯಾಗಿ ಬಡಿಯಲಿಲ್ಲ. ಅಧ್ಯಕ್ಷರು ಇಬ್ಬರಿಂದಲೂ ಕ್ಷಮೆಯಾಚಿಸಿ...

ಫ್ರಾನ್ಸ್.— ರಾಷ್ಟ್ರದ ಸಂಪತ್ತನ್ನು ಉಳಿಸಿಕೊಂಡು ಹೆಚ್ಚಿಸುವುದಕ್ಕಾಗಿ ಸರಕಾರವು ಕೆಲವು ಜಾದಾ ಅಧಿಕಾರಗಳನ್ನು ಪಡೆಯಲು ಠರಾವು ತಂದಿದೆ ಪ್ರತಿಯೊಬ್ಬರೂ ತಂತಮ್ಮ ಮೂಲಧನ ಎಷ್ಟೆಂದು ತಿಳಿಸಬೇಕಾಗಿಯೂ, ಅದರ ಮೇಲೆ ಸೇಕಡಾ 4ರಿಂದ 17ರ ವರೆಗೆ ತೆರಿಗೆ ತೆರಬೇಕೆಂದೂ ಸರಕಾರದ ತೀರ್ಮಾನವಾಗಿದೆ ಇದರಿಂದ ಹನ್ನೆರಡು ಮಿಲಿಯ ಪವನು ಸರಕಾರದ ಕಂದಾಯ ದೊರೆಯುವುದು

ಸ್ಪೈನ್ – ಶಿರಡದಲ್ಲಿ ದಂಗೆಖೋರರು ಸುಮಾರು 8000 ಜನರನ್ನು ಕೈದು ಮಾಡಿರುವರು ಒಂದು ಆಸ್ಪತ್ರೆಯ ಮೇಲೆ ಬಾಂಬು ಚೆಲ್ಲಿದಲ್ಲಿ 24 ಮಕ್ಕಳ್ 11 ನರ್ಸುಗಳೂ ಮಡಿದರು. ಸ್ಪೈನಿನ ಪ್ರಾಂತ್ಯಗಳ 50 ರಾಜಧಾನಿಗಳಲ್ಲೀಗ ೪೬ ಫ್ರೆಂಕೋವಿಗೆ ವಶವಾಗಿವೆ ನಿನ್ನೆಯ ದಿನ ದಂಗೆಖೋರರ ಸೈನ್ಯವು ಮತ್ತು 14 ಮೈಲು ಮುಂದರಿಸಿ, ಸಮುದ್ರ ಕರಾವಳಿಯ ಸಮೀಪಕ್ಕೆ ಬಂದಿವೆ ಹೀಗಾದಲ್ಲಿ, ರಾಜಧಾನಿಯನ್ನು ಧ್ವಂಸ ಮಾಡಿ, ಉಳಿದೆಲ್ಲವನ್ನು ವಶಪಡಿಸಿಕೊಳ್ಳುವುದು ತೀರ ಸುಲಭವಾಗಿ ಫ್ರೆಂಕೋ ಸರ್ವಸ್ವತಂತ್ರ ಹೊಂದುವನು

ಅಮೇರಿಕಾ:–45000 ಟನ್ನಿನ ಯುದ್ಧ ನಾವೆಗಳನ್ನು ಯುನೈಟೆಡ್ ಸ್ಟೇಟ್ಸ್ ಸರಕಾರವು ಕಟ್ಟುವುದು ಅಗತ್ಯವೆಂದೂ, ಹಾಗೆ ಮಾಡಿದಲ್ಲಿ ನೂತ್ರ ನೂರಾರು ವಿಕ್ರೇತರುಗಳ

ಹೊಲಿಗೆ ಯಂತ್ರವು ಜೀವನ ಸಂಪಾದನೆಯ ಉಪಕರಣವಲ್ಲ!

ಕೆಲವು ದಿವಸಗಳ ಹಿಂದೆ ಮಂಗಳೂರಿನ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಬಿ ಗಿರಿಯಪ್ಪ ಎಂಬವರು ಅವರಿಗೆ ಬರಬೇಕಾದ ಹಣದ ಬಗ್ಗೆ ರೊಜಾರಿಯೊ ಪಿಂಟೋ ಎಂಬವನ ಮೇಲೆ ಆದ ಡಿಕ್ರಿಯ ಬಾಬ್ತು ಅಮಲ್‌ಜಾರಿ ತೆಗೆದು ಅವನ ಕೆಲವು ಸಾಮಾನುಗಳನ್ನು ಜಪ್ತಿ ಮಾಡಿದುದರ ಪೈಕಿ ಅವನ ಹೊಲಿಗೆಯ ಯಂತ್ರವು ಕೂಡಾ ಇತ್ತು. ಅದು ಅವನ ದಿನನಿತ್ಯದ ಸಂಪಾದನೆಯ ಸಾಧನವಾದ್ದರಿಂದ ಅದನ್ನು ಜಪ್ತಿಯಿಂದ ಬಿಡಬೇಕೆಂದು ಪಿಂಟೋವು ಅರ್ಜಿ ಮಾಡಿದ್ದನು ಡಿಸ್ಟ್ರಿಕ್ಟ್ ಮುನ್ಸಿಫರಾದ ಮಿ. ಎ ಎಮ್ ಎಸ್ ಬೆಗ್‌ರವರು, ಕಾನೂನು ಪ್ರಕಾರ ಹೊಲಿಗೆ ಯಂತ್ರವು ಸಂಪಾದನೆಯ ಒಂದು ಸಾಧನವಾದರೂ ಅದೊಂದು ಉಪಕರಣವಲ್ಲ ಅದಿಲ್ಲದೆ ಒಬ್ಬನು ತನ್ನ ಸಂಪಾದನೆಯನ್ನು ಮಾಡಲಾಗುವುದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ ಆದ್ದರಿಂದ ಜಪ್ತಿಮಾಡಲ್ಪಟ್ಟ ಯಂತ್ರವನ್ನು ಮಾರುವ ಬದಲು, ಅರ್ಜದಾರನಿಗೆ ಆ ಕುರಿತು ಮೇಲಿನ ಕೋರ್ಟುಗಳಲ್ಲಿ ಅದರ ಕುರಿತು ವ್ಯವಹರಿಸಲು ಇಂಥ ಹೊಂದಿರುವದರಿಂದ, ಮೂರು ತಿಂಗಳ ಅವಧಿಯನ್ನು ಕೊಟ್ಟಿರುತ್ತಾರೆಂದು ತಿಳಿಯುತ್ತದೆ

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಕುಂದಾಪುರ.

ನೋಟೀಸು

ತಾ 21-2-'38ರಲ್ಲಿ ಕೊಟ್ಟ ನೋಟೀಸಿನಂತೆ ಶೇರು ಒಂದರ ರೂಪಾಯಿ 10ರಲ್ಲಿ ಈ ಮೊದಲು ರೂ 5/ರಂತೆ ಕೊಟ್ಟದ್ದು ಹೋಗಿ 2ನೆ ಕಂತಿನ ಹಣ ರೂ 2 8-0 ತೆರದೆ ಬಾಕಿ ಮಾಡಿಕೊಂಡ ಪಾಲುದಾರರ, ಸದ್ರಿ 2ನೇ ಕಂತಿನ ಹಣ ಪಾಲಿ ಒಂದರ ರೂ 2 8-0 ರಂತೆ ಆಗುವ ಪಾಲುಗಳ ಮೊಬಲಗು ಮತ್ತು ಸದ್ರಿ ನೋಟೀಸಿನ ತಾರೀಕಿನಿಂದ ವಸೂಲು ತಾರೀಕು ವರೆಗೆ ಶೇಕಡ 12½ಯಂತೆ ಆಗುವ ಬಡ್ಡಿ ಮತ್ತು ಈ ನೋಟೀಸಿನ ವಗೈರೆ ಚಾರ್ಜುಗಳನ್ನು ಆರ್ಟಿಕಲ್ 22ರಂತೆ ಕೊಡುವ ಈ ನೋಟೀಸಿನ ತಾರೀಕಿನಿಂದ 14 ದಿವಸಗಳೊಳಗೆ ಹೆಡ್ ಆಫೀಸಿಗೆ ಪಾವತಿ ಮಾಡದಿದ್ದರೆ ಆರ್ಟಿಕಲ್ 24ರಂತೆ ನಿಮ್ಮ ಶೇರಿನ ಹಣವನ್ನು ಫರ್ಫಿಟ್ ಮಾಡಿ ಆರ್ಟಿಕಲ್ 26ರಂತೆ ಡೈರೆಕ್ಟರ್ ಬೋರ್ಡಿನವರು ಯುಕ್ತ ಕಂಡ ರೀತಿಯಲ್ಲಿ ಮಾಡುವರು

ಅಪ್ಪಣೆ ಪ್ರಕಾರ,

K. SUNDRANATH KAMATH

ಬದಲಿ ಕಾರ್ಯದರ್ಶಿ

ವಿ ಸೂ:—ಶನಿವಾರ 1-30 ಬಾಕಿ ದಿವಸ 3 ಘಂಟೆ ನಂತರ ಹಣ ತೆಗೆದುಕೊಳ್ಳಲಾರದು.

Commonwealth

Assurance Company, Ltd.,

POONA.

Policies suit to Every

PURSE AND POCKET

WANTED ENERGETIC AGENTS

Apply to:

Gawankar & Sons,

Chief Agents,

163, Gandhi Nagar,

BANGALORE.

ಟಿಪ್ಪಣಿಗಳು — Notes

ಶೃಂಗಾರ್ಥ (ಉಚ್ಚಾರದಲ್ಲಿ ಎಚ್ಚರಿಕೆ!)

ರಾಜ್ಯವೊಂದುದೂ ನಮ್ಮ ದೇಶದಲ್ಲಿದೆ. ಮೂರು ತಿಂಗಳಿಂದಲೂ ರಾಜ್ಯದ ಸರಕಾರದ ನೋಕರ ಸಂಬಳವಿಲ್ಲ. ಕಾರಣ, ಹಿಂದಣ ದಿವಾನರು ನಿವೃತ್ತರಾದರು. ಹೊಸ ದಿವಾನರು ನೇಮಕವಾಗಿಲ್ಲ;—ಸಾಲ ಕೊಡುವವರೇ ಇಲ್ಲ. ಸಾಹುಕಾರರು ಮೂವರೇ ಸೇರಿರುವ ಒಂದು ಕಂಪೆನಿಯು ವಿದ್ಯುತ್ ಮೊದಲಾದ ಕಾರ್ಖಾನೆ ಹಕ್ಕುಗಳನ್ನು ಹೊಂದಿದ್ದು, ಇವರ ನೆರವಿಯಿಂದಲೂ ಸಂಬಳ ಸಿಕ್ಕಿಲ್ಲ.

○ ○ ○ ○

ಫೆಡರೇಶನಿಗೆ ಇವರು ಸೇರಿದ್ದರೆ, ಸಾಲ ಸಿಗುವುದು ಸುಲಭವಾಗುತ್ತಿತ್ತು

○ ○ ○ ○

ಕಾಶ್ಮೀರದ ಮುಸ್ಲಿಮರ ನೋಡಿರಿ "ಆ ಜಾತಿ ಈ ಜಾತಿ ಎಂದಿಲ್ಲ; ನಾವೆಲ್ಲ ಒಂದೇ ಜಾತಿ; ಹಿಂದೂ ಸಿಕ್ಕರನ್ನೂ ಸೇರಿಸಿಕೊಂಡು, ಪ್ರಜಾಸತ್ತೆಗೋಸ್ಕರ ಹೋರಾಡುವ ಪ್ರಾಯಸ್ಥರೆಲ್ಲ ಮೋಟರರಾಗಲಿ; ಜ್ಯಾಯಿಂಟ್ ಇಲೆಕ್ಟೊರೇಟು ನಮಗೆ ಬೇಕು ಇವೆರಡು ಸೂತ್ರಗಳಿಲ್ಲದ ಪ್ರಜಾಸತ್ತೆ ಎಂಬುದು ವ್ಯರ್ಥ" ಎಂದು ಅಲ್ಲಿನ ಮುಸ್ಲಿಂ ಕಾನ್ಫರೆನ್ಸಿನ ಅಧ್ಯಕ್ಷರ ಭಾಷಣ

○ ○ ○ ○

ಭಾಷಣವೇನೋ ಆಗಿದೆ ಅಧ್ಯಕ್ಷರಿಂಗೆ ಇದರಿಂದ ಏನಾದರೂ ಭಯೋತ್ಪಾದಕ ಪತ್ರಗಳು ಕಲಿಸಿಲ್ಲವಷ್ಟೆ. ಜಾತಿಗೊಂದು ವಾಯು ಮಂಡಲ, ಮಿಂಟಿಗೊಮ್ಮೆ ಮತಗಂಥಾಂತರ, ಉಸಿರಿಗೊಮ್ಮೆ ಅಲ್ಪಸಂಖ್ಯಾಕರ ಸಮಸ್ಯೆ— ಇವೆಲ್ಲ ನಮ್ಮಲ್ಲೇ ತುಂಬಿವೆಯಲ್ಲ! ಸೇಕಡಾ ೮೦ ಮಂದಿ ಮುಸಲ್ಮಾನರಿರುವ ಹಿಂದೂ ರಾಜ್ಯ ಕಾಶ್ಮೀರದಲ್ಲಿ ಮುಸ್ಲಿಮ ಪರಿಷತ್ತಿನ ಅಧ್ಯಕ್ಷರೇ ಹೀಗೆನ್ನುವಾಗ,—ನಿಮಗೇನಿನ್ನ ಬೇಕ ?

○ ○ ○ ○

ಫೆಡರೇಶನಿಗೆ ಕಾಶ್ಮೀರವೂ ಸೇರಿದ್ದರೆ, ನಮ್ಮವರಿಗೊಂದು ಪಾಠವಾಗುತಿತ್ತು

○ ○ ○ ○

ಶ್ರೀ ಕೆ. ಎಂ. ಅಶ್ರಫ್—ಇವರು ಬರೆದೊಂದು ಲೇಖದಲ್ಲಿ,—"ಮಧ್ಯಮ ಸ್ಥಿತಿಯ ಮುಸ್ಲಿಮರೇ ಜನರಲ್ಲಿ ಮತ ಮತ್ತು ಜಾತಿ ಸಂಬಂಧವುಳ್ಳ ನಾನಾ ಆಚಾರಗಳನ್ನು ಬೇಕೆಂದೆ ಪ್ರೋತ್ಸಾಹಿಸಿ, ಅವರು ಇತರ ಸಮಾಜಗಳೊಡನೆ ಸೇರದಂತೆ ಮಾಡಿ, ತಾವು ಸಾಮ್ರಾಜ್ಯಶಾಹಿಯಲ್ಲಿ ಪ್ರತಿಷ್ಠೆ ಹೊಂದಲೆಳಸಿರುವರು ಉದಾರ ಪ್ರವೃತ್ತಿಯುಳ್ಳವರಲ್ಲದ ಇವರಿಗೆ ಪ್ರಗತಿಯು ರುಚಿಸದು. ಪ್ರತ್ಯೇಕ ಪ್ರಾತಿನಿಧ್ಯ, ಬೇರೆ ಇಲೆಕ್ಟೋರೇಟು (ವೋಟರರ ಮಂಡಲ), ಅಲ್ಪಸಂಖ್ಯಾಕರ ಸಲುವಾಗಿ ನಾನಾ ಸಲುವಳಿಗೆಗಳ ವ್ಯಾತಿನ ಸೆಳೆದಾಟ— ಇವುಗಳ ಮೂಲಕ ಇವರು ಸರ್ಕಾರದ ಮೋರೆ ನೋಡುತ್ತ, ಇತರರಿಂದ ದೂರವಾಗಿ, ಭಾರತವಾಸಿಗಳು ಒಂದೇ ಜನಾಂಗವಾಗದಂತೆ ಪ್ರಯತ್ನಿಸುವರು" ಎಂದಿದೆ

○ ○ ○ ○

ವಿಷವಾತವುಳ್ಳ ಬಾಂಬುಗಳನ್ನು ಎಸೆದು, ಕ್ಷಣದೊಳಗೆ ಕ್ಷಯರೋಗವನ್ನು ಉಂಟುಮಾಡಿ ಲಕ್ಷಗಟ್ಟಲೆ ಜನರನ್ನು ಕೊಲ್ಲಬರುತ್ತದೆ, ಅಂತೆಯೆ, ಕ್ಷಣಾರ್ಧದಲ್ಲಿ ಶ್ವಾಸಕೋಶಗಳು ಎಂತಹ ಗ್ಯಾಸುಗಳಿಗೂ ಈಡಾಗದಂತೆ ತಡೆಯಬರುವಂತಹ ಹೊಸ ಗ್ಯಾಸನ್ನು ಇಂಗ್ಲಿಷ ವಿಜ್ಞಾನಿಗಳೊಬ್ಬರು ಕಂಡು ಹಿಡಿದಿರುವರು ಜನಾಂಗದಲ್ಲಿ ಮತದ್ವೇಷ, ಜಾತಿದ್ವೇಷಗಳನ್ನು ಉಂಟುಮಾಡುವ ಉತ್ಪಾತವನ್ನು ತಡೆಗಟ್ಟುವುದಕ್ಕೆ ಅದಕ್ಕೆ ವಿರುದ್ಧವಾದ ಜಾತಿಯ ಬಾಂಬು ಕಲ್ಪಿಸುವುದಕ್ಕೆ ಯಾರೊ ಮುಂದೆ ಬರುತ್ತಿಲ್ಲ. ಸಮಸ್ಯೆಗಾಗಿ ಈಗ ಗಾಂಧಿಜಿಯವರ ಯತ್ನಗಳಾಗುತ್ತಿವೆ.

ಮೌಲ್ವಿ ಮಲ್ಲುಲ್ ಹುಕ್ ಎಂಬವರು ಬಿಹಾರದ ಮುಸ್ಲಿಂ ಸ್ವತಂತ್ರ ಪಕ್ಷದ ಕಾರ್ಯದರ್ಶಿಯರು. 'ಮುಸ್ಲಿಂ' ಎಂಬೊಂದು ಉರ್ದು ಭಾಷಾ ಪತ್ರಿಕೆಯು ಕೊಂಗ್ರೆಸ್ ಮಂತ್ರಿಕೂಟವನ್ನು ಪ್ರೋತ್ಸಾಹಿಸುತಿತ್ತು. ಈ ಹುಕ್ಕರು ಕೆಲ ವಿದ್ಯಾರ್ಥಿಗಳೊಡನೆ ಮುಸ್ಲಿಂ ಪತ್ರಿಕಾ ಆಫೀಸಿನೊಳಗೆ ನುಗ್ಗಿ, ಪತ್ರಿಕಾಸಂಪಾದಕರನ್ನು ಜರೆದು ಅಲ್ಲಿದ್ದ ಸಾಮಾನುಗಳನ್ನು ಮುರಿದಿಕ್ಕಿದರು ಪೋಲೀಸ್ ಮೊಕದ್ದಮೆಯಾಗಲು, ಯುವಕ ವಿದ್ಯಾರ್ಥಿಯರನ್ನು ಹಾಳುದಾರಿಗೆ ತರಲೆತ್ನಿಸಿದ ಹುಕ್ಕರಿಗೆ, ಜುಲ್ಮಾನೆ ವಿಧಿಸಿದರೆ ಸಾಲದೆಂದು ಮೆಜಿಸ್ಟ್ರೇಟರು ಮೂರು ತಿಂಗಳ ಸಜೆವಿಧಿಸಿದರು.

○ ○ ○ ○

ಕೌಶಿಕಕುಮಾರ ಮಿತ್ರನೆಂಬವನು ಲಂಡನ್ ಯುನಿವರ್ಸಿಟಿಯ ಕಿಂಗ್ಸ್ ಕಾಲೇಜಿನಲ್ಲಿ ಓದುತ್ತಿರುವನು ವಿಮಾನ ಚಾಲಕನಾಗಲು ಅರ್ಜಿ ಹಾಕಿದ, ಖಾಲಿ ಸ್ಥಾನಗಳಿಲ್ಲವೆಂದಾಯಿತು ಮಿತ್ರನ ಬಂಗಾಳಿ ಮಿತ್ರ ದಿನಗಳ ಬಳಿಕ ಅವನೋದುತ್ತಿದ್ದ ಕಾಲೇಜಿನಲ್ಲಿ ನೋಟೀಸು ಬೋರ್ಡಿನಲ್ಲಿ, ಅದೇ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಹಲವು ಸ್ಥಾನಗಳಿವೆ, ಕೂಡಲೇ ಅರ್ಜಿ ಬರೆಯ ಬೇಕಾಗಿ ವಿಮಾನಚಾಲನೆ ಕಲಿಸುವವರದೇ ಸಹಿಯ ನೋಟೀಸು ಇತ್ತು ಲಂಡನ್ ಯುನಿವರ್ಸಿಟಿಯ ವಿದ್ಯಾರ್ಥಿಗಳ ವಿಮಾನಸೇನೆಗೆ ಸೇರುವುದು ಬಂಗಾಳಿಯು ಇಚ್ಛೆ ಆದರೆ ಬಂಗಾಳಿ ಅಲ್ಲವೇ? ಸ್ಥಾನವಿಲ್ಲ

○ ○ ○ ○

ಕಡವಿನ ದೋಣಿ ಈ ಕರೆ ಬಿಟ್ಟಿತ್ತು ದೋಣಿ ನಡು ನೀರಿನಲ್ಲಿದ್ದಾಗ, ಈ ಕರೆಯಿಂದ ಪೋಲೀಸ ಜವಾನನೊಬ್ಬನು ದೋಣಿಯವನನ್ನು ಕೈಬೀಸಿ ಕರೆದು ದೋಣಿಯನ್ನು ಮರಳಿಸ ಬೇಕೆಂದ ಅವನನ್ನು ಆ ಕರೆಗೆ ಕೊಂಡೊಯ್ಯದಿದ್ದರೆ ದೋಣಿಯವನಿಗೂ ಪ್ರಯಾಣಿಕರಿಗೂ ದಂಡನೆ ಮಾಡಿಸುವೆನೆಂದ ದೋಣಿಕಾರನು ಹಾಗೆಯೇ ಮರಳಿದ ದಡಕ್ಕೆ ಬರುತ್ತಲೇ ಪ್ರಯಾಣಿಕನು ಮತ್ತೊಬ್ಬ ಪೋಲೀಸ ಜವಾನನನ್ನು ಕರೆದು ಈ ಬಗೆ ಬೈದ ಜವಾನನನ್ನು ಹಿಡಿದುಕೊಂಡ ದೋಣಿಕಾರನ ಕ್ಷಮೆ ಬೇಡದಿದ್ದರಾಗದೆಂದು ಪ್ರಯಾಣಿಕನೆಂದ ಜವಾನನೂ ಹಾಗೆಯೇ ಮಾಡಿದ ಕಾರಣವೇನು? ಪ್ರಯಾಣಿಕನು ಸಬ್ ಡಿವಿಜನಲ್ ಆಫೀಸರನಾಗಿದ್ದ ಎಂದು ಮಾಣಿಕ್ ಗಂಜಿನ ವಾರ್ತೆ

○ ○ ○ ○

ಮಲಯದ ವನಸ್ಪತ್ಯುದ್ಯಾನದ ಎತ್ತರದ ಮರಗಳಿಂದ ಫಲಪತ್ರ ಪುಷ್ಪಗಳನ್ನು ಕೊಯ್ದು ತರುವುದಕ್ಕಾಗಿ ಔಷಧಿ ಶಾಸ್ತ್ರಜ್ಞರು (ಸರಕಾರದ ಇಲಾಖೆ) ಎರಡು ಮಂಗಗಳನ್ನು ತರಬೇತು ಮಾಡಿ, ಆ ಹುದ್ದೆ ಕೊಟ್ಟಿರುವರು ಈ ಮಂಗಗಳು ಈಗ ಸಿವಿಲ್ ಸರ್ವಿಸ್ ಪಟ್ಟಿಯಲ್ಲಿ ದಾಖಲಾಗಿವೆ ಬಜೆಟಿನಲ್ಲಿ ಇವುಗಳಿಗಾಗಿ ೧೪ ಮನು ಖರ್ಚು ತೋರಿಸಲಾಗಿದೆ

○ ○ ○ ○

ಸೈನಿಕರ ಸಂಬಳ, ನೇಮಕ ಮೊದಲಾದುವನ್ನು ನಮ್ಮ ಮಧ್ಯ ಎಸೆಂಬ್ಲಿಯೂ ಕೂಡ ಚರ್ಚಿಸಬಾರದು ಹೋಗಲಿ ಸೈನಿಕರು ಬಡವನೊಬ್ಬ ಟೇಕ್ಸಿ ಡ್ರೈವರನ ಮೇಲೆ ಅತ್ಯಾಚಾರ ನಡೆಸಿದರೂ, ಅದನ್ನು ಎಸೆಂಬ್ಲಿಯಲ್ಲಿ ಪ್ರಶ್ನಿಸಬಾರದು ಸೈನಿಕರ ದುರ್ನಡತೆಗೆ ಸಹ ಪವಿತ್ರ್ಯ, ಮಡಿ, ಅದನ್ನು ಕುರಿತು ಯಾರೂ ಪ್ರಶ್ನಿಸಬಾರದು. ಹೀಗಾಗುತ್ತ ಹೋದರೆ, ಸೈನಿಕ ಮಹಾದೇವನ ವಿಗ್ರಹ ಪ್ರತಿಷ್ಠಿಸಿ ಪೂಜೆ ಮಾಡದೆ, ಇಹಪರಗಳಲ್ಲೂ ಗತ್ಯಂತರವಿಲ್ಲೆಂದೂ ಸೂತ್ರಗಳಾಗಬಹುದು ಎಂದೊಂದು ಪತ್ರಿಕೆ ಟೀಕಿಸಿಯದೆ

ಬೇಸಿಗೆ ಕಾಲದಲ್ಲಿ ಗಂಟಲು ಆರುವಿಕೆಯನ್ನು ನೀಗಿಸುತ್ತದೆ.

ನಿಮಗೆ ಜಿಚ್ಚಾಗಿ ಗಂಟಲು ಬೇನೆಯು ತೋರುವದರಿಂದ, ಬೇಸಿಗೆ ಕಾಲದಲ್ಲಿ ಬಂದೊದಗುತ್ತವೆ, ಗಂಟಲು ಆರುವಿಕೆಗೆ ಕಾರಣವೇ ಮಾರ್ಗದ ಧೂಳು, ಹೀಗಿರುವುದರಿಂದ ಈ ಕಾಲದಲ್ಲಿ ಪೆಪ್ಸ ಶ್ವಾಸನೀಯ ಮಾತ್ರೆಗಳಿಂದ ಗಂಟಲು ಉರಿಯನ್ನು ಕಡಿಮೆ ಮಾಡಬಹುದು

ಒಂದು ಪೆಪ್ಸ ಮಾತ್ರೆಯನ್ನು ಬಾಯಿಯಲ್ಲಿ ನೆನೆಯಬಿಟ್ಟರೆ, ಅದರಿಂದ ಹೊರಬರುವ ಅಮೂಲ್ಯವಾದ ಔಷಧೀಯ ಧೂಮವು ಶ್ವಾಸಕೋಶದೊಳಗೆ ಹೋಗಿ ಸೇರಬಹುದು ಇದರಿಂದಾಗಿ ಗಂಟಲು ಬಾತ ಬೇನೆಯು ಕಡಿಮೆ ಆಗಿ, ಅದರೊಳಗಿನ ವಿಷಕ್ರಿಮಿಗಳು ನಾಶವಾಗಿ, ತುಂಬಾ ಉಪಶಮನವಾಗುವದು, ಬಾಯಿ ಮುಕ್ಕಳಿಸುವುದಕ್ಕಿಂತ

ಈ ಪೆಪ್ಸ ಮಾತ್ರೆಯ ಸೇವನೆಯು ತೀರಾ ಸುಲಭವಾಗಿದೆ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ ಮಾತ್ರೆಗಳನ್ನು ಈ ಗುರಂತೆ ವಿಕ್ರಯಿಸುವರು

ಏಜಂಟರು — ದಾಧಾ ಎಂಡ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸು

ಪೆಪ್ಸ ವಿಷಹಾರಿ ಶ್ವಾಸನೀಯ ಮಾತ್ರೆಗಳನ್ನು ಪಡಕೊಳ್ಳಿರಿ.

ಪೆಪ್ಸ PEPS

ಇಷ್ಟು ಸುಂದರವೂ ಉಪಯುಕ್ತವೂ ಆಗಿರುವ ವಸ್ತುಕೋಟಿಯನ್ನು ರಚಿಸಿರುವ ಒರಿಸ್ಸದ ಜನರಿಗೆ ಊಟಕ್ಕಿಲ್ಲ ಬಟ್ಟೆಗಿಲ್ಲ ಎಂಬುದು ಶೋಚನೀಯವಾಗಿದೆ ಎಂದು ಬರೋಡೆಯ ಲ್ಲಾದ ಕೈಗಾರಿಕೆಗಳ ಪ್ರದರ್ಶನ ನೋಡಿ ಗಾಂಧಿಜಿಯವರು ಬರೆದಿದ್ದಾರೆ ಇತರರಿಗಾಗಿಯೆ ವಸ್ತುಕೋಟಿ ರಚಿಸಿಯೋ ಅವುಗಳಿಗೆ ದೊರೆತ ಪ್ರೋತ್ಸಾಹ ಕಡಮೆಯಾಗಿಯೋ ತಮ್ಮ ಕುಟಿಗೆ ಎತ್ತಲು ಅವರ ಕೈಗೆ ಏನೂ ಸಿಲುಕದಾಯಿತಲ್ಲ!

○ ○ ○

ನಮ್ಮ ದೇಶದ ಸರಹದ್ದಿನಲ್ಲಿ ಸಮೃದ್ಧ ಹಣದಿಂದ ಸಾಕುತ್ತಿರುವ ಸೈನ್ಯವು ಇನ್ನು ಇಲ್ಲೇ ಇರುವುದು ಬ್ರಿಟಿಷ ಸಾಮ್ರಾಜ್ಯದ ಯಾವತ್ತು ಭಾಗಗಳ ರಕ್ಷಣೆಗೆ ಸರಿಯಾಗುತ್ತಿಲ್ಲವತೆ ಅದಕ್ಕಾಗಿ ಅವನ್ನು ಬೇರೆ ಬೇರೆ ಕೇಂದ್ರಗಳಲ್ಲಿಡಬೇಕಾಗುವುದು ಅಗತ್ಯವಂತೆ ಹಾಗಿದ್ದರೆ,—ಅದನ್ನು ಇಲ್ಲಿಂದ ಕಿತ್ತು ಬೇರೆ ನೈಮಿಷದಲ್ಲಿಯೆ ನಮ್ಮ ಸೈನ್ಯವನ್ನು ನಾವು ಸಾಕಬಹುದಾಗುವುದಲ್ಲವೆ? ಆದರೆ—

○ ○ ○

ಆದರೆ ಇತರ ಕೇಂದ್ರಗಳಲ್ಲಿ ಈ ಸೈನ್ಯವಿದ್ದಾಗ ಖರ್ಚಿಗೆ ಕೊಡುವವರು ಯಾರು? ನಾವೇ? ಆ ಕೇಂದ್ರಗಳವರೇ? ಇದನ್ನು ಇತ್ಯರ್ಥಿಸಲು ಬ್ರಿಟಿಷ ಯುದ್ಧ ಇಲಾಖೆ ಮತ್ತು ನಮ್ಮ ಬ್ರಿಟಿಷ ಕರಣೀಕರು ಕೂಡಿ ಆಲೋಚಿಸುವರಂತೆ ಹಣ ತೆರುವ ಇಂಡಿಯಾ ಸರಕಾರವಲ್ಲ ಅದೊಂದು ಇಂಗಿತ

○ ○ ○ ○

ಚೀನಿಯರು ಮುಂದೊತ್ತುತ್ತ ಬರುತ್ತಾರೆ ಜಪಾನಿಗೆ ಅಲ್ಲಲ್ಲಿ ಹಿಮ್ಮೆಟ್ಟಬೇಕಾಗಿದೆ ಹೀಗಾದರೆ, ಜ್ಯೋತಿಷಿಯ ಮಾತಿನಂತೆ, ಮೇ ತಿಂಗಳಲ್ಲಿ ಜಪಾನು ಹಿಂತೆರಳುವುದೇ? ಗೆದ್ದ ಭಾಗದ ಊರುಗಳು ಹಿಂದೆ ಚೀನಕ್ಕೆ ಸೇರುತ್ತಲಿದೆ ದುಖಂದೆ!

○ ○ ○ ○

ಮುಂದೆ ಇದೇ—ಯಾವನಾದರೊಬ್ಬ ಬ್ರಿಟಿಷನನ್ನು, ಅಥವಾ ಅಮೇರಿಕನನ್ನು ಹೊಡೆದು ಕಚ್ಚಿ ತಮ್ಮೊಳ್ಳಿನ ರೋಷವನ್ನು ಹೊರಗೆಡವುತ್ತ, ಆಯಾ ಸರಕಾರಗಳು ಎಚ್ಚರಿಸಿ ಆಕ್ಷೇಪಿಸಿದರೆ, ನಾವರಿಯೆವು, ಅಥವಾ ಕ್ಷಮೆಯಿರಲಿ ಎಂದು ಥಿಮರಾಕು ಹೊಡೆದು ನಮಸ್ಕಾರ ಮಾಡುವುದು ಶಂಕಸ್ಥ ಜೊತೆಗೆ ಕೈಯ ಸಲಾಮು!

ಹಿಟ್ಲರನು ಆಸ್ಟ್ರಿಯದೊಳಗೆ ನುಗ್ಗಿದ್ದು ಬ್ರಿಟಿಷರಿಗೆ ಅನ್ಯಾಯವೆನಿಸಿದರೂ, ಮಂತ್ರಿಗಳ ಅಭಿಪ್ರಾಯದಲ್ಲಿ ಸಮಾಧಾನಕರವೆಂದೂ, ನಿರಾಕ್ಷೇಪಕರವೆಂದೂ ಆಯಿತು ಮಾತ್ರವಲ್ಲದೆ ಈಗ ಬ್ರಿಟಿಷ ಮುತ್ಸದ್ದಿಯ ಬದಲಿಗೆ ಅಲ್ಲಿ ಬ್ರಿಟಿಷರು ರಾಯಭಾರಿಯನ್ನು ನೇಮಿಸುವರೆ ನಿರ್ಣಯವಾಯಿತ ಎಂದರೆ, ಜರ್ಮನಿ ಆಸ್ಟ್ರಿಯಗಳು ಒಂದಾದುದನ್ನು ಒಪ್ಪಿಕೊಂಡು ಅಂಗೀಕರಿಸಿದಂತಾಯಿತು

○ ○ ○

ಜಮೀನ್ದಾರರಿಗೂ ರೈತ ಒಕ್ಕಲುಗಳಿಗೂ ಇರುವ ವೈಮನಸ್ಸಿನ ನಿರ್ಮೂಲನಕ್ಕೆ ಯುಕ್ತ ಪ್ರಾಂತ್ಯದ ಗವರ್ನರರ, ಹೊಸ ರೇಡಿಯೋ ಸ್ಟೇಶನ ತೆರೆದ ಸಮಾರಂಭದಲ್ಲಿ ಭಾಷಣ ಮಾಡುವಾಗ ಪ್ರತಿ ಹಳ್ಳಿಯಲ್ಲೂ ಒಂದೊಂದು ರೇಡಿಯೋ ಸೆಟ್ಟನ್ನು ಜಮೀನ್ದಾರರು ಗ್ರಾಮಸ್ಥರಿಗೆ ದಯಮಾಡಿದಲ್ಲಿ, ಅದರಿಂದ ಅವರ ಮೇಲೆ ಪ್ರೇಮವು ಹೆಚ್ಚಲು ಅನುಕೂಲವುಂಟು ಎಂದು ತಿಳಿಸಿರುವರ ಅಂತಹ ರೇಡಿಯೋಗಳಲ್ಲಿ ಜಮೀನ್ದಾರಕೀ ಜೈ ಅಥವಾ ವಂದೇ ಜಮೀನ್ದಾರಂ ಎಂಬ ಸಂಗೀತವು ಆಗಾಗ ಕೇಳಬರ ಮಂತೇಕೆ ಏರ್ಪಡಿಸಬಾರದ ?

○ ○ ○ ○

ಶ್ರೀ ಕಾರ್ನಾಡ ಸದಾಶಿವರಾಯರ ಭಾವಚಿತ್ರವು ತಾನಾಗಿಯೆ ಮ್ಯುನಿಸಿಪಲ್ ಆಫಿಸಿನಲ್ಲಿ ಖಾಸಗಿ ವಂತಿಗೆಯಿಂದ ಇರಿಸಲಾಯಿತು ಸಂತೋಷವೇ ಆದರೆ, ಮುಖ್ಯ ತೋರುವ ವಿಷಯವೆಂದರೆ, ಮಾರ್ಚ ತಾರೀಕು ೩೧ರ ತನಕ ಈ ಕೌನ್ಸಿಲಿನ ಅವಧಿ ಇತ್ತಾದರೂ ಆ ಅವಧಿ ಮುಗಿವ ತನಕ ಕೌನ್ಸಿಲು ಕೌನ್ಸಿಲಾಗಿದ್ದೇ ಈ ಚಿತ್ರ ಪ್ರತಿಷ್ಠೆ ಜಗದಂತರದ ದುರ್ದೈವದ ಕಾರ್ಯಕ್ರಮ! ಶ್ರೀ ಸದಾಶಿವರಾಯರ ದೇಶಸೇವೆಯ ನೆನಪು ನಮ್ಮ ಕೌನ್ಸಿಲರರಲ್ಲಿ ಸದಾ ಇರುವಂತಾಗಲಿ

3ನೇ ಸಕಲ ಕರ್ನಾಟಕ ಸಂಘ ಸಮ್ಮೇಳನ

ಬೆಂಗಳೂರು ಕಳೆದ 2 ವರ್ಷ ವಿಶೇಷ ಸಾಹಿತ್ಯೋತ್ಸವ ಸಂದರ್ಭದಲ್ಲಿ ಸಕಲ ಕರ್ನಾಟಕ ಸಂಘ ಸಮ್ಮೇಳನವನ್ನು ಪರಿಷತ್ತು ನಡೆಸಿದ್ದು ಸರಿಯಷ್ಟೆ ಪರಿಷತ್ತು ಈ ಸಾರಿಯೂ ಇದೇ ತಿಂಗಳಲ್ಲಿ ಜರಗಲಿರುವ ವಸಂತ ಸಾಹಿತ್ಯೋತ್ಸವ ಕಾಲದಲ್ಲಿ 'ಸಂಘ ಸಮ್ಮೇಳನ'ವನ್ನು (ಗರ್ಹಿಲ) ನಡೆಸಬೇಕೆಂದು ನಿಶ್ಚಯಿಸಿದೆ ಈ ಸಮ್ಮೇಳನಕ್ಕೆ ಸಮಸ್ತ ಕರ್ನಾಟಕ ಸಂಘಗಳೂ ಸಾಹಿತ್ಯ ಸಂಸ್ಥೆಗಳೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಪರಿಷತ್ತು ಬೇಡುತ್ತದೆ

NOTICE.

A special meeting of the General Body of the Canara High School old boys Association will be held on Monday the 11th April 1938 at 5-30. p.m. in the A. Subba-rao Pai Memorial Hall. A copy of the agenda for this meeting will be found in the School Notice Board.

Canara High School, Mangalore, 29-3-'38

M. N. Kini
J. Vasudeva Pai
Hon. Secretaries.

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಬತ್ತ ಗುಡ್ಡ ಮು.	1 —11	1 —12
ರಾಶಿ ಅಕ್ಕಿ ...	3— 8	4— 0
ಸುಗ್ಗಿ ...	3 —14	4— 0
ಗುಡ್ಡೆ ...	4— 4	4— 6
ಊರ ಅಪ್ಪಲ್ ಬೆಳ್ತಿಗೆ ...	4— 7	4— 7
ರಂಗೂನು ಬೆ. ಗೋ. ಗೊ...	7 — 2	7— 4
ಎಲ್ಲೂರು ಬೆ. ಮು. ಗೊ...	3—14	4— 0
ಗೋಧಿ ಗೋಣಿ ಗೊ ...	13 — 0	14— 8
ತೊಗರಿ ಗೋಣಿ ಗೊ ...	11— 8	18— 8
ಹುರುಳಿ ಗೋಣಿ ಗೊ ...	6— 0	6— 2
ಕಡಲೆ ಗೋಣಿ ಗೊ ...	9 — 8	10 — 8
ತೊಗರಿಬೇಳೆ ಗೋಣಿ ಗೊ...	17— 8	18— 0
ಉದ್ದು ಗೋಣಿ ಗೊ ...	9— 0	9 — 8
ಹೆಸರು ಗೋಣಿ ಗೊ ...	9—12	10— 8
ಊದುಬೆಲ್ಲ ಖಂಡಿ ಗೊ ...	26— 4	30— 0
ಉಪ್ಪು ಗೋಣಿ ಗೊ ...	4— 8	5— 4
ಕೊಪ್ರ ಖಂಡಿ ಗೊ ...	46 — 4	46— 4
ಫ್ಯಾಂಡಿ ಖಂಡಿ ಗೊ ...	25 —	26 — 0
ತೆಂಗಿನ ಎಣ್ಣೆ ಘುಣ ಗೊ...	3 — 6	3— 6
ಎಳ್ಳೆಣ್ಣೆ ಮುಣ ಗೊ ...	6— 0	7— 0
ಚಿಮಿಣಿಎಣ್ಣೆ ಪಟ್ಟಿಗೆ ಗೊ...	6— 5	7— 5
ಮಾರಿಸ ಸಕ್ಕರೆ ಮು. ಗೊ...	2— 13	2 —14
ಮೆಣಸು ...	4— 8	6— 0
ಸಾಸಿವೆ ಮುಡಿ ಗೊ ...	5 — 8	6— 8
ಕಾಳುಮೆಣಸು ಪ ವೇಗೆ...	17 — 0	18— 8
ಯೇಲಕ್ಕಿ ಬೀಜ ಮಣ ಗೊ...	80— 0	85— 0
ಗೇರುಬೀಜ ಮು. ಗೊ ...	3— 0	3— 0
ಕಬ್ಬಿಣ ಖಂಡಿ ಗೊ ...	50— 0	55— 0
ತಾಂಬ್ರಕಗದು ಮ. ಗೊ...	14— 12	15— 0
ತಾಂಬ್ರಪಾತ್ರಗಳು ಮ. ಗೊ	14— 8	15— 0
ಚೀನಬೆಳ್ಳಿ ಸೇರು ಗೊ ...	13— 8	14— 0
ಹಿತ್ತಾಳೆ ತಗಡು ಮ ಗೊ...	12— 0	12 — 0
ಶವನು ಗೊ ...	22— 8	22 — 6
ಹೊಗೆ ಸೊಪ್ಪು ಖಂಡಿ ಗೊ	40— 0	45— 8
ನೇಟಿವ್ ಕಾಫಿ ಖಂಡಿ ಗೊ	140— 0	146— 0
ಫ್ಟೇಂ ಕಾಫಿ ಖಂಡಿ ಗೊ...	185— 0	198— 0
ಮಡಿಕೇರಿ ಏಲಕ್ಕಿ ಮಣ...	85— 0	89 — 0

ಡೋಂಗರ್ಸ್ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೬೦ನೆಯ ಈಶ್ವರ ಸಂವತ್ಸರದ ಚೈತ್ರ ಶು। ೯ ಶನಿವಾರದಿಂದ, ಚೈತ್ರ ಬ॥ ೧ ಶುಕ್ರವಾರದ ವರೇಗಿನ ಪಂಚಾಂಗ. (೧೯೩೮ನೇಯ ಏಪ್ರಿಲ ಸುಗ್ಗಿ)

9	ಶನಿ.	೯	೧	ಪುಷ್ಯ	೧೩	೨೬	[illegible]
10	ರವಿ	೧೧	೫೦	ಆಶ್ಲೇಷ	೧೦	೨೭	
11	ಸೋ.	೧೨	೪೬	ಮಘ	೭	೨೮	
12	ಕುಜ	೧೩	೪೪	ಹುಬ್ಬ	೬	೨೯	
13	ಬುಧ	೧೪	೪೨	ಉತ್ತರ	೫	೩೦	
14	ಗುರು	೧೫	೪೨	ಹಸ್ತ	೬	೧	
15	ಶುಕ್ರ	೧	೪೩	ಚಿತ್ರ	೭	೨	

THE P[illegible]-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars- K. R. GURU, *Managing Director*

ಶಾಶ್ವತ ಶಕ್ತಿ, ರಕ್ತ ಶುದ್ಧಿ ಮಾಡುವ ಬಗಯೇನು?

ಉರಿಯುವ ಬೇಸಿಗೆಯಲ್ಲಿ

"ವಿಜಯಾ"

ನಾಮದ ಬೇರಿನ (Sarsaparilla) ಸತ್ವವನ್ನು ನೀರಿನಲ್ಲಿ ಇಲ್ಲವೆ ಹಾಲಿನಲ್ಲಿ ಬೆರಸಿ ರುಚಿಗೆ ತಕ್ಕ ಸಕ್ಕರೆಯನ್ನು ಸೇರಿಸಿ ಕುಡಿಯುವುದರಿಂದ ದಣುವಾರಿಸಿ ಶರೀರವನ್ನು ತಂಪುಮಾಡುವುದು. ಇದಲ್ಲದ ಗಜ್ಜಿ ಮೊದಲಾದ ಸಕಲ ಚರ್ಮರೋಗಗಳನ್ನು ಹೋಗಲಾಡಿಸಿ ರಕ್ತಶುದ್ಧಿಯನ್ನು ಮಾಡುವುದು.

ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು.

ತಯಾರಿಸುವವರು:-

ವಿಜಯ ಫಾರ್ಮಸಿ, ಕೊಚ್ಚಿನ್.

ದ. ಕ. ಜಿಲ್ಲೆಯ ಏಜಂಟರು:-

ಎಸ್. ಬಿ. ಮಲ್ಯ, ಬಾರಕೂರು.
ಯು. ಬಿ. ಬಾಳಿಗ, ಹುಬ್ಬಳ್ಳಿ,
ಪ್ರೊಪ್ಯುಲರ್ ಫಾರ್ಮಸಿ, ಮಂಗಳೂರು.
ಪೈಸ್ ಫಾರ್ಮಸಿ, ಪುತ್ತೂರು.
ಕೆ. ಅಚ್ಯುತ ಶೆಣೈ, ಕಾಸರಗೋಡು.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

Use the soaps
KNOWN ALL OVER
WISICO'S.
MINAR
&
TAJAMAHAL 'Red'
Bar Soaps.
POPULAR IN THE MARKET
Sole Distributer-
P. G. KAMATH,
Kashmir House,
Marnamikatta, MANGALORE.

'DILROZ' Regd

'Dil Roz' is a sure cure for Oriental sores. local sores, all kinds of deep-rooted sores, skin eruptions, Pimples, Eczema, Ringworm, Sinus-Fistula auxillary-Abscess.

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE

ನೋಟಿಗಳು.—Note......S

★ ★ ★

ಶೃಂಗಾರ್ಥ (ಉಚ್ಚಾರದಲ್ಲಿ ಎಚ್ಚರಿಕೆ!) ರಾಷ್ಟ್ರವೆಂಬುದೂ ನಮ್ಮ ದೇಶದಲ್ಲಿದೆ, ಮೂರು ತಿಂಗಳಿಂದಲೂ ರಾಷ್ಟ್ರದ ಸರಕಾರದ ನೌಕರರಿಗೆ ಸಂಬಳವಿಲ್ಲ, ಕಾರಣ, ಹಿಂದಣ ದಿವಾನರು ನಿವೃತ್ತರಾದರು. ಹೊಸ ದಿವಾನರು ನೇಮಕವಾಗಿಲ್ಲ;—ಸಾಲ ಕೊಡುವವರೇ ಇಲ್ಲ ರಾಜಕುಮಾರರು ಮೂವರೇ ಸೇರಿರುವ ಒಂದು ಕಂಪೆನಿಯು ವಿದ್ಯುತ್ ಮೊದಲಾದ ಕಾರ್ಖಾನೆ ಕಟ್ಟುತ್ತ ಹೊಂದಿದ್ದು, ಇವರ ನೆಸೆಯಿಂದಲೂ ಸಂಕಷ್ಟಕ್ಕೊಟ್ಟಿದೆ.

o o o

ಫೆಡರೇಶನಿಗೆ ಇವರು ಸೇರಿದ್ದರೆ, ಸಾಲ ಸಿಗುವುದು ಸುಲಭವಾಗುತ್ತಿತ್ತು

o o o

ಕಾಶ್ಮೀರದ ಮುಸ್ಲಿಮರ ನೋಡಿರಿ "ಆ ಜಾತಿ ಈ ಜಾತಿ ಎಂದಿಲ್ಲ; ನಾವೆಲ್ಲ ಒಂದೇ ಜಾತಿ; ಹಿಂದೂ ಸಿಕ್ಕರನ್ನೂ ಸೇರಿಸಿಕೊಂಡು, ಪ್ರಜಾಸತ್ತೆಗೆ ಹೋರಾಡೋಣ. ಪ್ರಾಯಸ್ಥರೆಲ್ಲ ವೋಟರರಾಗಲಿ; ಜ್ಯಾಯಿಂಟ್ ಇಲೆಕ್ಟೊರೇಟು ಇವು ನಮಗೆ ಬೇಕು ಇವೆರಡು ಸೂತ್ರಗಳಿಲ್ಲದ ಪ್ರಜಾಸತ್ತೆ ಎಂಬುದು ವ್ಯರ್ಥ' ಎಂದು ಅಲ್ಲಿನ ಮುಸ್ಲಿಂ ಕಾನ್ಫರೆನ್ಸಿನ ಅಧ್ಯಕ್ಷರ ಭಾಷಣ

o o o

ಭಾಷಣವೇನೋ ಆಗಿದೆ ಅಧ್ಯಕ್ಷರಿಗೆ ಈಚೆಯಿಂದ ವಿನಾಶಕರ ಭಯೋತ್ಪಾದಕ ಪತ್ರಗಳು ಕಳುಸಿಲ್ಲವಷ್ಟೆ. ಜಾತಿಗೊಂದು ವಾಯು ಮಂಡಲ, ಮತಕ್ಕೊಮ್ಮೆ ಮತಗಂಧಾಂತರ ಕುಸ್ತಿಗೊಮ್ಮೆ ಅಲ್ಪಸಂಖ್ಯಾಕರ ಸಮಸ್ಯೆ— ಇವೆಲ್ಲ ನಮ್ಮಲ್ಲೇ ತುಂಬಿವೆಯಲ್ಲ' ನೇಕಡಾ ೮೦ ಮಂದಿ ಮುಸಲ್ಮಾನರಿರುವ ಹಿಂದೂ ರಾಜ್ಯ ಕಾಶ್ಮೀರದಲ್ಲಿ ಮುಸ್ಲಿಮ ಪರಿಷತ್ತಿನ ಅಧ್ಯಕ್ಷರೇ ಹೀಗೆನ್ನುವಾಗ,—ನಾವೇನೆನ್ನ ಬೇಕು?

o o o

ಫೆಡರೇಶನಿಗೆ ಕಾಶ್ಮೀರವೂ ಸೇರಿದ್ದರೆ, ನಮ್ಮವರಿಗೊಂದು ಪಾಠವಾಗುತ್ತಿತ್ತು

o o o

ಶ್ರೀ| ಕೆ. ಎಂ. ಅಶ್ರಫ್—ಇವರು ಬರೆದೊಂದು ಲೇಖದಲ್ಲಿ,—"ಮಧ್ಯಮ ಸ್ಥಿತಿಯ ಮುಸ್ಲಿಮರೇ ಜನರಲ್ಲಿ ಮತ ಮತ್ತು ಜಾತಿ ಸಂಬಂಧವುಳ್ಳ ನಾನಾ ಆಚಾರಗಳನ್ನು ಬೇಕೆಂದೆ ಪ್ರೋತ್ಸಾಹಿಸಿ, ಅವರು ಇತರ ಸಮಾಜಗಳೊಡನೆ ಸೇರದಂತೆ ಮಾಡಿ, ತಾವು ಸಾಮ್ರಾಜ್ಯಶಾಹಿಯಲ್ಲಿ ಪ್ರತಿಷ್ಠೆ ಹೊಂದಲೆಳಸುರುವರ ಉದಾರ ಪ್ರಕೃತಿಯವರಲ್ಲದ ಇವರಿಗೆ ಪ್ರಗತಿಯು ರುಚಿಸದು. ಪ್ರತ್ಯೇಕ ಪ್ರಾತಿನಿಧ್ಯ, ಬೇರೆ ಇಲೆಕ್ಟೊರೇಟು (ವೋಟರರ ಮಂಡಲ), ಅಲ್ಪಸಂಖ್ಯಾಕರ ಸಲುವಾಗಿ ನಾನಾ ಸಲುವಳಿಗೆಗಳ ವ್ಯಾಜ್ಯ ಹೋರಾಟ—ಇವುಗಳ ನಟನೆಯನ್ನು ಇವರು ಸರ್ಕಾರದ ದೋರಿ ನೋಡುತ್ತ, ಇತರರಿಂದ ದೂರವಾಗಿ, ಭಾರತವಾಸಿಗಳು ಒಂದೇ ಜನಾಂಗವಾಗುವುದನ್ನು ತಪ್ಪಿಸುವರು" ಎಂದಿದೆ

o o o o

ವಿಷವಾಕವುಳ್ಳ ಬಾಂಬುಗಳನ್ನು ಎಸೆದು, ಕ್ಷಣದೊಳಗೆ ಕ್ಷಯರೋಗವನ್ನು ಉಂಟುಮಾಡಿ ಲಕ್ಷಗಟ್ಟಲೆ ಜನರನ್ನ ಕೊಲ್ಲಬರುತ್ತದೆ, ಅಂತೆಯೆ, ಕ್ಷಣಾರ್ಧದಲ್ಲಿ ಶ್ವಾಸಕೋಶಗಳು ಎಂತಹ ಗ್ಯಾಸುಗಳಿಗೂ ಈಡಾಗದಂತೆ ತಡೆಯಬರುವಂತಹ ಹೊಸ ಗ್ಯಾಸನ್ನ ಇಂಗ್ಲಿಷ ವಿಜ್ಞಾನಿಗಳೊಬ್ಬರು ಕಂಡು ಹಿಡಿದಿರುವರು. ಜನಾಂಗದಲ್ಲಿ ಮತದ್ವೇಷ, ಜಾತಿದ್ವೇಷಗಳನ್ನು ಉಂಟುಮಾಡುವ ಉತ್ಪಾತವನ್ನು ತಡೆಗಟ್ಟುವುದಕ್ಕೆ ಅದಕ್ಕೆ ವಿರುದ್ಧವಾದ ಜಾತಿಯ ಬಾಂಬು ಸೃಷ್ಟಿಸುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಸನಾತನಿಗಳಿಗಾಗಿ ಈಗ ಗಾಂಧಿಜಿಯವರ ಭಕ್ತರಾಗುತ್ತಿವೆ.

ಮೌಲ್ವಿ ಮುಲ್ಲುಲ್ ಹುಕ್ ಎಂಬವರು ಬಿಹಾರದ ಮುಸ್ಲಿಂ ಸ್ವತಂತ್ರ ಪಕ್ಷದ ಕಾರ್ಯದರ್ಶಿಯರು. ಮುಸ್ಲಿಂ' ಎಂಬೊಂದು ಉರ್ದು ಭಾಷಾ ಪತ್ರಿಕೆಯು ಕೊಂಗ್ರೆಸ್ ಮಂತ್ರಿಕೂಟವನ್ನು ಪ್ರೋತ್ಸಾಹಿಸುತಿತ್ತು. ಈ ಹುಕ್ಕರು ಕೆಲ ವಿದ್ಯಾರ್ಥಿಗಳೊಡನೆ ಮುಸ್ಲಿಂ ಪತ್ರಿಕಾ ಆಫೀಸಿನೊಳಗೆ ನುಗ್ಗಿ, ಪತ್ರಿಕಾಸಂಪಾದಕರನ್ನು ಜರೆದು ಅಲ್ಲಿದ್ದ ಸಾಮಾನುಗಳನ್ನು ಮುರಿದಿಕ್ಕಿದರು. ಪೋಲೀಸ್ ಮೊಕದ್ದಮೆಯಾಗಲು, ಯುವಕ ವಿದ್ಯಾರ್ಥಿಯರನ್ನು ಹಾಳುದಾರಿಗೆ ತರಲೆತ್ನಿಸಿದ ಹುಕ್ಕರಿಗೆ, ಜುಲ್ಮಾನೆ ವಿಧಿಸಿದರೆ ಸಾಲದೆಂದು ಮೆಜಿಸ್ಟ್ರೇಟರು ಮೂರು ತಿಂಗಳ ಸಜೆವಿಧಿಸಿದರು.

o o o o

ಕೌಶಿಕಕುಮಾರ ಮಿತ್ರನೆಂಬವನು ಲಂಡನ್ ಯುನಿವರ್ಸಿಟಿಯ ಕಿಂಗ್ಸ್ ಕಾಲೇಜಿನಲ್ಲಿ ಓದುತ್ತಿರುವನು ವಿಮಾನ ಚಾಲಕನಾಗಲು ಅರ್ಜಿ ಹಾಕಿದ. ಖಾಲಿ ಸ್ಥಾನಗಳಿಲ್ಲವೆಂದಾಯಿತು. ಮಿತ್ರನ ಬಂಗಾಳಿ ಎಂಟೇ ದಿನಗಳಲಿ ಅವ ನೋಡುತ್ತಿದ್ದ ಕಾಲೇಜಿನಲಿ ನೋಟೀಸು ಬೋರ್ಡಿನಲ್ಲಿ, ಅದೇ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಹಲವು ಸ್ಥಾನಗಳಿವೆ, ಕೂಡಲೇ ಅರ್ಜಿ ಬರೆಯಬೇಕಾಗಿ ವಿಮಾನಚಾಲನೆ ಕಲಿಸುವವರದೇ ಸಹಿಯ ನೋಟೀಸು ಇತ್ತು ಲಂಡನ್ ಯುನಿವರ್ಸಿಟಿಯ ವಿದ್ಯಾರ್ಥಿಗಳ ವಿಮಾನಸೇನೆಗೆ ಸೇರುವುದ ಒಂಗಾಳಿಯ ಇಚ್ಛೆ. ಆದರೆ ಬಂಗಾಳಿ ಅಲ್ಲವೇ! ಸ್ಥಾನವಿಲ್ಲ

o o o o

ಕಡಪಿನ ದಣಿ ಈ ಕೆರೆ ಬಿಟ್ಟಿತ್ತು ದೋಣಿ ನಡೆಸುತ್ತಿದ್ದಾಗ ಈ ಕೆರೆಯಿಂದ ಪೋಲೀಸ್ ಜವಾನನೊಬ್ಬನು ದೋಣಿಯವನನ್ನು ಬೈಯುತ್ತ, ದೋಣಿಯನ್ನು ಮರಳಿ ತ ದು ಅವನನ್ನು ಆ ಕರೆಗೆ ಕೊಂಡೊಯ್ಯದಿದ್ದರೆ, ದೋಣಿಯವನಿಗೂ ಪ್ರಯಾಣಿಕರಿಗೂ ದಂಡನೆ ಮಾಡಿಸುವೆನೆಂದ ದೋಣಿಕಾರನು ಹಾಗೆಯೇ ಮರಳಿದ ದಡಕ್ಕೆ ಬರುತ್ತಲೇ ಪ್ರಯಾಣಿಕನು ಮತ್ತೊಬ್ಬ ಪೋಲೀಸ ಜವಾನನನ್ನು ಕರೆದು, ಈ ಬಗೆ ಬೈದ ಜವಾನನನ್ನು ಹಿಡಿದು ತರಿಸಿದ. ದೋಣಿಕಾರನ ಕ್ಷಮೆ ಬೇಡದಿದ್ದರಾಗದೆಂದು ಪ್ರಯಾಣಿಕನೆಂದ ಜವಾನನೂ ಹಾಗೆಯೇ ಮಾಡಿದ ಕಾರಣವೇನು? ಪ್ರಯಾಣಿಕನು ಸಬ್ ಡಿವಿಜನಲ್ ಆಫೀಸರನಾಗಿದ್ದ ಎಂದು ಮಾಣಿಕ್‌ಗಂಜಿನ ವಾರ್ತೆ

o o o o

ಮಲಯದ ವನಸ್ಪತ್ಯುದ್ಯಾನದ ಎತ್ತರದ ಮರಗಳಿಂದ 'ಫಲಪತ್ರ ಪುಷ್ಪ'ಗಳನ್ನು ಕಿತ್ತು ತರುವುದಕ್ಕಾಗಿ, ಔಷಧಿ ಶಾಸ್ತ್ರಜ್ಞರು (ಸರಕಾರದ ಇಲಾಖೆ) ಎರಡು ಮಂಗಗಳನ್ನು ತರಬೇತು ಮಾಡಿ, ಆ ಹುದ್ದೆ ಕೊಟ್ಟಿರುವರು ಈ ಮಂಗಗಳು ಈಗ ಸಿವಿಲ್ ಸರ್ವಿಸ್ ಪಟ್ಟಿಯಲ್ಲಿ ದಾಖಲಾಗಿವೆ ಬಜೆಟಿನಲ್ಲಿ ಇವುಗಳಿಗಾಗಿ ೧೪ ಪವನು ಖರ್ಚು ತೋರಿಸಲಾಗಿದೆ

o o o o

ಸೈನಿಕರ ಸಂಬಳ, ನೇಮಕ ಮೊದಲಾದುವನ್ನು ನಮ್ಮ ಮಧ್ಯ ಎಸೆಂಬ್ಲಿಯೂ ಕೂಡ ಚರ್ಚಿಸಬಾರದು ಹೋಗಲಿ ಸೈನಿಕರು ಬಡವನೊಬ್ಬ ಟೀಕ್ಸಿ ಡ್ರೈವರನ ಮೇಲೆ ಅತ್ಯಾಚಾರ ನಡೆಸಿದರೂ, ಅದನ್ನು ಎಸೆಂಬ್ಲಿಯಲ್ಲಿ ಪ್ರಶ್ನಿಸಬಾರದು ಸೈನಿಕರ ದುರ್ನಡತೆಗೆ ಸಹಪವಿತ್ರ, ಮಡಿ, ಅದನ್ನು ಕುರಿತು ಯಾರೂ ಪ್ರಶ್ನಿಸಬಾರದು. ಹೀಗಾಗುತ್ತ ಹೋದರೆ, ಸೈನಿಕ ಮಹಾದೇವನ ವಿಗ್ರಹ ಪ್ರತಿಷ್ಠಿಸಿ ಪೂಜೆ ಮಾಡದೆ, ಇಹಪರಗಳೆರಡು ಗತ್ಯಂತರವಿಲ್ಲೆಂದೂ ಸೂತ್ರಗಳಾಗಬಹುದು ಎಂದೊಂದು ಪತ್ರಿಕೆ ಟೀಕಿಸಿಯದೆ.

ಬೇಸಿಗೆ ಕಾಲದಲ್ಲಿ ಗಂಟಲು ಆರುವಿಕೆಯನ್ನು ನೀಗಿಸುತ್ತದೆ.

ನಡುಗೆ ಹೆಚ್ಚಾಗಿ ಗಂಟಲು ಬೇನೆಯ ತೊಂದರೆಗಳು, ಬೇಸಿಗೆ ಕಾಲದಲ್ಲಿ ಬಂದೊದಗುತ್ತವೆ. ಗಂಟಲು ಆರುವಿಕೆಗೆ ಕಾರಣವೇ ದುರ್ಗಂಧದ ಧೂಳು, ಹೀಗಿರುವುದರಿಂದ ಈ ಕಾಲದಲ್ಲಿ ಪೆಪ್ಸ್ ಶ್ವಾಸನೀಯ ಮಾತ್ರೆಗಳಿಂದ ಗಂಟಲು ಉರಿಯನ್ನು ಕಡಿಮೆ ಮಾಡಬಹುದು

ಅನೇಕ ಫಿಲ್ಮು ಕಂಪೆನಿಗಳಲ್ಲಿಯೂ ಸಿನೆಮಾ ಕಂಪೆನಿಗಳಲ್ಲಿಯೂ ಕೆಲಸ ನಡೆಸಿ ಅವುಗಳ ತಂತ್ರಾನುಭವವುಳ್ಳ ರಾ ಪಂಢರ್‌ರವರು ಒಂದು ಮಾತನಾಡುವ ಲಿಮಿಟೆಡ್ ಸಿನೆಮಾ ಕಂಪೆನಿಯನ್ನು ತೆರೆದು ಅದರ ಆಡಳಿತೆಯನ್ನು ಸ್ವತಹ ಅವರೇ ನಡೆಸುವ ಇರಾದೆಯಿಂದ ಅದನ್ನು ಮಂಗಳೂರಿನಲ್ಲಿ ರಜಿಸ್ಟ್ರು ಮಾಡಬೇಕೆಂದು ಇಟ್ಟಿಸಿದ್ದಕ್ಕೆ ಅನೇಕ ಮಹಾನುಭಾವರು ಉತ್ತೇಜನ ಕೊಟ್ಟಿದ್ದಲ್ಲದೆ ಅವರೆಲ್ಲರೂ ಪಾಲುಗಳನ್ನು ಪಡೆದಿರುವರು ಸದ್ರಿ ಸರಾಫರವರು ಕೈಕೊಂಡ ಈ ಕಾರ್ಯವು ಈಗಿನ ದಿವಸಗಳಲ್ಲಿ ಅತಿ ಶ್ರೇಯಸ್ಕರವಾಗಿದ್ದು ಕೊಂಗ್ರೆಸಿನ ವಿದ್ಯಾಖಾತೆಯೇ ಮುಂತಾದ ಅನೇಕ ವರ್ತಮಾನಗಳನ್ನು ಬೇರೆ ಅನೇಕ ವಿಷಯಗಳನ್ನು ಕೂಡಾ ತಿಳಿಯಪಡಿಸಿಗುವ ಉಪಯೋಗವಿರುವುದರಿಂದ ಅತೀ ಶ್ಲಾಘನೀಯವಾದ ಈ ಸಾಹಸಕಾರ್ಯದಲ್ಲಿ ಅವರಿಗೆ ಯಶಸ್ಸು ಉಂಟಾಗದಿರದೆಂದು ನಮ್ಮ ಅಭಿಮತವಿರುವುದು

ಪಂಚಮ ಹಿಂದೀ ಪ್ರಮಾಣಪತ್ರ ವಿತರಣೋತ್ಸವ, ಪುತ್ತೂರು.

ರಾಷ್ಟ್ರೀಯ ಜಾಗೃತಿಯ ಈ ಯುಗದಲ್ಲಿ ರಾಷ್ಟ್ರಭಾಷಾ ಪ್ರಚಾರಕಾರ್ಯವು ಎಷ್ಟು ಮಹತ್ವದ್ದಿರುವುದು ಎಂಬುದರ ವಿಷಯ ನಮ್ಮಲ್ಲಿಗೆ ತಿಳಿಸಬೇಕಾಗಿಲ್ಲ. ಕಳೆದ ವರ್ಷ ಪುತ್ತೂರಲ್ಲಿ, ಹಿಂದೀ ಪ್ರಚಾರ ಕಾರ್ಯವು ಯಾವ ರೀತಿಯಲ್ಲಿ ನಡೆಯಿತು ಇತ್ಯಾದಿ ವಿಷಯವನ್ನು ತಿಳಿಸುವರೆ ಪಂಚಮ ಹಿಂದೀ ಪ್ರಮಾಣಪತ್ರ ವಿತರಣೋತ್ಸವವು ಇದೇ ತಿಂಗಳ ತಾ ೧೫ನೇ ಶುಕ್ರವಾರ ಸಾಯಂಕಾಲ ಪುತ್ತೂರು ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರಿನ ಪ್ರಸಿದ್ಧ ವಕೀಲ ಶ್ರೀ ಕೆ ಬಿನಂಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಲಿರುವುದು ಆ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಪ್ರಸಿದ್ಧ ಹಿಂದೀ ಭಾಷಾ ಸೇವಕರಾದ ಕಾರ್ಕಳ ಹಿಂದೀ ಶಿಕ್ಷಕ ವಿದ್ಯಾಲಯದ ವ್ಯವಸ್ಥಾಪಕರಾದ ಶ್ರೀ ವಿಶ್ವೇಶ್ವರ ನಾರಾಯಣ ಬಿಜೂರ್ (ಬಿ. ಎಸ್‌ಸಿ ಎಲ್ ಟಿ) ರವರು ಅಭಿಭಾಷಣವನ್ನು ಕೊಡಲಿರುವರು.

ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ 20 ವರ್ಷದಿಂದ ಉಪಾಧ್ಯಾಯರಾಗಿದ್ದು, ಹಿಂದಿನ ಕಿಟ್ಟ ಬ್ರದರ್ಸ್ ಕಂಪೆನಿಯ ಪಾರ್ಟನರಾಗಿ ಈಗ ಸ್ಕೂಲ್ ಬುಕ್ ಕಂಪೆನಿಯ ಮುಖ್ಯಸ್ಥರಾಗಿಯೂ ಇದ್ದ ಶ್ರೀ ಪಣಂಬೂರು ಚಿದಂಬರ ಭಂಡಾರಿಯವರು ತಮ್ಮ 45ನೆಯ ವಯಸ್ಸಿನಲ್ಲಿ ಒಂದೇ ಮೂರು ದಿನಗಳ ಅಸ್ವಸ್ಥದಿಂದಾಗಿ ತಾ. 13ನೆ ಬೆಳಗ್ಗೆ ದಿವಂಗತರಾದುದು ತೀರಾ ಶೋಚನೀಯವಾಗಿದೆ. ಇವರು ಪಕ್ಷಭೇದವಿಲ್ಲದ ಉದಾರ ಭಾವದವರೂ ನ್ಯಾಯಕ್ಕೆ ಹಿಂತೆಗೆಯದವರೂ ಆಗಿದ್ದು, ಈ ಜಿಲ್ಲೆಯ ಎಲ್ಲಾ ಶಾಲೋಪಾಧ್ಯಾಯರ ಪರಿಚಿತರಾಗಿದ್ದರು. ಎಳೆಯ ವಯಸ್ಸಿನಲ್ಲಿಯೇ ಅಕಸ್ಮಾತ್ತಾಗಿ ಕುಟುಂಬವನ್ನೂ, ಮಿತ್ರಕೋಟಿಯನ್ನೂ ಸಂತಾಪಕ್ಕೊಳ್ಪಡಿಸಿದ ಇವರ ಆತ್ಮವನ್ನು ಶಾಂತಿಯಲ್ಲಿರಿಸುವಂತೆ ಭಗವಂತನೇ ಇವರ ಕುಟುಂಬಕ್ಕೂ ಸಮಾಧಾನವನ್ನಿತ್ತು ಆತ್ಮಕ್ಕೆ ಶಾಂತಿಯನ್ನೀಯಲಿ.

ಬೇಕಾಗಿದ್ದಾರೆ

ರೋಡ್ ರೋಲರ್ ಡ್ರೈವರರೊಬ್ಬರು ರೂಪಾಯಿ 25ರ ಸಂಬಳ ಮತ್ತು ರೂ 5೦ ಭತ್ತೆ ಮೇಲೆ ಬೇಕಾಗಿದ್ದಾರೆ. ಸದ್ರಿಯವರು ಎಂಗ್ಲೋ ಇಂಡಿಯನ್ ಅಥವಾ ಕ್ರಿಶ್ಚನರಾಗದೇ ಆಗಬೇಕು. ಅರ್ಜಿಯಲ್ಲಿ ತಮ್ಮ ಸಂಪೂರ್ಣ ವಿಳಾಸ, ಪ್ರಾಯ, ಜಾತಿ, ಹುಟ್ಟೂರು ವಗೈರೆ ವರ್ತಮಾನಗಳನ್ನು ಕಾಣಿಸುವುದಲ್ಲದೆ, ಆ ಬಗ್ಗೆ ಒರಿಜಿನಲ್ ಸರ್ಟಿಫಿಕೇಟುಗಳೊಂದಿಗೆ ತನ್ನ ಸರ್ವೀಸು ಮುಂತಾದುವುಗಳನ್ನು ಬರೆದು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಆಫೀಸು, ಮಂಗಳೂರು ಇಲ್ಲಿಗೆ ಬರೆದುಕೊಳ್ಳತಕ್ಕದ್ದು.

ದಿ। ದೇಶಭಕ್ತ ಕೆ. ಸದಾಶಿವರಾಯರು

ದಿವಂಗತರ ಛಾಯಾಚಿತ್ರ ಅನಾವರಣವು ಇದೇ ತಾ. 31-3-38ರಲ್ಲು ಮಂಗಳೂರು ನಗರ ಸಭಾಸದನದಲ್ಲಿ ಡಾ ಕೆ ಶಿವ್ಹೋಕರ್ರಿಂದ ನೆರವೇರಿಸಲ್ಪಟ್ಟಿತು.

ಪ್ರಾಂತಿಕ ಭೂಗೋಲಿಕ ಪರಿಷತ್ತು

ಪ್ರಾಂತಿಕ ಶಿಕ್ಷಣ ಪರಿಷತ್ತು ಜರಗುವಾಗಲೇ ಪ್ರಾಂತಿಕ ಭೂಗೋಲಿಕ ಪರಿಷತ್ತು (The Provincial Geographical Conference) ಮಂಗಳೂರಲ್ಲಿ ಜರಗುವುದು ಈ ಪರಿಷತ್ತು ಸಹಾ ಕೆನರಾ ಹೈಸ್ಕೂಲಿನಲ್ಲಿಯೇ ಸೇರುವುದು. ಶ್ರೀ ಸಿ ಜೆ ದಾಸ್ ಎಮ್ ಎ ಎಲ್ ಟಿ, ಪ್ರಿನ್ಸಿಪಾಲ್ ಸೆಕ್ರೆಟರಿ, ತಿರುಚ್ಚಿನಾಪಳ್ಳಿ — ಇವರು ಅಧ್ಯಕ್ಷರಾಗಲು ಸಮ್ಮತಿಸಿರುವರು ಮೇ. ತಾ. 12ನೇ ಬೆಳಗ್ಗೆ 8 ಗಂಟೆಗೆ ಇದು ಪ್ರಾರಂಭವಾಗುವುದು ಅಂದಿನ ಬೆಳಗ್ಗೂ ತಾ 13ನೆಯ ಮಧ್ಯಾಹ್ನವೂ ಸಭೆಗಳಾಗುವುವು ವಿದ್ವಜ್ಜನರು ಬರೆದಿರುವ ನಾನಾ ತರಹಂಗಳ ವಿಚಾರಗಳ ಕ್ಕೆ ಉತ್ತಮೋತ್ತಮ ಲೇಖನಗಳನ್ನು ಇಲ್ಲಿ ಓದುವರು. ಮಾಧ್ಯಮಿಕ ಸ್ಕೂಲು ಮತ್ತು ನಮ್ಮ ಸರಕಾರವು ಹೊಸ ದಿಕ್ಕಿನಲ್ಲಿ ಶಿಕ್ಷಣ ಸ್ಕೀಮಿನಲ್ಲಿ ಭೂಗೋಲ ಶಾಸ್ತ್ರಕ್ಕೆ ಸಂಬಂಧವಿರುವ ವಿಷಯಗಳೇ ಪ್ರಾಮುಖ್ಯಸ್ಥಾನಕ್ಕೆ ಒದಗುವದು ಅದು ಕಾರಣ ಇವುಗಳ ಮಹತ್ವವನ್ನು ಪ್ರಥಮತಃ ಮನಗಾಣುವ ಎಲ್ಲಾ ತರಗತಿಗಳ ಉಪಾಧ್ಯಾಯರು ಅಗತ್ಯವಾಗಿಯೇ ತಿಳಿಯಬೇಕಾಗಿದೆ ಇನ್ನು ಈ ಅಧಿವೇಶನಕ್ಕೆ ಪ್ರವೇಶ ಧನದ ರೂಪಾಯಿ ಒಂದನ್ನು ತೆತ್ತವರೆಲ್ಲ ಈ ಅಧಿವೇಶನಗಳಿಗೂ ಒಟ್ಟಂತೆಯೂ, ವಾರ್ಷಿಕ ಎರಡು ರೂಪಾಯಿ ತೆತ್ತವರು ಮದ್ರಾಸು ಜಿಯೋಗ್ರಫಿಕಲ್ ಎಸೋಸಿಯೇಶನಿನ ಸದಸ್ಯರಾಗುವಂತೆಯೂ ವಿಶೇಷವಾಗಿದೆ ಪ್ರದರ್ಶನವಿದೆ, ಅಲ್ಲಲ್ಲಿಗೆ ವಿಹಾರಕೂಟಗಳಿವೆ, ಅಗತ್ಯವಾಗಿ ಶಿಕ್ಷಕರು ಸಹಕರಿಸಬೇಕು ಎಂದು ಸ್ಥಳೀಯ ಕಾರ್ಯದರ್ಶಿ ಶ್ರೀ ಎಮ್. ಎಸ್. ಕಾಮತ್ ಇವರು ಅಪೇಕ್ಷಿಸುತ್ತಿರುವರು

ಫರಂಗಿಪೇಟೆ

ಇಲ್ಲಿಯ ಶ್ರೀರಾಮ ಹಾಯರ್ ಎಲಿಮೆಂಟರಿ ಶಾಲೆಯ 21ನೇ ವಾರ್ಷಿಕೋತ್ಸವವು ಮಂಗಳೂರು ರೇಂಜ್ ಶಾಲೆಗಳ ಡಿ। ಇನ್ಸ್‌ಪೆಕ್ಟರರಾದ ಶ್ರೀ ಎಚ್. ಸಂಜೀವರಾವ್ ಬಿ. ಎ ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ತಾ 9ನೇ ರಾಮನವಮಿ ದಿನ ಬಹು ವಿಜೃಂಭಣೆಯಿಂದ ಜರಗಿತು. ಊರಪರವೂರ ಅನೇಕ ಗೃಹಸ್ಥರನ್ನು ಶಿಕ್ಷಕರು ದಯಮಾಡಿಸಿದ್ದರು. ಪ್ರಾರ್ಥನೆಯ ನಂತರ ಶಾಲಾ ಸ್ವಾಗತಗಳು, ಶಾಲಾ ರಿಪೋರ್ಟ್ ವಾಚನ, ಪಾರಿತೋಷಕ ಹಂಚೋಣ ನಡೆದ ಬಳಿಕ ಅಧ್ಯಕ್ಷರು—ಈಗಿನ ವಿದ್ಯಾಭ್ಯಾಸದ ಕ್ರಮ—ಮುಂದೆ ವಾರ್ಧಾ ಸ್ಕೀಮಿನ ಯೋಜನೆ ಇವಕ್ಕೆಲ್ಲಾ ಹೇಗೆ ಶಿಕ್ಷಕರು ಸಹಕರಿಸಬೇಕೆಂಬುದರ ಕುರಿತು ಬೋಧಪ್ರದವಾದ ಭಾಷಣಮಾಡಿದರು

ತಾಲೂಕುಗಳಿಂದ

ಮೂಲ್ಕಿ

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಅದೊಂದು ಸಾಮಾನ್ಯ ಸಭೆಯು ಕಳೆದ ತಾ 2-4-38 ರಲ್ಲು ಸೆಂಟರ್ ಶಾಲೆಯಲ್ಲಿ ಬೋರ್ಡ್ ಹೈಸ್ಕೂಲಿನ ಹಿಂದಣ ಸಹಾಯಕ ಅಧ್ಯಾಪಕರಾದ ಶ್ರೀ ಕೆ ಗೋಪಾಲಕೃಷ್ಣ ನಾಯಕ್, ಬಿ. ಎ, ಬಿ. ಇ, ಡಿ.ರವರ ಅಧ್ಯಕ್ಷತೆಯಲ್ಲಿ ಕೂಡಿಬಂತು ವರದಿವಾಚನ ಲೇಖನವಾಚನ ಇತ್ಯಾದಿಗಳಾದ ಮೇಲೆ, ಬೋರ್ಡ್ ಎಲಿಮೆಂಟರಿ ಶಾಲೆಗಳ ದೀರ್ಘ ಕಾಲದ ರಜೆಯನ್ನು ಹಿಂದಿನಂತೆ ೪೦ ದಿವಸಗಳಾಗಿ ಇರಗೊಳಿಸುವಂತೆ ಕೇಳಿಕೊಳ್ಳಬೇಕೆಂಬ ಠರಾವು ಸಭಾಧ್ಯಕ್ಷರ ಅಮೂಲ್ಯ ಭಾಷಣ ಇವೇ ಮೊದಲಾದ ಕಾರ್ಯಭಾಗಗಳು ನಡೆದುವು ಮುಂದಿನ ಸಭೆಯು ಇದೆ ಬರುವ 23-7-38ರಲ್ಲಿ ಪಡ್ಪನಂಬೂರು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವುದು

ಇಲ್ಲಿಯ ಬಂದರು ನೂತನವಾಗಿ ಈ ವರ್ಷ ಏರ್ಪಡಿಸಲ್ಪಟ್ಟುದರಿಂದ ಈ ವರ್ಷದ ಮಟ್ಟಿಗೆ ಇದೇ ತಾ. 8ರಲ್ಲು ಮುಂಬಾಯಿಯಿಂದ ಮತ್ತು ಮಂಗಳೂರಿನಿಂದ ಹೊರಡುವ ಸ್ಟೀಮರುಗಳು ಇಲ್ಲಿ ಕಡೇ ಸಲಕ್ಕೆ ಬಂದರು ಮಾಡುವುವು ಮುಂದೆ ಮಳೆಗಾಲ ಕಳೆದು ಸಪ್ಟಂಬರ ತಿಂಗಳಲ್ಲಿ ಪುನಃ ಬಂದರು ಮಾಡಲ್ಪಡುವುವು

ಇಲ್ಲಿಗೆ ಸಮೀಪ ಇರುವ ಕವತ್ತಾರಿನಲ್ಲಿ ಜರಗಲಿರುವ ಅಯನೋತ್ಸವವು ಈ ವರ್ಷ ಇದೇ 14-5-38 ರಲ್ಲು ಜರಗಲಿರುವುದೆಂದೂ ತಿಳಿದುಬರುತ್ತದೆ.

ಕಾರ್ಕಳ

ಇಲ್ಲಿಯ ವೋಕೇಶನಲ್ ಸ್ಕೂಲ್ ಅಫ್ ಕಾಮರ್ಸ್ ಎಂಬ ಸಂಸ್ಥೆಯ ವಾರ್ಷಿಕೋತ್ಸವವು ಇದೇ ತಾ 3ನೇ ದಿನ ಕಲಿಕತ್ತೆಯ ಗವರ್ನಮೆಂಟ್ ಟ್ರೇನಿಂಗ್ ಕಾಲೇಜಿನ ವಾಣಿಜ್ಯ ಶಿಕ್ಷಕಾಚಾರ್ಯರಾದ ಶ್ರೀ ಟಿ ರಾಮಸಿದ್ದೇಗೌಡರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಯಂ ಶ್ರೀನಿವಾಸರಾವ್ ಬಿ ಎ ಇವರು ಸಂಸ್ಥೆಯ ಸ್ಥಾಪನೆ ಮತ್ತು ಉದ್ದೇಶ ಸಭೆಗೆ ತಿಳಿಸಿ .... ವಿವಿಧ ವಿನೋದಾವಳಿಗಳ ಸಹಿತ ಕಾರ್ಯವು ಅತ್ಯಂತ ಪ್ರಶಂಸನೀಯವಾಗಿ ನಡೆಯಿತು.

ರಾಷ್ಟ್ರೀಯ ಸಪ್ತಾಹದಾಚರಣೆಯು ಇಲ್ಲಿ ವಿಜೃಂಭಣೆಯಿಂದ ಆಗುತ್ತಾ ಇದೆ. ತಾ 6—4—38ರ ದಿನ ಬೆಳಗ್ಗೆ ಪ್ರಭಾತಫೇರಿ ಧ್ವಜಾರೋಹಣ ಸಾಯಂಕಾಲ ಸ್ವರಾಜ್ಯ ಮೈದಾನದಲ್ಲಿ ಸಭೆ ಭಾಷಣಗಳು, ಖಾದಿ ಪ್ರಚಾರ, ಮದ್ಯಪಾನನಿಷೇಧ ಪ್ರಚಾರ ಮೊದಲಾದ ಕಾರ್ಯಗಳು ನಡೆಯುತ್ತ ಇವೆ

ಜಿಲ್ಲಾ ಬೋರ್ಡಿಗೆ ಕಾರ್ಕಳ ತಾಲೂಕಿನಿಂದ ತಮ್ಮ ಕಾಂಗ್ರೆಸ ಕಡೆಯ ಪ್ರತಿನಿಧಿಗಳಾಗಿ ಆರಿಸಬೇಕೆಂದು ಜನರಲ್ ಸೀಟಿಗೆ ಶ್ರೀ ಎಚ್ ... ಅದ್ಯಂತಾಯರೂ ಹರಿಜನ ಸೀಟಿಗೆ ಶ್ರೀ ... ಇವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅರ್ಜಿ ಹಾಕಿರುವರೆಂದು ತಿಳಿದುಬರುತ್ತದೆ. ತಾಲೂಕು ಕಾಂಗ್ರೆಸ್ ಕಮಿಟಿಯು ಈ ವಿಷಯದಲ್ಲಿ ಜನಮತವು ಹೇಗಿದೆ ಎಂದು ಪರೀಕ್ಷಿಸುತ್ತಲಿದೆ

ಉಪಾಧ್ಯಾಯ ಸಂಘ, ಕಲ್ಯಾಣಪುರ

ವಾರ್ಧಾ ಶಿಕ್ಷಣ ಯೋಜನೆಯಲ್ಲಿ ಒಳಗೊಂಡ ಆರ್ಥಿಕ ಧೋರಣವು ಜನಕ್ಕೂ ಸರಕಾರಕ್ಕೂ ಹೊಸತಾದ ಸ್ವರೂಪವನ್ನು ತೋರಿಸುವುದರಿಂದ ಶಿಕ್ಷಣಕಾರ್ಯವು ಸಮರ್ಪಕವಾಗಿಯೂ ಅಲ್ಪ ವೆಚ್ಚದಲ್ಲಿ ಜರಗಲಾರದೆಂದೂ ಶಿಕ್ಷಣದ ಧ್ಯೇಯವನ್ನು ಅದರಿಂದಲೇ ಹುಟ್ಟಿಸುವುದು ಅಸಾಧ್ಯವೆಂದೂ ಈ ಸಭೆಯು ಅಭಿಪ್ರಾಯಪಡುವುದರಿಂದ ಸದರೀ ಯೋಜನೆಗೆ ಈ ಸಭೆಯು ಅಭಿಪ್ರಾಯಪಡುತ್ತದೆ

ಕಾಪಿನಗೋಡು

ತಾಲೂಕು ಯಡನಾಡು ಪಂಚಾಯತು ಕೋರ್ಟಿನ ಚುನಾವಣೆಯು ಇದೇ ತಾ 11ರಲ್ಲು ಪಾಜಿ ಪಟೇಲ ಎಂ ಟಿ. ಮುಲ್ಲ್ ದೆಯವರು ಪಂಚಾಯತ ಕೋರ್ಟಿನ ಸಲುವಾಗಿ ಚುನಾಯಿಸಲ್ಪಟ್ಟು ಆಫೀಸಿನಲ್ಲಿ ನಡೆಯಿತು ಚುನಾವಣೆಯ ಸಮಯ, ಹೆಂಚಿನ ರೆವಿನ್ಯೂ ಇನ್ಸ್‌ಪೆಕ್ಟರರಾದ

ಶ್ರೀ ಪುಂಡಲೀಕರವರು ಚುನಾವಣಾ ಅಧಿಕಾರರಾಗಿ ಹಾಜರಿದ್ದರು. ಈ ಕೆಳಗಿನವರು ಸದ್ರಿ ಪಂಚಾಯತ್ ಕೋರ್ಟಿನ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು ಮಣಿಪಾಲ ಪಂಚಾಯತ್ ಕೋರ್ಟು ಪ್ರೆಸಿಡೆಂಟ್ ಎಂ ಎ ಇಬ್ರಾಹಿಮ್ ಕುಂಞರವರು, ಯಡನಾಡು ಪಟೇಲ್ ಕೃಷ್ಣ ಭಟ್ಟರು, ಬಿ ಎ ಕೆ ಹಸನ್ ಕುಂಞರವರು, ಕಾಸ್ಕೂರ ಪಟೇಲ ಪದ್ಮನಾಭ ಶೇಟ್ ಕುಂಞಕಾಯರು, ಯಂ. ಬಿ ಮಹಮ್ಮದರವರು ಮತ್ತು ಬಿ. ಕೆ. ಮಹಮ್ಮದ್ ಕುಟ್ಟಿ ರವರು

ಗ್ರಾಮ ಕಾಂಗ್ರೆಸ್ ಕಮಿಟಿ, ಮುದ್ರಾಡಿ

ಇದೇ ತಾ. 1ನೇ ಶುಕ್ರವಾರ ಮಧ್ಯಾಹ್ನ ಈ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಎಂ ಧರ್ಮರಾಜ ಅರಸರಾಗರ ಅಧ್ಯಕ್ಷತೆಯಲ್ಲಿ ಮಹಾಸಭೆಯೊಂದು ಜರಗಿತು

ಬಂಟವಾಳ

ಇಲ್ಲಿಯ ಎಸ್ ವಿ. ಎಸ್. ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ಕಳೆದ ತಾ. 10ನೆಯ ರವಿವಾರ ಡಿವಿಜನಲ್ ಆಫೀಸರರಾದ ಜನಾಬ್ ಗುಲಾಮ್ ದಸ್ತಗಿರಿ ಖಾನರ ಅಧ್ಯಕ್ಷತೆಯಲ್ಲಿ ಜರಗಿತು

ಕಳೆದ ತಾ 13ನೇ ಬುಧವಾರ ಇಲ್ಲಿ ಕಂಚುಗಾರರ ಕುಟುಂಬದ ಬಳಿ ನದಿಯಲ್ಲಿ ಆಗಲೇ ಹುಟ್ಟಿದ ಒಂದು ಶಿಶುವಿನ ಮೃತಕಳೇಬರವು ದೊರಕಿರುವುದು. ಮಗುವಿನ ಮೂಗಿನಿಂದ ರಕ್ತವು ಸುರಿದು ಗಟ್ಟಿಯಾದುದರಿಂದ ಮಗುವನ್ನು ಕೊಂದೇ ನದಿಯಲ್ಲಿ ಬಿಸಾಡಿದಂತೆ ತೋರುತ್ತದೆ

ತಾ. 12ನೆಯ ಮಂಗಳವಾರ ಇಲ್ಲಿ ಬಂಟವಾಳ ಕೊಂಗ್ರೆಸ್ ಕಮಿಟಿಯ ಸಭೆಯು ಜರಗಿ ಇಲ್ಲಿಯ ಬಳಿಕ ಜಿಲ್ಲಾ ಬೋರ್ಡ್ ಚುನಾವಣೆಗೆ ಪುರುಷೋತ್ತಮ ಶ್ರೀನಿವಾಸ್ ಬಿ ಪ್ರಕಾಶ ಶಾನಭಾಗ, ಬಿ ಎ., ಬಿ ಎಲ್ ಇವರನ್ನು ಕೊಂಗ್ರೆಸ ಉಮೇದ್ವಾರರಾಗಿ ಚುನಾಯಿಸಬೇಕಾಗಿ, ಮಂಗಳೂರು ತಾಲೂಕು ಕೊಂಗ್ರೆಸು ಕಮಿಟಿಗೆ ಶಿಫಾರಸು ಮಾಡಲಾಯಿತು

ಇದು ಬೇಸಗೆಯ ರಜೆಯ ಕಾಲವಾದುದರಿಂದ ದಸರಾ ಮುಂತಾದ ಹಬ್ಬಗಳಲ್ಲಿ ಕ್ರಮಪ್ರಕಾರ ನಡೆಸುವ ಪ್ರದರ್ಶನಗಳ ... ಈ ರೀತಿಯ ವಿಚಾರವನ್ನು ನಡೆಸ ತಕ್ಕ ವ್ಯವಸ್ಥೆ ಮಾಡಬೇಕೆಂದು ಸರ್ವಾನುಮತದಿಂದ ಠರಾಯಿಸಲಾಯಿತು

ಆ ಬಗ್ಗೆ ಅನ್ಯಾಯ ಹೊಂದಿದವರು ಕೊಂಗ್ರೆಸ ಕಛೇರಿಗೆ ದೂರುಕೊಟ್ಟು, ಕೊಂಗ್ರೆಸ್ ಕಮಿಟಿಯು ವಿಚಾರಣಾ ಕಾರ್ಯದಲ್ಲಿ ಸಹಕರಿಸಬೇಕಾಗಿ ನಿರ್ಧರಿಸಲಾಯಿತು

ಉಡುಪಿ ತಾಲೂಕು ರಾಜಕೀಯ ಪರಿಷತ್ತು:

ಇದೇ ಬರುವ ಮೇ ತಾ 4ನೇ ಮತ್ತು 5ನೆ ದಿನಗಳಲ್ಲಿ ಕಟಪಾಡಿಯಲ್ಲಿ ಜರಗುವುದು. ಮದ್ರಾಸ ಸರಕಾರದ ಆರೋಗ್ಯ ಮತ್ತು ವೈದ್ಯ ಇಲಾಖೆಯ ಡಾಕ್ಟರ್ ಟಿ ಎಸ ಎಸ ರಾಜನ್‌ರವರು ಪರಿಷತ್ತನ್ನು ತೆರೆಯುವರು ಪರಿಷತ್ತು ಯಶಸ್ವಿಯಾಗುವಂತೆ ಮಾಡುವ ಪ್ರಯತ್ನವು ಮಾಡಲಾಗುತ್ತಿದ್ದು

ತಾ 4ನೆಯ ದಿನ ಕೃಷಿ ಮತ್ತು ಕೈಗಾರಿಕೆ ಪ್ರದರ್ಶನವು ತೆರೆಯಲ್ಪಡುವುದು. ಪ್ರದರ್ಶನವು ಜಯಶೀಲವಾಗುವಂತೆ ಮಾಡಬೇಕಾಗಿ ಆಪೇಕ್ಷಿಸ ತಕ್ಕ ಪ್ರದರ್ಶನದಲ್ಲಿ ಭಾಗವಹಿಸಲಿಚ್ಛಿಸುವವರು ಸಮಾನುಗಳ ಬಗ್ಗೆ ಪ್ರದರ್ಶನದ ಕಾರ್ಯದರ್ಶಿಗಳಿಗೆ ಬರೆಯಬೇಕಾಗಿ ಕೇಳಲ್ಪಡುತ್ತಾರೆ

ಇದೇ ಸಂದರ್ಭದಲ್ಲಿ ವ್ಯಾಯಾಮ ಪ್ರದರ್ಶನವನ್ನು ಏರ್ಪಡಿಸಬೇಕೆಂದಿರುವುದರಿಂದ ವ್ಯಾಯಾಮ ಶಾಲೆಯವರೂ ವ್ಯಾಯಾಮ ಪ್ರಿಯರೂ ಮುಂದೆ ಬಂದು ಸಹಕರಿಸಬೇಕಾಗಿ ವಿನಂತಿ

ಸಂಗೀತ ಕಲೆಯ ಪ್ರದರ್ಶನವನ್ನು ಮಾಡಬೇಕೆಂದು ನಿಶ್ಚಯಿಸುವ ಕಾರಣ, ಸಂಗೀತ ಕಲೆಯ ವಿದರು ಸ್ವಾಗತ ಸಮಿತಿಯ ಕಾರ್ಯದರ್ಶಿಗಳಿಗೆ ಬರೆದು ಕಾರ್ಯಕ್ರಮವನ್ನು ಮುಂಚಿತವೇ ನಿರ್ಧರಿಸಬೇಕಾಗಿ ವಿನಂತಿ

ಉಡುಪಿ

ತಾ. ೧೦ನೆಗೆ ರಥಬೀದಿಯಲ್ಲಿ ಉಡುಪಿ ತಾಲೂಕು ಕೃಷಿ ಮತ್ತು ಮಜೂರರ ಸಂಘದ ಪರವಾಗಿ ಮುಕ್ತ ಸಭೆಯು ಸ್ಥಳೀಯ ಡಿ ಮು ಕಾರ್ಮಿಕರನ್ನು ಸರಕಾರವರು ತೆಗೆದು ಹಾಕಿರುವ ಇರಾದೆಯುಳ್ಳ ಬಿಲ್ಲನ್ನು ಸೂಚಿಸುವ ಬಗ್ಗೆ ಸಾರ್ವಜನಿಕ ಸಭೆಯು ನೆರವೇರಿಸಲು ಶ್ರೀ ಪಿ. ಆರ್. ... ಅಧ್ಯಕ್ಷರಾಗಿದ್ದರು ಶ್ರೀಯುತ ಟಿ. ಪಾಪಾಡಿಯವರ ಕೆಳಗಿಯ ನಾಗಪ್ಪ ಕಮ್ತಿ, ಕೆ ಶಿವ ಸೆಟ್ಟಿ ಇವರ ಭಾಷಣಗಳಾದರು ಶ್ರೀ ನಾಗಪ್ಪ ಕಮ್ತಿ ತಮ್ಮ ಭಾಷಣದಲ್ಲಿ ಕೆಲ ಕಮಿಟಿಯು ಸದ್ರಿ ವಿಷಯದ ನಿರ್ಣಯದ ಬಗ್ಗೆ ಟೀಕಿಸಿದ್ದರಿಂದ, ಆ ಬಗ್ಗೆ ನಿರಾಕರಣವನ್ನು ತಿಳಿಸುವ ಅಧ್ಯಕ್ಷರಿಂದ ಅಪ್ಪಣೆ ದೊರೆಯಲಿಲ್ಲ, ಸಭೆಯು ಪಾಕ ಎಂಬುವಾಗಿಯೂ ಹೇಳಿದರು, ಆ ಬಗ್ಗೆ ಅಪ್ಪಣೆ ಕೇಳಿ ಒಯಿಸಿದ ಟಿ. ಕೆ ಕಾರ್ಯದರ್ಶಿಯಾದ ಶ್ರೀ ಕೆ. ಕೆ ಶೆಟ್ಟಿರವರು ಒಪ್ಪಲಿಲ್ಲವೆಂದು ತಳೆಗಟ್ಟಿ ಅವಶ್ಯವಿದ್ದಲ್ಲಿ ವಹಿಸಿದ ಆ ಅಧ್ಯಕ್ಷರ ಅಪ್ಪಣೆಯಾದ ಮೇಲೆ ಬಹುಮಂದಿ ಸಭೆ ಬಿಟ್ಟು ತೆರಳಿದರು, ಅನಂತರ ಅಪೇಕ್ಷೆ ಮೇರೆಗೆ ಶ್ರೀ ಕೆ ಕೆ ಶೆಟ್ಟಿರವರು ತಾ. ಕೊ ಕಮಿಟಿಯ ಠರಾವಿನ ಮತ್ತು ಅದರ ವಿಷಯಕವಾದ ಮಾಹಿತಿಯನ್ನು ವ್ಯಕ್ತಗೊಳಿಸಿದರು.

THE
Canara Banking Corporation, Udipi, Ltd.
INCORPORATED IN BRITISH INDIA.
ESTD 1906

SEASON DEPOSITS
of
Rs. 500/- & above
Are Accepted
at
3½% p. a.
at
All Our Branches

ಜಪಾನು ಹಿಂದೋಡುವ ಸಂಭವ—ಅಬಿಸೀನಿಯವು ಇಟಲಿ ಸಾಮ್ರಾಜ್ಯದೆಂಬ ಅಂಗೀಕಾರ

ಹಿಟ್ಲರನು ಮುಂದೊತ್ತಿದಲ್ಲಿ ಫ್ರಾನ್ಸಿನ ದಿನದಿನಕ್ಕೆ ಬದಲಾಗುವ ಮಂತ್ರಿಕೂಟಕ್ಕೆ ಭಯ!

★ ಹೈದರಾಬಾದಿನಲ್ಲಿ ದಂಗೆ — ರೈಲ್ವೆ ಅವಘಡದ ಕಾರಣರಾರು?

ಸ್ವದೇಶಾಭಿಮಾನಿ

ತಿರುವಾಂಕೂರು

ಈ ರಾಜ್ಯದಲ್ಲಿನ ಕೊಂಗ್ರೆಸ್ ಪ್ರತಿನಿಧಿಗಳ ಹೇಳಿಕೆ

ತಿರುವಾಂಕೂರು ರಾಜ್ಯವು ಒಂದು ಮಾದರಿ ರಾಜ್ಯವಾಗುತ್ತ ಬಂದಿದೆ. ಆ ರಾಜ್ಯದ ಪ್ರಜೆಗಳು ಕೊಂಗ್ರೆಸ್ ಸ್ಥಾಪನೆ ಮಾಡಿವೆ. ಅವರ ಪ್ರತಿನಿಧಿಗಳು ಮದ್ರಾಸಿಗೆ ಬಂದಿದ್ದು ಅಲ್ಲಿನ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ ಪತ್ರಿಕೆ ಹೊರಡಿಸಿದ್ದಾರೆ. ಜನರಲ್ಲಿ ಜಾಗ್ರತಿಯುಂಟಾಗಿ ಹಿಂದೀಯರು ಅಭ್ಯುದಯಕ್ಕೆ ಬರಲು ಅದರಿಂದಾಗಿ ತಿರುವಾಂಕೂರು ರಾಜ್ಯದ ಕೊಂಗ್ರೆಸ್ ಎಂಬ ಪ್ರತ್ಯೇಕ ಸಂಸ್ಥೆಯ ಕಾರ್ಯಾರಂಭ ಮಾಡಿತು. ಪ್ರಾಪ್ತವಯಸ್ಕರೆಲ್ಲರ ವೋಟುಗಳಿಂದಾರಿಸಿದ ಪ್ರತಿನಿಧಿಗಳೇ ಆಳುವಂತಾಗಬೇಕೆಂಬ ಅಭಿಪ್ರಾಯದಿಂದ ಎಲ್ಲ ಸಮಾಜಗಳ ಪ್ರತಿನಿಧಿಗಳೂ ಈ ಸಂಸ್ಥೆಗೆ ಸೇರಿರುವರು.

ಇದೇ ಪ್ರಜಾಪ್ರತಿನಿಧಿಗಳ ಜವಾಬ್ದಾರಿಗೊಳಪಟ್ಟ ಸರಕಾರವನ್ನು ಸಂಸ್ಥಾಪಿಸಬೇಕಾಗಿ ಶ್ರೀಮೂಲಂ ಎಸೆಂಬ್ಲಿಯಲ್ಲಿ ಸೂಚನೆ ಬಂದಾಗ ದಿವಾನರು ಹೀಗೆ ಮಾಡಲಿಕ್ಕೇನೂ ಆಕ್ಷೇಪವಿಲ್ಲವಾದರೂ ರಾಜ್ಯ ಸರಕಾರಕ್ಕೆ ಸ್ವಯಂ ಅಧಿಕಾರವಿಲ್ಲ ... ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ... ದಿವಾನರ ... ರಾಜ್ಯದ ... ವರದಿ ಮಾಡಲಾಗುತ್ತದೆ ... ರಿಕೆ ಕೊಡಲಾಗಿದೆ. ಸರಕಾರಕ್ಕೆ ಮೆಚ್ಚದ ಯಾವ ವಿಚಾರವನ್ನೂ ವಿಮರ್ಶಿಸಿ ಪ್ರಕಟಿಸುವುದಕ್ಕೆ ಉಪಾಯವಿಲ್ಲವಾಗಿದೆ.

ಆಡಳಿತದ ಖರ್ಚು ವಿಪರೀತವಾಗಿದೆ. ಸಂಬಳದ ವ್ಯಯವೇ ಅಧಿಕ. ಕೆಲವು ವರ್ಷಗಳ ಹಿಂದೆ ೩೦೦೦ ರೂ. ಸಂಬಳದಲ್ಲಿದ್ದ ದಿವಾನರೀಗ ೫೦೦೦ ರೂಪಾಯಿಗೇರಿದ್ದಾರೆ. ವಿಪರೀತ ಸಂಬಳದ ಭಾರೀ ಹುದ್ದೆದಾರರು ಹಲವರನ್ನು ನೇಮಿಸಲಾಗಿದೆ. ನಾನಾ ವಿಶೇಷ ಸ್ಕೀಮುಗಳಿಗಾಗಿ ಧನವೆಲ್ಲ ಖರ್ಚಾಗುತ್ತದೆ. ಅವುಗಳಿಂದ ರಾಜ್ಯಕ್ಕೇನೂ ಉಪಕಾರ ವಿಶೇಷವಿರದು.

ದಿವಾನರ ಪ್ರತಿಯೊಂದೂ ಕಾರ್ಯ ನೋಡಿದರೆ ಜವಾಬ್ದಾರ ಸರಕಾರವು ಅತ್ಯಗತ್ಯವೆನಿಸಿದೆ. ಎಸೆಂಬ್ಲಿಯೊಳಗೆ ಈ ದಿವಾನರನ್ನು ಇನ್ನು ಐದು ವರ್ಷ ಕೆಲಸಕ್ಕಿಟ್ಟುಕೊಳ್ಳುವ ಏರ್ಪಾಡೂ ನಡೆದಿದೆ. ಆದರೂ ಇದನ್ನು ಹಳೆ ಉಪಕಾರ ಸ್ಮರಣೆ ... ನಾನಾ ಪತ್ರಗಳ ಪ್ರಕಟವಾಗುತ್ತವೆ. ಈ ಶಿಫಾರಸುಗಳನ್ನು ಅಲ್ಲಿ ಕೂಡಿಸಿ ಇಲಿಗೆ ಕಳಿಸ ... ಕೆಲವರು ಮುಖಸ್ತುತಿಯವರ ಮಾತ್ರವಲ್ಲದೆ ಮಿಕ್ಕ ಜನಕೋಟಿ ಇದನ್ನು ಮೆಚ್ಚಿಲ್ಲ.

ಇಂಡಿಯನ್ ಕಂಪೆನಿಗಳು

ವಿದೇಶೀಯರೇ ತಮ್ಮ ಹಣ ಹಾಕಿದು ತಮ್ಮ ಕಂಪೆನಿಗಳನ್ನು ಇಲ್ಲಿ ಸ್ಥಾಪಿಸಿ ಅವನ್ನು ರಿಜಿಸ್ಟರ್ ಮಾಡುವ ಮೂಲಕ ಅವು ಇಂಡಿಯನ್ ಎಂದು ತಿಳಿದು ಬರುವ ಹಾಗೂ ಸ್ವದೇಶೀಯ ಕಂಪೆನಿಗಳೊಡನೆ ಅವು ಸ್ಪರ್ಧೆಗೆ ನಿಲ್ಲುವ ... ಉಂಟಾದೀತೆಂಬ ಬೆದರಿಕೆಯಿರುವುದು ತಪ್ಪಾಗಿಲ್ಲ. ಯಾವುದೊಂದು ಕಂಪೆನಿಯ ಸಂಪೂರ್ಣ ಆಡಳಿತವು ಹಿಂದೀಯರ ಕೈಯ್ಯಲ್ಲಿಲ್ಲವೋ ಅದು ಹಿಂದೀ ಅಥವಾ ಸ್ವದೇಶೀ ಕಂಪೆನಿಯೆನಿಸಲಾರದು. ವಿದೇಶೀಯರನ್ನು ಇಲ್ಲಿ ಈ ಕಂಪೆನಿಗಳು ಇಟ್ಟುಕೊಳ್ಳಬಾರದೆಂದೇನೂ ಇಲ್ಲ. ಆದರೆ ಅವರು ಸಂಬಳದ ಆಳುಗಳಾಗಿರಬೇಕಲ್ಲದೆ ... ಸರಕಾರವು ... ಬ್ರಿಟಿಷ ಸರಕಾರದ ಅಧಿಕಾರವು ಇಲ್ಲಿ ... ಇಂತಹ ಏರ್ಪಾಡುಂಟಾಗಲಿ.

ಹೈದರಾಬಾದಿನ ನೈಜಾಮರು

ಆಂಧ್ರ ದೇಶದ ಕಾಂಗ್ರೆಸ್ ಧುರೀಣ ದಿವಂಗತ ನಾಗೇಶ್ವರರಾವು ಪಂತುಲುರವರು

ದೇಶ-ವಿದೇಶ ವಾರ್ತೆ.

★

ಜಪಾನು ಚೀನದಲ್ಲಿ ಜಪಾನು ಆಕ್ರಮಿಸಿಕೊಂಡ ಸ್ಥಳದಲ್ಲಿ ಒಂದೊಂದೇ ... ಚೀನವು ... ವಿಮಾನಗಳು ... ಜಪಾನಿನ ಸೈನ್ಯವನ್ನು ... ಗಳನ್ನು ...

ಜಪಾನ್ ಈಗ ಬಲು ಬೆದರಿಕೆ ... ಜಪಾನಿನ ಮಿತ್ರರಾಷ್ಟ್ರವಲ್ಲ ... ಹಿಟ್ಲರನ ... ಇಂಗ್ಲೆಂಡ ...

ಜರ್ಮನಿ — ... ತಾ ೧೦ರಲಿ ಜರುಗಿತ ಆಸ್ಟ್ರಿಯದಲ್ಲೂ ಜರ್ಮನಿಯಲ್ಲೂ ಒಟ್ಟು ... ವೋಟುಗಳಾದವು. ಇವುಗಳಲಿ ಹಿಟ್ಲರನ ಪಕ್ಷವಾಗಿ ... ವಿರುದ್ಧವಾಗಿ ... ವ್ಯರ್ಥವಾದವು ... ಅಂತೂ ಸೇಕಡಾ ... ರಂತೆ ಹಿಟ್ಲರನಿಗೇ ದೊರೆಯಿತು. ಆಸ್ಟ್ರಿಯದ ... ಸಾವಿರದಲ್ಲಿ ... ಸಾವಿರವೂ ... ತನ್ನೊಳಕೆಗೆ ಮಿರಿ ಜನತೆ ಒಲಿದಿದೆ, ಜರ್ಮನರಿಗೆ ಥೇಂಕ್ಸ್ ಹೃತ್ಪೂರ್ವಕವಾಗಿ ವಂದನೆ ಎಂದು ಹಿಟ್ಲರನ ಪ್ರವಚನ. ಬ್ರಿಟನಿನಲ್ಲಿರುವ ... ಜರ್ಮನರೂ ... ಮುದ್ರಾಸಿನಲ್ಲಿಯೂ ... ವೋಟು ಕೊಟ್ಟರು.

ಫ್ರಾನ್ಸು ... ಮಂತ್ರಿಮಂಡಲವು ... ಕೂಡಿದ್ದಾರೆ. ಆದರೆ ರಾಜ್ಯದಲ್ಲಿ ಕೆಲಸಗಾರರ ಮುಷ್ಕರಗಳಿಗೆ ಇನ್ನಿಷ್ಟರಲ್ಲೇ ಪ್ರಾರಂಭವಾಗುವ ಸಂಭವವೂ ಇದೆ. ... ಫ್ರೆಂಚ್ ... ದಂಗೆಗಳಾಗಲು ... ಸರಕಾರವು ... ಮುಷ್ಕರ ... ಮುಂದಿನ ...

ಹೈದ್ರಾಬಾದು — ಹಿಂದೂ ಮುಸ್ಲಿಮ ಸಿಖ್ಖರುಗಳೊಳಗಣ ಹೊಡೆದಾಟವು ಮುಗಿದು ಎಲ್ಲರೂ ಶಾಂತರಾಗಿರಬೇಕೆಂದೂ, ಹಾಗಿಲ್ಲದಿರುವಲ್ಲಿ ಕಾನೂನು ಪ್ರಕಾರ ಶಾಂತಿಸಾಧನೆ ಮಾಡಲಾದೀತೆಂದೂ ನಿಜಾಮರ ಪ್ರಧಾನಿಯು ಹೊರಡಿಸಿರುವರು. ತಾ ೧೦ರಲ್ಲಿ ರಾತ್ರಿ ಶಾಂತವಾಗಿತ್ತು. ... ಜನತುಂಬಿದ್ದವು ಸುಮಾರು 100 ಮಂದಿ ... ಸರಿಮನಗೆ ಕಳಿಸಲಾಗಿದೆ ... ಬಂಧಿಸಲಾಗಿದೆ ...

ಶಂಗಾಯಿ — ... ಚೀನೀಯ ಸೇನೆಗಳ ... ಜಪಾನು ...

ಆರೋಗ್ಯ ಮತ್ತು ವೈದ್ಯ ಇಲಾಖಾ ಮಂತ್ರಿ ಡಾ ಟಿ ಎಸ್ ... ರಾಜನರು
ಉಡುಪಿ ... ರಾಜಕೀಯ ... ಒಂದು ... ತದೆ

ಪಾರಿಸ್ — ಜರ್ಮನಿಯು ಇನ್ನು ... ಡೆಕ್ಕಿ ... ದಲಿರುವುದನ್ನು ತಡೆಯದಿದ್ದಲ್ಲಿ ಉಳಿದ ಯುರೋಪೆಲ್ಲವೂ ಕೊಚ್ಚಿಹೋಗಬಹುದೆಂದು ಪತ್ರಿಕೆಗಳು ಪಾರಿಸಿನಲಿ ಸರಕಾರವನ್ನು ಎಚ್ಚರಿಸಿವೆ.

ಜಿನಿವಾ — ಲೀಗ್ ಆಫ್ ನೇಶನ್ಸ್ ಸಭೆಯಲ್ಲಿ ಅಬಿಸೀನಿಯವು ಇಟಲಿಗೆ ಸೇರಿದೆ ಹಕ್ಕಿನ ರಾಜ್ಯವೆಂದ ಇಂಗ್ಲೆಂಡ ಫ್ರಾನ್ಸು ಅಂಗೀಕರಿಸಲಿರುವುದೆಂದು ಭಾವಿಸಲಾಗಿದೆ. ಹೀಗಾದಲ್ಲಿ ಇಟಲಿಯನ್ನು ... ದೇಶ ಅಬಿಸೀನಿಯವು ... ಪ್ರಜಾ ಸ್ವಾತಂತ್ರ್ಯವೂ ... ಎಂದ ...

ಅಲಿಘರ — ... ಕಾಹೀದಗಂಜ ... ಜಾಬಿನ ಮುಖ್ಯಮಂತ್ರಿಗಳು ... ವಿರುದ್ಧವಾಗಿ ... ಉಪಯೋಗಿಸುತ್ತಾರೆ ...

ನ್ಯಾಯಕ್ಕೆ ವಿರುದ್ಧವಾಗಿ ಇನ್ನೂ ಇನ್ನೂ ಶಾಸನೋಲ್ಲಂಘನೆ ಮಾಡಲು ಎಚ್ಚರಿಸಿದ್ದಾರೆ.

ನಾಗಪುರ — ವಾರ್ಧಾ ಸ್ಕೀಮಿಗೆ ಅನುಕೂಲವಾಗಿಯೂ ... ಗುವ 166 ವಿದ್ಯಾಮಂದಿರಗಳಲ್ಲಿ ಶಿಕ್ಷಕರಾಗಿ ... ತಾ 21ರಲ್ಲಿ ... 166 ಸ್ಥಾನಗಳಿಗಾಗಿ 5000 ಅರ್ಜಿಗಳ ಬಂದಿವೆ ... 240 ... 22 ... 185 ...

ಕಲ್ಕತ್ತಾ — ...

ಬೊಂಬಾಯಿ — ... 1600 ... 1400 ...

ಬಂಗಾಳದ ...

ಬಿಹಾರ ...

ಆಂಧ್ರ ದೇಶೋದ್ಧಾರಕ ... ನಾಗೇಶ್ವರರಾವ್ ಪಂತುಲುರವರು ... ಆಂಧ್ರಪತ್ರಿಕೆ ... ಕಾಂಗ್ರೆಸ್ಸಿಗೆ ... ಹೋಗಲು ...

ವಿದ್ಯಾ ಇಲಾಖಾ ಮಂತ್ರಿ ಡಾ. ಪಿ. ಸುಬ್ಬರಾಯನರು

ದಕ್ಷಿಣ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯ ... ವಾರ್ಷಿಕ ಮಹಾಸಭೆಯು ಇದೇ ತಾ 1 ... 18ರಲ್ಲು ... ಶಾಲೆಯ ... ನಡೆಯುವುದು. ಈ ಸಭೆ ... ಕೇಳಿಕೊಂಡಿರುವರೆಂದು ತಿಳಿದುಬರುತ್ತದೆ.

ಬೆನಾರಿಸ್ — ...

ಮದರಾಸು.

ಮುಖ್ಯಮಂತ್ರಿ ರಾಜಗೋಪಾಲಾಚಾರ್ಯರ ಆಫೀಸು ನುಗ್ಗಿ ಅಲ್ಲಿ ಎಷ್ಟೆಂದರೂ ಹೊರಹೋಗದೆ, ಕೆಲಸಕೊಡಿರೆಂದು ಪೀಡಿಸಿದ ಮಹಾಜಿ ಅಂದಮಾನ ಕೈದಿಯೊಬ್ಬನನ್ನು ಪೋಲೀಸರಿಗೆ ಟೆಲಿಫೋನ್ ಮೂಲಕ ಕರೆಕಳಿಸಿ, ನಾಲ್ವರು ದ ಎತ್ತಿಕೊಂಡು ಹೊರಗೊಯ್ಯಬೇಕಾಗಿ ಬಂತು. ಅವನ ಮೇಲೆ ಮೊಕದ್ದಮ್ಮೆಯೂಗಿರುವುದು.

ಶಾರದಾಬಿಲನ್ನು ಗವರ್ನರ ಜನರಲರ ಅಂಗೀಕಾರ ... ವಾರ್ತೆ ... ಶಾಸನವಾಗಿ ...

ಕೂಲಿಕಾರರ ವಿಚಾರದಲ್ಲಿ ಹೊಸ ಕಾನೂನೊಂದ ಸದ್ಯದಲ್ಲೇ ಹೊರಡಲಿದೆ ... ಸಭೆ ... ವ ...

ಮೈಸೂರು — ಕಾಂಗ್ರೆಸ್ ಅಧಿವೇಶನವು ಶಿವಪುರದಲಿ ಸೇರಿದೆ ... ೨೦೦೦೦ ...

Commonwealth
Assurance Company, Ltd.,
POONA.
Policies suit to Every
PURSE AND POCKET
WANTED ENERGETIC AGENTS
Apply to:
Gawankar & Sons,
Chief Agents.
163, Gandhi Nagar,
BANGALORE.

“ಕರ್ತವ್ಯ ಸ್ವಾತಂತ್ರ್ಯವು ನಿಮಗಿರಲಿ”

ಭಾರತೀಯ ಮಹಿಳೆಯರಿಗೆ ಅಮೇರಿಕನ ಭಗಿನಿಯ ಸಂದೇಶ.

★

ಭಾರತೀಯ ಮಹಿಳೆಯರು ಬಹಳ ಸಾಧು ಜೀವಿಗಳು. ಅವರಲ್ಲಿ ಲಜ್ಜೆ ಗುಣವು ವಿಶೇಷವಾಗಿದೆ. ಆದ್ದರಿಂದ ಸ್ವೋನ್ನತಿಗಾಗಿ ಅವರು ಹೋರಾಡುತ್ತಿರುವದು ಬಹಳ ಕಡಿಮೆ. ಅವರು ತಮ್ಮ ಕುಂಭಕರ್ಣ ನಿದ್ರೆಯಿಂದ ಎಚ್ಚೆತ್ತು, ಎದ್ದು ನಿಂತು ಮುಂದೆ ಬಂದು ಕರ್ತವ್ಯತತ್ಪರರಾದರೆ ಎಷ್ಟು ಚೆನ್ನಾಗುವದು? ತಮ್ಮ ಜನ್ಮಸಿದ್ಧ ಹಕ್ಕು ಅಧಿಕಾರಗಳನ್ನು ಸಂಪಾದಿಸಿಕೊಂಡು ಸಮಾಜದಲ್ಲಿ ಉಪಯುಕ್ತ ಜೀವಿಗಳಾಗಿ ಬಾಳಿದರೆ ಲೋಕಕ್ಕೆ ಎಷ್ಟು ಉಪಕಾರವಾಗುವದು? ಹೀಗೆಂದು ಒಬ್ಬ ಅಮೇರಿಕನ ಭಗಿನಿಯು ಭಾರತೀಯ ಸ್ತ್ರೀಯರ ವರ್ತಮಾನ ಸ್ಥಿತಿಗತಿಗಳನ್ನು ಕಂಡು ಕನಿಕರದ ಮಾತುಗಳನ್ನು ಆಡಿದ್ದಾಳೆ.

ತೊಟ್ಟಿಲನ್ನು ತೂಗುವ ಕೈಯು ಜಗತ್ತನ್ನು ಆಳುವದು. ಅಮೇರಿಕನ ಅಥವಾ ಮುಂದುವರಿದ ಇತರ ಪಾಶ್ಚಾತ್ಯ ಸ್ತ್ರೀಯರ ಮಟ್ಟಿಗೆ ಈ ಮಾತು ಎಷ್ಟು ಸತ್ಯವಾಗಿ ತೋರುವದೋ ಅಷ್ಟೇ ಸತ್ಯವಾಗಿ ಭಾರತೀಯ ಸ್ತ್ರೀಯರ ಮಟ್ಟಿಗೂ ತೋರಬೇಕು. ಮಾನವ ಸಮಾಜದ ಉದ್ಧಾರಕ್ಕಾಗಿ, ಸ್ತ್ರೀ ಸಮಾಜದ ಉನ್ನತಿಗಾಗಿ ಇತರ ಸ್ತ್ರೀಯರಿಗಿದ್ದಂತೆ ಭಾರತೀಯ ಸ್ತ್ರೀಯರಿಗೂ ಕರ್ತವ್ಯ ಸ್ವಾತಂತ್ರ್ಯವು ಇರಬೇಕು. ಅಮೇರಿಕದ ಹೆಂಗಸರು ಅಲ್ಲಿಯ ಗಂಡಸರನ್ನು ಪ್ರತಿಯೊಂದು ಮಾತಿನಲ್ಲಿ ಮೀರಿಸಿದ್ದಾರೆ. ಹೀಗೆ ಅವರು ಸುಯೋಗ್ಯರಾಗಲಿಕ್ಕೆ, ಅವರಿಗೆ ದೊರೆತ ಸ್ವಾತಂತ್ರ್ಯವೇ ಕಾರಣ. ಅದರಂತೆ ಭಾರತೀಯ ಸ್ತ್ರೀಯರಿಗೆ ಕರ್ತವ್ಯ ಸ್ವಾತಂತ್ರ್ಯವು ದೊರೆತುದಾದರೆ, ಸಾಮಾಜಿಕ, ಧಾರ್ಮಿಕ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಒಂದು ಬಗೆಯಿಂದ ಕ್ರಾಂತಿಯೇ ಆಗಿ ಒಟ್ಟು ಸಮುದಾಯದ ಕಲ್ಯಾಣವಾಗುವದು ನಿಶ್ಚಯ.

ಮಹಿಳೆಯರ ಕಾರ್ಯಸ್ಥಾನವು ಮನೆಯೇ ಆಗಿರುವದೆಂಬುದರಲ್ಲಿ ಸಂದೇಹವಿಲ್ಲ, ಅದು ಅವರ ಸ್ವೋನ್ನತಿ ಪರೋನ್ನತಿಗೆ ಅನುಕೂಲವಾಗಿದೆ. ಪುರುಷ ವರ್ಗಕ್ಕೆ ಸಹಾಯಕವಾಗಿ ಸ್ತ್ರೀವರ್ಗವು ಇದ್ದು ಪರಸ್ಪರ ಅಭಿವೃದ್ಧಿಯನ್ನು ಸಂಪಾದಿಸುವದು ಸಹಜವಾಗಿದೆ. ಆದರೆ ಪುರುಷರಿಗೆ ಸ್ತ್ರೀಯರು ಮಾಡುವ ಸಹಾಯವು ಪ್ರೇಮ ಮೂಲಕವಾಗಿರಬೇಕಲ್ಲದೆ, ಅವರಿಗೆ ಗುಲಾಮರಾಗಿ ಅಲ್ಲ. ಮನೆಯು ಮಹಿಳೆಯರ ನೈಸರ್ಗಿಕ ಕಾರ್ಯಸ್ಥಾನವಾಗಿರುವದಾದರೂ, ಅವರು ಅಪೇಕ್ಷೆ ಪಟ್ಟರೆ, ಮನೆಯಿಂದ ಹೊರಗೆ ಬಂದು ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿದು ದೇಶೋದ್ಧಾರ ಕಾರ್ಯದಲ್ಲಿ ತೊಡಗುವ ಸ್ವಾತಂತ್ರ್ಯವು ಅವರಿಗಿದ್ದೇ ತೀರಬೇಕು. ಅಷ್ಟೇ ಏನು? ಅಲ್ಲಿಯವರ ಹಂಗು ದಾಕ್ಷಿಣ್ಯಾದಿಗಳಿಗೆ ಒಳಗಾಗದೆ ವ್ಯಾಪಾರ ವಹಿವಾಟುಗಳನ್ನು ಮಾಡಿ ಆರ್ಥಿಕ ದೃಷ್ಟಿಯಿಂದ ಅವರು ಸ್ವತಂತ್ರರಾಗಿಯೂ ಇರಲಿಕ್ಕೆ ಹಕ್ಕುಳ್ಳವರಾಗಿದ್ದಾರೆ. ವಿದ್ಯಾಭ್ಯಾಸವು ಪುರುಷರಿಗೆ ಎಷ್ಟು ಅಗತ್ಯವೋ, ಅಷ್ಟು ಸ್ತ್ರೀಯರಿಗೂ ಕೂಡ ಅಗತ್ಯವಾಗಿರುವದು.

ಪಾತ್ರಾಪಾತ್ರ ವಿಚಾರ ಮಾಡದೆ ದಾನ ಮಾಡುವ ಉದಾರ ಗುಣವು ಭಾರತೀಯರಲ್ಲಿರುವದು, ಅದು ಒಂದು ದೊಡ್ಡ ದೋಷ. ಹೀಗೆ ದಾನ ಮಾಡುತ್ತ ಬಂದೇ ಭಾರತೀಯರು ಈಗ ಅವನತ ಸ್ಥಿತಿಯಲ್ಲಿ ಇರುತ್ತಾರೆ. ಪರದೇಶಿಯರು ಇಲ್ಲಿಗೆ ಬಂದರು, ನೋಡಿದರು, ಮತ್ತೆ ಅವರು ಈ ದೇಶವನ್ನು ಗೆದ್ದು ಆಳಿದರು. ಇವಕ್ಕೆ ಭಾರತೀಯರ ಆ ಉದಾರ ಗುಣವೇ ಬಹುಮಟ್ಟಿಗೆ ಕಾರಣವಾಯಿತು. ಈಗ ಕೆಟ್ಟ ಮೇಲೆ ಅತ್ತು ಪ್ರಯೋಜನವಿಲ್ಲ. ಪರಕೀಯರ ಅತ್ಯಾಚಾರ, ಅನಾಚಾರಗಳನ್ನು ವಿರೋಧಿಸುವ ಬಲವು ಬರುವ ತನಕ ಅವುಗಳನ್ನು ಕೆಲವು ದಿನಗಳ ಮಟ್ಟಿಗೆ ತಾಳಿಕೊಂಡಿರಬೇಕು. ಅಷ್ಟರೊಳಗಾಗಿ ಸ್ತ್ರೀಪುರುಷರು ಜಾಗ್ರತರಾಗಿ ತಂತಮ್ಮ ಸಾಮಾಜಿಕ ರಾಜಕೀಯ ಹಕ್ಕು ಅಧಿಕಾರಗಳನ್ನು ಗುರುತಿಸಿಕೊಂಡಿರಬೇಕು. ಸ್ತ್ರೀಪುರುಷರ ಸಮ್ಮಿಲಿತ ಪ್ರಯತ್ನಗಳಿಂದ ಭಾರತವು ಸ್ವತಂತ್ರವಾಗಿ ಜನತೆಗೋಸ್ಕರ ಜನತೆಯ ಸರಕಾರವು ಜನತೆಯಿಂದ ಸ್ಥಾಪಿಸಲ್ಪಡುವದು. ಮಹಾತ್ಮಾ ಗಾಂಧಿಯು ಭಾರತೀಯರ ನಡುವೆ ಜೀವಿಸಿದ್ದು, ಅವರನ್ನು ಅನುಸರಿಸುತ್ತ ಕಾರ್ಯ ಸಫಲತೆಯಲ್ಲಿ ಸಂಪೂರ್ಣ ವಿಶ್ವಾಸವುಳ್ಳವರಾಗಿ ಕೆಲಸ ಮಾಡುವಾಗ ಭಾರತೀಯರಿಗೆ ವಿಜಯವು ಕರತಲಾಮಲಕದಂತೆ ಖಂಡಿತವಾಗಿಯು ಸುಲಭವಿರುವದು. ಹೀಗೆ ಭಾರತೀಯರು ವಿಜಯಿಗಳಾಗಿ ಭಾರತದಲ್ಲಿ ಅವರೇ ನಿಜವಾದ ಯಜಮಾನರಾದಾಗಲೇ ಪ್ರಪಂಚದ ಶ್ರದ್ಧೆ ಭಕ್ತಿ ವಿಶ್ವಾಸಗಳಿಗೆ ಅವರು ಭಾಜನರಾಗುವರು.

ವಿಚಾರ ಸ್ವಾತಂತ್ರ್ಯ, ಕರ್ತವ್ಯ ಸ್ವಾತಂತ್ರ್ಯಗಳನ್ನು ಭಾರತೀಯ ಸ್ತ್ರೀಪುರುಷರು ಮೊದಲು ಸಂಪಾದಿಸಲಿ. ಆಗ ರಾಜಕೀಯ ಸ್ವಾತಂತ್ರ್ಯವು ತನ್ನಷ್ಟಕ್ಕೆ ಲಭಿಸುವದು.

ಅದು ಬಿರುಸಾದ ತುರಿಕಜ್ಜಿ ಆಗಿ ಪರಿಣಮಿಸಬಹುದು

ಝಾಂಬಕ್ ಮುಲಾಮು ಅದರ ಉರಿಯನ್ನು ಅಡಗಿಸಿ ವಾಸಿ ಮಾಡುತ್ತದೆ.

ತುರಿಕಜ್ಜಿಯು ಆರಂಭದಲ್ಲಿ ಸಣ್ಣ ಕಟ್ಟೆಯಾಗಿ ಅಥವಾ ದೊರಗಾದ ದಪ್ಪವಾಗಿ ಉಂಟಾಗುತ್ತದೆ. ಆದ್ದರಿಂದ ಝಾಂಬಕನ್ನು ಅದರ ಮೇಲೆ ಸವರಬೇಕು. ಇದರಿಂದ ಅದು ಅಪಾಯವಾಗಿ ಗುಣವಾಗುವದು. ಝಾಂಬಕ್‌ದಲ್ಲಿರುವ ಅಮೂಲ್ಯವಾದ ವನಸ್ಪತೀಯ ತೈಲವು ಚರ್ಮದ ಒಳಗಿನ ರಂಧ್ರಗಳೊಳಗೆ ಹೀರಿಕೊಂಡು, ನೋವನ್ನೂ, ಬಾತುಕೋಂಡುದನ್ನೂ ಮತ್ತು ಕೆಂಪಾಗಿರುವದನ್ನು ಕಡಿಮೆ ಮಾಡುವುದು. ಝಾಂಬಕ್ಕು [illegible] ಸುರಿಯುತ್ತಿರುವ ದ್ರವವನ್ನು ನಿಲ್ಲಿಸಿ ಅದರ ಕಲೆಯುಳ್ಳದಂತೆ ವಾಸಿ ಮಾಡುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಝಾಂಬಕನ್ನು ರೂ. 1 ಅಥವಾ 2-4-0 ರಂತೆ ಮಾರುವರು.

ಏಜಂಟರು—

ಮೆ॥ ದಾದಾ ಮತ್ತು ಕಂಪೆನಿ, ಪಿ. ಟಿ. ಮದ್ರಾಸು.

ಡಬ್ಬಿಗಳ ಕೊರತೆಯಿಂದ ವಿರಹಿತವಾಗಿದೆ.

ಝಾಂಬಕ್

Zam Buk

ಮಂಗಳೂರ ಮುನಿಸಿಪಾಲಿಟಿಗೆ ಕೊಂಗ್ರೆಸ್ ಉಮೇದ್ವಾರಿಗಳು.

ನಂಬ್ರ	ವಾರ್ಡು	ಉಮೇದ್ವಾರರು	ಸೀಟು
1	ಕದ್ರಿ	ಮೇರಿ ಜೆ ಬ್ರಿಟೋ	ಲೇಡೀಸ್ ರಿಸರ್ವ್
1	,,	ಜೆ. ಬಿ. ಮಚಾಡೋ	ಜನರಲ್
2	ಕೊಡಿಯಾಲಬೈಲು	ಎ. ದಾಮೋದರ ಪೈ	,,
3	ಕಂಬಳ	ಡಾಕ್ಟರ್ ಕೆ. ವಿಟ್ಠಲ ಶೆಟ್ಟಿ	,,
4	ಮಣ್ಣಗುಡ್ಡೆ	ಯು. ಲಕ್ಷ್ಮಣ ಶೆಣೈ	,,
5	ಬೋಳೂರು	ಆರ್. ಬಿ. ಸಿ. ಡಿ. ಆಂದ್ರಾದೇ	,,
6	ಕುದ್ರೋಳಿ	ಎ. ಯಂ. ನಾಗಣ್ಣ ಹೆಗ್ಡೆ	,,
7	ನವಾಯತ	ಯಂ. ಆರ್. ಭಟ್	,,
8	ಗೋಳಿಕಟ್ಟೆ	ಎ. ಮೂಸಬ್ಬ	,,
9	ಬಂದರ	ಬಿ. ವೆಂಕಟ್ರಾಯ ಬಾಳಿಗ	,,
10	ಡೊಂಗರಕೇರಿ	ಡಾಕ್ಟರ್ ಎನ್. ಉಪೇಂದ್ರ ಪೈ	,,
11	ತ್ರಿಶೂಲೇಶ್ವರ	ಎ. ಪಾಂಡುರಂಗ ಭಂಡಾರಿ	,,
12	ಸೆಂಟ್ರಲ್	ಶಿವಶಂಕರ ಶೇಟ್	,,
13	ನೋರ್ತ್ ಮಾರ್ಕೆಟ್	ಲೀಲಾಬಾಯಿ ಏಕಂಬರರಾವ್	ಲೇಡೀಸ್ ರಿಸರ್ವ್
13	,, ,,	ಯಂ. ಮಾಧವ ರಾವ್	ಜನರಲ್
14	ಸೌತ್ ಮಾರ್ಕೆಟು	ಯಂ. ರಾಘವೇಂದ್ರ ಪೈ	,,
15	ಕೋರ್ಟು	ಯಲ್. ಸಿ. ಪ್ಯಾಸ್	,,
16	ಬೆಂದೂರು	ಎ. ಆರ್. ಡಿ ಸೋಜ	,,
16	ಬೆಂದೂರು	ಜೆ. ಸಿಕೇರ	,,
17	ಬಲ್ಮಠ	ಜೋರ್ಜ್ ಈ ಐಮನ್	,,
18	ಫಳ್ನೀರು	ಸಿ. ಯಲ್. ಲೋಬೋ	ಕ್ರಿಶ್ಚನ್ ರಿಸರ್ವ್
18	ಫಳ್ನೀರು	ಡಿ. ಜೆ. ಬ್ರಿಟೋ	ಜನರಲ್
19	ಮಿಲಾಗ್ರಿಸ್	ಡಾಕ್ಟರ್ ಕೆ. ಗಿರಿಧರರಾವ್	,,
20	ಕಂಟೋನ್‌ಮೆಂಟ್	ಡಾಕ್ಟರ್ ಎಚ್. ವಿ. ಅಡಪ	,,
21	ಫೋರ್ಟ್	ಕುಂಞಪ್ಪ ಸಾಹೇಬ್	ಮುಸ್ಲಿಮ್ ರಿಸರ್ವ್
21	ಫೋರ್ಟ್	ಡಾಕ್ಟರ್ ಯು. ಪಿ. ಮಲ್ಯ	ಜನರಲ್
22	ಉಜ್ವಾರಿಯೋ	ಬಿ. ಯಂ. ಡಿ ಸೋಜ	,,
23	ಅತ್ತಾವರ	ಯಚ್. ಕೆ. ತಿಂಗಳಾಯ	,,
23	ಅತ್ತಾವರ	ಗೋರುವ	ಹರಿಜನ ರಿಸರ್ವ್
24	ಹೊಯ್ಗೆ	ಯಫ್. ಎ. ಯಸ್ ಅಲ್ವಾರಿಸ್	ಜನರಲ್
25	ಮಂಗಳಾದೇವಿ	ಜೆ. ಎ. ರೇಗೋ	,,
26	ಜೆಪ್ಪು	ಗಜಾನನ ರಾವ್ ಪಂಡಿತ	,,

ಮಂಗಳೂರು
12—4—1936

(ಸಹಿ) ಯು. ಶ್ರೀನಿವಾಸ ಮಲ್ಯ ಅಧ್ಯಕ್ಷ,
ಮಂಗಳೂರು ಟೌನ್ ಕೊಂಗ್ರೆಸ್ ಕಮಿಟಿ

ಕೊಂಗ್ರೆಸ್ ಕಾರ್ಯಕಾರೀ ಮಂಡಲದಲ್ಲಿ ಮುಂದಣ ಚರ್ಚೆ:

ಎಷ್ಟೋ ಸಮಯವು ಮಧ್ಯಪ್ರಾಂತ್ಯದ ಶೆರೀಫ್ ಮಂತ್ರಿಗಳ ಪ್ರಸಾಧನವನ್ನು ಕುರಿತೇ ಕಳೆಯಿತು. ಹಿಂದೂ-ಮುಸ್ಲಿಮರೊಳಗೆ ಐಕ್ಯತೆಯನ್ನುಂಟು ಮಾಡುವ ಸಮವಿಧಾನವನ್ನು ಶ್ರೀ ಜಿನ್ನಾ ಮತ್ತು ಶ್ರೀ ನೆಹರೂಗಳೊಳಗಣ ಪತ್ರವ್ಯವಹಾರ ಸಂಬಂಧವನ್ನು ಪರ್ಯಾಲೋಚಿಸಿಯೂ ಮಹಾತ್ಮಾಜಿಯವರ ಅಭಿಪ್ರಾಯ ಪ್ರಕಾರ, ಕೊಂಗ್ರೆಸಿಗೂ ಮುಸ್ಲಿಮ್ ಲೀಗಿಗೂ ಇರುವ ಕಂದರೇನೋ ಹೊರ ಬೀಳಲಿಕ್ಕಿದೆ. ರಾಜಕೀಯ ಕೈದಿಗಳನ್ನು ಗಾಂಧಿಜೀಯವರು ಕಾಣುವುದಕ್ಕೆ ಅವಕಾಶವೂ ಆರೋಗ್ಯವೂ ಇಲ್ಲದಿರುವ ಕಾರಣ, ಅಂತಹ ಕೈದಿಗಳನ್ನು ಅವರಿದ್ದಲ್ಲಿಗೇ ಬಂಗಾಳ ಸರಕಾರವು ತರಿಸಿ, ಅವರ ದಂಡನೆಯ ವಿಮರ್ಶೆ ಮಾಡುವುದಾಗಿ ತಿಳಿದು ಬಂದಿದೆ. ಬಂಗಾಳದಲ್ಲಿ ಕೊಂಗ್ರೆಸಿನೊಡನೆ ಕಲೆತು, ಕೊಂಗ್ರೆಸ್ ಕಾರ್ಯಕ್ರಮದಂತೆ ವರ್ತಿಸಲು ಸಿದ್ಧರಾದ ಸದಸ್ಯರೊಡನೆ ಹೊಸ ಮಂತ್ರಿಕೂಟವನ್ನೇರ್ಪಡಿಸಿ, ಹೊಸ ಕಾಂಗ್ರೆಸ್ ಸರಕಾರ ಸ್ಥಾಪನೆಯಾಗುವ ಪ್ರಯತ್ನಗಳು ನಡೆಯುತ್ತಲೇ ಇವೆ. ಬಿಹಾರದಲ್ಲಿರುವ ಬಂಗಾಳಿಗಳೂ ಬಿಹಾರಿಗಳೂ ಹುದ್ದೆಗಳಿಗಾಗಿ ನಡಿಸುವ ಕಚ್ಚಾಟಗಳ ತೀರ್ಮಾನವಂತೂ ಶ್ರೀ ರಾಜೇಂದ್ರ ಪ್ರಸಾದರಿಗೆ ಒಪ್ಪಿಸಲಾಗಿದೆ. ಬಿಹಾರದ ಜನತೆಗೆ ಸಮಾಧಾನವಾಗುವಂತೆ, ಮಧ್ಯಪ್ರಾಂತ್ಯ ಕೊಂಗ್ರೆಸ್ ಮಂಡಲವು ಹೇಗೆ ನಡೆಯಬಹುದೆಂದು ನಿರ್ಧಾರ ಮಾಡಲು ಸರದಾರ ಪಟೇಲರಿಗೆ ಅಧಿಕಾರ ಕೊಡಲಾಗಿದೆ. ಅಫಘಾನಿಸ್ತಾನದ ವ್ಯಾಪಾರವು ಒಣಹಣ್ಣುಗಳದ್ದಾಗಿದ್ದು, ಅದನ್ನು [illegible] ಮಾಡಲು ಹಿಂದೂ ಸರಕನ್ನು ಕೊಂಡುಕೊಳ್ಳಲೂ ಅಗತ್ಯವಾದ ವ್ಯಾಪಾರವನ್ನು ಗುತ್ತೆದಾರರನ್ನಾಗಿ ಅಫಘಾನ ಸರಕಾರವು ನೇಮಿಸಿರುವ ಪ್ರಯುಕ್ತ, ಸಿಂಧೀ ವ್ಯಾಪಾರಸ್ಥರಿಗೆ ಉಂಟಾಗಿರುವ ಅನ್ಯಾಯವನ್ನು ಹೇಗೆ ಹೋಗಲಾಡಿಸಬಹುದೆಂಬುದನ್ನು ಶ್ರೀ ಮೌಲಾನಾ ಅಬ್ದುಲ್ ಕಲಾಮ್ ಆಜಾದರವರೊಡನೆ ಪರ್ಯಾಲೋಚಿಸಿ, ಕಾಬೂಲು ಸರಕಾರಕ್ಕೂ ಸಿಂಧೀ ವ್ಯಾಪಾರಸ್ಥರಿಗೂ ಒಂದು ಬಗೆಯ ಕರಾರಾಗುವ ಹಾಗೆ ನಿರ್ಧಾರವಾಗಿದೆ! ವಿದೇಶಗಳಲ್ಲಿರುವ ಭಾರತೀಯರ ಸಮಸ್ಯೆ ಬಹಳ ಜೋರಾಗಿದೆ; ಅದರಂತೆ ಝಾಂಝೀಬಾರಿನ ಲವಂಗ ವ್ಯಾಪಾರದ ಬಹಿಷ್ಕಾರ ಪ್ರಶ್ನೆಯೂ ಕಠಿನವಾಗಿ ಎದುರಿಗೆ ಬಂದಿದೆ. ಇವನ್ನೆಲ್ಲ ಆ ದಿನವೆಲ್ಲ ಚರ್ಚಿಸಿ, ಖಂಡಿತವಾದ ತೀರ್ಮಾನಗಳನ್ನು ಕಾಂಗ್ರೆಸ್ ಕಾರ್ಯಕಾರೀ ಮಂಡಲವು ನಿರ್ಧರಿಸುವುದಾಗಿ ತಿಳಿದುಬರುತ್ತದೆ.

ಅಲ್ಲಹಾಬಾದು:

ಒಂದು ಸಣ್ಣ ಮಸೀದಿಯಲ್ಲಿ ಒಂದು ಹಂದಿಯ ತಲೆ ದೊರೆಯಿತು. ಇದರಿಂದ ಹಿಂದೂ ಮುಸ್ಲಿಮರೊಳಗೆ ಕಾದಾಟವಾಯಿತು. ಪೋಲೀಸರು ಬಹಳ ಪ್ರಯತ್ನ ಮಾಡಿದಾಗ್ಯೂ, ಕಲ್ಲುಗಳ ಆಕ್ರಮಣದಿಂದ ಹಿಂದುಗಳಲ್ಲಿ ಇಬ್ಬರು ಸತ್ತರು, 6 ಜನರು ಗಾಯ ಹೊಂದಿದರು; ಮುಸ್ಲಿಮರಲ್ಲಿ 10 ಜನರಿಗೆ ಗಾಯಗಳಾಗಿವೆ. ಪೋಲೀಸರು ಕೇಡಿಗಳನ್ನು ಕೂಡಿಸಿ, ಬಂದೋಬಸ್ತು ನಡಿಸುವರು. ಪುನಃ ಜಗಳಗಳಾಗುವ ಸಂಭವ ಹಿಂದುಗಳಿಗೆ ಪ್ರಾಪ್ತವಾಗಿದೆ

ಕೊಂಗ್ರೆಸ್ ಪಕ್ಷದವರಿಗೆ ಕೆಲವು ಪ್ರಶ್ನೆಗಳು.

★ ಮಹಾತ್ಮಾಜಿಯರ ಎರಡನೆಯ ಲೇಖ.

★ ಆತ್ಮವಿಮರ್ಶೆಯಾಗಲಿ!

★ ಮನಶ್ಶುದ್ಧಿಯಾಗಲಿ!

"ಅಹಿಂಸಾವ್ರತಿಗಳೆಷ್ಟು ಮಂದಿ ಧೀರರಿರುವರು?"

ಅಲ್ಲಹಾಬಾದು ಮೊದಲಾದ ಕಡೆಗಳಲ್ಲಿ ದಂಗೆಗಳಾಗಲು, ಅಹಿಂಸಾಮೂಲಕವಾಗಿಯೆ ಅವು ಉಂಟಾಗದಂತೆ ವಿಧ್ವಮಾನಗಳನ್ನು ಸೃಷ್ಟಿಸುವ ಉಪಾಯವು ನಮಾಯವಾದುದೇಕೆಂದು ಹಿಂದಣ ಸಲ ಮಹಾತ್ಮಾಜಿಯವರು ಬರೆದಿದ್ದರು. ಅಹಿಂಸಾ ತತ್ವವನ್ನು ಗೌರವಭಾವದಿಂದ ಇದುವರೆಗೆ ಕಾಣದವರಿಲ್ಲ- ಕೊಂಗ್ರೆಸ್ ಸ್ವಭಾವದಲ್ಲೇನೂ ಬದಲಾವಣೆಯುಂಟಾಗಿದೆಯೆ? ಎಂದರೆ, ಕೊಂಗ್ರೆಸ್ಸಿನವರಲ್ಲಿ ಅಹಿಂಸಾ ನುಚರಣೆ ಇದೆಯೆ, ಇದ್ದಲ್ಲಿ ಅವರು ಧೀರರಂತೆ ವರ್ತಿಸುತ್ತಾರೆಯೆ? ಎಂಬಿದೇ ಮಹಾತ್ಮಾಜಿಯವರ ಪ್ರಶ್ನೆಯಾಗಿದ್ದಿತು "ಧೀರ ಅಹಿಂಸೆಯಿಂದ ತಾನೇ ದಂಗೆಗಳನ್ನು ಅಣಗಿಸಬರುತ್ತದೆ. ಕಾರ್ಯಕ್ರಮ ಮುಂದರಿಸಲಾಗುತ್ತದೆ. ನಮ್ಮಲ್ಲಿರುವ ಅಹಿಂಸೆಯೆಂಬುದು ಧೀರ ಪ್ರಕೃತಿಯದಲ್ಲವೆಂದೇ ಬೆದರಬೇಕಾಗಿದೆ'

"ಅಹಮ್ಮದಾಬಾದು—ವೀರಂಗಾಮು, ಪ್ರಿನ್ಸ್ ಆಫ್ ವೇಲ್ಸರು ಬಂದಾಗ ಬೊಂಬಾಯಲ್ಲಾದ ದಂಗೆಗಳು ಬಾರ್ಡೋಲಿ ಸತ್ಯಾಗ್ರಹಕ್ಕೆ ಮೊದಲು ಚೌರೀ ಚೌರಾದಲ್ಲಾದ ದಂಗೆಗಳನ್ನು ಕುರಿತಾಗಿ ಎಣಿಸಿದರೆ, ನಾನು ಆಗ ಹೇಗೆ ಅಹಿಂಸಾ ಉಪಾಯಗಳನ್ನು ಸೂಚಿಸಿದ್ದೆನೋ ಅವನ್ನೆ ಈಗಲೂ ಕೈಕೊಳ್ಳಲು ಅನುಕೂಲವೇ ಇದೆ ಆಗಲೂ ಈ ಉಪಾಯಗಳ ಚರಣೆಯಿಂದ ಪಾರಾದೆವು, ಈಗಲೂ ಪಾರಾಗಲು ಖಂಡಿತ ಎಂಟಾಗಲಿದೆ

'ಹಿಂದೂ ಮುಸ್ಲಿಮರೊಳಗೆ ಕ್ಲೇಶವುಂಟಾಗುವ ಸಂದರ್ಭಗಳನ್ನು ಹೇಗೆ ನಿರ್ಮೂಲಿಸಬಹುದೆಂಬ ಇತ್ಯರ್ಥ, ಹೆಸರಿಗೆ ಮಾತ್ರ ವೋಟರರೆನ್ನಿಸಿರುವವರ ಹೆಸರುಗಳನ್ನು ಕೊಂಗ್ರೆಸ್ ರಿಜಿಸ್ಟರಿನಿಂದ ತೊಡೆದುಹಾಕುವುದು, ಅಲ್ಪ ಸಂಖ್ಯಾಕರಾಗಿರಲು ಕೊಂಗ್ರೆಸ್ಸಿನವರು ಭಯಪಡಬಾರದೆಂಬ ತತ್ವದ ಅಂಗೀಕಾರ; ಮನೋವ್ಯಾಖ್ಯಾಯಗಳಲ್ಲೂ ಅಹಿಂಸಾಪರರಾಗುವವರೆ ಸ್ವಯಂಸೇವಕರಾಗುವಂತೆ ಅವರನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ದಳಗಳನ್ನು ಸ್ಥಾಪಿಸುವುದು—ಇವೇ ನಾಲ್ಕು ಉಪಾಯಗಳು ನನಗೀಗ ಸೂಚಿಸುತ್ತವೆ,

"ಇದರಲ್ಲೇನೂ ಅಸಾಧ್ಯ ವಿಷಯವಿಲ್ಲ. ಅಹಿಂಸೆಯಲ್ಲಿ ಜೀವಂತಭಕ್ತಿ ಇರುವವರಿಗೆ ಇವು ಸುಲಭ: ಇಂತಹ ಭಕ್ತಿ ಅವರಲ್ಲಿಲ್ಲದಿದ್ದರೆ, ಕೊಂಗ್ರೆಸಿನವರು ಅಹಿಂಸಾ ಶಬ್ದವನ್ನೆ ಮರೆಯುವುದುತ್ತಮ, ಇದರಿಂದ ಕೊಂಗ್ರೆಸಿಗೂ ಜನಾಂಗಕ್ಕೂ ಹಿತವುಂಟು ಸ್ವರಾಜ್ಯ ಸಂಪಾದನೆಗಾಗಿ ಅಹಿಂಸೆಯನ್ನು ಮೂಲತತ್ವವನ್ನಾಗಿ ವರಿಸಿಕೊಂಡಿರುವ ಒಂದೇ ಸಂಸ್ಥೆಯೆಂದರೆ ಕೊಂಗ್ರೆಸು. ಅದರ ಲಕ್ಷಣಗಳು ಇರಬೇಕಾಗಿರುವಂತೆ ಇಲ್ಲವಾದರೆ, ಅದರಿಂದ ಜನಾಂಗಕ್ಕೆ ಹಾನಿಯುಂಟು ಸ್ವಾತಂತ್ರ್ಯಕ್ಕಾಗಿ ಹೋರಾಡುವವರಲ್ಲಿ ಹೇದಿತನಕ್ಕಿಂತ ಹೆಚ್ಚಿನ ಅವಮಾನವು ಮತ್ತಾವುದೂ ಇಲ್ಲ.

ರಾಷ್ಟ್ರಪತಿ ಸುಭಾಷ್ಚಂದ್ರ ಭೋಸರು ಕಾಂಜೀಬಾರಿನ ಬಂಗಾಳ ಪ್ರೋವಿನ್ಸಿಯಲ್ ಕಾನ್ಫರೆನ್ಸಿನಲ್ಲಿ ಇನ್ನೂ ಹೆಚ್ಚು ಬಲಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುವರು

'ನಮ್ಮಲ್ಲಿ ಧೀರೋಚಿತವಾದ ಅಹಿಂಸೆಯಿಲ್ಲದಿರುವಲ್ಲಿ, ನಾವು ನಮ್ಮ ಹೋರಾಟದಲ್ಲಿ ಹಿಂತೆಗೆವುದಕ್ಕೆ ನಾಚಿಕೆಪಡಬಾರದು. ಬ್ರಿಟಿಷ ಅಧಿಕಾರದ ಬದಲು ಸ್ವರಾಜ್ಯ ಸ್ಥಾಪಿಸಬೇಕಾದರೆ, ಹಿಂಸೆಯ ಮೂಲಕವೇ ಆಗಬೇಕೆಂದಲ್ಲಿ, ಜನಾಂಗವು ಹಾಗೆಯೆ ಕೇಳುವಂತೆ ಕೊಂಗ್ರೆಸು ಹೇಳಲಿ, ಅದಕ್ಕನುಗುಣವಾಗಿ ಸಿದ್ಧತೆ ನಡಿಸಲಿ.

ಜೀವಾಮೃತ

ದೇಹಸೌಖ್ಯಕ ಮತ್ತು ಆನಂದದಾಯಕವಾದ ಈ ಅಮೃತರಸದ ಪ್ರತಿಯೊಂದು-ಗುಟುಕು ಸೇವನೆಯೂ ಆರೋಗ್ಯ. ಈ ಅಮೃತ ರಸವು, ಅಮೂಲ್ಯವಾದ ವನಸ್ಪತಿಗಳಿಂದ ಮತ್ತು ಲೋಹ ಸತ್ವಗಳಿಂದ ಮಿಶ್ರಿತವಾಗಿ ತಯಾರಿಸಲ್ಪಟ್ಟಿದೆ.

ಶರೀರವನ್ನು ಬೆಳಸಿ, ಮೆದುಳುಶಕ್ತಿಯನ್ನು ವರ್ಧಿಸಿ, ನಿತ್ರಾಣವಾದ ನರಗಳಿಗೆ ಶಕ್ತಿಯನ್ನು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಅತ್ಯಾಶ್ಚರ್ಯವಾಗುವಂತೆ-ಸ್ವಭಾವಿಕವಾಗಿಯೇ ಉಂಟುಮಾಡುತ್ತದೆ.

ಅಲ್ಪಾವಧಿಯ ಹುರುಪನ್ನು ಉಂಟುಮಾಡದೆ ಶಾಶ್ವತವಾದ ಗುಣಕಾರಿಯಾಗಿದೆ.

ಎಲ್ಲಾ ಔಷಧಿವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ತಯಾರಿಸುವವರು:—ಆಯುರ್ವೇದಾಶ್ರಮ, ಮದರಾಸು.

ಸ್ಟಾಕಿಸ್ಟರು—ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಹೈದರಾಬಾದಿನಲ್ಲೇನು?

ದಂಗೆಗಳು— ★

ಸರಕಾರದ ಇಸಿಹ್ತಾರು— ★

ಶಾಂತಿಕಾರ್ಯ ★

ಕಳೆದ 5ನೇ ತಾರೀಕಿನಲ್ಲಿ ಮುಸ್ಲಿಮರದೊಂದು ಪವಿತ್ರ ಮೆರವಣಿಗೆಯು ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗುವಾಗ, ಒಂದು ದೇವಸ್ಥಾನವನ್ನು ದಾಟುತ್ತಿರಲು, ಅಲ್ಲಿನ ಪರಾರದಿಂದ ಕೆಲವು ಕಲ್ಲುಗಳು ಮೆರವಣಿಗೆಯ ಹಿಂಭಾಗದಲ್ಲಿದ್ದ ಜನರ ಮೇಲೆ ಬಿದ್ದುವು. ಕಲ್ಲು ಪೆಟ್ಟು ತಿಂದವರು ಅಲ್ಲೇ ಒಂದಂಗಡಿಯಲ್ಲಿ ಕೈಯೆತ್ತಿ ನಿಂತಿದ್ದವನೊಬ್ಬನು ಹೀಗೆ ಮಾಡಿದ್ದನೆಂದು ಭಾವಿಸಿ, ಲಾಠಿಗಳಿಂದ ಅವನನ್ನು ಬಡಿದರು. ಅವನನ್ನು ಗಾಯಗೊಂಡುದಕ್ಕಾಗಿ ಸಾಮಾನ್ಯ ಚಿಕಿತ್ಸೆ ಮಾಡಿದರು.

ಅಷ್ಟರಲ್ಲಿ ಪೊಲೀಸ್ ಕಮ್ಮಿಶನರರು ಅತ್ತ ಬರಲು, ಅವರಿಗೆ ಬಾಧಿಪಟ್ಟು ತಿಂದ ನಾಲ್ವರು ಹಿಂದುಗಳನ್ನು ತೋರಿಸಿದ್ದಾಯಿತು. ಅವರನ್ನು ಆಸ್ಪತ್ರೆಗೆ ರವಾನಿಸಿ, ಕೂಡಲೆ ಚಿಕಿತ್ಸೆ ಮಾಡಿ ಮನೆಗೆ ಕಳುಹಿಸಿದರು ಮೆರವಣಿಗೆ ನಡೆದಲ್ಲಿ, ಕೆಲವು ಧಾರ್ಮಿಕ ಭಾಷಣಗಳಾಗುತ್ತಿದ್ದ ಕಾರಣ, ಪೊಲೀಸ್ ಕಮಿಶನರರು ಅತ್ತ ಹೋದರು. ಅಲ್ಲಿ ಭಾಷಣಗಳನ್ನು ರಾತ್ರಿ 11 80 ಗಂಟೆಗೆ ಮುಗಿಸಿ ಎಲ್ಲರನ್ನೂ ಮನೆಗೆ ಕಳಿಸಿದರು.

ಮರುದಿನ ಬೆಳಗ್ಗೆ ಮೂವರೋ ನಾಲ್ವರೋ ಆರ್ಯ ಸಮಾಜದವರು ಒಬ್ಬ ಮುಸ್ಲಿಮನನ್ನು ಬಡಿದರು ಆರ್ಯ ಸಮಾಜದವರದೊಂದು 600 ಮಂದಿ ಸೇರಿದ ಸಭೆಯಿತ್ತು ಮುಸ್ಲಿಮರನ್ನು ಹೊಡೆವುದಕ್ಕಾಗಿಯೆ ಆ ಸಭೆ ಎಂಬ ಮಾತು ಹೇಗೋ ಹಬ್ಬಿತು. ಅಲ್ಲಿ ಮುಸ್ಲಿಮರು ಗುಂಪು ಕೂಡಿತೊಡ— ಸಮಾಜದವರು ಅವರ ಕಡೆಗೆ ಕಲ್ಲು ಬಿಸಾಡಿ, ಕೆಲವು ಗುಂಡುಗಳನ್ನು ಹಾರಿಸಿದರು ಇದರಿಂದ, ಮುಸ್ಲಿಮರ ಮನಸ್ಸಿನಲ್ಲಿ ಹಿಂದೆ ಕೇಳಿದ ಮಾತು ನಿಜವೆಂದು ಸಂದೇಹವುಂಟಾಯಿತು. ಅವರೂ ಪುನಃ ಬಡಿಯೋಣವೆಂಬಷ್ಟರಲ್ಲಿ, ಪೊಲೀಸರು ಅವರನ್ನು ತಡೆದರು ಆದರೂ ಮಧ್ಯಾಹ್ನ ಅಲ್ಲಲ್ಲಿ ಚಿಕ್ಕ ಪುಟ್ಟ ಹೊಡೆದಾಟಗಳಾದುವು. ಚಿಕ್ಕ ಅಂಗಡಿಗಳ ಸಾಮಾನುಗಳನ್ನು ನುಗ್ಗಿ ದಾರಿಗೆ ಒಗೆದರು

ಹೀಗಾಗಿ, 27 ಜನರಿಗೆ ಅಲ್ಪ ಗಾಯಗಳಾದುವು. ಒಬ್ಬ ಮುಸ್ಲಿಮನೂ ಒಬ್ಬ ಹಿಂದುವೂ ಮಾತ್ರ ಚೆನ್ನಾಗಿ ಗಾಯಪಡೆದು ಇನ್ನೂ ಆಸ್ಪತ್ರೆಯಲ್ಲಿರುವರು. ಕೆಲವು ಮುಸ್ಲಿಮರ ಗುಂಪಿನಿಂದ ಇಬ್ಬರು ಒಂದು ಓಣಿಯಲ್ಲಿ ಓಡಿದರು ಆಗ ಪೊಲೀಸರು ಅವರನ್ನು ಹಿಂಬಾಲಿಸಿ, ಎಲ್ಲರನ್ನೂ ಚದರಿಸಿದರು. ಹೀಗಿದ್ದರೂ ಕೆಲವರನ್ನು ಇತರರು ಹಿಂಬಾಲಿಸಿ ಕೊಂದೇ ಬಿಟ್ಟರೆಂದು ತಿಳಿದುಬರುತ್ತದೆ. 145ನೇ ಸೆಕ್ಷನು ಜ್ಯಾರಿಯಿದ್ದರೂ ಹೀಗೆ ಮರಣಗಳಾದುದಕ್ಕೆ ಸರಕಾರಕ್ಕೆ ವ್ಯಥೆಯಾಗಿದೆ.

ಮೆಜಿಸ್ಟ್ರೇಟರು ಆ ಸ್ಥಳಕ್ಕೆ ತೆರಳಿ 21 ಮಂದಿಯನ್ನು ಕೈದು ಮಾಡಿದ್ದಾರೆ. ಕೆಲವರು ನಿರಪರಾಧಿಗಳೆಂದು ನಿರ್ಧಾರವಾಗಿ, ಕೆಲವರಿಗೆ ಶಿಕ್ಷೆ ಕೊಡಲಾಗಿದೆ.

ಇತ್ತಂಡಗಳ ಮುಖಂಡರನ್ನು ಶಾಂತಿಸ್ಥಾಪನೆಗೆ ಸಹಾಯಮಾಡಲು ಕರೆಯಲಾಗಿದೆ. ಇಂತಹ ರಗಳೆಗಳಾಗದಂತೆ ನೋಡಿಕೊಳ್ಳಲಾಗಿದೆ. ಶಾಂತಿಯುಂಟು. (8-4-'88)

ತಾ. 8ರ ಸಾಯಂಕಾಲ—ಊರ ಬೇರೆ ಬೇರೆ ಭಾಗಗಳಲ್ಲಿ ಅಲ್ಲಲ್ಲಿ ಕಲ್ಲು ಬಿಸಾಡುವರು. ಅಲ್ಲಲ್ಲಿ ಜನಗಳು ಒಂದಾಗಿ ಸೇರಿದ್ದು ಎಷ್ಟೋ ಜನರನ್ನು ಸೆರೆಯಿಡಲಾಗಿದೆ. ಸಿಕ್ಖರ ಗುರುದ್ವಾರದ ಬಳಿ ಸ್ವಲ್ಪ ಗಲಭೆಯಿತ್ತು; ಸಂಜೆಗೆ ಇಬ್ಬರು ಸತ್ತಂತೆಯೂ ಇನ್ನಿಬ್ಬರು ತುಂಬ ಗಂಡಾಂತರದಲ್ಲಿರುವರೆಂದೂ ಪ್ರಕಟವಾಗಿದೆ. ಸಾಯಂ 7 ಗಂಟೆಯ ನಂತರ ಹೊರಗೆ ಬರುವವರನ್ನು ಕೈದು ಮಾಡಲಾದೀತೆಂದು ಇಸ್ತಿಹಾರು ಕೊಡಲಾಗಿದೆ. ಐವರಿಗಿಂತ ಹೆಚ್ಚು ಮಂದಿ ಸೇರಿದಲ್ಲಿ ಅವರನ್ನು ಚದರಿಸುವಂತೆ ಪೊಲೀಸರಿಗೆ ಅಪ್ಪಣೆಯಿದೆ ಯಾವ ಮನೆಯಿಂದ ಕಲ್ಲುಗಳನ್ನು ಬಿಸಾಡುವರೋ, ಅವರನ್ನೆಲ್ಲ ಸೆರೆಯಿಡಬೇಕೆಂದೂ ಕಟ್ಟಾಜ್ಞೆಯಾಗಿದೆ ಸೈನಿಕರೂ ಪೊಲೀಸರ ಸಹಾಯಕ್ಕೆ ಸಿದ್ಧರಾಗಿ ಇದ್ದಾರೆ.

ಗುರುದ್ವಾರದ ಬಳಿ ರಾತ್ರಿಯಲ್ಲಿ ಗಲಭೆಯಾಗಿದೆ ಪೊಲೀಸರು ಶಾಂತಿಸ್ಥಾಪನೆ ಮಾಡಿದರು.

ಸೈನಿಕರ ಸಹಾಯ ಕರೆದು ಈ ಗುಂಪುಗಳನ್ನು ಚದರಿಸಲೆತ್ನಿಸಿದ ಕಾರಣ, ಇಬ್ಬರೇ ಮಾತ್ರ ಮೃತರಾಗಿ ಸುಮಾರು 60 ಮಂದಿಗೆ ಗಾಯವಾಗಿದೆ ಸಂಜೆಯಿಂದ ನಿಷೇಧ ಸುರಿದ ಕಾರಣ, ಯಾರಿಗೂ ತಂಟೆ ಮಾಡಲು ಅವಕಾಶ ಸಿಕ್ಕಿಲ್ಲ. ಆದರೂ 20 ಮಂದಿಗೆ ಕಠಿನ ಗಾಯಗಳಾಗಿವೆ, 60 ಮಂದಿಯನ್ನು ಕೈದು ಮಾಡಲಾಗಿದೆ

ಸುಲ್ತಾನ ಪೇಟೆಯಲ್ಲಿ ಹಿಂದುಗಳೂ ಮುಸ್ಲಿಮರೂ ಕರಾರು ಮಾಡಿಕೊಂಡು ಇತ್ತಂಡಗಳೂ ಮೈತ್ರಿಯಿಂದಿದ್ದಾರೆ. (9-4-88)

ತಾ. 10-4-88ರಲ್ಲಿ, ಸರಕಾರವು ಪ್ರಕಟಿಸಿದಂತೆ ಗಲಭೆಯಲ್ಲಿ ಸತ್ತವರ ಸಂಖ್ಯೆ 5, ಗಾಯಗೊಂಡು ಚಿಕಿತ್ಸೆ ಹೊಂದಿದವರು 300, ಇನ್ನೂ ಆಸ್ಪತ್ರೆಯಲ್ಲಿರುವವರು 80 ಆಸ್ಪತ್ರೆಯಲ್ಲಿ ಸ್ಥಳ ದೊರೆಯದಿರುವವರಿಗಾಗಿ ವೈದ್ಯರನ್ನು ಅವರ ಮನೆಗೇ ಕಳುಹಲಾಗಿದೆ.

ಅಫಿಜಲ್‌ಗಂಜ್ ಪೋಸ್ಟಾಫೀಸನ್ನು ಇದುವರೆಗೆ ದಂಗೆಕೋರರು ನುಗ್ಗಿ ಲೂಟಿಯಿಸುವರೆಂಬ ಅಂಜಿಕೆಯಿದ್ದುದರಿಂದ ಮುಚ್ಚಲಾಗಿತ್ತು. ಈಗ ಅದನ್ನು ತೆರೆಯಲಾಗಿದೆ

ಸೈನಿಕರು ರಾತ್ರಿ ಊರಲ್ಲೆಲ್ಲ ಗಸ್ತು ತಿರುಗುತ್ತಿರುವರು. ಒಂದು ಸೈಕಲ್ ಅಂಗಡಿಯ ಬಳಿ ಹಿಂದೂವಿನೊಬ್ಬನು ಮಾತಾಡುತ್ತಿರುವಾಗ ಜಗಳವಾಗಿ ಎಂಟು ಜನರಿಗೆ ಗಾಯಗಳಾಗಿವೆ. ಹತ್ತಿರದ ಸುಣ್ಣದ ಭಟ್ಟಿಯಿಂದ ಕಿಡಿಹಾರಿ ಒಂದು ಮನೆ ಸುಟ್ಟಿದೆ. ಯಾಕೂತ್ ಮರದ ನಿವಾಸಿಗಳು ಮನೆಬಿಟ್ಟು ಹೋಗಿರುವರು ರಾಮನವಮಿಯ ಮೆರವಣಿಗೆಯು ಪೊಲೀಸ್ ಪಹರೆಯ ದೆಸೆಯಿಂದ ಸಾಂಗವಾಗಿ ನೆರವೇರಿತು ಆದರೂ ಅಂತ್ಯದಲ್ಲಿ ಒಬ್ಬ ಹಿಂದುವಿಗೆ ಗಾಯವಾಗಿ ಆಸ್ಪತ್ರೆಗೆ ಹೋಗಬೇಕಾಗುವ ಗಲಭೆಯಾಯಿತು.

ಸ್ವಾತಂತ್ರ್ಯ ಚಳವಳಿಗಾಗಿ ಮುಸ್ಲಿಮರಿಗೂ ಹಿಂದುಗಳಿಗೂ ಒಂದು ವಾರದ ಕಠಿನ ಸಜೆ ವಿಧಿಸಲಾಗಿದೆ.

ಸತ್ತವರೆಂಬವರು ಇಬ್ಬರಲ್ಲ, ಒಬ್ಬನೆಂದು ಈಗ ತಿದ್ದುಪಡಿ ಹೊರಟಿದೆ.

ಇಬ್ಬರು ಹೊಸಬರಾಗಿ ಬಂದ ಸಿಕ್ಖರು ಕತ್ತಿ ಹಿಡಿದು ಮುಸ್ಲಿಮರನ್ನು ಕೊಲ್ಲಬೇಕೆಂದಿದ್ದರು. ಅವರನ್ನು ಕೈದುಮಾಡಲಾಗಿದೆ. ಈ ದಿನ 80 ಮಂದಿಗೆ ಒಂದು ತಿಂಗಳ ಶಿಕ್ಷೆ ವಿಧಿಸಲಾಗಿದೆ; ಇವರಲ್ಲಿ ಹಿಂದೂ ಬಹಳವಿ.

ಅಂಗಡಿಗಳನ್ನು ಒಂದೊಂದಾಗಿ ತೆರೆಯುತ್ತಾರೆ. ಶಾಂತಿ ಸ್ಥಾಪನಾ ಕಮಿಟಿಗಳು ಕೆಲಸ ಮಾಡುತ್ತವೆ.

"ಪ್ರೀತಿಯ ಕುಂವರ ಸಿಂ"

(ಒಂದು ಮನೋರಂಜಕ ಕತೆ)

ಪ್ರಾತಃಕಾಲದ ಸುಂದರ ಸಮಯ ಮೇಲೆ ನೀರವ ಆಕಾಶ. ಕೆಳಗೆ ನಿರ್ಜನ ಬೀದಿ. ಯಾರೋ ಒಬ್ಬ ಅಪರಿಚಿತನು ಒಂದು ಹಾಡು ಹಾಡುತ್ತ ಪ್ರಕೃತಿಯ ಈ ಅಖಂಡ ನೀರವತೆಯನ್ನು ಭೇದಿಸಿ ನನ್ನ ಮನೆಯನ್ನು ಹಾದು ಹೋಗುತಿದ್ದ. ಸ್ವಾಭಾವಿಕವಾದ ಉತ್ಸುಕತೆಯಿಂದ ಪ್ರೇರೇಪಿತನಾಗಿ ನಾನು ಹೊರಗೆ ಬಂದು ನೋಡಿದೆ. ಒಬ್ಬ ಅತ್ಯಂತ ಪ್ರೌಢ ಮನುಷ್ಯನು ಬೀದಿಯಲ್ಲಿ ಅಡ್ಡಾಡುತಿದ್ದ ನಾನು ಅವನನ್ನು ಒಳಗೆ ಕರೆದೆ ಕರೆದು ಕೇಳಿದಾಗ ಅವನು ಒಂದು ಸೇನೆಯಲ್ಲಿ ನೌಕರನಾಗಿದ್ದನೆಂದೂ, ಮಹಾ ಯುದ್ಧಕ್ಕೆ ಸಹ ಹೋಗಿ ಬಂದಿದ್ದನೆಂದೂ ತಿಳಿದುಬಂದಿತು 'ಸರಿ, ಯುದ್ಧ ವೃತ್ತಾಂತವನ್ನು ಕೇಳುವ ಕುತೂಹಲದಿಂದ ನಾನವನನ್ನು ಮನೆ ಜಾವಡಿಗೆ ಕರತಂದೆ ನನ್ನ ಪ್ರಬಲವಾದ ಇಚ್ಛೆಯನ್ನು ನೋಡಿ ಅವನು ಕತೆ ಹೇಳತೊಡಗಿದ

'ಅಪ್ಪಾ ನನ್ನ ಹೆಸರು ರಾಮಸಿಂಹ ಎಂದು ಲಾಹೋರಿನಲ್ಲಿ ಇರುತಿದ್ದೆ 1914ನೇ ಇಸವಿಯ ಮಾತು ಆಕಾಶದಲ್ಲಿ ಯುದ್ಧದ ಮೋಡಗಳು ಬೀಸಿದ್ದುವು ನಾಲ್ಕು ಸುತ್ತಲಿಂದಲೂ ಸೇನೆಗೆ ಜನರನ್ನು ಭರ್ತಿಮಾಡುತಿದ್ದರು ನಾನೂ ನನ್ನೊಬ್ಬ ಅಭಿನ್ನ ಮಿತ್ರನೊಂದಿಗೆ ಸೇನೆಯನ್ನು ಸೇರಿದೆ ನನ್ನ ಈ ಕಾರ್ಯದ ಅಂತ್ಯವು ಎಲ್ಲಿ ಆಗುವುದು ಎಂಬುದನ್ನು ನಾನು ಆಗ ಯೋಚಿಸಿರಲಿಲ್ಲ ವಿಲಾಯತಿಗೆ ಹೋಗುತ್ತ ನನ್ನ ಮಿತ್ರನ ಹೆಂಡತಿ 'ಅವರನ್ನು' ನನ್ನ ಆರೈಕೆಗೆ ಒಪ್ಪಿಸಿದ್ದಳು ಇವಳ ಹೃದಯದಲ್ಲಿ ವಿಯೋಗದ ಕಿಡಿಗಳು ಎದ್ದು ಇಡೀ ಶರೀರವನ್ನು ಸುಟ್ಟಿಡುತಿದ್ದುವು ಮನಸ್ಸು ಸ್ಥಿರತೆಯನ್ನು ಕಳಕೊಂಡಿತ್ತು ವಿಯೋಗದ ವಿಚಿತ್ರ ಆಘಾತಗಳು ಹೃದಯವನ್ನು ಒಮ್ಮೆಗೆ ಬಹು ಕೋಮಲವಾಯೂ ಒಮ್ಮೆಗೆ ಬಹು ಕಠಿನವಾಗಿಯೂ ಮಾಡುತಿದ್ದುವು 'ನನ್ನ ಪ್ರಾಣಾಧಾರ ಯುದ್ಧಕ್ಷೇತ್ರಕ್ಕೆ ಹೋಗುತಿದ್ದಾರೆ' ಎನ್ನುತಿದ್ದ ಆಗಿನ ಆ ದೃಶ್ಯವು ಬಹಳ ಹೃದಯವಿದ್ರಾವಕವಾಗಿತ್ತು 'ವಿಧಿಯು ನನಗೆ ಪ್ರತಿಕೂಲವಾದರೆ ಮತ್ತೆ ಈ ಸಂಸಾರದಲ್ಲಿ ನನಗೆ ಎಲ್ಲಿಯೂ ಸ್ಥಾನವಿಲ್ಲ. ಇಡೀ ಸಂಸಾರವು ನನಗೆ ಅಸಹ್ಯವಾಗುವದು ನನ್ನ ಚಿರಸಂಚಿತ ಆಶೆಗಳು ಭಾಗ್ಯದ ವಿಲಳಿತದಿಂದ ನಿರಾಶೆಯ ನದಿಯಲ್ಲಿ ಸದಾ ಕಾಲಕ್ಕಾಗಿ ಮುಳುಗಿಹೋಗುವವು' ಎಂದವಳು ಗೋಳಿಟ್ಟಳು. 'ಆದರೆ ದುಃಖದ ಒರೆಗಲ್ಲಿನಲ್ಲಿ ತಿಕ್ಕಿ ಪರೀಕ್ಷಿಸಲ್ಪಟ್ಟ ಮನುಷ್ಯನೇ ಕೊನೆಗೆ ಶ್ರೇಷ್ಠನೆನ್ನಿಸಿಕೊಳ್ಳುತ್ತಾನೆ ಎಂದವಳು ವಿಚಾರ ಮಾಡುತ್ತ ಅವಳು 'ಅವರನ್ನು ನನಗೆ ಒಪ್ಪಿಸಿಕೊಟ್ಟಳು ಅಸಹ್ಯ ವೇದನೆಯನ್ನು ಸಹಿಸುತ್ತ ಅವಳು ಮನೆಯಲ್ಲಿ ಒಬ್ಬಳೇ ಉಳಿದಳು

"ಯುದ್ಧ ಕ್ಷೇತ್ರಕ್ಕೆ ಹೋಗುತ್ತಾ ನಮ್ಮ ಮನೋಗತಿ ಬದಲಿಸಿತು ನಾವು ಇಬ್ಬರು ಯುದ್ಧ ಚರ್ಚೆಯಲ್ಲಿ ತೊಡಗಿದೆವು ಹಡಗಿನಲ್ಲಿ ಕೂತು ನಾವು ಕಲ್ಕತ್ತೆಯಿಂದ ಹೊರಟೆವು ಎಡನಿಗೆ ಹೋದ ಮೇಲೆ ನಾವು ಜರ್ಮನಿಯ ಸರಹದ್ದಿನ ಒಂದು ಅಜ್ಞಾತ ಮತ್ತು ಗುಪ್ತ ಸ್ಥಾನದಲ್ಲಿ ಇಳಿಸಲ್ಪಡುವೆವೆಂದು ಗೊತ್ತಾಯಿತು ನಾನು ಮಿತ್ರ ಕುಂವರಸಿಂಹನೊಡನೆ ಕೇಳಿದೆ 'ಅಣ್ಣಾ, ನಾನು ಯುದ್ಧದಿಂದ ಹಿಂದಿರುಗದಿದ್ದರೆ ಏನು ಮಾಡುವಿ?' ಅವನು ನಗುವಿನಲ್ಲೇ ಮಾತು ಮುಗಿಸಿದ ಭವಿಷ್ಯವನ್ನು ತಿಳಿಯುವವರು ಯಾರಿದ್ದಾರೆ?

೨

ರಾತ್ರಿ ಹತ್ತು ಘಂಟೆಯ ಸಮಯವಾಗಿರಬಹುದು. ನಮ್ಮ ರೆಜಿಮೆಂಟಿನಲ್ಲಿ ಒಮ್ಮಿಂದೊಮ್ಮೆಗೆ ಗದ್ದಲಕ್ಕಾರಂಭವಾಯಿತು ನಾವು ಊಟ ಮಾಡಿ ಹೆಚ್ಚು ಕಾಲ ಕಳೆದಿರಲಿಲ್ಲ ಆಗಲೇ ಹೊರಡಬೇಕೆಂದು ಅಪ್ಪಣೆಯಾಗಿತ್ತು. ಅಲ್ಲಿಂದ ಕೇವಲ ಐದು ಮೈಲುಗಳ ದೂರದಲ್ಲಿ ಶತ್ರು ಸೇನೆಯು ಬಂದು ಇಳಕೊಂಡಿತ್ತೆಂದು ಗುಪ್ತಚಾರನು ಬಂದು ಹೇಳಿದ್ದ ನಾವು ಸ್ವಲ್ಪವೇ ದೂರ ನಡೆದು ಹೋಗಿರಬಹುದು ಅಷ್ಟರಲ್ಲಿ ಗುಂಡಿನ ಸುರಿಮಳೆಗೆ ಆರಂಭವಾಯಿತು. ಜರ್ಮನಿಯ ಸೇನೆಯು ನಮ್ಮನ್ನು ನಾಲ್ಕು ಸುತ್ತಲಿಂದಲೂ ಸುತ್ತಿಕೊಂಡಿತ್ತು. ಒಬ್ಬೊಬ್ಬರಾಗಿ ನಮ್ಮ ಅನೇಕ ಮಂದಿ ಸಂಗಡಿಗರು ಮೃತ್ಯುವಿನ ಮಡಿಲಲ್ಲಿ ಹಾಯಾಗಿ ಮಲಗಿದರು ನಾವು ಕೂಡಲೇ ಖಂದಕಗಳಲ್ಲಿ ಇಳಿಯಬೇಕೆಂದು ಆಜ್ಞೆ ಬಂದಿತು ನಾನೂ, ನನ್ನ ಮಿತ್ರನೊಂದಿಗೆ ಒಂದು ಖಂದಕವನ್ನು ನುಗ್ಗಿದೆ ನಾಲ್ಕು ಸುತ್ತಲಿಂದ ತೋಪು ಫಿರಂಗಿಗಳ ಘನ ಘೋರ ಗರ್ಜನೆಯು ಕೇಳಿಬರುತಿತ್ತು ವಾಯುನಾವೆಗಳ ಸಂಚಾರದ ಸ್ವರದಿಂದ ಆಕಾಶವು ಪ್ರತಿಧ್ವನಿಸುತಿತ್ತು ಎರಡು ದಿನಗಳ ತನಕ ನಾವು ಅವೇ ಖಂದಕಗಳಲ್ಲಿ ಹೇಗೂ ಮಾಡಿ ಬಿದ್ದುಕೊಂಡಿದ್ದೆವು ಮೂರನೆ ದಿನ ಯಾರೋ ಒಬ್ಬನು ಹೊರಗಿನಿಂದ ನನ್ನ ಹೆಸರು ಹೇಳಿ ಕರೆದ ನಾನು ಹೊರಗೆ ಬಂದು ನೋಡುವಾಗ ಕಪ್ತಾನರು ನಿಂತಿದ್ದರು ನೋಡುತ್ತಲೇ ಅವರಿಗೆ ಸಲಾಮು ಮಾಡಿದೆ 'ನೀವು ಇಲ್ಲಿ ಎಷ್ಟು ಮಂದಿ ಇದ್ದೀರಿ?' ಎಂದು ಅವರು ಕೇಳಿದರು

'ಎಲ್ಲರೂ ಸೇರಿ ಹದಿನಾರು ಮಂದಿ' ಎಂದು ನಾನು ಹೇಳಿದೆ

'ಸರಿ' ಎಂಟು ಮಂದಿ ಇಲ್ಲೇ ಇರಿ ಉಳಿದ ಎಂಟು ಮಂದಿ ಆ ಕಡೆ ನಡೆಯಿರಿ ಅಲ್ಲಿ ಕೆಲವರು ಜರ್ಮನರು ಮರಗಳ ಮೇಲೆ ಕೂತಿದ್ದಾರೆ' ಎಂದು ಕಪ್ತಾನರೆಂದರು, ಕುಂವರಸಿಂಹನೊಂದಿಗೆ ನಾನು ಹೊರಟೆ

೩

ನಾನು ನನ್ನ ಸಂಗಡಿಗರೊಂದಿಗೆ ಬಹಳ ದೂರ ನಡೆದು ಹೋದರೂ ನಮಗೆ ಕಪ್ತಾನರು ಹೇಳಿದ ಸ್ಥಾನವು ದೊರೆಯಲೂ ಇಲ್ಲ ಮರದ ಮೇಲೆ ಕೂತ ಜರ್ಮನ ಗುಪ್ತಚಾರರು ಸಿಕ್ಕಲೂ ಇಲ್ಲ ಈಗ ಕಪ್ತಾನರು ನಿಜಕ್ಕೂ ಕಪ್ತಾನರಾಗಿದ್ದರೇ ಎಂಬ ಕುರಿತು ನನಗೆ ಸಂದೇಹಕ್ಕಿಟ್ಟಿತು ನನ್ನ ಮೂರ್ಖತನದ ಬಗ್ಗೆ ಬಹಳ ಪಶ್ಚಾತ್ತಾಪವಾಯಿತು ಎದೆಯು ಗುಡುಗುಡಿಸತೊಡಗಿತು ಆ ಸಮಯಕ್ಕೆ ನಾವು ಸುಮಾರು ಎರಡು ಮೈಲು ದೂರ ಹೊರಟು ಬಂದಿದ್ದೆವು

★ ★

'ಕಡೆಗೆ ನನ್ನ ಸಂದೇಹವು ನಿಜವಾಯಿತು ನಮಗೆ ಮೋಸಕೊಟ್ಟ ಜರ್ಮನ ಗುಪ್ತಚರನು ನಮ್ಮನ್ನು ಜರ್ಮನ ಸೇನೆಯ ಕಡೆಗೆ ಕಳುಹಿಸಿದ್ದನು ಒಮ್ಮಿಂದೊಮ್ಮೆಗೆ ಬಿಗಿಲಿನ ಸ್ವರವು ಕೇಳಿಬಂದಿತು ಎದುರು ನೋಡುವಾಗ ಸಶಸ್ತ್ರ ಜರ್ಮನ ಸಿಪಾಯಿಯೊಬ್ಬನು ನಮ್ಮ ಕಡೆಗೆ ನಡೆದುಬರುತಿದ್ದನು ನಮ್ಮನ್ನು ನೋಡುತ್ತಲೇ ಬಗ್ಗಿ ನಿಲ್ಲಲಿಕ್ಕೆ ಆಜ್ಞಾಪಿಸಿದ

೪

"ಸುಮಾರು ಮೂರು ಗಂಟೆಗಳಲ್ಲಿ ಮರಗಿಡಗಳ ಅರೆಮರೆಯಾಗಿ ಗೋಳಿಗಳ ಸುರಿಮಳೆಯಿಂದ ಬದುಕಿಕೊಳ್ಳುತ್ತ ನಾವು ಹೇಗೂ ಮಾಡಿ ನಮ್ಮ ಖಂದಕವನ್ನು ಸೇರಿದೆವು ಹೊರಗಿನ ದೃಶ್ಯ ನೋಡಿ ಎದೆಯು ಚೂರು ಚೂರಾಯಿತು ಸುತ್ತಮುತ್ತಲಿನ ಭೂಮಿ ಛಿನ್ನ ಭಿನ್ನವಾಗಿತ್ತು ಬಹುಶಃ ಬಹಳ ಸ್ವಲ್ಪ ಸಮಯದ ಹಿಂದೆ ಅಲ್ಲಿ ಒಂದು ಬೋಂಬು ಬಿದ್ದಿರಬೇಕು, ಕಪ್ತಾನನ ವೇಶದಲ್ಲಿದ್ದ ಜರ್ಮನ ಗೂಢಚಾರನು ಅಲ್ಲಿಂದ ಓಡಿಹೋಗಬೇಕೆನ್ನುವಷ್ಟರಲ್ಲಿ ಅಲ್ಲಿ ಬೋಂಬ ಬಿದ್ದಿತ್ತು ಅವನ ಆಶೆ ಪ್ರತ್ಯಾಶೆಗಳು ಅವನ ಮನಸ್ಸಿನಲ್ಲೇ ಉಳಿದವು ನಮ್ಮ ವಂಗಡದವನೊಬ್ಬನು ಮಿಷ್ಣಿಂಡ ಕಂಪೆನಿಯ ಒಂದು ರಾಯ್ಫಲಿನಿಂದ ಅವನ ಕಪಾಲ ಕ್ರಿಯೆಮಾಡಿ ಬಿಟ್ಟನು

ಜಿಂಜರ್ ರೋಜರ್ಸ್.

ಇವಳು ಯಾವಾಗಲೂ ಸ್ವತಃ ಲೋಕಸುಂದರಿಯಾಗಿದ್ದಾಳೆ
ಲಕ್ಸ್ ಟಾಯಿಲೆಟ್ ಸಾಬೂನು
LUX TOILET SOAP
X LTS
LEVER BROTHERS (INDIA) LIMITED
KANARESE

'ಒಳಗೆ ಹೋಗಿ ನೋಡುವಾಗ ನನ್ನ ಪ್ರಜ್ಞೆ ಎಲ್ಲ ಗಾಳಿಗೆ ಹಾರಿಹೋಯಿತು ಕುಂವರನ ಗತಿಯು ಯಾವಾಗಲೂ ಹೀಗಾಗಿರುತ್ತದೆಂದು ಕೇಳಿದ್ದೆ ಆ ದರಿದ್ರನ ಕಡೆ ಕಳೆದಿರಲಿಲ್ಲ ... ಸ್ವರದಲ್ಲಿ ಕೂಗುವದ ಕೇಳಿತ ಸ್ವರವು ಪರಿಚಿತವಾಗಿತ್ತು ಓಡಿ ಅಲ್ಲಿಗೆ ಹೋಗಿ ನೋಡಿದೆ ನೋಡಿದೊಡನೆ ನನಗೆ ಕಣ್ಣು ಕತ್ತಲೆ ಬಂದಿತು ಗಾಯಗಳ ವೇದನೆಯಿಂದಿಗೆ ನಾನು ಯಾವಾಗ ಹೇಗೆ ಚಿಕಿತ್ಸಾಲಯಕ್ಕೆ ಒಯ್ಯಲ್ಪಟ್ಟಿದ್ದೆನೆಂಬುದು ನನಗೆ ತಿಳಿಯಲಿಲ್ಲ '

೫

"ಯುದ್ಧ ಮುಗಿದಿತ್ತು ನನ್ನ ಅಳಿದುಳಿದ ಕೆಲವು ಸಂಗಡಿಗರು ಮನೆಗೆ ಹೋಗುವ ಸಿದ್ಧತೆಯಲ್ಲಿದ್ದರು ಆ ಸಮಯ ನನ್ನ ಹೃದಯದ ಮೇಲೆ ಯಾವ ಅಸಹ್ಯ ಆಘಾತವುಂಟಾಗಿತ್ತೋ ಅದರ ವರ್ಣನೆ ಮಾಡುವ ಶಕ್ತಿ ನನ್ನಲ್ಲಿಲ್ಲ ಎಲ್ಲವನ್ನು ತಾವೇ ಊಹಿಸುತ್ತದೆ ಮಾಡಿಸುತ್ತದೆ ಸ್ವಲ್ಪ ಸಮಯ ಕಳೆದ ನಂತರ ನನ್ನ ಮನಸ್ಸಿನ ವ್ಯಾಕುಲತೆ ಸ್ವಲ್ಪ ಕಡಿಮೆಯಾಯಿತು ನಾನು ಊರಿಗೆ ಹಿಂತಿರುಗಿದೆ ಮನೆಗೆ ಮುಟ್ಟುತಲೆ ನನಗೆ ಒಬ್ಬ ಅಬಲಾ ಸ್ತ್ರೀ ದೇಶದ ಪತಿ ತನ್ನ ಕರ್ತವ್ಯವೆಂದು ತಿಳಕೊಂಡು ಕಣ್ಣೀರ ಸುರಿದ ವಿರಹವೇದನೆಯಿಂದ ವ್ಯಥಿತಳಾಗಿ ಯಾವ ತನ್ನ ಪತಿ, ದೇವರು ಮತ್ತು ಗುರುವನ್ನು ನನ್ನ ವಶ ಮಾಡಿಕೊಟ್ಟಿದ್ದಳೋ ನನಗೆ ಅವಳ ನೆನಪಾಯಿತು ಆದರೆ ಏನು ಮಾಡಬಲ್ಲವನಾಗಿದ್ದೆ ಎದೆಯ ಮೇಲೆ ಕೈಯಿಟ್ಟುಕೊಂಡು ಅವಳ ಮನೆಗೆ ಹೋದೆ ನಾನು ಒಬ್ಬನೇ ಬಂದಿರುವದನ್ನು ನೋಡಿ ಅವಳು ಥರಥರ ನಡುಗಿದಳು ಹಾಯ್ ರೇ ಪಾಷಾಣ ಹೃದಯ ಆಗ ನೀನು ಎಂಥ ಕಾರ್ಯ ಮಾಡಿದೆ? ಆ ಹೃದಯ ವಿದಾರಕ ದೃಶ್ಯದ ವರ್ಣನೆಯನ್ನು ಕಣ್ಣೀರು ಸುರಿಸುತ್ತ ಮಾಡಿಯೇ ಮಾಡಿದೆ ಅವಳು ಒಂದು ನಿಟ್ಟುಸಿರು ಬಿಟ್ಟು ಪ್ರಜ್ಞೆತಪ್ಪಿ ನೆಲದ ಮೇಲೆ ಬಿದ್ದಳು ಸಂದರ್ಭೋಚಿತ ಉಪಚಾರ ಮಾಡಿದೆ ಅವಳು ಎಚ್ಚರವಾದಳು ಆಗಿನ ಆ ದೃಶ್ಯ ಚಿತ್ರದಂತೆ ಈಗಲೂ ನನ್ನ ಕಣ್ಣಮುಂದೆ ಇದೆ, ಅದು ನನ್ನ ಹೃದಯದ ಮೇಲೇರಿ ಅಸೀನವಾಗಿದೆ

'ಆಗ ಒಂದು ಚಿಕ್ಕ ಪಾಪ! ಅಪ್ಪಯ್ಯಾ ಯಾಕೆ ಬರಲಿಲ್ಲ ಅವರಿಗೆ ರಜೆ ಸಿಕ್ಕಲಿಲ್ಲವೆ? ಎಂದು ಕೇಳಿತ ನಾನು ಮಗುವಿನ ಪ್ರಶ್ನೆಗೆ ಏನು ಉತ್ತರ ಕೊಡಲಿ? ತಾಯಿ ಮಗುವನ್ನು ಎದೆಗೆ ಅಪ್ಪಿಕೊಂಡು ಹೇಳಿದಳು—"ನನ್ನ ಮುದ್ದು ತಂದೆಯವರ ಇನ್ನು ಬರುವದಿಲ್ಲ ಬರಲಿಕ್ಕಾಗದ ದೇಶಕ್ಕೆ ಅವರು ಹೊರಟು ಹೋದರು '

ಕುಂವರಸಿಂಹನ ಹೆಂಡತಿ ಮತ್ತು ಮಗು ಈಗ ನನ್ನ ಮನೆಯಲ್ಲೇ ಇದ್ದಾರೆ ಈಗಲೂ ಅವನ ಸ್ಮೃತಿ ನನ್ನನ್ನು ವಿಹ್ವಲನನ್ನಾಗಿ ಮಾಡುತ್ತದೆ ಇಷ್ಟು ಹೇಳಿ ರಾಮಸಿಂಹ ಸುಮ್ಮಗಾದ. ನಾನು ಅವನ ಕತೆಯನ್ನು ಮನಸ್ಸುಕೊಟ್ಟು ಕೇಳುತ್ತಲಿದ್ದೆ ಆದರೆ ಅವನ ಗಂಭೀರ ಮುಖಮುದ್ರೆಯನ್ನು ನೋಡಿ ಅವನೊಡನೆ ಪ್ರಶ್ನೆ ಕೇಳುವ ಸಾಹಸ ನನಗೆ ಬರಲಿಲ್ಲ

೬

ರಾಮಸಿಂಹ ಮತ್ತು ನನ್ನ ಸ್ನೇಹ ದಿನದಿನವೂ ಬೆಳೆಯಿತು. ನಾನು ಅವನ ಮನೆಗೆ ಹೋಗುತ್ತಾ ಬರುತ್ತಾ ಇದ್ದೆ ಈಗ ಅವನು ಮತ್ತಷ್ಟು ಗಂಭೀರನಾಗುತ್ತ ಬಂದಿದ್ದ ನಾನು ಕತೆಗಳನ್ನು ಕೇಳುತಿದ್ದಾಗಲೆಲ್ಲ ಅವನು ಅರ್ಧವರ್ಧ ಉತ್ತರ ಕೊಟ್ಟು ವಿಷಯವನ್ನು ಮುಂದರಿಸಿ ಹಾಕುತಿದ್ದ

★ ★

ಮಹಾಯುದ್ಧ ಮುಗಿದು ಹಲವು ವರ್ಷಗಳ ಸಂದುಹೋಗಿವೆ ಆದರೆ ರಾಮಸಿಂಹನ ಹೃದಯಪಟದ ಮೇಲೆ ಕುಂವರಸಿಂಹನ ಸ್ಮೃತಿ ಹೇಗಿತ್ತೋ ಹಾಗೆ ಅಚ್ಚಳಿಯದೆ ಇದೆ ಮಲಗಿ ನಿದ್ರಿಸುತಿದ್ದಾಗಲೂ ಅವನ ಮುಖದಿಂದ ಆಗಾಗ್ಗೆ 'ಪ್ರೀತಿಯ ಕುಂವರ ಸಿಂ' 'ಪ್ರೀತಿಯ ಕುಂವರ' ಎಂದು ಶಬ್ದಗಳು ಕೇಳಿಬರುತ್ತವೆ

"ಲೋಕಮಾನ್ಯ"

ಮದ್ರಾಸು ಕೃಷಿಕರ ಸಾಲನಿವಾರಣಾ ಕಾನೂನು

★

ಈ ಕಾನೂನು ಇದೇ ಕಳೆದ ಮಾರ್ಚ ತಿಂಗಳ 22ನೇ ತಾರೀಕಿನ ಫೋರ್ಟ್ ಸೈಂಟ್ ಜಾರ್ಜ ಗಜೇಟಿನಲ್ಲಿ ಪ್ರಕಟವಾಗಿದ್ದು ಅಂದಿನಿಂದ ಕಾನೂನಾಗಿ ಜ್ಯಾರಿಗೆ ಬಂದಿರುವದು ಸರಕಾರವು ಈಗ ತಾನೇ ಪ್ರಕಟಿಸಿದ ಪ್ರಕಟಣೆಯಲ್ಲಿ ಕಾಣುವ ಪ್ರಕಾರ ಈ ಕಾನೂನಿನ ಮುಖ್ಯಾಂಶಗಳೆಲ್ಲವೂ ಅಡಕವಾಗಿರುವ ಸಾರಾಂಶವನ್ನು ವಾಚಕರ ತಿಳುವಳಿಕೆ ಬಗ್ಗೆ ಬರೆದು ಕೊಡೋಣವಾಗಿದೆ. ವಾಚಕರು ಇದನ್ನು ಓದಿ ಪ್ರಯೋಜನ ಪಡೆಯುವರಾಗಿ ಕಲಿ ಇದೆ

೧. ಕಾನೂನಿನ ಉದ್ದೇಶ

ಸಾಲಭಾಧೆಯಿಂದ ಪೀಡಿತರಾಗಿರುವ ಕೃಷಿಕರ ಸಾಲದ ಭಾರವನ್ನು ತಕ್ಕಷ್ಟು ಇಳಿಸುವದು ಈ ಕಾನೂನಿನ ಉದ್ದೇಶವಾಗಿದೆ ಸಾಲಗಳನ್ನು ತಗ್ಗಿಸುವದರ ಮೂಲಕವೂ, ಮುಂದಿನ ಸಾಲಗಳ ಬಡ್ಡಿದರವನ್ನು ಕಡಿಮೆ ಮಾಡುವದರ ಮೂಲಕವೂ, ಜಮೀನುದಾರರು, ಜಮೀನುಗಳು ಮತ್ತು ಇತರ ಆಸ್ತಿವಂತರಿಗೆ ಸಲಬೇಕಾಗಿರುವ ಗೇಣಿ ಬಾಕಿಯನ್ನು ಪೂರ್ಣ ಅಳಿಸಿ ಬಿಡುವದರ ಮೂಲಕವೂ ಕಾನೂನಿನ ಉದ್ದೇಶವನ್ನು ಸರಕಾರವು ಸಾಧಿಸಬೇಕೆಂದಿದೆ

೨ ಸಾಲಗಳನ್ನು ತಗ್ಗಿಸುವಿಕೆ.

ಈ ಕಾನೂನಿಗನುಗುಣವಾಗಿ ಸಾಲಗಳನ್ನು 1932ನೇ ಇಸವಿಯ ಅಕ್ಟೋಬರ ತಿಂಗಳ ಒಂದನೆ ತಾರೀಕಿನ ಹಿಂದಿನ ಸಾಲಗಳು ಮತ್ತು ಆ ದಿನ ಅಥವಾ ಆದರ ಮುಂದಿನ ಸಾಲಗಳು ಎಂದು ಎರಡು ಜಾತಿಯಾಗಿ ವಿಂಗಡಿಸಿರುತ್ತದೆ ಈ ಎರಡು ಜಾತಿಯ ಸಾಲಗಳ ಬಗ್ಗೆ ಕೃಷಿಕರಿಗೆ ದೊರೆಯುವ ರಿಯಾಯತಿಗಳು ಎರಡು ಪ್ರಕಾರದವುಗಳಾಗಿರುವವು

ಅ) 1–10–1932ರ ಹಿಂದಿನ ಸಾಲಗಳ ಮೇಲಿನ ರಿಯಾಯತಿ.

ಈ ಸಾಲಗಳ ಮೇಲೆ 1–10–1932ರ ದಿನ ಬಾಕಿಯಾದ ಬಡ್ಡಿಯು ಸಂಪೂರ್ಣ ವಜಾ ಆಗುತ್ತದೆ ಮತ್ತು ಆ ತಾರೀಕಿಗೆ ಬಾಕಿ ಇರುವ ಅಸಲು ಐವೇಜು ಅಥವಾ ಅದರ ಬಾಕಿಯಾದ ಅಂಶವನ್ನು ಮಾತ್ರ ಕೃಷಿಕನು ಕೊಡಲು ಬಾಧ್ಯನಾಗಿರುತ್ತಾನೆ.

ಅಸಲಿನ ರೂಪದಲ್ಲಿ, ಅಥವಾ ಬಡ್ಡಿಯ ಅಥವಾ ಎರಡೂ ರೂಪದಲ್ಲಿ ಕೃಷಿಕನು ಅಸಲಿಗಿಂತ 2 ಪಾಲಷ್ಟು ಐವೇಜನ್ನು ಪಾವತಿಮಾಡಿರುವದಾದರೆ ಅಂತಹ ಸಾಲವು ಅಸಲು ಸಮೇತ ಸಂಪೂರ್ಣ ಪರಿಹಾರವಾಯಿತೆಂದು ಪರಿಗಣಿಸಲ್ಪಡುತ್ತದೆ

ಅಸಲು, ಬಡ್ಡಿ ಅಥವಾ ಎರಡೂ ಕೂಡಿ ಪಾವತಿಯಾದ ಸಾಲದ ಹಣವು, ಅಸಲಿಗಿಂತ ಹೆಚ್ಚಾಗಿದ್ದು, ಅಸಲಿನ ದುಬಾರಿಗಿಂತ ಕಡಿಮೆಯಾಗಿದ್ದ ಪಕ್ಷದಲ್ಲಿ ಈ ಕಡಿಮೆ ಅಂಶದ ಮೊಬಲಗನ್ನು ವ ಅಸಲು ಐವೇಜನ್ನು ವ ಬಾಕಿಯಿರುವ ಅಸಲಿನ ಅಂಶವಾದ ಐವೇಜನ್ನು ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮಾತ್ರ ಕೊಟ್ಟರೆ ಸಾಕಾಗಿದೆ.

ಒಂದು ಸಾಲವು ನವೀಕರಿಸಲ್ಪಟ್ಟಿದ್ದರೆ, ಅಥವಾ ಆರಂಭದಲ್ಲಿ ಸಾಲಕೊಟ್ಟವನಿಗೆ ಮಾಡಿಕೊಟ್ಟ ದಾಖಲೆಯಲ್ಲಿ ಅದು ಸೇರಿದ್ದರೆ, ಸಾಲಕೊಟ್ಟವನು ಮೂಲದಲ್ಲಿ ಕೊಟ್ಟ ಅಸಲು ಮತ್ತು ಅದರೊಂದಿಗೆ ಅನಂತರ ಏನಾದರೂ ಅಸಲು ಐವೇಜು ಕೊಟ್ಟಿದ್ದರೆ ಅದು ಮಾತ್ರ ಕೂಡಿ ಕೃಷಿಕನು ತೆರಬೇಕಾಗಿರುವ ಅಸಲು ಐವೇಜಾಗಿ ಪರಿಗಣಿಸಲ್ಪಡುತ್ತದೆ

(ಬ) 1–10–1932ರ ಅನಂತರದ ಸಾಲಗಳ ಮೇಲಿನ ರಿಯಾಯತಿ.

ಈ ಸಾಲಗಳ ಬಾಕಿಯಾದ ಅಸಲು ಅಥವಾ ಅಸಲಿನ ಅಂಶವನ್ನು ಪೂರ್ಣವಾಗಿ ತೆರಲಿಕ್ಕೆ ಕೃಷಿಕನು ಬಾಧ್ಯನಾಗಿರುತ್ತಾನೆ. ಈ ಸಾಲಗಳ ಮೇಲಿನ ಬಡ್ಡಿಯ ಮೇಲೆ ಮಾತ್ರ ರಿಯಾಯತಿ ಇರುತ್ತದೆ ಸಾಲಿಯಾನ ಸೇಕಡಾ 5ರಂತೆ ಸರಳ ಬಡ್ಡಿ ದರದ ಪ್ರಕಾರ ಬಡ್ಡಿಯನ್ನು ಕೊಡಬೇಕಾಗಿದೆ ಮೊದಲೇ ಕೃಷಿಕನು ಹೆಚ್ಚಿಗೆ ದರದಲ್ಲಿ ಬಡ್ಡಿಯನ್ನು ಪಾವತಿ ಮಾಡಿರುವನಾದರೆ, ಸೇಕಡಾ 5ರಂತೆ ಬಡ್ಡಿ ಲೆಕ್ಕ ಮಾಡಿ, ಪಾವತಿಯಾಗಬೇಕಾದ ಬಡ್ಡಿ ಹಣದಲ್ಲಿ ಪಾವತಿಯಾದ ಬಡ್ಡಿ ಹಣವನ್ನು ಕಳೆದು ಉಳಿದ ಅಂಶವನ್ನು ಮಾತ್ರ ಅವನು ಸಾಲ ಕೊಟ್ಟವನಿಗೆ ಬಡ್ಡಿರೂಪವಾಗಿ ಅಸಲಿನೊಂದಿಗೆ ಕೊಟ್ಟರೆ ಸಾಕಾಗಿದೆ

೩ ಮುಂದಿನ ಬಡ್ಡಿ

22–3–1938ನೇ ತಾರೀಕಿನಿಂದ ಮುಂದೆ ಆದ ಕೃಷಿಕನ ಸಾಲಗಳ ಮೇಲೆ ತಿಂಗಳಿಗೆ ಒಂದು ರೂಪಾಯಿ ಮೇಲೆ ಒಂದು ಪೈಯಂತೆ ಅಥವಾ ವರ್ಷಕ್ಕೆ ರೂಪಾಯಿಗೆ ಒಂದಾಣೆಯಂತೆ, ಅಂದರೆ ಸೇಕಡಾ ೬॥ರ ಸಲೆ ಸರಳ ಬಡ್ಡಿ ನಡೆಯಬೇಕಾಗಿದೆ

೪. ಕಾನೂನಿನ ಪ್ರಯೋಜನ ಯಾರಿಗೆ?

ಮದ್ರಾಸು ಸಂಸ್ಥಾನದೊಳಗಣ ಮುನಿಸಿಪಾಲಿಟಿ ಅಥವಾ ಕಂಟೋನಮೆಂಟಿನ ಒಳಗಿರದ ಬೇಸಾಯ ಭೂಮಿಯಲ್ಲಿ ಪಾಲುವ ಹಕ್ಕುಳ್ಳ ಎಲ್ಲ ಜನರಿಗೆ ಈ ಕಾನೂನಿನ ಪ್ರಯೋಜನವು ಸಿಕ್ಕುವದು ಜಮೀನದಾರರ ಅಥವಾ ಇನಾಮುದಾರರ ಅಧೀನದಲ್ಲಿ ಉತ್ತಿ ಬಿತ್ತಿ ಬೆಳೆಮಾಡುವಂಥ ಒಕ್ಕಲಿಗರು ಮತ್ತು ರೈತರಿಗೆ ಕೂಡ ಈ ಕಾನೂನಿನ ಪ್ರಯೋಜನವು ಸಿಕ್ಕುವದು, ಹಾಗೆಯೆ, ವ ... ಅಧೀನದಲ್ಲಿರುವ ಕನಮ್ದಾರ, ಕ ... ಕನಮ್ದಾರ ಮತ್ತು ವೆರುಮ್ ಪಟ್ಟಮ್ದಾರರಿಗೆ ಸಹ ಈ ಕಾನೂನಿನ ಪ್ರಯೋಜನ ದೊರೆಯುವದು. ಮತ್ತು ಗೇಣಿದಾರ, ಒಳಗೇಣಿದಾರರಿಗೆ ಸಹ ಈ ಕಾನೂನಿನ ಪ್ರಯೋಜನ ದೊರೆಯುವದು

ಪರಂತು ದೊಡ್ಡ ದೊಡ್ಡ ಜಮೀನದಾರರೂ, ಜಸ್ಮಿಗಳೂ, ಮಾಲ್ಗುಜಾರರಿಗೆ ಈ ಕಾನೂನಿನ ಪ್ರಯೋಜನವು ಸಿಕ್ಕುವದಿಲ್ಲ 500 ರೂಪಾಯಿಗಿಂತ ಹೆಚ್ಚಿಗೆ ಕಿಸ್ತ್ ಕೊಡುವ ಭೂಮಾಲಿಕ ಅಷ್ಟು ಮೊಬಲಗಿಂತ ಹೆಚ್ಚಿಗೆ ಪೇಶಕಶ್ ಕೊಡುವ ಜಮೀನುದಾರ ಅಥವಾ ಜಸ್ಮಿ, ನೂರು ರೂಪಾಯಿಗಿಂತ ಹೆಚ್ಚಿಗೆ ಗೇಣಿ ಅದವಾ ಜೋಡಿ ಕೊಡುವ ಇನಾಮುದಾರರಿಗೆ ಈ ಕಾನೂನಿನ ಪ್ರಯೋಜನವು ದೊರೆಯದು. ಬಡ್ಡಿ ಆದರೆ ... ಪಟ್ಟಾದಾರರು ... ಕಂದಾಯವು, ಗೇಣಿ ಕೊಡುತಿದ್ದರು, ಅವರಿಗೆ ಕಾನೂನಿನ ಪ್ರಯೋಜನವು ದೊರೆಯುತ್ತದೆ ... ವಾಗಿ ಸಾಲದ ಹಣವನ್ನು ಸಾಲಕೊಟ್ಟವರಿಗೆ ... ಕೃಷಿಕರಿಗೆ ಕೂಡ ಈ ಕಾನೂನಿನ ಪ್ರಯೋಜನವು ಸಿಕ್ಕುತ್ತದೆ

೫ ಯಾರಿಗೆ ಈ ಕಾನೂನಿನ ಪ್ರಯೋಜನವು ಸಿಕ್ಕುವದಿಲ್ಲ

1936–37 ಅಥವಾ 1937–38ರಲ್ಲಿ ಆದಾಯ ತೆರಿಗೆ ಹೊರಿಸಲ್ಪಟ್ಟ ಕೃಷಿಕರ ಅಥವಾ ಮುನಿಸಿಪಾಲಿಟಿ, ಕಂಟೋನಮೆಂಟು ಅಥವಾ ಹಿಂದೆ ಯೂನಿಯನ ಆಗಿದ್ದ ಪಂಚಾಯತ ಕ್ಷೇತ್ರದಲ್ಲಿ 300 ರೂಪಾಯಿಗಳಿಗಿಂತ ಹೆಚ್ಚಿಗೆ ವಾರ್ಷಿಕ ಆದಾಯದ ಮೇಲೆ ... ತೆರಿಗೆ ಹೊರಿಸಲ್ಪಟ್ಟ ಕೃಷಿಕರ ಮತ್ತು ... 600ಗಿಂತ ಹೆಚ್ಚಿಗೆ ಗೇಣಿ ಬಾಡಿಗೆ ಬರುವ ಸ್ಥಳ, ಮನೆಗಳ ಮೇಲೆ ತೆರಿಗೆ ಕೊಟ್ಟ ಕೃಷಿಕರಿಗೆ ಈ ಕಾನೂನಿನ ರಿಯಾಯತಿಗಳು ಇರುವದಿಲ್ಲ.

೬ ಕಾನೂನಿನಿಂದ ವಿನಾಯತಿ ಹೊಂದಿದ ಸಾಲಗಳು

ಈ ಕೆಳಗೆ ಕಾಣುವ ಸಾಲಗಳ ಮೇಲಿನ ಅಸಲು ಬಡ್ಡಿ ಬಾಕಿಯಾದ ಐವೇಜನ್ನು ಕೃಷಿಕರು ಪೂರ್ಣವಾಗಿ ಕೊಡಬೇಕಾಗಿರುತ್ತದೆ.

1 ಬಡ್ಡಿ ... ದಸ್ತಾವೇಜುಗಳ ಮೇಲಿನ ಸಾಲಗಳು

2 ... ಸ್ಥಿರಾಸ್ತಿ ಮೇಲೆ ಬರಬೇಕಾದ ಹಣದ ಬಾಕಿಯ ಸಾಲಗಳು

3 ... ಸಾಲಿಯಾನ ಸೇಕಡಾ 9ಕ್ಕೆ ... ಇರದ ಸಂದರ್ಭದಲ್ಲಿ ಸಾರ್ವಜನಿಕ ಕಂಪನಿ ಅಥವಾ ಬ್ಯಾಂಕಿಗೆ ಸಲತಕ್ಕ ಸಾಲಗಳು.

(೮ನೇ ಪುಟವನ್ನು ನೋಡಬಹುದು)

ಸ್ವಚ್ಛವಾದ ಉದರಗಳು –ಬೇನೆರಹಿತವಾಗಿವೆ

ಉದರ ತೊಡಕುಗಳಿಂದ ಉಂಟಾಗಬಹುದಾದ, ಅಜೀರ್ಣತೆ, ಅಸೌಖ್ಯ, ವಾಯು ಇತ್ಯಾದಿಗಳನ್ನು ಅಲಕ್ಷಿಸಲಾಗದು. ಉದರದೊಳಗಿನ ಕರುಳುಗಳ ಕಾರ್ಯವು ಸರಾಗವಾಗಿ ನಡೆಯದಿದ್ದರೆ ಕೆಡುಕಾದ ಜೀರ್ಣರಸಗಳಿಂದಲೂ, ನಿಮಗೆ ಸಹಿಸಲಾಗದ ಹೊಟ್ಟೆನೋವಿಗೆ ಕಾರಣವಾಗಬಹುದು ಇಂಥ ಅಸ್ವಚ್ಛ ಪದಾರ್ಥಗಳನ್ನು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಮಾತ್ರ ಹೊರಗೆಡಹುವದು ಇನೊಸನ್ನು ಇಂದಿನಿಂದಲೇ ಕುಡಿಯಲು ಪ್ರಾರಂಭಿಸಿ, ನಿಮ್ಮ ಉದರ ಅಸೌಖ್ಯಗಳಿಂದ ಪಾರಾಗಿರಿ

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ. ಮಾಗಿದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳಿಂದ ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ತಯಾರಿಸಲ್ಪಟ್ಟಿರುತ್ತದೆ ಇನೋವಿನ ಪ್ರತಿಯೊಂದು ಗುಟುಕು ಅದರ ಬೆಲೆಯನ್ನು ಇಳಿಸಬಲ್ಲದು. ಎಲ್ಲಾ ಕಡೆಗಳಲ್ಲಿಯೂ ನೂರು ಪರಿಮಾಣದಲ್ಲಿ ಮಾರಲ್ಪಡುತ್ತದೆ

"ಇದು ಟ್ರೇಡ್‌ಮಾರ್ಕ್ ... ಇನೊಸ್ ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ ... "

EVK 3

ಶ್ರೇಷ್ಠವಾದ ಕಾಂತಿಯುಂಟುಮಾಡುವ ಸೋಪು

ಪೀಯರ್ಸ್ ಸೋಪು ಕಾಂತಿಯುಂಟುಮಾಡುವುದರಲ್ಲಿ ಅದ್ವಿತೀಯವಾದುದೆಂಬುದಕ್ಕೆ ಮೂರು ಕಾರಣಗಳಿವೆ ಮೊದಲನೆಯದು, ಅದರ ಮೂಲಕವಾಗಿ ನೋಡಬಹುದಾದಷ್ಟು ಅದು ಸ್ವಚ್ಛವಾಗಿದೆ ಎರಡನೆಯದು, ಅದರ ನುಣ್ಣಗಿನ ಮತ್ತು ಸೊಗಸಾದ ನೊರೆಯು ಚರ್ಮವನ್ನು ಭೇದಿಸುವುದಲ್ಲದೆ ಸರ್ವಾಂಗವನ್ನೂ ಶುದ್ಧಮಾಡುತ್ತದೆ ಮೂರನೆಯದಾಗಿ, ಚರ್ಮವೃದ್ಧಿಯನ್ನುಂಟುಮಾಡುವುದರಲ್ಲಿ ಅದು ಅದ್ಭುತಶಕ್ತಿಯುಳ್ಳದ್ದಾಗಿದೆ ಚರ್ಮಕ್ಕೆ ಹೊಸಜೀವ, ಹೊಸಬಲ, ಹೊಸಸೌಂದರ್ಯವನ್ನುಂಟುಮಾಡುತ್ತದೆ ಪೀಯರ್ಸನ್ನು ಕೆಲವು ವಾರ ಉಪಯೋಗಿಸಿರಿ, ಆಮೇಲೆ ಕನ್ನಡಿಯಲ್ಲಿ ನಿಮ್ಮನ್ನು ನೋಡಿರಿ

'ದೇಹಕಾಂತಿಯನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದು.

A. & F. PEARS LTD. ISLEWORTH ENGLAND

I.T.G.

ಮದ್ರಾಸು ಕೃಷಿಕರ ಸಾಲನಿವಾರಣಾ ಕಾನೂನು

4. ಕೋರ್ಟುಗಳಿಂದ ವ್ಯಾಜ್ಯದ ಖರ್ಚು ಎಂದು ವಿಧಿಸಲ್ಪಡಾದ ಸಾಲಗಳು.

5. ಅಡವು ಹಾಕಿದ ಆಸ್ತಿಯ ಜೋಪಾನದ ಬಗ್ಗೆ ಖರ್ಚು ಮಾಡಿದ ಹಣದ ಸಾಲಗಳು.

6. ಸರಕಾರಕ್ಕೆ ಅಥವಾ ಸ್ಥಳೀಯ ಸರಕಾರ ಸಂಸ್ಥೆಗಳಿಗೆ ಪಾವತಿಯಾಗಬೇಕಾದ ಹಣದ ಸಾಲಗಳು.

7. ಮುನಿಸಿಪಾಲಿಟಿ, ಕಂಟೋನ್ಮೆಂಟು ಅಥವಾ ಹಿಂದೆ ಯೂನಿಯನ ಆಗಿದ್ದ ಪಂಚಾಯತ ಕ್ಷೇತ್ರದಲ್ಲಿಯ ಮನೆ ಆಸ್ತಿ ಅಡವಿನ ಸಾಲಗಳು.

8. ಪರಸ್ಪರ ಸಹಾಯಕ ಸಂಘ ಅಥವಾ ಜಮೀನು ಅಡಮಾನ ಬೇಂಕುಗಳಿಗೆ ಸಲಬೇಕಾದ ಸಾಲಗಳು.

9. ವಾಸ ಮಾಡಿಕೊಂಡು ಬರುವ ಮನೆ ತೊಟ್ಟು ಉಟ್ಟು ಬಂದಿರುವ ಆಭರಣ, ಉಡಿಗೆ ತೊಡಿಗೆಗಳನ್ನು ಮಾಡಿ, ಹೊರತು ಜೀವನಕ್ಕೆ ಬೇರೆ ಯಾವ ಆಧಾರವೂ ಇಲ್ಲದಿದ್ದ ಒಬ್ಬ ವಿಧವೆಯು ಕೊಟ್ಟ ಸಾಲದ ಅಸಲು ಹಣವು 1—10—37ರ ದಿನ 3000 ರೂಪಾಯಿಗಳಿಗೆ ಮೀರದೆ ಇರುವದಾದರೆ, ಅಂಥ ವಿಧವೆಯರು ಕೊಟ್ಟ ಸಾಲಗಳು

10 ಕೃಷಿ ಅಥವಾ ಹಳ್ಳಿ ಕೆಲಸಗಾರರಿಗೆ ಸಲ್ಲಬೇಕಾದ ಮಜೂರಿ

11. ವಿಶ್ವಾಸಘಾತುಕ ತನದ ನಿಮಿತ್ತ ಕೊಡಬೇಕಾದ ಸಾಲಗಳು

12. ಅಶನಾರ್ಥದ ಹಣ ಮತ್ತು ಸಾಲ.

೭. ಅವಿಭಕ್ತ ಕುಟುಂಬಗಳು

ಅವಿಭಕ್ತ ಕುಟುಂಬಗಳಾದರೂ ಈ ಕಾನೂನಿನ ಪ್ರಯೋಜನ ಪಡೆಯುವವು ಇಡೀ ಕುಟುಂಬದ ಮೇಲೆ ಆದಾಯ, ಮನೆ, ಸ್ಥಳ ಅಥವಾ ವೃತ್ತಿ ಕರಗಳು ಹೊರಿಸಲ್ಪಟ್ಟಿರುವದಾದರೆ ಆ ಕುಟುಂಬ ಅಥವಾ ಅವರ ಯಾರೇ ಒಬ್ಬ ಮೆಂಬರನು ಕೃಷಿಕನೆಂದು ಪರಿಗಣಿಸಲ್ಪಡುವದಿಲ್ಲ. ಕುಟುಂಬದ ಕೆಲವು ಮೆಂಬರರು ಕೃಷಿಕರಾಗಿದ್ದು ಉಳಿದವರು ಕೃಷಿಕರಲ್ಲದವರಾಗಿರುವದಾದರೆ, ಕುಟುಂಬದ ಸಾಲವನ್ನು ಆ ಮೆಂಬರರೊಳಗೆ ದಾಯಭಾಗದ ಪ್ರಕಾರ ಹಂಚಿ ಹಾಕಲಾಗಿ ಕೃಷಿಕರ ಸಾಲ ಮತ್ತು ಕೃಷಿಕರಲ್ಲದವರ ಸಾಲವು ಎಷ್ಟೆಂದು ತಿಳಿದುಕೊಳ್ಳಲಾಗುವದು ಕೃಷಿಕರಲ್ಲದವರು ತಮ್ಮ ಪಾಲಿನ ಸಾಲದ ಮೊಬಲಗನ್ನು ಪೂರ್ಣ ತೆರಲಿಕ್ಕೆ ಬದ್ಧರಾಗಿರುತ್ತಾರೆ ಕೃಷಿಕ ಮೆಂಬರರ ಸಾಲಗಳಿಗೆ ಮಾತ್ರ ಕಾನೂನಿನ ಪ್ರಕಾರ ರಿಯಾಯತಿ ದೊರೆಯುತ್ತದೆ ಮತ್ತು ಅವುಗಳನ್ನು ಕಾನೂನು ಕ್ರಮವನ್ನನುಸರಿಸಿ ತಗ್ಗಿಸಲಾಗುತ್ತದೆ

೮. ಕೋರ್ಟು ಡಿಕ್ರಿಗಳಲ್ಲಿ ಬದಲಾವಣೆ

ಈ ಕಾನೂನಿಗನುಗುಣವಾಗಿ 'ಸಾಲ'ಗಳೆಂದರೆ 'ಡಿಕ್ರಿ ಸಾಲ'ಗಳು ಕೂಡ ಆಗಿರುತ್ತವೆ. ಅದ ಕಾರಣ 22—3-38ರೊಳಗಾಗಿ ಡಿಕ್ರಿ ಸಮಾಧಾನ ಆಗದ ಸಾಲಗಳನ್ನು ಕೂಡ, ಕೃಷಿಕ ಸಾಲಗಾರನು ಕೋರ್ಟಿಗೆ ಅರ್ಜಿ ಮಾಡಿದನಾದರೆ, ಕಾನೂನು ಕ್ರಮವನ್ನು ಅನುಸರಿಸಿ ತಗ್ಗಿಸಲಾಗುವದು.

ಅಮಲ್ಜಾರಿ ನಡೆಯುತ್ತಿರುವ ಪಕ್ಷಕ್ಕೆ, ಸಾಲಗಾರನು ಅರ್ಜಿ ಕೊಟ್ಟನಾದರೆ, ಅಮಲ್ಜಾರಿಯನ್ನು ತತ್ಕಾಲ ಬಾಕಿ ಇಡಲಾಗುವದು. ಹೀಗೆ ಬಾಕಿಯಿಟ್ಟು 60 ದಿವಸಗಳೊಳಗಾಗಿ ಅವನು ಡಿಕ್ರಿ ಬದಲಾವಣೆ ಬಗ್ಗೆ ಕೋರ್ಟಿಗೆ ಪ್ರತ್ಯೇಕ ಅರ್ಜಿ ಮಾಡತಕ್ಕದ್ದು.

೯. ಸೊತ್ತು ಮಾರಾಟದ ರದ್ದತಿ

1—10—37ರ ಅನಂತರ ದಾಖಲು ಮಾಡಲ್ಪಟ್ಟ ವ್ಯಾಜ್ಯದ ಖರ್ಚನ್ನು ಕೂಡ ಈ ಕಾನೂನು ಕ್ರಮವನ್ನನುಸರಿಸಿ ತಗ್ಗಿಸಲಾಗುತ್ತದೆ

ಕೃಷಿಕನೊಬ್ಬನ ಹಕ್ಕಿನ ಸ್ಥಿರ ಸೊತ್ತೇನಾದರೂ 1—10—37ರ ಅನಂತರ ಕೋರ್ಟು ಮೂಲಕ ವಿಕ್ರಯಿಸಲ್ಪಟ್ಟಿರುವದಾದರೆ, ಅಥವಾ ಅಮಾನತಾಗಿ ಇರಿಸಲ್ಪಟ್ಟಿರುವದಾದರೆ, 22—3—38ರಿಂದ 90 ದಿವಸಗಳ ಒಳಗಾಗಿ ಕೃಷಿಕ ಸಾಲಗಾರನು ಆ ಮಾರಾಟ ಅಥವಾ ಅಮಾನತು ರದ್ದು ಮಾಡಿಸಲು ಅರ್ಜಿ ಮಾಡಲಿಕ್ಕೆ ಹಕ್ಕುಳ್ಳವನಾಗಿರುತ್ತಾನೆ ಆದರೆ ಸಾಲಕೊಟ್ಟವನ ಹಕ್ಕು ಬಾಧ್ಯತೆಗಳಿಗೆ ರಕ್ಷಣೆ ಕೊಡುವದಕ್ಕೋಸ್ಕರ ಅಂಥ ಸಂದರ್ಭಗಳಲ್ಲಿ ಸಾಲಗಾರನು 1—10—37ರ ಅನಂತರ ಮಾಡಿದ ಸ್ಥಿರಾಸ್ತಿ ಪರಾಧಾರಿಗಳೆಲ್ಲವೂ 'ಸಿಂಧು'ವೆಂದು ಪರಿಗಣಿಸಲ್ಪಡುವದಿಲ್ಲವಾಗಿ ಈ ಕಾನೂನು ವಿಧಿಸುತ್ತದೆ

ಕೃಷಿಕನೊಬ್ಬನ ಚರಾಸ್ತಿಯು 1 10 37ರ ಅನಂತರ ಕೋರ್ಟು ಮೂಲಕ ಮಾರಾಟವಾಗಿರುವದಾದರೆ ಅಂಥ ಮಾರಾಟವು ರದ್ದಾಗುವದಿಲ್ಲ ಪರಂತು ಅಂಥ ಚರಸೊತ್ತು ಮಾರಾಟವಾಗದೆ ಇದ್ದ ಸಂದರ್ಭದಲ್ಲಿ ಸಾಲಕೊಟ್ಟವನು ಪಡೆಯಲು ಅರ್ಹನಾಗುತ್ತಿದ್ದ ಐವೇಜಗಿಂತ ಹೆಚ್ಚಿಗೆಯಾಗಿ 1—10—37ರಲ್ಲಿ ಅಥವಾ ಅನಂತರ ಪಡೆದ ಹಣವನ್ನು ಮರುಪಾವತಿ ಮಾಡುವಂತೆ ಹುಕುಮು ಆಗುತ್ತದೆ

೧೦. ಸಂಗಡ್ಯಾವ್ಯಾಸಾರಗಳನ್ನು ತಿಳಿಸುವದು

ಸಾಲ ಕೊಟ್ಟವನೊಬ್ಬನು ತನ್ನ ಸಾಲಗಾರನ ಒಂದು ಜಿಲ್ಲೆ ಕೆಂಟೋನ್‌ಮೆಂಟ್, ಮುನಿಸಿಪಾಲಿಟಿ ಅಥವಾ ಯೂನಿಯನ್ ಆಗಿದ್ದ ಪಂಚಾಯತ ಕ್ಷೇತ್ರದಲ್ಲಿ ಆದಾಯ, ವೃತ್ತಿ, ಸ್ಥಳ ಅಥವಾ ಮನೆಕರಗಳ ಕೊಡುತ್ತಿರುವನೋ ಎಂದು ಕೇಳಿ ಜಿಲ್ಲೆಯ ಕಲೆಕ್ಟರ, ಮುನಿಸಿಪಾಲಿಟಿ ಅಥವಾ ಲೋಕಲ್ ಬೋರ್ಡುಗಳ ಕಮಿಶನರ ಎಗ್ಜಿಕ್ಯೂಟಿವ್ ಆಫೀಸರರಿಗೆ ಅರ್ಜಿ ಮಾಡಲಿಕ್ಕೆ ಹಕ್ಕುಳ್ಳವರಾಗಿದ್ದಾರೆ ಅವರು ಕೊಟ್ಟ ಅನುಭವವು ಕೋರ್ಟುಗಳಲ್ಲಿ ರುಜುವಾತಾಗಿ ಪರಿಗಣಿಸಲ್ಪಡುತ್ತದೆ

೧೧. ಗೇಣಿ ಬಾಕಿಯನ್ನು ಹೊಡೆದು ಹಾಕುವದು

ಮದ್ರಾಸು ಎಸ್ಟೇಟ್ಸ್ ಲೇಂಡ್ ಏಕ್ಟ್ ಪ್ರಕಾರ ಜಮೀನುದಾರರು ಅಥವಾ ಗೇಣಿ ವಸೂಲಿಗಾರರಿಗೆ ಅಥವಾ ಮಲಬಾರ ಟೆನನ್ಸಿ ಏಕ್ಟಿನ ಪ್ರಕಾರ ಜನ್ಮಿಗಳು ಅಥವಾ ಅವರ ಏಜಂಟರಿಗೆ 1845 ಅಥವಾ ಅದರ ಹಿಂದಿನ ಫಸಲಿಗಳ ಬಗ್ಗೆ ಬಾಕಿಯಾದ ಗೇಣಿಯನ್ನು ಕೆಳಗಿನ ಕಾಣುವ ಎರಡು ಶರ್ತಗಳಿಗೊಳಪಟ್ಟು ಪಾವತಿ ಕೊಡತಕ್ಕದಿಲ್ಲವೆಂದು ಹೊಡೆದು ಹಾಕಲಾಗುತ್ತದೆ. ಆ ಶರ್ತಗಳು ಯಾವುವೆಂದರೆ—1847ನೇ ಫಸಲಿಯ ಗೇಣಿಯನ್ನು 30-9—38ರ ಒಳಗೆ ಪೂರ್ತಿ ಸಂದಾಯ ಮಾಡತಕ್ಕದ್ದು, ಮತ್ತು 1846ರ ಗೇಣಿ ಬಾಕಿಯನ್ನು 30-9-1939ರ ಒಳಗಾಗಿ ಸಂದಾಯ ಮಾಡತಕ್ಕದ್ದು ಹೀಗೆ 30-9—38ರ ಒಳಗೆ 1847ನೆ ಫಸಲಿಯ ಗೇಣಿಯನ್ನು ಪೂರ್ತಿಯಾಗಿ ಕೊಟ್ಟರ ತ್ತಾ, 30—9-39ರೊಳಗೆ 1846ನೆ ಫಸಲಿಯ ಗೇಣಿ ಬಾಕಿಯ ಒಂದಂಶವನ್ನು ಮಾತ್ರ ತೆತ್ತಿರುವನಾದರೆ, ಈ ಎರಡು ಫಸಲಿಗಳ ಗೇಣಿಯಲ್ಲಿ ಯಾವ ಅಂಶವನ್ನು ಪಾವತಿ ಮಾಡಿದ್ದಾನೋ ಅದೇ ಅಂಶದಲ್ಲಿ 1845ನೆ ಫಸಲಿ ಮತ್ತು ಅದರ ಹಿಂದಿನ ಫಸಲಿಗಳ ಬಗ್ಗೆ ಬಾಕಿಯಾದ ಗೇಣಿಯಲ್ಲಿ ನೋಡಿ ಬಿಡಲಾಗುತ್ತದೆ

ಮದ್ರಾಸು ಲೋಕಲ್ ಬೋರ್ಡು ಏಕ್ಟಿನ ಪ್ರಕಾರ ಜಮೀನುದಾರನು ವಸೂಲು ಮಾಡುವ ಲೇಂಡಸೆಸ್ಸು, ಒಕ್ಕಲು ಪಾವತಿ ಮಾಡಬೇಕಾದ ಕಂದಾಯ ಮತ್ತು ನೀರು ಕರಗಿ, ಗೇಣಿ ವ್ಯಾಜ್ಯದಲ್ಲಿನ ಕೋರ್ಟು ಖರ್ಚು ಇವುಗಳಲ್ಲಿ ರಿಯಾಯತಿ ಇರುವದಿಲ್ಲ. ಇವುಗಳನ್ನು 1846, 1847ನೆ ಫಸಲಿಗಳ ಗೇಣಿಯೊಡನೆಗೇ ವಸೂಲು ಮಾಡಲಿಕ್ಕೆ ಜಮೀನುದಾರನ ಹಕ್ಕುಳ್ಳವನಾಗಿದ್ದಾನೆ

ಮದ್ರಾಸು ಎಸ್ಟೇಟ್ಸ್ ಲೇಂಡ್ ಎಮೆಂಡ್‌ಮೆಂಟ್ ಏಕ್ಟ್ (1934ನೆ ಇಸವಿಯ ಮದ್ರಾಸ VIII ಏಕ್ಟು) ಪ್ರಕಾರ ಗೇಣಿ ವಸೂಲಿಯನ್ನು ಬಾಕಿಯಿಟ್ಟಿರುವದಾದರೆ 1846ನೆ ಫಸಲಿಯ ಗೇಣಿಯನ್ನು ಒಕ್ಕಲುಗಳು ಕೊಡಲಿಕ್ಕೆ ಸಿದ್ಧರಾಗಿದ್ದಾರೆ ಆದರೆ ಈ ಪಾವತಿ ತಾರೀಕನ್ನು ಸ್ವಲ್ಪ ಅವಧಿಗೆ ಮುಂದುವರಿಸಿ ಹಾಕಬಹುದು

22 10-1938ರ ಅನಂತರ ಒಕ್ಕಲು ಮಾಡುವ ಪಾವತಿಯನ್ನು ಮೊದಲಿಗೆ 1847ರ ಅನಂತರ 1846ರ ಗೇಣಿ ಬಗ್ಗೆ ವಸೂಲು ಬರೆದುಕೊಳ್ಳಬೇಕು. ತಾನು ಕೊಡಬೇಕಾದ ಗೇಣಿಯನ್ನು ಕೋರ್ಟಿನಲ್ಲಿ ಕಟ್ಟಿ ಇನ್ನೆಷ್ಟು ತನ್ನ ಮೇಲೆ ಗೇಣಿ ಬಾಕಿಯಾಗಿದೆ ಎಂದು ಕೋರ್ಟಿನಿಂದ ತಿಳಕೊಳ್ಳಲಿಕ್ಕೆ ಒಕ್ಕಲು ಅರ್ಹನಾಗಿದ್ದಾನೆ.

ಹೊಟ್ಟೆಹುಣ್ಣುಗಳು ಗುಣವಾದುವು

ಮಿಸೆಸ್ ನೊರ್ಮನಳು, ಈಗ ಸಂತುಷ್ಟ ಹೊಂದಿದವಳಾಗಿದ್ದಾಳೆ. ಬಹಳ ಸಮಯ, ಸಂಕಟ ಅನುಭವಿಸಿದ ಆಕೆಯು, ಕೊನೆಗೆ ಗುಣ ಹೊಂದಿದಳು "ಹೊಟ್ಟೆ ಹುಣ್ಣುಗಳಿಂದ ಹೇಗೆ ಗುಣ ಹೊಂದಿದೆನೆಂಬುದಾಗಿ, ನಿಮಗೆ ತಿಳಿಸಬೇಕೆಂದು ನನಗೆಣಿಸುತ್ತದೆ.

"ಅನೇಕ ವರ್ಷಗಳಿಂದ ಹೊಟ್ಟೆವ್ರಣಗಳಿಂದ ಪೀಡಿತನಾಗಿದ್ದೆನು. ಅನೇಕ ಔಷಧ ಸೇವಿಸಿದರೂ, ಶಮನವಾಗಲಿಲ್ಲ ಕಳೆದ ಒಕ್ಟೋಬರದಲ್ಲಿ ಹೊಟ್ಟೆ ವ್ರಣಗಳಿಂದ, ನಾನು ಅತ್ಯಂತ ಸಂಕಟವನ್ನು ಹೊಂದುವವಳಾದೆ ಪರೀಕ್ಷಾರ್ಥವಾಗಿ ಮೆಕ್ಲೀನ್ ಬ್ರೇಂಡ್ ಹುಡಿಯನ್ನು ತರಲು, ನನ್ನ ಪತಿಯೊಡನೆ ಹೇಳಿಕೊಂಡೆನು ಬರೀ ಎರಡು ಡೋಸುಗಳ ಸೇವನೆಯಿಂದ, ನನಗೆ ಶಮನವು ದೊರಕಿತು ನಂತರ, ಪ್ರತಿರಾತ್ರೆ ಮಲಗುವ ಮೊದಲು, ಒಂದಿಷ್ಟು ಮೆಕ್ಲೀನ್ ಹುಡಿಯನ್ನು ಸೇವಿಸುವುದು ನನ್ನ ಕ್ರಮವು ಅಲ್ಲದೆ ಸಂಕಟವು ತಲೆ ಎತ್ತಿದರೆ, ಆಗಲೂ ಮೆಕ್ಲೀನ್ ಹುಡಿಯನ್ನು ಸೇವಿಸಿದರೆ ಸರಿ ಕೂಡಲೆ ಶಮನವು ದೊರಕುವುದು ಹೊಟ್ಟೆ ಸಂಕಟ ಪೀಡಿತರೆಲ್ಲರೂ ಈ ಹುಡಿಯನ್ನು ಉಪಯೋಗಿಸಬಹುದಾಗಿ ಈ ಮೂಲಕ ನನ್ನ ಶಿಫಾರಸು"

ಹೊಟ್ಟೆಯ ಪೀಡೆಗಳು ಯಾವುದೇ ತರದ್ದಾಗಿರಲಿ, ಮೆಕ್ಲೀನ್ ಬ್ರೇಂಡಿನ ಶ್ರೇಷ್ಠ ಗುಣಗಳಿಂದಾಗಿ ಒಡನೆ ಸುಖದಾಯಕ ಶಮನವು ದೊರಕುವುದು ಅನೇಕರು ಅತ್ಯಂತ ಭಯಂಕರ ಹೊಟ್ಟೆ ಪೀಡೆಗಳನ್ನು ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

ಎಂಬ ಸಹಿಯಿರುವಂತೆಯೂ, ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿ ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ

—ಇಂಥಹ ನಮೂನೆಯ ಕಡಿಮೆ ದರದ ಪರಕೀಯ ವಸ್ತುಗಳನ್ನು ಪಡೆದು ಮೋಸಹೋಗಬೇಡಿ ಇದು ಚಿಲ್ಲರೆಯಾಗಿ ಮಾರುವುದಿಲ್ಲ ಶೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ ಜೆ ಎಲ್ ಮೊರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್ ಸ್ಟೇಂಡಾರ್ಡ್ ಬಿಲ್ಡಿಂಗ್, ಹೊರ್ನ್ಬಿ ರೋಡ್, ಮುಂಬಯಿ

S No 73

KANTI

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕಾ 'ಕಾಂತಿ' ಟೊಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು.

'ಕಾಂತಿ' ಸಾಬೂನನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಲೆ ಜನರು ಶ್ಲಾಘಿಸಿ ಉಪಯೋಗಿಸುವರು

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ.

ಡಿಸ್ಟ್ರಿಬ್ಯುಟರರು:—
ಎಸ್. ಆರ್. ನ್ಯಾಕ್,
ಮಂಗಳೂರು.

ಸಿಲ್ಕ್ ಶರ್ಟಿಂಗ್

ಎಲ್ ಮೆಹರ್‌ಚಂದ್, ರಿಜಿಸ್ಟ್ರಾರ್, ಸುಕೆಟ್ ಸ್ಟೇಟ್, ಇವರು ತಾ 31 1 36 ರಲ್ಲಿ ಬರೆದಿರುವ ಕಾಗದದಲ್ಲಿ ಹೀಗೆಂದು ಹೇಳಿರುತ್ತಾರೆ -

[illegible]

ಸಿಲ್ಕ್ ಶರ್ಟಿಂಗ್.- ಶುದ್ಧ ಬಿಳಿದು, ಅತೀ ಉತ್ತಮ ಮತ್ತು ಹೆಚ್ಚು ಬಾಳಿಕೆ ಬರುವಂತಾದ್ದು ಹತ್ತಿಯ ನೂಲಿನಿಂದ ವಿರಹಿತವಾಗಿದೆ ಅತಿ ನುಣುಪಾಗಿಯೂ, ತಂಪಾಗಿಯೂ, ಸುಖಕರವಾಗಿಯೂ ಇದೆ ಎಷ್ಟು ಕಠಿಣವಾಗಿ ಒಗೆದರೂ ಬಾಳಿಕೆ ಬರಬಲ್ಲುದು 9 ಗಜ ಉದ್ದ, 54 ಇಂಚು ಅಗಲದ 6 ಶರ್ಟುಗಳ ವಸ್ತ್ರಕ್ಕೆ ಬೆಲೆ ರೂ 5 8 0

ಸಿಲ್ಕ್ ಸೀರೆಗಳು:- ಖಾತ್ರಿಯಾಗಿ ಬಣ್ಣಹೋಗದ [illegible] ಅಂಚುಗಳು ಸ್ವಾಜು 7, 8, 9, 10 ಗಜ ಉದ್ದ ಮತ್ತು 45 ಇಂಚು ಅಗಲ ಕಪ್ಪುಬಣ್ಣ ವಿರಹಿತ ಇತರ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುವು ಕ್ರಯ ರೂ 4 12 0, 5 9 0, 6 2 0 ಮತ್ತು 6 15 0 ಸಿಲ್ಕ್ ದುಪ್ಪಟಿಗಳು:- ಇವುಗಳ ಹೆಚ್ಚಿನ ಹೆಸರನ್ನು ಪಡೆದಿರುತ್ತವೆ ನಾವು ಪ್ರತ್ಯೇಕವಾಗಿ ಇವುಗಳ ಕುರಿತು ಹೇಳಬೇಕಾಗಿಲ್ಲ ಸೈಜ 2½ ಗಜ ಉದ್ದ, 44 ಇಂಚು ಅಗಲ ಕ್ರಯ ರೂ 2 ಮಾತ್ರ

[illegible]

ನಿಮ್ಮ ಹಣವನ್ನು ಹಿಂತಿರುಗಿಸಲು ನಾವು ಸಿದ್ಧರಿದ್ದೇವೆ

[illegible] 9 ಗಜ [illegible] ರೂ 5

GIRSON KNITTING WORKS, DEPT 74, LUDHIANA

MIRA TOILET ARTICLES

Toilet Soaps, Hair Oils, Brilliantine, Cream, Snow, Powders
Milk of Rose Lime Juee Glycerine, Shaving Stick,
Tooth Paste, Cologne etc, etc
and
erfumes are th e things to Augment your beauty, they make

EVERY HOME A BEAUTY PARLOUR.

Wanted Stockists throughout S Kanara & Malbar on decent terms

Sole Agents

The Modern Trading Company,

Opp City Press MANGALORE

Wanted Canvassers to Book orders for Mira Products on pay or commission

Buy Advertised Goods.

Scientific Opticians

Eye Testing Free.

STYLISH FRAMES, LENSES, CASES.

Please Visit

Nayaks Optical Stores
Car Street
MANGALORE

ಹಿಂದುಸ್ಥಾನ ಕೊ-ಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್

ಹೆಡ್ ಆಫೀಸು		ಸ್ಥಾಪನೆ
ಕಲ್ಕತ್ತಾ	ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ	1907

[illegible]	[illegible]	12 00 00 000
ಆಸ್ತಿಪಾಸ್ತಿಗಳ	[illegible]	2 21,00 000
ನೂತನ ವ್ಯವಹಾರ	[illegible]	2 82 81 000

ಅತ್ಯಧಿಕ ಬೋನಸ್ ಹಂಚಲಾಗಿದೆ

[illegible] ರೂ. 1000 [illegible] 23

[illegible]

For particulars please apply to

T ANANTACHARI,
BRANCH MANAGER H C I S LTD
POST BOX 223 MADRAS

K K MENON,
[illegible]
[illegible] CALICUT

ಪರಮಾ

[illegible]

ಗೊನೋಲೆಕ್ಸ (ರಿಜಿಸ್ಟರ್ಡ್)

[illegible]

[illegible] – ಸ್ಟ್ಯಾಂಡರ್ಡ್ ಫಾರ್ಮಸಿ,

[illegible]

[illegible] ಎಂ. ಡಿ ಪೈ [illegible] ಮತ್ತು ಕಂಪೆನಿ

[illegible]

The Bombay Life Assurance Company, Ltd.

ESTD: 1908

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,16,58,706
1930	59,07,500	9,83,367	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances Family Safe Guard Policy a special feature.
Application for agencies will be received from honest and respectable gentlemen
~~Organisers appointed with pay and allowance.~~
Gentlemen with organising ability and who can guarantee Business need apply

Apply to any of the following Offices:-

Kochikar Brothers, Ltd.,
(Incorporating Messrs Kochikar Brothers),
Madras Branch Secretaries.
Post Box 337, Mount Road, MADRAS.
Phone No 8245.

Ottapalam	Central Station Road, Trivandrum	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S India.	Chuni Road, Bombay No 4

ಗಾಂಧಿ–ವೈಸರಾಯ್ ಭೇಟಿ
ಫೆಡರೇಷನ್ ಮಾರ್ಪಾಟಾಗುವುದೇ?
೯೦ ನಿಮಿಷಗಳ ಸಂಭಾಷಣೆ

ಗಾಂಧಿಜಿಯವರಿಗೂ ವೈಸರಾಯರಿಗೂ ನಡೆದ 'ಚರಿತ್ರಾರ್ಹವಾದ ಮಾತುಕತೆಯೂ ವೈಸರಾಯರು ಫೆಡರೇಷನ್ ವಿಚಾರದಲ್ಲಿ ಭಾರತೀಯ ರಾಜಕೀಯ ಮುಖಂಡರುಗಳೊಡನೆ ನಡೆಸುವ ಮಾತುಕತೆಯ ಕೊನೆಯ ಮಾಟಿಂಗೆನ್ನಬೇಕು. ಹಿಂದೆ ನಡೆದ ಮಾಟಿಂಗುಗಳಿಗೆಲ್ಲಾ ಈ ಮಾಟಿಂಗು ಕಲಶದೋಪಾದಿಯಲ್ಲಿರುವುದು, ಈ ವಿಚಾರದಲ್ಲಿ ಇಂದು ಹೊರಟಿರುವ ಅಧಿಕಾರಿ ಕಮ್ಯೂನಿಕು ಯಾವುದನ್ನೂ ಹೇಳುವುದಿಲ್ಲ, ಯಾವ ವಿಷಯವು ಚರ್ಚೆಯಾಯಿತೆಂಬುದು ನಮೂದಾಗಿಲ್ಲ. ಇದು ಸ್ವಾಭಾವಿಕವೇ

ಆದರೆ, ೯೦ ನಿಮಿಷಗಳ ಕಾಲ ಬ್ರಿಟಿಷ್ ಸಾರ್ವಭೌಮ ಪ್ರತಿನಿಧಿಗಳಾದ ವೈಸರಾಯರಿಗೂ ಅತ್ಯುನ್ನತ ಭಾರತೀಯ ಪ್ರಮುಖರಿಗೂ ಮಾತುಕತೆ ನಡೆಯಿತು ಇದನ್ನು ನೋಡಿದರೆ, ದೇಶದಲ್ಲಿ ರಾಜಕೀಯ ಸ್ಥಿತಿಗತಿಗೆ ಸಂಬಂಧಪಟ್ಟ ಎಲ್ಲಾ ಮುಖ್ಯ ಮುಖ್ಯವಾದ ಪ್ರಶ್ನೆಗಳೂ ಯಾವ ಮುಚ್ಚುಮರೆಯುಲ್ಲದಂತೆಯೂ, ಕೂಲಂಕುಷವಾಗಿಯೂ ಚರ್ಚಿಸಲ್ಪಟ್ಟಿರಬೇಕೆಂದು ಊಹಿಸಬಹುದು ಈ ೯೦ ನಿಮಿಷಗಳ ಕಾಲದಲ್ಲಿ ಫೆಡರೇಷನು, ಅದಕ್ಕೆ ಕಾಂಗ್ರೆಸಿನ ಮನೋಗತ ಸದ್ಯದಲ್ಲಿ ದೇಶೀ ಸಂಸ್ಥಾನಗಳಲ್ಲಿ ಪ್ರಾತಿನಿಧ್ಯ ಸಂಸ್ಥೆಗಳನ್ನು (ಜವಾಬ್ದಾರಿ ಸರಕಾರದ ಬಗ್ಗೆ) ಸ್ಥಾಪಿಸಬೇಕೆಂಬುದಾಗಿ ದೇಶೀ ರಾಜರುಗಳಿಗೆ ಕೊಡಲಾಗುತ್ತಿರುವ ಸೂಚನೆಗಳು, ರಾಜಕೀಯ ಕೈದಿಗಳ ಬಿಡುಗಡೆ, ಇದರಿಂದುಂಟಾದ ಕಾನ್‌ಸ್ಟಿಟ್ಯೂಷನಲ್ ಬಿಕ್ಕಟ್ಟ್ ಪ್ರಸಂಗ, ಮಿ॥ ಡಿಯಿನ್‌ರವರನ್ನು ಗವರ್ನರಾಗಿ ನಿಯಮಿಸಿದುದು ಇವೇ ನಂತಾದ ವಿಚಾರಗಳು ಚರ್ಚಿಸಲ್ಪಟ್ಟಿರಬೇಕೆಂದು ವರದಿಯಾಗಿರಬೇಕು

ದೇಶೀ ಸಂಸ್ಥಾನಗಳೊಡನೆ ವ್ಯವಹಾರ ನಡೆಸುವುದರಲ್ಲಿ, ಇನ್ನು ಮುಂದೆ ವೈಸರಾಯರು ವಿಶೇಷ ಗಮನ ಕೊಡುವರೆಂದು ನಂಬಲಾಗಿದೆ. ರಾಜರುಗಳನ್ನು ಒಬ್ಬೊಬ್ಬರನ್ನಾಗಿ ಕರೆಯಿಸಿಕೊಂಡು ಚರ್ಚೆ ನಡೆಸುವರೆಂದು ಹೇಳಲಾಗಿದೆ

ಬ್ರಿಟಿಷ್ ಸರಕಾರದ ಮುಖಂಡರ ಅಭಿಪ್ರಾಯಗಳು, ದೇಶೀ ಸಂಸ್ಥಾನಗಳ ಮುಖಂಡರ ಅಭಿಪ್ರಾಯಗಳು, ಇವುಗಳನ್ನೆಲ್ಲಾ ತಮ್ಮ ಹೃದಯದಲ್ಲಿಟ್ಟುಕೊಂಡು, ವೈಸರಾಯರು ಇಂಗ್ಲೆಂಡಿಗೆ ಹೋಗಿ ಅಲ್ಲಿ ಸೆಕ್ರೆಟರೀ ಆಫ್ ಸ್ಟೇಟ್‌ರೊಡನೆಯೂ, ಬ್ರಿಟಿಷ್ ಮಂತ್ರಿಗಳೊಡನೆಯೂ ಅವುಗಳನ್ನೆಲ್ಲಾ ಚರ್ಚಿಸಿ, ಈಗ ಭಾರತದಲ್ಲಿರುವ ಸನ್ನಿವೇಶವೇನೆಂಬುದನ್ನು ತಿಳಿಸಿ ತಮ್ಮ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವರು ಪರಿಹಾರವನ್ನೂ ಸೂಚಿಸುವರು ಈ ಚರ್ಚೆಗಳಿಂದೆಲ್ಲಾ, ಒಂದು ಪರಿವರ್ತನೆಯಾಗುತ್ತದೆ ಈ ವರ್ಷದ ಚಳಿಗಾಲದಲ್ಲೋ ಅಥವಾ ಮುಂದಿನ ವರ್ಷದ ಆದಿಯಲ್ಲೋ ಇಂಡಿಯಾ ಸರಕಾರದ ಆಕ್ಟು ಕೆಲವು ಭಾಗಗಳಲ್ಲಿ ತಿದ್ದುಪಡಿಯಾಗುವುದು ಹೀಗಾಗುವುದು ಭಾರತೀಯರನ್ನು ಎಷ್ಟರಮಟ್ಟಿಗೆ ತೃಪ್ತಿಗೊಳಿಸುವುದೋ ನೋಡಬೇಕು ಈಗಲೇ ಯಾವುದನ್ನೂ ಹೇಳಲಾಗುವುದಿಲ್ಲ ಅಂತೂ ಹೇಗಾದರೂ ಫೆಡರೇಷನ್‌ನನ್ನು ಪ್ರಾಯೋಗಿಕವಾಗಿಯಾದರೂ ಜಾರಿಗೆ ತರಲು ಒಪ್ಪಬೇಕೆಂದು ಕಾಂಗ್ರೆಸನ್ನು ಪ್ರೇರೇಪಿಸಲು ಪ್ರಯತ್ನ ಪಡಬೇಕೆಂಬುದಾಗಿ ಇಲ್ಲಿಯ ರಾಜಕೀಯ ಕಡೆಗಳಲ್ಲಿ ಅಭಿಪ್ರಾಯವು ವ್ಯಕ್ತಪಡಿಸಲಾಗುತ್ತಿದೆ

★

ಕಿವುಡರಿಗೆ ಟೆಲಿಫೋನ್.

ಕಿವುಡರ ಉಪಯೋಗಕ್ಕಾಗಿ ಬ್ರಿಟಿಷ ಇಂಜನಿಯರರು ಒಂದು ಟೆಲಿಫೋನ ಉಪಕರಣವನ್ನು ಕಲ್ಪಿಸಿರುವರು. ಇದರಿಂದ ಕಿವುಡರು ಟೆಲಿಫೋನ್ ಮೂಲಕ ಬಂದ ಸಂದೇಶಗಳನ್ನು ಕೇಳಬಹುದಂತೆ.

ಬಂದಾಗಿ ಮತ್ತು ತಲೆಕೆಳಗಾಗಿ ಬರೆಯುವ ವಿಚಿತ್ರ ಹುಡುಗ'
ಪ್ರವೀಣರ ವಿಸ್ಮಯ

ಅಮೇರಿಕಾದ ಚಿಕಗೋ ಎಂಬಲ್ಲಿನ ಎಲಿಮೆಂಟರಿ ಶಾಲೆಯ ೧೧ ವರ್ಷ ಪ್ರಾಯದ ಫ್ರಾಂಕ್ ಬೆಲೆಕ್ ಎಂಬೊಬ್ಬ ಹುಡುಗನು, ವಿಚಿತ್ರ ತರದಲ್ಲಿ ಬರೆಯುವ ವಿಷಯವು ಬೆಳಕಿಗೆ ಬಂದಿರುತ್ತದೆ

ಆತನು ಮೊದಲು ಶಾಲೆಗೆ ಸೇರಿದಾಗ ಆತನಿಗೆ ಓದುಬರೆಯಲು ಅಸಾಧ್ಯವಾದುದನ್ನು ಕಂಡರು. ಕೊನೆಗೆ, ಕ್ರಮೇಣ ಕಾಗದವನ್ನು ತಿರುಗಿಸಿ ಕೊಟ್ಟರೆ ಬರೆಯಲು ಯತ್ನಿಸಿದವನವನು ಈಗ ಆತನು ಬರೆಯುತ್ತಿದ್ದಾನೆ ಆದರೆ, ಆಂಗ್ಲೇಯವನ್ನೂ ಉರ್ದುಭಾಷೆಯನ್ನು ಕಾಗದದ ಎಡಕಡೆಯಿಂದ ಬರೆಯುವಂತೆ ಬರೆಯುತ್ತಿದ್ದಾನೆ—ಅಕ್ಷರಗಳ ತಲೆಕೆಳಗಾಗಿ. ಈತನು ಬರೆದುದನ್ನು ಓದಬೇಕಾದರೆ ಬರೆದ ಕಾಗದವನ್ನು ತಿರುಗಿಸಿಬಿಟ್ಟರೆ ಸರಿ

ಆತನ ವಿಚಿತ್ರ ದೇಹಪ್ರಕೃತಿಯೇ ಕಾರಣವಂತೆ

ಶೀತ ನಿವಾರಣೆಗೆ ದೀಪ

ಶೀತನಿವಾರಣೆಮಾಡಿಕೊಳ್ಳಲು ಅಮೇರಿಕದ ವಿಜ್ಞಾನ ಸಂಶೋಧಕರು ಒಂದು ವಿಚಿತ್ರ ತರದ ದೀಪವನ್ನು ಸಿದ್ಧಪಡಿಸಿರು ಈ ದೀಪದಿಂದ ಹೊರಡುವ ಬೆಳಕಿನಿಂದ ಶೀತರೋಗಕ್ಕೆ ಕಾರಣವಾಗಿರುವ ರೋಗಾಣುಗಳು ನಾಶವಾಗುವವಂತೆ ಈ ದೀಪದಿಂದ ಹೊರಡುವ ಕಿರಣಗಳು ಅಣುಗಳಿಗೆ ವಿಷಕಾರಿಯಾಗಿದ್ದರೂ ಅವುಗಳಿಂದ ಮನುಷ್ಯರಿಗೆ ಏನೂ ಹಾನಿಯಿಲ್ಲವಂತೆ

★

ಹೃದಯಕ್ರಮಲಕ್ಕೆ ಸ್ನಾಯುಗಳನ್ನು ಕೃಷಿಮಾಡುವುದು!

ರಕ್ತಚಲನಕ್ಕೆ ಹೃದಯದ ಸ್ನಾಯುಗಳೇ ಕಾರಣ ಇವುಗಳು ಸರಿಯಾಗಿ ಕಾರ್ಯಸದೆ ಇದ್ದರೆ, ಆಗ ರಕ್ತ ಚಲನವು ಸರಿಯಾಗಿ ನಡೆಯಲಾರದು ಹೃದಯಕಮಲದ ಹಾಳಾದ ಸ್ನಾಯುಗಳನ್ನು ತೆಗೆದು, ಹೊಸ ಸ್ನಾಯುಗಳನ್ನು ಕೂಡಿಸುವ ಶಸ್ತ್ರಚಿಕಿತ್ಸೆ ನಡೆಸುವ ಉಪಾಯವೊಂದು ಅಮೇರಿಕಾದ ವೈದ್ಯರಿಂದ ಕಂಡುಹಿಡಿಯಲಾ ದಿಂದ ಹೃದಯಕಮಲದ ಮೇಲೆ ಅತ್ಯಂತ ಸುರಕ್ಷಿತವಾದ ರೀತಿಯಲಿ ಶಸ್ತ್ರಚಿಕಿತ್ಸೆ ಮಾಡಬಹುದಂತೆ

★

ಭಾವಗಳಿಂದ ಚರ್ಮವ್ಯಾಧಿ.

ಮನುಷ್ಯನಲ್ಲಿ ಭಾವಗಳು ಬದಲಾಗುವುದರಿಂದ, ಹೊಟ್ಟೆ ಹಾಗೂ ಹೃದಯದ ಮೇಲೆ ಪರಿಣಾಮಗಳು ಉಂಟಾಗವಂತೆ ಚರ್ಮದ ಮೇಲೂ ಉಂಟಾಗುತ್ತದೆಂದೂ ಕಂಡು ಹಿಡಿಯಲಾಗಿದೆ

ಭಾವಗಳು ಬದಲಾಗುವುದರಿಂದ, ನರಗಳ ಇಲಾಖೆಗಳ ಮೇಲೆ ಉಂಟಾದ ಪರಿಣಾಮಗಳಿಂದ ಚರ್ಮದ ಗ್ರಂಥಿಗಳ ಬಲವು ಕುಂದಿ, ಚರ್ಮವ್ಯಾಧಿಗೆ ಕಾರಣವಾಗುತ್ತದಂತೆ

ಬಚ್ಚನ ಪ್ರೇಮವನ್ನು ಕಳಕೊಂಡ ಸ್ತ್ರೀಯು ಚರ್ಮವ್ಯಾಧಿಯನ್ನು ಪಡೆದಿರುವಳಾಗಿ ತಿಳಿದುಬರುತ್ತದೆ

೨೦ ಮಂದಿ ಅರಬಿಯರು ಕೊಲ್ಲಲ್ಪಟ್ಟರು

ಪೆಲೆಸ್ತೀನದ ಜೆನಿನ ಎಂಬಲ್ಲಿ ಒಂದು ಅರಬರ ಪಂಗಡಕ್ಕೂ ಬ್ರಿಟಿಷ ಸೈನ್ಯ ವರ್ಗಕ್ಕೂ ಯುದ್ಧ ನಡೆದು, ಅರಬರಲ್ಲಿ ೨೦ ಮಂದಿಗಳು ಮೃತರಾದರು. ಇವರಲ್ಲಿ ಪಂಗಡದ ನಾಯಕನೂ ಇರುವರಂತೆ

ರಕ್ಷೈರ್ವ್ಯರ್ಹಾಧ್ಯೈರ್ನಸ್ತುತುಷ್ಟುರ್ನ
ದೇವಾ । ನ ಭೀಜರೇ ಭೀಮ
ವಿಶೇಣ ಭೀತಿರ್ವ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।
ದೊರೆಯಲನುಪಮ ರತ್ನಗಳು
ನಾ । ಗರಳ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ? ಮತ್ತೆ
ವಿಶ್ವದ ಸುಡುವ ಬರುತಿರುವ ॥

ಸ್ವದೇಶಾಭಿಮಾನಿ
SWADESHABHIMANI

ಗರಲಕವರಂಜಿದರೆ! ಸುಧೆಯನು ।
ಧುರಿಸು ಕಷ್ಟದ್ವಾರ
ತೆರದ ಕುಳಿತರೆ । ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾ. ೨೨ನೇ ಶುಕ್ರವಾರ ಏಪ್ರಿಲ್ ೧೯೩೮

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.)

ತಾರೀಕು 22—4—1938.

"ನಾಜಿ ಜರ್ಮನಿಯಿಂದಲೇ ಮುಕ್ತಿ"

ಯುರೋಪದ ಇಂದಿನ ಸ್ಥಿತಿ

ಫ್ರಂಕೋನಿಗೆ ಡಿಕ್ಟೇಟರರ ಸಹಾಯ — ಬ್ರಿಟನಿನ ತಾಟಸ್ಥ್ಯ

ಫ್ರಾನ್ಸಿನ ಶೋಚನೀಯ ಸ್ಥಿತಿ

ಮುಸಲೀನಿ

ಸಮಸ್ತ ಯುರೋಪದಲ್ಲೆಲ್ಲಾ ಈಗ ನಾಜಿ ಪ್ರಚಾರವು ನಡೆಯುತ್ತಿದೆ. ನಾಜಿ ಜರ್ಮನಿಯಿಂದಲೇ ಎಲ್ಲರಿಗೂ ಮುಕ್ತಿ ಎಂಬದಾಗಿ ಹಿಟ್ಲರನೂ ಆತನ ಅನುಯಾಯಿಗಳೂ ಎಲ್ಲೆಲ್ಲೂ ಸಾರುತ್ತಿದ್ದಾರೆ. "ಜರ್ಮನರು ನಾಜೀ ರಾಜನೀತಿಯ ಸಿದ್ಧಾಂತಗಳನ್ನು ಬಿಟ್ಟು ಬೇರೊಂದನ್ನು ಆಚರಿಸಬಾರದು. ನನಗೆ ಚಿನ್ನ ಬೇಕಾಗಿಲ್ಲ. ನಮಗೆ ಬೇಕಾದುದು ರೊಟ್ಟಿ. ಜರ್ಮನರು ಮಾತ್ರವಲ್ಲ, ಯುರೋಪ್ಯದಲ್ಲಿ ಪ್ರತಿಯೊಬ್ಬರೂ ನಾಜಿ ತತ್ವವನ್ನು ಆಚರಿಸುವಂತಾಗಬೇಕು" ಎಂಬುದು ಹಿಟ್ಲರನು ಸಾರುತ್ತಿರುವುದರ ಮುಖ್ಯ ಅಭಿಪ್ರಾಯ. ಜರ್ಮನ್ ಪ್ರಜಾವರ್ಗವು ಈಗ 75 ಮಿಲಿಯವಾಗಿರುತ್ತದೆ. ಹಿಟ್ಲರನಿಂದ ಜರ್ಮನಿಯು ವಾರ್ಸಲ್ ಒಪ್ಪಂದದ ಬಂಧನದಿಂದ ವಿಮುಕ್ತವಾಗಿರುವುದು ಈಗ ಜರ್ಮನಿಯು ಯತ್ನಿಸುತ್ತಿರುವುದು ಖ್ಯಾತಿಗಾಗಿ. ಜರ್ಮನಿಗೆ ಬ್ರಿಟನ್ ಫ್ರಾನ್ಸ್ ದೇಶಗಳಂತೆ ಭಂಗಾರದ ಆಶೆಯಿಲ್ಲ. ಪ್ರತಿಯೊಬ್ಬ ಜರ್ಮನನಿಗೆ ರೊಟ್ಟಿ ದೊರಕಬೇಕೆಂಬುದೆ ಹಿಟ್ಲರನ ನೀತಿ. ಈಗ ಹಿಟ್ಲರನಿಗೆ ಯಾವತ್ತು ನಿರ್ಬಂಧಗಳಿರುವುದಿಲ್ಲ. ತನ್ನ ಉದ್ದೇಶಗಳನ್ನೆಲ್ಲಾ ಆತನು ಸಾಧಿಸಿಯೇ ಬಿಡುವನು. ಹಿಟ್ಲರನು ಸಮಸ್ತ ಯುರೋಪವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಗೊಳ್ಳುವುದು ಈಗ ಕಾಣಿಸುತ್ತದೆ. ನೆಪೋಲಿಯನನಂತೆ ಕೀರ್ತಿ ಪಡೆಯಲು ಆತನು ಸಾಧಿಸುವನೇ? ಆತನ ಕನಸುಗಳು ನಡೆಯುವವೆ? ನೋಡಬೇಕು. ಯುರೋಪದಲ್ಲಿ ಪ್ರಜಾಸತ್ತೆಯ ವಿಧಾನವು ದಿನೇ ದಿನೇ ಕ್ಷೀಣವಾಗುತ್ತಾ ಬರುತ್ತಿದೆ. ಹಿಟ್ಲರನೂ ಇಂಗ್ಲಾಂಡ್ ಫ್ರಾನ್ಸ್ ಇತ್ಯಾದಿ ಪ್ರಜಾಸತ್ತಾ ರಾಷ್ಟ್ರಗಳನ್ನು ಹಿಂಗಟ್ಟಿ ಬಡೆದು, ತನ್ನ ಕಾರ್ಯಸಾಧನೆಯನ್ನು ಉಪಾಯಾಂತರಗಳಿಂದ ಮುಂದರಿಯಲು ಯತ್ನಿಸುತ್ತಿದ್ದಾನೆ. ಯುರೋಪದಲ್ಲೀಗ ಫೆಸಿಸ್ಟ ಪದ್ಧತಿಗಳು ಪ್ರಬಲಸ್ಥಿತಿಯಲ್ಲಿ ಕಾಣಿಸುತ್ತವೆ.

ಸ್ಪೈನಿನ ಅಂತರ್ಯುದ್ಧದಲ್ಲಿ ಜನರಲ್ ಫ್ರಂಕೋವಿನ ಕೈಮೇಲಾಗಿದೆ. ಆತನಿಗೆ ಹಿಟ್ಲರ್ ಮತ್ತು ಮುಸಲೀನಿಯಿಂದ ಸರ್ವ ಸಹಾಯಗಳು ದೊರಕಿವೆ. ಸ್ಪೈಯಿನಿನಲ್ಲೀಗ ಫೆಸಿಯಿಸ್ಟ ಸರಕಾರದ ಸ್ಥಾಪನೆಯಾಗಿರುತ್ತದೆ.

ಗ್ರೇಟ್ ಬ್ರಿಟನು ಫೆಸಿಯಿಸ್ಟ ರಾಷ್ಟ್ರಗಳನ್ನು ತೃಪ್ತಿಗೊಳಿಸುವುದೆ ಯೋಗ್ಯವೆಂದು ಅಭಿಪ್ರಾಯಪಟ್ಟಂತೆ ಕಾಣುತ್ತದೆ. ಭದ್ರತೆಗಾಗಿ ಜನಾಂಗಮಂಡಳವನ್ನು ನಂಬಿದ ಯುರೋಪದ ಅನೇಕ ಸಣ್ಣ ಸಣ್ಣ ರಾಷ್ಟ್ರಗಳ ಗತಿಯು ಅತಿ ಶೋಚನೀಯವಾಗುತ್ತದೆ. ಜನಾಂಗ ಮಂಡಳಿಯಿಂದ ಏನ ಮಾಡಲಾಗಿದೆ? ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸು ಈ ಸಣ್ಣ ರಾಷ್ಟ್ರಗಳ ರಕ್ಷಣೆಯ ಕಡೆ ಉತ್ಸಾಹವನ್ನು ತೋರಿಸುವಂತೆ ಕಾಣುವುದಿಲ್ಲ. ಅವುಗಳು ತಟಸ್ಥವಾಗಿರುವುದೆ ಕಾಣಿಸುತ್ತವೆ.

ಚೆಂಬರ್ಲೇನ್

ಸ್ಪೈಯಿನ ರಿಪಬ್ಲಿಕ್ ಸರಕಾರವು ಸಹಾಯ ಸಹಾನುಭೂತಿಗಳಿಲ್ಲದೆ, ದಿನೆ ದಿನೆ ಕ್ಷೀಣಿಸುತ್ತದೆ. ಇದಕ್ಕೆ ಗ್ರೇಟ್ ಬ್ರಿಟನ್ ಕಾರಣವೆನ್ನಬೇಕು. ಹಿಟ್ಲರನು ಆಸ್ಟ್ರಿಯವನ್ನು ಕೂಡಿಸಿಕೊಂಡುದರಿಂದ ಫ್ರೆಂಕೋನು ಬಲವು ಇನ್ನಷ್ಟು ಹೆಚ್ಚಿದಂತಾಗಿದೆ. ಹಿಟ್ಲರನ ಕೂಗುಗಳ ಎದುರು ಪ್ರಜಾಸತ್ತೆಯ ಗತವೈಭವವು ಮಣ್ಣುಪಾಲಾಗುತ್ತಿದೆ. ಪ್ರಜಾಸತ್ತೆಯ ರಕ್ಷಣೆಯಾಗಲು ಈಗ ಒಂದೆ ಮಾರ್ಗವಿದೆ. ಬ್ರಿಟನು ಮತ್ತು ಫ್ರಾನ್ಸು ಡಿಕ್ಟೇಟರರ ಸ್ನೇಹವನ್ನು ತೊರೆಯಬೇಕು. ಅವರ ಮುಂದುವರಿಕೆಗೆ ತಡೆಗಳನ್ನು ಹಾಕಬೇಕು. ಬ್ರಿಟನಿನ ಮತ್ತು ಫ್ರಾನ್ಸಿನ ತಾಟಸ್ಥ ವರ್ತನೆಯಿಂದಲೆ ಹಿಟ್ಲರನು ಬಲವಾಗಿ ಬಿಟ್ಟನು. ಆಸ್ಟ್ರಿಯವನ್ನು ನುಂಗಿಬಿಟ್ಟನು. ಮುಸಲೀನಿಯು ಕೂಡ ಆತನನ್ನು ಬೆದರಿ ಸುಮ್ಮನೆ ಕುಳಿತುಬಿಟ್ಟನು.

ರಷ್ಯಾದಲ್ಲಿ ಲೆನಿನನು ಇರುವ ತನಕ ಎಲ್ಲವೂ ನೆಟ್ಟಗಾಗಿತ್ತು. ಅವನ ಮರಣದ ನಂತರ ಅಲ್ಲಿ ಎರಡು ಪಂಗಡಗಳು ಹುಟ್ಟಿಕೊಂಡವು. ಸ್ಟೆಲಿನ್, ಟ್ರೊಟ್ಸ್ಕಿ ಕಲಹವು ಉಂಟಾಗಿ, ಟ್ರೊಟ್ಸ್ಕಿಯು ದೇಶದಿಂದ ಹೊರ ತಳ್ಳಲ್ಪಟ್ಟನು. ಸ್ಟೆಲೀನನಿಗೆ ಅನೇಕ ವಿರೋಧ ಪಕ್ಷಗಳು ಉಂಟಾಗಿ, ಆತನಿಗೆ ಬಾಧೆ ತೊಡಗಿದವು. ಆದರೆ ಸ್ಟೆಲೀನನು ಎಲ್ಲವನ್ನೂ ಅಡಗಿಸಿ ಕೊಟ್ಟನು. ರಷ್ಯದಲ್ಲಿ ಈಗ ಆನೆಂದಿನವು ರಕ್ತಸ್ರಾವವು ನಡೆಯುತ್ತಿದೆ. ಅಂತರ್ಯುದ್ಧ ಸ್ಥಿತಿಯನ್ನು ಮಾಡಿದ ವಿನಹ ಸ್ಟೆಲೀನನು ವಿರೋಧ್ಯದ ರಾಜಕೀಯದಲ್ಲಿ [illegible] ಹಾಗಿಲ್ಲ. ಆದರೆ ಸ್ಟೆಲಿನನ [illegible] ಪ್ರಜಾಸತ್ತಾ ವಿಧಾನಕ್ಕೆ [illegible] ದೊರಕದು.

ಫ್ರಾನ್ಸಿನ ರಾಜಕೀಯ ಸ್ಥಿತಿಯು ಶೋಚನೀಯವಾಗಿರುತ್ತದೆ. ಅಲ್ಲಿ ತಿಂಗಳಿಗೊಂದು ಸರಕಾರ ಸ್ಥಾಪನೆಯಾಗುತ್ತಿದೆ. ಎಲ್ಲವೂ ಸರಿಯಾಗಿ ನಡೆಯುವಂತೆ, ಒಳ್ಳೆ ಪ್ರಭಾವವುಳ್ಳ ಜನರು, ಅಲ್ಲಿನ ರಾಜಕೀಯ ವಾತಾವರಣದಲ್ಲಿ ಇದ್ದಂತೆ ಕಾಣಿಸುವುದಿಲ್ಲ. ಸೌಮ್ಯವಾದೀ ಫ್ರಾನ್ಸಿನಲ್ಲಿ ಅನೇಕ ಪಂಗಡಗಳಿವೆ. ಅವುಗಳಿಗೆ ಸರಿಬೀಳುವುದಿಲ್ಲ. ಹೀಗಾಗಿ ಯಾವ ಮಂತ್ರಿಮಂಡಳಕ್ಕೆ ಅಲ್ಲಿ ಸರಿಯಾದ ಬೆಂಬಲವು ದೊರಕಲು ಅಸಾಧ್ಯವಾಗಿದೆ. ಆದರೆ ಒಂದು ಕಡೆ ಫ್ರೆಂಕೋನು ಪ್ರಬಲನಾಗುತ್ತಿರುವಾಗ, ಮತ್ತೊಂದು ಕಡೆ ಡಿಕ್ಟೇಟರಾದ ಹಿಟ್ಲರ ಮುಸಲೀನಿಯರು ಪ್ರಬಲರಾಗುತ್ತಿರುವಾಗ ಫ್ರಾನ್ಸು ತನ್ನ ಅಂತರ್ಯುದ್ಧ ಸ್ಥಿತಿಯನ್ನು ಸುಧಾರಿಸಿಕೊಂಡು, ಸ್ವದೇಶ ರಕ್ಷಣೆಗಾಗಿ ಒಳ್ಳೇ ಪ್ರಬಲವಾದ ಸರಕಾರವನ್ನು ರಚಿಸಬೇಕು. ಆ ಬಗ್ಗೆ ಈಗ ಪ್ರಯತ್ನಗಳು ನಡೆಯುತ್ತಿವೆ.

ಇಂಗ್ಲಾಂಡು ಒಂದು ಮಹಾ ಸಾಮ್ರಾಜ್ಯವಿದ್ದ ಜನಾಂಗ. ಅದನ್ನು ರಕ್ಷಿಸಿಕೊಳ್ಳುವುದೆ ಅದರ ಈಗಿನ ಮುಖ್ಯೋದ್ದೇಶವು. ಆದರೆ ಅದು ಆಚರಿಸಿದ ನೀತಿಯು ಅತಿ ವಿಚಿತ್ರವೆನ್ನಬೇಕು. ಬ್ರಿಟನಿನೊಡನೆ ಇದ್ದ ಸೈನ್ಯಸಂಗ್ರಹ ಯುದ್ಧ ನೌಕಾ ವಿಮಾನ, ಇತ್ಯಾದಿಗಳು ಯಾರೊಡನೆಯೂ ಇರುವುದಿಲ್ಲ. ಆದರೂ ಹಿಟ್ಲರನ ಕೂಗು [illegible] ಬೇಕಾಗಿಲ್ಲ. [illegible] [illegible] ಇಂಗ್ಲಾಂಡಿನ [illegible] ತನ್ನ ಅಂತರ್ಯುದ್ಧ ಸ್ಥಿತಿಯನ್ನು ಸುಧಾರಿಸಿ [illegible] ಬ್ರಿಟನ್ [illegible] ಹಿಟ್ಲರ್ [illegible] ದರ್ಪವನ್ನು [illegible] ಬಹುಮಂದಿ ಅನೇಕರ ಅಭಿಪ್ರಾಯ. ಆದರೆ [illegible] ನೋಡಬೇಕು.



[illegible]

ಸ್ಟೆಲಿನ್

ಹರ್ ಹಿಟ್ಲರ್

GOLDEN OPPORTUNITY

Wanted smart Ladies & Gents to canvass life business in Mangalore City on SPECIAL TERMS. This is the Silver Jubilee & Valuation year of the company and the Special Terms are offer to those who represent the company now only. Do not miss this Golden Opportunity. Apply shortly to:

The Organiser,

Western India Life Ince. Co. Ltd.,

C/o Modern Trading Co.

Opp. City Press, Mangalore.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ.

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7-0-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1-8-0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಷಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:—ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೊ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್).

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದು. ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾದುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೇಟು—ಡಾ. ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೆಲವು ನಾಡಿಯವ... ರಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ. ಪಿ. ಅಂಚೆ ೮.

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೊ. ವಿರಜಿ, (S. M. C.)

DRINK

Delicious WATERFALL AND PYKARA TEAS.

unrivlled for Taste & Aroma.

———

ಅತ್ಯುತ್ತಮವಾದ ವಾಟರ್‌ಫೋಲ್ ಮತ್ತು ಪ್ಯಾಕರಾ ಚಹಾವನ್ನು

ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ.

Distributors:

Panchmal Krishnaya Shenoi & Son,

Bunder, Mangalore.

ಹೊಸ ಮಾಲು ಇಂದೇ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI — (S. Malabar.)

USE

365 BAR SOAPS

SOLD EVERYWHERE.

**
**

Sole Agent:

PANCHMAL KRISHNAYA SHENOI & SON,

Bunder, MANGALORE.

ಶಾಂತಿಯನ್ನು ಹುಡುಕಿ ಹೋಗಿದ್ದ!

ಆದರೆ

ಕ್ರಾಂತಿಯು ದೊರಕಿದಳು!!!

ಒಂದು ವೇಳೆ ಇಂಗ್ಲೆಂಡಿನ ಮಜೂರ ಪಕ್ಷವು ಅಧಿಕಾರಕ್ಕೆ ಬಂದಿತೆಂದು ಊಹಿಸಿಕೊಳ್ಳಿರಿ. ಸ್ಪೈಯಿನಿನ ಮಜೂರ ಪ್ರಜಾಸತ್ತಾತ್ಮಕ ಸರಕಾರವು ಮಾಡಿದಂತೆ ಇಂಗ್ಲಂಡಿನ ಮಜೂರ ಸರಕಾರವೂ ಅಲ್ಲಿಯ ಜನರ ಸಾಮಾಜಿಕ ರೀತಿನೀತಿಗಳಲ್ಲಿ ಬದಲಾವಣೆಗಳನ್ನು ಮಾಡಿ ಪ್ರಜಾವರ್ಗದ ಹಿತ ಸಾಧಿಸಲು ಪ್ರಯತ್ನಿಸಿತೆಂದು ಕಲ್ಪಿಸಿಕೊಳ್ಳಿರಿ. ಆಗ ಸ್ಪೈಯಿನಿನಲ್ಲಾದಂತೆ ಇಂಗ್ಲಂಡಿನಲ್ಲೂ ಶ್ರೀಮಂತ ಬಂಡವಾಳಿಗರು ಮತ್ತು ಆಸ್ತಿವಂತರು ಸರಕಾರದ ವಿರುದ್ಧ ದಂಗೆ ಎಬ್ಬಿಸುವರೆಂದು ನೀವು ತಿಳಕೊಳ್ಳುತ್ತೀರಾ? ಆ ದಂಗೆಯು ಸ್ಪೈನ ದಂಗೆಯಷ್ಟೇ ಭಯಂಕರವೂ ಅನರ್ಥಕಾರಿಯೂ ಆಗುವದೆಂದು ನೀವು ಎಣಿಸುತ್ತೀರಾ? ಹೌದು, ಅಂಥಹದ್ದೊಂದು ದಂಗೆಯು ಇಂಗ್ಲಂಡಿನಲ್ಲಿ ಕೂಡ ಎದ್ದೇ ಏಳುವದೆಂದು ಸರ್ ಪೀಟರ್ ಚಾಮರ್ಸ ಮಿಟೆಲ್ ಎಂಬವರು ತಾವು ಈಗ ತಾನೇ ಬರೆದು ಫೇಬರ ಮತ್ತು ಫೇಬರ ಕಂಪನಿಯ ಮೂಲಕ ಪ್ರತಿ ಒಂದಕ್ಕೆ 8½ ಶಿಲ್ಲಿಂಗಿನಂತೆ ಮಾರುವ 'ಮಲಗದಲ್ಲಿ ನನ್ನ ಮನೆ' (my house in malaga) ಎಂಬ ಪುಸ್ತಕದಲ್ಲಿ ಹೇಳಿರುತ್ತಾರೆ.

ಅಂಥಹದ್ದೊಂದು ದಂಗೆಯು ಇಂಗ್ಲಂಡಿನಲ್ಲಿ ಏಳುವದು ಮಾತ್ರವಲ್ಲ, ಅದು ಸ್ಪೈನ ದಂಗೆಗಿಂತಲೂ ಭಯಂಕರವಾಗಬಹುದೆಂದೂ ಪರಿಣಾಮದಲ್ಲಿ ಸಂಪೂರ್ಣ ಸಫಲವಾಗಬಹುದೆಂದೂ ಸರ್ ಮಿಚೆಲ್ಲರು ಭವಿಷ್ಯನನ್ನಾಡಿದ್ದಾರೆ ಈ ದಂಗೆಯಲ್ಲಿ ಗಂಡನು ಹೆಂಡತಿಯನ್ನಾಗಲೀ ತಂದೆಯು ಮಗನನ್ನಾಗಲೀ, ಬಂಧುಗಳು ಬಾಂಧವರನ್ನಾಗಲೀ, ಸ್ನೇಹಿತರು ಮಿತ್ರರನ್ನಾಗಲೀ ಲಕ್ಷಿಸದೆ ಒಬ್ಬರಿದುರಿಗೊಬ್ಬರು ಕತ್ತಿ ಹಿಡಿದು ನಿಂತುಕೊಂಡಾರು. ನಾಗರಿಕತೆಯ ಸಭ್ಯತೆಯ ಶಿಷ್ಟಾಚಾರದ ಯಾವ ಗೊತ್ತುಗುರಿ ರೀತಿನೀತಿಗಳನ್ನು ಮನಸ್ಸಿಗೆ ತಂದುಕೊಳ್ಳದೆ ವಿದ್ರೋಹಿಗಳು, ಅಂದರೆ ಸ್ವಾರ್ಥಿ ಭಂಡವಾಳಿಗರು ಮತ್ತು ಆಸ್ತಿವಂತರು ಭಯಂಕರವಾಗಿ ಕಾದಾಡಿ ತಮ್ಮ ಸ್ವಾರ್ಥದ ಬೇಳೆಯನ್ನು ಬೇಯಿಸಿಕೊಂಡಾರು ಫೇಸಿಜಂ ತತ್ವವನ್ನು ಹೆಸರು ಪೂರ್ತಿಗಾದರೂ ಒಪ್ಪದವನು ಇಂಗ್ಲಂಡಿನಲ್ಲಿ ಬದುಕಿ ಉಳಿಯುವದು ಕೂಡ ಕಷ್ಟವಾದೀತು ಎಂದು ಅವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ

ಸರ್ ಮಿಚೆಲರು ಅನೇಕ ವರ್ಷಗಳ ತನಕ ಲಂಡನಿನ ಜಂತು ಶಾಲೆಯ ಕಾರ್ಯದರ್ಶಿಗಳಾಗಿದ್ದರು ಪ್ರಸಿದ್ಧ ವಿಜ್ಞಾನಿಗಳು ಕೂಡ ಆಗಿದ್ದಾರೆ ಅವರು ಸ್ಪೈನ ದಂಗೆಯನ್ನು ಅದು ಆರಂಭವಾದಂದಿನಿಂದ ಜನರಿಗೆ ಬಂದ ಕಷ್ಟ ನಷ್ಟಗಳನ್ನು ಸ್ವತಃ ನೋಡಿದವರಾಗಿದ್ದಾರೆ ಶಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ತಮ್ಮ ರಕ್ತವನ್ನು ನೀರಿನಂತೆ ಚೆಲ್ಲುತ್ತಿರುವ ಪ್ರಜಾತಂತ್ರವಾದಿಗಳು ಮತ್ತು ಅವರನ್ನು ಸದೆಬಡೆದು ನಿರ್ಮೂಲಮಾಡಿ ಅವರ ಸ್ಥಾನದಲ್ಲಿ ತಾವೇ ತಾವಾಗಿ ಮೆರೆದು ಜನರನ್ನು ಅಜ್ಞಾನ ಅಂಧಕಾರದಲ್ಲಿ ಮುಳುಗಿಸಿ ಕೊಳೆಯಿಸಿ ಆಳಬೇಕೆಂದಿರುವ ಧರ್ಮಾಚಾರ್ಯರು ಹಾಗೂ ಅವರನ್ನು ಕೂಡಿಕೊಂಡಿರುವ ಭಂಡವಾಳಿಗರು ಇವರೊಳಗೆ ನಡೆಯುವ ಕಾದಾಟವನ್ನು ನೋಡಿ ನೋಡಿ 'ಅಯ್ಯೋ' ಅಪ್ಪಾ'' ಎಂದು ನಿಟ್ಟುಸಿರುಬಿಟ್ಟವರಾಗಿದ್ದಾರೆ

ಲಂಡನಿನ ಜಂತುಶಾಲೆಯ ಕಾರ್ಯದರ್ಶಿತ್ವದಿಂದ ನಿವೃತ್ತರಾದ ಮೇಲೆ, ಈಗ್ಯೆ ಎರಡು ವರ್ಷಗಳ ಹಿಂದೆ ಸರ್ ಮಿಚೆಲ್ಲರೂ, ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಶಾಂತಿಸುಖವನ್ನು ಅನುಭವಿಸಬೇಕೆಂದು ಮಲಗ (ಸ್ಪೈನಿನದೊಂದು ಪಟ್ಟಣ)ಕ್ಕೆ ಹೋಗಿದ್ದರು ಇಟಲಿಯ ಸೈನಿಕರು ಅವರೊಳಗೆ ಒಬ್ಬನು ಕೂಡ ಸ್ಪೈನಿನವನಿದ್ದಿರಲಿಲ್ಲ, ಆ ಪಟ್ಟಣವನ್ನು ಬಂದು ಮುತ್ತಿಗೆ ಹಾಕಿದಾಗ ಅವರು ಅದೇ ಪಟ್ಟಣದಲ್ಲಿದ್ದರು. ಕೂದಲಿನಳೆಯಷ್ಟು ಅಂತರದಲ್ಲಿದ್ದುದರಿಂದ ಇಟಲಿಯ ಸೈನಿಕನೊಬ್ಬನು ಹೊಡೆದ ಗುಂಡು ಅವರಿಗೆ ತಾಗದೆ ಬದುಕಿಕೊಂಡಿದ್ದರು ಅಂದಿನಿಂದ ಮುಂದೆ ನಡೆದ ಘಟನೆಗಳಿಂದ ಅವರು ಫೇಸಿಜಮ್ಮಿನ ಪ್ರಬಲ ದ್ವೇಷಿಗರಾಗಿ, ದಂಗೆಯ ಎಲ್ಲಾ ವಿವರಗಳನ್ನು ಓದಿದರೆ ರೋಮಾಂಚನಗೊಳಿಸುವ ಹೃದಯವಿದ್ರಾವಕ ಮಾತುಗಳ ಮೂಲಕ ತಮ್ಮ ಪುಸ್ತಕದಲ್ಲಿ ಕೊಟ್ಟಿರುವರು ಅವರು ಶಾಂತಿಯನ್ನು ಹುಡುಕಿಕೊಂಡು ಹೋಗಿದ್ದರು, ಆದರೆ ಪಾಪ' ಸ್ಪೈನಿನಲ್ಲಿ ಅವರು ಕ್ರಾಂತಿಯನ್ನು ಕಂಡರು

ಭೋಗವಿಲಾಸ ಪ್ರಿಯ ಶ್ರೀಮಂತರು ನಮ್ಮ ದೇಶದಲ್ಲಿ ಹೇಗಿದ್ದಾರೋ ಹಾಗೆ ಸ್ಪೈನಿನಲ್ಲೂ ಇದ್ದಾರೆ ದಂಗೆ ನಡೆಯುತಿದ್ದ ಕಾಲಕ್ಕೆ ಸರ್ ಮಿಚೆಲ್ಲರು ಮಲಗದ ಒಂದು ಶ್ರೀಮಂತ ಮನೆತನಕ್ಕೆ ಸೇರಿದ ಮಹಿಳೆಯೊಬ್ಬಳಿಗೆ ತನ್ನ ಬಂಗಲೆಯಲ್ಲಿ ಆಶ್ರಯಕೊಟ್ಟಿದ್ದರು. ಅವರಿಬ್ಬರೊಳಗೆ ಸಂಭಾಷಣೆ ನಡೆಯುತಿದ್ದ ಸಂದರ್ಭದಲ್ಲಿ ಆಕೆ 'ಸರ್ ಮಿಚೆಲ್ಲರೆ! ಈಗ ನಮಗೆ ರೋಲ್ಸ್ ರಾಯ್ಸ್ ಕಾರು ಭೋಗವಿಲಾಸದ ಸಾಮಗ್ರಿ ಅಲ್ಲ, ಜೀವನದ ಆವಶ್ಯಕವಸ್ತು ಆಗಿರುವದ ' ಎಂದಿದ್ದಳಂತೆ ಸ್ಪೈನಿನಲ್ಲಿ ಇಷ್ಟು ಶ್ರೀಮಂತ ಬಡವರೊಳಗಿನ ಅಂತರವನ್ನು ತಾನು ಮತ್ತೆಲ್ಲಿಯೂ ಕಾಣಲಿಲ್ಲವೆಂದು ಅವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ.

ಜನರಲ್ ಫ್ರಾಂಕೋನೊಡನೆ ಸಹಾನುಭೂತಿ ಇರುವ ಸ್ಪೈನಿನ ಪ್ರತಿಯೊಬ್ಬನೂ ಸರ್ ಮಿಚೆಲ್ಲರನ್ನು ಮಜೂರ ಪಕ್ಷದವ ಅಥವಾ ಸಮಾಜವಾದಿ ಎಂದು ಸ್ಥಾಪಿಸಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡದೆ ಇಲ್ಲ. ಆದರೂ ಸ್ಪೈನಿಗೆ ಹೋಗುವ ತನಕ ಅವರು ಯಾವ 'ವಾದ'ಗಳೂ ಆಗಿರಲಿಲ್ಲ. ಸ್ಪೈನ್ ರಾಜಕೀಯದ ಕುರಿತು ಏನನ್ನೂ ಅರಿತವರಾಗಿರಲಿಲ್ಲ. ಸ್ಪೈನಿನಲ್ಲಿ ಏನು ನಡೆಯುತ್ತಿರುವದೆಂಬುದರ ಕುರಿತು ಒಬ್ಬ ಎರಡು ಮೂರು ವರ್ಷ ಪ್ರಾಯದ ಹುಡುಗನು ತಿಳಿದಿರುವಷ್ಟೇ ಅವರು ತಿಳಿದಿದ್ದರು ಆದರೆ ಮೆಲ್ಲ ಮೆಲ್ಲಗೆ ದಂಗೆಯು ವಿಸ್ತಾರವಾಗುತ್ತ ಬಂದು, ಪ್ರಜಾಸತ್ತಾತ್ಮಕ ಸರಕಾರವು ಬೇಕು ಬೇಡವೆನ್ನುವವರೊಳಗಿನ ಘರ್ಷಣವು ಪ್ರಬಲವಾದಂತೆ, ಸರ್ ಮಿಚೆಲ್ಲರಿಗೆ ಆ ದಂಗೆಯ ಸೂಕ್ಷ್ಮ ನಿರೀಕ್ಷಣ ಮಾಡದೆ ಇರಲಿಕ್ಕಾಗಲಿಲ್ಲ ಈ ನಿರೀಕ್ಷಣದ ಪರಿಣಾಮವಾಗಿ ಅವರು ಸ್ಪೈನಿನ ಈಗಿನ ದುಸ್ಥಿತಿಗೆ ಕೆಳಗಿನ ನಾಲ್ಕು ಕಾರಣಗಳನ್ನು ಕೊಟ್ಟಿದ್ದಾರೆ

ಮೊದಲನೆಯದಾಗಿ ಸ್ಪೈನಿನ ಕ್ರೈಸ್ತ ಧರ್ಮಾಚಾರ್ಯರು ಅಲ್ಲಿಯ ಪ್ರಜಾಸತ್ತಾತ್ಮಕ ಸರಕಾರದ ವಿರುದ್ಧ ಪ್ರಬಲ ಪ್ರಚಾರ ಮಾಡಿ ವಿದ್ರೋಹಿಗಳಿಗೆ ಸಹಾಯ ಮಾಡಿದುದು. ಎರಡನೆಯದಾಗಿ ಪ್ರಜಾಸತ್ತಾತ್ಮಕ ಸರಕಾರವು ವಿದ್ರೋಹಿಗಳಿಗೆ ಮೊದಮೊದಲು ವಿಶೇಷ [illegible] ತೋರಿಸಿ, [illegible] ಕಟ್ಟಿನ ಸ್ಥಾನಗಳ ಮೇಲೆ [illegible] ಅವರ ಕೂಟಗಳನ್ನು ಮಾಡಗೊಟ್ಟದ್ದು. ಮೂರನೆಯದಾಗಿ ಸರ್ವಸಾಮಾನ್ಯ ಜನರು ಸ್ವದೇಶಾಭಿಮಾನದಿಂದ ತುಂಬಿ ತುಳುಕಿಕೊಂಡು ಸರಕಾರಕ್ಕೆ ಸಹಾಯವನ್ನು ಕೊಡದೆ ಇದ್ದುದು. ನಾಲ್ಕನೆಯದಾಗಿ ಬ್ರಿಟಿಷ ಸರಕಾರವು ತಾವು ಯಾವ ಪಕ್ಷಕ್ಕೂ ಸೇರುವವರಲ್ಲವೆಂಬ ವೇಷ ಹಾಕಿಕೊಂಡು, ಸರಕಾರದ ವಿರುದ್ಧ ವಿದ್ರೋಹಿಗಳನ್ನು ಪ್ರೋತ್ಸಾಹಿಸಿದುದು. ವಿದ್ರೋಹಿಗಳಿಗೆ ಸಹಾಯ ಮಾಡಿದವರಲ್ಲಿ ಇಂಗ್ಲಂಡಿನ ಮಜೂರ ದಳದ ಮುಖಂಡರು ಕೂಡ ಸೇರಿದ್ದಾರೆ. ಸ್ಪೈನಿನಲ್ಲಿ ನ್ಯಾಯರೀತಿಯಿಂದ ಸ್ಥಾಪಿತವಾದ ಸರಕಾರಕ್ಕೆ ಸಹಾಯ ಮಾಡುವದು ಅಥವಾ ಅದರೊಡನೆ ಸಹಾನುಭೂತಿಯನ್ನು ತೋರಿಸುವದು ಇಂಗ್ಲಂಡಿಗೆ ದ್ರೋಹವಾದಿದಂತಾಗುವದೆಂದು ಬ್ರಿಟಿಷ ಸರಕಾರವು ಮಜೂರ ದಳದ ಮುಖಂಡರಿಗೆಲ್ಲ ತಿಳಿಸಿದ್ದರಿಂದ ಅವರು ಹಾಗೆ ಸುಮ್ಮನಿರಬೇಕಾಯಿತೆಂದು ತನ್ನೊಡನೆ ಅನೇಕ ಮಂದಿ ಅಂಥ ಮುಖಂಡರು ಹೇಳಿದಂತಾಗಿ ಸರ್ ಮಿಚೆಲ್ಲರು ಬರೆದಿದ್ದಾರೆ

ಹೀಗೆಂದು ರೆನೋಲ್ಡ್ಸ ನ್ಯೂಸ್ ಪತ್ರಿಕೆಯಲ್ಲಿ 'ಮಲಗದಲ್ಲಿ ನನ್ನ ಮನೆ'ಯನ್ನು ವಿಮರ್ಶಿಸಿ, ಯಜ್ ಎಫ್ ಯವರು ಹೇಳುತ್ತಾರೆ ಬಡವರ ವಿರುದ್ಧ ಶ್ರೀಮಂತರು ಮಜೂರರ ವಿರುದ್ಧ ಭಂಡವಾಳಿಗರು ಎಂಥ ಮಾಡಬಾರದ ಕಾರ್ಯಗಳನ್ನು ಮಾಡಲಿಕ್ಕೂ ಹೇಸುವವರಲ್ಲವೆಂಬುದಕ್ಕೆ ಈ ಪುಸ್ತಕವು ಸಾಕ್ಷಿಯಾಗಿದೆ ಅಂತಿರುವಾಗ ಸರ್ ಮಿಚೆಲ್ಲರು ಸ್ಪೈನಿನಲ್ಲಿ ಶಾಂತಿಯನ್ನು ಹುಡುಕಿ ಹೋಗಿ ಕ್ರಾಂತಿಯನ್ನು ನೋಡಿದರಲ್ಲಿ ಆಶ್ಚರ್ಯ ಏನು

ಜೆಬ್ಕೊ ಟಾಯಿಲೆಟ್ ಸಾಬೂನುಗಳು

ಜನಜನಿತವಾಗುತ್ತಿವೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ನಗರದಲ್ಲಿ ಅವುಗಳ ಉತ್ತಮ ಗುಣ ಮತ್ತು ಕಡಿಮೆ ಬೆಲೆ ಇದಕ್ಕೆ ಕಾರಣ

gabco

ಜೆಬ್ಕೊ ನೀಮ್

ಇದು ಸಾಬೂನುಗಳಲ್ಲಿ ರಾಣಿ

ದೊಡ್ಡ ಬಿಲ್ಲೆ! ಆಕರ್ಷಣೀಯ ಬೆಲೆ!

ಜೆಬ್ಕೊ ಸೇಂಡಲ್, ಕಸ್, ಗ್ಲಿಸರಿನ್

ಇವೆಲ್ಲಾ ಅವುಗಳ ಗುಣಗಳಿಗೆ ತಕ್ಕುದಾದವುಗಳು.

ಅವುಗಳ ಮೇಲೆಲ್ಲಾ ಜೆಬ್ಕೊ ಚಿಹ್ನೆಯು ಇದೆ.

ಪರಿಚಿತಿ ಹೊಂದಿದ ಉಚ್ಚ ಸ್ವದೇಶಿ ಒಡವೆಗಳನ್ನೆ ಉಪಯೋಗಿಸಿರಿ.

JAYA BHARATHAM CO., MADRAS.

ಪರಿವರ್ತನ

ಒಬ್ಬ ರಾಜನಿದ್ದನು. ಅವನು ದಾನ ರ್‍ಯ ಉದಾರ ಹೃದಯಿಯೂ ಎಂದು ಪ್ರಸಿದ್ಧನಾಗಿ ನು. ರಾಜನ ಖಜಾನೆಯು ನವರತ್ನಗಳಿಂದ ಂಬಿತುಳುಕುತ್ತಿತ್ತು. ರಾಜನು ಭೂಲೋಕದ ಕುಬೇರನೆಂದೇ ಹೇಳಬಹುದು. ಬಡರು ಬರುತ್ತಿದ್ದರು; ಬೊಗಸೆ ತುಂಬಾ ದ್ರವ್ಯ ತೆಗೆದುಕೊಂಡು ಹಿಂದಿರುಗುತ್ತಿದ್ದರು. ಷ್ಟ ಖಜಾನೆ ಎಂದಾದರೂ ಬರಿದಾದೀತೆಂದು ಅವನು ಒಂದು ಕ್ಷಣ ಕಾಲ ಕೂಡ ಯೋಚಿಸಲಿಲ್ಲ.

ರಾಜನ ದಾನ ಶೀಲತೆಯು ಪ್ರಸಿದ್ಧ ಸರ್ವ ಹರಡಿತು ಖಜಾನೆ ಖಾಲಿ ಆಗುತ್ತ ಬಂತು. ಆದರೂ ಕೂಡ ರಾಜನಿಗೆ ಅದರ ಲಕ್ಷ್ಯ ರಲಿಲ್ಲ.

ಮಿತ್ರರು ಬಂದು ಹೇಳಿದರು 'ಏನಪ್ಪಾ, ನಧರ್ಮ ಮಾಡುವದಾದರೂ ಹೀಗೆ ಮಾಡುದೆ? ಮನೆ ಮಾರಿ ಉಪಕಾರಿಯಾಗುವದು ಣಿಯ ಲಕ್ಷಣವಲ್ಲ, ಮೂರ್ಖನು ಹಾಗೆ ಮಾಡುತ್ತಾನೆ.

ಉತ್ತರ ಬಂದಿತು—'ಇಲ್ಲಿ ಯಾರು ಏನು ಳಿದರೂ ನನಗದರ ಪರವೆ ಇಲ್ಲ. ನನಗೆ ಲೋಕದ ಆಶೀರ್ವಾದವು ಬೇಕು.'

ಂ ಂ ಂ ಂ

ರಾಜನು ಬಡವನಾದನು ಅವನಲ್ಲಿ ದು ಕವಡೆ ಕಾಸು ಕೂಡ ಉಳಿಯಲಿಲ್ಲ. ನುನೆ ಮಾರಿತು, ರಾಜ್ಯ ಜಾರಿತು, ಅವನು ಡಿಗೆ ಹೊರಟು ಹೋದನು. ಭಿಕ್ಷೆ ಬೇಡಿ ಟ್ಟೆ ಹೊರೆಕೊಳ್ಳುವದು ಅವನಿಗೆ ರುಚಿಸಲ್ಲ. ಯಾಕಂದರೆ ಅವನು ಅರಸಾಗಿದ್ದನು

ಂ ಂ ಂ ಂ

ಅವನು ಒಂದು ಕಡೆ ಮಲಗಿದ್ದ ಅವನಿಂದು ಕನಸು ಬಿದ್ದಿತು. ಆ ಕನಸಿನಲ್ಲಿ ವನು ಚಿನ್ನದ ಕೋಳಗಳಿಂದ ಬಂಧಿಸಲ್ಪಟ್ಟವಾಗಿ ಪ್ರಾಯಶಃ ಬ್ರಹ್ಮನ ದರಬಾರಿನಲ್ಲಿ ತ್ತಿದ್ದನು. ದೇವತೆಗಳು ಸಭೆ ಕೂಡಿದ್ದರು ಹ್ಮನು ಬಂದು ತನ್ನ ಆಸನದಲ್ಲಿ ಕೂತುಕೊಂಡು

ರಾಜನು ಬ್ರಹ್ಮನಿಗೆ ದಂಡವತ್ ಪ್ರಣಾಮಾಡಿದನು. ಚಿತ್ರಗುಪ್ತನು ದಾಖಲೆಗಳ್ನು ಮುಂದಿಟ್ಟನು ಬ್ರಹ್ಮನು ಅವುಗಳನ್ನು ಓದಿದನು. ಕಣ್ಣುಗಳು ಸಿಟ್ಟಿನಿಂದ ಕೆಂಪಾವು ಹೇಳಿದನು—'ನೀನು ರಾಜನೊ?'

ಅಲ್ಲ, ಬುದ್ಧಿ, ಒಂದು ಸಮಯಕ್ಕೆ ರಾಜಗಿದ್ದೆ ಆದರೆ ಇಲ್ಲಲ್ಲ, ಮೃತ್ಯುಲೋಕಲ್ಲಿ'

ಬ್ರಹ್ಮನು ಅರಚಿದನು 'ಅಲ್ಲ, ಅಲ್ಲ, ನು ಈಗಲೂ ರಾಜನು, ನೀನು ಈಗಲೂ ಜನು!'

'ಕೃಪಾನಾಥ! ತಾವು ನನಗೆ ತಮಾಷಿ ಡುತ್ತೀರಿ!'

'ಇಲ್ಲ, ನೀನು ಈಗಲೂ ರಾಜನಾಗಿದ್ದುವೇ ನಿನ್ನ ಅಪರಾಧವಾಗಿದೆ ಹೋಗು, ಗು, ಮೃತ್ಯುಲೋಕಕ್ಕೆ ಪುನಃ ಹೋಗು ದ್ದ ಧನದ್ರವ್ಯಗಳನ್ನು ತೆಗೆದುಕೊಂಡು ಕ್ಕೆ ಬಾ'

ರಾಜನು ಗಾಬರಿಯಾದನು ಅವನು ಳಿದನು—'ಮಹಾರಾಜ! ಈಗ ನನ್ನ ಕೂಡೆ ಎಲ್ಲಿ?'

'ನೀನು ಸುಳ್ಳು ಹೇಳುತ್ತೀ ನಿನ್ನೊಡನೆ ಕಾಸು ಇಲ್ಲದಿರಬಹುದು ಆದರೆ ನೀನು ನ್ನು ಮಾರಿ ಸ್ವರ್ಗೀಯ ಸುಖವನ್ನು ಕೊಂಡಿದ್ದಿ.'

'ದಯಾಮಯ! ನಾನು ಹಣ ಕೊಟ್ಟು ನ್ನೂ ಕೊಂಡುಕೊಳ್ಳಲಿಲ್ಲವಲ್ಲ!'

'ಏನನ್ನೂ ಕೊಳ್ಳಲಿಲ್ಲ! ನೀನು ಬಡವರಿಗೆ ಕಾಸು ಕೊಟ್ಟು ಅವರ ಶುಭಾಶೀರ್ವಾದಗಳನ್ನು ಕೊಂಡುಕೊಂಡೆ. ಜಗತ್ತಿನಲ್ಲಿ ಬೊ ಬಡವರಾಗಿದ್ದ ಅವರು ಈಗ ಶ್ರೀಮಂತರಿರುವದು ನಿಜ. ಆದರೆ ಸ್ವರ್ಗಲೋಕಕ್ಕೆ ಬರುತ್ತಾ ಅವರು ಬರಿ ಕೈಯಿಂದಲೇ ಬರಬೇಕಾಗುವದು. ಆದರೆ ನೀನು? ನೀನು ಅಲ್ಲಿ ಬಡವನಾಗಿಯಾದರೂ ಇಲ್ಲಿ ಶ್ರೀಮಂತನಾಗಿದ್ದಿ ಲೋಕದ ಜನರ ಶುಭಾಶೀರ್ವಾದಗಳ ಭಂಡಾರವೇ ನಿನ್ನೊಡನೆ ಇದೆ. ಹೋಗು ಆ ಆಶೀರ್ವಾದಗಳ ಭಂಡಾರವನ್ನು ಪುನಃ ಮೃತ್ಯುಲೋಕಕ್ಕೆ ಹೋಗಿ ಹಂಚು, ಮತ್ತು ಮರಳು ಇಲ್ಲಿಗೆ ಬರುವ ಆ ಬಡಪಾಯಿಗಳು ನಿನ್ನಿಂದ ಇಲ್ಲಿಯ ಸ್ವಲ್ಪ ಮಾನವನ್ನು ಕೊಂಡುಕೊಳ್ಳಲಿ. ನೀನು ಬಹಳ ಸ್ವಾರ್ಥಿಯಾಗಬೇಡ. ನೋಡು! ಮೃತ್ಯುಲೋಕದಲ್ಲಿ ಆಶೀರ್ವಾದ ರೂಪೀ ಹಣ ಅಲ್ಲದೆ ಇರುವದರಿಂದ ಅಲ್ಲಿ ಎಷ್ಟು ಪಾಪವು ಹರಡುತ್ತದೆ ನೀನು ಬಡವರಿಂದ ಆಶೀರ್ವಾದ ತೆಗೆದುಕೊಂಡು ಬದಲಾಗಿ ಅವರಿಗೆ ಹಣ ಕೊಟ್ಟೆ ಈಗ ಮೃತ್ಯುಲೋಕದಲ್ಲಿ ಒಬ್ಬನಾದರೂ ಬಡವನಿಲ್ಲ ಆದ್ದರಿಂದ ಅಲ್ಲಿ ಹಣದ ದುರುಪಯೋಗವಾಗುತಿದೆ. ಅವರು ಐಹಿಕ ಸುಖಭೋಗಗಳಲ್ಲಿ ಎಷ್ಟು ಮಗ್ನರಾಗಿರುವರೆಂದರೆ, ಅವರಿಗೆ ಪಾರಲೌಕಿಕ ಸುಖಭೋಗಗಳ ಸ್ವಲ್ಪ ಮಾತ್ರವಾದರೂ ಚಿಂತೆ ಇರುವದಿಲ್ಲ. ಹೋಗು, ನಿನ್ನ ಆಶೀರ್ವಾದಗಳ ಸಂಪತ್ತನ್ನು ಶ್ರೀಮಂತರೊಳಗೆ ಹಂಚಿಹಾಕು ಎಲ್ಲ ಆಶೀರ್ವಾದಗಳನ್ನು ಕೇವಲ ತನಗಾಗಿ ಇಟ್ಟುಕೊಳ್ಳಬೇಡ. ಕೆಲವನ್ನು ಅವರಿಗೂ ಕೊಡು. ಅವರು ಇಲ್ಲಿಗೆ ಬರುತ್ತಾ ಬರಿಕೈಯಿಂದ ಬಾರದಿರಲಿ'

ರಾಜನ ಕಣ್ಣುಗಳು ತೆರೆದುವು. ಅವನು ಪೇಟೆಯ ಕಡೆಗೆ ಹೊರಟ

ಜನರು ನೋಡಿದರು ಒಬ್ಬ ಫಕೀರನು ಊರೂರು, ಹಳ್ಳಿಹಳ್ಳಿ, ಕೇರಿ ಕೇರಿ ತಿರುಗುತ್ತ ಇದ್ದಾನೆ, 'ಆಶೀರ್ವಾದ ಬೇಕೆ, ಶುಭ ಆಶೀರ್ವಾದ ಬೇಕೆ?' ಎಂದು ಶ್ರೀಮಂತ ಜನರನ್ನು ಕೇಳುತ್ತ ಕೇಳುತ್ತ ಸಂಚರಿಸುತ್ತಾನೆ

—ವಿಶ್ವಮಿತ್ರದಲ್ಲಿ ಶ್ರೀ 'ಆಜಾದ'ರ ಒಂದು ಕತೆಯ ಅನುವಾದ.

The Estates & Agency Co., Ltd.

Incorporated in England.

ಮಿಶ್ರರಹಿತ ಟೀ ಬಗ್ಗೆ ಭದ್ರತೆ.

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಈ ಕೆಳಗೆ ಸೂಚಿಸಿದ ನಿಶಾನಿ ಮತ್ತು ಅಡ್ಡಪಟ್ಟಿಗಳಿಂದ ಸುತ್ತಲ್ಪಟ್ಟು, ಸೀಲ್ ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲರಿಗೂ ತಿಳಿಸಲು ಆಶಿಸುತ್ತೇವೆ



PYKARA NO. 1 DUST.
SEAFORTH NO. 1 DUST.
HIGHFOREST NO. 1 DUST

ನಮ್ಮ ಜನಪ್ರೀತವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡಕೊಳ್ಳುವಾಗ ನಮ್ಮ ನಿಶಾನಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡಕೊಳ್ಳುವದು

The Estates & Agency Company Ltd.
Head Office:-NADUVATAM P. O
Sales Branch:-COCHIN.

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕಾ 'ಕಾಂತಿ' ಟೊಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು.

'ಕಾಂತಿ' ಸಾಬೂನನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಟಲೆ ಜನರು ಶ್ಲಾಘಿಸಿ ಉಪಯೋಗಿಸುವರು.

ಡಿಸ್ಟ್ರಿಬ್ಯುಟರರು —
ಎಸ್. ಆರ್. ನ್ಯಾಕ್,
ಮಂಗಳೂರು

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ.

★ ಹಿಂದೂದೇಶದ ★ ಔದ್ಯೋಗಿಕ ಉನ್ನತಿಗೆ ಸರಕಾರವೇ ಜವಾಬುದಾರ

ಕೈಗಾರಿಕೆಯ ಅಭಿವೃದ್ಧಿಯಾಗದೆ ಸ್ವರಾಜ್ಯವು ಕನಸಿನ ಗಂಟಾಗುತ್ತದೆ
ಕಾಂಗ್ರೆಸ ಸರಕಾರಗಳ ಲಕ್ಷ್ಯವು ಮುಖ್ಯವಾಗಿ ದೇಶದ ಔದ್ಯೋಗಿಕ ಉನ್ನತಿಯ ಕಡೆಗೆ ಇರಬೇಕು.

ಕೈಗಾರಿಕೆಗಳ ವಿಷಯದಲ್ಲಿ ನಮ್ಮ ದೇಶದ ಸ್ಥಿತಿಗತಿಗಳು ಎಷ್ಟು ಕನಿಷ್ಟವಾಗಿರುವವು ಎಂದರೆ—ಇದು ತನ್ನ ನಿತ್ಯಗಟ್ಟಲೆಯ ಅವಶ್ಯಕತೆಗಳನ್ನು ಪೂರೈಸಮಾಡಲಿಕ್ಕಾಗಿಯೂ ವಿದೇಶಗಳ ಕಡೆಗೆ ಬಾಯಿ ಬಿಟ್ಟು ನೋಡಬೇಕಾಗಿದೆ ಪ್ರಧಾನ ಕೈಗಾರಿಕೆಗಳಿಗೆ ಬೇಕಾದ ಸಾಮಾನುಗಳೆಲ್ಲ ನಮಗೆ ಪರದೇಶಗಳಿಂದ ಬರುತ್ತಿವೆ. ಹೆಸರು ಹೇಳಿ ಅಭಿಮಾನಪಡುವಂಥ ಯಾವ ಕೈಗಾರಿಕೆಯೂ ನಮ್ಮ ದೇಶದಲ್ಲಿ ಉನ್ನತಾವಸ್ಥೆಯಲ್ಲಿ ಇದ್ದಿರುವದಿಲ್ಲ. ರಕ್ಷಣೋಪಾಯಗಳಿಗೆ ಬೇಕಾದಂಥ ಅಸ್ತ್ರಶಸ್ತ್ರಗಳ ವಿಷಯದಲ್ಲಂತೂ ನಾವು ಇತರ ದೇಶಗಳಿಗಿಂತ, ಹಿಂದೆ ಬಹಳ ಇರುತ್ತೇವೆ.

ಪರದೇಶಗಳೊಡನೆ ನಮಗಿರುವ ವ್ಯವಹಾರಿಕ ಸಂಬಂಧವು ಆಕಸ್ಮಿಕ ಕಾರಣದಿಂದ ಕಡಿದು ಹೋದುದಾದರೆ, ಒಂದು ದಿನ ಮಾತ್ರಕ್ಕಾಗಿಯಾದರೂ ಪರಕೀಯರ ದಾಳಿಯಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಲಾರೆವು ಇಂಥ ದುಸ್ಥಿತಿಯು ಇರುವತನಕ ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯ ಕುರಿತು ಆಡುವ ಮಾತುಗಳು ಡಾಂಭಿಕತನದ್ದೇ ಸರಿ ಈ ದಿನಗಳಲ್ಲಿ ದುರ್ಬಲ ಜನಾಂಗವು ಕ್ಷಣ ಮಾತ್ರವಾದರೂ ಸ್ವತಂತ್ರವಾಗಿ ಜೀವಿಸುವ ಸಂಭವವಿರುವದಿಲ್ಲ ಅಬಿಸೀನಿಯ ಚೈನಗಳ ವರ್ತಮಾನಸ್ಥಿತಿಯು ನಮ್ಮ ಕಣ್ಣುಗಳನ್ನು ತೆರೆಯಿಸಲಿಕ್ಕೆ ಯಥೇಷ್ಟ ಸಾಕು ಎಂಬುದನ್ನು ಡಾಕ್ಟರ್ ವಿ ಯುಸ್ ದುಬೆಯವರು ಹಿಂದುಸ್ಥಾನ ಟೈಮ್ಸ್ ಪತ್ರಿಕೆಯಲ್ಲಿ ಬರೆದ ಲೇಖನವು ಸ್ಪಷ್ಟ ಮಾಡಿಯದೆ.

ಅತ್ಯಾಧುನಿಕ ಯಂತ್ರೋಪಕರಣಗಳ ಸಹಾಯ ತೆಗೆದುಕೊಂಡು ವೈಜ್ಞಾನಿಕರೀತಿಯಿಂದ ಮಾಡುವ ಈ ಕಾಲದ ಯುದ್ಧಕ್ರಮದಲ್ಲಿ ಮನುಷ್ಯ ಬಲವು ಕಾಸಿನ ಪ್ರಯೋಜನದ್ದಾಗಿದೆ. ಶಾಂತಿ ಮತ್ತು ಯುದ್ಧ ಕಾಲದಲ್ಲಿ ಸಹಾಯಕ್ಕೆ ಬರುವ ಕೈಗಾರಿಕೆಗಳ ಉನ್ನತಿಯು ದೇಶದಲ್ಲಿ ಸರ್ವತ್ರ ಏಕಪ್ರಕಾರ ಆಗಿದ್ದರೆ ಮಾತ್ರ ಈ ಮನುಷ್ಯ ಬಲದಿಂದ ಏನಾದರೂ ಉಪಯೋಗವನ್ನು ಪಡೆಯಬಹುದು ಪ್ರಯತ್ನಪಟ್ಟರೆ ಬರೇ ಎರಡು ವರ್ಷಗಳಲ್ಲಿ ಪ್ರಾಯಕ್ಕೆ ಬಂದ ಎಲ್ಲಾ ಸ್ತ್ರೀ ಪುರುಷರಿಗೆ ಸೈನಿಕ ಶಿಕ್ಷಣವನ್ನು ಕೊಟ್ಟು ಅವರನ್ನು ಯುದ್ಧಕ್ಕೆ ಸಿದ್ಧಮಾಡಬಹುದು. ಆದರೆ ಆಧುನಿಕ ಯುದ್ಧೋಪಕರಣಗಳನ್ನು ಭಗೀರಥ ಪ್ರಯತ್ನ ಮಾಡಿದರೂ ಕೂಡ ಹತ್ತು ವರ್ಷಗಳಲ್ಲಿ ಬೇಕಾದಷ್ಟು ಸಿದ್ಧ ಮಾಡುವದು ಸಾಧ್ಯವಾಗಿರುವದಿಲ್ಲ.

ಆದಕಾರಣ ಮುಂದಿನ ಹತ್ತು ವರ್ಷಗಳಲ್ಲಿ ಮುಖ್ಯವಾಗಿ ನಮ್ಮ ದೇಶದಲ್ಲಿ ಶಾಂತಿ ಮತ್ತು ಯುದ್ಧ ಎರಡೂ ಕಾಲಗಳಲ್ಲಿ ಸಹಾಯಕ್ಕೆ ಬರುವಂಥ ಕೈಗಾರಿಕೆಯ ಉನ್ನತಿಯೊಂದನ್ನೇ ಹೆಚ್ಚಾಗಿ ಸಾಧಿಸುವದು ನಮ್ಮ ಕಾಂಗ್ರೆಸ ಸರಕಾರಗಳ ಪ್ರಧಾನ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯವನ್ನು ಯಥಾ ಯೋಗ್ಯ ಮಾಡಿ ಮುಗಿಸಿದರೆ ಮಾತ್ರ ಬ್ರಿಟಿಷರ ಅಥವಾ ಇತರ ವಿದೇಶಗಳ ಸಹಾಯವನ್ನು ತೆಗೆದುಕೊಳ್ಳದೆ ಸ್ವತಂತ್ರ ಹಿಂದೂದೇಶವನ್ನು ಅನ್ಯರ ಆಕ್ರಮಣಗಳಿಂದ ರಕ್ಷಿಸಿಕೊಳ್ಳುವದು ಸಾಧ್ಯವಾದೀತು. ಸರಕಾರಗಳ ಲಕ್ಷ್ಯವು ಮುಖ್ಯವಾಗಿ ಲೋಹ ಸಂಬಂಧವಾದ ಕೈಗಾರಿಕೆಗಳು ರಸಾಯನಿಕ ದ್ರವ್ಯಸಂಬಂಧವಾದ ಕೈಗಾರಿಕೆಗಳು, ಮತ್ತು ಯಂತ್ರೋಪಕರಣಗಳ ಸಂಬಂಧವಾದ ಪ್ರಧಾನ ಕೈಗಾರಿಕೆಗಳ ಉನ್ನತಿಯ ಕಡೆಗೆ ಅವಶ್ಯ ಇರಬೇಕಾಗುತ್ತದೆ.

ಕಾಂಗ್ರೆಸಿನ ಬಹುಮತವಿರುವ ಎಲ್ಲಾ ಪ್ರಾಂತೀಯ ಸರಕಾರಗಳು ಒಂದುಗೂಡಿ ಕೈಗಾರಿಕೆ ಉನ್ನತಿಯನ್ನು ಸಾಧಿಸುವ ಒಂದು ದಶವಾರ್ಷಿಕ ಯೋಜನೆಯನ್ನು ತಜ್ಞರ ಮೂಲಕ ಸಿದ್ಧಮಾಡಿ ಆ ಪ್ರಕಾರ ಕೆಲಸವನ್ನು ಮಾಡಿದ್ದಾದರೆ, ಈ ಅವಧಿಯೊಳಗಾಗಿ ನಮ್ಮ ದೇಶವು ತನ್ನ ನಿತ್ಯ ಜೀವನದ ಆವಶ್ಯಕತೆಗಳ ಸ್ವಾವಲಂಬಿಯಾಗುವದರಲ್ಲಿ ಸಂದೇಹವಿಲ್ಲ ಆಗ ಶಾಂತಿ ಮತ್ತು ಯುದ್ಧಕಾಲದಲ್ಲಿ ಅದು ಸುರಕ್ಷಿತವಾಗಿ ಇರಬಹುದು

ಕೈಗಾರಿಕೆಗಳ ಉನ್ನತಿಯನ್ನು ಸಾಧಿಸಬೇಕಾದ ಈ ಸಂದರ್ಭದಲ್ಲಿ ನಾವು ಹತ್ತಿರತ್ತಿರವಾಗುತ್ತಿರುವ ಆ ಒಂದು ಆಪತ್ತಿಯ ಕಡೆಗೂ ಧ್ಯಾನವನ್ನಿಡಬೇಕು. ಇಂಗ್ಲಂಡ ಸ್ವೀಡನ, ಅಮೇರಿಕ ಮೊದಲಾದ ಮುಂದುವರಿದ ಕೆಲವು ಪರದೇಶಗಳ ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಪ್ರಧಾನ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಇವೆ ಹೀಗೆ ನಮ್ಮ ದೇಶದ ಜೀವಾಳವಾಗಿರುವ ಮೇಲೆ ಹೇಳಿದಂಥ ಪ್ರಧಾನ ಕೈಗಾರಿಕೆಗಳೆಲ್ಲ ವಿದೇಶೀಯರ ಹಸ್ತಗತವಾದರೆ, ಮತ್ತೆ ನಮಗೆ ಬೇಕಾದಾಗ ಅವು ನಮ್ಮ ಕೈಗೆ ಬರುವಂತೆ ಇರುವದಿಲ್ಲ ಯಾಕಂದರೆ ಸ್ವದೇಶಿ ಕಂಪನಿಗಳು, ಮೊದಲೇ ಸ್ಥಾಪಿಸಲ್ಪಟ್ಟ ವಿದೇಶೀ ಕಂಪನಿಗಳೊಡನೆ ಸ್ಪರ್ಧೆಗೆ ನಿಂತು ಬದುಕಿಕೊಳ್ಳುವದು ಎಷ್ಟು ಮಾತ್ರಕ್ಕೂ ಸಾಧ್ಯವಲ್ಲ ಅವುಗಳನ್ನು ರಾಷ್ಟ್ರೀಯ ಸರಕಾರದ ಅಂಕೆಗೆ ತರುವದು ಕೂಡ ಕಷ್ಟಸಾಧ್ಯವಾದ ವಿಷಯವಾಗುತ್ತದೆ ಯಾಕಂದರೆ ಅಂಥ ಪ್ರಯತ್ನಗಳಿಂದ ಅಂತರಾಷ್ಟ್ರೀಯ ಬಿಕ್ಕಟ್ಟುಗಳು ಉಂಟಾಗುವವು ಆದ್ದರಿಂದ ವಿದೇಶಿ ಕಂಪನಿಗಳು ಸ್ವದೇಶದಲ್ಲಿ ಸ್ಥಾಪಿಸಲ್ಪಡುವ ಈ ಸವ ಸ್ಥಿಯನ್ನು ಕೂಡ ಕಾಂಗ್ರೆಸ ಸರಕಾರಗಳು ಆಲೋಚಿಸಬೇಕಾಗಿದೆ

ಪ್ರಧಾನ ಕೈಗಾರಿಕೆಗಳ ಕುರಿತು ಕಾಂಗ್ರೆಸು ಸರಕಾರಗಳು ತಮ್ಮ ನೀತಿಯನ್ನು ಪ್ರಕಟಿಸಿಲ್ಲ ಜನತೆಯ ಮತ್ತು ಕೃಷಿಕ ಮಜೂರರ ಸ್ಥಿತಿಗತಿಗಳ ಸುಧಾರಣೆಗಾಗಿ [illegible] ತುಂಬಾ ಪ್ರಯತ್ನಿಸುತ್ತಿವೆ ಎಂಬುದು ನಿಜ ಆದ ಅವರ ಆದ್ಯ ಕರ್ತವ್ಯವಾಗಿದ್ದ [illegible] ಯಾರೂ [illegible] ಆಡುವದಿಲ್ಲ ಆದರೂ ಕೂಡ ಪ್ರಧಾನ ಕೈಗಾರಿಕೆಗಳ ಉನ್ನತಿಗಾಗಿ ಒಂದು ನೀತಿಯನ್ನು ದೃಢಪಡಿಸಿ ಕಾಂಗ್ರೆಸಿನ ಅಧಿಕಾರಿಗಳು ಮಂತ್ರಿ ಮಂಡಲಗಳಿಗೆ ಅವಶ್ಯಕ ಸೂಚನೆಗಳನ್ನು ಕೊಡುವದು ಅಗತ್ಯವಾಗಿರುವದು

ಕೈಗಾರಿಕೆಗಳ ಕುರಿತು ಇನ್ನು ಹತ್ತು ವರ್ಷಗಳಲ್ಲಿ ದೇಶವು ಸ್ವಾವಲಂಬಿಯಾಗವಂತೆ ಮಾಡುವದು ಕಾಂಗ್ರೆಸಸರಕಾರಗಳ ಧ್ಯೇಯವಾಗಿರಬೇಕು ಅದಕ್ಕೋಸ್ಕರ ಈ ಸರಕಾರಗಳು ಪ್ರತಿಯೊಂದು ಪ್ರಾಂತ್ಯಕ್ಕಾಗಿ ತಜ್ಞರ ಮೂಲಕ ಒಂದೊಂದು ಯೋಜನೆಯನ್ನು ಸಿದ್ಧ ಮಾಡಬೇಕು ಬೇರೆಬೇರೆ ಪ್ರಾಂತ್ಯಗಳಿಗಾಗಿ ಬೇರೆಬೇರೆ ಅನುಕೂಲವಾದ ಕೈಗಾರಿಕೆಗಳನ್ನು ವಿಂಗಡಿಸಿಕೊಟ್ಟು ಆ ಪ್ರಾಂತ್ಯಗಳಲ್ಲಿ ಆ ಕೈಗಾರಿಕೆಗಳ ಪೂರ್ಣ ವಿಕಾಸವಾಗುವಂತೆ ನೋಡಿಕೊಳ್ಳಬೇಕು. ಹೀಗೆ ಮಾಡಿದರೆ ಅಂತರ್ಪ್ರಾಂತೀಯ ಪರ್ಸಣೆ ಮತ್ತು ಸ್ಪರ್ಧೆಯುಂಟಾಗುವ ಸಂಭವವಿರುವದಿಲ್ಲ ಪ್ರತಿವರ್ಷವೂ ಕೈಗಾರಿ

(೬ನೇ ಪುಟಕ್ಕೆ ಮುಂದುವರಿಸಿದುದು)

ಸದುಪಯೋಗಕ್ಕೆ

'NACET' BLADES!

ಅಮೂಲ್ಯವಾಗಿವೆ



ಸದುಪಯೋಗದ ನಸೆಟ್ ಬ್ಲೇಡುಗಳು ಈಗ ಅಮೂಲ್ಯವಾಗಿವೆ, ಕಡಿಮೆ ಮೌಲ್ಯದಲ್ಲಿ ನುಣುಪಾಗಿ ಕ್ಷೌರವನ್ನು ತೆಗೆಯುವುದಲ್ಲದೆ ನಸೆಟ್ ಬ್ಲೇಡುಗಳು ಧರ್ಮಾರ್ಥ ಬಹುಮಾನಗಳನ್ನು ಪಡೆಯುವ ಅವಕಾಶವನ್ನೂ ಕೊಡುತ್ತವೆ. ಆ ಬ್ಲೇಡುಗಳಲ್ಲಿ ಇಂಗ್ಲಿಷ್ ಅಕ್ಷರಗಳು (ಚಿತ್ರದಲ್ಲಿ ಕಾಣಿಸಿದಂತೆ) ಇರುವ ಬ್ಲೇಡುಗಳನ್ನು ಜಾಗ್ರತೆಯಾಗಿ ಇಟ್ಟುಕೊಂಡರೆ ನಿಮಗೆ ಬಹುಮಾನಗಳು ದೊರೆಯುವ ಸಂಭವವಿದೆ. ಇಂದೇ ಒಂದು ಪೆಕೆಟ್ ಬ್ಲೇಡುಗಳನ್ನು ಖರೀದಿಮಾಡಿರಿ. ಮತ್ತು ಮುಂದಿನ ಆದರ ವಿವರದ ಬಗ್ಗೆ ಈ ವಾರಪತ್ರಿಕೆಯನ್ನು ನೋಡುತ್ತಿರಿ.

7 ಆಣೆಗಳಿಗೆ ಬ್ಲೇಡುಗಳು 10!

3 ಗೂಟದ ರೇಜರುಗಳಿಗೆ ಉಪಯೋಗಿಸಬಹುದು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ)

ವ್ಯಾಧಿಗೆ ಸಿದ್ಧೌಷಧ



ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ನಂತಹ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿ ಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೊನೊರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ [illegible] ಎಷ್ಟೇ ಹಳೆಯ [illegible] ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ [illegible] ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊಕಾಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್. ಜಸಾನಿ, ವಿಠಲ್‌ಭಾಯ ಪಟೇಲ್ ರೋಡ್, ಮುಂಬಯಿ 4

Sole Manufacturer **Dr. D. N JASANI,** Vithalbhai Patel Road, BOMBAY 4.

ಪರಮಾ

ಗೊನೋರಿಯ ಮುಂತಾದ ತೀವ್ರ ಮೇಹವ್ಯಾಧಿಗಳಿಗೆ ಕುತ್ತಾದ ರೋಗಿಯು ಸಕಾಲ ಯೋಗ್ಯ ಚಿಕಿತ್ಸೆ ನಡೆಸದಿದ್ದರೆ ಅವನು ಸಂತಾನಹೀನನಾಗುತ್ತಾನೆ ಒಂದು ವೇಳೆ ಮಗು ಹುಟ್ಟಿದರೂ ಅದು ಸದಾ ಅನಾರೋಗ್ಯವೂ, ಕುರೂಪಿಯೂ ಆಗಿರುವದು ಅಲ್ಲದೆ ರೋಗಿಯು ವಾಯುರೋಗ, ಮಧುಮೂತ್ರ, ರಕ್ತಹೀನತೆ. ಹುಚ್ಚು ಮುಂತಾದ ಹಾನಿಕರ ವ್ಯಾಧಿಗಳಿಂದ ನರಳುವನು ಆದ್ದರಿಂದ ಗೋನೋ ಲೆಕ್ಸ್ (ರಜಿಸ್ಟರ್ಡ) ಚಿಕಿತ್ಸೆಯನ್ನು ಪಡೆದು ಶಾಶ್ವತ ಗುಣವನ್ನು ಹೊಂದಿರಿ

ಧಾತುನಷ್ಟ, ಗೋನೋರಿಯಾ, ಉರಿಮೂತ್ರ, ಕಡಮೂತ್ರ, ಮೂತ್ರ ಬಂಧನ, ಸ್ವಪ್ನಸ್ಖಲನ, ಮುಂತಾದ ಮುಖವ್ಯಾಧಿಗಳೆಲ್ಲವೂ ಗೋನೋಲೆಕ್ಸಿನಿಂದ ಖಾತ್ರಿಯಾಗಿ ಗುಣವಾಗುತ್ತದೆ ಆದ್ದರಿಂದ ಈ ವ್ಯಾಧಿಗಳನ್ನು ನಿವಾರಿಸಿಕೊಳ್ಳಲು ಇಂಜಕ್ಷನ್ ಪಿಚಕಾರಿ ಪ್ರಯೋಗ ಮಾಡಿಸಿಕೊಳ್ಳಬೇಕಾಗಿಲ್ಲ. ಬಹಳ ಹಳೇ ರೋಗವಾಗಿದ್ದಲ್ಲಿ **ಗೋನೋಲೆಕ್ಸ್ ನಂ. ಒಂದನ್ನು** ಉಪಯೋಗಿಸಿರಿ.

ಬೆಲೆ ಒಂದಕ್ಕೆ ರೂ. ೨-೦-೦ (ಟೆ. ಖ. ಪ್ರತ್ಯೇಕ)

ಕರ್ನಾಟಕದ ಎಲ್ಲಾ ಪ್ರಾಮುಖ್ಯ ಸ್ಥಳಗಳಲ್ಲೂ ಸಪ್ಲಾಯರು ಮತ್ತು ಏಜಂಟರು ಬೇಕಾಗಿದ್ದಾರೆ.

ಸೋಲ ಏಜಂಟರು:—ಸ್ಟಾರ್ ಏಜನ್ಸಿ, ೧೭೪ ಹಾರನ್ಬಿ ಬಿಲ್ಡಿಂಗ್ಸ್, ಹಾರನ್ಬಿ ರೋಡ್, ಬೊಂಬಾಯಿ.

ಸಪ್ಲಾಯರು:—ಎಂ. ಡಿ. ವೋರಾ ಅಂಡ್ ಕೋ., ದರಾಬಜಾರ ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.

ನಾಜಿಗಳು ಅಧಿಕಾರಕ್ಕೆ ಬಂದ ಬಗೆ

ಜರ್ಮನಿಯಲ್ಲಿ ಹಿಟ್ಲರನ ನಾಜಿ ಪಕ್ಷದ ಸ್ಥಾಪನೆಯು ಹೇಗಾಯಿತು. ಹೇಗೆ ಅದು ಪ್ರಾದುರ್ಭಾವಕ್ಕೆ ಬಂದಿತು, ಹಿಟ್ಲರನು ಅಧಿಕಾರಾರೂಢನಾದು ಹೇಗೆ ಎಂಬೀ ಮೊದಲಾದ ಮನೋರಂಜಕ ಮತ್ತು ಬೋಧಪ್ರದ ವಿಷಯಗಳು ಈಗ ತಾನೆ ಪ್ರಕಟವಾಗಿರುವ 'ಹಿಟ್ಲರನ್ನು ನಾನು ಬಲ್ಲೆ!' (I know Hitler) ಎಂಬ ಪುಸ್ತಕದಲ್ಲಿ ಬಹು ಚೆನ್ನಾಗಿ ಪ್ರತಿಪಾದಿತವಾಗಿರುವವು. ಈ ಪುಸ್ತಕವು ಕುರ್ಟ ಜಿ. ಡಬ್ಲ್ಯು ಲುಡೆಕ್ ಎಂಬ ಜರ್ಮನನಿಂದ ಬರೆಯಲ್ಪಟ್ಟು ಜೆರೊಲ್ಡ್ಸ್ ಕಂಪನಿಯಿಂದ ಪ್ರಕಟವಾಗಿದೆ

ಗ್ರಂಥಕರ್ತರು 1922ರಲ್ಲಿ ನಾಜಿಪಕ್ಷಕ್ಕೆ ಸೇರಿದ್ದರು. ಅಂದಿನಿಂದ 1934ರಲ್ಲಿ ಅವರು ಒಂದು ಜೈಲಿನಿಂದ ತಪ್ಪಿಸಿಕೊಂಡು ಅಮೇರಿಕಕ್ಕೆ ಓಡಿಹೋಗುವ ತನಕ ಹಿಟ್ಲರನ ಮತ್ತು ನಾಜಿ ಪಾರ್ಟಿಯ ಬಹು ಸಮೀಪ ಸಂಬಂಧವನ್ನಿಟ್ಟುಕೊಂಡು ಅವನ ಮತ್ತು ಅದರ ಉನ್ನತಿಕ್ರಮದ ಸೂಕ್ಷ್ಮ ಅಧ್ಯಯನ ಮಾಡಿದ್ದರು ಆ ಅವಧಿಯಲ್ಲಿ ಅವರು ಬಹು ಮುಖ್ಯವಾದ ಕಾರ್ಯಗಳನ್ನು ಮಾಡಿ ಮುಗಿಸಿದ್ದರು ವಾಷಿಂಗ್ಟನ್ನಿನಲ್ಲಿ ನಾಜಿಗಳ ಪರವಾದ ಒಂದು ಪ್ರಚಾರ ಶಾಖೆಯನ್ನು ತೆರೆದರಲ್ಲಿ ಪ್ರಧಾನ ಕಾರ್ಯನಿರ್ವಾಹಕರಾಗಿದ್ದರು ಹಿಟ್ಲರನ ಕಡೆಯಿಂದ ಮುಸಲೋನಿಗೆ ಸಂದೇಶವಾಹಕನಾಗಿದ್ದನು.

ಆದರೆ ಕರ್ಮ ಧರ್ಮಸಂಯೋಗದಿಂದ ಉಪರೋಕ್ತ ಗ್ರಂಥಕರ್ತರು 1934ರಲ್ಲಿ ಸುಮಾರು ಎಂಟು ತಿಂಗಳುಗಳ ತನಕ ಜರ್ಮನಿಯ ಒಂದು ಜೈಲಿನಲ್ಲಿ ಕೊಳೆಯಬೇಕಾಗಿ ಬಂದಿತು ಅಲ್ಲಿ ಅವರು ಅಸಹನೀಯವಾದ ಭೀಕರನರಕಯಾತನೆಗಳನ್ನು ನೋಡಿದರು ಮಾತ್ರವಲ್ಲದೆ ಸ್ವತಃ ಅನುಭವಿಸಿದರು ಇದರ ಫಲಸ್ವರೂಪ ಗ್ರಂಥಕರ್ತರ ಮೊದಲಿನ ವಿಚಾರಗಳು ಸಂಪೂರ್ಣ ಬದಲಾದವು ಹಿಟ್ಲರ ಮತ್ತು ನಾಜಿಗಳ ಪರಮ ಅಭಿಮಾನಿಗಳಾಗಿದ್ದ ಅವರು ಈಗ ಅವನ ಪಾರ್ಟಿಯನ್ನು ತಾತ್ಸಾರ ತಿರಸ್ಕಾರಗಳಿಂದ ಕಾಣುವವರಾದರು

ಗ್ರಂಥಕರ್ತರು ತಮ್ಮ ಗ್ರಂಥವನ್ನು 1934ನೇ ಜೂನ್ 30ನೆ ತಾರೀಕಿನ ದಿನ ಹಿಟ್ಲರನ ಕ್ರೋಧಾಗ್ನಿಗೆ ಬಲಿಯಾದ ವೀರಜರ್ಮನರಿಗೆ ಭಕ್ತಿ ಪೂರ್ವಕ ಸಮರ್ಪಿಸಿರುವರೆಂಬುದರಿಂದಲೇ ಗ್ರಂಥಕರ್ತರ ಈಗಿನ ವಿಚಾರಗಳು ಎಂಥಹವಾಗಿರುವವೆಂಬುದು ಸ್ಪಷ್ಟವಾಗುತ್ತದೆ ಆ ದಿನ ಮಾಡಲ್ಪಟ್ಟ ಕೆಪ್ಟ ಅರ್ನ್ಸ್ಟ ರೋಹೆಮ್ ಗ್ರಿಗೋರ್ ಸ್ಟ್ರೆಸ್ಸರ್, ಇತ್ಯಾದಿ ಅನೇಕ ಮಂದಿ ನಾಜಿಗಳ ಪುಣ್ಯ ಸ್ಮಾರಕವಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ

ಗ್ರಂಥಕರ್ತರು 1922ರಲ್ಲಿ ಮೊಟ್ಟಮೊದಲು ಹಿಟ್ಲರನನ್ನು ಕಂಡರು ಅವನನ್ನು ಕಂಡಾಕ್ಷಣವೇ ಅವರ ವಿಚಾರ ವಿವೇಕಗಳು ಗಾಳಿಗೆ ಆರಿಹೋಗಿದ್ದುವುವಂತೆ ಅಕ್ಷರಮಟ್ಟಿಗೆ ಅವರು ಹಿಟ್ಲರನ ರೂಪರೇಖೆ, ಹಾವಭಾವ ಮಾತುಗಾರಿಕೆಯ ಕಡೆಗೆ ಆಕರ್ಷಿತರಾಗಿದ್ದರು ಹಿಟ್ಲರನ ಮಾತುಗಳು ಬಿಲ್ಲಿನಿಂದ ಬಿಟ್ಟ ತೀವ್ರ ತೀಕ್ಷ್ಣವೂ ಆದ ಬಾಣದಂತೆ ಕೇಳಿದ್ದವರ ಹೃದಯದ ಮೇಲೆ ಪರಿಣಾಮವನ್ನು ಉಂಟುಮಾಡದೆ ಇರುತ್ತಿರಲಿಲ್ಲ

ನಾಜಿ ಪಾರ್ಟಿಯಲ್ಲಿ ಹಿಟ್ಲರನನ್ನು ಬಿಟ್ಟರೆ, ಉಳಿದವರಲ್ಲಿ ಹೆಚ್ಚು ಆಕರ್ಷಕರಾಗಿದ್ದವರು ಕೆಪ್ಟನ ರೋಹೆಮ್ನಾಗಿದ್ದನು ಅವನು ತೀಕ್ಷ್ಣಬುದ್ಧಿಯ, ನಿರ್ಭಯ, ಗಂಭೀರ ಶುದ್ಧಹೃದಯದ ವೀರ ಮುಂದಾಳು ಆರಂಭಕಾಲದಲ್ಲಿ ನಾಜಿಗಳಿಗೆ ತಮ್ಮ ಕಾರ್ಯನಿರ್ವಾಹಕ್ಕೆ ಬೇಕಾದಷ್ಟು ಹಣಬಲಜನಬಲ, ಅಸ್ತ್ರಶಸ್ತ್ರಬಲಗಳನ್ನು ಅವನೇ ಒದಗಿಸಿ ಕೊಡುತ್ತಿದ್ದನು ಅವನಿರುತ್ತಿದ್ದಿಲ್ಲವಾದರೆ ಹಿಟ್ಲರನಿಗೆ ಈಗಿನ ಚೆನ್ಸಲರ್ ಪದವಿಯು ದೊರಕುವದು ಕನಸುಮನಸಿನಲ್ಲಿ ಕೂಡ ಸಾಧ್ಯವಾಗುವ ಸಂಗತಿಯಾಗಿರಲಿಲ್ಲ.

1923ರಲ್ಲಿ—ಮುಸಲೋನಿಯು ರೋಮನಗರಕ್ಕೆ ಮುತ್ತಿಗೆಹಾಕುವ ಒಂದು ತಿಂಗಳ ಮೊದಲು ಹಿಟ್ಲರನು ಗ್ರಂಥಕರ್ತರನ್ನು ತನ್ನ ದೂತನಾಗಿ ಮುಸಲೋನಿಯ ಬಳಿಗೆ ಕಳುಹಿಸಿಕೊಟ್ಟಿದ್ದನು. ಮಿಲಾನ ನಗರದಲ್ಲಿ ಮುಸಲೋನಿ ಲೂಡೆಕ್ಕರ ಭೇಟಿಯಾಗಿದ್ದಿತು 'ಮುಸಲೋನಿಯಿಂದ ಏನೇನನ್ನು ಪಡೆಯಲಿಕ್ಕೆ ಸಾಧ್ಯವೋ ಅದನ್ನೆಲ್ಲ ಪಡೆದು ಬಾ' ಎಂದು ಅವನು ಲೂಡೆಕ್ಕರನ್ನು ಆಜ್ಞಾಪಿಸಿದ್ದನಂತೆ!

ಹಿಟ್ಲರನಂತೆ ಮುಸಲೋನಿಯೂ ಚೆನ್ನಾಗಿ ವಿಚಾರ ಮಾಡಬಲ್ಲವ. ಮಹಾಯುದ್ಧವು ಮುಗಿದಾದ ಬಳಿಕ ಆಸ್ಟ್ರಿಯಕ್ಕೆ ಸೇರಿದ್ದ ಟಿರೋಲ್ ಎಂಬ ಜರ್ಮನರ ಪ್ರಾಂತ್ಯವು ಇಟಲಿಯ ಆಡಳಿತಕ್ಕೆ ಬಂದಿತ್ತು ಅದನ್ನು ಪುನಃ ಜರ್ಮನಿಗೆ ಹಿಂತಿರುಗಿಸುವ ಕುರಿತು ಮುಸಲೋನಿಯ ಅಭಿಪ್ರಾಯವನ್ನು ಲುಡೆಕ್ಕರು ಕೇಳಿದಾಗ—'ಓಹೋ! ಅದರ ಕುರಿತು ಚರ್ಚೆ ಇಲ್ಲ! ಮಾತಾಡಕೂಡದು!' ಎಂದು ಖಂಡಿತ ಮಾತುಗಳನ್ನು ಆಡಿದನು ತಂತಮ್ಮ ಸ್ವಾರ್ಥದ ಮುಂದೆ ಹಿಟ್ಲರ ಮುಸಲೋನಿಯರು ಪರಾರ್ಥವನ್ನು ಲೆಕ್ಕಿಸುವರೇ ಅಲ್ಲ ಎಂಬುದು ಘಟನೆಯಿಂದ ಸ್ಪಷ್ಟವಾಗುವದು

ಗ್ರಂಥಕರ್ತರು ತಮ್ಮ ಗ್ರಂಥದಲ್ಲಿ ನಾಜಿ ಮುಂದಾಳುಗಳನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ ಗೋಬೆಲ್ಸನ ಬಗ್ಗೆ ಯಾರೊಡನೆಯೂ ಕೂಡಿ ನಡೆಯುವವರಲ್ಲ, ಸ್ನೇಹಿತರೊಂದಿಗೆ ಒಂದರೆಕ್ಷಣ ಕಳೆಯುವವೆಂದರೂ, ಅದು ಅವರಿಗೆ ಬೇಡವೆಂದ ವಿಷಯ ಆದರೆ ಒಮ್ಮೆಗೆ ಎಲ್ಲಿಯಾದರೂ ಒಂದು ಸಭೆಯ ಮುಂದೆ ನಿಂತು ಮಾತಾಡತೊಡಗಿದರೆ ಅವರು ದೊಡ್ಡ ವಿಚಾರಿಗಳಾಗಿದ್ದರೆಂಬುದು ಗೊತ್ತಾಗುತ್ತಿತ್ತು. ಗೋಬೆಲ್ಸ ಮಹಾವಕ್ತಾರರು. ತಮ್ಮ ಮಾತಿನ ಸಾಮರ್ಥ್ಯ [illegible] ವನ್ನು ಬೀಸಿಯೇ ಅವರು ಜನರನ್ನು ತಮ್ಮ ಕಡೆಗೆ ಸೆಳೆದು ಹಿಡಕೊಳ್ಳಲು ಸಮರ್ಥರಾದ ಮಾಟಗಾರರಾಗಿದ್ದರು ನೋಡಿದರೆ ಸಾಮಾನ್ಯವ್ಯಕ್ತಿ ಆದರೆ ಮಾತನಾಡಲಾರಂಭಿಸಿದಾಗ ಕಣ್ಣು ಮುಚ್ಚಲಿಯಿಂದ ನೀರು ಸೋಸ್ಪುಯ ಜಲಪ್ರಪಾತವಾದಂತೆ ಅವರ ಬಾಯಿಯಿಂದ ಮಾತುಗಳು ಹರಿದು ಬರುತ್ತಿದ್ದುವು

1932ನೆ ಇಸವಿಯ ಸಪ್ಟಂಬರ ತಿಂಗಳಲ್ಲಿ—ಅಂದರೆ, ಹಿಟ್ಲರನು ಅಧಿಕಾರಕ್ಕೆ ಬರುವ ಆರು ತಿಂಗಳುಗಳ ಮೊದಲು ಗ್ರಂಥಕರ್ತರಿಗೂ ಹಿಟ್ಲರನಿಗೂ ಒಂದು ಭೇಟಿಯಾಗಿದ್ದಿತು ಆಗ ನಾಜಿಗಳ ಭವಿಷ್ಯ ಜರ್ಮನಿಗೆ ಹೊರದೇಶಗಳ ಸಹಾಯದ ಮೊದಲಾದ ವಿಷಯಗಳ ಮೇಲೆ ಹಿಟ್ಲರನು ತನ್ನ ಹೃದಯವನ್ನು ಬಿಚ್ಚಿಟ್ಟು ಮಾತಾಡಿದ್ದನು.

'ವಿದೇಶಗಳಲ್ಲಿ ಉಂಟಾಗಬಹುದಾದ ರಾಜಕೀಯ ಸಂದುಕಟ್ಟು ಬಿಕ್ಕಟ್ಟುಗಳು ನನಗೆ ತಲೆ ನೋವನ್ನು ಉಂಟುಮಾಡುತ್ತವೆ ನಾನು ಈ ವಿದೇಶಗಳ ಮುತ್ಸದ್ದಿಗಳನ್ನು ಯಾವಾಗಲೂ ಭ್ರಮೆಯಲ್ಲಿ ಹಾಕಲು ಸಮರ್ಥನೇ? ನನಗೆ ಯಾವುದೂ ತಿಳಿಯುವದಿಲ್ಲ. ಜರ್ಮನಿಯ ಚೆನ್ಸಲರನು ನಾನಾದರೆ ಇಂಗ್ಲಂಡ, ಫ್ರಾನ್ಸ, ಸಂಯುಕ್ತ ಪ್ರಾಂತಗಳು ಏನೆಂದಾವು? ಅವು ನನ್ನ ಮೇಲೆ ಕತ್ತಿ ಹಿರಿದು ಮುಂದೆ ಬಂದಾವೆ? ಅವರು ಬಂದು ಜರ್ಮನಿಯ ಮೇಲೆ ಬೀಳುವದಕ್ಕಿಂತ ಮೊದಲೇ ಜರ್ಮನಿಯನ್ನು ಶಸ್ತ್ರಪಾಣಿಯನ್ನಾಗಿ ಮಾಡಲಿಕ್ಕೆ ನನಗೆ ಸಾಧ್ಯವಾಗಬಹುದೆ? ಆದರೆ ಅವರು ಜರ್ಮನರ ಮೇಲೆ ಬಂದು ಬೀಳುವದು ಸಾಮಾನ್ಯ ಮಾತಲ್ಲ. ಅದಕ್ಕೆ ದೊಡ್ಡ ಮುತ್ಸದ್ದಿಗಳು ಬೇಕು 'ಯುದ್ಧಾತುರರಾದ ಜನರ ಬಲವು ಬೇಕು ಇವೆರಡೂ ಅಲ್ಲಿರುವವೆ? ಎಂಬ ಕುರಿತು ನನಗೆ ಸಂದೇಹವುಂಟು' ಎಂದು ಆ ಸಮಯಕ್ಕೆ ಹಿಟ್ಲರನು ಲುಡೆಕ್ಕರೊಡನೆ ಹೇಳಿದ್ದನು.

ಹಿಂಡನ್‌ಬರ್ಗ

ಹಿಂಡನ ಬರ್ಗನ ಕುರಿತು ಮಾತು ಬಂದಾಗೂ 'ಹೋ, ಅವನೆ? ಅವನು ನನಗೆ ಬೇಕೇ ಬೇಕು ಹಿಂಡನ ಬರ್ಗನೆಂದರೆ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಕಳಕೊಂಡ ಪೂರ್ವಗೌರವವನ್ನೆ ಚಿಂತಿಸುತ್ತ ಅಭಿಮಾನಪಡುವ ಒಂದು ಮುದಿ ಎತ್ತು. ಸಂದಿಗ್ಧ ಕಾಲದಲ್ಲಿ— ನಾನು ನನ್ನ ಅಧಿಕಾರವನ್ನು ಬಲಪಡಿಸುವ ತನಕ, ನನಗೆ ಅವನ ಸಹಾಯ ಬಲಗಳು ಬೇಕೇ ಬೇಕು ಅವಿದ್ದರೆ ಜನರನ [illegible] ವಿದೇಶಿಗಳನ್ನು ಭವೆ [illegible] ಹಚ್ಚೆ [illegible] ವರ್ಸಲಿಯ ಸಂಧಿಪತ್ರವನ್ನು ಹರಿದ ಕಸದ ಬುಟ್ಟಿಗೆ ಹಾಕುವದೂ ಪುನಃ ಆಯುಧಪಾಣಿಯಾಗುವದೂ ಹೊರದೇಶಗಳಿಂದ ಸಹಾಯವನ್ನು ಪಡೆಯುವದೂ ಬಹು ಸುಲಭವಾಗುತ್ತದೆ, [illegible] ಹಿಟ್ಲರ [illegible] ಡೆಕ್ಕರೊಡನೆ ಹೇಳಿದ್ದನು ಹೀಗೆ [illegible] ನಾಜಿಗಳು ಅಧಿಕಾರಕ್ಕೆ ಬಂದರು ಹಿಂಡನಬರ್ಗನ [illegible] ಹಿಟ್ಲರನ ಆಗಿನ ಭವಿಷ್ಯವು [illegible] ಈಗ [illegible] ಸಾಧ್ಯವಾಗ [illegible] ಲ್ಲ

ಜಿ. ಎಚ್. ಕಪ್ರಾಳಕರ

ಹಿಂದೂದೇಶದ ಔದ್ಯೋಗಿಕ ಉನ್ನತಿಗೆ ಸರಕಾರವೇ ಜವಾಬುದಾರ

(೭ನೇ ಪುಟದಿಂದ ಮುಂದುವರಿಸಿದ್ದು)

ಕೆಯ ಉನ್ನತಿಯು ಎಷ್ಟಾಯಿತು ಎಂಬುದನ್ನು ತಿಳಿದು ಯೋಜನೆಯ ಪ್ರಕಾರ ಪ್ರತಿ ವರ್ಷ ಕಾರ್ಯವಾಗುವಂತೆ ಪ್ರಯತ್ನವನ್ನಿಡಬೇಕ ಸಂಕ್ಷೇಪದಲ್ಲಿ ಹೇಳುವದಾಗಿದ್ದರೆ ರಷ್ಯವು ಪಂಚವಾರ್ಷಿಕ ಯೋಜನೆಗಳ ಮೂಲಕ ಕೈಗಾರಿಕೆಯ ಉನ್ನತಿಯನ್ನು ಸಾಧಿಸಿದಂತೆಯೇ ಈ ಸರಕಾರಗಳೂ ಸಾಧಿಸಬೇಕು

ಮುಖ್ಯವಾದ ಖನಿಜಗಳಿಗೆ ಸಂಬಂಧಪಟ್ಟ, ವಿದ್ಯುತ್ಪ್ರವಹ, ರಸಾಯನಿಕ ಲೋಹ ಸಂಬಂಧವುಳ್ಳ, ಯಂತ್ರೋಪಕರಣಗಳಿಗೆ ಸಂಬಂಧಪಟ್ಟ ಇತ್ಯಾದಿ ಪ್ರಧಾನ ಕೈಗಾರಿಕೆಗಳನ್ನು ಸರಕಾರವು ತಾನೇ ನಡೆಸುತ್ತಿರಬೇಕು. ಈ ಕೈಗಾರಿಕೆಗಳ ಸ್ಥಾಪನೆಗೋಸ್ಕರ ಪ್ರಾಂತೀಯ ಸರಕಾರಗಳು ಒಂದು ಸಾಲವನ್ನು ತೆಗೆದರೂ ತೆಗೆಯಬಹುದು ಅಥವಾ ಖಾಸಗಿ ಕಂಪೆನಿಗಳು ಆ ಕೈಗಾರಿಕೆಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಸರಕಾರಗಳು ನೇಕಡ 10ರಷ್ಟು ದುಡ್ಡನ್ನು ತಾವು ಭಂಡವಾಳ ಹಾಕಿ ಆ ಕಂಪೆನಿಗಳ ಆಡಳಿತದಲ್ಲಿ ತಾವು ಪಾಲು ತೆಗೆದುಕೊಳ್ಳಬೇಕು ಮತ್ತು ಅವುಗಳ ಉನ್ನತಿ ಕ್ರಮಕ್ಕೆ ತಾವೇ ಜವಾಬುದಾರಿಯನ್ನು ತೆಗೆದುಕೊಳ್ಳಬೇಕು

ಮುಖ್ಯ ಮುಖ್ಯ ಕೈಗಾರಿಕೆಗಳ ವಿಷಯದಲ್ಲಿ ದೇಶವು ಸ್ವಾವಲಂಬಿಯಾಗಬೇಕೆಂದರೆ ವರ್ಷಕ್ಕೆ 50—60 ಕೋಟಿ ರೂಪಾಯಿ ಬೆಲೆ ಬಾಳುವ ಸಿದ್ಧ ಸಾಮಗ್ರಿಗಳನ್ನು ತಯ್ಯಾರಿಸಲಿಕ್ಕೂ ಮತ್ತು ಅಷ್ಟೇ ಬೆಲೆಯ ಆಮದ ಗಳನ್ನು ನಿಲ್ಲಿಸುವಷ್ಟು ಉತ್ಪತ್ತಿ ಕೊಡಲಿಕ್ಕೂ ಆಗತ್ಯವುಳ್ಳ ಕೋಟಿ ರೂಪಾಯಿ ಭಂಡವಾಳವು ಬೇಕಾಗುವದು ಪರಕೀಯರ ಆಕ್ರಮಣಗಳಿಂದ ದೇಶವನ್ನು ರಕ್ಷಿಸಲಿಕ್ಕೆ ಲೋಹ, ರಸಾಯನಿಕ, ಯಂತ್ರೋಪಕರಣಗಳ ಸಂಬಂಧವಾದ ಕೈಗಾರಿಕೆಗಳು ಸರಕಾರದ ಅಂಕೆಗೊಳಪಡುವದು ಅಗತ್ಯ ಅಲ್ಲದೆ ಶಾಂತಿಯ ಕಾಲದಲ್ಲಿ ದೇಶದ ಸುಭಿಕ್ಷಕ್ಕೂ, ಯುದ್ಧ ಕಾಲದಲ್ಲಿ ದೇಶದ ರಕ್ಷಣೆಗೂ ಸಹಾಯವಾಗುವಂತೆ ಒಂದಕ್ಕೊಂದು ಒಪ್ಪಿರುವ ರೀತಿಯಲ್ಲಿ ಈ ಕೈಗಾರಿಕೆಗಳ ಸ್ಥಾಪನೆಯಾಗಬೇಕು ಅಗತ್ಯಬಿದ್ದಲ್ಲಿ ಲಾಭಾಂಶವನ್ನು ನಿಗಮಿಪಡಿಸಲಿಕ್ಕೂ ಈ ಕೈಗಾರಿಕೆಗಳನ್ನು ವ್ಯವಸ್ಥಿತಗೊಳಿಸಲಿಕ್ಕೂ ಮಜೂರರ ಜೀವನವನ್ನು ಸುಖಮಯ ಮತ್ತು ಭದ್ರ ಮಾಡಲಿಕ್ಕೂ ಸರಕಾರವು ಕಾನೂನು ಕಾಯಿದೆಗಳನ್ನು ಮಾಡಬಹುದು.

(೧೪ನೇ ಪುಟವನು ನೋಡುವದು)

ಒಂದು ಮಗುವಿನ ನಾಲ್ಕು ವರ್ಷಗಳ ಹೊಟ್ಟೆನೋವು!

ಹೊಟ್ಟೆನೋವಿನ ಕಷ್ಟಗಳಿಗೆ ಒಳಗಾದ ಮಕ್ಕಳ ಯಾತನೆಗಿಂತ ಹೆಚ್ಚಿನ ಸಂಕಟ ಹೊರದಿಸುವ ಬೇರೊಂದು ದೃಶ್ಯವಿರುವುದೆ? ನಿಮ್ಮ ಮಕ್ಕಳಲ್ಲಿ ಅಜೀರ್ಣವಿರುವುದಾದರೆ, ಅವರಲ್ಲಿ ಹಸಿವು ಇರದಿದ್ದರೆ, ಮಿಸೆಸ್ ಸರಗಾರ್ವರಿಂದ ಹಿತಬೋಧನೆಯನ್ನು ಪಡೆಯಿರಿ—

"೬ ವರ್ಷ ಪ್ರಾಯದ ನನ್ನ ಸಣ್ಣ ಮಗಳು, ಆಕೆಯು ೨ ವರ್ಷ ಪ್ರಾಯದ ಲಾಗಾಯಿತು, ಅಜೀರ್ಣದಿಂದಲೂ, ಹಸಿವಿಲ್ಲದಿರುವಿಕೆಯಿಂದಲೂ ಪೀಡಿತಳಾಗಿದ್ದಳು. ಆದರೆ ೨ ವಾರಗಳ ಮೆಕ್ಲೀನ್‌ಬ್ರ್ಯಾಂಡ್ ಹುಡಿಯ ಸೇವನೆಯಿಂದ ಮಗುವು ಸಂಪೂರ್ಣ ಬದಲಾಗಿರುವುದು ಪ್ರತಿ ರಾತ್ರೆ ಮಲಗುವ ಮೊದಲು ಅವಳಿಗೆ ನಾನು ಒಂದಿಷ್ಟು ಬಿಸಿನೀರಿನಲ್ಲಿ ಅರ್ಧ ಚಮಚೆಯಷ್ಟು ಮೆಕ್ಲೀನ್ ಹುಡಿಯನ್ನು ಕೊಡುತ್ತಿದ್ದುದರಿಂದ, ಬೆಳಗಾತ ಆಕೆಯು, ಒಳ್ಳೇದಾಗಿ ಗಂಜಿ ಊಟವನ್ನು ಮಾಡುತ್ತಿದ್ದಾಳೆ ಈ ಮೊದಲು ಊಟ ಮಾಡಲು ಅವಳಲ್ಲಿ ಹಸಿವೆಯಿರಲಿಲ್ಲ

ಖಾತ್ರಿಯಾದ ಮೆಕ್ಲೀನ್‌ಬ್ರ್ಯಾಂಡ್ ಹುಡಿಯಿಂದ, ನಿನ್ನ ಮಕ್ಕಳ ಹೊಟ್ಟೆ ಪೀಡೆಗಳು ಖಂಡಿತವಾಗಿಯೂ ಅತೀ ಬೇಗನೆ ಗುಣವಾವುದು ಆದರೆ,

Alex C. Maclean

ಎಂಬ ಸಹಿಯ ರೀತಿಯೂ, ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿರಿ ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ

ಇಂತಹ [illegible] ಕಡಿಮೆ ದರದ [illegible] ವಸ್ತುಗಳನ್ನು [illegible]

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಿರಿ [illegible]

ಜೆ ಎಲ್ ಮೊರಿಸನ್ ಸನ್ ಎಂಡ್ ಜೋನ್ (ಇಂಡಿಯಾ) ಲಿಮಿಟೆಡ್

ಸ್ಟೆಂಡಾರ್ಡ್ ಬಿಲ್ಡಿಂಗ್ [illegible] ಮುಂಬಯಿ



S No 74

ಉಡುಪಿ ತಾಲೂಕು ಪ್ರಥಮ ರಾಜಕೀಯ ಪರಿಷತ್ತು, ಕಟಪಾಡಿ

ಮೇ ತಾ ೪ ಮತ್ತು ೫ರಲ್ಲಿ ಜರಗುವುದು.

ಅಧಿವೇಶನದ ಕಾರ್ಯಕ್ರಮ:—

ಮೇ ತಾ. ೪ನೇಯ ಬುಧವಾರ

ಪೂರ್ವಾಹ್ನ ಗಂಟೆ ೬ರಿಂದ ೭ರ ವರೆಗೆ ಪ್ರಭಾತಭೇರಿ ಗಂಟೆ ೭ರಿಂದ ೮ರ ತನಕ ಧ್ವಜವಂದನೆ—ಡಾ। ಪಡಿಕೀಕ ರವರಿಂದ ಗಂಟೆ ೧೦ರಿಂದ ೧೨ರ ತನಕ ಪ್ರದರ್ಶನ ಉದ್ಘಾಟನೆ— ಯೂಸುಫ್ ಮೆಹರಾಲಿಯವರಿಂದ ಅಪರಾಹ್ನ ಗಂಟೆ ೩ರಿಂದ ೫ರ ತನಕ ವಿಷಯನಿಯಾಮಕ ಸಮಿತಿಯ ಸಭೆ ಗಂಟೆ ೫ರಿಂದ ೬ರ ತನಕ ವ್ಯಾಯಾಮ ಪ್ರದರ್ಶನ ರಾತ್ರಿ ಗಂಟೆ ೧೦ರಿಂದ ೧೨ರ ವರೆಗೆ ಸಂಗೀತ ನರ್ತನ ಮತ್ತು ವಿವಿಧ ವಿನೋದಾವಳಿಗಳು.

ಮೇ ತಾ. ೫ನೇಯ ಗುರುವಾರ

ಪೂರ್ವಾಹ್ನ ಗಂಟೆ ೬ರಿಂದ ೭ರ ವರೆಗೆ ಪ್ರಭಾತಭೇರಿ ಗಂಟೆ ೭ರಿಂದ ೮ರ ವರೆಗೆ ಧ್ವಜವಂದನೆ ಜಯಪ್ರಕಾಶ ನಾರಾಯಣರವರಿಂದ ಗಂಟೆ ೧೦—೧೨ರ ವರೆಗೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆ ಅಪರಾಹ್ನ ಗಂಟೆ ೩ರಿಂದ ೪ರ ತನಕ ಅಧ್ಯಕ್ಷರ ಮೆರವಣಿಗೆ ಗಂಟೆ ೪ರಿಂದ ೫ರ ... ಪರಿಷತ್ತು ಉದ್ಘಾಟನ—ಪಾಮುದ್ದಾರ ಮದರಾಸು ಮಂತ್ರಿ ಡಾ। ಟಿ ಎಸ್ ಎಸ್ ರಾಜನರಿಂದ ಗಂಟೆ ೪ರಿಂದ ೭ರ ವರೆಗೆ ಮಹಾಧಿವೇಶನ—ಡಾ। ಕಬ್ಬೂರರ ಅಧ್ಯಕ್ಷತೆಯಲ್ಲಿ ರಾತ್ರಿ ಗಂಟೆ ೧೦ರ ಬಳಿಕ ಸುಪ್ರಸಿದ್ಧ ದಶಾವತಾರ ಮೇಳದವರಿಂದ ನೂತನ ಕ್ರಮದಲ್ಲಿ (ದಶಾವತಾರ ಆಟ

ತಾ ೪ನೆಯ ಬುಧವಾರ ಕೃಷಿ ಕೈಗಾರಿಕೆಗಳ ಪ್ರದರ್ಶನ ಜನುವಾರುಗಳ ಪ್ರದರ್ಶನವಲ್ಲದೆ ನೂಲುವ ಸ್ಪರ್ಧೆಯೊಂದನ್ನು ಏರ್ಪಡಿಸಿರುವೆವು ಪ್ರದರ್ಶಿತವಾದ ಯೋಗ್ಯವಸ್ತುಗಳಿಗೂ ಜಾನುವಾರುಗಳಿಗೂ ಪ್ರಶಸ್ತಿ ಪತ್ರಗಳೂ, ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಬಹುಮಾನವೂ ಕೊಡಲಾಗುವುದು ಸರ್ವರೂ ಕೈಲಾದಷ್ಟು ಸಹಾಯಮಾಡಿ ಪ್ರದರ್ಶನವು ಯಶಸ್ವಿಯಾಗುವಂತೆಯೂ ಸ್ಪರ್ಧೆಯು ಫಲದಾಯಕವಾಗುವಂತೆಯೂ ಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಯಾಮ ಪ್ರದರ್ಶನಕ್ಕೆ ಜಿಲ್ಲೆಯ ವ್ಯಾಯಾಮಪಟುಗಳೂ ಅಂಗಸಾಧನಾ ಶಾಲೆಯವರೂ ಗರಡಿ ಸಾಧಕರೂ ದಯಮಾಡಿ ಬಂದು ತಂತಮ್ಮ ನೈಪುಣ್ಯವನ್ನು ತೋರಿಸಿ ಮುಂದಿಯುವ ನವನನ್ನು ಮೆಚ್ಚಿಸಬೇಕಾಗಿ ಪ್ರಾರ್ಥನೆ ಸಂಗೀತ (ಕಂಠ ಮತ್ತು ವಾದ್ಯ) ಇತ್ಯಾದಿ ಮತ್ತಿತರ ವಿನೋದವೇ ಮೊದಲಾದ ಕಲೆಗಳ ಪ್ರದರ್ಶನವಿರುವುದರಿಂದ ಸಂಗೀತಗಾರರೂ ನರ್ತನ ಪಟುಗಳೂ ವಿನೋದ ಚತುರರೂ ಚಿತ್ರಗಾರರೂ ತಮ್ಮ ಕಲಾಕೌಶಲ್ಯವನ್ನು ತೋರಿಸಿ ಜನರ ಚಿತ್ತವನ್ನಾಕರ್ಷಿಸಿ ರಂಜಿಸಬೇಕಾಗಿ ವಿನಂತಿ ಈ ವ್ಯಾಯಾಮ ಸಂಗೀತ ನರ್ತನ ಮತ್ತು ವಿನೋದಾವಳಿಗಳಲ್ಲಿ ಯೋಗ್ಯರೆನಿಸಿಕೊಂಡವರಿಗೆ ಸಹ ಪ್ರಶಸ್ತಿ ಪತ್ರಗಳನ್ನು ಕೊಡಲಾಗುವುದು.

ಮೇಲಿನ ಕಾರ್ಯಕ್ರಮಗಳಲ್ಲಿ ತೋರುವ ಪ್ರಮುಖ ಮುಂದಾಳುಗಳಲ್ಲದೆ ಕರ್ನಾಟಕದ ಇತರ ಪ್ರತಿಷ್ಠಿತ ಮುತ್ಸದ್ದಿಗಳನ್ನೂ ಸ್ಥಳೀಯ ಎಂ ಎಲ್ ಎ ಗಳನ್ನೂ ಅಧಿವೇಶನಕ್ಕೆ ಬರಮಾಡಿಸಿ, ಕಾಂಗ್ರೆಸ್ ಪ್ರಚಾರದ ಕುರಿತು ಯೋಗ್ಯ ಭಾಷಣಗಳನ್ನು ಕೊಡಿಸುವ ಏರ್ಪಾಡು ಮಾಡಲಿದ್ದೇವೆ ಈ ಎರಡು ದಿವಸಗಳ ಕಾರ್ಯಕ್ರಮಗಳಲ್ಲಿ ಬರುವ ಸ್ಥಳೀಯ ಮಹನೀಯರಿಗೆ ಊಟದ ಮತ್ತು ವಸತಿಯ ಸೌಕರ್ಯಗಳ ವಿಷಯದಲ್ಲಿ ಸೈಲಾದ ವ್ಯವಸ್ಥೆಯನ್ನು ಕೈಕೊಳ್ಳಲಿದ್ದೇವೆ ಕಟಪಾಡಿಯಲ್ಲಿ ಬಸ್ಸಿನ ಚಲಾವಣೆ ಘಂಟೆ ಘಂಟೆಗೂ ಕ್ರಮದಂತೆ ಇರುವುದರಿಂದ ಜಿಲ್ಲೆಯ ಎಲ್ಲಾ ಭಾಗಗಳ ಜನರಿಗೂ ಪರಿಷತ್ತಿಗೆ ಬಂದು ಹೋಗುವರೆ ಪ್ರಯಾಣದ ಅನುಕೂಲತೆ ಚೆನ್ನಾಗಿದೆ

ಮಹಾಜನರಲ್ಲಿ ವಿನಂತಿ

ಉಡುಪಿ ತಾಲೂಕು ರಾಜಕೀಯ ಪರಿಷತ್ತು ಮೇಲಿನ ಕಾರ್ಯಕ್ರಮಗಳಿಂದ ಕಟಪಾಡಿಯಲ್ಲಿ ಜರಗುವುದು ಕಟಪಾಡಿಯು ಬರೇ ಹಳ್ಳಿನಾಡು ಇಷ್ಟರವರೆಗೆ ಮಳಲು ಸೇವೆ ಮಾಡುತ್ತಾ ಇತ್ತು. ಇಂದು ತಾಲೂಕಿನ ಎಲ್ಲರ ಬೆಂಬಲ ದೊರಕೀತು ಎಂಬ ಭರವಸೆಯಿಂದಲೂ ಕಾಂಗ್ರೆಸು ಪ್ರಚಾರ ಮಾಡಬೇಕೆಂಬ ಉತ್ಸುಕತೆಯಿಂದಲೂ ದೇಶಾಭಿಮಾನದ ಭರದಿಂದಲೂ ಈ ಮಹಾಕಾರ್ಯಕ್ಕೆ ಮನಸ್ಸುಮಾಡಿದೆ ಹಳ್ಳಿನಾಡುಗಳಲ್ಲಿ ಅಧಿವೇಶನಗಳನ್ನು ಜರಗಿಸಿ, ಬಡಹಳ್ಳಿಗರಲ್ಲಿ ಜಾಗೃತಿಯನ್ನುಂಟುಮಾಡಿ ಅಭಯದ ಮತ್ತು ಐಕ್ಯತೆಯ ಸಂದೇಶಗಳನ್ನು ಸಾರಿ ಕಾಂಗ್ರೆಸನ್ನು ಇನ್ನೂ ಬಲಪಡಿಸಬೇಕೆಂಬ ತತ್ವ ನಮ್ಮನ್ನು ಈ ಉದ್ಯಮಕ್ಕೆ ಪ್ರೇರೇಪಿಸಿತು ಆದರೆ ಈ ಮಹಾಕಾರ್ಯದ ಗೆಲವು ಮಹಾಜನರ ಸಹಕಾರ ಸಹಾಯಗಳ ಮೇಲೆ ಹೊಂದಿಕೊಂಡಿದೆ ಎಂದು ಬೇರೆ ಹೇಳಬೇಕಾಗಿಲ್ಲ

ಯಾವ ಕೋಟೆ ಪೇಟೆಗಳೂ ಜನಬಲ ಧನಬಲಗಳಿಲ್ಲದೆ ಸಾಂಗವಾಗಿ ನೆರವೇರವು. ಅಂದ ಮೇಲೆ ಎರಡು ದಿನಗಳ ಸಟಿಪ ಕಾರ್ಯಕ್ರಮಗಳಿದ್ದು ನೂರಾರು ಜನರು ನೆರೆಯುವ ಈ ಪರಿಷತ್ತಿಗೆ ಧನ ಜನ ಬಲಗಳೆಷ್ಟು ಬೇಕೆಂದು ಪ್ರತ್ಯೇಕ ಹೇಳಬೇಕೆ? ಅದುದರಿಂದ ತಾಲೂಕಿನ ದೇಶಭಿಮಾನಿಗಳು ಪರಿಷತ್ತಿಗೆ ಪ್ರತಿನಿಧಿಗಳನ್ನು ಮಾತ್ರ ಕಳುಹಿಸುವುದಲ್ಲದೆ ತಾವೂ ಬಂದು ಪ್ರತಿಯೊಂದು ಹಳ್ಳಿಯಿಂದ ತಂಡತಂಡವಾಗಿ ಹಳ್ಳಿಗರು ಬರುವಂತೆ ಪ್ರಚಾರ ನಡೆಸಿ ಶಕ್ತ್ಯಾನುಸಾರ ದ್ರವ್ಯಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಕಟಪಾಡಿಯ ... ಯವರು ೧—೦—೦ಕ್ಕೆ ಒಬ್ಬ ತಮ್ಮ ಆಹ್ವಾನ ಸಂಘದ ವರ್ಗಣಿಯನ್ನು ತೆತ್ತು ಸ್ವಾಗತ ಸಮಿತಿಯ ಸದಸ್ಯರಾಗಬೇಕಾಗಿಯೂ ಅಗ್ರಹಪೂರ್ವಕ ಬೇಡಿಕೊಳ್ಳುತ್ತೇವೆ ನಮ್ಮ ಜಿಲ್ಲೆಯಲ್ಲಿ ಪ್ರಥಮ ತಾಲೂಕು ಪರಿಷತ್ತನ್ನು ವಿಜಯ ರೀತಿಯಲ್ಲಿ ನೆರವೇರಿಸಿ ಕೊಡುವ ಭಾರವು ಉಡುಪಿ ತಾಲೂಕಿನ ಸರ್ವರ ಮೇಲೂ ಇದೆ ಎಂಬುದನ್ನು ಯಾರೂ ಮರೆಯಕೂಡದಾಗಿ ಭಿನ್ನವಿಸುತ್ತೇವೆ. ಎಂದು ಅಧ್ಯಕ್ಷರಾದ ಬಾಂಗ ಲಕ್ಷ್ಮೀನಾರಾಯಣ ನಾಯಕ್ ಮತ್ತು ಜತೆಕಾರ್ಯದರ್ಶಿಗಳಾದ ಕುಂದಾಪುರ ಗಣಪಯ್ಯಶೆಟ್ಟಿ ಮತ್ತು ಕಟಪಾಡಿ ವಾಸುದೇವ ಶೆಣೈಯವರು ಬರೆಯುತ್ತಾರೆ

ಪೊಳಲಿಯಲ್ಲಿ ೧೦ನೇ ವಾರ್ಷಿಕ ತುಳುವ ಮಹಾ ಸಭೆ.

ತುಳುನಾಡು ಗ್ರಾಮಗಳು ಮಲಬಾರಿಗೆ ಸೇರಬಾರದು.

ದಕ್ಷಿಣ ಕನ್ನಡವು ತುಳುನಾಡೆಂದು ಕರೆಯಲ್ಪಡಬೇಕು

ಮೇಲಿನ ಮಹಾಸಭೆಯು ಇದೇ ತಾ. ೧೦ರಲ್ಲಿ ಪೊಳಲಿಯಲ್ಲಿ ಶ್ರೀ। ಆನಂದಕಳವಾರ (ವಕೀಲ್) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ಯು ಪಣಿಯಾಡಿ, ಕೆ ಹೈದರ್ ಇವರೇ ಮೊದಲಾದವರೂ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಅನೇಕ ಅಧ್ಯಾಪಕ ... ಸಭೆಯಲ್ಲಿ ಹಾಜರಿದ್ದರು ಶ್ರೀಯುತ ಬಡಕಬೈಲು ಪರಮೇಶ್ವರಯ್ಯನವರು ತಮ್ಮ ಸ್ವಾಗತ ಭಾಷಣದಲ್ಲಿ ಪೊಳಲಿಯ ಚಾರಿತ್ರಿಕ ಮಹತ್ವವನ್ನೂ ಸಂಪತ್ತನ್ನೂ ವಿವರಿಸಿ, ಮೊದಲಿನ ಸಂಪತ್ತಿನ ಬದಲು ಈಗ ದಾರಿದ್ರ್ಯದಿಂದ ಕುಂದಿರುವ ಪೊಳಲಿಯ ಹೀನಾವಸ್ಥೆಯನ್ನು ವಿವರಿಸಿ, ಸಭಿಕರಿಗೆ ಸ್ವಾಗತವಿತ್ತರು ಶ್ರೀಯುತ ಪಣಿಯಾಡಿಯವರು — ತುಳುನಾಡಿನ ಗತವೈಭವವನ್ನು ವಿವರಿಸಿ ತುಳುವ ಸಂಸ್ಕೃತಿಯನ್ನು ಅಧಃಪತನ ಸ್ಥಿತಿಯಿಂದ ಮೇಲಕ್ಕೆತ್ತಬೇಕಾದರೆ ತುಳು ಚಳವಳಿವು ಪ್ರಾರಂಭವಾಗಬೇಕು ಈಗ ದಕ್ಷಿಣ ಕನ್ನಡವೆಂದು ಕರೆಯಲ್ಪಡುವ ಈ ಜಿಲ್ಲೆಗೆ ಮೊದಲು ತುಳುನಾಡೆಂಬ ಹೆಸರಿತ್ತು ಅಂದ್ರ ತಮಿಳರಂತೆ ತುಳುವರು ಕೂಡಾ ತುಳುನಾಡಿನ ಏಳಿಗೆಗಾಗಿ ಹೋರಾಡಲೇ ಬೇಕೆಂದರು ಈ ಜಿಲ್ಲೆಗೆ ಅರ್ಥವಾಗುವಂತೆ ತುಳುನಾಡು ಜಿಲ್ಲೆ ಎಂಬ ಹೆಸರನ್ನು ಇಡುವಂತೆಯೂ ತುಳು ಭಾಷೆಯ ಉನ್ನತಿಗಾಗಿ ಎಲ್ಲರೂ ಹೋರಾಡಬೇಕೆಂಬ ಸೂಚನೆಯನ್ನು ಮಂಜೂರ ಮಾಡಲಾಯಿತು. ಈಗ ಕಾಸರಗೋಡು ತಾಲೂಕನ್ನೇ ಮಲಬಾರಿಗೆ ಸೇರಿಸಿಕೊಳ್ಳುವ ಯತ್ನವು ನಡೆಯುತ್ತಿದೆ ಕನ್ನಡಿಗರು ಈ ವಿಷಯದಲ್ಲಿ ಜಾಗೃತರಾಗಿ ... ತುಳುಭಾಷೆಯಾಡುವ ಗ್ರಾಮಗಳು ಮಲಬಾರಿಗೆ ಸೇರಬೇಕು, ತುಳುಭಾಷೆಯನ್ನಾಡುವ ಗ್ರಾಮಗಳು ತುಳುನಾಡಿಗೆ ಸೇರಬೇಕೆಂಬ ಸೂಚನೆಯು ಮಂಜೂರಾಯಿತು ಮುಂದಿನ ವರ್ಷದ ಆಡಳಿತ ಸಭೆಗೆ ಶ್ರೀ। ಆನಂದ ಕಳವಾರರು ಅಧ್ಯಕ್ಷರಾಗಿಯೂ, ಯಸ್. ಯು ಪಣಿಯಾಡಿಯವರು ಉಪಾಧ್ಯಕ್ಷರಾಗಿಯೂ, ಯಸ್. ಶೀನಪ್ಪ ಹೆಗ್ಡೆಯವರು ಕಾರ್ಯದರ್ಶಿಯವರಾಗಿಯೂ, ಬಿ. ಎಸ್. ಪರಮೇಶ್ವರಯ್ಯ ಮತ್ತು ಸತ್ಯಮಿತ್ರ ಬಂಗೇರರು ಕಮಿಟಿಮೆಂಬರರಾಗಿಯೂ ಆರಿಸಲಾಯಿತು. ಮಾನ್ಯ ಅಧ್ಯಕ್ಷರ ಭಾಷಣವಾಗಲು ಸಭಾಂತ್ಯವಾಯಿತು.

ಶ್ರೀ ರಂಗರಾಯರ ಮೇಲೆ ಶಿಸ್ತಿನ ಕಾಯಿದೆ.

ಜಿಲ್ಲೆಗೆ ಡಾ। ರಾಜನರ ಆಗಮನ.

ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಯ ಮಂತ್ರಿಗಳಾದ ಮಾನ್ಯ ಡಾ। ರಾಜನರು ಬರುವ ಮೇ ತಿಂಗಳ ತಾ. ೩ಕ್ಕೆ ಮಂಗಳೂರಿಗೆ ಬಿಜ್ಜೈಸಿ ೩ ದಿವಸಗಳ ವರೆಗೆ ಇಲ್ಲಿ ಇದ್ದು ನಮ್ಮ ಜಿಲ್ಲೆಯನ್ನು ಸಂದರ್ಶಿಸುವರು ತಾ. ೩ನೇ ರಾತ್ರಿ ಮೆಡಿಕಲ್ ಎಸೋಸಿಯೇಶನವರು ಮಾನ್ಯ ಮಂತ್ರಿಗಳಿಗೆ ಡಿನ್ನರ್ ಸತ್ಕಾರ ನಡೆಸಲಿರುವರು ಮರುದಿವಸ ಮಂಗಳೂರಲ್ಲಿದ್ದು ತಾ ೫ನೇ ದಿವಸ ಉಡುಪಿ ತಾಲೂಕು ರಾಜಕೀಯ ಪರಿಷತ್ತನ್ನು ತೆರೆಯುವರೆ ಕಟಪಾಡಿಗೆ ತೆರಳುವರು. ಅಲ್ಲಿಂದ ನಮ್ಮ ಜಿಲ್ಲೆಯ ಇತರ ಕಡೆಗಳಲ್ಲಿ ಮೊಕ್ಕಾಂ ಮಾಡಿ, ರಿಸರ್ವ ಕಾಡುಗಳನ್ನು ಸಂದರ್ಶಿಸಲಿರುವರು. ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಮಲೇರಿಯಕ್ಕೆ ಮುಖ್ಯ ಕಾರಣವೇನಿರಬಹುದೆಂಬುದನ್ನು ಸಹ ಶೋಧಿಸಬೇಕೆಂದಿರುವುದಾಗಿ ಸಹ ತಿಳಿಯುತ್ತೇವೆ

ದ. ಕ. ಜಿಲ್ಲೆಯಲ್ಲಿ ರೇಶ್ಮೆ ಕೈಗಾರಿಕೆ.

ಹಿಪ್ಪುನೇರಳೆಗಳನ್ನು ಸಾಕಿ, ರೇಶ್ಮೆ ಕೈಗಾರಿಕೆಯನ್ನು ನಡೆಸುವರೆ ದ ಕ ಜಿಲ್ಲೆಯಲ್ಲಿ ಅವಕಾಶವಿರುವುದೇ ಎಂಬುದರ ಕುರಿತು ವಿಚಾರಣೆ ನಡೆದು, ಈ ಕೈಗಾರಿಕೆಗೆ ತಕ್ಕ ಅನುಕೂಲತೆಗಳು ಈ ಜಿಲ್ಲೆಯಲ್ಲಿ ಉಪುದಿಲ್ಲವೆಂದು ಕಂಡುಹಿಡಿಯಲಾಗಿದೆ

ಜಿಲ್ಲಾ ಆರೋಗ್ಯ ಖಾತೆಯ ನೌಕರರ ಪರಿಷತ್ತು—

ಮದ್ರಾಸು ಸರಕಾರದ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ। ಎ ಬಿ ಶೆಟ್ರು ಅಧ್ಯಕ್ಷತೆಯಲ್ಲಿ ಮೊನ್ನೆ ತಾ ೧೯ರಲ್ಲಿ ಜರಗಿತು, ಸಾರ್ವಜನಿಕ ಆರೋಗ್ಯದ ಬಗ್ಗೆ ಅನೇಕ ಸೂಚನೆಗಳು ಈ ಪರಿಷತ್ತಿನಲ್ಲಿ ನಡೆದವು. ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಅಧಿಕಾರಿಗಳೂ ಮುನಿಸಿಪಲ್ ಹೆಲ್ತಾಫೀಸರರೂ ಈ ಪರಿಷತ್ತಿನಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದರು

ಉಡುಪಿಯಲ್ಲಿ ಹರತಾಳ

ಉಡುಪಿಯ ಮುನ್ಸಿಫ್ ಕೋರ್ಟನ್ನು ಮುಚ್ಚಬೇಕಾಗಿ ಬಂದ ಸರಕಾರದ ಆಜ್ಞೆಗೆ ಪ್ರತಿಕೂಲವಾಗಿ ಮೊನ್ನೆ ತಾ ೧೬ರ ದಿನ ಉಡುಪಿಯಲ್ಲಿ ಸಂಪೂರ್ಣ ಹರತಾಳ ಆಚರಿಸಲಾಗಿ ಉಡುಪಿಗೆ ಮುನ್ಸಿಫ್ ಕೋರ್ಟಿನ ಅಗತ್ಯವಿರುವುದಾಗಿ ಸಭೆಗಳ ಸೇರಿ ಠರಾವುಗಳಾದುವು ಈ ಕುರಿತು ಸರಕಾರದೊಡನೆ ಅರಿಕೆಮಾಡಿಕೊಳ್ಳಲು ಉಡುಪಿ ನಿವಾಸಿಕರದೊಂದು ಡೆಪ್ಯುಟೇಶನು ಕಮಿಟಿಯು ಮದ್ರಾಸಿಗೆ ತೆರಳಿದ್ದು ಇದೇ ತಾ ೨೦ರಲ್ಲಿ ಇವರು ಸಂಬಂಧಪಟ್ಟವರೊಡನೆ ಮಾತುಕತೆ ಬೆಳೆಸುವರಾಗಿ ತಿಳಿದುಬಂದಿದೆ

ಇನ್ಸ್ಪೆಕ್ಟರ್ ಆಫ್ ಮುನಿಸಿಪಾಲಿಟಿ—ಇವರ ಆಗಮನ

ಇನ್ಸ್ಪೆಕ್ಟರ್ ಆಫ್ ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡ್ ಆಗಿರುವ ... ಬಹದ್ದೂರ್ ... ಹನುಮಂತ ... ತಾ ೧೪ ೧೫ರಲ್ಲಿ ಉಡುಪಿಯಲ್ಲಿ ಮೊಕ್ಕಾಂ ಮಾಡಿ ಸ್ಥಳೀಯ ಮುನಿಸಿಪಾಲಿಟಿಯ ಆಫೀಸನ್ನು ಸಂದರ್ಶಿಸಿದರು ಅಷ್ಟು ಅವಧಿಯಲ್ಲೇ ಸದಿ ಮುನಿಸಿಪಾಲಿಟಿಯು ಹೊಂದಿದ ಪ್ರಗತಿಯ ಕುರಿತು ಬಹಳ ಮೆಚ್ಚುಗೆಯನ್ನು ಪ್ರದರ್ಶಿಸಿರುವರೆಂದು ತಿಳಿದುಬರುತ್ತದೆ.

ಜನ್ಮದಿನೋತ್ಸವ

ಶ್ರೀಸದ್ಗುರು ರಾಮದಾಸ ಸ್ವಾಮಿಗಳವರ ದಿನೋತ್ಸವವು ಇದೇ ಕಳೆದ ತಾ ೧೪ನೇ ಗುರುವಾರದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಅಂದು ಬಡಬಗ್ಗರಿಗೆ ಎರಡು ಮುಡಿ ಅಕ್ಕಿಯನ್ನು ತಲೆ ಒಂದರ ಅರ್ಧ ಸೇರಿನಂತೆ ದಾನಮಾಡಲಾಯಿತು ಸಂ ಶ್ರೀ ಮಲ್ಪೆ ಸಾಮಗರು ರಾಮಾಂಜನೇಯ ಎಂಬ ... ಕಥೆಯನ್ನಿತ್ತು ಸಂಕೀರ್ತನೆ ಮಾಡಿದರು ಸದರಿ ಉತ್ಸವಕ್ಕೆ ಊರ ಪ್ರಮುಖರು ಉದಾರಮನಸ್ಸಿನಿಂದ ಹಣವನ್ನೂ ಅಕ್ಕಿಯನ್ನೂ ದಾನಮಾಡಿರುವರಲ್ಲದೆ, ಕೆಲ ಉತ್ಸಾಹೀ ತರುಣರೂ ಕೆಲಸಮಾಡಿರುವರು ಶ್ರೀಯುತ ... ಅಪೇಕ್ಷೆಯಿಲ್ಲದೆ ನಡೆಸಿದುದು ಸ್ತುತ್ಯ.

ಮಂಜೇಶ್ವರ:—

ಇಲ್ಲಿಯ ಪೋಲೀಸ್ ಸ್ಟೇಶನಿಗೆ ಸಂಬಂಧಪಟ್ಟ ಇಬ್ಬರು ಪೋಲೀಸರು ಬಂಗ್ರಮಂಜೇಶ್ವರದಿಂದ ಏನೋ ಕ್ರಿಮಿನಲ್ ನಡೆಸಿದ್ದ ಒಂದು ಗಾಡಿಯ ಮಾಪಿಳ್ಳೆಯನ್ನು ಕೈದುಮಾಡಿ ಸ್ಟೇಶನಿಗೆ ತರುತ್ತಿರುವಾಗ್ಗೆ ಸುಮಾರು ನೂರಕ್ಕಿಂತಲೂ ಮಿಕ್ಕಿದ ಮಾಪಿಳ್ಳೆಗಳು ಕೂಡಿ ಇಲ್ಲಿಯ ಸಂಕದ ಹತ್ತಿರ ಪೋಲೀಸರ ಕೈಯಿಂದ ಸದ್ರಿ ಕೈದಿಯನ್ನು ಬಿಡಿಸಿಕೊಂಡು ಹೋದುದಲ್ಲದೆ, ಸದ್ರಿ ಪೋಲೀಸರನ್ನು ಚೆನ್ನಾಗಿ ಹೊಡೆದು ಓಡಿಸಿದರೆಂಬ ವಾರ್ತೆಯು ಬಂದಿದೆ.

ಮಂಗಳೂರು ನಗರಸಭೆಯು ...

ನಗರದ ೨೬ ವಾರ್ಡುಗಳಲ್ಲಿ ... ಕೆ ಕಾಂಗ್ರೆಸ್ ಅಭ್ಯರ್ಥಿಗಳಿಗೆ ವಿರೋಧವಾಗಿ ... ಪತ್ರಗಳು ಬಂದಿರುವದಿಲ್ಲ, ಕಾಂಗ್ರೆಸ್ ... ಕೆ ವಿರೋಧವಿಷ್ಟ ಕಡೆಗಳಲ್ಲಿ ಕಾಂಗ್ರೆಸ್ಸಿಗರೇ ... ಮುಕ ದೊರೆಯುವ ಸಂಭವವಿದೆ

ರಂಗರಾಯರು ಎರಡು ವಾರ್ಡುಗಳಿಗೆ ... ನೊಮಿನೇಶನ್‌ನಲ್ಲಿ ಒಂದನ್ನು ಹಿಂದಕ್ಕೆ ತೆಗೆದು ... ಡಿ ಎಸ್. ಶಿಕೇರಾರೆಂಬ ಕಾಂಗ್ರೆಸ್ ಅಭ್ಯರ್ಥಿ ... ಹೆಸರು ಓಟರು ಪಟ್ಟಿಯಲ್ಲಿ ಇಲ್ಲದ್ದರಿಂದ ಅವರ ನೊಮಿನೇಶನ್ ಅರ್ಜಿಯು ನಿರಾಕರಿಸಲ್ಪಟ್ಟಿತು.

ಶ್ರೀ। ರಂಗರಾವ್ ... ರವರು ಈ ವರೆಗೆ ... ಕಾಂಗ್ರೆಸ್‌ವಾಲರಾಗಿದ್ದು ಈಗ ಕಾಂಗ್ರೆಸ್ಸನ್ನೇ ವಿರೋಧಿಸುವುದರಿಂದ ಎಲ್ಲರಿಗೂ ಆಶ್ಚರ್ಯ ಉಂಟಾಗಿರುತ್ತದೆ. ಶ್ರೀಯುತರ ಮೇಲೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಶಿಸ್ತಿನ ಕಾಯಿದೆಯು ಜ್ಯಾರಿಯಾಗುವುದೆಂದು ವದಂತಿಯಿದೆ

ರೈತರ ಪರಿಷತ್ತು

ರೈತರ ಸಾಲ ನಿವಾರಣೆ ಕ್ರಮವಾಗಿ ಆಗಬೇಕೆಂದೂ, ಈಗಿನ ಭೂಕಂದಾಯ ಕ್ರಮಗಳು ರದ್ದಾಗಬೇಕೆಂದೂ, ಒಕ್ಕಲುತನ ಕ್ರಮಗಳು ಬದಲಾಗಬೇಕೆಂದೂ, ಕೋಡಿಕಾಸರಗೋಡಿನಲ್ಲಿ ಜರಗಿದ ರೈತರ ಪರಿಷತ್ತಿನಲ್ಲಿ ನಿರ್ಣಯಗಳಾದವು.

ಈ ಪರಿಷತ್ತಿನಲ್ಲಿ ಸಾಧಾರಣ 4000ಕ್ಕೆ ಮಿಕ್ಕಿದ ರೈತರು ಹಾಜರಿದ್ದರು

ನೋಟೀಸು

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಕೋರ್ಟಿನಲ್ಲಿ

ನಂ.

ಉಳ್ಳಾಲ ಶಿವರಾವ್ ಎಂಡ್ ವಕೀಲ ಮಿಸ್ಟರ್ ಜಿ ...

ಮತ್ತು

ಎನ್ ಚೆನ್ನಪ್ಪ ಸುವರ್ಣ ಕ

1, ಎನ್ ಚೆನ್ನಪ್ಪ ಸುವರ್ಣ ... ಟಿಂಬರ್ ಮರ್ಚೆಂಟ್ ಬಂದರದಲ್ಲಿರುವವ 2 ... ಜಾರಪ್ಪ ... ಪಾಂಡೇಶ್ವರದಲ್ಲಿ ... ಹೋಟೇಲ ಹಿಂದುಗಡೆಯಲ್ಲಿರುವವ

1 ಮತ್ತು 4ನೇ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನೆಂದರೆ

ವಾದಿರು ನಿಮ್ಮ ಪಗ್ಗೆರ ಮೇಲೆ ದಾಖಲು ಮಾಡಿದ ಸದ್ರಿ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ... ಬಗ್ಗೆ ತಾ 11 7 1938ಕ್ಕೆ ಇಟ್ಟಿರುತ್ತದೆ ... ಗೆ ನಿಮ್ಮ ಅಕ್ಷೇಪವಿದ್ದರೆ ತಾವು ಸದ್ರಿ ... 11 ಗಂಟೆಗೆ ಹಾಜರಾಗಿ ಸದ್ರಿ ... ಹೇಳುವುದಾದರೆ ... ನಿಮ್ಮ ಎಕ್ಸ್‌ಪಾರ್ಟಿ ... ವ್ಯಾಜ್ಯವು ತೀರ್ಮಾನಿಸಲಾಗುವದು ... ದಿರಲಿ

ದಿಕ್ಕು ... ಬೇಕ ... ಕಾರಣ ... ಎಂಬದಕ್ಕೆ ... ತಿಂಗ ... ಮುಂದೆ ... ಬೇಕೆಂತಲೂ ... ಲಾತ್ತದೆ.

ಮಂಗಳೂರು 30-3-38

THE
Canara Banking Corporation, Udipi, Ltd.
INCORPORATED IN BRITISH INDIA.
ESTD 1906

SEASON DEPOSITS
of
Rs. 500/- & above
Are Accepted
at
3½% p. a.
at
All Our Branches

ವೈಸರಾಯರ ರಜೆಯ ನಿಜವಾದ ಮರ್ಮವೇನಿರಬಹುದು?

ಲಂಡನಿನ ವ್ಹಾಯಿಟ್ ಹೋಲಿನಲ್ಲಿ ಗವರ್ನರರೊಡನೆ ಪರಿಷತ್ತು

ಫೆಡರೇಶನು ತ್ಯಜಿಸಲಾಗುವುದೇ?—ಹಕ್ಕರು ತಲೆಬೋಳಿಸಿಕೊಳ್ಳುವರು

ಸ್ವದೇಶಾಭಿಮಾನಿ

ಶ್ರೀ ಜಿನ್ನಾರವರ ಭಾಷಣ

'ದರ್ಪ-ಉದ್ರೇಕ ಅಟ್ಟಹಾಸ-ಇವುಗಳೇ ಮುಖ್ಯವಾಗುಳ್ಳ ಲಕ್ಷಣಗಳಿಂದ ಕೊಂಗ್ರೆಸಿಗೆ ತಿರಸ್ಕಾರ, ಲೀಗಿನ ಪುರಸ್ಕಾರ

ಮೌಲಾನರೂ ಮೌಲ್ವಿಗಳೂ ಎಂಬವರ ಕೈಯಿಂದ ಅವರ ಸಾಧುವಲ್ಲದ ವಾ ಬಲ್ಯ ವನ್ನು ಮುರಿದು ನಾವು ಮುಂದರಿಸಿರ ವೆವು ಎಂದು ಜಿನ್ನಾರವರು ಭಾಷಣದಲ್ಲಿ ಹೇಳಿದರಾ ಧರೂ ತಾವೇನೂ ವ ಹಾ ಸಾಧುತ್ವದಿಂದ ಲೀಗನ್ನು ಅಲಂಕರಿಸಲಾರದಾದರು ಮೌಲಾ ನರಾದಿಯರು ಮತಸಂಬಂಧವಾದ ಭ್ರಾಂತಿ ಯಿದ್ದು ಜನಾಂಗವನ್ನು ಹಾಳುಮಾಡಿದರೆಂದು ಜಿನ್ನಾರವರು ನಂಬಿದ್ದರಾದರೆ ಇವರು ದರ್ಪ ಸಂಬಂಧವಾದ ಭ್ರಾಂತಿಯಿಂದ ಬಾಳಿಗೆ ಬರು ... ಹೊರಟಿದರೆಂದು ಮೌಲಾನರೂ ಹೇಳು ... ನಡೆಯುತ್ತ ... ಬಾ ... ಭಯಂ ... ಕೃತಿ ... ಗೆ ... ವು ... ಸಿಕ್ಕ ... ಮೂ ... ಖಂಡರ ... ಮುಖಂ ... ಒಂದು ... ಮಾತಾಡಿ ... ನಾದಾರು ... ಸಂಧಾನವಾ ... ನಡೆಯುತ್ತಿರುವು ... ಇಲ್ಲಾದ ಕೊಂಗ್ರೆ ... ಮುಸ್ಲಿಮರೊಳಗೆ ... ನಿರ್ಧಾರವನ್ನು ... ಚಿಸಿದರೂ,—ಇವೆ ... ಒಂದಾಗಲಿಕ್ಕಿಸುವ

ಮಹಮ್ಮದಾಲಿ ಜಿನ್ನಾ

ಈಗಲೂ ಅಂತಹ ಐಕ್ಯವು ದೂರವಾಗುವರೆ ಪ್ರಭಾವವನ್ನುಂಟುಮಾಡ ಬಹು ದಾ ಗಿ ರು ವ ನಾನಾ ವಿಸಂವ್ಯಾಸಕರ ಮಾತ ಗಳ ... ಆದಿ ಕೊಂಗೆಸನ್ನು ಗಳಹಿದ ದ್ ಜಿನ್ನಾರ ರ ಭಾ ಷ ಣದ ಒಂದು ಕುಂದು

ಕೊಂಗ್ರೆಸು ಕೊಮು ನ ... ಎವಾಡ ನ್ನು ರದ್ದುಗೊಳಿಸುತ್ತದೆಂಬ ಒಂದ ದೂರ ಕೊಂಗೆ ಸಿನ ಮೇಲಿದೆ ಆದರೆ ಮು ಸ್ಲಿಮರೊಡನೆಯೆ ಎಮರ್ಶಿಸಿಕೊಂಡ ಅಕ್ಯ್ರಮ ಮಾಡರಿಯ ದೊಂದು ನಿರ್ಣಯವನ್ನು ಅವರ ಒಪ್ಪಿಗೆಯ ಂತೆ ಮಾಡ ವುದ ಶೀಯಸ್ಕರವೆಂದು ಕೊಂಗೆಸು ವೆಂದಿದೆ ಇದನ್ನು ಮಾತ ಜಿನ್ನಾರವರು ಹೇಳುವುದೇ ಇಲ

ಜಾತಿವಾರ ಪ್ರತಿಶ್ಟುರೇಟ ಗಳು ಇರ ಬಾರದೆಂದು ಕೊಂಗೆಸ ಎನ್ನುತ್ತದೆಂದು ಜಿನ್ನಾರವರು ಆಕ್ಷೇಪಿಸಿರುವರು ಜನಾಂಗದ ಅಭ್ಯುದಯಕ್ಕೆ ಮಹದಾತಂಕವಾಗಿರುವ ಈ ಬಗೆಯ ಚುನಾವಣೆಯನ್ನು ಆಕ್ಷೇಪಿಸದವರಿಂದ ಜನಾಂಗಕ್ಕೆ ಯಾವ ಉಪಕಾರವಾದೀತು?

ಯಾವ ಅಲ್ಪ ಸಂಖ್ಯಾಕರಿಗೂ ವಿಶಾಸ ಲಾಗಿ ಸ್ಥಾನಗಳಿರಬಾರದೆಂದು ಕೊಂಗ್ರೆಸ ಸಾಧಿಸುತ್ತದೆ ಎಂದು ಜಿನ್ನಾರವರಿನ್ನ್ನಾಗ— ಮ್ಯಾನೊರಿಟಿಗಳಿಗೆ ದೃಢ ವಿಶ್ವಾಸವನ್ನು ಕೊಡ ತಕ್ಕಂತೆ ರಕ್ಷಣೋಪಾಯಗಳಿರಬೇಕು ಎಂದೂ ಕೊಂಗೆಸು ಸಾರ ತ್ತಿರುವುದನ್ನು ಜಿನ್ನಾರವರು ಏಕೆ ಹೇಳುತ್ತಿಲ್ಲ? ಅವರವರಿಗೆ ಸಲ್ಲುವ ಹವಿ ರ್ಭಾಗವನ್ನು ಅವರವರಿಗೆ ಕೊಡಲೇ ಬೇಕೆಂದು ಜಿನ್ನಾರವರಿಗೂ ಕೊಂಗೆಸು ತಿಳಿಸಿಲ್ಲವೆ?

ಇಷ್ಟಾದ ಬಳಿಕ ಅರ್ಥ ಮರೆತು ಅರ್ಥ ಮರೆಯಿಸಿ ಅರೆ ಸತ್ಯವನ್ನಾಡಿದ ತರುವಾಯ ಕೊಂಗ್ರೆಸಿನ ಮೇಲೆ ಉದ್ರೇಕಗೊಂಡು ಅಟ್ಟ ಹಾಸಪೂರ್ವಕ ಮಾತಾಡುವುದೇನೂ ವಿಚಿತ್ರ ವಲ್ಲ ಹಿಂದೂಗಳ ರಾಜ್ಯವನ್ನೆ ಸ್ಥಾಪಿಸುವು ದಕ್ಕೆ ಕಾಂಗ್ರೆಸು ಸಾಧನೆ ಮಾಡುತ್ತದೆಂಬ ಮಾತಾಗಲಿ, ನಮ್ಮಲ್ಲಿ ಜೀವವಿರುವ ತನಕ ನಾವು ಒಪ್ಪಿಕೊಂಡು ಇದಕ್ಕೆಲ್ಲ ತಲೆಬಾಗು

ವವರಲ್ಲ ಎಂಬ ಗರ್ಜನೆಯಾಗಲಿ ವ್ಯರ್ಥಾ ಲಾಪವು ಇಷ್ಟು ವ್ಯರ್ಥಾಲಾಪ ಮಾಡಿದವ ರಿಗೆ, ಇತರ ಸಮಾಜಗಳ ಮೂಲ ಹಕ್ಕುಗಳನ್ನು ಕುರಿತಾಗಿ ಕೊಂಗ್ರೆಸು ಮಾಡಿರುವ ನಿರ್ಧಾರ ಗಳೆಲ್ಲವು ಬರೇ ಕಾಗದದ ಒಕ್ಕಣೆ ಎನ್ನುವುದೂ ಅಪಲಾಪವಲ ದೆ ಮತ್ತೇನು?

ಮುಸ್ಲಿಮರಲ್ಲಿ ಜಾಗ್ರತಿ ಉಂಟುಮಾಡಿ ರುವುದಕ್ಕಾಗಿ ಮುಸ್ಲಿಮ ಲೀಗನ್ನು ಎಲ್ಲರೂ ಕೊಂಡಾಡಬೇಕು ಇದು ಸರಿಯೇ ಆದರೂ ಯಾವನಾದರೂ ಅವರು ದೇಶಹಿತ ಸಾಧಕ ನಾದರೂ ಇಷ್ಟೆ ಚೆನ್ನಾಗಿ ಕೊಂಡಾಡುವನು ಕೊಂಗ್ರೆಸೂ ಇದನ್ನು ಕೊಂಡಾಡುವುದು ಆದರೆ,—ಸಂಧಾನ ಕಾರ್ಯದ ಇತ್ತಂಡಗಳು ಒಂದನ್ನೊಂದು ಪರಸ್ಪರ ಭಕ್ತಿಭಯಗಳಿಂದ ಸಮಾನತೆ ತಳೆದುವಾಗಬೇಕು ಎಂಬುದು ತತ್ವ ವನ್ನು ಮಾತ್ರ ನೋಡಿ ಭಾರತದ ಅಭ್ಯುದಯ ಕ್ಕಾಗಿ ಭಯಪಡಬೇಕಾಗಿದೆ ಗೌರವ ಭಕ್ತಿ ಗಳು ಇರಬೇಕಾದರೂ ಭಯವೂ ಇತ್ತಂಡ ಗಳಲ್ಲಿರಬೇಕೇ? ಜವಾಬ್ದಾರನಾಗಿ ಮುಖಂಡ ನಾದ ಯಾವನೂ ಭಯಪ್ರದರ್ಶಿಸಿ ಭಾಷಣ ಮಾಡುವುದರಲಿ ... ಸೊಬಗಿ ... ರೆಯೆ? ಔಚಿತ್ಯ ... ಎಯ?

ಇತ್ತಂಡಗಳಲ್ಲಿ ಕಂಟಿವಾರಿಗಳಿದ್ದ ಅವರನ್ನು ಅಣಗಿಸದೆ ಇತ್ತಂಡಕ್ಕೂ ಸುಖವಿರದು ಎನ್ನುವ ಜಿನ್ನಾರವರ ವಿವೇಕವಾಣಿಗೆ ಸ್ತೋತ್ರ ವಾಗಲಿ! ಹೀಗಿರುವಾಗ ಯಾವುದೊಂದು ಸಮಾಜವು ಬಹುಸಂಖ್ಯಾತವಾಗಿರುವಲ್ಲಿ ಅದರ ಕಡೆಗೆ ಬೆದರಿಕೆ ಹಾಕಿಯೇ ಭಯ ಪ್ರದರ್ಶಿಸಿಯೇ ಅಲ್ಪ ಸಂಖ್ಯಾತರು ಮೆರೆಯ ಬೇಕೆಂದೂ ಸೂಚಿಸುವುದೇಕೆ?

ಜಿನ್ನಾರವರ ಮಾತುಗಳಲ್ಲಿ ವಿವೇಕ ವೆಷ್ಟೋ ಇದೆ ಇದನ್ನು ತ ರೆಯಲಾರೆವು ಇ ತ ರ ರ ಲ್ಲಿ ಅವಿವೇಕವನ್ನುಂಟುಮಾಡುವ ಭ್ರಾಂತಿಕ ವಚನಗಳೂ ಇವೆಯಲ್ಲ ಎಂಬುದೇ ಶೋಚನೀಯ

ಗಾಂಧಿಜಯಂತಿ

ಗಾಂಧಿಜಯಂತಿ ಆಚರಣೆಯ ಬಗ್ಗೆ ಕರಾಚಿ ನಗರಸಭೆಯಿಂದ ರೂ 4000 ವ್ಯಯಕ್ಕಾಗಿ ಮಂಜೂರಿಸಲಾಗಿದೆ ಆ ದಿವಸ ನಗರ ಸಭೆಯ ಅಧೀನದಲ್ಲಿರ ವ ಎಲ ಆಫೀಸುಗಳು ಶಾಲೆ ಇತ್ಯಾದಿಗಳ ವ ... ವವು ಶಾಲೆ ಹುಡುಗರು ಮೆರ ವಣಿಗೆಯಲ್ಲಿ ಬಂದ ಮುನ್ಸಿಪಲ ಮೈದಾನಗ ಳಲ್ಲಿ ಕೂಡಿ ಅಲಿ ಅವರಿಗೆ ಮಿಠಾಯಿ ಹಂ ಚ ವ ವ್ಯವಸ್ಥೆ ಮಾಡಲಾಗಿದೆ

ಹರಿಜನರಿಗೆ ಇಂದೋರ್ ಮಹಾರಾಜರ ಪತ್ರ

ಇಂದೋರ್ ಮಹಾರಾಜರು ತನ್ನ ಸಂಸ್ಥಾನದ ಹರಿಜನರನ್ನು ಉದ್ದೇಶಿಸಿ ಅವರು ಹೀನ ಭಾವವನ್ನು ತೊರೆದು ಎಲರೊಡನೆ ಸಂಸಮಾನತೆಯಿಂದ ವರ್ತಿಸಬೇಕಾಗಿ ಕೋರಿ ಒಂದು ಪತ್ರವನ್ನು ಬರೆದಿರುವರಾಗಿ ತಿಳಿದುಬರುತ್ತದೆ ಹರಿಜನರು ಹಿಂದೂ ಧರ್ಮವನ್ನು ತ್ಯಜಿಸಿ ಅನ್ಯ ಮತಗಳಿಗೆ ಮತಾಂತರ ಹೊಂದುವುದು ಒಂದು ಮಹಾ ಅನ್ಯಾಯವೆಂದ ಅವರು ಈ ಪತ್ರದಲ್ಲಿ ಬರೆದಿರುವರ

ಮುಸ್ಲಿಂ ಲೀಗಿನ ಮಹಾಸಭೆ

ಯು ಜಿನ್ನಾರವರ ಅಧ್ಯಕ್ಷತೆಯಲ್ಲಿ ಕಲ್ಕತ್ತೆಯಲ್ಲಿ ಮೊನ್ನೆ ದಿನ ಜರಗಿತು ಲೀಗಿನ ಬಲವು ಹೆಚ್ಚಿರುವುದೆಂದೂ ಜಿನ್ನಾರವರು ತಮ್ಮ ಭಾಷಣದಲ್ಲಿ ಹೇಳಿಕೊಂಡರು ಕಾಂಗ್ರೆಸನ್ನು ದೂರುವುದನ್ನು ಜಿನ್ನಾರವರು ಇನ್ನೂ ಬಿಟ್ಟಿಲ್ಲ ಕೆಲವು ಶರ್ತಗಳ ಮೇಲೆ ಕೊಂಗ್ರೆಸಿನೊಡನೆ ಒಪ್ಪಂದಕ್ಕೆ ಬರಲು ಜಿನ್ನಾರವರು ಸಿದ್ಧರಿದ್ದಾರಂತೆ ಕೋಮುವಾರುತನವು ಈ ತರದಲ್ಲಿ ಬೆಳೆಯುವುದರಿಂದಲೇ ಅಲ್ಲಲ್ಲಿ ಗಲಭೆ ಅನರ್ಥ ಗಳಿಗೆ ಕಾರಣವೆಂದು ಮದ್ರಾಸಿನ ಹಿಂದೂಪತ್ರಿಕೆಯ ಟೀಕೆ

ಪಂಡಿತ ನೆಹರೂ ಮತ್ತು ಗಾಂಧಿ

ಲಂಡನಿನ ವ್ಹಾಯಿಟ ಹೋಲಿನಲ್ಲಿ ಗವರ್ನರರೊಡನೆ ಪರಿಷತ್ತು

ಫೆಡರೇಶನು ತ್ಯಜಿಸಲಾಗುವುದೆ?

ವ್ಹೈಸರಾಯರ ರಜೆಯ ಮರ್ಮವೇನಿರಬಹುದು?

ವ್ಹೈಸರಾಯರು ನಾಲ್ಕು ತಿಂಗಳ ರಜೆಯ ಮೇಲೆ ತಾಯ್ನಾಡಿಗೆ ಹೋಗಲಿರುವರೆಂಬ ವಿಷಯ ಟಣೆಯ ಕುರಿತು 'ಹಿತವಾದ ಪತ್ರಿಕೆಯು ತನ್ನ ದೊಂದು ಊಹೆಯನ್ನು ಪ್ರಕಟಿಸಿದೆ

ಸಿಂಧ ಒರಿಸ್ಸಾ ಮತ್ತು ಸಂಯುಕ್ತ ಪ್ರಾಂತ್ಯಗಳ ಗವರ್ನರರೂ ವ್ಹೈಸರಾಯರಂತೆ ರಜೆಯನ್ನು ಪಡಕೊಂಡ ಸಂಗತಿಯು ಲೋರ್ಡ ಅರ್ವಿನರ ರಜೆಯ ಪ್ರತಿಫಲವನ್ನು ಜ್ಞಾಪಕಕ್ಕೆ ತರುತ್ತಿದೆ ಅಂದು ಅವರು ರಜೆಯನ್ನು ಅನು ಭವಿಸುತ್ತಾ ಇಂಗ್ಲಾಂಡಿನಲಿ ಇತರ ಗವರ್ನರು ಗಳ ದಿಗೆ ಸಭೆ ಸೇರಿಸಿ ಪ್ರಾಂತೀಯ ಸ್ವಾಯತ್ತತೆಯನ್ನು ಯೋಚಿಸಿದರ ... ಈಗಣ ವ್ಹೈಸರಾಯರು ರಜಾಕಾಲದಲ್ಲಿ ಫೆಡರೇಶನ ಕಾರ್ಯ ಅವಧಿಯನ್ನು ಮುಂದರಿ ಸ ವರೆಗೆ ಎಂಬುದೊಂದ ಸಂಶಯವು ಮೂಡುತ್ತಿದೆ ಲೆಜಿಸ ಲೇಟಿವ್ ಎಸೆಂಬ್ಲಿಗೆ ಒಕ್ಟೋಬರ್ ಗಿಂತಲಂದ ಒಂದು ವರ್ಷ ದ ಅಧಿಕ ಆಯುಷ್ಯವನ್ನು ದಾನಮಾಡಿರುವ ಇದರಿಂದ ಸಮ್ಮಂಧಪಟ್ಟ ಅಧಿಕಾರಿಗಳು ಗಳಲಂನೇ ವರ್ಷದ ಮೊದಲು ಫೆಡರೇಶನ ಜ್ಯಾರಿಯಾಗದೆಂದು ಪ ನಗಂಡಿರುವ ಸಂಗತಿಯು ವ್ಯಕ್ತವಾಗುತ್ತದೆ

ದುರ್ದೈವವಶಾತ ಫೆಡರೇಶನಿಗೆ ಏನ ದರೊಂದು ಧಕ್ಕೆ ಬಂದು ಬಡಿದರೆ ಹೇಗೆ ವರ್ತಿಸ ಬೇಕಾದಿತೆಂಬ ವಿಷಯದಲಿ ವ್ಹೈಸರಾಯರು ಸ್ಟೇಟ್ ಸೆಕ್ರೆಟರಿಯವರೊಡನೆ ಚ ... ಬಹುದು

ಹಿಂದುಸ್ಥಾನ ಟ್ಯಾಯಿಮ್ಸ ಪತ್ರಿಕೆಯ ಅಭಿಪ್ರಾಯವೇ ಬೇರೆ ಇದೊಂದು ಮೊದಲೇ ಹೂಡಿಟ್ಟ ಒಂದು ತಂತ್ರವೆಂದು ಅದರ ಅಭಿಮತ

ಹಿಂದೂದೇಶದ ವಾತಾವರಣಕ್ಕನು ಸರಿಸಿ ಯಾವುದೊಂದೂ ತಿದ್ದುಪಡಿಯಿಲ್ಲದೆ ಫೆಡರೇಶನನ್ನು ಜ್ಯಾರಿಗೆ ತಂದರೆ ಎಲ್ಲಿಲ್ಲಿ ... ಸಾದೀತೆ ಎಂಬದನ್ನು ಚರ್ಚಿಸಿ ತಿಳಿಯುವರೆ ಸ್ಟೇಟ್ ಸೆಕ್ರೆಟರಿಯವರು ಈ ತಂತ್ರವನ್ನು ಹೂಡಿರುವರು ಅಲ್ಲದೆ ಪ್ರಾಂತೀಯ ಸ್ವಾಯತ್ತತೆಯನ್ನು ಪಡೆದ ಬೇರೆ ಬೇರೆ ಪ್ರಾಂತ್ಯಗಳು ಇದನ್ನು ವಿರೋಧಿಸಿದರೆ ದೊಡ್ಡದೊಂದು ರಾಜಕೀಯ ಅವಘಡವಾಗಿ ಪರಿಣಮಿಸದೆ ಇರದು ಇದರಿಂದಾಗಿ ವ್ಹೈಸರಾಯರೂ ಗವರ್ನರು

ಗಳೂ ಈ ವಿಷಯವನ್ನು ತಮ್ಮ ಸರಕಾರಕ್ಕೆ ನಿವೇದಿಸಿದರೆ ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿದಂತಾಗುವುದು ಅಲ್ಲದೆ ಹಿಂದೂದೇಶದ ಮನ್ನಣೆಯನ್ನೂ ಸುಲಭದಲ್ಲಿ ದೊರಕಿಸಿಕೊಳ್ಳಬಹುದು

ಆ ಮೇಲೆ ಬ್ರಿಟನು ಏನಾದರೂ ಒಂದು ಸ್ವೇಚ್ಛೆಯ ದಾರಿಯನ್ನು ಹಿಡಿದು ವರ್ತಿಸಿದರೆ ಆ ವರ್ತನೆಯ ಫಲಾಫಲಗಳಿಗೆ ಅದೇ ತಾನೇ ಹೊಣೆಯಾಗಬಹುದಲ ವೇ?

ವ್ಹೈಸರಾಯರ ಮುಂದಿರುವ ಕೆಲವು ಸೂಕ್ಷ್ಮ ಸಮಸ್ಯೆಗಳು

ಕೆಲವು ಸೂಕ್ಷ್ಮ ಸಮಸ್ಯೆಗಳು ವ್ಹೈಸ ರಾಯರ ಕಣ್ಣು ಮುಂದೆ ಬಂದು ನಿಂತಿವೆ ಅವು ಗಳ ನಿವಾರಣೆಗಾಗಿ ಎಸೆಂಬ್ಲಿಯಲ್ಲಿ ಪ್ರತಿದಿನ ದಂತೆ ಸಭೆಗಳು ಜರಗುತ್ತಿವೆ

ಅವುಗಳಲ್ಲಿ ಅತಿ ಗಡುತರದ ಸಮಸ್ಯೆ ಯೆಂದರೆ ಒರಿಸ್ಸಾಕ್ಕೊಂದು ಗವರ್ನರ ನೇಮಕ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಬಿರುನುಡಿ ಗಳಿಂದೊಡಗೂಡಿದ ಅದೊಂದ ಠರಾವಿನ ಕುರಿತ ಮಂತ್ರಿಮಂಡಲದ ಸಂತಾಪ ಮತ್ತು ಅದರಿಂದ ತಲೆದೋರಬಹುದಾದ ಕ್ರಾಂತಿ ಯನ್ನು ಮೊದಲೇ ಮನಗಂಡ ವೈಸರಾಯರು ಅಂತಹದೊಂದು ದ ರ್ಘಟನೆಯನ್ನು ದೂರ ಗೊಳಿಸಲು ಸೆಣಸಾಡುತ್ತಿರುವರೆ ಎಂದು ತಿಳಿದು ಬರುತ್ತದೆ

ಸಭೆಯಲಿ ಅಸಂತುಷ್ಟಿಯು ಕಂಡ ಬರುತ್ತಿದೆ ಸರ್ ಥೋಮಸ ಸ್ಟುವರ್ಟರ ಒರಿಸ್ಸದ ಗವರ್ನರರಾಗಿದ್ದೂ ಸರ ಹೆನ್ರಿ ಕ್ರೈಕರು ಪಂಜಾಬದ ಗವರ್ನರರಾಗಿಯೂ ಹೋಗಬಹುದೆಂದಾದರೆ ಸರ್ ಎನ್ ಎನ ಸರ್ಕಾರ್ ಮತ ಸ ಮಹಮ್ಮದ ಜಫ ಲಾರವರ ಸಿಂಧ್ ಪ ತ್ತು ಒರಿಸಾ ಗವರ್ನರರಾಗಿ ಏಕೆ ಚುನಾಯಿತರಾಗಬಾರದು? ಪ್ರಾಂತೀಯ ಸ್ವಾಯತ್ತತೆಯು ಸುಗಮವಾಗಿ ಚಲಿಸುವ ಶಾಂತಿಯ ಕಾಲದಲ್ಲಿ ಖಾಲಿಬಿದ್ದ ಗವರ್ನರ ಪದವಿಗಳಿಗೆ ಹಿಂದೀಯರನ್ನು ನೇಮಿ ಸದಿರ ವರೇಕೆ? ಎಂಬುದೇ ಸದಸ್ಯರ ಅಸಂತುಷ್ಟಿ ಅಸಮಾಧಾನಗಳಿಗೆ ಕಾರಣ

ಗುಟ್ಟಿನ ವಿಷಯದಲ್ಲಿ ಗುಣುಗುಟ್ಟುವಿಕೆ

ಸರ ಮಹಮ್ಮದ್ ಜಫುರುಲ್ಲಾಖಾನರ ಇಂಗ್ಲಾಂಡಿನ ಎರಡನೇ ಯಾತ್ರೆಯ ವಿಷಯವು ಗುಟ್ಟಾಗಿರಿಸಿದ್ದರೂ ಅದೀಗ ಪ್ರಕಾರವಾದಲ್ಲಿ ವ್ಹೈಸರಾಯರ ಕೌನ್ಸಿಲಿನಲ್ಲಿ ಕಾಲಿಟ್ಟಿದೆ, ಹಿಂದೂ ಬ್ರಿಟಿಷ್ ವಾಣಿಜ್ಯದ ಮಾತ ಕಥೆಗಳು ಹನ್ನೆರಡು ತಿಂಗಳುಗಳಷ್ಟು ದೀರ್ಘ ಕಾಲದ ವರೆಗೂ ಚರ್ಚಿಸಲ್ಪಟ್ಟ ಬಡ ತೆರಿಗೆ ದಾರರಿಗೆ ಎರಡು ಲಕ್ಷ ರೂಪಾಯಿಗಳಷ್ಟು ಖರ್ಚಿಗೆ ಮಾರ್ಗವಾದರೂ ವ್ಯಾಪಾರದ ಕರಾರಿನ ಮುಂದಿನ ಗತಿಯೇನೆಂದ ತಿಳಿದ ಬರುವುದಿಲ್ಲ.

ಆರಿಸಲ್ಪಟ್ಟ ಮೆಂಬರು ಬೇರೆ ಬೇರೆ ವಿಧದಿಂದ ಬೇಸರವನ್ನು ಹೊರ ಸೂಸುತ್ತಿರುವರು ಸತ್ಯಮೂರ್ತಿಯವರ ಅದೊಂದು ಠರಾವಿನ ಕಾರಣದಿಂದ ಮಿತವಾದಿಯಾದ ಜಿನ್ನರೂ ಕೂಡ ನಿಮ್ಮ ಕಾರ್ಯವನು ನಾನು ಒಪ್ಪುವಂತಿಲ್ಲವೆಂದು ಸರಕಾರಕ್ಕೆ ನೇರಾಗಿ ತಿಳಿಸಿರುವರು

ಹಿಂದೂ ಬ್ರಿಟಿಷ ವಾಣಿಜ್ಯ ವಿಷಯದ ಚರ್ಚೆ ಮುಗಿದ ಉಭಯತರೂ ಕೂಡಿ ಏನಾದರೊಂದು ಕರಾರನ್ನು ಮಾಡಿಕೊಳ್ಳುವುದಿದ್ದರೆ ಅದನ್ನು ಸಭೆಯ ಮುಂದಿರಿ' ಎಂದು ಖಿಲಾಫತ ವಾದಿ ಪಕ್ಷದವರು ಸೂಚಿಸಿದರೂ ಸರಕಾರವು ಮೌನವ್ರತವನ್ನಾಚರಿಸಿ ಕುಳಿತಿತ್ತು ಸರಕಾರದ ದೃಷ್ಟಿಯಿಂದ ಅದು ನಿರ್ವಾಹಕರ ಕರ್ತವ್ಯದ ಜವಾಬ್ದಾರಿಯಾಗಿತ್ತೆಂದು ತೋರಿ ಬಂದಂತಿತ್ತು ಸರಕಾರದ ಈ ಗುಟ್ಟಿನ ಕುರಿತು ಸಭೆಯ ಎಲ್ಲಾ ಪಂಗಡಗಳೂ ಗುಣುಗುಟ್ಟುತ್ತಿರುವುವು 'ನಿಮ್ಮ ಈ ತರದ ಡೊಂಕು ವರ್ತನೆಯಿಂದ ವಾತಾವರಣವು ವಿಷಕಾರಿಯಾಗಿ ಬಳಿಕ ನಮಗೂ ನಮ್ಮ ಕಾರ್ಯನಿರ್ವಾಹಕ್ಕೂ ತೊಡಕನ್ನುಂಟುಮಾಡದಿರದು ಎಂದು ಎಚ್ಚರಿಸಿರುವರು

ಜಿನ್ನರ ಇನ್ನೇಳು ಕೇಳಿಕೆಗಳು

ಜಿನ್ನರ ಮುಸ್ಲಿಂ ಲೀಗಿನ ಪರವಾಗಿ ತಮ್ಮ ಮೊದಲಿನ ಕೇಳಿಕೆಗಳ ಜವಾಬಿನಲ್ಲಿ ಇನ್ನೇಳ ಕೇಳಿಕೆಗಳನ್ನು ಸೇರಿಸಿರುವರೆಂದ ಅಮೃತ ಬಜಾರ ಪತ್ರಿಕೆಯ ಅಂಬೋಣ ಅವು ಯಾವುವೆಂದರೆ —

೧ ಮುಸ್ಲಿಂ ಲೀಗು ಕೊಂಗ್ರೆಸ್ಸಿನಿಂದ ಪ್ರತ್ಯೇಕವಾದ ರಾಜಕೀಯ ಪಂಗಡವಾಗಿರಬೇಕು

೨ ಮ ... ಸ ಪರ್ಕದ ಯೋಜನೆಯನ್ನು ... ಸ ಒಪ್ಪಬಾರದು ... ಬೇಕು

೩ ಜಾತೀಯ ಪಟ್ಟಿಗಳ ಇತ್ಯರ್ಥದ ವಿಷಯದಲ್ಲಿ ಮುಸ್ಲಿಂ ಲೀಗಿಗೆ ಪೂರ್ಣ ಹಕ್ಕಿರಬೇಕು

ರಾಜಾಜಿ ... ರಾಜರು

೪ ಸ್ಥಳೀಕ ಸಂಸ್ಥೆಗಳ ಆಯ್ಕೆಗಳಲ್ಲಿ ಪ್ರತ್ಯೇಕವಾದ ಆಯ್ಕೆಯ ಸವಲತ್ತು ಇರಬೇಕು ಜತೆ ಆಯ್ಕೆಯ ವಿಧಾನದಿಂದಾಗಿ ಅದು ಪದಚ್ಯುತಿ ಹೊಂದಬಾರದು

೫ ಕಾಂಗ್ರೆಸು ತನ್ನ ತ್ರಿವರ್ಣ ಪತಾಕೆಯೊಂದಿಗೆ ಲೀಗ್ ಪತಾಕೆಯನ್ನೂ ಮನ್ನಿಸಬೇಕು

೬ 'ವಂದೇ ಮಾತರಂ' ಎಂಬ ಪ್ರಾರ್ಥನೆಯನ್ನು ಕಾಂಗ್ರೆಸು ಹಿಂತೆಗೆಯಬೇಕು.

೭ ಹಿಂದೀ ಸಾಹಿತ್ಯ ಸಮ್ಮೇಳನ ಹಿಂದೀ ಪ್ರಚಾರ ಇತ್ಯಾದಿ ಹಿಂದೀ ಪ್ರಸರಣ ಕಾರ್ಯಗಳಿಂದ ಕಾಂಗ್ರೆಸ್ಸು ದೂರವಿರಬೇಕು ಮತ್ತು ಉರ್ದು ಪ್ರಚಾರವನ್ನೂ ಬಲಗೊಳಿಸಬೇಕು

ಶ್ರೀ ನೆಹರೂರವರು ವಿಲಾಯತಿಗೆ ತೆರಳುವರು

ಶ್ರೀ ನೆಹರೂರವರು ಅಲ್ಲಹಾಬಾದಿನಲ್ಲೀಗ ಕೋಮುವಾರು ಕಲಹ ನಿವಾರಣಾ ಕಾರ್ಯದಲ್ಲಿ ತೊಡಗಿರುವರು ಕಲಹವು ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ ಗಲಭೆ ಭೀತಿಯು ಇನ್ನೂ ಇರುವುದು ಕೆಲಮಂದಿ ಮುಸ್ಲಿಮರ ಮನೋಭಾವದ ದೃಷ್ಟಿಯಿಂದ ಶ್ರೀ ನೆಹರೂರವರು ಆ ಮುಸ್ಲಿಮರಿರುವ ಪೇಟೆಗಳನ್ನು ಸಂದರ್ಶಿಸಬಾರದಾಗಿ ವಿನಂತಿ ಮಾಡಿಕೊಂಡಿರುವರು

ಕೋಮುವಾರು ಕಲಹ ನಿವಾರಣೆಗಾಗಿ, ಜನರನ್ನು ಬೋಧಿಸಲು ಶ್ರೀ ನೆಹರೂರವರು ನಗರ ಸಂಚಾರ ಮಾಡುತ್ತಿದ್ದಾರೆ ಅಲ್ಲಹಾಬಾದಿನಲ್ಲಿ ಸಂಪೂರ್ಣ ಶಾಂತಿ ನೆಲೆಸಿದ ನಂತರ ಶ್ರೀ ನೆಹರೂರವರು ವಿಶ್ರಾಂತಿಗಾಗಿ ಮತ್ತು ಆರೋಗ್ಯಕ್ಕಾಗಿ ವಿಲಾಯತಿಗೆ ತೆರಳಲಿದ್ದಾರೆಂದು ತಿಳಿದುಬರುತ್ತದೆ



... ಮಹಾ ... ಯ ... ಸರ್ದಾರ ಪಟೇಲರು

ಗಡಿನಾಡಿನ ಗಾಂಧಿಯವರು ಉಪವಾಸ ಮಾಡುವರು

ಗಡಿನ ದಿನ ... ಗಳ ... ಜಾ ... ಜಲ್ಲಿ ವಾಲ್ಟ ... ದೊಡನೆ ಜಟಾಪಟಿ ನಡೆದ ... ದಕ್ಕಾಗಿ ಗ ... ಗಳಾದ ಗಫಾರ ... ದಿನಗಳ ಉಪವಾಸವನಾಚರಿಸುತಿದಾರೆ

ಕೊಯಿಲಿಶನ್ ಮಂತ್ರಿಮಂಡಳದ ಕುರಿತು ಆಲೋಚನೆಗಳಾಗಿಲ್ಲ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಬಂಗಾಳದಲ್ಲಿ ಕೊಯಿಲಿಶನ್ ಮಂತ್ರಿಮಂಡಳವನ್ನು ಸ್ಥಾಪಿಸುವ ಕರಿತು ಆಲೋಚಿಸುತ್ತೆಂದು ಕೆಲದಿನಗಳ ಹಿಂದೆ ವಾರ್ತೆಗಳ ಹೊರಟಿದ್ದವಷ್ಟೆ ಈ ಕುರಿತ ಮೌಲಾನಾ ಅಬ್ದುಲ್ ಕಲಾಮು ಆಜಾದರು ಹೀಗೆಂದೊಂದು ಪ್ರಕಟಣೆಯನ್ನು ಮಾಡಿರುವರು

ಸುಳ್ಳಾದ ಮತ್ತು ಆಧಾರವಿಲ್ಲದ ಈ ವಾರ್ತೆಯು ಹೇಗೆ ಹರಡಿತ್ತೆಂದು ನನಗೆ ತಿಳಿಯುವುದಿಲ್ಲ ಈ ವಾರ್ತೆಯು ತೀರಾ ಸುಳ್ಳು

ರೊಯರು ಬಂಗಾಳದಲಿ ನೆಲೆಯುವರು

ಬಂಗಾಳದಲ್ಲಿ ನಿಂತು ಕೆಲಸಗಾರರಾಗಿ ... ಶ್ರೀ ಎಂ ಎನ್ ರೋಯರು ಕಲ್ಕತ್ತಾ ನಗರ ಸಭೆಯ ನೋಕರರ ಸಂಘದ ಆಶ್ರಯದಲ್ಲಿ ಮಾಡಿದ ಒಂದು ಭಾಷಣದಲ್ಲಿ ತಿಳಿಸಿದ್ದಾರೆ

ಅವರಿಗೆ, ೨೦೦ ಮಂದಿ ಕೆಲಸಗಾರರು ಬೇಕಾಗಿರುವರಂತೆ—ಈ ಕೆಲಸಗಾರರಿಂದ ಮಾ ...

ಪ್ರೆಸಿಡೆಂಟ್ ರೂಸ್ವೆಲ್ಟ್

ವತ್ತೂ ಮಹತ್ವಾಕಾಂಕ್ಷೆಗಳೂ ಇರಬಾರದೆಂತೆ, ಅವರು ಹಳ್ಳಿಹಳ್ಳಿಗಳಿಗೆ ನಡೆದು, ಮಹಾಜನಗಳಿಗಾಗಿ ದುಡಿಯಬೇಕು ಹಳ್ಳಿಗರನ್ನು ಅವರ ಸದ್ಯದ ಸಂಕಷ್ಟ ಸ್ಥಿತಿಯಿಂದ ಪಾರು ಮಾಡಲು ಅವರು ಯತ್ನಿಸಬೇಕಂತೆ ಈ ತರದಲ್ಲಿ ಅವರು ಬಂಗಾಳದ ರಾಜಕೀಯ ಸ್ಥಿತಿಯನ್ನು ಸುಧಾರಿಸಲು ಯತ್ನಿಸುವರಂತೆ

ಬಿಹಾರದಲ್ಲಿ ಶಿಕ್ಷಣ ಪ್ರಚಾರ

ಈ ತರದ ಸಂಕಟಗಳುಂಟಾಗುವುದು ಹಾಳು ಹೊಟ್ಟೆಯಿಂದ. ನಿಮ್ಮ ಹೊಟ್ಟೆಯನ್ನು ಸುಖವಾದ ರೀತಿಯಲ್ಲಿ ನಿರ್ವಹಿಸಿಕೊಳ್ಳುವ ಒಂದೇ ಒಂದು ಉಪಾಯ ವೆಂದರೆ, ಇನೋಸ್ ಫ್ರುಟ್ ಸಾಲ್ಟ್'ನ Eno's 'Fruit Salt' ಒಂದು ಗ್ಲಾಸನ್ನು ಕುಡಿಯುವುದು ಊಟವನ್ನು ರುಚಿಸಲು, ಇನೋಸ್ ಅನುಕೂಲ ಮಾಡಿಕೊಡುವುದು.

ಜಗತ್ತಿನ ಎಲ್ಲಾ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟ, ಉತ್ತಮ ಪರಿಪಕ್ವವಾದ ಹಣ್ಣಿನಲ್ಲಿರುವ ಉತ್ತಮ ಗುಣಗಳಿರುವ ಪದಾರ್ಥಗಳು ಇನೋಸ್ ಫ್ರುಟ್ ಸಾಲ್ಟ್ Eno's 'Fruit Salt' ನಲ್ಲಿವೆ ಇನೋ ಸೇವನೆಯಿಂದ ಖರ್ಚು ಕಡಿಮೆ ಎಲ್ಲಾ ಅಂಗಡಿಗಳಲ್ಲಿ ಸಣ್ಣ ಪರಿಮಾಣದಲ್ಲಿ ಸಿಗುತ್ತದೆ

ನಕಲಿ ವಸ್ತುಗಳನ್ನು ಕಡೆಯಬೇಡಿರಿ ಖಾತ್ರಿಯಾದ ಫ್ರುಟ್ ಸಾಲ್ಟ್ ಬಾಟ್ಲಿಯಲ್ಲಿ ಮಾರಲ್ಪಡುತ್ತದೆ ಈ ಮಾದರಿಯ ಸೀಲ್ ವಾತ ಪೇಪರ್ ಮಾಡುವುದೆಂದು ನಮ್ಮ 70 ವರ್ಷದ ಅನುಭವ ಸಿದ್ಧಾಂತವಾಗಿರುತ್ತದೆ

EVK 5

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ|| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಇಂಗ್ಲೀಷು ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೆ ಇರುವಂಥ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ರೋಗಿಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೊನೋಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ... ಸರ್ವ ಪ್ರಕಾರದ ಪ್ರಮೇಹ ... ಯಾವುದೇ ..., ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ... ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 8–0–0 (ಎಂಟು) ವಿ. ಪಿ. ಖರ್ಚು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಶೀಲಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4.

ಸರ್ವಾಧಿಕಾರಿಗಳಿಗೆ ಸುಖನಿದ್ರೆಯಿಲ್ಲ

(ಹಿಂದಿನ ಪುಟದಿಂದ ಮುಂದುವರಿದುದು)

ಹಾಕಿ ಸುಳಿಯುತಿದ್ದಾಗ ಅವನು ಆರಾಮ ಕ್ಕಾಗಿ, ಬದುಕಿ ಉಳಿಯುವದಕ್ಕಾಗಿ ಹೋಗು ವದು ಎಲ್ಲಿಗೆ, ಬಲ್ಲಿರಾ? ಬಂದು ಹೋಗಲಿಕ್ಕೆ ಕಷ್ಟತರವಾದ, ವಿಶೇಷ ಕಾರ್ಯವಿಲ್ಲದೆ ಬಂದು ಹೋಗಲಿಕ್ಕೆ ಯಾರೂ ಮನಸ್ಸು ಮಾಡದ ಆಲ್ಪ್ಸ ಪರ್ವತ ಪ್ರದೇಶದಲ್ಲಿರುವ ಒಂದು ಚಿಕ್ಕ ಹಳ್ಳಿಗೆ ಅವನ ವಾಸಸ್ಥಾನವೆಂದೇ ಆ ಹಳ್ಳಿಯು ಈಗ ಬಹು ಪ್ರಸಿದ್ಧವಾಗಿದೆ ಅದರ ಹೆಸರು ಬರ್ಚೆಸ್‌ಗಾಡನ್ ಎಂದು.

ಈ ಹಳ್ಳಿಗೆ ಹೋಗುವ ಮಾರ್ಗಗಳೆಲ್ಲವೂ ಸುರಕ್ಷಿತವಾಗಿದೆ ಅಲ್ಲಲ್ಲಿ ಯಾರೂ ಗುರುತಿಸದಂತೆ ಸಣ್ಣ ಸಣ್ಣ ಕೊತ್ತಳಗಳಲ್ಲಿ ಮಶೀನು ಗನ್ನುಗಳನ್ನು ಯಾವಾಗ ಬೇಕಾದರೂ ಉಪಯೋಗಿಸಲಿಕ್ಕಾಗುವಂತೆ ಅಡಗಿಸಿ ಇಟ್ಟಿದ್ದಾರೆ ಸುತ್ತಲೂ ವಿದ್ಯುಚ್ಛಕ್ತಿಯು ಹರಿದಾಡುವ ಸರಿಗೆಯ ಆವರಣವನ್ನು ಕಟ್ಟಿದ್ದಾರೆ ಮತ್ತೆ ಇದೇ ಹಳ್ಳಿಯಲ್ಲಿ ಯಾರೂ ಅರಿಯದ ನೆಲಮಾಳಿಗೆಗಳೂ ಸುರಂಗ ದಾರಿಗಳೂ ಇವೆ ಅವುಗಳಲ್ಲಿದ್ದು ವಿಮಾನದಾಳಿಯಿಂದ ಬದುಕಿಕೊಳ್ಳುವದು ಬಹಳ ಸುಲಭವಾಗಿದೆ. ಅಲ್ಲಿಗೆ ಬರುವ ಮಾರ್ಗಗಳಲ್ಲಿ ಚತುರರಾದ ಕಾವಲುಗಾರರಿದ್ದಾರೆ ಅವರ ನೋಟದಿಂದ ಮರೆಸಿಕೊಂಡು ಹಳ್ಳಿಯನ್ನು ಪ್ರವೇಶಿಸುವದು ಯಾವ ಜೀವಿಗೂ ಸಾಧ್ಯವಾಗದ ಮಾತು ಹೋಗಲೇ ಬೇಕೆನ್ನುವವರು ಹಿಟ್ಲರನ ದಸ್ಕತಿರುವ ಪ್ರವೇಶ ಪತ್ರವನ್ನು ಪಡೆದಿರಬೇಕು ಅನ್ಯರಿಗೆ ಯಾವ ಉಪಾಯದಿಂದಲೂ ಅಲ್ಲಿಗೆ ಪ್ರವೇಶವಿಲ್ಲ ಹೋಗಲಿಕ್ಕೆ ಹವಣಿಸುತ್ತಿದ್ದರೆ, ಒಂದಲ್ಲ ಒಂದು ರೀತಿಯಿಂದ ಅವನ ಪ್ರಾಣಕ್ಕೆ ಸಂಚಕಾರವಾಗುವದು ಖಂಡಿತ ಒಂದೇ ಅವರು ಕಾವಲುಗಾರರ ಕತ್ತಿ ತುಪಾಕಿಗಳ ಬಾಯಿಗೆ ಬಲಿಯಾಗಬಹುದು, ಅಥವಾ ಪ್ರಾಣಸಂಹಾರಕ ವೈಜ್ಞಾನಿಕ ಉಪಾಯಗಳಿಂದ ಕೊಲ್ಲಲ್ಪಡಬಹುದು.

ಈಗ ಹಿಟ್ಲರನು ರೋಮಿನಲ್ಲಿ ಮುಸಲೋನಿಯನ್ನು ಕಾಣುವನೆಂಬ ವರ್ತಮಾನವು ಹಬ್ಬಿದೆ ಕೆಲವು ದಿನಗಳ ಹಿಂದೆ ಮುಸಲೋನಿಯ ಪ್ರಾಣರಕ್ಷಣೆಗೆ ಯಾವ ಉಪಾಯಗಳು ಕೈಕೊಳ್ಳಲ್ಪಟ್ಟಿದ್ದವೋ ಅವೇ ಉಪಾಯಗಳನ್ನು ಅವಶ್ಯ ಮೀರಿ ಮುಸಲೋನಿಯು ಹಿಟ್ಲರನ ಪ್ರಯಾಣ ಕಾಲಕ್ಕೆ ತೆಗೆದುಕೊಳ್ಳುವ ಏರ್ಪಾಡು ಮಾಡಿದ್ದಾನೆ ಗುಂಡು ತುಪಾಕಿಗಳ ಸುಡುವಿಕೆಗೆ ಸುಡದಂಥ ಪದಾರ್ಥದಿಂದ ಕಟ್ಟಿದ ರೈಲ್ವೆ ಗಾಡಿಯಲ್ಲಿ ಅಂದು ಮುಸಲೋನಿಯು ಪ್ರಯಾಣ ಮಾಡಿದನು ಪ್ರಯಾಣದ 500 ಮೈಲು ಉದ್ದದ ರಸ್ತೆಯ ಒಂದೊಂದು ಮೈಲು ಅಂತರದಲ್ಲಿ ಕೂಡ ಅಸ್ತ್ರ ಶಸ್ತ್ರಗಳಿಂದ ಸುಸಜ್ಜಿತರಾದ ಕಾವಲುಗಾರರು ಇರುತಿದ್ದರು ಸಂದೇಹಾತ್ಮಕ ಪ್ರತಿಯೊಂದು ಮನೆಯ ಜಪ್ತಿ ಮಾಡಿದ್ದರು ಇನ್ನೂ ಅನೇಕ ತರಹದ ಸಂರಕ್ಷಣೋಪಾಯಗಳನ್ನು ತೆಗೆದುಕೊಂಡಿದ್ದರು

ಹಿಟ್ಲರನಿಗೆ ಪ್ರಾಣಭಯವು ಎಷ್ಟಿದೆಯೋ, ಅಷ್ಟು ಅಲ್ಲ, ಅದಕ್ಕೆ ಮೀರಿಯೇ ಇತರ ಸರ್ವಾಧಿಕಾರಿಗಳಿಗೆ ಆ ಭಯವು ಇರುವದು ಮುಸಲೋನಿಯ ಮೇಲೆ ಹಿಂದೆಷ್ಟೋ ಆಕ್ರಮಣಗಳಾಗಿರುವವು ಅವುಗಳಲ್ಲಿ ಬಹು ವಿಶೇಷವಾದ ಆಕ್ರಮಣವೆಂದರೆ, 1926 ರಲ್ಲಿ ವಾಯೊಲೈಗಿಬ್ಬನ್ಸ್ ಎಂಬವಳು ಅವನ ಮುಖವನು ಗುಂಡಿಟ್ಟು ಹೊಡೆದುದಾಗಿದೆ ಅದರೆ ಪಟ್ಟು ಮೂಗಿನ ತುದಿಗೆ ಮಾತ್ರ ತಾಗಿದುದರಿಂದ ಅವನು ಬದುಕಿಕೊಂಡ ಕೆಲವು ದಿನಗಳವರೆಗೆ ಮೂಗಿನ ತುದಿಗೆ ವಸ್ತ್ರ ಕಟ್ಟಿಕೊಂಡೇ ಅವನು ಇರಬೇಕಾಯಿತು. ಆದರೆ ರಾಜಕಾರ್ಯಕ್ಕೆ ಒಂದು ದಿನವಾದರೂ ಹೋಗದೆ ಇರಲಿಲ್ಲ. ಆದಕಾರಣ ಜನತೆಗೆ ಅವನ ಮೇಲಿದ್ದ ಶ್ರದ್ಧೆ ಭಕ್ತಿಗಳು ಬಹಳ ಹೆಚ್ಚಿದುವು ರೂಪು ಕೆಟ್ಟಾದರೂ ದೇಶಹಿತ ಕಾರ್ಯದಲ್ಲಿ ಎಡೆಬಿಡದೆ ಶ್ರಮ ತೆಗೆದುಕೊಳ್ಳುತ್ತಿರುವನಲ್ಲಾ! ಎಂದು ಬಹಳ ಅಭಿಮಾನಪಟ್ಟರು

ಅಂದಿನಿಂದ ಮುಸಲೋನಿಯ ಪ್ರಾಣರಕ್ಷಣೆಗೆ ಯಾರೂ ಇಷ್ಟರ ತನಕ ಚಿಂತಿಸದಿರುವಂಥ ಉಪಾಯಗಳನ್ನು ಕೈಕೊಳ್ಳಲಾಗಿದೆ. ವಿಶೇಷ ತರಬೇತಿಯನ್ನು ಹೊಂದಿದ ಮುನ್ನೂರು ಮಂದಿ ಅಂಗರಕ್ಷಕರು ಅವನನ್ನು ಹಗಲು ರಾತ್ರಿ ಕಾಯುಕೊಂಡಿದ್ದು, ಅವನಿಗೆ ಯಾವದೇ ತರಹದ ಅಪಾಯವು ಬಾರದಂತೆ ನೋಡಿಕೊಂಡಿದ್ದಾರೆ, ಅವನು ಮನೆಯಿಂದ ಕಚೇರಿಗೆ, ಕಚೇರಿಯಿಂದ ಮನೆಗೆ, ಊರಿಂದೂರಿಗೆ ಬಂದು ಹೋಗುವ ರಸ್ತೆಗಳಲ್ಲಿ ಪ್ರವೀಣ ಕಾವಲುಗಾರರು ಇರುವರು ಮಾತ್ರವಲ್ಲದೆ, ಸಂಚಾರದ ಮಾರ್ಗಗಳು ಕೂಡ ಆಗಾಗ ಬದಲಾಯಿಸಲ್ಪಡುತ್ತ ಇರುತ್ತವೆ ಅವನ ಆಗಮನ ನಿರ್ಗಮನದ ಪ್ರತ್ಯೇಕ ಸಂಕೇತಗಳಿವೆ ಅಂಥ ಸಂಕೇತಗಳು ಬಂದೊಡನೆ ರಸ್ತೆಗಳ ಮೇಲೆ ಕಾವಲಿಗಿರುವ ಸಾಮಾನ್ಯ ಪೊಲೀಸರು ಬೇರೆ ಕಡೆಗೆ ಹೋಗುತ್ತಾರೆ ಮುಸಲೋನಿಯ ಆಗಮನ ನಿರ್ಗಮನಗಳಾಗುವ ತನಕ ಅವನ ಅಂಗರಕ್ಷಕರೇ ಪೋಲೀಸರ ಸ್ಥಾನಗಳಲ್ಲಿ ನಿಂತು ಪಹರೆಕೊಡುತ್ತಾರೆ

ಟರ್ಕಿಯ ಸರ್ವಾಧಿಕಾರಿ ಮುಸ್ತಫಾ ಕೆಮಾಲ ಪಾಶನ ಹೆಸರನ್ನು ನೀವೆಲ್ಲರೂ ಕೇಳಿ ಬಲ್ಲಿರಿ ಒಂದು ದಿನ ಅವನು ಸ್ಮಿರ್ನದ ಒಂದು ಮನೆಯಲ್ಲಿ ತನ್ನ ಅಂಗರಕ್ಷಕರೊಂದಿಗೆ ಕೂಡಿ ಇಸ್ಪೀಟು ಆಡುತ್ತ ಇದ್ದನು ಆಗಲೇ ಒಬ್ಬ ಅಪರಿಚಿತ ವ್ಯಕ್ತಿಯು ಒಳಗೆ ಬಂದು ತನಗೊಂದು ಹುದ್ದೆಯನ್ನು ಕೊಡಬೇಕೆಂದನು ಅಲಿಯು ಕುಡಿದು ಬಂದಿದ್ದನು ಅವನಿಗೂ ಕೆಮಾಲನಿಗೂ ಕೆಲವು ಮಾತುಗಳು ನಡೆದುವು ಅಲಿಯ ಕೈ ಕಿಸೆಯ ಕಡೆಗೆ ಹೋಯಿತು ಎಲ್ಲರೂ ಅವನನ್ನು ನೋಡಿದರು ಅವರು ಅವನ ಎರಡೂ ಕೈಗಳನ್ನು ಭದ್ರವಾಗಿ ಹಿಡಿದು ಹೊರಗೆ ದಬ್ಬಿದರು ಒಂದರೆಕ್ಷಣ ತಡವಾಗಿದ್ದರೆ ಅಲಿಯ ಪಿಸ್ತೂಲಿನಿಂದ ಕೆಮಾಲನ ಕೊಲೆಯಾಗುತಿದ್ದಿತು ಆಗ ಟರ್ಕಿಯ ಇತಿಹಾಸವೇ ಬೇರೆಯಾಗುತಿತ್ತು ಕೆಮಾಲನ ಪ್ರಾಣರಕ್ಷಣೆಗೆ ಮಾಡಿರುವ ವ್ಯವಸ್ಥೆಗಳು, ಹಿಟ್ಲರ ಮುಸಲೋನಿಯರದಂತೆ ಬಹು ದೊಡ್ಡ ಪ್ರಮಾಣದಲ್ಲಿ ಇರುವದಿಲ್ಲ ಆದರೆ ಅವನ ಅಂಗರಕ್ಷಕರು ಮಾತ್ರ ಹಿಟ್ಲರ ಮುಸಲೋನಿಯರ ಅಂಗರಕ್ಷಕರಿಗಿಂತಲೂ ಬಹು ಪ್ರವೀಣರೂ ದಕ್ಷರೂ ಆಗಿರುತ್ತಾರೆ. ಅವರೊಳಗೆ ಒಬ್ಬನ ಕೆಲಸವು ಮುಸ್ತಾಫನ ಆಹಾರ ಪಾನೀಯಗಳಲ್ಲಿ ವಿಷ ಸೇರದಂತೆ ನೋಡಿಕೊಳ್ಳುವದಾಗಿದೆ ಮುಸ್ತಾಫನು ತಿನ್ನುವ ಕುಡಿಯುವ ಪ್ರತಿಯೊಂದು ವಸ್ತುವನ್ನು ಅವನು ತಿಂದು ಕುಡಿದು ಪರೀಕ್ಷಿಸುತ್ತಾನೆ ಯಾರಾದರೂ ಮುಸ್ತಾಫನನ್ನು ವಿಷ ಹಾಕಿ ಕೊಲ್ಲುವ ಒಳಸಂಚು ನಡೆಸಿಲ್ಲವಷ್ಟೆ ಎಂದು ತಿಳಿಯುತ್ತಾನೆ

ಕಪ್ಪು ಸಮುದ್ರದ ದಂಡೆಯ ಮೇಲೆ ಸ್ಟಾಲೀನನು ವಿಹರಿಸುತಿದ್ದರು ಕಿನಾರೆಗೆ ಒತ್ತಿಕೊಂಡು ಇರುವ ಒಂದು ದೋಣಿಯಲ್ಲಿ ಮಲಗಿ ಅವನು ಸೂರ್ಯಾಸ್ತಮಾನವನ್ನು ಧ್ಯಾನವಿಟ್ಟು ನೋಡುತ್ತ ಆನಂದಿಸುತಿದ್ದನು ಆಗಲೇ 'ಢಂ' ಎಂದು ಗುಂಡು ಹಾರಿತು ಗಡಿನಾಡಿನ ಕಾವಲುಗಾರನೊಬ್ಬನು ರಷ್ಯದ ಸರ್ವಾಧಿಕಾರಿ ಸ್ಟಾಲೀನನ ಮೇಲೆ ಗುಂಡು ಹಾರಿಸಿದ್ದನು ಅವನು ನಸುನಕ್ಕು ಎದ್ದು ಕೂತನು ಇದೇ ಸಂಬಂಧ ಕಳೆದ ನವಂಬರ ತಿಂಗಳಲ್ಲಿ 18 ಮಂದಿ ಉಚ್ಚ ನೌಕರರ ವಿಚಾರಣೆ ನಡೆದು ಎಲ್ಲರೂ ಮರಣ ದಂಡನೆಗೆ ಗುರಿಯಾದರು.

ಸ್ಟಾಲೀನನು ಮನೆಯಿಂದ ಕಚೇರಿಗೆ ಬಂದು ಹೋಗುವ ಮಾರ್ಗವು ವಿಶೇಷ ರೀತಿಯಿಂದ ಕಾಯಲ್ಪಡುತ್ತಲಿದೆ ದೊಡ್ಡ ದೊಡ್ಡ ಸಭೆಗಳಲ್ಲಿ ಸ್ಟಾಲೀನನು ಹೋಗಲಿಕ್ಕಿದ್ದಾಗ ಅವನಪ್ರಾಣರಕ್ಷಣೆಯು ವಿಶೇಷ ಬಂದೋಬಸ್ತು ಇರುತ್ತದೆ ಕಚೇರಿಯ ದ್ವಾರದಲ್ಲಿ ಕಾವಲು ಎಷ್ಟು ಭದ್ರವಾಗಿರುವದೆಂದರೆ, ಸ್ವತಹ ಸ್ಟಾಲೀನನು ಹೋಗಬೇಕಾದರೂ ಪಹರೆಯವರಿಗೆ ಪ್ರವೇಶ ಪತ್ರವನ್ನು ಗುರುತಿನ ಕಾರ್ಡನ್ನೂ ತೋರಿಸಬೇಕಾಗುತ್ತದೆ ಯಾಕಂದರೆ ಚತುರರಾದ ಸ್ಟಾಲೀನ ದ್ವೇಶಿಗರು ಅವನ ವೇಶಹಾಕಿಕೊಂಡು ಕಚೇರಿ ಪ್ರವೇಶಮಾಡಿ, ಎಂಥೆಂಥ ಅನರ್ಥಗಳನ್ನು ಮಾಡಬಹುದು ಎಂದು ತಿಳಿಕೊಳ್ಳುವದು ಸುಲಭವಲ್ಲ ಅವರ ಉಪಾಯಗಳ್ನು ಕಾವಲುಗಾರರು ತಿಳಕೊಳ್ಳುವದು ಕಠಿನತರವಾಗಿರುವದು

ಹೀಗೆ ಈ ಎಲ್ಲಾ ಸರ್ವಾಧಿಕಾರಿಗಳ ಪ್ರಾಣರಕ್ಷಣೆಗೆ ವರ್ಷಂಪ್ರತಿ ಮಿಲಿಯಾಂತರ ಹಣಗಳ ಖರ್ಚು ಆಗುತ್ತದೆ ಇಷ್ಟುದೊಡ್ಡದಾದ ಖರ್ಚಿನಿಂದಲೇ ಸರ್ವಾಧಿಕಾರತ್ವಮತ್ತು ಪ್ರಜಾಸತ್ತೆಯೊಳಗಿನ ಹಾನಿ ಲಾಭಗಳನ್ನು ನಾವು ಕಂಡುಕೊಳ್ಳಬಹುದು ಇಷ್ಟು ಖರ್ಚನದ್ದು ಮತ್ತು ಇಷ್ಟು ಅಪತ್ಕಾರ ಆಗಿದ್ದು ಸರ್ವಾಧಿಕಾರ ಅಶಾಂತಿ ಸ್ಥಾಪನೆಯಾಗುವ ಬದಲಿಗೆ ಅಶಾಂತಿಯು ಮತ್ತಷ್ಟು ಹೆಚ್ಚಿಗೆ ಹರಡುತ್ತಲಿದೆ ಹಾಗಾದರೆ ಜಗತ್ತಿನಲ್ಲಿ ಸರ್ವಾಧಿಕಾರತ್ವವು ಇರಬೇಕೆ? ಇದು ಎಲ್ಲರೂ ಆಲೋಚಿಸಬೇಕಾದ ವಿಷಯವಾಗಿದೆ

The Estates & Agency Co., Ltd.

Incorporated in England

ಮಿಶ್ರರಹಿತ ಟೀ ಬಗ್ಗೆ ಭದ್ರತೆ.

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಕೆಳಗೆ ಸೂಚಿಸಿದ ನಿಶಾನಿ ಮತ್ತು ಅಡ್ಡಪಟ್ಟಿಗಳಿಂದ ಸುತ್ತಲ್ಪಟ್ಟು, ಸೀಲ್ ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲ್ಲರಿಗೂ ತಿಳಿಸಲು ಅಪೇಕ್ಷಿಸುತ್ತೇವೆ



PYKARA NO 1 DUST.
SEAFORTH NO. 1 DUST
HIGHFOREST NO 1 DUST

ನಮ್ಮ ಜನಪ್ರೀತವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡೆಕೊಳ್ಳುವಾಗ ನಮ್ಮ ನಿಶಾನಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡಕೊಳ್ಳುವದು

The Estates & Agency Company Ltd.
Head Office:-NADUVATAM P. O
Sales Branch:-COCHIN

ಆಯುರ್ವೇದದಲ್ಲಿ ಸಂಜೀವನ ಚಿಕಿತ್ಸೆ.

ವಯೋವೃದ್ಧರಾದ ಪಂಡಿತ ಮದನಮೋಹನ ಮಾಲವೀಯರು ಇನ್ನೋ ಅದೊಂದು ಅದ್ಭುತವಾದ 'ಕಾಯಕಲ್ಪ' ಎಂಬ ಚಿಕಿತ್ಸಾವಿಧಾನದಿಂದ ತಾರುಣ್ಯವನ್ನು ಪಡೆಯುವರೆಂಬ ವಾರ್ತೆಯು ಕೋಲ್ಮಿಂಚಿನಂತೆ ಪ್ರಪಂಚವನ್ನು ತುಂಬಿ ಜನರನ್ನು ಆನಂದಸಾಗರದಲ್ಲಿ ಕೆಡಹಿರುವುದು ಮಾತ್ರವಲ್ಲದೆ ಜನರು ಕಾಯಕಲ್ಪವೆಂಬುದು ಅದೆಂಥ ಮಹಾಪ್ರಯೋಗವೋ? ಎಂದು ಕುತೂಹಲಪಟ್ಟು ಆ ಚಿಕಿತ್ಸೆಯ ಸಮಗ್ರ ವೃತ್ತಾಂತವನ್ನು ತಿಳಿಯುವ ಆತುರದಿಂದ ಇರುತ್ತಾರೆ. ಕೆಲವು ಜನರು ಮಾಲವೀಯರ ಸಫಲತೆಗೆ, ಚಿಕಿತ್ಸಕರ ಯೋಗಬಲವು ಕಾರಣವಾಗಿದ್ದಿರಬಹುದೆಂದು ಊಹಿಸುತ್ತಾರೆ. ಅಥವಾ ಅವರ ಶರೀರ ಮನಸ್ಸುಗಳ ಮೇಲೆ ಯಂತ್ರ ಮಂತ್ರಗಳ ಪ್ರಭಾವವು ಬಿದ್ದಿರಬಹುದೆಂದು ಮತ್ತೆ ಕೆಲವರು ಆಡಿಕೊಳ್ಳುತ್ತಾರೆ. ಆದರೆ ಆಯುರ್ವೇದದಲ್ಲಿ ಈ ಸಂಜೀವನ ಚಿಕಿತ್ಸಾಕ್ರಮವನ್ನು ಬಹು ವಿಸ್ತಾರವಾಗಿ ವಿವರಿಸಿರುವರೆಂಬುದನ್ನು ಮಾತ್ರ ಬಹಳ ಮಂದಿ ತಿಳಿದಿರುವದಿಲ್ಲ. ಇದಕ್ಕೆ ಜನತೆಯಲ್ಲಿ ಆಯುರ್ವೇದದ ಪ್ರಚಾರವು ಸಾಕಷ್ಟು ಆಗಿಲ್ಲದಿರುವದೂ, ಅವರು ಅದರ ಸಂಪೂರ್ಣ ಮಹತ್ವವನ್ನು ತಿಳಿಯದೆ ಇದ್ದಿರುವುದೂ ಕಾರಣವೆಂದು ಡಾಕ್ಟರ್ ಪಿ ಜಿ ಪಿಳ್ಳೆ 'ವೈದ್ಯಕಲಾನಿಧಿ'ಯವರು ಬೊಂಬಾಯಿ ಕ್ರಾನಿಕಲಿನಲ್ಲಿ ಬರೆಯುತ್ತಾರೆ.

ಜೀವತತ್ವದ ಗುಣಸ್ವಭಾವ.

ಜೀವರಕ್ಷಣೆಗಾಗಿ ಜೀವಿಯು ಮಾಡುವ ಪ್ರಯತ್ನವನ್ನು ಅದು ಮತ್ತಾವುದಕ್ಕಾಗಿಯೂ ಮಾಡುವದಿಲ್ಲ. ಜೀವವು ಅಮೂಲ್ಯವಾದುದೆಂದು ಜೀವಿಯ ಅಭಿಪ್ರಾಯವಾಗಿದೆ. ಅದಕ್ಕಾಗಿಯೇ ಅದು ಜೀವದ ರಕ್ಷಣೆಗಾಗಿ ಅಷ್ಟು ಪ್ರಯತ್ನವನ್ನು ಮಾಡುತ್ತದೆ. ಆದರೆ ಜೀವತತ್ವವು ವಿಚಿತ್ರವಾಗಿದೆ. ತಕ್ಕ ಜಾಗ್ರತೆಯನ್ನು ತೆಗೆದುಕೊಳ್ಳದಿದ್ದರೆ ಅದು ಎಂದಿಗೂ ಬೇಕಾದರೂ ಶರೀರವನ್ನು ಬಿಟ್ಟುಹೋಗುವ ಸ್ವಭಾವದ್ದಾಗಿದೆ. ಜೀವವು ಪ್ರಕಟವಾಗ ಬೇಕು— ಅದರ ಗುಣಸ್ವಭಾವಗಳು ಕಾಣಿಸಿಕೊಳ್ಳುವದು ಶರೀರದ ಮೂಲಕ. ಶರೀರವು ಇರುವದಿಲ್ಲವಾದರೆ ಜೀವಕ್ಕೆ ಅಸ್ತಿತ್ವವನ್ನು ಕೊಡಲಾರೆವು. ಸುಖಸಂತೋಷಗಳ ಪ್ರಾಪ್ತಿಗಾಗಿಯೇ ಅದು ಹಗಲಿರುಳ ದುಡಿಯುತ್ತದೆ. ಸುಖಸಂತೋಷಗಳ ಪ್ರಾಪ್ತಿಯು ಅದಕ್ಕೆ ಶರೀರದ ಮೂಲಕ ಪ್ರಾಪ್ತವಾಗಬೇಕು. ಆದಕಾರಣ ಈ ಪ್ರಯತ್ನದಲ್ಲಿ, ಈ ದುಡಿತದಲ್ಲಿ ಶರೀರದ ಅಣುಕೋಶಗಳು ಯಾವಾಗಲೂ ನಷ್ಟವಾಗುತ್ತ ಇರುತ್ತವೆ. ಈ ನಶ್ವರ ಗುಣವು ಶರೀರಕ್ಕೆ ಇರುವದರಿಂದಲೇ ಅದು ಶರೀರವೆಂದು ಕರೆಯಲ್ಪಟ್ಟಿತು. ಈ ನಷ್ಟವು ಆದಷ್ಟು ಕಡಿಮೆಯಾಗಬೇಕೆಂಬುದರಿಂದಲೂ, ಆರೋಗ್ಯವನ್ನು ಸಾಧಿಸುವದಕ್ಕಾಗಿಯೂ ಜೀವಿಯು ಆಹಾರವನ್ನು ತೆಗೆದುಕೊಳ್ಳುವದಾಗಿದೆ. ಕೆಲಕೆಲವು ಸಂದರ್ಭಗಳಲ್ಲಿ ಸುಖಿಸಬೇಕೆಂಬ, ಸಂತೋಷಿಸಬೇಕೆಂಬ ಕಾಂಕ್ಷೆಯು ಎಷ್ಟು ಪ್ರಬಲವಾಗಿರುತ್ತದೆಂದರೆ, ಆ ಪ್ರಯತ್ನದಲ್ಲಿ ಶರೀರವು ಪೂರ್ಣ ಬಳಗುಂದುತ್ತದೆ. ಆಯಾಸ, ಚಿಂತೆ, ರೋಗ, ವಾರ್ಧಕ್ಯಗಳ ಬರವದ ಹೀಗೆಯೇ.

ಶಾರೀರಿಕ ದೌರ್ಬಲ್ಯತೆಯು ಬರೀ ರಕ್ತ, ಮಜ್ಜೆ, ಮಾಂಸ, ಎಲುಬುಗಳಿಂದ ಕೂಡಿದ ಸ್ಥೂಲಕಾಯಕ್ಕೆ ಪ್ರಾಪ್ತವಾಗುವದು ಮಾತ್ರವಲ್ಲದೆ, ಪಂಚೇಂದ್ರಿಯಗಳಿಂದ ಕೂಡಿದ ಸೂಕ್ಷ್ಮ ಶರೀರಕ್ಕೆ ಕೂಡ ಪ್ರಾಪ್ತವಾಗುತ್ತದೆ. ಸ್ಥೂಲ ಸೂಕ್ಷ್ಮ ಎರಡೂ ಶರೀರಗಳಿಗೆ ದೌರ್ಬಲ್ಯತೆಯು ಪ್ರಾಪ್ತವಾದಾಗ, ದಿನನಿತ್ಯ ತೆಗೆದುಕೊಳ್ಳುವ ಆಹಾರಪಾನೀಯಗಳಿಂದ ಆರೋಗ್ಯ ಸಾಧನವು ಕಷ್ಟತರವಾಗುತ್ತದೆ. ಆದ್ದರಿಂದ ಆಗ ಶರೀರಕ್ಕೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧಿಗಳನ್ನು ತೆಗೆದುಕೊಳ್ಳುವ ಅಗತ್ಯ ಬೀಳುವದು. ಆದರೆ ಕೆಲವು ಸಂದರ್ಭಗಳಲ್ಲಿ ಶರೀರವು ಎಷ್ಟು ದುರ್ಬಲವಾಗಿರುತ್ತದೆಂದರೆ, ಈ ಔಷಧಿಗಳಿಂದಲೂ ಸಾಕಷ್ಟು ಪ್ರಯೋಜನವು ದೊರೆಯುವದಿಲ್ಲ, ಜೀವವು ಶರೀರವನ್ನು ಬಿಟ್ಟುಹೋಗಲಿಕ್ಕೆ ಸಿದ್ಧವಾಗಿದೆಯೋ ಎಂಬ ಹಾಗೆ ಆಗ ತೋರುತ್ತದೆ. ಈ ಪ್ರಸಂಗವೇ ಸಾವು.

ಸಂಜೀವನ ತತ್ವ.

ಸಾಮಾನ್ಯವಾಗಿ ಮನುಷ್ಯನ ಆಯುಃಪ್ರಮಾಣವು ೧೨೦ ವರ್ಷಗಳೆಂದು ತಿಳಿಯಲ್ಪಡುತ್ತದೆ. ಆದರೆ ಸರ್ವಸಾಧಾರಣ ಪರಿಸ್ಥಿತಿಯಲ್ಲಿ ಇದ ಬಹಳ ಕಡಿಮೆಯಾಗುತ್ತದೆ. ಯಾಕೆಂದರೆ ೧೨೦ ವರ್ಷಗಳ ಆಯುಸ್ಸು ಮನುಷ್ಯನಿಗೆ ಪ್ರಾಪ್ತವಾಗಬೇಕಾದರೆ ಅವನ ಜೀವನಗಳ ಪೂರ್ಣ ಕೃಪಾಕಟಾಕ್ಷವಿರಬೇಕಾಗುತ್ತದೆ. ಎಲ್ಲರಿಗೆ ಈ ಭಾಗ್ಯವು ಇರುವದಿಲ್ಲ. ... ದರೆ ಜನ್ಮದಿಂದ ಈ ಭಾಗ್ಯವು ಮನುಷ್ಯನಿಗೆ ಪ್ರಾಪ್ತವಾಗಿರುವದಿಲ್ಲವೆಂದರೂ ಅವನು ತನ್ನ ಬುದ್ಧಿವಂತಿಕೆ ಮತ್ತು ಕಾರ್ಯಕೌಶಲದ ಕಡಿಮೆ ಬಿದ್ದ ಆಯುಃಪ್ರಮಾಣವನ್ನು ಹೆಚ್ಚಿಸಲಿಕ್ಕೆ ಬರುತ್ತದೆ. ಮಾತ್ರವಲ್ಲ ವಿಶೇಷ ಸಂದರ್ಭಗಳಲ್ಲಿ ೧೨೦ ವರ್ಷಕ್ಕೂ ಹೆಚ್ಚಿನ ಕಾಲ ಆರೋಗ್ಯದಿಂದ ಬದುಕಿರುವದು ಸಾಧ್ಯವಾಗಿದೆ. ಇದನ್ನೇ ಆಯುರ್ವೇದದಲ್ಲಿ ರಸಾಯನ ಅಥವಾ ಸಂಜೀವನ ಚಿಕಿತ್ಸೆ ಎಂದು ಕರೆದಿರುತ್ತದೆ. 'ಆಯುಸ್ಸಂದ ಮತ್ತು ದುರ್ಬಲ ಶರೀರಕ್ಕೆ ತಾರುಣ್ಯದ ಶಕ್ತಿಸಾಮರ್ಥ್ಯಗಳನ್ನು ತಂದು ಕೊಟ್ಟು ಅದನ್ನು ಪೂರ್ಣ ಆರೋಗ್ಯದಲ್ಲಿ ಇಡುವ ಚಿಕಿತ್ಸೆಯೇ, ರಸಾಯನ ಚಿಕಿತ್ಸೆ' ಎಂದು ಆಯುರ್ವೇದವು ಹೇಳಿದೆ.



ಕಾಯಕಲ್ಪ ಚಿಕಿತ್ಸೆಯಿಂದ ನವತಾರುಣ್ಯವನ್ನು ಹೊಂದಿದ ಪಂಡಿತ ಮಾಲವೀಯರು

ಸಂಜೀವನ ಚಿಕಿತ್ಸೆಯು ಹಲವು ಕ್ರಮಗಳನ್ನು ಈಗಿನ ವಿಜ್ಞಾನವು ಹುಡುಕಿ ತೆಗೆದಿರುವದು ನಿಜ. ಅವುಗಳಲ್ಲಿ ಒಂದು, ಜಾತಿಯ ಕೋತಿಗಳ ಗ್ರಂಥಿಗಳನ್ನು ವೃದ್ಧ ಮತ್ತು ದುರ್ಬಲ ಮನುಷ್ಯನಿಗೆ ಕಸಿಕಟ್ಟಿ ಅವನನ್ನು ತರುಣನನ್ನಾಗಿ ಮಾಡುವದು ಲೋಕಪ್ರಸಿದ್ಧವಾದ ಚಿಕಿತ್ಸಾಕ್ರಮವೆಂದು ಸಾರಲಾಗಿದೆ. ಆದರೆ ಈ ಚಿಕಿತ್ಸಾಕ್ರಮವು ಎಷ್ಟು ವಿಶೇಷ ಖರ್ಚಿನದ್ದು ಆಗಿರುವದೆಂದರೆ, ಮಗುವು ಚಂದ್ರನಿಗಾಗಿ ಅಳುವ್ರದ ಹೇಗೆ ವ್ಯರ್ಥವೋ, ಹಾಗೆಯೇ ಸಾಮಾನ್ಯ ಜನತೆಯು ಆ ಚಿಕಿತ್ಸಾಕ್ರಮವನ್ನು ಅನುಸರಿಸುವದು ಅಸಾಧ್ಯವಾಗಿದೆ. ಹೀಗಿರುತ್ತ ಭಾರತದೇಶವು, ತನ್ನಲ್ಲಿಯೇ ಇಂಥ ಪೇಟೆಂಟು ಇಲ್ಲವೆಂದರೆ ಸುಲಭ ಚಿಕಿತ್ಸಾಕ್ರಮವು ಇರುವದೋ ಎಂದು ತಿಳಿಯ ಪ್ರಯತ್ನಿಸದಿರುವದು ಆಶ್ಚರ್ಯವನ್ನು ಉಂಟುಮಾಡುವ ವಿಷಯವಾಗಿದೆ. ಪಾಶ್ಚಾತ್ಯ ದೇಶಗಳಿಂದ ಬಂದ ಪ್ರತಿಯೊಂದು ವಸ್ತುವಿನಲ್ಲಿ ದೇಶೀಯರ ಎಷ್ಟೋ ಅಭಿಮಾನಗಳು ಪ್ರತಿಯೊಂದನ್ನು ಅವರನ್ನು ಸ್ವದೇಶದ ಕಡೆಗೆ ಕುರುಡುಮಾಡಿದ್ದು. ಈ ಸಂದರ್ಭ [illegible] ... [illegible]

ಪಂಚಭೂತ ಕಫಗಳ ಸಮಸ್ಥಿತಿಯಲ್ಲಿದ್ದು ಕಟ್ಟಿಕ ವಿಸರ್ಜನಾಂಗಗಳ ಮತ್ತು ರಕ್ತಪರಿಚಲನಾಂಗಗಳು ಶರೀರವನ್ನು ಸುಸ್ಥಿತಿಯಲ್ಲಿಡುವದೇ ಆರೋಗ್ಯವೆಂದು ಆಯುರ್ವೇದವು ಹೇಳುತ್ತದೆ. ಇದೇ ಆರೋಗ್ಯವು ಶಾರೀರಿಕ ಮಾನಸಿಕ ಸುಖಸಂಪತ್ತಿಗೆ ಮೂಲವಾಗಿದೆ. ಮೇಲೆ ಹೇಳಿದ ಗುಣಲಕ್ಷಣಗಳಿಂದ ಕೂಡಿದವನೇ ಈ ಪ್ರಪಂಚದಲ್ಲಿ ನಿಜವಾದ ಸುಖಿಯೂ ಸಂತೋಷಿಯೂ ಆಗಿರುತ್ತಾನೆ.

ಸಂಜೀವನ ಚಿಕಿತ್ಸೆಯ ಎರಡು ಕ್ರಮಗಳು

ಪ್ರಾಯ, ಚಿಂತೆ, ಕಳವಳ, ಅನಾರೋಗ್ಯ ಇವೆಲ್ಲವೂ ಸಮಾನುಭವಕ್ಕೆ ಪ್ರತಿಕೂಲ ಅವಸ್ಥೆಗಳು. ಆಗ ಮನುಷ್ಯನ ಶರೀರ ... [illegible]

(ಗಿನೇ ಪುಟವನ್ನು ನೋಡುವುದು)

ಹದಿಮೂರು ಮಕ್ಕಳ ತಾಯಿ
ಶಕ್ತಿ ಚೈತನ್ಯಪೂರ್ಣ ತರುಣಿಯಂತಿರುವಳು
ಪ್ರತಿದಿನವೂ ಅವಳು ಕ್ರುಶನ್ ಲವಣವನ್ನು ತೆಗೆದುಕೊಳ್ಳುತ್ತಿರುವಳು.

ಇನ್ನೂ ತಾರುಣ್ಯಭರಿತೆಯಾಗಿರುವ ಹದಿಮೂರು ಮಕ್ಕಳ ತಾಯಿಯೋರ್ವಳು ಬರೆದ ಪತ್ರವನ್ನು ಈ ಕೆಳಗೆ ಓದಬಹುದು. —

"ನಾನು ಹದಿಮೂರು ಮಕ್ಕಳ ತಾಯಿ. ನನ್ನ ವಯಸ್ಸು ಅರ್ಧಶತಮಾನಕ್ಕೆ ಮಿಕ್ಕಿತು. ನನ್ನ ಮುಖಕಮಲವು ಇನ್ನೂ ತಾರುಣ್ಯಭರಿತವಾಗಿದ್ದು ಮೃದುವಾಗಿರುತ್ತದೆ. ಕೆಲವು ಕಾಲದ ಹಿಂದೆ ನನಗೆ ವಿಪರೀತವಾದ ಆಯಾಸವಾಯಿತು. ಆಗ ನಾನು ಕ್ರುಶನ್ ಲವಣವನ್ನು ತೆಗೆದುಕೊಂಡೆ. ಅದರ ಪ್ರಯೋಗದ ನಂತರ ನಾನೊಬ್ಬ ನವತಾರುಣ್ಯಭರಿತೆಯಾದ ಹೆಂಗುಸಾದೆ. ಕ್ರುಶನ್ ಲವಣವನ್ನು ಉಪಯೋಗಿಸುತ್ತಾ ಬಂದು ಒಂದು ವರ್ಷವಾಯಿತು. ಅರ್ಧ ಚಾ ಚಮಚೆ ಕ್ರುಶನ್ ಲವಣವನ್ನು ಬಿಸಿ ನೀರಿನಲ್ಲಿ ದಿನನಿತ್ಯವೂ ತೆಗೆದುಕೊಳ್ಳಲಾರಂಭಿಸಿದ ವೇಳೆ, ನನ್ನಲ್ಲಿ ತಾರುಣ್ಯದ ಶಕ್ತಿ ಚೈತನ್ಯಗಳು ಉಂಟಾಗಿವೆ. ಕ್ರುಶನ್ ಲವಣದೊಂದಿಗೆ ಯಾವುದೂ ಸರಿ ಹೋಲಲಾರದು."

ಜೀರ್ಣವಾದ ಹೊಲಸು ಪದಾರ್ಥಗಳಿಂದ ಉಂಟಾಗುವ ವಿಷ ಧಾತುಗಳನ್ನು ಕ್ರುಶನ್ ಲವಣವು ಶುದ್ಧಪಡಿಸುವುದರಿಂದ ಸ್ತ್ರೀಪುರುಷರಿಗೆ ... ಶಕ್ತಿ ಚೈತನ್ಯ ... ತಾರುಣ್ಯ ... ಉಂಟಾಗುತ್ತದೆ. ಜನರನ್ನು ಸಕಾಲ ... ವೃದ್ಧರನ್ನು ... ಕಾರಣ ... [illegible] ... ಹೊಲಸ ಪದಾರ್ಥಗಳಿಂದ ಉಂಟಾಗುವ ತಲೆನೋವು ಸಂಧಿನೋವು ಇವುಗಳೇ ಕಾರಣವಾಗಿರುತ್ತದೆ. ಕ್ರುಶನ್ ಲವಣವು ಹೊಟ್ಟೆಯೊಳಗಿನ ಹೊಲಸ ಪದಾರ್ಥಗಳಿಂದಲೂ ಅವುಗಳಿಂದ ಉಂಟಾಗುವ ವಿಷ ಧಾತುಗಳಿಂದಲೂ ಹೊಟ್ಟೆಯನ್ನು ಶುದ್ಧಪಡಿಸಿ ರಕ್ತವನ್ನು ಶುದ್ಧಪಡಿಸುತ್ತದೆ. ಶುದ್ಧವಾದ ಈ ರಕ್ತವೇ ದೇಹದಲ್ಲಿ ತಾರುಣ್ಯವನ್ನುಂಟುಮಾಡುತ್ತದೆ.

ಎಲ್ಲಾ ಕೆಮಿಸ್ಟರಲ್ಲೂ ಸ್ಟೋರುಗಳಲ್ಲೂ ಕ್ರುಶನ್ ಲವಣವು ಮಾರಲ್ಪಡುತ್ತದೆ.

ನಿರ್ಮಲ ... ದೋಷರಹಿತವಾದ ...
ರತ್ನದಂತೆ ಪಾರದರ್ಶಕ ...

ಪ್ರತಿಯೊಂದು ಬಿಲ್ಲೆಯೂ ... ಆದರ ಗುಣವು ಹಲ್ಲಿನ ವೆಚ್ಚವಿಲ್ಲದೆ ದೊರೆಯುವಂತಿದ್ದರೂ ಪೀಯರ್ಸ್ ನಿಜವಾಗಿಯೂ ಅನುಕೂಲ ಮಾಡುದು. ಅದನ್ನು ಉಪಯೋಗಿಸಿದೊಡನೆಯೆ ಅದರ ಪ್ರಯೋಜನವು ... ನಿಮ್ಮ ಚರ್ಮದಲ್ಲಿ ನವಚೇತನವೂ ಹೊಸ ಕಳೆಯೂ ಉಂಟಾಗುವದು. ಪೀಯರ್ಸ್ ಹೀಗೆ ಉಂಟುಮಾಡುವ ಈ ಭೇದವನ್ನು ನಿಮ್ಮ ಕಣ್ಣಿನಿಂದ ನೋಡಬಹುದು.





Pears

ದೇಹಸೌಂದರ್ಯಕ್ಕೆ ಅದ್ವಿತೀಯವಾದುದು

I.T.G.

A. & F. PEARS LTD ISLEWORTH ENGLAND

ಮಹಾತ್ಮಾಜಿಯವರೂ ಮಹಾಧಿಕಾರಿಗಳೂ

ಸಂದರ್ಶನೆ – ಸಂಭಾಷಣೆ

ಇಬ್ಬರು ಮಹಾಪುರುಷರು ಸೇರಿ ಸಂಭಾಷಿಸಿದರು.

ವಿಶೇಷತೆ? "ಜಗತ್ತಿನಲ್ಲಿರುವ ಸಾಮಾನ್ಯ ವಿಚಾರಗಳನ್ನು ಕುರಿತಾಗಿ ಬಹಳವಾದ ಸರಳತೆಯಿಂದ ಸ್ವಾರಸ್ಯವಾಗಿ ಮಾತನಾಡಿಕೊಂಡೆವು. ವಿಶೇಷ ವಿಚಾರವೊಂದೂ ಇದ್ದಿಲ್ಲ. ಒಂದೂವರೆ ತಾಸು ಈ ಸಂಭಾಷಣೆ ನಡೆಯಿತು" ಎಂದು ವೈಸರಾಯರ ಕಡೆಯ ವಾರ್ತಾವಿನೋದ

ಹಾಡೇ? ಮಹಾತ್ಮಾಜಿ ಶೀರ ಮೌನ ಮುದ್ರೆ ಧರಿಸಿರುವರು. ಹೀಗಾಗಿ, ಮಹಾತ್ಮಾಜಿಯವರ ಪರಿಚಯವನ್ನು ಪುನಃ ಮಾಡಿಕೊಳ್ಳಬೇಕೆಂಬ ಅಷ್ಟೆ ಆತುರವು ವೈಸ್ರಾಯರಲ್ಲಿತ್ತೇ? 'ಅಷ್ಟೆ' ಎಂದಿದ್ದಲ್ಲಿ, ಮಹಾತ್ಮಾಜಿ ತಂತೀ ಕಳಿಸಿಕೊಟ್ಟು, ವೈಸ್ರಾಯರು ಕಾಲಕ್ಕೆ ಸರಿ ಕಾದು ಸಂಭಾಷಣೆ ಸಾಗುವ ಹಾಗೆ ಅನುಕೂಲಮಾಡಿಕೊಂಡರೆಂದರೆ, ವಾಯುಮಂಡಲದ, ಗಾಳಿಮೋಡಗಳ, ಅಥವಾ ಬಜಾರು ಧಾರಣೆಯ ವಿಷಯ ಸಂಭಾಷಣೆಯಿತ್ತೇ?

ಈ ಮಹಾಪುರುಷರಿಬ್ಬರು ಹೀಗೆ ಇಲ್ಲಿ ಸುಖಭಾಷಣೆಯಲ್ಲಿದ್ದಾಗ, ಅತ್ತ ಬಂಗಾಳದ ಮಹಾಮಂತ್ರಿ ಫಜಲುಲ್ ಹುಕ್ಕರು, ಇಂತಹ ಸಂಭಾಷಣೆಗಳಿಗಾಗಿ ತಮ್ಮ ಹಕ್ಕನ್ನು ಸ್ಥಾಪಿಸಿ ಮುಸ್ಲಿಮ್ ಲೀಗಿನಲ್ಲಿ ಭಾಷಣಮಾಡಿರುವರು "ಕಾಂಗ್ರೆಸು ಅಧಿಕಾರ ನಡೆಸುವ ಏಳಲ್ಲದೆ ಇನ್ನೂ ನಾಲ್ಕು ಪ್ರಾಂತ್ಯಗಳಲ್ಲಿ ಇತರ ಮಂತ್ರಿಮಂಡಲಗಳು ಅಧಿಕಾರ ನಿರ್ವಹಿಸುತ್ತವೆಂಬುದನ್ನೂ ಇವರು ಕಾಂಗ್ರೆಸಿಗೆ ಅಲ್ಲಿ ಮೇಲೆ ಬರದಂತೆ ಕಾದಿವೆ ಎಂಬುದನ್ನೂ ಮರೆತು, ವೈಸ್ರಾಯರು "ದಿಲ್ಲಿಗೊಮ್ಮೆ ದಯೆಮಾಡಿಸಬೇಕು! ಸಿಮ್ಲಕ್ಕೆ ನಾನು ಹೋಗುವ ಮೊದಲೇ ನಾನೊಮ್ಮೆ ತಮ್ಮನ್ನು ಕಾಣಬೇಕು' ಎಂದು ಮಿಸ್ಟರ್ ಗಾಂಧಿಗೆ ಬರೆದರು ಈ ಅವಸರವೇಕೆ? ಆತುರವೇಕೆ? ಇತರ ಯಾರಿಗೂ ವೈಸರಾಯರು ಬರೆಯುತ್ತಿಲ್ಲವೇಕೆ? ಫೆಡರೇಶನಿನ ಜೀವ ಲಕಲಕ ಎನ್ನುತ್ತದೆ, ಅದನ್ನು ಉಳಿಸಲು ಈ ಉಪಾಯವೇಬೇಕೆಂದು ಚಿಕಿತ್ಸೆಗಾಗಿ ಗಾಂಧಿಯವರನ್ನು ಕರೆದರು ಇತರರನು ಕರೆಯಿಸಿಕೊಳ್ಳಬೇಕೆಂದು ಸಹ ವೈಸ್ರಾಯರಿಗೆ ಗೊತ್ತಾಗಬೇಕು ಮುಸ್ಲಿಮ್ ಲೀಗಿನೊಡನೆ ಪ್ರಸ್ತಾಪವೆತ್ತದೆ ಯಾವ ಇತ್ಯರ್ಥವನ್ನೂ ವೈಸ್ರಾಯರಿಂದ ಮಾಡಬರುವಂತಿಲ್ಲವೆಂದು ನಾನು ಸ್ಪಷ್ಟ ಹೇಳುವೆನ ನಾನು ಅಷ್ಟು ಚೀರುತ್ತಿಲ್ಲವಾದರೂ, ನಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಹುಲಿ, ಒಂದೊಂದು ಸಿಂಹ! ಇಸಮನ್ನು ಕಾಪಾಡುವುದಕ್ಕೆ ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ರಕ್ತದ ಪ್ರತಿಯೊಂದು ಹನಿಯನ್ನೂ ಸುರಿಯುವವರು!" ಎಂದು ಹುಕ್ಕರು ಗುಡುಗಿರುವರು

ಹುಲಿ–ಸಿಂಹಗಳನ್ನು ಒತ್ತಟ್ಟಿಗೇ ಬಿಟ್ಟು, ಅದಿನ ಹಾಲಲ್ಲಿ, ಬೆಳೆವ ಅರಿಫಕೀರನನ್ನು ಆತ್ಮಾದರದಿಂದ ಸ್ವಾಗತಮಾಡಿಕೊಂಡುದು ವೈಸರಾಯರಿಗೆ ಯೋಗ್ಯವೊ ಅಲ್ಲವೊ, ಅವರೇ ಬಲ್ಲರು ಲೋಕಶಾಂತಿಯಾಗಬೇಕು, ಸಮಾಜಗಳೊಳಗೆ ವೈಮನಸ್ಸು ಇರಬಾರದು, ಹೇಗೂಮಾಡಿ ಭಾರತವಾಸಿಗಳಲ್ಲಿ ಒಕ್ಕಟ್ಟಿರಬೇಕು ಎಂಬ ವಿಚಾರದ ಜವಾಬ್ದಾರಿಯುಳ್ಳ ವೈಸ್ರಾಯರು ಗಾಂಧಿಜಿಯವರನ್ನು ಕಂಡು ಮಾತಾಡಿದುದು ಸಮಂಜಸವೆಷ್ಟೋ, ಅಷ್ಟೇ ಅಸಮಂಜಸವಾಗಿ ಮೂಢಬ್ರಾಂತರು ಅಲ್ಲಲ್ಲಿ ನಡೆಸುವ ದಂಗೆಗಳಿಗೆ ಇನ್ನಷ್ಟು ತೇಜಸ್ಸನ್ನು ಕೊಡುವ ಹುಲಿಸಿಂಹಗಳ ಆರ್ಭಟೆಯಾಗಿದೆ ಎಂದೂ ವೈಸ್ರಾಯರು ತಿಳಿಯದಿರರು. ಹಿಂಸೆಗಿಂತ ಅಹಿಂಸೆಯೇ ಬಲವೆಂಬುದು ಲೋಕಸ್ವೀಕೃತ ಸಾಧುತತ್ವ; ಸರ್ವ ಧರ್ಮಸಂಸ್ಥಾಪಕರ ಪ್ರಮಾಣವಾಕ್ಯ ಅಹಿಂಸಾವ್ರತಿಯೇ ಗಾಂಧಿಜೀ ಇವರನ್ನು, ಹುಕ್ಕರೇ ಸೂಚಿಸಿರುವಂತೆ, ಫೆಡರೇಶನ್ ವಿಷಯ ಚರ್ಚಿಸಿ ಇತ್ಯರ್ಥಿಸಲೂ ಅದನ್ನು ರಜಾಕಾಲದಲ್ಲಿ ಬ್ರಿಟಿಷ ಸರಕಾರದ ಮುಂದಿಡಲೂ ವೈಸ್ರಾಯರು ಗಾಂಧಿಜಿಯವರನ್ನು ಕರೆಯಿಸಿಕೊಂಡಿರಬೇಕು ಇಂತಹ ಮಾತುಕತೆ ಮುಖಂಡರಿಲ್ಲರೊಡನೆ ಅವರು ಬೆಳಸಿರುವರು ಅಗತ್ಯ ಕಂಡಂತೆ, ಹುಲಿಸಿಂಹಗಳ ಗವಿಯ ಬಳಿಗೂ ಕಾಲ್ನಡೆಯಾಗಿ ಬಂದು, ಅವರು ವಿಚಾರಮಾಡಲೂಬಹುದು

ವಿಶೇಷ ಸಲೆ, ಗಾಂಧಿಜಿಯವರ ಆರೋಗ್ಯ ಸರಿಯಿಲ್ಲ, ಮೂರೂಮುಕ್ಕಾಲು ಗಳಿಗೆ ಮಾತುಕತೆ ನಡೆಯಿತು ಅಷ್ಟು ಆತುರವೇಕೆ? ರಾಷ್ಟ್ರೀಯತೆಯ ಜೀವಂತ ಸ್ವರೂಪವೇ ಗಾಂಧಿಜಿ ಎಂದು ವೈಸರಾಯರು ತಿಳಿದರು, ಈ ಭಾಗದಲ್ಲಿ ಕಷ್ಟಗಳನ್ನು ಬದಿಗಿಟ್ಟು ವೈಸ್ರಾಯರನ್ನು ಕಾಣಲೇಬೇಕೆಂದು ಗಾಂಧಿಜಿಯವರು ತಿಳಿದರು ಪ್ರಕಟವಾದ ಪತ್ರವು ಏನನ್ನೂ ಹೇಳದಲಿ ಕಾಂಗ್ರೆಸ್ಸಿನ ನಿರ್ಧಾರವನ್ನು ಮಹಾತ್ಮಾಜಿ ವಿವರಿಸಿರಬೇಕು ಕಾಂಗ್ರೆಸು ಫೆಡರೇಶನನ್ನು ಬಹಿಷ್ಕರಿಸಿಲ್ಲ, ಆಕ್ಟಿನಂತೆ ಮಾತ್ರ ಆಗಬಾರದೆಂದು ಸೂಚಿಸಿದೆ ಒಂದೇ ಬಗೆಯ ಸ್ವಾತಂತ್ರ್ಯವುಳ್ಳ ಪ್ರಾಂತ್ಯಗಳೊಳಗೆ ಪ್ರಜಾಸತ್ತೆಗೆ ಸರಿಯಾಗುವ ತೆರದ ಪ್ರಾತಿನಿಧ್ಯದೊಡನೆ ಭಾರತವರ್ಷವು ಒಂದಾಗುವಂತಿದ್ದರೆ ಕಾಂಗ್ರೆಸು ಅಡ್ಡಬಾರದು ರಾಜಕೀಯ ವಿಚಾರಗಳಲ್ಲಿ ಪ್ರಮುಖ ವಿದ್ವಾನರು ಸಹ ಹೀಗೆಯೆ ವಿಲಾಯತಿಯಲ್ಲೂ ಹೇಳಿರುವರು ಹೀಗಿರುವುದರಿಂದ, ಅಂತಹ ವಿದ್ವಾಂಸರೂ ಕಾಂಗ್ರೆಸೂ ಪುನಃ ಫೆಡರೇಶನ್ ವಿಚಾರವನ್ನು ಸರಿಯಾಗಿ ಗ್ರಹಿಸಬಹುದು ಲೋರ್ಡ್ ಲೋಥಿಯನ್ ಲೋರ್ಡ್ ಸಾಮುವೆಲ್ ಇವರು ಇಲ್ಲಿ ಸಂಚರಿಸಿ, ರಾಷ್ಟ್ರದ ಪ್ರತಿನಿಧಿಯಾಗಿರುವ ಒಂದೇ ಸಂಸ್ಥೆಯೆಂದರೆ ಕಾಂಗೆಸ್ ಎಂದು ಬ್ರಿಟಿಷರಿಗೆ ತಿಳಿಸಿರುವರು ನಮ್ಮಲ್ಲಿ ಮಾತ್ರ ತುಂಡು ಪಂಗಡಗಳು ಭಿನ್ನವಾಗಿ ಎಣಿಸಬಹುದು ಪ್ರಾಂತ್ಯಗಳಲ್ಲಿನ ಪ್ರಜಾಸತ್ತೆಗೆ ಸರಿಯಾದ ಸತ್ತೆಯುಳ್ಳ ಸ್ವಕೀಯ ರಾಜ್ಯಗಳು ಫೆಡರೇಶನಿನಲ್ಲಿ ಸೇರುವುದೂ, ಪ್ರಾತಿನಿಧ್ಯದ ಕ್ರಮವೂ ಸರಿಯಾಗಿರುವುದೂ, ಸ್ವತಂತ್ರ ಜವಾಬ್ದಾರ ಸರಕಾರದಾಗಿರುವುದೂ ಕಾಂಗ್ರೆಸಿಗೂ ಬೇಕು ಬ್ರಿಟಿಷ ಪಾರ್ಲಿಮೆಂಟು ಅದನ್ನು ಅಲ್ಲಗಳೆಯಲಾರದು. ರಾಜ್ಯಗಳನ್ನು ಸ್ವರಿದಾರಿಗೆ ತಂದು ಪ್ರಾಂತ್ಯಗಳೊಡನೆ ಸೇರುವಂತೆ ಮಾಡುವುದು ಸಾಮ್ರಾಜ್ಯ ಸರಕಾರಕ್ಕೆ ಕಷ್ಟವಾಗಿಲ್ಲ ರಕ್ಷಾಕವಚವು ಸ್ವಲ್ಪ ಶಿಥಿಲವಾಗಿ ಸ್ವಾತಂತ್ರ್ಯವೆಲ್ಲ ಭಾರತವರ್ಷದ ಪಾಲಿಗೆ ಬರುವುದು ಇಷ್ಟುದಿನವೂ ಬಹಳಾನುಭವವುಳ್ಳ ಬ್ರಿಟಿಷರಿಗೆ ಸುಲಭವೆನಿಸದು ಆದರೆ, ಅದಾಗದೆ ಫೆಡರೇಶನಿನಲ್ಲಿ ಅರ್ಥವಿಲ್ಲ ಹಾಗೆಂದು ಮುಸ್ಲಿಮ್ ಲೀಗೂ ಎಂದಿದೆ ಸ್ವರಾಜ್ಯದ ಧ್ಯೇಯವೂ ಅದಕ್ಕಿದೆ ಹುಲಿಸಿಂಹಗಳು ಕುರಿಗೋವುಗಳೂ ಒಂದೇ ಪುಣ್ಯಾಶ್ರಮದಲ್ಲಿ ಶಾಂತಿಯಿಂದ ಬಾಳುವಂತೆ ಆದರೆ ಫೆಡರೇಶನ್ ಬೇಕು. ಅದನ್ನೆ ಮಹಾತ್ಮಾಜಿ ಮತ್ತು ವೈಸ್ರಾಯರು ಚರ್ಚಿಸಿರಬೇಕು



ಮಾನ್ಯ ವೈಸರಾಯರು

ಖಾದಿಯು ಹೆಚ್ಚಿನ ಪ್ರಚಾರಕ್ಕೆ ಬಂದಿರುತ್ತದೆ

ಗಾಂಧಿ ಸೇವಾ ಸಂಘದ ವಾರ್ಷಿಕ ವೇಶನವು ಬೇಳಾಂಗದಲ್ಲಿ ನಡೆಯುತ್ತಿಷ್ಟೆ ಆ ಓದಲಾದ ವರದಿಯಿಂದ, ಗತವರ್ಷದ ಹಿಂದೂದೇಶದಲ್ಲಿ ಖಾದಿ ಪ್ರಚಾರವು ಬಹಳವಾಗಿ ಹೆಚ್ಚಿರುವುದೆಂದೂ, ಅದರಿಂದ ಖಾದಿ ನೂಲುವವರಿಗೆ ಹೆಚ್ಚಿನ ಕೂಲಿಯು ದೊರೆಯುತ್ತಿದೆಯೆಂದೂ ಮದ್ರಾಸು ಸರಕಾರದ ಖಾದಿಯ ಪ್ರೋತ್ಸಾಹ ಬಗ್ಗೆ ಸಾಧಾರಣ ಲಕ್ಷದ ಧನಸಹಾಯವಾಗಿರುವುದೆಂದೂ, ಇನ್ನಿತರ ಪ್ರಾಂತ್ಯಗಳಿಂದಲೂ ಧನಸಹಾಯಗಿರುವುದೆಂದೂ ತಿಳಿದುಬರುತ್ತದೆ ಖಾದಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾ ಹೋದ ಹಾಗೆಲ್ಲಾ ಉತ್ತಮ ಖಾದಿಯು ಸಿಗುವ ನಾವು ಕಾರಣರಾಗುತ್ತೇವೆ ಖಾದಿಯ ಬಾಳ್ವಿಕೆ ಹೆಚ್ಚು ಅದಕ್ಕೆ ಕೊಟ್ಟ ಹಣದ ಹೆಚ್ಚಿನಂಶವು ನಮ್ಮ ಸಹೋದರರ ಉದರಪೋಷಣೆಗೆ ಸಲ್ಲುತ್ತದೆ ವಸ್ತ್ರಕ್ಕಾಗಿ ವಿನಿಯೋಗಿಸುವ ಹಣವು ನಮ್ಮವರಲ್ಲೇ ಉಳಿಸಿದಂತಾಗುತ್ತದೆ ವಸ್ತ್ರಕ್ಕಾಗಿ ನೀವು ವ್ಯಯಿಸುವ ಹಣದಿಂ ಬಡಬಗ್ಗರಿಗೆ ಸಹಾಯವಾಗುತ್ತದೆ

ಅಗ್ಗವಾದ ಮತ್ತು ಗಡಸಾದ ಸೋಪುಗಳು ಸರಿಯಾಗಿ ನೊರೆ ಉತ್ಪತ್ತಿ ಮಾಡದೆ ಇರುವುದರಿಂದ ಕೊಳೆಯನ್ನು ತೆಗೆಯುವುದ ಕ್ಕೋಸ್ಕರ ಬಟ್ಟೆಗಳನ್ನು ಉಜ್ಜಲೂ ಹೊಡೆಯಲೂ ಬೇಕಾಗುತ್ತದೆ ಇದೇ ಬಟ್ಟೆಗಳು ಬೇಗ ಹರಿಯುವುದಕ್ಕೆ ಕಾರಣ ನಿಮ್ಮ ಬಟ್ಟೆಗಳನ್ನು ಮನೆಯಲ್ಲಿ ಸನ್ಲೈಟ್ ಸೋಪಿನಿಂದ ಒಗೆಯುವದಾಗಿ ಕಟ್ಟುಮಾಡು ಅಪಾಯಕರವಾದ ಅಂಶಗಳಿಲ್ಲದೆ ಸನ್ಲೈಟ ಸೋಪು ಉಜ್ಜುವಿಕೆ ಹೊಡೆತಗಳಿಲ್ಲದೆನೇ ಕೊಳೆಯನ್ನು ಹೋಗಲಾಡಿಸುತ್ತ ಶುದ್ಧಿಮಾಡುವರೀತಿಯು ಬಹಳ ಸಾಧುವಾಗಿರುವುದರಿಂದ ಬಟ್ಟೆಗಳ ಬಣ್ಣಕ್ಕೂ ಸಹ ಕ್ಷೇಮ

ಸನ್ಲೈಟ್ ಸೋಪು ಉಜ್ಜಿ ಹಾನಿ ಉಂಟುಮಾಡುತ್ತಿಲ್ಲ.

ನಿತ್ಯವೂ ಒಗೆಯುವುದಕ್ಕೆ ಸನ್ಲೈಟ್

ಪ್ರತಿದಿನವೂ ಒಗೆಯುವುದರಿಂದ ಉಡುಪುಗಳನ್ನು ಸನ್ಲೈಟ್ ಹೊಸದಾಗಿಯೂ ಸುವಾಸನೆಯಾಗಿಯೂ ಇಡುತ್ತದೆ



ಸನ್ಲೈಟ್ ಸೋಪು

ಅಪ್ಪಟ ಸಸ್ಯಸಂಬಂಧವಾದ ಎಣ್ಣೆಯಿಂದ ಹಿಂದೂದೇಶದ ಕೆಲಸಗಾರರಿಂದ ಹಿಂದೂದೇಶದಲ್ಲಿ ತಯಾರಿಸಲ್ಪಟ್ಟುದು

X S 1285 60

LEVER BROTHERS

ಪರಮಾ

ಗೊನೋರಿಯ ಮುಂತಾದ ತೀವ್ರ ಮೇಹವ್ಯಾಧಿಗಳಿಗೆ ತುತ್ತಾದ ರೋಗಿಯು ಸಕಾಲ ಯೋಗ್ಯ ಚಿಕಿತ್ಸೆ ನಡೆಸದಿದ್ದರೆ ಅವನು ಸಂತಾನಹೀನನಾಗುತ್ತಾನೆ ಒಂದು ವೇಳೆ ಮಗು ಹುಟ್ಟಿದರೂ ಅದು ಸದಾ ಅನಾರೋಗ್ಯವೂ, ಕುರೂಪಿಯೂ ಆಗಿರುವದು ಅಲ್ಲದೆ ರೋಗಿಯು ವಾಯು ರೋಗ, ಮಧುಮೂತ್ರ, ರಕ್ತಹೀನತೆ, ಹುಚ್ಚು ಮುಂತಾದ ಹಾನಿಕರ ವ್ಯಾಧಿಗಳಿಂದ ನರಳುವನು ಆದ್ದರಿಂದ ಗೋನೋ ಲೆಕ್ಸ್ (ರಿಜಿಸ್ಟರ್ಡ್) ಚಿಕಿತ್ಸೆಯನ್ನು ಪಡೆದು ಶಾಶ್ವತ ಗುಣವನ್ನು ಹೊಂದಿರಿ

ಧಾತುನಷ್ಟ, ಗೋನೋರಿಯಾ, ಉರಿಮೂತ್ರ, ಕಡಿಮೂತ್ರ, ಮೂತ್ರಬಂಧನ, ಸ್ವಪ್ನಸ್ಖಲನ, ಮುಂತಾದ ಗುಹ್ಯವ್ಯಾಧಿಗಳೆಲ್ಲವೂ ಗೋನೋಲೆಕ್ಸಿನಿಂದ ಖಾತ್ರಿಯಾಗಿ ಗುಣವಾಗುತ್ತದೆ ಆದ್ದರಿಂದ ಈ ವ್ಯಾಧಿಗಳನ್ನು ನಿವಾರಿಸಿಕೊಳ್ಳಲು ಇಂಜಕ್ಷನ್ ಪಿಚಕಾರಿ ಪ್ರಯೋಗ ಮಾಡಿಸಿಕೊಳ್ಳಬೇಕಾಗಿಲ್ಲ ಬಹಳ ಹಳೇ ರೋಗವಾಗಿದ್ದಲ್ಲಿ ಗೋನೋಲೆಕ್ಸ್ ನಂ. ಒಂದನ್ನು ಉಪಯೋಗಿಸಿರಿ

ಬೆಲೆ ಒಂದಕ್ಕೆ ರೂ ೨-೦-೦ (ಟ ಖ ಪ್ರತ್ಯೇಕ)

ಕರ್ನಾಟಕದ ಎಲ್ಲಾ ಪ್ರಾಮುಖ್ಯ ಸ್ಥಳಗಳಲ್ಲೂ ಸ್ಟಾಕಿಸ್ಟರು ಮತ್ತು ಏಜಂಟರು ಬೇಕಾಗಿದ್ದಾರೆ

ಸೋಲ ಏಜಂಟರು –ಸ್ಟಾರ್ ಏಜನ್ಸಿ, ೧೭೪ ಹಾರನ್ಬಿ ಬಿಲ್ಡಿಂಗ್ಸ್, ಹಾರನ್ಬಿ ರೋಡ್, ಬೊಂಬಾಯಿ.
ಸ್ಟಾಕಿಸ್ಟರು –ಎಂ ಡಿ ಪೈರಾ ಅಂಡ್ ಕೋ., ಧವಾಬಜಾರ ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ

ಮಂಗಳೂರು.

(ನಮ್ಮ ಸ್ವಂತ ವಾತ್ತಾ‌ದಾರರಿಂದ)

ಮಂಗಳೂರಿನಲ್ಲಿ ಶ್ರೀ ಜಯಪ್ರಕಾಶ ನಾರಾಯಣರವರು.

ಅಖಿಲಭಾರತ ಸಮತಾವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಜಯಪ್ರಕಾಶ ನಾರಾಯಣರವರು ... ಸಂಜೆ ... ಬಂದು, ಸಂಜೆ ... ಸಾರ್ವಜನಿಕ ಭಾಷಣಮಾಡಿದರು

"... ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬರುವುದು ... . ಪ್ರಜಾಪ್ರಭುತ್ವವು ಕಾಂಗ್ರೆಸಿನ ಧ್ಯೇಯ . . . . ನಮಗೆ ಯಾವ ತರದ ಸ್ವರಾಜ್ಯ ಬೇಕಾಗಿದೆ . . . . ಈಗ ... ಸಮತಾವಾದಿಗಳ ಧ್ಯೇಯ . . . . . ಎಲ್ಲಾ ವರ್ಗಗಳವು ಕಾಂಗ್ರೆಸ್ಸಿನೊಡನೆ ಸೇರಿ ಕೆಲಸ ಮಾಡಬೇಕು, ..." ಇವೆ ಮೊದಲಾದ ಅಭಿಪ್ರಾಯಗಳು ಅವರ ಭಾಷಣದಲ್ಲಿದ್ದುವು

ಮಂಗಳೂರಿನಲ್ಲಿ ಶ್ರೀ ಜಯಪ್ರಕಾಶ ನಾರಾಯಣರಿಗೆ, ಪ್ರೆಸ್ಸ್ ಕೆಲಸಗಾರರ ಸಂಘ, ಬೀಡಿ ಕೆಲಸಗಾರರ ಸಂಘ, ಮೊದಲಾದ ಕೆಲಸಗಾರರ ಸಂಘಗಳ ಪರವಾಗಿ ... [illegible]

ಕೊಲೆ

[illegible]

ಕಾಂಗ್ರೆಸ್ಸಿಗೇನೆ ನಿಮ್ಮ ಓಟನ್ನು ಕೊಡಿರಿ!

[illegible]

ಮಹಾಳಿ ಕೊಳೆರೋಗ

[illegible]

ಮಂಗಳೂರು ಜುಮ್ಮಾ ಮಹಜೀದಿಯ ಆಡಳಿತೆ ಮೊಕ್ತೇಸರರ ಚುನಾವಣೆ

[illegible]

ಸವಿನಯ ಆಮಂತ್ರಣ:—

ತಾ. ... ನೇ ಸೋಮವಾರ ಉಡುಪಿ ತಾಲೂಕು ... ಶಾಲಾ ... ಸಹಾಯಾರ್ಥವಾಗಿ ... ತಾ. 3-5-1938ರ ದಿನ ಶ್ರೀಯುತ ... ಬಿ.ಎ., ಎಲ್.ಎಲ್.ಬಿ. ... ಶಾಲಾ ... ಬಹುಮಾನಗಳನ್ನು ... ಇದೇ ದಿನ ... ಓಡುವುದು, ... ಇತ್ಯಾದಿ ... ವಿವಿಧ ವಿನೋದಾವಳಿಗಳೂ ... ಏರ್ಪಡಿಸಲ್ಪಡಲಿವೆಯೆಂದು ತಿಳಿಸಬಯಸುತ್ತೇವೆ.

ತಾಲೂಕುಗಳಿಂದ

ಮುಲ್ಕಿ

ಮಾನ್ಯ ಡಾ|| ಯು. ರಾಮರಾಯರವರು ತಾರೀಖು ೨೩ನೇ ಬೆಳಗ್ಗೆ ಕೊಡಪೂರು ಶಾಲೆಯಿಂದ ಹಿಂದಿರುಗಿ ಬರುವಾಗ್ಗೆ ಇಲ್ಲಿಯ ಸದ್ಗುಹಸ್ಥರ ಅಪೇಕ್ಷೆ ಮೇರೆಗೆ ಮುಲ್ಕಿ ಬೋರ್ಡು ಶಾಲೆಯನ್ನು ಸಂದರ್ಶಿಸಿ ಶಾಲೆಯ ಸ್ವಚ್ಛತೆ, ಗಾಳಿ, ಬೆಳಕುಗಳ ಅನುಕೂಲತೆ, ವಿದ್ಯಾರ್ಥಿಗಳ ಆರೋಗ್ಯ ಮತ್ತು ಉಪಾಧ್ಯಾಯರುಗಳ ಕರ್ತವ್ಯ ದಕ್ಷತೆಗಳನ್ನು ನೋಡಿ ತುಂಬಾ ಸಂತೋಷಪಟ್ಟು ಮುಲ್ಕಿಯ ವಿದ್ಯಾರ್ಥಿಗಳ ಬಗ್ಗೆ ಈ ಶಾಲೆಯನ್ನು ಕ್ಕೂಡಲೇ ಹಾಯರ್ ಎಲಿಮೆಂಟರಿಯನ್ನಾಗಿ ಮಾರ್ಪಡಿಸುವುದು ಅತ್ಯಗತ್ಯವೆಂಬ ಅಭಿಪ್ರಾಯಪಟ್ಟು ಶಾಲಾ ಶ್ರೇಯೋಭಿವೃದ್ಧಿಯನ್ನು ಬಯಸಿ ಉಡುಪಿಗೆ ಚಿತ್ತೈಸಿದರು

ಕಾರ್ಕಳ

[illegible]

ಉಡುಪಿ

[illegible] ... ಅದರ ಧ್ಯೇಯ ಕಾರ್ಯಕ್ರಮ ಮೊದಲಾದುವನ್ನು ವಿಸ್ತಾರವಾಗಿ ಹೇಳಿದರು. ... ಹಾಗೂ ... ಶ್ರೀಯುತ ... ಶ್ರೀ ಜಯಪ್ರಕಾಶರ ... ಸಭಾಕಾರ್ಯವು ... ನಡೆಯಿತು. ... ಧಾರವಾಡ ಜಿಲ್ಲೆಗೆ ತೆರಳಿದರು.

ಡಿಸ್ಟ್ರಿಕ್ಟ್‌ಬೋರ್ಡ್ ಕಲೆಕ್ಟರ್ ಪ್ರೆಸಿಡೆಂಟರ ಅವಗಾಹನೆ ಬಗ್ಗೆ.

ಜಿಲ್ಲಾ ಬೋರ್ಡ್ ಪ್ರಾಥಮಿಕ ಶಾಲೆಗಳ ಅನೇಕ ಉಪಾಧ್ಯಾಯರು ಇದೇ ಸೆಕೆಕಾಲದ ರಜೆಯ ವೇಳೆಯಲ್ಲಿ ರಜೆಯಲ್ಲಿದ್ದಲ್ಲಿ ಅದರ ಬದಲಿಗೆ ಹಂಗಾಮಿ ಉಪಾಧ್ಯಾಯರ ನೇಮಕವಾಗಲಿದೆ ಅಥವಾ ನೇಮಕವಾಗಿದೆಯೆಂಬ ಸುದ್ದಿಯಿದೆ. ಈ ರಜಾಕಾಲದಲ್ಲಿ ಹಂಗಾಮಿ ನೇಮಕವಾಗದಿದ್ದರೆ ಶಾಲಾ ಕೆಲಸಕ್ಕೆ ಹಾನಿ ಬಾರದಿದ್ದಲ್ಲಿ, ಹಣದ ಅಭಾವಕ್ಕೆ ಸಿಲುಕಿರುವ ಜಿಲ್ಲಾ ಬೋರ್ಡಿಗೆ ತಕ್ಕಮಟ್ಟಿಗೆ ಸಹಾಯವಾಗಲಿಕ್ಕಿಲ್ಲವೆ? ಈ ವಿಷಯ ಕಲೆಕ್ಟರ್ ಪ್ರೆಸಿಡೆಂಟರು ಅಧೀನದಿಂದ ಆಗತಕ್ಕಿರುವ ಸಂಪೂರ್ಣ ಮಾಹಿತಿ ಪಡೆದು ನಿಷ್ಪಕ್ಷಪಾತ ದೃಷ್ಟಿಯಿಂದ ಬಡ ತೆರಿಗೆದಾರರ ದೃಷ್ಟಿಯಿಂದ ಪರ್ಯಾಲೋಚಿಸಬೇಕೆಂದು ಭಿನ್ನವಿಸಲಾಗುತ್ತದೆ

—ಓರ್ವ ಹಿತೈಷಿ

ದ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ವಾರ್ಷಿಕ ಮಹಾಸಭೆ

[illegible]

ಮಂಗಳೂರಿಗೆ ಡಾ|| ರಾಜನರ ಆಗಮನ

[illegible]

ಕಾಸರಗೋಡು.

[illegible]

Mangalore Automobiles, Limited.

ಪ್ರಕಟಣೆ

ಈ ಕಂಪೆನಿಯ ಆಡಳಿತವು ಬದಲಾಗುವುದೆಂದು ... ಈ ಕಂಪೆನಿಯ ಡೈರೆಕ್ಟರರು ತುಂಬಾ ಸಂತೋಷಪಡುತ್ತಾರೆ ... ಮಂಗಳೂರಿನ ಪ್ರಸಿದ್ಧ ವರ್ತಕರು ... ಲಿಮಿಟೆಡ್ಡಿನ ... ಮೆನೇಜಿಂಗ್ ಏಜನ್ಸಿಯನ್ನು ವಹಿಸಿರುವರು. ಇದರಿಂದ ಕಂಪೆನಿ ಅಭಿವೃದ್ಧಿಯಾಗುವುದೆಂದು ನಮಗೆ ಆಶೆಯಾಗಿದೆ. ... ಎಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

(ಸಹಿ) ಚೆಯರ್‌ಮೆನ್,
ಬೋರ್ಡ್ ಆಫ್ ಡೈರೆಕ್ಟರ್ಸ್.

ದ. ಕ. ಜಿಲ್ಲಾ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯ ಮುಂದೆ ಬಂದ ಕೆಲವು ಸೂಚನೆಗಳು.

೧. ಶಿಕ್ಷಿತಗೇಣಿ — [illegible]

೨. ಶಾಶ್ವತ ಗೇಣಿದಾರರು:— [illegible]

(1) ... (2) ... (3) ... (4) ... (5) [illegible]

[illegible]

ಜಿಲ್ಲಾ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

[illegible]

ಜಿಲ್ಲಾ ಬೋರ್ಡಿನೊಡನೆ ವ್ಯವಹರಿಸುತ್ತಿರುವಾಗ ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷದ ನಾಯಕರು ಮತ್ತು ... ಮುನ್ಸಿಪಾಲಿಟಿಯೊಡನೆ ವ್ಯವಹ ... [illegible]

... ಜಿಲ್ಲಾ ಬೋರ್ಡಿಗೆ ... [illegible]

THE
Canara Banking Corporation, Udipi, Ltd.
INCORPORATED IN BRITISH INDIA.
ESTD 1906

SEASON DEPOSITS
of
Rs. 500/- & above
Are Accepted
at
3½% p. a.
at
All Our Branches

ಸ್ವದೇಶಾಭಿಮಾನಿ

★

ಮೈಸೂರಿನ ವಿದುರಾಶ್ವತ್ಥದಲ್ಲಿ ಪೋಲೀಸರ ಗುಂಡಿನಿಂದ ೩೨ ಜನರ ಕೊಲೆ!

ಇದೆಂದೂ ಮಾದರಿಯೆನಿಸದು

"ರಾಮರಾಜ್ಯದಲ್ಲಿ ಖಳವರ್ತನವಿರಲಾರದಷ್ಟೆ, ಆದರೂ ಇದೆಲ್ಲಿಯದು? ಜಲಿಯನ್ ವಾಲಾಬಾಗಿನಲ್ಲಾದ ಕಾಂಡವೇನೋ! ಅದಂತಿರೆ ಪೂರ್ಣ ಸತ್ಯಾಂಶ ತಿಳಿಯುವ ತನಕ ವಿಶೇಷ ಟೀಕಿಸ ಬರುತ್ತಿಲ್ಲವೆಂದು ಹೇಳುವುದರಲ್ಲಿ ಸತ್ಯಲೇಶವಾದರೂ ಇದ್ದರೆ ಅದನ್ನು ಕಡೆಮೆಯೆನ್ನಬಹುದೆ? ಎಂತಹ ವಕ್ರದೃಷ್ಟಿಯ ಗ್ರಹಗಳು ರಾಮರಾಜ್ಯವನ್ನೂ ಪೀಡಿಸುತ್ತವೆ" ಎಂದು ಪತ್ರಿಕಾಸಂವಾದದಾತರು ಒಬ್ಬರ ಮುಖವನ್ನೊಬ್ಬರು ನೋಡುತ್ತ ಆಡುವಂತಾಗಿದೆ.

ಬೆಂಗಳೂರಿಂದ ೫೦ ಮೈಲು ದೂರದಲ್ಲಿರುವ ಪವಿತ್ರ ಕ್ಷೇತ್ರ ವಿದುರಾಶ್ವತ್ಥದ ಬಳಿ ಎಪ್ರಿಲ್ ತಾ 22ರಂದ ಜಾತ್ರೆ, ೫೦೦೦ಕ್ಕೆ ಮೀರಿ ಎಂದು ಸರಕಾರದ ವಾರ್ತೆಯಲ್ಲಿದ್ದರೂ ೨೫,೦೦೦ದಷ್ಟು ಜನರಿಂದು ಅಲ್ಲಿ ಸೇರಿತ್ತಂತೆ. ಕಾಂಗ್ರೆಸ್ ಭಾಷಣಾದಿಗಳು ನಡೆಯಬಹುದಾಗಿ ಅಲ್ಲಿನ ಸರಕಾರೀ ಆಫೀಸರರಿಗೆ ಗೊತ್ತಿದ್ದು, 144ನೇ ಸೆಕ್ಷನನ್ನು ಅಲ್ಲಿ ಜ್ಯಾರಿ ಮಾಡಲಾಗಿತ್ತು. ಕಳೆದ ಶುಕ್ರವಾರವೇ ರಾಷ್ಟ್ರಧ್ವಜವನ್ನು ಏರಿಸದಂತೆ, ಐದು ಜನರಿಗೆ ಮೀರಿದ ಸಂದಣಿ ಸೇರದಂತೆ, ಕೋಲು ದೊಣ್ಣೆಗಳನ್ನು ಸಹ ಧರಿಸದಂತೆ, ವಿದುರಾಶ್ವತ್ಥದಲ್ಲೂ ಅದರ ನೆರೆಯ ಎರಡು ಮೈಲು ವಿಸ್ತೀರ್ಣದಲ್ಲೂ ಒಂದು ವಾರದ ಅವಧಿ ಹಾಕಿ, ಅಪ್ಪಣೆ ಹೊರಡಿತ್ತು. ನೆರೆದವರನ್ನು ಕಾನೂನು ಅತಿಕ್ರಮಿಸಿ ಸೇರಿದವರೆಂದು ಎಣಿಸಿ, ಬಲಪ್ರದರ್ಶಿಸಿ ಅವರನ್ನು ಚದರಿಸಲಾದೀತೆಂದೂ ಖಂಡಿತ ತಿಳಿಸಲಾಗಿತ್ತು. ಕಾಂಗ್ರೆಸು ಮುಖಂಡರಿಗೆ (ಸ್ಥಾನೀಯ) ಈ ನೋಟೀಸು ಜ್ಯಾರಿಮಾಡಲಾಗಿತ್ತು. ಸುಮಾರು ೧೧ ಗಂಟೆಗೆ ಗೌರಿಬಿದನೂರಿನಿಂದ ಈ ಸ್ಥಳಕ್ಕೊಂದ ಮೆರವಣಿಗೆಯಾಗಿ ರಾಷ್ಟ್ರಧ್ವಜ ಪ್ರದರ್ಶಿಸಿ ಅಲ್ಲಿನ ಕೌನ್ಸಿಲು ಮೆಂಬರರು ಶ್ರೀ ರಾಮಾಚಾರರ ನೇತೃತ್ವದಲ್ಲಿ ಧ್ವಜವಂದನೆಯಾಯಿತು. ನಾಲ್ವರನ್ನು ಪೋಲೀಸರು ಕೈದು ಮಾಡಿದರು. ಪೋಲೀಸರು ೪೦ ಮಂದಿ ಜವಾನರಿದ್ದರು. ಕೆಲವು ನಿಮಿಷಗಳೊಳಗೆ ಎಲ್ಲ ಜನರು ಅಲ್ಲಿಂದ ತೊಲಗಬೇಕಾಗಿ ಅಪ್ಪಣೆಯಾಯಿತು. ಅವರು ಮಾಯವಾಗದಿರಲು ಲಾಠಿ ಪ್ರಹಾರಕ್ಕಾರಂಭವಾಯಿತು. ಇದರ ಹಿಂದೆಯೆ ಪೋಲೀಸರ ಮೇಲೆ ಕಲ್ಲು ಮಳೆ ಸುರಿಯಿತಂತೆ, ಜವಾನರಿಗೆ ಪೆಟ್ಟಾಯಿತಂತೆ. ಇನ್ನು ಗುಂಡುಹಾರಿಸಲು, ಜನರಿಗೆ ತಿಳಿಸಿಯೇ ಅಪ್ಪಣೆಯಾಯಿತು. ಹಲವರು ಸತ್ತರು. ಮತ್ತೆಷ್ಟೋ ಮಂದಿಗೆ ಗಾಯಗಳಾದುವು. ಜನರ ಗುಂಪು ಚದರಿತು. ಪುನಃ ಸಂಜೆಗೆ, ಹೆಚ್ಚಿನ ಪೋಲೀಸರ ಅಲ್ಲಿಗೆ ಬಂದು ಸೇರದಂತೆ, ಜನಹಿಂಡು ಕೂಡಿತು. ಹೊರತು ಚದರಲೊಪ್ಪಲಿಲ್ಲ. ಬೆಳಿಗ್ಗೆ ಹಾರಿಸಿದ್ದ ೬೦ ಗುಂಡುಗಳ ಬದಲು ಈಗ ೯ನ್ನೆ ಹಾರಿಸಿದರು. ಕತ್ತಲಾಗುವ ವೇಳೆಗೆ ಜನರಾರೂ ಅಲ್ಲಿ ಮತ್ತೆ ಉಳಿಯದೆ, ಪೋಲೀಸರೂ ಆಫೀಸರರೂ ಮಾತ್ರ ಉಳಿಯುವಂತಾಯಿತು.

ಕಾಂಗ್ರೆಸ್ ಪಕ್ಷದವರ ಸಭಾಧಿಕಾರ್ಯಗಳು ಪೋಲೀಸರು ಲಾಠಿಪ್ರಹಾರಕ್ಕಾರಂಭಿಸುವ ಮೊದಲೇ ಮುಗಿದಿದ್ದುವು ಎಂದೂ ವಾರ್ತೆಯಿದೆ. ಒಟ್ಟು ಸತ್ತ ಮಂದಿ ೩೨. ಗಾಯಗೊಂಡವರು ೪೦. ಸತ್ತವರಲ್ಲಿ ಅಶ್ವತ್ಥಪೂಜೆ ಮಾಡುದ್ದ ಗರ್ಭಿಣಿ ಗೌರಮ್ಮನೆಂಬಾಕೆಯ ಮರಣವೂ ಅದೇ ತೋಟದಲ್ಲಿ ಸುಮ್ಮನೆ ಕೂತು ಊಟ ಮಾಡುತಿದ್ದವನೊಬ್ಬನ ಮರಣವೂ ಶೋಚನೀಯ. ೧೪ ಮಂದಿ ಸತ್ತವರ ಹೆಸರು ಪ್ರಕಟವಾಗಿದೆ. ಕೆಲವು ಹೆಣಗಳನ್ನು ಹತ್ತಿರದ ಬ್ರಿಟಿಷ ಹಳ್ಳಿಗಳಿಂದ ಬಂದವರು ಕೊಂಡೊಯ್ದಿರುವ ಕಾರಣ ಎಲ್ಲ ಹೆಸರುಗಳು ಸಿಗಲು ಇನ್ನಷ್ಟು ಸಮಯ ಬೇಕು. ೭ ಮಂದಿ ಸತ್ತಂತೆಯೂ ೫೦೦೦ಕ್ಕೆ ಮಿಕ್ಕಿದ ಜನರು ದಂಗೆಯೆದ್ದು ಪೋಲೀಸರನ್ನು ಮುತ್ತಿ ಪ್ರಾಣಪಾಯ ಮಾಡುವರೆ ಪ್ರಯತ್ನಿಸುವುದಾಗಿ ತಿಳಿದುದರಿಂದ ಅವರು ಗುಂಡಿಕ್ಕಿದುದೆಂದೂ ಸರಕಾರದ ಹುದ್ದೇದಾರರ ಅಭಿಪ್ರಾಯವಿದೆ. ಸರಕಾರದ ತಾಜಾ ಹೇಳಿಕೆಯು ಇನಿಷ್ಟರಲ್ಲಿ ಪ್ರಕಟವಾಗಬಹುದು. ಅನಂತರವೇ ಸತ್ಯಾಂಶ ವಿದಿತವಾದೀತು. ೩೪ ಹೆಣಗಳನ್ನು ೪೫ ಗಾಯಗೊಂಡವರನ್ನು ಎಣಿಕೆಹಾಕಿ ನೋಡಿದ ಪತ್ರಿಕಾ ಬಾತಮಿದಾರರು ಇರುವುದರಿಂದ ಇಷ್ಟಾದರೂ ಹಾನಿಯಾದುದು ನಿಜವೆನ್ನಬಹುದಲ್ಲವೆ?

ಇದೇ ಸಮಯಕ್ಕೆ ಸರಿಯಾಗಿ ದಿವಾನ ಸಾಹೇಬರೂ ಡಿಪ್ಯೂಟಿ ಕಮಿಶನರುಗಳೂ ಎಕ್ಸಿಕ್ಯೂಟಿವ ಕೌನ್ಸಿಲು ಮೆಂಬರರೂ ಸೇರಿ ಕಾಂಗ್ರೆಸ್ ಚಳವಳವನ್ನು ಹೇಗೆ ಎದುರಿಸಿ, ರಾಜಕೀಯ ವಿಚಾರಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಿರ್ಣಯಿಸುತ್ತಿರುವರು. ಈ ವಿಚಾರ ವಿಮರ್ಶೆಯ ಫಲಿತಾಂಶವನ್ನು ಸರಕಾರವು ಪ್ರಕಟಿಸಬಹುದು ವಿನಹಾ ಯಾವ ವಾರ್ತಾಪತ್ರಿಕೆಗೂ ಸುಳಿವಿಲ್ಲದೆ ಏನಾಯಿತೆನ್ನಲು ಈಗಲೇ ಹೇಳಬರುವಂತಿಲ್ಲ.

ಕರ್ನಾಟಕಕ್ಕೊಂದು ಭೂಷಣಪ್ರಾಯವಾಗಿರುವ ಮೈಸೂರು ರಾಜ್ಯದ ಈ ವಿಶೇಷವಾರ್ತೆಯಿಂದ ಮನಸ್ಸಿನಲ್ಲಿ ಕಳವಳ ಹೊಂದಬೇಕಾಗಿದೆ. ಸೇರಿದ ಜನ ಕೊನೆಯ ಪಕ್ಷ ೫೦೦೦ವೇ ಎಂತಾದರೂ, ಜಾತ್ರಾಕಾಲ, ಸಂತೆಯ ಕೂಟವಿದ್ದು, ಅವರೂ ಅಲ್ಲಿರುವಾಗ, ಹತ್ತು ನಿಮಿಷಗಳಲ್ಲೇ ಅದರೂ ಮಾಯವಾಗಬೇಕೆಂದು ಅಪ್ಪಣೆಯಾದಲ್ಲಿ ಸಾಧ್ಯವೆ? ಕಾಂಗ್ರೆಸಿನವರ ಸಭೆ ಮುಕ್ತಾಯವಾದ ಬಳಿಕ, ಕೆಲವರನ್ನು ದಸ್ತಗಿರಿ ಮಾಡಿ ಮುಗಿಸಿದ ತರುವಾಯ, ಕೋಲು ದೊಣ್ಣೆಗಳನ್ನು ಕೂಡ ಹೊರಕ್ಕೆ ಧರಿಸಬಾರದೆಂದೂ ಐದು ಜನರ್ಕ್ಕೆ ಕೂಡ ಸೇರಬಾರದೆಂದೂ ಅಪ್ಪಣೆಯಾದುದಕ್ಕಿಂತ ಬೇಗನೆ ಅಲ್ಪಾವಧಿಯೊಳಗೆ ತೊಲಗಲೂ ಅಪ್ಪಣೆಯಾಗಿ ಅಷ್ಟು ಮಂದಿ ೨೦,೦೦೦ಕ್ಕೂ ಕೇಳಿಸುವಂತೆ ಹೇಗೆ ಎಚ್ಚರ ಸಾರಲಾಗಿ ೬೦ ಗುಂಡುಗಳವರೆಗೆ ಹಾರಿಸಿದರೋ ಸತ್ತವರಿಗೆ ಯಾವ ವಿಧಿ ವಿಧಾನಗಳ ಏರ್ಪಾಡಾಯಿತೋ ಕೈದುಮಾಡಿದವರಂತೆಯೆ ಗಾಯಗೊಂಡವರನ್ನು ಹೇಗೆ ಎತ್ತ ಸಾಧಿಸಿದರೋ ಎಲ್ಲವೂ ವಿಚಿತ್ರ ಸಂದೇಹಗಳಿಗೆ ಆಸ್ಪದ ಕೊಡುವುದನ್ನು ಸರಕಾರದ ಪ್ರಕಟನೆಯೋ ಸರ್ವ ಜನರ ತಿಳುವಳಿಕೆಗೆ ಶ್ರುತಪಡಿಸಬೇಕಾಗಿದೆ. ಕಲ್ಲುಮಳೆಯ ಪ್ರತಾಪ ಎಂದಿನಿಂದಲೂ ಇಂತಹ ಸಂದರ್ಭಗಳಲ್ಲಿ ಬಹಳವಾಗಿ ಶ್ರುತವಾಗಿದೆ. ಅಧಿಕಾರಿಗಳು ಹೀಗೆಲ್ಲ ಅಪ್ಪಣೆಕೊಟ್ಟು ಕಾರ್ಯ ನಿರ್ವಹಿಸಿರುವುದಕ್ಕೂ ಸರಕಾರದ ಸೂಚನೆಯ ಬೆಂಬಲವಿದ್ದಿರಬೇಕೆಂದೂಹಿಸಬೇಕಲ್ಲವೆ?

ಸತ್ಯಾಂಶವು ಪ್ರಕಟವಾದೀತು. ಖಂಡಿತವಾಗಿಯೂ ಸರಕಾರವು ಕರ್ನಾಟಕದ ಭೂಷಣವಾಗಿ ಮಾದರಿಯಾಗಿದೆ ಎಂದು ನಂಬಿರುವವರಲ್ಲಿ ಯಾವ ಸಂದೇಹವು ಹುಟ್ಟದಷ್ಟು ಸ್ಪಷ್ಟವಾಗಿ ಸತ್ಯಾಂಶವು ಬೇಗನೆ ತಿಳಿಯಬಂದೀತು. ಏಕೆಂದರೆ ಪತ್ರಿಕೆಗಳಲ್ಲಿ ಪ್ರಕಟವಾದ ಅಂಶವು ಮೈಸೂರಿನ ಗೌರವವನ್ನು ಹೆಚ್ಚಿಸುವಂತಿಲ್ಲ. ಇದೊಂದು ಮಾದರಿಯೆನಿಸದು.

ಹಿಂದೂದೇಶದ ನೂತನ ಶಿಕ್ಷಣ ನಾಯಕರು

ಡಾ ಜಾಕೀರ್ ಹುಸೇನರು

ನೂತನ ವಿದ್ಯಾ ಬೋರ್ಡಿನ ಅಧ್ಯಕ್ಷರಾಗಬೇಕೆಂಬ ಕಾಂಗ್ರೆಸ್ಸಿನ ಆಹ್ವಾನವು ಡಾ। ಜಾಕಿರ ಹುಸೇನರಿಗೆ ಹೋಗಿರುತ್ತದೆ. ವಾರ್ಧಾ ಶಿಕ್ಷಣ ಯೋಜನೆಯನ್ನು ಕಲ್ಪಿಸಿದ ಈ ಮಹನೀಯರಿಗೆ ಈ ಗೌರವವು ಸಲ್ಲಲೆಬೇಕು. ಈ ಕೆಳಗಿನ ಸಣ್ಣ ಲೇಖದಲ್ಲಿ ಅವರ ಪರಿಚಯ ಮಾಡಿಕೊಡಲಾಗಿದೆ.

ಶ್ರೀ। ಜಾಕೀರ್ ಹುಸೇನರ ಕುರಿತು 'ಇನ್‌ಸ್ಪ್ಯಾಡ್ ಇಂಡಿಯಾ' ಎಂಬ ತನ್ನ ಗ್ರಂಥದಲಿ ಮೆಡಮ್ ಹೆಲ್ಯಾಡ್ ಎಡಿಬ್ ಎಂಬವರು ಒಳ್ಳೆ ಪ್ರಶಂಸೆಯನ್ನು ಮಾಡಿರುವರು. ಶ್ರೀ। ಹುಸೇನರು ಅತ್ಯಂತ ಸಮದರ್ಶಿಗಳೆಂದು ಅವರ ಶ್ಲಾಘನೆ.

ಶ್ರೀ ಹುಸೇನರು ಜಾಮಿಯಾ ಮಿಲಿಯಾದ ಪ್ರಧಾನ ಉಪಾಧ್ಯಾಯರು. ಪಠಾಣ ಕುಟುಂಬದವರು. ಹೈದರಾಬಾದಿನಲ್ಲಿ ಮಹಾ ಕೀರ್ತಿಯನ್ನು ಸಂಪತ್ತನ್ನು ಗಳಿಸಿದ ಪ್ರಸಿದ್ಧ ವಕೀಲರು ಅವರ ತಂದೆಯವರು. ಅಲಿಗಢ ವಿಶ್ವ ವಿದ್ಯಾಲಯದಲ್ಲಿ ವಿದ್ಯಾ ವ್ಯಾಸಂಗ ಮಾಡುತ್ತಿದ್ದ ಶ್ರೀ। ಹುಸೇನರು ಅಲ್ಲೇ ಒಂದು ಲೆಕ್ಚರರ ಹುದ್ದೆಯನ್ನು ನೋಡುವವರಾದರು. ಆದರೆ 1919ರಲ್ಲಿ ರೌಲಟ್ ಚಳವಳಿಯು ಪ್ರಾರಂಭವಾಗಲು ಅಲಿಗಢ ವಿಶ್ವವಿದ್ಯಾಲಯದಲ್ಲಿ ಮುಸ್ಲಿಮರ ನಿಜವಾದ ಧ್ಯೇಯ ಸಾಧನೆಗಳಿಗೆ ಎಡೆಯಿಲ್ಲ ಎಂಬ ಅಭಿಪ್ರಾಯ ಹೊಂದಿ, ಅಲ್ಲಿ ರಾಜೆಯಿತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ ಎಂಬ ನೂತನ ವಿಶ್ವವಿದ್ಯಾಲಯವನ್ನು ಸ್ಥಾಪಿಸುವವರಾದರು.

1922ರಲ್ಲಿ ಶ್ರೀ। ಹುಸೇನರು ಜರ್ಮನಿಗೆ ತೆರಳುವವರಾದರು. 1926ರಲ್ಲಿ ಸಂಪತ್‌ಶಾಸ್ತ್ರದಲ್ಲಿ ಡೊಕ್ಟರ್ ಪದವಿಯನ್ನು ಹೊಂದಿ ಹಿಂದೂದೇಶಕ್ಕೆ ಹಿಂತೆರಳುವವರಾದರು.

★

ಆ ಜಾಮಿಯಾ ವಿಶ್ವವಿದ್ಯಾಲಯದಲ್ಲಿ ಸಣ್ಣ ಮಕ್ಕಳ ಶಿಕ್ಷಣ ಕೂಡ ನಡೆಯುತ್ತದೆ.

ಶ್ರೀ। ಜಾಕಿರಾ ಹುಸೇನರು ಸಣ್ಣ ಮಕ್ಕಳಿಗೆ ಅತ್ಯಂತ ಪ್ರೀತಿಯವರು. ಮಕ್ಕಳ ಸ್ವಭಾವಗಳನ್ನು ಚೆನ್ನಾಗಿ ಅರಿತವರು. ಸಣ್ಣ ಮಕ್ಕಳ ಶಿಕ್ಷಣ ಪ್ರವೀಣರು.

ಬ್ರಿಟಿಷ್ ಸಾಮ್ರಾಜ್ಯದ ಬಲವು ಹೇಗಿದೆ?

ಈ ಕುರಿತು ಗಾರ್ಡಿಯನ್ ಎಂಬವರೊಬ್ಬರು ಲಂಡನಿನ ಜೋನ್‌ಬುಲ್ ಪತ್ರಿಕೆಯಲ್ಲಿ ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಒಂದು ಲೇಖವನ್ನು ಬರೆದಿರುವರು.

ಬ್ರಿಟಿಷ್ ಸಾಮ್ರಾಜ್ಯವು ಇಂದು ಅತ್ಯಂತ ಬಲವಾದ ಸಾಮ್ರಾಜ್ಯವೆಂದು ಎಲ್ಲರಿಗೂ ಕಾಣಿಸುತ್ತಿರುವುದಾದರೂ ನಿಜವಾದ ಸ್ಥಿತಿಯು ಹಾಗಿರುವುದಿಲ್ಲ.

ಕೆನಡಾ ನ್ಯೂಜಲೇಂಡ್, ಆಸ್ಟ್ರೇಲಿಯಾ ಇತ್ಯಾದಿ ಡೊಮಿನಿಯನ್ನುಗಳಿಗೆ ಸ್ವಾತಂತ್ರ್ಯವು ದೊರೆತಿದ್ದು, ಅವುಗಳಿಂದ ಹೆಚ್ಚಿನ ಸಹಾಯವು ದೊರಕುವ ಕುರಿತು ಹೆಚ್ಚಿನ ಆಶಯಗಳು ಬ್ರಿಟನಿಗಿರುವುದಿಲ್ಲ.

ಐರ್ಲೇಂಡು ಸ್ವತಂತ್ರವಾಗಿರುತ್ತದೆ. ಇನ್ನೊಂದು ಮಹಾಯುದ್ಧದಲ್ಲಿ ಭಾಗಿಯಾಗಲ ಆಫ್ರಿಕಾವು ಸಿದ್ಧವಿಲ್ಲ.

ಈಗ ಉಳಿದಿರುವುದೆಂದರೆ—ಹಿಂದೂದೇಶ ಮಾತ್ರ. ಇದರಿಂದ ಸಾಮ್ರಾಜ್ಯಕ್ಕೆ ಯಾವ ಉಪಕಾರವಿದೆ?

ಈಗ ಹಿಂದೂದೇಶದ ಸಕಲ ರಾಜಕೀಯ ವ್ಯವಹಾರವು ಲಂಡನಿನಲ್ಲಿರುವ ಇಂಡಿಯಾ ಸೆಕ್ರೆಟರಿಯವರೊಡನಿದೆ. ಡೊಮಿನಿಯನ್ ಸ್ಟೇಟಸ್ ದೊರಕಬೇಕೆಂದೂ ಎಲ್ಲಾ ಭಾರತೀಯರು ಚಳವಳಿಸುತ್ತಿದ್ದಾರೆ. ಬ್ರಿಟನರನ್ನು ಹಿಂದೂದೇಶದಿಂದ ಅಟ್ಟಿಬಿಡುವ ಆಲೋಚನೆಯು ಕೂಡ ಹಿಂದೂದೇಶದ ಕೆಲಮಂದಿ ರಾಜಕೀಯ ಪುರುಷರಿಗಿರುವುದು.

ಹಿಂದೂದೇಶವು ಸ್ವತಂತ್ರ್ಯವಾಗಿದ್ದರೆ ಅದು ರಷ್ಯಾ ಯಾ ಜಪಾನಿಗೆ ತುತ್ತಾಗುವುದು.

ಹಿಂದೂದೇಶವು ಬ್ರಿಟಿಷ್ ರಾಜರ ಆಧೀನದಲ್ಲಿ ಬೆಳೆಯಲಿ. ಆಗ ಭವಿಷ್ಯದ ಕುರಿತು ಹೆದರಬೇಕಾಗಿಲ್ಲ.

ಮಹಾಯುದ್ಧವು ಬೇಗನೆ ಸಂಭವಿಸುವುದೆ?

ಜೆಕೊಸ್ಲೊವೆಕಿಯಾಕ್ಕೆ ಜರ್ಮನಿಯು ಗದರಿಕೆ.

ಜೆಕೊಸ್ಲೊವೆಕಿಯಾದಲ್ಲಿ ಜರ್ಮನ್ ರಾಷ್ಟ್ರೀಯ ಜನರು ಜೆಕೊಸ್ಲೊವೆಕಿಯಾದ ಸರಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟಿರುವರು.

ತಾವು ಕೊಟ್ಟ ಎಚ್ಚರಿಕೆಗೆ ಸರಿಯಾಗಿ ಜೆಕೊಸ್ಲೊವೆಕಿಯಾವು ವರ್ತಿಸದಿದ್ದರೆ ಆಗ ಆಸ್ಟ್ರಿಯಾದಂತೆ ಜೆಕೊಸ್ಲೊವೆಕಿಯಾವು ಪರಿಣಾಮವನ್ನು ಹೊಂದಲು ಸಿದ್ಧವಿರಬೇಕು ಎಂಬದಾಗಿ ಗದರಿಕೆಯಾಗಿರುವುದಂತೆ.

ಜೆಕೊಸ್ಲೊವೆಕಿಯಾದಲ್ಲಿರುವ ಜರ್ಮನರಿಗೆ ಸ್ವಾತಂತ್ರ್ಯ ದೊರಕಬೇಕು. ಜರ್ಮನ್ ಪ್ರದೇಶಗಳಲ್ಲಿ ಸ್ವತಂತ್ರ ಸರಕಾರಗಳ ಸ್ಥಾಪನೆಯಾಗಬೇಕು. ಜರ್ಮನರ ಮೇಲೆ 1918ರ ನಂತರ ಹೊರಿಸಲಾದ ಅನ್ಯಾಯಗಳನ್ನು ತೆಗೆದುಹಾಕಬೇಕು. ಇಷ್ಟರ ತನಕ ನಡೆದ ಅನ್ಯಾಯಗಳಿಗೆ ತಕ್ಕ ಪ್ರಾಯಶ್ಚಿತ್ತವಾಗಬೇಕು. ಜೆಕೊಸ್ಲೊವೆಕಿಯಾದಲಿ ನಾಜಿತತ್ವ ಪ್ರಚಾರಕ್ಕೆ ಅಡ್ಡಿ ಸಲ್ಲಿಸಬಾರದು. ಜರ್ಮನರಿಗೆ ಜೆಕ್‌ರೊಡನೆ ಸರಿಸಮಾನತೆ ದೊರಕಬೇಕು. ಇವೇ ಮೊದಲಾದವು ಜರ್ಮನರ ಕೋರಿಕೆಗಳು.

ಆದರೆ ಜರ್ಮನರ ಗದರಿಕೆಗಳಿಗೆ ಜೆಕೊಸ್ಲೊವೆಕಿಯಾವು ಹೆದರುವುದೆ? ಜರ್ಮನಿಯು

★

ಮಹಾಯುದ್ಧವು ಬೇಗನೆ ಸಂಭವಿಸಬಹುದೆ?

ಅವರ ಮೇಲೆ ದಂಡೆತ್ತಿ ಹೋದರೆ ಫ್ರಾನ್ಸು ಮತ್ತು ರಷ್ಯಾ ದೇಶಗಳು ಸುಮ್ಮನಿರುವವೆ? ಜೆಕೊಸ್ಲೊವೆಕಿಯಾದ ಸ್ವಾತಂತ್ರ್ಯ ರಕ್ಷಣೆ ಮಾಡುವಂವೆಂದು ಅವರಿಂದ ವಾಗ್ದಾನವಾಗಿರುತ್ತದೆ. ಆದುದರಿಂದ ಜೆಕೊಸ್ಲೊವೆಕಿಯಾದಲ್ಲಿ ಇನ್ನೊಂದು ಮಹಾಯುದ್ಧದ ಪ್ರಾರಂಭವಾಗುವುದೆ? ಫ್ರಾನ್ಸು ಯುದ್ಧರಂಗಕ್ಕೆ ಇಳಿದರೆ—ಬ್ರಿಟನು ಅವರನ್ನು ಅನುಸರಿಸುವುದೆ?

"ಇಂಡಿಯನ್ ಸಿವಿಲ್ ಸರ್ವಿಸ್— ಇಂಡಿಯನು ಅಲ್ಲ, ಸಿವಿಲೂ ಅಲ್ಲ ಸರ್ವಿಸೂ ಅಲ್ಲ"

ಇಂಡಿಯನ್ ಸಿವಿಲ್ ಸರ್ವಿಸ್ ಹುದ್ದೆಗೆ ರಾಜೆಯಿತ್ತ ನಮ್ಮ ಜಿಲ್ಲೆಯ ಶ್ರೀ। ವಿಷ್ಣು ಕಾಮತರವರು ಈ ಕೆಳಗಿನ ಅಭಿಪ್ರಾಯವುಳ್ಳ ಒಂದು ಪ್ರಕಟಣೆಯನ್ನು ಮಾಡಿರುವರು.

ಇಂಡಿಯನ್ ಸಿವಿಲ್ ಸರ್ವಿಸು ಇಂಡಿಯನೂ ಅಲ್ಲ ಸಿವಿಲೂ ಅಲ್ಲ ಸರ್ವಿಸೂ ಅಲ್ಲ ಎಂಬುದಾಗಿ ನನ್ನ ಅಭಿಪ್ರಾಯವು. ಏಳು ವರ್ಷಗಳ ಹಿಂದೆ ನಾನು ಸಿವಿಲ್ ಸರ್ವಿಸನು ಸೇರಿದಾಗ, ಅದರಿಂದ ರಾಷ್ಟ್ರಸೇವೆಯನ್ನು ಮಾಡಬಹುದೆಂಬ ಆಶಯಗಳು ನನಗಿದ್ದವು. ಆದರೆ ನನ್ನ ಏಳು ವರ್ಷದ ಅನುಭವದಿಂದ — ಇಂಡಿಯನ್ ಸಿವಿಲ್ ಸರ್ವಿಸನಲ್ಲಿದ್ದು ಯಾವ ತರದ ಸರ್ವಿಸನ್ನು ಮಾಡಲು ಅಸಾಧ್ಯವೆಂದು ನಾನು ತಿಳಿಕೊಳ್ಳುವವನಾದುದರಿಂದಲೆ ನಾನು ಆ ಹುದ್ದೆಗೆ ರಾಜೆಯಿತ್ತುದು. ಇಂಡಿಯನ ಸಿವಿಲ ಸರ್ವಿಸಿನಲ್ಲಿರುವ ಬಿಳಿಯ ಜನಾಂಗದವರಿಗಿಂತ ಇಂಡಿಯನ್ ಸಿವಿಲ್ ಸರ್ವಿಸಿನವರಿಗೆ ಹೆಚ್ಚಿನ ಸ್ವಾತಂತ್ರ್ಯವಿರುವುದಿಲ್ಲ.

ಕೆಲ ಸಮಯದ ಹಿಂದೆ ಬಡನ್ ಪೊವೆಲ್ಲರು ಹಿಂದೂದೇಶಕ್ಕೆ ಅವಮಾನ ಮಾಡಿದುದಕ್ಕಾಗಿ ನಾನು ನನ್ನ ಡಿವಿಜನಿನ ಸ್ಕಾಟಿಶ್ ಮಿಶನರ ಪದವಿಗೆ ರಾಜೆಯಿತ್ತಾಗ ನನ್ನ ಸಹ ಉದ್ಯೋಗಿಗಳೆಲ್ಲರ ಆದರಿಂದ ನಮಗೆ ಅಪಾಯವಿದೆ ಎಂದು ಎಚ್ಚರಿಕೆ ಕೊಟ್ಟಿದ್ದರು.

ನಾನು ಆಕ್ಟಿಂಗ್ ಕಮಿಶನರಾಗಿದ್ದಾಗ ಒಂದೆಡೆ ಬೆಳೆಯೆಲ್ಲಾ ನಾಶವಾಗಿ ಗದ್ದೆಗೆ ಮಹಾ ನಷ್ಟಗಳು ಒದಗಿದುದರಿಂದ ನಾನು ಕಿಸ್ತನ್ನು ಮಾಫಿಮಾಡಬೇಕಾಗಿ ಸೂಚನೆ ಕೊಟ್ಟಿದ್ದೆನು. ಒಡನೆ ನನ್ನ ಮೇಲಿರುವ ಪಾಶ್ಚಾತ್ಯ ಅಧಿಕಾರಿಗಳಿಂದ ಅದಾಗದೆಂದು ಅಪ್ಪಣೆಯು ಬಂದೇ ಬಿಟ್ಟಿತು. ಏನೂ ಹುಟ್ಟಿಗಿಲ್ಲದ ರೈತನೊಬ್ಬನ ಕಿಸ್ತ ಮಾಫಿ ಮಾಡಬೇಕಾಗಿ ನಾನು ಬರೆದಿದ್ದೆ. ಆದರೆ ಆತನಿಂದ ಕಿಸ್ತ ಬಾಕಿಯನ್ನು ಕಂತು ಕಂತಿನಲ್ಲಿ ವಸೂಲು ಮಾಡುವಬೇಕಾಗಿ ಆಜ್ಞೆಯಾಯಿತು. ಈ ತರದಲ್ಲಿ ಅನೇಕ ದೃಷ್ಟಾಂತಗಳನ್ನು ಕೊಡಬಹುದು.

ಇವೆ ಕಾರಣಗಳಿಂದಾಗಿ ನಾನು ಇಂಡಿಯನ್ ಸಿವಿಲ್ ಸರ್ವಿಸಿಗೆ ರಾಜೆಯಿತ್ತುದು. ವೇರೆ ಯಾವ ಕಾರಣದಿಂದಲೂ ಅಲ್ಲ.

ಶ್ರೀ ವಿಷ್ಣು ಕಾಮತರ ರಾಜೆಯು ಸೆಕ್ರೆಟರಿ ಒಫ್ ಇಂಡಿಯಾದವರಿಂದ ಸ್ವೀಕೃತವಾಗಿರುತ್ತದೆ.

ತನ್ನ ಮುಂದಿನ ಕಾರ್ಯಕ್ರಮವನ್ನು ರಚಿಸಿಕೊಳ್ಳಲು ಶ್ರೀ ಕಾಮತರು, ಪಂಡಿತ ಜವಾಹರಲಾಲರನ್ನು ಕಾಣಲು ಅಲ್ಲಹಾಬಾದಿಗೆ ತೆರಳಿರುವರು.

ಸಂತರು ಮತ್ತು ರಾಜಕೀಯ ಪುರುಷರು

ಮಹಾತ್ಮಾ ಗಾಂಧಿಗಳು—ಈ ಹೆಸರಿನ ಪುಸ್ತಕವೊಂದನ್ನು ಅಮೇರಿಕಾದಲ್ಲಿ ಶಿಕ್ಷಣ ವೃತ್ತಿಯನ್ನು ನಡೆಯುಸುತ್ತಿದ್ದ ಶ್ರೀ। ಸಯ್ಯದ್ ಹುಸೇನರು ಬರೆದಿರುವರು.

ಯೇಸುಕ್ರಿಸ್ತನು ಮಡಿದ 19 ಶತಮಾನಗಳ ನಂತರ ಜನ್ಮಕ್ಕೆ ಬಂದ ಕರ್ಮಯೋಗಿಗಳೆಂದರೆ ಮಹಾತ್ಮಾ ಗಾಂಧಿಗಳು. ಯೇಸುಕ್ರಿಸ್ತನ ಬೋಧನೆಗಳನ್ನು ಕಾರ್ಯತಾ ಪಡೆಯಿಸುವವರು. ಮಹಾ ಆದರ್ಶಗಳನ್ನು ತೋರಿಡಿಸಿದವರು.

ಮಹಾತ್ಮಾಜಿಯವರ ನೀತಿಯಿಂದ ಮಾತ್ರ ಜಗತ್ತಿನ ಶಾಂತಿ ರಕ್ಷಣೆಮಾಡಬಹುದು. ಅವರ ನೀತಿಯಲ್ಲಿ ಆಧುನಿಕ ಪಾಶ್ಚಾತ್ಯ ಮತ್ತು ಪೌರ್ವಾತ್ಯದ ನೀತಿಗಳು ಮಿಲಿನವಾಗಿವೆ.

ಮಹಾತ್ಮಾಜಿಯವರನ್ನು ಅಸಹಕಾರ ಚಳವಳ ಸಮಯ ವಿಚಾರಣೆಗಾಗಿ ಕೋರ್ಟಿಗೆ ತಂದಾಗ—ಅಲ್ಲೊಂದ ವಿಚಿತ್ರ ಮಾಮಾಟು ನಡೆದು ಬಿಡುತ್ತಿತ್ತು. ಕೋರ್ಟಿನಲ್ಲಿ ನೆರೆದ ಜನರ ಪೀಠಗಳು ಉದ್ಯೋಗಸ್ಥರು ಜಡ್ಜರೂ ಕಂಡ ಮಹಾತ್ಮಾಜಿಯವರನ್ನು ಮೆಚ್ಚಿಸಲ ತಮ್ಮ ಪೀಠಗಳನ್ನು ಬಿಟ್ಟು ಸ್ವಲ್ಪ ಸಮಯ ನಿಲ್ಲುತ್ತಿದ್ದರು.

ಜಗತ್ತಿನ ಪುನರುತ್ಥಾನ ಕರ್ತರ ಮಹಾತ್ಮಾಜಿಯರು ಮೊದಲಾದ ವಿಚಾರಗಳಿಂದ ಕೂಡಿದ ಶ್ರೀ ಹುಸ್ಸೇನರ ಗ್ರಂಥವು. ಈ ಗ್ರಂಥವು ಅಮೆರಿಕನರಿಗಾಗಿ ಬರೆಯಲ್ಪಟ್ಟಿದೆ.

ಸತ್ಯಾಗ್ರಹದಿಂದ ಜಯ

ಚೀನಾ ಜಪಾನ್ ಸಮರವು ನಡೆಯುತ್ತಿರುವುದಷ್ಟೆ. ಜಪಾನೀಯರು ತಮ್ಮ ಮೇಲೆ ಆತಿಕ್ರಮಿಸಿದುದಕ್ಕಾಗಿ ಜಪಾನೀಯರ ಸಾಮಾನುಗಳ ಮೇಲೆ ಚೀನ ದೇಶದ ಎಲ್ಲಾ ಕಡೆಗಳಲ್ಲಿ ಬಹಿಷ್ಕಾರವು ಬಂದಿರುತದೆ. ಇದರ ಪರಿಣಾಮವಾಗಿ ಜಪಾನಿನ ಬಹಿರ್ ವ್ಯಾಪಾರವು ಬಹಳವಾಗಿ ಬಿದ್ದಿರುತ್ತದೆ. ಬಹಿಷ್ಕಾರವು ಮುಂದ ವರಿದರೆ ಜಪಾನಿನ ಬಹಿರ್ ವ್ಯಾಪಾರದ ಸ್ಥಿತಿ ಸಂಪೂರ್ಣವಾಗಿ ಕೆಡುವುದು ಖಂಡಿತ.

ಮೈಸೂರಿನಲ್ಲಿ ಕಾಂಗ್ರೆಸ್ ಚಳವಳ

ಮೈಸೂರಿನಲ್ಲಿ ಕಾಂಗ್ರೆಸ್ ಚಳವಳವು ಪ್ರಾರಂಭವಾಗಿ ಇವತ್ತಿಗೆ ಅನೇಕ ದಿವಸಗಳಾದವು. ಈ ಚಳವಳವನ್ನು ತಡೆಯುವರೆ ಉಪಾಯಗಳ ಕುರಿತ ಆಲೋಚಿಸುವರೆ ಮೈಸೂರು ಪ್ರಾಂತ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಪರಿಷತ್ತೊಂದು ದಿವಾನ್ ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಜರಗಿತು.

ಮೈಸೂರಿನ ರಾಜಮಂಡಳಿಕದಲ್ಲಿ ಸುಧಾರಣೆಗಳಾಗಿ ಪ್ರಜಾಸತ್ತಾತ್ಮಕ ಕ್ರಮಗಳು ಜ್ಯಾರಿಗೆ ಬರಬೇಕು. ಭೂಕಂದಾಯ ಕ್ರಮಗಳಲ್ಲಿ ಮಾರ್ಪಾಟಾಗಬೇಕು. ನ್ಯಾಯವಿಧಾಯಕ ಸಭೆಯ ಸದಸ್ಯರನ್ನು ಚುನಾವಣೆ ಮೂಲಕ ಆರಿಸಬೇಕು. ಇತ್ಯಾದಿ ಸುಧಾರಣೆಗಳಾಗಬೇಕೆಂದು ಮೈಸೂರು ಕಾಂಗ್ರೆಸ್‌ವಾಲರು ಚಳವಳ ನಡೆಸುವುದರ ಮುಖ್ಯ ಉದ್ದೇಶ.

ಕಾಂಗ್ರೆಸ್ ಧ್ವಜವು ಮೈಸೂರಿನಲ್ಲಿ ಹಾರಾಡಬಾರದೆಂದೆ ಸಂಸ್ಥಾನದವರ ಪ್ರಯತ್ನ. ಆದರೆ ಎಲ್ಲಾ ಕಡೆಗಳಲ್ಲಿ ಕಾಂಗ್ರೆಸ್ ಧ್ವಜವು ಅನಾವರಿಸಲ್ಪಟ್ಟಿತು. ಅನೇಕರು ಕಾರಾಗೃಹವನ್ನು ಸೇರುವವರಾದರು. ಶಿವಪುರದ ರಾಷ್ಟ್ರಧ್ವಜ ಸತ್ಯಾಗ್ರಹವು ಇನ್ನೂ ನಿಲ್ಲಲಿಲ್ಲ.

ಬ್ರಿಟಿಷ್ ಹಿಂದೂದೇಶದಲ್ಲಿ ಅಸಹಕಾರ ಚಳವಳದ ಸಮಯ ಜ್ಯಾರಿಯಾದಂತಹ ಈ ತರದ ದಬ್ಬಾಳಿಕೆಯ ಕ್ರಮಗಳು ಅಲ್ಲೀಗ ಜ್ಯಾರಿಯಾಗಿರುತ್ತವೆ. ದಿನಾಲೂ ಅನೇಕರು ಸೆರೆಹಿಡಿಯಲ್ಪಟ್ಟಿರುತ್ತಾರೆ. ಕಾರಾಗೃಹಗಳನ್ನು ಸೇರುತ್ತಿದ್ದಾರೆ.

★

ನಾಜಿ ಅತ್ಯಾಚಾರ.

ವಿಯಾನ್ನಾದಲಿ ಸ್ತ್ರೀಯಳೊಬ್ಬಳು ಯಹುದ್ಯನೊಬ್ಬನ ಅಂಗಡಿಗೆ ಏನೋ ಸಾಮಾನನ್ನು ಪಡಕೊಳ್ಳಲು ಹೋಗಿದ್ದಳು. ಅವಳು ಅಂಗಡಿಯಿಂದ ಹೊರಬರುವಷ್ಟರೊಳಗೆ ಜರ್ಮನ್ ಸೈನಿಕರು ಅವಳನ್ನು ಹಿಡಿದುಬಿಟ್ಟರು. ಯಹೂದ್ಯರೊಡನೆ ವ್ಯವಹಾರಮಾಡಿದ ಒಬ್ಬಳೆ ಆರ್ಯಳು ಎಂಬ ಬೋರ್ಡನ್ನು ಅವಳ ಕುತ್ತಿಗೆಗೆ ತೂಗಹಾಕಿ ಅವಳನ್ನು ಹಿಡಿದು ಬೀದಿ ಬೀದಿಯಲ್ಲಿ ಮೆರವಣಿಗೆ ಮಾಡಿದರು. ಹೀಗೂ ಉಂಟೆ?

ನಾಜಿಗಳ ಗುಪ್ತ ರೇಡಿಯೊ

ಲಂಡನಿನಲ್ಲಿರುವ ಜರ್ಮನ್ ಕೌನ್ಸಲರ ಮನೆಯಲಿ ಗುಪ್ತವಾಗಿ ರೇಡಿಯೆ ಉಪಕರಣವು ಸಿಕ್ಕಲು ನಡೆಯುತ್ತದೆಂದು ಕಂಡುಹಿಡಿಯಲಾಗಿದೆ. ಲಂಡನಿನಲ್ಲಿ ಈ ತರದ ರೇಡಿಯೊ ಉಪಕರಣವು ಇರಬಹುದೆ ಎಂಬುದಾಗಿ ಪಾರ್ಲಿಮೆಂಟಿನ ಸದಸ್ಯರು ಕೆಲವರು ಸರಕಾರದೊಡನೆ ಪ್ರಶ್ನಿಸಲಿದ್ದಾರೆ.

ಮಹಾಯುದ್ಧಕ್ಕಾಗಿ ಸಿದ್ಧತೆಗಳು

ಐರೋಪ್ಯದ ಸ್ಥಿತಿ ಇಂದು ಭಯಂಕರ ರೂಪವನ್ನು ಹೊಂದಿರುವುದರಿಂದ ಮಹಾಯುದ್ಧದ ಸಮಯ ಬೇಕಾದ ಸಿದ್ಧತೆ ಯೋಜನೆಗಳನ್ನು ಮಾಡಲು ರಷ್ಯದೇಶದ ಸ್ಟಾಲಿನನು ಒಂದು ಸಮಿತಿಯನ್ನು ನೇಮಿಸಿರುವನು.

ರಷ್ಯಾದೇಶದ ಸೇನಾಬಲವನ್ನು ಐದು ವಿಭಾಗಗಳನ್ನಾಗಿ ಐದ ತರದ ಸಿದ್ಧತೆ ಏರ್ಪಾಡುಗಳನ್ನು ಮಾಡುವರಾಗಿ ತಿಳಿದು ಬರುತ್ತದೆ.

ರೈತರಿಗೆ ಪಂಡಿತ ಜವಾಹರಲಾಲರ ಬೋಧೆ

ಶಾಸನ ಸಭಾಸದನಗಳ ಎದುರು ಪ್ರದರ್ಶನವನ್ನು ನಡೆಸುವ ಸಲುವಾಗಿ ದೂರದೂರದ ನಗರಗಳಿಗೆ ರೈತರು ಬರುವುದು ಬೇಡ. ಅವರ ಬೇಕಾದ ಪ್ರದರ್ಶನ ಚಳವಳಗಳನ್ನು ತಮ್ಮ ಹಳ್ಳಿಗಳಲ್ಲಿ ಇದ್ದು ನಡೆಯಿಸಬೇಕೆಂದಾಗಿ ಪಂಡಿತ ಜವಾಹರಲಾಲರ ಬೋಧೆಯಾಗಿರುತ್ತದೆ. ಹಳ್ಳಿ ರೈತರು ಅಷ್ಟು ದೂರದಿಂದ ನಡೆದು ಬಂದು ನಗರಕ್ಕೆ ಬರುವುದರಿಂದ ಅವರಿಗೆ ಅನೇಕ ಕಷ್ಟ ತೊಂದರೆಗಳು ಉಂಟಾಗುತ್ತವೆಂದು ಅವರ ಅಭಿಪ್ರಾಯ.

ಆಂಗ್ಲೊ-ಇಟೆಲಿಯನ್ ಒಪ್ಪಂದ

ಮೆಡಿಟರೇನಿಯನ್ ಪ್ರದೇಶ ಆಫ್ರಿಕಾ ಈಗುಪ್ತ ಪೆಲಿಸ್ತೀನ ಅರೇಬಿಯಾ ಇತ್ಯಾದಿಗಳ ವಿಚಾರದಲ್ಲಿ ಆಂಗ್ಲೀಯರಿಗೂ ಇಟೆಲಿಯಾನರಿಗೂ ಒಂದು ಒಪ್ಪಂದವು ಕಳೆದವಾರ ನಡೆದುಬಿಟ್ಟಿತು. ಈ ಕರಾರಿನಿಂದ ಬ್ರಿಟನ್—ಇಟೆಲಿಯೊಳಗೆ ಪರಸ್ಪರ ಮೈತ್ರಿ ಏರ್ಪಡಬೇಕೆಂದಾಗಿದೆ. ಈ ಒಪ್ಪಂದದಿಂದ ಜಪಾನಿಗೆ ಇಟೆಲಿ—ಜರ್ಮನಿಗಳ ಕುರಿತು ಸ್ವಲ್ಪ ಸಂದೇಹವು ಉಂಟಾಗಿರುತ್ತದೆ.

ಬ್ರಿಟನಿನ ಯುದ್ಧಮಂತ್ರಿಗಳಾದ ಹೊರ್ ಬೆಲಿಶಾರವರು ವೆನಿಸ್ಸಿನ ಇಟೆಲಿಯ ರಾಜಧಾನಿಯಾದ ರೊಮ್‌ನಗರದಲ್ಲಿ ಮುಸಲೆನಿಯ ಅತಿಥಿಗಳಾಗಿ ಸತ್ಕಾರವನ್ನು ಪಡೆದರು. ಇವರು ಮುಸಲೆನಿಯೊಡನೆ 45 ನಿಮಿಷಗಳ ಭಾಷಣೆಯನ್ನು ನಡೆಯಿಸಿದರಾಗಿ ವಾರ್ತೆಯಿದೆ.

ಇಟೆಲಿಯ ಚಕ್ರವರ್ತಿಗಳನ್ನು ಅಬಿಸೀನಿಯಾದ ಒಡೆಯರನ್ನಾಗಿ ಮನ್ನಿಸುವ ಕುರಿತು ಜನಪದ ಸಂಘದಲ್ಲಿ ಬ್ರಿಟನಿನ ಪ್ರತಿನಿಧಿಗಳು ಒಂದು ಮಸೂದೆಯನ್ನು ತರುವವರಿದ್ದಾರೆ. ಈ ಮಸೂದೆಗೆಲ್ಲಾ ಜನಾಂಗಗಳ ಸಮ್ಮತ ದೊರಕುವಂತಿದೆ.

ಮೆಕ್ಸಿಕೊದಲ್ಲಿರುವ ಎಣ್ಣೆ ಸಂಸ್ಥೆಗಳು

ಮೆಕ್ಸಿಕೋ ಸರಕಾರದಿಂದ ವಶಮಾಡಿಕೊಳ್ಳಲಾಗಿದೆ. ಪ್ರತಿಗಳ ಮೇಲೆ ನೂತನ ತೆರಿಗೆಗಳನ್ನು ಹೊರಿಸದೆ, ಸಾಲಗಳನ್ನು ತೆರದೆ ಸಾರ್ವಜನಿಕರು ಮುಂದೆ ಬಂದು ಇತ್ತ ಹಣದಿಂದಲೇ ಈ ಎಣ್ಣೆಯ ಸಂಸ್ಥೆಯನ್ನು ವಶಕೊಳ್ಳಲಾಯಿತು. ಸರಕಾರ ಮಂಡಳದ ಅನೇಕ ಸದಸ್ಯರು ಇದಕ್ಕಾಗಿ ಧಾರಾಳ ಧನಸಹಾಯ ಮಾಡಿರ ವರಾಗಿ ವದಂತಿಯಿದೆ. ಹೀಗೆ ಹಣ ಕೊಟ್ಟವರಲ್ಲಿ ಜವಾನರೂ ಕೂಡ ಇರುವರಂತೆ.

ಊಟದ ಹೊತ್ತು ತಿವಿದ ರೀತಿಯ ಹೊಟ್ಟೆನೋವು

ಊಟದ ಮೊದಲು ತಿವಿದ ರೀತಿಯ ಹೊಟ್ಟೆ ನೋವುಂಟಾಗುವುದು ಅತ್ಯಂತ ಭಯಂಕರ ಉದರಪೀಡೆಯು.

ಮಿ। ಎ ಬಿ ಎಂಬವರು ಈ ತರದ ಸಂಕಟಕ್ಕೊಳಗಾಗಿದ್ದರು. ಸಂಕಟವನ್ನು ಅನುಭವಿಸಿ, ಕೊನೆಗೆ ಬಹು ನಿರಾಶರಾಗಿದ್ದರು. ಆದರೆ ಅವರ ಪತ್ರವನ್ನು ಓದಿರಿ.

ಕಳೆದ ಹತ್ತು ವರ್ಷಗಳಿಂದ ನಾನು ಅತ್ಯಂತ ಭಯಂಕರ ತರದ ಹೊಟ್ಟೆನೋವನ್ನು ಅನುಭವಿಸುತ್ತಿದ್ದೆನು. ಈ ನೋವು ಯಾವಾಗಲೂ ಊಟದ ಮೊದಲು ಪ್ರಾರಂಭವಾಗುತ್ತಿತ್ತು. ಅಸಂಖ್ಯಾತ ಔಷಧಿಗಳನ್ನು ಉಪಯೋಗಿಸಿದರೂ ನನಗೆ ಫಲ ದೊರಕಲಿಲ್ಲ. ಕೊನೆಗೆ ಮೆಕ್ಲೀನ್ ಬ್ರಾಂಡನ್ನು ಉಪಯೋಗಿಸಿದೆನು. ಔಷಧದ ದೋಸಿನ ಲಾಗ್ಯಾತು ನಾನೊಬ್ಬ ಹೊಸ ಮನುಷ್ಯನಾಗಿರುವೆನು. ಈ ನೋವು ಪ್ರಾರಂಭವಾದೊಡನೆ ನಾನು ಮೆಕ್ಲೀನ್ ಔಷಧ ಹುಡಿಯನ್ನು ಸೇವಿಸುತ್ತೇನೆ. ಒಡನೆ ನೋವು ಮಾಯವಾಗುವುದು. ನನ್ನ ಮನೆಯಲ್ಲಿ ಈಗ ಮೆಕ್ಲೀನ್ ಹುಡಿಯ ಬಾಟ್ಲಿಯ ಹೊರತು ಬೇರೆ ಇಲ್ಲ. ನೀವು ದೊರಕಿಸಿದ ಉಪಕಾರಕ್ಕೆ ನಾನು ಕೃತಜ್ಞನಾಗಿರುತ್ತೇನೆ.

ಮೆಕ್ಲೀನ್ ಔಷಧ ಹುಡಿಯು ... (ಮೆಕ್ಲೀನ್ ಔಷಧವೆಂದು ಹೆಸರಿಸಿ ಕೇಳಿ) ... ಅಥವಾ ಔಷಧ ಅಂಗಡಿಗೆ ಹೋಗಿ ಮೆಕ್ಲೀನ್ ಬ್ರಾಂಡ್ ಹುಡಿಯನ್ನು ಪಡೆಯಿರಿ—ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

Alex C Maclean

ಎಂಬ ಸಹಿಯಿಂದ ಕೂಡಿದ ಕೆಂಪು ರಂಗಿನ ಪಟ್ಟಿಗೆಯೊಳಗೆ ಇರುವ ಇದೆ ಸಹಿಯಿಂದ ಕೂಡಿದ ಲೇಬಲ್ ಇರುವ ಬಾಟ್ಲಿಯಲ್ಲಿ ಬರುವ ಖಚಿತವಾದ ಮೆಕ್ಲೀನ್ ಬ್ರೇಂಡ್ ಹೊಟ್ಟೆ ಹುಡಿಯನ್ನು ಪಡಕೊಂಡರೆ ಎಲ್ಲವೂ ಸರಿಯಾಗುವುದು. ಇದು ನಿಮ್ಮ ಹೊಟ್ಟೆಯನ್ನು ಪರಿಗಣಿಸುವುದರಿಂದ ನೀವು ಸುಖವಾಗಿ ಇರಬಹುದು.

ಇಂತಹ ನಮೂನೆಯ ಕಡಿಮೆ ದರದ ಪರಕೀಯ ಹುಡಿಗಳನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ. ಎಲ್ಲಾ ಕಡೆಗಳಲ್ಲೂ ಪೊಟ್ಟಣಗಳಲ್ಲೂ ದೊರೆಯುತ್ತದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:
ಜೆ ಎಲ್ ಮೋರಿಸನ್ ಸನ್ ಎಂಡ್ ಜೋನ್ಸ್
(ಇಂಡಿಯಾ) ಲಿಮಿಟೆಡ
ಸ್ಟೆಂಡರ್ಡ್ ಬಿಲ್ಡಿಂಗ್ ಹೋರ್ನ್‌ಬಿ ರೋಡ್ ಮುಂಬಾಯಿ



S. N. 75

—ಇಟಲಿಗಳೊಳಗೆ ಒಪ್ಪಂದ

ಎಷ್ಟು ವಿಳಂಬವಿಲ್ಲದೆ ಸಂಧಾನವಾಯಿತು? ಹಿಂದೀಯರಿಗೆ ಅವರ ಜನ್ಮಸಿದ್ಧ ಹಕ್ಕೆಂದು ನಂಬಿದುದನ್ನು ಕೊಡಲು, ಅರ್ಧಕ್ಕರ್ಧ ಮನಸ್ಸಿನಿಂದ ಶತಾಂಶದಲ್ಲೊಂದನ್ನು ಕೊಟ್ಟು, ಒಂದೂ ಕೊಡದಂತೆ ಲೋಪಿಸಲೂ ಆಸ್ಪದವನ್ನಿಟ್ಟು ಒಂದು ಶಾಸನಮಾಡಬೇಕಾದರೆ,— ವರ್ತುಲ ಪರಿಷತ್ತುಗಳೆಷ್ಟು, ವರ್ಷಗಳೆಷ್ಟು? ಎಂದು ಕೇಳುವ ಕಾಂಗ್ರೆಸೇ ಮೊದಲಾದ ಸ್ವಾತಂತ್ರ್ಯಾಭಿಲಾಷಿಗಳಿಗೆ ಈ ಕರಾರು ಎಷ್ಟು ಬೇಗನೆ ಮುಗಿದಂತೆ ತೋರುತ್ತದೆ! ಬ್ರಿಟಿಷರು ಸಂಧಾನಕಾರಂಭಿಸಿದರೆ ಕ್ಷಣಾರ್ಧದಲ್ಲಿ ಮುಗಿಸಬಲ್ಲರು. ಅವರಿಗೆ ಮನಸ್ಸಿಲ್ಲದುದನ್ನು ಮಾಡುವ ವಿಚಾರಗಳಲ್ಲಾದರೆ,—ಧ್ಯೇಯ, ತತ್ವ, ಭಯ, ಸ್ವಾರ್ಥ ಇತ್ಯಾದಿ ನಾನಾ ಪರಿಯಾಗಿ ಪರ್ಯಾಲೋಚಿಸಿ ಮುಂದೆ ಕಾರ್ಯರಂಗಕ್ಕೆ ಇಳಿದು, ಸಭೆಗಳೂ ಕಮ್ಮಿಟಿಗಳೂ ಉಂಟಾಗಿ, ಅವುಗಳ ಶಾಖೆಗಳು ಇತ್ಯಾದಿ ನಿರ್ಮಾಣಹೊಂದಿ ಭೈರವರೂಪಕ್ಕೇ ಬೆಳೆವರು

ಲೋರ್ಡ್ ಹೆಲಿಫೆಕ್ಸರು (ಗಾಂಧಿ ಇರ್ವಿನ್ ಕರಾರಿನಲ್ಲಿ ಇರ್ವಿನ್ ಲೋರ್ಡರು) ಯಾವ ದಿನ ಹಿಟ್ಲರನನ್ನು ಕಾಣಹೋದರೋ, ಆ ದಿನವೇ ಈಡನ್ ಸಾಹೇಬರು (ಕಳೆದ ತಿಂಗಳಲ್ಲಿ ರಾಜೀನಾಮೆ ಇತ್ತ ಬ್ರಿಟಿಷ್ ಮಂತ್ರಿಗಳು) ತಮ್ಮ ಕಾಲು ಜಾರುತ್ತಿರುವುದನ್ನು ತಿಳಿದರು ಕಳೆದ ಮೂರು ವರ್ಷಗಳಿಂದಲೂ ಮುಖ್ಯ ಮಂತ್ರಿಗಳೂ ಪರರಾಷ್ಟ್ರಗಳ ಮಂತ್ರಿಗಳೂ ಇಂಗ್ಲೆಂಡಿನಲ್ಲಿ ಘೋಷಿಸುತ್ತಿದ್ದ ನಾಝೀ ವಿರುದ್ಧ ತತ್ವಗಳನ್ನು ನೆನಪಿಗೆ ತಂದುಕೊಳ್ಳೋಣ ೧ ಜರ್ಮನರು ಇಂಗ್ಲಿಷರೊಡನೆ ಮೈತ್ರಿ ಸಾಧಿಸಬೇಕೆಂದೇ ಇರುವರು, ಏಕೆಂದರೆ ಅವರು ಒಂದೇ ಮೂಲದ ವಂಶಸಂಭೂತರು ೨ ಫ್ರಾನ್ಸು ಜರ್ಮನಿಗಳೊಳಗಾದ ನಾನಾ ಯುದ್ಧಗಳು ಆತ್ಮಘಾತಕಾರಣವಾಗಿದ್ದು, ಅಸಂಖ್ಯಾತ ಧನ ೩

ಬ್ರಿಟಿಷ್ ಪ್ರಧಾನಮಂತ್ರಿ ಮಿ। ಚೇಂಬರ್ಲೇನರು

ಧ್ವಂಸಮಾಡಿದೆ ೩ ಯುರೋಪಿಯ ರಾಷ್ಟ್ರಗಳೆಲ್ಲ ಒಂದಾಗದಿರುವಲ್ಲಿ, ಇನ್ನೂ ಅಲ್ಲಲ್ಲಿ ದೇವರಿಟ್ಟಂತೆ ಬಾಳುತ್ತಿರುವವರನ್ನು ವಶಪಡಿಸಿಕೊಂಡು ವಿಲಾಯತಿ ಸುಧಾರಣೆಯನ್ನು ಪ್ರತಿಷ್ಠಿಸಲು ಆತಂಕವುಂಟಾಗುವುದು ಈ ಮೂರು ತತ್ವಗಳು ಹಿಟ್ಲರನವು ಇವನ್ನು ಯಾವ ಬಗೆಯಿಂದ ಹೆಲಿಫೆಕ್ಸರು ಕಂಡರೋ ಅದೇ ದೃಷ್ಟಿಯಿಂದ ಈಡನರು ಕಾಣಲಿಲ್ಲ ರೋಮ್ ಬರ್ಲಿನ್ ನಗರಗಳ ಸಾಲು ಕೇಂದ್ರವಾಗಿದ್ದು ಜಗದ್ರಕ್ಷಣೆಯಾಗಬೇಕೆಂದೇ ಜರ್ಮನಿ ಇಟಲಿಗಳ ಕರಾರು, ಲಂಡನ್ ಪಾರಿಸುಗಳು ಜಗತ್ತಿನ ಕೇಂದ್ರವಾಗಬಾರದೆಂದೇ ಅವೆರಡೂ ರಾಷ್ಟ್ರಗಳ ಸಾಧನೆ ಹೀಗೆ ಈ ರಾಷ್ಟ್ರಗಳೊಳಗೆಲ್ಲ ವಿಚಿತ್ರ ವಿಪರೀತ ಸಂಬಂಧಗಳಿದ್ದರೂ, ಈಗ ವಿದ್ಯಮಾನಗಳಿಗೆ ಮನ್ನಣೆದೊರೆತು, ಎಂತಹ ಸಂಬಂಧಗಳೋ ಉಂಟಾಗುವಂತಾಗಿದೆ

ಇಟಲಿ ಇಂಗ್ಲೆಂಡುಗಳೊಳಗೆ ಕರಾರಾದುದರ ಮುಖ್ಯ ಪರಿಣಾಮವೇನು? ಜರ್ಮನಿಯೊಡನೆ ಇಂಗ್ಲೆಂಡು ಒಂದು ಬಗೆಯ ಒಪ್ಪಂದ ಮಾಡಿಕೊಳ್ಳಲು ದಾರಿ ಸುಗಮವಾದಂತಾಯಿತು. ರೋಮ್ ಬರ್ಲಿನ್ ಸಾಲನ್ನು ಇನ್ನು ಲಂಡನ್ ಪಾರಿಸ್ ಸಾಲು ತಪ್ಪಿಸುವಂತಿಲ್ಲವೆಂಬುದೂ ನಿಜವಾಯಿತು ಜರ್ಮನಿಯೊಡನೆ ಇಂಗ್ಲೆಂಡು ಇನ್ನು ಮೈತ್ರಿಗೆ ಒಂದಿಗೆಯಾದಂತೆ, ಜರ್ಮನಿಯು ಒಂತೂ ಯುದ್ಧ

ಇಟಲಿಯ ಸರ್ವಾಧಿಕಾರಿ ಮುಸಲೋನಿ

ಸನ್ನಾಹ ವಿಚಾರದಲ್ಲಿ ಸಂಪೂರ್ಣವಾಗಿಯೂ ಬೆಳೆದೇ ಬಂದಿದೆ ಆತ್ಮಲ್ಪ ಬಲವ್ಯಯಿಸಿ, ಅಖಂಡವಾದ ಫಲವನ್ನು ಹೊಂದುವುದರಲಿ ಹಿಟ್ಲರನೇ ಮಹಾತ್ಮನೆನಿಸಿರುವನು ಆದರೆ ಹಿಟ್ಲರನು ಫ್ರಾನ್ಸನ ಸಗ್ಗುವನೇ" ಎಂಬ ಪ್ರಶ್ನೆ ಏಳಬಹುದು ಇಲ್ಲ ಫ್ರಾನ್ಸನ ಚೂರೂ ಅವನಿಗೆ ಸದ್ಯದಲ್ಲಿ ಬೇಕಾದುದಲ್ಲ ಅವನ ಕಣ್ಣಿದೆ ಪೂರ್ವಕ್ಕೆ ಇಂಗ್ಲೆಂಡಿಗಂತೂ ಫ್ರಾನ್ಸು ಸ್ವತಂತ್ರವಾಗಿಯೇ ಇರುವಂತಾಗದಿದ್ದರೆ, ನಿತ್ಯಸುಖವಿಲ್ಲ ಹೀಗಿರುವ ಕಾರಣ, ಇಂಗ್ಲೆಂಡು ಜರ್ಮನಿಯೊಡನೆ ಇನ್ನು ಸಂಭಾಷಣೆಗಳನ್ನು ಮುಂದರಿಸಿದಲ್ಲಿ ಬೇಕಾಗಿರುವ ಕರಾರನ್ನು ಮಾಡಿಕೊಳ್ಳಬಹುದು ಆಗ ಫ್ರಾನ್ಸು ತನ್ನ ಸಂರಕ್ಷಣೆಯು ಖಚಿತವೆಂಬಾಗ ತ್ತಲೇ, ಪೂರ್ವ ಯುರೋಪಿನ ಯಾವ ಸಂಬಂಧಗಳನ್ನೂ ಕಡಿದುಕೊಂಡು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದಷ್ಟೆ ಕರ್ತವ್ಯವೆನ್ನುವುದರಲ್ಲಿ ಆತಂಕವಿರದು ಆಗ ಬ್ರಿಟನ್ನು ಫ್ರಾನ್ಸು ಜರ್ಮನಿ ಇಟಲಿಗಳೇ ನಾಲ್ಕು ಪ್ರಮುಖ ರಾಷ್ಟ್ರಗಳಾಗಿ ಇಡೀ ಯುರೋಪನ್ನು ಗೌರವದಿಂದ ಕಾಪಾಡಬಹುದು ತಮ್ಮ ಗೌರವವನ್ನು ಇತರರು ಕೆಡಿಸದಂತೆ ನೋಡಿಕೊಳ್ಳಬಹುದು ಅನಂತರ, ಬೊಲ್ಶೆವಿಕ್ ರಷ್ಯವನ್ನೂ, ಜಪಾನನ್ನೂ ಅಂಕೆಯಲ್ಲಿಟ್ಟುಕೊಳ್ಳುವಂತೆ ವಿಧಾನಗಳನ್ನು ಕೈಕೊಂಡಲ್ಲಿ, ಪುನಃ ಪ್ರಪಂಚದಲ್ಲಿ ಯುರೋಪೇ ಮೇಲಾಗುವಂತೆ ಸಂದರ್ಭವಿದೆ

ಈ ಕರಾರಿನ ಪರಿಣಾಮಗಳಲ್ಲಿ,—ಲೀಗ್ ಓಫ್ ನೇಶನ್ಸ್ ಸಭೆಯು ಎಷ್ಟೋ ದಿನಗಳಿಂದ ಸೋದಂಥ ಸ್ಥಿತಿಯಲ್ಲಿದ್ದರೂ ಅದರ ದಫನ ಸಂಸ್ಕಾರವಾಗದಿದ್ದುದರಿಂದ, ಇನ್ನು ಅದಕ್ಕೊಂದು ಮುಹೂರ್ತ ಒದಗುವಂತಾಯಿತು ಅದರ ನೆನಪೇ ಕನಸಿನಲ್ಲೇನೋ ಭಾವಿಸಿದಂತೆನ್ನುವಷ್ಟು ಉಳಿದಿರಬಹುದು ಸಾಮ್ರಾಜ್ಯಾಭಿಲಾಷೆಯುಳ್ಳ ಎರಡು ಜನಾಂಗಗಳು ಕರಾರು ಮಾಡಿಕೊಳ್ಳುವಾಗ, ಜನಾಂಗಸಂಘದ ನೆನಪೇಕೆಬೇಕು?

ಜೀವಾಮೃತ

ದೇಹಪೌಷ್ಟಿಕ ಮತ್ತು ಆನಂದದಾಯಕವಾದ ಈ ಅಮೃತ ರಸದ ಪ್ರತಿಯೊಂದು ಗುಟುಕು ಸೇವನೆಯೂ ಆರೋಗ್ಯ.
ಈ ಅಮೃತ ರಸವು, ಅಮೂಲ್ಯವಾದ ವನಸ್ಪತಿಗಳಿಂದ ಮತ್ತು ಲೋಹ ಸತ್ವಗಳಿಂದ ಮಿಶ್ರಿತವಾಗಿ ತಯಾರಿಸಲ್ಪಟ್ಟಿದೆ
ಶರೀರವನ್ನು ಬೆಳೆಸಿ, ಮೆದುಳುಶಕ್ತಿಯನ್ನು ವರ್ಧಿಸಿ, ನಿತ್ರಾಣವಾದ ನರಗಳಿಗೆ ಶಕ್ತಿಯನ್ನು ಕೊಟ್ಟು, ಶರೀರದಲ್ಲಿ ನವ ಚೈತನ್ಯವನ್ನು ಆಶ್ಚರ್ಯಕರವಾಗುವಂತೆ-ಸ್ವಭಾವಿಕವಾಗಿಯೇ ಉಂಟುಮಾಡುತ್ತದೆ
ಅಲ್ಪಾವಧಿಯ ಹುರುಪನ್ನು ಉಂಟುಮಾಡದೆ ಶಾಶ್ವತವಾದ ಗುಣಕಾರಿಯಾಗಿದೆ
ಎಲ್ಲಾ ಔಷಧವ್ಯಾಪಾರಿಗಳಲ್ಲಿಯೂ ದೊರೆಯುತ್ತೆ

ತಯಾರಿಸುವವರು:— ಆಯುರ್ವೇದಾಶ್ರಮ, ಮದರಾಸು.
ಸ್ಟಾಕಿಸ್ಟರು - ಪೊಪ್ಯೂಲರ್ ಸ್ಟೋರ್ಸ್ ರಥಬೀದಿ, ಮಂಗಳೂರು

ಇಟಲಿಗೆ ದೊರೆತುದೇನು? ಮೆಡಿಟರೇನಿಯನ್ ಮತ್ತು ಕೆಂಪುಸಮುದ್ರಗಳಲ್ಲಿ ಇಟಲಿಗೆ ಇಂಗ್ಲೆಂಡಿನ ಸಮಾನತೆ ದೊರೆಯಿತು ಅಬಿಸೀನಿಯವನ್ನು ಇಟಲಿಯೇ ಆಳುವುದಕ್ಕೆ ಅರ್ಹತೆಯುಳ್ಳದೆಂದಾಯಿತು ಇಟಲಿಗೆ ಬೇಕಾಗಿರುವ ಸಾಲವೂ ದೊರೆವಂತಾಯಿತು ಸ್ಪೈಯಿನಿನ ಸರಕಾರವನ್ನು ಗೆಲ್ಲುವುದಕ್ಕೆ ಜನರಲ್ ಫ್ರೆಂಕೋವಿಗೆ ನಾಲ್ಕು ಭುಜಗಳು ಹುಟ್ಟಿದ ಹಾಯಿತು

ಇತ್ತ ಹಿಟ್ಲರನು ಇತ್ತೀಚೆ ದೇವತಾ ನಾಮ ಸ್ಮರಣೆಯಿಂದ ತನ್ನ ಪ್ರಾಬಲ್ಯವನ್ನು ಮುಂದೊತ್ತಿ ಬರುತ್ತ ತನ್ನ ಸ್ಕೀಮನ್ನು ಜಾರಿಗೆ ತರುತ್ತಿರುವನು ಈ ದೈವ್ಯಬಲದ ಪ್ರತಿಸ್ಪರ್ಧೆಗೆ ಇಂಗ್ಲೆಂಡು ನಿಲ್ಲಲಾರದು ದೈವಕ್ಕೆ ಮುನಿದರೆ ಸಾಮ್ರಾಜ್ಯಕ್ಕೆ ಪೀಡೆ ಇದ್ದೀತಲ್ಲ!

ಇದನ್ನು ತಿಳಿದ ಬಳಿಕ ಬ್ರಿಟಿಷ ಜನತೆಯಲ್ಲಿ ಹೀಗೆ ಕರಾರುಗಳಾಗಿ ಬ್ರಿಟನ್ನಿನ ಗೌರವವೂ ಪ್ರಾಬಲ್ಯವೂ ಉಳಿಯುವೆಂದೇ ಸಾರಲೂ ಒಪ್ಪಿಕೊಳ್ಳಲೂ ಬಹುಸಂಖ್ಯಾಕರು ಎದುರು ಬರುವರ ಸಾಮ್ರಾಜ್ಯದ ಸಂರಕ್ಷಣೆಯ ದೀಕ್ಷೆಯನ್ನು ವಹಿಸಿಕೊಳ್ಳುವ ರಿಗೆ ಸ್ಪೈಯಿನ ಮೊರೆ, ಪ್ರಜಾಸತ್ತೆಯ ಕರೆ ಎಂದೂ ಕೇಳಿಸವು ಅವುಗಳಿಗೆ ಕಿವಿಕೊಟ್ಟು ಸದ್ಯಕ್ಕೆ ಪ್ರಯೋಜನವಿಲ್ಲ ಬಾಳುವುದಕ್ಕೆ ಪ್ರತ್ಯಕ್ಷ ಪ್ರಯತ್ನಗಳಾಗಬೇಕಾದಾಗ ಸುಮ್ಮನೆ ಧ್ಯೇಯ ತತ್ವಗಳನ್ನೆ ನಂಬುವುದೂ ಅನುಸರಿಸುವುದೂ ಸಾಧ್ಯವಲ್ಲ

ಯುರೋಪು ಹೀಗೆ ನಾಲ್ಕು ರಾಷ್ಟ್ರಗಳ ಕೂಡಿಕೆಯಿಂದ ಮಹಾಪ್ರಭುತ್ವಕ್ಕೆ ಕೈಜಾತ ತ್ರಿರೂಪಾಗ ಏಶಿಯವು ಹೇಗಿದೆ? ಏನಂತೆ?

ರಷ್ಯವು ಜಪಾನಿನ ಮೇಲೆ ಬೀಳುವುದು

ಚೀನಾದಲ್ಲಿ ಜಪಾನಿಯರ ಸ್ಥಿತಿಯು ಸಂಗಾಲಾಗಿರುವ ಈ ಸಮಯವೆ ಜಪಾನಿಯರಿಗೆ ಬುದ್ಧಿ ಪಾಠ ಮಾಡಲು ತಕ್ಕ ಸಮಯವೆಂಬ ಅಭಿಪ್ರಾಯ ಹೊಂದಿದವರಾಗಿ ರಷ್ಯದೇಶದವರು ಚೀನಾ ದೇಶದ ಮಂಚೂರಿಯ ಮೂಲಕ, ಜಪಾನಿನ ಸೈನ್ಯಮಾರ್ಗವಾಗಿ ವೇಗ ಒಲವಾದ ವಾರ್ತೆಯಿದೆ ಜಪಾನಿನೊಡನೆ ಸಮರಕ್ಕಾಗಿ ಪೌರಸ್ತ್ಯದ ಗಡಿಯಲ್ಲಿ ರಷ್ಯಾದವರ ಭಾರಿ ಸಿದ್ಧತೆಗಳಾಗಿವೆ ಎಂದು ವದಂತಿಯಿದೆ

ಮಣಿಪುರದ ರಾಣಿ.

ಸ್ವಾತಂತ್ರ್ಯ ಹೋರಾಟವನ್ನು ನಡೆಯಿಸಿ ಕಾರಾಗೃಹವನ್ನು ಸೇರಿದ ಅಸ್ಸಾಮದ ಮಣಿಪುರ ವೀರರಮಣಿಯಾದ ಗುಯ್ಡಲ್ಲಾರನ್ನು ಮಣಿಪುರ ಸಂಸ್ಥಾನದ ಜೈಲಿನಿಂದ, ಶಿಲ್ಲೋಂಗ್ ಜೈಲಿಗೆ ಒಯ್ದಿರುವರೆಂದು ತಿಳಿದುಬರುತ್ತದೆ.

ಎಬಿಸಿನಿಯಾವು ಇನ್ನೂ ಬೀಳಲಿಲ್ಲ

ಎಬಿಸಿನಿಯವು ಇನ್ನೂ ಇಟಲಿಗೆ ಪೂರ್ತಿಯಾಗಿ ಬಿಳಲಿಲ್ಲ. ಇತರ ಜನಾಂಗಗಳು (?) ಸಹಾಯವಿತ್ತರೆ ಅದನ್ನು ಹಿಂದಕ್ಕೆ ಪಡೆಯುವ ಆಶಯಗಳು ಹಬಸಿ ಚಕ್ರವರ್ತಿಗಳಿಗಿರುವುದು ಹಬಸಿ ಚಕ್ರವರ್ತಿಯು ಬಾತ್ ಎಂಬಲ್ಲಿ ರೋಗಪೀಡಿತರಾಗಿ ಅತ್ಯಂತ ಕ್ಷೀಣರಾಗಿ ಹಾಸಿಗೆ ಹಿಡಿದಿರುವರು ಅವರನ್ನು ಕಾಣಲು ಪಲಿಸ್ತೀನಕ್ಕೆ ತೆರಳಿದ ಅವರ ರಾಣಿಯರು ಹಿಂತೆರಳಿರುವರಾಗಿ ತಿಳಿದುಬರುತ್ತದೆ

ಲವಂಗ ಬಹಿಷ್ಕಾರ

ಜಂಜಿಬಾರಿನ ಲವಂಗ ಬಹಿಷ್ಕಾರ ಚಳವಳವು ಹಿಂದೂದೇಶದ ಮದರಾಸು, ಮುಂಬಾಯಿ, ಕಲ್ಕತ್ತ ಇತ್ಯಾದಿ ಕಡೆಗಳಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿರುತ್ತದೆ ಜಂಜಿಬಾರಿಂದ ಬಂದ ಲವಂಗದ ಮೂಟೆಗಳು ಕೇಳುವವರಿಲ್ಲದೆ, ಆ ನಗರಗಳ ಬಂದರುಗಳಲ್ಲಿ ಬಿದ್ದಿರುತ್ತವೆ ಕಾಂಗ್ರೆಸ್ ವಾಲಂಟಿಯರು, ಯಾರೂ ಅವುಗಳನ್ನು ಕೊಂಡು ಹೋಗದಂತೆ ಪಿಕೆಟಿಂಗನ್ನು ನಡೆಸುತ್ತಿದ್ದಾರೆ

ಹರಿದ್ವಾರದಲ್ಲಿ ಅನಾಹುತಗಳು

ಕೆಲ ದಿವಸಗಳ ಹಿಂದೆ ಕುಂಭ ಮೇಳಕ್ಕಾಗಿ ಹಿಂದೂಗಳ ಪವಿತ್ರ ಯಾತ್ರಾ ಸ್ಥಳವಾದ ಹರಿದ್ವಾರದಲ್ಲಿ ಸಾಧಾರಣ ೫ ಲಕ್ಷ ಜನರು ನೆರೆದಿದ್ದರು ಹಿಂದೂದೇಶದ ಪ್ರತಿಯೊಂದು ನಗರದಿಂದ, ಹಳ್ಳಿಯಿಂದ ಜನರು ಭಕ್ತಿ ವಿಶ್ವಾಸಗಳಿಂದ ಕೂಡಿದವರಾಗಿ ಅಲ್ಲಿ ನೆರೆದಿದ್ದರು ಈ ಭಾರಿ ಮೇಳಕ್ಕೆ ಜನಸ್ತೋಮವು ಕಳೆದ ಬಾರಿಗಿಂತ ಅಧಿಕವಾಗಿತ್ತು

ಆದರೆ ಎರಡು ವಿಶಾದದ ಅನಾಹುತಗಳಲ್ಲದಿದ್ದರೆ ಮೇಳವು ಸಾಂಗವಾಗಿ ನಡೆಯುತ್ತೆಂದೆ ಹೇಳಬೇಕಾಗಿದೆ ಬೆಂಕಿ ಅನಾಹುತ ಮತ್ತು ರೈಲ್ವೆ ಅಪಘಾತ ಹರಿದ್ವಾರದ ಒಂದೆಡೆ ಬೆಂಕಿ ಎದ್ದು, ಅದನ್ನು ತಣಿಯಲು ಯೋಗ್ಯ ಏರ್ಪಾಡುಗಳಿಲ್ಲದಿದ್ದುದರಿಂದ ಆ ಸಂಪೂರ್ಣ ಪ್ರದೇಶವು ದಹನವಾಗಿ ಸಾಧಾರಣ ೫೦ ಲಕ್ಷ ರೂಗಳ ನಷ್ಟಕ್ಕೂ ಅನೇಕರಿಗೆ ಜಖಂ, ೬ ಜನರ ಪ್ರಾಣನಷ್ಟ ಇತ್ಯಾದಿಗಳಿಗೆ ಕಾರಣವಾಯಿತು.

ರೈಲ್ವೆ ನಿಲ್ದಾಣದ ಎದುರು ಒಂದು ಕಡೆ ತಮ್ಮ ಊರಿಗೆ ತೆರಳಲು ರೈಲುಗಾಡಿಯನ್ನು ಕಾಯುತ್ತಾ ಇದ್ದ ಒಂದು ಜನ ತಂಡದ ಮೇಲೆ ಅಲ್ಲಿ ಹಿಂದು ಮುಂದಕ್ಕೆ ಹೋಗುತ್ತಿದ್ದ ಒಂದು ರೈಲ್ವೆ ಗಾಡಿಯು ಹಾದು ಬಂದು ಜನತಂಡದ ಮೇಲೆ ದುಮುಕಿದ ಪರಿಣಾಮವಾಗಿ ೬ ಜನರ ಪ್ರಾಣ ಬಲಿ ನಡೆಯಿತು.

★ ಚೀನಾಕ್ಕೆ ವಿಜಯವೆ? ★

ಚೀನಿಯರು ಹಿಂದೆ ಕಳೆಕೊಂಡ ಒಂದೊಂದೆ ಪ್ರದೇಶಗಳನ್ನು ಮತ್ತೊಮ್ಮೆ ಹಿಡಿದಿರುವರು. ಅನೇಕ ಕಡೆಗಳಲ್ಲಿ ಜಪಾನೀಯ ಸೈನ್ಯವರ್ಗಗಳಿಗೆ ಭಯಂಕರ ಸೋಲು ಒದಗಿರುವುದು. ಸಾಧಾರಣ ಅರ್ಧ ಮಿಲಿಯ ಜಪಾನೀಯರಿರುವ ಒಂದು ಸೈನ್ಯ ದಂಡಿಗೂ ಚೀನಿಯರಿಗೂ, ಸುಚೊ ಎಂಬಲ್ಲಿ ಭಯಂಕರ ಕದನ ನಡೆದು, ಜಪಾನಿಯರು ಹಿಂದಕ್ಕೆ ಅಟ್ಟಲ್ಪಟ್ಟಿರುವರೆಂದು ವದಂತಿಯಿದೆ. ಜಪಾನಿನ ನಿರೀಕ್ಷೆಯಂತೆ ಚೀನಾವನ್ನು ಬೇಗನೆ ಸೋಲಿಸುವ ಕೆಲಸವು ಈಗ ಅವರಿಗೆ ಕಷ್ಟಸಾಧ್ಯವಾಗಿರುತ್ತದೆ. ಚೀನಿಯರು ಮಹಾಯುದ್ಧಕ್ಕಾಗಿ ಮಹಾಸಾಲಗಳಿಂದ ನಿಧಿಗಳನ್ನು ಕೂಡಿಸುತ್ತಿದ್ದಾರೆ. ರಷ್ಯಾ ಇತ್ಯಾದಿ ದೇಶಗಳಿಂದ ಅವರಿಗೆ ಬೇಕಾದ ಯುದ್ಧ ಸಾಮಗ್ರಿಗಳು ಈಗ ಧಾರಾಳವಾಗಿ ದೊರಕುತ್ತಿವೆ.

ಅರಬರ ಮೇಲೆ ಬ್ರಿಟಿಷರ ಬಾಂಬುಗಳು

ಏಡನ್ನಿನಲ್ಲಿ ಯುದ್ಧ.

ಫ್ರೆಂಚರು ಸ್ಪೈನಿನಲ್ಲಿ ನಡೆಯಿಸುತ್ತಿರುವ ಬೊಂಬಿನ ದಾಳಿಯನ್ನು ಪ್ರತಿಕೂಲಿಸುವ ಆಂಗ್ಲೇಯರು, ಆ ಬೊಂಬುಗಳ ಮೂಲಕ ಅರೆಬಿಯಾದ ಏಡನ್ನ ನಗರದಲ್ಲಿ ಇವತ್ತಿಗೆ ಬಹಳ ಸಮಯದಿಂದ ಯುದ್ಧವನ್ನು ನಡೆಯಿಸುತ್ತಿದ್ದಾರೆ.

1937ರಲ್ಲಿ ಈ ಪ್ರದೇಶವನ್ನು ಬ್ರಿಟನು ತನ್ನದು ಮಾಡಿಕೊಂಡಿತು. ಅಲ್ಲಿ ಮೊದಲಿರುವ ಸುಲ್ತಾನನು ಪದಚ್ಯುತನಾಗಿ ಹಿಂದೂದೇಶಕ್ಕೆ ತೆರಳಬೇಕಾಯಿತು. ಅಲ್ಲಿನ ಮೂಲನಿವಾಸಿಗಳು ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಹೊರಟಿರುವರು. ಅವರಿಗೆ ತಕ್ಕ ಬುದ್ಧಿವಾದ ಮಾಡಲು ಬ್ರಿಟಿಷರು ಅಲ್ಲಿ ಬಾಂಬುಗಳನ್ನು ಉಪಯೋಗಿಸುತ್ತಿದ್ದಾರೆ— ಸಾಮ್ರಾಜ್ಯಶಾಹಿ ಹಿತರಕ್ಷಣೆಗಾಗಿ.

ಬ್ರಿಟನಿಗೆ ಇಟಲಿಯ ಹೆದರಿಕೆಯಿರುವುದರಿಂದಲೆ ಅವರು ಏಡನ್ನಿನಲ್ಲಿ ಸೈನ್ಯಸಂಗ್ರಹವನ್ನು ಹೆಚ್ಚಿಸುತ್ತಿದ್ದಾರೆ. ಬಾಂಬುಗಳ ಮೂಲಕ ಅರಬಿಯರೊಡನೆ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಆಂಗ್ಲೊ ಐಯರ್ ಒಪ್ಪಂದ

ಇಂಗ್ಲಾಂಡಿಗೂ, ಸ್ವತಂತ್ರ ಐಯರ್ಲೆಂಡಿಗೂ ಒಂದು ಒಪ್ಪಂದವು ನಡೆದು ಬಿಟ್ಟಿತು. ಈ ಒಪ್ಪಂದದಿಂದ ಇಂಗ್ಲೆಂಡು, ಐಯರ್ಲೆಂಡು ಸ್ವತಂತ್ರವೆಂದು ಮನ್ನಿಸುತ್ತದೆ. ಐಯರ್ಲೆಂಡನ್ನು ವಿಭಾಗಿಸುವ ಪ್ರಶ್ನೆಯು ಇನ್ನೂ ಇತ್ಯರ್ಥವಾಗಲಿಲ್ಲ.

ಶುದ್ಧ ಕಾಂಗ್ರೆಸ್ ಕಮಿಟಿಗಳಾಗಬೇಕು

ಕಾಂಗ್ರೆಸ್ಸಿನಿಂದ ಅಯೋಗ್ಯ ಸದಸ್ಯರನ್ನು ಹೊರಮಾಡಿ ಕಾಂಗ್ರೆಸ್ಸನ್ನು ಪರಿಶುದ್ಧಗೊಳಿಸುವ ಚಳವಳವೊಂದು, ವಿಶಾಖ ಪಟ್ಟಣದಲ್ಲಿ ಪ್ರಾರಂಭವಾಗಿರುತ್ತದೆ.

ಸ್ವಯಂ ಸೇವಕರು ಮುಂದಕ್ಕೆ ಖಾತ್ರಿಯಾದ ಕಾಂಗ್ರೆಸ್ ವಾಲರನ್ನೆ ಕಾಂಗ್ರೆಸ್ ಸದಸ್ಯರನ್ನಾಗಿ ಕೂಡಿಸಬೇಕಾಗಿಯೂ, ಈ ಕ್ರಮವನ್ನಾಚರಿಸುತ್ತಾ ಹೋದರೆ ಸ್ವಲ್ಪ ಸಮಯದಲ್ಲಿ ಕಾಂಗ್ರೆಸ್ಸನ್ನು ಪರಿಶುದ್ಧಗೊಳಿಸಬಹುದೆಂದೂ ಸೂಚಿಸಿ, ಇಲ್ಲಿನ ಸ್ವಯಂ ಸೇವಕರು ಕೆಲವರು ಹರಿಜನ ಪತ್ರಿಕೆಯಲ್ಲಿ ಒಂದು ಪತ್ರವನ್ನು ಬರೆದಿರುವರು. ಕಾಂಗ್ರೆಸ್ಸಿನೊಳಗೆ ಯಾವತರ್ಹ ತರದ ಅನ್ಯಾಯಗಳು ನಡೆಯದಂತೆ, ಈ ಸ್ವಯಂ ಸೇವಕರು ಜಾಗ್ರತೆ ನೋಡುವರಂತೆ.

ಚೀನಾಕ್ಕೆ ಖಂಡಿತವಾಗಿಯೂ ಜಯ ಲಭಿಸುವುದು

ಚೀನಾ ಜಪಾನ್ ಯುದ್ಧದ ಫಲಿತಾಂಶವು ಏನೆ ಆಗಲಿ, ಚೀನಾದಲ್ಲಿ ಮುಂದಕ್ಕೆ ಬ್ರಿಟಿಷ್ ಇತ್ಯಾದಿ ಅನ್ಯ ಜನಾಂಗಗಳಿಗೆ ಆಸ್ಪದವೇ ದೊರಕದು. ಒಂದು ವೇಳೆ ಜಪಾನು ವಿಜಯಿಯಾದರೂ, ಅದು ಚೀನಾದಲ್ಲಿ ಅನ್ಯ ಜನಾಂಗಗಳಿಗೆ ಎಂದೂ ಎಡೆ ಕೊಡದು. ಜಪಾನಿಗೆ ಸೋಲು ಒದಗುವುದಾದರೆ, ಅದಕ್ಕೆ ಚೀನಾದೊಡನೆ ಒಪ್ಪಂದಗಳನ್ನು ಬೆಳೆಯಿಸಬೇಕಾಗಿ ಬರುವುದು. ಹೀಗಾದರೆ, ಚೀನಾ ದೇಶದ ಸರಕಾರಕ್ಕೆ ತನ್ನ ಮುಂಚಿನ ಪ್ರದೇಶದ ಮೇಲೆ ಸಂಪೂರ್ಣ ಹತೋಟಿಯು ದೊರಕುವುದು; ಆದರಿಂದಲೂ ಅನ್ಯ ಜನಾಂಗಗಳಿಗೆ ಚೀನಾದಲಿ ಸುಖವು ದೊರಕದು ಎಂಬುದಾಗಿ ಚೀನಾಕ್ಕೆ ತೆರಳಿದ ಪ್ರಸಿದ್ಧ ಬರೆಹಗಾರರೊಬ್ಬನ ಅಭಿಪ್ರಾಯ.

ಅವರು ಹೇಳುವ ಪ್ರಕಾರ, ಚೀನಾಕ್ಕೆ ಜಯ ಒದಗುವುದು ಖಂಡಿತ. ಚೀನಾ ಜಪಾನ್ ಯುದ್ಧದಿಂದ ಚೀನಿಯಲ್ಲಿರುವ ಬೇಧಗಳೆಲ್ಲ ಮಾಯವಾಗಿ, ಎಲ್ಲಾ ಪಕ್ಷಗಳು ಐಕ್ಯ ಹೊಂದಿಕೊಂಡು, ದೇಶ ರಕ್ಷಣೆಗಾಗಿ ಕಾದಾಡುತ್ತಿದ್ದಾರೆ. ಜಪಾನನ್ನು ಹೊರ ಓಡಿಸಲು, ಚೀನದ ಎಲ್ಲಾ ಕಡೆಗಳಿಂದ ಸೈನಿಕರು ಮುಂದೆ ಬಂದಿರುವರು.

ಯುದ್ಧ ನೆಪದಲ್ಲಿ ಚೀನದಲ್ಲೀಗ ಮಾರ್ಗೋಪಾಯ ಇತ್ಯಾದಿಗಳ ರಚನಾಕಾರ್ಯವು ಅತಿ ಬಿರುಸಾಗಿ ನಡಿಯುತ್ತಿದೆ. ಅಲ್ಲದೆ ಚೀನದಲ್ಲಿ ಇತರ ಅನೇಕ ಮಾರ್ಪಾಟುಗಳು ನಡೆದುಬಿಡುವವು. ಚೀನಿಯ ತರುಣರಲ್ಲಿ ಉಂಟಾದ ಹೊಸ ಭಾವಗಳಿಂದ ಅಲ್ಲಿ ಮುಂದಕ್ಕೆ ಅನ್ಯರಿಗೆ ಎಡೆ ದೊರಕುವ ಕುರಿತು ತುಂಬ ಸಂದೇಹಗಳುಂಟಾಗಿವೆ.

ಆಸ್ಟ್ರಿಯಾ ಪ್ರಕರಣದಲ್ಲಿ ಮುಸಲೆನಿಯ ಪಾತ್ರ

ಹಿಟ್ಲರನು ಆಸ್ಟ್ರಿಯಾವನ್ನು ವಶೀಕರಿಸಿದ ಕುರಿತು, ಈಗಲೂ ಐರೋಪ್ಯದಲ್ಲಿ ಟೀಕಾಟೀಕೆಗಳು ನಡೆಯುತ್ತಿದೆ. ಮುಸಲೆನಿಯು ಆಸ್ಟ್ರಿಯವು ಜರ್ಮನಿಗೆ ಕೈಸೇರುವ ಕುರಿತು ಕಡುವಿರೋಧಿಯಾಗಿದ್ದರೂ, ಇತರ ಕಾರಣಗಳಿಂದ, ಹಿಟ್ಲರನಿಗೆ ಬಗ್ಗಬೇಕಾಯಿತೆಂಬುದಾಗಿ ಬಲವಾದ ವಾರ್ತೆಗಳಿವೆ.

ಬೆಲ್ಜಿಯಮ್ಮಿನ ಸ್ವಾತಂತ್ರ್ಯವು ಬ್ರಿಟನಿಗೆ ಎಷ್ಟು ಮಹತ್ತರದೋ ಅದೇ ತೆರದಲ್ಲಿ ಆಸ್ಟ್ರಿಯಾದ ಸ್ವಾತಂತ್ರ್ಯವು ಇಟಲಿಗೆ ಮಹತ್ತರದ್ದಾಗಿತ್ತು. ಹೀಗೆಂದು ಮುಸಲೆನಿ ಹಿಂದೆ ತನ್ನ ಅನೇಕ ಭಾಷಣಗಳಲ್ಲಿ ಸೂಚಿಸಿದ್ದನು.

"ಆಸ್ಟ್ರಿಯಾ ಸ್ವಾತಂತ್ರ ರಕ್ಷಣೆಗಾಗಿ ಇಟಲಿ ಯಾವಾಗಲೂ ಮುಂದೆ ಬರಲು ಸಿದ್ಧವಿದೆ" ಎಂದು ಅಂದು ಡಾ। ಡೊಲ್ಫಸ್‌ನ ಕೊಲೆ ನಡೆದಾಗ ಮುಸಲೇನಿಯು ಅಂದಿದ್ದನು. ಆದರೆ ಇಟಲಿಯು ಈಗ ಯಾವುದೋ ಕಾರಣಗಳಿಂದಾಗಿ ಆಸ್ಟ್ರಿಯಾದ ಸ್ವಾತಂತ್ರವನ್ನು ರಕ್ಷಿಸದೆ, ಅದನ್ನು ಹಿಟ್ಲರನು ನುಂಗುತ್ತಿರುವಾಗ ಸುಮ್ಮನೆ ನೋಡಬೇಕಾಯಿತು.

ಹಿಟ್ಲರನ ಮೇಲೆ ಕೈಮಾಡಲು ಸದ್ಯಕ್ಕೆ ಮುಸಲೆನಿಯೊಡನೆ ತಕ್ಕ ಏರ್ಪಾಡಾಯಿರದಿರುವುದರಿಂದಲೆ, ಮುಸಲೆನಿಯು ಸುಮ್ಮನಿರಬೇಕಾಯಿತಂತೆ.

ಹಿಟ್ಲರನು ಬಲು ಜಾಣನೆಂದೇ ತಿಳಿಯಬೇಕಾಗಿದೆ.

ಪಂಡಿತ ಮಾಲವೀಯರಿಗೆ ಕಾಯಕಲ್ಪದ ವಿಪರೀತ ಪರಿಣಾಮ

ಪಂ ಮದನಮೋಹನ ಮಾಲವೀಯರು ಗಂಗಾತೀರದಲ್ಲಿ ಕಾಯಾಕಲ್ಪ ಉಪಚಾರದಿಂದ ಹೋದ ಹರೆಯನ್ನು ತಿರುಗಿಸಿಕೊಂಡರೆಂಬ ವಾರ್ತೆಯು, ಪತ್ರಿಕೆಗಳನ್ನೆಲ್ಲ ದೀರ್ಘವಾಗಿ ವ್ಯಾಪಿಸಿ ಜನರನ್ನು ದಂಗು ಬಡಿಸಿದ್ದು ನಮ್ಮ ವಾಚಕರಿಗೆ ತಿಳಿದೇ ಇದೆ. ಆದರೆ ಆ ಉಪಚಾರವು ಮುಗಿದ ಮೇಲೆ, ಪಂ ಮಾಲವೀಯರಿಗೆ ಅವರ ಪರಿಣಾಮವು ವಿಪರೀತವಾದ ಚಿಹ್ನೆಗಳು ತೋರಿಬರುತ್ತಿವೆ. ಉಪಚಾರಕ್ಕಿಂತ ಮುಂಚೆ ಅವರಿಗೆ ಸರಿಯಾಗಿ ನಿದ್ದೆ ಬರುತಿತ್ತು. ಈಗ ಬಹಳ ರಾತ್ರಿಯನ್ನು ನಿದ್ದೆ ಹತ್ತದೆ ಜಾಗರಣೆಯಲ್ಲಿ ಕಳೆಯಬೇಕಾಗುತ್ತದೆ. ಹಸಿವೆಯೂ ಚೆನ್ನಾಗಿ ಆಗುವದಿಲ್ಲ. ಮತ್ತು ತಿಂಬುಂಬುವ ಪದಾರ್ಥಗಳ ಬಗ್ಗೆ ಅವರು ಬಹಳ ಚಿಕಿತ್ಸೆ ಮಾಡತೊಡಗಿದ್ದಾರೆ. ಕಾಯಕಲ್ಪದ ಬಗ್ಗೆ ಮಾಲವೀಯರು ಬಹಳ ದಿನಗಳ ಹಿಂದೆಯೇ ಒಂದು ಪತ್ರಿಕೆಯನ್ನು ತಯಾರಿಸಿದ್ದು ಕೆಲವೊಂದು ಗುಪ್ತಕಾರಣಗಳ ದೆಶೆಯಿಂದ ಅದನ್ನು ಪ್ರಸಿದ್ಧ ಪಡಿಸುವದನ್ನು ತಡೆದಿದ್ದಾರೆ. ಪ್ರಯೋಗದಿಂದಾಗುವ ವ್ಯತ್ಯಾಸ ಪರಿಣಾಮವನ್ನು ನೋಡಿಕೊಂಡೇ ಪತ್ರಿಕೆಯನ್ನು ಪ್ರಕಟಿಸುವರೆಂದು ತಿಳಿದುಬರುತ್ತದೆ.

ಚೀನಾ—ಜಪಾನ್ ಯುದ್ಧ
ಉಭಯ ಪಕ್ಷದ ತೀವ್ರ ಸಿದ್ಧತೆಗಳು.

ಚೀನಿಯರನ್ನು ಸಂಪೂರ್ಣವಾಗಿ ನಾಶ ಮಾಡಲು ಜಪಾನಿಯರ ಬಹಳ ಪ್ರಯತ್ನ ಮಾಡುತ್ತಿದ್ದಾರೆ.

ಲಿಂಗಿಯ ಪ್ರಾಂತದಲ್ಲಿ 8 ಲಕ್ಷ ಚೀನ ಸೈನಿಕರನ್ನು ಸರಕಾರದವರು ಜಮಾಯಿಸಿದ್ದಾರೆ. ರಾತ್ರಿ ಹಗಲೂ ಏಕರೀತಿಯಾಗಿ ಚೀನರ ಸೈನ್ಯವು ಲಿಂಗಿಯ [illegible] ತ್ತಿದೆ.

ಚೀನ [illegible] ಗುಪ್ತ ಸೈನ್ಯ ಪಡೆಯು ರಹಸ್ಯವಾದ ಸ್ಥಳಕ್ಕೆ ಕಳಿಸಲ್ಪಟ್ಟಿದೆ. ಜಪಾನ್ ಸೈನ್ಯದ ಮೇಲೆ ಇದ್ದಕ್ಕಿದ್ದ ಹಾಗೆ ಬಿದ್ದು ದಾಳಿ ನಡೆಸಬೇಕೆಂದು ಈ ಸೈನ್ಯವು ಬಹಳ ರಹಸ್ಯವಾಗಿ ಸಿದ್ಧತೆಗಳನ್ನು ಮಾಡುತ್ತಿರುವುದಾಗಿ ತಿಳಿದುಬಂದಿದೆ.

ಹೀಗೆ ಉಭಯ ಪಕ್ಷದವರೂ ಒಬ್ಬರನ್ನು ಇನ್ನೊಬ್ಬರು ನಿರ್ನಾಮ ಮಾಡಲು ಭಗೀರಥ ಪ್ರಯತ್ನ ಪಡುತ್ತಿದ್ದಾರೆ. ಲಿಂಗಿಯ ಪ್ರಾಂತ್ಯದಲ್ಲಿನ ಚೀನಾ ದೇಶಿಯರನ್ನೆಲ್ಲಾ ಆ ಪ್ರಾಂತ್ಯದಿಂದ ಹೊರಗೆ ಕಳುಹಿಸುತ್ತಿದ್ದಾರೆ. ಈ ಸಮರದಲ್ಲಿ ಚೀನರು ಗೊರಿಲ್ಲಾ ಸಮರತಂತ್ರವನ್ನು ಅನುಸರಿಸಿ ಯುದ್ಧ ಮಾಡಬಹುದೆಂದು ಗೊತ್ತಾಗಿದೆ.

ಲಿಂಗಿಯ ಪ್ರಾಂತ್ಯವು ತಮ್ಮ ಕೈಬಿಟ್ಟು ಹೋಗಿದೆಯೆಂದು ಚೀನಾ ಸರಕಾರದವರೇ ಒಪ್ಪಿಕೊಂಡಿದ್ದಾರೆ. ಈ ಸಮರದ ಜಯಾಪಜಯಗಳು ಚೀನಾ ಸ್ವಾತಂತ್ರ್ಯದ ಭವಿಷ್ಯವನ್ನು ನಿರ್ಧರಿಸುವುದೆಂದು ಇಲ್ಲಿನ ರಾಜಕಾರಣ ಪಟುಗಳು ಅಭಿಪ್ರಾಯಪಡುತ್ತಿದ್ದಾರೆ.

ತುರ್ಕಿಸ್ತಾನದಲ್ಲಿ ಮಹತ್ತರ ಭೂಕಂಪ
ಹತ್ತಾರು ಹಳ್ಳಿಗಳು ನಿರ್ನಾಮವಾದುವು ಸುಮಾರು ೮೦೦ ಮಂದಿ ಮೃತರಾದರು

ಮಧ್ಯ ಅಂಟೋಲಿಯಾದಲ್ಲಿ ತಾ [illegible] ರಲ್ಲಿ ನಡೆದ ಭೂಕಂಪದ ಫಲವಾಗಿ ಸುಮಾರು 800 ಜನರು ಮೃತರಾಗಿದ್ದಾರೆಂದು ಶಂಕಿಸಲಾಗಿದೆ. ಭೂಕಂಪ ನಡೆದ ಜಿಲ್ಲೆಗಳಲ್ಲಿ ಮಹತ್ತರ ನಷ್ಟವಾಗಿದೆಯೆಂದು ತಿಳಿದುಬಂದಿದೆ. ತುರ್ಕಿಸ್ತಾನದಲ್ಲಿ ಹಿಂದೆಂದೂ ಇಂಥಾ ಅನಾಹುತವು ಸಂಭವಿಸಿಲ್ಲ.

18 ಹಳ್ಳಿಗಳು ಈ ಅನಾಹುತದ ಫಲವಾಗಿ ಸಂಪೂರ್ಣವಾಗಿ ನಿರ್ನಾಮವಾಗಿವೆ. ಸುಮಾರು 22 ಹಳ್ಳಿಗಳಲ್ಲಿ ಬಹಳ ಮಟ್ಟಿಗೆ ನಷ್ಟವಾಗಿದೆ.

ಇತ್ತೀಚೆಗೆ ಉಂಟಾದ ಕಂಪನಗಳೊಡನೆ ಭೂಗರ್ಭವು ಗುಡುಗಿತು. ಈ ಗುಡುಗಾಟವು ಅಸಾಧ್ಯವಾದ ಗುಡುಗಾಟವಾಗಿತ್ತು. ಈ ಗುಡುಗಾಟವನ್ನು ಕೇಳಿ ಜನರು ಸ್ತಂಭೀಭೂತರಾದರು.

ಈ ಭೂಕಂಪದ ಫಲವಾಗಿ ಸುಮಾರು 50 000 ಜನರಿಗೆ ವಸತಿಯಿಲ್ಲದಂತಾಗಿದೆಯೆಂದು ಅಂದಾಜು ಮಾಡಲಾಗಿದೆ.

ಜೆಕೊಸ್ಲೊವೆಕಿಯಾದ ಭದ್ರತಾ ಏರ್ಪಾಡುಗಳು.

ಆಸ್ಟ್ರಿಯಾದ ಕಡೆಯಲ್ಲಿರುವ ತನ್ನ 800 ಮೈಲು ಉದ್ದದ ಗಡಿಯನ್ನು ಭದ್ರ ಪಡಿಸುವರೆ 8 ಮಿಲಿಯ ಪವನುಗಳನ್ನು ವ್ಯಯಿಸಬೇಕಾಗಿ ಜೆಕೊಸ್ಲೊವೆಕಿಯಾ ಸರಕಾರದ ನಿರ್ಧಾರವಾಗಿರುತ್ತದೆ.

ಅಲ್ಲಿ ಕೋಟೆ ಕೊತ್ತಳಗಳನ್ನು ರಚಿಸುವರೆ, ಈಗಲೆ 75 ಸಾವಿರ ಮಂದಿಗಳು, ದುಡಿಯುತ್ತಿದ್ದಾರೆ.

ಇದಲ್ಲದೆ ಜೆಕೊಸ್ಲೊವಿಕಾದ ಹಂಗೇರಿಯಾ ಗಡಿಯನ್ನು ಭದ್ರಪಡಿಸುವರೆ ಅಲ್ಲಿನ ಸಂಗಮಾಧಿಕಾರಿಗಳು ಆಲೋಚಿಸುತ್ತಿದ್ದಾರೆ.

ಜೆಕೊಸ್ಲೊವೆಕಿಯಾದ ಜರ್ಮನ್ ಗಡಿಯನ್ನು ಭದ್ರಪಡಿಸುವ ಕೆಲಸವು ಎಂದೊ ನಡೆದು [illegible]

ಎಂ ಎಲ್ ಎ, ಪದವಿಯನ್ನು ಹೊಂದಿದ [illegible] ಕೆಲಸಗಾರ

[illegible] ಪ್ಪನವರು, ಇಂಥ ಉನ್ನತ ಪದವಿಗೆ [illegible] ಮಧ್ಯಪ್ರಾಂತ್ಯದ ಶ್ರೀ ಕಾಳಪ್ಪನವರು, ತಮ್ಮ ಗುಣ ವಿಶೇಷತೆಯಿಂದ ಪತ್ತು ಅತ್ಯಂತ ಪರಿಶ್ರಮದಿಂದ ಮೇಲಕ್ಕೆ ಬಂದವರು. ಶ್ರೀ ಎ ಆರ್ ಕಾಳಪ್ಪನವರ ಮಧ್ಯಪ್ರಾಂತ್ಯದ ಮಜೂರ ನಾಯಕರು [illegible] ಗ್ರೆಸ್ ಎಂ ಎಲ್ ಎ ಗಳು, ಕಳೆದವಾರ ನಾಗಪುರದಲ್ಲಿ ಜರಗಿದ ಎ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಡಲು ಇವರೆ ಕಾರಣರು.

ಶ್ರೀ ಕಾಳಪ್ಪನವರು ದಿನ ಒಂದರ ಎಂಟಾಣೆ ಕೂಲಿಯ ಮೇಲೆ, ಇಲೆಕ್ಟ್ರಿಕ್ ಎಂಜಿನಿಯರಾಗಿ ತಮ್ಮ ಜೀವಮಾನವನ್ನು ಪ್ರಾರಂಭಿಸಿದವರು. ಆಗಲೂ ಯಜಮಾನರಿಂದ ಕೆಲಸಗಾರರಿಗೆ ದೊರಕುವ ಮಾನತೆಯ ಕುರಿತು ತುಂಬಾ ಅಸಮಾಧಾನವನ್ನು ತೋರಿಸಿದವರು.

ಇಂಡಿಯನ್ ಲೆಬರ್ ಜನರಲ್ ಎಂಬ ಪತ್ರಿಕೆಯ ಸ್ಥಾಪಕರು. ಅದು ಈಗಲೂ ನಡೆಯುತ್ತಿದೆ. 1927ರಲ್ಲಿ ನಡೆದ ಜಿ. ಐ. ಪಿ. ರೈಲ್ವೆ ಮುಷ್ಕರವನ್ನು ವ್ಯವಸ್ಥೆಗೊಳಿಸಿದವರು. 1929ರಲ್ಲಿ ಹಿಂದೂದೇಶದ ಮಜೂರರ ಪರವಾಗಿ ಜಿನಿವಾಕ್ಕೆ ಕಳುಹಿಸಲ್ಪಟ್ಟವರು.

ಐರೋಪ್ಯದಲ್ಲಿ ಪ್ರವಾಸ ಬೆಳೆಯಿಸಿ, ಅಲ್ಲಿನ ಮಜೂರರ ಸ್ಥಿತಿಗತಿಗಳನ್ನು ಅರಿತು ಬಂದವರು. ಮಜೂರರಿಗಾಗಿ ಶ್ರಮಿಸುವುದೆ ಶ್ರೀ। ಕಾಳಪ್ಪನವರ ಜೀವನದ ಧ್ಯೇಯವಾಗಿರುತ್ತದೆ.

— — —

NOTICE

ಫ್ರೆಂಚ್ ಪತ್ರಿಕೆ ಎನ್ನುವರು. ಆಫ್ರಿಕ ಮತ್ತು ... ಮುಸೋಲಿನಿಗೆ ಮುಂ ದರಿಯಲು ನಾನಾ ... ಗಳನ್ನು ಕೊಟ್ಟು, ... ಯುರೋಪಿನಲ್ಲಿ ಜರ್ಮನಿಯು ಸ್ವೇಚ್ಛೆ ಯಾಗಿ ವಸರುವಂತೆ ಹಿಟ್ಲರನು ಮುಸ್ಸೋಲಿನಿಗೆ ಸೂಚನೆ ಕೊಟ್ಟು ಕೃತಕೃತ್ಯನಾಗುವನಾಗಿ ಇವರ ನಂಬಿಕೆ. ಆದರೆ, ಮುಸ್ಸೋಲಿನಿಯು ಒಕ್ಕಟ್ಟಿಗೆ ಪ್ರಯತ್ನಿಸುವನಲ್ಲದೆ ತಾನಾಗಿ ಯುದ್ಧವನ್ನು ಅಪೇಕ್ಷಿಸುವಂತಿಲ್ಲ. ಜರ್ಮ ನಿಯು ತಟಸ್ಥವಾಗಿಯೆ ಇರಬೇಕಲ್ಲದೆ, ಇನ್ನು ಇಟಲಿಯು ಮುಂದರಿಯುವಾಗ ಸಹಾಯಕ್ಕೊ ದಗಲಾರದು. ಹಾಗೆಂದು ಇಟಲಿಯು ವಸಾ ಹತು ಸ್ಥಾಪನೆಗೆ ತೊಡಗುವುದು ಜರ್ಮನಿಗೆ ವಿಹಿತವಾಗಿದೆ. ಮುಸ್ಸೋಲಿನಿಯೂ ಇನ್ನು ಮೂರನೆಯದೊಂದು ಯುದ್ಧವಿದೆ ಎಂದು ಕೆಲ ವೇ ದಿನಗಳ ಹಿಂದೆ ನುಡಿದುದುಂಟು. ಇಟಲಿಯ ವ್ಯಾಪಾರಾರ್ಥಗಳಿಗೆ ಹೆಚ್ಚಿನ ಸೌಕರ್ಯ ಸಿಗುವಂತೆ ಬೇರೇನೋ ಚಳವಳ ನಡೆಯಬಹು ದು ಇದನ್ನು ಓದಿದರೆ, ಬಹುಶಃ ಮುಸ್ಸೊ ಲಿನಿಗೆ ತನ್ನ ಮನಸ್ಸೇ ಸರಿಯಾಗಿ ತಿಳಿದಿಲ್ಲ ವೆಂದೂ ಆದರೆ ಜನರಿಗೆ ಮಾತ್ರ ಕುತೂಹಲ ಎಬ್ಬಿಸಲು ಇದೊಂದು ಭಾಷಣವೆಂದೂ ಅರ್ಥ ವಾಗುವುದು.

ಇಂಗ್ಲೆಂಡು ಫ್ರಾನ್ಸುಗಳೊಡನೆ ಆಗುವ ಕರಾರುಗಳನ್ನು ಮುಸ್ಸೋಲಿನಿಯು ಮುರಿಯು ವಂತಿಲ್ಲ. ಜರ್ಮನಿಯೊಡನೆಯೂ ಬಾಂಧವ್ಯ ಬಿಡುವಂತಿಲ್ಲ, ಇನ್ನಷ್ಟು ಬಿಗಿಯಾಗಿಯೆ ಇರ ಬೇಕಾಗುವುದು. ಜರ್ಮನಿಗೆ ಬ್ರಿಟಿಷರೊಡನೆ ಕರಾರಾಗುವುದು, ಇಟಲಿಗಿಂತ ಅಗತ್ಯವೇ ಆಗಿದೆ.

ಹೀಗಾಗಿ, ಭಾರೀ ದರ್ಪದ ಭಾಷಣ ಗಳಾಗಿ ಜನತೆಗೆಲ್ಲ ಅತ್ಯುಲ್ಲಾಸ ಉದ್ರೇಕಗಳಾ ಗುವುದುಂಟು. ಈ ಭಾಷಣಗಳನ್ನು ಜರ್ಮನಿಗೆ ತಿಳುಹಲು ೮೦ ಮಂದಿ ಬಾತ್ಮಿದಾರರ ಸೈನ್ಯವೇ ಇಟಲಿಗೆ ಬಂದಿದೆ. ಒಂದೂವರೆ ಮಿಲ್ಲಿಯ ಪವನು ವ್ಯಯಿಸಿ ನಗರಶೋಭೆ ಹೆಚ್ಚಿಸಲಾಗಿದೆ. ಇಡೀ ರಸ್ತೆಯೆಲ್ಲ ಕಾವಲು ಇಟ್ಟು ವಿಜೃಂಭಣೆ ಯಿಂದ ಮೆರವಣಿಗೆಗಳಾಗುವುವು.

ಜೆಕೊಸ್ಲೊವಾಕಿಯದ ಮಾತೇ ಮುಖ್ಯ. ಈ ರಾಜ್ಯಕ್ಕಿಂತ ಆಸ್ಟ್ರಿಯದಲ್ಲೇ ಇಟಲಿಗೆ ಪ್ರೇಮ ಹೆಚ್ಚಾಗಿತ್ತು. ಅದೆಂತೂ ಮಾಯ ವಾಗಿ ಜರ್ಮನಿಯ ಪಾಲಾಯಿತು. ಡೆನ್ಯೂಬ್ ಪ್ರದೇಶದಲ್ಲಿ ಇಟಲಿಗಿದ್ದ ಪ್ರಮುಖತೆ ಕುಂದುತ್ತ ಬಂದಿದೆ. ಹೀಗಿರುತ್ತ ಜೆಕೊಸ್ಲೊವಾಕಿಯದ ಹಣೆಯ ಬರಹವನ್ನು ಸರಿಯಾಗಿ ಇಟಲಿಯು ತಿದ್ದಬೇಕಾಗಿದೆ. ಈ ರಾಜ್ಯವನ್ನು ಕುರಿತಾಗಿ ಜರ್ಮನಿಯು ಏನು ಮಾಡಲಿರುವುದೋ ಎಂಬುದನ್ನು ಹಿಟ್ಲರನಿಂದ ಖಂಡಿತವಾಗಿ ಮುಸ್ಸೊಲಿನಿ ತಿಳಿದುಕೊಳ್ಳದಿರಲಾರನು. ಇದನ್ನು ತಿಳಿದ ಬಳಿಕ, ವಿಲಾಯಿತಿಯಲ್ಲೆಲ್ಲ ಶಾಂತಿಯೋ ಯುದ್ಧವೋ ಎಂದು ನಿರ್ಧರಿಸ ಬಂದೀತು. ಇದಾದ ಬಳಿಕವೂ ರಷ್ಯದ ಮಾತು ಉಳಿಯುವುದು. ಕೊಮ್ಯುನಿಸ್ಟರಿಗೆ ವಿರುದ್ಧ ವಾಗಿರುವ ಈ ಎರಡು ರಾಷ್ಟ್ರಗಳು ರಷ್ಯದ ವಿಷಯ ಏನಾದರೂ ಅಭಿಪ್ರಾಯ ತಿದ್ದಕೊಳ್ಳ ಬಹುದೇ? ನಂಬಬರುವಂತಿಲ್ಲ. ಜೆಕೊಸ್ಲೊ ವಾಕಿಯದ ಮೇಲೆ ರಷ್ಯವನ್ನು ನುಗ್ಗಿಸ ಅನು ಕೂಲತೆಗಾಗಿಯೆ ಜರ್ಮನಿಯು ಆಶಾದೃಷ್ಟಿ ಯನ್ನಿಟ್ಟಿದೆ. ರಷ್ಯವನ್ನು ಹಾಗೆಯೆ ಬಿಟ್ಟು, ಮಿಕ್ಕೆಲ್ಲ ರಾಷ್ಟ್ರಗಳು ಸಾಮುದಾಯಿಕ ಭದ್ರತೆ ಗೊಪ್ಪಿಕೊಂಡರೆ, ಜರ್ಮನಿ ರಷ್ಯಗಳೊಳಗೆ ವ್ಯತಿಕ್ರಿಯೆ ಸಾಧ್ಯವಾಗುವಂತಹ ಕರಾರೇನೊ ಆದಲ್ಲಿ, ಶಾಂತಿ ಉಳಿದೀತು. ಇಲ್ಲದಿದ್ದಲ್ಲಿ, ಎಲ್ಲ ರಾಷ್ಟ್ರಗಳೂ ಜರ್ಮನಿಯಂತೆ ರಷ್ಯವನ್ನು ಬಹಿಷ್ಕರಿಸಿ ಮಾತ್ರ ಒಕ್ಕಟ್ಟಿನಿಂದ ಬಾಳ ಬಹುದು. ಅದು ಸಾಧ್ಯವಲ್ಲದ ಕಾರಣ, — ಶಾಂತಿ ಉಳಿಯದು.

ಹರ್ ಹಿಟ್ಲರ್

ಮಹಾತ್ಮಾಜಿಯವರ ಸಂಚಾರ

ಗಡಿನಾಡಿನಲ್ಲಿ ವಿಶೇಷ ಕೋಲಾಹಲ

ಬರೇ ಸಂದರ್ಶನೆ ಮಾತ್ರವಲ್ಲ; ಮಹತ್ವದ ವಿಚಾರಗಳೂ ಇವೆ.

ಗಡಿನಾಡಿನ ಗಾಂಧಿಯವರ ಮನೆ ನೋ ಡುತ್ತ ಅಲ್ಲಿನ ಅತಿಥಿಯಾಗಿರುವುದಕ್ಕೋ ... ಮಹಾತ್ಮಾಜಿಯವರು ಹೋದುದಲ್ಲ. ಪೇಶಾ ವರದಲ್ಲಿನ ಕಾಂಗ್ರೆಸ್ ಮುಖಂಡರಿಗೆ ರಾಜ ಕೀಯ ಪ್ರಸಂಗಗಳಲ್ಲಿ ಉಂಟಾಗಿರುವ ನಾನಾ ಸಂಶಯಗಳನ್ನು ನಿವಾರಿಸುವುದಕ್ಕೂ, ಗಡಿನಾ ಡಿನ ವಿಚಿತ್ರ ವಿದ್ಯಮಾನಗಳನ್ನು ಕುರಿತಾಗಿ ವಿಮರ್ಶಿಸುವುದಕ್ಕೂ, ಸೋಶಲಿಸ್ಟರು ಕಾಂಗ್ರೆ ಸಿಗೆ ಅಲ್ಲಿ ಸೇರಬಾರದಾಗಿ ಕಟ್ಟು ಉಂಟಾದು ದನ್ನು ತೀರ್ಮಾನಿಸುವುದಕ್ಕೂ ಖುದಾಯಿ ಖಿದ್‌ಮತಗಾರರಂತಹ ಉತ್ತಮ ವ್ಯವಸ್ಥೆ ಯುಳ್ಳ ಸಂಸ್ಥೆ ಇರುವಾಗ ಮತ್ತೊಂದು ಸೋಶ ಲಿಸ್ಟ್ ಸಂಗಡವು ಬೇಡವೆಂದು ಅಲ್ಲಿರುವ ವಿವಾದವನ್ನು ಇತ್ಯರ್ಥಗೊಳಿಸುವುದಕ್ಕೂ ಇದು ಒಳ್ಳೆಯ ಸಂದರ್ಭವಾಗಿದೆ. ಮಹಾತ್ಮಾಜಿ ಯವರ ಆರೋಗ್ಯವು ಚೆನ್ನಾಗಿಲ್ಲದುದರಿಂದ ಅವರ ಕಾರ್ಯಕ್ರಮಾದಿಗಳನ್ನು ತಿದ್ದಿ ಸಂಕೋಚ ಗೊಳಿಸಲಾಗಿದೆ.

ಪೇಶಾವರದಲ್ಲಿ ೧೫೦೦೦ ಜನರು ಕೂಡಿ ದ್ದರು. ಡಾ॥ ಖಾನ್‌ಸಾಹೆಬ್ (ಮುಖ್ಯ ಮಂತ್ರಿಗಳು)ರ ಮನೆಯ ವಠಾರದಲ್ಲಿ ಸಭೆ ಸೇರಿತ್ತು. ಬಲು ದೂರದಿಂದತ್ತ ಬಂದಿದ್ದ ನೂರಾರು ಸ್ತ್ರೀಯರೂ ಇದ್ದದು ವಿಶೇಷ. ೨೦ ನಿಮಿಷಗಳ ವರೆಗೆ ಚಪ್ಪಾಳೆ, ಧ್ವನಿ, ಜಯ ಘೋಷ!

ಖಾನ್ ಅಬ್ದುಲ್ ಗಫರಖಾನರು ಕುರಾ ನಿನಿಂದ ವಾಕ್ಯಗಳನ್ನು ಭಕ್ತಿಯಿಂದ ಹಾಡಿದ ಬಳಿಕ, ಹಿಂದೂ ಮುಸ್ಲಿಮರು ಒಂದಾಗಿ ಬಾಳ



ಗಡಿನಾಡಿನ ಪ್ರಧಾನಮಂತ್ರಿಯವರು

ಬೇಕೆಂದೂ, ಧರ್ಮವು ಪ್ರೇಮವನ್ನೂ ಸ್ವಾತಂ ತ್ರ್ಯವನ್ನೂ ಬೋಧಿಸುತ್ತದೆ. ಜಪ, ಮನುಷ್ಯ ನನ್ನು ಉದ್ಧರಿಸಿ, ಮುಕ್ತಿಗೆ ಕೊಂಡೊಯ್ಯುವು ದೆಂದೂ ವಿವರಿಸಿ, ಸುಮ್ಮನೆ ಹಗೆತನ ಸಂಶಯ ಮೊದಲಾದುವು ಇರಬಾರದೆಂದೂ ಭುಜಕ್ಕೆ ಭುಜವನ್ನೊತ್ತಿ ಮುಂದರಿಯಬೇಕೆಂದೂ ಉತ್ತ ಮೋದ್ದೇಶಕ್ಕಾಗಿ ಬಾಳಿದವರೇ ಬಾಳುವ ರೆಂದೂ, ಹಿಂದೂ ಮುಸ್ಲಿಮರು ಕೂಡಿ ಬೆಳೆದ ಈ ನಾಡಿನಲ್ಲಿ ಸತ್ಯ ವಿಶ್ವಾಸಗಳಿಂದಲೇ ಎಲ್ಲರೂ ಜೀವಿಸುವಂತಾಗಲೆಂದೂ ಪ್ರಾರ್ಥಿಸಿದರು.

ಮುನ್ಸಿಫ್ ಕೋರ್ಟುಗಳನ್ನು ರದ್ದು ಮಾಡದಿರಿ!

ಬದಲಾಗಿ, ಜಡ್ಜರ ಸಂಖ್ಯೆ ಇಳಿಸಿರಿ.

ಒಂದು ಸೂಚನೆ.

ಮದ್ರಾಸಿನ ವಕೀಲ ಶ್ರೀ. ಕೆ. ಭಾಷ್ಯಂ ರವರು ಹೀಗೆ ಸೂಚಿಸುತ್ತಾರೆ:—ಜಡ್ಜರ ಸಂಖ್ಯೆ ಇಳಿಸಿರೆಂದರೆ, ಅವರನ್ನು ಮನೆಗೆ ಕಳುಹಿಸಿ ರೆಂದಲ್ಲ. ಕೋರ್ಟುಗಳು ಇರಲಿ. ಒಬ್ಬ ಜಡ್ಜರು ಹಲವು ಕೋರ್ಟುಗಳಲ್ಲಿ ಕೆಲಸ ನೋಡುವಂತಾಗಲಿ. ತಿಂಗಳಲ್ಲಿ ಕೆಲದಿನ ಗಳಲ್ಲಿ ಒಂದೊಂದು ಕೋರ್ಟಿನಲ್ಲಿ ಅವರು ಕೆಲಸ ನೋಡುವಂತಾದರೆ ಸಾಕು. ಕಕ್ಷಿಗಾರ ರಿರುವಲ್ಲೇ ಕೋರ್ಟು ಇರುವಂತೆಯೂ ಈ ವ್ಯವಸ್ಥೆಯಿಂದಾಗುವುದು. ಅಲ್ಲಲ್ಲಿನ ವಕೀಲ ರಿಗೂ ಇದೇ ಸೌಕರ್ಯವಾದೀತು. ಜಡ್ಜರ ಬೇಸರವೂ ಕಡಿಮೆಯಾದೀತು. ಇದರಿಂದ ಅಲ್ಲಲ್ಲಿನ ಕೋರ್ಟುಗಳಲ್ಲಿರುವ ಶಿರಸ್ತೆದಾರ ರಿಗೆ ಅಧಿಕ ಜವಾಬ್ದಾರಿಯುಂಟಾಗುವುದು; ಆದುದರಿಂದ ಯೋಗ್ಯ ಶಿರಸ್ತೆದಾರರನ್ನೆ ಆ ಕೆಲಸ ನೋಡಲು ಚುನಾಯಿಸಬೇಕಾದೀತು.

ಬಳ್ಳಾರಿಯ ಜಿಲ್ಲಾ ಜಡ್ಜರು ಹೈದರಾ ಬಾದಿನ ರೆಸಿಡೆನ್ಸಿಯಲ್ಲಿ ಹೈಕೋರ್ಟು ಜಡ್ಜರ ಸ್ಥಾನವನ್ನು ಪ್ರತಿ ತಿಂಗಳಲ್ಲಿ ಕೆಲದಿನ ಅಲಂಕ ರಿಸುವುದಿಲ್ಲವೆ? ಚಿತ್ತೂರು ಜಿಲ್ಲಾ ಜಡ್ಜರು ಹೀಗೆಯೆ ಬೆಂಗಳೂರಲ್ಲೂ ಕೆಲಸ ನೋಡುವು ದಿಲ್ಲವೆ? ಈ ವ್ಯವಸ್ಥೆಯಿಂದ ಫಲಿತಾಂಶ ಕೆಟ್ಟಿದಿಲ್ಲವಷ್ಟೆ. ಅದನ್ನೆ ಅನುಸರಿಸಬಾರ ದೇಕೆ?

ಕೆಂಪುಪತಾಕೆ ಮತ್ತು ರಾಷ್ಟ್ರಧ್ವಜ.

ಪೂನಾದಲ್ಲಿ ಶಿವಾಜಿ ಅಖಾಡಾ ವ್ಯಾಯಾಮ ಮಂದಿರದಲ್ಲೊಂದು (ತಾ. ೩) ಗಲಭೆ. ಅಂದು ಒಂದು ಮೆರವಣಿಗೆಯಾಗಿತ್ತು. ಕೆಂಪುಪತಾಕೆ ಯನ್ನೂ ರಾಷ್ಟ್ರಧ್ವಜವನ್ನೂ ಮೆರೆಯಿಸಿದ್ದರು. ಕೆಲವರಿಗೆ ಅದೊಂದೂ ಸರಿಯಾಗದೆ, ಶಿವಾ ಜಿಯ 'ಭಗವಾ ಝೇಂಡಾ'ವನ್ನು ಮಾತ್ರ ಮೆರೆಯಿಸಬೇಕೆಂದರು. ಕೆಂಪು ಬಾವುಟವನ್ನು ಕಿತ್ತು ಚೂರುಮಾಡಿದರು. ರಾಷ್ಟ್ರಧ್ವಜವನ್ನು ಕಿತ್ತೊಗೆವುದಕ್ಕಾಗದೆ ಅದನ್ನು ಎತ್ತಿ ಹಿಡಿದವ ರನ್ನು ಅತ್ತಿತ್ತ ದೂಡಿದರು. ಸಭೆಸೇರಿ, ಆಯುಧ ಗಳ ಕಾನೂನನ್ನು ರದ್ದುಗೊಳಿಸಬೇಕೆಂದೂ ನಿರ್ಣಯ ಮಂಜೂರು ಮಾಡಿದರು. ಅನಂತರ ಓಣಿಗಳಲ್ಲಿ ಅಲ್ಲಲ್ಲಿ ಮಾರಾಮಾರಿಗೆ ಪ್ರಾರಂಭ ವಾಯಿತು. ಗಾಂಧೀಟೊಪ್ಪಿ ಧರಿಸಿದವರಿಗೆ ಬಯ್ಯುವುದೆ ಕೆಲ ಪೋರರಿಗೆ ಉದ್ಯೋಗವಾ ಯಿತು. ಜನರ ಮೇಲೆ ಕೋಲುಗಳನ್ನು ಬಿಸುಡಿ ಈ ಪೋರರು ಪಲಾಯನ ಮಾಡು ತಿದ್ದರು. ಕಾಂಗ್ರೆಸನ್ನು ಮುರಿಯಿರಿ; ಹಿಂದೂ ಮತ ಉದ್ಧಾರವಾಗಲಿ ಎಂದು ಘೋಷಗಳಾ ದುವು. ಅತ್ತಿತ್ತ ಹೋಗುತಿದ್ದ ಸೋಶಲಿಸ್ಟ ಸಂಗಡದವರಿಗೆ ಅಲ್ಲಲ್ಲಿ ಹೊಡೆಯಾಗಿ ಪೆಟ್ಟಾಗಿದೆ. ಪೋಲೀಸರು ಮುಖ್ಯ ಮೂಲೆಗಳಲ್ಲಿ ಕಾವ ಲಿದ್ದಾರೆ. ಈ ಬಗೆಯಾಗಿ ಈ ಪುಂಡರು ಉಪ ಟಳ ಮಾಡಿರುವುದನ್ನು ಖಂಡಿಸಲು ಸಭೆಯೊಂದು ಸೇರಿತು.

ರಾಷ್ಟ್ರಪತಿಗಳ ಸಂದೇಶ

"ಸ್ವಾತಂತ್ರ್ಯಕ್ಕಾಗಿ ಹೋಗುವ ಎಲ್ಲ ರಿಗೂ ಬಲವು ಬಂದೇ ಬರುತ್ತದೆ. ಐರ್ಲೆಂಡಿ ನಲ್ಲಿ ಸಿನ್‌ಫಿನ್ ಪಕ್ಷದವರಿಗೆ ಹೇಗೆ ಅಧಿಕಾ ರವು ದೊರೆಯಿತೋ ಹಾಗೆಯೆ ಕಾಂಗ್ರೆಸಿಗೂ ಅಧಿಕಾರ ಬಲವು ಬಾರದಿರದು. ಸ್ವಾತಂ ತ್ರ್ಯದ ಫಲವನ್ನುಣ್ಣಬೇಕೆನ್ನುವವರು ಕಾಂಗ್ರೆ ಸಿನ ಮತ್ತು ಅದರ ಹೋರಾಟದ ಹೊರಗೇ ನಿಲ್ಲುವುದು ಸರಿಯಲ್ಲ. ಅಂತರ್ಜಾಗತಿಕ ವಿದ್ಯಮಾನಗಳನ್ನು ನೋಡಿರಿ. ನಮ್ಮ ದೇಶವು ತನ್ನ ಆಶಾಸಿದ್ಧಿಗಾಗಿ ಬಹಳವಾಗಿ ಪ್ರಯತ್ನಿ ಸಲು ಅನುಕೂಲವಾದ ಸಂದರ್ಭವು ಈಗಲೇ ಉಂಟಾಗಿದೆ. ನಾವೆಲ್ಲರೂ ಒಂದೇ ಸ್ವರದಿಂದ ನಮ್ಮ ಕೇಳಿಕೆಯನ್ನು ಮುಂದಿಟ್ಟರೆ, ಬ್ರಿಟಿಷ ಸರಕಾರವು ಅದನ್ನು ತಿರಸ್ಕರಿಸಲಾರದು."

ಶ್ರೀ। ಸುಭಾಷಚಂದ್ರ ಬೋಸ್.

ಪ್ರಾಂತಿಕ ಶಿಕ್ಷಣ ಪರಿಷತ್ತು.

ಅಧಿವೇಶನದ ದಿನ ಬದಲಾಗಿದೆ

ಮೇ ತಾ. ೧೮ರಿಂದ

ರೈಲ್ವೆ ಪ್ರಯಾಣದ ಸೌಕರ್ಯಗಳು ತಾ. ೧೫ರಿಂದ ಮಾತ್ರವೇ ದೊರೆವ ಕಾರಣ, ಅಧಿ ಪಕ್ಷದ ಎಲ್ಲ ಭಾಗಗಳಿಂದ ಇತ್ತ ಬರಲಿರುವ ಸದಸ್ಯಸಮೂಹದ ಅಪೇಕ್ಷೆಯಂತೆ ಈ ಪರಿ ಷತ್ತು ಮತ್ತು ಭೂಗೋಲಜ್ಞರ, ವ್ಯಾಯಾಮ ಶಿಕ್ಷಣದ ಪರಿಷತ್ತುಗಳು ಸಹ ಇದೇ ಬರುವ ತಾ. ೧೮ಕ್ಕೆ ಪ್ರಾರಂಭಿಸುವುವು. ಪ್ರದರ್ಶನವೂ ಅದರೊಡನೆಯೆ. ಕಾರ್ಯಕ್ರಮವೂ ೧೮ನೇ ತಾರೀಕಿನಿಂದ, ಹಿಂದೆ ಪ್ರಕಟವಾದ ರೀ ತಿಯಲ್ಲೇ ಮಾರ್ಪಡುವುದು ಎಂಬುದನ್ನು ಸಂಬಂಧಪಟ್ಟ ಸರ್ವರಿಗೆ ಈ ಮೂಲಕ ತಿಳಿಸ ಲಾಗಿದೆ.

ಸಾಮ್ಯವಾದವೇ ಯಾಕೆ?

★

ನಮ್ಮ ಈ ಪ್ರಪಂಚದಲ್ಲಿ ಮಾನವ ಜಾತಿಯ ಕಲ್ಯಾಣಾರ್ಥ ಎಷ್ಟೆಲ್ಲ ಆಂದೋಲನಗಳು ಆಗಿರುವವೋ, ಅವುಗಳಲ್ಲಿ ಸಾಮ್ಯವಾದದ ಆಂದೋಲನವು ಎಲ್ಲಕ್ಕಿಂತ ಹೆಚ್ಚು ಮಹತ್ವವನ್ನು ಪಡೆದಿರುವದು. ಕಾರ್ಲ್, ಮಾರ್ಕ್ಸ್, ಲೆನಿನ ಮೊದಲಾದ ಮಹಾಪುರುಷರು ಈ ಆಂದೋಲನದ ಪ್ರವರ್ತಕರಾಗಿದ್ದರು. ಆರ್ಥಿಕ ವಿಷಮತೆಯನ್ನೂ ಧಾರ್ಮಿಕ ಅಂಧವಿಶ್ವಾಸವನ್ನೂ ದೂರಮಾಡಿ ಮನುಷ್ಯಮಾತ್ರರಲ್ಲಿ ಸಮಾನತೆ ಮತ್ತು ಶಾಂತಿಯ ಭಾವವನ್ನು ಹುಟ್ಟಿಸಲಿಕ್ಕಾಗಿ ಸಾಮ್ಯವಾದದ ಪ್ರಚಾರವಾಗಿರುತ್ತದೆ, ಸಾಮ್ಯವಾದಿಗಳು ಮುಖ್ಯತಃ ದಾರಿದ್ರ್ಯದ ಪರಮಶತ್ರುಗಳಾಗಿದ್ದಾರೆ, ಮತ್ತು ಅವರು ದಾರಿದ್ರ್ಯವನ್ನು ಬೇರು ಸಹಿತ ಕಿತ್ತು ಹಾಕಲಿಕ್ಕೆ ಇಚ್ಛಿಸುತ್ತಾರೆ.

ಆರ್ಥಿಕ ವಿಷಮತೆಯ ಕಾರಣದಿಂದ ಜನರು ಅಸಹನೀಯ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಪ್ರಾಯಶಃ ಮಾನವಸಮಾಜದ ಎಲ್ಲಾ ದುಃಖಗಳ ಮೂಲಕಾರಣವು ಧನದ ಅಭಾವವಾಗಿ ಇರುತ್ತದೆ. ಮನುಷ್ಯನು ಕೇವಲ ಗುಣ ಮತ್ತು ಕ್ಷಮತೆಯಿಂದ ಉತ್ತಮ ಪದವಿಯನ್ನು ಪಡೆಯುವದಿಲ್ಲ, ಪರಂತು ಯಾರು ಧನವಂತನಾಗಿದ್ದಾನೋ, ಅವನೇ ಎಲ್ಲ ಕಡೆಗಳಲ್ಲಿ ಮರ್ಯಾದೆಯನ್ನು ಪಡೆಯುತ್ತಾನೆ. ಸಮಸ್ತ ಜಗತ್ತಿನ ಬಡಜನರ ಹೊಟ್ಟೆ ತುಂಬಿಸಲಿಕ್ಕೆ ಬೇಕಾದಷ್ಟು ಸಂಪತ್ತು ಧನಿಕರ ಕೈಯಲ್ಲಿ ಇರುತ್ತದೆ. ಒಂದು ಕಡೆಯಿಂದ ಈ ಧನಿಕರು ಬಡವರ ಪರಿಶ್ರಮದ ಫಲವನ್ನು ಅನ್ಯಾಯದಿಂದ ತಿಂದು ಕೋಟ್ಯಾಧಿಪತಿಗಳಾಗುತ್ತಾರೆ. ಇನ್ನೊಂದು ಕಡೆಯಿಂದ ಹಗಲಿರುಳು ಪರಿಶ್ರಮ ಮಾಡಿದರೂ ಈ ಬಡಜನರಿಗೆ ಹೊಟ್ಟೆ ತುಂಬ ಊಟವೂ ಲಭಿಸುವದಿಲ್ಲ. ಬಡವರ ಪರಿಶ್ರಮದ ಫಲವು ಧನಿಕರಿಗೆ ಪ್ರಾಪ್ತವಾಗುತ್ತದೆ. ರೂಪಾಯಿ ಸರ್ವಶಕ್ತಿವಂತವಾಗಿರುತ್ತದೆ. ಜಗತ್ತಿನ ಎಲ್ಲಾ ಕೆಲಸಗಳು ಹಣವಂತರ ಸೂತ್ರಚಾಲನೆಯಿಂದ ನಡೆಯುತ್ತವೆ. ಪಾಠಶಾಲೆಗಳು, ವೃತ್ತಪತ್ರಿಕೆಗಳು, ಕೋರ್ಟು ಕಚೇರಿಗಳು ಎಲ್ಲವೂ ಈ ಹಣವಂತರ ಕೈಗೊಂಬೆಗಳಾಗಿವೆ, ಯಾಕಂದರೆ ಅವರ ಸಹಾಯದ ಹೊರತು ಇವು ಯಾವುವೂ ಉಳಿಯಲಾರವು. ಧನಿಕರು ಸ್ವೇಚ್ಛೆಯಿಂದ ಬಡವರ ಸುಲಿಗೆಮಾಡಬಲ್ಲರು. ಅವರ ಅಪಮಾನಮಾಡಬಲ್ಲರು, ಆದರೆ ಬಡಜನರು ಕೋರ್ಟು ಕಚೇರಿಗಳ ಉಪಯೋಗವನ್ನು ತೆಗೆದುಕೊಳ್ಳಲಾರರು, ಯಾಕಂದರೆ ಅಲ್ಲಿಗೆ ಹೋಗುವದು ಬಹಳ ಖರ್ಚಿನದ್ದಾಗಿರುತ್ತದೆ. ರೈತರು, ಮಜೂರರು ಹಳ್ಳಿಗಳಲ್ಲಿ, ಗ್ರಾಮಗಳಲ್ಲಿ, ಕೃಷಿವ್ಯವಸಾಯಮಾಡುತ್ತ ಸಾಯುತ್ತಾರೆ. ಆದರೆ ಧನಿಕರು ಪೇಟೆಪಟ್ಟಣಗಳಲ್ಲಿದ್ದು ಭೋಗವಿಲಾಸದ ಜೀವನವನ್ನು ಸಾಗಿಸುತ್ತಾರೆ, ತಮ್ಮ ಆಮೋದ ಪ್ರಮೋದಗಳಿಗಾಗಿ ಸಾವಿರಾರು ರೂಪಾಯಿಗಳನ್ನು ವ್ಯರ್ಥ ಖರ್ಚುಮಾಡುತ್ತಾರೆ. ಕಾರಖಾನೆಗಳಲ್ಲಿ, [illegible]ಗಳಲ್ಲಿ ಮಜೂರರು ಹಗಲು ರಾತ್ರಿ ಕೆಲಸಮಾಡಿದ ಮೇಲೆಯೂ ಹಸಿವು ನೀರಡಿಕೆಗಳಿಂದ ಬಳಲುತ್ತ ಜೀವನವನ್ನು ಕಳೆಯುತ್ತಾರೆ, ಆದರೆ ಅವರ ಮಾಲಕರು ಅವರ ರಕ್ತವನ್ನು ಹೀರುತ್ತಾರೆ, ಮತ್ತು ಬೇಂಕುಗಳಲ್ಲಿ ತಮ್ಮ ಠೇವಣಾತಿಯನ್ನು ದಿನದಿನವೂ ಹೆಚ್ಚಿಸುತ್ತಾರೆ. ಇದರಲ್ಲಿ ಧನಿಕರೇ ದೋಷಿಗಳೆಂದು ಹೇಳಲಾಗುವದಿಲ್ಲ. ಅವರು ಬುದ್ಧಿಪೂರ್ವಕ ಯಾವ ಅನ್ಯಾಯವನ್ನು ಮಾಡುವದಿಲ್ಲ. ದಯಾಳುಗಳಾದಂಥ, ಬಡವರ ಮೇಲೆ ಸಹಾನುಭೂತಿಯನ್ನು ತೋರಿಸುವಂಥ ಧನಿಕರು ಅದೆಷ್ಟೋ ಮಂದಿ ಇರುತ್ತಾರೆ. ಆದರೆ ಈ ಕೆಲವು ವ್ಯಕ್ತಿಗಳು ಬಡವರ ಮೇಲೆ ತೋರಿಸುವ ದಯೆ ಸಹಾನುಭೂತಿಗಳಿಂದ ಏನಾಗುತ್ತದೆ? ಎಲ್ಲ ಅನರ್ಥಗಳ ಮೂಲಕಾರಣವು ಧನದ ಅಧಿಕಾರವು ಕೇವಲ ಕೆಲವು ಜನರ ಕೈಯಲ್ಲಿ ಸೇರಿದ್ದಾಗಿದೆ.

ಆದ್ದರಿಂದ ಜಗತ್ತಿನಲ್ಲಿ ಯಾರೂ ಧನವಂತರಾಗಿರಬಾರದು, ಯಾರೂ ಬಡವರಾಗಿರಬಾರದು, ಎಲ್ಲರೂ ಸಮಾನರಾಗಿರಬೇಕು. ಇದೇ ಸಮಾಜವಾದದ ಲಕ್ಷ್ಯವಾಗಿರುತ್ತದೆ. ಜನರ ಜಾತಿ ಅಥವಾ ಉದ್ಯೋಗವೃತ್ತಿಯು ಯಾವುದೇ ಆಗಿರಲಿ, ಬಡವ ಶ್ರೀಮಂತ ಎಂಬ ಅಸ್ವಾಭಾವಿಕ ನಿಯಮವು ಸಂಪೂರ್ಣ ನಷ್ಟವಾಗುವದು ಅಗತ್ಯವಾಗಿದೆ. ಸಾಮ್ಯವಾದವು ವರ್ಗಭೇದವನ್ನು ನಾಶಮಾಡಲಿಚ್ಛಿಸುತ್ತದೆ. ರಾಷ್ಟ್ರದ ಎಲ್ಲ ಕುಶಲಕಲೆಗಳು, ವೃತ್ತಿ ಉದ್ಯೋಗಗಳು ಮತ್ತು ಧನಸಂಪತ್ತಿಯು ಸರಕಾರದ ಕೈಗೆ ಸೇರಬೇಕು ಮತ್ತು ಸರಕಾರವು ರಾಷ್ಟ್ರದ ಉತ್ಪತ್ತಿಯನ್ನು ಎಲ್ಲ ಜನರಲ್ಲಿ ಬೇಕಾದರೆ ಅವರು ಸ್ತ್ರೀಯರಿರಲಿ, ಅಥವಾ ಪುರುಷನಾಗಿರಲಿ—ಸರಿಸಮಾನ ಹಂಚಬೇಕು ಎಂಬುದು ಸಾಮ್ಯವಾದದ ಉದ್ದೇಶವಾಗಿದೆ. ದೇಶದಲ್ಲಿ ಯಾವ ವ್ಯಕ್ತಿಯೂ ಸೋಮಾರಿಯಾಗಿ ಇರಲಾರನು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಶಕ್ತಿಸಾಮರ್ಥ್ಯ ಮತ್ತು ಯೋಗ್ಯತೆಯನ್ನು ಅನುಸರಿಸಿ ಏನಾದರೊಂದು ಉದ್ಯೋಗವನ್ನು ಅವಲಂಬಿಸಿಕೊಂಡು ಇರಲೇಬೇಕು.

ಬಡವರು ಮತ್ತು ಶ್ರೀಮಂತರೊಳಗಣ ಸಂಘರ್ಷವು ಇದು ಹೊಸ ವಿಷಯವೇನೂ ಅಲ್ಲ. ಭಿನ್ನ ಭಿನ್ನ ರೂಪಗಳಲ್ಲಿ ಆ ಸಂಘರ್ಷವು ಯಾವಾಗಲೂ ನಡೆದು ಬಂದಿದೆ. ಜಗತ್ತಿನ ಅರ್ಧಕ್ಕಿಂತ ಹೆಚ್ಚಿನ ಜನರು ಧನಿಕರ ಗುಲಾಮರಾಗಿರಬೇಕು. ಅವರ ಪಾದಪೂಜೆ ಮಾಡಬೇಕು ಎಂಬ ನಿಯಮವು ಸದಾ ಕಾಲ ಎಂದೂ ಇರಲಾರದು. ಇವತ್ತು ಜನತೆಯು ಜಾಗೃತವಾಗಿದೆ. ಮತ್ತು ಬಡತನದ ಬಂಧನ ಮಾರ್ಗ ಮತ್ತು ರಾಜಕೀಯ ಕ್ಷೇತ್ರಗಳಿಂದ ಬಿಡಿಸಿಕೊಳ್ಳಲಿಕ್ಕೆ ಇಚ್ಛಿಸುತ್ತದೆ. ಅವರ ಉಗ್ರಾತಿಉಗ್ರ ವಿಚಾರಗಳನ್ನು ಪ್ರಕಟಿಸುತ್ತ ವಿಚಾರಗಳಲ್ಲಿ ಬಹಳ ಪರಿವರ್ತನೆ ಆಗುತ್ತಲಿದೆ. ತ್ತದೆ. ಇವತ್ತು ಜಗತ್ತು ಕ್ರಾಂತಿಯುಗದಿಂದ ಸಾಗುತ್ತಲಿದೆ, ಮತ್ತು ಸಾಮಾಜಿಕ ಧಾ ಮೊಟ್ಟಮೊದಲು ರಶ್ಯದಲ್ಲಿ ಸಾಮ್ಯವಾದಿ

(೨೧ನೇ ಪುಟವನ್ನು ನೋಡುವುದು)

ಜೆಬ್ರೊ ಟಾಯಿಲೆಟ್ ಸಾಬೂನುಗಳು

ಜನಜನಿತ ವಾಗುತ್ತಿವೆ

ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ನಗರದಲ್ಲಿ

ಅವುಗಳ ಉತ್ತಮ ಗುಣ ಮತ್ತು ಕಡಿಮೆ ಬೆಲೆ ಇದಕ್ಕೆ ಕಾರಣ

Jabro

ಜೆಬ್ರೊ ನೀಮ್

ಇದು ಸಾಬೂನುಗಳಲ್ಲಿ ರಾಣಿ

ದೊಡ್ಡ ಬಿಲ್ಲೆ! ಆಕರ್ಷಣೀಯ ಬೆಲೆ!

ಜೆಬ್ರೊ ಸೇಂಡಲ್, ಕಸ್, ಗ್ಲಿಸರಿನ್

ಇವೆಲ್ಲಾ ಅವುಗಳ ಗುಣಗಳಿಗೆ ತಕ್ಕುದಾದವುಗಳು.

ಅವುಗಳ ಮೇಲೆಲ್ಲಾ ಜೆಬ್ರೊ ಚಿಹ್ನೆಯು ಇದೆ

ಪರಿಣಿತಿ ಹೊಂದಿದ ಉಚ್ಚ ಸ್ವದೇಶಿ ಒಡವೆಗಳನ್ನೆ ಉಪಯೋಗಿಸಿರಿ.

JAYA BHARATHAM CO., MADRAS.

WANTED IMMEDIATELY

Influential and capable persons in all parts of South Kanara & Coorg to represent the WESTERN INDIA LIFE INSURANCE CO., LTD., Satara

This is the SILVER JUBILEE & VALUATION YEAR of the Company and those who are elected now will have the best opportunities for building up successful careers. Educated young men and ladies who take up our agency have bright prospects in view of the new Insurance Act.

THE WESTERN INDIA LIFE has

1. The least expense ratio only 26 p c
2. The lowest lapses only 4 p c
3. The Strongest Reserves about 9 p c
4. The HIGHEST BONUS Rs 75 & Rs 60 Triennial
5. Business in force over Rs. 3,60,00,000.

APPLY TO.

K V. NAYAK,

Organizer for S Kanara & Coorg,

Opp The City Press,

MANGALORE

ನೋಟಿಗಳು.—Note.......s

ವಿಧುರಾಶ್ವತ್ಥದ ಬಳಿಯಲ್ಲಿ ನಡೆದ ಅಪವಿತ್ರ ಘಟನೆಗಳಿಂದ, ಮಹಾತ್ಮಾಜಿಯವರ ಕಣ್ಣೀರ ಗಂಗೆಯೇ ಅತ್ತ ಹರಿದು, ಆ ಕ್ಷೇತ್ರವನ್ನು ಪುನಃ ಪವಿತ್ರಗೊಳಿಸಬೇಕಾಗಿ ಬಂದಿದೆ.

೦ ೦ ೦ ೦

ಸತ್ತವರ, ಗಾಯ ಹೊಂದಿದವರ, ಅಂತೂ ಸೇರಿದವರ ಸಂಖ್ಯೆಗಳ ಅಂದಾಜು ಒಂದೊಂದು ಕಡೆ ಒಂದಕ್ಕೊಂದಾಗಿದೆ. ಆದರೂ, ಹಳ್ಳಿ ಜನರು ಜಾತ್ರೆಗಾಗಿ ಬಂದವರು ಅವರನ್ನು ಓಡಿಸುವ ರಭಸದಲ್ಲಿ ನಾಲ್ಕು ಸಲ ಗುಂಡು ಹಾರಿಸಬೇಕಾಯಿತೆಂದರೆ—ಅದ್ಭುತವಲ್ಲವೆ?

೦ ೦ ೦ ೦

ಸಂಘಟನೆಯು ನಡೆದು ನಾಲ್ಕೈದು ದಿನಗಳ ತರುವಾಯ ಸರಕಾರದ ಪ್ರಕಟಣೆ ಹೊರಟಿತು. ಅದನ್ನೋದುವಾಗ ಸ್ಥಳೀಯ ಅಧಿಕಾರಿಗಳ ವರ್ತನವು ಇನ್ನಷ್ಟು ದೋಷಕರವಾಗಿಯೇ ತೋರುತಂತಿದೆ. ಗಾಯಹೊಂದಿದವರನ್ನು ಉಪಚಾರಕ್ಕೊಯ್ಯಲು ಆಸ್ಪದವೇ ಇದ್ದಿಲ್ಲವಂತೆ!

೦ ೦ ೦ ೦

ವಟವಾಸು ಬಳಿಯುವುದಂತೂ ಬೇಸಗೆ ಕಾಲದಲ್ಲಿ ಮನೆ ಧುರ್ಗತಿಯ ಕ್ರಮ. ಆದರೆ, ಯೋಗ್ಯ ಗೃಹಸ್ಥರದೊಂದು ವಿಚಾರಣಾ ಕಮಿಟಿ ನೇಮಕವಾಗಿದೆ. ಇವರಿಂದ ಕಟ್ಟಡದ ನಿಜಸ್ಥಿತಿ ಬಯಲಿಗೆ ಬಂದೀತು. ಅಲ್ಲಿ ವರೆಗೆ, ಸುಮ್ಮನೆ ಆ ವರದಿ, ಈ ವೃತ್ತಾಂತ ಓದಿ ಟೀಕಿಸಿ ಫಲವಿಲ್ಲ.

೦ ೦ ೦ ೦

ಸಾಕ್ಷ್ಯಕ್ಕಾಗಿ ಹಳ್ಳೀ ಜನರು ಮುಂದೆ ಬರಲು ಹೆದರುತ್ತಾರೆ, ಪೋಲೀಸರ ಭಯವಂತೆ! ಬಹುಕಾಲದ ಗುಮ್ಮನ ಭಯ, ಪಕ್ಕನೆ ನಾಯವಾಗದು.

೦ ೦ ೦ ೦

ಮಹಾರಾಜರೇ ಈ ವಿಷಯವನ್ನೆಲ್ಲ ಮನಸ್ಸಿಗೆ ತಂದುಕೊಂಡು ಸರ್ವರನ್ನು ಯುಕ್ತ ಮಾರ್ಗಕ್ಕೆ ತರುವರಾಗಬೇಕು ಎಂದೇ ಮಹಾತ್ಮಾಜಿಯವರ ವಿಶ್ವಾಸವಿದೆ. ದಿವಾನ ಸಾಹೇಬರೂ ಅಶ್ವತ್ಥದ ಕಡೆಗೆ ತೆರಳಿದ್ದಾರೆ. ಅವರೇನೆನ್ನುವರೋ ಏನೆನ್ನುರೋ ತಿಳಿದಿಲ್ಲ.

೦ ೦ ೦ ೦

ಪ್ರಜಾಸತ್ತೆಗೆ ಅವಕಾಶ ಹೆಚ್ಚಾಗಿ ಕೊಡಲು ಸಿದ್ಧವಿರುವಂತೆ ತೋರಿ, ತದ್ವಿಮರ್ಶಕ ಕಮಿಟಿ ನೇಮಿಸಿರುವ ಸರಕಾರವು, ನೋಕರಶಾಹಿಯ ದರ್ಪವನ್ನು ಸ್ವಲ್ಪವೂ ಇಳಿಸಬಾರದೆಂದಿಯೆ?

೦ ೦ ೦ ೦

ಪತ್ರಿಕೆಗಳು ಪ್ರಕಟವಾಗದಂತೆಯೂ ಮಾಡಲಾಯಿತು. ಯಾವ ಸುದ್ದಿಯೂ ಸರಕಾರ ಮೆಚ್ಚುವ ಪತ್ರಿಕೆಗಳಲ್ಲಿ ಪ್ರಕಟವಾಗಬೇಕು ಅಷ್ಟೆ ಸಾಕು; ಅಥವಾ ಯಾರೂ ಈ ವೃತ್ತಾಂತಗಳನ್ನು ಪ್ರಕಟಿಸಲೇ ಬಾರದು ಎಂಬ ಅಭಿಪ್ರಾಯವಿದ್ದೇ ಹೀಗಾಗಿದೆಯೇ? *N*

೦ ೦ ೦ ೦

ಜಿನ್ನಾ ಸಾಹೇಬರ 21 ಪ್ಯಿಂಟುಗಳನ್ನು ಚರ್ಚಿಸಿ ಐಕ್ಯಭಾವ ಪಡಿಸುವುದಕ್ಕಾಗಿ ಮಹಾತ್ಮಾಜಿಯವರು ಮುಂಬಾಯಿಗೆ ಬಂದು, ಮಾತುಕತೆ ಮುಗಿಸಿ, ಪುನಃ ಕೆಲದಿನಗಳಲ್ಲೇ ತೀರ್ಮಾನಿಸೋಣವೆಂದು ಪೇಶಾವರಕ್ಕೆ ತೆರಳಿದರು.

೦ ೦ ೦ ೦

ಎಲ್ಲಾ ಮುಸ್ಲಿಮರು ಮುಸ್ಲಿಮ್ ಲೀಗಿಗೆ ಸೇರಿದವರೇ? ಎಂಬುದೇ ಮೊದಲನೆ ಪ್ಯಿಂಟು. ರಾಷ್ಟ್ರೀಯ ಮುಸ್ಲಿಮ ಪಕ್ಷವಿದೆ, ಪ್ರಜಾಪಕ್ಷದ ಮುಸ್ಲಿಮರಿದ್ದಾರೆ, ಜಮಾಯತಿನವರೂ ಇದ್ದಾರೆ, ಶಿಯಾ ಪಂಗಡವೂ ಇದೆ, ಇವರೆಲ್ಲ ಲೀಗಿನವರಲ್ಲ. ಹೀಗಾದರೆ, ಜಿನ್ನಾರು ಮಾಡಬಹುದಾದ ಒಡಂಬಡಿಕೆಗೆ ಒಪ್ಪುವರೇ?

೦ ೦ ೦ ೦

ಹಾಗೆಯೆ, ಹಿಂದೂ ಮಹಾ ಸಭೆಯಿದೆ. ಸನಾತನಿಗಳೂ ವರ್ಣಾಶ್ರಮ ಸ್ವರಾಜ್ಯ ಸಂಘದವರೂ ಇದ್ದಾರೆ—ಈ ಹಿಂದುಗಳು ಗಾಂಧಿಜೀಯವರು ಮಾಡುವ ಒಡಂಬಡಿಕೆಗೆ ಒಪ್ಪುವರೇ?

೦ ೦ ೦ ೦

ಆದರೂ, ಇವೆರಡು ಮಹಾಸಮಾಜಗಳು ಒಂದಾಗದೆ ನಿರ್ವಾಹವಿಲ್ಲ, ಮೂಲ ಧ್ಯೇಯಗಳೆಲ್ಲ ಒಂದೇ ಕೇವಲ ಸಮಯಗಳಲ್ಲೇ ಚರ್ಚೆ, ಭೇದಭಾವ.

೦ ೦ ೦ ೦

ಡೆಕ್ಕಾ ಯುನಿವರ್ಸಿಟಿಯ ಇಂಟರ್ ಮಿಡಿಯಟ್ ಪರೀಕ್ಷೆಯಲ್ಲಿ ಮೊದಲನೆ ಎರಡು ಸ್ಥಾನಗಳಿಸಿ ಉತ್ತೀರ್ಣರಾದವರು ವಿದ್ಯಾರ್ಥಿನಿಯರು!

೦ ೦ ೦ ೦

ಬೊಂಬಾಯಿ ದಂಗೆಗಳ ದೆಸೆಯಿಂದ ಪೋಲೀಸರು ಒಟ್ಟು ಕೈದು ಮಾಡಿದವರ ಸಂಖ್ಯೆ 2700. ಇನ್ನೂ ಪುಂಡರನ್ನು ಸೆರೆ ಹಿಡಿಯಲೂ, ಅವರನ್ನು ಗಡೀಪಾರು ಮಾಡಲು ಅಧಿಕಾರ ಸಿಗಲು ಕಾನೂನಾಗಬೇಕೆಂದರೆ, ವಿಧ್ವಾರಕರು ಪವರಿದ್ದಾರೆ. ಪುಂಡರೇ ಊರಲ್ಲಿ ನಜರಲ್ಲಿರುವಂತಾದರೆ, ದಂಗೆಗಳಿಗೆ ಅವಕಾಶ ಕಡಿಮೆಯೆಂದಾದರೂ ವಿರೋಧ ಪಕ್ಷವು ತಿಳಿಯಬಾರದೇ?

೦ ೦ ೦ ೦

ದೇವರು ಕೊಟ್ಟ ವಿವೇಕವನ್ನು ಸರಿಯಾಗಿ ಉಪಯೋಗಿಸದೆ ಹಿಂದೂ ಮುಸ್ಲಿಮರೊಳಗೆ ಆಗಾಗ ದಂಗೆಗಳಾಗುತ್ತವೆಂದು ಮೂರು ದಂಗೆಗಳಲ್ಲಿ ಕವುಗಿದ್ದ ಅನುಭವದ ವಿವೇಕದಿಂದ ದೊಡ್ಡಣ್ಣ ಶೌಕತಾಲಿಯವರು ಸಾರುತ್ತಿದ್ದಾರೆ. ಶಿಯಾ ಸುನ್ನಿಗಳೊಳಗೇ ದಂಗೆ ಲಕ್ನೌದಲ್ಲಾಗಿ, ಹತ್ತುಮಂದಿ ಸತ್ತರಲ್ಲ!

ಶ್ರೀ ದೊಡ್ಡಣ್ಣ ಶೌಕತಾಲಿಯವರು

೦ ೦ ೦ ೦

ಗಡೀನಾಡಿನಲ್ಲಿ ಹಿಂದೂ ಮಕ್ಕಳನ್ನು ಆಡೀಯ ಮುಸ್ಲಿಮರು ಕದ್ದೊಯ್ಯುತ್ತಿದ್ದರು. ಕೊಂಗ್ರೆಸಿನವರು,—ಕೊಂಗ್ರೆಸ್ ಎಸೆಂಬ್ಲಿ ಮೆಂಬರರು ಗಡಿನಾಡಿನ ಮೇಲೆ ಗುಂಡು ಸುರಿಸದಂತೆ ಸರಕಾರಕ್ಕೆ ಸೂಚಿಸಿದ್ದಾರೆಂದು ಸಾರಲು, ಈ ಮಕ್ಕಳನ್ನು ಹಿಂದಕ್ಕೇ ತಂದೊಪ್ಪಿಸಿರುವರಂತೆ, ಕೊಂಗ್ರೆಸ್ಸಿನವರು ಗಡಿನಾಡಿನವರಿಗಾಗಿ ದುಡಿಯುವ ವೃತ್ತಾಂತ ಅವರಿಗೆ ತಿಳಿದರೆ, ಹಿಂದೂ ವ್ಯಾಪಾರಿಗಳನ್ನು ಹಿಂಸಿಸುವುದನ್ನು ಸಹ ಗಡಿನಾಡಿನವರು ತಡೆಯುವರೆಂದೂ ನಂಬಲಾಗಿದೆ. ಆ ಜನರೊಳಗೆ ಸರಿಯಾಗಿ ಸುದ್ದಿ ಸಾರುವವರೇ ಇಲ್ಲವಾಗಿದೆ.

ವಿಷಕಾರಿ ಕಡಿತ ಮತ್ತು ಚುಚ್ಚುಗಳ ಕುರಿತು ಜಾಗರೂಕರರಾಗಿರಿ.

ಜಾಂಬಕ್‌ನ್ನು ಸವರಿ, ವಿಶೇಷ ಪಂಚಾಮಗಳನ್ನು ತಡೆಯಿರಿ.

ಕ್ರಿಮಿಕೀಟಗಳು ಕಡಿಯುವುದರಿಂದ ವೇದನೆಯು ಬಾತುಹೋಗುವಿಕೆ, ಬೊಕ್ಕೆ ಇತ್ಯಾದಿಗಳು ಬೇಗನೆ ಉಂಟಾಗುವ ಅಪಾಯವಿದೆ, ಆದರೆ ವಿಶೇಷತರದ ಪಂಚಾಮಗಳು ಉಂಟಾಗದಂತೆ ಕಡಿತವಾದೊಡನೆ ಧಾರಾಳ ಜಾಂಬಕನ್ನು ಸವರಿ ಸುರಕ್ಷಿತರಾಗಿರಿ; ಜಾಂಬಕ್‌ನಲ್ಲಿರುವ ಗುಣಕಾರಿ ವನಸ್ಪತಿ ತೈಲಗಳು ಚರ್ಮದಡಿಗೆ ಸೇರಿ, ಅಲ್ಲಿಂದ ಹೊರಟು ನೋವು ಇತ್ಯಾದಿ ನಿವಾರಿಸಿ, ಬಾತುಹೋದ-ದನ್ನು ಕಡಿಮೆಮಾಡುವುದು. ಜಾಂಬಕ್ ಆಲಿಗಳನ್ನು ಬೇಗ ಗುಣಪಡಿಸುತ್ತದೆ. ಎಲ್ಲಾ ದವಾಖಾನೆಗಳಲ್ಲಿ ರೂ. 1, ರೂ. 2—4—0 ಪ್ರಕಾರ ಮಾರಾಟವಾಗುತ್ತದೆ.

ಏಜಂಟರು:—ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್ ಟೌನ್, ಮದರಾಸು.

ಪ್ರಾಣಿಗಳ ಕೊಬ್ಬು ಮಿಶ್ರವಾಗಿಲ್ಲ.

ಜಾಂಬಕ್

Zam Buk

ಸಪ್ರುಗಳ ಪತನ

“ಬ್ರಿಟಿಷರು ನಮ್ಮ ಆಳರಸರಾಗಿರುವ ತನಕ, ನಾವು ಅವರ ಯೂನಿಯನ್ ಜೇಕಿಗೆ ಮನ್ನಣೆಯನ್ನು ಕೊಡಲೇ ಬೇಕು” ಎಂಬುದಾಗಿ ಇಸ್ಟೇಟ್ ಸಮ್ಮೇಲನದ ದಿನ ಸರ್ ತೇಜ ಬಹದೂರ್ ಸಪ್ರುಗಳು ಹೇಳಿ ತನ್ನ ರಾಜಪ್ರೇಮವನ್ನು ವ್ಯಕ್ತಗೊಳಿಸಿದರು. ‘ಗವರ್ನರಗಿರಿಯ ಮಿರುಗು ಅವರ ಕಣ್ಣನ್ನು ಕುಕ್ಕುತ್ತಿರುವಾಗ ಅಂಥನಂತೆ ಅವರು ಹಿಡಿದುದರಲ್ಲಿ ತಪ್ಪಿದೆಯೇ? ಇಲ್ಲದಿದ್ದರೆ 1916ರಲ್ಲಿ ಹೋಮ್‌ರೂಲ್ ಚಳವಳವನ್ನು ಹೂಡಿದವರಲ್ಲಿ ಒಬ್ಬರೆನಿಸಿಕೊಂಡ ಸಪ್ರುಗಳು ಇಂದು ಹೀಗೆ ಆಡಿದರೇಕೆಂದು ಊಹಿಸಲಸಾಧ್ಯವಾಗಿರುವುದು. ಗವರ್ನರ ಗಿರಿಯ ಮನ್ನೇರುವಾಗ ಬಗ್ಗಿ ನಡೆಯುವುದು ಸಹಜವಷ್ಟೆ. ಪರಂತು ಇವರು ಎಷ್ಟು ದೊಡ್ಡ ‘ಗಿರಿ’ಯನ್ನೇರಿದರೂ, ಲೋಕದೃಷ್ಟಿಯಲ್ಲಿ ಇವರ ಮನ್ನಣೆಯು ಕಡಿಮೆಯಾಗುವುದೆಂದು ತಿಳಿಯರೆ?

ಆ ಠಕ್ಕರು!

ಒಂದು ಸೋಡ್ತಿಯ ನಿಮಿತ್ತವಾಗಿಯೇ ತಿಂಗಳಿಗೆ 30-40 ಸಾವಿರ ರೂಪಾಯಿ ಒಂದು ಬೊಂಬಾಯಿ ನಗರದಿಂದ ಹೊರಹೋಗುವುದೆಂದರೇನು? ಸೋಡ್ತಿಯ ರೋಗದಿಂದ ಜನರ ದುಡ್ಡನ್ನು ಸುಲಿಯುತ್ತಿರುವ ಆ ವಿದೇಶಿ ಠಕ್ಕರಿಗೆ ತಕ್ಕ ಬುದ್ಧಿ ಕಲಿಸುವಂತೆ ಬೊಂಬಾಯಿ ಸರಕಾರದವರು ಮಾಡಿದ ನಿರ್ಧಾರವು ಎಲ್ಲರಿಗೂ ಸಂತೋಷವನ್ನುಂಟುಮಾಡದಿರದು. ಆದರೆ ಈ ವಿಷಯದಲ್ಲಿ ಬಾಕಿ ಪ್ರಾಂತಗಳೂ ಹಿಂದೆ ಬೀಳಲಾಗದು; ಕಾರಣ, ಪ್ರತಿಯೊಂದು ಪ್ರಾಂತದಲ್ಲಿಯೂ ಈ ಬಗೆಯ ‘ಸೋಡ್ತಿ ಸುಳಿಗೆ’ಯು ನಡೆಯುತ್ತಿದೆ.

ದೊಡ್ಡ ದೊಡ್ಡ ನೋಟೀಸುಗಳು, ಲಕ್ಷಾವಧಿ ಪ್ರೈಜ್, ಇದನ್ನೋದಿ ಮರುಳಾದ ಜನರು ಟಿಕೇಟನ್ನು ಪಡಕೊಳ್ಳುವರು. ಕಥೆ ಅಲ್ಲಿಗೇ ಮುಗಿಯಿತು.

ನಂತರ ಬಹುಮಾನ ಪಡೆದವರ ಪಟ್ಟಿ ಬರುತ್ತದೆಸ್ನಿ! ಆದರೆ ಆ ಬಹುಮಾನ ಪಡೆದವರ ಪಟ್ಟಿಯನ್ನು ಪರಿಶೀಲಿಸಿ ನೋಡಲು ಯಾರಿಗೂ ಹಕ್ಕಿಲ್ಲ. ಮಾತ್ರವಲ್ಲ, ಬಹುಮಾನ ಪಡೆದವರಲ್ಲಿ ಕೆಲವರು ಈ ಲೋಕದಲ್ಲೇ ಇರುವುದೂ ಇಲ್ಲ.

ಇಷ್ಟೇ ಅಲ್ಲ, ಈಗ ಪತ್ರಿಕೆಗಳಲ್ಲಿ ಬಹಳವಾಗಿ ಜಾಹೀರು ಮಾಡಲಾಗುವ ‘ಚಕ್ರಬಂಧ ಬಗಟುಗಳ ಮೇಲೂ ಏನಾದರು ನಿರ್ಬಂಧ’ ಜೈಯು ಹೊರಡಬೇಕಾಗಿದೆ.

ದಿನಕ್ಕೆ ಆರಾಣೆ ಕೂಲಿ

ನೂಲುವವರ ಮತ್ತು ನೆಯಿಗೆಗಾರ ಕೂಲಿಯನ್ನು ದಿನಕ್ಕೆ ರೂ. 0-3-6ಯಿಂದ ಆರಾಣೆಗೆ ಏರಿಸುವ ವ್ಯವಸ್ಥೆ ಮಾಡಬೇಕೆಂದು ಬಾರ್ದೋಲಿಯವರು ಆಲೋಚಿಸುತ್ತಿರುವರು. ಆದರೆ ರಾಣಿಪರಾಜರ ನಿವಾಸಿಗಳಾದ ಜನ ಕೆಲಸಗಾರರಿಗೆ ಮಾತ್ರ ಈ ದರದ ಕೂಲಿಯು ಪ್ರಥಮ ಕೊಡಲಾಗುವುದು.

ಖಾದಿಯ ಮಾರಾಟವು ಹೆಚ್ಚಿದೆ.

ಕಳೆದ ವರ್ಷ ಖಾದಿಯ ಮಾರಾಟವು ಈಗ ಹೆಚ್ಚಿದೆ. ಕಳೆದ ಹಿಂದಿನ ವರ್ಷಕ್ಕಿಂತ ಸೇಕಡಾ ... ದಷ್ಟು ಹೆಚ್ಚು ಖಾದಿಯು ತಯಾರಿಸಲ್ಪಟ್ಟಿದೆ. ಸಾಧಾರಣ ಸೇಕಡಾ 38ರಷ್ಟು ಹೆಚ್ಚು ಮಾರಾಟವಾಗಿರುವುದು. ಎ. ಐ. ಎಸ್. ಎ. ಶಾಖೆಗಳಲ್ಲೇ ಮಾರಾಟವಾದ ಖಾದಿಯು 38 ಲಕ್ಷದಷ್ಟು. 1936ರಲ್ಲಿ 24 ಲಕ್ಷದ್ದಾಗಿತ್ತು.

ಈ ಮಾರಾಟದಲ್ಲಿ ತಮಿಳುನಾಡು ಪ್ರಥಮ ಸ್ಥಾನವನ್ನು ಪಡೆದಿದೆ. ಅಲ್ಲಿ 7 ಲಕ್ಷದಷ್ಟು, ಸಂಯುಕ್ತ ಪ್ರಾಂತಗಳಲ್ಲಿ 5 ಲಕ್ಷದಷ್ಟು ಖಾದಿಯು ಮಾರಾಟವಾಗಿರುತ್ತದೆ.

ಸಾಧಾರಣ 25,000 ನೂಲುವವರು ಖಾದಿ ಧಾರಿಗಳಾಗಿರುವರು ಮತ್ತು 66,0.. ಮಂದಿ ಖಾದಿಯನ್ನು ಉಪಯೋಗಿಸುತ್ತಿರುವರು.

ನೂಲುವವರ ಮತ್ತು ನೇಯುವವರ ಜಾತೀಯ ಸಂಖ್ಯೆಯು ಸರಿ ದೊರೆತಿಲ್ಲವಾದರೂ ಸೇಕಡಾ 30 ಮಂದಿಯಷ್ಟು ಮುಸಲ್ಮಾನರಿರುವರು.

ಸೈನಿಕರಾಗುವಂತೆ ಒತ್ತಾಯ ನಡೆಯುತ್ತಿದೆ.

ಬ್ರಿಟನಿನಲ್ಲಿ ತರುಣರು ಸೈನಿಕರಾಗುವಂತೆ ಅವರ ಮೇಲೆ ಒತ್ತಾಯ ನಡೆಯುವುದರ ಕುರಿತು, ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆ ಕೇಳಲಾಗಿತ್ತು.

ಬರ್ಟ ಮತ್ತು ವಾಲ್ಟರ್ ಕುಕ್ಸ ಎಂಬ ಇರ್ವರು ನಿರುದ್ಯೋಗಿ. ಸಹೋದರರಿಗೆ ಫ್ರೆಂಚ್ ಕ್ರೀಕ್ ಎಂಬಲ್ಲಿ ಹಳೆ ಬಂಗಾರದ ಗನಿಯ ಹತ್ತಿರ, 800 ಪವನು ತೂಕದ ಒಂದು ಬಂಗಾರದ ಗಟ್ಟಿಯು ಸಿಕ್ಕಿರುತ್ತದೆಂದು ವಾರ್ತೆ.

ಮಂಗಳೂರು.

ನಮ್ಮವರನ್ನೆ ನಾವು ಹೆದರ ಬೇಕಾಗಿದೆ.

ಜಿಲ್ಲೆಯಲ್ಲಿ ಆರೋಗ್ಯ ಮಂತ್ರಿ ಮಾನ್ಯ ಡಾ। ರಾಜನ್‌ರವರ ಪ್ರವಾಸ.

ಮದ್ರಾಸು ಸರಕಾರದ ಆರೋಗ್ಯ ಮಂತ್ರಿಗಳಾದ ಡಾ। ರಾಜನ್‌ರವರು ಮೊನ್ನೆ ತಾ. 3ರ ಸಾಯಂಕಾಲ ಮಂಗಳೂರಿಗೆ ಆಗಮಿಸಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಇತ್ಯಾದಿ ಮಹನೀಯರುಗಳಿಂದ ಸ್ವಾಗತೀಕರಿಸಲ್ಪಟ್ಟು, 'ಮೈದಾನಿನಲ್ಲಿ ಏರ್ಪಡಿಸಲ್ಪಟ್ಟ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತು, ರಾತ್ರಿ ಜಿಲ್ಲಾ ಮೆಡಿಕಲ್ ಸಂಘದವರಿಂದ ಏರ್ಪಡಿಸಲಾದ ಔತಣ ಕೂಟದಲ್ಲಿ ಭಾಗವಹಿಸಿ, ಅಲ್ಲಿ ಆ ಸಂಘದಿಂದ ಅರ್ಪಿಸಲಾದ ಒಂದು ಬಿನ್ನವತ್ತಳೆ ಪತ್ರವನ್ನು ಸ್ವೀಕರಿಸಿ ಅದಕ್ಕೆ ಯೋಗ್ಯ ಉತ್ತರವನ್ನು ಕೊಟ್ಟು, ಮರುದಿವಸ ಸ್ಥಳೀಯ ಸರಕಾರೀ ಆಸ್ಪತ್ರೆಗಳನ್ನು ಸಂದರ್ಶಿಸಿ, ಸಾಯಂಕಾಲ ಮಂಜೇಶ್ವರಕ್ಕೆ ತೆರಳಿ, ಶ್ರೀ ಮದನಂತೇಶ್ವರ ಶಾಲಾ ವರ್ಧಂತ್ಯುತ್ಸವದಲ್ಲಿ ಭಾಗವಹಿಸಿದರು. ತಾ 5ರ ದಿನ ಉಡುಪಿಗೆ ತೆರಳಿ, ಉಡುಪಿ ತಾಲೂಕು ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಿ, ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು ಉಡುಪಿಯಿಂದ ಕಾರ್ಕಳಕ್ಕೆ ತೆರಳಿ, ಅಲ್ಲೊಂದು ಸಾರ್ವಜನಿಕ ಭಾಷಣ ಮಾಡಿ, ಅಲ್ಲಿಂದ ಧರ್ಮಸ್ಥಳಕ್ಕೆ ತೆರಳಿ, ಆ ದಿನ ತಾ 6ರಲ್ಲಿ ಮಂಗಳೂರಿಗೆ ಹಿಂತಿರುಗಿ, ರಾತ್ರಿ ಸ್ಥಳೀಯ ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳಿಂದ ಕೊಡಲಾದ ಔತಣ ಕೂಟದಲ್ಲಿ ಸತ್ಕಾರವನ್ನು ಹೊಂದುವರು, ನಾಳೆ ಬೆಳಿಗ್ಗೆ 9 45ರ ಮೈಲಿಗೆ ಮದ್ರಾಸಿಗೆ ತೆರಳುವರು.

ಮಂಗಳೂರು ಮೈದಾನಿನಲ್ಲಿ ಡಾ। ರಾಜನ್‌ರವರು ಮಾಡಿದ ಭಾಷಣದ ಸಾರಾಂಶ:

ತಮ್ಮ ಇಂಗ್ಲಾಂಡಿನ ಜೀವನದ ನೆನಪನ್ನು ಮಾಡಿಕೊಂಡು, ಅಂದಿನ ತರುಣರಲ್ಲಿ ಸ್ವರಾಜ್ಯ ಸಾಧನೆಗಾಗಿ ಉಂಟಾದ ಭಾವಗಳನ್ನು ವಿವರಿಸುತ್ತಾ, ಆಗ ಅವರಿಗೆ ಸ್ವರಾಜ್ಯ ಸಾಧನೆಗೆ ಹಿಂಸಾ ಕೃತ್ಯಗಳೆ ಶ್ರೇಷ್ಠ ಉಪಾಯವೆಂಬ ಅಭಿಪ್ರಾಯವಿತ್ತೆಂದು, ಆದರೆ ಮಹಾತ್ಮಾಜಿಯವರ ದೆಸೆಯಿಂದ ಅವರೆಲ್ಲರೂ, ತಮ್ಮ ಮೊದಲಿನ ಅಭಿಪ್ರಾಯಗಳನ್ನು ತೊರೆಯುವರಾಗಿ ಮಹಾತ್ಮಾಜಿಯವರ ಸತ್ಯ ಮತ್ತು ಅಹಿಂಸಾ ನೀತಿಗಳು ಶ್ರೇಷ್ಠವೆಂಬ ಅಭಿಪ್ರಾಯ ಹೊಂದುವವರಾದರೆಂದರು.

ಆಗ ಮಹಾತ್ಮಾಜಿಯವರು ಲಂಡನಿನಲ್ಲಿ ಒಂದು ಗುಡಿಸಲಿನಲ್ಲಿ ವಾಸವಾಗಿದ್ದರು ದೀಪಾವಳಿ ಹಬ್ಬದ ಆಚರಣೆಗೆ ಅವರನ್ನು ಅಧ್ಯಕ್ಷರನ್ನಾಗಿ ಆಹ್ವಾನಿಸಲಾಯಿತು ಶಾಖಾಹಾರವನ್ನು ಉಪಯೋಗಿಸುವುದಾದರೆ ಮಾತ್ರ ನಾನು ಭಾಗವಹಿಸುವೆನೆಂದು ಮಹಾತ್ಮಾಜಿಯವರೆಂದರು ಅದಕ್ಕೆ ನಾವು ವಿದ್ಯಾರ್ಥಿಗಳೆಲ್ಲಾ ಒಪ್ಪಿಕೊಂಡು, ನಾನು ಮುಖ್ಯ ಅಡುಗೆಗಾರನಾದೆ ನಾವು ಅಡುಗೆ ಮಾಡುತ್ತಿರುವಾಗ ಅಡುಗೆ ಕೋಣೆಗೆ ಮಹಾತ್ಮಾಜಿಯವರು ಒರುವರಾಗಲು, ಅವರ ಪರಿಚಯವು ನನಗಿಲ್ಲದುದರಿಂದ ಅವರಿಂದ ನಾನು ಎಲ್ಲಾ ಕೆಲಸಗಳನ್ನು ಮಾಡುಸುವವನಾದೆ ಅನಂತರ ನಮ್ಮ ಆ ಸ್ವಾತಂತ್ರ್ಯದ ಗುರಿ ಮುಟ್ಟುವ ಕುರಿತಾಗಿ ನಮ್ಮೊಳಗೆ ಬಹಳ ಚರ್ಚೆ ನಡಿಯಿತು. ಅದು ಕ್ರಾಂತಿ ಮತ್ತು ರಕ್ತಪಾತದಿಂದಾಗಬೇಕೆಂದು ನಮ್ಮ ವಾದ ಅದೆಲ್ಲಾ ಅಹಿಂಸಾ ರೀತಿಯಲ್ಲಿ ಆಗಬೇಕೆಂದು ನಮ್ಮ ವಾದ. ಅದೆಲ್ಲಾ ಅಹಿಂಸಾ ರೀತಿಯಲ್ಲಿ ಆಗಬೇಕೆಂದು ಗಾಂಧಿಜಿಯವರೆಂದರು ನಮ್ಮೊಳಗೆ ವಿರೋಧ ಅಭಿಪ್ರಾಯಗಳಿದ್ದರೂ ನಾವು ಮತ್ತೆ ಸ್ನೇಹಿತರಾಗಿಯೆ ಇದ್ದೆವು

ಆದರೆ 1918 19ರಲ್ಲಿ ನನಗೂ ಮಹಾತ್ಮಾಜಿಯವರಿಗೂ ಮತ್ತೊಮ್ಮೆ ಸಂಪರ್ಕ ನಡೆಯಿತು ಆಗ ಅವರು ನನ್ನನ್ನು ಸಂಪೂರ್ಣ ಪರಿವರ್ತಿಸಿಬಿಟ್ಟರು.

ಭಾಷಣವನ್ನು ಮುಂದುವರಿಯಿತ್ತಾ, 'ನಮ್ಮನ್ನು ನಾವೇ ಬ್ರಿಟಿಷರ ಉಪಯೋಗಕ್ಕಾಗಿ ಕೊಳ್ಳಿ ಹೊಡೆದೆವು, ನಮ್ಮ ರಾಷ್ಟ್ರೀಯತೆಯಲ್ಲಿ ಕೊರತೆಯಿದ್ದುದರಿಂದ ನಾವು ಕೆಟ್ಟೆವು. ಜಾತಿ ಕಲಹಗಳಿಲ್ಲದಿದ್ದರೆ ಇಂದಿನ ಸ್ಥಿತಿಯು ಬೇರೆಯಾಗುತಿತ್ತು. . . . ನಮ್ಮೊಳಗೆ ಈಗ ಏನು ನಡೆಯುತ್ತಿದೆ. ಕಾಂಗ್ರೆಸ್ಸಿನ ಹೆಸರಲ್ಲಿ ಕಾಂಗ್ರೆಸ್ ಕೆಲಸಗಾರರನ್ನ ಕಾದಾಡುತ್ತಿದ್ದೇವೆ. ಕಾಂಗ್ರೆಸ್ ಬಲ್ಲಿದತವಾದ ಕೂಡಲೆ, ಹೇಡಿಗಳು ಅದನ್ನು ಹಿಡಿದರು, . . . ಇಂದು ನಾವು ಹೆದರಬೇಕಾದದು ಮಿಲಿಟರಿಯನ್ನಲ್ಲಾ, ನಮ್ಮವರಿಗೇನೆ. ಈ ನಮ್ಮವರು ಈ ದೇಶಪ್ರೇಮಿಗಳೆಂಬವರು ಕಾಂಗ್ರೆಸ್ಸಿನ ಹೆಸರಲ್ಲಿ ಕಾಂಗ್ರೆಸ್ಸನ್ನು ತಿವಿಯುತ್ತಿರುವರು"

ರಾಜಿನಾಮೆ:

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾಗಿದ್ದ ನವಯುಗದ ಸಂಪಾದಕ, ಕೆ ಕೆ ಶೆಟ್ಟಿಯವರು ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ ಎಕ್ಸಿಕ್ಯೂಟಿವ್‌ನಿಂದ ರಾಜಿನಾಮೆಯಿತ್ತಿರುವರು

ನೋಟೀಸು.

ಇದೇ ಮೇ ತಾರೀಕು 7ನೆಯ ಶನಿವಾರ ಸಂಜೆ ಘಂಟೆ 7 30ಕ್ಕೆ ದ. ಕ ಜಿಲ್ಲಾ ಮೋಟರ್ ಎಂಪ್ಲೋಯೀಸ್ ಯೂನಿಯನಿನ ಮಹಾಸಭೆಯು ಫಳ್ನೀರ್ ಪೈ ಬಜಾರಿನ ಕಾಂಗ್ರೆಸ್ ಭವನದಲ್ಲಿ ಸೇರಲಿದೆ ಯೂನಿಯನಿನ ಎಲ್ಲಾ ಸದಸ್ಯರೂ ತಪ್ಪದೆ ಸಭೆಗೆ ಬರಬೇಕಾಗಿ ವಿನಂತಿ

ಕಾರ್ಯಕ್ರಮ —1 ಸಿ ಪಿ ಸಿ ಕಂಪೆನಿಯ ಮ್ಯಾನೇಜರಲ್ಲಿ ನಿವೇದಿಸಿಕೊಂಡ ಕೇಳಿಕೆಗಳ ಕುರಿತು ಕೆಲಸಗಾರರ ಅಭಿಪ್ರಾಯ
2. ಓವರ್ ಸ್ಪೀಡ್‌ನ ಕುರಿತು ಸರಕಾರಕ್ಕೆ ಡ್ರೈವರರ ಅಭಿಮತ ಸಂಗ್ರಹಿಸುವುದು 3 ಸ್ಕೇಲ್, ಪ್ರೊವಿಡೆಂಟ್ ಫಂಡ್, ಪರ್ಮನೆಂಟ್ ಲೈನ್, ಇನ್‌ಕ್ರಿಮೆಂಟುಗಳ ವಿಷಯ ಸರಕಾರದ ಸಲಹೆ ಕೇಳಲು ಮನವಿ ಮಾಡುವ ವಿಚಾರ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್
ಚುನಾವಣೆಗೆ ಕಾಂಗ್ರೆಸು ಉಮೇದ್ವಾರರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಸಮಿತಿಯು ತಾ 3—5—38ರಲ್ಲಿ ಕಮಿಟಿ ಆಫೀಸಿನಲ್ಲಿ ಸಭೆಸೇರಿ ಈ ಕೆಳಗಿನ ಉಮೇದ್ವಾರರನ್ನು ಇದೇ ತಾ 20ಕ್ಕೆ ನಡೆಯಲಿರುವ ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ ಕಡೆಯಿಂದ ಆರಿಸಿರುತ್ತದೆ

	ಸರ್ಕಲ್	ಸೀಟು	ಹೆಸರು
	ಉಡುಪಿ ತಾಲೂಕು		
1	ಕೋಟ	ಜನರಲ್ 1	ಕೆ ಮಂಜುನಾಥ ಶ್ಯಾನಭಾಗ
2	ಬ್ರಹ್ಮಾವರ		ಆರ್. ಎ ಲಕ್ಷ್ಮೀನಾರಾಯಣ ರಾವ್
3	ಉಡುಪಿ	ಜನರಲ್	ಡಾ। ಶೇಷಗಿರಿ ಪೈ
4		(ಲೇಡಿಸ್	ಪಿ ರಾಧಾಬಾಯಿ
5	ಕಾಪು	ಜನರಲ್	ಟಿ ವಿ ಉಪಾಧ್ಯಾಯ
6*	ಹಿರಿಯಡ್ಕ	( )	*ಟಿ. ಕೃಷ್ಣಯ್ಯ ಹೆಗ್ಡೆ
7	ಕಟಪಾಡಿ	(,)	ಪಿ ಉಪೇಂದ್ರ ನಾಯಕ್
8		(ಕ್ರಿಶ್ಚಿಯನ್)	ಎಂ ಪಿ ಫೆರ್ನಾಂಡಿಸ್
	ಕುಂದಾಪುರ ತಾಲೂಕು		
1*	ಕುಂದಾಪುರ	(ಜನರಲ್) 1	*ಕೆ ವೆಂಕಪ್ಪ ಶೆಟ್ಟಿ
2	ಬೈಂದೂರು	( )	ಬಿ ಸುಬ್ಬಣ್ಣ ಶೆಟ್ಟಿ
3*	ವಂಡ್ಸೆ	)	*ಬಿ ಶಿವರಾಮ ಶೆಟ್ಟಿ
4	ಬಸ್ರೂರು	( )	ಎ ಕೃಷ್ಣರಾಯ ಕೊಡ್ಗಿ
5	ಕುಂದಾಪುರ	(ಲೇಡಿಸ್)	ಸುಶೀಲಾ ಬಾಯಿ, ಸರ್ವೋತ್ತಮ ಪೈ
	ಮಂಗಳೂರು ತಾಲೂಕು		
1*	ಮಂಗಳೂರು	ಜನರಲ್ 1	*ಡಾ। ಕೆ ವಿಠ್ಠಲ ಶೆಟ್ಟಿ
2		ಕ್ರಿಶ್ಚಿಯನ್ ರಿಸರ್ವ್) 1	ಎಫ್ ಪಿ ಎಸ್ ಆಲ್ಬುಕರ್ಕ್
3	ದಂಡೆಮಂಗಳೂರು	ಜನರಲ್ 1	ಕೆ ಮುತ್ತಯ್ಯ ಶೆಟ್ಟಿ
4	ಗುರ್ಪುರ ,	1	ಎಸ್ ಎ ಶೀನಪ್ಪ ಹೆಗ್ಡೆ
5	ಸುರತ್ಕಲ್	, 1	ಕೋಚಣ್ಣ ಶೆಟ್ಟಿ ಡಿ
6*	ಬಂಟವಾಳ	1	*ಬಿ ವೈಕುಂಠ ಬಾಳಿಗಾ
7	ಮೂಲ್ಕಿ	1	ಎಮ್ ಆರ್ ಪೂಂಜ
8	ಕೋಟೆಕಾರ್	1	ಎ ತ್ಯಾಂಪಣ್ಣ ಯಾನೆ ಕೃಷ್ಣ ಶೆಟ್ಟಿ
9.	,,	(ಮುಸ್ಲಿಂ ರಿಸರ್ವ್) 1	ಎ ಮೊಸಬ್ಬ
	ಕಾಸರಗೋಡು ತಾಲೂಕು.		
1	ಹೊಸದುರ್ಗ	ಜನರಲ್ 1	ಎಮ್ ಚಂದ ನಂಬಿಯಾರ್
2	,	(ಹರಿಜನ 1)	ಕೆ ಸುಂದರ
3	ಮಂಜೇಶ್ವರ	ಜನರಲ್ 1	ಎಮ್ ಅಮ್ಮುತ್ತೃಷ್ಣರಾವ್
4	ಕುಂಬಳೆ	, 1	ಬಂಬ್ರಾಣ ಗುಡ್ಡಪ್ಪ ರೈ
5	ಕಾಸರಗೋಡು	, 1	ಎಮ್ ಉಮೇಶರಾವ್
6	,,	(ಮುಸ್ಲಿಂ ರಿಸರ್ವ್ 1)	(ಈ ಎರಡು ಸೀಟುಗಳ ವಿಷಯವಾಗಿ
7	ಚೆರ್ವತ್ತೂರು	ಜನರಲ್ 1	ಸದ್ಯದಲ್ಲೇ ನಿರ್ಧರಿಸಲಾಗುವುದು)
	ಪುತ್ತೂರು ತಾಲೂಕು.		
1	ಸುಳ್ಯ	ಜನರಲ್ 1	ಎಮ್ ದಾಸಪ್ಪ ರೈ
2*	ಕೊಕ್ಕಡ	,, 1	*ಎಮ್. ಶಿವರಾವ್
3	ಪುತ್ತೂರು	,, 1	ಪಿ ಅತ್ತಪ್ಪ ರೈ
4.	,,	(ಸ್ತ್ರೀಯರ ರಿಸರ್ವ್)	ಲಕ್ಷ್ಮೀ ಬಿ ವಿ ರೈ
5	ವಿಟ್ಲ	ಜನರಲ್ 1	ಬೆಳ್ತಂಗಡಿ ಮಂಗೇಶರಾವ್
6.	ಬೆಳ್ತಂಗಡಿ	,, 1	ಎನ್ ಕೆ ಭಟ್
7	ಉಪ್ಪಿನಂಗಡಿ	,, 1	ಡಿ. ಬಿ ಆರಿಗ ಜೈನ
	ಕಾರ್ಕಳ ತಾಲೂಕು.		
1	ಕಾರ್ಕಳ	ಜನರಲ್ 1	ಎಮ್ ಮಹಾಬಲ ಅಜ್ಜಂತಾಯ
2.	,,	(ಹರಿಜನ) 1	ಯು. ರಾಮಚಂದ್ರ
3.	ಮೂಡಬಿದರೆ	ಜನರಲ್ 1	ಧರ್ಮಸಾಮ್ರಾಜ್ಯಯ್ಯ
4.	,,	(ಮುಸ್ಲಿಂ ರಿಸರ್ವ್) 1	ಎ. ಎಸ್ ಶಿಖರ್ ಹೈದರ್ ಸಾಹೇಬ
5	ವೇಣೂರು	,, 1	ತೋಡಾರ ಕುಮಾರಯ್ಯ ಜೈನ
*	ಅಜೆಕಾರು	,, 1	*ದೇಲಂತೆ ಕೃಷ್ಣಯ್ಯ ಹೆಗ್ಡೆ
6			

*ಮೊದಲಿನ ಮೆಂಬರರಾಗಿದ್ದವರು.

ಕಾರ್ಕಳ:

ಕುಕ್ಕುಂದೂರು ಶ್ರೀ ಜಗದಂಬಾ ನೇಶನಲ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 28—4—38ರ ದಿನ ಇಲ್ಲಿಯ ವಕೀಲರಾದ ಶ್ರೀ ಪಿ. ವಿ. ಉಪಾಧ್ಯಾಯರ ಮನೋರಂಜಕ ಮತ್ತು ಬೋಧಪ್ರದ ಕಾರ್ಯಕ್ರಮದಿಂದ ಅತ್ಯಂತ ಯಶಸ್ವಿಯಾಗಿ ಜರಗಿತು

ತಾ 18—5—38ರ ದಿನ ಮಂಗಳೂರಲ್ಲಿ ಕೂಡುವ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಜಿಲ್ಲಾ ಸಭೆಯಲ್ಲಿ ಚರ್ಚಿಸುವದಕ್ಕೋಸ್ಕರ ಈ ಕೇಂದ್ರದ ಉಪಾಧ್ಯಾಯರು ಕೂಡಿ, ಬೋರ್ಡುಶಾಲೆಗಳ ಉಪಾಧ್ಯಾಯರ ಸಂಬಳದ ಕಡಿತವನ್ನು ತೆಗೆದು ಹಾಕುವದು, ಖಾಸಗಿ ಶಾಲೆಗಳ ಉಪಾಧ್ಯಾಯರಿಗೆ ಸರಕಾರಿ ಸಂಬಳದ ಸ್ಕೇಲು ಸಿಕ್ಕುವಂತೆ ಗ್ರಾಂಟು ಕೊಡುವದು, ಮೊದಲಾದ ವಿಷಯಗಳ ಮೇಲೆ ಕೆಲವು ನಿರ್ಣಯಗಳನ್ನು ಮಾಡಿ ಕಳುಹಿಸಿ ಕೊಟ್ಟಿರುತ್ತಾರೆ.

ಮಲಬದ್ಧತೆಯು ಸಂಪೂರ್ಣವಾಗಿ ನಿಂತುಹೋಯಿತು.

ಒಬ್ಬಾಕೆಯು ಕ್ರುಶನ್ ಲವಣವು ಶಾಶ್ವತವಾದ ಗುಣಕಾರಿಯೆಂದು ಖಾತರಿ ಮಾಡಿದ್ದಾಳೆ

ಪ್ರತಿನಿತ್ಯವೂ ಬೆಳಿಗ್ಗೆ ಕ್ರುಶನ್ ಲವಣವನ್ನು ಚಾದೊಡನೆ ಸೇವಿಸುವುದು.

ಕ್ರುಶನ್ ಲವಣದ ಕುರಿತು ಒಬ್ಬಾಕೆಯು ಸರಳವಾದ ಅಭಿಪ್ರಾಯ ವನ್ನು ಹೀಗೆಂದು ಬರೆದಿದ್ದಾಳೆ

ನಾನು ಅನೇಕ ಸಮಯದಿಂದ ಮಲಬದ್ಧತೆಯ ಸಂಕಷ್ಟದಿಂದ ಬಳಲುತ್ತಿದ್ದೆನು. ಎಲ್ಲಾ ತರದ ಚಿಕಿತ್ಸೆಗಳನ್ನು ಮಾಡಿ ನೋಡಿದೆನು—ಕೆಲವು ಔಷಧಿಗಳಿಂದ ಮೊದಲು ಸ್ವಲ್ಪ ಗುಣ ಅಂಶವು ಕಂಡುಬಂದರೂ, ಸ್ವಲ್ಪ ಸಮಯದ ನಂತರ ಏನೂ ಪ್ರಯೋಜನಕಾರಿಯಾಗಿ ತೋರಲಿಲ್ಲ. ಅನಂತರ ಕ್ರುಶನ್ ಲವಣವನ್ನು ನಿತ್ಯ ಬೆಳಿಗ್ಗೆ ಚಾದೊಡನೆ ಸೇವಿಸಿ ನೋಡಬೇಕೆಂದು ನಿರ್ಧರಿಸಿ ಒಂದು ವರ್ಷದ ವರೆಗೆ ಬಿಡದೆ ಸೇವಿಸುತ್ತಾ ಬಂದೆನು ಅದರ ಸೇವನೆಯು ಪ್ರಥಮ ತಿಂಗಳಲ್ಲೇ ನನ್ನ ಮಲಬದ್ಧತೆಯು ನಿಂತಿತೆಂದ ಹೇಳಲು ನನಗೆ ತುಂಬಾ ಸಂತೋಷವಾಗುತ್ತದೆ 'ಮಿಸೆಸ್ ಜ ಎ. ಎಸ್

ನಮ್ಮ ಹೊಟ್ಟೆಯೊಳಗಿನ ಅವಯವಗಳು ಕ್ರಮ ಪ್ರಕಾರವಾಗಿ ಅವುಗಳ ಕಾರ್ಯವು ಸಾಂಗವಾಗಿ ನಡೆಯುವಂತೆ ಮಾಡಲು ಕ್ರುಶನ್ ಲವಣದಷ್ಟು, ಖಂಡಿತವಾಗಿಯೂ ಖಾತ್ರಿ ಮತ್ತು ಯೋಗ್ಯವಾದುದು ಬೇರೆ ಇಲ್ಲವೆಂದು ಹೇಳಬಹುದ ಕ್ರುಶನ್ ಲವಣದ ನಿಧಾನವಾದ ಸಮ್ಮಿಳಿತದ ಶಕ್ತಿಯು ನಮ್ಮ ಶರೀರ ರಚನಾ ಕ್ರಮಕ್ಕೆ ತಡೆಗಟ್ಟದಂತೆ ಸಹಕರಿಸುತ್ತದೆ ಕ್ರುಶನ್ ಲವಣವನ್ನು ಸೇವಿಸುವಾಗ ಅದರ ಪ್ರಮಾಣವನ್ನು ಪ್ರತಿನಿತ್ಯವೂ ಹೆಚ್ಚಿಸ ಬೇಕಾದ ಅಗತ್ಯವಿರುವುದಿಲ್ಲ

ಕ್ರುಶನ್ ಲವಣವು ನಮ್ಮ ಮಲಬದ್ಧತೆಯನ್ನು ದೂರಕೊಳಿಸುತ್ತಾ ಬರುವಷ್ಟಕ್ಕೆ ನಮ್ಮ ಶರೀರದೊಳಗೆ ಅದರಲ್ಲಿ ಮಿಶ್ರವಾಗಿರುವ ಆರು ಬಗೆಯ ಇತರ ಲವಣಗಳನ್ನು ಕೂಡಿಸಿ ನಿಮ್ಮಲ್ಲಿ ನವಚೈತನ್ಯದ ಹುರುಪನ್ನುಂಟು ಮಾಡುತ್ತಿಗೆ

ಇದರ ಸೇವನೆಯು ಪರಿಣಾಮವಾಗಿ ನಿಮ್ಮ ಜೀವಮಾನದಲ್ಲಿ ಬರಬಹುದಾದ ಎಲ್ಲಾ ರೋಗಸಂಕಷ್ಟಗಳನ್ನು ಹೋಗಲಾಡಿಸುತ್ತದೆ ಇದರ ಸೇವನೆಯಿಂದ ಶಿರೋವೇದನೆ, ಆಯಾಸ,

ಬಳಲುವಿಕೆ, ಮುಂತಾದುವು ಪೂರ್ಣವಾಗಿ ನಿಂತುಹೋಗುತ್ತವೆ

ಕ್ರುಶನ್ ಲವಣವು ಎಲ್ಲಾ ಸ್ಟೋರು ಗಳಲ್ಲೂ ಬಜಾರುಗಳಲ್ಲೂ ದೊರೆಯುತ್ತದೆ.

ಮೈಸೂರು ದಿವಾನರ ಮಾತು! ರಾಷ್ಟ್ರಧ್ವಜವನ್ನು ಕುರಿತಾದ ಭರವಸೆ; ಧ್ವಜಗಳೊಳಗೆ ದ್ವಂದ್ವವೆದ್ದೀತೆಂದು ಬೆದರಿಕೆ!

ಎರಡು ಧ್ವಜಗಳು

ಅಸ್ಸಾಮು ಸರಕಾರದ ವಿದ್ಯಾ ಇಲಾಖಾ ಮಂತ್ರಿ ಶ್ರೀ। ಮೌಲ್ವಿ ಮನ್ಸರ್ ಆಲಿಯವರು ಸಿಲ್ಹೆಟ್ ನಗರಕ್ಕೆ ಬರಲು, ಅವರಿಗೆ ಬಿನ್ನವ ದೊಡನೆ, ಎರಡು ಕಾಂಗ್ರೆಸ್ ಧ್ವಜಗಳನ್ನೂ ಎರಡು ಮುಸ್ಲಿಮ್ ಲೀಗ್ ಧ್ವಜಗಳನ್ನೂ ಇಬ್ಬರು (ಹಿಂದೂ ಮತ್ತು ಮುಸ್ಲಿಮ) ಯುವ ಕರು ಒಪ್ಪಿಸಿದರು

'ಈ ದೇಶದಲ್ಲಿ ಪ್ರಮುಖವಾದ ಎರಡು ಮಹಾ ಸಮಾಜಗಳು ಒಂದಾಗಲಿರುವ ಹಾಗೂ ದೇಶವೇ ಒಂದಾಗಲಿರುವ ಸಂಭವದ ಪೂರ್ವ ಸೂಚನೆಯಿದು, ಇವೆರಡು ಧ್ವಜಗಳು ಪ್ರತ್ಯೇಕ ವಾದ ಧ್ಯೇಯಗಳುಳ್ಳ ಎರಡು ಮಹಾ ಸಮೂಹಗಳನ್ನು ಸೂಚಿಸುತ್ತವೆ ನಮ್ಮ ದೇಶದಲ್ಲಿರುವ ಸಮಾಜಗಳೂ ಜಾತಿಗಳೂ ಎಲ್ಲ ಒಂದಾಗಲಾರವಾದರೂ ಒಂದೇ ಧ್ಯೇಯದ ಕಡೆಗೆ ನಡೆಯುವಂತೆ ಸಾಧಿಸುವುವು ಇಂತಹ ಸಾಮಾನ್ಯ ಧ್ಯೇಯವನ್ನೂ ಇಡೀ ಜನಾಂಗದ ಆಶಾಭರವಸೆಗಳನ್ನೂ ಸೂಚಿಸುವ ಒಂದೇ ಧ್ವಜವು ಸದ್ಯದಲ್ಲೇ ಉಂಟಾಗಬಹುದು ಈ ದಿನವು ಬೇಗನೆ ಮೂಡುವಂತೆ ಎಲ್ಲ ಸಮಾಜಗಳವರೂ ಒಂದಾಗಿ ಸಾಧಿಸಲಿ ಇವೆರಡು ಧ್ವಜಗಳು ಒಂದಾದಂದೇ ನಮಗೆಲ್ಲ ಮುಕ್ತಿ ಎಂದು ಅವರ ಭಾಷಣ

ಖುದಾಯಿ ಖಿತ್‌ಮತ್‌ಗಾರರಿಗೆ!

[ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನ್ ಇವರು ಕೈಕೊಂಡ ಉಪವಾಸದ ಮೊದಲು ಪ್ರಕಟಿಸಿದುದು.]

ಖುದಾಯಿ ಖಿತ್‌ಮತ್‌ಗಾರರ ಕೂಟವನ್ನು ವ್ಯವಸ್ಥೆಗೊಳಿಸುವ ಮೊದಲು ನಾನು ದೇವರನ್ನು ಬೇಡಿಕೊಂಡು, ಈ ಸಂಸ್ಥೆಯು ಶ್ರೀಮಂತರಿಗೂ ಬಡವರಿಗೂ ಏಕಪ್ರಕಾರವಾಗಿ ಸೇವೆ ಮಾಡುವುದಕ್ಕೂ ಮನುಷ್ಯ ಕೋಟಿಯ ಸೇವೆಗಾಗಿಯೆ ಇದು ಉಂಟಾಗಿದೆ ಎಂದೂ ಆಣೆಯಿಟ್ಟು ಹೇಳಿಕೊಂಡೆನು ಸಂಗಡಿಗಳಲ್ಲಿನ ಗಲ್ಲಾಟೆಗಳಿಂದ ಇವರನ್ನು ದೂರವಿಟ್ಟು, ಲೇಶವಾದರೂ ಹಿಂಸೆಯ ಸ್ಪರ್ಶವೂ ತಟ್ಟದಂತೆ ಇವರನ್ನು ಕಾಪಾಡಬೇಕೆಂದಿದ್ದೆನು ಮೊನ್ನೆ ಪಂಜಾಯಿ ಗ್ರಾಮದ ಕೆಲವು ಮೌಲ್ವಿಗಳು ನನ್ನನ್ನು ಕಾಫರನೆಂದೂ ಲೆನಿನನ ಮಗನೆಂದೂ ಬಹಿರಂಗವಾಗಿ ಬೈದರು ನನ್ನ ತಂಡದವರು ಇದನ್ನು ಸಹಿಸದೆ ರೇಗಿದರು ಅಲ್ಲೇ ಶಾಂತಿ ಭಂಗವಾಗುವಂತಿತ್ತು ನನ್ನ ಶಿಷ್ಯರು ಈ ರೀತಿಯಾಗಿ ಸ್ವಲ್ಪದರಲ್ಲೇ ಕ್ರೋಧೋನ್ಮತ್ತರಾಗುವುದನ್ನು ನಾನು ಮೆಚ್ಚುವುದಿಲ್ಲ, ಇದರಿಂದ ನಮ್ಮ ಸಂಸ್ಥೆಯ ಹೆಸರು ಕೆಡುವುದು ಇಂತಹ ಮಾತುಗಳನ್ನು ಕೇಳಿ ಸಹಿಸಲಾರದವರು ದೇವರನ್ನೆ ಮರೆಯುವರು ಸತ್ಯ ಅಹಿಂಸೆ, ದೈನ್ಯ ಸೇವೆ ಇವೇ ನಮ್ಮ ಸಂಸ್ಥೆಯ ಮೂಲಾಧಾರಗಳು ನಮ್ಮ ವಿರೋಧಿಗಳು ಹೇಳುವುದನ್ನು ಕೇಳಿಯೂ ನಾವು ಜನರ ಸೇವೆ ಮಾಡುವೆವು ಅಹಿಂಸೆಯನ್ನು ಮಾತಿನಲ್ಲೂ ಕಾರ್ಯದಲ್ಲೂ ಪಾಲಿಸಲಾರದವರು ನಮ್ಮ ಸಂಸ್ಥೆಯನ್ನು ಬಿಟ್ಟು ತಮ್ಮ ಮನೆಗಳಲ್ಲೇ ಇರಲಿ ನನ್ನ ಕೆಲವು ಶಿಷ್ಯರು ಅಲ್ಲಿ ತೋರಿಸಿದ ತೀವ್ರ ಕೋಪಕ್ಕಾಗಿ ಎಲ್ಲ ಜವಾಬ್ದಾರಿಯನ್ನೂ ನಾನೇ ವಹಿಸಿಕೊಂಡಿದ್ದೇನೆ ಇದಕ್ಕಾಗಿ, ಆ ಶಿಷ್ಯರ ಒಡಲಾಗಿ ನನ್ನನ್ನೆ ನಾನು ದಂಡಿಸಿಕೊಳ್ಳುವೆನು ನನ್ನ ಶಿಷ್ಯರು ಯಾರೊಡನೆ ಕೋಪದ ಮಾತುಗಳನ್ನು ಆಡಿದರೋ ಅವರೊಡನೆ ಕ್ಷಮೆ ಕೇಳುವ ಮೂಲಕ ಅವರ ಅಂತರಂಗಗಳನ್ನು ಪರಿಶುದ್ಧ ಮಾಡಿಕೊಂಡು, ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡುವ ತನಕ ನಾನು ಉಪವಾಸ ಮಾಡುವೆನು ಪಕ್ಷಗಳನ್ನು ಕಟ್ಟಿಕೊಂಡು ಇರುವುದನ್ನು ಬಿಟ್ಟು, ಇತರರೊಡನೆ ಹಗೆಮಾಡದೆ, ಇತರರನ್ನು ಪೀಡಿಸದೆ, ಇತರರು ಕೈಮಾಡಿದರೂ ಸಹಿಸಿ ನೀವು ಬಾಳಬೇಕೆಂದು ನಾನು ದೇವರ ಹೆಸರನ್ನೆತ್ತಿ ನಿಮ್ಮನ್ನು ಬೇಡುವೆನು ಇತರರು ನಮ್ಮನ್ನು ಹಿಂಸಿಸುವುದನ್ನು ನಾವು ನಗುತ್ತ ಸಹಿಸಬೇಕು ಆಗ ಮಾತ್ರ, ನಾವು ಈ ದಳದಲ್ಲಿ ಸೇರುವಾಗ ಮಾಡಿದ ಪ್ರಮಾಣವು ಸಫಲವಾದೀತು

ಮಹಾತ್ಮಾಗಾಂಧಿಯವರು, ಶ್ರೀ। ಜಿನ್ನರ ನಿಲಯದಿಂದ ಹಿಂತೆರಳುವದು

ಹಿಂದೂ ಮುಸಲ್ಮಾನರು ಒಂದಾಗಿ ಹೋಳಿಹಬ್ಬವನ್ನು ನಡೆಸಿದರು!

ಹಿಂದೂ ಮುಸಲ್ಮಾನರ ಒಂದಾದರೆ ತಾನು ತಲೆ ಬೋಳಿಸುವೆನೆಂದು ಹಕ್ಕರಿಂದರೂ ಪಾಟ್ನಾ ನಗರದ ಭೂಮಿಯೆಂಬ ಗ್ರಾಮದಲ್ಲಿ ಹಿಂದೂ ಮುಸಲ್ಮಾನರು ಐಕ್ಯವಾಗಿ ಹೋಳಿ ಹಬ್ಬವನ್ನು ನಡೆಸಿದ ಶುಭವಾರ್ತೆಯ ಇಂದು ಬಂದಿರುವುದು

ಕಳೆದ ವರ್ಷ ಇಂಟೆರಿಮ್ ಮಂತ್ರಿ ಮಂಡಳದ ಆಡಳಿತದಲ್ಲಿ ಅದೇ ಗ್ರಾಮದಲ್ಲಿ ಜಾತೀಯ ಕಲಹವಾಗಿತ್ತು ತತ್ಸಂಬಂಧವಾಗಿ ಮೂವರು ಮುಸಲ್ಮಾನರಿಗೆ ತಲಾ ರೂ 500 ರಂತೆ ಜುಲುಮಾನೆಯನ್ನು ಕೊಡಲು ಅವರು ಅಶಕ್ತರಾದುದರಿಂದ ಆ ಗ್ರಾಮದ ಹಿಂದೂ ನಿವಾಸಿಗಳು ವಂತಿಗೆ ಮಾಡಿ ರೂ 1500 ಒಂದುಗೂಡಿಸಿ, ಜುಲುಮಾನೆಯನ್ನು ಕೊಟ್ಟು, ಅವರನ್ನು ಮುಕ್ತರನ್ನಾಗಿ ಮಾಡಿದ್ದರು

ನಂತರ ಹಿಂದೂ ಮುಸಲ್ಮಾನರು ಸಭೆ ಗೂಡಿ ಒಂದು ವಿನಂತಿಯನ್ನು ಸರಕಾರಕ್ಕೆ ಬರೆಕೊಂಡವರೆಗೆ ಅಲ್ಲಿ ಇಟ್ಟಿದ್ದ ಪೋಲೀಸು ಪಡೆಯನ್ನು ಈಗ ಹಿಂದೆಗೆಯಲಾಗಿದೆ ಅಲ್ಲದೆ ಮೊನ್ನೆ ತಾನೆ ನಡೆದ ಹೋಳಿ ಹಬ್ಬದ ದಿನ ಮುಸ್ಲಿಂ ಬಂಧುಗಳೂ ಹಿಂದುಗಳೊಡನೆ ಕಲೆತು ಹೋಳಿ ದಿನಾಚರಣೆಯನ್ನು ಜರುಗಿಸಿದರು

ಪೋಲೀಸ ಫೌಜಿಗೆ

ಪೋಲೀಸ್ ಪರಿಷತ್ತಿನಲ್ಲಿ ಬಿಹಾರದ ಮುಖ್ಯ ಮಂತ್ರಿಗಳ ಸದ್ಬೋಧೆ

ಪೋಲೀಸರೂ ದೇಶಭಕ್ತರಾಗಲು ಸಾಧ್ಯವಿದೆ ಅವರು ದೇಶಭಕ್ತರಾಗಲಿ ಬೇಕೆನ್ನುವೆನು. ಅವರು ದೇಶವು ಉನ್ನತಿಗೆ ಬರಲೆಂದೇ ಆಶಿಸಬೇಕಲ್ಲದೆ, ಯಾವುದೊಂದು ರಾಜಕೀಯ ಪಂಗಡದ ಪಕ್ಷಪಾತಿಗಳಾಗಲಾರದು ನ್ಯಾಯ ಮತ್ತು ಸ್ವಾತಂತ್ರ್ಯಗಳನ್ನು ಆಧರಿಸಿಕೊಂಡು ನೆಮ್ಮದಿ ಕಾಪಾಡುವುದಷ್ಟೆ ಪೋಲೀಸರಿಗೆ ಬೇಕಾಗಿರುವ ರಾಜಕೀಯ ತಿಳಿವಳಿಕೆ ಇವೇ ನಮ್ಮ ಪ್ರಾಂತ್ಯದ ಪೋಲೀಸ ಫೌಜಿನ ಮೂಲ ಸೂತ್ರಗಳಾಗಿರತಕ್ಕದ್ದು ಅವರು ತಮ್ಮ ನಡತೆಯ ಮೂಲಕ ಜನರ ಗೌರವವನ್ನು ಸಂಪಾದಿಸಿ ಕೀರ್ತಿವಂತರೂ, ಮೆಚ್ಚಿನವರೂ ಆಗಬೇಕು ಜನರಲ್ಲಿ ಯಾವ ಮತ ಧರ್ಮ ಸಮಾಜಗಳವನೇ ಆದರೂ ನಿಮ್ಮ ಕೈಯಲ್ಲಿ ತಾನು ಸುರಕ್ಷಿತನೆಂದು ತಿಳಿದುಕೊಳ್ಳುವಂತಾಗಲಿ. ಇನ್ನು ನಮಗೆ ಸಾಧ್ಯವಾದರೆ, ಪ್ರಪಂಚದಲ್ಲಿ ಯಾವ ಪೋಲೀಸ ಫೌಜಿಗಿಂತಲೂ ಉತ್ತಮ ಸ್ಥಾನವು ನಿಮ್ಮದಾಗುವುದು

ನಮ್ಮಿಬ್ಬರ ಉದ್ಯೋಗವು ಒಂದೇ ಬಗೆಯಲ್ಲಿ ಪವಿತ್ರವಾದುದು ಅದಕ್ಕಾಗಿಯೆ ನಾವು ಪರಸ್ಪರವಾಗಿ ಪರಿಚಯ ಹೊಂದಬೇಕಾಗಿದೆ ಹಾಗೆಂದೇ ನಾನಿಲ್ಲಿಗೆ ಈದಿನ ನಿಮ್ಮೊಡನೆ ಸಂಭಾಷಿಸಬಂದಿರುವೆನು ರಾಜ್ಯದ ಬೆಂಬಲವೂ ನೀವು ಕೈಯೂ ನೀವು ಸೇವಾಗುಣವು ನಿಮ್ಮಲ್ಲಿ ಹೆಚ್ಚಿದಷ್ಟಕ್ಕೆ ರಾಜ್ಯವು ಉತ್ತಮವಾಗುವುದು

ಮೈಸೂರು ದಿವಾನರ ಮಾತು—

ರಾಷ್ಟ್ರಧ್ವಜವನ್ನು ಕುರಿತಾದ ಭರವಸೆ, ಧ್ವಜಗಳೊಳಗೆ ದ್ವಂದ್ವವೆದ್ದೀತೆಂದು ಬೆದರಿಕೆ

ಶ್ರೀಮನ್ಮಹಾರಾಜರವರ ... ವಿದುರಾಶ್ವತ್ಥದ ಒಳಿ ನಡೆದ ಹ... ದನ್ನು ಕೇಳಿ ಸಂತಾಪಗೊಂಡಿದ್ದರು ... ದುರಂತ ಕ್ಷೇತ್ರದ ಸಂದರ್ಶನೆ ಮಾಡಿ ನಡೆದುದೆಲ್ಲ ವಿಚಾರಿಸಿದರು ಬಹಳ ... ದಿರುವರು ಹೀಗಾಗಿ ಮೈಸೂರು ಪ್ರಜಾ ಸ್ವಾತಂತ್ರ್ಯ ಸಮಿತಿಯ ಕಾರ್ಯದರ್ಶಿಯವರನ್ನು ... ಬರಮಾಡಿಸಿಕೊಂಡು ತಮ್ಮ ... ಗಳನ್ನು ವಿವರಿಸಿದರು

ಒಂದೂವರೆ ತಾಸು ನಡೆದ ಈ ಸಂಭಾಷಣೆಯಲ್ಲಿ ಎಲ್ಲ ವಿಷಯಗಳನ್ನು ಮರೆಮಾಜಿಲ್ಲದೆ ಚರ್ಚಿಸಲಾಯಿತು ದಿವಾನರ ಖೇದಪೂರ್ಣ ಮುಖವನ್ನು ನೋಡಿಯೂ, ಮಹಾಸ್ವಾಮಿಗಳ ದುಃಖಸಂತಪ್ತ ಹೃದಯದ ಸ್ಥಿತಿಯನ್ನು ತಿಳಿದೂ ಭೇಟಿಗೆ ಬಂದ ಕಾರ್ಯದರ್ಶಿಯವರು ಸರಕಾರವು ಪ್ರಕಟಿಸಿರುವ ವೃತ್ತಾಂತಕ್ಕೂ ಕಾಂಗ್ರೆಸ್ ಪಕ್ಷದವರು ಪ್ರಕಟಿಸಿರುವ ವೃತ್ತಾಂತಕ್ಕೂ ... ವ ಹೆಚ್ಚುಕಡಿಮೆ ಯನ್ನು ವಿವರಿಸಿದರು ದಿವಾನರು—ಇನ್ನು ನಡೆದ ಯಾವತ್ತು ವಿದ್ಯಮಾನಗಳ ... ಸದ್ಯದಲ್ಲೇ ನಡೆವ ಸ್ವತಂತ್ರ ವಿಚಾರಣಾ ಸಮಿತಿ...

ಗಾಂಧಿಜಿಯವರು ವೈಸ್ರಾಯರ ಭೇಟಿಗೆ ಕಲ್ಕತ್ತೆಯಿಂದ ಡೆಲ್ಲಿಗೆ ಹೋಗುತ್ತಿರುವಾಗ, ಹಾದಿಯಲ್ಲಿ ಅಲ್ಲಹಾಬಾದ್ ಸ್ಟೇಶನಿನಲ್ಲಿ ಶ್ರೀ। ಜವಾಹರಲಾಲರನ್ನು ಕರೆದು ಮಾತನಾಡಿದರು

ಯವರಿಂದ ವಿಮರ್ಶಿಸಿ ಸತ್ಯವು ಪ್ರಕಟವಾಗುವುದೆಂದೂ ಯಾರೇ ಆಗಲಿ ನಿರ್ಭಯವಾಗಿ ತಮಗೆ ತಿಳಿದಿರುವುದನ್ನೆಲ್ಲ ಆ ಸಮಿತಿಯ ಮುಂದಿಡಬೇಕೆಂದೂ ಮಾತ್ರವಲ್ಲದೆ — ತಮಗೆ ಕೋವಿ ಪ್ರಯೋಗ ಮಾಡುವುದು ಸಾಮಾನ್ಯವಾಗಿ ಸಮ್ಮತವಲ್ಲ ಅಗತ್ಯವೇನೂ ಅಷ್ಟು ಇದ್ದಲ್ಲಿ ಇತರ ವಿಧಾನಗಳಿಂದ ಜನರನ್ನು ಚದರಿಸುವುದೇ ತಮಗಿಷ್ಟದ ಕ್ರಮವೆಂದೂ ತಿಳಿಸಿದರು

ದೇಶಭಕ್ತ ಮೈಸೂರು ಪ್ರಜೆಗಳಲ್ಲಿ ಯಾರೂ ಈ ಭಾವನೆಗಳಿಗೆ ವಿರುದ್ಧವಾಗಿ ಆಕ್ಷೇಪಿಸಲಾರರೆಂದೂ ಕಾಂಗ್ರೆಸ್ ಭಕ್ತರಲ್ಲಾರೂ ಇದು ಅನ್ಯಾಯವೆಂದಾಡಲಾರರೆಂದೂ ದಿವಾನ ಸಾಹೇಬರು ನಂಬಿರುವರು

ಪತ್ರಿಕಾಕರ್ತರು

ಯಾವ ದೈನಿಕ ಪತ್ರಿಕೆಗಳನ್ನು ನಿರ್ಬಂಧಕ್ಕೊಳಪಡಿಸಲಾಗಿದೆಯೋ ಅವರ ಸಂಪಾದಕರನ್ನು ಸರಕಾರದ ಚೀಫ್ ಸೆಕ್ರೆಟರಿಯವರು ಕರೆಯಿಸಿಕೊಂಡು, ವಿದ್ಯಮಾನಗಳನ್ನು ಚರ್ಚಿಸುತ್ತಿರುವರಾಗಿಯೂ ಅದರಿಂದ ನಿರ್ಬಂಧಗಳು ದೂರಗೊಳ್ಳುವುವೆಂದೂ ನಂಬಲಾಗಿದೆ

ಸರಕಾರದ ಉದ್ದೇಶ

ಇದು ಸರಿಯಾಗಿ ಸಕಲರಿಗೂ ತೃಪ್ತಿಕರವಾಗುವಂತೆ ಪ್ರಕಟವಾಗಬೇಕೆಂದು ಕಾರ್ಯದರ್ಶಿಗಳನ್ನು ಸೂಚಿಸಲು, ಆ ಭಾಗದಲ್ಲಿ ಸ್ಪಷ್ಟ ಸೂಚನೆಗಳನ್ನು ಕೊಡಲಾಗಿದೆ ಎಂದೂ ಇನ್ನು ಮುಂದೆ ಇಂತಹ ಅಚತುರ ಕೃತಿಗಳು ನಡೆಯಲು ಆಸ್ಪದವಿಲ್ಲೆಂದೂ ತಿಳಿಸಿದರು

ಹರಿದ್ವಾರದಲ್ಲಿ ಮಹಾಮೇಳ

ಗಾಂಧಿಜಿಯವರೊಡನೆ ಸಂಭಾಷಣೆ

ಎಪ್ರಿಲ್ ತಾ ೨೮ರಲ್ಲಿ, ಟೆಲಿಫೋನ್ ಮೂಲಕ ದಿವಾನರು ಗಾಂಧಿಜಿಯವರೊಡನೆ ವಿದುರಾಶ್ವತ್ಥದಲ್ಲಾದ ವೃತ್ತಾಂತವನ್ನು ಕುರಿತಾಗಿ ಸಂಭಾಷಣೆಯನ್ನು ಒಂದು ತಾಸಿನ ತನಕ ಮಾಡುತ್ತಿದ್ದರೆಂದೂ ಶ್ರೀ ರಾಜಗೋಪಾಲಾಚಾರ್ಯರಿಗೂ ಹೀಗೆ ಟೆಲಿಫೋನ್ ಮೂಲಕ ಎಲ್ಲವನ್ನೂ ವಿವರಿಸಿರುವರೆಂದೂ ಸಂಯುಕ್ತ ಕರ್ನಾಟಕವು ಪ್ರಕಟಿಸಿರುವುದು

ಧ್ವಜದ ವಿಚಾರ

ಕಳೆದ ವರ್ಷ ಎಸೆಂಬ್ಲಿಯಲ್ಲಿ ... ವಿಷಯ ಹೇಳಿದುದನ್ನು ಸರಿಯಾಗಿ ಗ್ರಹಿಕೆಗೆ ತಂದುಕೊಳ್ಳದ ಕಾರಣದಿಂದ ಪುನಃ ಅದನ್ನು ಸ್ಪಷ್ಟಗೊಳಿಸಿ,— ರಾಷ್ಟ್ರ ಧ್ವಜವನ್ನು ಬಹಿರಂಗವಾಗಿ ಪ್ರದರ್ಶಿಸುವುದರಲ್ಲಿ ಮೈಸೂರು ಸರಕಾರವು ಕಿಂಚಿತ್ತಾದರೂ ಆಕ್ಷೇಪಿಸುವುದಿಲ್ಲವೆಂದೂ ಈ ದೇಶದಲ್ಲಿ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸಿನ ಧ್ವಜವನ್ನು ಮೈಸೂರು ಸರಕಾರವು ಗೌರವದಿಂದ ಕಾಣುತ್ತದೆಂದೂ ಯಾವ ಪಂಗಡದವನೇ ಆದರೂ ಹಿಂದೀಯನೆನಿಸಿರುವವನು ತನ್ನ ಸೋದರ ಕೋಟಿಯ ಧ್ಯೇಯಾದಿಗಳ ಸೂಚನೆಯಾಗಿರುವ ಆ ಧ್ವಜವನ್ನು ಮನ್ನಿಸಲೇ ಬೇಕೆಂದೂ ತಾನು ಹಿಂದೀಯನು' ಎಂಬುದರಲ್ಲಿ ಮುಸ್ಲಿಮ ಲೀಗಿನವರೂ ಸ್ಥಳೀಯ ರಾಜ್ಯದ ಪ್ರಜೆಗಳೂ ಅಡಕವಾಗಿಯೇ ಇರುವುದೆಂದೂ ವಿವರಿಸಿ—ಕಾಂಗ್ರೆಸಿನ ವಾರ್ಷಿಕೋತ್ಸವವೊಂದನ್ನು ಜರುಗಿಸಲು ತಾವೇ ಹೋಗಿದ್ದು ತಲೆಯ ಮೇಲೆಯೆ ಕಾಂಗ್ರೆಸ್ ಧ್ವಜವಿದ್ದುದನ್ನು ದೃಷ್ಟಾಂತವಾಗಿ ತಿಳಿಸಿದರು

ಯುವರಾಜಕುಮಾರ ಶ್ರೀ। ಜಯಚಾಮರಾಜ ವೊಡೆಯರರ ಶುಭ ವಿವಾಹ ಸಂದರ್ಭದಲ್ಲಿ ಮೈಸೂರು ಮ್ಯುನಿಸಿಪಾಲಿಟಿಯು ನಗರ ಶೃಂಗಾರಕ್ಕಾಗಿ ಕಾಂಗ್ರೆಸ್ ಧ್ವಜವನ್ನು ಉತ್ತಮವಾಗಿ ಉಪಯೋಗಿಸಬಹುದೆಂಬುದರಲ್ಲಿ ಸಂಶಯವಿಲ್ಲವೆಂದರು

ಆದರೆ,—ಮೈಸೂರು ಧ್ವಜವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಗೌರವಿಸುವ ಯಾವ ಬಗೆಯ ಪ್ರಯತ್ನಗಳೂ ಆಗಬಾರದೆಂದೂ, ಮೈಸೂರು ಧ್ವಜದ ಬದಲಾಗಿ ಇತರ ಯಾವ ಪ್ರಜಾಪಿಠಿಗೆ ಪಾತ್ರನಾದ ಧ್ವಜವನ್ನು ಪ್ರದರ್ಶಿಸುವುದು ಸರಿಯಲವೆಂದು ಬಹಳ ಆವೇಗದಿಂದ ನುಡಿದರು

ಮತ್ತೊಬ್ಬ ಉಪವಾಸಿ ಸತ್ಯಾಗ್ರಹಿ

ಇವನ ಹೆಸರು ಲಾಲ್ ಮಹಮ್ಮದ ಸಿಂಧ ಪ್ರಾಂತ್ಯದ ಮಾತ್ಯಾರಿ ಗ್ರಾಮದವನು ಪೋಲೀಸರ ತನ್ನನ್ನು ಪೀಡಿಸಿ ತನಗೆ ಜೀವವೇ ಭಾರವಾಗುವಂತೆ ಗಂಡಾಂತರಕ್ಕೀಡು ಮಾಡಿರುವ ಕಾರಣ ಮುಖ್ಯ ಮಂತ್ರಿ ಖಾನ್ ಬಹದ್ದೂರ ಅಲ್ಲಾ ಬಕ್ಷರ ಮನೆಯಲ್ಲೀಡು ಅಲ್ಲಿ ತಾ ೪ರಿಂದ ಉಪವಾಸ ಮಾಡಿ, ಪೋಲೀಸರ ಬಾಧೆ ತಪ್ಪುವುದಾಗಿ ಖಂಡಿತ ತಿಳಿದು ಬರುವ ತನಕ ಅಥವಾ ಮರಣವೇ ಆಗುವ ವರೆಗೆ ಸತ್ಯಾಗ್ರಹ ಆಚರಿಸುತ್ತೇನಾಗಿ ತಿಳಿಸಿಬಿಟ್ಟಿದ್ದಾನೆ

ಗಾಂಧಿಜಿಯವರ ಬಾಷಣ

ವಾರ್ಧಾಸ್ಕೀಮು ಸ್ವರಾಜ್ಯಕ್ಕಾಗಿ— ತರಬೇತಿನ ಶಿಕ್ಷಕರಿಗೆ ಮಾತು.

ಮಾಸಿಕ ಕಲಬು ... ರೂಪಾಯಿಯ ಂತೆ ೨೦ ವರ್ಷದ ವರೆಗೆ ಶಿಕ್ಷಕರಾಗಿ ಕಾರ್ಯ ಮಾಡುವೆವೆಂದ ಪ್ರಮಾಣ ಮಾಡಿ ಉಪಾಧ್ಯಾಯರನ್ನು (೫೦೦೦ ಅರ್ಜಿಗಳಿದ್ದವು ... ನ್ನು ಮಾತ್ರ ಅಂಗೀಕರಿಸಲಾಗಿದೆ) ಕುರಿತು, ಮಹಾ ಮಹಾತ್ಮಾಜಿಯವರು ಮಧ್ಯಪ್ರಾಂತ್ಯದ ವಿದ್ಯಾ ಮಂದಿರ ಯೋಜನೆಯ ಸ್ವಸ್ತಿವಾಚನ ಸಮಾರಂಭದಲ್ಲಿ ಹೀಗೆಂದರು —

೫೦೦೦ ಅರ್ಜಿಗಳಿದ್ದುದ ದೇಶಪ್ರೇಮ ಸೂಚನವಲ್ಲ ನಿರುದ್ಯೋಗತೆ ಹೆಚ್ಚಿರುವುದರ ಪರಿಣಾಮ ಎಂದೇ ತಿಳಿಯಬೇಕು ಸರಕಾರೀ ಹುದ್ದೆಗಳಿಗೆ ಇರುವ ವ್ಯಾಮೋಹ ಅಷ್ಟಿದೆ ಎಂದೂ ಇದರ ಅರ್ಥ ಶಿಕ್ಷಕನಾಗಿ ಅಥವಾ ಕೊನ್ಸಟೇಬಲನಾಗಿ ಸೇರಲೂ ಜನರು ಮುಂದೆ ಬಂದು ನ್ಯಾಯವಾದ ಸಂಬಳಕ್ಕೆ ಅನ್ಯಾಯವಾದ ಲಂಚವನ್ನು ಕೂಡಿಸಿ ದುಡಿಯುವ ಇಚ್ಛೆ ತೋರಿಸುತ್ತಾರೆಂದೂ ಬಲ್ಲೆನು ನಿಮ್ಮಲ್ಲಿ ಯಾರಿಗೂ ಇಂತಹ ದುರಾಶೆ ಇರದೆಂದು ನಂಬಿದ್ದೇನೆ

ತಿಂಗಳಿಗೆ ೧೫ ರೂಪಾಯಿ ಸಂಬಳದ ಮೇಲೆ ಕೆಲಸ ನೋಡುವೆನೆಂದು ನಾನೇ ಆದರೂ ... ದೇಶಪ್ರೇಮ ವಿದ್ವರ... ಕರಾರು ಮಾಡಿ ... ವಾಗ್ದಾನ ಮಾಡಲಾರೆ ... ಅಷ್ಟು ಕಠಿನವಾದುದು

... ಶಾಲೆಯ ... ಕಲ್ಲಿ ಅದರಲ್ಲಿ ಸರಿಪಾಲು ... ಇದ್ದೀತೆಂದು ... ಈಗಲೇ ಈ ... ಹಿಂತೆಗೆದುಕೊಳ್ಳಬಹುದು ... ತೆಗೆಯಿರಿ ... ಹೀಗೆ ಮಾಡಿಸಿಕೊಡುವೆನು

... ಸರಿಸಿ ವಾರ್ಧಾ ಸ್ಕೀಮನ್ನು ... ಅಹಿಂಸೆ ಸತ್ಯ ... ಸತ್ಯಾಧಾರದ ... ಸ್ವರಾಜ್ಯವನ್ನು ... ಧ್ಯೇಯವು ಕಾಂಗ್ರೆಸಿಗಿದೆ ಈ ಸದ್ಗುಣಗಳನ್ನು ... ನೀವು ರೂಢಿಸಿಕೊಳ್ಳಬೇಕು ಇವನ್ನು ನೀವು ಆಚರಿಸಿ ವಿದ್ಯಾರ್ಥಿಗಳೊಡನೆ ಬೆರೆಸಿರಲಾರಿರಾದರೆ ... ಲಾರವು ... ಹಿಟ್ಲರನು ... ಮಾಡುತಿರುವನೋ ... ಬಹಿರಂಗವಾಗಿ ಹಿಂಸೆಯೇ ತನ್ನ ಧ್ಯೇಯವಾಗಿ ಅವನು ಸಾರುತ್ತಾನೆ ... ಆತ್ಮವೆಂದ ... ಸಾರಿದನು ಮೂಲಪಾಠದಿಂದಲೂ ವಿದ್ಯಾರ್ಥಿಗಳಿಗೆ ಹಿಂಸಾವಿಚ್ಛಾನದ ಪಾಠಗಳು ನಡೆಯುತ್ತವೆ ಗಣಿತ ಮೊದಲಾದ ವಿಷಯಗಳಲ್ಲಿ ಸಹ ... ಹಾಗೆ ... ವೃದ್ಧಿಪಡಿಸುತ್ತವೆ ... ರೂಪಯಾಗಿದೆ ... ಧರ್ಮ ... ನಡೆಯಬೇಕು ... ಈ ಸ್ಕೀಮು ಎಲ್ಲಾ ವಿಧಗಳಲ್ಲಿ ಸಂಪೂರ್ಣವಾಗಿ ಈ ದೇಶದಲ್ಲೆಲ್ಲ ಜಾರಿಗೆ ಬಂದರೆ ಮೌನವಾಗಿ ಕ್ರಾಂತಿಯುಂಟಾಗಿ ಸ್ವರಾಜ್ಯವೇ ಖಂಡಿತ ಪ್ರಾಪ್ತವಾಗುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ

ಪುರುಷರೆ ಬಲಿಷ್ಠರೆಂದು ನೀವು ಭಾವಿಸಿದ್ದಿರಲ್ಲ ಈ ಸ್ತ್ರೀಯು ಪುರುಷರಿಗಿಂತ ಬಲಿಷ್ಠಳಾಗಿರುವಳ ತನ್ನಷ್ಟೆ ಬಲಿಷ್ಠ ಮಗನನ್ನು ಚಿತ್ರದಲ್ಲಿ ತೋರಿಸಿದಂತೆ ಎತ್ತಬಲ್ಲಳು

ಚೀನಾ ವಿರೋಧದ ಪರಿಣಾಮ

ಜಪಾನಿನಲ್ಲಿ ಅಶಾಂತಿ

ಚೀನಾ—ಜಪಾನ್ ಸಮರದ ಅತ್ಯಂತ ಮೆಲ್ಲಗಾದ ಪ್ರಗತಿ ಮತ್ತು ಇತ್ತೀಚೆಗೆ ಜಪಾನಿಗೆ ಒದಗಿದ ಸೋಲುಗಳು ಇವುಗಳಿಂದಾಗಿ ಜಪಾನಿನಲ್ಲಿ ಕ್ಷೋಭೆ ಉಂಟಾಗಿರುತ್ತದೆ ಮಂತ್ರಿಮಂಡಳದಲ್ಲಿ ಬದಲಾವಣೆಗಳಾಗಬೇಕೆಂದು ವರ್ತಮಾನಪತ್ರಿಕೆಗಳ ಚಳವಳಿಯು ಈಗಲೆ ಪ್ರಾರಂಭವಾಗಿರುತ್ತದೆ

... ಅನೇಕ ಜಪಾನೀಯ ಸೈನಿಕರಲ್ಲಿ ಕೆಲವರ

ಅಲ್ಲಿನ ಒಂದು ಪತ್ರಿಕೆಯು ಹೀಗೆಂದು ಬರೆದಿರುತ್ತದೆ —

ರಾಷ್ಟ್ರಕ್ಕೆ ಭರವಸೆಗಳ ... ನ ... ಬಳವು ... ವ ... ಗಳ ... ಬದಲಾಗಬೇಕು

ಇನ್ನೊಂದ ... —

ಮಂತ್ರಿಮಂಡಳದ ಪುನರ್ವ್ಯವಸ್ಥೆಯ ಅತ್ಯಗತ್ಯವಾದುದು ಈಗ ಕೊನೆಯರ ಮಂತ್ರಿಮಂಡಳ ವಿಸರ್ಜನ ಸ್ಥಿತಿಗೆ ಬಂದಿರುತ್ತದೆ

ಈಗಿನ ಪ್ರಧಾನ ... ಗಳಿಂದ ರಾಜಕೀಯ ... ದಕ್ಷ ... ಅಧಿಕಾರ ತ್ಯಜಿಸಲು ಸಿದ್ಧರಿರುವರೆಂಬ ... ಅಭಿಪ್ರಾಯವನ್ನು ಸೂಚಿಸಿರುವರಾಗಿ ತಿಳಿದು ಬರುತ್ತದೆ

ನಲಿದು ಕಾರಾಗ್ರಹವನ್ನು ಸೇರಿದನು

... ಫ್ರಾನ್ಸ್ ನಗರದ ... ಬದಿಯ ... ಪೋಲೀಸರಿಂದ ಹಿಡಿಯಲ್ಪಟ್ಟು ಕಾರಾಗೃಹವನ್ನು ಸೇರಿದನು

ಆತನು ... ಕಾರಾಗ್ರಹದಿಂದ ಹೊರ ಬಂದವನು ಯಾವುದೊ ತಪ್ಪಿತಕ್ಕಾಗಿ ಹಿಂದೆ ಅದನ್ನು ಸೇರಿದ್ದನು ಹೊರಗೆ ಬಂದವನಿಗೆ ಜೀವನೋಪಾಯದ ಹಾದಿ ಕಾಣದಿರಲು ಮತ್ತೊಮ್ಮೆ ಕಾರಾಗೃಹವನ್ನು ಸೇರಲು ಆತನು ಆ ಉಪಾಯವನ್ನು ನಡೆಯಿಸಿಬಿಟ್ಟನಂತೆ

ಪೋಲೀಸರನ್ನು ಹಟ್ಟಿಯ ಗೂಟಕ್ಕೆ ಕಟ್ಟಿಬಿಟ್ಟರು

ತಂಜಾವೂರಿನ ಒಂದು ಹಳ್ಳಿಯಲ್ಲಿ ಹರಿಜನ ಕಾಲೊನಿಯಲ್ಲಿ ಮಹಾ ಗಲಭೆಯು ನಡೆದು ಪೋಲೀಸರು ... ಹರಿಜನ ಹೆಂಗಸನ್ನು ಕದ್ದ ಅಪಾದನೆಯ ಮೇಲೆ ಸೆರೆಹಿಡಿಯಲು ಬಂದಿದ್ದರು ಆಗ ಕೂಡಲೆ ಅನೇಕ ಹರಿಜನರ ಬಿದ್ದು ಅವರನ್ನು ಹೊಡೆದು ಬಡೆದು, ಅಲ್ಲೆ ಒಂದು ಹಟ್ಟಿಯಲ್ಲಿ ಗೂಟಕ್ಕೆ ಕಟ್ಟಿಹಾಕಿದರು ಈ ವಾರ್ತೆಯು ಪೋಲೀಸ್ ಸಬ್ ಇನ್ಸ್‌ಪೆಕ್ಟರರಿಗೆ ತಿಳಿಯಲು ಅವರು ಕೆಲಮಂದಿ ಪೋಲೀಸರೊಡನೆ ಅಲ್ಲಿಗೆ ಬರಲು, ಹರಿಜನರ ದೊಡ್ಡದೊಂದು ಗವ ಇಹವು ಅವರ ಮೇಲೆ ಬಿದ್ದು, ಅವರಿಗೂ ಮೊದಲಿನವರ ಗತಿಯು ಒದಗಿತು ಕೊನೆಗೆ ರಿಸರ್ವ್ ಪೋಲೀಸಿನವರ, ಬಂದು ಬಂಧಿತರಾದ ಪೋಲೀಸರನ್ನೂ, ಇನ್ಸ್‌ಪೆಕ್ಟರರನ್ನು ವಿಮುಕ್ತಗೊಳಿಸಬೇಕಾಯಿತಂತೆ

"ಶ್ರೀಮಂತರನ್ನು ಸುಲಿಯಬೇಕೆಂದೇನೂ ಕಾಂಗ್ರೆಸ್ ಸರಕಾರದ ಇಚ್ಛೆಯಿಲ್ಲ ಆದರೆ ಶ್ರೀಮಂತರು ಸರಿದಾರಿಗೆ ಬರಬೇಕೆಂದೇ ಕಾಂಗ್ರೆಸ್ಸಿನ ಇಚ್ಛೆ ... ಮಹಾತ್ಮಾಜಿಯವರು ಸೂಚಿಸಿದ ರೀತಿಯನ್ನು ಅಂಗೀಕರಿಸದಿರುವಲ್ಲಿ ಜಮೀನ್ದಾರರ ... ಗಳು, ... ಮುಂದೆ ... ದೀತೆಂದ ಅವರನ್ನು ಎಚ್ಚರಿಸಲಾಗಿದೆ ಜಮೀನ್ದಾರರ ತನ್ನ ಸ್ವತ್ತು ಬಡವರಿಗಾಗಿ ತಮ್ಮ ... ರುವ ಒಂದು ಟ್ರಸ್ಟು ... "

—ಶ್ರೀ। ಶ್ರೀಕೃಷ್ಣಸಿಂಹ
ಬಿಹಾರದ ಮುಖ್ಯ ಮಂತ್ರಿಯವರು

೩೦೦೦,೦೦೦,೦೦೦ ಪವನು,— ಪ್ರತಿವರ್ಷವೂ ಯುದ್ಧ ಸನ್ನಾಹಗಳಿಗಾಗಿ ವ್ಯಯ

ಲೀಗ ಆಫ್ ನೇಶನ್ಸ್‌ನ ... ಶ್ರೀನ ... ಯುದ್ಧ ಸನ್ನಾಹ ... ಸಾವಿರ ... ಪವನು ... ಜನರಲಿ ಹಂಚಿದರೆ ... ಹತ್ತು ... ಗಳು ... —

... ದ ಸನ್ನಾಹ ಪೆಚ್ಚಿಸ ... ಮೂಲಕವಾಗಿ ಇನ್ನಷ್ಟು ಬೇಗನೆ ... ಹೇಳಿದರ ... ಸನ್ನಾಹವನ್ನೆ ಸಂಪೂರ್ಣವಾಗಿ ... ಬಿಡು ... ರಾಗ ... ಗಳು ... ಗಳು ... ಹಾಗೆ ... ಸನ್ನಾಹವನ್ನು ಇಳಿಸ ... ಸನ್ನಾಹವಿದ್ದ ... ವಾಗುತ್ತದೆಂದಿಲ್ಲ ... ಅಗುವುದ ... ಇದೆ ... ಹೀಗಾಗಿ ... ಸನ್ನಾಹ ಹೊರತು, ... ಸನ್ನಾಹ ...

ಇಟಲಿಯ ವಿಮಾನವೊಂದು ... ರೋಮ್ ನಗರಕ್ಕೆ ... ಬಹಳ ... ವಾತಾವರಣ ... ಆವಸರದಲ್ಲಿ ... ಕೂಡಲೆ ಬೆಂಕಿ ಹಿಡಿಯಿತು ವಿಮಾನವು ತಲೆ ಕೆಳಗಾಯಿತ ... ದೇಶಗಳ ನೂರ ನೂರು ಗಜ ದೂರಕ್ಕೆ ಪರ್ವತದ ... ದಲ್ಲಿ ಚೆಲ್ಲಿ ಬಿದ್ದವು ಒಂದು ಶವದ ... ಆಭರಣ ... ಅವು ... ರಾಯಭಾರಿ ... ಗಳೆಂದು ತಿಳಿದ ಬಂತು ... ರಾಜಜೋಗನ ಮದುವೆಗಾಗಿ ತೆರಳಿದವರವು.

... ಆದೇ ಮದುವೆಯಲ್ಲಿ ... ಆಗಬಹುದಾದ ಆಭರಣಗಳನ್ನು ಆರಿಸಲು ... ಅಂಗಡಿಯವರು ಕಳಿಸಿದ ... ದ 20000 ಪವನು ಬೆಲೆಯುಳ್ಳವು ಎತ್ತ ಚೆಲ್ಲಿ ಬಿದ್ದವೋ ತಿಳಿಯದಾಯಿತು

ಮದುವೆಯ ಹಿಂದೆಯೇ ಈ ಅಪಾಯ ... ಆಯಿತ

ಶಾಂತಿ ಕೆಡಿಸುವವರಾರು?

ಯುದ್ಧಾತುರತೆ ಇಲ್ಲದವರನ್ನು ಯುದ್ಧಕ್ಕೆ ಕಳುಹುವವರಾರು?

ವಿಲಾಯಿತಿಯ ಶಾಲಾ ಕಾಲೇಜುಗಳಲ್ಲಿನ ಸಾವಿರಾರು ವಿದ್ಯಾರ್ಥಿಯರು ಇನ್ನು ಯುದ್ಧಗಳಾಗಬಾರದೆಂದೂ, ಯುದ್ಧಗಳಾದಲ್ಲಿ ತಾವೇನೂ ಸಹಾಯಮಾಡುವವರಲ್ಲೆಂದೂ ನಿರ್ಣಯಿಸಿರುವರು.

ಆದರೆ, ಯುದ್ಧನಿಶ್ಚಿತವಾದ ನಿಮಿಷದಲ್ಲಿ ಇವರಲ್ಲಿ ಅನೇಕರು ಕೂಡಲೆ ಯುದ್ಧಕ್ಕೆ ತೆರಳಲೊಪ್ಪುವರು; ಇಂಥ ಅರ್ಥವನ್ನು ಎಳೇ ಹುಡುಗಿಯರೇ ಪುಸಲಾಯಿಸಿ ಯುದ್ಧಕ್ಕೆ ತೆರಳುವಂತೆ ಮಾಡುವರು.

ಈಗಲೇ ಹೈಸ್ಕೂಲು ಕಾಲೇಜುಗಳಲ್ಲೆಲ್ಲ ಯುದ್ಧಶಿಕ್ಷಣ ಕೊಡುವ ಆಫಿಸರರ ಸಂಖ್ಯೆ ಬಹಳವಿದೆ. ಯುವಕರು ಈ ತರಬೇತಿಗೆ ಮನಗೊಟ್ಟು ಸಿದ್ಧರಾಗುವ ಹಾಗೆ ಸುಂದರಿಯರೆಷ್ಟೋ ಮಂದಿಯನ್ನು ಗೌರವ ಆಫಿಸರ ಪದವಿಗೆ ನೇಮಿಸಿಟ್ಟಿದ್ದಾರೆ.

ಈ ಗೌರವ ಸುಂದರೀ ಆಫಿಸರರು ವಿಚಿತ್ರ ಮೋಹಕವಾದ ದುಸ್ತು ಧರಿಸಿ ಟ್ರೈನಿಂಗ್ ಆಫಿಸರ ಮತ್ತು ಕಾಲೇಜ್ ಪ್ರಿನ್ಸಿಪಾಲರ ಬಳಿ, ತರಬೇತಿಸ ವೇಳೆ ನಿಲ್ಲುವರು. ಇವರೇ ಖಡ್ಗ ಧರಿಸಿ, ತರಬೇತಾಗುವವರು ಹೇಗೆ ಕಾಣುತ್ತಾರೆ ಎಂಬುದನ್ನು ವಿಮರ್ಶಿಸುವರು. ಇವರ ನಗುವೇ ಫುಲ್ ಮಾರ್ಕು, ಇವರು ಕಹಿಮೋರೆ ಮಾಡಿದರೆ ಅದೇ ಫೂಲ್ ಮಾರ್ಕು!

ಯುದ್ಧಾರಂಭವಾದಾಗ, ಆಫಿಸರರ ಜತೆಯಲ್ಲಿ ಈ ಸುಂದರಿಯರು ಸಂಚಾರಮಾಡುತ್ತ, ಸೇನೆಗೆ ಸೇರುವ ಯುವಕರಿಗೆಲ್ಲ ಒಂದೊಂದು ಚುಂಬನ ಬಹುಮಾನ ಕೊಡುವರು

ಯುವತಿಯರಿಗಾಗಿ ಪ್ರಾಣದಾಸೆ ತೊರೆದು ಮಹಿಳಾ ಸಮಾಜ ಕಾಪಾಡುವ ಯುವಕರ ಹಿಂದು ಲಕ್ಷಗಟ್ಟಲೆಯಲ್ಲಿದೆ ಎಂದೂ ಪತ್ರಿಕೆಗಳಲ್ಲಿ ಬೇಕೆಂದೇ ಮುಂದಾಗಿ ಸಾರುವರು ಪ್ರತಿಯೊಬ್ಬ ಯುವಕನೂ ಯಾವಳೊಬ್ಬ ಸುಂದರಿಯ ಆಣೆಯಿಟ್ಟುಕೊಂಡು ಅವಳನ್ನು ಕಾಪಾಡುವುದಕ್ಕಾಗಿಯೇ ಸೇನೆ ಸೇರುವನು.

ಕಳೆದ ಯುದ್ಧಕಾಲದಲ್ಲಿ ಧಾರಾಳ ಬೋಧಿಸಿದರೂ ಮೊದಲನೆ ತಿಂಗಳಲ್ಲಿ ದೇಶರಕ್ಷಣೆಗೆಂದು ಸೈನ್ಯಕ್ಕೆ ಸೇರಿದವರು ೪೬,೦೦೦, ಕೂಡಲೆ ಸುಂದರಿಯರನ್ನು ನೌಕಾ ಸೈನ್ಯಕ್ಕೂ ಗುಮಾಸ್ತೆಯರನ್ನಾಗಿ ಸೇರಿಸಿಕೊಂಡರು ಇವರು ಊರಲ್ಲಿ ತಿರುಗುತ್ತ ಸಿಕ್ಕ ಯುವಕರನ್ನು ಯುದ್ಧರಂಗಕ್ಕೆ ಕಳೆದರು ಬರೀ ಬಾಲಿಕೆಯರೇ ಯುದ್ಧವೇಷವನ್ನು ಧರಿಸಿದ ಬಳಿಕ, ಗಣನೀಯರಾದ ಯುವಕರು ವೀರರಾಗದೆ ಹಿಂದುಳಿಯುವರೇ?

ಎಷ್ಟೋ ಸೇನೆಗಳಲ್ಲಿ ವೇಶ್ಯೆಯರೇ ಇದ್ದರು

ಹೀಗೆ ಮಾಯೆ ಬೀರುವುದರಿಂದ ತಾನೆ, ಸೇನೆಗಳು ಕೂಡಿಬರುತ್ತವೆ

ಹಿಂಸಾತುರರು ಮಾಡಲಾರದ್ದೇನು?

ಕೊಂಗ್ರೆಸ್ ಕೂಟಗಳಿಗೆ ಮಹಾತ್ಮಾಜಿಯವರ ಸೂಚನೆ.

★ ★ ★

ಕೊಂಗ್ರೆಸಿಗೆ ಬಲವೊಂದೆ ನೈತಿಕ ಬಲ.

ಅಣ್ಣರ ಬಲ ಹೆಚ್ಚಾಗಿ ಸೈನಿಕ ಬಲ,— ನೈತಿಕಬಲವೂ ಅದರ ಜತೆಯಲ್ಲಿರಬಹುದು.

ಇವೆರಡರೊಳಗಣ ತಾರತಮ್ಯವು ಈಗ ಕೊಂಗ್ರೆಸು ಅಧಿಕಾರಕ್ಕೆ ಬಂದಂದೀಚೆಗೆ ಬಹಳವಾಗಿ ಕಂಡುಬರುವ ಹಾಗಾಗಿದೆ.

ಕೊಂಗ್ರೆಸು ಅಧಿಕಾರ ನಿರ್ವಹಿಸಿರುವುದರಿಂದ, ಅದರ ಯಶಸ್ಸು ಹೆಚ್ಚುವುದು ಅಥವಾ ಸಂಪೂರ್ಣ ಕುಂದುವುದು ಎಂಬುದನ್ನು ಮರೆಯಬಾರದು.

ಅದು ಕುಂದಬಾರದಾಗಿರುವಲ್ಲಿ, ಮಂತ್ರಿಗಳೂ, ಸದಸ್ಯರೂ ಆತ್ಮವಿಮರ್ಶೆಮಾಡಿಕೊಂಡೇ ನಡೆದುಕೊಳ್ಳಬೇಕು. ಯಾರೂ ಸಂಶಯಪಡದಂತೆ ವರ್ತಿಸಬೇಕು. ತಮಗಾಗಿ ಅಥವಾ ತಮ್ಮವರಿಗಾಗಿ ಯಾವ ತರದ ಲಾಭಗಳೂ ಸಿಗದಂತೆ ವರ್ತಿಸಬೇಕು. ಇವರ ಬಂಧುಗಳಿಗೆ ಯಾವ ನೌಕರಿಗಳು ದೊರೆತರೂ, ಅವು ಅವರಿಗೆ ಸಾಮಾನ್ಯವಾಗಿ ಯೋಗ್ಯತೆಯಂತೆ ಇತರ ಕಡೆಗಳಲ್ಲೂ ಸಿಗಬಹುದಾದುವೂ ಆಗಬೇಕು.

ಕೊಂಗ್ರೆಸ್ ಸದಸ್ಯರು ಧೀರರಾಗಿರಬೇಕು; ಕರ್ತವ್ಯಪಾಲನೆಮಾಡಲೇಬೇಕು. ಜೀವವೇ ಅಥವಾ ಹುದ್ದೆಯೇ ಅಪಾಯದಲ್ಲಿದ್ದರೂ ಇವರು ಕರ್ತವ್ಯಮಾಡಲು ಹಿಂತೆಗೆಯಬಾರದು.

ಖಾಸಗಿ ಅಥವಾ ಪ್ರತ್ಯಕ್ಷರೀತಿಯಲ್ಲಿ ನೀತಿಪಾಲನೆಗೆ ವಿರೋಧವಾದಲ್ಲಿ ಕೊಂಗ್ರೆಸಿಗೆ ಗೌರವಹಾನಿಯಿದೆ ಎಂದೆಲ್ಲ ಸದಸ್ಯರು ತಿಳಿದಿರಬೇಕು

ಅಹಿಂಸೆಯೇ ಮೂಲಮಂತ್ರ ಅದನ್ನು ತಿಳಿದು ಪ್ರತಿಯೊಬ್ಬನೂ ತನ್ನ ವರ್ತನವನ್ನು ತಿದ್ದಿಕೊಳ್ಳಬೇಕು

ದಂಗೆಗಳೇ ಮೊದಲಾದುವು ಉಂಟಾದಾಗ ಬಲಿಕೊಡಲು ತಾವು ಸಿದ್ಧರೆಂದು ತಿಳಿಸಿದವರಿದ್ದಾರೆ ಇವರು ತಮ್ಮಂತಹರನ್ನು ಕೂಡಿಕೊಂಡು, ಅನುದಿನದ ಜೀವನದಲ್ಲಿ ಅಗತ್ಯ ಕಂಡ ವೇಳೆ ಹೀಗೆ ನಡೆದುಕೊಳ್ಳಬೇಕೆಂಬುದನ್ನು ಕಲಿತುಕೊಳ್ಳುವವರಾಗ ಬೇಕು

ಲವಂಗ

ಔಷಧಿಗೋಸ್ಕರವೇ ಆದುದು ಈಗ ಬ್ರಿಟಿಷರ ಸ್ವಾರ್ಥರೋಗಕ್ಕೆ ಚಿಕಿತ್ಸೆಯಾಗಿ ಪರಿಣಮಿಸಿಯದೆ

ವೈದ್ಯರೂ ಹಕೀಮರೂ ಮಾತ್ರ ಹೆಚ್ಚಾಗಿ ಲವಂಗದ ಪಂಚಿತಿ ಪ್ರಯೋಜನಗಳುಳ್ಳವರು ಈಗ, ಇದು ಮಹಾ ಪ್ರಭಾವವುಳ್ಳುದಾಗಿ ಹೊರಬಿದ್ದಿದೆ! 1934ನೆ ಇಸ್ವಿ ಜುಲೈ ತಿಂಗಳ ಮೊದಲು ಇಷ್ಟು ಪ್ರಕಾಂಡವಾಗಿ ಲವಂಗ ಪ್ರಸಂಗವುಂಟಾದೀತೆಂದು ನಂಬಿದವರಿದ್ದಿಲ್ಲ ಜಂಜಿಬಾರು ಮತ್ತು ಇಂಡಿಯಗಳೊಳಗೆ ಇಷ್ಟೊಂದು ವಿವಾದಕ್ಕೆ ಈ ಲವಂಗವೇ ಕಾರಣವಾಗಿದೆ ನಾಲ್ಕು ವರ್ಷವೂ ಇವೆರಡು ದೇಶಗಳ ಸರಕಾರಗಳೊಳಗೆ ಪತ್ರವ್ಯವಹಾರ ನಡೆದುದಕ್ಕೆ ಮಿತಿಯಿಲ್ಲ

ಹಿಂದೀ ಲವಂಗ ವ್ಯಾಪಾರಿಗಳಿಗೆ ನಾನಾ ಆತಂಕಗಳನ್ನುಂಟುಮಾಡಿರುವ ಕಾನೂನನ್ನು ಜಂಜಿಬಾರಿನಲ್ಲಿ ಮಂಜೂರುಮಾಡಿರುವರು. ಇದರ ಫಲ,—ಸಭೆಗಳೆಷ್ಟು, ಕೌನ್ಸಿಲು ಪ್ರಶ್ನೋತ್ತರಗಳೆಷ್ಟು? ಇಂಗ್ಲೆಂಡು ಇಂಡಿಯಾಗಳಿಂದ ಸ್ಪೆಶಲ್ ಪ್ರತಿನಿಧಿಗಳ ಸಂಚಾರವೆಷ್ಟು? ರಿಪೋರ್ಟುಗಳೆಷ್ಟು? ಕೊನೆಗೆ ಲವಂಗಕ್ಕೆ ಬಹಿಷ್ಕಾರದ ರಾಯಸವನ್ನು ಕೊಂಗ್ರೆಸು ಹೊರಡಿಸಬೇಕಾಯಿತು. ಕಲ್ಕತ್ತ, ಬೊಂಬಾಯಿ ಮುಂತಾದ ನಗರಗಳಲ್ಲಿ ಲವಂಗ ಬಹಿಷ್ಕಾರ ಕಮಿಟಿಗಳ ನೇಮಕವೂ ಆಯಿತು. ಕಳೆದ ತಾ. 24ರಲ್ಲಿ ಅಖಿಲ ಭಾರತದಲ್ಲಿ ಲವಂಗ ಬಹಿಷ್ಕಾರ ದಿನಾಚರಣೆ ನಡೆಯಿತು.

ವಿಚಾರಹೀನವಾಗಿರುವ ಮುತ್ಸದ್ದಿಗಳ ಸ್ವಾರ್ಥಸಾಧನೆಯಿಂದಾಗಿ ಲವಂಗವು ಗಿರಿಶೃಂಗದಷ್ಟು ಮಹತ್ವ ಪಡೆಯಿತು.

ಪ್ರಪಂಚದಲ್ಲಾಗುವ ಲವಂಗದಲ್ಲಿ ಸೇಕಡಾ 90 ಜಂಜಿಬಾರದಲ್ಲಾಗುವುದು ಅಲ್ಲಿ ಇದೊಂದೇ ಮುಖ್ಯ ಉತ್ಪನ್ನ, ಇದೇ ವ್ಯಾಪಾರ 16000 ಹಿಂದೀಯರ ಕೈಯಲ್ಲಿ ಇದರ ವ್ಯಾಪಾರವಿತ್ತು, 1934ರಲ್ಲಿ ಬ್ರಿಟಿಷ ವಸಾಹತುಗಳ ಇಲಾಖಾಧೀಶನಿಂದ ಒಂದು ಕಾನೂನು ಹೊರಟಿತು. ಯುರೋಪಿಯರೇ ಮುಖ್ಯವಾಗಿರುವ ಒಂದು ಲವಂಗ ಬೆಳೆಸುವವರ ಸಂಘವೆಂಬುದು ಹುಟ್ಟಿ, ಲವಂಗ ವ್ಯಾಪಾರದ ಗುತ್ತಿಯೇ ಇವರ ಕೈಸೇರಿತು. ಹಿಂದೀಯರ ಕೈಯಿಂದ ಈ ವ್ಯಾಪಾರ ತಪ್ಪಿಸುವುದೇ ಇವರ ಗುರಿ ಶತಮಾನದಿಂದ ಹಿಂದೀಯರೇ ನಡೆಸಿ ಬರುತ್ತಿದ್ದ ವ್ಯಾಪಾರವು ಅವರ ಕೈತಪ್ಪಿತು ಇವರು ಜಂಜಿಬಾರ ಸರಕಾರಕ್ಕೆ ಅರಿಕೆಮಾಡಿ, ಗುತ್ತೆ ತಪ್ಪಿಸಿರೆಂದರ ಇಂಡಿಯಾ ಸರಕಾರವೂ ಅತ್ತ ಜನ ಕಳಿಸಿ, ಇದರ ಅನ್ಯಾಯ ಸಾರಿತು ಅದಕ್ಕೆ ಅಷ್ಟಕ್ಕೆ ಜಂಜಿಬಾರ ಸರಕಾರವು ಕಿವುಡಾಯಿತು ಅದರ ಬೆಂಬಲಕ್ಕೆ ಬ್ರಿಟಿಷ ವಸಾಹತು ಇಲಾಖೆಯಿತ್ತು

ಇಂಡಿಯಾ ಸರಕಾರಕ್ಕೇ ಈ ಭಾಗದಲ್ಲಿ ಬಲ ಕಡಿಮೆಯಾದ ಬಳಿಕ, ಜನರೇನು ಮಾಡುವರು? ಸಾಂಪತ್ತಿಕ ಸಂಗ್ರಾಮಕ್ಕೆ ತೊಡಗಬೇಕಾಯಿತು ಲವಂಗ ಬಹಿಷ್ಕಾರವೇ [illegible] ಸಾಧನವಾಗಬೇಕಾಯಿತು, ಫಲ, ಕಳೆದ ವರ್ಷದ ಉತ್ಪನ್ನವೆಲ್ಲ ರಾಶಿಬಿದ್ದಿದೆ, 80000 ಪವನು ನಷ್ಟವಾಗಿದೆ,—ಜಂಜಿಬಾರಕ್ಕೆ

ಇದಕ್ಕಾಗಿ, ಒಳಗಿಂದೊಳಗೆ ಪ್ರಯತ್ನಿಸಿ, ಗೋಪನದಲ್ಲಿ ಅಲ್ಲಿಂದ ಲವಂಗ ಒರತೊಡಗಿದೆ ಹಿಂದೀಯ ವ್ಯಾಪಾರಿಗಳಲ್ಲೂ ಕೆಲವರು ಇದಕ್ಕೆ ಅನುಕೂಲರಾಗಿ ಮನೆಮಾರಿಗಳಾಗಿದ್ದಾರೆ. ಇನ್ನು ಜನಾಂಗವೇ ಈ ಬಹಿಷ್ಕಾರ ವ್ರತವನ್ನು ಆಚರಿಸಬೇಕಾಗಿದೆ

ಅನಗತ್ಯವಾದ 'ಶ್ರೀಮಂತ ಸಾಮಗ್ರಿ' ಲವಂಗವನ್ನು ಅನುನಿತ್ಯದ ಉಪಯೋಗಕ್ಕೆ ಸಾಮಾನ್ಯರಾರೂ ಮುಟ್ಟುವ ಅಗತ್ಯವಿರದು.

ಜನಾಂಗದ ಹಾನಿಗೇ ಕಾರಣವಾಗಿ, ನಮ್ಮವರ ಗೌರವವನ್ನೆ ಕುಂದಿಸುವ ಲವಂಗವನ್ನು ಹೊರಗಿರಿಸಬೇಕು

ಜಂಜಿಬಾರ ಸರಕಾರಕ್ಕೆ, ಇಂಡಿಯಾ ಸರಕಾರದ ಸಹಾಯವಿಲ್ಲದೆ, ವಿವೇಕ ತಿಳಿಸುವುದಕ್ಕೆ ಇದೊಂದೇ ಉಪಾಯ

ಭಾರತೀಯರೆಲ್ಲ ಕೈಕೊಡುವರೇ?

ಮದ್ಯಪಾನ ನಿವಾರಣೆಯ ಸಾಧನೆಗಳು

ಸೇಲಮಿನಲ್ಲಲ್ಲ, ಸಾರನ್ ಜಿಲ್ಲೆಯಲ್ಲಿ! ಬಿಹಾರ ಪ್ರಾಂತ್ಯದ ಅನುಭವ.

ಒಬ್ಬ ಸರಕಾರಿ ಹುದ್ದೇದಾರನ ಪೇದೆ, ಹೆಂಡಸಿಗದೆ ಸ್ಪಿರಿಟ್ ಕುಡಿದು ಮೂರು ದಿನ ಅಮಲೇರಿ ಜೀವನ್ಮೃತನಾಗಿದ್ದನು.

ಕಳ್ಳ ಸೇಂದಿ ತಯಾರಾಗುತ್ತದೆಂದು ವಾರ್ತೆ ಹರಡಿದೆ; ವರದಿ ತಲಪಿದೆ. ಕೊಂಗ್ರೆಸ್ ಕೆಲಸಗಾರರು ಈ ಚಳವಳವು ಜಯಶೀಲವಾದಿತೆನ್ನುವರಾದರೂ, ಶೇಂದಿ ತಯಾರಿಸುತ್ತಿದ್ದವರಲ್ಲಿ ನಿರುದ್ಯೋಗ ಹೆಚ್ಚುತ್ತ ಬಂದಿದೆ. ಇದುವರೆಗೆ ೧೨,೦೦೦ ಕುಟುಂಬಗಳಿಗೆ ಉದ್ಯೋಗ ದೊರೆತಿಲ್ಲ ಸಿವನ್ ಎಂಬಲ್ಲಿರುವ ಈ ಕೆಲಸಗಾರರು ಕೊಂಗ್ರೆಸಿನ ಅಪ್ಪಣೆ ಉಲ್ಲಂಘಿಸಿ, ಸೇಂದಿ ತಯಾರಿಸಲು ಸಿದ್ಧರಾಗುತ್ತಾರೆಂದೂ ವಾರ್ತೆ ಹಬ್ಬಿದೆ.

ಗೋರಕಪುರದಲ್ಲಿ ಕಳ್ಳ ಸೇಂದಿ ತಯಾರಿಸಿದರೆಂದು ಹತ್ತು ಮಂದಿಯನ್ನು ಕೈದುಮಾಡಿರುವರು. ಗಾಂಜಾ ದಾಸ್ತಾನಿಗಾಗಿ ಹತ್ತು, ಭಂಗಿ ನೆಡುವುದೇ ಮೊದಲಾದುವಕ್ಕಾಗಿ ಇತರ ಕೆಲವು ಮಂದಿಯ ಮೇಲೆ ಮೊಕದ್ದಮೆಗಳಾಗಿವೆ.

ರೈಲ್ವೆ ಉಪಹಾರ ಗೃಹಗಳಲ್ಲಿ ತುಂಬ ಮದ್ಯಮಾರಾಟವಾಗ ತೊಡಗಿದೆ. ಈ ದೇಶದಲ್ಲಿ ತಯಾರಾಗುವ ವಿದೇಶೀ ಜಾತಿಯ ಮದ್ಯದ ಮಾರಾಟ ಹೆಚ್ಚಿದೆ ಒಂದೇ ಸ್ಟೇಶನು ದೂರದಿಂದ ಜನರು ಇತ್ತ ಬಂದು ಬೇಕಾದಷ್ಟನ್ನು ಕುಡಿದು ಮರಳುತ್ತಿರುವರೆಂದು ಸೋನೆಪುರದ ವಾರ್ತೆ

ಮದ್ಯಪಾನ ನಿವಾರಣೆಗಾಗಿ ಒಬ್ಬ ಆಫೀಸರರ, ಮೂವರು ಇನ್ಸ್‌ಪೆಕ್ಟರರು, ೧೫ ಸಬ್ ಇನ್ಸ್‌ಪೆಕ್ಟರರು, ಇತ್ಯಾದಿಯರ ನೇಮಕವಿದೆ. ಇವರು [illegible] ಚದರ ಮೈಲು ವಿಸ್ತೀರ್ಣವುಳ್ಳ [illegible] ಹಳ್ಳಿಗಳಲ್ಲಿ ನಿಗಾ ಇಟ್ಟು, [illegible] ಸೇಂದಿ ಅಂಗಡಿಗಳು, [illegible] ಗಾಂಜಾ ಅಂಗಡಿಗಳು, [illegible] ಭಂಗೀ ಅಂಗಡಿಗಳು, [illegible] ಸೇಂದಿ ಮಾರಾಟದ ಚಿಲ್ಲರೆ ಅಂಗಡಿಗಳು ಇವನ್ನು [illegible] ಬಹಳ ನಿಗವಿಟ್ಟು ಸರಕಾರದ ಅಪ್ಪಣೆ ಪಾಲಿಸಬೇಕಾಗಿದೆ ಜಿಲ್ಲೆಯ ಜನಸಂಖ್ಯೆ [illegible] ಲಕ್ಷ, [illegible] ಎರಡು ಲಕ್ಷ ಜನರು ಮದ್ಯಪಾಯಿಗಳೆಂದು ಅಂದಾಜು ಮದ್ಯಪಾನ ನಿವಾರಣೆಯಾದರೆ ಸರಕಾರಕ್ಕೆ [illegible] ಲಕ್ಷ ರೂಪಾಯಿ ನಷ್ಟ ಜಿಲ್ಲೆಯಲ್ಲಿ ಸುಮಾರು [illegible] ಲಕ್ಷ ರೂಪಾಯಿಯ ಮದ್ಯ ವ ಅಮಲು ಪದಾರ್ಥ ಮಾರಾಟವಾಗುತ್ತಿತ್ತು

ಚೊಕೊಲೇಟ್‌ಗಳು

ಬಿಹಾರ ಸರಕಾರದ ಸಹಕಾರೀ ಇಲಾಖೆಯ ಉದ್ಯಮ

ಬಿಹಾರದ ಲಹೇರಿಯಾಸರಾಯ ಎಂಬೂರಲ್ಲಿ ಕೃಷಿ ಇಲಾಖಾ ಪ್ರದರ್ಶನವಿತ್ತು ಆಗ ಅಲ್ಲಿನ ಸಹಕಾರೀ ಇಲಾಖೆಯವರು, ಕಬ್ಬು ಬೆಳೆಸುವ ಸಹಕಾರೀ ಸಂಘಗಳ ಪರವಾಗಿ, ೫೦ ಮಣ ಕಬ್ಬನ್ನು ಅಲ್ಲಿಗೆ ತಂದು, ಜನರ ಇದಿರಲ್ಲೇ ಅದನ್ನು ಹಿಂಡಿ ರಸದಿಂದ ಸಕ್ಕರೆ ಮಾಡಿ ಚೊಕಲೇಟ್ ತಯಾರಿಸಿದರು ನಾನಾ ಹೊಸ ಮಿಠಾಯಿಯೂ ಮಾರಾಟಕ್ಕೆ ದೊರೆಯಿತು. ಈ ಮಿಠಾಯಿಗಳಲ್ಲಿ ತೆಂಗಿನ ಚೂರು, ಬದಾಮು, ಪಿಸ್ತಾ ಮೊದಲಾದುವನ್ನು ಬೆರಸಿದ್ದರು. ಬೆಲ್ಲದ ಧಣಿಯಿಂದ ಕೂಡಲೆ ಎಂತೆಂತಹ ಹಣಗಳಿಸುವ ಹೊಸ ಖಾದ್ಯಗಳನ್ನು ಮಾಡಿ, ಪರದೇಶೀಯ ತಿಂಡಿಗಳ ಬದಲಾಗಿ ಮಾರಬಹುದೆಂಬುದನ್ನು ಜನರಿಗೆ, ತೋರಿಸುವುದೇ ಈ ಉದ್ಯಮದ ಉದ್ದೇಶವಾಗಿತ್ತು. ತಯಾರಾದ ತಿಂಡಿ ಬಲು ಬೇಗನೆ ವಿಕ್ರಯವಾಯಿತು ಕಡೆಗೆ ಊರ ಬೆಲ್ಲದಿಂದಲೇ ಮತ್ತೂ ತಿಂಡಿ ತಯಾರಿಸಬೇಕಾಯಿತು ಹಲವು ನೂರು ರೂಪಾಯಿಗಳ ತಿಂಡಿ ಮಾರಾಟವಾಯಿತೆಂದು ತಿಳಿದುಬಂದಿದೆ

THE

Canara Banking Corporation, Udipi, Ltd.

INCORPORATED IN BRITISH INDIA

ESTD 1906

SEASON DEPOSITS

of

Rs. 500/- & above

Are Accepted

at

$3\frac{1}{2}\%$ p. a.

at

All Our Branches

ರಾಜಕೀಯದಿಂದ—ಪ್ರಾಣತ್ಯಾಗ ಒಪ್ಪಂದ

ಡೆಮೊಕ್ರಟ್—ನಾಜಿ ತಿಕ್ಕಾಟ—ನ್ಯೂಯೊರ್ಕಿನಲ್ಲಿ.

ನ್ಯೂಯೊರ್ಕಿನ ಈರ್ವರು ತರುಣ ತರುಣಿಯರು, ತಾವು ಗಂಡಹೆಂಡಿರರಾಗಲು ತಂದೆ ತಾಯಿಗಳು ಈರ್ವರು ಬೇರೆ ಬೇರೆ ರಾಜಕೀಯ ಪಕ್ಷ ಸೇರಿರುವುದರಿಂದ ಆಕ್ಷೇಪವೆತ್ತಿದುದರ ಪರಿಣಾಮವಾಗಿ, ಈರ್ವರು ಪ್ರಾಣತ್ಯಾಗ ಮಾಡಿಕೊಳ್ಳಲು ಮಾಡಿಕೊಂಡ ಒಪ್ಪಂದದ ಕುರಿತು ವಾರ್ತೆಯೊಂದು ಬಂದಿರುತ್ತದೆ.

ಡೊನಾಲ್ಡ್ ಕೆರೊಲಿನ ಪ್ರಾಯ 16 ಮತ್ತು ಚಾರ್ಲೊಟ ಪ್ರಾಯ 18 ಇಬ್ಬರನ್ನಿಬ್ಬರು ಬಹಳವಾಗಿ ಪ್ರೀತಿಸುತ್ತಿದ್ದರು. ಇಬ್ಬರಿಗೂ ಗಂಡಹೆಂಡಿರಾಗಬೇಕಾಗಿ ಇಚ್ಛೆ ಉಂಟಾಯಿತು. ಆದರೆ ಅವರು ವಿವಿಧ ರಾಜಕೀಯ ಮತದವರಾದುದರಿಂದ ಅವರ ತಂದೆತಾಯಿಗಳು ಅದಾಗದೆಂದು ಹೇಳಿಬಿಟ್ಟರು. ಡೊನಾಲ್ಡನ ತಂದೆ ಡೆಮೊಕ್ರೆಟ್ ಪಕ್ಷದವನಾಗಿದ್ದನು. ಚಾರ್ಲೊಟಳ ತಂದೆ ನಾಜಿ ಪಕ್ಷದವನಾಗಿದ್ದನು. ಈ ಎರಡು ಪಕ್ಷಗಳಿಗೂ ಪರಸ್ಪರ ತಿಕ್ಕಾಟವಿರುವುದು.

ಇದರಿಂದ ಹತಾಶರಾದ ಪ್ರಣಯಿಗಳು ಬೇರೆ ಹಾದಿ ಕಾಣದೆ ಪ್ರಾಣತ್ಯಾಗ ಮಾಡಿಕೊಳ್ಳಬೇಕಾಗಿ ನಿರ್ಧರಿಸಿದರು. ಮೊದಲು ಡೊನಾಲ್ಡನು ಚಾರ್ಲೊಟಳನ್ನು ಪಿಸ್ತೂಲಿನಿಂದ ಗುಂಡಿಕ್ಕಿ ಕೊಂದಾದ ಮೇಲೆ, ನಂತರ ಡೊನಾಲ್ಡನು ತನ್ನ ಮೇಲೆ ಗುಂಡುಹಾರಿಸಿ, ಪ್ರಾಣತ್ಯಾಗ ಮಾಡಿಕೊಳ್ಳಬೇಕೆಂದು ಒಪ್ಪಂದವಾಗಿತ್ತು. ಒಪ್ಪಂದದ ಪ್ರಕಾರ ಡೊನಾಲ್ಡನು ಚಾರ್ಲೊಟಳನ್ನು ಗುಂಡಿಕ್ಕಿ ಕೊಂದುಬಿಟ್ಟನು. ಆದರೆ, ಗುಂಡನ್ನು ತನಗೆ ಹಾರಿಸಿಕೊಳ್ಳಲು ಆತನ ಕೈ ನಡುಗಿದವು. ಭೀತಿಗ್ರಸ್ತನಾದ ಡೊನಾಲ್ಡನು ಹತ್ತಿರದ ಪೊಲೀಸ್ ಠಾಣ್ಯಕ್ಕೆ ಹೋಗಿ ಎಲ್ಲವನ್ನೂ ತಿಳಿಸಿದನು.

ಮೃತಳಾದ ಚಾರ್ಲೊಟಳ ತಂದೆಯು ಡೊನಾಲ್ಡನನ್ನು ಕಾಣಲು ಕಾರಾಗೃಹಕ್ಕೆ ಬಂದಿದ್ದನು. ಡೊನಾಲ್ಡನನ್ನು ಬಹಳ ಕನಿಕರಪಟ್ಟು, ಆತನನ್ನು ಶಿಕ್ಷಿಸಬೇಡಿ. ಆದರಿಂದ ತನ್ನ ಮಗಳು ಜೀವಕ್ಕೆ ಬರಲಾರಳೆಂದು ಹೇಳಿಬಿಟ್ಟನು.

ಸಂಯುಕ್ತ ಅಮೇರಿಕಾವೂ, ಹಿಟ್ಲರನೂ

ಆಸ್ಟ್ರಿಯಾದಿಂದ ಮತ್ತು ಜರ್ಮನಿಯಿಂದ ಅಟ್ಟಲ್ಪಟ್ಟ ಯಹೂದ್ಯರಿಗಾಗಿ, ಸಂಯುಕ್ತ ಅಮೇರಿಕಾದಲ್ಲಿ ರಕ್ಷಣಾ ಸಮಿತಿಗಳು ರಚನೆಯಾಗಿವೆ. ಅದರಿಂದ ಹಿಟ್ಲರನಿಗೆ ಭಯಂಕರ ಹೊಟ್ಟೆ ಉರಿಯು ಉಂಟಾಗಿರುತ್ತದೆ.

“ಯಹೂದ್ಯರ ಮೇಲೆ ಕನಿಕರ ತೋರಿಸುವ ಈ ಅಮೇರಿಕಾವು, ಆ ಕನಿಕರವನ್ನು ಕಾರ್ಯರೂಪಕ್ಕೆ ತರಬೇಕೆಂದು ನನ್ನ ಇಚ್ಛೆ. ನನ್ನ ದೇಶದಲ್ಲಿರುವ ಯಹೂದ್ಯರನ್ನೆಲ್ಲಾ ಅಮೇರಿಕಾಕ್ಕೆ ಬಿಟ್ಟು ಕೊಡಲು ನಾನು ಸಿದ್ಧನಿರುವೆನು” ಎಂಬುದಾಗಿ ಆತನು ಒಂದೆಡೆ ಭಾಷಣ ಮಾಡುತ್ತಿರುವಾಗ ಆಡಿರುವನು.

ಇದೇ ವಿಚಾರದಲ್ಲಿ ಹಿಟ್ಲರನ ಪತ್ರಿಕೆಯೊಂದರಲ್ಲಿ ಹೀಗೆಂದಿತ್ತು,—‘ಧರ್ಮಾರ್ಥವಾಗಿ, ಯಹೂದ್ಯ ವಕೀಲರನ್ನೂ, ವ್ಯಾಪಾರಸ್ಥರನ್ನೂ, ಸ್ತ್ರೀ ವೈದ್ಯರನ್ನೂ, ಧಾರಾಳವಾಗಿ ಅತಿ ಸುಲಭ ಬೆಲೆಯಲ್ಲಿ ಒದಗಿಸಿ ಕೊಡಲು ಸಿದ್ಧರಿದ್ದೇವೆ. ಜರ್ಮನಿನಲ್ಲಿ ಸಾಕಷ್ಟು ಯಹೂದ್ಯರಿರುವರು’.

ಹಿಟ್ಲರನೆ ದೇವರು

ದೇವರೊಬ್ಬನಿರುವನೆಂದು ಹಿಟ್ಲರನು ನಂಬುವುದಿಲ್ಲ. ತಾನೆ ಒಬ್ಬ ದೇವರೆಂದು ಆತನ ನಂಬಿಕೆಯಾಗಿರುತ್ತದೆ. ಈ ಕಾರಣದಿಂದಲೆ ಆತನು, ಪ್ರೊಟೆಸ್ಟಾಂಟ್ಸ್, ಕೆಥೊಲಿಕ್, ಯಹೂದ್ಯರನ್ನು ಪೀಡಿಸುತ್ತಿರುವುದು, ಎಂಬುದಾಗಿ ಪ್ರಖ್ಯಾತ ಸ್ತ್ರೀಯೊಬ್ಬಳ ಅಭಿಪ್ರಾಯ.

ಮಹಾಯುದ್ಧವು ಇನ್ನೂ ಮುಗಿದಿಲ್ಲ

ವಾರ್ಸೈಲೆ ಒಪ್ಪಂದವು ನಡೆದು ಇವತ್ತಿಗೆ 20 ವರ್ಷಗಳಾಗಿದ್ದರೂ ಕಳೆದ ಮಹಾಯುದ್ಧವು ಇನ್ನೂ ಮುಗಿದಿಲ್ಲ. ಯುರೋಪ್ಯದ ಸಣ್ಣ ರಾಜ್ಯವಾದ ‘ಸಾನ್ ಮೆರಿನೊ’ ಎಂಬ ಸಣ್ಣ ದೇಶವು ಇನ್ನೂ ಟರ್ಕಿಯೊಡನೆ ಯುದ್ಧದಲ್ಲಿರುವುದೆಂದು ಡಿಪ್ಲೊಮೆಟರು ಕಂಡು ಹಿಡಿದಿರುವರು.

ಸಾನ್ ಮೆರಿನೊ ಎಂಬುದು ಸಣ್ಣದೊಂದು ರಿಪಬ್ಲಿಕ್. ಅದು 1915ರಲ್ಲಿ ಇಟಲಿಯು ಟರ್ಕಿಯ ಮೇಲೆ ಯುದ್ಧ ಹೂಡಿದಾಗ, ಟರ್ಕಿಯೊಡನೆ ಯುದ್ಧ ಹೂಡಿತ್ತು.

ಮೊನ್ನೆ ಅಲ್ಲಿಗೆ ಟರ್ಕಿ ದೇಶದವನೊಬ್ಬನು ಬಂದಾಗ ಆತನನ್ನು ಸೆರೆಹಿಡಿಯಲಾಯಿತು. ಎರಡು ದಿನಗಳ ನಂತರ ಆತನನ್ನು ಇಟಲಿಯಾನ ಕೌನ್ಸಲರು ಬಿಡುಗಡೆಗೊಳಿಸಿದರು.

ಕಾರಣ? ವಾರ್ಸೈಲೆ ಒಪ್ಪಂದವಾಗುತ್ತಿರುವಾಗ ಸಾನ್ ಮೆರಿನೊವು ಸಂಪೂರ್ಣ ಮರೆತು ಬಿಡಲಾಗಿತ್ತು. ಅದು ಆ ಒಪ್ಪಂದಕ್ಕೆ ಸಹಿ ಹಾಕಲಿಲ್ಲ.

ಹಿಟ್ಲರನಿಗೆ ಮಹಾಸ್ವಾಗತ

ಬರುವ ತಿಂಗಳಲ್ಲಿ ಹಿಟ್ಲರನು ರೋಮ್ ನಗರಕ್ಕೆ ಬರುವ ಸಂದರ್ಭದಲ್ಲಿ ಆತನ ಸ್ವಾಗತಕ್ಕಾಗಿ 400,000 ಪೌಂಡುಗಳನ್ನು ವ್ಯಯಿಸಬೇಕೆಂದಾಗಿದೆ. ಅದಕ್ಕಾಗಿ ಸಿದ್ಧತೆಗಳು ಈಗಲೆ ನಡೆಯುತ್ತಿವೆ.

ಹಿಟ್ಲರನು ಬೇರೆಯಾಗಿ ನಿರ್ಮಿಸಲ್ಪಟ್ಟ ಒಂದು ರೈಲ್ವೆ ಸ್ಟೇಷನಿನಲ್ಲಿ ಇಳಿದು, ವಿಶಿಷ್ಟವಾಗಿ ನಿರ್ಮಿಸಲ್ಪಟ್ಟ ಹಿಟ್ಲರ್ ಮಾರ್ಗದ ಮೂಲಕ ರೋಮ್ ನಗರವನ್ನು ಪ್ರವೇಶಿಸುವ ಸಿದ್ಧತೆ ಮಾಡಲಾಗಿದೆ.

ಧಾರಣೆಗಳ ಮೇಲೆ ಹತೋಟಿ

ಜಪಾನಿನಲ್ಲಿ ಯುದ್ಧದ ದೆಸೆಯಿಂದ ಸಾಮಾನುಗಳ ಧಾರಣೆಯು ಏರುವ ಸಂಭವಗಳುಂಟಾಗಲು ಈ ತರದ ಏರಿಕೆಯನ್ನು ಹತೋಟಿಗೆ ತರಲು, ಒಂದು ಸಮಿತಿಯು ಸರಕಾರದಿಂದ ನೇಮಕವಾಗಿರುತ್ತದೆ. ಧಾರಣೆ ವಿಶೇಷವಾಗಿ ಏರದಂತೆ ಈ ಸಮಿತಿಯು ನೋಡುವುದು. ಕೋರಿಕೆಗೆ ತಕ್ಕಂತೆ ಸಾಮಾನುಗಳು ದೊರಕುವಂತೆ ಮಾಡುವುದೆ ಈ ಸಮಿತಿಯ ಮುಖ್ಯ ಕರ್ತವ್ಯ.

ಗತವರ್ಷದ ವರದಿ ಪ್ರಕಾರ, ಜಪಾನಿನ ಆಮದು ರಫ್ತಿಗಿಂತ ಅಧಿಕವಾಗಿದೆ ಎಂದೂ ತಿಳಿದುಬರುತ್ತದೆ.

ಮಾಲ್ಟಾದಲ್ಲಿ ಇಟಲಿಯನ್ ಭಾಷೆ

ಮೆಡಿಟರೆನಿಯನ್ ಸಾಗರದ ಬ್ರಿಟಿಷರ ಅಧೀನದಲ್ಲಿರುವ ಮಾಲ್ಟಾ ಎಂಬ ನವಾಲ್ ಬೇಸಿನಲ್ಲಿ, ಇಟಲಿಯನ್ ಭಾಷೆಯು ಪ್ರಚಾರಕ್ಕೆ ಬರಬೇಕೆಂಬುದಾಗಿ, ಇಟಲಿಯನ್ ಪತ್ರಿಕೆಯೊಂದರಲ್ಲಿ ಎಂದು ಲೇಖ ಬಂದಿರು

ಬಾಲಭಾಸ್ಕರ

ಮಕ್ಕಳಲ್ಲಿ ಸರ್ವಸಾಮಾನ್ಯವಾಗಿರುವ ಯಕೃತ್ ಮತ್ತು ಪ್ಲೀಹ ವ್ಯಾಧಿಗಳನ್ನು ಗುಣಪಡಿಸಲು ಹಾಗೂ ತಡೆಯಲು ವೈಜ್ಞಾನಿಕ ಸಂಶೋಧನೆಯ ಫಲವಾಗಿ ತಯಾರಿಸಲ್ಪಟ್ಟ ವಸ್ತು. ಅಲ್ಲದೆ ಬೇಸಿಗೆ ಕೊಡಗೂಡಿರುವ ಯಾವ ವಿಷಮ ವ್ಯಾಧಿಗಾದರೂ ಅಮೋಘವಾದ ಔಷಧಿ. ಜ್ವರ, ಕೆಮ್ಮು, ಅತಿಸಾರ, ಅಜೀರ್ಣ, ಕಾಮಾಲೆ, ಕೈಕಾಲು ಊದು ಮುಂತಾದುವನ್ನೂ ಗುಣಪಡಿಸುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತದೆ

ತಯಾರಿಸುವವರು—ಆಯುರ್ವೇದಾಶ್ರಮ, ಮದರಾಸು.

ಸ್ಟಾಕಿಸ್ಟರು—ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಮಾಲ್ಟಾದಲ್ಲಿ ಇಟಲಿಯನ್ ಭಾಷೆಯು ರೂಢಿಗೆ ಬಾರದ ವಿನಹ ಶಾಂತಿಯಿರದು, ನಾಲ್ಕು ವರ್ಷಗಳ ಹಿಂದೆ ಇಟಲಿಯಾನ ಭಾಷೆಯು ಅಲ್ಲಿಂದ ಹೊರಡಿಸಲ್ಪಟ್ಟಿದು, ಎಂಬ ಅಭಿಪ್ರಾಯಗಳು ಆ ಲೇಖದಲ್ಲಿರುವವು.

ಹುಡುಗಿಯರನ್ನು ವಂಚಿಸಿ ಜೀವನ ಸಾಗಿಸಿದಾತ.

ಅಂಚೆ ಮೂಲಕ ಪ್ರಣಯ.

ಆಸ್ಟ್ರೇಲಿಯಾದಲ್ಲಿದ್ದಾತನೊಬ್ಬ, ಇಂಗ್ಲಾಂಡಿನ ಲಿಂಕೊನ್ ಶಾಹರಿನ ಮೇಯರಿಗೆ ತನಗೊಂದು ಉತ್ತಮ ವಧು ಬೇಕೆಂದು ಬರೆದನು. ಈ ಸಮಾಚಾರವನ್ನು ಮೇಯರರು ಪತ್ರಿಕೆಗಳಲ್ಲಿ ಪ್ರಚಾರಗೊಳಿಸಿದರು.

ಒಂದೆಡೆ ಕೆಲಸ ಮಾಡುವವಳೊಬ್ಬ ತರುಣಿಯು ಮೇಯರನಿಗೆ ಬರೆದಳು. ಮೇಯರನು ಪತ್ರವನ್ನು ಆತನಿದ್ದಲ್ಲಿಗೆ—ಆಸ್ಟ್ರೇಲಿಯಾದ ಮೆಲ್ಬೋರ್ನಿಗೆ ಕಳುಹಿಸಿದ. ನಂತರ ಬಹಳ ಸಮಯ ಅವರೀರ್ವರೊಳಗೆ, ಅಂಚೆ ಮೂಲಕ ಪ್ರಣಯವು ನಡೆಯಿತು.

ಒಂದಾನೊಂದು ದಿನ ಆಕೆಗೆ ಮೆಲ್ಬೋರ್ನಿಗೆ ಬರಬೇಕೆಂದು ಆತನ ಪತ್ರವು ಬಂದುಬಿಟ್ಟಿತು. ಆಕೆ ಹೊರಟೇ ಬಿಟ್ಟಳು. ಹಡಗ ಹತ್ತುವ ಎರಡು ದಿವಸಗಳ ಮೊದಲು ಆತನಿಂದ ಒಂದು ತಂತಿ ಬಂದಿತ್ತು. ತನಗೆ 42 ಪವನುಗಳು ಜರೂರು ಇರುವುದರಿಂದ ಆಕೆಯು ಹೇಗೂ ಮಾಡಿ 15 ಪವನುಗಳನ್ನು ಕೂಡಿಸಿ, ತಂತಿ ಮೂಲಕ ರವಾನಿಸಿದಳು. ನಂತರ ಆತನ ಸುಳಿವಿಲ್ಲ.

ಆಕೆಗೆ ಮದುವೆಯಾಗುವ ವಿಚಾರವು ಎಲ್ಲರಿಗೂ ತಿಳಿದುದರಿಂದ, ಜನರು ಮೇಯರರೊಡನೆ ವಿಚಾರಿಸಿದರು. ಹಾಗೆ ಆತನು ಅನೇಕ ಹುಡುಗಿಯರನ್ನು ಮರುಳುಗೊಳಿಸಿರುವನೆಂದು ನಂತರ ತಿಳಿಯಬಂತು.

ಮೇಯರರು ಮೆಲ್ಬೋರ್ನಿಗೆ ಬರೆದು ವಿಚಾರಿಸಿದರು. ಆತನೊಬ್ಬ ನಿರುದ್ಯೋಗಿ—ಇವತ್ತಿಗೆ ಬಹಳ ಸಮಯದಿಂದ ಆ ತರದಲ್ಲಿ ಜೀವಿಸುತ್ತಿದ್ದನೆಂದು ತಿಳಿಯಬಂತು.

ಸ್ಪೈಯಿನಿನ ಪ್ರಕರಣದ ಸುಧಾರಣೆ

ಇಟಲಿಯಾನರ ಸೂಚನೆ

“ಇಟಲಿಯಾನ ಸೂತ್ರದಿಂದ ಸ್ಪೆನಿಷ್ ಪ್ರಕರಣವನ್ನು ಸುಧಾರಿಸಿಕೊಳ್ಳಬಹುದು—ಸ್ಪೈಯಿನು, ಸ್ಪೈನಿಯಾರ್ಡರಿಗೆ ಮಾತ್ರ ಎಂಬುದು ಈ ಸೂತ್ರ ಎಂಬುದಾಗಿ ಇಟಲಿಯಾನ ಪತ್ರಿಕೆಯೊಂದರ ಟೀಕೆ. ಮುಂದುವರಿಯುತ್ತಾ ಅದು ಹೀಗೆಂದು ಬರೆದಿರುತ್ತದೆ. ಸ್ಪೆನಿಷ್ ಯುದ್ಧವು ಈಗ ಕೊನೆಗೊಳ್ಳುತ್ತಾ ಬರುತ್ತಿದೆ. ಫ್ರಾನ್ಸಿನಿಂದ, ಇಟಲಿಯಿಂದ ಬ್ರಿಟನಿಂದ ಈ ಎಲ್ಲಾ ರಾಷ್ಟ್ರಗಳಿಂದ ಸೈನಿಕರು ಸ್ಪೆನಿಷ್ ಯುದ್ಧರಂಗಕ್ಕೆ ಇಳಿದಿದ್ದರೂ, ಅವರು ಹಾಗೆ ಮಾಡಿರುವರೆಂದು ಹೇಳುವಷ್ಟು ಈಗ ಸಾಧ್ಯವಾಗದು. ಇದೊಂದು ವೈಚಿತ್ರ್ಯವಲ್ಲವೆ?

ಮಗುವಿನ ಮೇಲಿನ ಪ್ರೀತಿ ಕೊಲೆಗೆ ಕಾರಣವಾಯಿತು.

ಮಗುವಿನ ಮೇಲಿನ ಪ್ರೀತಿಯಿಂದ ತಾಯಿಯೊಬ್ಬಳು ತನ್ನ ಗಂಡನನ್ನು ಗುಂಡಿಕ್ಕಿ ಕೊಲೆ ಮಾಡಿದ ವಾರ್ತೆಯು, ದಕ್ಷಿಣ ಫ್ರಾನ್ಸಿನಿಂದ ಬಂದಿರುತ್ತದೆ. ಡೆರಾರಿಸ್ ಎಂಬಾತನು ಕೊಲೆ ಮಾಡಲ್ಪಟ್ಟವನು. ಅಲ್ಲಿನ ಒಂದು ಬೇಂಕಿನ ಡೈರೆಕ್ಟರನು. ಕೊಲೆ ಮಾಡಿದವಳು, ಆತನ ಜೆರಿಸ್ಟರ್ ಪತ್ನಿ ಸುಜ್ಞೇನ್ ಡೆರಾರಿಸಳು. ಮದುವೆಯಾದ ನಂತರ ಬಹಳ ಸಮಯ ಅವರ ಸಂಬಂಧ ಸರಸವಿಲ್ಲ, ವಿವಾಹವಾದ ಐದು ತಿಂಗಳ ನಂತರ ಅವರು ಬೇರೆಯಾಗಿದ್ದರು. ವಿವಾಹವಾದೊಡನೆ ಸುಜ್ಞೇನಳು ತನ್ನ [illegible]ಯನ್ನು ಹೊಂದಿದ್ದಳು. ಗಂಡನಿಂದ ಬೇರೆಯಾದ ನಂತರ ಸುಜ್ಞೇನಳು ತನ್ನ ತಾಯಿಯೊಡನೆ ಜೀವಿಸುತ್ತಿದ್ದಳು.

ಗಂಡನಿಂದ ಬೇರೆಯಾದ ಆಕೆಯು ಗಂಡನ ಮೇಲೆ ಆತನು ತನ್ನ ತಾಯಿಯಿಂದ ಪಡೆದ ಸಂಪತ್ತಿಗಾಗಿಯೂ, ದಾಂಪತ್ಯ ವಿಚ್ಛೇದಕ್ಕಾಗಿ ದಾವೆ ಹೂಡಿದಳು.

ಸುಜ್ಞೇನಳಿಗೆ ಒಂದು ಶಿಶುವು ಇಷ್ಟರೊಳಗೆ ಜನಿಸಿತು. ಅದು ತನ್ನದೆಂದೂ, ಅದು ತನಗೆ ಬಿಟ್ಟುಕೊಡಲಾಗಬೇಕೆಂದು, ಆಕೆಯ ಗಂಡನು ವಾದಿಸಲಾದನು.

ಮಗುವನ್ನು ಕಳಕೊಳ್ಳುವ ಆಲೋಚನೆಯನ್ನು ಸಹಿಸಲಾರದವಳಾಗಿ ಸುಜ್ಞೇನಳು, ಒಂದು ದಿನ ಕಿಸೆಯಲ್ಲಿ ಒಂದು ರಿವಾಲ್ವರನ್ನು ಹಾಕಿಕೊಂಡು, ಹಿಂದಿನ ಬಾಗಿಲಿನಿಂದ ಗಂಡನ ಮನೆಯನ್ನು ಸೇರಿ, ಆತನು ಮಲಗುವ ಕೋಣೆಯಲ್ಲಿ ಅವಿತಿದ್ದು, ಆತನು ಮನೆಗೆ ಬಂದು ನಿದ್ರೆ ಹೋಗುವ ವರೆಗೆ ಕಾದುನಿಂತು, ನಂತರ ಆತನನ್ನು ಗುಂಡಿಕ್ಕಿ ಕೊಂದುಬಿಟ್ಟಳು.

ಈಗ ಆಕೆಯು ಕೋರ್ಟಿನ ವಿಚಾರಣೆಗೆ ಒಳಗಾಗಿರುವಳು.

42,000 ಟನ್ ಭಾರವಿರುವ 16 ಇಂಚಿನ ತೋಪುಗಳಿರುವ ಎರಡು ಯುದ್ಧ ನೌಕೆಗಳನ್ನು ಬ್ರಿಟನು ಸಧ್ಯದಲ್ಲಿ ಹೊರಡಿಸುವುದಾಗಿ ವದಂತಿಯಿದೆ. 45,000 ಟನ್ ಭಾರದ ಮತ್ತು 18 ಇಂಚಿನ ತೋಪುಗಳುಳ್ಳ ನೌಕೆಗಳನ್ನು ಸಿದ್ಧಪಡಿಸಲು ಸಂಯುಕ್ತ ಅಮೇರಿಕಾವು ಒಂದು ಯೋಚನೆ ಮಾಡಿರುತ್ತದೆ.

[illegible]

ಧಾತುಪುಷ್ಟಿ ಲೇಹ

([illegible])

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ.

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಶರೀರದ ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2–8–0. ಮೂರು ಬಾಟ್ಲಿಗಳಿಗೆ ರೂ. 7–0–0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ಕಾಲ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1–8–0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್
ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳಃ—ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೊ., ಗಿರಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನಿಲ್ಲದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದು. ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಕಾರಿ ಲೇಡಿ ಡಾ। ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೇಳಿಕೊಂಡಿರುವೆನು, ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಪ್ಪಿಯ ಕ್ರಯ ರೂ. ೪–೦–೦ ವಿ. ಪಿ. ಅಂಚೆ ಬೇರೆ.

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (S. M. C.)

ಹೊಸ ಮಾಲು ಇಂದೇ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

DRINK

Delicious

WATERFALL

AND

PYKARA TEAS.

unrivlled for Taste & Aroma.

ಅತ್ಯುತ್ತಮವಾದ

ವಾಟರ್ ಫೋಲ್

ಮತ್ತು

ಪಾಯ್ಕರಾ ಚಹಾವನ್ನು

ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ.

Distributors:

Panchmal Krishnaya Shenoi & Son,

Bunder, Mangalore.

USE

365 BAR SOAPS

SOLD

EVERYWHERE.

**
**

Sole Agent:

PANCHMAL KRISHNAYA SHENOI & SON,

Bunder, MANGALORE.

IN THE
HIGH COURT OF JUDICATURE
AT MADRAS
Ordinary Original Civil Jurisdiction.
O. P. No. 128 of 1938.
In the matter of
The Indian Companies Act
and in the matter of the
CANARA LAND INVESTMENTS Ltd, UDIPI
The Canara Land Investments, Ltd } Petitioners.
This Petition for confirmation of the Special Resolution dated 27-3-1938 to amend clause 3 (c) of the Memorandum of Association of the Company-above named is posted to 28-7-1938 before the Judge sitting in Chambers
46, Law Chambers High Court, Madras 28-4-1938 } A Narayana Pai, Counsel for Petitioners

ಸಾಮ್ಯವಾದವೇ ಯೋಕೆ?

(೯ನೇ ಪುಟದಿಂದ)

ಸರಕಾರದ ಸ್ಥಾಪನೆಯಾಯಿತು ಯುರೋಪದ ಮಹಾಯುದ್ಧದ ಅನಂತರ ರಸ್ಯದಲ್ಲಿ ದೊಡ್ಡ ಕ್ರಾಂತಿಯಾಗಿತ್ತು ಆಗ ರಸ್ಯದ ಆರ್ಥಿಕ ಸ್ಥಿತಿಯು ಬಹಳ ಕೆಟ್ಟದಾಗಿತ್ತು ಮತ್ತು ಜನತೆಯಲ್ಲಿ ಅಪರಿಮಿತ ಅಸಂತೋಷವು ಹರಡಿತ್ತು. ಧನಿಕರು ಬಡವರನ್ನು ಕಾಲಡಿಯಲ್ಲಿ ತುಳಿಯುತ್ತಿದ್ದರು ಯುದ್ಧದಿಂದಾದ ಕಷ್ಟನಷ್ಟಗಳು ಜನರ ಅಸಂತೋಷವನ್ನು ಮತ್ತಷ್ಟು ಹೆಚ್ಚಿಸಿತು ರಸ್ಯದ ಜನರು ಬಹಳ ಜಾಗೃತರಾದರು ಈ ಸ್ಸಂದರ್ಭದ ಸಮುಪಯೋಗ ತೆಗೆದುಕೊಂಡು ಲೆನಿನನು ರಸ್ಯದಲ್ಲಿ ಮಾರ್ಕ್ಸನ ಸಿದ್ಧಾಂತಗಳನ್ನು ಪ್ರಚಾರಕ್ಕೆ ತಂದನು ಯುರೋಪದ ಮಹಾಯುದ್ಧವು, ಧನಿಕರೊಳಗಿನ ಕಲಹವೆಂದು ಲೆನಿನನು ತಿಳಕೊಂಡಿದ್ದನು ಆದ್ದರಿಂದ ಜನತೆಗೆ ಅದರ ಯಾವ ಸಂಬಂಧವೂ ಇರುವದಿಲ್ಲವೆಂದು ಅವನು ಅನ್ನುತಿದ್ದನು ರಸ್ಯದಲ್ಲಿ 1916–17ರಲ್ಲಿ ಸೋವಿಯಟ ಸರಕಾರದ ಸ್ಥಾಪನೆಯಾಯಿತು ಈಗ ಈ ಸಾಮ್ಯವಾದಿ ಸರಕಾರದ ಕೆಳಗೆ ಸುಮಾರ ಎಂಟು ದೇಶಗಳಿರುವವು ಅವುಗಳನ್ನು U S S R (Union of Soviet Socialist Republics) ಎಂದು ಕರೆಯುವರು ಈ ರಾಷ್ಟ್ರದಲ್ಲಿ ಭಿನ್ನ ಭಿನ್ನ ಜಾತಿಗಳಿಗೆ ಸೇರಿದ ಕೋಟ್ಯಾಂತರ ಜನರು ಇರುತ್ತಾರಾದರೂ, ಒಂದೇ ಜಾತಿಯವರಂತೆ ಅವರೆಲ್ಲರು ಬಂಧುಭಾವದಿಂದ ಇರುತ್ತಾರೆ ಇದೆಲ್ಲ ದೂರದ ಬೆಟ್ಟ ನುಣ್ಣಗೆ ತೋರುವಂತೆ ಎಂದು ಹೇಳಬಹುದು ಆದರೂ ಕೂಡ ಧನಿಕಶಾಹೀ ರಾಜ್ಯಗಳಲ್ಲಿನ ಜನರಿಗಿಂತ ರಸ್ಯದ ಜನರು ಹೆಚ್ಚು ಸುಖಿಗಳಾಗಿದ್ದಾರೆ ಎನ್ನುವದರಲ್ಲಿ ಯಾವ ಸಂದೇಹವೂ ಇಲ್ಲ. ಮೊದಮೊದಲು ಇಡೀ ಜಗತ್ತು ರಸ್ಯದ ಸಾಮ್ಯವಾದಿ ಸರಕಾರವನ್ನು ಸಂದೇಹದಿಂದ ನೋಡುತಿತ್ತು ಆದರೆ ಈಗ ಅದರ ಸಫಲತೆಯನ್ನು ಕಂಡು ಅದು ಆಶ್ಚರ್ಯಾನ್ವಿತವಾಗಿರುವದು

ರಸ್ಯದಲ್ಲಿ ಸಾಮ್ಯವಾದವು ಸಂಪೂರ್ಣ ಸಫಲವಾಗಲಿಲ್ಲ, ಆದ್ದರಿಂದ ಅದರ ಅನುಕರಣೆ ಮಾಡುವದು ಶ್ರೇಯಸ್ಕರವಲ್ಲ ಎಂದು ಕೆಲವರು ಹೇಳುತ್ತಾರೆ ಪರಂತು ರಸ್ಯದಲ್ಲಿ ಇದು ಮೊದಲನೆಯದಾಗಿ ಸಾಮ್ಯವಾದದ ಪರೀಕ್ಷೆ ನಡೆಯುತ್ತಲಿದೆ. ಆದ್ದರಿಂದ ಅದರಲ್ಲಿ ಕೆಲವು ಕುಂದುಕೊರತೆ ಲೋಪದೋಷಗಳು ಕಂಡುಬರುವದು ಸ್ವಾಭಾವಿಕವಾಗಿದೆ. ನಮಗೆ ರಸ್ಯ ಒಂದೇ ಆದರ್ಶವಾಗಿ ಇರಕಕ್ಕದ್ದಲ್ಲ.

ಜಗತ್ತಿನಲ್ಲಿ ಸಾಮ್ಯವಾದದ ಯಾವ ಗಾಳಿಯು ಬೀಸುತ್ತಲಿದೆಯೋ, ಅದರಿಂದ ನಮ್ಮ ಹಿಂದೂದೇಶವು ದೂರ ಸರಿದು ನಿಲ್ಲಲಾರದು. ಭಾರತಕ್ಕೆ ಅದು ಹೊಸ ವಸ್ತುವೇನೂ ಅಲ್ಲ. ಹಿಂದೂ ಸಮ್ಮಿಲಿತ ಕುಟುಂಬ ಪ್ರಣಾಲಿಯಲ್ಲಿ ಸಾಮ್ಯವಾದದ ಭಾವವು ಅಡಕವಾಗಿದೆ ಭಾರತದ ಅವನತ ಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಮ್ಯವಾದ ಒಂದೇ ಚಿಕಿತ್ಸೆ ಆಗಿರುವದು ಆದರೆ ಎಲ್ಲಕ್ಕಿಂತ ಮೊದಲು ಭಾರತವು ವಿದೇಶಿಯರ ಆಡಳಿತದಿಂದ ಸ್ವತಂತ್ರವಾಗಬೇಕಾಗಿದೆ; ಮತ್ತು ಇಲ್ಲಿಯ ಜನತೆಗೆ ಸಾಮ್ಯವಾದದ ಚೆನ್ನಾಗಿ ಪರಿಚಯ ಮಾಡಿಕೊಡಬೇಕಾಗಿದೆ. ಯಾಕಂದರೆ ಜನತೆಯು ಸಾಮ್ಯವಾದವೆಂದರೇನೆಂದು ಚೆನ್ನಾಗಿ ತಿಳಿದಿರುವದಿಲ್ಲ. ಒಂದು ಹೊಸ ಸಿದ್ಧಾಂತವನ್ನು ಜನತೆಯು ಗ್ರಹಿಸಿಕೊಳ್ಳಬೇಕಾದರೆ ಅದಕ್ಕೆ ಮೊದಲು ಒಳ್ಳೇ ಸಿದ್ಧತೆಯು ನಡೆಯಬೇಕು. ಇಲ್ಲವಾದರೆ ಅದನ್ನು ಗ್ರಹಿಸಿಕೊಳ್ಳುವದು ಕಷ್ಟವಾಗುತ್ತದೆ. ಭಾರತವನ್ನು ಒಮ್ಮಿಂದೊಮ್ಮೆಗೆ ಸಾಮ್ಯವಾದಿ ರಾಷ್ಟ್ರವನ್ನಾಗಿ ಮಾಡುವದು ಸಿದ್ಧಾಂತರೂಪದಿಂದ ಒಳ್ಳೇ ವಿಚಾರವಾಗಿ ತೋರಬಹುದು ಆದರೆ ಪರಾಧೀನತೆಯ ಶೃಂಖಲೆಗಳನ್ನು ಮುರಿದುಹಾಕದೆ ಹಾಗೆ ಮಾಡುವದು ಸಾಧ್ಯವೇ ಅಲ್ಲ. ಆದ್ದರಿಂದಲೇ ಕಾಂಗ್ರೆಸಿಗೆ ಸಮಾಜವಾದದೊಂದಿಗೆ ಸಹಾನುಭೂತಿ ಇರುವದಾದರೂ, ಪ್ರಕಟವಾಗಿ ಅದು ಸಾಮ್ಯವಾದವನ್ನು ಸ್ವೀಕರಿಸಿರುವದಿಲ್ಲ

ಕೇವಲ ಧಾರ್ಮಿಕ ಮತ್ತು ರಾಜನೈತಿಕ ಬಂಧನಗಳಿಂದ ಮುಕ್ತರಾದ ಮಾತ್ರದಿಂದ ಜನರಿಗೆ ಸುಖವು ಪ್ರಾಪ್ತವಾಗುವದಿಲ್ಲ. ಆರ್ಥಿಕ ಸ್ವಾತಂತ್ರ್ಯವು ಜನರಿಗೆ ಲಭಿಸಬೇಕಾದ್ದು ಮುಖ್ಯ ಮಾತಾಗಿದೆ. ಸಂಸಾರದಲ್ಲಿ ಯಾವಾಗ ಒಬ್ಬನೇ ಒಬ್ಬನಾದರೂ, ದಾರಿದ್ರ್ಯದ ಕಾರಣದಿಂದ ಉಪವಾಸ ಬೀಳುವದಿಲ್ಲವೋ, ಆಗಲೇ ಜಗತ್ತಿನ ಮಂಗಲವಾಗುವದು

"ದಕ್ಷಿಣ ಭಾರತ".

ಭಾಷಾನ್ವಯ ಪ್ರಾಂತ್ಯಗಳು ಸದ್ಯಕ್ಕಿಲ್ಲ

ಬ್ರಿಟಿಷ ಸರಕಾರವು, ಇಂಡಿಯದ ಸದ್ಯಸ್ಥಿತಿಯನ್ನು ಚೆನ್ನಾಗಿ ಅರಿತಿದ್ದು, ಇನ್ನೂ ಹೊಸ ಪ್ರಾಂತ್ಯಗಳನ್ನು ರಚಿಸುವ ಗೊಡವೆಗೆ ಹೋಗವ ಹಾಗಿಲ್ಲೆಂದು ಇಂಡಿಯಾ ಕಾರ್ಯದರ್ಶಿಗಳು (ಲೋರ್ಡ ಜೆಟ್ಲೆಂಡರು) ಅಭಿಪ್ರಾಯ ಪಟ್ಟಿರುವರೆಂದು, ಈ ವಿಷಯವಾಗಿ, ಕೇಳಿದೊಂದು ಪ್ರಶ್ನೆಗೆ ಪಾರ್ಲಿಮೆಂಟಿನಲ್ಲಿ ಲೋರ್ಡ ಸ್ಟೆನ್ಲಿಯವರು ಉತ್ತರ ಕೊಟ್ಟಿರುವರು.

ಆಂಧ್ರ, ಕೇರಳ, ಕರ್ನಾಟಕಗಳು [illegible] ಸುಮ್ಮನಾಗುವುವೆ? ಅಥವಾ ಆಗದ [illegible] ವೆಂದು ಎಲ್ಲ ಪ್ರಯತ್ನಗಳನ್ನೂ ಮಾಡುಯುವುವೆ? ಅಥವಾ ಇನ್ನೂ ಪ್ರಾಂತ್ಯಗಳಿಗೆ ಯಾವ್ಯಾವುದೆಲ್ಲ ಸೇರಬೇಕೆಂದು ಚರ್ಚಿಸಿ ಇಲ್ಲಲ್ಲಿ ಮನಃಕ್ಲೇಶ ಹೆಚ್ಚಿಸುವುವೆ?

ನವಭಾರತ

ಲೋರ್ಡ ಲೋಥಿಯನರು ಒಂದು ಪತ್ರಿಕೆಗೆ ತಮ್ಮ ಸಂಭಾಷಣಾನುಭವಗಳನ್ನು ಬರೆದುತ್ತ-ಕಳೆದ ೧೨ ವರ್ಷಗಳಲ್ಲಿ ಮೂರು ಸಲ ಅಸಹಕಾರ ಚಳವಳಿವನ್ನು ಉತ್ತಮ ರೀತಿಯಲ್ಲಿ ಕಾಂಗ್ರೆಸು ನಿರ್ವಹಿಸಿದೆ. ಚಳವಳಿ ಕಾಲದಲ್ಲಿ ಹಿಂಸೆಯೂ ಉದ್ರೇಕಗೊಂಡುದಿದೆ. ಮಹಾತ್ಮರು ಅದನ್ನು ಅಗಲೆ ತಡೆದುದುಂಟು. ಆದರೂ, ಸ್ವಾತಂತ್ರ್ಯಕ್ಕಾಗಿ ಆತ್ಮಪೂರ್ವಕ ಸಾಧಿಸಬಲ್ಲವರೂ ಅಹಿಂಸಾಪ್ರಿಯರೂ ಆಗಿರುವ ಮುಖಂಡರು ತುಂಬ ಇದ್ದಾರೆ. ಇವರ ದೆಸೆಯಿಂದಲೇ, ಬ್ರಿಟಿಷ ಸರಕಾರವು ರಾಜಕೀಯ ಸುಧಾರಣೆಗಳನ್ನು ಪುನಃ ಏರ್ಪಡಿಸುವಂತಾಯಿತು. ಇವರು ಎಣಿಸಿರುವ ಸ್ವಾತಂತ್ರ್ಯವೆಂದರೆ, ಪಾಶ್ಚಾತ್ಯರು ಭಾವಿಸುವ ರೀತಿಯದಲ್ಲ. ಬ್ರಿಟನಿನ ಸಂಬಂಧವನ್ನು ಇವರು ಕಡಿದಿಕ್ಕಲು ಇಚ್ಛಿಸುವುದಿಲ್ಲ. ಆದರೆ, ಭಾರತೀಯರು ತಾವಾಗಿ ತಮ್ಮ ಉದ್ಧಾರಕಾರ್ಯವನ್ನು ಇತರ ಯಾರ ಸೂಚನೆಗೂ ಒಳಪಡದೆ ಮಾಡುವ ಯೋಗ್ಯತೆಯುಳ್ಳವರಾಗಬೇಕೆಂದು ಹಕ್ಕು ಪಡೆಯಲು ಇವರು ಚಡಪಡಿಸುತ್ತಿರುವರು. ಇದಕ್ಕೊಪ್ಪುವವಾದರೆ, ಅವರು ಬ್ರಿಟಿಷರ ಮಿತ್ರರೇ ಆಗುವರು ಹೊರತು ವಿರೋಧಿಗಳಾಗರು. ಆದರೆ, ಪ್ರತಿಯೊಂದು ರಾಜಕೀಯ ಪಂಗಡದಲ್ಲಿರುವ ಹಾಗೆಯೆ ಕೆಲವು ಮಂದಿ ತಾವೇ ಮೆರೆಯಬೇಕೆಂದೂ ಸ್ವಾರ್ಥ ತೃಪ್ತಿಹೊಂದಬೇಕೆಂದೂ ಪ್ರಯತ್ನಪಡುವರು ಹಾಗೆಂದು ಕಾಂಗ್ರೆಸಿನಲ್ಲಿ, ಎಷ್ಟು ಹುಡುಕಿದರೂ, ಒಡಕು ಹುಟ್ಟಲಾರದು ಮಹಾತ್ಮಾಜಿಯವರು ಜೀವಿಸಿರುವ ತನಕ ಕಾಂಗ್ರೆಸು ಒಕ್ಕಟ್ಟಿನದಾಗುವುದು ಅವರು ಮಾಯವಾದರೆ, ಬ್ರಿಟಿಷರೂ ಹಿಂದೆ ಸರಿದರೆ, ಕಾಂಗ್ರೆಸಿನ ಒಕ್ಕಟ್ಟು ಒಡೆದು ಸಿಡಿಸ್ಸುಕಿ ಹೊರಬೀಳುವುದು. ಈಗ ಕಾಂಗ್ರೆಸು ಪ್ರತಿಪಕ್ಷವನ್ನು ಗೆಲ್ಲುವುದಕ್ಕಾಗಿಯೆ ತನ್ನ ಪಂಗಡಿಗರನ್ನು ಸ್ಫೂರ್ತಿಗೊಳಿಸುತ್ತದೆ, ಹೀಗಿರುವಾಗ ಎದುರುಪಕ್ಷಗಳು ತಾವೂ ನೆಲಸಮವಾಗಬಾರದೆಂದು ಹಟಹಿಡಿದಿವೆ ಈಗ ಜ್ಯಾರಿಗೆ ಬಂದಿರುವ ಅಲ್ಪಸಂಕಷ್ಟ ಚೆನ್ನಾಗಿಯೇ ಭಾರತೀಯರ ಶ್ರೇಯಸ್ಸಾಕಾಂಕ್ಷಗಳಿಗೆ ಸಾಕಷ್ಟಾಗಿದೆ ಹಿಂದೀಯರು ವಹಿಸಿಕೊಳ್ಳುವಷ್ಟು ಸ್ವಾತಂತ್ರ್ಯವನ್ನು ಈ ಅಕ್ಟಿನನ್ವಯ ಕೊಡಬರುತ್ತದೆ ಎಂದು ಸಂಕ್ಷೇಪಿಸಿರುವರು

...pany, Ltd.

	BUSINESS IN FORCE
	1,16,58,706
	2,06,68,328
	3,07,98,434
	5,14,38,205

...ances. Family Safe Guard Policy a special feature

Application for agencies will be received from honest and respectable gentlemen.

Organisers appointed with pay and allowance.

Gentlemen with organising ability and who can guarantee Business need apply

Kochikar Brothers, Ltd.,

(Incorporating Messrs Kochikar Brothers),

Madras Branch Secretaries,

Post Box 337, Mount Road, MADRAS.

Phone No. 8245.

Apply to any of the following Offices:-

Ottapalam.	Central Station Road, Trivandrum.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4

ಧನ್ವಂತರಿ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಜಗತ್ಪ್ರಸಿದ್ಧ ಆಯುರ್ವೇದೀಯ ಔಷಧಗಳು

ಶ್ರೀಕರ ಕಸ್ತೂರಿ ಮಾತ್ರೆ

ಮಕ್ಕಳಿಗೆ ಸಂಜೀವನ, ಯುವಕರಿಗೆ ಮಿತ್ರ, ವೃದ್ಧರಿಗೆ ಆರೋಗ್ಯಪ್ರದ ಘಮ ಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ದೇಶಗಳಲ್ಲೂ, ಎಲ್ಲಾ ಹವೆಗಳಲ್ಲೂ ಶರೀರವನ್ನು ರಕ್ಷಿಸುತ್ತದೆ ಅಜೀರ್ಣವನ್ನು ಸಂಹರಿಸುತ್ತದೆ ಸೊಂಕುರೋಗಗಳನ್ನು ನಿವಾರಣೆ ಮಾಡುತ್ತದೆ ಆಬಾಲವೃದ್ಧರಿಗೂ ಕೆಮ್ಮು, ವಿಧವಿಧ ಜ್ವರ, ನೆಗಡಿ, ಹಲ್ಲುನೋವು, ಉಬ್ಬಸ, ಅರೋಚಕ, ಆಲಸ್ಯ ಮುಂತಾದ ಶೀತವಾತದಿಂದುಂಟಾಗುವ ಸಮಸ್ತ ರೋಗಗಳನ್ನೂ ಜಾಗ್ರತೆ ಗುಣಪಡಿಸುತ್ತದೆ ಬಾಣಂತಿಯರಿಗೆ ಅಮೃತತುಲ್ಯವಾದುದು ಎಲ್ಲಾ ಕಾಲದಲ್ಲೂ ನಿಮ್ಮನ್ನು ಕಾಪಾಡುವುದು ಬೆಲೆ —2 ಮತ್ತು 4 ಆಣೆ

ಬಾಲಸಂಜೀವಿನಿ

ಈ ಅಮೃತವು ಮಕ್ಕಳಿರುವ ಮನೆಯಲ್ಲಿ ಸರ್ವದಾ ಇರಬೇಕಾದುದು 1 ವರ್ಷದ ಲಾಗಾಯತು 10 ವರ್ಷದ ವರೆವಿಗೆ ಉಪಯೋಗಿಸಬಹುದು 1-2 ಮಾತ್ರೆಗಳನ್ನು ನಯೋಗುಣವಾಗಿ ಆಗಾಗ್ಗೆ ಉಪಯೋಗಿಸಿದರೆ ಸುಖವಾಗಿ 2-3 ವೇಳೆ ಭೇದಿಯಾಗಿ ಮಕ್ಕಳಿಗೆ ಯಾವ ರೋಗವೂ ಬರಲಾರದು. ಅಸಾಧ್ಯವಾದ ಪಕ್ಕೆ ಶೀತ ವಿಧವಿಧ ವಾಯು, (Convulsions and fits), ಹೊಟ್ಟೆಯುಬ್ಬರ ಮಂದಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ಮಲಬಂಧಗಳಲ್ಲಿ ಒಂದು ಹೊತ್ತಿನ ಔಷಧದಿಂದಲೇ ಅದ್ಭುತ ಗುಣವು ತೋರುವುದು 50 ಮಾತ್ರೆ 4 ಆಣೆ

ಗೋರೋಚನ ಮಾತ್ರೆ

ಈಗ ಹುಟ್ಟಿದ ಮಗುವಿನಿಂದ ಐದು ವರ್ಷಗಳ ವರೆವಿಗೆ ಉಪಯೋಗಿಸಬಹುದು ಬಹಳ ಸೂಕ್ಷ್ಮ ಪ್ರಕೃತಿಯುಳ್ಳ ಮಕ್ಕಳಿಗೆ ಸುಖವಾಗಿ 1-2 ವೇಳೆ ಮಾತ್ರ ಭೇದಿ ಮಾಡಿಸುವುದರಲ್ಲಿ ಈ ಮಾತ್ರೆಗಳು ಕೈಗೊಂಡ ಸಿದ್ಧಾಮೃತ ಯಾವ ಮಕ್ಕಳಿಗೆ ಗೋರೋಚನ ಮಾತ್ರೆಯಿಂದ ಭೇದಿಯಾಗುವುದಿಲ್ಲವೋ ಅಂದಾ ಮಕ್ಕಳಿಗೆ ಬಾಲಸಂಜೀವಿನೀ ಮಾತ್ರೆಯನ್ನು ಉಪಯೋಗಿಸಬಹುದು 24 ಮಾತ್ರೆ 6 ಆಣೆ

ಜ್ವರ ಕೇಸರಿ

ಸಮಸ್ತ ವಿಧವಾದ ಛಳಿಜ್ವರ, ಮಲೇರಿಯಾಜ್ವರ ಪ್ಲೇಗುಜ್ವರ, ಇನ್‌ಫ್ಲುಯಾನ್‌ಜಾಜ್ವರ, ವಾಯಿದೇ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ —8 ಆಣೆ

ಆಮೋದಿನಿ

ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳು 25 ವರ್ಷಗಳ ದಲೂ ಜನರ ಪ್ರೀತಿಯನ್ನು ಸಂಪಾದಿಸಿರುವುದು. ಸಂಗೀತಗಾರರಿಗೆ ಸುಖವಾಗಿ ಹಾಡಲು ವಿಶೇಷ ಸಹಾಯ ಮಾಡುವುದು ಬಾಯಿರುಚಿಯನ್ನು ಶಮನಮಾಡುವುದು ಸೋಂಕು ರೋಗಗಳು ಶರೀರಕ್ಕೆ ಅಂಟದಂತೆ ಶರೀರವನ್ನು ಕಾಪಾಡುವುದು ಮಕ್ಕಳ ಮತ್ತು ದೊಡ್ಡವರ ಕೆಮ್ಮನ್ನು ತಕ್ಷಣ ಪರಿಹರಿಸುವುದು ಆಬಾಲವೃದ್ಧರೂ ಪ್ರೀತಿಯಿಂದ ಸೇವಿಸಲು ಅರ್ಹವಾಗಿದೆ ಬೆಲೆ 0—4 0, 0 2—0

ನಮ್ಮ ನಂಜನಗೂಡು ಸದ್ವೈದ್ಯಶಾಲಾದಲ್ಲಿ ತಯಾರಾಗುವುದೇ "ನಂಜನಗೂಡು ಟೂತ್-ಪೌಡರ್" ಎಂಬುದು ಜ್ಞಾಪಕದಲ್ಲಿರಲಿ ನಕ್ಕಲ್ ಮಾಲುಗಳನ್ನು ಕೊಂಡು ಮೋಸಹೋಗಬೇಡಿರಿ. ಕ್ಯಾಟಲಾಗನ್ನು ಬರೆದು ತರಿಸಿರಿ

ಸದ್ವೈದ್ಯಶಾಲಾ, ನಂಜನಗೂಡು.

The

Agricultural & Industrial Bank, Ltd.,

(Incorporated in British India)

Head Office "LAXMINIVAS BUILDINGS" *Coondapoor*

BRANCHES –

COONDAPOOR	BRNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:–

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS. 10 25 50 100 250 500 & 1000 REDEEMABLE AT ANY TIME CUMULATIVE DEPOSITS ARE ACCEPTED

Current Deposits

From January to June 2%

and

From July to December 1%

Savings Bank Deposits

3% per cent per annum

Fixed Deposits

for 6 Months 3½%

1 Year 4%

2 Years & above 4½%

For Further Particulars Apply to –

HEAD OFFICE or BRANCHES

Buy Advertised Goods

ದಿ ಕಂಬೈಂಡು ಬುಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಮಿತವಾದ ದರಗಳು! ಸಭ್ಯ ನೌಕರರು!

ನಿಯಮಿತ ಕಾಲಕ್ಕೆ ಬಿಡಲ್ಪಡುವ ಬಸ್ಸು ಸರ್ವಿಸುಗಳು

ಇವುಗಳಿಂದಲ್ಲವೇ

ಪ್ರಯಾಣ ಸೌಕರ್ಯವು ಹೆಚ್ಚುವುದು?

ನಮ್ಮ ಬಸ್ಸುಗಳು ನಮ್ಮ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ನಿಶ್ಚಿತ ಸಮಯಕ್ಕೆ ಹೊರಡುವುವು.
ನೌಕರರು ವಿನಯ ನಮ್ರತೆಗಳಿಂದ ನಿಮ್ಮನ್ನು ಸ್ವಾಗತೀಕರಿಸುವರು.
ಮಿತದರಗಳು ಎಲ್ಲಾ ತರಗತಿಯ ಪ್ರಯಾಣಿಕರಿಗೂ ಬಸ್ಸು ಪ್ರಯಾಣಕ್ಕೆ ಆಸ್ಪದವೀಯುವುದು

ಪ್ರಯಾಣಿಕರಿಗೆ ಉಂಟಾಗಬಹುದಾದ ಅಸೌಕರ್ಯಗಳನ್ನು ನಮಗೆ ತಿಳಿಸಿದ್ದಲ್ಲಿ ತಕ್ಕ ಏರ್ಪಾಡು ಕೊಡೋಣಾಗುವದು.

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥದಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಷಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆ ಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇರದೆ, ಗ್ರಹಶಾಂತಿಯೊಂದೇ ಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ಜನಗಳಿಂದು ಲಾಭವಾಗುತ್ತ ಬಂದಿದೆ. [illegible] ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು [illegible] ಈ ವಸ್ತುವಿನಿಂದ ದುರ್ಭಾಗ್ಯರನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ಏಕೆ ಈ ಅವಕಾಶಗಳನ್ನು ಕಳೆದುಕೊಳ್ಳುವಿರಿ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ, ಕಳೆದುಕೊಂಡಿರುವ [illegible] ಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರಲು [illegible] ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಧಾರಣವಾದ ಗುಣದ ಬಗ್ಗೆ [illegible] ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ [illegible] ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವನ್ನಿಡುವಂಥ ಮನುಷ್ಯನು ಈ ಆಯುಷ್ಯದಲ್ಲಿ ಎಲ್ಲಾ ಸುಖವನ್ನು ಪಡೆಯಬಹುದೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ವಿಧವಾದ ಆಶೆಗಳನ್ನೂ ಪೂರೈಸುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರ್ಯಗಳಿಗಾಗಿ ಆರಾರು-ಎಂಟೆಂಟು ಅಲ್ಲ ಹನ್ನೆರಡು ಹನ್ನೆರಡು ನವಗ್ರಹ ಯಂತ್ರಗಳನ್ನು ತರಿಸಿದ್ದಾರೆ. ವಿಶ್ವಾಸವಿಲ್ಲದಿದ್ದರೆ [illegible] ಪ್ರಶಂಸಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಿ [illegible]

[illegible]

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.



ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು.— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. [illegible] ಯಂತ್ರ [illegible] ಎಂದು ಬೇರೆ ಬೇರೆ ಹೆಸರಗಳನ್ನಿಡುತ್ತಾರೆ. ತಮ್ಮ ಮನಸ್ಸಿಗೆ ತಿಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. [illegible] ಈ ನವಗ್ರಹ ಯಂತ್ರದ ಅದ್ಭುತ ಕಳೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕೆ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:— ಪಂಜಾಬ್ ಸಿವಿಲ್ ಸೆಕ್ರಟರಿ [illegible] ನಾನು ನಿಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು, ಒಂದು ನನಗೆ ಮತ್ತೊಂದನ್ನು ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳ ನಮಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿದೆ. [illegible] ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುತ್ತಿರುವ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಬೇಕೆಂದು ಹಾರೈಸುತ್ತೇನೆ.

[illegible]

ವಿಳಾಸ.— **Pandit B. R. BHAVISYAVAKTA (S. S. M.) Bombay, No. 4.**

(Regd.)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

ಸ್ವದೇಶಾಭಿಮಾನಿ

[ಪು. ೩೧]   ತಾರೀಖು ೨೭ನೇ ಮೇ ೧೯೩೮ (27 – 5 – 1938)   [ಸಂಚಿಕೆ ೨೦

ತ್ರಾ

★

ಪುಟಗಳು 24

ಅನುಕ್ರಮಣಿಕೆ

...ರುಳವಿಷ್ಯ

❀

...ನ್ಪುರದಲ್ಲಿ ಮುಷ್ಕರ

❀

...ರ್ಯಾಧಿಕಾರಿಗಳಾಗುವಿರಿ?

❀

...ಮಹಾಯುದ್ಧದ ಭೀತಿ

❀

...ಗರೊಡನೆ ಮಹಾತ್ಮ...
...ನರ ಸಂಭಾಷಣೆ

❀

...ಶಾಂತಿಭಂಗಕ್ಕೊಂದು...
...ಲ, ಜರ್ಮನಿ ಝೆಕೊ...
ಸ್ಲೊವೆಕಿಯ ಯುದ್ಧ
ರಂಗಸ್ಥಳ

[illegible] ಫಿಲ್ಮ್ ಕಂಪೆನಿಯವರು ತಯಾರಿಸಿದ [illegible]
ಎಂಬ ವಾಕ್ಚಿತ್ರದಲ್ಲಿ ಅತ್ಯುಜ್ವಲತೆಯಿಂದ ನಟಿಸಿದ
ರತನ್ ಬಾಯಿ.

WHAT BUILDS A GREAT BANK.

The two vital features of a Bank are its financial policy and its service. When for over thirty years a Bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF
A CRORE.

ESTD: 1906.
CANARA BANK
LIMITED.

★ ಚಿತ್ರ-ವಿಚಿತ್ರ ★

ನುಸಿಗಳನ್ನು ಸಂಗ್ರಹಿಸುವ ಗಾಳಿಪಟಗಳು

ಮಿಡಗು (pests)ಗಳನ್ನು ಹೋಗಲಾಡಿಸಲು ಓರ್ವ ಪ್ರೊಫೆಸರರು ಗಾಳಿಪಟಗಳನ್ನು ಹಾರಾಡಿಸಲು ಆರಂಭಿಸಿರುವರು. ಎ. ಸಿ ಹಾರ್ಡಿ ಎಂದು ಅವರ ಹೆಸರು. 2000 ಅಡಿಗಳಷ್ಟು ಎತ್ತರದಲ್ಲಿ ನುಸಿಗಳನ್ನು ಸಂಗ್ರಹಿಸಲೋಸುಗವೇ ಅವರು ಈ ಗಾಳಿಪಟಗಳನ್ನು ಹಾರಾಡಿಸುವುದಾಗಿದೆ.

ಈ ಗಾಳಿಪಟಗಳಿಗೆ ಕೆಲವು ಬಲೆಗಳು ಕಟ್ಟಲ್ಪಡುತ್ತವೆ. ಅವು ತಮ್ಮಷ್ಟಕ್ಕೆ ತೆರೆದು, ಅವುಗಳಲ್ಲಿ ನುಸಿಗಳು ನುಗ್ಗಿದೊಡನೆ, ತಾವಾಗಿ ಮುಚ್ಚುವುವು. ಪಿಡುಗುಗಳ ಪ್ರಸಾರವು ಹೇಗಾಗುತ್ತದೆಂದು ಇವುಗಳಿಂದ ಕಂಡು ಹಿಡಿಯಲಾಗುತ್ತದಂತೆ.

ಮನುಷ್ಯನು!

21 ರಾತ್ಲ ಸುಣ್ಣ, ಒಂದು ಸಾವಿರ ಬೆಂಕಿಪೆಟ್ಟಿಗೆಗಳನ್ನು ತಯಾರಿಸಲು ಬೇಕಾಗುವಷ್ಟು ಫೋಸ್ಫರಸ್, ಕೆಲವು ಔನ್ಸ್ ಉಪ್ಪು, ಸ್ವಲ್ಪ ಪೊಟೇಶಿಯಮ್, ಒಂದಿಷ್ಟು ಗಂಧಕ, ಕೆಲವು ಮೊಳೆಗಳನ್ನು ತಯಾರಿಸಲು ಬೇಕಾಗುವಷ್ಟು ಕಬ್ಬಿಣ, ಸ್ವಲ್ಪ ಆಯೊಡಿನ್, ಸ್ವಲ್ಪವೇ ತಾಮ್ರ, ಲೋಹಮಂಡೂರ (Manganese) ಸಿಲಿಕೊನ್ (Silicon) ಮತ್ತು ಫ್ಲೋರಿನ್ (Flowrine) ಇವುಗಳನ್ನು ಚೆನ್ನಾಗಿ ಕಲಿಸಿದರೆ, ಉಂಟಾಗುವುದೇನೆಂದು ಖಂಡಿತ ಹೇಳಲು ಸಾಧ್ಯವಿಲ್ಲ. ಆದರೆ 6 ಮಣ ಭಾರ ಇರುವ ಮನುಷ್ಯನ ದೇಹದಲ್ಲಿ ಇರುವುದು ಇದೇ.

ವಾರ್ತಾವಾಹಕ ವಿಮಾನ

ಆರ್ಜೆಂಟಿನಾ ಎಂಬಲ್ಲಿಯ ಒಂದು ನದಿಯಲ್ಲಿ ಹಿಡಿದ ಆಡೋಂದು ವಿಮಾನು ಒಂದು ಪತ್ರವನ್ನು ಧರಿಸಿಕೊಂಡು ಮೂರು ಸಾವಿರ ಮೈಲು ಚಲಿಸಿದಂತೆ ಕಂಡುಹಿಡಿಯಲಾಗಿದೆ.

ಆ ವಿಮಾನಿನ ದೇಹಕ್ಕೆ ಒಂದು ಬೆಳ್ಳಿಯ ಸರಿಗೆಯು ಕಟ್ಟಲ್ಪಟ್ಟಿತ್ತು. ಆ ಸರಿಗೆಗೆ ಒಳಗೆ ಪತ್ರವಿದೆ ಎಂದು ಬರೆಯಲ್ಪಟ್ಟ ಒಂದು ಕರ್ಪೂರದ ಕರಡಿಗೆಯು ತೂಗಹಾಕಿತ್ತು. ಅದನ್ನು ಒಡೆದು ನೋಡಲಾಗಿ, ಅದರೊಳಗಿದ್ದ ಕಾಗದದಲ್ಲಿ ಈ ರೀತಿ ಬರೆದಿತ್ತು "ಈ ಕಾಗದ ಮತ್ತು ಕರಡಿಗೆಗಳನ್ನು ಒಸ್ಲೋ ಪ್ರದರ್ಶನ ಮಂದಿರಕ್ಕೆ ಕಳುಹಿಸಿ ಕೊಡಿರಿ. ಅಲ್ಲದೆ ಈ ವಿಮಾನನ್ನು ಹಿಡಿದ ದಿನ, ತಾರೀಕು ಮತ್ತು ವಿಧಾನವನ್ನೂ ತಿಳಿಸಿರಿ."

ಮರ್ಯಾದಸ್ಥರೇ ದೂರವಿರಿ

ಜಗೋಸ್ಲಾವಿಯಾದಲ್ಲಿ ಸಮಾಜದಿಂದ ಬಹಿಷ್ಕೃತರಾದವರಿಗಾಗಿಯೇ ಒಂದು ಕ್ಲಬ್ಬು ಸ್ಥಾಪಿಸಲ್ಪಟ್ಟಿರುವುದು. ಅದರ ತಿಂಗಳೊಂದರ ವರ್ಗಣಿ ಬರೇ 1 ಫ್ರಾಂಕ್ ಮಾತ್ರ.

ಕುಂಭಕರ್ಣನ ನಿದ್ದೆ

ಇಂಗ್ಲೆಂಡಿನಲ್ಲೊಬ್ಬ ಮುದುಕ ಪ್ರಾಯ 90 ವರ್ಷ. ಇಂದಿಗೆ 15 ವರ್ಷಗಳಿಂದ ಆತನು ದಿನಕ್ಕೆ 22 ತಾಸುಗಳ ಪ್ರಕಾರ ನಿದ್ದೆ ತೆಗೆಯುತ್ತಿರುವನು. ಊಟ ಆಹಾರಗಳನ್ನು ತೆಗೆದುಕೊಳ್ಳುವುದಕ್ಕೆ ಮಾತ್ರ ಎದ್ದು ಅವು ಮುಗಿದೊಡನೆ ಯಾರೊಡನೆಯೂ ಮಾತನಾಡದೆ ಪುನಃ ನಿದ್ರೆಹೋಗುವನು.

ತೆರಿಗೆ ಕೊಡುವೆವೆಂದು ಮುಷ್ಕರ.

ನ್ಯೂಗಿನಿಯ ಒಂದು ಗ್ರಾಮದ ಜನರು ತಾವು ತೆರಿಗೆ ಕೊಡುವೆವೆಂದು ಮುಷ್ಕರ ಹಿಡಿದಿರುವರು. ಅವರಿಗೆ ತೆರಿಗೆ ಮಾಫಿ ಮಾಡಲ್ಪಟ್ಟುದರಿಂದ, ತೆರಿಗೆ ವಸೂಲು ಮಾಡುವವನು ಅದನ್ನು ಅವರಿಂದ ತೆಗೆದುಕೊಳ್ಳಲು ಒಪ್ಪಲಿಲ್ಲ. ಒಡನೆ ಜನರು ಆತನನ್ನು ಲೇವಡಿ ಮಾಡಿ ಬೆನ್ನಟ್ಟಿ ಬಂದರು. "ಬೇರೆ ಗ್ರಾಮದವರು ತೆರಿಗೆಯನ್ನು ಕೊಡುತ್ತಿರುವರು. ನಾವೂ ಕೊಡುತ್ತೇವೆ"-ಎಂದೇ ಅವರ ಹಟ.

ಹಿಂದೂದೇಶದ ಗ್ರಾಮಗಳಿಗೆ ಇಂತಹ ಪರಿಸ್ಥಿತಿಯು ಬಂದೊದಗಿದರೆ?

ಇನ್ನು 100 ವರ್ಷಗಳಲ್ಲಿ ಪ್ರಪಂಚವೇ ಮರುಳಾಗುವುದು.

ಅಮೇರಿಕದಲ್ಲಿ ಒಂದೆಡೆ ಆರೋಗ್ಯ ಸಪ್ತಾಹವು ಆಚರಿಸಲ್ಪಟ್ಟಿತು. ಆಗ ಪ್ರವೀಣ ಡಾಕ್ಟರರೊಬ್ಬರು ಭಾಷಣ ಮಾಡುತ್ತ, "ಹುಚ್ಚರ ಸಂಖ್ಯೆಯು ಈಗಿನ ರೀತಿಯಲ್ಲಿಯೇ ಬೆಳೆಯುತ್ತ ಹೋದರೆ ಇನ್ನು ಒಂದು ಶತಮಾನದೊಳಗಾಗಿ — 2089ರಲ್ಲಿ – ಪ್ರಪಂಚದಲ್ಲಿದ್ದ ಜನರೆಲ್ಲರೂ ಹುಚ್ಚರಾಗುವರು" ಎಂದರು. ನಂತರ ಯಾರೂ ಒಬ್ಬನನ್ನು ಇನ್ನೊಬ್ಬನು ನಿಂದೆ ಮಾಡಲಿಕ್ಕಿಲ್ಲವೆನ್ನಿ.

ಉಪ್ಪಿನ ಮಾರ್ಗಗಳು

ಬಹಳ ಕಡಿಮೆ ಖರ್ಚಿನಲ್ಲಿ, ಬಹಳ ಬಾಳತಾರು ಬರುವ ಮಾರ್ಗಗಳನ್ನು ತಯಾರಿಸಲು ಸಾಧ್ಯವಿದೆಯೇ ಎಂದು ಮಾರ್ಗದ ಎಂಜಿನಿಯರುಗಳು ಶೋಧೆಯನ್ನು ನಡೆಸುತ್ತಿರುವರು. ನ್ಯೂಯೋರ್ಕಿನ ಕೆಲವು ಮಂದಿ ಎಂಜಿನಿಯರರು ಒಂದೇ ಮೈಲಿಗೆ 4,000 ಡಾಲ್ಲರು ಖರ್ಚಾಗುತ್ತಿತ್ತಾದರೆ ಕಲ್ಲುಪ್ಪನ್ನು ಉಪಯೋಗಿಸಿ ಬರೀ 450 ಡಾಲ್ಲರಿನಲ್ಲಿ ಮುಗಿಸಬಹುದೆಂದು ಗೊತ್ತುಹಚ್ಚಿರುವರು. ಈ ಕಲ್ಲುಪ್ಪನ್ನು ಮಣ್ಣಿನೊಡನೆ ಕಲಸಿ ಉಪಯೋಗಿಸಿದರೆ ಗುದ್ದಲಿಯಿಂದ ಒಡೆಯಲು ಸಾಧ್ಯವಾದಷ್ಟು ಗಟ್ಟಿಯಾಗುತ್ತದಂತೆ.

ಇಂತಹ ವಸ್ತುವನ್ನು ಉಪಯೋಗಿಸಿ ತಯಾರಿಸಿದ ಮಾರ್ಗಗಳು ಮಳೆಗೆ ಹಾಳಾಗುವ ಬದಲು, ಇನ್ನೂ ಒಳ್ಳೇದಾಗುತ್ತವೆ, ಕೊಂಕ್ರೀಟು ತಯಾರಿಸುವಂತೆ, ಕಲ್ಲುಪ್ಪಿನ ಮಿಶ್ರಣವನ್ನು ತಯಾರಿಸಿ, ಮಾರ್ಗಕ್ಕೆ ಹಾಕಿಬಿಡುವುದು. ಮಳೆ ಬಂದೊಡನೆ ಉಪ್ಪು ಕರಗಿ ಕೆಳಗಿಳಿಯುವುದು. ಸೂರ್ಯನ ರಶ್ಮಿಗಳು ತಾಗಿದೊಡನೆ ಪುನಃ ಒಣಗಿ ಕಲ್ಲಾಗುವುದು.

'ಸಮಾಜವಾದಕ್ಕಿಂತ ಸ್ವರಾಜ್ಯವೇ ಮೇಲು

ಶ್ರೀ ದಿನಕರ ಮೆಹತಾರವರ ಮದ್ರಾಸು ಭಾಷಣ

ಅಖಿಲಭಾರತದ ಕೊಂಗ್ರೆಸ್ ಸೋಶಲಿಸ್ಟ ಸಂಗಡದ ಕಾರ್ಯದರ್ಶಿಗಳಲ್ಲೊಬ್ಬರಾಗಿರುವ ಈ ಮಹನೀಯರು ಹೈಕೋರ್ಟಿನ ಬಳಿ ಮಾಡಿರುವ ಭಾಷಣದಲ್ಲಿ ಸ್ವಾತಂತ್ರ್ಯದ ಹೋರಾಟದಲ್ಲಿ ಸಮಾಜವಾದ ಎಂಬ ವಿಷಯವನ್ನೆತ್ತಿದರು.

'ಸ್ವರಾಜ್ಯವೇ ಬೇಕಾದುದು' ಎಂಬ ವಿಚಾರದಲ್ಲಿ ಎಲ್ಲ ಸಮಾಜವಾದಿಗಳ ಅಭಿಮತವೂ ಒಂದೇಯಾಗಿದೆ, ಕೊಂಗ್ರೆಸು ಹೇರುವುದೂ ಇದನ್ನೇ. ಸಮಾಜದಲ್ಲಿ ವರ್ಗೀಕರಣಗಳನ್ನು ಒದಲಾಯಿಸಿ ತರಬೇಕೆನ್ನುವ ಮೊದಲು ಸ್ವರಾಜ್ಯವನ್ನು ಸಾಧಿಸಿಕೊಳ್ಳುವುದು ಅಗತ್ಯ.

ಏಳು ಪ್ರಾಂತ್ಯಗಳಲ್ಲಿ ಕೊಂಗ್ರೆಸು ಮಂತ್ರಿಮಂಡಲಗಳು ಉಂಟಾದ ಕಾರಣ, ಸಾಮ್ರಾಜ್ಯಶಾಹಿಯನ್ನು ಎದುರಿಸಲು ಸುಲಭವಾಗಿದೆ.

ಮೈಸೂರು ರಾಜ್ಯದ ಮತ್ತು ಕೊಂಗ್ರೆಸಿನ ಧ್ವಜಗಳನ್ನು ಹಾರಾಡಿಸುವುದಲ್ಲಿ ಒಂದು ಪಂಚಾಯತಿ ನಡೆದೇ ಹೋದುದು ತಪ್ಪು. ಏಕೆಂದರೆ, ವಿರುದ್ಧಗಾಮಿಗಳ ಧ್ವಜಕ್ಕೂ ಸ್ವಾತಂತ್ರ್ಯಸೂಚಕ ಕೊಂಗ್ರೆಸ್ ಧ್ವಜಕ್ಕೂ ಸಮಾನತೆ ಎಲ್ಲಿದೆ.

ಬೋಸ್-ಜಿನ್ನಾರವರುಗಳ ಸಂಭಾಷಣೆಗಳನ್ನು ಕುರಿತು, — ಹಿಂದೂ ಮುಸ್ಲಿಮ ಸಮಸ್ಯೆ ಎಂಬುದು ಮುಖ್ಯವಾಗಿ ಸಾಂಪತ್ತಿಕ ಪ್ರಮೇಯವಾಗಿದೆ. ಹೆಚ್ಚು ಕಡಿಮೆ ಧನಿಗಳಿಗೂ ಒಕ್ಕಲುಗಳಿಗೂ ಇರುವ ಸಂಬಂಧದ ರಗಳೆಯಿಂದ ಉಂಟಾದ ವಿವಾದವನ್ನೆ ಎರಡು ಮಹಾ ಸಮಾಜಗಳೊಳಗಣ ವೈಮನಸ್ಸೆಂದು ಮಾಡಿ ತೋರಿಸಿರುವರು. ಮಾಪಿಳ್ಳರ ಬಡತನವನ್ನು, ಅವರು ಜಾತಿಗೆ ಮನಗೊಟ್ಟು ಇತರರ ಮೇಲೆ ರೇಗುವಂತೆ ಮಾಡುವ ಬದಲಾಗಿ, ಇತರ ಉಪಾರ್ಜನೆ ಮಾಡಬಹುದಾದ ಉಪಾಯಗಳ ಕಡೆಗೆ ತಿರುಗಿಸಿದರೆ, ಅವರೆಷ್ಟೋ ಉತ್ತಮವಾಗಿ ಸಂಪನ್ನರಾಗಿ ಬಾಳಬಲ್ಲರು. ಆದರೂ, ಸದ್ಯದ ಅಭಿಸಂಧಿಯಲ್ಲಿ ಸಮಾಜಸ್ವಾರ್ಥಿಗಳಿಗೆ ಅಲ್ಪ ಸ್ವಲ್ಪ ರಿಯಾಯತಿಗಳನ್ನು ಕೊಡಬಹುದು. ಹಾಗೆ ಮಾಡಿ, ಫೇಡರೇಶನನ್ನೂ ಯುದ್ಧದಲ್ಲಿ ಇಂಡಿಯವ್ವೂ ಸೇರುವಂತೆ ಮಾಡುವ ಉಪಾಯವನ್ನೂ ಎದುರಿಸಬೇಕು."

— ಮಲಬಾರು ಜಿಲ್ಲಾ ಬೋರ್ಡಿನ ಒಬ್ಬ ಗುಮಾಸ್ತರು ಶಾಲೆಗಳಿಗೆ ಎರಡೆರಡು ಸಲ ಸಂಬಳವನ್ನು ಕಳೆದ ಎಪ್ರಿಲ್ ಸಿದ ಪಾಸು ಮಾಡಿಸಿ ಒಂದೊಂದು ಸರ್ತಿಯ ಸಂಬಳವನ್ನು ತನ್ನ ಹೆಸರಿಗೇ ಮನಿಯಾರ್ಡರು ಮಾಡಿ 4 5000 ರೂಪಾಯಿಗಳನ್ನು ಹೊಡೆದು ಈಗ ಕಾಣೆಯಾಗಿದ್ದಾರೆ. 85 ಉಪಾಧ್ಯಾಯರನ್ನೂ ಒಂದು ಹೈಸ್ಕೂಲು ಮತ್ತು ಎರಡು ಮಿಡ್ಲ ಸ್ಕೂಲುಗಳನ್ನು ಮುಚ್ಚುವ ಕಾರಣ ಮನೆಗೆ ಕಳಿಸಬೇಕಾಗಿದೆ.

ಓವಲ್ ಟಿನ್
ಶಕ್ತಿ, ಚೈತನ್ಯಗಳನ್ನು
ಕೊಡುವುದು

ನಿಮ್ಮ ಶಕ್ತಿ, ಚೈತನ್ಯಗಳನ್ನು ಹುರುಪುಗೊಳಿಸಿರಿ. ದೇಹ ದುರ್ಬಲತೆಯಿಂದ, ನರಗಳ ಅಶಕ್ತಿಯಿಂದ ಮತ್ತು ರೋಗರುಜೆಗಳಿಂದಲೂ ನಿಮ್ಮನ್ನು ಕಾದುಕೊಳ್ಳಿರಿ.

ಸರಿಯಾಗಿಯೂ ಸುಖಕರವಾಗಿಯೂ ಇರಬೇಕಾದರೆ ಅದಕ್ಕೆ ಸರಿಯಾದ ತಕ್ಕ ಪುಷ್ಟಿಕರ ಆಹಾರವು ಬೇಕು. ಅಂತಹ ಪುಷ್ಟಿಕರ ಆಹಾರವು ಸಾಧಾರಣ ದಿನನಿತ್ಯದ ಆಹಾರದಲ್ಲಿ ಸಿಗಲಾರದು. ಆದರೆ, ಶ್ರೇಷ್ಠ ಆಹಾರ [illegible] ಓವಲ್ಟಿನ್‌ನಲ್ಲಿ ಅಂಥ ಶ್ರೇಷ್ಠ ಆಹಾರ ಪದಾರ್ಥಗಳು [illegible]

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಆಹಾರ ಪದಾರ್ಥಗಳಾದ [illegible] ದನದ ಹಾಲಿನಿಂದಲೂ, [illegible] ಓವಲ್ಟಿನ್‌ನಲ್ಲಿ ಪರಿಪೂರ್ಣ ಪುಷ್ಟಿ ಆಹಾರಗಳನ್ನು ದೇಹಕ್ಕೆ [illegible] ಪೂರೈಸಿಕೊಡುತ್ತದೆ. ಇದು ನಿಮ್ಮ ದೇಹದ ಆರೋಗ್ಯ, ಶಕ್ತಿ, ಚೈತನ್ಯಗಳನ್ನು ಹೆಚ್ಚಿಸುತ್ತದೆ. ಅಮೂಲ್ಯ ಪ್ರಕೃತಿಯ ವಿಟಮಿನ್‌ಗಳೂ ಓವಲ್ಟಿನ್‌ನಲ್ಲಿವೆ. ದೇಹದ ಸೌಖ್ಯಕ್ಕಾಗಿ ಓವಲ್ಟಿನ್ನನ್ನು ಸದಾ [illegible] ಬದಲೀಯುಗಳನ್ನು ತ್ಯಜಿಸಿರಿ.

'ಓವಲ್‌ಟಿನ್' ಪುಷ್ಟಿಕರ ಆಹಾರ ಪಾನೀಯ

OVALTINE

ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತವೆ

ಏಜಂಟರು — ಜೇಮ್ಸ್ ರೈಟ್ ಲಿಮಿಟೆಡ್ ಕಲ್ಕತ್ತಾ ಕರಾಚಿ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/485

ರಕ್ಷೈರ್ಮಹಾರ್ಹೈಸ್ತುತುರ್ಮನ ದೇವಾ । ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ

SWADESHABHIMANI

ದೊರೆಯಲಸುವವರು ರತ್ನಗಳು ಸಾ । ಗರವ ಮಥಿಸಲು ಸುರರಿಂ ಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ ಸುಧೆಯನು । ಮರೆತು ಕಸ್ಟದ್ದುರ ತೆರದಿ ಕುಳಿತರೆ । ತೆರಳ ಬಲ್ಲಿರೆ ತೊರೆದು ಧೀರರು ನಿಶ್ಚಿತಾರ್ಥವನು ॥

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ತಾರೀಕು ೨೭–೫–೧೯೩೮ ತಾರೀಕು 27 – 5 – 1938

ವಾರ್ಧಾ ಶಿಕ್ಷಣ ಯೋಜನೆ.

(ಮೂಲ ತತ್ವಗಳು ಯಾವುವು?)

ಶ್ರೀ। ಜೆ. ಸಿ ಕುಮಾರಪ್ಪ – ಇವರ ಭಾಷಣದಿಂದ

ವಾರ್ಧಾ ಶಿಕ್ಷಣ ಯೋಜನೆಯನ್ನು ಸರಿಯಾಗಿ ತಿಳಿದುಕೊಳ್ಳಲು ಅದರ ಮೂಲವೆಲ್ಲಿ ಎಂದು ತಿಳಿದುಕೊಳ್ಳಬೇಕು. ಮಹಾತ್ಮಾಜಿಯವರೇ ಈ ಯೋಜನೆ ಮಾಡಿಕೊಟ್ಟವರು. ಅವರು ಅಹಿಂಸೆ ಮತ್ತು ಸತ್ಯ ಎಂಬೆರಡು ತತ್ವಗಳನ್ನು ಅನುಷ್ಠಾನಮಾಡುವವರು. ಇವೆರಡು ... ಈ ಯೋಜನೆಯ ಬೇರುಗಳು.

ಈಗಣ ಶಿಕ್ಷಣ ಕ್ರಮವು ಹಿಂಸಾಧಾರವಾಗಿದೆ. ಸಾಮ್ರಾಜ್ಯ ಸ್ಥಾಪನೆ ಎಂಬುದೇ ಹಿಂಸೆಯಿಂದಲ್ಲದೆ ಸಾಧ್ಯವಲ್ಲ. ಸಾಮ್ರಾಜ್ಯವನ್ನು ಊರ್ಜಿತವಿರಿಸಲು ನಡೆವ ಪ್ರಯತ್ನಗಳು ಹಿಂಸಾತ್ಮಕವೇ ಆಗಿವೆ. ನಮ್ಮ ಕಾಲೇಜುಗಳೂ ಯುನಿವರ್ಸಿಟಿಗಳೂ ಹಿಂಸಾತತ್ವವನ್ನೆ ಪ್ರಚಾರಪಡಿಸುತ್ತವೆ. ಸಾಮ್ರಾಜ್ಯವಾದದ ಮೊದಲನೆಯ ಕರ್ತವ್ಯವೆಂದರೆ, ಪ್ರತಿಯೊಬ್ಬನ ವ್ಯಕ್ತಿತ್ವವನ್ನು ಸಮೂಲ ನಾಶಪಡಿಸುವುದು.

ಅಸತ್ಯದ ಮೇಲೂ ಈಗಣ ಶಿಕ್ಷಣಕ್ರಮವು ಆಧಾರ ಹೊಂದಿದ. ಸ್ವಲ್ಪ ಲಕ್ಷ್ಯದಿಂದ ನೋಡಿದರೆ ಅದು ಸ್ಪಷ್ಟವಾದೀತು. ಗಾಡಿಗಳಿಗೆ ರಬ್ಬರು ಟಾಯರುಗಳನ್ನು ಉಪಯೋಗಿಸಿ ಪಾಲಿಟೆಗಳಲ್ಲಿ ಈಗ ಉಪಯೋಗಿಸುವಂತೆ ಆಗಿದೆ. ಏಕೆಂದು ಕೇಳಿದರೆ, ಅದು ಉತ್ತಮವೆನ್ನುತ್ತಾರೆ. ನಾಗರಿಕತೆಯ ಗುರುತು ನಿಜ. ಕಾರಣವೆಂದರೆ, ಸುಳ್ಳಿನ ಜಾಹೀರಾತುಗಳನ್ನು ಓದಿ ಅಂಗೀಕರಿಸಿರುವುದರ ಫಲ. ಸರಕಾರದ ಕೃಷಿ ಇಲಾಖೆಯು ರಿಪೋರ್ಟಿನಂತೆ,—ಎತ್ತಿನ ಗಾಡಿಗೆ ಈ ಟಾಯರು ಹಾಕಿದ ಗಾಡಿಗಳು ಸರಿಹೋಗುವುದಿಲ್ಲೆಂದು ತೋರಿಸಿಕೊಡಬಹುದು. ಈ ಗಾಡಿಗಳು ಬೇಡ, ಅಗತ್ಯವಲ್ಲ, ಸುಲಭದಲ್ಲಾಗುವುವೂ ಅಲ್ಲ. ರಬ್ಬರನ್ನು ಉಪಯೋಗಿಸುವುದು ವೇಗವಾಗಿ ಹೋಗುವ ಗಾಡಿಗಳಿಗ. ಈ ಎತ್ತು ಗಾಡಿಗಳು ವೇಗವಾಗಿ ಚಲಿಸಲೇ ಬೇಕೆಂದಿದೆಯೆ? ಗಾಳಿ ತುಂಬಿದ ಟಾಯರುಗಳು ನಿಧಾನವಾಗಿ ಚಲಿಸುವ ಎತ್ತುಗಾಡಿಗಳಿಗೇಕೆ? ಚಲಿಸುವ ವಿಧಾನದಲ್ಲಿ, ಮೆತ್ತಗಾದುದು ಮೊದಲೇ ಜೀರ್ಣವಾಗುವುದು. ಹಿಂದೆ ಕಬ್ಬಿಣದ ಪಟ್ಟಿಗಳಿದ್ದವು, ಇವು ಸವೆಯುವುದು ನಿಧಾನ. ರಬ್ಬರು ಬಲು ಬೇಗನೆ ಸವೆದು ಹೋಗುವುದು. ಹೀಗಾಗಿ ಬಡವರು ಶ್ರೀಮಂತನಿಗೆ ಹಣ ತೆರುವಂತೆ ಆಯಿತು. ಪ್ರತಿಯೊಂದು ಎತ್ತು ಗಾಡಿಯು ಟಾಯರು ಹೊಂದಿ ಮೆರೆಯುವಾಗ, ಒಂದೊಂದೇ ಅಂಶದಲ್ಲಿ ನಮ್ಮ ಜನಾಂಗವು ವ್ಯಕ್ತಿಕತೆಯನ್ನು ಕಳೆದುಕೊಂಡು, ಸುಳ್ಳು ಜಾಹೀರಾತುಗಳಿಗೆ ತಲೆಯನ್ನು ವಿಧೇಯತೆಯಿಂದ ಬಾಗಿ, ನಮ್ಮನ್ನು ಗುಲಾಮಗಿರಿಗೆ ಮಾಡಬೇಕೆನ್ನುವವರ ಹಿತಕ್ಕೆ ನಾವು ಸಮಸ್ತವನ್ನೂ ತ್ಯಜಿಸಿ ಬಾಳುವುದರ ನೆನಪನ್ನು ಹುಟ್ಟಿಸುತ್ತದೆ. ಇದೆಷ್ಟು ಶೋಚನೀಯ.

ಇತ್ತೀಚೆಗೆ ಸಾಂಪತ್ತಿಕ ಪರಿಷತ್ತು ನಡೆದಾಗ ನವ ಶಿಕ್ಷಣವೆಂಬುದರಲ್ಲಿ ಕೇವಲವಾಗಿ ಪುಸ್ತಕ ವಿದ್ಯೆಯೆಂದೂ, ಅದರ ಫಲವಾಗಿ ನಾವು ವ್ಯಕ್ತಿಕತೆ ಕಳೆದುಕೊಂಡಿರುವೆವೆಂದೂ, ಮಾನವ ತತ್ವವೆಂಬುದೇ ನಮ್ಮ ಗೋಚರಕ್ಕೆ ಬರುತ್ತಿಲ್ಲವೆಂದೂ ತುಂಬ ವಿಶದವಾಗಿದೆ. ಇತರರು ಒತ್ತಾಯಪಡಿಸಿದ ದನ್ನು ಕಲಿತುಕೊಳ್ಳುವುದ ... ಸಂಭವವಾಗಿ ಹೋಗಿದೆ. ಉದಾಹರಣೆಗಾಗಿ, ನಮ್ಮ ಜನರ ಜೀವನ ಕ್ರಮವು ... ಅಲ್ಲಿ ... ಅದು ಹೇಗೆ ಸಾಧ್ಯವೆಂಬುದು ... ಹೇಳಲಾಗುತ್ತಿಲ್ಲ. ಅದರಿಂದ ನಮ್ಮಲ್ಲಿನ ಅತ್ಯಂತ ಕ್ಲೇಶಾದಿಗಳು ಹೆಚ್ಚುವುವು ... ಜೀವನದ ತೆರಿಗೆಗಳನ್ನು ... ಅಗತ್ಯಗಳಲ್ಲಿ ... ಇದೇ ದೇಶದಲ್ಲಿ ... ಉತ್ಪನ್ನಗಳ ಮಾತ್ರ ನಾವೆಲ್ಲ ... ಕೊಳ್ಳುವಂತೆ ಮಾಡಿದರೆ ಅಷ್ಟು ಅಗತ್ಯವಿರದು ... ನಮಗೆ ಈಗ ಬೇಕಾಗುವ ಅನ್ನ ವಸ್ತ್ರಗಳು ... ಪರದೇಶಗಳಿಂದ ಬರುತ್ತಿವೆ. ಇನ್ನು ಹೆಚ್ಚಿನ ವಸ್ತುಗಳ ನಮಗೆ ಅಗತ್ಯವೆನಿಸುತ್ತವೆ ... ಪ್ರಯತ್ನಿಸಿದರೆ, ದೇಶವು ಇನ್ನೂ ಬಡವಾಗುವುದಿಲ್ಲವೆ?

ವಾರ್ಧಾ ಯೋಜನೆಯ ಮುಖ್ಯ ಪ್ರಯತ್ನವೆಂದರೆ ವ್ಯಕ್ತಿಕತೆಯನ್ನು ಹೆಚ್ಚಿಸುವುದು. ಪ್ರತಿ ಮಗುವೂ ಮನಸ್ಯನಾಗಿ ಆತ್ಮನಿರ್ಧಾರನಾಗುವಂತೆ ಮಾಡುವುದು. ಮಗುವಿನ ಮಾನಸಿಕ ಶಕ್ತಿಗಳ ಬೆಳವಣಿಗೆಯು ಕ್ರಮ ನೋಡಿದರೆ ಸುತ್ತಲಿನ ಜಗತ್ತಿನೊಡನೆ ಅದರ ಸಂಬಂಧವು ಸರಿಯಾಗಿ ಬೆಳೆವಂತಾಗಬೇಕು. ಆದರೆ, ಬಹಳವಾಗಿ ಕೈಕೆಲಸವನ್ನು ಆಧರಿಸಿಯೇ ಈ ಯೋಜನೆ ಮುಂದರಿದಿದೆ ಎನ್ನುವವರಿದ್ದಾರೆ. ಇದೊಂದ ಟೀಕೆ. ಆ ಕೈಗೆಲಸವೇ ಶಿಕ್ಷಣದ ಸಂಪೂರ್ಣ ಹಸ್ತಕವಾಗಿದ್ದು, ಶಿಕ್ಷಣ ವಿಷಯಗಳೆಲ್ಲವಕ್ಕೆ ಕೇಂದವಾಗಿದ್ದು, ಶಿಕ್ಷಣವೆಲ್ಲ ಮಾತೃಭಾಷೆಯಲ್ಲಿ ಸಾಗುವುದೆಂಬುದನ್ನು ತಿಳಿಯದವರು ಹೀಗೆ ಟೀಕಿಸುವರು. ಅಷ್ಟೆ. ಶಾಲೆಗಳಲ್ಲಿ ಕಲಿಸಲಾಗುವ ವಿಷಯಗಳನ್ನೆಲ್ಲ ಸುಲಭವಾಗಿ ಯಾವುದಾದರೂ ಕೈಗಾರಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಇನ್ನಷ್ಟು ಸಮರ್ಪಕವಾಗಿ ಕಲಿಸಬರುತ್ತದೆ. ಇಷ್ಟಲ್ಲದೆ, ಹೀಗೆ ಕಲಿಯುವಾಗ ವಿದ್ಯಾರ್ಥಿಗೆ ಬೇಸರವಾಗದು, ಅವನು ಕಲಿಯುವುದೇನು ಏಕೆ ಎಂಬುದನ್ನು ಪ್ರತ್ಯಕ್ಷ ತಿಳಿದುಕೊಳ್ಳುವರು.

ಇದೂ ಅಲ್ಲದೆ, ವಾರ್ಧಾ ಶಿಕ್ಷಣ ಕ್ರಮವು ಗ್ರಾಮಗಳಲ್ಲಿನ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲಿಚ್ಛಿಸುವುದಾಗಿದೆ. ಗ್ರಾಮ ಕೈಗಾರಿಕೆಗಳು ವೈಯುಕ್ತಿಕ ಉದ್ಯಮಗಳಾಗಿವೆ. ಶಾಲೆಯೆಂಬುದು, ಒಂದು ಧರ್ಮ ಸಂಸ್ಥೆಯಷ್ಟೆ ...

ಲೋರ್ಡ್ ಹೆಲಿಫಾಕ್ಸ್.

ಬ್ರಿಟಿಷರ ಪರರಾಷ್ಟ್ರ ಸಂಬಂಧವನ್ನು ಬೆಳಸುವ ಮಂತ್ರಿಗಳು ನಮ್ಮ ಹಳೆಯ ಇರ್ವಿನರು, ಈಗಣ ಹೊಸ ಯುದ್ಧಮಂತ್ರಿ.

1914ರಲ್ಲಿ ಮಹಾಯುದ್ಧ ಕಾಲದಲ್ಲಿ ಯುದ್ಧ ಮಂತ್ರಿಗಳಾಗಿದ್ದವರು ಉತ್ತಮ ಗೃಹಸ್ಥರೇ. ಸರ್ ಎಡ್ವರ್ಡ್ ಗ್ರೇ. ಪಕ್ಷಿಗಳು, ಜೇನು ನೊಣ, ಮೀನುಗಳು ಇವನ್ನು ... ಉಜ್ವಲ ಪ್ರೇಮವಿದ್ದವರು. ಆದರೆ ರಾಜಕೀಯ ವ್ಯವಹಾರ ಜ್ಞಾನವು ಕಡಮೆಯಾಗಿ ಇವರು ಫ್ರಾಂಕೋ—ರಷ್ಯನ್ ಕರಾರುಗಳೊಳಗೆ ಇವರೂ ಸಿಕ್ಕಿ, ಯುದ್ಧದಲ್ಲಿ ಸೇರುವಂತೆ ಮಾಡಿದರು.

ಈಗಿನ ಲೋರ್ಡ್ ಹೆಲಿಫೆಕ್ಸ್‌ರು ತಮ್ಮ ಸದ್ಗುಣಗಳಿಂದ ಮಿತ್ರರನ್ನು ಮೆಚ್ಚಿಸಿ ಕೊಂಡಿರುವರು. ಅತಿ ಧರ್ಮ ಬುದ್ಧಿಯುಳ್ಳವರು ... ಕಾಲಾಂತರಗಳಿಂದಲೂ ದೇಶ ಸೇವಾನಿರತರಾದ ... ಸೇರಿದವರ.

... ಯಾವು ... ಸಭಾ ... ಹೇಳಿದು ... ಇವರನ್ನು ... ಇವರು ... ರಾಜಕೀಯ ವಿಚಾರ ... ಅಲ್ಲೆಂದು ತೋರದು.

ಇವರ ಗೆಳೆಯರು ಇವರ ಮಂತ್ರಿಕೂಟದಲ್ಲಿ ಅಗತ್ಯವೆಂದೇ ನಂಬಿರುವರು ... ಪ್ರಜಾಸತ್ತೆ ಆಧರಿಸಿರುವ ... ರಾಜ್ಯಗಳಿಗ ಇವರ ನೀತಿ ಹೋಗ್ಗೆ ... ಶಾಂತಿಯೊಂದು ... ಜೀವನ ಸೇವೆಗಾಗಿ ಸರ್ವರೂ ಶ್ರದ್ಧೆಯಿಂದ ಅತಿ ಬರುವ ಸಂಸ್ಥೆಯಾಗಬೇಕು. ಶಾಲೆಯಲ್ಲಿ ಕರ್ಮ ಜೀವನಕ್ಕೆ ಉತ್ಕೃಷ್ಟ ಉಪಾಯವಿರಬೇಕು. ಶಾಲೆಯಿಂದ ಹೊರಟ ವಿದ್ಯಾರ್ಥಿಯು ಜ್ಞಾನಾರ್ಜನೆಯಿಂದ ಶ್ರೀಮಂತನಾಗಿ ಗ್ರಾಮಸ್ಥರ ಸೇವೆಗೆ ಸಿದ್ಧನಾಗಬೇಕು. ಆಗ ತಾನೆ ರಾಷ್ಟ್ರೀಯ ಸಂಸ್ಕೃತಿಗೆ ಶಾಲೆಯು ಸಹಾಯಕವಾಗುವುದು. ಕೇಂದ್ರನಾದ ಕೈಗೆಲಸವನ್ನಷ್ಟೆ ಅಲ್ಲದೆ, ಅದಕ್ಕೆ ಮೂಲತತ್ವವಾಗಿರುವ ಕರ್ಮಮಾರ್ಗದ ತತ್ವವನ್ನೂ ವಿದ್ಯಾರ್ಥಿಗಳು ತಿಳಿಯುವಂತಾಗಬೇಕು.

ಉದ್ಯಮವು ಜೀವನ ನಡೆಸಲು ಅಗತ್ಯವಾದ ಸಾಧನವೆಂದೆಣಿಸುವೆವಾದರೆ, ಜ್ಞಾನಕ್ಕೆ ಹಣದ ಬೆಲೆ ದೊರೆವಂತಾದರೆ, ಅದು ಬೇಸರ ಹುಟ್ಟಿಸುವ ಜ್ಞಾನಾರ್ಜನೆಯಾಗುವುದು. ಉದ್ಯಮವು ಜೀವನದ ಕರ್ತವ್ಯವೆಂದೇ ನಾವೆಣಿಸಿದರೆ ಅದ ಕರ್ಮಯೋಗರೂಪದಿಂದ ಪರಿವರ್ತನಹೊಂದಿ ಆತ್ಮವನ್ನು ಅರಳಿಸುವುದು. ಆಗ ಮಾತ್ರ ಅದು ಪವಿತ್ರವಾಗಿ ಮನಸ್ಸಿಗೆ ಸಂತೃಪ್ತಿಯನ್ನು ಕೊಡುವುದು. ದೇವಾಲಯಗಳಲ್ಲಿ ಮಾತ್ರ ಧರ್ಮಾಚರಣೆ ಇರುವುದಲ್ಲ, ಅವೆಲ್ಲವೂ ಧರ್ಮವನ್ನು ಆಚರಣೆಗೆ ತರುವ ಸಂಸ್ಥೆಗಳಲ್ಲಿ ಒಂದಾಗಿವೆ. ದೈನಿಕ ಜೀವನದಲ್ಲಿ ಮನುಷ್ಯನು ವರ್ತಿಸುವುದೇ ಅವನ ...

ಸ್ಪೈಯಿನ್ ಝೆಕೋಸ್ಲೊವಾಕಿಯ ಇತ್ಯಾದಿ ರಾಜ್ಯಗಳು ಬಲಿ ಬೀಳಲಿ ಆದರೆ ಶಾಂತಿ ಭಂಗವಾಗದಿರಲಿ. ಯುದ್ಧದಲ್ಲಿ ಜಯವಾಗುವುದಾದರೂ, ಯುದ್ಧ ಬೇಡ.

ಹಿಟ್ಲರ್ ಮುಸ್ಸೊಲಿನಿಯವರು ಜಗತ್ತನ್ನು ಹರಿವೆನೊಪ್ಪಿನ ದಂಟೆಂದು ಭಾವಿಸಿ, ಅದರ ರಸ ಹೀರುವರು. ಎಂತಹ ಕರಾರುಗಳ ಇವರಿಗೆ ಎಡೆಕೊಡೆ ಬಾಹವು. ಗ್ರೇಟ್ ಬ್ರಿಟನ್ನು ತಮಗೆ ವಿರೋಧಿಯೆಂದು ಅವರು ತಿಳಿದಿರುವರು. ಇಡೀ ಯುರೋಪನ್ನು ಫೆಸಿಸ್ಟ್ ನೀತಿಗೆ ಒಳಪಡಿಸಿದ ಬಳಿಕ, ಇವರು ಇಂಗ್ಲೆಂಡನ್ನು ಬಿಡುವವರಲ್ಲ. ಹೆಲಿಫೆಕ್ಸರನ್ನು ಉಪಯೋಗಿಸಿ, ಫೆಸಿಸ್ಟ್ ತತ್ವ ಪ್ರಚಾರಗೊಳಿಸಿ, ನಂತರ ಇಂಗ್ಲೆಂಡನ್ನು ನುಂಗುವುದಕ್ಕೆ ಅವರ ಹಂಚಿಕೆಯಿದೆ.

ಹೀಗಾಗಿ, ಯುರೋಪಿನ ಶಾಂತಿಗೆ ಹೆಲಿಫಕ್ಸರೇ ಮಾರಕರಾಗಿದ್ದಾರೆ. ಶಾಂತಿಗೂ ಪ್ರಜಾಸತ್ತೆಗೂ ಸಮೀಪದ ಸಂಬಂಧವಿದೆ, ಇದನ್ನು ಅವರು ತಿಳಿದಿಲ್ಲ. ಇವರ ಮಾತು ಅಭಿನಯವೂ ಶಾಂತಿಗಾಗಿಯೇ ಇವೆ. ಆದರೆ ಇದರಿಂದ ಅವರು ಶರಣೆನ್ನುವುದಕ್ಕೂ ಹಿಂತೆಗೆಯರು. ಈ ವಿಶ್ವಾಸದಿಂದ ಅವರು ಇಂಗ್ಲೆಂಡನ್ನು ಫೆಸಿಸ್ಟ್ ಜಗತ್ತಿನೊಳಗೆ ನುಗ್ಗಿಸಿ, ತಾತ್ಕಾಲಿಕ ಶಾಂತಿ ಸಾಧಿಸುವೆವೆಂದೇ ನಂಬಿರುವರು.

Harold Laski

ಪವಿತ್ರವಾದುದೆಂದು ತಿಳಿದೇ, ವಾರ್ಧಾ ಯೋಜನೆಯಲ್ಲಿ ಉದ್ಯೋಗವನ್ನು ಕೇಂದ್ರದಲ್ಲಿಡಲಾಗಿದೆ. ಒಳಗೆ ಜ್ಞಾನ ತುಂಬಿಸಿದರೆ ವ್ಯಕ್ತಿಯು ಬೆಳೆವುದಿಲ್ಲ. ಕೆಲಸದಿಂದ ಮಾತ್ರ ಮನುಷ್ಯನ ಅಂತರಂಗವು ವಿಕಾಸವಾಗುವುದು. ಕರ್ತವ್ಯ ಕರ್ಮವೆಲ್ಲ ಮುಖ್ಯವಾದ ಧರ್ಮಾಚರಣೆಯಷ್ಟೇ.

ಉಪಾಧ್ಯಾಯರ ಗೌರವವೂ ಈ ಕ್ರಮದ ಪ್ರಕಾರ ಕುಂದಲಾರದು. ಸಂಬಳದ ಮೇಲೆ ಗೌರವವಿಲ್ಲ, ಯೋಗ್ಯತೆ ಮತ್ತು ದೇಶಸೇವೆಗಳನ್ನೆ ಎಣಿಸಿ ಗೌರವ ನಿರ್ಧಾರವಾಗುವುದು ಪ್ರತಿಯೊಂದು ದೇಶದಲ್ಲಿ. ಗೌರವವನ್ನು ಒಂದೊಂದು ಬಗೆ ನಿರ್ಧರಿಸುವರು. ಸೇವೆ ತ್ಯಾಗ ಗುಣಗಳೇ ನಮ್ಮ ದೇಶದಲ್ಲಿ ಗೌರವಕೊಡುವವು. ಕರ್ತವ್ಯನಿಷ್ಠನಾದ ಉಪಾಧ್ಯಾಯನು ಎಲ್ಲಿಯೂ ಗೌರವ ಹೊಂದುವರನು.

ವಿದ್ಯಾರ್ಥಿಗಳು ಮಾಡಿಕೊಡುವ ವಸ್ತುಗಳ ಬೆಲೆಯಿಂದ ಉಪಾಧ್ಯಾಯನ ವೇತನವು ಸಿಗುವಂತಿಲ್ಲ. ಉಪಾಧ್ಯಾಯರಿಗೆ ರೂ ೨೫ ರಿಂದ ೪೦ರ ತನಕ ಸಂಬಳವಿದೆ. ಇದು ಈಗ ಸಿಗುವುದಕ್ಕಿಂತ ಹೆಚ್ಚಾಗಿದೆ, ಮಾತ್ರವಲ್ಲ ಕ್ರಮವಾಗಿ ತಪ್ಪದೆ ತೆರಲಾಗುವುದು. ಶಾಲಾ ಬಾಲಕರು ತಯಾರಿಸುವ ವಸ್ತುಗಳನ್ನು ಸರಕಾರವೇ ...

ಸ್ವದೇಶಾಭಿಮಾನಿ

ನೋಟಗಳು.—Notes

ಯುದ್ಧರಂಗಃ ಸನ್ನಾಹ

ಒಸ್ಟ್ರಿಯವನ್ನು ನುಂಗಿದ ಬಳಿಕ, ಜರ್ಮನಿಗೆ ಕಾಲುನೀಡಿ, ನುಂಗಿದುದನ್ನು ಜೀರ್ಣಿಸಿಕೊಳ್ಳಬೇಕಾಗಿರುವುದು ಸ್ವಾಭಾವಿಕವಾಗಿ ತೋರುತ್ತಿದೆ. ಅಲ್ಲಿ ಅಂತೂ ಮೂರುವರೆ ಮಿಲ್ಲಿಯ ಜರ್ಮನರು ಮಾತೃಭೂಮಿಗೆ ಪುನಃ ಸೇರುವರೆ ಸಿದ್ಧರಾಗಿದ್ದಾರೆ. ಈಗ ಮ್ಯುನಿಸಿಪಲ್ ಚುನಾವಣೆಗಳ ಕಾಲ ಈಗ್ಗಲೆ ಹೆಚ್ಚಿನ ಜರ್ಮನರು ಚುನಾವಣೆ ಹೊಂದುವಂತಹವರೆ, ಮುಂದಿನ ದಾರಿ ಸುಲಭವೆಂಬ ಭಾವನೆಯಿದೆ. ಅದಕ್ಕಾಗಿ, ಝೆಕ್ಕರ ಬೆಣ್ಣೆಯಲ್ಲಿ ಕೂದಲರಾಶಿಯನ್ನು ಜರ್ಮನಿಯು ಕಾಣತೊಡಗಿದೆ.

ಮಹಾಯುದ್ಧದ ಮೊದಲು, ಮೂರು ಶತಮಾನಗಳ ಕಸಳ ಮಧ್ಯ ಯುರೋಪಿನಲ್ಲಿ ಮಹಾ ಪ್ರಾಬಲ್ಯವು ಜರ್ಮನಿಗಿತ್ತು ಅಲ್ಲಿಲ್ಲ ಮಹಾಧಿಕಾರಿಗಳು ಇವರೇ ಆಗಿದ್ದರು ಆ ಪ್ರಾಂತ್ಯವೂ ಕೈಗಾರಿಕೆಗಳಿಗೆ ಕೇರಿದ್ದ. ಯುದ್ಧದ ನಂತರ ಮಾತ್ರ, ಹೊಸ ರಾಜ್ಯಗಳು ಸ್ವತಂತ್ರವಾಗಿರುವಂತೆ ನೂತನನಿರ್ಮಾಣವಾಯಿತು ಇಲ್ಲಿನ ಗಡಿನಾಡಿನ ಎಂಟು ಜಿಲ್ಲೆಗಳಲ್ಲಿ ಜರ್ಮನರಿರುವರು ಉಳಿದವರ ಕೂಡೆ 'ಇವರು ಬಾಳಬೇಕಾದ ಕಾರಣ ಇವರು ಸ್ಥಿತಿ ಕೀಳಾಯಿತು ಇವರೂ ಇತರರೊಡನೆ ಸಮಾನತೆಗೆ ಚಳವಳಿಸುತ್ತ ಕಳೆದ ಫೆಬ್ರುವರಿಯಲ್ಲಿ ಸರಕಾರದಿಂದ ಬಹಳ ಉದಾರವಾದ ಸೌಕರ್ಯ ಹೊಂದಿದರು. ದೊರೆತ ಸೌಕರ್ಯಗಳಲ್ಲಿ ತೃಪ್ತಿ ಕಡಮೆ, ಇನ್ನೂ ಚಳವಳಿಸಿ ಹೆಚ್ಚಿನ ಸೌಕರ್ಯ ಸಿಗುವುದಗತ್ಯವೆಂದರು ಅವರಿಗೆ ಅವೆಂಟು ಜಿಲ್ಲೆಗಳಲ್ಲಿ ಖಂಡಿತ ಸ್ವಾತಂತ್ರ್ಯ ಸಿಗಬೇಕೆಂದೂ ಒತ್ತಾಯಪಡಿಸಲಾಯಿತು ಈ ಒತ್ತಾಯದ ಭಾಷಣ ನಡೆದುದು ಎಪ್ರಿಲ್ ತಾ ೨೫ರಲ್ಲಿ, ಸ್ವಾತಂತ್ರ್ಯ ಮಾತ್ರವೇ ಅಲ್ಲದೆ ಜರ್ಮನ ಜನಾಂಗದೊಡನೆ ಸೇರಿ ನಡೆಯುವ ಸ್ವಾತಂತ್ರ್ಯವೂ ಇವರಿಗೆ ಬೇಕೆಂದು ಸೂಚಿಸಲಾಯಿತು ಮಾತ್ರವಲ್ಲ, ರಷ್ಯ ಮತ್ತು ಫ್ರಾನ್ಸು ಗಳೊಡನೆ ಝೆಕ್ಕರು ಸೇರುವುದು ಅನ್ಯಾಯವೆಂದು ತಿಳಿಸಲಾಯಿತ

ಇದನ್ನು ತಿಳಿದ ಕೂಡಲೆ ಜರ್ಮನರು ಬರ್ಲಿನಿನಿಂದ ಈ ಸೂಚನೆಗಳಿಗೆ ಬೆಂಬಲ ಕೊಟ್ಟು, ಹುರಿದುಂಬಿಸಿ, ಅವರನ್ನು ಪ್ರೇರಿಸಿ ಸದ್ದಿಲ್ಲದೆ ಒಸ್ಟ್ರಿಯದಲ್ಲಿ ಮಾಡಿದಂತೆ ಇಲ್ಲಿಯೂ ಒಳನುಗ್ಗಿ ಪ್ರಾಬಲ್ಯದಿಂದಲೇ ಸಾಧಿಸಬೇಕೆಂದು ಘೋಷಿಸಿದರು ಆದರೆ, ಝೆಕ್ಕರು ಔದಾರ್ಯ ತೋರಿಸುವಷ್ಟಕ್ಕೆ ಜರ್ಮನರು ಇನ್ನೂ ಪ್ರಬಲರಾಗಿ, ಆ ರಾಜ್ಯದ ಸ್ವಾತಂತ್ರ್ಯವನ್ನೆ ನಿರ್ನಾಮ ಮಾಡುವರೆಂದು ಝೆಕ್ಕರು ತಿಳಿದರು ಜರ್ಮನರಿಗೆ ಸ್ವಾತಂತ್ರ್ಯ ಕೊಡುವುದೆಂದರೆ —ಆ ಭಾಗದಲ್ಲಿರುವ ನಾಲ್ಕು ಲಕ್ಷ ಝೆಕ್ಕರ ಬಲಿದಾನವಾಗುವುದ, ಉಳಿದ ಕಡೆ ಎಳುವರೆ ಲಕ್ಷ ಜರ್ಮನರು ಝೆಕ್ಕರ ಅಡಿಯಲ್ಲಿರಬೇಕಾಗುವ ಪ್ರಸಂಗವೂ ಉಂಟಾಗುವುದು. ಹೀಗಾಗಿ ಒಳಜಗಳಗಳಿಂದ ನಾಡೆಲ್ಲ ಧ್ವಂಸವಾಗಿ, ಸ್ಪೈಯಿನಿನ ಗತಿಗೆ ಬರುವುದು ಅದನ್ನು ನಿವಾರಿಸಲು ಉಂಟಾದ, ಝೆಕ್ಕ-ಫ್ರೆಂಚ-ರಷ್ಯಗಳ ಒಕ್ಕಟ್ಟಿನ ಕರಾರನ್ನು ಮುರಿದರೆ, ಜರ್ಮನಿಗೆ ಝೆಕ್ಕರು ಶರಣಾಗತರಾಗಬೇಕಾಗುವುದು ಈ ಕಾರಣದಿಂದ ಫ್ರೆಂಚರ ಮತ್ತು ಬ್ರಿಟಿಷರ ಸಹಾಯವನ್ನು ಝೆಕ್ಕರು ಕೋರಿದರು ಇವರು ಜರ್ಮನರಿಗೆ ಆಗುವಷ್ಟು ಸಮಾಧಾನಮಾಡಿರೆಂದರು ಇದರ ಫಲವಾಗಿ, ಜರ್ಮನರ ದರ್ಪ ಹೆಚ್ಚಿತು. ಝೆಕ್ಕರೊಡನೆ ಸೆಣಸಾಡಲು ಪ್ರಾರಂಭವಾಯಿತು ಆದರೂ ಇಂಗ್ಲೆಂಡೂ ಫ್ರಾನ್ಸೂ ಝೆಕ್ಕರ ಬೆನ್ನಬಳಿ ಇದೆ ಎಂದು ಜರ್ಮನರು ಅಲ್ಲಲ್ಲೇ ಕೈತಡೆದರು. ಮ್ಯುನಿಸಿಪಲ್ ಚುನಾವಣೆಗಳಲ್ಲಾದ ಮಹಾತಂಟೆಗಳಿಂದ ಹಿಂಸೆಯಾಗಿಲ್ಲ. ಜರ್ಮನರಿಗೆ ಹಿಂದೆ ದೊರೆತುದಕ್ಕಿಂತ ಕಡಮೆಯೇ ವೋಟುಗಳು

ಬಹುಸಂಖ್ಯಾತರು ಯಾವಾಗಲು ಅಲ್ಪಸಂಖ್ಯಾತರೊಡನೆ 'ಹಿಡಿ-ಬಿಡಿ' ಅಥವಾ 'ಕೊಂಡುಕೊಳ್ಳುವ' ರೀತಿಯಲ್ಲಿ ನಡೆವುದೇ ಚೆಂದ. ಹಾಗೆಂದು ಎಷ್ಟು ಬಿಟ್ಟರೂ, ಮತ್ತು ಮತ್ತೂ ತಲೆಗೇರುವ ವಾಡಿಕೆ ನಾಟಿಗಳದು ಎಂದು ಯುರೋಪಿನಲ್ಲಿ ರುಜುವಾಗುತ್ತ ಬರುವಂತೆ ಇಲ್ಲಿಯೂ—ಧರ್ಮಭ್ರಾಂತಿಯಿರುವಲ್ಲಿ—ರುಜುವಾದೀತೇ ಎಂದು ಬೆದರ ಬೇಕಾಗಿದೆ.

○ ○ ○ ○

ಜೆಕ್ಕೊಸ್ಲೊವಾಕಿಯದ 14 ಮಿಲ್ಲಿಯದಲ್ಲಿ ಧರ್ಮಭ್ರಾಂತಿಯಿಲ್ಲದಿದ್ದರೂ, ದೇಶವೆಲ್ಲ ಒಂದಾದರೂ, ಬಹುಸಂಖ್ಯಾಕರು ಅಲ್ಪಸಂಖ್ಯಾತರಿಗೆ ಕೊಡುವಷ್ಟು ರಿಯಾಯತಿ ಕೊಟ್ಟರೂ ಇನ್ನೂ ಕೊಡಲೊಪ್ಪಿದರೂ, ಬರೀ ಮೂರು ಮಿಲ್ಲಿಯ ಜರ್ಮನರ ಬೆಂಬಲಕ್ಕೆಂದು ಈಗ ಎಂಬತ್ತು ಮಿಲ್ಲಿಯ ಜರ್ಮನರು ಸೇನೆಗಳನ್ನು ಗಡಿನಾಡಿಗೆ ತಂದಿರಿಸಿಲ್ಲವೆ? ಅದರಂತೆ, ಇಲ್ಲಿನ ಮುಸ್ಲಿಮ ಕೋಟಿಯ ಹುಲಿಸಿಂಹಗಳನ್ನು ರೇಗಿಸಿ ಈ ಸೇಕಡಾ ೩೨ರ ಬೆಂಬಲಕ್ಕೆ ತಂದು ಇಲ್ಲದ ರಗಳೆಗಳೂ ಉಂಟಾಗವೆ ಹುಕ್ಕರೇ?

○ ○ ○ ○ ○

ಬಿಹಾರದಲ್ಲಿಯೂ ಹಾಗೆಯೆ ಬಿಹಾರಿಗಳು ಬೇರೆ, ಅಲ್ಲಿಗೆ ಬಂದು ನೆಲಸಿರುವ ಬಂಗಾಳಿಗಳ ಅಲ್ಪಸಂಖ್ಯಾತರು ಬೇರೆ ಇವರೊಳಗೆ ದೊಡ್ಡದೊಂದುಸಮಸ್ಯೆ ಎದ್ದಿದೆ ಅದರೂ ಇದರಿಂದ ನಾಳಿಯೇ ಚಳವಳದಂತೇನೂ ಗೊಂದಲವೇಳದು ಒರಿಸ್ಸದಲ್ಲಿ ಉಂಟಾಗ ಬಹುದೇನೋ ಎನ್ನಿಸುತ್ತದೆ

○ ○ ○ ○

"80 ಮಿಲಿಯ ನ ಸ್ಲಿಮರನ್ನು ಒಂದುಗಿಸುವ ಪ್ರಯತ್ನನಮ್ಮದು" ಎಂದ ಹುಕ್ಕರೂ—ಹಿಟ್ಲರರ ಸಮಾನರಾಗಿ—ಸಾರುತ್ತಾ ಈ ಭಾಷಣ ಮಾಡರುವಾಗ 'ಇದರಿಂದ ಭಾರತೀಯ ಜನಾಂಗಕ್ಕೆ ಸುಖವೇ ದುಃಖವೇ? ಆಗ ಮುಸ್ಲಿಮ ಅಲ್ಪಸಂಖ್ಯಾತರು ಎಲ್ಲೆಲ್ಲಿಂದಲೂ ಸಹಾಯ ಬೆಂಬಲಗಳನ್ನು ಕೂಡಲೆ ನಿರೀಕ್ಷಿಸಬಹುದಂತೆ ಇಲ್ಲಿಯೂ ಒಂದು ಮಧ್ಯಯುರೋಪನ್ನು ಸೃಷ್ಟಿ ಮಾಡುವ ಪೇಚಾಟ ಹಕ್ಕರದು. ಪರಸ್ಪರ ಸಂಶಯಗಳಿಗೆ ಹೀಗೆ ಕಾರಣವನ್ನುಂಟು ಮಾಡುವುದು ಹುಕ್ಕರಿಗೆ ಉತ್ತಮವಲ್ಲ ಅಖಿಲಭಾರತದ ಕಡೆಗೆ ಸರಿಯ ಬೇಕಾಗಿರವ ದೃಷ್ಟಿಯ

—

ಸಿಕ್ಕಿವೆ ಈಗ ಝೆಕ್ಕರೂ ಜರ್ಮನರೂ ಪ್ರತಿನಿಧಿಗಳ ಮೂಲಕ ರಾಜೀಸಂಧಾಯತಿ ಸಂಭಾಷಣೆ ಮಾಡುತ್ತಿರುವರು

ಝೆಕ್ಕರ ಯುದ್ಧಕ್ಕೆ ಹೆದರುವವರಲ್ಲ,—ಸನ್ನದ್ಧರೇ ಆದರೆ ಅವರ ಸಂಖ್ಯೆ ಕಡಮೆ, ಸಮೀಪದಲ್ಲೂ ರಾಜ್ಯದೊಳಗೂ ಜರ್ಮನರಿರುವರು ಹೀಗಾಗಿ ಫ್ರೆಂಚರ ಇಂಗ್ಲಿಷರ ಬಲ ಅವರಿಗೆ ಬೇಕು ಜರ್ಮನ ಸೇನೆಗಳು ಗಡಿಯ ಬಳಿಯಲ್ಲಿವೆ, ಝೆಕ್ಕರೂ ರಿಜರ್ವ ಸೈನ್ಯವನು ಕರೆದು ತಂದಿದ್ದಾರೆ ಎರಡು ಸೇನೆಗಳು ಮುಖಾಮುಖಿ ಮಾಡಿಕೊಂಡಿರುವಾಗ, ಪಕ್ಕನೆ ಅಲ್ಪಕಾರಣದಿಂದಾಗಿ ಯುದ್ಧವಾಗಲೂ ಸುಲಭವಲ್ಲವೇ? ಹಾಗೆಂದು, ಝೆಕ್ಕರು ಸೈನ್ಯವನ್ನು ಹಿಂದೆಗೆದರೆ, ಆಗಲೆ ಜರ್ಮನರು ಒಳನುಗ್ಗಲಾರರೆಂದು ಯಾರು ಹೇಳಬಹುದು? ಸದ್ಯಕ್ಕೇನೂ ಆಗಿಲ್ಲವೆಂಬುದು ಸಂತೋಷಕರ, ಆದರೆ ಯುದ್ಧಕ್ಕಿನ್ನೂ ಕಾರಣವಿದೆ ಎಂಬುದು ತೃಪ್ತಿಕರವಲ್ಲ.

ಬ್ರಿಟನ್ನೂ ಫ್ರಾನ್ಸೂ,—ಝೆಕ್ಕರ ರಾಜ್ಯದಲ್ಲಿ ಜರ್ಮನ ಸೇನೆಗಳು ನುಗ್ಗಿದರೆ ತಾವು ಸುಮ್ಮನಿರೆವೆಂದು ಖಂಡಿತ ತಿಳಿಸುವ ತನಕ ಯುದ್ಧಭಯವಿದ್ದೇ ಇದೆ ಫ್ರಾನ್ಸು ಹಾಗೆ ಹೇಳಿಯೆ ಇದೆ, ಬ್ರಿಟನ್ನು?

ಸ್ವಕೀಯ ಸಮಾಜದ ಕಡೆಗೆ ಮಾತ್ರ ಎಷ್ಟು ಕಾಲ ಹರಿಯುವುದೋ ಅಷ್ಟು ಕಾಲಕ್ಕೆ ಇದೀ ದೇಶಕ್ಕೆ ಸುಖವಿರದು.

○ ○ ○ ○

ಹುಸೇನನು ರಾಮುಸ್ವಾಮಿಯನ್ನು ಹೊಡೆದರೆ, ರಾಮುಸ್ವಾಮಿಯ ತಂದೆ ಹುಸೇನನ ತಂದೆಗೆ ತಿಳಿಸಿ, ಆತನಿಂದ ಹುಸೇನನಿಗೆ ಬುದ್ಧಿ ಕಲಿಸಬಹುದು. ಇದು ಉತ್ತಮ ತತ್ವ, ನಿಜ. ಆದರೆ ಇಂತಹ ಕಾರಣಗಳಿಂದಲೇ ದೊಡ್ಡ ದಂಗೆಗಳೂ ಉಂಟಾಗುವುವು. ಅವುಗಳಿಗೆ ಹುಕ್ಕರಂತಹರ 80 ಮಿಲ್ಲಿಯ ಒಂದಾಗುವ ಹುಲಿ ಸೈನ್ಯಗಳ ತಯಾರಿಯೇ ಕಾರಣ, ಬೇರೆ ಕಾರಣಗಳಿಲ್ಲ. ಮುಂದಾಳುಗಳ ಮೇಲಿರುವ ಜವಾಬ್ದಾರಿಯನ್ನು ಅವರು ಮರೆತರೇ ಇದೇ ಪಾಡು ಸಹನೆ ಸಂಯಮ ಇವೆರಡು ಇಲ್ಲದವರು ಮುಂದಾಳುಗಳಾಗಲೇ ಬಾರದು ಪೈಂಟುಗಳು, ರಿಯಾಯತಿಗಳು, ಹಕ್ಕುಗಳು ಸೆಳೆವುದಕ್ಕೆ ಮೂಲದಲ್ಲಿರುವ ಬುದ್ಧಿಯೇ ಇದು. ಇದರಿಂದಲೇ ಕೆಡುಕು ಎಲ್ಲರಿಗೂ

○ ○ ○ ○

ಭಾಷಾನ್ವಯ ಪ್ರಾಂತ್ಯಗಳನ್ನು ನಿರ್ಮಾಣ ಮಾಡಲು ಈಗ ಅವಕಾಶವಿಲ್ಲ. ಇಂಡಿಯಾ ಸೆಕ್ರೆಟರಿಯವರು ಸಾರಿದರೂ, ಮದ್ರಾಸು ಮಂತ್ರಿಮಂಡಲವು ಇಲಿ ಭಾಷಾನ್ವಯ ಪ್ರಾಂತ್ಯಗಳನ್ನು ರಚಿಸಬೇಕೆಂಬ ಎಸೆಂಬ್ಲಿಯ ಠರಾವನ್ನು ಸೆಕ್ರೆಟರಿಯವರಿಗೆ ಕಳುಹಿಸುವುದು ಒಂದು ಬಗೆಯ ಹುಚ್ಚೆಂದೇ ಮದ್ರಾಸು ಮೈಲು ಎನ್ನುತ್ತದೆ ಸೆಕ್ರೆಟರಿಯವರು ಹೇಳಿದ್ದಂತೆ ನಡೆದುಕೊಳ್ಳುವುದಕ್ಕೆ ಇತರ ಪಕ್ಷಗಳು ಮಂತ್ರಿಮಂಡಲ ರಚಿಸಲಿ ಕಾಂಗ್ರೆಸು ಅಧಿಕಾರದಿಂದಲ್ಲಿ ಸೆಕ್ರೆಟರಿಯವರಿಂದ ಯಾವಾಗಲು ಹೇಳಿಕೆ ಕೇಳಿಕೆ, ಚಳವಳ, ಸಾಧನ, ಸಿದ್ಧ ಇವುಗಳಿಗೆ ಸಿದ್ಧರಾಗಲೇ ಬೇಕು

○ ○ ○

ಹಾಗೆಯೆ ಶ್ರೀ ಗಿರಿಯವರು ಎಂದೂ ಮೈಸೂರು ಮಂತ್ರಿಗಳಾಗಲು ಯೋಗ್ಯರಲ್ಲ ಎಂದೂ ಮದ್ರಾಸು ಮೈಲಿನ ಟೀಕೆ ವೃತ್ತಿ ಕೆಲಸಗಾರರ ಮುಷ್ಕರದಲ್ಲಿ ಅವರು ಮುಖಂಡರಾಗಿ, ಸರಕಾರಕ್ಕೂ ಜನಗಳಿಗೂ ತಪ್ಪಿಗೆಯಾಗುವ ಕರಾರನ್ನು ಮಾಡಿಸಿಕೊಟ್ಟು ಇವರು ಮಂತ್ರಿಗಳಾಗಲು ಯೋಗ್ಯರಲ್ಲವಾದರೆ, ಕೆಲಸಗಾರರನ್ನು ಗುಲಾಮರಂತೆ, ತಾವೇ ಮಂತ್ರಿಗಳಂತೆ ಪಿತೂರಿ ನಡೆಸಬಲ್ಲ ಮೈಲು ಪತ್ರಿಕರ್ತರಾದರೂ ಮಂತ್ರಿಗಳಾಗಲು ಯೋಗ್ಯರೆ?

○ ○ ○ ○

ಮಧ್ಯಪ್ರಾಂತದ ಜಾಫರ ಹುಸ್ಸೇನ ಪ್ರಮೇಯವೊಂದು ತಂಟೆಗಿಟ್ಟಿದೆ ಈ ಮಹನೀಯರು ಅಕ್ರಮ ಸಂಗ ಮಾಡಿದುದಕ್ಕೆಂದು ಶಿಕ್ಷೆಹೊಂದಿ ಮೊನ್ನೆ ಮಂತ್ರಿಗಳಿಂದ ಬಿಡುಗಡೆ ಹೊಂದಿದನಷ್ಟೆ ಮಂತ್ರಿಗಳು ಅನ್ಯಾಯಮಾಡಿದುದಕ್ಕೆ ತಾವೇ ರಾಜೀನಾಮೆ ಕೊಡಬೇಕಾಗಿದೆ ಆದರೆ, ಹುಸೇನನ ಬಿಡುಗಡೆಗೆ ಮೊದಲೇ, ಆವನಿಗೆ ಸಹಾಯಕರಾಗಿದ್ದ ಜೈಲುವಾಸಿಗಳಾದವರನ್ನು ಬಿಡುಗಡೆ ಮಾಡಿದ್ದರಂತೆ ಇದು ನೀಚ ಪದ್ಧತಿಯಾಗಿದ್ದು, ಮಂತ್ರಿಗಳ ಅಪರಾಧವನ್ನು ಇನ್ನಷ್ಟು ಹೆಚ್ಚಿಸಿಯದೆ.

○ ○ ○ ○

ಆಂಧ್ರಾ ಕಾಂಗ್ರೆಸ್ ಕಮಿಟಿಯು ಚಿರಾಳಗುಂಡೇಟಿನ ಮೊಕದ್ದಮೆಯಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲವನ್ನು ದೂರಿ, ಪ್ರಕಟಿಸಿದ ನಿರ್ಣಯದಂತೆ, ಇಂಗ್ಲೆಂಡಿನಲ್ಲಿ ಅಲ್ಲಿನ ಮಂತ್ರಿ ಮಂಡಲವನ್ನು ದೂರಿ ಕನ್ಸರ್ವೇಟಿವ್ ಪಕ್ಷದವರು ಒಂದು ಆಕ್ಷೇಪಣೆಯ ನಿರ್ಣಯವನ್ನು ಪ್ರಕಟಿಸಿದ್ದಾರೆ, ಅಲ್ಲಿ ಒಂದರೆಕ್ಷಣವಾದರೂ ಮಂತ್ರಿಮಂಡಲವು ರಾಜೀನಾಮೆ ಕೊಡದೆ ಉಳಿಯುತ್ತಿರಲಿಲ್ಲ ಎಂದು ಮೈಲು ಎನ್ನುವುದು. ಅಲ್ಲಿನ ಮಂತ್ರಿಮಂಡಲವು ಅಂತಹ ನಿರ್ಣಯವೇ ಆಗದಂತೆ, ಎಂತಹ ಸುಳ್ಳುಗಳನ್ನು ತಿಳಿಸಿ, ಪೋಸರರ ತಲೆ ತಿರುಗಿಸುತ್ತಿದ್ದರು? ಇಲ್ಲಿ ವಿಮರ್ಶೆಮಾಡಿರಿ ಎನ್ನುತ್ತದೆ. ಕನ್ಸರ್ವೇಟಿವರು ರಾಜೀನಾಮೆ ಕೊಟ್ಟು ಇಂಡಿಯವು ಸ್ವತಂತ್ರವಾಗಲು ಬಿಡುವವರಲ್ಲ.

○ ○ ○ ○

ಮೇ ತಾ 29—ಇಟಲಿ ಮತ್ತು ಅದರ ವಸಾಹತುಗಳಲ್ಲಿ ಇದನ್ನು ಫ್ರೆಂಕೋವಿಜಯ ದಿನವಾಗಿ ಆಚರಿಸಲು ಮುಸ್ಸೊಲಿನಿಯ ಅಪ್ಪಣೆಯಾಗಿದೆ' ಫ್ರೆಂಕೋ ಗೆಲ್ಲಬಹುದಾದ ಸ್ಪೈಯಿನಿನೊಡನೆ ಇಟಲಿಯನರೂ ಒಂದಾಗಿರುವರೆಂದು ಪ್ರಥಮ ಪ್ರತ್ಯಕ್ಷ ಸೂಚನೆಯಿದು. ನೆನಪಾವುದು? ಫ್ರೆಂಚ್ ಸರಕಾರವು ಸ್ಪೈಯಿನ್ ಸರಕಾರದ ಸಹಾಯಕ್ಕಿದೆ ಎಂಬುದನ್ನು ಇದರಿಂದ ಪ್ರತ್ಯಕ್ಷ ಪ್ರಕಟಿಸಿ, ತದ್ವಿರುದ್ಧವಾಗಿ ಇಟಲಿ ಹೀಗೆ ಮಾಡುವುದಾಗಿ ಘೋಷಣೆ! ಫ್ರೆಂಕೋವಿನ ಜಯವು ಆಗುವಷ್ಟು ಬೇಗನೆ ಸಾಧ್ಯವಾಗಬೇಕಂತೆ' ಈ ಘೋಷಣೆಯ ಉತ್ತರ ಕಾಲಕ್ಕೇ ಜೆಕ್ಕೊಸ್ಲೊವಾಕಿಯದೊಳಗೆ ಅತ್ತ ಜರ್ಮನ್ ಸೇನೆ ನುಗ್ಗಬಹುದೆ?

○ ○ ○ ○

ಬಿಹಾರದಲ್ಲಿ ವರ್ಷಗೆ ಹಾಳಾಗಿ, ಹಾಳು ಎಂಜಿನು ಕಟ್ಟಿದ್ದ ರೈಲ್ವೆಗಾಡಿಗಳ ಸಾಲೇ ಕಳಬಿದ್ದು ನೂರೆಂಟು ಮಂದಿ ಸತ್ತರಾದರೂ, ಒಂದು ವರ್ಷದ ವಿಚಾರಣೆ ನಡೆದು ನಷ್ಟಹೊಂದಿದವರ ಅಶನಾರ್ಥವು ಕೈಸೇರಿಲ್ಲ! ಮೇ ತಾ 17ರಲ್ಲಿ ಲಂಡನಿನಲ್ಲಿ ಗಾಡಿಗಳೆರಡು ಢಕ್ಕೆ ಒಡೆದು ಐದು ಮಂದಿ ಏನೋ ಸತ್ತರು, ವಿಚಾರಣೆ ಮುಗಿದು, ಸಿಗ್ನಲ್ ಸರಿಗೆಗಳ ತಪ್ಪೆಂದೂ ಮೃತರ ಅಥವಾ ಗಾಯಗೊಂಡವರ ಕುಟುಂಬಗಳಿಗೆ ಪರಿಹಾರದ್ರವ್ಯ ಕೊಡುವೆವೆಂದೂ ಕಂಪೆನಿಯ ಖಂಡಿತ ಪ್ರಕಟಿಸಿಬಿಟ್ಟಿದೆ ಇಂಗ್ಲೆಂಡಿನಲ್ಲಿ ಐದು ದಿನಗಳಲ್ಲಿ ಆಗುವ ಇತ್ಯರ್ಥಕ್ಕೆ ಇಲ್ಲಿ ವರ್ಷವೊಂದ ಬೇಕಾಯಿತು ಸ್ವರಾಜ್ಯ!

○ ○ ○ ○ ○

ಜಪಾನಿನ ಪ್ರಾಮುಖ್ಯ ಬಂದರುಗಳ ಮೇಲೆ ಚೀನೀಯ ವಿಮಾನಗಳ ಹಾರಾಡಿ ಜಪಾನ ಸೈನಿಕ ಪಂಗಡದ ವಿರುದ್ಧವಾಗಿ ಜನತೆಯು ಚಳವಳ ಎಬ್ಬಿಸುವಂತೆ ಪ್ರೇರೇಪಿಸುವ ಪತ್ರಿಕೆಗಳ ಮಳೆ ಸುರಿದ ವಾರ್ತೆ ಬಂದಿದೆ ಚೀನಕ್ಕೆ ಇಷ್ಟಾದರೂ ಬಲ ಹೆಚ್ಚಿದೆ ಎಂಬುದನ್ನು ಒಪ್ಪಿಕೊಳ್ಳಬೇಕು ಪತ್ರಿಕೆಗಳ ಮಳೆ ಸುರಿಯುವವರು ಅಗತ್ಯಕಂಡರೆ ಗುಂಡುಮಳೆಯನ್ನು ಸುರಿಸಲಾರರೇ?

○ ○ ○ ○

ಕರಾಚಿ ಮ್ಯುನಿಸಿಪಾಲಿಟಿಗೆ ಒಂದು ತೆರಿಗೆಯನ್ನು ಹೆಚ್ಚಿಸಿ, ಅಲ್ಲಿನವರಿಂದ ಮನೆತೆರಿಗೆ ವಸೂಲು ಮಾಡಲಾಯಿತು ಅವರು ಮ್ಯುನಿಸಿಪಾಲಿಟಿಗೆ ಸೇರಲೆಚ್ಚಿಸುವುದಿಲ್ಲ ಈ ತೆರಿಗೆಯನ್ನು ಹಿಂದೆ ತರಬೇಕು ಇಲ್ಲದಿದ್ದಲ್ಲಿ,—ಹರತಾಳ ಆಚರಿಸಿ, ಅಂಗಡಿಗಳನ್ನೂ, ಶಾಲೆಗಳನ್ನೂ ಮುಚ್ಚಿ, ಎಲ್ಲ ವಾಹನಗಳನ್ನು ತಡೆದು, ಮ್ಯುನಿಸಿಪಲ್ ಕೌನ್ಸಿಲರರ ರಾಜೀನಾಮೆಗಳನ್ನೂ ಕೊಡಲಾಗುವುದೆಂದು ಸರಕಾರಕ್ಕೆ ತಿಳಿಸಿದ್ದಾರೆ ಹೇಗೆ ಸತ್ಯಾಗ್ರಹ?

○ ○ ○ ○

ಬಿಹಾರ ಕೌನ್ಸಿಲು ಪ್ರೆಸಿಡೆಂಟರು ಚುನಾವಣೆಯಾದಾಗ ಮೂರು ವರ್ಷದ ಅವಧಿಗೆ ಚುನಾವಣೆ ಹೊಂದಿದವರು ಅವರು 9 ವರ್ಷದ ವರೆಗೆ ಕೌನ್ಸಿಲಿನಲ್ಲಿರಬಹುದೆಂದೂ, ಹಜಾರಿಬಾಗದಿಂದ ಒಂಬತ್ತು ವರ್ಷಗಳ ಅವಧಿಗೆ ಚುನಾವಣೆ ಹೊಂದಿದ ಕೌನ್ಸಿಲರು, ಮೂರೇ ವರ್ಷದಲ್ಲಿ ನಿವೃತ್ತರಾಗಬೇಕೆಂದೂ ಗವರ್ನರು ಸ್ವಾಧಿಕಾರದಿಂದ ಕೊಟ್ಟ ಹುಕುಮನ್ನು ಮುಖ್ಯ ಮಂತ್ರಿಗಳು ಆಕ್ಷೇಪಿಸಿದ್ದಾರೆ ಅವಧಿಯನ್ನು ಸೋದ್ದಿ ಚೀಟುಗಳ ಮೂಲಕ ಎತ್ತಿ ನಿಷ್ಕರ್ಷೆಯಾದ ಬಳಿಕ, ಇದೇಕೆ ಸ್ವಾಧಿಕಾರದ ಬಗೆ?

ಪಾನನಿಷೇಧಕ್ಕೆ ಪಾದರಿಗಳ ಸಹಾಯ!

(ಲೇಖಕರು: ರೆವರೆಂಡ ಸಿ ಎಫ್. ಎಂಡ್ರ್ಯೂಸರವರು.)

'ರಿಕನ್ಸಿಲಿಯೇಶನ'-ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಾರಾಂಶ

ಮೂರು ಸಂಗತಿಗಳಲ್ಲಿ ಹಿಂದೂ ದೇಶದಲ್ಲಿ ಪಾನನಿಷೇಧವನ್ನು ಮಾಡುವಂಥಾದ್ದು ರಾಷ್ಟ್ರಿಮಾತ್ಯ ದೇಶಗಳಲ್ಲಿಯಕ್ಕಿಂತ ಹೆಚ್ಚು ಸುಲಭವೂ ಅನುಕೂಲವೂ ಆಗಿದೆ. (1) ಈ ದೇಶದಲ್ಲಿ ಮದ್ಯ ವ್ಯಾಪಾರವು ಖಾಸಗಿ ಜನರ ಕೈಯಲ್ಲಿ ಇರುವುದಿಲ್ಲ. ಅದು ಪೂರ್ಣ ಸರಕಾರದ ಕೈಯಲ್ಲಿ ಇರುತ್ತದೆ. (2) ಹಿಂದೂ ದೇಶದ ಸೇಕಡಾ 90ರಷ್ಟು ಜನರು ಹಳ್ಳಿಹಳ್ಳಿಗಳಲ್ಲಿ ವಾಸವಾಗಿದ್ದಾರೆ. (3) ಕೆಲವು ಪ್ರಾಂತ್ಯಗಳಲ್ಲಿ ಶೇಂದಿ ಶರಾಬುಗಳ ವೃಕ್ಷಿಯಿರುವುದಿಲ್ಲ. ಆ ಪ್ರಾಂತ್ಯಗಳಲ್ಲಿ ಶೇಂದಿಶರಾಬುಗಳ ಸ್ಥಾನವನ್ನು ಗಾಂಜಾ ಅಫೀಮು ಆಕ್ರಮಿಸಿರುತ್ತವೆ.

ಈಗ ಸರಕಾರದಿಂದ ಲೈಸೆನ್ಸುಗಳನ್ನು ಪಡೆದು ಗುತ್ತಿದಾರರು ಮದ್ಯವ್ಯಾಪಾರವನ್ನು ನಡೆಸುತ್ತಾರೆ. ಆದುದರಿಂದ ಲೈಸೆನ್ಸು ಮೂಲಕವಾದ ಈ ವ್ಯಾಪಾರಕ್ರಮವನ್ನು ನಿಲ್ಲಿಸಿ ಮದ್ಯನಿಷೇಧ ಮಾಡಿದರೆ ಅಕ್ರಮ ವ್ಯಾಪಾರಕ್ಕೆ ಆರಂಭವಾಗಬಹುದು ಎಂಬ ಒಂದೇ ಒಂದು ಆಕ್ಷೇಪವು ಮಾತ್ರ ಹಿಂದೂದೇಶದ ಪಾನನಿಷೇಧ ಆಂದೋಲನದ ಕುರಿತು ಅಲ್ಲಲ್ಲಿಂದ ಕೇಳಿ ಬರುತ್ತದೆ.

ಪರಂತು ಈ ಆಕ್ಷೇಪಕ್ಕೆ ನಾವು ಸುಲಭವಾದ ಉತ್ತರ ಕೊಡಬಹುದು. ಸರಕಾರದ ಅಧಿಕಾರಿಗಳ ಕಣ್ಣಿಗೆ ಮಣ್ಣು ಹಾಕಿ ಅಫೀಮು ಗಿಡಗಳನ್ನು ನಟ್ಟು ಬೆಳೆಸುವುದಾಗಲಿ, ಅದನ್ನು ಸಂಗ್ರಹಿಸಿ ಇಡುವುದಾಗಲೀ ಎಲ್ಲಿಯೂ ಸಾಧ್ಯವಲ್ಲ. ಪಾನನಿಷೇಧಕ್ಕೆ ಹಳ್ಳಿಹಳ್ಳಿಗಳು ಅನುಕೂಲವಾಗಿರುವುವಾದರೆ, ಅವುಗಳಲ್ಲಿ ಗಟ್ಟಿಗ ಶೇಂದಿಯನ್ನು ತಯಾರಿಸಲಿಕ್ಕೂ ಆಗ ವುದಿಲ್ಲ. ಇಷ್ಟೇ ಅಲ್ಲ, ಹಿಂದೂದೇಶದ ಹಳ್ಳಿಹಳ್ಳಿಗಳು ತಮ್ಮಲ್ಲಿರುವ ಶೇಂದಿಶರಾಬು ಗುತ್ತಿಗೆಗಳನ್ನು ಅಫೀಮು ಅಂಗಡಿಗಳನ್ನೂ ಸದಾಕಾಲಕ್ಕೆ ಮುಚ್ಚಿಬಿಡಬೇಕೆಂಬ ಬಹಳ ಆತುರದಲ್ಲಿ ಇರುತ್ತವೆ.

ಮಿತಪ್ರಮಾಣದಲ್ಲಿ ಕೂಡ ಮದ್ಯಸೇವನೆಯನ್ನು ಹಿಂದೂಮುಸಲ್ಮಾನ ಧರ್ಮಗಳು ನಿಷೇಧಿಸಿರುತ್ತವೆ. ಹಿಂದೂದೇಶದಲ್ಲಿ ಇವೇ ಎರಡು ಧರ್ಮಗಳು ಜನರ ಪ್ರಧಾನ ಧರ್ಮಗಳಾಗಿವೆ. ಹಿಂದೂದೇಶದಲ್ಲಿನ ಎಲ್ಲಾ ಗಣ್ಯ ಮಾನ್ಯ ಕ್ರೈಸ್ತ ಮುಖಂಡರು ಮದ್ಯ ನಿಷೇಧದ ಆಂದೋಲನವನ್ನು ಪ್ರೋತ್ಸಾಹಿಸುತ್ತಾರೆ.

ಸೌಭಾಗ್ಯದಿಂದ ಹಿಂದೂದೇಶದ ಸ್ತ್ರೀಯರು ಮದ್ಯವನ್ನು ಸೇವಿಸುವುದೇ ಇಲ್ಲ. ಯುವರಲ್ಲಿ ಶೇಂದಿಶರಾಬುಗಳನ್ನು ಕುಡಿಯುವವರು ಇರಬಹುದಾಗಿದ್ದರೂ ಅವರ ಸಂಖ್ಯೆ ಬಹು ಸ್ವಲ್ಪವಾಗಿ ಇರುತ್ತದೆ. ಈ ಮತ್ತು ಬೇರೆ ಕಾರಣಗಳಿಂದ ಹಿಂದೂದೇಶದ ಸ್ತ್ರೀಯರು ಮದ್ಯನಿಷೇಧ ಆಂದೋಲನವನ್ನು ತಮ್ಮ ಎಲ್ಲಾ ಶಕ್ತಿಸಾಮರ್ಥ್ಯಗಳನ್ನು ಉಪಯೋಗಿಸಿ ಪ್ರೋತ್ಸಾಹಿಸಿದ್ದಾರೆ.

ಪಾನನಿಷೇಧ ಆಂದೋಲನವು ಯಶಸ್ವಿಯಾದರೆ, ಪ್ರಪಂಚದಲ್ಲಿ ಶಾಂತಿಯು ಸ್ಥಾಪನೆಯಾಗುವುದೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಾರೆ. ಅದು ಹೇಗೆ?

ಮನುಷ್ಯನಲ್ಲಿ ಇರುವ ಪಾಶವಿಕ ಪ್ರವೃತ್ತಿಗಳನ್ನು ಸರಿಯಾಗಿ ಹಿಡಿಯುಬಿಟ್ಟರೆ ಮನುಷ್ಯನು ಹಿಂಸಾಪರನಾಗುವನು. ಅವನಲ್ಲಿ ಯುದ್ಧಾಸಕ್ತಿಯು ಬೆಳೆದುಬರುವುದು. ಮನುಷ್ಯನು ಪಶುವಿಗಿಂತಲೂ ನೀಚನಾಗಿ ಹಿಂಸಾತ್ಮಕನಾಗಲಿಕ್ಕೆ ಮನಸ್ಸಿನ ಪಾಶವಿಕ ಪ್ರವೃತ್ತಿಗಳನ್ನು ಸ್ವತಂತ್ರವಾಗಿ ಹರಿಯಬಿಡುವ ಮದ್ಯಸೇವನೆಯೇ ಮುಖ್ಯ ಕಾರಣವಾಗಿದೆ. ಆದ್ದರಿಂದ ಪ್ರಪಂಚದಲ್ಲಿ ಈಗ ಹರಡಿರುವ ಅಶಾಂತಿಗೂ, ಉಂಟಾಗುತ್ತಿರುವ ಯುದ್ಧಗಳಿಗೂ, ಮನುಷ್ಯನ ಮದ್ಯದೇವಿಗೆ ಒಲಿಯಾದುದೇ ಮೂಲಕಾರಣವಾಗಿದೆ. ಮದ್ಯನಿರೋಧದಿಂದ ಬರುವ ಇಂದ್ರಿಯನಿಗ್ರಹ ಶಕ್ತಿಯಿಂದ ಪ್ರಪಂಚದಲ್ಲಿ ಶಾಂತಿಯು ಹರಡುತ್ತದೆನ್ನುವುದು ನಿಜವಾಗಿದೆ. ಅದರ ಬದಲಿಗೆ ಮದ್ಯಸೇವನೆಯಿಂದ ಉಂಟಾಗುವ ಇಂದ್ರಿಯ ಚಪಲತೆಯು ಹಿಂಸೆಗೆ ದಾರಿ ಮಾಡಿಕೊಟ್ಟು ಯುದ್ಧಕ್ಕೆ ಕಾರಣವಾಗುವುದು.

ಬ್ರಿಟಿಷರು ತಮ್ಮ ವಶ ಒಂದಿಂದ ಹಿಂದೂ ದೇಶವನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲಿಕ್ಕೆ ಇಚ್ಛಿಸುತ್ತಾರೆಯೋ ಅಥವಾ ಅವರು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಅದನ್ನು ಪ್ರೇಮದಿಂದ ಒಲಿಸಿಕೊಳ್ಳಲಿಕ್ಕೆ ಇಚ್ಛಿಸುತ್ತಾರೆ? ನಿಜವಾಗಿ ಅವರು ಮೊದಲನೆಯದನ್ನು ಅಲ್ಲಗಳೆದು ಎರಡನೆಯದನ್ನು ಹೌದೆಂದು ಒಪ್ಪುವರಾದರೆ, ಅವರು ಹಿಂದೂದೇಶದ ಪಾನನಿಷೇಧ ಆಂದೋಲನವನ್ನು ಶಕ್ತಿಮೀರಿ ಪ್ರೋತ್ಸಾಹಿಸುವಂಥಾದ್ದು ಅಗತ್ಯವಾಗಿದೆ. ಯಾಕೆಂದರೆ ಈಗ ಪ್ರಬಲವಾಗಿ ಹರಡಿರುವ ಈ ಆಂದೋಲನವು ಹಿಂದೂದೇಶದಲ್ಲಿ ಸಂಪೂರ್ಣ ವಿಜಯಿಯಾದರೆ, ಹಿಂದೂದೇಶವು ನಿಜವಾಗಿಯೂ ಸಂಪೂರ್ಣ ಸ್ವತಂತ್ರವಾಗಿರಲಿಕ್ಕೆ ಬೇಕಾದ ಶಕ್ತಿಸಾಮರ್ಥ್ಯಗಳು ಅದಕ್ಕೆ ಪ್ರಾಪ್ತವಾಗುವುವು.

ಆದ್ದರಿಂದ ಪ್ರಪಂಚದ ಉದ್ಧಾರಕರೂ, ದೇವರ ರಾಜ್ಯವನ್ನು ಭೂಮಿಯಲ್ಲಿ ಸ್ಥಾಪಿಸಲಿಕ್ಕೂ ಹೊಂಟಿಕಟ್ಟಿದ ನಮ್ಮ ಕ್ರೈಸ್ತ ಪಾದರಿಗಳು ತಮ್ಮ ತನುಮನಧನಗಳನ್ನು ಕೊಟ್ಟು ಸಹಾಯ ಮಾಡಿ, ಹಿಂದೂದೇಶದ ಮದ್ಯನಿಷೇಧ ಆಂದೋಲನವನ್ನು ಪ್ರೋತ್ಸಾಹಿಸುವುದು ಅವರ ಪರಮ ಕರ್ತವ್ಯವಾಗಿರುವುದು ಮಾತ್ರವಲ್ಲದೆ ಅದರ ಸಫಲತೆಗಾಗಿ ವಿಶುದ್ಧ ಹೃದಯದಿಂದ ಪ್ರಾರ್ಥಿಸುವಂಥಾದ್ದು ಅವರ ಧರ್ಮವಾಗಿದೆ. ಮಹಾತ್ಮಾ ಗಾಂಧಿಯವರು ಪಾನನಿಷೇಧದ ಸಹಾಯಕ್ಕೆ ಪಾದರಿಗಳ ಸಹಾಯವನ್ನು ಕೋರಿ ಮಾಡಿದಂಥ ವಿನಂತಿಯು ವ್ಯರ್ಥವಾಗಲಾರದಾಗಿ ನಾನು ಆಶಿಸುತ್ತೇನೆ.

ಬ್ರಿಟಿಷರು ಸಾಮ್ರಾಜ್ಯ ರಕ್ಷಣೆಯ ಖರ್ಚನ್ನು ಇಂಡಿಯಾದ ಮೇಲೆ ಹೇರಿಸುವರೆ?

ನಮ್ಮ ದೇಶದ ರಕ್ಷಣೆಗೆ ಮಾತ್ರ ಏರ್ಪಾಡೆಲ್ಲಿ?

ಕಾಂಗ್ರೆಸು ಈ ವಿಷಯವನ್ನು ಪರ್ಯಾಲೋಚಿಸಬೇಕಾಗಿದೆ!

ವರಿಷ್ಠ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯವರಾಗಿರುವ ಶ್ರೀ ಆಸಾಫ್ ಅಲಿಯವರು ಕಾಂಗ್ರೆಸ್ಸಿನ ಸಮಸ್ತ ಅಧಿಕಾರಿಗಳ ಗಮನಕ್ಕಾಗಿ ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಅದರ ಸಾರಾಂಶವಿಷ್ಟೆ:

ದೇಶದೊಳಗಿನ ವ್ಯವಸ್ಥೆಗೆ ಸ್ವಲ್ಪವೂ ಬಡಲಾವಣೆಯುಂಟಾಗುವ ಚಿಹ್ನೆಗಳು ತೋರಿದಲ್ಲಿ ಇಡೀ ದೇಶವು ಅಲ್ಲೋಲ ಕಲ್ಲೋಲವಾಗುವುದಾದರೂ, ಅಂತರ್ರಾಷ್ಟ್ರೀಯವಾದ ನಾನಾ ಉಪಟಳಗಳು ಅದರೂ ನಮಗದರ ಅರಿವಿಲ್ಲದ ಸಂಬಂಧವೇ ನಮಗಿಲ್ಲವೆಂಬಂತೆ ನಾವು ತಟಸ್ಥರಾಗುತ್ತೇವೆ.

ಬ್ರಿಟಿಷ ವ್ಯಾಪಾರಿಗಳು ಇಲ್ಲಿಗೆ ಬಂದು ನಡೆಯುವ ಸಂಭಾಷಣೆಗಳಿಗೆ ನಾವು ಬಹಳವಾಗಿ ಮನಕೊಡುತ್ತಿದ್ದೇವೆ. ದೇಶದ ರಕ್ಷಣೆಯಂತಹ ಅತಿ ಮಹತ್ವದ ವಿಷಯವು ತಮ್ಮ ಗಮನಕ್ಕೆ ಬರುವುದಿಲ್ಲ. ಇಂಡಿಯಾ ಇಂಗ್ಲೆಂಡುಗಳ ಯುದ್ಧ ಇಲಾಖೆಗಳೊಳಗೆ ನಾನಾ ಚರ್ಚೆಗಳಾಗುತ್ತವೆ. ಅವನ್ನು ನಾವೇಕೆ ಮನಸ್ಸಿಗೆ ತಂದುಕೊಳ್ಳುತ್ತಿಲ್ಲವೋ ತಿಳಿಯದು. ಏಕೆಂದರೆ, ಈ ಚರ್ಚೆಗಳು ಏಕಪಕ್ಷೀಯವಾಗಿ ನಡೆದರೆ, ನಮ್ಮ ಸಾಲವೂ ಬಾಧ್ಯತೆಯು ವಿಪರೀತ ಹೆಚ್ಚಿ ನಾನಾಕಡೆ ನಮ್ಮ ಹಣಗಳೆಲ್ಲ ವಿತರಣಹೊಂದಬೇಕಾಗುವುದು. ಚೆಂಬರ್ಲೇನರ ಲಂಡನ ಬಹಿಷ್ಕಾರಕ್ಕಾಗಿ ಇಲ್ಲಿ ಚಳವಳ ನಡೆವಷ್ಟು ಚೆನ್ನಾಗಿ ಮಾತ್ರವೇ ಆದರೂ, ಈ ರಕ್ಷಣೋಪಾಯದ ವಿಚಾರದಲ್ಲಿ ಚಳವಳವೇ ಇಲ್ಲವಲ್ಲ!

ಕಳೆದ ಮೂರುವರೆ ವರ್ಷಗಳಿಂದ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳು ಆಗಾಗ ಈ ಸ್ವಂರಕ್ಷಣೋಪಾಯದ ಸಲಹೆಗಳನ್ನು ಮುಂದಿಟ್ಟು ಚರ್ಚಿಸಿರುವರಷ್ಟೆ. ದೇಶರಕ್ಷಣೆಯ ಮಹತ್ವವೆಂದರೆ, ದೇಶದ ಸ್ವಾತಂತ್ರ್ಯದ ಮಹತ್ವದಷ್ಟೇ ಇದೆ. ಆದುದರಿಂದಲೇ ಈ ವಿಷಯದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತನ್ನ ಖಂಡಿತಾಭಿಪ್ರಾಯವನ್ನು ಸ್ಪಷ್ಟವಾಗಿ ನುಡಿದರೆ, ಅದೇ ವಿಷಯ ಇಂಗ್ಲೆಂಡಿನಲ್ಲೂ ಚರ್ಚಿಸುವಾಗ ಒಂದು ತೀರ್ಮಾನ ಮಾಡುವ ಮೊದಲೇ ಕಾಂಗ್ರೆಸಿನ ಹೇಳಿಕೆ ಇರತಕ್ಕದೇ ಎಂದು ತಿಳಿಯಬರುವುದಲ್ಲವೇ?

ದೇಶರಕ್ಷಣೆ ಮತ್ತು ಪರರಾಷ್ಟ್ರಗಳೊಡನೆ ಸಂಬಂಧ – ಇವೆರಡೂ ಒಂದೇ ಬಗೆಯ ವಿಷಯಗಳಾಗಿವೆ. ಯುರೋಪಿಯ ಅಥವಾ ಪ್ರಪಂಚದ ವಿದ್ಯಮಾನಗಳು ಬದಲಾದಂತೆ ಈ ಸಂಬಂಧವೂ ಬದಲಾಗಬೇಕಾಗುವುದು. ಇಟಲಿ, ಜರ್ಮನಿ, ಜಪಾನುಗಳ, ಆಸೆಯ ದೆಸೆಯಿಂದ ಇಡೀ ಸಾಮ್ರಾಜ್ಯದ ರಕ್ಷಣೋಪಾಯ ಮಾಡಲು ಇಂಗ್ಲೆಂಡಿಗೆ ತವಕ ಉಂಟಾಗಿದೆ. ಈ ರಕ್ಷಣೆಯ ಏರ್ಪಾಡಿನಲ್ಲಿ ಇಂಡಿಯಾವೇ ಕೇಂದ್ರ. ಹಾಗೆಂದು, ಸಾಮ್ರಾಜ್ಯ ಸಂರಕ್ಷಣೆಯ ವ್ಯಯದಲ್ಲಿ, ಈ ದೇಶರಕ್ಷಣೆಯದೇ ಮಾತ್ರವಾದ ವ್ಯಯಕ್ಕಿಂತ ಎಷ್ಟೋ ಪಾಲು ಹಣವನ್ನು ಇಂಡಿಯಾವೇ ಕೊಡಬೇಕಾಗಿದೆ. ಇದೇಕೆ?

ಈಗ ನಮ್ಮ ದೇಶದ ರಕ್ಷಣೆಗೆ ಅತ್ಯಾವಶ್ಯಕವಾಗಿರುವ ಸೈನಿಕರಿಗಿಂತ ನಾಲ್ಕು ಪಾಲು ಹೆಚ್ಚಿಗೆ ಬ್ರಿಟಿಷ್ ಸೈನಿಕರು ಇಲ್ಲಿರುವರು. ಹಿಂದೀ ಸಿಪಾಯಿಗೆ ನಾಲ್ಕು ಪಾಲು ಹೆಚ್ಚಿಗೆ ಹಣಬೇಕಾಗುವ ಬ್ರಿಟಿಷ್ ಸಿಪಾಯಿಗಳು ಇಲ್ಲಿರುವರು. ಎಂದರೆ, ನಮಗೆ ಅತ್ಯಾವಶ್ಯಕವಾಗಿದ್ದ ಯಾವತ್ತೂ ಸೇನಾಸನ್ನಾಹದ ದುಬಾರಿ ಸೇನೆಯ ಹೆಚ್ಚು ನಮ್ಮ ಮೇಲಿದೆ. ಇದೇಕೆಂದರೆ, ನಮ್ಮ ದೇಶವು ಸಾಮ್ರಾಜ್ಯದ ಒಂದು ಭಾಗವಾಗಿದೆಯೆಂದೇ ಇಷ್ಟು ಖರ್ಚು ಹೊತ್ತು, ಇಂಡಿಯಾವು ಬ್ರಿಟನ್ನಿನ ಕೊತ್ತು! ತನ್ನ ಸೇನೆಯ ಮೇಲೆ ತನಗೆ ಅಧಿಕಾರವಿಲ್ಲ. ಬ್ರಿಟಿಷರ ಸಾಹಸಕಾರ್ಯಗಳಲ್ಲಿ ಸಹ ನಮ್ಮವರಿಗೆ ಅವಕಾಶ ಹಕ್ಕು. ಹೀಗೆ ಬ್ರಿಟಿಷರು ವರ್ತಿಸುವುದಕ್ಕೆ ನೈತಿಕ ರಾಜಕೀಯ ಅಥವಾ ಇನ್ನಿತರ ಯಾವ ನ್ಯಾಯ ಸಮ್ಮತವು ಆದ ಕಾರಣವುಂಟೆ? ಬಲಶಾಲಿಗಳ ಮಾತಿಗೆ ದುರ್ಬಲರು ಒಳಗಾಗಬೇಕೆಂಬ ಒಂದೇ ತತ್ವವಲ್ಲದೆ, ಶಾಂತಿಯನ್ನು ಸ್ಥಾಪಿಸುವೆವೆಂದು ಹೇಳುವವರ ಬಾಯಿಯಲ್ಲಿ ಶೋಭಿಸದ ಈ ವಚನಗಳನ್ನು ನಾವು ಕೇಳಿ ಹೇಗೆ ಇರಬೇಕು?

ಈ ಪ್ರಶ್ನೆಗೆ ಉತ್ತರವನ್ನು ಕಾಂಗ್ರೆಸು ಕಾರ್ಯಕಾರೀ ಮಂಡಲವು ಸರಿಯಾಗಿ ಇತ್ಯರ್ಥಿಸಿ, ಅದನ್ನು ಮುಂದಣ ತಿಂಗಳಲ್ಲಿ ಚರ್ಚಿಸಲಿರುವ ಬ್ರಿಟಿಷ್ ಮತ್ತು ಇಂಡಿಯನ್ ಯುದ್ಧ ಇಲಾಖೆಗಳ ಪ್ರತಿನಿಧಿಗಳು ಸ್ವಲ್ಪ ಆಲೋಚಿಸುವಂತೆ ಮಾಡಲಿ. ಇಲ್ಲದಿದ್ದಲ್ಲಿ ನಾವು ಹೊರಬೇಕಾಗಿರುವ 48 ಕೋಟಿಯ ಮೇಲೆ ಇನ್ನಷ್ಟು ಕೋಟಿಗಳ ಹೇರು ಬಲವಾದೀತು.

ಹರಿಜನರಿಗಾಗಿ

ಹರಿಜನ ಬಾಲಬಾಲಕಿಯರು ಶಾಲೆಗಳನ್ನು ಸೇರದಂತೆ ಪ್ರೇರಣೆಯನ್ನು ನಡೆಯಿಸುತ್ತಿರುವ ನಗರಸಭೆಯ ಅಧೀನದಲ್ಲಿ ಅಧ್ಯಾಪಕ ಅಧ್ಯಾಪಕೀಯರನ್ನು ಉದ್ಯೋಗದಿಂದ ನಿವೃತ್ತಗೊಳಿಸಬೇಕಾಗಿ, ಕಾನ್ಪುರದ ನಗರಸಭೆಯ ಠರಾವೊಂದಾಗಿರುತ್ತದೆ. ಈ ಠರಾವಿನ ಕುರಿತು ಬಹಳ ಚರ್ಚೆ ನಡೆದು, ಕೊನೆಗೆ ಮುಸ್ಲಿಮ ಸದಸ್ಯರ ಸಹಾಯದೊರಕಿ, ಅದು ಮಂಜೂರಾಯಿತು.

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕಾ 'ಕಾಂತಿ' ಟೋಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು.

'ಕಾಂತಿ' ಸಾಬೂನನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಟಲೆ ಜನರು ಶ್ಲಾಘಿಸಿ ಉಪಯೋಗಿಸುವರು.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ

ಡಿಸ್ಟ್ರಿಬ್ಯೂಟರರು:—
ಎಸ್., ಆರ್., ನ್ಯಾಕ್ ಎಂಡ್ ಕೋ.,
ಮಂಗಳೂರು.

Prescription Work a Speciality

Eye Testing Free.

For Stylish FRAMES
Up to-date shape LENSES
and
All kinds of optical goods

Please Visit

Nayaks Optical Stores
Scientific Opticians,
Temple Square, MANGALORE

ಇಂಗ್ಲಾಂಡಿನಲ್ಲಿ ಹಿಟ್ಲರನ ಶಿಷ್ಯೆ

★ ನಾಜಿ ವಿರೋಧಿ ಪ್ರಸಾರಣೆ ★

ಸ್ಪೈನಿನಲ್ಲಿ ಕಾನೂನು ನೀತಿಗೆ ಅನುಸಾರವಾಗಿ ಸ್ಥಾಪಿಸಲ್ಪಟ್ಟ ಬಂಡಾಯಗಾರರ ಆಕ್ರಮಣದಿಂದ ಕಷ್ಟಪಡುತ್ತಿರುವ ಸೋಶಲಿಷ್ಟ ಸರಕಾರದವರಿಗೆ ಸಹಾನುಭೂತಿಯನ್ನು ತೋರಿಸುವುದಕ್ಕೋಸ್ಕರ ಲಂಡನಿನ ಹ್ಯಾಡೆ ಪಾರ್ಕಿನಲ್ಲಿ ಒಂದು ದೊಡ್ಡ ಸಭೆಯು ಕೂಡಿತ್ತು. ಅಲ್ಲಿ ಲೋರ್ಡ್ ರೋಡೆಸ್ಡೇಲ್ (ಪ್ರಭುವಿನ ಶ್ರೀಮಂತ ಕುಮಾರಿ ಮಿಟ್ಫೋರ್ಡ್ ಎಂಬವಳು ಪ್ರೇಕ್ಷಕಳಾಗಿ ಬಂದು ಸಭೆಯ ಕಾರ್ಯಕಲಾಪಗಳನ್ನು ನೋಡುತಿದ್ದಳು, ಅವಳು 28 ವರ್ಷ ಪ್ರಾಯದ ತರುಣಿ—ಹಿಟ್ಲರನ ಶಿಷ್ಯೆ ರವಕೆಯ ಮೇಲೆ ಒಂದು ಸ್ವಸ್ತಿಕಾ ಚಿನ್ಹವನ್ನು ಕಟ್ಟಿಕೊಂಡಿದ್ದಳು ಜನರು ಫೆಸಿಜಮ್ಮನ್ನು ಎಷ್ಟು ಹೆಚ್ಚಾಗಿ ದ್ವೇಷಿಸುತಿದ್ದರೆಂದರೆ, ಹ್ಯಾಡೆ ಪಾರ್ಕಿನಲ್ಲಿ ಕೂಡಿದ ಅವರು ಮಿಟ್ಫೋರ್ಡ ಕುಮಾರಿಯನ್ನು ಕಂಡೊಡನೆಯೇ ಅವಳ ಮುಖದ ಮೇಲೆ ಉಗುಳಿದರು, ಕುಂಡೆಯ ಮೇಲೆ ತುಳಿದರು. ಸ್ವಸ್ತಿಕಾ ಚಿಹ್ನವನ್ನು ಕಸಕೊಂಡು ಚೂರುಚೂರು ಮಾಡಿದರು, ಸ್ಪೈಯಿನಿನ ಬಂಡಾಯಗಾರರ ಪ್ರತಿ, ಹಿಟ್ಲರ ಮುಸಲಿನಿಯರ ಪ್ರತಿ ತಮಗಿದ್ದ ದ್ವೇಶವನ್ನು ಹೀಗೆ ಪ್ರದರ್ಶಿಸಿದರು.

ಪಾಪದ ಮಿಟ್ಫೋರ್ಡ ಕುಮಾರಿ! ಅವಳು ಹಿಟ್ಲರನ ಶಿಷ್ಯೆಯಾದದ್ದೇ ತಪ್ಪು ಎಂದು ಜನರ ಭಾವನೆ ಅವರು ಉದ್ವಿಗ್ನರಾಗಿ—'ಅವಳನ್ನು ಹಿಡಿಯಿರಿ, ಬಡಿಯಿರಿ! ಥೇಮ್ಸ ನದಿಯಲ್ಲಿ ಮುಳುಗಿಸಿ ಕೊಲ್ಲಿರಿ, ನಾಜಿಗಳ ಮೂಲೋತ್ಪಾಟನ ಮಾಡಿರಿ, ಮಿಟ್ಫೋರ್ಡಳನ್ನು ಸೀಳುಸೀಳು ಮಾಡಿ ತೂಗಿಸಿರಿ' ಎಂದು ಕೂಗಿಡುತ್ತ ಅವಳನ್ನು ಸುತ್ತುಹಾಕಿ ಆಕ್ರಮಿಸಿದರು ಮತ್ತು ಕಲ್ಲು, ದೊಣ್ಣೆ, ಲಾರಿ,—ಯಾವುದು ಕೈಗೆ ಸಿಕ್ಕಿತೊ ಅದರಿಂದ ಅವಳನ್ನು ಹೊಡೆಯ ತೊಡಗಿದರು ಸಕಾಲದಲ್ಲಿ ಪೋಲೀಸರು ಬಂದು ಅವಳನ್ನು ಸುರಕ್ಷಿತ ಸ್ಥಾನಕ್ಕೆ ಕೊಂಡುಹೋದುದಿಲ್ಲವಾದರೆ, ಅವಳು ಬದುಕಿ ಉಳಿಯುವುದೇ ಕಷ್ಟವಾಗುತಿತ್ತು! ಜನರು ನಾಜಿಗಳ, ಫೆಸೀಸ್ಟರ ಅತ್ಯಾಚಾರ ಅನಾಚಾರಗಳ ಕುರಿತು ಅಷ್ಟು ಸಿಟ್ಟಾಗಿದ್ದರು

ಪೋಲೀಸರು ಬಹು ಪ್ರಯಾಸದಿಂದ ಅವಳನ್ನು ಸಮೀಪದಲ್ಲಿದ್ದ ಒಂದು ಬಸ್ಸಿನಲ್ಲಿ ಹಾಕಿ ರೂಟ್‌ಲೇಂಡ್ ಗೇಟಿನ ಅವಳ ಮನೆಗೆ ಒಯ್ದರು. ಅವಳ ಹಣೆಗೆ ಕಲ್ಲು ತಾಗಿ ಗಾಯವಾಗಿತ್ತು ಅವಳನ್ನು ಕಾಣಹೋದ ಪತ್ರಿಕಾ ಪ್ರತಿನಿಧಿಯೊಡನೆ ಅವಳು ತನ್ನ ದುಃಖದಾಯಕ ಕತೆಯನ್ನು ಹೀಗೆಂದು ನಿರೂಪಿಸಿದಳು

"ನಾನು ಜನಸಂದಣಿಯಲ್ಲಿ ನಿಂತು ಭಾಷಣಗಳನ್ನು ಕೇಳುತ್ತಾ ಇದ್ದೆ. ಆಗ, ನನ್ನ ಸಮೀಪದಲ್ಲಿದ್ದವನೊಬ್ಬನು ನನ್ನ ಎದೆ ಮೇಲಿದ್ದ ಸ್ವಸ್ತಿಕಾ ಬ್ಯಾಜನ್ನು ಕಸಕೊಂಡನು ನಾನೇನೂ ಆ ಬ್ಯಾಜನ್ನು ಆ ಕಾಲಕ್ಕೆ ಮಾತ್ರ ಕಟ್ಟಿಕೊಂಡುದಲ್ಲ. ಹಿಟ್ಲರನ ಪ್ರತಿ ನನಗಿರುವ ಪ್ರೀತಿ ವಿಶ್ವಾಸಗಳ ಸೂಚಕವಾಗಿ ನಾನೀಗ ಕೆಲವು ವರ್ಷಗಳಿಂದ ಅದನ್ನು ದಿನಬಿಡದೆ ಯಾವಾಗಲೂ ಧರಿಸುತ್ತೇನೆ ಆದರೆ ಅವನೇನೋ ಅದನ್ನು ಕಸಕೊಂಡು ನೆಲಕ್ಕೆ ಬಿಸಾಡಿದ. ಆಗ ನನಗೆ ತಡೆಯಲಾರದಷ್ಟು ಸಿಟ್ಟು ಬಂದು ಅವನ ಕೆನ್ನೆಗೊಂದು ಚೆನ್ನಾಗಿ ಏರಿಸಿದೆ ಆ ಮನುಷ್ಯನು ಪೆಟ್ಟುತಿಂದು ಓಡಿಹೋದ

"ನಂತರ ಒಬ್ಬ ಹೆಂಗಸು ನನ್ನನ್ನು ಸಮೀಪಿಸಿ ನನ್ನ ಮೇಲೆ ಆಕ್ರಮಣ ಮಾಡಿದಳು. ಆಗ ಅಲ್ಲಿ ಗಲಾಟೆಗಾರಂಭವಾಯಿತು. 'ನಿನ್ನ ಅಪ್ಪ ಅಜ್ಜಂದಿರು ಇರುವ ಜರ್ಮನಿಗೇ ಹೋಗಿ ಬಿಡು, ನೀನು!' ಎಂದು ಅವರು ಕೂಗತೊಡಗಿದರು. ಜನರು ನನ್ನನ್ನು ಹೆಚ್ಚೆಚ್ಚು ಸುತ್ತುಗಟ್ಟತೊಡಗಿದರು ಸಕಾಲದಲ್ಲಿ ಪೋಲೀಸರು ಬಂದು ನನ್ನನ್ನು ಕಾಪಾಡಿದರು ಭಾಷಣಗಳು ಮುಗಿಯುವ ತನಕ ಅಲ್ಲೇ ನಿಂತು ನಾನು ಅವುಗಳನ್ನು ಕೇಳಿದೆ ಸಭೆ ಮುಗಿಯಿತು

"ಆಗ ಎಲ್ಲಾ ಜನರು ನನ್ನ ಮೇಲೆ ಏರಿ ಬಂದರು ಅವರು ನನ್ನನ್ನ ಕಂಡು ಹಲ್ಲು ಕಡಿಯುತ್ತ ಆಣೆ ಶಪಥ ಹಾಕುತ್ತ ನನ್ನ ಕಡೆಗೆ ಬಂದರು ಇದನ್ನು ಕಂಡು ಪೋಲೀಸರು ಸಮೀಪದಲ್ಲಿದ್ದ ಬಸ್ಸಿಗೆ ನನಗೊಂದು ದಾರಿ ಮಾಡಿಕೊಟ್ಟರು ನಾನು ಹಿಂತಿರುಗುತಿದ್ದಾಗ ಕೆಲವರು ನನ್ನ ಮೇಲೆ ಕಲ್ಲುಗಳನ್ನು ಬಿಸಾಡಿದರು, ಪೋಲೀಸರ ಮೇಲೂ ಅವರು ಕಲ್ಲುಗಳನ್ನು ಬಿಸಾಡಿದರು. ಅವರು ನನ್ನ ಮುಖದ ಮೇಲೆ ಉಗುಳಿದರು ಕುಂಡೆಗಳ ಮೇಲೆ ತುಳಿದರು

"ಆದರೂ ನಾನು ಮಾತ್ರ ಅವರಿಗೆ ಎಳ್ಳಷ್ಟು ಹೆದರಲಿಲ್ಲ"

ಸಭೆಯಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ ಎಂಬವರೂ ಭಾಷಣ ಮಾಡುತ್ತಿದ್ದರು. ಆಗ ಜನರು ಸ್ವಸ್ತಿಕಾ ಬ್ಯಾಜನ್ನು ಇಟ್ಟುಕೊಂಡಿದ್ದ ಒಂದು ಸಣ್ಣ ತಂಡದ ಮೇಲೂ ಕೈಮಾಡಿದರು. ಫೆಸೀಸ್ಟ ವಿರೋಧಿಗಳು ಅಲ್ಲಿ ಸಾವಿರಾರು ಮಂದಿ ಕೂಡಿದ್ದರು ಅವರು ಕೆಲವು ಸನ್ನಾಯದ ತನಕ ಹ್ಯಾಡೇ ಪಾರ್ಕಿನಲ್ಲಿ ವಾಹನಾದಿಗಳ ಸಂಚಾರವನ್ನು ಪೂರ್ಣ ನಿಲ್ಲಿಸಿಬಿಟ್ಟಿದ್ದರು

ನೂರು ಮಂದಿ ಪೋಲೀಸರ—ಇಂದಿಗೆ ಕೆಲವು ಮಂದಿ ಕುದುರೆ ಸವಾರರೂ ಕೂಡ ಇದ್ದರು—ಅವರು ಸಭೆಯಲ್ಲಿ ಶಾಂತಿಯನ್ನು ಕಾಪಾಡಲಿಕ್ಕೆ ಬಂದಿದ್ದರು ಅಷ್ಟು ದೊಡ್ಡ ಸಭೆಯು ಅಲ್ಲ ಸೇರಿತ್ತು ಪೋಲೀಸರು ಮೂರು ಮಂದಿಯನ್ನು ಕೈದು ಮಾಡಿದರು ಕೆಲವು ದಿನಗಳಲ್ಲಿ ಅವರ ವಿಚಾರಣೆ ನಡೆದು ಕೋರ್ಟಿನಲ್ಲಿ ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಶಿಕ್ಷೆಯಾಯಿತು

ಮಿಟ್ಫೋರ್ಡ್ ಕುಮಾರಿ, ಇಂಗ್ಲಂಡಿನ ಒಬ್ಬ ದೊಡ್ಡ ಶ್ರೀಮಂತ ಪ್ರಭುವಿನ ಮಗಳು ಅವಳಿಗೀಗ ಜರ್ಮನ ನಾಗರಿಕೆ ಆಗಬೇಕೆಂಬ ಇಚ್ಛೆ ಇದೆ ಅವಳು ಹಿಟ್ಲರನ ಒಬ್ಬ ಆಪ್ತ ಗೆಳತಿ ಆಗಿದ್ದಾಳೆ, ಹಿಟ್ಲರನಂತೆ ಅವಳೂ ಯಹೂದಿಯರ ಪ್ರಾಣದ ಶತ್ರುವಾಗಿದ್ದಾಳೆ ತಾನು ಅವರ ಪರಮ ದ್ವೇಶಿಗಳು ಎಂಬುದನ್ನು ಲೋಕವೇ ತಿಳಿಯಬೇಕೆಂದು ಅವಳೊಮ್ಮೆ ಜರ್ಮನಿಯ ಒಂದು ನಾಜಿ ಪತ್ರಿಕೆಗೆ ತನ್ನ ಹೆಸರನ್ನು ಪೂರ್ಣ ಪ್ರಕಟಿಸಬೇಕಾಗಿ ಬರೆದಿದ್ದಳು

ಆ ಮಾತು ಹೇಗಿದ್ದರೂ—ಇಂಗ್ಲಂಡಿನ ಸಾಮಾನ್ಯ ಜನತೆಯು, ಹಿಟ್ಲರ ಮುಸಲೋನಿಯರನ್ನೂ ಅವರ ಸಂಗಡಿಗರು ಮತ್ತು ಕಾರ್ಯಕಲಾಪಗಳನ್ನು ಹೇಗೆ ದ್ವೇಶಿಸುತ್ತದೆಯೆಂಬುದೂ ಆ ದ್ವೇಶವು ಅಲ್ಲಿ ಹೇಗೆ ಹರಡುತ್ತಿದೆಯೆಂಬುದೂ ಮೇಲಿನ ಘಟನೆಯಿಂದ ವ್ಯಕ್ತವಾಗುತ್ತದೆ.

ತಿದ್ದುಪಡಿ

ಕಳೆದ ತಾ 20ನೇ ಸ್ವದೇಶಾಭಿಮಾನಿಯಲ್ಲಿ ಅತ್ತೂರು ವೈಕುಂಠ ಪ್ರಭು ಬೇಂಕಿನ ನೋಟೀಸಿನಲ್ಲಿ 34ನೇ ನಂಬ್ರದಲ್ಲಿ ಅಗಂಪ್ಪ ಎಂದು ಬಿದ್ದಿರುವ ಹೆಸರನ್ನು ಲಿಂಗಪ್ಪಶೆಂಬ—ದಾಗ ತಿದಿ ಕೊಳ್ಳುವುದು

ಸಿಲ್ಕ್ ಶರ್ಟಿಂಗ್

ಎಲ್. ಮೆಹರ್‌ಚಂದ್, ರಜಿಸ್ಟ್ರಾರ್, ಸುಕೆಟ್ ಸ್ಟೇಟ್, ಇವರು ತಾ. 31 1-38 ರಲ್ಲಿ ಬರೆದಿರುವ ಕಾಗದದಲ್ಲಿ ಹೀಗೆಂದು ಹೇಳಿಯುತ್ತಾರೆ—

ನೀವು ರೂ 5-8-0ಕ್ಕೆ ವಿ. ಪಿ. ಮುಖಾಂತರ ರವಾನಿಸಿದ ಶರ್ಟಿಂಗ್ ವಸ್ತ್ರದ ಪಾರ್ಸೆಲನ್ನು ಬಿಡಿಸಿ ನೋಡಿದೆನು, ಅದೇ ಸೈಜಿನ ಮೆಸರ್ಸ .... ಇವರ ಕಂಪೆನಿಯಿಂದ ರೂ 5-12-0ಕ್ಕೆ ತರಿಸಿದ ಶರ್ಟಿಂಗ್ ವಸ್ತ್ರವನ್ನೂ ನೋಡಿದೆನು ಆದರೆ ನೀವು ರವಾನಿಸಿದ ವಸ್ತ್ರವು ಬೆಲೆಯಲ್ಲಿ ಅಗ್ಗವೂ ಅದಕ್ಕಿಂತ ಉತ್ತಮವೂ ಅವರ ನೇಯಿಗೆ ನಾದುರಸ್ತಾದುದೂ ಎಂಬುದನ್ನು ತಿಳಿಸುವರೆ ನನಗೆ ತುಂಬಾ ಸಂತೋಷವಾಗುತ್ತದೆ ವ್ಯಾಪಾರ ವಹಿವಾಟಿನಲ್ಲಿ ನಿಮ್ಮ ಸರಳತೆ ಮತ್ತು ಶ್ರದ್ಧೆಯನ್ನು ನೋಡಿ, ನಿಮಗೆ ವ್ಯಾಪಾರದಲ್ಲಿ ಹೆಚ್ಚಿನ ಯಶಸ್ಸು ಮತ್ತು ಲಾಭ ದೊರೆಯಲೆಂದು ಬಯಸುತ್ತೇನೆ

ಸಿಲ್ಕ್ ಶರ್ಟಿಂಗ್:—ಶುದ್ಧ ಬಿಳಿದು, ಅತೀ ಉತ್ತಮ ಮತ್ತು ಹೆಚ್ಚು ಬಾಳಿಕೆ ಬರುವಂತಾದ್ದು ಹತ್ತಿಯ ನೂಲಿನಿಂದ ವಿರಹಿತವಾಗಿದೆ. ಅತಿ ನುಣುಪಾಗಿಯೂ, ತಂಪಾಗಿಯೂ, ಸುಖಕರವಾಗಿಯೂ ಇದೆ ಎಷ್ಟು ಕಠಿಣವಾಗಿ ಒಗೆದರೂ ಬಾಳಿಕೆ ಬರಬಲ್ಲುದು 9ಗಜ ಉದ್ದ, 54 ಇಂಚು ಅಗಲದ 6 ಶರ್ಟುಗಳ ವಸ್ತ್ರಕ್ಕೆ ಬೆಲೆ ರೂ. 5 8 0

ಸಿಲ್ಕ್ ಸೀರೆಗಳು:—ಖಾತ್ರಿಯಾಗಿ ಬಣ್ಣಹೋಗದ ಪ್ರಿಂಟಾದ ಅಂಚುಗಳು ಸೈಜು 7, 8, 9, 10 ಗಜ ಉದ್ದ ಮತ್ತು 45 ಇಂಚು ಅಗಲ ಕಪ್ಪುಬಣ್ಣ ವಿರಹಿತ ಇತರ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುತ್ತೆ ಕ್ರಯ ರೂ. 4 12 0, 5 9 0, 6 2-0 ಮತ್ತು 6-15-0. ಸಿಲ್ಕ್ ದುಪ್ಪಟಿಗಳು:—ಇವುಗಳು ಹೆಚ್ಚಿನ ಹೆಸರನ್ನು ಪಡೆದಿರುತ್ತವೆ ನಾವು ಪ್ರತ್ಯೇಕವಾಗಿ ಇವುಗಳ ಕುರಿತು ಹೇಳಬೇಕಾಗಿಲ್ಲ ಸೈಜು 2½ ಗಜ ಉದ್ದ, 44 ಇಂಚು ಅಗಲ ಕ್ರಯ ರೂ 2 ಮಾತ್ರ

ಪೆಕಿಂಗ್ ಮತ್ತು ಅಂಚೆವೆಚ್ಚ ಧರ್ಮಾರ್ಥ, ನಿಮಗೆ ಒಂದಿಷ್ಟು ಅಸಮಾಧಾನ ಉಂಟುಬಂದಲ್ಲಿ ನಿಮ್ಮ ಹಣವನ್ನು ಮರಳುಮಾಡಲು ನಾವು ಸಿದ್ಧರಿದ್ದೇವೆ

ಮಸ್ಲಿನ ಸಿಲ್ಕುಗಳನ್ನು ಇತರರು ಮಾರುವಂತೆ ನಮ್ಮಲ್ಲಿಯೂ ಸಿಗುತ್ತದೆ 9 ಗಜ X54 ಇಂಚು ರೂ 5

GIRSON KNITTING WORKS, DEPT. 74, LUDHIANA

MIRA TOILET ARTICLES

'MIRA PRODUCTS' are of such excellence that they could compare favourably with the famous perfumes and toilet articles used by Indian Rulers in the glorious past

H H The Maharajah of Sonepur

The Hon'ble Mr. B K Basu, C I E

MIRA' Products are in no way inferior to similar foreign products

Sole Agents

The Modern Trading Company,

Opp City Press MANGALORE

Wanted a Canvasser to Book orders for Mira Products on pay or commission

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಿಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ, ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಗುಣಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತಿಯೂ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಗಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬಾಟ್ಲಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ ಖರ್ಚು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4.

ಮಾಸ್ತಿಯ ಕೈ

ಬರೆದವರು ಬಿ. ಆರ್. ಕಾಮತ್.

೧

ಸಾಯಂಕಾಲದ ಸಮಯ. ಹೊರಗೆ ಭಿಷವಾದ ಗಾಳಿ ಬೀಸಿ, ಮಳೆ ಬೀಳುತಿತ್ತು. ರಾಮರಾಯರು ತನ್ನ ಮನೆಯ ಹೊರ ಕೋಣೆಯಲ್ಲಿ ಕುಳಿತು, ತನ್ನ ಕುಟುಂಬದೊಡನೆ ಮಾತುಕತೆಯು ನಡೆಸುತ್ತಿದ್ದರು ಅವರ ಕುಟುಂಬವೆಂದರೆ ಅವರ ಹೆಂಡತಿ ಲಕ್ಷ್ಮಮ್ಮ ಮತ್ತು ಅವರ ಒಬ್ಬನೇ ಒಬ್ಬ ಮಗನಾದ ವಾಸುದೇವಯ್ಯ ಲಕ್ಷ್ಮಮ್ಮ ಒಂದೆಡೆ ಕುಳಿತುಕೊಂಡು ರಾಮರಾಯರ ಹರಿದು ಹೋದ ಪಂಚೆಯನ್ನು ಹೊಲಿಯುತ್ತಿದ್ದರು

ಅಹಾ, ಗಾಳಿ ಏನು ರಭಸದಿಂದ ಬೀಸುತ್ತಿದೆ! ಸಾಲದುದಕ್ಕೆ ಈ ಸಿಡಿಲು ಮಿಂಚಿನ ಆರ್ಭಟೆ, ನೋಡು!'' ರಾಮರಾಯರು ತನ್ನ ಹೆಂಡತಿಯತ್ತ ನೋಡಿ ಅಂದರು

"ಈ ದಿನ ಈ ಗಾಳಿ ಮಳೆಯಲ್ಲಿ ಅವನು ಬರುತ್ತಾನೊ ಇಲ್ಲವೊ?'' ವಾಸುದೇವಯ್ಯನೆಂದನು

"ಇಂದಲ್ಲದಿದ್ದರೆ ನಾಳೆ ಬಂದಾನು.'' ಲಕ್ಷ್ಮಮ್ಮ ಸಮಾಧಾನ ಹೇಳಿದರು

ರಾಮರಾಯರು ಮೊಗವೆತ್ತಿ ನೋಡಿದರು. ಏನೋ ನುಡಿಯ ಬೇಕೆಂದು ಬಾಯಿ ತೆರೆದ ಅವರು, ಹಾಗೆಯೇ ಆ ಮಾತ ಗಳನ್ನು ನುಂಗಿ, ತುಟಿಯ ಕೊನೆಗಳನ್ನು ಲಂಬಿಸಿ ನಗುಗುಳ್ಳಿಕ್ಕರು.

"ಅದೋ, ಅವನು ಬಂದಂತೇ ತೋರುತ್ತದು'' ಎಂದುಸುರೆ, ಗೇಟಿನ ಶಬ್ದವಾದುದನ್ನು ಕೇಳಿ ರಾಮರಾಯರು ಲಗುಬಗೆಯಿಂದ ಎದ್ದುಹೋಗಿ ಮುಂಬಾಗಿಲನ್ನು ತೆರೆದರು. ಸ್ವಲ್ಪ ಸಮಯದಲ್ಲಿ ಒಬ್ಬ ವೃದ್ಧ ಪುರುಷನು ಮನೆಯ ಒಳಗೆ ಬಂದನು ಆತನು ಒಳಗೆ ಬಂದೊಡನೆ ರಾಮರಾಯರು ಬಾಗಿಲನ್ನು ಮುಚ್ಚಿ ಆತನನ್ನು ಹಿಂಬಾಲಿಸಿ ಬಂದರು ಬಳಿಕ ಆತನಿಗೆ ಕುಳಿತುಕೊಳ್ಳಲು ಹೇಳಿ, ತಾವೂ ಒಂದ ಕುರ್ಚಿಯನ್ನು ಎಳೆದುಕೊಂಡು ಆತನ ಬಳಿಯಲ್ಲೇ ಕುಳಿತುಕೊಂಡರು,

ತುಸು ಹೊತ್ತು ಯಾರೂ ಮಾತನಾಡದೆ ಒಬ್ಬರ ಮೊಗವನ್ನು ಇನ್ನೊಬ್ಬರು ನೋಡುತ್ತ ಕುಳಿತುಕೊಂಡರು

"ಏನು ವೀರಯ್ಯಾ ಅದನ್ನು ತಂದಿರುವೆಯಾ ಹೇಗೆ?'' ಬಳಿಕ ರಾಮರಾಯರು ಮೌನವನ್ನು ಒಡೆದು ಆಗಂತುಕನೊಡನೆ ವಿಚಾರಿಸಿದರು

"ಏಕೆ? ತಂದಿರುವೆನು'' ವೀರಯ್ಯನು ಪ್ರತ್ಯುತ್ತರವಿತ್ತ

"ಏನನ್ನು? ಮಾಸ್ತಿಯ ಕೈಯನ್ನೇ? ವಾಸುದೇವಯ್ಯನು ಕುತೂಹಲ ಪೂರ್ವಕವಾಗಿ ನುಡಿದನು

"ಏನು? ಮಾಸ್ತಿಯ ಕೈ" ಲಕ್ಷ್ಮಮ್ಮನವರು ಕೌತುಕ ತೋರಿ, ಹಿಡಿದ ಕೆಲಸವನ್ನು ಅಷ್ಟರಲ್ಲಿಯೇ ಬಿಟ್ಟು ಬಿಟ್ಟು ಕಿವಿ ನಿಮಿರಿಸಿ ಕುಳಿತರು

"ಅದನ್ನು ಮಾಸ್ತಿಯ ಕೈ ಎನ್ನಲೂ ಬಹುದು. ಮೊಜಕಿನ ಕೈ ಎನ್ನಲೂ ಬಹುದು ನೋಡಲಿಕ್ಕೆ ಅದೊಂದ ಸಾಮಾನ್ಯ ಎಲುಬಿನಂತೆ ಇದೆ'' ತನ್ನ ಅಂಗಿಯ ಕಿಸೆಯಲ್ಲಿ ತಡುಕಾಡುತ್ತ ವೀರಯ್ಯನೆಂದ ಬಳಿಕ ಒಂದು ಗೇಣುದ್ದ ಎಲುಬಿನ ತುಂಡನ್ನು ತೆಗೆದು ತೋರಿಸಿದನು. ಅದನ್ನು ನೋಡಿದೊಡನೆ ಲಕ್ಷ್ಮಮ್ಮ ಒಮ್ಮೆ ಮುಖವನ್ನು ಕಹಿ ಮಾಡಿ ಹಿಂದೆ ಸರಿದರು ಆದರೆ ವಾಸುದೇವಯ್ಯನು ಎಲುಬನ್ನು ಪಡೆದುಕೊಂಡು ಕುತೂಹಲಪೂರ್ಣವಾಗಿ ಪರೀಕ್ಷಿಸಿ ನೋಡಿದನು

"ಇದರಲ್ಲಿ ವಿಶೇಷವೇನಿದೆ?'' ಎಂದು ರಾಮರಾಯರು ವೀರಯ್ಯನನ್ನುದ್ದೇಶಿಸಿ ನುಡಿದು, ತನ್ನ ಮಗನ ಕೈಯಿಂದ ಆ ಎಲುಬನ್ನು ಪಡೆದುಕೊಂಡು, ಅದನ್ನು ಬಳಿಯಲ್ಲಿದ್ದ ಮೇಜಿನ ಮೇಲೆ ಇಟ್ಟರು

"ಒಮ್ಮೆ ನನ್ನ ತಂದೆಯವರೊಡನೆ ಒಬ್ಬ ಹಾಲಿಯರ ಹೆಂಗಸು, ಎಲೆ ಅಡಿಕೆಯನ್ನು ಬೇಡಿದಳು ತಂದೆಯವರು ಕೊಟ್ಟೊಡನೆ ಕೊಡುವಂತೆ ಬೇಡಿದಳು. ಒಡನೆ ಅವಳು ಸಾಮಾನ್ಯ ಸ್ತ್ರೀಯಾಗಿರದೆ ಮಾಸ್ತಿಯಾಗಿರ ಬೇಕೆಂದು ಅವರಿಗೆ ಸಂಶಯವಾಯಿತು ಎಲೆ ಅಡಿಕೆಯನ್ನು ಆಕೆಗೇ ಹೆಕ್ಕಿ ಕೊಳ್ಳುವಂತೆ ಹೇಳಿದರು ಅವಳು ಬಗ್ಗಿ ತೆಗೆಯುವಾಗ, ಅವಳ ಜಡೆಯನ್ನು ಹಿಡಿದು ನಿಲ್ಲಿಸಿದರು ಮಾಸ್ತಿಯು ತನ್ನನ್ನು ಬಿಟ್ಟು ಬಿಡುವಂತೆ ಬಹುವಿಧವಾಗಿ ಬೇಡಿಕೊಂಡಳು ಆದರೆ ತಂದೆಯವರು, ಮಂತ್ರಿಸಿದ ಒಂದು ಎಲುಬಿನ ತುಂಡನ್ನು ಕೊಡುವ ತನಕ ಆಕೆಯನ್ನು ಬಿಡಲಿಲ್ಲ ಇತರ ಮಾಸ್ತಿಯ ಕೈಗಳಿಗಿಂತ ಇದು ಬಹಳ ಮಹತ್ವವುಳ್ಳದ್ದಾಗಿರುವುದು ಇದರೊಡನೆ ಮೂವರು ಮಾತ್ರ, ಪ್ರತಿಯೊಬ್ಬನು ಮೂರರ ಪ್ರಕಾರ ವರಗಳನ್ನು ಬೇಡಿದರೆ ಅವು ಸಫಲವಾಗುವುವು''

"ಹಾಗಾದರೆ ನೀನು ಮೂರು ವರಗಳನ್ನು ಬೇಡಿಲ್ಲವೇ?'' ವಾಸುದೇವಯ್ಯನು ಉತ್ಸಾಹಭರಿತನಾಗಿ ಪ್ರಶ್ನಿಸಿದನು

ದುಡುಕು ಸ್ವಭಾವದ ತರುಣರನ್ನು ವೃದ್ಧರು ನಿಂದಾತ್ಮಕ ದೃಷ್ಟಿಯಿಂದ ನೋಡುವಂತೆ ವೀರಯ್ಯನು ಒಮ್ಮೆ ವಾಸುದೇವಯ್ಯನನ್ನು ದಿಟ್ಟಿಸಿ ನೋಡಿ "ಬೇಡಿರುವೆನು!'' ಎಂದು ನುಡಿದನು. ಆಗಲೆ ಆತನ ಸರಿತ ಮುಖವು ಬಿಳುಪು ತಿರುಗಿತು

"ನೀನು ಬೇಡಿದ ಆ ಮೂರು ವರಗಳು ಕೈಗೂಡಿದವೇ ಇಲ್ಲ?'' ಲಕ್ಷ್ಮಮ್ಮನವರು ಲಕ್ಷ್ಯವಿಟ್ಟು ಕೇಳಿದರು,

ಹೌದು'' ವೀರಯ್ಯನು ಮೆಲ್ಲನೆ ಅಂದ ಆದರೆ ತುಟಿಗಳ ಅದುರಿ ಹಲ್ಲುಗಳ ಕಟಕಟ ಶಬ್ದವಾಗುತಿತ್ತು

'ಇನ್ನು ಯಾರಾದರೂ ಬೇರೆಯವರ ಬೇಡಿರುವರೇ?'' ಲಕ್ಷ್ಮಮ್ಮನವರು ಪುನ ವಿಚಾರಿಸಿದರು

'ನನಗಿಂತ ಮೊದಲೊಬ್ಬನು ಬೇಡಿದ್ದನು'' ವೀರಯ್ಯನೆಂದ ಆತನು ಕೇಳಿದ ಮೊದಲಿನ ಎರಡು ವರಗಳು ಯಾವುದೆಂದು ನನಗೆ ತಿಳಿದಿಲ್ಲ ಪರಂತು ಮೂರನೆಯದಾಗಿ ಆತನು ಮರಣವನ್ನು ಅಪೇಕ್ಷಿಸಿದನು

"ಆತನು ಯಾರು? ನಿನ್ನ ತಂದೆಯಲ್ಲವೇ'' ರಾಮರಾಯರು ಸ್ವಲ್ಪ ಸಂಶಯಗ್ರಸ್ತರಂತೆ ನುಡಿದರು

"ಹೌದು ನನ್ನ ತಂದೆಯವರೇ ಆ ಮೊದಲಿನವನು. ನಂತರದವನು ನಾನ" ವೀರಯ್ಯನು ಗಂಭೀರವಾಗಿ ಪ್ರತ್ಯುತ್ತರವಿತ್ತನು ಆತನ ಮಾತುಗಳನ್ನು ಕೇಳಿ ಅವರೆಲ್ಲರೂ ಒಮ್ಮೆ ತಟಸ್ಥರಾದರು

"ನೀನು ಮೂರು ವರಗಳನ್ನು ಬೇಡಿರುವೆಯಾದರೆ, ನಿನಗದಿನ್ನು ಪ್ರಯೋಜನವಿಲ್ಲ ಅಲ್ಲವೆ? "ಇನ್ನೇಕೆ ಇದನ್ನು ನೀನು ಇಟ್ಟುಕೊಳ್ಳುವುದ?'

ವೀರಯ್ಯನು ತಲೆದೂಗಿದನು "ಏಕೋ ನನಗೇ ತಿಳಿಯದು'' ಮತ್ತೆ ಅಂದನಾತನು. "ಒಮ್ಮೆ ನನಗೆ ಅದನ್ನು ಮಾರುವ ಆಲೋಚನೆಯಿತ್ತು. ಆದರೆ ಇಷ್ಟರಲ್ಲಿಯೇ ಅದು ತುಂಬಾ ಹಾನಿಯನ್ನುಂಟು ಮಾಡಿರುವುದು. ಮಾತ್ರವಲ್ಲ, ಅದನ್ನು ಕ್ರಯಕ್ಕೆ ಪಡೆಕೊಳ್ಳುವ ಜನರೂ ಇಲ್ಲ. ಕೆಲವರು ನಾನು ಹೇಳಿದ ಕಥೆಯೆಲ್ಲ ಅಜ್ಜಿ ಕಥೆಯೆಂದು ಪರಿಹಾಸ್ಯ ಮಾಡುವರು. ಒಂದಿಷ್ಟು ನಂಬುಗೆ ಇದ್ದವರು ಮೊದಲು ಅದನ್ನು ಪರೀಕ್ಷಿಸಿ ನೋಡಿ, ಮತ್ತೆ ಹಣ ಕೊಡುತ್ತೇನೆನ್ನುವರು''

"ನೀನು ಪುನಃ ಮೂರು ವರಗಳನ್ನು ವಾಸುದೇವಯ್ಯನು ಕುಡಿಗಣ್ಣಿನಿಂದಾತನನ್ನು ದಿಟ್ಟಿಸಿ ವಿಚಾರಿಸಿದನು

"ಅರಿಯೆ!'' ವೀರಯ್ಯನೆಂದ "ನಾನರಿಯೆ'',

ಹೀಗೆಂದು ವೀರಯ್ಯನು ಆ ಎಲುಬನ್ನು ಎತ್ತಿ, ತನ್ನ ಹೆಬ್ಬೆಟ್ಟಿನ ಮತ್ತು ತೋರ್ಬೆರಳಿನ ನಡುವೆ ತೂಗಿಸಿ, ತಟ್ಟನೆ ಒಲೆಯಲ್ಲಿ ಬಿಸುಟನು ರಾಮರಾಯರು ಚೀರಿಕೊಂಡು ಮುಂದೆ ಹಾರಿ, ಒಲೆಯಿಂದ ಅದನ್ನು ಈಚೆಗೆ ತೆಗೆದರು

"ಸುಟ್ಟು ಬಿಡಿರದನ್ನು!'' ವೀರಯ್ಯನು ಸ್ಫೂರ್ತಿಯಿಂದ ನುಡಿದ "ವೀರಯ್ಯಾ, ನಿನಗೆ ಬೇಡವಾದರೆ, ಇದು ನನಗಿರಲಿ'' ರಾಮರಾಯರು ಆತನೊಡನೆ ಅಂದರು

"ನಾನೊಲ್ಲೆ'' ವೀರಯ್ಯನು ಹಟಹಿಡಿದ "ಯಾರಿಗೂ ಬೇಡವೆಂದೇ ನನದನ್ನು ಬೆಂಕಿಯಲ್ಲಿ ಹಾಕಿದುದು ಮುಂದೆ ಏನಾದರೂ ಆದರೆ ಮತ್ತೆ ನನ್ನನ್ನು ದೂರದಿರಿ. ವಿಚಾರಶೀಲರಂತೆ ಪುನಃ ಅದನ್ನು ಅಗ್ನಿಗೇ ಆಹುತಿಗೊಡಿರಿ

ರಾಮರಾಯರು ಸ್ವೀಕಾರಾರ್ಥ ಸೂಚಕವಾಗಿ ತಲೆದೂಗಿ, ಆ ಎಲುಬನ್ನು ಕೂಲಂಕಷವಾಗಿ ಪರೀಕ್ಷಿಸಿ ನೋಡಿದರು "ವರಗಳನ್ನು ಬೇಡ ವುದಾದರೆ ಏನೂ ಮಾಡ ಬೇಕು?'' ಮತ್ತೆ ವಿಚಾರಿಸಿದರು

'ಅದನ್ನು ನಿಮ್ಮ ಬಲಗೈಯಲ್ಲಿ ಹಿಡಿದುಕೊಂಡು, ನೀವು ನಿಮಗೆ ಬೇಕಾದುದನ್ನು ಗಟ್ಟಿಯಾಗಿ ಉಚ್ಚರಿಸಿರಿ' ವೀರಯ್ಯನು ಅಂದ ಆದರೆ ತೊಂದರೆಯಾದಂತೆ ನಾನು ಮೊದಲೇ ನಿಮ್ಮನ್ನು ಎಚ್ಚರಿಸುತ್ತೇನೆ

'ಅರೇಬಿಯನ್ ನೈಟ್ಸ್ ಕಥೆಗಳಂತೆ ಇದೆ' ವಾಸುದೇವಯ್ಯನೆಂದ 'ನಾನು ಚತುರ್ಭುಜನಾಗುವಂತ ಕೇಳಿಕೊಳ್ಳಲಿ?''

ರಾಮರಾಯರು ಮಾಸ್ತಿಯ ಕೈಯನ್ನು ಎತ್ತಿಹಿಡಿದರು ವೀರಯ್ಯನು ದಿಗಿಲುಗೊಂಡವನಂತೆ ರಾಮರಾಯರ ಕೈಯನ್ನು ಹಿಡಿದೆಳೆದನು ಆತನ ಸಡಗರವನ್ನು ನೋಡಿ ಎಲ್ಲರೂ ನಕ್ಕರು

"ನೀವು ವರಗಳನ್ನು ಬೇಡಬೇಕೆಂದಿದ್ದರೆ'' ವೀರಯ್ಯನು ಬಿರುಸಾಗಿ ಹೇಳಿದ "ಯೋಗ್ಯವಾದ ದ್ದನ್ನೇ ಕೇಳಿರಿ'

"ಆಗಬಹುದು ಆದರೆ ಇಂದಿಗೆ ಅದ ನನ್ನ ಕಿಸೆಯಲ್ಲಿಯೇ ಇರಲಿ' ರಾಮರಾಯರು ವೀರಯ್ಯನಿಗೆ ಸಮಾಧಾನ ಹೇಳಿದರು ಬಳಿಕ ಅನೇಕ ವಿಷಯಗಳು ಅವರೊಳಗೆ ಪ್ರಸ್ತಾಪಿಸಲ್ಪಟ್ಟವು ಕಡೆಗೆ ವೀರಯ್ಯನು ಹೊತ್ತಾಯಿತೆಂದು ಹೇಳಿ, ಮನೆಗೆ ಹೋಗಲು ಹೊರಟನು ಆಗ ರಾಮರಾಯರು ಆ ಮಾಸ್ತಿಯ ಕೈಗೆ ಎಷ್ಟು ಕ್ರಯ ಕೊಡಬೇಕೆಂದು ಆತನೊಡನೆ ಕೇಳಿದರು ಮೊದಮೊದಲು ವೀರಯ್ಯನು ಅದನ್ನು ಬೂದಿ ಮಾಡುವಂತೆ ರಾಮರಾಯರಿಗೆ ಬಹಳವಾಗಿ ಬೋಧಿಸಿದನು ಆದರೆ ರಾಮರಾಯರು ಅದಕ್ಕೆ ಸಮ್ಮತಿಸಲಿಲ್ಲ ಕಡೆಗೆ ತಮ್ಮೊಳಗಿನ ಅನೇಕ ವರ್ಷದ ಸ್ನೇಹದಿಂದಾಗಿ, ನಿರುಪಾಯನಾಗಿ ವೀರಯ್ಯನು ಅವರಿಂದ ಹತ್ತು ರೂಪಾಯಿಗಳನ್ನು ಪಡೆಕೊಂಡು ಮನೆಗೆ ತೆರಳಿದನು

ವೀರಯ್ಯನು ಹೊರಟುಹೋದ ನಂತರ ತಂದೆ, ತಾಯಿ ಮತ್ತು ಮಗನು ಒಂದುಗೂಡಿ ಇನ್ನು ಮುಂದೆ ತಾವು ಏನು ಮಾಡಬೇಕೆಂದು ಆಲೋಚಿಸತೊಡಗಿದರು.

"ಸಾರ್ವಭೌಮನಾಗಬೇಕೆಂದು ವರವ ಕೇಳುವೆಂದು'' ಎಂದು ವಾಸುದೇವಯ್ಯನು ಹರುಷದಿಂದ ನುಡಿದ. ತಂದೆಯ ಬಳಿಗೆ ಹೋಗಿ ನಿಂತನು. ಲಕ್ಷ್ಮಮ್ಮನೂ ಮಗನಿಗಿಂತ ಮುಂಚಿತವಾಗಿಯೇ ಗಂಡನ ಬಳಿಹೋಗಿ ನಿಂತರು

ರಾಮರಾಯರು ಆಗಲೇ ಕಿಸೆಯಿಂದ ಮಾಸ್ತಿಯ ಕೈಯನ್ನು ಹೊರದೆಗೆದು, ಅದನ್ನೊಮ್ಮೆ ನಸನಸೆ ನೋಡಿದರ "ಯಾವ ವರವನ್ನು ಬೇಡಲೆಂದು ನನಗೇ ತಿಳಿಯದು'' ಮತ್ತೆ ಅವರೆಂದರು "ಈ ಸಂಸಾರದಲ್ಲಿ ಬೇಕಾದುದೆಲ್ಲವೂ ನಮಗೆ ಇಷ್ಟಂತೆ ತೋರುವುದು ನನಗೆ''

"ಅಲ್ಲ, ನಮಗೆ ಇನ್ನೂರು ರೂಪಾಯಿ ಸಾಲವಿದೆಯಲ್ಲವೆ? ಅದನ್ನು ತೀರಿಸಿದರೆ ಆಗಬಹುದು ಆದುದರಿಂದ ಇನ್ನೂರು ರೂಪಾಯಿಗಳನ್ನೇ ಬೇಡಿರಿ'' ಲಕ್ಷ್ಮಮ್ಮ ಗಂಡನಿಗೆ ಸೂಚಿಸಿದರು

ಹೆಂಡತಿಯ ಮಾತು ಹೌದೆಂದು ತೋರಿತು ರಾಮರಾಯರಿಗೆ ಒಡನೆ ಅವರು ಮಾಸ್ತಿಯ ಕೈಯನ್ನು ಎತ್ತಿ ಹಿಡಿದರು. ಲಕ್ಷ್ಮಮ್ಮನವರೂ ವಾಸುದೇವಯ್ಯನೂ ವರ್ಷಾಗಮನವನ್ನು ನಿರೀಕ್ಷಿಸುವ ಚಾತಕಪಕ್ಷಿಗಳಂತೆ, ರಾಮರಾಯರ ಮೊಗವನ್ನೇ ಈಕ್ಷಿಸುತ್ತ ಕುಳಿತರು

"ನಾನು ಇನ್ನೂರು ರೂಪಾಯಿಗಳನ್ನು ಬಯಸುತ್ತೇನೆ.''

ರಾಮರಾಯರು ಗಟ್ಟಿಯಾಗಿ ನುಡಿದರು. ಅಷ್ಟೆಂದುದೇ ತಡ ಅವರು ಚಟ್ಟನೆ ಚೀರಿ, ಕೈಯಲ್ಲಿದ್ದ ಎಲುಬನ್ನು ಕೆಳಗೆ ಬಿಟ್ಟು ನಡುಗುತ್ತ ನಿಂತರು ಅವರ ಹೆಂಡತಿ ಮತ್ತು ಮಗನು ಅವರ ಎರಡೂ ಕೈಗಳನ್ನು ಹಿಡಿದು ನಿಲ್ಲಿಸಿದರು

ಅಯ್ಯಪ್ಪಾ! ಹೇಗೆ ಕೈಯಲ್ಲಿ ಚಲಿಸಿತದು'' ಎಂದು ತಿರಸ್ಕಾರ ವ್ಯಂಜಕ ದೃಷ್ಟಿಯಿಂದ ಒಮ್ಮೆ ಅವರು ನೆಲದ ಮೇಲಿದ್ದ ಆ ಎಲುಬನ್ನು ನೋಡಿ ಹೇಳಿದರು 'ನಾನು ವರವನ್ನು ಬೇಡಿದೊಡನೆ, ಸರ್ಪದಂತೆ ಅದು ನನ್ನ ಕೈಯಲ್ಲಿ ತಿರುಗಿತು''

ತಂದೆ ಹಣವೇನು ಬಂದದು ನನಗೆ ತೋರುವುದಿಲ್ಲ'' ವಾಸುದೇವಯ್ಯನು ನಗುತ್ತ ನೆಲದ ಮೇಲಿದ್ದ ಆ ಎಲುಬನ್ನು ಹೆಕ್ಕಿ ಮೇಜಿನ ಮೇಲಿಟ್ಟನು ''ಮಾತ್ರವಲ್ಲ, ಅದು ಬರುವಂತೆಯೂ ಇಲ್ಲ'

"ಅದೇನೋ ನಿಮ್ಮ ಭ್ರಮೆಯಾಗಿರಬೇಕು ಇಲ್ಲದಿದ್ದರೆ ಒಂದು ಎಲುಬಿನ ತುಂಡು ಸಜೀವ ವಸ್ತುವಿನಂತೆ ಚಲಿಸುವುದೆಂದರೇನು?'' ಲಕ್ಷ್ಮಮ್ಮ ಗಂಡನಿಗೆ ತುಸು ಧೈರ್ಯ ಹೇಳಿದರು

ರಾಮರಾಯರು ತಲೆದೂಗುತ್ತ ಹೇಳಿದರ 'ಹೋಗಲಿ ಇರಲಿ ಅದರಿಂದೇನೂ ಹಾನಿ ಆಗಲಿಲ್ಲವಷ್ಟೆ. ಅಷ್ಟೇ ಸಾಕು ಆದರೆ ನಾನೊಮ್ಮೆ ಹೆದರಿಬಿಟ್ಟೆ''

ನಂತರ ಮೂವರೂ ಅಲ್ಲಿಯೇ ಕುಳಿತುಬಿಟ್ಟರು ಹೊರಗೆ ಗಾಳಿಯು ಬೀಸಾಟವು ರಭಸದಿಂದಲೇ ಸಾಗುತ್ತಿತ್ತು ಮುಸಲಧಾರೆಯಿಂದ ಮಳೆಯೂ ಬೀಳುತ್ತಿತ್ತು, ಅಂದು ಆ ಮೂವರೂ ನಂತರ ಆ ವಿಚಾರದ ಪ್ರಸ್ತಾಪವನ್ನು ಎತ್ತಿದದಿಲ್ಲ ನಾನಾ ಬಗೆಯ ಬೇರೆ ವಿಚಾರಗಳನ್ನು ತಿರಿಸಿ ಮಾತಾಡಿದರು ಆದರೆ ಎಲ್ಲಿಯಾದರೂ ಗಾಳಿಗೆ ಬಾಗಿಲುಗಳ ಶಬ್ದವಾದರೆ ತುಳಿದ ಸರ್ಪದಂತೆ ಹಾರಿ ಬಿದ್ದು ಸುತ್ತು ಮುತ್ತಲೂ ಭಯ ಚಕಿತ ದೃಷ್ಟಿಯಿಂದ ನೋಡುತ್ತಿದ್ದರು.

"ಅಪ್ಪಾ, ಇಂದು ರಾತ್ರಿ ನೀವು ಮಲಗಿದಾಗ ಯಾರೋ ಒಂದು ಅಪರಿಚಿತ ವ್ಯಕ್ತಿಯು ಇನ್ನೂರು ರೂಪಾಯಿಗಳ ಗಂಟೊಂದನ್ನು ನಿಮ್ಮ ತಲೆಯ ಮೇಲೆಯೇ ತೊಗಾಡಿಸಬಹುದು. ಆದುದರಿಂದ ಜಾಗರೂಕರಾಗಿರಿ'' ವಾಸುದೇವಯ್ಯನು ನಸು ನಗುತ ತನ್ನ ತಂದೆಗೆ ಪರಿಹಾಸ್ಯ ಮಾಡಿದನು.

ತುಂಡು ಸುದ್ದಿಗಳು

★

ಕೊಡಗನ್ನು ಮೈಸೂರು ರಾಜ್ಯದ ಒಂದು ಭಾಗವಾಗಿ ಸೇರಿಸಿಕೊಳ್ಳುವ ಪ್ರಶ್ನೆಯ ಬಗ್ಗೆ ಸರಕಾರ ವಿಚಾರಿಸುತ್ತಿದೆಯಾಗಿ ಮುಕ್ಕಾಲು ಪಾಲು ಖಂಡಿತವಾಗಿರುವಂತೆ ರಾಜಧಾನಿಯಿಂದ ವರ್ತಮಾನ ತಲಪಿದೆ. ಮೈಸೂರು ರಾಜ್ಯದಲ್ಲಿ ಸಹ ಪ್ರಜಾಪ್ರತಿನಿಧಿಗಳ ಮೂಲಕವೇ ರಾಜ್ಯಭಾರವು ಚೆನ್ನಾಗುವಂತೆ ಈಗಿನ ಸ್ಥಿತಿಯು ನಿರ್ಧರಿಸುವ ವೇಳೆ, ಕೊಡಗಿಗೆ ಹೊಸ ರಾಜಕೀಯ ಕುಂದುಗಳೂ ತಲ್ಪದಂತೆ ಸೇರಿಸಲೂ ಅನುಕೂಲವಾಗುವುದೆಂದೂ, ಹೆಚ್ಚಿನ ಮಟ್ಟಿಗೆ ಆಡಳಿತದ ಖರ್ಚು ತಗ್ಗುವುದರಿಂದ ಕೊಡಗಿನ ಕಂದಾಯದೊಳಗೇ ಖರ್ಚು ಸರಿಹೋಗಬಹುದೆಂದೂ, ಮದ್ರಾಸು ಅಥವಾ ಬೊಂಬಾಯಿ ಆಧಿಪತ್ಯಗಳೊಳಗೆ ಕೊಡಗನ್ನು ಸೇರಿಸುವರೆ ಜನತೆಯ ಭಾಷೆ ಸಂಸ್ಕೃತಿಗಳಿಗೆ ಸಂಬಂಧವಿಲ್ಲವೆಂದು ಮೊದಲಾಗಿ ಕಾರಣಗಳನ್ನು ಕೊಡಲಾಗಿದೆ. ಆಡಳಿತದ ವೆಚ್ಚವನ್ನು ಇಳಿಸಿ, ಇನ್ನು ಹೆಚ್ಚಿಗೆ ತೆಂಗೆಗಳಾವುವೂ ಇರದಂತೆ ಜಾಗ್ರತೆ ತೆಗೆದುಕೊಳ್ಳುವಂತಾದಲ್ಲಿ ಕೊಡಗು ಸ್ವತಂತ್ರವಾಗಿಯೇ ಇರಬಹುದಾಗಿತ್ತು. ಅದೇನೆಂದು ಶ್ರೀ| ಪಟ್ಟೇಲ್‌ರವರು ಬರೆದ ರಿಪೋರ್ಟಿನಿಂದ ತಿಳಿಯಬೇಕು ವಿನಾ ಅನ್ಯಥಾ ಸಾಧ್ಯವಿಲ್ಲ. ಅಂತೂ ಕೊಡಗು ಕರ್ನಾಟಕ ಪ್ರಾಂತ್ಯದ ಒಂದು ಅಂಗವಾಗುವಂತೆ ಈಗಲೇ ಸೇರುಗೆ ಹೊಂದಲು ಅನುಕೂಲವಾಗಿದೆ.

★

ಒರಿಸ್ಸಾ ಮುಸ್ಲಿಮ ವಿದ್ಯಾರ್ಥಿಗಳ ಫೆಡರೇಶನು ಕಟಕಿನಲ್ಲಿ ಸೇರಿದಾಗ, ಅಲ್ಲಿಗೆ ಹಾಜರಾಗಿದ್ದ ಶ್ರೀ| ಫಜಲುಲ್ ಹುಕ್ಕರನ್ನು ಪ್ರಜಾವರು ಕಂಡು, ಅಲ್ಲಿ ಒಂದು ಮುಸ್ಲಿಮ್ ಲೀಗಿನ ಸಭೆ ತೆರೆವ ವಿಚಾರದಲ್ಲಿ ಸಂಭಾಷಣೆ ನಡೆಸಿದರು. ಒರಿಸ್ಸದಲ್ಲಿ ಮುಸ್ಲಿಮರ ಸ್ಥಿತಿಗತಿಗಳನ್ನು ಕುರಿತಾಗಿ ಬಹಳ ಪ್ರಶ್ನೋತ್ತರಗಳಾಗಿವೆ. "ಒರಿಸ್ಸದ ಮುಖ್ಯಮಂತ್ರಿ ಶ್ರೀ| ವಿಶ್ವನಾಥ ದಾಸರು ಗಣನೀಯ ವ್ಯಕ್ತಿಯೆಂದೂ, ಅವರ ಕೈಯಲ್ಲಿ ಅಲ್ಪ ಸಂಖ್ಯಾಕರ ಹಿತವು ಎಂದೂ ಕಡಮೆಯಾಗದೆಂದೂ ಅವರ ಆಳಿಕೆಯಲ್ಲಿ ಮುಸ್ಲಿಮರಿಗೆ ಆಕ್ಷೇಪವೆತ್ತಲು ಯಾವ ಅವಕಾಶಗಳೂ ಸಿಗಲಾರವೆಂದೂ ನನ್ನ ದೃಢವಿಶ್ವಾಸವಿದೆ!" ಎಂದು ಹುಕ್ಕರು ನುಡಿದರು.

★

ಜೋರ್ಜ್ ಸಾರ್ವಭೌಮರ ಸ್ಮಾರಕಕ್ಕಾಗಿ ವಸೂಲಾದ ಹಣಗಳಿಂದ 68,000 ರೂಪಾಯಿ ವ್ಯಯಿಸಿ ಎರಡು ಶಿಲಾ ಪ್ರತಿಮೆಗಳನ್ನು ಮಾಡಿಸುವರಂತೆ: ಒಂದು ಅಲ್ಲಾಹಾಬಾದಿಗೆ, ಮತ್ತೊಂದು ಲಕ್ನೌವಿಗೆ. ಅಗತ್ಯವಿದ್ದಲ್ಲಿ ಅವರೇ ಸಾರ್ವ ಭೌಮರ ಸ್ಮಾರಕವಾಗಿ ಕೊನೆಯ ಪಕ್ಷ 68 ವಾರ್ಧಾ ಸ್ಕೀಮಿನ ಶಾಲೆಗಳನ್ನೂ ಅಲ್ಲಿ ಸ್ಥಾಪಿಸಬಹುದಾಗಿತ್ತು. ಎಷ್ಟೋ ಸಾವಿರ ಮಕ್ಕಳಿಗೆ ಜೀವನೋಪಾಯ ಕಲಿಸುವ ಶಾಲೆಗಳಾಗುತಿದ್ದವು. ಆದರೆ, ಅವೆರಡು ನಗರಗಳು ಸಾಮ್ರಾಜ್ಯರನ್ನು ಮರೆಯಬಹುದೆಂದು ಹೆದರಿಕೆಯಿತ್ತೋ ಏನೋ!

★

ಮೋಟರು ವಾಹನಗಳಲ್ಲಿ, ಮೋಟರು ಸಂಚಾರದ ಕಾಲಕ್ರಮವನ್ನೂ ಟಿಕೇಟು ದರಗಳನ್ನೂ ವಾಹನಗಳು ತಂಗುವ ಸ್ಥಳಾದಿಗಳ ವಿವರವನ್ನೂ ಪ್ರಕಟಿಸಲೇ ಬೇಕೆಂಬ ಹೊಸ ಸೂತ್ರವು ಮೋಟರು ವಾಹನಗಳಿಗಾಗಿರುವ ರೂಲ್ಸುಗಳಲ್ಲಿ ಇನ್ನು ಸೇರುವುದು.

★

ಸಿಂಧ ಪ್ರಾಂತ್ಯದ ಕಲೆಕ್ಟರರುಗಳು ಇನ್ನು ದರ್ಬಾರು ಸೇರಿಸಿ ಬಿರುದುಬಹುಮಾನಾದಿಗಳನ್ನು ಹಂಚುವ ಏರ್ಪಾಡನ್ನು ರದ್ದುಮಾಡಲಾಗಿದೆ ಎಂದೂ, ಅಂತಹ ದರ್ಬಾರುಗಳಲ್ಲಿ ಕುರ್ಚಿಗಳನ್ನು ಅಲಂಕರಿಸಲು ಅಪ್ಪಣೆಯನ್ನು ಕೊಡುವ ಅಧಿಕಾರವು ರದ್ದುಮಾಡಲಾಗಿದೆ ಎಂದೂ, ಅಲ್ಲಿನ ಗವರ್ನರರು ಪ್ರಕಟಿಸಿ, ಇನ್ನು ಮುಂದೆ ಎಲ್ಲ ದರ್ಬಾರುಗಳು ಗವರ್ನರರದೇ ಆಗಬೇಕೆಂದೂ ಅಪ್ಪಣೆ ಕೊಟ್ಟಿದ್ದಾರೆ.

★

'ಆರ್ಯ' ಶಬ್ದಕ್ಕೆ ಪಾರ್ಸಿಸ್ಥಾನದ ಸಾಹಿತ್ಯದಲ್ಲಿ 'ಪಿಶಾಚಿಗಳ ಮಕ್ಕಳು' ಎಂಬರ್ಥವು ಇರುವ ಕಾರಣ, ಆರ್ಯರು ತಾವೇ ಮಾತ್ರ ಶುದ್ಧ ಜನಾಂಗದವರೆನ್ನುವ ಕೆಲವರಿಗೆ ಮನಸ್ಸಿಗೆ ಹೇಗೆ ಎನಿಸೀತು? ಎಂದು ಡಾ| ಟೇಲ್‌ರವರು ಉಟಕಮಂಡಿನಲ್ಲಿ ವಿವರಿಸಿದರು.

★

ಸೇಲಂ ಜಿಲ್ಲಾ ರಾಶೀಪುರದಲ್ಲಾದ ಜಿಲ್ಲಾ ಉದ್ಯೋಗಸ್ಥರ ಸಭೆಯಲ್ಲಿ, 5000ಕ್ಕಿಂತ ಮೇಲ್ಪಟ್ಟ ಜನಸಂಖ್ಯೆಯುಳ್ಳ ಗ್ರಾಮಗಳ ಮತ್ತು ಮಲ್ಲಗಳ ಜೆದ್ದಾಂಗಳನ್ನು ತಾರಿನಿಂದ ಬಳಿದು ದೂಳಿನ ಅಪಾಯವನ್ನು ನಿವಾರಿಸಬೇಕೆಂದೂ, ಸರಕಾರಿ ಟ್ರೈನಿಂಗ್ ಶಾಲೆಯಿಂದ ತರಬೇತಾಗುವ ಉಪಾಧ್ಯಾಯರು ಗ್ರಾಮೋದ್ಧಾರಕ್ಕೂ ನೆರವಾಗುವಂತೆ ಗ್ರಾಮೋದ್ಧಾರ ತರಬೇತಿಗಾಗಿ ಮತ್ತೊಂದು ಶಾಲೆಯನ್ನು ತೆರೆಯಬೇಕೆಂದೂ ನಿರ್ಧರಿಸಿರುವರು. ದಕ್ಷಿಣ ಕನ್ನಡದಲ್ಲಿ ಹೇಗೆ?

★

ಪ್ರತಿಯೊಂದು ಜಿಲ್ಲೆಯಲ್ಲಿ ಮೂರು ಕೇಂದ್ರಗಳನ್ನು ಆರಿಸಿ, ಅಲ್ಲಿ ಪೋಲೀಸ್ ಆಫಿಸರರ ಮೂಲಕ ಗ್ರಾಮಸ್ಥರಲ್ಲಿ ವ್ಯಾಯಾಮ ಬೋಧನೆಯ ಪ್ರಚಾರ ಮಾಡಲಾಗುವುದು ಎಂದು ಸರಕಾರದ ಪ್ರಕಟನೆ. ಪೋಲೀಸರ ಪಗಡಿಗೆ ಬೆದರುತ್ತ ಊರು ಬಿಡುವ ಗ್ರಾಮಸ್ಥರ ಭಯನಿವಾರಣೆಯಾಗಲಿ!

★

ಹೆಂಡತಿಯನ್ನೂ ಮಕ್ಕಳನ್ನೂ ಬಿಟ್ಟು ಕನ್ನಪ್ಪಕ್ಕೆ ಇದ್ದ ಒಬ್ಬ ತೀಯನು, ತನ್ನ ಮೇಲೆ ಅಶನಾರ್ಥಕ್ಕಾಗಿ ಅವಶ್ಯವಾಗುವುದೆಂದು ತಿಳಿದು, 3-8 ವರ್ಷ ವಯಸ್ಸಿನ ಇಬ್ಬರೂ ಮಕ್ಕಳನ್ನು ಕೊಂದಿಕ್ಕಿ, ಹೆಂಡತಿಯನ್ನು ಕೊಲ್ಲಲುದ್ಯುಕ್ತನಾದಾಗಲೇ ಸೆರೆಯಾದ ವಾರ್ತೆ ಕಲ್ಲಿಕೋಟೆಯಿಂದ ತಲಪಿದೆ. ಮಕ್ಕಳು ಸತ್ತರೂ, ಇವನ ಅಶನಾರ್ಥಕ್ಕಿನ್ನು ಗತಿಯೆಲ್ಲಿ?

★

ವಿಲಪಳ್ಳಿಯ ನಂಬೂದಿರಿಯೊಬ್ಬನು ತೀಯ್ಯರನ್ನೂ ಹರಿಜನರನ್ನೂ ತನ್ನ ಕೆರೆಯ ನೀರನ್ನು ಉಪಯೋಗಿಸಲು ಬಿಟ್ಟುದಕ್ಕಾಗಿ, ಇತರ ಸಜಾತಿಹಿಂದುಗಳಿಂದ ಕಲ್ಲುಮಳೆಯಲ್ಲಿಯೇ ಸ್ನಾನಮಾಡಬೇಕಾಗಿತ್ತೆಂದೂ ಕಲ್ಲಿಕೋಟೆಯ ವಾರ್ತೆ.

★

ಮೈಸೂರು ಯುವರಾಣಿಯವರು ಮೋಟರಿನಲ್ಲಿ ಹೋಗುವಾಗ, ಮತ್ತೊಂದು ಮೋಟರಿಗೆ ಧಕ್ಕೆ ಬಡೆದುದರಿಂದ ಗಾಯಗೊಂಡರು. ಅಷ್ಟೇನೂ ಅಪಾಯವಾಗಲಿಲ್ಲ.

★

ರವಿವರ್ಮ ಕೋಯಿಲ್ ತಂಪುರಾನ್ (ತ್ರಿವೆಂಡ್ರಮ್ಮಿನವ) ಪಾಲ್ಘಾಟಿನ ಹೋಟಲಿನಲ್ಲಿ ಬಹು ದಿನ ತಂಗಿದ ಬಳಿಕವೂ ಕಾಸುಕೊಡಲಿಲ್ಲ. ಒಂದು ದಿನ ಅವನಿಗೆ ತ್ರಿವಾಂಕೂರು ಮಹಾರಾಜರು 200 ರೂಪಾಯಿ ಕಳಿಸುತ್ತಾರೆಂಬ ತಂತೀ ತಲಪಿತು. ಅದನ್ನು ಹೋಟ್ಲಿಗೆ ತೋರಿಸಿ, ಮತ್ತು ಕೆಲವು ದಿನ ಸುಖವಾಗಿ ಭೋಜನವಾಯಿತು. ಆದರೆ ಹೋಟ್ಲಿನವನಿಗೆ ಹಣ ಸಿಗಲಿಲ್ಲ. ಕೂಡಲೆ ವಿಚಾರ ನಡಿಸಿದಲ್ಲಿ ಅವನು ತಾನೇ ಸರ್ವಾಧಿಕಾರಿಯ ಹೆಸರಲ್ಲಿ ತಂತೀ ಕಳಿಸಿದನೆಂದು ತಿಳಿದು ಬಂತು. ಈಗ ಜೈಲಿನ ಆಹಾರಕ್ಕೆ ಬಾಯಿ ತೆರೆವನೋ ಏನೋ! ತೀರ್ಮಾನವಾಗಿಲ್ಲ.

★

ಮೂರನೆ ತರಗತಿಯ ಪ್ರಯಾಣಿಕರಿಗೆ ರೈಲ್ವೆ ಆಳುಗಳ ಕಡೆಯಿಂದ ಉಂಟಾಗುವ ಲಂಚ ಮತ್ತು ಹಿಂಸೆಯ ಬಾಧೆಯಿಂದ ತಪ್ಪಿಸಬೇಕಾಗಿ, ದೇವಕೋಟೆಯಲ್ಲಿ ಸೇರಿದ ರೈಲ್ವೆ ಪ್ರಯಾಣಿಕರ ಪರಿಷತ್ತು ಅಧಿಕಾರಿಗಳಿಗೆ ಸೂಚಿಸಿಯದೆ.

★

ತಿರುವಣ್ಣಾಮಲೆ ರಥೋತ್ಸವ (ಪೆರುಮಾಳ ದೇವಸ್ಥಾನ)ದಲ್ಲಿ, ರಥದ ಘಾತದಿಂದ ಒಬ್ಬನು ಸತ್ತನು, ಆರು ಮಂದಿಗೆ ಗಾಯಗಳಾಗಿವೆ.

★

ಇಬ್ಬರು ಮಹನೀಯರು ಕ್ರೋಯಿಲ್ ಟೊಯ್‌ಲೆಂಡ್ ಎಂಬ ಅಂಗಡಿಯ ಪಾಲಿಕರೂ ಮಾರಾಟಗಾರರೂ ಆಗಿ ಕರಾಚಿಯಲ್ಲಿದ್ದರು. ಇವರ ಅಂಗಡಿ ಸುಟ್ಟುಹೋಯಿತು. ಗೊಂಬೆಗಳೇ ಮೊದಲಾಗಿ ಸುಲಭವಾಗಿ ಬೆಂಕಿ ಹತ್ತುವ ವಸ್ತುಗಳೇ ತುಂಬಿದ್ದುವು. ಸುಟ್ಟ ಕಾರಣ ತಿಳಿಯದೆ ಅವರನ್ನೆ ಕೈದು ಮಾಡಲಾಯಿತು. ಇಪ್ಪತ್ತೆರಡು ದಿನ ವಿಚಾರಣೆಯಾಗಿ, ಅವರೇ ಬೆಂಕಿಯಿಟ್ಟವರೆಂದು ರುಜುವಾಯಿತು. ಅಂಗಡಿ 90,000 ರೂಪಾಯಿಗೆ ಇನ್ಶೂರ್ ಮಾಡಲಾಗಿತ್ತು!

★

ಮದ್ರಾಸಿನಲ್ಲಿರುವ (ತಿರುಮಣಿ) ಕುಷ್ಠರೋಗಿಗಳ ಆಶ್ರಮವನ್ನು ಫಿಜೀ ದ್ವೀಪದ ಆರೋಗ್ಯ ಇಲಾಖಾ ಆಫಿಸರರು ಕಂಡು, ಇಲ್ಲಿ ರೋಗಿಗಳ ಆರೈಕೆಗೆ ಮಾಡಿರುವ ವ್ಯವಸ್ಥೆಗಳನ್ನೇ ಅಲ್ಲಿಯೂ ಮಾಡಿದರೆ ಉತ್ತಮವಾದೀತೆಂದು ಅಭಿಪ್ರಾಯ ಪಟ್ಟಿರುವರು. ನಮ್ಮ ಸಂಸ್ಥಾನದಲ್ಲಿ 8000 ಕುಷ್ಠರೋಗಿಗಳಿದ್ದಾರೆ.

★

ಹಲವು ಜಡ್ಜರ ಹುದ್ದೆಗಳನ್ನು ರದ್ದು ಮಾಡಿ, ಅಲ್ಲಲ್ಲಿ ಜಡ್ಜರು ಸರ್ಕೀಟು ಬೆಳಸುವ ಕ್ರಮವನ್ನು ಜ್ಯಾರಿಗೆ ತರುವುದರಿಂದ ಖರ್ಚು ಕಡಮೆಯಾಗಿ, ಕೋರ್ಟುಗಳನ್ನು ಕಿತ್ತುಹಾಕುವ ಅಗತ್ಯವಿರದೆಂದೂ, ಹತ್ತು ವರ್ಷದ ಅನುಭವವುಳ್ಳ ವಕೀಲರನ್ನು ಗೌರವಾರ್ಥ ಮುನ್ಸೀಫರೇ ಮೊದಲಾದ ನೋಕರರಾಗಿ ನೇಮಿಸಬಹುದೆಂದೂ, ಈಗ ಗೌರವಾರ್ಥ ಮೈಜಿಸ್ಟ್ರೇಟರಿರುವ ವ್ಯವಸ್ಥೆಯೇ ಈ ಇಲಾಖೆಗೂ ಲಗಾವಾಗತಕ್ಕದೆಂದೂ, ಅಂತೆಯೇ ಮೆಜಿಸ್ಟ್ರೇಟರು ದೆಪ್ಯುಟಿ ತಹಶೀಲ್ದಾರರು ಮೊದಲಾದವರ ಸಂಖ್ಯೆಯನ್ನೂ ಇಳಿಸಬಹುದೆಂದೂ, ಮೈಲ್ ಪತ್ರಿಕೆಗೆ ಸೂಚನೆಯಿದೆ.

★

ದೇವಸ್ಥಾನಗಳಿಗೆ ಉಂಬಳಿಕೊಟ್ಟವರು ಯಾವ ಉದ್ದೇಶಗಳಿಗಾಗಿ ಅಂತಹ ಉಂಬಳಿ ಬಿಟ್ಟಿದ್ದರೋ ಅವಕ್ಕಾಗಿಯೇ ಆ ಹಣವನ್ನು ವಿನಿಯೋಗಿಸಿ, ಉಳಿದಾಗ ಮಾತ್ರ ಅದನ್ನು ವಿದ್ಯಾಪ್ರಚಾರಕ್ಕೆ ಅಥವಾ ವೈದ್ಯಾಲಯಗಳಿಗೆ ಉಪಯೋಗಿಸತಕ್ಕದೆಂದು ಡಾ| ರಾಜನ್‌ರವರು ಬಂಟವಾಳ ಮೊದಲಾದ ಸ್ಥಳಗಳಲ್ಲಿ ಮಾಡಿದ ಭಾಷಣೆಗಳಿಗೆ ವಿಮರ್ಶೆಯಾಗಿ ಪತ್ರವ್ಯವಹಾರಗಳು ಬಂದಿವೆ.

★

ಜರ್ಮನ್ ಮೊಸಳೆಯು ಜೆಕ್ಕೊಸ್ಲೊವಾಕಿಯದ ಕಡೆಗೆ ಬಾಯ್ತೆರೆದು ಕಾಲಿಟ್ಟಿದೆ. ಈ ಉರಗವು ಒಸ್ಟ್ರಿಯವನ್ನು ನುಂಗಿ, ಇನ್ನೂ ಹಸಿವುಗೊಂಡಿದೆ. ಈ ದೇಶದಲ್ಲಿನ ಜರ್ಮನರನ್ನು ಇತರ ಜನಸಮುದಾಯಗಳಿಗೂ ಹೆಚ್ಚಾಗಿ ಅಧಿಕಾರ ಕೊಟ್ಟು, ಅವರು ತಮ್ಮನ್ನು ತಾವೇ ಆಳುತ್ತಿರುವಂತೆ ಮಾಡಬೇಕೆಂದೇ ಆಸೆಯಂತೆ.

o o o o o

ಆ ಜರ್ಮನರಿಗೆ ಎಷ್ಟು ಸೌಕರ್ಯಗಳನ್ನು ಕೊಟ್ಟಿದ್ದರೋ ಅವೆಲ್ಲವೂ ನ್ಯಾಯ ಪ್ರಕಾರ ಸಂದುವು. ಇನ್ನಷ್ಟು ಕೊಡಲೂ ಜೆಕ್ಕೊಸ್ಲೊವಾಕಿಯ ಸಿದ್ಧವಾಗಿದೆ. ಆದರೆ, ಅದನ್ನು ಮಾತಾಡಿ ಪೂರಯಿಸ ಬೇಕೆಂದರೆ, ಅವರ ಮುಖಂಡನೇ ಕಾಣೆಯಾಗಿರುವನು! ಅಷ್ಟರಲ್ಲಿ—ಸಾಮಾನ್ಯವಾಗಿ ಗಡಿನಾಡಿಗೆ ಬರುತ್ತಿರುವಂತೆ ಎಂದು ಸೂಚಿಸಿದರೂ-ಅಸಂಖ್ಯಾತ ಸೇನೆಗಳು ಜೆಕ್ಕೊಸ್ಲೊವಾಕಿಯದ ಜರ್ಮನರಿರುವ ಗಡಿಗೇ ಬಂದು ತಂಗಿವೆ: ಕಿಂಚಿತ್ತು ರಗಳೆಯಾಗುವಲ್ಲಿ ಇವು ಒಳನುಗ್ಗಿ—ಒಸ್ಟ್ರಿಯದಲ್ಲಿ ಮಾಡಿದಂತೆ,—ಕೂಡಲೆ ಈ ಪ್ರದೇಶವನ್ನು ಆಕ್ರಮಿಸಿ ಹಿಡಿಯುವುವು.

ಪದೋನ್ನತಿಗೆ ನೀವು ಯೋಗ್ಯರೆ?

ನಿಮ್ಮನ್ನು ನೀವೆ ನೋಡಿ: ನಿಮ್ಮಲ್ಲಿ ಶಕ್ತಿಯಿರುವುದಿಲ್ಲ. ನಿಮ್ಮ ಮುಖದ ಮೇಲೆ ಸಂತೋಷವಿಲ್ಲ. ನಿಮ್ಮ ಕಣ್ಣಲ್ಲಿ ಯಾವಾಗಲೂ ನಿದ್ರೆ ಕಾಣಿಸುತ್ತದೆ. ನಿಮ್ಮ ಉದರದೊಳಗೆ ಮತ್ತು ರಕ್ತದೊಳಗೆ ವಿಷವಿರುವುದೆಂದು ಇವುಗಳೆಲ್ಲ ಚಿಹ್ನೆಗಳು. ಇನೊಸ್ 'ಫ್ರುಟ್ ಸಾಲ್ಟ್' Eno's 'Fruit Salt' ಮಾತ್ರ ಈ ವಿಷವನ್ನು ನಿಮ್ಮ ದೇಹದಿಂದ ಹೊರದೂಡಬಲ್ಲುದು. ಸಾವಿರಾರು ಮಂದಿ ಪುರುಷರು, ಸ್ತ್ರೀಯರು, ಮತ್ತು ಮಕ್ಕಳು ವೈದ್ಯರ ಬೋಧನೆ ಪಡೆಕೊಂಡು, ಇನೊಸ್ 'ಫ್ರುಟ್ ಸಾಲ್ಟ್'ನ್ನು Eno's 'Fruit Salt' ದಿನಾಲೂ ಸೇವಿಸುತಿದ್ದಾರೆ. ಅದರಿಂದ ಅವರು ಆರೋಗ್ಯವಂತರೂ, ಹರ್ಷಿತವಂತರೂ ಆಗಿರುವರು. ಆರೋಗ್ಯಕ್ಕಾಗಿ ಇಂದಿನಿಂದಲೇ ಇನೋವನ್ನು ತೆಗೆದುಕೊಳ್ಳಲುಪಕ್ರಮಿಸಿರಿ.

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ. ಸಂಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳಿಂದ ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ತಯಾರಿಸಲ್ಪಟ್ಟಿರುತ್ತದೆ, ಇನೋ ಡೋಜಿಗೆ ಖರ್ಚು ಕಡಿಮೆ. ಎಲ್ಲರಿಗೂ ಈ ಆರೋಗ್ಯಕರ ಪಾನೀಯ ಪಡೆಯಲು ಸಾಧ್ಯವಿದೆ. ಎಲ್ಲಾ ಕಡೆಗಳಲ್ಲಿಯೂ ಮೂರು ಪರಿಮಾಣದಲ್ಲಿ ಮಾರಲ್ಪಡುತ್ತದೆ.

"ಇಮಿಟೇಶನನ್ನು ತಿರಸ್ಕರಿಸಿರಿ. ಒಳ್ಳೆಯ ಮಾತ್ರ ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವವು ಮಾದರಿಯು ಪಕಿಂಗು ತೀರಾ ಸಮಾಧಾನಕರದ್ದೆಂದು ಖಚಿತಪಡಿಸಿದೆ".

EVK 3

ಶಾಕಾಹಾರಿಗಳಲ್ಲಿ ಯುದ್ಧಾತುರವು ಬಹಳ!!

ಹಿಟ್ಲರ ಮುಸಲೋನಿಯರು ತಿನ್ನುವದು ಅನ್ನ! ಹೀರುವದು ಪ್ರಾಣ!!

ಇದರ ರಹಸ್ಯ—ಏನಾಗಿರಬಹುದು?

ಪ್ರಪಂಚದಲ್ಲಿ ಯುದ್ಧಾತುರರಿರುವ ಜನರೆಲ್ಲರೂ ಸಸ್ಯಾಹಾರಿಗಳಾಗಿರುವರೆಂದು, ಕೆಲವು ವರ್ಷಗಳ ಹಿಂದೆ ಬರ್ನಾರ್ಡ್ ಶಾ ಎಂಬ ಸುಪ್ರಸಿದ್ಧ ಆಂಗ್ಲ ಲೇಖಕರು ವ್ಯಂಗ್ಯದ ಮಾತನ್ನು ಆಡಿದ್ದರು. ಅವರ ಆ ಮಾತು ಈಗ ಪೂರ್ಣ ಸತ್ಯವಾಗಿರುವಂತೆ ವಿಜ್ಞಾನವೂ ಇತಿಹಾಸವೂ ತೋರಿಸ ಹತ್ತಿದೆ.

ಕಳೆದ ಮಹಾಯುದ್ಧವು ಮುಗಿದ ಬಳಿಕ ಯೂರೋಪದಲ್ಲಿ ಪ್ರಾದುರ್ಭಾವಕ್ಕೆ ಬಂದ ಮಹಾಶಕ್ತಿ ಸಂಪನ್ನ ಸರ್ವಾಧಿಕಾರಿಗಳೆಲ್ಲರೂ ಶಾಕಾಹಾರಿಗಳಾಗಿದ್ದಾರೆ. ಒಂದೇ ಅವರು ಮಾಂಸವನ್ನು ಮುಟ್ಟುವದು ಕೂಡ ಇಲ್ಲ; ಅಥವಾ ಉಳಿದ ಜನರಿಗಿಂತ ಅವರು ಬಹು ಸ್ವಲ್ಪ ಮಾಂಸವನ್ನು ತಿನ್ನುತ್ತಾರೆ.

ಹಿಟ್ಲರನಿಗೆ ಮಾಂಸವು ಪೂರ್ಣ ವರ್ಜ್ಯವಾಗಿದೆ, ಅವನು ಮೀನನ್ನು ತಿನ್ನುವದು ಕೂಡ ಬಹಳ ಅಪರೂಪ. ಕೆಲವು ಹಣ್ಣು ಹಂಪಲುಗಳನ್ನು ತಿಂದು ಅವನ ಪ್ರಾತಃಕಾಲದ ಭೋಜನವು ಮುಗಿಯುತ್ತದೆ. ಮಧ್ಯಾಹ್ನಕ್ಕೆ ತರಕಾರಿಗಳ ಪಚ್ಚಡಿ, ಸ್ವಲ್ಪ ಗಿಣ್ಣ ಮತ್ತು ಮೊಟ್ಟೆ—ಇವೇ ಅವನ ಆಹಾರ ವಸ್ತುಗಳಾಗಿರುವವು. ಅವನಿಗೆ ಚಹಾ ಕುಡಿಯುವ ಅಭ್ಯಾಸ ಇಲ್ಲ! ಸಾಯಂಕಾಲಕ್ಕೆ ಹರಿವೆ ಸೊಪ್ಪು, ಕೆಲವು ಕಡಲೆಕಾಯಿಗಳು, ಬಟಾಟೆ, ಆಲೂಹಣ್ಣು ಮತ್ತು ಕೆನೆ—ಇವುಗಳಿಂದ ಅವನು ಹೊಟ್ಟೆ ತುಂಬಿಸಿಕೊಳ್ಳುತ್ತಾನೆ ಶೇಂದಿ ಶರಾಬು ಕುಡಿಯುವದಾಗಲೀ ಚುಟ್ಟಾ ಸಿಗರೇಟು ಸೇದುವದಾಗಲೀ ಇಲ್ಲ.

ತುರ್ಕಿಯ ಸರ್ವಾಧಿಕಾರಿ ಮುಸ್ತಫಾ ಕೆಮಾಲ ಪಾಶನನ್ನು ಬಲ್ಲಿರಷ್ಟೆ? ಅವನೂ ಮಾಂಸವನ್ನು ತಿನ್ನುವದಿಲ್ಲ. ಎಮಿನ ಮೇಲೆ ಅವನಿಗೆ ಪ್ರೇಮವಿದೆ. ಆದರೆ ಬೇಯಿಸಿ ಮಾಡಿದವುಗಳಿಗಿಂತಲೂ ಬೇಯಿಸದ ತರಕಾರಿಗಳನ್ನು ತಿನ್ನುವುದೆಂದರೆ ಅವನಿಗೆ ಬಹಳ ಆಸೆ! ಹೀಗೆ ಅವನೂ ಒಬ್ಬ ಪ್ರಸಿದ್ಧ ಶಾಕಾಹಾರಿಯಾಗಿದ್ದಾನೆ.

ಈಗ್ಗೆ ಹಲವು ವರ್ಷಗಳಿಂದ ತಾನು ಮಾಂಸ ತಿನ್ನುವದನ್ನು ಬಿಟ್ಟಿದ್ದೇನಾಗಿ ನೊನ್ನೆಯ ಒಂದು ಭಾಷಣದಲ್ಲಿ ಇಟಲಿಯ ಸರ್ವಾಧಿಕಾರಿ ಮುಸಲೋನಿಯು ಹೇಳಿದನು. ಹಿಟ್ಲರನಂತೆ ಅವನಿಗೆ ದಿವಸದಲ್ಲಿ ಒಂದೂಟವನ್ನು ಕೇವಲ ಹಣ್ಣು ಹಂಪಲುಗಳನ್ನು ತಿಂದು ಮುಗಿಸಬೇಕೆಂಬ ಆತುರವು ಇರುತ್ತದೆ ಎಲ್ಲಿಯಾದರೂ ಅಪರೂಪವಾಗಿ ಮುಸಲೋನಿ ಸ್ವಲ್ಪ ಮದ್ಯವನ್ನು ಕುಡಿಯುವುದುಂಟು. ಆದರೆ ಅದನ್ನು ಅವನು ಮಿತಿಮೀರಿ ಕುಡಿಯುವದಾಗಲೀ ಆಗಾಗ ಕುಡಿಯುವದಾಗಲೀ ಇರುವದಿಲ್ಲ.

ಈ ಎಲ್ಲಾ ಡಿಕ್ಟೇಟರುಗಳ ಆಹಾರ ಕ್ರಮವು ಒಂದೇ ರೀತಿ ಆಗಿರುವುದನ್ನು ನೋಡಿ ಸಾಮಾನ್ಯ ಜನರು ಆಶ್ಚರ್ಯಪಡಬಹುದು. ಆದರೆ ಆಹಾರತತ್ವವನ್ನು ತಿಳಿದವರಿಗೆ ಮಾತ್ರ ಈ ಕುರಿತು ಆಶ್ಚರ್ಯವಾಗುವುದಿಲ್ಲ. ಯಾಕಂದರೆ ಹಿಟ್ಲರ ಮುಸಲೋನಿ—ಕೆಮಾಲ್ ಸ್ಟಾಲೀನರು ತಿನ್ನುವಂಥ ಆಹಾರವನ್ನು ಬೇರೆ ಯಾರು ಯಾರು ತಿನ್ನುತ್ತಾರೋ ಅವರೆಲ್ಲರೂ ಹಿಟ್ಲರ ಮುಸಲೋನಿ-ಕೆಮಾಲ ಸ್ಟಾಲೀನರಂತೆಯೇ ಆಗುವರೆಂದು ಆಹಾರ ತತ್ವವನ್ನು ತಿಳಿದವರು ಹೇಳುತ್ತಾರೆ.

ಹಾಗಾದರೆ ಶಾಕಾಹಾರಿಗಳಲ್ಲಿ ಯುದ್ಧಾತುರವು ಯಾಕೆ ವಿಶೇಷವಾಗಿ ಕಂಡು ಬರುತ್ತದೆ? ಹಿಟ್ಲರ ಮುಸಲೋನಿಯರು ಅನ್ನವನ್ನು ತಿನ್ನುವರಾದರೂ, ಪ್ರಾಣವನ್ನು ಹೀರುವರು ಯಾಕೆ? ಇದರ ಹಸ್ಯವು ಏನಾಗಿರ ಬಹುದು? ಈ ಕುರಿತು 'ಪಾಯೋನಿಯರ್' ಪತ್ರಿಕೆಯಲ್ಲಿ ಡೂಪರ್ಟ್ ಹ್ಯೂಸ್ ಎಂಬವರು ಬರೆದ ಒಂದು ಲೇಖನವು ಪ್ರಕಟವಾಗಿದೆ. ಅದರ ಸಾರಾಂಶವು ಹೀಗಿದೆ:—

ಪಚ್ಚಡಿ, ಮೀನು ಮತ್ತು ಹಣ್ಣು ಹಂಪಲು ಮೊದಲಾದ ಹಸಿ ಆಹಾರ ಪದಾರ್ಥಗಳಲ್ಲಿ ಆಯೋಡಿನ್ ಉಪ್ಪುಗಳು ವಿಶೇಷವಾಗಿ ಕಂಡು ಬರುತ್ತವೆ. ಥೈರಾಯಿಡ್ ಗ್ರಂಥಿಗಳ ಪೋಷಣೆಗೆ ಈ ಉಪ್ಪುಗಳು ಅವಶ್ಯಕವಾಗಿವೆ. ಈ ಗ್ರಂಥಿಗಳು ವಿಶೇಷವಾಗಿ ಬೆಳೆದರೆ ಮನುಷ್ಯನು ಅತಿರೇಖ ಚಟುವಟಿಕೆಯನ್ನು ತೋರಿಸುತ್ತಾನೆ. ಅವನು ಉಲ್ಲಾಸಿಯೂ ಮುಂಜಾಗ್ರತೆ ಉಳ್ಳವನೂ ಆಗುತ್ತಾನೆ. ಆದರೆ ಅವನಲ್ಲಿ ಕಾರ್ಯಾಪಸರವು ಬಹಳ ಕಂಡುಬರುತ್ತದೆ.

ಸರ್ವಾಧಿಕಾರಿಗಳು ಯಾವಾಗಲೂ ಚಟುವಟಿಕೆ, ಉಲ್ಲಾಸ, ಜಾಗ್ರತೆ, ಇತ್ಯಾದಿ ಗುಣಗಳು ಬಹಳ ಇದ್ದವರಾಗಬೇಕು ಅದ್ದರಿಂದ ಸರ್ವಾಧಿಕಾರಿಗಳಿಗೆ ಆಯೋಡಿನ ಉಪ್ಪುಗಳು ಬಹಳ ಬೇಕಾಗುತ್ತವೆ ಈ ಉಪ್ಪುಗಳು ತರಕಾರಿ ಹಣ್ಣು ಹಂಪಲುಗಳ ಮೂಲಕ ಥೈರೊಯಿಡ ಗ್ರಂಥಿಗಳನ್ನು ಸೇರಿ ರಕ್ತಗತವಾಗಬೇಕಲ್ಲದೆ ಬೇರೆ ಉಪಾಯದಿಂದಲ್ಲ.

ಮಾಂಸವು ಮನುಷ್ಯನನ್ನು ಶಾಂತ ಪ್ರಕೃತಿಯವನನ್ನಾಗಿ ಮಾಡುತ್ತದೆ. ಮಾಂಸವನ್ನು ಹೆಚ್ಚೆಚ್ಚು ತಿಂದಹಾಗೆ ಮನುಷ್ಯನಲ್ಲಿ ಕಾರ್ಯ ತತ್ಪರತೆಯು ಕಡಿಮೆಯಾಗುತ್ತ ಹೋಗುತ್ತದೆ ಮಿತಿಮೀರಿ ಮಾಂಸ ತಿನ್ನುವವರು ಯಾವ ಕೆಲಸಕ್ಕೂ ಬಾರದ ವ್ಯರ್ಥ ಶರೀರಿಗಳು ಆಗುತ್ತಾರೆ.

ನಮ್ಮ ಈ ಪ್ರಪಂಚದಲ್ಲಿ ಇದು ತನಕ ಯುದ್ಧಕ್ಕೆ ಹೋಗದಂಥ ಜನಾಂಗವು ಕೇವಲ ಒಂದು ಮಾತ್ರ ಇರುವದು ಅದೇ ಉತ್ತರ ಧ್ರುವ ವಲಯದಲ್ಲಿ ವಾಸಮಾಡಿಕೊಂಡಿರುವ ಎಸ್ಕಿಮೋಜನಾಂಗ' ಈ ಎಸ್ಕಿಮೊಜನರು ಮಾಂಸವನಲ್ಲದೆ ಬೇರೆ ಏನನ್ನು ತಿನ್ನುವದಿಲ್ಲ ಆದಕಾರಣ ಅವರಲ್ಲಿ ಯುದ್ಧಾತುರವು ಎಳ್ಳಷ್ಟು ಕಂಡು ಬರುವುದಿಲ್ಲ!

ಇತರ ಜನರಿಗಿಂತ ಸ್ಕೇಂಡಿನೇವಿಯದ ಜನರು ಮಾಂಸ ತಿನ್ನುವದು ಹೆಚ್ಚು. ಅದ್ದರಿಂದ ಅವರಲ್ಲಿ ವೈರಾಗ್ಯ ಭಾವವು ಬಹಳ ಕಂಡು ಬರುತ್ತದೆ. ಎಸ್ಕಿಮೊಜನರನ್ನು ಬಿಟ್ಟರೆ ಯುದ್ಧಕ್ಕೆ ಹೋಗದ ಉಳಿದದರಲ್ಲಿ ಅವರೇ ಪ್ರಥಮಸ್ಥಾನವನ್ನು ಪಡೆಯುತ್ತಾರೆ.

ಸ್ಟಾಲಿನ ಕೂಡ ಬಹಳ ಕಡಿಮೆ ಮಾಂಸವನ್ನು ಉಪಯೋಗಿಸುತ್ತಾನೆ. ಆದರೆ ಅವನು ಇತರ ಸರ್ವಾಧಿಕಾರಿಗಳಂತೆ ಹೆಚ್ಚು ಶಾಕಾಹಾರವನ್ನು ಉಪಯೋಗಿಸುವದಿಲ್ಲ. ಅವನ ಆಹಾರ ಕ್ರಮವು ವಿಚಿತ್ರ ಪ್ರಕಾರದ್ದಾಗಿದೆ. ಅವನು ತನಗೆ ಬೇಕಾದ ಉತ್ತೇಜಕ ಪದಾರ್ಥಗಳನ್ನು ಅಂದರೆ ಆಯೋಡಿನ ಉಪ್ಪುಗಳನ್ನು ಇನ್ನೊಂದು ವಿಧದಿಂದ ಸಂಪಾದಿಸುತ್ತಾನೆ.

ಸಕ್ಕರೆ ಗಡ್ಡೆ, ಗಜ್ಜರಿ ಗಡ್ಡೆ ಮತ್ತು ಇತರ ಕೆಲವು ತರಕಾರಿಗಳನ್ನು ಹಾಕಿ ಒಂದು ಬಗೆಯ ಪಲ್ಯವನ್ನು ಮಾಡುತ್ತಾರೆ ಅದರಲ್ಲಿ ಒಂದು ತುಂಡು ಮಾಂಸವೂ ಹುಳಿ ಕಟ್ಟಿದ ಕೆನೆಯೂ ಸೇರಿರುತ್ತದೆ ಈ ಪಲ್ಯವನ್ನೇ ಸ್ಟಾಲೀನನು ಹೆಚ್ಚಾಗಿ ತಿನ್ನುತ್ತಾನೆ ಆದರೆ ತಿನ್ನಬೇಕಾದರೆ ಮೊದಲು, ಅದರೊಳಗಿದ್ದ ಮಾಂಸದ ತುಂಡನ್ನು ಜಾಗ್ರತೆಯಿಂದ ತೆಗೆದು ಒಗೆದು ಬಿಸಾಡುತ್ತಾನೆ. ಆ ಮೇಲೆ ಅವನು ಆ ಪಲ್ಯಕ್ಕೆ ಉಪ್ಪು ಹಾಕುತ್ತ ಹೋಗುತ್ತಾನೆ ಒಂದಾನೊಂದು ಸಮಯಕ್ಕೆ ಪಲ್ಯವು ಬೇರೆ ಯಾರಿಂದಲೂ ತಿನ್ನಲಿಕ್ಕಾಗದಷ್ಟು ಉಪ್ಪಾಗುತ್ತದೆ. ಅಷ್ಟು ಉಪ್ಪು ಉಪ್ಪಾದ ಪಲ್ಯವನ್ನು ಅವನು ಬಹಳ ರುಚಿಯಿಂದ, ಬಾಯಿ ಚಪ್ಪರಿಸುತ್ತ ತಿನ್ನುವನು. ಸುಟ್ಟ ಬ್ರೆಡ್ಡನ್ನು ತಿನ್ನಬೇಕಾದರೂ ಸ್ಟಾಲೀನನು ಅದರ ಮೇಲೆ ಉಪ್ಪಿನ ಪುಡಿಯನ್ನು ಚೆಲ್ಲಿ ಆನಂತರ ಅದನ್ನು ತಿನ್ನುವನು ಉಪ್ಪೇ ಸ್ಟಾಲೀನನ ಮುಖ್ಯ ಆಹಾರವೆನ್ನಬಹುದು.

ಆಗರದ ಉಪ್ಪಿನಲ್ಲಿ ಥೈರೈಯಿಡ್ ಗ್ರಂಥಿಯ ಪೋಷಣೆಗೆ ಬೇಕಾದಂಥ ಆಯೋಡಿನು, ಹಣ್ಣು ಹಂಪಲುಗಳಲ್ಲಿ ಇರುವಂತೆಯೇ ಇರುವಂತೆಯೇ ಇರುತ್ತದೆ. ಈ ಉಪ್ಪನ್ನು ಮಿತಿ ಮೀರಿ ತಿಂದರೆ ಶರೀರದಲ್ಲಿ ಒಂದು ಬಗೆಯ ಅಪ್ಪಾವಾಗಿ ಎಲಕರೋಗವು ಬರುವದು ಆದರೆ ಅದೇ ಹೊತ್ತಿಗೆ ಅದು ಮೆದುಳು ಶಕ್ತಿಯನ್ನು ಚುರುಕುಗೊಳಿಸುತ್ತದೆ

ಅದ್ದರಿಂದ ಸ್ಟಾಲೀನನಿಗೆ ಉಪ್ಪು ದೊರೆಯದಂತೆ ಮಾಡಿದರೂ, ಇತರ ಸರ್ವಾಧಿಕಾರಿಗಳ ಮೇಲೆ ಹೇಳಿದಂಥ ಶಾಕಾಹಾರ ಕ್ರಮವನ್ನು ಬದಲಾಯಿಸಿದರೂ, ಅವರು ತಮ್ಮ ಸರ್ವಾಧಿಕಾರವನ್ನು ಕ್ಷಣ ಮಾತ್ರದಲ್ಲಿ ಕಳಕೊಂಡಾರು.' ಯಾಕಂದರೆ ಆಗ ಅವರಲ್ಲಿ ಸರ್ವಾಧಿಕಾರ ಪಟ್ಟವನ್ನು ನಿರಲಿಕ್ಕೆ ಬೇಕಾದ ಶಾರೀರಿಕ ಮಾನಸಿಕ ಶಕ್ತಿ ಸಾಮರ್ಥ್ಯಗಳು ಉಳಿಯಲಾರವು.

ಮನುಷ್ಯನ ಗುಣ ಸ್ವಭಾವದ ಮೇಲೆ ಆಹಾರದ ದೊಡ್ಡ ಪ್ರಭಾವವು ಬೀಳುತ್ತದೆಂದು ವೈದ್ಯರು ಅನೇಕ ವರ್ಷಗಳಿಂದ ಹೇಳುತ್ತ ಬಂದಿದ್ದಾರೆ. ಆಹಾರ ಕ್ರಮವನ್ನು ಬದಲಾಯಿಸುವದರಿಂದ ಮನುಷ್ಯನ ಗುಣ ಸ್ವಭಾವಗಳನ್ನು ಯೋಗ್ಯತಾ ಯೋಗ್ಯತೆಗಳನ್ನೂ ಬದಲಾಯಿಸ ಬಹುದೆಂದು ಒಬ್ಬಿಬ್ಬರು ಆಹಾರ ತತ್ವಜ್ಞರು ಹೇಳಿದ್ದಾರೆ.

ಆದರೆ ಈ ವಿಷಯದಲ್ಲಿ ಎಲ್ಲರು ಏಕಾಭಿಪ್ರಾಯವುಳ್ಳವರಾಗಿ ಇರುವುದಿಲ್ಲ. ಬೇರೆ ಬೇರೆ ಜನರಲ್ಲಿ ಕಣ್ಣು ಕೂದಲು ಮೊದಲಾದವು ಬೇರೆ ಬೇರೆ ಪ್ರಕಾರ ಇರುವಂತೆ ಗ್ರಂಥಿಗಳೂ ಬೇರೆ ಬೇರೆ ಕ್ರಮದಲ್ಲಿ ಇರುತ್ತವೆ. ಕೆಲವರ ಥೈರೋಯಿಡ ಗ್ರಂಥಿಗಳು ಬಹುಸ್ವಲ್ಪ ಆಯೋಡಿನನ್ನು ಮಾತ್ರ ಗ್ರಹಿಸ ಬಲ್ಲವು ಎಂದು ಬೇರೆ ಕೆಲವು ಡಾಕ್ಟರರು ಹೇಳುತ್ತಾರೆ.

ಹೇಗಿದ್ದರೂ, ಉಪ್ಪನ್ನು ಹೆಚ್ಚಾಗಿ ತಿನ್ನುವ ಮನುಷ್ಯನನ್ನು ಎಲ್ಲಿಯಾದರೂ ಕಂಡಿರಾದರೆ, ಅವನೊಡನೆ ಮರ್ಯಾದೆಯಿಂದ ನಡಕೊಳ್ಳಲಿಕ್ಕೆ ಮರೆಯಬೇಡಿರಿ! ಒಂದಾನೊಂದು ದಿನ ಅವನೂ ಸರ್ವಾಧಿಕಾರ ಪಟ್ಟವನ್ನು ಏರಿ, ಅಲ್ಲಿಂದ ತನ್ನ ಅಧಿಕಾರವನ್ನು ನಡೆಸುತ್ತಿರಬಹುದು' ಪ್ರಪಂಚದಲ್ಲಿ ಹೆಚ್ಚೆಚ್ಚು ಉಪ್ಪು ತಿನ್ನುವವರ ವಿಷಯದಲ್ಲಿ ನೀವು ಬಹಳ ಜಾಗ್ರತೆಯಿಂದ ಇರಬೇಕಾದ್ದು ಅಗತ್ಯ.

ನೋಟಗಳು (ಮುಂದುವರಿದುದು)

ಇಂಡಿಯಾದಲ್ಲೂ ಒಂದು ಜರ್ಮನ್ ನಾಜೀ ಪಕ್ಷವನ್ನು ಸೃಷ್ಟಿಮಾಡುವ ಪೇಚಾಟವನ್ನು ಫಜಲುಲ್ ಹುಕ್ಕರು ಕೈಕೊಂಡು ಏನೇನೋ ಮಾತಾಡುತ್ತಿದ್ದಾರೆ ಒರಿಸ್ಸದ ಮುಸ್ಲಿಮರಿಗೆ "ನಾವೇನು ಯುದ್ಧಕ್ಕೆ ಹೊರಟಿಲ್ಲ ಆದರೆ, ಯುದ್ಧವಾಗ ಬಹುದೆಂದಲ್ಲಿ ನಾವು ಸಿದ್ಧರಾಗ ಬೇಕೆಂದಿರುವೆವು" ಎಂದು ಬೋಧಿಸಿರುವರು ಯಾರೊಡನೆ ಯುದ್ಧವೆಂಬ ಸಂದೇಹವನ್ನು ಅವರು ವಿವರಿಸಲಿಲ್ಲ.

○ ○ ○ ○

"ಹೀಗಿದ್ದರೂ ಸೇಠಜಿ ತಿರಂತಿರುವ ಇಲ್ಲಿನ ಮುಸ್ಲಿಮರು ವಿವಾದಗಳನ್ನು ತೀರ ಪಂಚಾಯತಿಯಲ್ಲೇ ಮುಗಿಸಿದರೆ ಉತ್ತಮವೆಂದೂ, ಯಾವ ಪಕ್ಷದವರೊಡನೆಯೂ ಜಗಳಾಡುವುದು ಹಿತವಲ್ಲವೆಂದೂ" ತಿಳಿಸಿದರು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳೊಳಗೆ ಈಶ ಕೃಪೆಯಿಂದ ಸಂಧಾನವೇನೋ ಆಗಲಿರುವಾಗ ಈ ಹುಲಿಸಿಂಹಗಳು ಯುದ್ಧದ ಪ್ರಸ್ತಾಪವನ್ನೆತ್ತಿ ಕೊನೆಗೆ ಪಂಚಾಯತಿಗೇ ಒಪ್ಪುವುದೂ ಒಂದು ಸಂಗತವಿಚಾರವೇ ಸರಿ!

ಸ್ಲೇವ್ ಐಲೆಂಡ್

"ಲೋಧ್ರ"ದ ಹಲವು ಬಾಟ್ಲುಗಳನ್ನು ನಾನು ಉಪಯೋಗಿಸಿದ್ದೇನೆ. ಅವುಗಳಿಂದ ನನಗೆ ಬಹಳ ಪರಿಹಾರ ದೊರೆಯಿತೆಂದು ಕೇಳಿ ತಮಗೆ ಸಂತೋಷವಾಗಬಹುದು. ನನ್ನ ಈಗಿನ ಕಾಯಿಲೆಗಾಗಿ ನಾನು ಹಿಂದೂಸ್ಥಾನದ ಮತ್ತು ಸಿಲೋನಿನ ಅನೇಕ ಡಾಕ್ಟರುಗಳಿಂದ ಚಿಕಿತ್ಸೆ ಪಡೆಯುತ್ತಿದ್ದೇನೆ. ಆದರೆ ಗುಣವೇನೂ ಆಗಲಿಲ್ಲ.

೧೦ ವೆಲ್ಲನ್ ಪ್ಯಾಸೇಜ್
ಸ್ಲೇವ್ ಐಲೆಂಡ್, ಕೊಲಂಬೊ.

ಶ್ರೀಮತಿ ಥೆರೇಸಾ ಅಂಡ್ರೂ.

ಮಾರಾಟಗಾರರು:— ಕೋಶೆನ ಕುಟೀರ. ಮದರಾಸು.

ಅನುದಿನದ ಐದಾರು ಕಥೆಗಳು

(ಲೇಖಕರು: ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ.)

೧. ನರ ಪಿಶಾಚಿ.

ರಾಧೆಯ ತಂದೆ ರಾಮಣ್ಣನು ಸಾಲದಲ್ಲಿ ಮುಳುಗಿ ಹೋಗಿದ್ದನು.

ಮನೆಯಲ್ಲಿ ಅವನಲ್ಲದೆ ಸಂಪಾದನೆ ಮಾಡಿ ತಂದು ಹಾಕುವವರು ಬೇರೆ ಯಾರೂ ಇರಲಿಲ್ಲ, ರಾಧೆ ಅಡಿಗೆ ಮಾಡುವದು; ಅವನು ತಂದು ಹಾಕುವದು; ಇಬ್ಬರೂ ಕೂಡಿ ತಿನ್ನುವದು.—ಇದು ಅವನ ಮನೆಯ ನಿತ್ಯ ಕ್ರಮವಾಗಿತ್ತು.

ರಾಧೆಯ ತಾಯಿ—ರಾಧೆ ಹುಟ್ಟಿದಾಗಲೇ ಸತ್ತು ಹೋಗಿದ್ದಳು. ಎರಡು ವರ್ಷಗಳ ಹಿಂದೆ ಗಂಡನು ತೀರಿ ಹೋದ್ದರಿಂದ ಬೇರೆ ಕಡೆ ಆಶ್ರಯ ಕಾಣದೆ ರಾಧೆ ತಂದೆಯ ಮನೆಯಲ್ಲಿ ಇರಲಿಕ್ಕೆ ಬಂದಿದ್ದಳು. ಈಗ ಅವಳಿಗೆ 20—22 ವರ್ಷಗಳಾಗಿದ್ದಿರ ಬಹುದು.

ರಾಧೆ ಚೆಲುವೆ, ಓದು ಬರಹವನ್ನು ಕೆಲ್ಪಷ್ಟು ಕಲಿತಿದ್ದಳು. ರಾಮಣ್ಣನು ರೂಪಾಯಿಯ ಲೋಭಕ್ಕೆ ಬಿದ್ದು ಅವಳನ್ನು ಒಬ್ಬ ಮುದುಕನಿಗೆ ಮದುವೆ ಮಾಡಿಕೊಟ್ಟಿದ್ದಲ್ಲವಾದರೆ, ಈಗ ವಿಚಾರವುಳ್ಳ ಯಾವನೇ ಆದರೂ ಸುಶಿಕ್ಷಿತನು ಅವಳನ್ನು ವರದಕ್ಷಿಣೆ ಕೇಳಗೊಳ್ಳದೆ ವಿವಾಹವಾಗುತಿದ್ದನು.

ದಿನದಿನವೂ ರಾಮಣ್ಣನ ಸಾಲದ ಹೊರೆ ಬೆಳೆಯುತ್ತ ಬಂದಿತು. ಸಾಲಗಾರರನ್ನು ಸಮಜಾಯಿಸಲಿಕ್ಕೆ ಬೇರೆ ಯಾವ ಉಪಾಯವನ್ನೂ ಕಾಣದ್ದರಿಂದ ಅವನು ರಾಧೆಯನ್ನು ವ್ಯಭಿಚಾರಕ್ಕೆ ಪ್ರೇರೇಪಿಸಿದನು. ಅವಳನ್ನು ಬಲಾತ್ಕರಿಸಿದನು.

ರಾಧೆ ಮನೆ ಬಿಟ್ಟು ಓಡಿ ಹೋದಳು ಒಂದು ಗಿರಣಿಯಲ್ಲಿ ಕೆಲಸಕ್ಕೆ ನಿಂತಳು

ರಾಮಣ್ಣನು ಅವಳನ್ನು ಅಲ್ಲಿಯೂ ಬಿಡಲಿಲ್ಲ. ಗಿರಣಿಮಾಲಕನು ತನ್ನ ಮಗಳನ್ನು ಹಾರಿಸಿಕೊಂಡು ಹೋಗಿದ್ದಾನೆಂದೂ, ಅವನಿಂದ ನಷ್ಟ ದ್ರವ್ಯ ಕೊಡಿಸಿ ಆಕೆಯನ್ನು ತನ್ನ ವಶ ಮಾಡಿ ಕೊಡಬೇಕೆಂದೂ ಅವನು ಕೋರ್ಟಿನಲ್ಲಿ ಫಿರ್ಯಾದಿ ಮಾಡಿದ

ವಿಚಾರಣೆಯಾಯಿತು ಅದರಲ್ಲಿ ಗಿರಣಿಮಾಲಕನು ನಿರಪರಾಧಿ ಎಂದು ಸಾಬೀತಾಯಿತು. ಅಷ್ಟೇ ಅಲ್ಲ, ರಾಧೆಯು ಕೊಟ್ಟ ಸಾಕ್ಷಿ ಮತ್ತು ಅವಳ ಶರೀರದ ಪರೀಕ್ಷೆ ಮಾಡಿದ ವೈದ್ಯರ ಹೇಳಿಕೆಯಿಂದ, ರಾಮಣ್ಣನು ಅವಳನ್ನು ಮನೆಯಲ್ಲಿದ್ದಾಗ ಬಹುಪರಿಯಾಗಿ ಪೀಡಿಸಿದ್ದನು, ಹೊಡೆದು ಬಡೆದಿದ್ದನು, ಅವಳ ಗುಪ್ತಾಂಗಕ್ಕೆ ಮೆಣಸಿನ ಹುಡಿ ಕೂಡ ಹಾಕಿದ್ದನು, ರಾಧೆ ವ್ಯಭಿಚಾರಕ್ಕೆ ಒಪ್ಪಲಿಲ್ಲವೆಂದು ಅಷ್ಟೆಲ್ಲ ಮಾಡಿದ್ದನು ಎಂದು ಗೊತ್ತಾಯಿತು

ಕೋರ್ಟಿನವರು ರಾಮಣ್ಣನಿಗೆ ತಕ್ಕ ಶಾಸ್ತಿ ಮಾಡಬೇಕೆಂದಿರುವರು. ಆದರೆ ನರ ಪಿಶಾಚಿಗೆ ಎಂಥ ಶಾಸ್ತಿ ಮಾಡಬಹುದು?

೨ ಯಾತ್ರೆಯ ಅನುಭವ

ಮೊನ್ನೆ ಇಬ್ಬರು ಯುವತಿಯರು ಯಾತ್ರೆಗೆ ಹೊರಟಿದ್ದರು, ಅವರು ಶ್ರೀಮಂತ ಮನೆತನಕ್ಕೆ ಸೇರಿದವರು; ಸಾಲದುದಕ್ಕೆ ಕಾಲೇಜು ತನಕ ಓದಿದವರು. ಆದ್ದರಿಂದ ಪ್ರಪಂಚದಲ್ಲಿ ತಮಗೆ ಯಾತರ ಭಯವೂ ಇರುವುದಿಲ್ಲ ಎಂದು ಅವರು ಎಣಿಸಿದ್ದರು. ಆದ್ದರಿಂದ ಒಬ್ಬ ನೌಕರನನ್ನು ಮಾತ್ರ ಸಂಗಡ ಇಟ್ಟುಕೊಂಡು ಅವರು ಯಾತ್ರೆ ಹೊರಟರು.

ರಾತ್ರಿ ಎಂಟು ಘಂಟೆಯ ಸಮಯಕ್ಕೆ ರೈಲು ಯಾತ್ರಾಸ್ಥಾನವನ್ನು ಸೇರಿತು. ಅಪರಿಚಿತ ಊರು. ಆಳು ಸ್ವಲ್ಪ ತಿಂಡಿ ತೀರ್ಥ ತರಲಿಕ್ಕೆ ಹೊರಗೆ ಹೋದನು. ಯುವತಿಯರು ಸ್ಟೇಶನಿನಲ್ಲಿಯೇ ಕೂತುಕೊಂಡರು.

ಆದರೆ ಆಶ್ಚರ್ಯ! ಹತ್ತು ಘಂಟೆ ಸಮಯವಾದರೂ ಆಳಿನ ಪತ್ತೆ ಇಲ್ಲ' ಯುವತಿಯರ ಹೃದಯದಲ್ಲಿ ಸ್ವಲ್ಪ ಸ್ವಲ್ಪ ನಡುಕಕ್ಕೆ ಆರಂಭವಾಯಿತು. ಅಷ್ಟು ಹೊತ್ತಿಗೆ ಒಬ್ಬ ಮಧ್ಯವಯಸ್ಸಿನವನು ಅಲ್ಲಿಗೆ ಬಂದು—'ಯಾವ ಊರಾಯಿತು ಅಮ್ಮಾ!' ಎಂದು ಅವರನ್ನು ಕೇಳಿದ.

ಅವರ ಎಲ್ಲಾ ಸಮಾಚಾರ ತಿಳಿಕೊಂಡು—'ಅಮ್ಮಾ' ಇದು ದೊಡ್ಡ ಊರು. ಆಳು ದಾರಿ ತಪ್ಪಿರ ಬಹುದು ನೀವು ನಮ್ಮ ಕಾರ್ಯಾಲಕ್ಕೆ ಬನ್ನಿ, ದಾರಿತಪ್ಪಿದವರಿಗೆ ದಾರಿ ತೋರಿಸುವದೇ ನಮ್ಮ ಕಾರ್ಯ' ಎಂದನು. ಅವನ ಮಾತು ನಂಬಿ ಯುವತಿಯರು ಅವನನ್ನು ಹಿಂಬಾಲಿಸಿದರು.

ಅವರು ಸೇರಿದ ಮನೆ ಯಾವ ಪರೋಪಕಾರಿಸಂಸ್ಥೆಯ ಕಾರ್ಯಾಲಯವೂ ಅಲ್ಲ. ಅದೊಂದು ವೇಶ್ಯಾಲಯ. ಅದನ್ನು ತಿಳಿದೊಡನೆ ಯುವತಿಯರ ಮುಖಶಾಂತಿ ಕೆಟ್ಟಿತು. ಭಯವು ಹುಟ್ಟಿತು ಅವರು ಉಪಾಯದಿಂದ ತಪ್ಪಿಸಿಕೊಳ್ಳುವ ಆಲೋಚನೆಗೆ ಒಳಗಾದರು.

ಯುವತಿಯರು ವೇಶ್ಯಾವೃತ್ತಿಗೆ ಇಳಿಯುವಂತೆ ಆ ಮಧ್ಯವಯಸ್ಸಿನವನೂ ಅಲ್ಲಿದ್ದ ವೇಶ್ಯೆಯರೂ ಅವರಿಗೆ ನಾನಾರೀತಿಯ ಪ್ರಲೋಭನಗಳನ್ನು ಕೊಟ್ಟರು, ಯುವತಿಯರು ಬಹು ಕಷ್ಟದಿಂದ ಆ ರಾತ್ರಿ ಕಳೆದರು

ಮರುದಿನ ಅವರು ಊರು ನೋಡಬೇಕೆಂದು ಹೊರಟರು. ದಾರಿಯಲ್ಲಿ ಅವರಿಗೆ ನೌಕರನೂ ಸಿಕ್ಕಿದನು. ಅವನನ್ನು ಆ ಮಧ್ಯವಯಸ್ಸಿನವನೇ ದಾರಿ ತಪ್ಪಿಸಿ ಇಡೀ ರಾತ್ರಿ ಅವರನ್ನು ಹುಡುಕುತ್ತಿರುವಂತೆ ಮಾಡಿದ ಸಂಗತಿ ಆಗ ಬಯಲಿಗೆ ಬಂದಿತು

ಯುವತಿಯರು ಪೋಲೀಸಿಗೆ ದೂರು ಕೊಟ್ಟರು. ಸಂಬಂಧಪಟ್ಟವರನ್ನು ಶಿಕ್ಷೆಗೆ ಗುರಿಮಾಡಿದರೆನ್ನಿ. ಆದರೆ ಮುಂದೆ ಅವರಿಗೆ ಯಾತ್ರೆಯೂ ಬೇಡ ಜಾತ್ರೆಯೂ ಬೇಡ ಅನ್ನಿಸಿತು. ಯಾರ ಭಯವಿಲ್ಲದಿದ್ದರೂ ಪ್ರಪಂಚದಲ್ಲಿ ಗೋಮುಖವ್ಯಾಘ್ರರ ಭಯ ಇದ್ದೇ ಇದೆ ಎಂಬುದು ಆಗ ಅವರಿಗೆ ತಿಳಿಯಿತು

೩, ಜೀವನ್ಮುಕ್ತಿ.

ಚೆನ್ನಮ್ಮ ಮತ್ತು ಹೊನ್ನಮ್ಮ—ಇಬ್ಬರು ಅಕ್ಕ ತಂಗಿಯರು ಗುಡ್ಡದಲ್ಲಿ ದನಕರುಗಳನ್ನು ಮೇಯಿಸುತಿದ್ದರು ಮಧ್ಯಾಹ್ನ 12 ಘಂಟೆಯ ಹೊತ್ತಿಗೆ ಅಲ್ಲಿಗೊಬ್ಬ ಭೈರಾಗಿ ಬಂದ ಚಂದದ ಮಾತುಗಳನ್ನಾಡಿಕೊಂಡು ಆ ಹುಡುಗಿಯರನ್ನು ತನ್ನ ಬಿಡಾರಕ್ಕೆ ಕರಕೊಂಡು ಹೋದ

ಅಲ್ಲಿ ಹೋಮಾಗ್ನಿ ಉರಿಯುತಿತ್ತು. ಇನ್ನೊಬ್ಬ ಭೈರಾಗಿ ಕೂತು ಹೋಮ ಕುಂಡದಲ್ಲಿ ಹೋಮದ್ರವ್ಯವನ್ನು ಸುರಿಸುತ್ತ ಏನೋ ವಿಚಿತ್ರ ಮಂತ್ರಗಳನ್ನು ಉಚ್ಚರಿಸುತಿದ್ದರು. ಮೊದಲಿನ ಭೈರಾಗಿ ಆ ಚಿಕ್ಕಹುಡಿಗಿಯರಿಗೆ ಬಾಳೆಹಣ್ಣು ತಿನ್ನಲಿಕ್ಕೆ ಕೊಟ್ಟು, ಕೂತುಕೊಳ್ಳಿಸಿದನು

10—15 ಮಿನಿಟುಗಳು ಕಳೆದ ಮೇಲೆ ಮಂತ್ರ ಪಾರವು ಮುಗಿಯಿತು. ಎರಡನೆ ಭೈರಾಗಿಯು ಕೈಯ್ಯಲ್ಲಿ ಕತ್ತಿ ಹಿಡಿದು ನಿಂತನು. ಮೊದಲನೆಯವನು ಕಿರಿಯವಳೆಯನ್ನು ಕುಂಡದ ಎದುರಿಗೆ ತಂದು ನಿಲ್ಲಿಸಿದನು. ಆ ಕೂಡಲೇ ಅವಳ ತಲೆ ಕಡಿದರು. ರಕ್ತವು ಧಾರೆಕಟ್ಟಿ ಹೋಮಕುಂಡಕ್ಕೆ ಸುರಿಯಿತು.

ಇದನ್ನು ಕಂಡ ಚೆನ್ನಮ್ಮಳು ಭಯ ಭೀತಳಾಗಿ, ಅಲ್ಲಿಂದ ತಪ್ಪಿಸಿಕೊಂಡು, ಕೂಗುತ್ತ ಅರಚುತ್ತ ಓಡಿಹೋದಳು. ಅವಳ ಕೂಗು ಕೇಳಿ ಗ್ರಾಮದ ಜನರು ಭೈರಾಗಿಯ ಬಿಡಾರಕ್ಕೆ ಓಡಿ ಓಡಿ ಬಂದರು ಅಲ್ಲಿ ನೂರಾರು ಜನರು ಬಂದು ಸೇರಿದರು. ಜನರನ್ನು ನೋಡಿ ಇಬ್ಬರೂ ಭೈರಾಗಿಗಳು ಪಲಾಯನ ಮಾಡಲಿಕ್ಕೆ ಪ್ರಯತ್ನಿಸಿದರು ಆದರೆ ಪ್ರಯೋಜನವಾಗಲಿಲ್ಲ

ಭೈರಾಗಿಗಳು ಕೊಲೆಗಾರರೆಂದು ಕೋರ್ಟಿನಲ್ಲಿ ವ್ಯವಹರಣೆ ನಡೆಯಿತು, 'ನಾವು ಕಾಳಿಯ ಭಕ್ತರು ಅವಳನ್ನು ಸಂತುಷ್ಟಗೊಳಿಸಿ ಮುಕ್ತಿ ಪಡೆಯುವದಕ್ಕೋಸ್ಕರ ನಾವು ನರ ಬಲಿ ಕೊಟ್ಟೆವು ನಮ್ಮದೇನೂ ಅಪರಾಧವಿಲ್ಲ. ನಾವು ಕೊಲೆಗಾರರಲ್ಲ' ಎಂದು ಅವರು ವಾದಿಸಿದರು

ಜಡ್ಜರು—'ನೀವು ಪರಲೋಕದಲ್ಲಿ ಮುಕ್ತರಾಗಬೇಕಾಗಿಲ್ಲ, ಇಲ್ಲೇ ಆಗಬಿಡಿ ಎಲ್ಲಾ ಮುಕ್ತಿಗಿಂತ ಜೀವನ್ಮುಕ್ತಿ ದೊಡ್ಡದು' ಎಂದು ಹೇಳಿ ಅವರಿಗೆ ಮರಣದಂಡನೆಯನ್ನು ಕೊಟ್ಟರು! ಇಬ್ಬರೂ ಭೈರಾಗಿಗಳು ಗಲ್ಲೇರಿದರು ಅಂಥ ವಿಶ್ವಾಸದ ಫಲ'

೪ ಒಲಿದಾನ

ಬೆಳಗ್ಗೆ ಎಂಟು ಘಂಟೆಯ ಸಮಯ ಪಾರ್ಕಿನಲ್ಲಿ ವಿಹರಿಸುತಿದ್ದಾಗ ಒಂದು ಭಯಂಕರ ದೃಶ್ಯವನ್ನು ನೋಡಿದೆ

ಕುಮಾರ—ಕುಮಾರಿಯರು ಆಲದ ವೃಕ್ಷದ ಕೆಳಗೆ ಸತ್ತು ಬಿದ್ದಿದ್ದರು ಅವರ ಒಬ್ಬರನ್ನೊಬ್ಬರು ಅಪ್ಪಿಕೊಂಡಿದ್ದರು. ಸಮೀಪದಲ್ಲಿ ಅಫೀಮು ಕಟ್ಟಿದ ಒಂದು ಕಾಗದದ ಚೂರು ಇದ್ದಿತು

ಕುಮಾರಿ ಆನಂದರಾಯರ ಮಗಳು. ಕುಮಾರನು ನರ್ಸಪ್ಪಯ್ಯನ ಮಗ ಅವರ ಮನೆಗಳು ಅಕ್ಕ ಪಕ್ಕದಲ್ಲಿದುವು. ಅವರಿಬ್ಬರು ಬಾಲ್ಯದಿಂದಲೂ ಒಡನಾಡಿಕೊಂಡಿದ್ದವರು, ಒಂದೇ ಶಾಲೆಯಲ್ಲಿ ಓದಿದವರು, ಒಂದೇ ತೊಡೆಯಲ್ಲಿದ್ದು ಬೆಳೆದವರು. ಯವ್ವನಾವಸ್ಥೆಯಲ್ಲಿ ಕಾಲಿಡುವಾಗ ಅವರಿಬ್ಬರೊಳಗೆ ಪರಸ್ಪರ ವಿವಾಹವಾಗಿ ಚಿರಕಾಲದಾಂಪತ್ಯ ಸುಖವನ್ನು ಅನುಭವಿಸಬೇಕೆಂದಿದ್ದರು.

ಆದರೆ ಪ್ರಾರಬ್ಧ! ಆನಂದರಾಯರು ಕುಮಾರಿಯನ್ನು ಬೇರೊಂದು ಕಡೆಕೊಡುವದೆಂದು ನಿರ್ಣಯಿಸಿದರು. ಅವರ ನಿರ್ಣಯವನ್ನು ಬದಲಾಯಿಸುವದು ಉಂಟುಮಾಡಿದ ಬ್ರಹ್ಮನು ಬಂದರೂ ಸಾಧ್ಯವಿರಲಿಲ್ಲ ಕುಮಾರ ಕುಮಾರಿಯರು ಜೀವನದಲ್ಲಿ ನಿರಾಶೆಯನ್ನಲ್ಲದೆ ಬೇರೆ ಏನನ್ನೂ ಕಾಣಲಿಲ್ಲ. ಅವರಿಗೆ ಬದುಕುವದು ಬೇಡವೆನ್ನಿಸಿತು.

ಆದ್ದರಿಂದ ಅವರು ಪ್ರೇಮದ ವೇದಿಯ ಮೇಲೆ ಬಲಿಯಾದರು!

ಪೋಲೀಸಿಗೆ ವದಂತಿ ಹೋಯಿತು ಅವರು ಬಂದು ಶವ ಪರೀಕ್ಷೆ ಮಾಡಿದರು. ಕುಮಾರನ ಅಂಗಿಯ ಕಿಸೆಯಲ್ಲಿ ಕುಮಾರಿ ಒರೆದ ಒಂದು ಕಾಗದವಿದ್ದಿತು —'ಹೃದಯವನ್ನು ಒಬ್ಬನಿಗೆ ಅರ್ಪಿಸಿದ ನಂತರ ಅದನ್ನು ಇನ್ನೊಬ್ಬರಿಗೆ ಮಾರುವದು ಭಾರತಿಯ ಲಲನೆಯರ ಜೀವನಾದರ್ಶವಲ್ಲ ಆದರೆ ತಂದೆಯವರು ಮಾತ್ರ ಹೀಗೆ ಮಾಡಬೇಕೆಂದು ನನ್ನನ್ನು ಒತ್ತಾಯಿಸುತಿದ್ದಾರೆ ಈಗ ನನಗೆ ಪ್ರಾಣಕೊಟ್ಟು ಸತೀತ್ವವನ್ನು ಕಾಪಾಡುವದಲ್ಲದೆ ಬೇರೆ ಉಪಾಯವು ತೋರುವದಿಲ್ಲ ಆದಕಾರಣ ಕಡೆಸಮಯಕ್ಕೆ ನಿಮ್ಮನ್ನೊಮ್ಮೆ ನೋಡಬೇಕೆಂದಿದ್ದೇನೆ ಎಂದು ಬರೆದಿದೆ'

ಜಗನ್ಮೋಹನ ಭವನದಿಂದ
ವಿದುರಾಶ್ವತ್ಥಕ್ಕೆ

'ವಿಶ್ವಕರ್ನಾಟಕ'ದಲ್ಲಿ ಪ್ರಕಟವಾದ ಕೆಲವು ಪ್ರಧಾನ ಲೇಖನಗಳ ಸಂಗ್ರಹ

ಎಲ್ಲರೂ ಅಗತ್ಯವಾಗಿ ಓದಬೇಕಾದ ಪುಸ್ತಕ

ಸಾಧಾರಣ ಪ್ರತಿ 0–8–0 ಅಂಚೆವೆಚ್ಚ 0–1–6

ಉತ್ತಮ ಪ್ರತಿ 1–0–0 ಅಂಚೆ ವೆಚ್ಚ 0–2–0

ಅಪೇಕ್ಷಿಸುವವರು ಹಣವನ್ನು ಮುಂಗಡವಾಗಿ ಕಳುಹಿಸಬೇಕು ಪ್ರತಿಗಳನ್ನು ವಿ ಪಿ ಮೂಲಕ ಕಳುಹಿಸುವದಿಲ್ಲ ಸ್ವಲ್ಪವೇ ಪ್ರತಿಗಳಿರುವುದರಿಂದ ಇಂದೇ ವಿಶ್ವಕರ್ನಾಟಕ ಕಾರ್ಯಾಲಯ (ಬೆಂಗಳೂರು ನಗರ)ಕ್ಕೆ ಬರೆದು ತರಿಸಿಕೊಳ್ಳಿ

ಮೆನೇಜರ್, 'ವಿಶ್ವಕರ್ನಾಟಕ'
ಬೆಂಗಳೂರು ನಗರ

--ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.

ಧೂಳು ಮತ್ತು ಕೊಳೆಯಲ್ಲಿರುವ ಸಾಧಾರಣವಾದ ಅಣುಗಳೊಳಗೆ ಅಡಗಿಕೊಂಡಿರುವ ಕ್ರಿಮಿಗಳು ಮೃತ್ಯುಕಾರಕವಾದ ದೀರ್ಘ ಖಾಯಿಲೆಗಳನ್ನು ತರಬಲ್ಲವು. ಈ ಅಪಾಯದಿಂದ ನೀವೂ ನಿಮ್ಮ ಪ್ರೇಮಪಾತ್ರರೂ ತಪ್ಪಿಸಿಕೊಂಡು ಸುರಕ್ಷಿತವಾಗಿರಬೇಕಾದರೆ ಲೈಫ್ ಬಾಯ್ ಸೋಪನ್ನು ಉಪಯೋಗಿಸಿರಿ. ಯಾಕೆಂದರೆ ಅದರ ನೊರೆಯು ಕೊಳೆಯನ್ನು ತೊಳೆದು ಕಳೆಯುವುದಲ್ಲದೆ ಖಾಯಿಲೆಯ ಕ್ರಿಮಿಗಳನ್ನೂ ನಾಶಪಡಿಸುವುದರಿಂದ ಆರೋಗ್ಯಕ್ಕೆ ಅದೊಂದು ರಕ್ಷೆಯಂತಿರುವುದು

ಲೈಫ್‌ಬಾಯ್ ಸೋಪು

ಆರೋಗ್ಯವನ್ನು ಕಾಪಾಡುತ್ತದೆ.

ಅಪ್ಪಟ ಸ್ವಚ್ಛಸಂಬಂಧ ಎಣ್ಣೆಯಿಂದಲೇ ಹಿಂದೂದೇಶದಲ್ಲಿ ತಯಾರಾದ್ದು.

LEVER BROTHERS (INDIA)

ಮಂಗಳೂರು ವಾರ್ತೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಮಂಗಳೂರು ವ್ಯಾಯಾಮ ಶಿಕ್ಷಣದ ಪರಿಷತ್ತು.

ಶ್ರೀ. ಎ. ಬಿ. ಶೆಟ್ಟಿ, ಎಮ್. ಎಲ್. ಸಿ., ಇವರ ಅಧ್ಯಕ್ಷತೆಯಲ್ಲಿ ಈ ಪರಿಷತ್ತು ಕೆನರಾ ಹೈಸ್ಕೂಲಲ್ಲಿ ಸೇರಿತು.

ಮುನಿಸಿಪಲ್ ಕೌನ್ಸಿಲರರು ಶ್ರೀ ವಿಟ್ಠಲ ಶೆಟ್ಟರು ಸ್ವಾಗತಭಾಷಣ ಮಾಡುತ್ತ, ಈಗ ಶಾಲೆಗಳಲ್ಲಿ ವ್ಯಾಯಾಮ ಶಿಕ್ಷಣಕ್ಕೆ ಸವತಿಸ್ಯಾಯದಿಂದ ಕಾಣುತ್ತಿರುವರು, ವಾರದಲ್ಲಿ ಒಂದೆರಡು ಪೀರಿಯಡು ಮಾತ್ರ ವ್ಯರ್ಥವಾಗಿ ಕಳೆಯುವ ವ್ಯಾಯಾಮವೇ ಅವರಿಗೆ ಶಾಲೆಯಲ್ಲಿ ದೊರೆತು, ಆಟದಲ್ಲಿ ಅಥವಾ ವ್ಯಾಯಾಮದಲ್ಲಿ ಅವರಿಗೆ ಯಾವ ಅಭಿರುಚಿಯೂ ಇಲ್ಲದಂತೆ ಪರಿಣಮಿಸುತ್ತದೆ. ವ್ಯಾಯಾಮ ಶಿಕ್ಷಕರನ್ನು ಬಿಸೋ. ಹೊರಗಿನವರಂತೆ ಅಸಡ್ಡೆಯಿಂದ ಕಾಣುತ್ತಾರೆ. ಅವರಿಗೆ ಸಂಬಳವೂ ಕಡಿಮೆ. ಅವರಿಗೆ ಸಂಬಳ ಸರಿಯಾಗಿರುವಲ್ಲಿ ಉತ್ತಮ ಕೆಲಸವನ್ನು ನಿರೀಕ್ಷಿಸಬಹುದು. ಎಷ್ಟೋ ಶಾಲೆಗಳಲ್ಲಿ ಯೋಗ್ಯ ಶಿಕ್ಷಕರೇ ಇರುವುದಿಲ್ಲ. ವಾರ್ಧಾಯೋಜನೆಯಲ್ಲಿ, ಪ್ರತ್ಯಕ್ಷಾನುಭವಕ್ಕಾಗಿ ಚಟುವಟಿಕೆಗಳಿರುವ ಕಾರಣ ಉದ್ಯೋಗದ ಗೌರವವನ್ನೂ ಕಲಿಸುವುದರ ಜತೆಗೆ ಜ್ಞಾನವೂ ದೊರೆಯಂತಾಗಿದೆ. ಅವರೂ, ಶರೀರದ ಬೆಳವಣಿಗೆಗೆ ಆವಶ್ಯಕವಾದ ಚಟುವಟಿಕೆ ಆಟ ನೋಡಲಾದುವುಗಳಿಗೆ ಸ್ಥಾನವಿಲ್ಲದುದು ಸರಿಯಲ್ಲ. ಹತ್ತು ನಿಮಿಷದಂತೆ ದಿನಕ್ಕೆ ವ್ಯಾಯಾಮವೆಂದರೆ ಅದರಿಂದ ಫಲವಿಲ್ಲ ಎಂದರು.

ಜಿಲ್ಲಾ ವಿದ್ಯಾಧಿಕಾರಿಗಳು ಈ ಪರಿಷತ್ತಿನ ಕಾರ್ಯಾರಂಭ ಮಾಡಿ ಭಾಷಣವಿತ್ತರು. ಪ್ರತಿಯೊಂದು ಜನಾಂಗದಲ್ಲಿ ವ್ಯಾಯಾಮಶಿಕ್ಷಣಕ್ಕೆ ಹೆಚ್ಚಿನ ಶ್ರದ್ಧೆಯಿದೆ. ಅದು ಯುದ್ಧಕ್ಕಾಗಿ ಸನ್ನಾಹವೇನೂ ಅಲ್ಲ. ಜನರಿಗೆ ಹಿಡಿದ ಭ್ರಾಂತಿಯೂ ಅಲ್ಲ. ಯುದ್ಧಕಾಲದಲ್ಲಿ ಬ್ರಿಟನಿಗೆ ಯೋಗ್ಯ ಜವಾನರು ಸಿಗದಿದ್ದಾಗ ಜನರಲ್ಲಿ ವ್ಯಾಯಾಮ ಶಿಕ್ಷಣವನ್ನು ಪ್ರಚಾರಮಾಡಬೇಕೆಂಬ ಜ್ಞಾನವು ಉಂಟಾಯಿತು. ಅಲ್ಲಿಂದ ಮುಂದೆ ಜನತೆಯಲ್ಲಿ ವ್ಯಾಯಾಮದ ಕಡೆಗೆ ಮನಸ್ಸು ಕೊಡುವಂತಾಯಿತು. ನಮ್ಮಲ್ಲಿ ಮಾತ್ರ ನಾವು ಇದುವರೆಗೆ ಈ ಭಾಗದಲ್ಲಿ ಮಾಡಿದ್ದೇನೂ ಇಲ್ಲ. ಇನ್ನೂ ಇನ್ನೂ ದುರ್ಬಲರಾಗುತ್ತಲಾಗಿಯೇ ಬೆಳೆಯುತ್ತಿದ್ದೇವೆ. ಶಿಕ್ಷಣ ಕ್ರಮಕ್ಕೂ ಆರೋಗ್ಯಕ್ಕೂ ಇರುವ ಸಂಬಂಧವನ್ನು ನಾವಿನ್ನೂ ತಿಳಿದಿಲ್ಲ. ಸರಕಾರವು ಮಾಡಿಲ್ಲ. ಶ್ರೀ ಶೆಟ್ಟರು ಅಧ್ಯಕ್ಷಸ್ಥಾನದಿಂದ ಹೇಳಿದ ಮಾತುಗಳು ಅವುಗಳಲ್ಲಿ ಅನುಮೋದಿಸಿವೆ. ಪ್ರಜಾಸತ್ತೆಯು ಪ್ರಾಮುಖ್ಯ ಕರ್ತವ್ಯವಾಗಿ ಪ್ರಜೆಗಳ ಆರೋಗ್ಯ ಕ್ಷೇಮ ವಿಚಾರ ಮಾಡಬೇಕಾಗಿದೆ. ನಮ್ಮ ವಿದ್ಯಾರ್ಥಿಗಳ ದೇಹಸ್ಥಿತಿಯು ನೆಟ್ಟಗಿಲ್ಲದಿರುವುದಕ್ಕೆ ಅವರ ಬಡತನವೂ ಆಹಾರದ ದೌರ್ಬಲ್ಯವೂ ಕಾರಣವಾಗಿದೆ. ಶಾಲೆಗಳಲ್ಲಿ ವ್ಯಾಯಾಮದ ಬಳಿಕ ಊಟವನ್ನು ವಿದ್ಯಾರ್ಥಿಗಳಿಗೆ ಕೊಡುವುದು ಆಗತ್ಯವಾಗಿದೆ. ಅದರ ಖರ್ಚಿಗೇನು ಮಾಡೋಣ? (ಸಿದ್ಧ ಮ್ಯುನಿಸಿಪಾಲಿಟಿ ಏನು ಮಾಡಿ ಕೃತಾರ್ಥವಾಗಿದೆ? ಹಾಗೆಯೇ ಇಲ್ಲೇಕೆ ಕೂಡದು?) ಜನತೆಯ ಬಳಿ ಪ್ರಾಯದ ಬೆಂಬಲವಿರುವಲ್ಲಿ ಎಲ್ಲವೂ ಸಾಧ್ಯವಾದೀತು. ಡ್ರಿಲ್ ಮಾಸ್ತರರಿಗೆ ಉತ್ತಮ ವೇತನ ಸ್ಥಾನಾದಿಗಳನ್ನು ಕೊಡದೆ, ಜನಾಂಗದ ಬೆಳವಣಿಗೆಗೆ ಅವರ ಸಹಾಯವೇನೂ ಆಗಲಾರದು. ಇದಕ್ಕಾಗಿ ವ್ಯಾಯಾಮ ಶಿಕ್ಷಣವನ್ನು ವಿಷಯವನ್ನಾಗಿ ಇಟ್ಟು ಆಮೋದಕದಲ್ಲಿರುವಂತೆ, ವಿದ್ಯಾರ್ಥಿಗಳಿಗೆ ಅದರಲ್ಲಿ ಒಂದು ಪರೀಕ್ಷೆಯಾಗಬೇಕು. ಹಾಗೆ ಮಾಡಿದರೆ, ವಿದ್ಯಾರ್ಥಿಗಳು ವ್ಯಾಯಾಮವನ್ನು ತೆಗೆದುಕೊಳ್ಳಲು ಸಿದ್ಧರೂ ಆಸಕ್ತಿಹೊಂದುವವರೂ ಆಗುವರು. ಮಕ್ಕಳಿಗೆ ನಗರಗಳಲ್ಲಿ ಆಟದ ಬಯಲುಗಳನ್ನು ಸರಕಾರವು ಒದಗಿಸಿಕೊಡಬೇಕು. ಈಗ ಹಳ್ಳಿಗಳಲ್ಲಿ ಸಹ, ಸಾರ್ವಜನಿಕವಾಗಿ ಆಟಗಳನ್ನು ನಡೆಸಬೇಕೆಂದು ಪೋಲೀಸ್ ಇಲಾಖೆಯವರಿಂದ ಶಿಕ್ಷಣಕೊಡಲು ಸರಕಾರವು ಸಿದ್ಧವಾದುದು ಉತ್ತಮವೇ ಎಂಬಿತ್ಯಾದಿ ವಚನಗಳಿಂದ ಅಧ್ಯಕ್ಷರು ಉತ್ತೇಜನ ಕೊಟ್ಟರು.

ಆರೋಗ್ಯ ಇಲಾಖೆಗೆ ಈ ಅಧ್ಯಕ್ಷರೇ ಪಾರ್ಲಿಮೆಂಟರಿ ಸೆಕ್ರೆಟರಿಯಾಗಿರುವ ಕಾರಣ, ಇವರಿಂದ ಪ್ರಾಂತ್ಯದ ಆರೋಗ್ಯವರ್ಧನೆಗೆ ಸಹಾಯವಾಗಿ ವ್ಯಾಯಾಮ ಶಿಕ್ಷಣವು ಸಾಗಬಹುದೆಂದು ತೋರುತ್ತದೆ. ಖಾಸಗಿಯಾಗಿರುವ ಬಾಲಮಾರುತೀ ವ್ಯಾಯಾಮ ಮಂಡಲದಂತಹ ವ್ಯಾಯಾಮ ಶಾಲೆಗಳಿಗಾದರೂ ಸರಕಾರವು ಯೋಗ್ಯ ಪ್ರೋತ್ಸಾಹವನ್ನು ಏಕೆ ಕೊಡಬಾರದು?

ಪಂಡಿತ ಸಭಾ ನಿರ್ಣಯಾದಿಗಳು

ತಿರುಪತಿ ದೇವಸ್ಥಾನದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿರುವ ಶ್ರೀ. ಎಮ್. ಎಸ್. ಕೋಟೀಶ್ವರರವರು ಮದ್ರಾಸು ಪ್ರಾಂತಿಕ ಪಂಡಿತ ಪರಿಷತ್ತಿನ ಅಧ್ಯಕ್ಷರಾಗಿ ಮಂಗಳೂರಲ್ಲಿ ಸೇರಿದ ಅಧಿವೇಶನದ ಕಾರ್ಯಗಳನ್ನು ನಡೆಸಿದರು.

ಸ್ಯಾಂಟ್ ಎಲೋಶಿಯಸ್ ಕಾಲೇಜಿನ ಶ್ರೀ ಆನಂತಭಟ್ಟರು, ಸ್ವಾಗತಾಧ್ಯಕ್ಷರಾಗಿ ಪಂಡಿತರು ತಮ್ಮ ಅಭ್ಯುದಯವನ್ನು ಸಾಧಿಸುವಲ್ಲಿ ಮಾಡುತ್ತಿರುವ ಪ್ರಯತ್ನಗಳಲ್ಲಿ ಒಂದುಗೂಡಿ ಮಾಡುವಂತೆ ಪ್ರಾರ್ಥಿಸಿದರು.

ದಕ್ಷಿಣಭಾರತ ಶಿಕ್ಷಕ ಸಮಿತಿಯ ಶ್ರೀ ಎಮ್. ಎಸ್. ಸಭೇಶನ್‌ರವರು, ಪರಿಷತ್ತನ್ನು ತೆರೆದ ಸಮಾರಂಭದಲ್ಲಿ ಪಂಡಿತರು ಭಾಷಾಶಾಸ್ತ್ರ ನಿಪುಣರಾಗಿರುವ ಕಾರಣ ಭಾಷಾಪಾಠಗಳನ್ನೇ ಅಲ್ಲದೆ ಚರಿತ್ರೆ ಭೂಗೋಲಶಾಸ್ತ್ರಾದಿಗಳನ್ನು ಕಲಿಸಲೂ ಯೋಗ್ಯರಾಗಿರುವಂತೆ ಅಭ್ಯಸಿಸಬೇಕೆಂದೂ ಹಾಗೆ ಮಾಡಿದ್ದಲ್ಲಿ, ದೇಶಭಾಷೆಗಳ ಮೂಲಕವೇ, ಹೈಸ್ಕೂಲು ಕಾಲೇಜುಗಳಲ್ಲಿ ಸಹ ಈ ವಿಷಯಗಳನ್ನು ಅವರು ದೇಶಭಾಷೆಗಳ ಮೂಲಕ ಕಲಿಸಲು ಸುಲಭಸಾಧ್ಯವಾಗುವಂತೆ ಮಾಡಿ ಕೊಡಬಹುದು.

ಅಧ್ಯಕ್ಷರು—ಈ ಪರಿಷತ್ತಿನಲ್ಲಿ ಒಂದೇ ಭಾಷೆಯಿಂದ ಮಾತಾಡಲು ಬಲು ಕಷ್ಟವಾಗಿ ತೋರಿಸುದರಿಂದ, ಹಿಂದಿಯನ್ನು ಸರ್ವರೂ ಕಲಿತುಕೊಳ್ಳುವುದು ಉತ್ತಮ. ಪಂಡಿತರಿಗೂ ಇತರ ಉಪಾಧ್ಯಾಯರಿಗೂ ವೇತನ ಸ್ಥಾನ ಮೊದಲಾದುವುಗಳಲ್ಲಿ ಭೇದಗಳಿರುವುದು ಶೋಚನೀಯವಾಗಿದೆ ಎಂದೂ, ಉಭಯತರಿಗೂ ಒಂದೇ ಬಗೆಯ ಸ್ಥಾನಮಾನಗಳು ಸಿಗುವಂತಾಗಬೇಕೆಂದೂ, ನಿರೀಕ್ಷಿಸಿದರು. ಎರಡು ಅಥವಾ ಹೆಚ್ಚು ಭಾಷೆಗಳಿವೆ ಎಂಬ ಕಾರಣದಿಂದ ಅಂತಹ ಪ್ರದೇಶಗಳಲ್ಲಿ ಇಂಗ್ಲಿಷಿನಲ್ಲಿ ಶಿಕ್ಷಣ ನಡೆಸ ಬೇಕೆಂದು ಕಾಂಗ್ರೆಸ್ ಸರಕಾರವು ಸಹ ನಿರ್ಣಯಿಸುವುದು ಶೋಚನೀಯವಾಗಿದೆ. ಸಂಸ್ಕೃತದ ಶಿಕ್ಷಣಕ್ರಮವನ್ನು ತಿದ್ದುವುದರಲ್ಲೂ ಪಂಡಿತರು ಶ್ರಮಿಸಬೇಕೆಂದೂ ಭಾಷೆಯ ಜತೆ ಇತರ ವಿಷಯಗಳನ್ನು ಸಹ ಅವರು ಕಲಿಯಬೇಕೆಂದೂ ಆದಕ್ಕಾಗಿ ಅಂತಹ ವಿಷಯಗಳನ್ನು ಕಲಿಸಲು ಅಗತ್ಯವಾಗಿರುವ ಶಬ್ದಕೋಶವನ್ನು ಅವರು ರಚಿಸಬೇಕೆಂದೂ ಹಾಗೆ ಮಾಡಿದ್ದಲ್ಲಿ ಅವರಿಗಿಂತ ಉತ್ತಮ ... ಯನ್ನು ಹೊಂದಿರುವ ಇತರ ಉಪಾಧ್ಯಾಯ ವೃಂದದಲ್ಲಿ ಅವರು ಗಣನೆಗೆ ಬಂದ ಸರಕಾರದಿಂದಲೂ ಗೌರವಹೊಂದ ಬಹುದೆಂದೂ ವಿವರಿಸಿ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪಾಧ್ಯಾಯರ ಸಾಮಾನ್ಯ ಸಭೆಯ ... ಶ್ರೀ ಎಂ. ಎಸ್. ಏಕಾಂಬರರಾಯರು, ಅವರ ಪ್ರಿನ್ಸಿಪಾಲರಾಗಿಯೂ ಶ್ರೀ ಕೆ. ಪಿ. ನರಸಿಂಹ ವೆಂಕಟೇಶ ಶೆಣೈಯವರು ವೈಸ್ ಪ್ರೆಸಿಡೆಂಟರಾಗಿಯೂ ಶ್ರೀ ಎಸ್. ಕುಂದರಾಯರು ಸೆಕ್ರೆಟರಿಯವರಾಗಿಯೂ ಶ್ರೀ ಬಿ. ರಾಮರಾಯ ಶೆಟ್ಟಿಯವರು ... ಕಾರ್ಯದರ್ಶಿಗಳಾಗಿಯೂ ಶ್ರೀ ಯಸ್. ರಾಮಚಂದ್ರ ಅಯ್ಯರವರು ಟ್ರೆಜರರಾಗಿಯೂ ಆರಿಸಲ್ಪಟ್ಟರಲ್ಲದೆ ದಕ್ಷಿಣ ಇಂಡಿಯದ ಟೀಚರ್ಸ ಯೂನಿಯನಿನ ರಕ್ಷಣಾ ಫಂಡಿಗೆ ಇಲ್ಲಿಯ ಉಪಾಧ್ಯಾಯರು ಸೇರುವಂತೆಯೂ ಪ್ರಯತ್ನಗಳು ನಡೆದಿವೆ.

ಈ ಬಾರಿಯ ಯುನಿವರ್ಸಿಟಿಯ ವಿದ್ವಾನ್ ಫೈನಲ್ ಪರೀಕ್ಷೆಯಲ್ಲಿ ಶ್ರೀಗಳಾದ ಕಲ್ಯಾಣಿ ಸುವರ್ಣ, ಕೆ. ಯಮ್. ಸುಬ್ರಾಯನ್ ಬಿ. ವೆಂಕಟಲಕ್ಷ್ಮಿ ಕರ್ನಾಡು ಪೋಲಿಯಾರ ಕೃಷ್ಣ ಪ್ರಿಯವಿನಾಯ್ಕಲ್ಲಿ ಶ್ರೀ ಕೆ. ಸುಶಿಲಾ ಬಾಯಿ ಇವರುಗಳು ತೇರ್ಗಡೆ ಹೊಂದಿರುವರೆಂದು ತಿಳಿದುಬರುತ್ತದೆ.

ಮಂಗಳೂರು ಕೆಥೋಲಿಕ್ ಬ್ಯಾಂಕಿನ ರಜತೋತ್ಸವವು ಕಳೆದ ಆದಿತ್ಯವಾರ ಎಂ. ಜೆ. ಎ. ಸಾಲ್ಡಾನಾರ ಅಧ್ಯಕ್ಷತೆಯಲ್ಲಿ ಜರುಗಿತು.

ಇಲ್ಲಿಯ ಥಿಯಾಸಾಫಿಕಲ್ ಕೆನ್ವೆನ್ಶನ್ ಕಳೆದ ತಾ. 19 ಗುರುವಾರ ಸಂಜೆ ಗಂಟೆ ೫ಕ್ಕೆ ಇಲ್ಲಿ ಥಿಯಾಸಾಫಿಕಲ್ ಲೋಜಿನಲ್ಲಿ ಸ್ವಾಮಿ ಭರತಾನಂದರವರ ಅಧ್ಯಕ್ಷತೆಯಲ್ಲಿ ಜರುಗಿತು.

ಮಂಗಳೂರು ಸ್ಯಾಂಟ್ ಎಲೋಶಿಯಸ್ ಕಾಲೇಜಿನ ಈ ವರ್ಷದ ಪರೀಕ್ಷೆಗಳ ಫಲಿತಾಂಶ:—

ಬಿ. ಎ. ಸಂಪೂರ್ಣ	63ರಲ್ಲಿ 36	
ಇಂಗ್ಲಿಷು	67ರಲ್ಲಿ 44	II ಕ್ಲಾಸು 1
II ಭಾಷೆ	73 „ 56	I ಕ್ಲಾಸು 1
		II ಕ್ಲಾಸು 5.
ಮೆಥಮೆಟಿಕ್ಸ್	6 „ 6	II ಕ್ಲಾಸು 2
ಫಿಸಿಕ್ಸ್	19 „ 15	I ಕ್ಲಾಸು 2.
		II ಕ್ಲಾಸು 4.
ಕೆಮಿಸ್ಟ್ರಿ	18 „ 13.	II ಕ್ಲಾಸು 5
ಇಕೊನೊಮಿಕ್ಸ್	26 „ 25	II ಕ್ಲಾಸು 1

(ಉಳಿದ ಭಾಗಗಳು III ಕ್ಲಾಸಿನಲ್ಲಿ)

ಇಂಟರ್ ಮಿಡಿಯಟ್:

ಪರೀಕ್ಷೆಗೆ ಹೋದವರು 101. ಪಾಸ್, 54 ಸಂಪೂರ್ಣ, I ಭಾಗದಲ್ಲಿ 72; II ಭಾಗದಲ್ಲಿ 80, III ಭಾಗದಲ್ಲಿ 66. ಇವರಲ್ಲಿ 12 ...

ತಾಲೂಕುಗಳಿಂದ ವಾರ್ತೆ

ಕಾರ್ಕಳ:— ಇಲ್ಲಿಯ ಡಾ॥ ನಾರಾಯಣ ರಾಯರ ಪ್ರಥಮ ಪುತ್ರಿ ಶ್ರೀ ಕಮಲಾಬಾಯಿಯವರು ಮದ್ರಾಸು ಯುನಿವರ್ಸಿಟಿಯ ಸಾಹಿತ್ಯ ಶಿರೋಮಣಿ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲಾ ಸ್ತ್ರೀವರ್ಗದಲ್ಲಿ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರೆಂದರೆ ಇವರೇ ಮೊದಲನೆಯವರು.

ಇವರ ತಂಗಿ ಶ್ರೀಮತಿ ಸುಶೀಲಾಬಾಯಿಯವರು ಮದ್ರಾಸು ಯುನಿವರ್ಸಿಟಿಯ ವಿದ್ವಾನ್ ಪ್ರಿಲಿಮಿನರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಮುಂದ್ರಾಂತ ಕೇಂದ್ರ ಕಾಂಗ್ರೆಸ ಕಮಿಟಿಯ ಸಭೆಯು ಶ್ರೀ ಯಂ ಧರ್ಮರಾಜ ಅತಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿ ಕಾಂಗ್ರೆಸ್ ಸದಸ್ಯರನ್ನು ಮಾಡುವ ಬಗ್ಗೆ, ಸ್ವದೇಶಿ ವಸ್ತ್ರ ಮತ್ತು ಸದಾ ಕಾಲ ಖದ್ದರನ್ನೇ ಉಪಯೋಗಿಸುತ್ತಿರಬೇಕೆಂಬ ಬಗ್ಗೆ ಠರಾವುಗಳು ಮಂಜೂರಾದವು.

ಕುಕ್ಕುಂದೂರು:— ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ಶಾಲಾ ಫೀಸನ್ನು ವಸೂಲು ಮಾಡುವುದಿಲ್ಲವೆಂದು ಶಾಲಾಧಿಕಾರಿಯವರು ತಿಳಿಸಿರುತ್ತಾರೆ.

ಮೂಡಬಿದರೆ— ಸ್ಥಳೀಯ ಸಾರ್ವಜನಿಕ ವಾಚನಾಲಯದ ಹಣದ ಒಂದಂಶವನ್ನು ಅಲ್ಲಿಯ ಹಿಂದೀ ಪ್ರಚಾರ ಕಾರ್ಯಕ್ಕೆ ಉಪಯೋಗಿಸಬೇಕೆಂದು ಕಾರ್ಯ ನಿರ್ವಾಹಕ ಸಮಿತಿಯು ಆಲೋಚಿಸಿದೆ.

ಕಲ್ಲಡ್ಕ— ಕಲ್ಲಡ್ಕ ಮುಸ್ಲಿಂ ಜಮಾಯತ್ ಸಾಭೆಯ ಕಾರ್ಯಕಾರಿ ಮಂಡಳಿಯವರು ಇದೇ ತಿಂಗಳ ತಾ. 13ನೇ ಶುಕ್ರವಾರ ಅಪರಾಹ್ನ ಘಂಟೆ 2ಕ್ಕೆ ಜುಮಾ ಮಸೀದಿಯ ಎದುರಿನಲ್ಲಿ ಸಭೆ ಸೇರಿ ಮದ್ರಾಸಿನಿಂದ ಬಂದ ಜನಾಬ್ ಬಿ. ಎಚ್. ಎಲ್. ಹಾಜಿ ಅಬೂಬಕರ್ ಮೌಲವಿಯವರ ಅಧ್ಯಕ್ಷತೆಯಲ್ಲಿ ಪೈಗಂಬರರ ದಿನಾಚರಣೆಯನ್ನು ಜರಗಿಸಿದರು.

ಉಡುಪಿ:— ಉಡುಪಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆ — ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ತಾ 15ರಲ್ಲಿ ಉಡುಪಿಯಲ್ಲಿ ಜರುಗಿ ಜಿ ಬೋರ್ಡು ಚುನಾವಣೆಯ ಬಗ್ಗೆ ಪ್ರಚಾರ ಕಾರ್ಯ ಮಾಡಲು ಶ್ರೀಗಳಾದ ಎ ಬಿ ಶೆಟ್ಟಿ ಮತ್ತು ಸ್ವ ಜೆ ವಾರ್ತೆಯವರನ್ನು ಬರಮಾಡಿಕೊಳ್ಳಬೇಕೆಂದೂ ಜಿ ಬೋರ್ಡ್ ಮೆಂಬರ ಲಿಸ್ಟುಪತ್ರಗಳನ್ನು ಒಂದು ಪಕ್ಷದೊಳಗಾಗಿ ಜಿ ಕಾ ಕಮಿಟಿಗೆ ಕಳುಹಿಸುವಂತೆ ಸದ್ರಿ ಬೋರ್ಡಿನ ಅಧ್ಯಕ್ಷರನ್ನು ಕೇಳಿಕೊಳ್ಳಬೇಕೆಂದು ಕುಂದಾಪುರ ತಾ ಕಾಂಗ್ರೆಸ್ ಕಮಿಟಿಯ ಪ್ರೊಸೀಡಿಂಗ್ಸ್ ಪುಸ್ತಕವನ್ನು ರಂ. ಜಿ ಕಾ ಕಮಿಟಿಯು ತರಿಸಬೇಕೆಂದೂ ಇಂತಹ ಸರ್ಕಲಿನ ಕಾಂಗ್ರೆಸ್ ಉಮೇದ್ವಾರಿಯನ್ನೆದುರು ಶ್ರೀ ಸಂಗಪ್ಪಯ್ಯನವರು ನಾಮ ಪತ್ರ ಹಾಕಲು ಕಾರಣವೇನೆಂದು ಕೇಳಬೇಕೆಂದೂ ನಿರ್ಣಯವಾದವು.

ಜಿಲ್ಲಾ ಬೋರ್ಡಿಗೆ ಕಾಂಗ್ರೆಸ ಉಮೇದ್ವಾರರಾಗಿ ಪ್ರತಿ ಸ್ಪರ್ಧಿಯಿಲ್ಲದೆ ಆರಿಸಿ ಬಂದ ಶ್ರೀ ಯು. ರಾಮಚಂದ್ರ ಎಂಬ ಹರಿಜನ ಬಂಧುವು ಉಡುಪಿ ಮುನ್ಸಿಪಲ್ ಕೌನ್ಸಿಲಿನ ಉಪ ಚುನಾವಣೆಯಲ್ಲಿ ಪ್ರತಿಸ್ಪರ್ಧಿಯಿಲ್ಲದೆ ಹರಿಜನ ಸೀಟಿಗೆ ಆರಿಸಿ ಬಂದಿರುತ್ತಾರೆ.

೭ನೇ ಕರ್ನಾಟಕ ಏಕೀಕರಣ ಪರಿಷತ್ತು— ತಾ 24—25ರಲ್ಲಿ ಧಾರವಾಡದಲ್ಲಿ ಜರಗಿತು. ಪರಿಷತ್ತಿನ ಪ್ರಾರಂಭೋತ್ಸವವು ಚಿತ್ರದುರ್ಗದ ಜಗದ್ಗುರು ಶ್ರೀಮನ್ನಿರಂಜನ ಜಯದೇವ ಮುರುಘಾ ರಾಜೇಂದ್ರರವರಿಂದ ನಡೆಸಲ್ಪಟ್ಟಿತು. ಡಾ. ಕೆ. ಆರ್ ಕಾರಂತರು ಪರಿಷತ್ತಿನ ಅಧ್ಯಕ್ಷರು.

ವಸತಿಯ ಮತ್ತು ಊಟದ ವ್ಯವಸ್ಥೆಯು ಚೆನ್ನಾಗಿ ಮಾಡಲ್ಪಟ್ಟಿದ್ದಿತು ಪರಿಷತ್ತಿನ ವಿವರವನ್ನು ಹಿಂದಿನಿಂದ ಕೊಡಲಾಗುವುದು.

ಡಾಕ್ಟರ್ ಎಮ್. ಆರ್. ಶೆಟ್ರು— ಇದೇ ತಾ. 29ಕ್ಕೆ ಉಡುಪಿಗೆ ಬಂದು ತಾ. 30ರ ವರೆಗೆ ಇಲ್ಲಿರುವರು. ಇವರು ದಕ್ಷಿಣ ಕನ್ನಡಿಗರು, ಅಸಹಕಾರದ ಸಂದರ್ಭದಲ್ಲಿ ಕಾಲೇಜು ಬಿಟ್ಟು ಕಾಂಗ್ರೆಸ್ ಕೆಲಸ ಮಾಡುತ್ತಿದ್ದರು. ಆ ಮೇಲೆ ಬೊಂಬಾಯಿಗೆ ಹೋಗಿ ವೈದ್ಯಕೀಯ ಶಿಕ್ಷಣ ಪಡೆದು ಡಾಕ್ಟರರಾದರು, ಅನಂತರ ತನ್ನ ಉದ್ಯೋಗ ಬಿಟ್ಟು ತನ್ನ ಸಂಪೂರ್ಣ ಸಮಯವನ್ನು ಕಾರ್ಮಿಕರ ಹಿತಸಾಧನೆಗಾಗಿ ವಿನಿಯೋಗಿಸಿ ಬೊಂಬಾಯಿಯ ಹಲವು ಮಜೂರ ಚಳವಳಿಗಳಲ್ಲಿ ಭಾಗವಹಿಸಿ ಕಾರಾಗೃಹವನ್ನನುಭವಿಸಿದವರು. ಶ್ರೀ. ಎಮ್. ಎನ್ ರೋಯ್ಯರ ಆಪ್ತ ಶಿಷ್ಯರಲ್ಲೊಬ್ಬರಾಗಿ ಈಗ ಅವರ ತತ್ವ ಮತ್ತು ಕಾರ್ಯ ಕ್ರಮದ ಪ್ರಚಾರಾರ್ಥವಾಗಿ ಎಡೆಬಿಡದೆ ದುಡಿಯುತ್ತಿರುವರು. ಶ್ರೀ ರೋಯ್ಯರ ಇಂಡಿಪೆಂಡೆಂಟ್ ಇಂಡಿಯಾ ಪತ್ರಿಕೆಯನ್ನೋದುವವರಿಗೆ ಇವರು ಚೆನ್ನಾಗಿ ಪರಿಚಿತರಿರುವರು.

ಮೂಲ್ಕಿ— ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಎಂ ಆರ್ ಪೂಂಜರ ವಿರೋಧವಾಗಿ ನೋಮಿನೇಶನ್ ಹಾಕಿದ ಶ್ರೀ ಜಯರಾಮ ಶೆಟ್ಟರು ತಮ್ಮ ನೋಮಿನೇಶನನ್ನು ಹಿಂದೆಗೆದರಾಗಿ ಕೇಳುತ್ತೇವೆ.

ಮಂಜೇಶ್ವರ:— ಸರ್ಕಲಿಗೆ ಇತ್ತೀಚೆಗೆ ವರ್ಗಾಯಿಸಲ್ಪಟ್ಟು ಬಂದ ಎಕ್ಸೈಸ್ ಸಬ್ ಇನ್ಸ್ಪೆಕ್ಟರರಾದ ಶ್ರೀ ಎಚ್ ಶೇಷಗಿರಿ ರಾಯರು ಬಂದ ಕೆಲವು ಸಮಯದಲ್ಲಿಯೇ ಅನೇಕ ಕಳ್ಳಭಟ್ಟಿಗೆ ಶರಾಬು ತಯಾರಿಸುವ ಸಾಧನಗಳನ್ನು ಹಿಡಿದಿರುವರೆಂದು ತಾ 20 5-38ರಲ್ಲಿ ಪಾವಲುಕೋಡಿ ಎಂಬಲ್ಲಿ ಅನೇಕ ನಮೂನೆಯ ಶರಾಬುಗಳನ್ನಾ ಮಾತ್ರವಲ್ಲದೆ ಒಂದು ಗಾಡಿ ಭಟ್ಟಿ ಸಾಮಾನುಗಳನ್ನು ಸಹ ಹಿಡಿದಿರುವರೆಂದೂ ತಿಳಿದು ಬರುತ್ತದೆ.

ವಿನಂತಿ

ಕೆಲವು ತಿಂಗಳುಗಳಿಂದ ನಾನು ಮುದ್ರಿಸಿಕೊಟ್ಟ ... ಈಗ ಇಲ್ಲಿಗೆ ಬಂದ ವಿಷಯ ಪುತ್ತೂರು ಕಾಸರಗೋಡು ತಾಲೂಕುಗಳ ಮತದಾರರಿಗೂ ಇತರ ಮಹಾಜನರಿಗೂ ತಿಳಿದಿರಬಹುದು. ಈ ತಾಲೂಕುಗಳ ರಿಜರ್ವ ಕಾಡುಗಳಿಂದ ಆಗಿರುವ ತೊಂದರೆಗಳನ್ನು ಕುರಿತಾಗಿ ನ ಜನ ಇತರ ಮುಖ್ಯ ಸಂಕಷ್ಟಗಳನ್ನು ಕೂಡಾ ಜನರಿಂದ ತಿಳಿಯ ಬೇಕೆಂದು ನನಗೆ ಅಪೇಕ್ಷೆ ಇರುವುದರಿಂದ ಸಂಬಂಧಪಟ್ಟ ಸ್ಥಳಗಳಲ್ಲಿ ಅನುಭವಸ್ಥರು ಮುಖ್ಯವಾಗಿ ಆಗಿನ ಸಂಸ್ಥೆ ಹೆಚ್ಚಿರುವವರು ಇದೇ ತಿಂಗಳ ತಾ. 25ನೇ ಶನಿವಾರ ಮಧ್ಯಾಹ್ನ 1 ಘಂಟೆಗೆ ಪುತ್ತೂರು ಸಹಕಾರ ಸಂಘದ ಕಟ್ಟಡದಲ್ಲಿ ಕೂಡುವ ಸಭೆಗೆ ಬರಬೇಕಾಗಿ ನನ್ನ ವಿನಂತಿ. ಈ ಸಭೆಯಲ್ಲಿ ನಡೆಯುವ ಚರ್ಚೆ ತೀರ್ಮಾನಗಳನ್ನು ಸರಕಾರದವರ ಮುಂದಿಟ್ಟು ಅದಕ್ಕೆ ಬೇಕಾದ ಪ್ರಯತ್ನವನ್ನು ಮಾಡುವ ಬಗ್ಗೆ ಈ ಸಭೆ ಕರೆದಿರುವೆನು.

ಕೋಟ ರಾಮಕೃಷ್ಣ ಕಾರಂತ,
ಎಂ. ಎಲ್. ಎ. ಮದ್ರಾಸ್ ಎಸೆಂಬ್ಲಿ,

ಪುತ್ತೂರು ತಾ 21 5 1938

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

R I A N 30, 1938 in O S 245 1936
ಮಹಾದೇವ ಪದ್ಮನಾಭ ಪಾಂಡಿಲ್ಲಾಯ — ವಾದಿ
ಮಧೂರು ಸುಂಕ ... ಮಯ್ಯ—ವ ಘೂರು ಸುಬ್ರಾಯ ಶೆಟ್ಟಿ ಮಯ್ಯರ
ಮೊಗ-ಮುಂಡಾಜೆ ಗ್ರಾಮ — ಪ್ರತಿವಾದಿ

ಮೇಲ್ಕಂಡ ವಾದಿಯು, ಪ್ರತಿವಾದಿ ಮೇಲೆ ಮೇಲ್ಕಂಡ O S 245 36ನೇ ಡಿಕ್ರಿಯ ಬಾಕಿ ರೂ 262 -5 -0ನ್ನು ವಸೂಲು ಮಾಡುವ ಬಗ್ಗೆ ಪರ್ಸನಲ್ ಡಿಕ್ರಿ ಕೊಡಿಸಬೇಕೆಂತ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ಮೇಲಿನ ಅರ್ಜಿಯು ತನಿಖೆ ಬಗ್ಗೆ ತಾರೀಖು 31-5-38ಕ್ಕೆ ವ್ಯಾದೆ ಇಟ್ಟಿರುವದರಿಂದ ಆಕುರಿತು ಆಕ್ಷೇಪಣೆ ಇದ್ದಲ್ಲಿ ಸದ್ರಿ ವ್ಯಾದೆ ದಿವಸ ಪೂರ್ವಾಹ್ನ 11 ಘಂಟೆಗೆ ಕೋರ್ಟು ಮುಂದೆ ಹಾಜರುಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷ ತೀರ್ಮಾನವಾದೀತೆಂತ ಕೋರ್ಟು ಹುಕುಮಿನ ಪ್ರಕಾರ ಈ ಮೂಲಕ ತಿಳಿಸಲಾಗಿದೆ.

ಮೊಕ್ಕಾಂ, ಪುತ್ತೂರು, ತಾ. 26-5-'38.
ಎನ್. ವೆಂಕಟ್ರಮಣ ಕೊಳಕ್ಕಾಯ, ವಾದಿ ಕಡೆ ವಕೀಲ್

ಹಿಂದೂ-ಮುಸ್ಲಿಮ್-ಐಕ್ಯ — ಲಂಡನಿನಲ್ಲಿ ಶ್ರೀ ಭೂಲಾಭಾಯಿ ದೇಸಾಯಿಯವರು

ಐದೇ ವರ್ಷಗಳಲ್ಲಿ ಸ್ವಾತಂತ್ರ್ಯ! ★ ★ ಇಸ್ಲಾಮಿಯಾ ಕೊಲೇಜಿನಲ್ಲಿ ಮಹಾತ್ಮಾಜಿಯವರ ಭಾಷಣ ★ ★ ಮೆಕ್ಸಿಕೊ-ದಂಗೆ!

ಹಿಂದೂ ಮುಸ್ಲಿಮ ಐಕ್ಯ
ಇಸ್ಲಾಮಿಯಾ ಕೊಲೆಜಿನಲ್ಲಿ ಮಹಾತ್ಮಾಜಿಯವರ ಭಾಷಣದಿಂದ

ಇದೊಂದು ಸಮಸ್ಯೆಯನ್ನು ಕುರಿತಾಗಿ ನೀವು ಪ್ರಸ್ತಾಪವೆತ್ತಿರುವಿರಿ ಹಿಂದೂ ಮುಸ್ಲಿಮರೊಳಗೆ ಐಕ್ಯವುಂಟಾಗುವಂತೆ ನೀವೇನು ಮಾಡುವಿರಿ? ಎಳೆಯರಾದ ನೀವೇ ಈ ಸಮಸ್ಯೆಯನ್ನು ಇತ್ಯರ್ಥಿಸಲು ಯೋಗ್ಯರು ನಾವೆಲ್ಲರು ಈಗ ಹಳಬರಾಗುತ್ತ ಬರುತ್ತೇವೆ ಕೆಲ ದಿನಗಳಲ್ಲೇ ನಮ್ಮ ಜನ್ಮವು ಮುಗಿಯುವುದಲ್ಲವೆ? ನಾವು ಹೊತ್ತ ಭಾರಕ್ಕೆ ನೀವಿನ್ನು ಹೆಗಲುಕೊಡಬೇಕಾಗಿದೆ ಈ ಕಾರ್ಯವನ್ನು ನೀವು ಹೇಗೆ ಮಾಡುವಿರೆಂಬುದನ್ನು ಖಾನ್ ಸಾಹೇಬರು ಅಹಿಂಸಾ ಮೂಲಕ ಇಲ್ಲಿ ನಡೆಸಿರುವ ಪ್ರಯತ್ನಗಳನ್ನು ಹೊಗಳಿ ನೀವು ತಿಳಿಸಿದಂತಾಗಿದೆ ಆ ಮಾತುಗಳ ಅರ್ಥವೂ ಸಂಪೂರ್ಣವಾಗಿ ನಿಮಗೆ ತಿಳಿದರೆ ನೀವು ಕೃತಾರ್ಥರಾಗುವಿರಿ ನಾನು ಇತ್ತ ಬಂದುದು ಪಠಾಣರನ್ನು ಬಲಹೀನಗೊಳಿಸುವುದಕ್ಕೆಂದು ಇಲ್ಲಿನ ಒಂದು ಉರ್ದು ಪತ್ರಿಕೆ ಬರೆದಿದೆ ಖಾನ್ ಸಾಹೇಬರು ನನ್ನನ್ನಿಲ್ಲಿಗೆ ಬರಮಾಡಿದುದು ನನ್ನ ಬಾಯಿಂದಲೇ ಅಹಿಂಸಾ ತತ್ವದ ವಿಚಾರಗಳನ್ನು ನೀವು ಕೇಳುವಂತಾಗಬೇಕೆಂದೂ ನಾನು ಕಣ್ಣಾರೆ ಖುದಾಯಿ ಖಿದ್ಮತ್‌ಗಾರರನ್ನು ಕಂಡು ಅವರಲ್ಲಿ ಅಹಿಂಸೆ ಎಷ್ಟು ನಾಟಿದೆಯೆಂದು ತಿಳಿಯಬೇಕೆಂದೂ ಆಗಿದೆ ಹೀಗಿರುವಾಗ ಖಾನ್ ಸಾಹೆಬರಲ್ಲಿ ಉರ್ದು ಪತ್ರಿಕೆಯಲ್ಲಿರುವಷ್ಟು ಬೆದರಿಕೆಯುಳ್ಳೆನ್ನಬಹುದಲ್ಲವೆ? ಏಕೆಂದರೆ ನಿಜವಾದ ಅಹಿಂಸೆಯಲಿ ಅತಿ ಬಲಶಾಲಿಗಳಲ್ಲಿರುವ ಹಿಂಸಾ ಶಕ್ತಿಗಿಂತಲೂ ಹೆಚ್ಚಿನ ಬಲವಿದೆ ಇದನ್ನು ನೀವು ತಿಳಿದ, ಖಾನ್ ಸಾಹೆಬರಲ್ಲಿ ವಿಶ್ವಾಸವನ್ನಿಟ್ಟು ಎತ್ತಲೂ ಸೈನ್ಯದ ಕಸರತ್ತು ತಯ್ಯಾರಿ ನಡೆವುದನ್ನು ಕೇಳುತ್ತಿರುವಾಗಲೇ ನೀವು ಅಹಿಂಸಾಪರರಾಗಿ ವರ್ತಿಸಬೇಕಾಗಿದೆ ನಿರಸ್ತ್ರನಾದ ಅಹಿಂಸಾಪರನ ಬಲವು ಹಿಂಸಾತುರನ ಶಸ್ತ್ರಗಳಿಗೂ ಹೆಚ್ಚಾಗಿದೆ ನಾನು ಸ್ವಭಾವದಿಂದಲೇ ಅಹಿಂಸಾಪರನು ನನಗೆ ಬಾಲ್ಯದಿಂದಲೇ ಈ ಗುಣವು ಬಂದಿದೆ ದಕ್ಷಿಣಾಫ್ರಿಕದಲ್ಲಿ ನಾನಿದ್ದಾಗ ಈ ಅಹಿಂಸಾ ಬಲವು ನನ್ನಲಿ ಪ್ರಕಟವಾಯಿತು ಹಿಂಸೆ ಮತ್ತು ಕುಲದ ಹೆಮ್ಮೆಗಳನ್ನು ಅಲ್ಲಿ ಇದರಿಂದಲೇ ಎದುರಿಸಿದೆನು ಇದರ ಪರಿಣಾಮವಾಗಿ ನನ್ನಲ್ಲಿ ಅಹಿಂಸೆಯ ಮಹತ್ವವು ಸಂಪೂರ್ಣ ತಿಳಿದುಬಂತು

ಹಿಂಸೆಯ ಸಲುವಾಗಿ ಸಿದ್ಧನಾಗಲು ಬೇಕಾದ ತರ್ಬೇತಿಗಿಂತ ಅಹಿಂಸೆಯಿಂದ ಯುದ್ಧ ಮಾಡಲು ಹೆಚ್ಚಿನ ತರ್ಬೇತು ಅಗತ್ಯವಾಗಿದೆ ಈ ತರ್ಬೇತೂ ಬಹಳ ಕಷ್ಟ ದೇವರಲ್ಲಿ ವಿಶ್ವಾಸವಿರಬೇಕಾದುದೇ ಮೊದಲನೆ ಕರ್ತವ್ಯ ಈ ವಿಶ್ವಾಸವಿರುವವನು ಎಂದೂ ಕೆಟ್ಟ ಕೆಲಸಗಳನ್ನು ಮಾಡನು ದೇವರ ಹೆಸರಲ್ಲಿ ಹಾಳು ಕೆಲಸಗಳನ್ನು ಮಾಡಬಂದೀತೆ? ಅವನು ಖಡ್ಗವನ್ನು ನಂಬನು, ದೇವರನ್ನೇ ನಂಬುವನು. ಹೀಗಿಂದರೆ ಪುಕ್ಕಿಯೂ ಸಹ ದೇವರ ಹೆಸರು ಹೇಳಿ ತನ್ನ ಹೇಡಿತನ ಮರೆಯಿಸಬಹುದಲ್ಲವೆ? ಎಂದು ನೀವೆನ್ನಬಹುದು ಹೇಡಿತನವಿರುವವರಲ್ಲಿ ವಿಶ್ವಾಸವಿಲ್ಲೇಬುದು ಖಂಡಿತ ದೇವರಲ್ಲಿ ವಿಶ್ವಾಸವಿರುವವನು ಖಡ್ಗದಿಂದ ಯುದ್ಧ ಮಾಡಬಲ್ಲನು, ಆದರೆ ಪ್ರತಿಯೊಬ್ಬರಲ್ಲಿ ದೇವರಿರುವನು ಎಂಬುದನ್ನು ತಿಳಿದು ಖಡ್ಗವನ್ನು ಉಪಯೋಗಿಸನು

ಇಸ್ಲಾಂ ಧರ್ಮವು ಮನುಷ್ಯರೆಲ್ಲ ಸೋದರರೆಂದೇ ಹೇಳುವುದಾಗಿ ತಿಳಿದಿರುವೆನು, ಆದರೆ ಮುಸಲ್ಮಾನರೊಳಗೆ ಮಾತ್ರ ಸೋದರತೆ [illegible] ಎಂದರ್ಥ ಈ ತತ್ವವು ಅಹಿಂಸಾಪಾಲಕನಿಗೆ ಬೇಕಾಗಿರುವ ಎರಡನೆ ವಿಧಾನವಾಗಿದೆ ದೇವರು ಎಲ್ಲರ ದೇವರು ಅವರವರು ನಂಬುವ ದೇವರೇ ಒಬ್ಬನು ದೇವರನ್ನು ವರ್ಣಿಸಲಾಗುವುದಿಲ್ಲ ಒಬ್ಬೊಬ್ಬರು ಅವನ ಒಂದೊಂದು ಗುಣವನ್ನು ಕೊಂಡಾಡಿ ಅವನನ್ನು ಆ ಹೆಸರಿಂದ ಕರೆವರು ಆದರೆ ದೇವರಿಗೊಂದು ಹೆಸರುಂಟೆ? ಇಂತಹ ದೇವರಲ್ಲಿ ಉಜ್ವಲವಾದ ವಿಶ್ವಾಸವಿದೆಯಾದರೆ, ಮನುಷ್ಯರೆಲ್ಲರೂ ಸೋದರರೆಂಬುದನ್ನು ತಿಳಿದುಕೊಳ್ಳುವುದು ಸುಲಭ ಎಲ್ಲ ಧರ್ಮಗಳಿಗೂ ಒಂದೇ ಬಗೆಯ ಗೌರವ ತೋರಿಸಬೇಕಾಗಿದೆ ನಿಮಗೆ ಇಸ್ಲಾಂ ಪ್ರೀತಿಯಾದರೆ ನನಗೆ ಹಿಂದೂ ಧರ್ಮವು ಅಷ್ಟೆ ಪ್ರೀತಿಯದು ನಿಮ್ಮ ಧರ್ಮವು ಎಲ್ಲ ಧರ್ಮಗಳಲ್ಲಿ ಶ್ರೇಷ್ಠವೆನ್ನುವುದರ ಅರ್ಥವೆಂದರೆ ಇತರ ಧರ್ಮಗಳಲ್ಲಿ ನಿಮಗೆ ಸಹನೆಯಿಲ್ಲದಾದೀತು ಇತರರು ನಿಮ್ಮ ಧರ್ಮವನ್ನು ಅಂಗೀಕರಿಸುವುದು ಉತ್ತಮವೆಂದು ನಿಮ್ಮ ಅಭಿಪ್ರಾಯವೆಂದಾದೀತು

ಸತ್ಯ ಶುಚಿತ್ವಗಳನ್ನು ಅಂಗೀಕರಿಸುವುದು ಭಗವಂತನಲ್ಲಿ ನಮಗಿರುವ ವಿಶ್ವಾಸದ ಮತೊಂದು ಲಕ್ಷಣವಾಗಿದೆ ದೇವರಲ್ಲಿ ವಿಶ್ವಾಸವಿರುವಾತನು ಸತ್ಯವನ್ನು ತೊರೆಯನು ಅವನು ಯಾವಾಗಲು ನಿರ್ಮಲನೇ ಆಗಿರುವನು

ಇದುವರೆಗೆ ಖಾನ್ ಸಾಹೆಬರು ನಮಗೆ ಪ್ರತ್ಯಕ್ಷ ಜೀವನದಲಿ ಕಲಿಸುತ್ತಿರುವುದನ್ನು ನೀವು ಅಂಗೀಕರಿಸಿರುವಿರೆಂದರೆ ಇನ್ನು ಸುವ್ಯವಸ್ಥೆ [illegible] ನೀವೇ ನಾಯಕರಾಗಿ ನಡೆದುಕೊಳ್ಳಿರಿ ಹಾಗೆ ಮಾಡುವಿರಾದರೆ, ಅಹಿಂಸೆಯಿಂದ ನೀವು ನಪುಂಸಕರಾಗುವಿರೆಂಬ ಸಂಶಯವನ್ನು [illegible] ನಮ್ಮಲ್ಲಿನ ಅಹಿಂಸೆಯೇ ಅತಿ ಬಲಶಾಲಿಗಳ ಶಕ್ತಿ ಎಂಬುದು ಸತ್ಯ

ಶಾಲೆಗಳಲ್ಲಿ ಶಿಸ್ತು

ಮದರಾಸು ಎಜ್ಯುಕೇಶನಲ ರೂಲ್ಸನಲ್ಲಿ ಹೊಸ 98 99ರ ವರೆಗಿನ ರೂಲ್ಸಗಳು ಪ್ರಕಟವಾಗಿವೆ ಇವುಗಳು ಶಾಲೆಗಳಲ್ಲಿನ ಶಿಸ್ತನ್ನು ಕುರಿತಾಗಿವೆ

ಯಾವುದೊಂದು ಶಿಕ್ಷೆಗೆ ಒಳಪಟ್ಟು ಶಿಕ್ಷೆ ಹೊಂದಿದವನಿಗೆ ಶಾಲೆಗಳಲ್ಲಿ ಪ್ರವೇಶ [illegible] ಯಾವುದೊಂದು ರಾಜಕೀಯ ಸಂಗಡದ ಅಥವಾ ಜಾತಿಗೆ ಸಂಬಂಧಪಟ್ಟ ಚಳವಳಗಳಲ್ಲಿ ವಿದ್ಯಾರ್ಥಿಗಳ ನಡೆವಳಿಕೆಗಳನ್ನು ಕುರಿತಾಗಿ ಆಯಾ ವಿದ್ಯಾಧಿಕಾರಿಗಳು ತಾವೇ ರೂಲ್ಸುಗಳನ್ನು ಮಾಡಬಹುದು ಅಂತೆಯೆ ಶಾಲೆ ಕೊಲೆಜು ಹೊಸ್ಟೆಲುಗಳ ಹೊರಗೆ ಅಂತಹ ಸಂಸ್ಥೆಯ ಗೌರವ ಹೇರು ಉಪಯೋಗ ಪೊದಲೆಂಬುವನ್ನು ವಿದ್ಯಾರ್ಥಿಗಳು ಕೆಡಿಸದಂತೆ ಸಹ ವಿದ್ಯಾಧಿಕಾರಿಗಳು ನಿಯಮಗಳನ್ನು ಮಾಡಬಹುದು ವಿದ್ಯಾರ್ಥಿಗಳ ಹಿತಕ್ಕಾಗಿ ದಂಡಿಸಬಲ್ಲಿ ಜುಲುಮಾನೆ, ಹಾಜರಿ ಕಡಿತ ಸರ್ಟಿಫಿಕೇಟ ರದ್ದಿಯಾತಿ ಬರ್ತರಫು ಮಾಡೋಣ ಹೊರದೂಡೋಣ ಮೊದಲಾದ ಶಿಕ್ಷೆಗಳನ್ನು ಕೊಡಬಹುದು ಉಪಾಧ್ಯಾಯರು ವಿದ್ಯಾರ್ಥಿಗಳ ಮನಸ್ಸನ್ನು ಇಲ್ಲಿ ಆಕ್ಷೇಪಕರವೆಂದ ಚಟುವಟಿಕೆಗಳ ಕಡೆಗೆ ನಡೆಸುವಂತೆ ಬೋಧಿಸಿದಲ್ಲಿ ಅಂತಹರನ್ನು ದಂಡಿಸಲಾದೀತು ಉಪಾಧ್ಯಾಯರಾಗಲಿ ಮೆನೆಜ್‌ಮೆಂಟಿನವರಾಗಲಿ ಆಕ್ಷೇಪಕರವಾದ ರೀತಿಯಲ್ಲಿ ವರ್ತಿಸುತ್ತ ಇದ್ದಲ್ಲಿ ಅವರ ಶಾಲೆಯ ಮಂಜೂರಾತಿಯನ್ನು ರದ್ದು ಮಾಡಲಾದೀತು, ಗ್ರೇಂಟನ್ನು ಕೊಡದಿರಲಾದೀತು ಅಲ್ಲಿನ ವಿದ್ಯಾರ್ಥಿಗಳಿಗೆ ಸ್ಕೊಲರ್ ಶಿಪ್ ವೊದಲಾದುವು ಸಿಗಲಾರವು ಸ್ಕೊಲರ್ ಶಿಪ್ ಇರುವವರನ್ನು ಅಲ್ಲಿ ಸೇರಿಸಿಕೊಳ್ಳಲಾರರು

ಲಂಡನಿನಲ್ಲಿ ಶ್ರೀ. ಭೂಲಾಭಾಯಿ ದೇಸಾಯಿಯವರು
ಐದೇ ವರ್ಷಗಳಲ್ಲಿ ಸ್ವಾತಂತ್ರ್ಯ

ಲಂಡನಿನಲ್ಲಿ ಲಂಡನ್ ಮಜ್ಲಿಸ್ ಸಂಸ್ಥೆಯ ಅಧಿವೇಶನ ಕಾಲದಲ್ಲಿ ಶ್ರೀಯುತ ಭೂಲಾಬಾಯಿಯವರು ಒಂದು ಭಾಷಣಮಾಡಿದರು 'ಇನ್ನು ಐದು ವರ್ಷಗಳಲ್ಲಿ ಭಾರತವರ್ಷವು ಸ್ವಾತಂತ್ರ್ಯವನ್ನು ಗೆದ್ದುಕೊಳ್ಳುವುದು ಭಾರತವಾಸಿಯರೇ ಇದನ್ನು ಸಾಧಿಸುವರು ಭಾರತವರ್ಷದ ಗೌರವವನ್ನು ಕಾಪಾಡುತ್ತ, ತಮ್ಮ ನಾಡಿನ ಧೃಢನಿಶ್ಚಯವನ್ನು ಸಾರುತ್ತ, ಪರದೇಶಗಳಲ್ಲಿರುವ ಭಾರತವಾಸಿಗಳು ಈ ಕಾರ್ಯಕ್ಕೆ ಸಹಾಯಮಾಡಬೇಕು ನಮ್ಮ ರಾಜ್ಯ ಭಾರಶಾಸನ ಬರೆದುಕೊಟ್ಟವರೂ ವೋಟರರ ಯೋಗ್ಯತೆ ನಿಶ್ಚಯಿಸಿದವರೂ ದೀನ ನಿರಕ್ಷರರಾದ ಹಳ್ಳೀಜನರನ್ನ ಹೇಗೂ ಒಲಿಸಿಕೊಳ್ಳಬಹುದೆಂದಿದ್ದರು ಗಂಡಸರಲ್ಲಿ ಪ್ರಾಯಸ್ಥರಲ್ಲಿ ಇಬ್ಬರೊಳಗೆ ಒಬ್ಬರಿಗೆ ಮಾತ್ರ ವೋಟು ದೊರಿತಿದೆ ಹೀಗೆ ವೋಟು ದೊರೆತವರು ತಮ್ಮ ಕರ್ತವ್ಯ ನೆರವೇರಿಸಿದ್ದಾರೆ ಇಗೋ ದೇಶಕ್ಕೆ ಕೊಂಗ್ರೆಸೇ ಗತಿ ಎಂದು ಅವರು ತಿಳಿದಿರುವರು ಹೊರತು ಕೊಂಗ್ರೆಸು ಯಾರ ಪ್ರತಿನಿಧಿಯೂ ಅಲ್ಲ ದೀನರ ಪ್ರತಿನಿಧಿಗಳು ಅವರಲ್ಲ ಎಂಬ ಸುಳ್ಳು ಅಪವಾದವನ್ನು ಇವರ [illegible] ರುವರು

ಎಷ್ಟೋ ಬಂಧನವಿದ್ದರೂ ಪ್ರಾಂತಿಕ ಸರಕಾರಗಳು ಉತ್ತಮವಾಗಿ ಕೆಲಸ ಮಾಡುತಲಿವೆ ಇದರಿಂದ ಶಾಸನವು ಸರಿಯಾಗಿದೆ ಎಂದರ್ಥವಾಗದು ಹಾಳು ಹೊಲಸು ಕೀಳಿತು ನಾರುವ ಶಾಸನದಿಂದಲಾದರೂ ಭಾರತೀಯರು ಉತ್ತಮ ಅದ್ಭುತವನ್ನೇ ತೋರಬಲ್ಲರೆಂದ ಮಾತ ಈಗ ಸಾರಬಹುದು ಶಾಸನವೆ ಉತ್ತಮವಾಗಿದಲ್ಲಿ ಜನತೆಗೆ ಪ್ರಯೋಜನವು ಎಷ್ಟೋ ಹೆಚ್ಚಾಗುತ್ತಿತು

ಪ್ರಜಾಪತಿ [illegible] ರಲ್ ಸ್ಕೀಮನ್ನು ಎದುರಿಸಲು ಕೊಂಗ್ರೆಸು ಸಿದ್ಧವಾಗಿದೆ ನಾವು ನಮ್ಮ ದೇಶದ ಆಡಳಿತ ನೋಡಲೂ ಬಲ್ಲೆವು ಅದಕ್ಕಾಗಿ ನಾವೇ ಶಾಸನ ಮಾಡಿಕೊಳ್ಳಬಲ್ಲೆವು

ಸಭೆಯಲ್ಲಿ ಕೆಲವರು ಗಾಂಧಿಜಿಯು ಡಿಕ್ಟೇಟರರಾಗಿ ಕೊಂಗ್ರೆಸನ್ನು ನಡೆಸತ್ತಾರೆಂದೂ ಅಹಿಂಸೆಯಿಂದ ಇದೆಲ್ಲ ಕೆಲಸದದೆಂದೂ ವಿಮರ್ಶಿಸಿದರು ಆದರೆ ಸರ್ವಸಜ್ಜಿತವಾದ ಇಂಗ್ಲೆಂಡು ಯುದ್ಧವೆಂದರೆ ಕಂಗೆಡುವುದಲ್ಲವೆ? ಯುದ್ಧದಿಂದ ಉಂಟಾಗುವ ಲಾಭವು ಶಾಶ್ವತವೆ? ಅಹಿಂಸೆಯು ಬಲವೇ ಬಲವು

ವಿದುರಾಶ್ವತ್ಥದಲ್ಲಾದುದೇನಂತೆ?
ಸರಕಾರವು ನೇಮಿಸಿದ ಕಮಿಟಿಯ ಮುಂದೆ ರುಜುವಾತು

ಸರಕಾರದ ವಕೀಲ ಕೆ ರ ಮುಸ್ವಾಮಿಯವರು

ಪ್ರತಿ ವರ್ಷವೂ ಶ್ರೀರಾಮ ನವಮಿಯ ಹಿಂದೆಯೆ ವಿದುರಾಶ್ವತ್ಥದಲ್ಲಿ ಜಾತ್ರೆಯಿದೆ ಈ ವರ್ಷ ಅದು ಎಪ್ರಿಲ್ ತಾ ೮ರಿಂದ ೨೧ರ ತನಕ ಇದ್ದು ಗೋವುಗಳ ಪ್ರದರ್ಶನವು ೧೮ಕ್ಕೆ ನಡೆದು ೨೦ರಂದು [illegible] ಬಹುಮಾನಗಳನ್ನು ಹಂಚಿದರು ಜಾತ್ರೆ ಮಾತ ತಾ ೨೧ರ ವರೆಗಿತ್ತು

ಆಗಲೆ ಅನಂತಪುರ ಜಿಲ್ಲೆಯ ಶ್ರೀ ಕಲ್ಲೂರು ಸುಬ್ಬಾರಾಯರು ಅತ್ತ ಬರುವರಾಗಿ ಅಮಿಲ್ದಾರ ಮೆಜಿಸ್ಟ್ರೇಟರಿಗೆ ವರದಿಹೋಗಿತ್ತು ಇವರು ಇಲ್ಲಿಯೂ ಭಾಷಣಮಾಡುವರಾಗಿ ಗೊತ್ತಾಗಿ ಜಿಲ್ಲಾ ಮೆಜಿಸ್ಟ್ರೇಟರಿಗೆ ಬರೆದುಕೊಂಡರು ನೆಮ್ಮದಿಭಂಗವಾಗುವುದಾದರೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನಂತೆ ಅಮಲು [illegible] ರಿಯಿತು ಆದಕ್ಕಾಗಿ ಇವರು, ೧೮ನೇ ರಾತ್ರಿನು ಜಾತ್ರೆಗೆ ತಂದರು ರಾಷ್ಟ್ರಧ್ವಜ ಹಾರಿಸೋಣ ಸಭೆಮಾಡೋಣ ಮೊದಲಾದುವನ್ನು ೧೫ ದಿನಗಳಿಗೆ ಮನಾಹಿಮಾಡಿದರು ೧೮ನೇ ತಾರೀಕಿಗೆ ಅತ್ತಬಂದ ಸುಬ್ರಾಯರಿಗೆ ಈ ನೋಟೀಸು ಜ್ಯಾರಿಮಾಡಲಾಯಿತು ಅವರು ಕೂಡಲೆ ಬ್ರಿಟಿಷ್ ರಾಜ್ಯಕ್ಕೆ ಹಿಂತಿರುಗಿದರು ತಾಲೂಕ್ ಕೊಂಗ್ರೆಸ್ ಕಮಿಟಿಯು ಮಾತ್ರ ಗೋರಿಬಿದನೂರಿಂದ ಈ ಅಪ್ಪಣೆಯನ್ನು ಉಲ್ಲಂಘಿಸಲು ನಿರ್ಧರಿಸಿತು ಎಪ್ರಿಲ್ ೨೫ರಲ್ಲಿ ಎಂಟು ಗಡಿಗಳಲ್ಲಿ ಹೆಚ್ಚಿನವು ಮುಚ್ಚಲಾದುವು ೫೦ ಮಂದಿ ಮಾತ್ರ ಅಲ್ಲ ಉಳಿದಿರಬಹುದು ಜಾತ್ರೆ ಮುಗಿಯಿತೆಂದು ದೇವಳದ ಅಧಿಕಾರಿಗಳೂ ಪ್ರಕಟಿಸಿದರು

ಎಪ್ರಿಲ ತಾ ೨೨ರಿಂದ ರಗಳೆಗೆ ಆರಂಭವಾಯಿತು ಸತ್ಯಾಗ್ರಹ ಮಾಡುವುದೇ ನಿಶ್ಚಯವಾಯಿತು ೨೫ನೇ ತಾರೀಕಿನಲ್ಲಿ ಬಹುಮಾನ ಹಂಚೋಣಕ್ಕೆ ಕಟ್ಟಿದ ಶಾಮಿಯಾನದ ಮೇಲೆಯೇ ಧ್ವಜವಂದನೆಮಾಡಲಾಯಿತು ಆ ಜನರನ್ನ ಕೈದುಮಾಡಿ ಚಿಕ್ಕಬಳ್ಳಾಪುರಕ್ಕೆ ಒಯ್ದರು ಮರುದಿನವೂ ಧ್ವಜವಂದನೆ ಇಬ್ಬರ ಕೈದು ಇವರನ್ನು ಒಯ್ಯಲು ಅಮಲ್ದಾರರಿಗೆ ಸುಲಭವಾಗಲಿಲ್ಲ ಪೊಲೀಸರ ಗಾಡಿಯನ್ನು ಜನರು ಮುತ್ತಿದರು ಕೊಂಗ್ರೆಸ್‌ವಾಲರು ಆ ಗಾಡಿಯ ಮೇಲೆ ಕೂತರು

ಇದನ್ನು ತಿಳಿದು ಜಿಲ್ಲಾ ಮೆಜಿಸ್ಟ್ರೇಟರಿಗೆ ತಿಳಿಸಲಾಯಿತು ಚಿಂತಾಮಣಿಯಲ್ಲಿದ್ದ ಅವರು ಜಿಲ್ಲಾ ಸುಪರಿಂಟೆಂಡರು ಸಬ ಡಿವಿಜನ್ ಆಫಿಸರು ೯ ರಿಜರ್ವ ಪೊಲೀಸರು ಬೆಂಗಳೂರಿಂದ ಕೆಳವರು 24ಕ್ಕೆ ಬಂದರು ಅಲ್ಲಿ ಜನರ ಹಿಂಸೆಯಾಗದ ಕೆಲ ಪ್ರಯತ್ನ ಮಾಡಿದರು ಕೊಂಗ್ರೆಸಿನವರನ್ನು ಡಿಪ್ಯುಟಿ ಕಮಿಶನರರು ವಿಚಾರಿಸಿ ಅಂದೂ ಧ್ವಜವಂದನೆ ಇದೆಯೋ ಎಂದು ಕೇಳಿದರು ಸದುತ್ತರ ದೊರೆಯಲಿಲ್ಲ ಸತ್ಯಾಗ್ರಹಾದಿಗಳನ್ನು ಮಾಡ ವುದಾಗಿ ನೋಟಿಸೂ ಪ್ರಕಟವಾಯಿತು

25ನೆ ತಾರೀಕಿನ ಬೆಳಿಗ್ಗೆ ಶ್ರೀ ರಾಮಚಾರ್ಯರು (ಎಮ್ ಎಲ್ ಎ) ಗೋರಿಬಿದನೂರಿನಿಂದ ಇಲ್ಲಿಗೆ ಮೆರವಣಿಗೆಯಾಗಿ ಬಂದರು ಆಗ ಅಲಿ 40 ಪೊಲೀಸರಿದ್ದರು ಇವರೊಳಗೆ 10 ಕೋವಿಗಳೂ ಇದ್ದುವು ಗುಂಡುಗಳು 37 ಮಂದಿಗೆ ಸಾಕಷ್ಟಿದ್ದುವು ಅಧಿಕಾರಿಗಳು ಈ ಮೆರವಣಿಗೆಯನ್ನು ಹಿಂದಿಕ್ಕಿ ಮುಂದೆ ಬಂದರು 100—150 ಹುಡುಗರೂ ಈ ಮೆರವಣಿಗೆಯಲ್ಲಿದ್ದರು ಮುಂದೆ ಹೋಗುವಂತೆ ಮೆರವಣಿಗೆಗೆ ಜನಬಲ ಹೆಚ್ಚಿತು ಒಟ್ಟು 4—5000 ಜನರು ಸೇರಿರಬಹುದು ಇನ್ನೂ ಜನರು ಬರುತ್ತಲೇ ಇದ್ದರು ಜಿಲ್ಲಾ ಮೆಜಿಸ್ಟ್ರೇಟರು ದೇವಸ್ಥಾನದಿಂದ ಒಂದು ಫರ್ಲಾಂಗು ದೂರ ನಿಂತರು ಗಡಿಗಳು ತಂಗುವಲ್ಲಿ ರಿಜರ್ವ ಪೊಲೀಸರಿದ್ದರು ಸಬ ಡಿವಿಜನ್ ಆಫಿಸರರು ಅವರ ಜವಾನರೂ ಬರುವಾಗ ಜನರು ಕಿಕ್ಕಿರಿದಿದ್ದರು. ಜಿಲ್ಲಾ ಮೆಜಿಸ್ಟ್ರೇಟರ ಬಳಿಯಲ್ಲೇ ಇದ್ದರು ತಿರುಪತಿ ದಲ್ಲೇನಾಗುತ್ತಿತ್ತೆಂದು ಅವರಿಗೆ ಕಾಣುತ್ತಿರಲಿಲ್ಲ ಅಲ್ಲಿ ಹಳ್ಳೀಜನರು ತುಂಬ ಇದ್ದರು ರಾಮಾಚಾರ್ಯರೂ ಇದ್ದರು ಜನರು ಶಾಂತವಾಗಿ ಎಂದಿಗಿಂತ ಹೆಚ್ಚಾಗಿ ಮೌನವಾಗಿದ್ದರು ಸಬ್ ಡಿವಿಜನ್ ಆಫಿಸರರು ಜನರಿಗೆ [illegible] ಹೇಳಿದರು ಆಜ್ಞೆಮಾಡದಿರಿ ಎಂದರು ಧ್ವಜವಂದನೆಯಾಗಬೇಕೆಂದೇ ಜನರು [illegible] ಹಿಡಿದು ಮೌನವಾಗಿದ್ದರು

ಧ್ವಜವಂದನೆಯಾಯಿತು ನಾಲ್ವರನ್ನು ಕೈದು ಮಾಡಿದರು ಕೂಡಲೆ ಜನರು [illegible] ಗೂಡತೊಡಗಿದರು ಹಿಂದುಪುರದವನೊಬ್ಬ ಕಾನೂನು ಮುರಿಯುತ್ತೇನೆಂದನು 'ಹಾಗೇ ಮಾಡಿ ದೇಶಸೇವೆ ಮಾಡೋಣ ಬಲಿಯಾಗೋಣ' ಎಂದರು ಸಬ್ ಡಿವಿಜನ್ ಆಫಿಸರರೂ ಅಮಿಲ್ದಾರರೂ ಜನರನ್ನು ಹಾಗೆ ಮಾಡದಂತೆ ಬೇಡಿಕೊಂಡರು ಕೋಲಾರದಲ್ಲಿ ಅನಭಿಷಿಕ್ತ ರಾಜನೆಂಬಂತಿದ್ದ ರಾಮಾಚಾರ್ಯರಿಗೆ ಸ್ಪೆಶಲ್ ಅಪೀಲು ಮಾಡುತ್ತ ಸಬ್ ಡಿವಿಜನಲ್ ಆಫಿಸರರು ಪ್ರೇರೇಪಿಸಲು ಅವರು ಕೆಲವೇ ಹಿಂಬಾಲಿಕರೊಡನೆ ಹೊಳೆದಾಟಿ ಆಚೆಗೆ ತೆರಳಿದರು ಉಳಿದ ಜನರು ಗುಂಪು ಆಫಿಸರರಿಗೆ ಅಪಮರ್ಯಾದೆ ಮಾಡಬೇಕೆಂದೇ ಉಳಿದರು ರಾಮಾಚಾರ್ಯರನ್ನ ಹಿಂಭಾಲಿಸಿದವರು ಬರೇ ನೂರು ಮಂದಿ ರಾಮಾಚಾರ್ಯರು ಜನರಿಗೆ ಬೋಧಿಸಿದರೂ ಅವರನ್ನ ಜನರು ಗಣ್ಯಮಾಡಲಿಲ್ಲ ಶಿವಪುರದಲ್ಲಾದುದರ ವಿಪರೀತವೇ ಇಲ್ಲಿ ಆಯಿತ ಇವರೇ ಕೆಲ ಆಫಿಸರರು 10000 ಜನರನ್ನು ಹತೋಟಿಗೆ ತರಬೇಕಾಯಿತು ಧ್ವಜಗಳೆಲ್ಲ ಅಲ್ಲೇ ಇದ್ದುವು

ಇನ್ನ ಆಫಿಸರರು ಈ ಜನರನ್ನ ಹೋಗಲು ಬೇಡಿಕೊಳ್ಳದೆ ಬದಲಾಗಿ ತಂವೇ ಅಲ್ಲಿಂದ [illegible] ತಮ ವೆನ್ನುವ ಗಳಿಗೆ [illegible] ಜತನವಾಗಿ ಇವರೂ ಜವಾನರೂ ಹೊರಬಿದ್ದರೆ [illegible] ಕೋಟದ ಬಳಿ [illegible] ಅವರಿಗೆ ಹೋಗ [illegible] ಸ್ಥಳವೇ ಇರಲಿಲ್ಲ ಆತೀ ಪೊಲೀಸರು [illegible] ಭತದ [illegible] ಗಬೇಕಾಗಿ [illegible] ರನ್ನು [illegible] ಜನಗಳ [illegible] ಗಿದ್ದರು ಲಾಥಿಚಾರ್ಜ [illegible] ಅಧಿಕಾರಿಗಳನ್ನು [illegible] ವಿನ ಬಳಸಲಿಲ್ಲ ಅಧಿಕಾರಿಗಳು [illegible] ಜನರ ಒಂದು [illegible] ಆಫಿಸರರ [illegible] ಆಗ [illegible] ಹೊಡೆಯಲು ಸಬ ಡಿವಿಜನ್ ಆಫಿಸರರ ಅಪ್ಪಣೆ [illegible] ಗುಂಡು ಹೊಡೆಯಲು ಅಪ್ಪಣೆ [illegible] ಇಷ್ಟರಲಿ ಜಿಲ್ಲಾ ಮೆಜಿಸ್ಟ್ರೇಟರು ಅತ್ತ ಬಂದರು ಅವರ ಗುಂಡು ಹೊಡೆಯ ಹೇಳಿದರು —3 [illegible] ಹೀಗೆ ಗುಂಡು ಹೊಡೆದಾಯಿತ ನಂತರ ತಡೆದಾಯಿತೆ ಎಷ್ಟು ಹೊತ್ತು [illegible] ವಾಗಿರಬಹುದೆಂದು ನೋಡಲು (12 ರಿಂದ 10 ನಿಮಿಷಕ) ಜಿಲ್ಲಾ ಮೆಜಿಸ್ಟ್ರೇಟರು ತಡೆದರ ಮೂವರು ಪೊಲೀಸರಿಗೆ ಜಖಂ ಆಗಿತ್ತು ಅವರನ್ನು [illegible] ಆಸ್ಪತ್ರೆಗೆ ಕಳುಹಿಸಲಾಯಿತು ಪೊಲೀಸರಿ [illegible] 4 ಮಂದಿ ಜನರನ್ನೂ ಕಳೆಹಿದ್ದರೆ [illegible] ವಿಷಯ ಮತ್ತೆ ಆಲೋಚಿಸಲಾಯಿತು ಗೋರಿಬಿದನೂರು ಡಾಕ್ಟರರನ್ನ ಇತಬಂದ ತಿಳಿಸಲು ಅವರ ಗಾಡಿಯನ್ನ ಅಧ ಮಲ್ಲೇ ತಡೆದ (2 ಗಂಟೆಗ) [illegible] ಜನರು ಹಿಂಡಾಗಿ ಮುತ್ತಿ ಕಲ್ಲೆಸೆದು ಅದನ್ನ ಸುಡುವುದಕ್ಕೆ ಪ್ರಯತ್ನಗಳಾದುವು ಡ್ರೈವರನು ಒದ್ದೆಯಾಗಿದ್ದ ಕಾರಣ, ಮಲ್ಲನೆ ಗದ್ದೆಗಳಿಗಿಳಿದು ಹಿಂದೆಯೆ ಕಾರನ್ನು ನಡೆಸಿದರು

ಇತ ಸಂಜೆ 5 ಗಂಟೆಯೊಳಗ [illegible] ಕತ್ತಲದ ಬಳಿ ಜನರ ಹಿಂಡು ಪ್ರಬಲವಾಗಿ ಆಫಿಸರರ ಮೇಲೆ ಕಲ್ಲೆಸೆಯಿತೆ ಡಗಿತ ಜಿಲ್ಲಾ ಮೆಜಿಸ್ಟ್ರೇಟರೂ ಅತ್ತಿತ್ತ ಹೋಗುವುದಕ್ಕಾಗ [illegible] ದಂತೆ ಚಕ್ರಬಂಧವಾಗಲು 5 40ಕ್ಕೆ ಗುಂಡು ಹಾರಿಸಲು ಅವರು ಅಪ್ಪಣೆಕೊಟ್ಟರು ಒಂಬತ್ತು ಗುಂಡು ಹಾರಿಸಿದರು ಒಟ್ಟು 101 ಗುಂಡು ಹಾರಿಸಿದರ, 740 ಗುಂಡುಗಳು ಇದ್ದುವು 8·80ಕೆ ಬೆಂಗಳೂರಿಂದ ಪೋಲೀಸರು ಬಂದರು ರಿಸ್ಪಿನ್ಸ್ ಕಮಿಶನರರೂ ಬಂದರು

32 ಮಂದಿ ಸತ್ತರೆಂದೆಲ್ಲ ಪ್ರಕಟವಾಗಿತ್ತು ಸತ್ತವರು 10 ಮಂದಿ (ಹನ್ನೊಂದಲ್ಲವೆ? ಎಂದು ಅಧ್ಯಕ್ಷರು ಕೇಳಿದರೆ, ಹತ್ತೇ ಒಂದುತ್ತರ ಹದಿನಾಲ್ಕು ಮಂದಿ ಸತ್ತವರ ಹೆಸರುಗಳನ್ನು ಮದ್ರಾಸಿನ ಎರಡು ಪತ್ರಿಕೆಗಳು ಮುದ್ರಿಸಿವೆ) ಯಾವ ಹೆಂಗುಸನ್ನೂ ಕೊಂದದಿಲ್ಲ

(ಮುಂದೆ ಸಾಗುವುದು)

ಮೆಕ್ಸಿಕೋ ದಂಗೆ

ಮೆಕ್ಸಿಕೋವಿನ ಈಗಿನ ಪ್ರೆಸಿಡೆಂಟರು ರಾಷ್ಟ್ರದ್ರೋಹಿಯೆಂದು ಯಾವನೊಬ್ಬ ಮುಖಂಡನನ್ನ ಹೊರಗಟ್ಟಿದರು ಆತನೇ ಹಲವರನ್ನು ಕೂಡಿಸಿಕೊಂಡು ದಂಗೆ ಎಬ್ಬಿಸಿದನು

ಪ್ರೆಸಿಡೆಂಟರು ಬೀಡುಮಾಡಿದ್ದಲ್ಲಿ ಮೇಲೆ ಒಂದ ವಿಮಾನವು ಹಾರಾಡುತ್ತ ನಾಲ್ಕು ಸಿಡಿಗುಂಡುಗಳನ್ನ ಚೆಲ್ಲಿತು ಅಲ್ಲಿ ವಿಮಾನ ರಾಣ್ಣವೂ [illegible] ಯಾವ ಕೆಡುಕೂ ಸಂಭವಿಸಲಿಲ್ಲೆಂಬುದು ವಿಚಿತ್ರ ಈ ವಿಮಾನವನ್ನು ಹಿಂಬಾಲಿಸಲು ಸರಕಾರೀ ವಿಮಾನಕ್ಕೆ ಸಾಧ್ಯವಾಗಲಿಲ್ಲ

[illegible] ಸರಕಾರದ [illegible] ಡಲ್ಲಿ ಅವರನು ಪ್ರಯತ್ನಿ ಧ್ವಂಸಮಾಡಬೇಕೆಂದು [illegible]

[illegible] ರಾಣ್ಣ [illegible] ಗೆ [illegible] ಬಂದಿದೆ ಅವನ್ನೆಲ ಸ [illegible] ಗಿದೆ

[illegible]

ಯ ರೋಪಿನಲ್ಲಿ [illegible] ಹಲವೆಡ್ಡಾಗಿ ಇಲ್ಲಿಯ [illegible] ದಂಗೆ

[illegible] ಯುದ್ಧವು ಭಯಂಕರವಾಗಿದೆ ಅದಕ್ಕಿಂತ ಹೆಚ್ಚಿನ [illegible] ಈಗ [illegible] ಇವುಗಳ [illegible] ವಳಿಯು ಟಾಗಿದೆ

ಸರಕಾರದ ಸೈನ್ಯಗಳಲ್ಲೇ ಅದರ ಕಟ್ಟಕಡೆ [illegible] ವನೆಂದ ಆದರೆ ಥಕ್ಕನೆ ಯುದ್ಧವು ಮುಗಿಯುದೆಂದು ಹಿಂದೆ ಎಣಿಸಿದುದಕ್ಕೆ ತ [illegible] ಹೆಚ್ಚಿನ ಅವಧಿಗೆ ಯುದ್ಧವು ಎಂದಿಗೆ ನಡೆವವುದೆಂದು ನಂಬುಗೆ ಇದೆ

ಬ್ರಿಟನಿನ ಭ್ರಮೆ

ಧರ್ಮನಿಯನ್ನು ಹಿಮ್ಮೆಟ್ಟುವ ಉದ್ದೇಶದಿಂದ ಯುದ್ಧ ಶಸ್ತ್ರ [illegible] ಸಲು ರಾತ್ರಿ ಹಗಲು ಪರಿಶ್ರಮಿಸಿ ಅವರಿ ಆದರೆ ಜರ್ಮನಿಯಿಂದ ಹೇರಳ ಯುದ್ಧಶಸ್ತ್ರ [illegible] ಗಳು ಸ್ಪೇಯಿನಿಗೆ ಸಾಗಿದ್ದರೂ ಆದರ [illegible] ಶಸ್ತ್ರ, ಸಿಡಿಮದ್ದು ಶೇಖರವು ಬ್ರಿಟನಿಗಿಂತ ಶ್ರೇಷ್ಠವಾಗಿರುತ್ತದೆ ಈಗ ಬ್ರಿಟನ್ ಅಮೇರಿಕದಿಂದ ತನಗೆ ಬೇಕಾದ ಯುದ್ಧಶಸ್ತ್ರ ಸಿಡಿಮದ್ದುಗಳನ್ನು ಪಡಕೊಳ್ಳುವುದಂತೆ

ಯುದ್ಧಸನ್ನಾಹತೆಯನ್ನು ಹೆಚ್ಚಿಸಿದ ಹಾಗೆಲ್ಲ ಶಾಂತಿ ಸ್ಥಾಪನೆ ಕಾರಣಗಳು ಹೆಚ್ಚುವವೆಂದು ಇಂಗ್ಲಾಂಡಿನ ಧುರೀಣರ ಅಭಿಪ್ರಾಯವಾಗಿತ್ತು ಕೆಲ ಸಮಯದ ಹಿಂದೆ ಈಗ ಇಂಗ್ಲಾಂಡಿನ ಯುದ್ಧ ಕಾರ್ಯಾಚರಣೆ ಅತ್ಯಧಿಕವಾಗಿ ಹೆಚ್ಚಿರುತ್ತದೆ ಆದರೆ ಶಾಂತಿಯು ಹುರುಹುಗಳು ಕಾಣಿಸಿಕೊಳ್ಳುವ ಬದಲಿಗೆ— ಯುದ್ಧ ಸಂಭಾವಗಳು ಈಗ ಹೆಚ್ಚಾಗಿವೆ

ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಇಂಗ್ಲಾಂಡು ಫ್ರಾನ್ಸು ವ್ಯವಹಾರವು ಸುರಕ್ಷಿತವಾಗಿ ನಡೆಯುವಂತೆ, ಚಾನೆಲ ಸಮುದ್ರದಡಿಯಲ್ಲಿ ಎರಡೂ ದೇಶಗಳನ್ನು ಜೋಡಿಸುವ ಒಂದು ಸುರಂಗವನ್ನು ಒಂದು ಯೋಜನೆಯಾಗುತಿದೆ

ಮಧ್ಯ ಐರೋಪ್ಯದ ದೇಶದ ವ್ಯಾಪಾರವು ಸಾಂಗವಾಗಿ ಜರುಗಲು ಅನುಕೂಲವಾಗುವಂತೆ ಫ್ರಾನ್ಸಿನ ಮೂಲಕ ಒಂದು ದೊಡ್ಡ ಕಾಲುವೆಯು ತೋಡಲಾಗುವುದು

ತನ್ನ ಸಂಪೂರ್ಣ ಕುಟುಂಬವನ್ನು ಕೊಲೆ ಮಾಡಿದ್ದಾಕೆ

ವಿಯನಾ ಸಂಸ್ಥೆಗಳನ್ನ [illegible] ವರಿ ಅಸ್ಟ್ರಿಯಾದ ವಿಯನಾ ನಗರದ ನಡುಪಾಯದ ಪ್ರಭಾತವಾದ [illegible] ಯ್ಯೊಬ್ಬಳು ಕ್ರೂರ ತರದ ಕೊಲೆಗಳನ್ನು ನಡೆಯಿಸಿದ ವಾರ್ತೆಯು ಬಂದಿರುತದೆ

ಈಕೆಯ ಹೆಸರು ಮಾರ್ತಾ ಮರೇಕ್ ಳೆಂದು ಮಾರ್ತಳು ತನ್ನ 14ನೇ ವಯಸ್ಸಿನಲ್ಲಿ ಶ್ರೀಮಂತ ವೃದ್ಧನೆಬ್ಬನನ್ನು ವಿವಾಹ ಮಾಡಿಕೊಂಡ ತನ್ನ [illegible] ದಲಿ [illegible] ದವನಾದ [illegible] ವಿವಾಹವಾದಳ

ವಿವಾಹವಾದ ಕೆಲ ವರ್ಷಗಳ [illegible] ಎವಿ ಲನ ತನ್ನ [illegible] ಗಳ ಮೇಲೆ [illegible] ಹೀಗೆ [illegible]

[illegible] ಪಡೆಯ [illegible] ನಡೆಯಿತ [illegible] ಗಳ [illegible] ಡಲಾಯಿತ

[illegible] ಮಾಡಿದಳ ನಂತರ ತನ್ನ [illegible] ಮಾಡಿದಳು [illegible] ಸಂಹಾರ ಮಾಡಲೆತ್ನಿಸಿದ ಸಮಯ, ಮಗನ ಚೀರಿದ ದರಿಂದ [illegible] ಜನರ ಬಂದು ಬಿಟ್ಟು ಕೊಲೆಪಾತಕಿಯನ್ನು ಹಿಡಿಯಲಾಯಿತು

ಆಗ ಐದ ಕೊಲೆಗಳನ್ನ ನಡೆಯಿಸಿದ [illegible] ವಿಚಾರಣೆ [illegible] ಜನರು [illegible] ಟೇಶ ಹತ್ತಿರ ಕಿಕ್ಕಿರಿದು ನೆರೆಯುತ್ತಿದ್ದರು.

ಫೆಡರೇಷನ್ ಬದಲಾಗುವುದು?

ವೈಸ್ರಾಯರು ಇಂಗ್ಲಂಡಿಗೆ [illegible] ರಷ್ಟೆ ಅಲ್ಲಿ ಬ್ರಿಟಿಷ್ ಮಂತ್ರಿ ಮಂಡಲದೊಡನೆ ಮಾತನಾಡಿ [illegible] ಇಂಡಿಯಾ ಆಕ್ಟಿನ ಫೆಡರೇಶನನ್ನ ಕಾಂಗ್ರೆಸ್ ಅಭಿಪ್ರಾಯಗಳಿಗೆ ಸರಿಹೊಂದುವಂತೆ ಬದಲಾಯಿಸುವರೆ ಪ್ರಯತ್ನಿಸುವರಾಗಿಯೂ ಇಂಗ್ಲಾಂಡಿನಿಂದ ಹಿಂತಿರುಗಿದೊಡನೆ ಅವರು [illegible] ಒಂದು ಪ್ರಕಟನೆಯನ್ನು ಮಾಡಲಿದ್ದಾರೆಂದೂ [illegible] ವಾರ್ತೆಯಿದೆ ನವಗ [illegible] ಸ್ಟೇಟ್ಸ್ ಹೊಡಲಾಗದಿದ್ದರೂ, ನವಗೆ ಸಮಾಧಾನವಾಗುವಂತೆ ಅಲ್ಲಿ ಫೆಡರೇಶನಿನಲ್ಲಿ ಬದಲಾವಣೆಗಳಾಗಬಹುದಂತೆ

ಬಿಹಾರಿನ ಸಂಗ್ರಾಮಿಕ ಶಿಕ್ಷಣ ಶಾಲೆ

ರಾಷ್ಟ್ರೀಯ ಸೈನ್ಯದಳದ ವ್ಯವಸ್ಥೆಯಾಗುವಂತೆ ಬಿಹಾರಿನ ಕಾಂಗ್ರೆಸ್ ಸರಕಾರವು ಸದ್ಯದಲ್ಲೆ ಸಾಂಗ್ರಾಮಿಕ ಶಿಕ್ಷಣಾಲಯವನ್ನು ತೆರೆಯುವುದಾಗಿ ಬಿಹಾರಿನ ವಿದ್ಯಾಮಂತ್ರಿ ಡಾ॥ ಮಹಮದ್ ರವರ ಪ್ರಕಟಣೆಯಾಗಿರುತ್ತದೆ

[illegible] ರಾಷ್ಟ್ರೀಯ ಸೈನ್ಯದಳವಿದ್ದರೆ ಉತ್ತಮ ವಿದೆಂದು ಈ ಯೋಜನೆಯ ಉದ್ದೇಶ

[illegible] ವಾರ ಕಥೆಗಳು [illegible] ಪತ್ರಿಕೆ ಇತ್ಯಾದಿಗಳು ಪ್ರಸಾರಣೆ ನಡೆಯಿಸದಂತೆ [illegible] ಕಾಂಗ್ರೆಸ್ ಮಂತ್ರಿ ಮಂಡಲಗಳಿಗೆ ಹೆಚ್ಚಿನ ಅಧಿಕಾರ ದಲಾಗಿದೆ ಹಿಂದೂದೇಶದಲ್ಲಿ ಬ್ರಿಟಿಷ ಸೈನ್ಯದಳದ ಬದಲಾಗಿ ಹಿಂದೀಯ ಸೈನ್ಯದಳವನ್ನು ಇರಿಸುವರ [illegible] ಬೇಕಾದರೆ ಎಲ್ಲಾ ವರ್ಗಗಳ [illegible] ಸೈನ್ಯವರ್ಗಕ್ಕೆ ಕೂಡಿಸಿಕೊಳ್ಳುವ ಯೋಜನೆಯೊಂದಾಗಬೇಕೆಂದು [illegible] ದರ್ಶಕರ [illegible] ಸಲಹೆ

ಮೋಟರು ಅಪಘಡಗಳ ಪರಿಣಾಮ

[illegible] ಹಣಕ್ಕಾಗಿ [illegible] ಬಂದಿರುತ್ತದೆ

[illegible] ಪತ್ರಿಕೆಯ [illegible] ನಡೆ [illegible] ವಿವಾಹ [illegible] ಹಣವನ್ನು [illegible]

[illegible] ಆಸ್ಪತ್ರೆಯ [illegible] ವೈದ್ಯ [illegible] ಗಿರುವ

ಹೀಗೆ [illegible] ಇನ್ನೊಬ್ಬ ಹುಡುಗನ [illegible] ರತದೆ

ರಾಜಕೀಯ ಕೂಲೆಗಡುಕರ ನಿಲಯವದು — ಜನಾಂಗ ಮುಖಂಡರ 50 ಸಾವಿರದ ಲಂಚ ಕೊಡಲಾಯಿತು.

[illegible] ಈ ಪ್ರಶ್ನೆಗಳಿಗೆ ಉತ್ತರವು [illegible] ಉದ್ಯೋಗಿ [illegible] ರಾಜಕೀಯ [illegible] ಯುಕ್ತಿಗಾರರ ಅವರಲ್ಲಿ ಸೇರಿರುವರು [illegible] ಅಭಿಪ್ರಾಯ

ಜನಾಂಗದ [illegible] ಹಾಯಿದೆ [illegible] ಬ್ರಿಟನಿಗೂ ಅದರ [illegible] ಗಳಿಗೂ [illegible] ದಾಭಿಪ್ರಾಯಗಳು [illegible] ಆಗಲು [illegible] ಶವಾಗುತ್ತದೆಂದು, ಕೊಮುಸರ ಅಭಿಪ್ರಾಯ.

★ ರಷ್ಯಾ-ಜಪಾನು! ★

★ ಪೂರ್ವಪ್ರಾಂತ್ಯದಲ್ಲಿ ಮಹಾಯುದ್ಧದ ಸಿದ್ಧತೆ ★

ಅಮೇರಿಕದಲ್ಲಿನ ಎಸೋಸಿಯೇಟೆಡ್ ಪ್ರೆಸ್ ವಾರ್ತಾದಾಯಕ ಜೇಮ್ಸ್ ಮಿಲ್ಲನು ಕೆಲವು ಹಿಂದೆ ಪತ್ರಿಕಾಕರ್ತರಿಗೆ ತಿಳಿವಳಿಕೆಗಾಗಿ ಕೆಲವಿಷಯಗಳನ್ನು ಪ್ರಕಟಿಸಿರುವನು

ಸೋವಿಯಟ್ ರಷ್ಯದ 4 ಲಕ್ಷ ಅತ್ಯುತ್ತಮ ಸೈನಿಕರನ್ನೂ 4000 ಟ್ಯಾಂಕ್‌ಗಳನ್ನೂ ...00 ವಿಮಾನಗಳನ್ನೂ ಮಂಚುಕುವೋ ಬಳಿಯಲ್ಲಿ ತಂದಿಟ್ಟಿದ್ದಾರೆ. ಇಲ್ಲಿ ರಷ್ಯಕ್ಕೂ ಜಪಾನಿನ ಸಹಾಯಕ ರಾಷ್ಟ್ರಕ್ಕೂ ನೇರವಾಗಿ 2000 ಮೈಲು ಉದ್ದಕ್ಕೆ ಗಡಿಯಿದೆ. ಇಲ್ಲೆಲ್ಲ ಅಲ್ಲಲ್ಲಿ ವಿಷವಾತ ಹರಡಿಸುವ ಸಿಡಿಗುಂಡುಗಳ ಸನ್ನಾಹಗಳಿಟ್ಟ ಕೇಂದ್ರಗಳುಂಟು. 2000 ಮೈಲು ದೂರಕ್ಕೂ ರಷ್ಯದ ನಗರಗಳಿರುವಲ್ಲಿ ಪ್ರತಿಯೊಬ್ಬ ನಿವಾಸಿಗೂ ಕೋವಿಗಳನ್ನೂ ಗುಂಡುಗಳನ್ನೂ ಅಲ್ಲದೆ ವಿಷವಾತದಿಂದ ಪಾರಾಗುವ ಮುಸುಕುಗಳನ್ನೂ ಒದಗಿಸಿದ್ದಾರೆ.

ಬೋಲ್ಶೆವಿಕರು ಪ್ರತಿಯೊಂದು ಕಡೆ ನೂರಾರು ಚಿಕ್ಕ ಪೆಟ್ಟಿಗೆಯಂತಹ ಅಭೇದ್ಯವಾದ ಕೋಟೆಗಳನ್ನು ಕಟ್ಟಿಸಿರುವರು. ಹೀಗೆ ಈ ಕಡೆಗೆ ಹಗೆಯವರಾರೂ ನುಸುಳುವುದೂ ಸಾಧ್ಯವಾಗದಂತೆ ಮಾಡಲಾಗಿದೆ. ಪೂರ್ವರಷ್ಯವು ಹೀಗೆ ಯುದ್ಧ ಸನ್ನದ್ಧನಾಗಿ ಮುಹೂರ್ತ ಕಾಯುತ್ತಿದೆ

ಈ ಕೊನೆಯಿಂದ ಆ ಕೊನೆಗೆ ಹಾದು ಹೋಗುವ ರೈಲುಮಾರ್ಗವನ್ನು ಮಾತ್ರ ನಂಬದೆ, ಅದಕ್ಕೆ ಸರಿದೂರವಾಗಿ ರಷ್ಯದೊಳಗೇ ಮತ್ತೊಂದು ರೈಲುಮಾರ್ಗಗಳನ್ನು ನಿರ್ಮಾಣ ಮಾಡಿರುವರು. ಹಗಲೂ ರಾತ್ರಿಯೂ ಈ ರೈಲುಮಾರ್ಗದಲ್ಲಿ ಯುದ್ಧೋಪಕರಣಗಳು ಚಲಾವಣೆ ಹೊಂದುತ್ತಲೇ ಇವೆ

ಸುಲಭ ಬೆಲೆ ಬ್ಲೇಡುಗಳಲ್ಲಿ ಅಸಾಧ್ಯವೆನಿಸುವ ಗುಣಗಳೆಲ್ಲಾ ನೆಸೆಟ್ ಬ್ಲೇಡುಗಳಲ್ಲಿದ್ದು ಅವುಗಳು ನಿಮಗೆ ಅನೇಕ ವರ್ಷಗಳಿಂದ ತ್ವರೆಯಾದ, ಚೊಕ್ಕಟ ನಿರ್ಮಲ ಮತ್ತು ಶೀಘ್ರತವಾದ ಕ್ಷೌರಗಳನ್ನು ಕೊಟ್ಟಿರುತ್ತದೆ. ಈಗ ನಿಮಗೊಂದು ಧರ್ಮಾರ್ಥ ಬಹುಮಾನ ಕೊಡುವ ಗುಣವು ಅವುಗಳಲ್ಲಿ ಕಂಡಿರುತ್ತದೆ ಬಹುಮಾನವನ್ನು ಪಡೆಯ ಎಡರೆ ಹೀಗೆ ಮಾಡಬೇಕು. ನೀವು ನೆಸೆಟ್ ಬ್ಲೇಡುಗಳನ್ನು ಪಡೆದುಕೊಳ್ಳುತ್ತಿರುವಾಗ ಅದರಲ್ಲಿ ದೊಡ್ಡ ಇಂಗ್ಲೀಷ ಅಕ್ಷರವು ಇರುವಂತೆ ಜಾಗರೂಕರಾಗಿರಿ—ಅವುಗಳನ್ನು ಕೂಡಿಸಿರಿ—ಕೊನೆಗೆ, 'ನೆಸೆಟ್ ಬ್ಲೇಡು Nacet Blade ಎಂಬ ಶಬ್ದಗಳನ್ನು ಕೊಡುವಷ್ಟು ಬ್ಲೇಡು ನಿಮ್ಮೊಡನೆ ಒಟ್ಟಾದ ಕೂಡಲೆ, ಅವುಗಳನ್ನು ಕೆಳಗೆ ಕೊಟ್ಟ ವಿಳಾಸಕ್ಕೆ ಕಳುಹಿಸಿ ಕೊಡಿರಿ.

ಬದಲಿಗೆ ಒಡನೆ, ಅತ್ಯಂತ ಸುಂದರವಾದ, ಒಂದು ರೂಪಾಯಿ ಕ್ರಯ ಬಾಳುವ

ಇಸ್ತ್ರಿಟು ಪೆಟ್ಟಿಗೆಯೊಂದನ್ನು ಪಡೆಯುವಿರಿ.

ನಿಮ್ಮ ಅನುಕೂಲಕ್ಕಾಗಿ, ನಿಮ್ಮೂರಿನ ವ್ಯಾಪಾರಸ್ಥರು ನಿಮಗೊಂದು ನೆಸೆಟ್ ಕೂಪನ್ ಕಾರ್ಡನ್ನು ಧರ್ಮಾರ್ಥವಾಗಿ ಕೊಡುವರು. ಅದರಲ್ಲಿ ನಿಮ್ಮ ವಿಳಾಸವನ್ನು ಬರೆದು, ಅದನ್ನು ಕೆಳಗೆ ಕೊಟ್ಟ ವಿಳಾಸಕ್ಕೆ ಕಳುಹಿಸಿ ಕೊಡಿ.

ಇಂತಿಷ್ಟೆ ಇಸ್ತ್ರಿಟು ಪೆಟ್ಟಿಗೆಗಳನ್ನು ಬಹುಮಾನವಾಗಿ ಪಡೆಯಬಹುದೆಂಬ ಮಿತಿಯು ಇರುವದಿಲ್ಲ. ಆದ್ದರಿಂದ ಈಗಲೇ ಬ್ಲೇಡುಗಳನ್ನು ಕೂಡಿಸಲುಪಕ್ರಮಿಸಿರಿ—ಅವುಗಳನ್ನು ನಿಮ್ಮ ಸ್ನೇಹಿತರೊಡನೆ ಬದಲಾಯಿಸಿಕೊಂಡು, ನಿಮ್ಮಲ್ಲಿರದ ಅಕ್ಷರಗಳನ್ನು ಪಡೆದು—ಈ ಮಹತ್ವಾದ ಸಮಾಚಾರದಿಂದ ಲಾಭವನ್ನು ಪಡೆಯುವುದರಲ್ಲಿ ಮೊದಲಿಗರಾಗಿರಿ

ಇಂದೇ ನೆಸೆಟ್ ಬ್ಲೇಡಿನ ಪೆಕೆಟನ್ನು ಪಡೆಯಿರಿ. ಅದರ ಸೆಲೊಫೇನ್ ಕವಚವು ಭದ್ರವಾಗಿರುವಂತೆ ನೋಡಿರಿ

7 ಆಣೆಗಳಿಗೆ ಬ್ಲೇಡು 10

ನೆಸೆಟ್ ಬ್ಲೇಡುಗಳು—ಮೂರು ಗೂಟದ ರೇಜರುಗಳಿಗೆ ಫಿಟ್ ಆಗುತ್ತದೆ.

ಮುಲ್ಲರ್ ಮತ್ತು ಫಿಪ್ಸ್, (ಇಂಡಿಯಾ) ಲಿಮಿಟೆಡ್, ಕಂಟ್ರಾಕ್ಟರ್ ಬಿಲ್ಡಿಂಗ್, ಬಲಾರ್ಡ ಎಸ್ಟೇಟ್ ಬೊಂಬಾಯಿ ★ ಎಡಿನ್ಬರೊ ಹೌಸ್, ಡಾಲ್ಹೌಸಿ ಸ್ಕ್ವೇರ್, ಕಲ್ಕತ್ತಾ ★ ಗಣ ಸದಾವರಮ ಚೆಟ್ಟಿ ಬೀದಿ, ಮದರಾಸು ★ ಓಲ್ಡ ನೆಪಿಯರ್ ರೋಡ್ ಕರಾಚಿ ★ ನೀಲಾ ಗುಂಬಜ್, ಲಾಹೋರ್ ★ ಸಿಂಧಿಯಾ ಬಿಲ್ಡಿಂಗ್, ಚಾಂದ್ನಿ ಚೌಕ್ ದೆಹಲಿ

"NACET" BLADES

INR

ರಕ್ತೈರ್ಮಹಾರ್ಹೈಸ್ತುತುರ್ಷನ
ದೇವಾ । ನ ಭೇಜಿರೇ ಭೀಮ
ವಿಶೀಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ

SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥
ಗರಲಕವರಂಜಿದರೆ! ಸುಧೆಯನು
ಮರೆತು ಕಷ್ಟದ್ದುರ
ತೆರಳಿ ಕುಳಿತರೆ । ತೆರಳೆ ಬಲ್ಲರೆ!
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಕು ೩—೬—೧೯೩೮ ತಾರೀಕು 3—6—1938

ಕಾಂಗ್ರೆಸಿನೊಡನೆ ಒಪ್ಪಂದ ಬೆಳೆಸುವದು ಉತ್ತಮ

ಬ್ರಿಟಿಷ್ ಪತ್ರಿಕಾಕರ್ತರ ಹಿತಬೋಧನೆ

ಬ್ರಿಟಿಷ್ ಸರಕಾರವು ಫೆಡರೇಶನಿನ ಕುರಿತು ಅಕ್ಷಿತ ರಾಜರುಗಳೊಡನೆ ಒಡಂಬಡಿಕೆಯ ವ್ಯವಹಾರವನ್ನು ನಡೆಯಿಸುವಂತೆ, ಪ್ರಾಂತೀಯ ಪ್ರಧಾನರೊಡನೆ ಮತ್ತು ಕಾಂಗ್ರೆಸ್ ನಾಯಕರೊಡನೆ ಯಾಕೆ ಒಡಂಬಡಿಕೆಯ ಮಾತುಗಳನ್ನು ನಡೆಯಿಸಬಾರದು? ಎಂಬುದಾಗಿ ಬ್ರಿಟಿಷ್ ಪತ್ರಿಕಾಕರ್ತರೊಬ್ಬರ ಪ್ರಶ್ನೆ

ಹಿಂದೂದೇಶದ ಅನುಮತಿಯಿಲ್ಲದೆ ಫಡರೇಶನನ್ನು ಹೊರಿಸುವ ಪರಿಣಾಮಗಳ ಕುರಿತು ಅವರ ಅಭಿಪ್ರಾಯವು ಹೀಗಿದೆ

ಇನ್ನೊಂದು ಹೋರಾಟವು ಬಂದುಬಿಟ್ಟರೆ, ಅದು 1930 ಮತ್ತು 1932ರ ಹೋರಾಟದಂತಾಗದು ಹಿಂದೂದೇಶದಲ್ಲಿ ಪ್ರಜಾಪ್ರತಿನಿಧಿ ಸೂತ್ರಗಳಿಗೆ ಸರಿಯಾಗಿ ಯೋಗ್ಯ ತರದಲ್ಲಿ ರಾಜ್ಯಾಡಳಿತವನ್ನು ನಡೆಯಿಸುವ ಜನರಿರುವಾಗ, ನಾವೇಕೆ ಅವರಿಗೆ ಅಡ್ಡಿಗೊಳಿಸುವುದ . ಅವರಲ್ಲಿ ಪ್ರಿಟನಿಗಿಂತ ಹೆಚ್ಚಿನ ಪ್ರದೇಶವಿರುವ ಪ್ರಾಂತ್ಯಗಳ ರಾಜ್ಯಾಡಳಿತವನ್ನು ನಡೆಯಿಸುವ ಯೋಗ್ಯತೆಯು ಇರುವುದಾದರೆ ಸಮಸ್ತ ಹಿಂದೂದೇಶವನ್ನು ಆಳುವ ಯೋಗ್ಯತೆಯು ಅವರಲ್ಲಿರುವುದಿಲ್ಲವೆ?

ರಾಷ್ಟ್ರಪತಿ ಸುಭಾಷ್ ಬೋಸರಿಗೆ, ಪೂಣೆಯ ನಗರಸಭೆಯ ಅಧ್ಯಕ್ಷರು, ಬಿನ್ನಹಪತ್ರ ಅರ್ಪಣೆಯ ಸಮಯ ಒಂದು ಖಡ್ಗವನ್ನು ಅರ್ಪಿಸಿದರು

ನವವಧುವಿನೊಡನೆ ಮಹಾತ್ಮಾಜಿಯವರು.

ಮಹಾತ್ಮಾಜಿಯವರ ಸೊಸೆಯಾದ ಶ್ರೀ ಕನುಲಿಂಗಮ್‌ರಿಗೂ ತಿರುವಾಂಕೂರಿನ ಶ್ರೀಮತಿ ಸರಸ್ವತಿ ಪಿಳ್ಳೆಯವರಿಗೂ, ವಾರ್ಧಾದಲ್ಲಿ ಗಾಂಧಿಜಿಯವರ ಸಮಕ್ಷಮದಲ್ಲಿ ವಿವಾಹ ನಡೆಯಿತು ಮಹಾತ್ಮಾಜಿಯವರು, ನವವಧುವಿನೊಡನೆ ಸಂಚಾರಕ್ಕೆ ತೆರಳಿದಾಗ ತೆಗೆದ ಚಿತ್ರವಿದು ಶ್ರೀಮತಿ ಸರಸ್ವತಿಯವರು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು

ಕಾಂಗ್ರೆಸ್ ಪತ್ರಿಕೆ ಸಂಯುಕ್ತ ಪ್ರಾಂತ್ಯದಲ್ಲಿ

ಕಾಂಗ್ರೆಸ್ ದೈನಂದಿನ ಪತ್ರಿಕೆಯೊಂದು ಸದ್ಯದಲ್ಲಿ ಸಂಯುಕ್ತ ಪ್ರಾಂತ್ಯದಿಂದ ಹೊರಡುವುದು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ನಾಯಕರ ಈ ನಿರ್ಧಾರವು ನಿಜವಾಗಿಯೂ ಶ್ಲಾಘನೀಯವು, ಕಾಂಗ್ರೆಸ್ಸಿಗೆ ಆ ತರದ ಪತ್ರಿಕೆಗಳ ಆವಶ್ಯವಿದೆ—ಅದು ಆ ಪ್ರಾಂತ್ಯದಲ್ಲಿ ಮಾತ್ರವಲ್ಲ

'ನಮ್ಮಲ್ಲಿ ಈಗ ಅನೇಕ ಪತ್ರಿಕೆಗಳು ಕಾಂಗ್ರೆಸ್ಸಿನ ಹೆಸರು ಹಾಕಿಕೊಂಡಿವೆ ಜನರ ಮನಸೆಳೆಯಲು ಅದೊಂದು ಉಪಾಯವೆಂದೂ, ಕಾಂಗ್ರೆಸ್ಸಿನ ಕಾರ್ಯಕಲಾಪಗಳ ಕುರಿತು ನಿಜವಾದ ಪ್ರಚಾರವು ಈ ಪತ್ರಿಕೆಗಳಿಂದ ಆಗುವುದಿಲ್ಲವೆಂದೂ, ಆಂಗ್ಲೋ-ಇಂಡಿಯನ್ ಪತ್ರಿಕೆಗಳೂ ಕೂಡ ವೃತ್ತಾಂತಗಳ ಪೂರ್ಣ ವರದಿಯನ್ನು ಮಾತ್ರ ಕೊಡುವುದಾದರೂ, ಹಿಂದೀಯ ಪತ್ರಿಕೆಗಳು ಅವುಗಳನ್ನು ಒಪ್ಪಿಡುತ್ತಾವೆಂದೂ, . . . ಒಳ್ಳೆ ಸಂದಿಗ್ಧ ಸಮಯಗಳಲ್ಲಿ ಸ್ವದೇಶ ಪ್ರೇಮವನ್ನು ವ್ಯಕ್ತಪಡಿಸಲು ಅನೇಕ ಪತ್ರಿಕೆಗಳಿಗೆ ಅಸಾಧ್ಯವಾಗಿದೆ ಎಂದೂ, . . . ಕಾಂಗ್ರೆಸ್ ಪತ್ರಿಕೆಗಳು ಇದೊಂದೆ ಅಲ್ಲ ಇನ್ನೂ ಇತರ ಪ್ರಾಂತ್ಯಗಳಲ್ಲಿ ಒಂದೊಂದು ಹೊರಟು, ಕಾಂಗ್ರೆಸ್ಸಿನ ಕುರಿತು, ಬಲವಾದ ಪ್ರಚಾರ ನಡೆಯಬೇಕೆಂದೂ . , ಮದರಾಸಿನ ಸಂಡೆ ಟೈಮ್ಸ್ ಪತ್ರಿಕೆಯು ಈ ಕುರಿತು ಠೀಕೆ.

ಮುಂದಕ್ಕೆ? ಲವಂಗ ಬಹಿಷ್ಕಾರದ ಜಯ

ಲವಂಗ ಬಹಿಷ್ಕಾರ ಚಳವಳವು ಬಹಳ ಯಶಸ್ವಿಯಾಗಿ ನಡೆದುಬಿಟ್ಟಿತು. ಹಿಂದೂ ದೇಶಕ್ಕೆ ಜಯದೊರಕಿತು

ಲವಂಗವು ಹಿಂದೂದೇಶದಲ್ಲಿ ದೊರಕುವ ವಸ್ತು ಅಲ್ಲ ಆದರೂ, ಅದರ ಮೇಲಿನ ಬಹಿಷ್ಕಾರವು ಯಶಸ್ವಿಯಾಗಿ ನಡೆದುಬಿಟ್ಟಿತು ಆದುದರಿಂದ ಹಿಂದೂದೇಶದಲ್ಲಿ ಸಿದ್ಧವಾಗುವ ಒಡವೆಗಳ ಮೇಲೆ ಬಹಿಷ್ಕಾರ ಹಾಕಲ್ಪಟ್ಟರೆ ಅದು ಎಷ್ಟು ಯಶಸ್ವಿಯಾಗಿ ನಡೆಯುವುದೆಂದು ಈಗ ಭಾವಿಸಬಹುದು. ಬ್ರಿಟಿಷ ಒಡವೆಗಳ ಮೇಲೆ ಬಹಿಷ್ಕಾರವನ್ನು ಅತಿ ಯಶಸ್ವಿಯಾಗಿ ನಡೆಯಿಸಲು ಸಂಪೂರ್ಣ ಅವಕಾಶವಿದೆ.

ಇದರಿಂದ ಬುದ್ಧಿ ಕಲಿತುಕೊಂಡು, ಬ್ರಿಟಿಷ ಸರಕಾರ ಮುಂದಕ್ಕೆ ಹಿಂದೀಯರ ಕುರಿತು, ವಿಚಾರವಂತರಾಗಿ ವರ್ತಿಸುವಂತೆ ವೈಸ್ರಾಯರು ಅವರನ್ನು ಎಚ್ಚರಗೊಳಿಸಬೇಕಾಗಿ, 'ಸಂಡೆ ಟೈಮ್ಸ್' ಪತ್ರಿಕೆಯ ಸೂಚನೆ.

ಜರ್ಮನಿಯಲ್ಲಿ ಯಹೂದ್ಯರ ಭವಿಷ್ಯ

ನಾಜಿಗಳ ಎಚ್ಚರಿಕೆ.

ಯಹೂದ್ಯರು ಇನ್ನು ಜರ್ಮನಿಯಲ್ಲಿ ಇರಲಿ ಬಾರದೆಂದು ಜರ್ಮನಿಯಲ್ಲಿ ನಾಜಿ ಪತ್ರಿಕೆಯೊಂದರ ಸೂಚನೆ ದೇಶದಲ್ಲಿ ಅವರ ಮೇಲೆ ವಕ್ರದೃಷ್ಟಿಯಿರುವಾಗ, ಅವರಲ್ಲಿ ಇನ್ನೂ ನಿಲ್ಲುವುದು ಯೋಗ್ಯವಲ್ಲವೆಂದು ಆ ಪತ್ರಿಕೆಯ ಬೋಧನೆ

ಯಹೂದ್ಯರ ಅಂಗಡಿಗಳ ಮೇಲೆ ಬಹಿಷ್ಕಾರ ಚಳವಳವಂತೂ ಬಹಳ ಬಿರುಸಾಗಿ ನಡೆಯುತ್ತಿದೆ ಯಹೂದ್ಯರ ಅಂಗಡಿ, ಹೊಟೆಲು ಇತ್ಯಾದಿಗಳು ಮಾರಾಟಕ್ಕಿವೆ ಎಂದೂ, ಪ್ರಕಟಣೆಗಳ ಸಂಖ್ಯೆಯು ದೈನಂದಿನ ಪತ್ರಿಕೆಗಳಲ್ಲಿ ಬಹಳವಾಗಿ ಹೆಚ್ಚಿವೆ. ಜರ್ಮನಿ ಮತ್ತು ಆಸ್ಟ್ರೀಯಾದ ಹಳ್ಳಿ ನಾಡುಗಳಲ್ಲಿ ಯಹೂದ್ಯರ ಅಂಗಡಿಗಳೇ ಇರುವುದಿಲ್ಲ.

ಐರೋಪ್ಯದ ಸಫಲಕರಣಿಗಾಗಿ ಹಿಟ್ಲರನ ನೂತನ ಯೋಜನೆ

ನೆಪೋಲಿಯನನಿಂದ ಆಗದ ಕೆಲಸ ಈತನ ಕೈಕೊಂಡಿರುವನು.

ಐರೋಪ್ಯದ ಮಧ್ಯೆ ಒಂದು ಕಾಲುವೆ

ಜರ್ಮನಿಯ ನೋರ್ತ್ ಸೀ (ಸಮುದ್ರ ಕರಾವಳಿಯಿಂದ ಪ್ರಾರಂಭಿಸಿ ಹಂಗೇರಿ ಜೆಕೊಸ್ಲೋವಿಯಾ ಬಾಲ್ಕನ್ ಪ್ರದೇಶಗಳ ಮೂಲಕವಾಗಿ ಬ್ಲೇಕ್ ಸಿ ವರೆಗೆ, ವ್ಯಾಪಾರ ಹಡಗಗಳ ಸಂಚಲನಕ್ಕೆ ಅನುಕೂಲವಾಗುವ ತರ ಕಾಲುವೆಯೊಂದನ್ನು ತೋಡುವ ಯೋಜನೆ ಹಿಟ್ಲರನಿಂದ ಮಾಡಲಾಗಿದೆ ಇದಕ್ಕೆ 6 ಮಿಲಿಯ ಪವನುಗಳ ವ್ಯಯ ತಗಲುವುದು ಈ ಕಾಲುವೆಯು ಜರ್ಮನಿಯ ನದಿಗಳಾದ ಮೈನ್, ರ್ಹೈನ್ ಮತ್ತು ಡೆನ್ಯೂಬ್‌ಗಳನ್ನು ಕೂಡಿಸುವುದು ಈ ನದಿಗಳನ್ನು ಇನ್ನೂ ಆಳವಾಗಿ ಮಾಡುವರು

ಈ ಕಾಲುವೆಯಿಂದ ಒಮ್ಮೆಗೆ ಬಾಲ್ಕನ್ ಪ್ರದೇಶಗಳಿಗೂ ವ್ಯಾಪಾರ ಸಂಬಂಧವು ಹೆಚ್ಚುವುದು ಪೂರ್ವ ಐರೋಪ್ಯದ ಜರ್ಮನಿಯ ಮಹತ್ವವು ಹೆಚ್ಚುವುದು ಕಾಲುವೆಯ ಮೂಲಕ ಮಹತ್ತಾದ ಹರಹುಗಳಲ್ಲಿ ಡೆನ್ಯೂಬ್ ಪ್ರದೇಶದಲ್ಲಿ ಬೆಳೆಯುವ ಮರಗಳನ್ನು ಪಶ್ಚಿಮ ಜರ್ಮನಿಗೆ ಸಾಗಿಸಬಹುದು ಆಸ್ಟ್ರಿಯಾದಲ್ಲಿದ್ದ ಕಲ್ಲಿದ್ದಲು ಜರ್ಮನಿಗೆ ಅತಿ ಸುಲಭದಲ್ಲಿ ಒಯ್ಯಬಹುದು ಹಂಗೇರಿ, ಜುಗೊಸ್ಲೋವಿಯಾ, ರುಮೇನಿಯ ದೇಶಗಳೊಡನೆ ಸಂಬಂಧ ಬೆಳೆಯಿಸಬಹುದು ಈ ಕಾಲುವೆಯ ಮೂಲಕ ಬ್ಲೇಕ್ ಸಿ ವರೆ ಜರ್ಮನಿಯಿಂದ ಯುದ್ಧ ಜಹಜುಗಳ ಕೊಂಡೊಯ್ಯಲಾಗುವುದು

ಮಾರ್ಶಲ್ ವೊರೊಶಿಲೊಫ್

ಸೋವಿಯಟ್ ಸೇನಾಧಿಪತಿಗಳು

ಈ ತರದ ಕಾಲುವೆಯೊಂದನ್ನು ತೆಗೆಯಬೇಕೆಂದು ಹಿಂದೆ ನೆಪೋಲಿಯನನು ಯೋಜನೆ ಮಾಡಿದ್ದರೂ, ಅದು ಯಶಸ್ವಿಯಾಗಲಿಲ್ಲ. ಹೀಗೆ ಇನ್ನೊಬ್ಬ ಮಹಾ ಪುರುಷನು, ಕೆಲಸವು ಯಾದ ಹಿಂದೆ ಸಾಧಿಸಿದುಂಟು ಆದರೆ ಜಯ ಒದಗಲಿಲ್ಲ. ಹಿಟ್ಲರನು ಹಾಕಿಕೊಂಡ ಈ ಯೋಜನೆಯು ಹೇಗೆ ನಡೆಯುತ್ತದೆಂದು ನೋಡಬೇಕು.

ಸ್ವದೇಶಾಭಿಮಾನಿ

ಮಧ್ಯಪ್ರಾಂತ್ಯ ಮಂತ್ರಿಮಂಡಲದ ವರ್ತನ.

ಸರದಾರ ವಲ್ಲಭಭಾಯಿ ಪಟೇಲರೂ ಮೌಲನಾ ಅಬುಲ್ ಕಲಮ ಅಜಾದರೂ ಮಧ್ಯಪ್ರಾಂತ್ಯದ ಮಂತ್ರಿಮಂಡಲದ ಮೇಲಣ ಆರೋಪಗಳನ್ನು ವಿಚಾರಿಸಿ ಬರೆದ ವರದಿಯು ತೀರ ಅತೃಪ್ತಿಕರವೇ ಆಗಿದೆಯೆನ್ನಬೇಕು. ಇವನ್ನು ಬಹಿರಂಗವಾಗಿ ವಿಚಾರಿಸಬೇಕೆಂದು ಹೇಳಿದವರಿದ್ದಾರೆ. ವಿಲಾಸಪುರದ ಚುನಾವಣೆಯ ಕಾಲದಲ್ಲಿ ಉಂಟಾದ ಅನಾಚಾರಗಳನ್ನು ಬಹಿರಂಗವಾಗಿ ವಿಚಾರಿಸಬೇಕೆಂದು ಕಾಂಗ್ರೆಸ್ ಪಾಲರ್ಲೇ ಹೇಳಿರುತ್ತ, ಮಂತ್ರಿಮಂಡಲದ ಮೇಲಣ ಆರೋಪಗಳನ್ನು ಮಾತ್ರ ಅಂತರಂಗದಲ್ಲೇ ವಿಚಾರಿಸಿರುವುದು ನ್ಯಾಯವೆಂದರೆ ಹೇಗಾದೀತು? ಈ ವಿಚಾರಣೆಯನ್ನಾದರೂ ಬಲು ತೀವ್ರವಾಗಿ ಮುಗಿಸಿ, ಕಾರ್ಯಕಾರೀ ಮಂಡಲದ ಇವರೆರಡು ಮುತ್ಸದಿಗಳು ಬರೆದ ರಿಪೋರ್ಟನ್ನು ಓದಿಕೊಳ್ಳಬೇಕಾಗಿದೆಂದು ನಾವು ವಿಷಾದಿಸಬೇಕಾಗಿದೆ

ಈ ವರದಿಯಲ್ಲಿ—ಲಂಚ ವಿಷಯಕವಾದ ಘೋರ ಆಪಾದನೆಗಳು ರುಜುವಾಗಲಿಲ್ಲವೆಂದೂ, ಎಷ್ಟೋ ಆರೋಪಗಳಿಗೆ ಮೂಲವೇನೂ ಇಲ್ಲವೆಂದೂ ತಿಳಿಸಲಾಗಿದೆ ಆದರೆ—'ಕೆಲವು ಆಕ್ಷೇಪಗಳು ಸಕಾರಣವಾಗಿಲ್ಲವೆನ್ನಬಹುವಂತಿಲ್ಲ, ಆಡಳಿತದಲ್ಲಿ ಬಹಳ ಕುಂದುಗಳಿದ್ದುವು; ಇಂತಹ ಕೊರತೆಗಳು ಇನ್ನು ಉಂಟಾಗದಂತೆ ಎಚ್ಚರುಡುವುದಾಗಿ ನಮಗೆ ವಚನ ಕೊಡಲಾಗಿದೆ, ಕೂಲಿಯಿಂದ ಜೀವನ ಮಾಡುವ ರೈತರ ಸಲುವಾಗಿ ಮಾಡಿದ್ದ ಸಾಲ ಪಂಚಾಯಿತಿಯ ಮಸೂದೆಯಲ್ಲಿ ಸಹ, ಕಾನೂನಿನಂತೆ ಇತ್ಯರ್ಥಿಸಬಹುದಾದ ಸಾಲದ ಮೊಬಲಗನ್ನು 50,000 ಸಾವಿರದಿಂದ 10 ಲಕ್ಷಕ್ಕೆ ಏರಿಸಿದ್ದುದು ತುಂಬಾ ಆಕ್ಷೇಪಣಾರ್ಹವಾಗಿದೆಂದು ತೋರಿಸಿದ ಪ್ರಯುಕ್ತ, ಮಂತ್ರಿಗಳು ಅದನ್ನು 60000ಕ್ಕೇ ಇಳಿಸಲು ಒಪ್ಪಿದ್ದಾರೆ ಯುನಿವರ್ಸಿಟಿಯಲ್ಲಿ ಪ್ರೊಫೆಸರ ಹುದ್ದೆಗೆ ಅಯೋಗ್ಯರನ್ನು ನೇಮಿಸಿರುವರೆಂದೂ ಮೊದಲಾಗಿ ಅಯೋಗ್ಯರ ನೇಮಕಗಳನ್ನು ಕುರಿತೂ ದೂರುಗಳಿವೆ. ಇಂತಹವನ್ನು ತಿದ್ದಲಾಗುವುದಾಗಿ ಮಂತ್ರಿಗಳೆಂದಿದ್ದಾರೆ' ಎಂದೂ ವರದಿಯಲ್ಲಿದೆ.

'ಘೋರವಾದ ಅಪರಾಧಗಳು ರುಜುವಾಗಿಲ್ಲವಾದರೂ, ರುಜುವಾದುವು ಸಾಧಾರಣ 'ಘೋರವೇ' ಆಗಿವೆ. ಆಡಳಿತವು ದಕ್ಷನೀತಿಯಿಂದ ನಡೆದಿಲ್ಲವೆನ್ನುವುದಕ್ಕೂ ಹೊರಗಣ ದಕ್ಷರ ಕೌಶಲಾದಿಗಳಿಂದ ಆಡಳಿತವು ಸರಿಯಾಗಿದ್ದಿಲ್ಲವೆನ್ನುವುದಕ್ಕೂ ಆಧಾರಗಳಿವೆ

ವೋಟರರು ಸುಲಭದಲ್ಲಿ ತೃಪ್ತರಾಗಿ ಇವರಿಬ್ಬರು ಮುತ್ಸದಿಗಳಷ್ಟೆ ಶಾಂತಮನರಾದಲ್ಲಿ ಬಾಧಕವಿಲ್ಲ ಆದರೂ "ಇಷ್ಟು ನಿರಾಧಾರವೆಂದು ವರದಿಯಲ್ಲಿ ಸೂಚಿತವಾದ ವಿಚಾರಗಳನ್ನು ಕುರಿತಾಗಿ, ಇನ್ನು ಜನತೆಯು ಯಾವ ಬಗೆಯ ವಿಮರ್ಶೆಯನ್ನೂ ಮಾಡಬಾರದೆಂದೂ ಕಾಂಗ್ರೆಸಿನ ನೀತಿ, ನ್ಯಾಯ, ಗೌರವಗಳನ್ನು ಪಾಲಿಸಿ ಬರಲು ಈ ಮಂತ್ರಿಗಳು ಸಾಕಷ್ಟು ಪ್ರಯತ್ನಪಡುವರೆಂಬುದಕ್ಕೆ ಹಾಗೆ ಮಾಡಲು ಅವರಿಗೆ ಅವಕಾಶ ಕೊಡತಕ್ಕದೆಂದೂ ವರದಿ ಹೇಳುತ್ತದೆ. ಇರಲಿ. ಇದುವರೆಗೆ ಒಳಗೊಳಗೇ ನಡೆದು ಆಡಳಿತವನ್ನು ಕುಂದುಗೊಳಿಸಿದ ಈ ಪೀಕಲಾಟವನ್ನೆಲ್ಲ ಜನತೆಯೇ ವಿಮರ್ಶಿಸದಿದ್ದರೆ ಇಷ್ಟಾದರೂ ಸುಧಾರಣೆ ಮಾಡುವ ಪ್ರಯತ್ನಪಡಲು ಅವಕಾಶ ಕೇಳುವುದಕ್ಕೂ ಅವಕಾಶವಿದ್ದಿತ್ತೇ? ಹಾಗಿದ್ದರೆ, ಮುಂದೆ ಜನತೆಯು ಬಾಯನ್ನೇ ಕಟ್ಟಿ ಫಲವೇನು?

ಎಂತೂ, ನ್ಯಾಯಸಮ್ಮತವಾಗಿ ಹೇಳುವುದಾದರೆ, ಮಧ್ಯಪ್ರಾಂತ್ಯದ ಮಂತ್ರಿಮಂಡಲವು ರೀತಿಗೆಟ್ಟಿದೆ. ಒಬ್ಬೊಬ್ಬರೇ ಆಗಿಯಾಗಲಿ, ಸಮುದಾಯಿಕವಾಗಿಯಾಗಲಿ ಇವರಾರೂ ಸರಿಯಾಗಿ ವರ್ತಿಸಿಲ್ಲವೆನ್ನಬಹುದು ಶ್ರೀ ಶರೀಫರು ಸ್ವಲ್ಪ ತಪ್ಪಿರಲಿಕ್ಕೂ ಇದೇ ವರ್ತನವೇ ಕಾರಣವಾಗಿರಬಹುದು, ಅವರು ಮಾಡಿದ್ದನ್ನೇನೋ ಬಹಳ ಬಹಿರಂಗವಾಗಿ ಗುಡುಗಿಸಿದರು ಹೊರಗಣವರು ಏನೂ ರಗಳೆಗಿಡಬಹುದು ಎಂದು ಭಾವಿಸಿ, ಕಾರ್ಯಕಾರೀ ಮಂಡಲವು ಪುನಃ ಇವರೇ ಮಂತ್ರಿಗಳನ್ನು ಅಧಿಕಾರದಲ್ಲಿರಿಸಲು ಯತ್ನಿಸಿದೆ ಶ್ರೀ ಜವಾಹರಲಾಲರ ಕಾಂಗ್ರೆಸ್ ಅಧಿಕಾರ ಸ್ವೀಕಾರದ 'ಲಾಭನಷ್ಟ'ದ ಲೆಕ್ಕಾಚಾರದ ಲೆಕ್ಕರಿಗೂ ಇದೇ ಕಾರಣ ಅವರು ಇದನ್ನೆಲ್ಲ ಒಪ್ಪುವವರಲ್ಲ ಎರಡು ವರ್ಷ ದೂರದೇಶದಲ್ಲಿ ಪ್ರವಾಸಮಾಡೋಣವೆನ್ನುತ್ತಾರೆ ಹೊಸ ಗವರ್ನರರ ಆಳಿಕೆಯಲ್ಲಿರುವ 16½ ಮಿಲ್ಲಿಯ ಜನತೆಯನ್ನು ಇಂತಹ ಮಂತ್ರಿಗಳು ಆಳುವಂತಾದರೆ, ಇವರು ಎಷ್ಟು ಹೇಚಾಡಿದರೂ ಹಿಂದಣ ಅಪಕೀರ್ತಿಯನ್ನು ಅಳಿಸುವುದು ಕಷ್ಟವಾಗಿಡೆಯಾದ ಕಾರಣ, ನೂತನವಾದ ಸುಧಾರಣೆಗಳಾವುವನ್ನು ಮಾಡಲು ಇವರಿಗೆ ಧೈರ್ಯಬಾರದು

ಈ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದ್ದರೆ, ಇತರ ಪ್ರಾಂತ್ಯಗಳಾವು ಪ್ರಲಯ ಹೊಂದುತ್ತಿರಲಿಲ್ಲ ರಾಜಕೀಯ ಜೀವನವು ನಿರ್ಮಲವಾಗಿರುವುದಕ್ಕೆ ಅಗತ್ಯವಾಗಿರುವ ಧೃತಿನಿಯಮಾದಿಗಳು ಯಾವುವೆಂದು ಎಲ್ಲರಿಗೂ ತಿಳಿಯಬರುವಂತಾಗಿದ್ದಿತು. ಇದರಿಂದ ಕಾಂಗ್ರೆಸಿನ ಗೌರವವು ಕೆಡುತ್ತಿರಲಿಲ್ಲ. ಈಗ ಕೆಟ್ಟಿಲ್ಲವೆ? ಕೆಡುವುದಿಲ್ಲವೆ? ಇನ್ನೆಷ್ಟೋ ಬಹಿರಂಗವಾಗ ಬಹುದಾದ ವಿಷಯಗಳು ನಮಗೆ ತಿಳಿಯಲಾರದುವಿಲ್ಲವೆ?

ತುಂಡು ಸುದ್ದಿಗಳು.

ಮೋಟಾರು ಬಸ್ಸುಗಳೇ ಮೊದಲಾದ ವಾಹನಗಳ ಮೂಲಕವಾಗಿ, ದೇಶದ ಟಪ್ಪಾಲು ಮೂಲಕ ಮಾತ್ರ ಒಯ್ಯಬೇಕಾಗಿರುವ ಪತ್ರಗಳನ್ನು, ಇನ್ನು ಒಯ್ಯಬಾರದೆಂದೂ, ವ್ಯತಿರಿಕ್ತ ನಡೆವವರಿಗೆ ಕಠಿಣವಾದ ದಂಡನೆಯುಂಟೆಂದೂ ಕೊಚ್ಚಿ ತಿರುವಾಂಕೂರು ರಾಜ್ಯಗಳಲ್ಲಿ ಸರಕಾರದ ಇಸ್ತಿಹಾರು ಪ್ರಕಟವಾಗಿದೆ.

° ° ° °

ಮೈಸೂರಲ್ಲಿ ಕನ್ನಡ ಮಿಶನರಿಗಳ ಪರಿಷತ್ತಿನಲ್ಲಿ—ಕೆಲವು ಪ್ರಾಂತ್ಯಗಳಲ್ಲಿ, ಮದ್ಯಪಾನ ನಿರೋಧ ಮತ್ತು ನಿವಾರಣೆಗಳಿಗಾಗಿ ನಡೆಯುತ್ತಿರುವ ಸರಕಾರದ ಚಳವಳವು ಕ್ರೈಸ್ತ ಮಿಶನರಿಗಳಿಂದ ಹೃತ್ಪೂರ್ವಕವಾಗಿ ಅಂಗೀಕರಿಸಲ್ಪಟ್ಟಿದೆ ಎಂದೂ, ಹೀಗಾಗಿಯೇ ಕೊನೆಗೆ ಇಡೀ ದೇಶದಲ್ಲೆಲ್ಲ ಮದ್ಯಪಾನವೇ ಇರದಂತೆ ಖಂಡಿತವಾದ ಸುಧಾರಣೆಯುಂಟಾಗುವುದೆಂದು ನಿರೀಕ್ಷಿಸಲಾಗಿದೆಂದೂ ನಿರ್ಣಯಗಳಾಗಿವೆ

° ° ° ° °

ಹೊಸೂರು ಗ್ರಾಮದಲ್ಲಿ ನಾರಾಣಪ್ಪ ಸೆಟ್ಟರ ಹತ್ತೀ ಕಾರ್ಖಾನೆಗೆ ಬೆಂಕಿಹತ್ತಿತು ರಾತ್ರಿಕಾಲವಾದ್ದರಿಂದ ಅದನ್ನು ಸುಲಭವಾಗಿ ಆರಿಸಲಾಗಲಿಲ್ಲ ಹತ್ತಿರದಲ್ಲಿ ೧೮,೦೦೦ ಮಣ ನೆಲಗಡಲೆ ದಾಸ್ತಾನು ಇತ್ತು ಅದೆಲ್ಲವೂ ಸುಟ್ಟು ಬೂದಿಯಾಯಿತು ಬೆಂಕಿ ತಗಲಿದ ಮುಂಚಿನ ದಿನವೇ ಇಡೀ ಕಾರ್ಖಾನೆಯನ್ನೂ ಇಂಪೀರಿಯಲ್ ಬೇಂಕಿನವರು ೨೦,೦೦೦ ರೂಪಾಯಿಗೆ ಅಡವು ಬರೆದು ಮೊಹರು ಹಾಕಿ ಮುಗಿಸಿದ್ದರು ಅಷ್ಟಕ್ಕೆ ವಿಮೆ ಬರೆದು ಕೊಟ್ಟ ಕಂಪೆನಿಯವರೂ ಬೇಂಕಿನವರೂ ಈಗ ಬೆಂಕಿ ಹಿಡಿದಲ್ಲಿಗೆ ಯಾತ್ರೆ ಮಾಡುತ್ತಿದ್ದಾರೆ

° ° ° °

ಕುಂಭಕೋಣ ಮ್ಯುನಿಸಿಪಾಲಿಟಿಯಲ್ಲಿ ಬೆಂಕಿ ಆರಿಸುವ ಯಂತ್ರವಿಲ್ಲ ಇಂತಹ ಯಂತ್ರಸನ್ನಾಹವಿಲ್ಲದವರಿಗೆ ಜಾಗ್ರತೆ, ಎಚ್ಚರಿಕೆ ಕೊಡಲೆಂದು, ಕುಂಭಕೋಣದಲ್ಲಿ ೨೦೦ ಗುಡಿಸಲುಗಳಿಗೂ ಹಂಚುಮಾಡಿನ ಮನೆಗಳಿಗೂ ಮೊನ್ನೆ ಬೆಂಕಿಹತ್ತಿತು. ೫೦,೦೦೦ ರೂಪಾಯಿ ನಷ್ಟವಾಗಿದೆ. ದಾಸ್ತಾನು ಇಟ್ಟ ಬತ್ತವೆಲ್ಲ ಬೂದಿಯಾಗಿದೆ. ಇಬ್ಬರು ಮಕ್ಕಳೂ ಒಂದು ಧನವೂ ಸುಟ್ಟಾಯಿತು. ಗೃಹಸ್ಥರದೆಲ್ಲ ನಾಶವಾಯಿತು. ನೀರೂ ಇಲ್ಲ, ಯಂತ್ರವೂ ಇಲ್ಲ. ಬೆಂಕಿ ಹರಡಿದಂತೆ, ಆ ಪರಾರದ ಒಂದು ಮೈಲು ಸುತ್ತಲ ಮನೆಗಳ ಮಾಡುಗಳ ಚಾಪಣಿ ಕಿತ್ತರು.

° ° ° °

ಅಂಬೂರು (ಉತ್ತರ ಆರ್ಕಾಡು) ಶಹರದಲ್ಲಿ ಹಿಂದೂ ಮುಸ್ಲಿಮರಿಗೆ ಜಟಾಪಟಿಯಾಗುತ್ತಿರುವುದನ್ನು ನೋಡಿ, ಮುಖಂಡರನ್ನು ಕೂಡಿಸಿ ಪಂಚಾಯಿತಿ ಮಾಡಿದ್ದಾಯಿತು ಕಲೆಕ್ಟರರೇ ಅಧ್ಯಕ್ಷರು. ಹಿಂದುಗಳೂ ಮುಸ್ಲಿಮರೂ ೨,೦೦೦ ರೂಪಾಯಿಗಳಂತೆ ಒಳ್ಳೆ ನಡತೆಗಾಗಿ ಸರಕಾರದಲ್ಲಿ ರೇವಣಾತಿ ಇಡಬೇಕೆಂದಾಯಿತು ಹಾಗೆ ಮಾಡಿದ ಕಾರಣ, ಕಳೆದ ದಂಗೆಯಲ್ಲಿ ಕೈದುಮಾಡಲಾದವರ ಮೇಲೆ ಹೂಡಿದ್ದ ಮೊಕದ್ದಮೆಗಳನ್ನು ಈಗ ಹಿಂತೆಗೆಯಲಾಗಿದೆ

° ° ° °

ಆಂಧ್ರಪ್ರಾಂತ್ಯದ ವಿಚಾರ ಗಾಂಧಿಜಿಯರೊಡನೆ ಶ್ರೀ ಸಾಂಬಮೂರ್ತಿಗಳು ಮಾತನಾಡಿ ಬಂದಿರುವರು. ಏನಂತೆ? "ಕಾದಿರಿ, ನೋಡಿರಿ!" ಎಂದು ಅವರ ಬೋಧನೆ

° ° ° °

ಮದ್ರಾಸು ಟ್ರೇಮ್ ವೇ ಕಂಪೆನಿಯ ಕೆಲಸಗಾರರ ಮುಷ್ಕರವಾದಾಗ, ಮುಖಂಡರಾದವರನ್ನು ಬಹಳವಾಗಿ ಕಂಪೆನಿಯವರು ಪೀಡಿಸಿದರೆಂದು ಹೈಕೋರ್ಟು ಜಡ್ಜರು ಶ್ರೀ ವಿ ವಿ ರಾವ್ ರವರು ಅಭಿಪ್ರಾಯ ಸೂಚಿಸಿ, ಅವರನ್ನು ಪುನಹ ಕೆಲಸಕ್ಕೇ ಹಚ್ಚುವಂತೆ ಮಾಡಿದ್ದಾರೆ ಅವರ ಸರ್ವಿಸು ಸರಾಗ ನಡಿಯುವುದಾದರೂ ಹಿಂದೆ ಅವರಿಗಿದ್ದ ಕೆಲಸವನ್ನು ಈಗ ಕೊಟ್ಟಿಲ್ಲ

° ° ° °

ಮಲಯಾ ಪ್ರಾಂತ್ಯದಿಂದ ೩,೦೦೦ ಮಂದಿ ಕೂಲಿಯವರು ಹಿಂದೆ ಬಂದಿರುವರು ೧,೫೦೦ ಮಂದಿ ನಾಗಪಟ್ಟಣದಲ್ಲಿ ಇಳಿದರು ೪೦೦ ಮಂದಿಯನ್ನು ಸರಕಾರವೇ ಮದ್ರಾಸಿಗೆ ಹಿಂದೆ ಕಳಿಸಿಯದೆ ೧,೧೦೦ ಮಂದಿ ಕೂಲಿಯವರು ಅಲ್ಲಿ ಕೆಲಸವಿಲ್ಲೆಂದು ತಿರುಗಿ ಬಂದಿರುವರು ಇಲ್ಲಿನ ನಿರುದ್ಯೋಗಿಗಳ ಸೈನ್ಯ ಹೆಚ್ಚಿತು.

° ° ° °

ನಿರುದ್ಯೋಗಿಗಳ ದೊಡ್ಡದೊಂದು ಮೆರವಣಿಗೆಯನ್ನು ಕರಾಚಿಯ ಎಸೆಂಬ್ಲಿ ಭವನಕ್ಕೆ ತರುವರಾಗಿ ವಾರ್ತೆ ಹಬ್ಬಿತು. ಪೋಲೀಸರು ಅಂತಹ ಮೆರವಣಿಗೆ ಕೂಡದೆಂದು ಸಾರಿರುವರು ಆಗಲೇಬೇಕೆಂದು ನಿರುದ್ಯೋಗಿಗಳ ಪ್ರತಿನಿಧಿಗಳು ಮುಖ್ಯ ಮಂತ್ರಿಗಳನ್ನು ಕಂಡರು. ಅವರೂ ಅಪ್ಪಣೆ ಕೊಡಲಾರದಲ್ಲಿ, ಪೋಲೀಸರ ಅಪ್ಪಣೆ ಉಲ್ಲಂಘಿಸಿಯೇ ಮೆರವಣಿಗೆಯಾಗುವುದಂತೆ

° ° ° °

ಹೈದ್ರಾಬಾದು ಸಂಸ್ಥಾನದಲ್ಲಿ ಲಂಚದ ರೋಗ ಪ್ರಬಲವಾಗಿ ಹಬ್ಬಿರುವ ಕಾರಣ, ಸಂಯುಕ್ತ ಪ್ರಾಂತ್ಯದಲ್ಲಿ ಈ ರೋಗಕ್ಕೆ ಮಾಡಿರುವ ಚಿಕಿತ್ಸೆಯನ್ನು ಈ ರಾಜ್ಯದಲ್ಲೂ ಪ್ರಚಾರಕ್ಕೆ ತರವಂತಾಗಬೇಕೆಂದು, ಸರಕಾರವು ರದ್ದುಪಡಿಸದಿದ್ದರೆ, ಸತ್ಯಾಗ್ರಹವನ್ನು ಪ್ರಜೆಗಳು ಪ್ರಾರಂಭಿಸುವರೆಂದೂ ಸರಕಾರಕ್ಕೆ ಮನವಿ ತಲಪಿದೆ

° ° ° ° °

ಶ್ರೀ ರಾಜೇಂದ್ರ ಪ್ರಸಾದರಿಗೆ ಇನ್ನೂ ಜ್ವರಬಾಧೆಯಿದೆ ಆದರೆ ಬೆದರಬೇಕಾಗಿಲ್ಲ. ನಿಧಾನವಾಗಿ ಆರೋಗ್ಯಲಾಭಮಾಡಿಕೊಂಡು ವಾರ್ಧಾದಲ್ಲಿದ್ದಾರೆ

° ° ° °

ಕುದುರೆ ಜೂಜಾಟದ ಮೇಲೆ ತೆರಿಗೆ, ನೂರಕ್ಕೆ ೪ರ ಸಲೆಯಲ್ಲಿ ಹೊರಿಸಬೇಕಾಗಿ ಸಿಂಧಪ್ರಾಂತ್ಯದ ಎಸೆಂಬ್ಲಿಯಲ್ಲಿ ನಿರ್ಣಯವಾಗಿದೆ. ಇದರಿಂದ ಸರಕಾರಕ್ಕೆ ೭೫,೦೦೦ ರೂಪಾಯಿ ಆದಾಯವಾಗುವುದು.

° ° ° °

ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲುಗಳ ವೋಟರರ ಪಟ್ಟಿಯ ತಿದ್ದುಪಡಿಗಳನ್ನು ಪ್ರತಿವರ್ಷವೂ ಮಾಡುವರು. ಈ ವರ್ಷದಲ್ಲಿ ಜುಲೈ ೨ನೇ ತಾರೀಕಿನ ವರೆಗೆ ವೋಟರರು ಮಾಡುವ ಅರ್ಜಿಗಳನ್ನು ಸ್ವೀಕರಿಸುವರಾಗಿ ಪ್ರಕಟವಾಗಿದೆ ಕೊನೆಯ ಪಕ್ಷ ರೆವಿನ್ಯೂ ಇನ್ಸಪೆಕ್ಟರರಿಗಾದರೂ ಅರ್ಜಿ ಬರೆದುಕೊಳ್ಳಬೇಕು.

° ° ° ° °

ಕಾಲುದಾರಿಗಳು (ಒಂದು ಅಥವಾ ಎರಡು) ಇರುವ ರಸ್ತೆಗಳಲ್ಲಿ ಜನರು ಅವನ್ನೇ ಉಪಯೋಗಿಸಬೇಕೆಂದೂ, ಯಾವ ನೆಪದಿಂದಲಾದರೂ ಮುಖ್ಯ ರಸ್ತೆಯ ಮೇಲೆ ಅಡ್ಡಾಡಬಾರದೆಂದೂ ರೂ ೫೦ರವರೆಗೆ ಅಥವಾ ಒಂದು ವಾರದ ಸಜೆಯವರೆಗೆ ತಕ್ಸೀರು ಮಾಡುವವರನ್ನು ದಂಡಿಸಲಾದೀತೆಂದೂ ಮದ್ರಾಸು ಪೋಲೀಸರು ಪ್ರಕಟಿಸಿದ್ದಾರೆ. ವಿವಾಹ (ಕಾಶೀ) ಯಾತ್ರೆ ಅಥವಾ ಸ್ಮಶಾನ ಯಾತ್ರೆಗಳಿಗೆ ವಿನಾಯಿತಿ ಇದೆ.

° ° ° ° °

ವಜ್ರ ವ್ಯಾಪಾರಿಗಳಿಂದ ವಜ್ರಗಳನ್ನು 'ತೋರಿಸಿ ತರುವುದಕ್ಕೆಂದು' ಒಯ್ದು (ರೂಪಾಯಿ ೬೫, ೨೨೦, ೩೮೦, ೩,೨೩ ಬೆಲೆಯವನ್ನು) ೧೯೩೬ರಿಂದ ಕಾಣೆಯಾದ ಮನಸುಖಲಾಲರನ್ನು ವಿಚಾರಿಸುವಾಗ, ಅವರು ಇಷ್ಟ್ರ ಶ್ರೀಮಂತನ ಮನಸ್ಸಿಗೆ 'ಸುಖ' ಮಾಡುವುದಕ್ಕಾಗಿ ಇವನ್ನು ಒಯ್ದಂತೆಯೂ, ಶ್ರೀಮಂತರು ಹಿಂದೆ ಕೊಡಲಿಲ್ಲೆಂದೂ ಮೊದಲಾಗಿ ವಾದಿಸಿದರು ವಾದವು ವ್ಯರ್ಥವಾಗಿ, ಲಾಲರಿಗೆ ಆರು ತಿಂಗಳ ಕಠಿಣ ಸಜೆಗೆ ಅಪ್ಪಣೆಯಾಯಿತು ವಜ್ರ ತೋರಿಸಿ ತರಬೇಕೆಂದು ಮೋಸಕೊಟ್ಟವರಿಗೆ ಜೈಲು ತೋರಿಸಿದರು,

° ° ° ° °

ಇನ್ನೂ ಇನ್ನೂ ಸ್ವರಾಜ್ಯವು ದೂರವಿದೆ ಎಂದು ಸರದಾರ ಪಟೇಲರೆನ್ನುವರು. ಇನ್ನು ಐದು ವರ್ಷಗಳೊಳಗೇ ಸ್ವರಾಜ್ಯವು ದೊರೆವುದು ಎಂದು ಭುಲಾಭಾಯಿಯವರೆನ್ನುವರು. ಎಲ್ಲಿದೇ ಎಂದು ಇವರಿಬ್ಬರೊಳಗೇ ಗೊತ್ತು ಗಣಪತಿಯ ಮದುವೆಯಂತೆ ದೊರೆಯದಿರಲಾರದು ಎಂದು ಚರ್ಚಿಲ್ಲರಿಗೆ ಖಂಡಿತವಿದೆ.

° ° ° ° °

ಬೋದಿನಾಯಕನೂರು ಮ್ಯುನಿಸಿಪಲ್ ಸಭೆ ಉಪಾಧ್ಯಕ್ಷರ ಚುನಾವಣೆಗಾಗಿ. ಈ ಕೌನ್ಸಿಲಿನಲ್ಲಿ ೧೦ ಮಂದಿ ಕಾಂಗ್ರೆಸಿನವರು ೮ ಕಾಂಗ್ರೆಸಿನವರಾದರೂ ಸ್ವತಂತ್ರರೆಂಬವರು ಇಬ್ಬರು ಜಸ್ಟಿಸ್ ಪಕ್ಷದವರು ಚೆಯರ್ಮೆನರು ಕಾಂಗ್ರೆಸಿನವರಾದ ಕಾರಣ, ಉಳಿದವರು ವಿರುದ್ಧ. ಇತ್ತಂಡಗಳ ವೋಟುಗಳ ಸಂಖ್ಯೆ ಸಮಾನ. ಚುನಾವಣೆ ರಂಗಕ್ಕೆ ಪೋಲೀಸರ ಗಾವಲು ಜನರೆಲ್ಲ ದೂರದಿಂದ ತಮಾಷೆ ನೋಡುವವರು, ಈ ಸಭೆಗೆ ಅಗತ್ಯವಾದ ಸಮಯ ಕೊಡುವ ನೋಟೀಸಿಲ್ಲದರಿಂದ ಇದನ್ನು ಮುಂದುವರಿಸಬೇಕಾಗಿ ಎದುರು ಪಕ್ಷದ ಮಾತು, ಅಧ್ಯಕ್ಷರಿಂದ ನಿರಾಕರಿಸಲ್ಪಟ್ಟಿತು. ಚೆಯರ್ಮೆನರನ್ನು ಚುನಾವಣೆ ಮಾಡುವಾಗಲೇ ಲಂಚ ನಡೆದಿತ್ತೆಂದು ಹಿಂದಣ ಸಭೆಯಲಿ ಹೇಳಿದ್ದನ್ನು ಈಗ ಚರ್ಚಿಸಬೇಕೆಂದಾಯಿತು. ಆಗ ಗಲಿಬಿಲಿಯಾಗಿ, ಇಬ್ಬರು ಕೌನ್ಸಿಲರು ಚೆಯರ್ಮೆನರ ಹತ್ತಿರಕ್ಕೆ ಬಂದು, ಮಿನಿಟ್ ಬುಕ್ಕನ್ನೇ ಜಾರಿಸುವೆವೆಂದರು ಚೆಯರ್ಮೆನರು ಪೋಲೀಸರಿಗೆ ಕೂಗಿದರು ಅವರು ಒಳಬಂದು ಶಾಂತಿಯುಂಟಾಯಿತು ಹೊರಗಣವರೇನಾದರೂ ತಂಟೆಮಾಡಿದ್ದಲ್ಲಿ, ಈ ಕೌನ್ಸಿಲರರೇ ಜವಾಬ್ದಾರರಾದಾರೆಂದು ದಿಷ್ಟ್ರಿಕ್ಟ ಸುಪರಿಂಟೆಂಡೆಂಟರು ಎಚ್ಚರಿಕೆ ಕೊಟ್ಟರು ಈಗ ಮೀಟಿಂಗನ್ನು ಮುಂದರಿಸಬೇಕೆಂದೂ, ಚೆಯರ್ಮೆನರು ವೋಟು ಕೊಡಕೂಡದೆಂದೂ ಸೂಚನೆಗಳಾದುವು ಸಭೆಯು ಮುಂದುವರಿಯಿತು. ಪಂಚಾಯತಿ ನಡೆಯುವುದಂತೆ

ಅಂಡಮಾನಗಳಲ್ಲಿನ ಹಸಿವಿನ ಮುಷ್ಕರ

ನಿಜವಾದ ಕಥೆಯು ಈಗ ಸವಿವರವಾಗಿ ಹೇಳಲಾಗಿದೆ.

ಮದರಾಸಿಯೊಬ್ಬನ ಮುಂದಾಳುತನ

[ಅಂಡಮಾನದಲ್ಲಿರುವ ರಾಜಕೀಯ ಕೈದಿಗಳನ್ನು ಮರಳಿ ಹಿಂದೂದೇಶಕ್ಕೆ ತರುಸಂತೆ ಮಾಡಿದ, ಮತ್ತು ಬಂಗಾಳಿಗಳ ಹೊರತು ಮಿಕ್ಕವರ ವಿಮೋಚನೆಗೆ ಕಾರಣವಾದ, ಅಂಡಮಾನಗಳಲ್ಲಿ ನಡೆದ ಹಸಿವಿನ ಮುಷ್ಕರವನ್ನು ಪ್ರಾರಂಭಿಸಿದವರಾರು? ಈ ಕುರಿತು ನಿಜವಾದ ವಿವರಗಳು, "ಕೈಕರ ಸ್ವರ್ಗ" ಎಂಬ ಪುಸ್ತಕದಲ್ಲಿ ಅಂಡಮಾನದಲ್ಲಿ ರಾಜಕೀಯ ಕೈದಿಗಳಾಗಿದ್ದವರು ಮೊನ್ನೆ ವಿಮೋಚನೆಹೊಂದಿದವರಾದ, ಶ್ರೀ ಭಯಂಕರ ವೆಂಕಟಾಚಾರ್ಯರಿಂದ ಕೊಡಲಾಗಿದೆ. ಆ ಹಸಿವಿನ ಮುಷ್ಕರದ ಯಶಸ್ಸು ಅವರಿಗೆ ಸಲ್ಲುತ್ತದೆ. ಸೀರನ್ನೊ ಸಹ ಕುಡಿಯದೆ ಹಸಿವಿನ ಮುಷ್ಕರವನ್ನು ನಡೆಯಿಸಿದವರು ಅವರು. ಅವರು ಬರೆದುದರಿಂದ ಕೆಲವಂಶಗಳನ್ನು ಈ ಕೆಳಗೆ ಕೊಡಲಾಗಿದೆ]

ಆ ಹತಶಾಕ್ಷಿಗಳು.

ಜುಲ್ಯೆ ೧೪–೧೯೩೭,—ಅಂದು ನಾನು ದೇಹಾಲಸ್ಯದಿಂದ ಆಸ್ಪತ್ರೆಯಲ್ಲಿ ಶಯ್ಯೆ ಹಿಡಿದಿದ್ದೆ. ರಾತ್ರೆ ಹಾಸಿಗೆಯಲ್ಲಿ ಎದ್ದು ಕುಳಿತು, ಒಂದು ತೆರದಲ್ಲಿ ಆಲೋಚಿಸಹತ್ತಿದೆ. ಈ ತೆರದ ಆಲೋಚನೆಗಳಿಂದ ಮತ್ತು ಮಾತುಕತೆಗಳಿಂದ ಒಂದಿಷ್ಟು ಫಲವಿಲ್ಲೆಂದು ಆಗ ನನಗೆ ಎಣಿಸಿತು. ರಾತ್ರಿಯ ಆ ಸಮಯದಲ್ಲಿ, ಸಂಕಟಪಡುತ್ತಿರುವ ಆ ತರುಣರ ಮುಖಗಳು ನನ್ನ ದೃಷ್ಟಿಪಥದಲ್ಲಿ ಕಾಣಿಸಿಕೊಂಡವು, ಹಿಂದೂದೇಶದ ಜೈಲುಗಳಲ್ಲಿ ಸತ್ತವರ ನೆನಪಾಯಿತು ನನಗೆ . . . . .ಜೈಲುಗಳಲ್ಲಿ ಆರೋಗ್ಯವನ್ನು ಕಳಕೊಂಡ ಇತರ ಅನೇಕರ ನೆನಪಾಯಿತು ನನಗೆ ಹೀಗೆ ನಡೆಯುತ್ತ ಹೋದರೆ ನಮ್ಮನ್ನು ಸ್ವದೇಶಕ್ಕೆ ಕೊಂಡೊಯ್ಯದಿದ್ದರೆ ಆಗ ನಮ್ಮ ಗತಿ ಏನು? ನರಳುತ್ತಿರುವವರಿಗೆ ತಕ್ಕ ಉಪಶಮನ ದೊರೆಕದಿದ್ದರೆ ನಾವೇನು ಮಾಡಬೇಕು? ನಾನು ಹಸಿವಿನ ಮುಷ್ಕರದಲ್ಲಿ ಸೇರಬೇಕೆ? ಎಂಬುದಾಗಿ ನನ್ನಲ್ಲಿ ಆಲೋಚನಾ ತರಂಗವು ಉಂಟಾದವು ರಾಜಕೀಯ ಹೋರಾಟದ ವಿಚಾರಗಳಲ್ಲಿ ಒಬ್ಬರು ತಮ್ಮ ಸ್ವಂತದ ಕುರಿತು ಹೆಚ್ಚಿಗೆ ಆಲೋಚಿಸಬಾರದು ಯಾವದಕ್ಕೂ ಅವರು ಸಿದ್ಧರಾಗಿರಬೇಕು.

ಆದರೆ ನಾನು ತುಂಬಾ ಅಶಕ್ತನಾಗಿದ್ದೆನು. ಆಸ್ಪತ್ರೆಯಲ್ಲಿ ನನಗೆ ನಡೆಯಲೂ ಕೂಡ ಆಗುತ್ತಿರಲಿಲ್ಲ.

ಮರಣಕ್ಕೆ ವಿಧಿ:—

ಹೀಗೆ ಆಲೋಚನೆಗಳಾಗಿದ್ದರೂ ಮಾಪತ್ತು ದೃಢಸಿರ್ಧಾರ ಮಾಡಬಾರದಾಗಿ ನಾನು ಸಂಕಲ್ಪಮಾಡಿದೆ ಆದರೂ ಬೆಳಗಾತ ಎದ್ದವನು ನಾನು ಒಂದು ಅರ್ಜಿಯನ್ನು—ಮರಣಕ್ಕೆ ವಿಧಿ ಬರೆದುಬಿಟ್ಟೆ—

'ಇಲ್ಲಿರುವ ರಾಜಕೀಯ ಕೈದಿಗಳು, ಹುಚ್ಚರಾಗುವ ಸ್ಥಿತಿ ಸುಳ್ಳಿರುವಾಗ . . . ಜೀವರ ಪ್ರಾಣವನ್ನು ಕಳಕೊಳ್ಳುತ್ತಿರವಾಗ . . . ಲವರು ಪ್ರಾಣತ್ಯಾಗಮಾಡಲು ಹೊರಟಿರುವರ ಅಂಡಮಾನಗಳ ಹವೆಯು, ಮಾನವ ಜೀವನಕ್ಕೆ ಯೋಗ್ಯವಾದುದಲ್ಲ

'ಇಲ್ಲಿಗೆ ಆಗಾಗ ಬಂದವರಿಂದನೆ ಅನೇಕ ಬಾರಿ ನಾವು ಅರ್ಜಿಮಾಡಿಕೊಂಡರೂ ಫಲ ದೊರಕಲಿಲ್ಲ ಇಲ್ಲಿ ಅಪಾಯವಿಲ್ಲದೆ ಜೀವನ ಸಾಗಿಸುವುದ ಅಸಾಧ್ಯದ ಮಾತು ನಮ್ಮನ್ನು ಬೇಗನೆ ಸ್ವದೇಶಕ್ಕೆ ಒಯ್ದು ಅಲ್ಲಿ ಯೋಗ್ಯ ತರದಲ್ಲಿ ಕಾರಾಗ್ರಹದಲ್ಲಿಡಲು ವ್ಯವಸ್ಥೆಮಾಗದಿದ್ದರೆ ,, ಇಂದಿನಿಂದ ನಾನು, ನನ್ನನ್ನು ಕ್ರಮೇಣವಾಗಿ ಹತನಾಡುವ ಆಹಾರವನ್ನು ಸ್ವೀಕರಿಸಲ್ಲೆನೆಂದು ಈ ಮೂಲಕ ನನ್ನನ್ನು ಇತ್ತಕಡೆಗೆ ಗಡಿಪಾರು ಮಾಡಿದ ಸರಕಾರಕ್ಕೆ ತಿಳಿಸುತ್ತೇನೆ' ಎಂಬುದಾಗಿ ಅರ್ಜಿ ಬರೆದುಬಿಟ್ಟೆ

ನಾನು ತಪ್ಪಿಸಿಕೊಳ್ಳಬಾರದು

ಆದರೆ ಆ ಅರ್ಜಿಯನ್ನು ನಾನು ಕೂಡಲೆ ಒಪ್ಪಿಸಿಬಿಟ್ಟಿಲ್ಲ ಇದು ನನ್ನನ್ನು ಮೆಡಿಕಲ್ ಬೋರ್ಡಿನ ಪರೀಕ್ಷೆಗೆ ಒಳಪಡಿಸುವದು ವೈದ್ಯಕೀಯ ಕಾರಣಗಳಿಂದಾಗಿ ನನ್ನನ್ನು ಸ್ವದೇಶಕ್ಕೆ ಒಯ್ಯಲಾಗಬಹುದೆಂಬ ವಾರ್ತೆಯ ನನಗೆ ಅಂದು ತಿಳಿಯಬಂತ ಆದರಿಂದ ನನ್ನ ಮನವು ಇನ್ನೂ ಉದ್ರೇಕಗೊಂಡಿತ ಮದರಾಸಿನಲ್ಲಿ ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದೆಂದು ನನಗೆ ತಿಳಿದಿತ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕಾಗಿ ಕಾಂಗ್ರೆಸ್ ಜುನಾನಣಾ ಪ್ರಸಿದ್ಧಿ ಪತ್ರದಲ್ಲಿ ನನಗೆ ತಿಳಿದಿತ್ತು ಹೀಗೆ ಎಲ್ಲರ ಬಿಡುಗಡೆಯಾಗಲಿರುವಾಗ, ನಾನ ಮಾತ್ರ ಏಕೆ ತಪ್ಪಿಸಿಕೊಳ್ಳಬೇಕು, ಎಂಬ ಆಲೋಚನೆಯ ನನ್ನಲ್ಲಿ ಉಂಟಾಯಿತು ಅಂದು ಆದಿತ್ಯವಾರವಾಗಿತ್ತ ಮರುದಿನ ಸೋಮವಾರ ಏನಾದರೂ ಮಾಡಬೇಕೆಂದು ನನ್ನಲ್ಲಿ ಎನಿಸಿತು ಮತ್ತೊಮ್ಮೆ ನನ್ನಲ್ಲಿ ತರ್ಕವು ಉಂಟಾಯಿತು. ಒಡನೆ ಆಸ್ಪತ್ರೆಯಲ್ಲಿದ್ದ ಸ್ನೇಹಿತರೊಡನೆ ರಸಗುಲ್ಲಗಳನ್ನು ತಯಾರಿಸಬೇಕೆಂದು ನಾನು ಹೇಳಿಬಿಟ್ಟೆನು ಹೇಗೂ ಊಟ ಬದಗಿಲಿಯಿತ ಆಸ್ಪತ್ರೆಯ ಅದಗೆಮನೆಯಲ್ಲಿ ರಸಗುಲ್ಲಗಳು ತಯಾರಾದವು

ರಸಗುಲ್ಲಗಳನ್ನು ತಿನ್ನಲಿಲ್ಲ

ನನ್ನ ಮನಸ್ಸಿನ ಆಲೋಚನೆಗಳನ್ನು ನಾನು ಯಾರಿಗೂ ತಿಳಿಸಲಿಲ್ಲವಾಗಿತ್ತು ಹಸಿವಿನ ಮುಷ್ಕರದ ಕುರಿತು ಕೊಯಂಬತ್ತೂರು ಜೈಲಿನಲ್ಲಿ ನನಗಾದ ಅನುಭವದ ನಂತರ, ನನಗೆ ಅದರಲ್ಲಿ ಅಷ್ಟು ಆಸಕ್ತಿಯಿರಲಿಲ್ಲ ಆದರೆ ಈ ಸಾರಿ ನಾನು ಅದರಿಂದ ಹೇಗೆ ಹೊರಸಿಲ್ಲುವುದು? ನಾನು ನನ್ನ ಸ್ನೇಹಿತರನ್ನು ಕರೆದು ಕೆಲವು ರಸಗುಲ್ಲಗಳನ್ನು ಕೇಳಿದೆ ಮರುದಿವಸ ಅವುಗಳನ್ನು ತಿಂದರೆ ಒಳ್ಳೆ ರುಚಿಸುವವೆಂದು ಅವರು ಹೇಳಲು ನಾನದಕ್ಕೆ ಒಪ್ಪಿದೆ

ಅಂದು ರಾತ್ರೆ ಹತ್ತು ಘಂಟೆಯಾಗಿತ್ತು ನಾಳೆ ಏನುಮಾಡಬೇಕೆಂಬ ಆಲೋಚನೆಯು ನನ್ನನ್ನು ಬಾಧಿಸುತ್ತಿತ್ತು ಹೌದು ನಾನದನ್ನು ಕೈಕೊಳ್ಳಬೇಕು ನಿರಶನ ವ್ರತವನ್ನು ಹಿಡಿಯಬೇಕು ' ಈ ಆಲೋಚನೆಯಿಂದ ಕೂಡಿದವನಾಗಿ ನಾನು ಮಲಗಿಬಿಟ್ಟೆ

ಬೆಳಗ್ಗೆ ಎದ್ದ ನನಗೆ, ಜುಲಾಬು ಕೊಡಲಾಯಿತು ಆದರಿಂದ ನಾನು ತುಂಬಾ ದಣಿದುಹೋಗಿದ್ದೆ. ಹಾಸಿಗೆಯ ಮೇಲೆ ಮಲಗಿಕೊಂಡಿರುವಾಗಲೆ, ಡಿಪ್ಯೂಟಿ ಕಮಿಶನರು ಅಂದು ಬರುವರಾಗಿ ನಾನು ವಾರ್ತೆಯನ್ನು ಕೇಳಿದೆ ಆಗಲೆ ನನ್ನ ಅರ್ಜಿಯನ್ನು ಒಪ್ಪಿಸಬೇಕಾಗಿ ನನ್ನಲ್ಲಿ ಹೊಳೆಯಿತ ಡಿ ಸಿ ಗಳು ಬಂದರು ನನ್ನ ಹಾಸಿಗೆಯ ಬಳಿ ಬಂದೊಡನೆ,

'ಆಚಾರ್ಯರೆ ಹೇಗಿದ್ದೀರಿ' ಅಂದರು ಡಿ ಸಿಗಳು ನನ್ನ ಪರಿಚಿತರು.

'ನಾನು ಸೌಖ್ಯವಾಗಿದ್ದೇನೆ' ಎಂಬುದನ್ನು ಹೇಳಲು ನನ್ನ ನಾಲಿಗೆ ಸರಿ ತಿರುಗದಾಯಿತ ಕೊನೆಗೆ ದೃಢಚಿತ್ತನಾಗಿ, ಹಿಂತಿರುಗಿ ಹೋಗಲನುವಾದ ಡಿ ಸಿಗಳನ್ನು ಕರೆದು, ಹಿಂದೂದೇಶದಲ್ಲಿ ಬ್ರಿಟಿಷ ಸರಕಾರದ ಧೋರಣೆಯ ಕುರಿತು, ನಮ್ಮ ಬಂಧನದ ಕುರಿತ, ಸಣ್ಣದೊಂದು ಭಾಷಣವನ್ನು ಮಾಡಿ ನನ್ನ ಅರ್ಜಿಯನ್ನು ಒಪ್ಪಿಸಿಬಿಟ್ಟೆ.

ಅರ್ಜಿಯನ್ನು ಒಪ್ಪಿಸಿದೊಡನೆ ನನ್ನಲ್ಲಿ ಒಮ್ಮೆಗೆ ತುಂಬಾ ಸಮಾಧಾನವುಂಟಾಯಿತು

ಏನು ನೀವು ಹಸಿವಿನ ಮುಷ್ಕರವನ್ನು ಕೈಗೊಳ್ಳುವಿರಾ' ಎಂದು ಡಿ ಸಿಗಳು ಕೇಳಿದರು.

'ಹೌದ

ಎಂದಿನಿಂದ '

'ಈ ದಿನದಿಂದ.'

'ನನಗೆ ತಿಳಿಯಿತು. ಆದರೆ ನಿಮ್ಮ ಆರೋಗ್ಯವು ಸರಿಯಿರುವುದಿಲ್ಲ. ಹಸಿವಿನ ಮುಷ್ಕರವನ್ನು ಕೈಕೊಳ್ಳುವುದರಲ್ಲಿ ಮೊದಲಿಗರಾಗುವಿರೆಂದು ನಾನು ಎಣಿಸಿದಿಲ್ಲಾ '

'ನನ್ನ ಆರೋಗ್ಯ ಈ ದಿವಸಗಳಲ್ಲಿ ಅಷ್ಟು ಹಾಳಿಲ್ಲ. ಮತ್ತು ಮೊದಲು, ನಾನು ಓರ್ವ ಕೈದಿಯಾಗಿರುವೆನು ... ಸರಕಾರ ಓರ್ವ ರೋಗಿ '

'ಆಸ್ಪತ್ರೆಯ ವಿಷಯ ನಿಮಗೇನಾದರೂ ಅಸಮಾಧಾನವಿರುವುದೆ' ಎಂದು ಡಿ. ಸಿ.ಯವರು ಕೇಳುವವರಾದರು.

'ಇಲ್ಲಾ ನನ್ನ ದೂರು ಇಂಡಿಯಾ ಸರಕಾರದ ಮೇಲೆ. ನಮ್ಮನ್ನು ಹಿಂದೂದೇಶಕ್ಕೆ ಒಯ್ಯದೆ ಇದ್ದರೆ, . .ಅಲ್ಲಿ ಯೋಗ್ಯ ತರದ ಕಾರಾಗ್ರಹ ವ್ಯವಸ್ಥೆಯಾಗದಿದ್ದರೆ, .ನಾನದನ್ನು ಬಿಡೆನು' ಎಂದುಬಿಟ್ಟೆ ನಾನು.

ಡಿ ಸಿ ಗಳಲ್ಲಿ ಜುಗುಪ್ಸೆ ಉಂಟಾಯಿತು. ಮದರಾಸಿನಿಂದ ಬಂದ ಡಾಕ್ಟರರಿಗೆ ಆಶ್ಚರ್ಯವಾಯಿತು ನಾನು ನನ್ನ ಕೆಲಸವನ್ನು ಮುಗಿಸಿಬಿಟ್ಟವನಾಗಿ, ಹೊದೆದುಕೊಂಡು ಮಲಗುವವನಾದೆ

ಸ್ನೇಹಿತರಲ್ಲಿ ಆಶ್ಚರ್ಯ.

ನನ್ನ ಈ ಸಿರ್ಧಾರದಿಂದ ನನ್ನ ಆಸ್ಪತ್ರೆ ಸಂಗಡಿಗರಿಗೆ ಆಶ್ಚರ್ಯವಾಯಿತು. ನನ್ನ ಸಿರ್ಧಾರದ ಕುರಿತು ಆ ತನಕ ಏನೂ ತಿಳಿದಿಲ್ಲವಾಗಿತ್ತು 'ಸ್ನೇಹಿತರೆ, ನೀವು ಹಸಿವಿನ ಮುಷ್ಕರವನ್ನು ಕೈಗೊಳ್ಳುವಿರಾ ಒಬ್ಬಂಟಿಗರಾಗಿ ಕೈಗೊಳ್ಳುವಿರೊ? ನೀವು ಈ ವಿಷಯ ನಮ್ಮೊಡನೆ ಪ್ರಸ್ತಾಪಮಾಡಲಿಲ್ಲವೇಕೆ? ಎಂಬ ಇವೇ ಮೊದಲಾದ ಪ್ರಶ್ನೆಗಳನ್ನು ಅವರು ಕೇಳುವವರಾದರು

ನನ್ನ ನಿರಶನವ್ರತವನ್ನು ಕೆಲ ದಿವಸಗಳಿಗೆ ಮುಂದೆ ಹಾಕಬೇಕಾಗಿ ಕೆಲವರು ವಿನಂತಿ ಮಾಡಿಕೊಂಡರು ಅವರಿಗೂ ಅದರಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಅವರೂ ಕೂಡಲೆ ನಿರಶನ ವ್ರತವನ್ನು ಹಿಡಿಯಬೇಕಾಗಿ ನನ್ನ ಬೋಧನೆ

ಆ ತನುಮಧ್ಯೆ ಸುಪರಿಂಟೆಂಡೆಂಟರು ತಿಳಿ ತಾಸುಗಳೊಳಗೆ ನಾನು ನಿರಶನವ್ರತವನ್ನು ತೊರೆಯಬೇಕು, ಇಲ್ಲವಾದರೆ ನನ್ನ ಮೇಲೆ ಕಾಯಿದೆ ಕಟ್ಟಳೆ ನಡೆಯಿಸುವರಾಗಿ ಎಚ್ಚರಿಕೆಯಿತ್ತರು .

ಆದರೆ ಅವರು ನನ್ನನ್ನು ಮತ್ತೊಮ್ಮೆ ಕಂಡುದು, ೧೭ನೆ ಸಪ್ಟಂಬರ ದಿವಸ ಅದೆ ೨೨ನೆ ತಾರೀಕಿನ ದಿವಸ ನಮ್ಮನ್ನೆಲ್ಲಾ ಹಿಂದೂ ದೇಶಕ್ಕೆ ಒಯ್ಯುವರೆಂದು ವಾರ್ತೆಯನ್ನು ತಿಳಿಸಲು.

ಆಸ್ಟ್ರಿಯಾವು ಜರ್ಮನಿಯನ್ನು ಸೇರಿದಂದಿನಿಂದ ಇಷ್ಟರ ತನಕ, 4400 ಜನರನ್ನು ಸೆರೆಹಿಡಿಯಲಾಗಿದೆ ಇವರಲ್ಲಿ 1400 ಮಂದಿಗಳನ್ನು ವಿಯೆನ್ನಾ ನಗರದಲ್ಲಿ ಸೆರೆಹಿಡಿದರಂತೆ

ಚೀನಿಯ ಸರಕಾರ ಇಟೆಲಿಯೊಡನೆ, ನೂತನ ಯುದ್ಧವಿಮಾನಗಳಿಗಾಗಿ ಆರ್ಡರು ಕೊಟ್ಟಿರುವುದೆಂದು ವಾರ್ತೆಯಿದೆ

KANTI
Toilet Soap

ಡಿಸ್ಟ್ರಿಬ್ಯುಟರರು.—
ಎಸ್. ಆರ್. ನ್ಯಾಕ್ ಎಂಡ್ ಕೋ.,
ಮಂಗಳೂರು.

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕಾ 'ಕಾಂತಿ' ಟೋಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು.

'ಕಾಂತಿ' ಸಾಬೂನನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಲೆ ಜನರು ಶ್ಲಾಘಿಸಿ ಉಪಯೋಗಿಸುವರು.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ

Prescription Work a Speciality

Eye Testing Free.

For Stylish FRAMES /
Up to-date shape LENSES
and
All kinds of optical goods

Please Visit,

Nayaks Optical Stores

Scientific Opticians,
Temple Square, MANGALORE

ಜಗಜಟ್ಟಿಗಳನ್ನು ಸೋಲಿಸಿದ ★ ಜಗದೇಕವೀರ ಗಾಮಾ ★

ಇಂಥಿನ ಹಿಂದಿನ ಜಗತ್ತಿನಲ್ಲಿ ಅಪ್ರತಿಮ ಆಟಗಾರನು ಯಾರು ಎಂದು ತಿಳಿಯಬೇಕಾದರೆ, ಒಬ್ಬನನ್ನು ನೀವು ಪ್ರತ್ಯೇಕಿಸಿ ಇಡಬೇಕಾಗುತ್ತದೆ. ಅವನನ್ನು ಬಿಟ್ಟರೆ ಉಳಿದವರೆಲ್ಲರೂ ಅವನಿಗೆ ಕಡಿಮೆಯವರಾಗುತ್ತಾರೆ ಅವನು ಹೊಡೆದು ಬಡಿದು ಕೆಡವಿ ಹಾಳಾದ ಪ್ರತಿದ್ವಂದ್ವಿಯು ಯಾರೂ ಇರುವುದಿಲ್ಲ. ಎಲ್ಲರನ್ನೂ ಮೀರಿಸಿ ಅವನು ತಾನೇ ತಾನಾಗಿ ಮೆರೆಯುತಿದ್ದಾನೆ. ಹಾಗಾದರೆ ಆ ಅಪ್ರತಿಮ ವೀರನು ಯಾರಾಗಿರಬಹುದು? ಜಾಕ್ ಡೇಂಪ್ಸಿಯೋ, ಟ್ಯಾ ಕೊಬ್ಬನೇ, ಜಿಕ್-ಥೋರ್ಪಿಯೋ ಎಂದು ನೀವು ಸಂದೇಹ ಪಡಬಹುದು ಇಲ್ಲ, ಅವನು ಅವರೊಳಗಿನ ಒಬ್ಬನೂ ಅಲ್ಲ! ಜಗಜಟ್ಟಿಗಳನ್ನು ಸೋಲಿಸಿದ ಜಗದೇಕ ಭಾರತೀಯ ವೀರ-ಗಾಮಾ-ನೇ ಅವನು! ಎಂದು 'ಜಾಕ್ ಕೊಪೋಡ್' ಅವರು 'ಅಮೆರಿಕನ್ ಕೆವಲ್ಕೇಡ್' ಎಂಬ ಪತ್ರಿಕೆಯಲ್ಲಿ ಬರೆದಿದ್ದಾನೆ

ಗಾಮು ಬರೀ ಐದು ಅಡಿ 9 ಅಂಗುಲ ಎತ್ತರವಾಗಿದ್ದಾನೆ ಆದರೆ 260 ರಾತಲು ಭಾರವಾಗಿರುವನು. ಶರೀರದಲ್ಲಿ ಒಂದಿಷ್ಟು ಕೊಬ್ಬು ಇರುವುದಿಲ್ಲ. ಎಲ್ಲಾ ಬೆಳೆದು ಉಬ್ಬಿದ ಸ್ನಾಯುಮಯವಾದ ದೇಹ ಶರೀರವು ಅಷ್ಟು ಭಾರವಾಗಿದ್ದರೂ, ಇಲಿಯನ್ನು ಹಿಡಿಯುವ ಬೆಕ್ಕಿನ ಶರೀರದಂತೆ ಅದು ವೇಗವಾಗಿ ಚಲಿಸಬಲ್ಲದು ಗೊರಿಲ್ಲಾನ ಶರೀರ ಬಲ, ಹುಲಿಯ ತ್ವರಿತಗತಿ, ಅಪ್ರತಿಮವಾದ ಬುದ್ಧಿಶಕ್ತಿ—ಎಲ್ಲಾ ಗಾಮುನಲ್ಲಿ ಇರುವುದರಿಂದ ಅವನನ್ನು ಸೋಲಿಸಿ ಗೆಲ್ಲುವ ಪರಾಕ್ರಮಿ ಪ್ರಪಂಚದಲ್ಲಿ ಇದುವರೆಗೆ ಒಬ್ಬನೂ ಹುಟ್ಟಿರುವುದಿಲ್ಲ

ಗಾಮುನಿಗೆ ಆರ್ವತ್ತು ವರ್ಷ ಪ್ರಾಯ ಸಂದಿತು ಆಶ್ಚರ್ಯವೆಂದರೆ ವಜ್ರಕಾಯದಂಥ ಅವನ ಶರೀರದಲ್ಲಿ ವೃದ್ಧಾಪ್ಯದ ಒಂದೇ ಒಂದು ಕುರುಹಾದರೂ ಕಾಣಿಸುವುದಿಲ್ಲ ಅವನ ಶರೀರದ ಚರ್ಮವು ಹದ ಮಾಡಿದ ಮೃಗಚರ್ಮದಂತೆ ಗಟ್ಟಿಯಾಗಿಯೂ ಮೃದುವಾಗಿಯೂ ಇದೆ ಹಾಲುಗಲ್ಲಿನಂತಿರುವ ದಂತಪಂಕ್ತಿಗಳನ್ನು ಮರೆಮಾಡುವ ಉದ್ದವಾದ ಗಲ್ಲಮೀಸೆಗಳು ಅವನ ಮುಖಮಂಡಲಕ್ಕೆ ಅಪೂರ್ವವಾದ ಶೋಭೆಯನ್ನು ಕೊಡುತ್ತವೆ ಶಾಂತವಾದ ಕಣ್ಣುಗಳು ಶಾಂತಿಯಿಂದ ಕೂಡಿವೆ ಆದರೂ ಸ್ಪರ್ಧೆಗೆ ನಿಂತಾಗ ಗಾಮುನು ವೈರಿಭಯಂಕರನಾಗುತ್ತಾನೆ ಅವನನ್ನು ನೋಡಿದ ಮಾತ್ರಕ್ಕೇ ಪ್ರತಿದ್ವಂದ್ವಿಗಳ ಮೈ ಜುಮ್ಮೆಂದು ಝುಮ್ಮೆನ್ನುತ್ತದೆ ಮೂವತ್ತು ಮೂವತ್ತೈದು ವರ್ಷಗಳ ಅವಧಿಯಲ್ಲಿ ಮೂರು ಮೂರುವರೆ ಸಾವಿರ ಸ್ಪರ್ಧೆಗಳು ನಡೆದುವು. ಜಗತ್ಪ್ರಸಿದ್ಧ ಜಗಜಟ್ಟಿಗಳು ಅವನನ್ನು ಪಂಥಕ್ಕೆ ಕರೆದರು. ಆದರೆ ಒಬ್ಬನಾದರೂ ಬಿಡದೆ ಎಲ್ಲರೂ ಅವನಿಂದ ಹಲ್ಲುಕಡ್ಡಿ ಕಡಿದು ಹಿಂದಕ್ಕೆ ಹೋದರು!

ಗಾಮನು ವೃದ್ಧರಲ್ಲಿ ವೃದ್ಧನಾಗಿದ್ದಾನಾದರೂ, ತರುಣರಲ್ಲಿ ತರುಣರನ್ನು ಪಂಥಕ್ಕೆ ನಿಲ್ಲಿಸಿ ಅವರನ್ನು ನೆಲಕ್ಕೆ ಉರುಳಿಸಲಿಕ್ಕೆ ಸಮರ್ಥನಾಗಿದ್ದಾನೆ, ಸಿದ್ಧನಾಗಿದ್ದಾನೆ. ಅಮೆರಿಕದ, ಯುರೋಪಿನ ಜಟ್ಟಿಗಳನ್ನೆಲ್ಲ ಎಂದೋ ಕಾಳಗಕ್ಕೆ ಕರೆದು, ಅವರನ್ನು ಸೋಲಿಸಿ ಸುಣ್ಣ ಮಾಡುತಿದ್ದನು. ಸಂಯುಕ್ತ ಸಂಸ್ಥಾನಗಳ ಅನುಪಮ ಜಟ್ಟಿ ಎಂದು ಹೆಸರ ಪಡೆದ ಜಾಕ ಕರ್ಲಿಯು ಒಂದು ಲಕ್ಷ ಡೊಲ್ಲರುಗಳನ್ನು ಕೊಡುವೆನಾಗಿ ಅವನನ್ನು ಆಮಂತ್ರಿಸಿದ್ದನು ಆದರೆ ಗಾಮನು ಆ ಆಮಂತ್ರಣವನ್ನು ಕೃತಜ್ಞತಾಪೂರ್ವಕ ತಿರಸ್ಕರಿಸಿದನು. ಯಾಕಂದರೆ ಅವನಿಗೆ ತನ್ನ ಜನ್ಮಭೂಮಿಯಾದ ಭರತ ಖಂಡವನ್ನು ಬಿಟ್ಟು ಎಲ್ಲಿಗೂ ಹೋಗುವ ಇಚ್ಛೆ ಇರುವುದಿಲ್ಲ ಆದರೆ ಪಾಟಿಯಾಲದಲ್ಲಿ ನಡೆದ ಪಂಥದಲ್ಲಿ ಝುಬಿಸ್ಕೋವನ್ನು ಗಾಮನು ಸೋಲಿಸಿದ ರೀತಿಯಿಂದ ಆತನು ಅಮೆರಿಕಕ್ಕೆ ತೆರಳಿದ್ದರೆ ಪರಿಣಾಮವು ಏನಾಗುತಿತ್ತೆಂಬುದನ್ನು ಸುಲಭದಲ್ಲಿ ತಿಳಿಯಬಹುದು

ಝುಬಿಸ್ಕೊ ಪೊಲೆಂಡಿನ ಒಬ್ಬ ದಿಂಡಾಳು. ತತ್ವಜ್ಞಾನದಲ್ಲಿ ಯೂನಿವರ್ಸಿಟಿಯ ಪರೀಕ್ಷೆ ಕೊಟ್ಟು ಅವನು ಪದವಿ ಪಡೆದಿದ್ದನು ಜಗತ್ತಿನ ಆರಿಸಿ ತೆಗೆದ ಉತ್ತಮ ಜಟ್ಟಿಗಳಲ್ಲಿ ಅವನೂ ಒಬ್ಬನಾಗಿದ್ದನು ಅವನಿಗೆ ಶರೀರ ಬಲ, ಬುದ್ಧಿಬಲ ಮತ್ತು ಕಾಳಗ ಪ್ರಮಾದ ಹಲವು ವರ್ಷಗಳ ಅನುಭವವಿದ್ದಿತ ಪಂಥದಲ್ಲಿ ಹತ್ತು ಸಾವಿರ ಡೊಲ್ಲರುಗಳ ಬಹುಮಾನ ಕೊಡುವೆವೆಂದು ಸಾರಲಾಗಿದ್ದಿತು, ಗಾಮನನ್ನು ಖಂಡಿತವಾಗಿಯೂ ಸೋಲಿಸಿ ಪಾರ್ವಾತ್ಯರಿಗಿಂತ ಪಾಶ್ಚಾತ್ಯರು ಶ್ರೇಷ್ಠರೆಂಬುದಕ್ಕೆ ಇನ್ನೊಂದು ದೃಷ್ಟಾಂತವನ್ನು ಕೊಡುವ ದೊಡ್ಡ ದೊಡ್ಡ ಆಸೆಗಳನ್ನು ಅವನು ಕಟ್ಟಿಕೊಂಡಿದ್ದನು ಆದರೆ ಭಾರತಕ್ಕೆ ಕಂಡ ಮೇಲೆ ಇಲ್ಲಿಯ ಕಾಳಗ ಕ್ರಮವು ವಿಜಾತೀಯವಾಗಿರುವುದನ್ನು ಕಂಡು ಅವನಿಗೆ ಖೇದವೂ ಆಶ್ಚರ್ಯವೂ ಆಯಿತು ಇಲ್ಲಿ ವರ್ತುಲದಲ್ಲಿ ಆಟ ನಡೆಯುವುದಿಲ್ಲ ಚೌಕದಲ್ಲಿ ಹಾಸಿದ್ದ ಮಣ್ಣಿನಲ್ಲಿ ಬರಿಗಾಲಿನ ಮೇಲೆ ನಿಂತು ಕಾಳಗ ಮಾಡಬೇಕು ಆದರೂ ಅವನ ಆತ್ಮ ವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ಆದರೇನು? ಅವನಿಗೆ ಗಾಮುನ ವಜ್ರಮುಷ್ಟಿಯಿಂದ ಬಿಡಿಸಿಕೊಳ್ಳುವುದು ಎಷ್ಟುಮಾತ್ರಕ್ಕೂ ಸಾಧ್ಯವಾಗಲಿಲ್ಲ ದೊಡ್ಡ ಆಜಾನುಬಾಹುವಿನ ಕೈಗೆ ಸಿಕ್ಕಿಬಿದ್ದ ಚಿಕ್ಕ ಮಗುವಿನಂತೆ ಗಾಮನ ಕೈಯಲ್ಲಿ ಝುಬಿಸ್ಕೊವಿನ ಸ್ಥಿತಿಯಾಯಿತು ಒಂದು ಕ್ಷಣದೊಳಗೆ ಝುಬಿಸ್ಕೊ ಮಣ್ಣಿನಲ್ಲಿ ಬೆನ್ನಿನ ಮೇಲೆ ಮಲಗಿದ್ದನು

ಜಟ್ಟಿಕಾಳಗದಲ್ಲಿ ಗಾಮುನಿಗೆ ಮೂವತ್ತೈದು ವರ್ಷಗಳ ಅನುಭವವಾಗಿದೆ ಆದರೆ ಮೊದಲು ಹೇಗೋ ಈಗಲೂ ಹಾಗೆ ಅವನು ಯಾರೊಡನೆಯಾದರೂ ಪಂಥಕ್ಕೆ ನಿಲ್ಲಲಿಕ್ಕೆ ಸಿದ್ಧನಾಗಿದ್ದಾನೆ ಕೆಲವು ವರ್ಷಗಳ ಹಿಂದೆ ಅವನು ಬುಡಾಪೆಸ್ಟ್ ನಗರಕ್ಕೆ ಹೋಗಿದನು ಯುರೋಪು, ಜಪಾನ, ಅಫಘಾನಿಸ್ಥಾನ, ಟರ್ಕಿ ಎಲ್ಲೆಲ್ಲಿ ದೊಡ್ಡ ದೊಡ್ಡ ಜಟ್ಟಿಗಳಿದ್ದರೋ ಅವರೆಲ್ಲರೂ ಆಗ ಬುಡಾಪೆಸ್ಟಿಗೆ ಬಂದಿದ್ದರು. ಗಾಮನು ತನ್ನ ವಿಷಯವಾಗಿ ಏನನ್ನೂ ಹೇಳಬೇಕಾಗಿರಲಿಲ್ಲ ಕೂಡಿದವರು ಅವನ ವಿಷಯವನ್ನು ಮೊದಲೇ ತಿಳಿದಿದ್ದರು ಅವರ ಕೀರ್ತಿ, ಹೆಸರು, ಮಾನ ಮರ್ಯಾದೆ ಯಾವುವೂ—ಗಾಮನು ಅವರ ಮೇಲೆ ಕೈಮಾಡಿದಾಗ ಪ್ರಯೋಜನಕ್ಕೆ ಇರುವಂಥವುಗಳಲ್ಲವೆಂದು ಅವರಿಗ ಗೊತ್ತಿತ್ತು ಯಾಕಂದರೆ, ಗಾಮನ ಬಲವು ಮನುಷ್ಯ ಬಲವಲ್ಲ, ಅದು ಮನುಷ್ಯ ಬಲವನ್ನು ಮೀರಿಸಿದ ದೈವೀ ಬಲ ಅಥವಾ ಆಸುರೀ ಬಲವಾಗಿತ್ತು

ಒಬ್ಬನಂದರೂ ಗಾಮನನ್ನು ಪಂಥಕ್ಕೆ ಕರೆಯಲಿಲ್ಲ ಅವರೊಳಗಿಂದ ಉತ್ತಮ ಹತ್ತು ಮಂದಿ ಜಗಜಟ್ಟಿಯರನ್ನು ಒಂದೇ ಬಾರಿ ಕಾಳಗಕ್ಕೆ ಕರೆದು ಅವರೆಲ್ಲರನ್ನು ಒಬ್ಬೊಬ್ಬರಾಗಿ ಕೇವಲ ಒಂದು ಗಂಟೆಯೊಳಗೆ ಸೋಲಿಸುವೆನಾಗಿ ಅವನು ಪಂಥಕಟ್ಟಿದನು ಆದರೂ ಯಾರೂ ಅವನ ಪಂಥವನ್ನು ಒಪ್ಪುವ ಸಾಹಸಿಗರಾಗಿರಲಿಲ್ಲ ಯಾರಿಗೂ ಗಾಮನ ಸುದ್ದಿಬೇಕಾಗಿರಲಿಲ್ಲ ಅವರು ಅವನನ್ನು ಅವನಷ್ಟಕ್ಕೆ ಜಗದೇಕ ವೀರನೆಂದು ಮೆರೆಯಲಿಕ್ಕೆ ಬಿಟ್ಟುಬಿಟ್ಟರು

ಗಾಮನು ಮೂರು ಸಾವಿರ ಪಂಥಗಳಲ್ಲಿ ಭಾಗವಹಿಸಿ ಗೆದ್ದುಕೊಂಡಿದ್ದಾನೆ ಪರಂತು ಒಂದರಲ್ಲಿಯೂ ಅವನಿಗೆ ಪರಾಜಯವಿಲ್ಲ! ಪಂಥಕ್ಕೆ ಬಂದವರು ಜಪಾನಿನ, ಯುರೋಪಿನ ಇತರ ದೇಶಗಳ ಸುಪ್ರಸಿದ್ಧ ಜಗಜಟ್ಟಿಗಳೇ! ಆದರೆ ಪ್ರತಿ ಒಬ್ಬರೂ ಅವನ ಉತ್ತಮತೆಯನ್ನು ಒಪ್ಪಿಕೊಂಡು ಹಿಂತೆರಳಿದರು. ಅವನೊಡನೆ ಕಾದಾಡಿದವರು—ಅವನಿಗಿಂತ ಎತ್ತರ, ಎಳದಿ ಎತ್ತರವಾಗಿದ್ದವರೂ ಇದ್ದರು, ಅವನಿಗಿಂತ ಭಾರ-500, 600 ರಾತಲು ಭಾರವಾಗಿದ್ದವರೂ ಇದ್ದರು ಆದರೆ ಎಲ್ಲರೂ ಅವನ ಮುಂದೆ ಹುಲ್ಲು ಕಡ್ಡಿಯಂಥೆ ಅಲ್ಪರಾಗಿದ್ದರು

ಗಾಮನಂತೆ ಜಗತ್ತಿನಲ್ಲಿ ಇನ್ನೊಬ್ಬನು ಇಲ್ಲವೇ ಇಲ್ಲ ಅವನನ್ನು ಮೀರಿಸಿದವನು ಹೇಗೂ ಇಲ್ಲವಲ್ಲ, ಅವನಿಗೆ ಸರಿಸಾಟಿಯಾದವನು ಕೂಡ ಇರುವುದಿಲ್ಲ ಗಾಮನಿಗೆ ಅವನಿಗಿಂತ 6 ಅಂಗುಲ ಹೆಚ್ಚು ಎತ್ತರವಾಗಿರುವ ಮತ್ತು ಮೂವತ್ತು ರಾತಲು ಭಾರವಾಗಿರುವ ಒಬ್ಬ ಮಗನಿದ್ದಾನೆ, ತಂದೆಯನ್ನು ಬಿಟ್ಟರೆ ಅವನೇ ಜಗಜಟ್ಟಿಯಾಗುವನೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ ಒಂದೆರಡು ವರ್ಷಗಳವರೆಗೆ, ಬೇಕಾದರೆ ಹತ್ತಿಪ್ಪತ್ತು ವರ್ಷಗಳ ತನಕ ಒಬ್ಬನು ಜಗದೇಕ ವೀರನಾಗಬಹುದು ಆದರೆ ಮೂವತ್ತೈದು ವರ್ಷಗಳ ದೀರ್ಘ ಸಮಯದವರೆಗೆ ಅಂಥ ಉನ್ನತ ಸ್ಥಾನದಲ್ಲಿ ಮೆರೆದವನು ಗಾಮನಲ್ಲದೆ ಜಗತ್ತಿನ ಇತಿಹಾಸದಲ್ಲಿ ಮತ್ತೆ ಯಾರೂ ಕಂಡುಬರುವುದಿಲ್ಲ

ಜಗಜಟ್ಟಿಗಳನ್ನು ಸೋಲಿಸಿದ ಜಗದೇಕ ವೀರನು ಗಾಮು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ ಅವನು ಜಗತ್ತಿನ ಅಪ್ರತಿಮ—ಅನುಪಮ ಆಟಗಾರನಾಗಿದ್ದಾನೆ

ಕೈ ತಯ್ಯಾರಿ ಕಾಗದ.

ಕೈ ತಯ್ಯಾರಿ ಕಾಗದದ ಉದ್ಯಮದಲ್ಲಿ ತರಬೇತು ಹೊಂದುವರೆ, ಸಂಯುಕ್ತ ಪ್ರಾಂತ್ಯದ ಅನೇಕ ಜಿಲ್ಲಾ ಬೋರ್ಡುಗಳು, ಉಪಾಧ್ಯಾಯರನ್ನು ಕಳುಹಿಸಿಕೊಟ್ಟಿರುವರು—ಕಲ್ಪಿ ಎಂಬಲ್ಲಿಗೆ ಕಾಗದ ತಯ್ಯಾರಿ ತರಬೇತಿಗಾಗಿ ಅಲ್ಲೊಂದು ಕೇಂದ್ರ ಸ್ಥಾಪನೆಯಾಗಿರುತ್ತದೆ. ಕಲ್ಪಿಯು ಅತಿ ಹಿಂದಿನಿಂದಲೂ ಕೈ ತಯ್ಯಾರಿ ಕಾಗದದ ಒಂದು ಕೇಂದ್ರವಾಗಿರುತ್ತದೆ ಉಪಾಧ್ಯಾಯರಲ್ಲದೆ, ಇತರ ಅನೇಕರು, ಕಾಗದ ತಯ್ಯಾರಿ ತರಬೇತಿಗಾಗಿ ಅಲ್ಲಿಗೆ ಬಂದಿರುವರು.

ಸತ್ತವಳು ಕನಸಿನಲ್ಲಿ ಬಂದಳು, ತಾನು ಸತ್ತುಬಿದ್ದ ಜಾಗವನ್ನು ತೋರಿಸಿಕೊಟ್ಟಳು.

ಈ ಘಟನೆಯು ನಡೆದುದು ಮುಂಬಾಯಲ್ಲಿ ಗಿರಣಿ ಕೆಲಸಗಾರನೊಬ್ಬನ ಹುಡುಗಿಯು ಕಾಣೆಯಾದಳು. ಅನೇಕ ದಿನಗಳ ದಿನಗಳ ಶೋಧೆಯಾದರೂ ಆಕೆಯು ದೊರಕಲಿಲ್ಲ. ನೊನ್ನೆ ಹುಡುಗಿಯು ತಂದೆಯ ಸ್ವಪ್ನದಲ್ಲಿ ಬಂದು ತಾನು ಸತ್ತು ಬಿದ್ದಿರುವ ಜಾಗವನ್ನು ತಿಳಿಸಿದಳು ಬೆಳಗ್ಗೆ ಅಲ್ಲಿಗೆ ತೆರಳಿದ ತಂದೆಗೆ ಎರಡು ಹತ್ತಿಯ ಬೇಲುಗಳ ನಡುವೆ ಹುಡುಗಿಯ ಕೊಳೆತ ಮೃತಶರೀರವು ದೊರಕಿತು. ಹುಡುಗಿಯ ಮರಣದ ಕಾರಣಗಳು ತಿಳಿಯಲಿಲ್ಲ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

GONO KILLER

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಇಂಗ್ಲೀಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತಿಯೂ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ
ಬೆಲೆ50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಛಾರ್ಜು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vithalbhai Patal Road, BOMBAY 4

ಜಪಾನಿಯರ ಜೀವನ ಚಿತ್ರ

[ಲೇಖಕರು — ಶ್ರೀ ದತ್ತಾತ್ರೇಯ ಖಾಂಡೇಲಕರ ಬಿ. ಎ.]

ಜಪಾನು ಪೌರ್ವಾತ್ಯದೇಶವಾಗಿದೆ. ಪಾಶ್ಚಾತ್ಯದೇಶಗಳು ಅದರಿಂದ ಬಹುದೂರದಲ್ಲಿರುತ್ತವೆ. ಆದರೂ ಜಪಾನಿನಲ್ಲಿ ಪೂರ್ವ ಪಶ್ಚಿಮಗಳು ಒಂದಾಗಿ ಗಾಢಾಲಿಂಗನ ಮಾಡಿರುವ ಸುಂದರ ದೃಶ್ಯವನ್ನು ಕಾಣಬಹುದು. ದೇಶ ಸಂಚಾರಮಾಡಿ ಜ್ಞಾನವನ್ನು ಸಂಪಾದಿಸಲಿಕ್ಕೆ ಜಪಾನು ಉತ್ತಮ ಸ್ಥಾನವಾಗಿದೆ. ಹಿಂದೂ ದೇಶದಿಂದ ಅಲ್ಲಿಗೆ ಹೋಗುವ ಎರಡು ಮುಖ್ಯದಾರಿಗಳಿರುವವು. ಕಲ್ಕತ್ತೆಯಲ್ಲಿ ಸ್ಟೀಮರು ಹತ್ತಿ ಸಿಂಗಾಪುರ ಮಾರ್ಗವಾಗಿ ಜಪಾನಿಗೆ ಹೋಗಲೂ ಬಹುದು ಅಥವಾ ಕೊಲಂಬೋ ತನಕ ರೈಲು ಮೂಲಕ ಹೋಗಿ, ಅಲ್ಲಿಂದ ಸ್ಟೀಮರು ಹತ್ತಿ ಜಪಾನಿಗೆ ಹೋಗಲಿಕ್ಕೆ ಆಗುತ್ತದೆ ಜಪಾನಿನಿಂದ ಹಿಂದೂ ದೇಶಕ್ಕೆ ಆಗಾಗ ಬಂದು ಹೋಗುವ ಅನೇಕ ಜಹಜುಗಳಿವೆ ಅವುಗಳಲ್ಲಿ ಪ್ರಯಾಣದ ಹೆಚ್ಚಿನ ಅನುಕೂಲತೆಗಳಿರುತ್ತವೆ ಬಂದು ಹೋಗುವ ಪ್ರಯಾಣ ಖರ್ಚು ಮತ್ತು ಜಪಾನನ್ನು ಮುಟ್ಟಿದ ತರುವಾಯ ಅಲ್ಲಿಯ ಸಂಚಾರ ಖರ್ಚು ಒಟ್ಟು ಎರಡು ಸಾವಿರ ರೂಪಾಯಿಗಳಿಗೆ ಮೀರುವುದಿಲ್ಲ

ಜಪಾನು ಬಹಳ ರಮಣೀಯದೇಶವಾಗಿದೆ ಪ್ರಕೃತಿಯು ಆ ದೇಶವನ್ನು ತನ್ನ ಎಲ್ಲಾ ಅಲಂಕಾರ ಸಾಮಗ್ರಿಗಳಿಂದ ಅಲಂಕರಿಸಿದೆ ಒಂದರ ಮೇಲೆ ಒಂದಾಗಿ ಎದ್ದು ಬರುವ ಸಮುದ್ರದ ತೆರೆಗಳು, ಸುಂದರವಾದ ಪರ್ವತಗಳು, ಬಣ್ಣ ಬಣ್ಣದ ಹಣ್ಣು ಹೂವುಗಳು ಹಸುರುಹಸುರಾದ ವೃಕ್ಷ ಪಂಕ್ತಿಗಳು ಇವುಗಳನ್ನು ನೋಡಿ ಮನಸ್ಸಿಗೆ ಸ್ವರ್ಗೀಯ ಆನಂದವು ಪ್ರಾಪ್ತವಾಗುತ್ತದೆ. ಈ ಪ್ರಾಕೃತಿಕ ಸೌಂದರ್ಯವು ಜಪಾನಿಯರ ನಿತ್ಯ ಜೀವನದಲ್ಲಿಯೂ ಕಂಡುಬರುತ್ತದೆ ಆದಕಾರಣ ಅದು ಬಹಳ ಆಕರ್ಷಣೀಯವಾಗಿ ಪರಿಣಮಿಸಿಯದೆ ಕೇವಲ ಪ್ರಾಕೃತಿಕ ಸೌಂದರ್ಯ ಮಾತ್ರವನ್ನೇ ಹೇಳುವದಾಗಿದ್ದರೆ ನಮ್ಮ ದೇಶವು ಜಪಾನನ್ನು ಮೀರಿಸಿರಬಹುದು ಅದರಂತೆ ವಿಶ್ವ ಇತಿಹಾಸವನ್ನು ಗಣನೆಗೆ ತಂದರೂ ಕೂಡ ನಮ್ಮ ದೇಶವು ಜಪಾನಿಗೆ ಹಿರಿಯದಾಗಿದೆ ಆಧ್ಯಾತ್ಮಿಕದೃಷ್ಟಿಯಿಂದ ಆಲೋಚಿಸಿದಾಗ ನಮ್ಮ ದೇಶವು ಸರ್ವೋತ್ಕೃಷ್ಟವಾಗಿರುವದೆಂದು ಕಂಡುಬಂದೀತು ಆದ್ದರಿಂದ ಜಪಾನಿಗೆ ನಾವು ಹೋಗಿ ನೋಡಬೇಕಾದ ಮತ್ತು ಕಲಿಯಬೇಕಾದ ವಿಷಯವು ಇದಾಗಿಲ್ಲ ಜಪಾನಿಯರ ವ್ಯಕ್ತಿಗತ ಜೀವನದ ಅಧ್ಯಯನವನ್ನೇ ನಾವು ಅಲ್ಲಿಗೆ ಹೋಗಿ ಮೊದಲು ಮಾಡಬೇಕು. ಅವರ ವ್ಯಕ್ತಿಗತ ಜೀವನದ ಉತ್ತಮತೆಯಿಂದಲೇ ಅವರಿಗೆ ಪ್ರಪಂಚದಲ್ಲಿ ಬಲ, ವೃದ್ಧಿ, ಬುದ್ಧಿ, ವಿದ್ಯೆ, ವೈಭವ, ಪ್ರತಿಷ್ಠೆ—ಇವುಗಳೆಲ್ಲಾ ಪ್ರಾಪ್ತವಾಗಿವೆ

ಜಪಾನಿಯರ ವ್ಯಕ್ತಿಗತ ಜೀವನದಲ್ಲಿ ನಾವು ಧ್ಯಾನ ಪೂರ್ವಕ ನೋಡಬೇಕಾದ ವಿಷಯವೆಂದರೆ, ಅವರ ಶಿಷ್ಟತೆ, ಸ್ವಚ್ಛತೆ, ಮತ್ತು ನಾಗರಿಕತೆಯ ಭಾವವಾಗಿದೆ ಜಪಾನಿಯರು ಭಿನ್ನ ಭಿನ್ನ ಧರ್ಮಗಳನ್ನು ಅವಲಂಬಿಸುವವರಾಗಿದ್ದಾರಾದರೂ, ಮನೆಯ ಹೊರಗೆ ಕಾಲಿಟ್ಟಾಗ ಅವರಲ್ಲಿ ಯಾರಲ್ಲಿಯೂ, ಧಾರ್ಮಿಕ ಭಾವನೆಯು ಎದ್ದು ಮುಂದೆ ಬರುವುದಿಲ್ಲ ಮನೆಯಿಂದ ಹೊರಗೆ ಪ್ರತಿಯೊಬ್ಬನ ಎದುರಿಗೆ ತನ್ನ ದೇಶ ಮತ್ತು ತನ್ನ ರಾಷ್ಟ್ರಕ್ಕೆ ಸೇರಿದ ನಾಗರಿಕನ ಪಕ್ಷಿಯಿರುತ್ತದೆ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಭಾವದಿಂದ ಪ್ರೇರಿತನಾಗಿಯೇ ಅವನು ಪ್ರತಿಯೊಂದು ವಿಷಯ ಆಲೋಚಿಸುತ್ತಾನೆ, ಆಲೋಚಿಸಿದಂತೆ ಆಡುತ್ತಾನೆ, ಆಡಿದಂತೆ ಮಾಡುತ್ತಾನೆ. ಹೀಗಾಗುವದರ ಮೂಲಕಾರಣ—ಬಾಲ್ಯದಿಂದಲೂ ಪ್ರತಿಯೊಬ್ಬ ಜಪಾನೀಯನಿಗೆ ರಾಷ್ಟ್ರೀಯ ಶಿಕ್ಷಣವು ಕೊಡಲಾಗುತ್ತದೆ ಶಿಕ್ಷಣದಿಂದಲೇ ಜಪಾನಿಯರಲ್ಲಿ ಈ ಭಾವವು ಉತ್ಪನ್ನವಾಗಿರುವದೆಂದಲ್ಲ, ಹಲವು ಶತಮಾನಗಳ ಜೀವನ ಕ್ರಮದ ಪರಿಣಾಮವಾಗಿಯೂ ಅವರ ಸ್ವಭಾವವು ಅದಕ್ಕೆ ಅನುಕೂಲವಾಗಿ ರೂಪಗೊಂಡಿದೆ ಜಪಾನಿನಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕ್ರಮವು ಜಾರಿಯಲ್ಲಿದೆ ಆರುವರ್ಷದಿಂದ 12ವರ್ಷಗಳಾಗುವ ತನಕ ಜಪಾನಿನ ಪ್ರತಿಯೊಬ್ಬ ಬಾಲಕ ಬಾಲಕಿಯು ಶಾಲೆಗೆ ಹೋಗಲೇಬೇಕು 12 ವರ್ಷಗಳಾದ ಮೇಲೆ ಅವರು ತಮ್ಮ ಅಭಿರುಚಿ ಗೊಪ್ಪುವ ವಿಷಯಗಳನ್ನು ತೆಗೆದುಕೊಂಡು ಶಿಕ್ಷಣವನ್ನು ಮುಂದೆ ಸಾಗಿಸಬಹುದು

ಜಪಾನಿಯರ ಶಿಷ್ಟತೆಯು ಉತ್ಕೃಷ್ಟವಾಗಿದೆ ನೀವು ಅಲ್ಲಿಯ ಯಾವದೇ ಟ್ರ್ಯಾಂನಲ್ಲಿ ಪ್ರಯಾಣ ಮಾಡುತ್ತಿರಿ ಎಷ್ಟೇ ದೊಡ್ಡ ಜನಸಂದಣಿ ಇದ್ದರಲಿ ಆದರೆ ಯಾವ ಸಂದರ್ಭದಲ್ಲಿಯೂ ಒಬ್ಬರೊಬ್ಬರ ನೂಕಿ ಒತ್ತಿ ಅಥವಾ ದೂರಿಕೊಂಡು ಇರಲಿಕ್ಕಿಲ್ಲ ಜನಸಂದಣಿ ವಿಶೇಷವಾಗಿರುವದಾದರೂ, ಒಬ್ಬ ಸ್ತ್ರೀಯು ಅಲ್ಲಿಗೆ ಬಂದಳಾದರೆ ಕೂಡಲೇ ಅವಳಿಗೆ ಕೂತುಕೊಳ್ಳಲಿಕ್ಕೆ ಸ್ಥಾನವನ್ನು ಒದಗಿಸಿಕೊಡಲಾಗುತ್ತದೆ ಅದು ಕೂಡ ಪರೋಪಕಾರ ಬುದ್ಧಿಯಿಂದ ಅವಳಿಗೆ ಸ್ಥಾನವನ್ನು ಕೊಡುವುದಿಲ್ಲ ಕೇವಲ ನಮ್ರತೆಯಿಂದ ಕೊಡಲಾಗುತ್ತದೆ ಟ್ರ್ಯಾಂನಲ್ಲಿಯೂ ನೀವು ಇದೇ ಶಿಷ್ಟತೆಯನ್ನು ಕಾಣುವಿರಿ ಕೆಲವರ ಆಸನದಿಂದ ಕೆಳಗಿಳಿದು ಚಾಚಿ ಮಲಗಿಕೊಂಡಿರುವ ಉಳಿದವರು ಸ್ಥಳಕಾಣದೆ ತುದಿಗಾಲ ಮೇಲೆ ನಿಂತಿರುವ ವಿಚಿತ್ರ ದೃಶ್ಯವನ್ನು ನೀವು ಜಪಾನಿನ ರೈಲ್ವೆ ಟ್ರ್ಯಾಂವೇಗಳಲ್ಲಿ ಎಷ್ಟು ಮಾತ್ರಕ್ಕೂ ಕಾಣಲಾರಿರಿ ಸ್ವಲ್ಪ ಹೆಚ್ಚಿಗೆ ಚಾರ್ಜು ಕೊಟ್ಟವನಿಗೆ ಮಲಗಿಕೊಂಡಿರಲಿಕ್ಕೆ ಜಪಾನ್ ರೈಲ್ವೆಗಳಲ್ಲಿ ಪ್ರತ್ಯೇಕ ಡಬ್ಬಿಗಳಿರುತ್ತವೆ ಜಪಾನಿಯರಲ್ಲಿ ಪರಸ್ಪರ ಸಮ್ಮಾನ ಭಾವವು ವಿಶೇಷವಾಗಿರುತ್ತದೆ ಆದ್ದರಿಂದ ಇತರರನ್ನು ಅವರು ಮರ್ಯಾದೆಯಿಂದ ಕಾಣುತ್ತಾರೆ

ಜಪಾನಿಯರ ಸಾರ್ವಜನಿಕ ನಮ್ರತೆಯ ಕುರಿತು ಬರೆದುದನ್ನು ಓದಿದರೆ ನಮಗೆ ಬಹಳ ಆಶ್ಚರ್ಯವಾಗಬಹುದು ದೊಡ್ಡ ದೊಡ್ಡ ಪೇಟೆ ಪಟ್ಟಣಗಳಲ್ಲಿ ಇಲ್ಲಿಯಂತೆ ಅಲ್ಲಿಯೂ ವಾಹನಾದಿಗಳ ಸಂಚಾರವು ವಿಶೇಷವಾಗಿರುತ್ತದೆ. ಆದರೆ ಕಾಲುದಾರಿಯಿಂದ ನಡೆದು ಹೋಗುವ ಪ್ರಯಾಣಿಕನು ರಸ್ತೆಯನ್ನು ದಾಟಿ ಹೋಗಲಿಕ್ಕೆ ಇಲ್ಲಿಯಂತೆ ಅಲ್ಲಿ ಭಯಪಡಬೇಕಾದುದಿಲ್ಲ, ಎಲ್ಲರೂ ಅಲ್ಲಿ ಕ್ರಮವರಿತು, ನೀತಿ ನಿಯಮಗಳನ್ನನುಸರಿಸಿ ನಡೆಯುತ್ತಾರೆ ಒಬ್ಬನಿಗೆ ವೇಗವಾಗಿ ಹೋಗಬೇಕಾಗಿದ್ದರೆ ಸುಭದ್ರದಲ್ಲಿ ದಾರಿ ಬಿಟ್ಟು ಕೊಡುತ್ತಾರೆ ಒಂದು ಬಾರಿ ಒಬ್ಬ ರಿಕ್ಷಾವಾಲನು ಕಾರ್ಯವಶರಿಂದ ತನ್ನ ಗಾಡಿಯನ್ನು ನಡುದಾರಿಯಲ್ಲಿ ಬಿಟ್ಟು ಹೋಗಿದ್ದನು ಅಷ್ಟರೊಳಗೆ ಮೋಟಾರು ಬಂದಿತು. ಮೋಟಾರ ಡ್ರೈವರನು ಸಿಟ್ಟಿನಿಂದ ಗಾಡಿಯವನನ್ನು ಬಯ್ಯಲೂ ಹೊಡೆಯಲೂ ಇಲ್ಲ ಅವನು ಮೋಟಾರಿನಿಂದ ಇಳಿದು ಗಾಡಿಯನ್ನು ಬಹುಜಾಗರೂಕತೆಯಿಂದ ಒಂದು ಬದಿಗೆ ಎಳೆದು ತಂದನು ಅಷ್ಟರೊಳಗೆ ಗಾಡಿಯವನು ಬಂದು ತಪ್ಪಿಗಾಗಿ ಕ್ಷಮೆ ಬೇಡಿದನು. ಡ್ರೈವರನು ನಸುನಕ್ಕು ಅಷ್ಟೇ ನಮ್ರತಾಪೂರ್ವಕ ಅಭಿವಾದನ ಮಾಡಿ ಹೊರಟು ಹೋದನು ಜಪಾನಿಯರಿಗೆ ಬೈಯ್ಯುವದೇ ಬರುದು ಗೊತ್ತೇ ಇಲ್ಲ ಕ್ರೋಧದಿಂದ ಸಂತಪ್ತರಾದಾಗ ಅವರು ಬಾಯಿಯಿಂದ ಹೊರಡುವ ಮಾತು—'ಮೂರ್ಖ' ಎಂಬುದು ಒಂದೇ ಒಂದು. ಆದರೆ ಈ ಶಬ್ದವನ್ನು ಕೇಳುವದಾದರೂ ಬಹಳ ಅಪರೂಪವಾಗಿದೆ. ತಾನು ಮೇಲು, ಇತರರು ಕೀಳು ಎಂಬ ದೂಷಿತ ಮನೋವೃತ್ತಿಯು ಜಪಾನಿಯರಲ್ಲಿ ಇಲ್ಲವೇ ಇಲ್ಲ. ಮಾಲಕ ಮಜೂರರೊಳಗೂ ಸಮಾನತೆಯ ಭಾವವು ವಿಶೇಷವಾಗಿರುತ್ತದೆ, ಜಪಾನೀ ಜೀವನದ ಈ ಅವಸ್ಥೆಯು ಬಹಳ ಸುಖಕರವಾಗಿದೆ ಅಡಿಗೆಯವನನ್ನಾದರೂ—'ಶ್ರೀಯುತ ಭಟ್ಟರೇ' ಎಂದು ಕರೆಯುತ್ತಾರೆ ಶಿಷ್ಟಾಚಾರಕ್ಕಾಗಿ ಮಾತ್ರ ಹೀಗೆ ಹೇಳುವುದಿಲ್ಲ. ಜಪಾನಿಯರ ನಾಗರಿಕ ಜೀವನವೇ ಇಷ್ಟು ಉತ್ಕೃಷ್ಟವಾಗಿರುತ್ತದೆ

ಜಪಾನಿನ ಮಕ್ಕಳು ತಮ್ಮ ಅಧ್ಯಾಪಕರೊಂದಿಗೆ ಸಂಚಾರ ಮಾಡುತ್ತ ಅಲ್ಲಿಯ ಐತಿಹಾಸಿಕ ಮತ್ತು ಮನೋರಂಜಕ ಸ್ಥಾನಗಳನ್ನು ನೋಡುವದು ಅವರ ಶಿಕ್ಷಣದ ಒಂದು ಅಂಗವಾಗಿದೆ ಇದರಿಂದ ಜಪಾನೀ ಬಾಲಕ ಬಾಲಕಿಯರಲ್ಲಿ ಸ್ವದೇಶಾಭಿಮಾನವೂ ಜ್ಞಾನಾನುಭವವೂ ವಿಶೇಷವಾಗಿ ಬೆಳೆದು ಬರುತ್ತದೆ ಅವರು ಪ್ರಾಕೃತಿಕ ಸೌಂದರ್ಯವನ್ನು ಬಹಳವಾಗಿ ಮೆಚ್ಚುತ್ತಾರೆ ಸ್ವಚ್ಛತೆಯ ಭಾವವೂ ಮಿತಿಮೀರಿ ಇರುತ್ತದೆ ಭೂರಿ ಭೋಜನಗಳು ನಡೆಯುತ್ತಿದ್ದಲ್ಲಿ ಕೂಡ ನೀವು ಕೊಳೆ ಕಸ ಕಡ್ಡಿಗಳನ್ನು ಎಳ್ಳಷ್ಟು ಕಾಣಲಾರಿರಿ ಸ್ವಚ್ಛತೆಯ ಭಾವವು ತೀವ್ರತರ—ಜಪಾನಿಯರು ಎಲ್ಲದರಲ್ಲಿ, ಎಲ್ಲ ಕಡೆಗಳಲ್ಲಿ ಎಲ್ಲ ಸಂದರ್ಭಗಳಲ್ಲಿ ಏಕಪ್ರಕಾರ ವಿಶೇಷ ರೀತಿಯಿಂದ ಕಂಡುಬರುತ್ತದೆ ಯಾರೇ ಆದರೂ ಹೊರಗಿನ ಕೆಲಸ ಮಾಡಿ ಬಂದಾಗ ಸ್ನಾನಮಾಡಿ ಕೈಕಾಲು ತೊಳೆದ ವಸ್ತ್ರಗಳನ್ನು ಬದಲಿಸಿ ಶುದ್ಧ ಹೊರತು ಮನೆಯೊಳಗೆ ಕಾಲಿಡುವದಿಲ್ಲ ಜಪಾನಿಯರ ಮನೆ ಮಠಗಳು ಅಷ್ಟು ಬಹಳ ದೊಡ್ಡದಾಗಿ ಇದ್ದಿರಬಹುದು ಆದರೆ ಸ್ವಚ್ಛತೆಯ ಕಲಾಕೌಶಲ್ಯತೆಯನ್ನು ಅವುಗಳಲ್ಲಿ ಕಾಣಬಹುದು ಮನೆಯ ಒಳಭಾಗದ ದಾರಿ ಕೋಣೆಗಳನ್ನು ಸ್ವಚ್ಛವಾಗಿಡುವದು ತಮ್ಮ ಕರ್ತವ್ಯವೆಂದು ಜಪಾನಿಯರು ತಿಳಿಯುತ್ತಾರೆ ಅಂಗಡಿಗಳಲ್ಲಿ ಕೂಡ ಈ ಗಡಿಗಳ ಮುಂದೆ ಸಣ್ಣ ಕಸ ಕಡ್ಡಿ ಬಿದ್ದಿದ್ದರೂ ಅದನ್ನು ಕೂಡಲೇ ಹೆಕ್ಕಿ ತೆಗೆದು ಕಸದ ಬುಟ್ಟಿಗೆ ಚೆಲ್ಲುವರು ಹುಡುಗಿ ಹುಡುಗರ ವಿಷಯದಲ್ಲಿ ಜಪಾನಿಯರು ಇಂಗ್ಲಿಷರನ್ನು ಅನುಕರಿಸುತ್ತಿದ್ದರಾದರೂ ಅವರಲ್ಲಿ ಸ್ವಭಾಷಾ ಪ್ರೇಮವು ಅಪರಿಮಿತವಾಗಿರುವದು ಸಣ್ಣವರಿಂದ ಹಿಡಿದು ದೊಡ್ಡವರ ತನಕ ಪ್ರತಿಯೊಬ್ಬರು ಜಪಾನಿ ಭಾಷೆಯನ್ನೇ ಉಪಯೋಗಿಸುತ್ತಾರೆ

ಸ್ತ್ರೀ ಸಮಾಜದಲ್ಲಿ ದೊಡ್ಡದೊಂದು ಬದಲಾವಣೆಯು ಆಗುತ್ತಿದೆ ಪ್ರಾಚೀನ ಕಾಲದಿಂದಲೂ ಸ್ತ್ರೀಯರು ಪಾತಿವ್ರತ್ಯ ಸಹನಶೀಲತೆಯನ್ನು ಸಂಪಾದಿಸುವದಕ್ಕಾಗಿ ಜಪಾನಿಯರು ತಮ್ಮ ಮಗಳಿರನ್ನು ಕೊಡಲಿಕ್ಕೆ ಸಿದ್ಧರಾಗಿ ಇರುತ್ತಾರೆ ಅವರ ಜಪಾನೀ ಸ್ತ್ರೀಯರನ್ನು ವೀರಮಾತೆಯರೆಂದು ತಿಳಿಯುತ್ತಾರೆ. ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಬಲ್ಲ ಮಕ್ಕಳನ್ನು ಹುಟ್ಟಿಸುವವರು ಜಪಾನೀ ಸ್ತ್ರೀಯರೆಂದು ಅವರ ಭಾವ ಈಗಲೂ ಅವರಿಗೆ ಬಾಲ್ಯದಲ್ಲಿ ಹೆತ್ತವರ, ತಾರುಣ್ಯದಲ್ಲಿ ಪತಿಯರ, ವೃದ್ಧಾಪ್ಯದಲ್ಲಿ ಮಕ್ಕಳ ವಶದಲ್ಲಿರಲಿಕ್ಕೆ ಶಿಕ್ಷಣವನ್ನು ಕೊಡಲಾಗುತ್ತದೆ. ಆದರೆ ಸ್ತ್ರೀಯರ ದೃಷ್ಟಿಕೋನವು ಈಗ ಬದಲಾಗಿದೆ. ಈಗ ಸ್ತ್ರೀಯರು ಮನೆ ಮಠಗಳಲ್ಲಿ ಮಾತ್ರವಲ್ಲದೆ ಇತರ ಕಡೆಗಳಲ್ಲಿಯೂ ಕಂಡು ಬರುತ್ತಾರೆ ಯೂರೋಪಿನ ಸ್ತ್ರೀಯರು 500 ವರ್ಷಗಳಲ್ಲಿ ಸಾಧಿಸಿದ ಉನ್ನತಿಯನ್ನು ಅವರು ಕಳೆದ 50 ವರ್ಷಗಳಲ್ಲಿ ಸಾಧಿಸಿದ್ದಾರೆ ಅಲ್ಲಿ ಸ್ತ್ರೀಯರ ಅನೇಕ ಸಂಸ್ಥೆಗಳಿವೆ ಸ್ತ್ರೀಯರ ರಾಜಕೀಯ ಸಂಘಗಳಲ್ಲಿ ಸದಸ್ಯೆಯರ ಸಂಖ್ಯೆ 30ಲಕ್ಷಕ್ಕೆ ಮೀರಿ ಇರುತ್ತದೆ ಕಾಲಾನುಸಾರ ಜಪಾನೀ ಸ್ತ್ರೀಯರು ತಮ್ಮ ಜೀವನ ಕ್ರಮವನ್ನು ತಿದ್ದಿಕೊಳ್ಳಲಿಕ್ಕೆ ಸಮರ್ಥೆಯರಾಗಿದ್ದಾರೆ

ಸ್ತ್ರೀಯರು ಅವಿವಾಹಿತರಾಗಿರಲಿಕ್ಕೆ ಪ್ರೋತ್ಸಾಹವು ಕೊಡಲಾಗುವುದಿಲ್ಲವಾದರೂ, ಅವರು ಪುರುಷರ ಸ್ಪರ್ಧೆ ಹೂಡಿ ಆಗಿರುವುದಿಲ್ಲ, ಅಥವಾ ಅವರು ಪುರುಷರ ಗುಲಾಮರಾಗಿರುವದೂ ಇಲ್ಲ ಅವರು ಸ್ವತಂತ್ರರಾಗಿದ್ದಾರೆ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮಂದಿ ಸ್ತ್ರೀ ಕೆಲಸಗಾರರನ್ನು ಕಾಣಬಹುದು ಹಾಗೆಯೇ ವ್ಯಾಪಾರ ವಹಿವಾಟುಗಳಲ್ಲಿಯೂ ಅವರು ಬಹಳ ಮುಂದರಿದಿದ್ದಾರೆ ಪ್ರಪಂಚದ ಇತರ ಭಾಗದ ಸ್ತ್ರೀಯರಿಗಿಂತ ಅವರು ಹೆಚ್ಚು ಧೈರ್ಯಶಾಲಿಯರೂ ಸ್ವಸ್ಥರೂ ಆಗಿದ್ದಾರೆ ಅವರಲ್ಲಿ ಅತ್ಯಂತ ಬೆಳೆದ ಗುಣವನ್ನು ಎಲ್ಲಿಯೂ ಕಾಣಲಾರಿರಿ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಜಪಾನ ಸ್ತ್ರೀಯರ ಮುಂದೆ ಬರುವಿಕೆ ಕಂಡು ಬರುತ್ತದಾದರೂ, ಯೂರೋಪಿನ ಸ್ತ್ರೀಯರಂತೆ ಅವರ ಎಷ್ಟು ಮಾತಕತ್ಯ ಪರಿಪೂರ್ಣರ ಸ್ವರಣ ಪರಿಚಯವನ್ನು ಮಾಡಿಕೊಳ್ಳುವದಿಲ್ಲ ಅವರ ಕಡೆಗೆ ಕಣ್ಣೆತ್ತಿ ನೋಡುವ ಸಾಹಸವು ಪುರುಷರಲ್ಲಿ ಯಾರಿಗೂ ಇರುವದಿಲ್ಲ

"ವಿಶ್ವಮಿತ್ರ"

ಜಗತ್ತಿನ ಶಾಂತಿರಕ್ಷಣೆ ಯಾಗಬೇಕೋ—

ರಷ್ಯದ ಸ್ಟೆಲಿನ್ ಇಟೆಲಿಯ ಮುಸಲಿನಿ, ಜರ್ಮನಿಯ ಹಿಟ್ಲರ್—ಈ ಮೂವರ ಸರ್ವಾಧಿಕಾರಿಗಳ ಪರಿಷತ್ತು ಕೂಡ ನಡೆಯ ಬೇಕು ಅವರೊಳಗೆ ಅತ್ಯಂತ ವಿನಯದ ಮಾತುಕತೆಗಳು ನಡೆದು, ಕೆಲವು ಒಪ್ಪಂದಗಳಾಗಬೇಕು. ತಿಪ್ಪಾಬಿ.

THE

Canara Banking Corporation, Udipi, Ltd.

INCORPORATED IN BRITISH INDIA
ESTD 1906

Head Office: UDIPI, South Canara.

BRANCHES.

1 Byndoor	7 Malpe	14 Shimoga
2 Coondapoor	8 Mercara	15. Shirva
3 Erode	9 Mettupalayam	16. Tellicherry
4 Madras	10 Mysore	17 Thirthahalli
5 Mangalore, Car Street	11 Sagar	18 Virarajendrapet
	12 Saklaspur	19 Vellore
6 Mangalore, Bunder	13 Salem	20 Udipi

All kinds of Banking Transactions undertaken.

ಈ ವಾರದ ಕಥೆ

ಮಾಷ್ಟಿಯ ಕೈ

ಬರೆದವರ ಬಿ ಆರ್. ಕಾಮತ್

(ಇಂಗ್ಲೀಷ ಕಥೆಯೊಂದರ ಅನುವಾದ)

ರಾತ್ರಿ ಬಹಳ ಹೊತ್ತಾದರೂ ವಾಸುದೇವಯ್ಯನಿಗೆ ಕಣ್ಣು ರೆಪ್ಪೆಗೆ ರೆಪ್ಪೆ ಹಚ್ಚಲಿಲ್ಲ. ಏಕೋ ಅಂದು ಅನೇಕ ವಿಚಿತ್ರಾಕೃತಿಗಳು ಆತನ ಕಣ್ಣ ಮುಂದೆ, ಆತನನ್ನು ಕೆಣಕುವಂತೆ ನಾನಾ ಭಾವಭಂಗಿಗಳಿಂದ ನೃತ್ಯ ಮಾಡತೊಡಗಿದುವು. ತನ್ನ ತಂದೆ ತಾಯಿಗಳಿಗೂ ಇದೇ ರೀತಿಯ ಆಕೃತಿಗಳ ಪ್ರತ್ಯಕ್ಷವಾಗಿರುವುವೋ ... ತಾನ ಎಚ್ಚರದಿಂದ ಇದ್ದೆನೆಂದು ... ಹೇಳಲಾಗಲಿಲ್ಲ ... ಬೆಳಗಿನ ... ಸಾಧಾರಣ ... ಹೊತ್ತಿ ... ಎದ್ದ ...

... ದಿನ ... ವಾಸುದೇವಯ್ಯನ ... ಎಂದಿಗಿಂತ ಸ್ವಲ್ಪ ಹೊತ್ತಾಗಿತ್ತು ... ರಾತ್ರೆ ಇಡೀ ನಿದ್ದೆಯಿಲ್ಲದುದರಿಂದ ಕಣ್ಣುಗಳು ... ಉರಿಯುತ್ತಿದ್ದುವು. ಆದರೂ ... ಗಂಜಿಯ ... ಒಂದು ... ಊಟಮಾಡತ್ತಿ ... ದಿನ ರಾತ್ರೆ ... ಕಂಡ ಕೃತಿಗಳನ್ನು ನೆನೆದ ... ಆಗಿತ್ತು ... ಅದನ್ನು ... ಮನಸ್ಸಿನಲ್ಲಿಯೇ ... ಮಗ ಇಬ್ಬರೂ ಊಟಕ್ಕೆ ಕುಳಿತಿದ್ದರು ಲಕ್ಷ್ಮಮ್ಮ ಬಡಿಸುತ್ತಿದರು

"ಈ ನರ್ಸ್‌ ಇತ್ತರೆಂದರೆ ಎಲ್ಲಿ ... ಹಾಗೆ ... ನೋಡಿ" ಮಾಷ್ಟಿಯ ಕೈ ... ಲಕ್ಷ್ಮಮ್ಮ ನುಡಿದರು ... ಹುಚ್ಚು ... ಗಳನ್ನು ನಾವು ನಂಬದೆ ಇಲ್ಲವೇ? ... ~~ಗಿನ ಕಾಲದಲ್ಲಿ ... ಆಗುವುದೆಂದ~~ ...ನು? ಈ ಕಲಿಕಾಲದಲ್ಲಿ

ಏಕಾಗಕೂಡದು ... ಈ ದಿನ ಎಲ್ಲಿ ... ಯಾದರೂ ಗಗನದಿಂದ ... ಮೇಲಿಯೋ ... ರೂಪಾಯಿಗಳ ಗಂಟು ಬೀಳ ... ಹುದು" ಎಂದು ತರುಣಸ್ವಭಾವದ ವಾಸುದೇವಯ್ಯನು ವಂದಿಸಿದ

"ಯಾಚಿಸಿದ ವಿಷಯಗಳೆಲ್ಲ ಸ್ವಾಭಾವಿಕವಾಗಿ ಸಂಭವಿಸುವುವೆಂದೆ ... ವಾಸುದೇವ ... ಪ್ರತಿಪಾದಿಸಿದರ, ... ಸ್ವಾಭಾವಿಕ ... ನಾವು ಬೇಡದಿದ್ದ ... ಆಗುತ್ತಿತ್ತೋ ನೋ ಎಂಬ ... ದು"

"ಹೇಗೂ ಇರಲಿ ನಾವು ಬರುವ ತನಕ ... ಚೀಲವನ್ನು ... ಎತ್ತದಿರಿ" ಎಂದು ಹೇಳಿ ವಾಸುದೇವಯ್ಯನು ... ಊಟವನ್ನು ಮುಗಿಸಿ ಎದ್ದು, ತನ್ನ ಕೆಲಸಕ್ಕೆ ಹೋಗಲು ಪೋಷಾಕನ್ನು ಧರಿಸಿ ಸಿದ್ಧನಾದನು

ಮಗನು ಕೆಲಸಕ್ಕೆ ಹೊರಟು ಹೋದ ನಂತರ, ಆತನ ವೃದ್ಧ ಮಾತಪಿತೃಗಳು ಆ ಮಾಷ್ಟಿಯ ಕೈಯ ಕುರಿತೇ ಪ್ರಸ್ತಾಪಿಸುತ್ತ ಸಮಯವನ್ನು ಕಳೆಯತೊಡಗಿದರು.

"ಅಂತೂ ಆ ... ನನ್ನ ಕೈಯಲ್ಲಿ ಚಲಿಸಿತೆಂಬುದು ನಿಜ" ... ರಾಮರಾಯರು ತನ್ನ ಮಡದಿಗೆ ಹೇಳಿದರ

"ಅದೇನೋ ... ಭ್ರಮೆ ಇರಾಗಿರಬೇಕು" ಲಕ್ಷ್ಮಮ್ಮ ... ಸಮಾಧಾನ ಹೇಳಿದರು ... ರಾಮರಾಯರು ... ಪಾದಿಸಿದರು. ಅದು ನನ್ನ ಕೈಯಲ್ಲಿ ಚಲಿಸಿತ್ತೆ ಬುದಕ್ಕೆ ... ಸ್ಥಳದಲ್ಲಿಯೂ ಪ್ರಮಾಣ ಮಾಡ ... ಸಿದ್ಧನಿರುವೆನು ... ನಾನೇನು ... ಸೇದುವವನೆ? ನಾನು ಅದನ್ನು ಕೈಯಲ್ಲಿ ಎತ್ತಿ ಹಿಡಿದ ... ನೋಡುತ್ತಿದ್ದವೆ?

ಲಕ್ಷ್ಮಮ್ಮ ಉತ್ತರ ... ಒಳಗೆ ಪ್ರವೇಶಿಸಲೋ ಬೇಡವೋ ಎಂಬ ತೆ ಕಳ್ಳನೋಪಾದಿ ಅತ್ತಿತ್ತ ಚಲಿಸುತ್ತಿ ... ಆಗಂತುಕನನ್ನು ನೋಡುತ್ತಿದ್ದ ... ಪ್ರಶ್ನೆಯು ... ಇಲ್ಲಿ ... ಒಳ್ಳೆ ಪೋಷಾಕನ್ನು ... ಸಿದ್ಧನ ... ಬಾರಿ ... ತನಕ ... ನಡೆದನು ಪುನಃ ... ಅಲ್ಲಿ ... ನೋಡಿದನು ... ಸ್ಸನ್ನು ದೃಢೀಕರಿಸಿ ... ಗೃಹಾಭಿಮುಖವಾಗಿ ಬಂದನು ... ತನ್ನ ಪ್ರಶ್ನೆಗೆ ಕಿವಿಗೊಡ ... ನೋಡುತ್ತಿದ್ದ ... ರಾಮರಾಯರ ... ಬಾಗಿಲಿನ ತನಕ ಬಂದ ... ಇಣಿಕಿ ನೋಡಿದರ "ಆಗಲೇ ಆಗಂತುಕನು ಒಳಗೆ ... ನಮಸ್ಕರಿಸಿ ಸುಮ್ಮನೆ ... ಒಳಗೆ ಬಂದು ... ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಆಗಂತುಕನಿಗೆ ಹೇಳಿ, ರಾಮರಾಯರು ತಾನೂ ಒಂದು ಕುರ್ಚಿಯಲ್ಲಿ ಕುಳಿತುಕೊಂಡರು ... "... ಬಂದಿರಿ ಸ್ವಾಮಿ" ಎಂದು ಅಭ್ಯಾಗತನನ್ನು ಉದ್ದೇಶಿಸಿ ವಿಚಾರಿಸಿದರ ... ಆತನು ಬಹಳ ಹೊತ್ತಿನ ತನಕ ಮೌನವಾಗಿ ಕುಳಿತುಬಿಟ್ಟನು

ನನ್ನನ್ನು ಇಲ್ಲಿ ಶಿವಾಜಿ ಕ ... ಕಳುಹಿಸಿದವರು ... ಕಡೆಗೆ ... ಮೌನವನ್ನು ಮುರಿದು ಆಗಂತುಕನು ಮೆಲ್ಲನೆ ನುಡಿದನು

ಲಕ್ಷ್ಮಮ್ಮನ ಪ್ರತಿಗೊಮ್ಮೆ ... ಕಸಿತು "ವಿಶೇಷವೇನು?" ಅವರು ಉದ್ವಿಗ್ನತೆಯಿಂದ ಕೇಳಿದರು "ವಾಸುದೇವನಿಗೆ ಏನಾದರೂ ಆಗಲಿಲವಷ್ಟೆ?

ರಾಮರಾಯರ ಆಗ ನಡುವೆ ಬಾಯಿ ಹಾಕಿ, "ಏನಿದು? ಸುಮ್ಮಗೆ ಕಳವಳಗೊಳ್ಳಬೇಡ ಅವರ ಮಾತುಗಳನ್ನು ಪೂರ್ಣ ಕೇಳಿಕೊಳ್ಳುವ ಮೊದಲೇ ಅಲ್ಲ ಸಲ್ಲದ ಊಹನೆಗಳೇಕೆ? ನೀವು ಹಾಳು ಸುದ್ದಿಯನ್ನು ತಂದಿರಲಿಕ್ಕಿಲ್ಲವಷ್ಟೇ ಸ್ವಾಮಿ." ಎಂದರು. "ನನಗೆ ಬಹಳ ದುಃಖ"—ಆಗಂತುಕನು ಮೊದಲು ಮಾಡಿದನು.

"ಆತನು ಗಾಯಗೊಂಡಿರುವನೆ" ತಾಯಿಯು ದಿಗಿಲುಗೊಂಡು ಪ್ರಶ್ನಿಸಿದಳು

ಆಗಂತುಕನು ಸಮ್ಮತಿ ಸೂಚಕವಾಗಿ ತಲೆದೂಗಿ, "ಗಾಯಗೊಂಡಿರುವರು ಮಾತ್ರವಲ್ಲ"

"ಮಾತ್ರವಲ್ಲ, ಮತ್ತೇನಾಗಿರುವುದು ಹೇಳು?" ತಾಯಿಯು ಎರಡೂ ಕೈಗಳನ್ನು ಮುಗಿದು ನಡುಗುತ್ತ ವಿಚಾರಿಸಿದಳು ತನ್ನ ಮಗನಿಗೆ ಏನೋ ಭಯಂಕರ ವಿಪತ್ತು ಬಂದೊದಗಿರುವುದೆಂದು ಆಗಂತುಕನ ಮುಖಕಳೆಯಿಂದ ಗ್ರಹಿಸಿದಳಾಕೆ ಇಷ್ಟಾದರೂ ತನ್ನ ಗಂಡನು ಸುಮ್ಮಗೆ ನಿಂತು ಕೇಳುತ್ತಿರುವುದನ್ನು ನೋಡಿ ಆತನ ಹೆಗಲ ಮೇಲೆ ಕೈಯಿಟ್ಟು, ಮಾತನಾಡಲು ಬಾಯಿ ತೆರೆದಳು. ಆದರೆ ಅವಳ ಬಾಯಿಂದ ಮಾತುಗಳ ಹೊರಡದಾದುವು

"ಅವರು ... ಯಂತ್ರದಿಂದ ಕೆಳಗೆ ಬಿದ್ದು ಮಡಿದರು" ಆಗಂತುಕನು ಮೆಲ್ಲನೆ—ಬಹು ಮೆಲ್ಲನೆ ಹೇಳಿದನು

"... ಯಂತ್ರದಿಂದ ಕೆಳಗೆ ಬಿದ್ದು ಮಡಿದರು" ರಾಮರಾಯರ ... ಬಡಿದವರಂತೆ ಪುನ ಉಚ್ಚರಿಸಿದರ ... ಹೋದ

ರಾಮರಾಯರ ... ಬಾಗಿಲಿನಿಂದ ಹೊರಗೆ ದಿಟ್ಟಿಸಿ ನೋಡಿದರು. ಹೆಗಲ ಮೇಲಿದ್ದ ಹೆಂಡತಿಯ ಕೈಯನ್ನು ತನ್ನೆರಡೂ ಕೈಗಳಲ್ಲಿ ಹಿಡಿದು, ಬಲವಾಗಿ ಅದುಕಿಸ ತೊಡಗಿದರ,

... ತನ ... ಒಬ್ಬನೇ ಒಬ್ಬ ಪುತ್ರನ ... ಆಗಂತುಕನನ್ನು ಉದ್ದೇಶಿಸಿ ಅವರೆಂದರ "... ದುಃಖವನ್ನು ನಾವು ಹೇಗೆ ಸಹಿಸಲಿ ಕಷ್ಟ ಬಹಳ ಕಷ್ಟ

ಆಗಂತುಕನು ಒಮ್ಮೆ ಕೆಮ್ಮಿ ಹೊರಟು ಹೋಗಲು ಎದ್ದು ... ತನು ... ದುಃಖದಲ್ಲಿ ... ಸಹ ಭಾಗಿಗಳು ... ಸಹಾನುಭೂತಿಯನ್ನು ತಿಳಿಸಲು ... ನನಗೆ ... ಇಲ್ಲಿಗೆ ಕಳುಹಿದ್ದಾಗಿದೆ ... ನೌಕರನೆಂದು ... ಆಜ್ಞೆಗಳನ್ನು ಪಾಲಿಸುತ್ತಿರುವೆನು ಅಷ್ಟೆ

... ಪ್ರತ್ಯುತ್ತರವು ದೊರೆಯಲಿಲ್ಲ. ಲಕ್ಷ್ಮಮ್ಮನ ಮುಖವು ... ತಾಗಿತ್ತು ... ಶ್ವಾಸೋಚ್ಛ್ವಾಸದ ಕ್ರಿಯೆಯು ... ರಾಮರಾಯರ ... ಕಬ್ಬಿನ ... ಶಿವಾಜಿ ... ಈ ಪ್ರಸಂಗದಲಿ ... ಜವಾಬ್ದಾರಿಯ ... ದೇವಯ್ಯನವರ ... ಯಿಂದ ಕೆಳಗೆ ಬೀಳುವಾಗ್ಯ ಅದೊಂದು ... ಗಡಿಗೆ ... ತಿಳಿದು ... ಅದರೆ ಆತನು ಅನೇಕ ವರ್ಷಗಳಿಂದ ... ಯೇ ಇದ್ದುದರಿಂದ ... ಮಗೆ ... ವಾಗಿ ... ಹಣವನ್ನು ಕೊಡಲು ... ಎಂದು ಹೇಳಿ ಆಗಂತುಕನ ತನ್ನ ಕರ್ತವ್ಯವನ್ನು ಪೂರೈಸಿದನು

... ಗಳನ್ನು ... ಗೃಹಸ್ಥ ದೃಷ್ಟಿಯಿಂದ ... ದಿಟ್ಟಿಸಿ ನೋಡಿದರು ... ಗಳಿಂದ ಕನ್ನಡಕ್ಕೆ ... ಎಷ್ಟನ್ನು? ... ಶಬ್ದವು ...

ಇನ್ನೂರ ರೂಪಾಯಿ ಗಳನ್ನು ಎಂದೇ ಉತ್ತರ ಹೇಳಿದ ...

ಲಕ್ಷ್ಮಮ್ಮಳು ಚೀರಿದುದನ್ನು ... ನಿಸದೆ ರಾಮರಾಯರು ಕುರುಡನಂತೆ ಕೈಗಳನ್ನು ಮುಂದೆ ಚಾಚಿ ನೆಲದ ಮೇಲೆ ದೊಪ್ಪನೆ ಉರುಳಿದರು

೩

ಊರಿನಿಂದ ಒಂದು ಮೈಲು ದೂರದಲ್ಲಿರುವ ಸ್ಮಶಾನದಲ್ಲಿ ಊರವರು ಮೃತರ ಶರೀರಗಳನ್ನು ದಹನಗೊಳಿಸುತ್ತಿದ್ದರು ಅಲ್ಲಿಯೇ ತಮ್ಮ ಮಗನ ಶವವನ್ನು ಸುಟ್ಟು ದುಃಖಭಾಜನರಾದ ದಂಪತಿಗಳು ಮೌನವಾಗಿ ಮನೆಗೆ ಹಿಂತೆರಳಿದರು ಆದರೆ ಮನೆಗೆ ಬಂದರೂ ಯಾರನ್ನೋ ಏನನ್ನೋ ಕಾಯುವವರಂತೆ ಅವರಿಬ್ಬರು ಪ್ರತಿನಿತ್ಯ ಕಣ್ಣೀರು ಸುರಿಸುತ್ತ ಕುಳಿತುಕೊಳ್ಳ ತೊಡಗಿದರು.

ದಿನಗಳ ಮೇಲೆ ದಿನಗಳು ಉರುಳಿದವು. ವೃದ್ಧ ದಂಪತಿಗಳ ಹೃದಯಾಕಾಶದಲ್ಲಿ ದಿನೇ ದಿನೇ ಹೆಚ್ಚೆಚ್ಚು ಕಾರ್ಮೋಡಗಳು ಒಂದು ಕವಿಯತೊಡಗಿದುವು. ಅವುಗಳ ಎಡೆಯಿಂದ ಆಶೆಯ ಕಿರಣವೇ ಹೊಳೆಯುವಂತೆ ತೋರಲಿಲ್ಲ. ಒಮ್ಮೊಮ್ಮೆ ಇಡೀ ದಿನವನ್ನೇ ಅವರಿಬ್ಬರು ಮೌನರಾಗಿ ಕುಳಿತು ಚಿಂತಿಸುತ್ತ ಕಳೆದುದುಂಟು

ಹೀಗೆ ಒಂದು ವಾರ ಕಳೆಯಿತು ಎಂಟನೇ ದಿನ ಮಧ್ಯ ರಾತ್ರೆ ರಾಮರಾಯರು ಥಕ್ಕನೆ ನಿದ್ರೆಯಿಂದ ಎಚ್ಚೆತ್ತು ತನ್ನ ಇಬ್ಬದಿಗಳಲ್ಲೂ ನವರಿ ನೋಡಿದಾಗ, ತಾನೊಬ್ಬನೇ ಇರುವುದು ಅವರಿಗೆ ಖಚಿತವಾಯಿತು. ಕೋಣೆಯೆಲ್ಲವೂ ಕತ್ತಲಲ್ಲಿ ಮುಳುಗಿತ್ತು. ಕಿಟಕಿಯ ಬಳಿಯಿಂದ ಯಾರೋ ನಿಟ್ಟುಸಿರಿಡುವ ಶಬ್ದವು ಮಾತ್ರ ಕೇಳಿಸುತಿತ್ತು ಹಾಸಿಗೆಯಿಂದ ಎದ್ದು ಕುಳಿತು, ಅವರು ಆಲಿಸಿ ಕೇಳಿದರು

ಇಲ್ಲಿ ಬರಬಾರದೆ?" ಅವರು ಮೃದುವಾಗಿ ಕರೆದರು, "ಅಲ್ಲೇಕೆ ಒಬ್ಬಳೇ ಹೋಗಿ ಕುಳಿತಿರುವೆ? ನಿನಗೆ ಚಳಿಯಾಗುವುದಿಲ್ಲವೆ?"

"ನನ್ನ ಮಗನಿಗೆ ಇದಕ್ಕಿಂತಲೂ ಹೆಚ್ಚಿನ ಚಳಿಯಾಗಬಹುದು" ಎಂದು ಹೇಳಿ ಲಕ್ಷ್ಮಮ್ಮ ಪುನ ರೋದಿಸ ತೊಡಗಿದರು

ಆಕೆಯ ಕೂಗು ಸ್ವಲ್ಪ ಸಮಾಧಾನವಾ ... ನಿದ್ದೆಯ ... ರಿಗೆ ಮಾತನಾಡುತ್ತ ಅಲ್ಲಿಯೇ ಕಣ್ಣು ಹತ್ತಿತು ಸ್ವಲ್ಪ ಹೊತ್ತಿನಲೇ ಅವರು ... ಗೆ ಪಾರಂಭಿಸಲು ... ಮಡದಿಯು ... ತೀಕ್ಷ್ಣ ... ದಾಗಿ ಅವರು ಹೊಡೆದೆಬ್ಬಿಸಿದವರಂತೆ ತಟ್ಟನೆ ಹಾರಿ ... ಕೊಂಡರು

"... ಗಟ್ಟಿಯಾಗಿ ... ಲಕ್ಷ್ಮಮ್ಮ ಕೂಗಿದರು ... ಮಾಷ್ಟಿಯ ಕೈ!"

ರಾಮರಾಯರ ದಿಗಿಲುಗೊಂಡು ... ಒಳಗೆ ಓಡಿಬಂದರು ... ಎಲ್ಲಿದೆ ಅದು ... ಏನಾಯಿತು?

ಲಕ್ಷ್ಮಮ್ಮ ... ಬೇಕದ ... ಅದನ್ನು ಬಿಸಾಡಲಿಲ್ಲವಷ್ಟೆ ಎಂದರ

ಅಲ್ಲಿಯೇ ... ವೆ ... ಅದ" ಆಶ್ಚರ್ಯದಿಂದ ಅವರೆಂದರು ... ಏಕೆ?

... ಕಣ್ಣಿನಿಂದ ನೀರು ಸುರಿಸುತ್ತಿರಲು ... "ನನಗೆ ಥಕ್ಕನೆ ಹೊಳೆಯಿತದು. ಈ ಮೊದಲೇ ... ನಿಮಗೆ ಬರಲಿಲ್ಲವೆ ... ದರೂ ಆಲೋಚಿಸಲಿಲ್ಲವೇಕೆ?" ಎಂದರು

"ಏನನ್ನು ಆಲೋಚಿಸುವುದ" ಅವರು ಪ್ರಶ್ನಿಸಿದರು

... ಲಕ್ಷ್ಮಮ್ಮ ಉದ್ವಿಗ್ನತೆಯಿಂದ ನುಡಿದರ ... ನಾವು ... ದೇ ... ವೆವು ಮಾತ್ರ ... ಇವು ... ಲಕ್ಷ್ಮಿ ... ವಿಚಾರಿಸಿದರ

... ಉತ್ಸುಕದಿ ... ಮಾಗಿ ... ನಾವು ... ಆ ... ಒನ್ನು ಹುಡುಕಿ ... ಹುಡುಗನ ಪುನಃ ಸಜೀವ ... ಬರುವಂತೆ ಕೇಳಿಕೊಳ್ಳಿರಿ

ರಾಮರಾಯರು ಕೈಗಳನ್ನು ಮೇಲೆತ್ತಿ ಹಿಂದೆ ಹಾರಿ ನಿಂತು, "ರಾಮಾ ರಾಮಾ, ನಿನಗೇನು ಹುಚ್ಚು ಹಿಡಿದಿರುವುದೆ?" "ಎಂದ ರಾಶ್ಚರ್ಯದಿಂದ "ಹುಡುಕಿ ತೆಗೆಯಿರದನ್ನು," ಹೆಂಡತಿ ಒತ್ತಾಯಪಡಿಸಿದಳು, "ಬೇಗನೆ ಹುಡುಕಿರಿ, ಮತ್ತೆ ವರವನ್ನು ಬೇಡಿರಿ—ಹಾ ವ ಗು, ನನ್ನ ಮುದ್ದು ಮಗು!

ಈ ವಾರದ ಕಥೆ

ಮಾಸ್ತಿಯ ಕೈ

ಬರೆದವರ: ಬಿ. ಆರ್. ಕಾಮತ್

([illegible])

ರಾತ್ರಿ ಬಹಳ ಹೊತ್ತಾದರೂ ವಾಸುದೇವಯ್ಯನಿಗೆ ಕಣ್ಣು ರೆಪ್ಪೆಗೆ ರೆಪ್ಪೆ ಹಚ್ಚಲಿಲ್ಲ. ಅದೇಕೋ ಅಂದು ಅನೇಕ ವಿಚಿತ್ರಾಕೃತಿಗಳು ಆತನ ಕಣ್ಣು ಮುಂದೆ, ಆತನನ್ನು ಕೆಣಕುವಂತೆ ಹಾವ ಭಾವಭಂಗಿಗಳಿಂದ ನೃತ್ಯ ಮಾಡತೊಡಗಿದುವು. ತನ್ನ ತಂದೆ ತಾಯಿಗಳಿಗೂ ಇದೇ ರೀತಿಯ ಆಕೃತಿಗಳು ಪ್ರತ್ಯಕ್ಷವಾಗಿರುವುವೋ ಎಂದಾತನು ಶಂಕಿಸಿದನು. ಹಾಗೆ ಎಷ್ಟು ತಾನು ಎಚ್ಚರದಿಂದ ಇದ್ದೆನೆಂದು ಆವನಿಗೆ ಹೇಳಲಾಗಲಿಲ್ಲ. ಪ್ರಾತಃ ಬೆಳಗಿನ ಜಾವಕ್ಕೆ ಸಾಧಾರಣ ಕೋಳಿ ಕೂಗುವ ಹೊತ್ತಿಗೆ ಅವನಿಗೆ ನಿದ್ದೆ ಹತ್ತಿತು.

ಮಾರುದಿನ ಪ್ರಾತಃಕಾಲ ವಾಸುದೇವಯ್ಯನು ಏಳುವಾಗ ಎಂದಿಗಿಂತ ಸ್ವಲ್ಪ ಹೊತ್ತಾಗಿತ್ತು. ರಾತ್ರಿ ಇಡೀ ನಿದ್ದೆಯಿಲ್ಲದುದರಿಂದ ಕಣ್ಣುಗಳು ಕೂರುತ್ತಿದ್ದುವು. ಆದರೂ ಮುಖವನ್ನು ತೊಳೆದುಕೊಂಡು, ಆತನು ಗಂಜಿಯ ಊಟಕ್ಕೆ ಬಂದು ಕುಳಿತನು. ಊಟಮಾಡುತ್ತಿರುವಾಗ ಹಿಂದಿನ ರಾತ್ರಿ ತಾನು ಕಂಡ ಆಕೃತಿಗಳನ್ನು ನೆನೆದ ಆತನಿಗೊಮ್ಮೆ ಅಚ್ಚರಿಯಾಯಿತು, ಒಮ್ಮೆ ಅಸ್ವಾಭಾವಿಕವಾಗಿ ತಾನು ಹೆದರಿದ ದೆಸೆಯಾಗಿ ನಾಚಿಕೆಯಾಯಿತು. ಅದನ್ನು ನೆನೆದು ಮನಸ್ಸಿನಲ್ಲಿಯೇ ನಕ್ಕನಾತನು. ತಂದೆ ಮಗ, ಇಬ್ಬರೂ ಊಟಕ್ಕೆ ಕುಳಿತಿದ್ದರು. ಲಕ್ಷ್ಮಮ್ಮ ಬಡಿಸುತ್ತಿದ್ದರು.

“ಈ ವರ್ತಣ್ಣನೆಂದರೆ ಎಲ್ಲರೂ ಹಾಗೆಯೇ ನೋಡಿ.” ಮಾಸ್ತಿಯ ಕೈಯ ಸಂಬಂಧ ಲಕ್ಷ್ಮಮ್ಮ ನುಡಿದರು. ವೀರಯ್ಯನ ಹುಸಿ ಹುಸಿ ಸುಳ್ಳನ್ನು ನಾವು ನಂಬಿದೆವಲ್ಲವೇ? ಆಹಾ! ~~ಆಗಿನ ಕಾಲದಲ್ಲಿ ಬಯಸಿದ್ದು ಆಗುವುದೆಂದ~~ರೇನು? ಈ ಕಲಿಕಾಲದಲ್ಲಿ.”

“ಏಕಾಗಕೂಡದು? ಈ ದಿನ ಎಲ್ಲಿಯಾದರೂ ಗಗನದಿಂದ ತಲೆಯ ಮೇಲೆಯೇ ಇನ್ನೂರು ರೂಪಾಯಿಗಳ ಗಂಟು ಬೀಳಬಹುದು” ಎಂದು ತರುಣಸ್ವಭಾವದ ವಾಸುದೇವಯ್ಯನು ವಾದಿಸಿದ.

“ಯಾಚಿಸಿದ ವಿಷಯಗಳೆಲ್ಲ ಸ್ವಾಭಾವಿಕವಾಗಿ ಸಂಭವಿಸುವುವೆಂದೆ ವೀರಯ್ಯನು ಹೇಳಿರುವನು” ರಾಮರಾಯರು ಪ್ರತಿವಾದಿಸಿದರು, “ಎಷ್ಟು ಸ್ವಾಭಾವಿಕವಾಗಿದ್ದರೆ ನಾವು ಬೇಡದಿದ್ದರೂ ಹಾಗೆಯೇ ಆಗುತ್ತಿತ್ತೋ ಏನೋ ಎಂಬ ಸಂಶಯವು ನಮ್ಮಲ್ಲಿ ಉಂಟಾಗುವುದು.”

“ಹೇಗೂ ಇರಲಿ, ನಾವು ಬರುವ ತನಕ ಹಣದ ಚೀಲವನ್ನು ಮಾತ್ರ ಬಿಚ್ಚದಿರಿ” ಎಂದು ಹೇಳಿ ವಾಸುದೇವಯ್ಯನು ಗಂಜಿಯೂಟವನ್ನು ಮುಗಿಸಿ ಎದ್ದು, ತನ್ನ ಕೆಲಸಕ್ಕೆ ಹೋಗಲು ಪೋಷಾಕನ್ನು ಧರಿಸಿ ಸಿದ್ಧನಾದನು.

ಮಗನು ಕೆಲಸಕ್ಕೆ ಹೊರಟು ಹೋದ ನಂತರ, ಆತನ ವೃದ್ಧ ಮಾತಾಪಿತೃಗಳು ಆ ಮಾಸ್ತಿಯ ಕೈಯ ಕುರಿತೇ ಪ್ರಸ್ತಾಪಿಸುತ್ತ ಸಮಯವನ್ನು ಕಳೆಯತೊಡಗಿದರು.

“ಅಂತೂ, ಆ ಎಲುಬು ನನ್ನ ಕೈಯಲ್ಲಿ ಚಲಿಸಿತೆಂಬುದು ನಿಜ” ರಾಮರಾಯರು ತನ್ನ ಮಡದಿಗೆ ಹೇಳಿದರು.

“ಅದೇನೋ ನಿಮ್ಮ ಭ್ರಮೆಯಾಗಿರಬೇಕು” ಲಕ್ಷ್ಮಮ್ಮ ಗಂಡನಿಗೆ ಸಮಾಧಾನ ಹೇಳಿದರು. ‘ಇಲ್ಲ ಇಲ್ಲ,’ ರಾಮರಾಯರು ವಾದಿಸಿದರು ‘ಅದು ನನ್ನ ಕೈಯಲ್ಲಿ ಚಲಿಸಿತೆಂಬುದಕ್ಕೆ ನಾನು ಧರ್ಮಸ್ಥಳದಲ್ಲಿಯೂ ಪ್ರಮಾಣ ಮಾಡಲು ಸಿದ್ಧನಿರುವೆನು. ಹಾಗೆಲ್ಲ ಭ್ರಮಿಸಲು ನಾನೇನು ಬಂಗಿ ಸೇದುವವನೆ? ನಾನು ಅದನ್ನು ಕೈಯಲ್ಲಿ ಎತ್ತಿ ಹಿಡಿದು—ಏನ, ಏನ ನೋಡುತ್ತಿರುವೆ?”

ಲಕ್ಷ್ಮಮ್ಮ ಉತ್ತರವೀಯಲಿಲ್ಲ. ಮನೆಯ ಒಳಗೆ ಪ್ರವೇಶಿಸಲೋ ಬೇಡವೋ ಎಂಬಂತೆ ಕಳ್ಳನೋಪಾದಿ ಅತ್ತಿತ್ತ ಚಲಿಸುತ್ತಿರುವ ಓರ್ವ ಆಗಂತುಕನನ್ನು ನೋಡುತ್ತಿರುವ ಅವರಿಗೆ ರಾಮರಾಯರ ಪ್ರಶ್ನೆಯು ಕೇಳಿಸಲೇ ಇಲ್ಲ. ಆಗಂತುಕನು ಒಳ್ಳೇ ಪೋಷಾಕನ್ನು ಧರಿಸಿದ್ದನು. ಮೂರು ಬಾರಿ ಆತನು ಗೇಟಿನ ತನಕ ಬಂದು ನಡೆದನು, ಪುನಃ ಅತ್ತಿತ್ತ ಆಳಿದಾಡಿ ಇಣುಕಿ ನೋಡಿದನು. ನಾಲ್ಕನೇ ಬಾರಿ ಮನಸ್ಸನ್ನು ದೃಢೀಕರಿಸಿ, ಗೇಟನ್ನು ತೆರೆದು ಗೃಹಾಭಿಮುಖವಾಗಿ ಬಂದನು. ಹೆಂಡತಿಯು ತನ್ನ ಪ್ರಶ್ನೆಗೆ ಕಿವಿಗೊಡದೆ ಹೊರಗೆ ನೋಡುತ್ತಿದ್ದುದನ್ನು ಕಂಡು ರಾಮರಾಯರು ಮನೆಯ ಹೊರ ಬಾಗಿಲಿನ ತನಕ ಬಂದು ಹೊರಗೆ ಇಣಿಕಿ ನೋಡಿದರು. ಆಗಲೇ ಆಗಂತುಕನು ಒಂದು ಅವರಿಗೆ ನಮಸ್ಕರಿಸಿ ಸುಮ್ಮನೆ ನಿಂತುಕೊಂಡನು. ಒಳಗೆ ಬಂದು ಒಂದು ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಆಗಂತುಕನಿಗೆ ಹೇಳಿ, ರಾಮರಾಯರು ತಾನೂ ಒಂದು ಕುರ್ಚಿಯಲ್ಲಿ ಕುಳಿತುಕೊಂಡರು. ಬಳಿಕ “ಏನ ಬಂದಿರಿ ಸ್ವಾಮಿ,” ಎಂದು ಅಭ್ಯಾಗತನನ್ನು ಉದ್ದೇಶಿಸಿ ವಿಚಾರಿಸಿದರು. ಆದರೆ ಆತನು ಬಹಳ ಹೊತ್ತಿನ ತನಕ ಮೌನವಾಗಿ ಕುಳಿತು ಬಿಟ್ಟನು.

‘ನನ್ನನ್ನು ಇಲ್ಲಿ ಶಿವಾಜಿ ಕಂಪೆನಿಯವರು ಕಳುಹಿಸಿರುವರು.” ಕಡೆಗೆ ಗಂಟಲನ್ನು ಸಡಿಲಿಸಿ ಆಗಂತುಕನು ಮೆಲ್ಲನೆ ನುಡಿದನು.

ಲಕ್ಷ್ಮಮ್ಮನವರಿಗೆ ಒಮ್ಮೆ ಎದೆ ಧಸಕ್ಕೆನಿಸಿತು. “ವಿಶೇಷವೇನು?” ಅವರು ಉದ್ವಿಗ್ನತೆಯಿಂದ ಕೇಳಿದರು “ವಾಸುದೇವನಿಗೆ ಏನಾದರೂ ಆಗಲಿಲ್ಲವಷ್ಟೆ?

ರಾಮರಾಯರು ಆಗ ನಡುವೆ ಬಾಯಿ ಹಾಕಿ, “ಏನಿದು? ಸುಮ್ಮಗೆ ಕ್ಷೋಭೆಗೊಳ್ಳಬೇಡ. ಅವರ ಮಾತುಗಳನ್ನು ಪೂರ್ಣ ಕೇಳಿಕೊಳ್ಳುವ ಮೊದಲೇ ಅಲ್ಲ ಸಲ್ಲದ ಊಹನೆಗಳೇಕೆ? ನೀವು ಹಾಳು ಸುದ್ದಿಯನ್ನು ತಂದಿರಲಿಕ್ಕಿಲ್ಲವಷ್ಟೇ ಸ್ವಾಮಿ.” ಎಂದರು. “ನನಗೆ ಬಹಳ ದುಃಖ”—ಆಗಂತುಕನು ಮೊದಲು ಮಾಡಿದನು.

“ಆತನು ಗಾಯಗೊಂಡಿರುವನೆ” ತಾಯಿಯು ದಿಗಿಲುಗೊಂಡು ಪ್ರಶ್ನಿಸಿದಳು.

ಆಗಂತುಕನು ಸಮ್ಮತಿ ಸೂಚಕವಾಗಿ ತಲೆದೂಗಿ, “ಗಾಯಗೊಂಡಿರುವರು ಮಾತ್ರವಲ್ಲ.”

“ಮಾತ್ರವಲ್ಲ, ಮತ್ತೇನಾಗಿರುವುದು ಹೇಳು?” ತಾಯಿಯು ಎರಡೂ ಕೈಗಳನ್ನು ಮುಗಿದು ನಡುಗುತ್ತ ವಿಚಾರಿಸಿದಳು. ತನ್ನ ಮಗನಿಗೆ ಏನೋ ಭಯಂಕರ ವಿಪತ್ತು ಬಂದೊದಗಿರುವುದೆಂದು ಆಗಂತುಕನ ಮುಖಕಳೆಯಿಂದ ಗ್ರಹಿಸಿದಳಾಕೆ. ಇಷ್ಟಾದರೂ ತನ್ನ ಗಂಡನು ಸುಮ್ಮಗೆ ನಿಂತು ಕೇಳುತ್ತಿರುವುದನ್ನು ನೋಡಿ ಆತನ ಹೆಗಲ ಮೇಲೆ ಕೈಯಿಟ್ಟು, ಮಾತನಾಡಲು ಬಾಯಿ ತೆರೆದಳು. ಆದರೆ ಅವಳ ಬಾಯಿಂದ ಮಾತುಗಳು ಹೊರಡದಾದುವು.

“ಅವರು ಮೇಲುಪ್ಪರಿಗೆಯಿಂದ ಕೆಳಗೆ ಬಿದ್ದು ಮಡಿದರು” ಆಗಂತುಕನು ಮೆಲ್ಲನೆ—ಬಹು ಮೆಲ್ಲನೆ ಹೇಳಿದನು.

“ಮೇಲುಪ್ಪರಿಗೆಯಿಂದ ಕೆಳಗೆ ಬಿದ್ದು ಮಡಿದರು,” ರಾಮರಾಯರು ಧಂಗುಬಡೆದವರಂತೆ ಪುನಃ ಎಚ್ಚರಿಸಿದರು.

“ಹೌದು.”

ರಾಮರಾಯರು ಹುಚ್ಚನಂತೆ ಮನೆಯ ಬಾಗಿಲಿನಿಂದ ಹೊರಗೆ ದಿಟ್ಟಿಸಿ ನೋಡಿದರು. ಹೆಗಲ ಮೇಲಿದ್ದ ಹೆಂಡತಿಯ ಕೈಯನ್ನು ತನ್ನೆರಡೂ ಕೈಗಳಲ್ಲಿ ಹಿಡಿದು ಬಲವಾಗಿ ಅದುಕಿಸತೊಡಗಿದರು.

“ಆತನು ನಮ್ಮ ಒಬ್ಬನೇ ಒಬ್ಬ ಪುತ್ರನು” ಬಳಿಕ ಆಗಂತುಕನನ್ನು ಉದ್ದೇಶಿಸಿ ಅವರೆಂದರು, “ಈ ದುಃಖವನ್ನು ನಾವು ಹೇಗೆ ಸಹಿಸಲಿ ಕಷ್ಟ, ಬಹಳ ಕಷ್ಟ.”

“ಆಗಂತುಕನು ಒಮ್ಮೆ ಕೆಮ್ಮಿ ಹೊರಟು ಹೋಗಲು ಎದ್ದು ನಿಂತನು. “ನಿಮ್ಮ ದುಃಖದಲಿ ತಾವೂ ಸಹ ಭಾಗಿಗಳೆಂದು ಸಹಾನುಭೂತಿಯನ್ನು ತಿಳಿಸಲು ಕಂಪೆನಿಯವರು ನನ್ನನು ಇಲ್ಲಿಗೆ ಕಳುಹಿದಾಗಿದೆ. ಅವರ ನೌಕರನಾದ ನಾನು ಅವರ ಆಜ್ಞೆಗಳನ್ನು ಪಾಲಿಸುತ್ತಿರುವೆನು, ಅಷ್ಟೆ.”

ಪರಂತು ಆತನ ಮಾತುಗಳಿಗೆ ಪ್ರತ್ಯುತ್ತರವು ದೊರಕಲಿಲ್ಲ. ಲಕ್ಷ್ಮಮ್ಮನ ಮುಖವು ಬಿಳಿಚಿಕೊಂಡಿತ್ತು, ಕಣ್ಣೆವೆಯು ಬೀಳುತ್ತಿರಲಿಲ್ಲ, ಶ್ವಾಸೋಚ್ಛ್ವಾಸದ ಕ್ರಿಯೆಯು ಕಟುಸವಾದಂತಿತ್ತು. ರಾಮರಾಯರ ಮುಖವಂತು ರಸವನ್ನು ಹಿಂಡಿದ ಕಬ್ಬಿನಂತಾಗಿತ್ತು.

‘ಶಿವಾಜಿ ಕಂಪೆನಿಯವರಿಗೆ ಈ ವಿಷಯದಲ್ಲಿ ಯಾವ ಜವಾಬ್ದಾರಿಯೂ ಇಲ್ಲ. ವಾಸುದೇವಯ್ಯನವರು ಮೇಲುಪ್ಪರಿಗೆಯಿಂದ ಕಾಲು ಜಾರಿ ಕೆಳಗೆ ಬೀಳುವಾಗ, ಅದೊಂದು ಕಬ್ಬಿಣದ ಗುಂಡಿಗೆ ತಲೆ ಬಡಿದು, ಮೃತಿಯಾದರು. ಆದರೆ ಆತನು ಅನೇಕ ವರ್ಷಗಳಿಂದ ಅವರಲ್ಲಿಯೇ ಇದ್ದುದರಿಂದ, ನಿಮಗೆ ಪರಿಹಾರ ದ್ರವ್ಯವಾಗಿ ಒಂದಿಷ್ಟು ಹಣವನ್ನು ಕೊಡಲು ಹೇಳಿರುವರು” ಎಂದು ಹೇಳಿ ಆಗಂತುಕನು ತನ್ನ ಕರ್ತವ್ಯವನ್ನು ಪೂರೈಸಿದನು.

ರಾಮರಾಯರು ಹಿಡಿದಿದ್ದ ಕೈಗಳನ್ನು ಬಿಟ್ಟುಬಿಟ್ಟು ಚಂಗನೆ ನೆಗೆದು ನಿಂತ, ಭಯಗ್ರಸ್ತ ದೃಷ್ಟಿಯಿಂದ ಆಗಂತುಕನನ್ನೊಮ್ಮೆ ದಿಟ್ಟಿಸಿ ನೋಡಿದರು. ಅವರ ಒಣಗಿದ ತುಟಿಗಳಿಂದ ಕ್ಷಣಾರ್ಧಕ್ಕೆ, “ಎಷ್ಟನ್ನು?” ಎಂಬ ಶಬ್ದವು ಕಳಚಿ ಬಿತ್ತು.

“ಇನ್ನೂರು ರೂಪಾಯಿಗಳನ್ನು” ಎಂದೇ ಉತ್ತರ ಹೊರಟಿತು.

ಲಕ್ಷ್ಮಮ್ಮಳು ಚೀರಿದುದನ್ನು ಗಮನಿಸದೆ, ರಾಮರಾಯರು ಕುರುಡನಂತೆ ಕೈಗಳನ್ನು ಮುಂದೆ ಚಾಚಿ ನೆಲದ ಮೇಲೆ ದೊಪ್ಪನೆ ಉರುಳಿದರು.

೩

ಊರಿನಿಂದ ಒಂದು ಮೈಲು ದೂರದಲ್ಲಿರುವ ಸ್ಮಶಾನದಲ್ಲಿ ಊರವರು ಮೃತರ ಶರೀರವನ್ನು ದಹನಗೊಳಿಸುತ್ತಿದ್ದರು. ಅಲ್ಲಿಯೇ ತಮ್ಮ ಮಗನ ಶವವನ್ನು ಸುಟ್ಟು ದುಃಖಭಾಜನರಾದ ದಂಪತಿಗಳು ಮೌನವಾಗಿ ಮನೆಗೆ ಹಿಂತಿರುಗಿದರು. ಆದರೆ ಮನೆಗೆ ಬಂದರೂ ಯಾರನ್ನೋ ಏನನ್ನೋ ಕಾಯುವವರಂತೆ ಅವರಿಬ್ಬರು ಪ್ರತಿನಿತ್ಯ ಕಣ್ಣೀರು ಸುರಿಸುತ್ತ ಕುಳಿತುಕೊಳ್ಳತೊಡಗಿದರು.

ದಿನಗಳ ಮೇಲೆ ದಿನಗಳು ಉರುಳಿದವು. ವೃದ್ಧ ದಂಪತಿಗಳ ಹೃದಯಾಕಾಶದಲ್ಲಿ ದಿನೇ ದಿನೇ ಹೆಚ್ಚೆಚ್ಚು ಕಾರ್ಮೋಡಗಳು ಬಂದು ಕವಿಯತೊಡಗಿದುವು. ಅವುಗಳ ಎಡೆಯಿಂದ ಆಶೆಯ ಕಿರಣವೇ ಹೊಳೆಯುವಂತೆ ತೋರಲಿಲ್ಲ. ಒಮ್ಮೊಮ್ಮೆ ಇಡೀ ದಿನವನ್ನೇ ಅವರಿಬ್ಬರು ಮೌನರಾಗಿ ಕುಳಿತು ಚಿಂತಿಸುತ್ತ ಕಳೆದುದುಂಟು.

ಹೀಗೆ ಒಂದು ವಾರ ಕಳೆಯಿತು. ಎಂಟನೇ ದಿನ ಮಧ್ಯ ರಾತ್ರಿ ರಾಮರಾಯರು ಥಕ್ಕನೆ ನಿದ್ರೆಯಿಂದ ಎಚ್ಚೆತ್ತು ಕಣ್ಣ ಕತ್ತಲೆಗಳಲ್ಲಿ ಸವರಿ ನೋಡಿದಾಗ, ತಾನೊಬ್ಬನೇ ಇರುವುದು ಅವರಿಗೆ ಖಚಿತವಾಯಿತು. ಕೋಣೆಯೆಲ್ಲವೂ ಕತ್ತಲಲ್ಲಿ ಮುಳುಗಿತ್ತು. ಕಿಟಕಿಯ ಬಳಿಯಿಂದ ಯಾರೋ ನಿಟ್ಟುಸಿರಿಡುವ ಶಬ್ದವು ಮಾತ್ರ ಕೇಳಿಸುತ್ತಿತ್ತು. ಹಾಸಿಗೆಯಿಂದ ಎದ್ದು ಕುಳಿತು, ಅವರು ಆಲಿಸಿ ಕೇಳಿದರು.

“ಇಲ್ಲಿ ಬರಬಾರದೆ?” ಅವರು ಮೃದುವಾಗಿ ಕರೆದರು, “ಅಲ್ಲೇಕೆ ಒಬ್ಬಳೇ ಹೋಗಿ ಕುಳಿತಿರುವೆ? ನಿನಗೆ ಚಳಿಯಾಗುವುದಿಲ್ಲವೆ?” “ನನ್ನ ಮಗನಿಗೆ ಇದಕ್ಕಿಂತಲೂ ಹೆಚ್ಚಿನ ಚಳಿಯಾಗಬಹುದು” ಎಂದುಸುರಿ, ಲಕ್ಷ್ಮಮ್ಮ ಪುನಃ ರೋದಿಸತೊಡಗಿದರು.

ಆಕೆಯ ಕೂಗು ಸ್ವಲ್ಪ ಸಮಾಧಾನವಾಯಿತು. ನಿದ್ರೆಯು ಕಣ್ಣಿನಲ್ಲಿದ್ದ ರಾಮರಾಯರಿಗೆ ಮಾತನಾಡುತ್ತ, ಅಲ್ಲಿಯೇ ಕಣ್ಣು ಹತ್ತಿತು. ಸ್ವಲ್ಪ ಹೊತ್ತಿನಲ್ಲೇ ಅವರು ಗೊರಕೆಗೆ ಪ್ರಾರಂಭಿಸಲು, ಮಡದಿಯ ಆದೊಂದು ತೀಕ್ಷ್ಣ ಚೀರಾಟದಿಂದಾಗಿ ಅವರು ಹೊಡೆದೆಬ್ಬಿಸಿದವರಂತೆ ತಟ್ಟನೆ ಹಾರಿ ನಿಂತುಕೊಂಡರು.

“ಕೈ” ಗಟ್ಟಿಯಾಗಿ ಕೂಗಿ ಲಕ್ಷ್ಮಮ್ಮ ಕೂಗಿದರು “ಮಾಸ್ತಿಯ ಕೈ!”

ರಾಮರಾಯರು ದಿಗಿಲುಗೊಂಡು ಮಡದಿಯ ಬಳಿಗೆ ಓಡಿಬಂದರು. “ಎಲ್ಲಿ? ಎಲ್ಲಿದೆ ಅದು? ಏನು? ಏನಾಯಿತು?”

ಲಕ್ಷ್ಮಮ್ಮ ಗಂಡನನ್ನು ಬಿಗಿದಪ್ಪಿ “ನನಗೆ ಬೇಕದು. ನೀವದನ್ನು ಬಿಸಾಡಲಿಲ್ಲವಷ್ಟೆ” ಎಂದರು.

ಅಲ್ಲಿಯೇ ಮೇಜಿನ ಮೇಲಿದೆ ಅದು” ಆಶ್ಚರ್ಯದಿಂದ ಅವರೆಂದರು ‘ಏಕೆ?’

ಅವಳು ಒಂದೆಡೆ ಕಣ್ಣಿನಿಂದ ನೀರು ಸುರಿಯುತ್ತಿರಲು, ಮೃದುವಾಗಿ ನಕ್ಕು, “ನನಗೆ ಥಕ್ಕನೆ ಹೊಳೆಯಿತದು. ಈ ಮೊದಲೇ ನನಗದ ನೆನಪಿಗೆ ಬರಲಿಲ್ಲವೆಂದರೇನು? ನೀವಾದರೂ ಆಲೋಚಿಸಲಿಲ್ಲವೇಕೆ?” ಎಂದರು.

“ಏನನ್ನು ಆಲೋಚಿಸುವುದು” ಅವರು ಪ್ರಶ್ನಿಸಿದರು.

ಇನ್ನೆರಡು ವರಗಳು” ಲಕ್ಷ್ಮಮ್ಮ ಉದ್ವಿಗ್ನತೆಯಿಂದ ನುಡಿದರು. “ನಾವು ಒಂದೇ ವರವನ್ನು ಬೇಡಿರುವೆವು ಮಾತ್ರ.”

‘ಅದು ಸಾಲಲಿಲ್ಲವೆ ನಿನಗೆ?’ ಅವರು ತೀಕ್ಷ್ಣವಾಗಿ ವಿಚಾರಿಸಿದರು.

‘ಇಲ್ಲ,” ಉತ್ಸಾಹದಿಂದ ನುಡಿದಳಾಕೆ, “ಇನ್ನೊಂದು ವರವನ್ನು ನಾವು ಯಾಚಿಸುವ. ಬೇಗನೆ ಆ ಎಲುಬನ್ನು ಹುಡುಕಿ ತೆಗೆದ, ನಮ್ಮ ಹುಡುಗನು ಪುನಃ ಸಜೀವನಾಗಿ ಬರುವಂತೆ ಕೇಳಿಕೊಳ್ಳಿರಿ.”

ರಾಮರಾಯರು ಕೈಗಳನ್ನು ಮೇಲೆತ್ತಿ ಹಿಂದೆ ಹಾರಿ ನಿಂತು, “ರಾಮಾ ರಾಮಾ, ನಿನಗೇನು ಹುಚ್ಚು ಹಿಡಿದಿರುವುದೆ?” “ಎಂದ ರಾತ್ಸಹರ್ಷದಿಂದ “ಹುಡುಕಿ ತೆಗೆಯಿರದನ್ನು,” ಹೆಂಡತಿ ಒತ್ತಾಯಪಡಿಸಿದಳು, “ಬೇಗನೆ ಹುಡುಕಿರಿ, ಮತ್ತೆ ವರವನ್ನು ಬೇಡಿರಿ—ಹಾಗೆ, ನನ್ನ ಮುದ್ದು ಮಗು!

"…ಗಂಡನು …" ಬೇಡಿಕೆಯನ್ನು … ಹೊತ್ತಿಸಿದರು. "…ಸುಮ್ಮನೆ ಮಲಗು." ಕಂಪಿತ ಧ್ವನಿಯಿಂದ ಉತ್ತರಿಸಿದರು, "ನೀನು ಹೇಳುತ್ತಿರುವುದೇನೆಂದು ನನಗೆ ತಿಳಿದಿಲ್ಲ."

"ನಮ್ಮ ಮೊದಲನೇ ಬೇಡಿಕೆಯು ಪೂರ್ಣವಾಗಲಿಲ್ಲ," ಎಂದಳಾಕೆ, "ಎರಡನೇಯದೂ ಹಾಗಾಗಬಹುದು."

"ಒಂದು ಬೇಡಿಕೆಯು ಫಲಿಸಿದುದೇ ಸಾಕು." ಗಂಡ ತಡವರಿಸುತ್ತ ನುಡಿದನು.

"ಹೋಗಿ ಅದನ್ನು ಹುಡುಕಿ ತೆಗೆದು, ವರವನ್ನು ಕೇಳಿರಿ." ಹೆಂಡತಿ ಸ್ಫೂರ್ತಿಯಿಂದ ನುಡಿದಳು.

ರಾಮರಾಯರು ಹೆಂಡತಿಯನ್ನೊಮ್ಮೆ ದಿಟ್ಟಿಸಿ ನೋಡಿ, ಕಂಪಿತ ಸ್ವರದಿಂದ "ಆತನು ಸತ್ತು ದಿನಗಳಾದುವು. ಆತನ ಕಳೇಬರವು ಸುಟ್ಟು ಬೂದಿಯಾಗಿರುವುದು—ಈಗ—"

"ಆತನನ್ನು ಜೀವಗೊಳಿಸಿರಿ" ಲಕ್ಷ್ಮಮ್ಮ ಗಂಡನ ಕೈಯನ್ನು ಹಿಡಿದೆಳೆದು ಒತ್ತಾಯಪಡಿಸಿದರು "ನಾನು ಸಾಕಿದ ಮಗುವಿಗೆ ನಾನು ಹೆದರುವೆನೆಂದು ತಿಳಿದಿರಾ?"

ಮೇಜಿನ ಮೇಲೆ ಹುಡುಕಾಡಿ ರಾಮರಾಯರು ಆ ಮಾಸ್ತಿ ಕೈಯನ್ನು ಹಿಡಕೊಂಡು ಹೆಂಡತಿಯ ಬಳಿಗೆ ಬಂದು ನಿಂತರು. ಅವರ ಮುಖದಲ್ಲಿ ಮುತ್ತಿನಂತೆ ಬೆವರ ಹನಿಗಳು ಎದ್ದು ನಿಂತಿದ್ದುವು, ಅದನ್ನು ನೋಡಿದೊಡನೆ ಅವರ ಹೆಂಡತಿಯ ವದನವು ಒಮ್ಮೆ ನಿವರ್ಣವಾಯಿತು. ಅವಳ ಆ ಬಿಳುಪು ತಿರುಗಿದ ಮೊಗವನ್ನು ನೋಡಿ, ಅವರಿಗೆ ಅಂಜಿಕೆಯಾಯಿತು.

"ಬೇಡಿರಿ!" ಗಟ್ಟಿಯಾಗಿ ಉಸುರಿದಳಾಕೆ.

"ಹಾಗೆ ಮಾಡುವುದು ಕೆಟ್ಟತನ ಹುಚ್ಚುತನ." ಅವರು ತಡವರಿಸುತ್ತ ಅಂದರು

"ಬೇಡಿರಿ." ಪುನಃ ಹೆಂಡತಿ ಕೂಗಿದಳು. ಗಂಡನು ಕೈಯನ್ನು ಎತ್ತಿ ಹಿಡಿದು "ನನ್ನ ಮಗನು ಪುನಃ ಸಜೀವನಾಗಿ ಬರುವಂತೆ ನಾನು ಇಚ್ಛಿಸುತ್ತೇನೆ," ಎಂದನು

ಆತನ ಕೈಬೆರಳುಗಳು ನಡುಗಿ ಮಾಸ್ತಿಯ ಕೈಯು ನೆಲಕ್ಕೆ ಉದುರಿತು. ಬಳಿಕ ನಡುಗುತ್ತ ಆತನು ಒಂದು ಕುರ್ಚಿಯ ಮೇಲೆ ಬಿದ್ದು ಬಿಟ್ಟನು. ಆತನ ಮಡದಿ—ಲಕ್ಷ್ಮಮ್ಮ—ಉತ್ಸುಕತೆಯಿಂದ ಕಿಟಿಕಿಯ ಬಳಿಗೆ ಹೋಗಿ ಹೊರಗೆ ಇಣಿಕಿ ನೋಡಿದಳು

ರಾಮರಾಯರು ಅರೆಬಿರಿದ ಕಣ್ಣುಗಳ ಎಡೆಯಿಂದ ಕಿಟಿಕಿಯ ಬಳಿ ಕುಳಿತು ಹೊರಗೆ ಇಣಿಕಿ ನೋಡುತ್ತಿದ್ದ ತನ್ನ ಭಾರ್ಯೆಯನ್ನು ಈಕ್ಷಿಸುತ್ತ ಕುಳಿತರು. ದೀಪವು ಎಣ್ಣೆಯಾರಿ, ಗಾಳಿಯಲ್ಲಿ ಕುಣಿಯುವ ಮರದೆಲೆಯಂತೆ ಪಕಪಕ ಎಂದು ಕುಣಿದು ನಂದಿತು. ಕೋಣೆಯಲ್ಲೆಲ್ಲವೂ ಕತ್ತಲು ಕವಿಯಿತು ಆ ದಂಪತಿಗಳ ಹೃದಯದಲ್ಲೂ ಇಚ್ಛೆಯು ಈಡೇರದುದನ್ನು ತಿಳಿದು, ಅಂಧಕಾರವು ಮುಸುಕಿತು. ಗಂಡನು ಸ್ವಲ್ಪ ಸಮಾಧಾನದಿಂದ ಹಾಸಿಗೆಯ ಬಳಿಗೆ ಸರಿದು ಬಂದು, ಮಲಗಿದನು. ತುಸು ಸಮಯದ ನಂತರ ಹೆಂಡತಿಯೂ ನಿರಾಶಳಾಗಿ ಮೆಲ್ಲನೆ ಬಂದು ಗಂಡನ ಬಳಿಯಲ್ಲಿ ತಲೆದಿಂಬಿಗೆ ಆತುಕುಳಿತಳು.

ಒಬ್ಬರೂ ಸಿಟ್ಟಿಂದು ಮಾತನಾಡಲಿಲ್ಲ. ಗೋಡೆಗೆ ತೂಗ ಹಾಕಿದ ಗಡಿಯಾರದ ಟಿಕ್ ಟಿಕ್ ಶಬ್ದವು ಮಾತ್ರ ಅವರ ಎದೆಯು ಬಡಿತದೊಡನೆ ತಾಳ ಹಾಕುವಂತಿತ್ತು. ಅತ್ತೊಂದು ಬಾಗಿಲು ಕಿರಚಿತು, ಇಲ್ಲೊಂದು ಇಲಿಯು ಓಡಿತು. ಹೀಗೆ ಶಬ್ದವಾದೊಡನೆ ಅವರು ತಟ್ಟನೆ ಎದ್ದು ಕುಳಿತು, ಮಗನು ಬಂದನೆಂದು ಸುತ್ತುಮುತ್ತು ನೋಡುವರು. ಎಲ್ಲವೂ ನಿಶ್ಶಬ್ದ! ಪುನಃ ಮೊದಲಿನಂತೆ ಮೌನವಾಗಿ ಮಲಗಿದರು.

ಸ್ವಲ್ಪ ಹೊತ್ತು ಹೀಗೆ ಕಳೆಯಿತು. ಕಡೆಗೆ ಮೆಲ್ಲನೆ, ಬಹು ಮೆಲ್ಲನೆ ಯಾರೋ ಹೊರ ಬಾಗಿಲನ್ನು ತಟ್ಟಿದ ಶಬ್ದವಾಯಿತು! — ಇಬ್ಬರೂ ಜಗ್ಗನೆ ಎದ್ದು ಕುಳಿತು ಆಲಿಸತೊಡಗಿದರು. ಪುನಃ ಅದೇ ಶಬ್ದ! ಲಕ್ಷ್ಮಮ್ಮ ತಟ್ಟನೆ ಗಂಡನನ್ನು ಬಿಗಿದಪ್ಪಿ ಕುಳಿತರು.

ಇಬ್ಬರೂ ಹೆದರಿ ನಡುಗುತ್ತಿದ್ದರು. ಮೂರನೇ ಬಾರಿ ಸ್ವಲ್ಪ ಜೋರಿನಿಂದ—ಬಾಗಿಲು ತಟ್ಟಿದ ಶಬ್ದವಾಯಿತು.

"ಅದೇನು!" ಲಕ್ಷ್ಮಮ್ಮ ಕಂಪಿತ ಕಂಠದಿಂದ ವಿಚಾರಿಸಿದರು

"ಇಲಿಯಾಗಿರಬೇಕು," ರಾಮರಾಯರು ನಡುಗುತ್ತ ಮೆಲ್ಲನೆ ಉಸುರಿದರು.

"ಇಲಿ!"

ಅವರ ಹೆಂಡತಿ ಕಿವಿಗೊಟ್ಟು ಕೇಳತೊಡಗಿದರು. ಈ ಬಾರಿ ಬಾಗಿಲನ್ನು ತಟ್ಟಿದ ಶಬ್ದವು ಇಡೀ ಮನೆಯಲ್ಲಿ ಪ್ರತಿಧ್ವನಿಸಿತು

"ವಾಸುದೇವನು ಬಂದಿರುವನು" ಆಕೆ ಕೂಗಿದಳು, "ವಾಸುದೇವನು" ಹೀಗೆಂದು ಹೇಳುತ್ತೇಳುತ್ತಾ ಆಕೆಯು ಗವಾಕ್ಷದ ಬಳಿ ಧಾವಿಸಿದಳು. ಆದರೆ ಅಕೆಗಿಂತಲೂ ವೇಗವಾಗಿ ಓಡಿ ಬಂದು, ರಾಮರಾಯರು ಆಕೆಯ ಕೈಗಳನ್ನು ಬಲವಾಗಿ ಹಿಡಿದೆಳೆದು ನಿಲ್ಲಿಸಿದರು.

"ಏನು? ಏನು? ಎಲ್ಲಿಗೆ ಓಡುತ್ತಿರುವೆ" ಅವರು ಇಳಿದನಿಯಲ್ಲಿ ಪ್ರಶ್ನಿಸಿದರು

'ವಾಸುದೇವನು ಬಂದಿರುವನು ಬಾಗಿಲು ತಟ್ಟುತ್ತಿರುವನು." ಗಂಡನ ಹಿಡಿತದಿಂದ ಬಿಡಿಸಿಕೊಳ್ಳಲು ಒದ್ದಾಡುತ್ತ ಒದರಿದಳಾಕೆ "ಸ್ಮಶಾನವು ಇಲ್ಲಿಂದ ಒಂದು ಮೈಲು ದೂರವಿರುವುದೆಂಬುದನ್ನು ನಾನು ಮರೆತೆ. ನನ್ನನು ನೀವು ತಡೆಯುವಿರೇಕೆ? ಕೈ ಬಿಡಿ. ನನಗೆ ಬಾಗಿಲನ್ನು ತೆರೆಯ ಬೇಕು"

"ದೇವರಾಣೆಯಿದೆ /ಅದನ್ನು ಒಳಗೆ ಬಿಡಬೇಡ" ಗಂಡನು ನಡುಗುತ್ತ ನುಡಿದನು

"ನಿಮಗೆ ನಿಮ್ಮ ಮಗನ ಹೆದರಿಕೆಯಾಗುತ್ತಿದೆಯೇ?" ಲಕ್ಷ್ಮಮ್ಮ ಒದ್ದಾಡುತ್ತ ಅಂದರು. "ನನ್ನನ್ನು ಬಿಡಿ. ಬಂದೆ ಮಗೂ—ವಾಸುದೇವಾ, ಈಗ ಬಂದೆ"

ಪುನಃ ಒಂದು—ಇನ್ನೊಂದು ಬಾರಿ ಬಾಗಿಲು ಬಡಿದ ಶಬ್ದವಾಯಿತು. ಲಕ್ಷ್ಮಮ್ಮ ಒಮ್ಮೆಗೆ ಆವೇಶದಿಂದ ಗಂಡನ ಹಿಡಿಯಿಂದ ತಪ್ಪಿಸಿಕೊಂಡು ಬಾಗಿಲಿನ ಬಳಿಗೆ ಓಡಿದರು. ಹಿಡಿದೆಳೆದ ರಭಸಕ್ಕೆ ಕಾಲು ಜಾರಿ ಬಿದ್ದಲ್ಲಿಂದಲೇ ರಾಮರಾಯರು ಆಕೆಯನ್ನು ದೈನ್ಯತೆಯಿಂದ ಪರಿಪರಿಯಾಗಿ ಕರೆದರು. ಬಾಗಿಲಿನ ಕೀಲಿ ತೆರೆದ ಶಬ್ದವು ನಂತರ ಅವರಿಗೆ ಕೇಳಿಸಿತು. ಕೆಳಗಿನ ಚಿಲಕವನ್ನೂ ಎತ್ತಿದ ಶಬ್ದವಾಯಿತು. ನಂತರ ಲಕ್ಷ್ಮಮ್ಮ ಧಾವಿಸಿ ನುಡಿದುದು ಕೇಳಿಸಿತು

"ಹಾಳು ಚಿಲಕ! ಬೇಗ ಬನ್ನಿರಿ. ನನಗೆ ಎಟಕುವುದಿಲ್ಲವದು

ಪರಂತು ಆಕೆಯ ಗಂಡನು ಆ ಮಾಸ್ತಿಯ ಕೈಯನ್ನು ಹುಡುಕುತ್ತ ನೆಲವನ್ನು ಸವರಿ ನೋಡುತ್ತಿದ್ದನು. ಹೊರಗಿದ್ದ ಅದು ಒಳಗೆ ಬರಬೇಕಾದರೆ ಒಮ್ಮೆ ಅವರಿಗದು ಸಿಕ್ಕಿದರೆ! ಕೋವಿಯಿಂದ ಗೋಳಿಸಿಡಿಯುವಂತೆ, ಒಂದರ ಹಿಂದೆ ಇನ್ನೊಂದರಂತೆ ಬಾಗಿಲು ತಟ್ಟಿದ ಶಬ್ದವು ಮನೆಯಲ್ಲೆಲ್ಲೂ ಪ್ರತಿಧ್ವನಿಸಿತು. ಹೆಂಡತಿಯು ಒಂದು ಕುರ್ಚಿಯನ್ನು ಎಳೆದು ಭಾಗಿನ ಬಾಳಿ ಇಟ್ಟದ್ದೂ ಕೇಳಿಸಿತವರಿಗೆ. ಚಿಲಕವು ಕಳಚಿ ಕೆಳಗೆ ಬೀಳುವ ಶಬ್ದವಾದಾಗಲೇ, ಆ ಮಾಸ್ತಿಯ ಕೈಯು ರಾಮರಾಯರ ಕೈಗೆ ದೊರಕಿತು. ಒಡನೆ ಉನ್ಮತ್ತನಂತೆ ಅವರು ಮೂರನೆಯ—ತನ್ನ ಕೊನೆಯ ಇಚ್ಛೆಯನ್ನು ಪ್ರಕಟಿಸಿದರು

ಬಾಗಿಲು ತಟ್ಟುವ ಶಬ್ದವು ತಟ್ಟನೆ ನಿಂತಿತು. ಆಗಲೆ ಕುರ್ಚಿಯನ್ನು ಹಿಂದಕ್ಕೆಳೆದು, ಬಾಗಿಲನ್ನು ತೆರೆದ ಶಬ್ದವೂ ಅವರಿಗೆ ಕೇಳಿಸಿತು. ತೆರೆದ ಬಾಗಿಲಿನಿಂದ ತಂಪಾದ ಗಾಳಿಯು ಒಳಗೆ ಬೀಸಿತು. ಅದರೊಡನೆ ಅವರ ಹೆಂಡತಿಯ ನಿರಾಶಾಜನಕ ಉದ್ಗಾರವೂ ಕೇಳಿಬಂದಿತು. ಒಡನೆ ಧೈರ್ಯದಿಂದ ಅವರು ಓಡಿ ಹೋಗಿ ತನ್ನ ಮಡದಿಯ ಮಗ್ಗುಲಲ್ಲಿ ನಿಂತು ಕುತ್ತಿಗೆ ನೀಡಿ ಹೊರಗೆ ನೋಡಿದರು. ನಿರ್ಜನವಾದ ಮಾರ್ಗದಲ್ಲೊಂದೆಡೆ ಮುನಿಸಿಪಲ್ ಲಾಂದ್ರವೊಂದು ಮಿಣಿ ಮಿಣಿ ಉರಿಯುತಿತ್ತು!

Canara Bank Limited, Kasaragod.

ಕೆನರಾ ಬೇಂಕ್ ಲಿಮಿಟೆಡ್, ಕಾಸರಗೋಡು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1938ನೇ ಇಸವಿ ಜೂನ್ ತಿಂಗಳ ತಾರೀಕು 18ನೇ ಸೋಮವಾರದೊಳಗೆ ಪಾವತಿಮಾಡಿ, ಅಡವಿಟ್ಟ ನಗಗಳನ್ನು ಬಿಡಿಸಿ ಕೊಂಡ ಹೋಗದಿದ್ದರೆ ಇದೇ 1938ನೇ ಇಸವಿ, ಜೂನ್ ತಿಂಗಳ ತಾರೀಕು 16ನೇ ಗುರುವಾರ ದಿವಸ ಅಪರಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುವು.

ಕ. ನಂಬ್ರ.	ಲೋನ್ ನಂಬ್ರ.	ಹೆಸರು ದ ವಿಳಾಸ.	ಅಸಲು ರೂ.
1.	S. L 291/38	Chandu N/o Kelu Nair, Cultivator, Madkai 2nd village, Kakkat, Kanhangad	20
2	S L 919/35	Shankarnarayana Kunjuraya S/o Krishna Kunjuraya, Cultivator Udma, Pariyar, Bekal	10
3	S L 969/35	Ammu N/o Dumanna, Cultivator, Ubrangala Kasaragod.	20
4	S L 106/36	Juvan Souza S/o Kistu Souza Cultivator, Badiadka, Perdal.	20
5	S. L 1075/36	Thukkoji S/o Durgoji, Cultivator, Mundod, Bela Grama Kasaragod	10
6	S L 1133/36	Kaichery Kunhambu Nair N/o Kunhiraman Nair Cultivator, Bindadka Bethala, Bekal	20
7	S L 1160/36	Ammu N/o Dumanna Toddy shop keeper Ubrangala Kasaragod.	10
8	S L 1530/36	Kunhambu Nair S/o Kunhambu Nair Cultivator Aniye, Perambale Bekal	5
9.	L 418/36	Mahamad Haji S/o Kunhali Haji Land holder, Perambale Bendichal, Kalanad	60
10	L 369/36	Narayana Nambudri, S/o Krisana Nambudri Vaidik Kodal at, Chedil unnu Pilicode	90
11	L 367/35	Kodyanna Bunta N/o Kunhanna Bunta Cultivator, Mulyar Chopala, Kasaragod	60
12	L 1800/36	Ammu N/o Dumanna Cultivator, Ubrangala, Agolipady Kasaragod	65

OFFICE OF THE BANK,
Kasaragod, 30-5-'38

A Gopalkrishna Pai,
Agent.

ಶೀತವನ್ನೇಕೆ ಅನುಭವಿಸುತ್ತೀರಿ?

ಶೀತ ಹೊಂದಿದ ಎಲ್ಲರ ಅವಸ್ಥೆಯು ಒಂದೇ ತರದಲ್ಲ. ಕಣ್ಣಿಂದ ನೀರು ಬರುವುದು, ನೆಗಡಿ ಬರುವುದು, ಗಂಟಲು ಉರಿತ, ಇತ್ಯಾದಿ ಪೀಡೆಗಳನ್ನು ತಾವು ಪೆಪ್ಸ ಶ್ವಾಸನೀಯ ಗುಳಿಗೆಗಳನ್ನು ಸೇವಿಸಿ ತಪ್ಪಿಸಿಕೊಳ್ಳಬಹುದು. ಪೆಪ್ಸ ಗುಳಿಗೆಗಳು ನಿಮ್ಮ ಬಾಯಲ್ಲಿ ಕರಗುತ್ತಿರುವಾಗ ಒಂದು ತರದ ಔಷಧೀಯ ಧೂಮವನ್ನು ಹೊರಡಿಸಿ, ಆ ಧೂಮವು ನಿಮ್ಮ ಶ್ವಾಸಕೋಶ, ಗಂಟಲು ಇತ್ಯಾದಿಗಳನ್ನು ಶೀತಕ್ಕೆ ಕಾರಣವಾದ ರೋಗಾಣುಗಳನ್ನು ನಾಶಮಾಡುತ್ತದೆ. ಅದರಿಂದ ನಿಮ್ಮಲ್ಲಿರುವ ಶೀತ ನಿವಾರಣೆಯಾಗುತ್ತದೆ. ಜ್ವರವು ದೂರವಾಗುತ್ತದೆ



ಪೆಪ್ಸಮಾತ್ರೆಗಳು ಬಾಟ್ಲ ಒಂದಕ್ಕೆ ರೂ 1ರ ಪ್ರಕಾರ ಎಲ್ಲಾ ಕಡೆಗಳಲ್ಲಿ ಮಾರಾಟವಾಗುತ್ತದೆ

ಏಜಂಟರು ಮೆಸರ್ಸ್ ದಾಥಾ ಎಂಡ್ ಕೊ., ಪಿ. ಟಿ. ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ ಗುಳಿಗೆಗಳನ್ನು ಸೇವಿಸಿರಿ

ಪೆಪ್ಸ್ PEPS

ಮಂಗಳೂರು

ಸಿಡಿಲು ಬಡಿದು ೭ ಮಂದಿಗೆ ಪೆಟ್ಟಾಯಿತು

ತಾ. ೨೫—೫—೩೮ನೇ ರಾತ್ರೆ ಕೊಡಿಯಾಲ ಬೈಲಲ್ಲಿ ಸಿಡಿಲು ಬಡಿದು ೭ ಜನರಿಗೆ ಪೆಟ್ಟಾಯಿತೆಂಥೂ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರೆಂದೂ ತಿಳಿದು ಬರುತ್ತದೆ.

★

ನಮ್ಮ ಜಿಲ್ಲಾ ಸುಪರಿಂಟೆಂಡೆಂಟರಾದ ಮಿ. ಜಿ. ಯಚ್. ಪಿ. ಬೈಲಿಯವರು. ವೆಲ್ಲೂರಿನ ಪೋಲಿಸ್ ಟ್ರೈನಿಂಗ್ ಶಾಲೆಯ ಪ್ರಿನ್ಸಿಪಾಲರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಇವರ ಸ್ಥಾನಕ್ಕೆ ಮಲ್ಲಪುರವಿನ ಪೋಲಿಸ್ ಡಿಪ್ಯುಟಿ ಸುಪರಿಂಟೆಂಡೆಂಟ ಮಿ. ಖಾಜಿ ಮೊಹಿದಿನ್ ಹುಸೇನ ಸಾಹೇಬ್ ಬಹದೂರ್‌ರವರು ನಮ್ಮ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ

★

ಕಾಸರಗೋಡಿನಲ್ಲಿ ಉಳಿದಿರುವ ಜ. ಬೋರ್ಡಿನ ಒಂದು ಸ್ಥಾನಕಾಗಿ, ನಾಮಿನೇಶನ್ ಪತ್ರವು ಇದೇ ಜೂನ್ ತಾ. 13ರಲ್ಲಿ ಸ್ವೀಕರಿಸಲ್ಪಟ್ಟು ಪೋಲಿಂಗ್ ಜುಲೈ 2ರಲ್ಲಿಯೂ ಓಟಿನ ಫಲಿತಾಂಶವು ಜುಲೈ 4ರಲ್ಲಿಯೂ ನಡೆಯುವುದು.

★

ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಯುರೋಪಿಯನರಿಗಾಗಿ ಕಾದಿಟ್ಟ ಸ್ಥಾನದ ನಾಮಿನೇಶನ್ ಪತ್ರವು ಇದೇ ಜೂನ್ ತಾ 8ರಲ್ಲಿ ಸ್ವೀಕರಿಸಲ್ಪಟ್ಟು ಪೋಲಿಂಗ 28ರಲ್ಲಿಯೂ ಓಟಿನ ಎಣಿಕೆಯು ಜೂನ್ 30ರಲ್ಲಿ ನಡೆಯುವುದು

ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ಇದೇ ಜೂನ್ ತಾ. 2[illegible] ಸೋಮವಾರ ಉಪಾಧ್ಯಕ್ಷರ [illegible] 12[illegible] ಮತ್ತು ಉಪಾಧ್ಯಕ್ಷರ ಚುನಾವಣೆಯು ಅದೇ ದಿನ ಸಾಯಂಕಾಲ ಘಂಟೆ 4ಕ್ಕೆ ಜರಗುವುದು.

ಜಿಲ್ಲಾ ಜಡ್ಜರಿಗೆ ವಿಧಾಯಕ ಸತ್ಕಾರ

ಇಲ್ಲಿಂದ ತಿನ್ನವೆಲ್ಲಿಗೆ ವರ್ಗಾಯಿಸಲ್ಪಟ್ಟಿರುವ ಜಿಲ್ಲಾ ಜಡ್ಜರಾದ ಮಿ. ಖಾನ್ ಅಮಿರುದ್ದೀನ್ ಸಾಹೇಬರಿಗೂ ಬೇಗಮ್ ಅಮಿರುದ್ದೀನರಿಗೂ ತಾ. 26—5—38ನೇ ಗುರುವಾರ ಸಂಜೆಗೆ ಕೆನರಾ ಹೈಸ್ಕೂಲಿನ ಅಮ್ಮೆಂಬಳ ಸುಬ್ಬರಾವ್ ಪೈ ಮೆಮೋರಿಯಲ್ ಹೋಲಿನಲ್ಲಿ ಪಬ್ಲಿಕ್ ಪ್ರೋಸಿಕ್ಯೂಟರಾದ ಶ್ರೀ [illegible] ಕರ್ಕಳ ಸದಾಶಿವ ರಾಯರು ಒಂದು ವಿಧಾಯಕ ಸತ್ಕಾರ ಕೂಟವ ನ್ನೇರ್ಪಡಿಸಿದರು. ಇದಕ್ಕೆ ಅನೇಕ ವಕೀಲರೂ ಇತರ ಮಹನೀಯರೂ ಬಂದಿದ್ದರು

ಶ್ರೀ [illegible] ಅವರು ಅಮಿರುದ್ದೀನರ ಮತ್ತು ಬೇಗಮ್ ಅಮಿರುದ್ದೀನರ [illegible] ಕಥನ ಮಾಡಿದರು. ಶ್ರೀ ಎಮ್ ಎಸ್ [illegible] ರಾಯರೂ ಮಾತನಾಡಿದರು. ಮಿ. [illegible] ರುದ್ದೀನರೂ ಬೇಗಮ್‌ರೂ ಯೋಗ್ಯ [illegible] ರವನ್ನಿತ್ತರು. ಅನಂತರ ಒಂದು ಭಾವ ಚಿತ್ರವನ್ನು ಕೂಡ ತೆಗೆಯಲಾಯಿತು

ಕ್ರಿಸೆಂಟ್ ಕ್ಲಬ್ಬಿನಲ್ಲಿ

ಅದೇ ದಿನ ಕ್ರಿಸೆಂಟ್ ಕ್ಲಬ್ಬಿನಲ್ಲಿ ಮತ್ತು [illegible] ಹಿದಾಯತುಲ್ ಇಸ್ಲಾಮಿನ ವತಿಯಿಂದ ಮಿ. ಮಹಮ್ಮದ್ ಕನ್ನಾಡರ [illegible] ವಿಧಾಯಕ ಕೂಟ [illegible] ಮಿ. ಗಳಾದ ಮೋತಿನ್ ಬಿನ್ ಅಬ್ದುಲ್ಲಾ [illegible] ಮಹಮ್ಮದ್ ಹಾರೂನರು ಮಿ. ಅಮಿರುದ್ದೀನರು ಮುಸ್ಲೀಮರಿಗೆ ಮಾಡಿದ ಸೇವೆಯ ಕುರಿತು ಪ್ರಶಂಸಿಸಿ ಮಾತನಾಡಿದರು. ಮಿ. ಅಮಿರುದ್ದೀನರು ಯೋಗ್ಯವಾದ ಉತ್ತರವನ್ನಿತ್ತರು.

★

ಮಂಗಳೂರಿನಲ್ಲಿ ಚುನಾವಣೆಯು ಯಶಸ್ವಿಯಾಗಿ ನಡೆಯಿತು. ಕಾಂಗ್ರೆಸು ಹುರಿಯಾಳುಗಳಾದ ಡಾ! ವೈ. ಶಿವ ಶೆಟ್ಟಿ ಮತ್ತು ಮಿ! ಎಫ್. ಅಲ್ಬುಕರ್ಕರು ಬಹುಮತವನ್ನು ಪಡೆದು ಜಯಶೀಲರಾಗಿದ್ದಾರೆ.

ತಾಲೂಕು

ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸಿನ ವಿಜಯ!

ಆದರೆ ಉಡುಪಿಯಲ್ಲಿರಡು ಸ್ಥಾನಗಳನ್ನು ಕಳೆದುಕೊಂಡಿತು!

ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಚುನಾವಣೆಯು ಮಂಗಳೂರು, ಉಡುಪಿ, ಹಿರಿಯಡ್ಕ, ಉದ್ಯಾವರ, ಕಟಪಾಡಿ ಮೊದಲಾದ ಕಡೆಗಳಲ್ಲಿ ತಾ. ೨೮ರಂದು ನಡೆಯಿತು. ಕಾಂಗ್ರೆಸ್ ಪಕ್ಷದವರು ಎಲ್ಲೆಡೆಗಳಲ್ಲಿಯೂ ಕೈಲಾದ ಯತ್ನ ಮಾಡಿ ತಮ್ಮ ಉಮೇದ್ವಾರರಿಗೆ ಯಶಸ್ಸನ್ನುಂಟು ಮಾಡಲು ದುಡಿದಿದ್ದರು

ಉಡುಪಿಯ ಚುನಾವಣೆಯು ಎಲ್ಲಾ ಕಡೆಗಳಿಗಿಂತಲೂ ಹೆಚ್ಚು ಚಟುವಟಿಕೆಗಳಿಂದ ತುಂಬಿತ್ತು ಸ್ವತಂತ್ರ ಪಕ್ಷದವರು ಕಾಂಗ್ರೆಸಿನ ಶುದ್ಧೀಕರಣಕ್ಕಾಗಿ ಹೊರಟವರೆಂದು ಎಲ್ಲೆಡೆಯಲ್ಲಿಯೂ ಹೇಳುತ್ತಿದ್ದರು ಕಾಂಗ್ರೆಸಿನ ತ್ರಿವರ್ಣ ಧ್ವಜವು ಇತ್ತಂಡದವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟಿತ್ತು ಮತದಾರರನ್ನು ಪೋಲಿಂಗ್ ಸ್ಟೇಶನಿಗೆ ಕರೆದೊಯ್ಯಲು ಮೋಟಾರು ವಾಹನಗಳ ಸೌಕರ್ಯವು ಚೆನ್ನಾಗಿತ್ತು

ಉಡುಪಿಯಲ್ಲಿ ಜಾತೀಯತೆಯ ವಿಜಾರವು ಎಲ್ಲಕ್ಕಿಂತಲೂ ವಿಶೇಷವಾಗಿ ನಡೆದಿತ್ತು. ಕಾಂಗ್ರೆಸ್ ಪಕ್ಷದ ಉಮೇದ್ವಾರರಾದ ಡಾ! ಕೆ ಶೇಷಗಿರಿ ಪೈಗಳ ವಿರೋಧವಾಗಿ ಸ್ವತಂತ್ರವಾಗಿ ಡಾ! ವಿ ಜಿ ಆಚಾರ್ಯರವರು [illegible] ಡಾ! ಆಚಾರ್ಯರ [illegible] ಕಳೆದ ಎಂ ಎಲ್ ಕಾಂಗ್ರೆಸ್ ಉಮೇದ್ವಾರರಾಗಿ ನಿಂತರು. ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ಶಿಸ್ತಿಗೆ ವಿರೋಧವಾಗಿ ನಡೆದುದರಿಂದ ಇವರ ಮೇಲೆ ಶಿಸ್ತಿನ ಕ್ರಮ [illegible] ಕಾಂಗ್ರೆಸ [illegible] ಕ್ರಮಗಳಾಗಿದ್ದರೂ ಡಾ ಆಚಾರ್ಯರ ಉಡುಪಿಯಲ್ಲಿ ಈ ಸಾರಿ ಜಯ ಶೀಲರಾದ [illegible] ಜನರು ಉಡುಪಿ ವರ್ತಿಸಿ [illegible] ವುದೊಂದು. ಕರೆದ ಬೇಕಾಗಿದೆ. [illegible] ಹೇಳತೊಡಗಿರುವುದರಿಂದ ಬೇಗನೆ ಇದರಲ್ಲಿ ನ್ಯಾಯಾನ್ಯಾಯ [illegible] ಅಭಿಪ್ರಾಯ ಪಡ ಆರಂಭಿಸಿದ್ದಾರೆ

ಚುನಾವಣೆಯ ಫಲಿತಾಂಶಗಳು ಕೆಳಗಿನಂತಿವೆ:

ಉಡುಪಿ ಸರ್ಕಲ್—

ಡಾ! ವಿ. ಜಿ. ಆಚಾರ್ (ಸ್ವತಂತ್ರ) [illegible]

ಡಾ! ಕೆ ಶೇಷಗಿರಿ ಪೈ, ಕಾಂಗ್ರೆಸ್ [illegible]

ಡಾ! ವಿ ಜಿ ಆಚಾರ್ ಇವರು [illegible] ಮತಗಳ ಬಹುಮತದಿಂದ ಆರಿಸಲ್ಪಟ್ಟರು.

ಸ್ತ್ರೀಯರ ರಿಜರ್ವ್ಡ್ ಸೀಟು

ಶ್ರೀಮತಿ ಚಂದ್ರಭಾಗಿ ಹೆಗ್ಗಡತಿ ಸ್ವತಂತ್ರ) [illegible]

ಶ್ರೀ ರಾಧಾಬಾಯಿ (ಕಾಂಗ್ರೆಸ್) [illegible]

ಸ್ವತಂತ್ರ ಉಮೇದ್ವಾರರಾದ ಶ್ರೀಮತಿ ಚಂದ್ರಭಾಗಿ ಹೆಗ್ಗಡತಿಯವರು [illegible] ಮತಗಳ ಬಹುಮತದಿಂದ ಚುನಾಯಿಸಲ್ಪಟ್ಟರು.

ಹಿರಿಯಡ್ಕ ಸರ್ಕಲ್: ಜನರಲ್ ಸೀಟು

ಶ್ರೀ ಬಾರಕಟ್ಟ[illegible] ಕೃಷ್ಣಯ್ಯ ಹೆಗ್ಡೆ (ಕಾಂಗ್ರೆಸ್) [illegible]

ಶ್ರೀ ಗುಂಡ್ಮಿ [illegible] ಶೆಣೈ (ಸ್ವತಂತ್ರ) [illegible]

ಕಟಪಾಡಿ ಸರ್ಕಲ್

ಕಟಪಾಡಿ ಸರ್ಕಲಿನ ಜನರಲ್ ಸೀಟಿಗೆ ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಉಪೇಂದ್ರ ನಾಯಕರೂ ಕ್ರಿಸ್ಟಿಯನ್ ರಿಜರ್ವ್ಡ್ ಸೀಟಿಗೆ ಕಾಂಗ್ರೆಸ್ ಉಮೇದ್ವಾರರಾದ ಮಿ! ಫೆರ್ನಾಂಡಿಸ್‌ರವರೂ ಯಶಸ್ವಿಯಾಗಿ ಚುನಾಯಿಸಲ್ಪಟ್ಟಿರುವರೆಂದೂ, ಮಿ! ಎ. ಸಿ. ಗೊನ್ಸಾಲ್ವಿಸರಿಗೆ [illegible] ಮತಗಳು ಸಿಕ್ಕಿರುವುದು.

ಮಧ್ಯಪ್ರಾಂತ್ಯದ ಮಂತ್ರಿಗಳ ಗಡಿಬಿಡಿ

ತಮ್ಮವರಿಗೆ ನೋಕರಿ—ಹೀಗಾದರೆ ಗೌರವವೇ?

ಈ ಮಂತ್ರಿಮಂಡಲದಲ್ಲಿ ಕಲಹರಿತ್ತ ರಾಜೀನಾಮೆ ಮೊದಲಾದುವುಗಳ ತೀರ್ಮಾನವು ಶ್ರೀ! ಸರದಾರ ಪಟೇಲರಿಂದ ಮಾಡಲಾಯಿತಷ್ಟೆ. ಈಗ ಮಂತ್ರಿಗಳ ಇಲಾಖೆಗಳು ಬದಲಾವಣೆಯಾಗುತ್ತವೆ. ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಕಾನೂನು ಮಂತ್ರಿಗಳಾಗುವರು.

ಈ ಮಂತ್ರಿಗಳು ಲಂಚಪಡೆದವರೆಂದು ಮೊದಲಾಗಿ ದೂರುಗಳಿದ್ದುವು. ಅವು ಸುಳ್ಳೆಂದಾಗಿದೆ. ಆ ದೂರುಗಳನ್ನು ಕೊಟ್ಟ ಮೂವರು ಎಸೆಂಬ್ಲಿ ಮೆಂಬರನ್ನು ಸರಿಯಾಗಿ ದಂಡಿಸುವ ರೀತಿ ಇವರು ತಮ್ಮ ದೂರುಗಳನ್ನು ರುಜುಪಡಿಸಬೇಕೆಂದೂ ಕೇಳಿಕೊಳ್ಳಲಾಗಿದ. ಅದಾಗದಿರುವಲ್ಲಿ, ಅವರು ರಾಜೀನಾಮೆ ಕೊಟ್ಟು ಐದು ವರ್ಷ ಕಾಂಗ್ರೆಸಿನ ಹೊರಗಿರಬೇಕಾಗುವುದಂತೆ

ಮಂತ್ರಿ ಶರೀಫರ ಸ್ಥಾನದಲ್ಲಿ ಇನ್ನಾರನ್ನೂ ನೇಮಿಸುವಂತಿಲ್ಲ. ಅವರ ರಾಜೀನಾಮೆ ಅಂಗೀಕೃತವಾದಿದೆ ಅವರದೊಂದು ಅಪೀಲು ಕಾರ್ಯಕಾರೀ ಮಂಡಲಿಯ ಮುಂದಿದೆ. ಅದರಲ್ಲಿ ವಿಚಾರಣೆ ಮಾಡುವ ಜಡ್ಜ ಮುಖರ್ಜಿಯವರು ತಮ್ಮಲ್ಲಿ ಅನ್ಯಾಯವನ್ನೇನೂ ಕಂಡಿಲ್ಲವೆಂದೂ, ಕೊನೆಯ ಕೂಡಿದ [illegible] ತಮಗೆ [illegible] ತಂದೂ ಬರೆದಿದ್ದಾರೆ ಜೂನ್ [illegible] ಈ ಅರ್ಜಿ [illegible] ನಂತರವೇ ಇವರ ಸ್ಥಾನದಲಿ ಇನ್ನೊಬ್ಬರನ್ನು [illegible]

ಆದರೆ,—ಮಂತ್ರಿಗಳು ಸ್ವಜನಕ್ಕಾಗಿ ಸ್ವಾರ್ಥಕ್ಕಾಗಿ ಮಾಡಿದ ಅನ್ಯಾಯಗಳನ್ನು ಪಾರ್ಲಿಮೆಂಟರಿ ಕಮಿಟಿಯು ನೋಡಿ ಗಲಿಬಿಲಿಹೊಂದಿದೆಯೆನ್ನುತ್ತಾರೆ. ಈ ಪಕ್ಷಪಾತವನ್ನು ಅಳಿಸಿಬಿಡುವುದು ಸುಲಭವಲ್ಲದಂಥ ಹೇಟೋಹಾಗೆ ಸೆಗಣಿ ಬಳಿಸುಬೇಕಾಗಿ ಬಂದಿದೆ ಎಂದೂ ಹೊರಗೆ ತಿಳಿದು ಬಂದಿದೆ! ಕಾಂಗ್ರೆಸಿನ ಗೌರವವು ಇದರಿಂದ ಕುಂದುವ ಹಾಗಾಗಿದೆ,

ವಿದ್ಯಾ ಇಲಾಖಾ ಮಂತ್ರಿ ಶ್ರೀ. ಶುಕ್ಲರವರ ಮಗನಿಗೆ ಥೋ! ಲಕ್ಚರರ್ ನೋಕರಿ ನೇಮಿಸಲಾಗಿದೆ. ಈಗ ರಾಜೀನಾಮೆ ಕೊಡಬೇಕಾಗಿ ಸೂಚನೆ ಹೋಗಿರುವುದು. [illegible] ಮಂತ್ರಿ ಡಾ. ಖರೇಯವರ ಪುತ್ರರನ್ನು ಪೂರ್ಣ ಸರ್ಜನರಾಗಿ ನೇಮಕ ಹೊಂದಿದ್ದರು; [illegible] ಎಡಿಟರ್‌ನಾಗಿ ನೇಮಕ ಹೊಂದಿದ್ದನು. [illegible] ಇನ್ನು ತಮ್ಮ ಹುದ್ದೆಗಳಿಂದ ತಾವಾಗಿ ನಿವೃತ್ತರಾಗುವರಂತೆ.

ಇದಲ್ಲದೆ ಲೋ (ಕಾನೂನು) ಲೆಕ್ಚರರನ್ನ ನೇಮಿಸಬಾರದಂತೆ, ಯೂನಿವರ್ಸಿಟಿಯೂ ಸೂಚನೆ ಕೊಡುವುದಂತೆ

ಮಂತ್ರಿಗಳ ಸಂಚಾರದ ಭತ್ತೆಯನ್ನು ಇಳಿಸಬೇಕೆಂದು ಸರದಾರರ ಶಿಫಾರಸಾಗಿದೆ, ಈಗ ಮೈಲಿಗೆ ಅರ್ಧ ರೂಪಾಯಿ ಪಡೆಯುತ್ತಾರೆ

ಕಾರ್ಕಳ ಶ್ರೀಮಾನ್ [illegible] ಸಂಸ್ಕೃತ ಪಾಠಶಾಲೆಯಿಂದ ಮದ್ರಾಸು ಯೂನಿವರ್ಸಿಟಿಯು ವಾರ್ಷಿಕ ತಿಂಗಳ ಪರೀಕ್ಷೆಗಳನ್ನು [illegible] ಶ್ರೀ. ಪಾಂಡುರಂಗ ಭಟ್ಟ [illegible] ಉಪಾಧ್ಯಾಯರು ಸಂಹಿತ ಶಿರೋಮಣಿ ಪರೀಕ್ಷೆಯಲ್ಲಿಯೂ, ಶ್ರೀಗಳಾದ ಶ್ರೀನಿವಾಸ ಭಟ್ಟ [illegible] ವ್ಯಾಕರಣ ಶಿರೋಮಣಿ ಪರೀಕ್ಷೆಯ [illegible] ಉತ್ತೀರ್ಣರಾಗಿ [illegible] ಪಡೆದಿರುವರು. ಶ್ರೀಗಳಾದ [illegible] ಭಟ್ಟ ಮತ್ತು ರಾಮಚಂದ್ರಾಚಾರ್ಯರು ಜ್ಯೋತಿಷ್ಯ ಶಿರೋಮಣಿ ಪ್ರಾರಂಭಿಕ ಪರೀಕ್ಷೆಯಲ್ಲಿ ಸಫಲರಾಗಿದ್ದಾರೆ ಸ್ವತಂತ್ರರಾಗಿ ಬಿ. ವಿದ್ವಾನ ಕನ್ನಡ ಪ್ರವೇಶ ಪರೀಕ್ಷೆಯನ್ನು ಕೊಟ್ಟ [illegible] ಬೆಟ್ಟ [illegible] ಸ್ಕೂಲಿನ ಅಧ್ಯಾಪಕ ಶ್ರೀ [illegible] ಗೋವಿಂದರಾಯರೂ ಕೃತಕೃತ್ಯರಾಗಿದ್ದಾರೆ ಇವರಿಲ್ಲರಿಗೆ ನಮ್ಮ ಅಭಿನಂದನೆಗಳು

ಕಾರ್ಕಳ ಪಂಚಾಯತ ಬೋರ್ಡ ಚುನಾವಣೆಯು ತಾ. 20—6—38ರ ದಿನ ನಡೆಯುವುದು ನಾಮ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನವು ತಾ 3—6—38 ಆಗಿದೆ. ಈ ಬಾರಿ ಕಾಂಗ್ರೆಸ್ ಈ ಚುನಾವಣೆಯನ್ನು ಸ್ಪರ್ಧಿಸಬಾರದಾಗಿ ಕಾರ್ಕಳ ಟೌನ್ ಕಾಂಗ್ರೆಸ್ ಕಮಿಟಿಯು ತಾ 23—5—38ರ ದಿನ ಕೂಡಿದ ಸಭೆಯಲ್ಲಿ ನಿರ್ಧರಿಸಿದೆ ಇದು ಕಾರಣ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ದೊರೆತಿಂದ ಇತರ ಪಕ್ಷ ಪಿಪಕ್ಷಗಳೇಳಗಿನ ಒಬ್ಬಾಬಲಗಳ ಪರೀಕ್ಷೆಯಾಗುವ ಒಂದು. ಸಂದರ್ಭವು ಕಳೆದು ಹೋಯಿತೆಂದು ಮತದಾರರು ವಿಶ್ವಾಸತ್ತಾಪಪಡುತ್ತಾರೆ

ಕೆಲವು ವರ್ಷಗಳಿಂದ ಮೈಸೂರಲ್ಲಿ ಸಂಗೀತಾಭ್ಯಾಸವನ್ನು ಮಾಡಿಕೊಂಡಿದ್ದ ಕಾರ್ಕಳದ ಯುವಕರಾಯರು ತಾ. 22—5—38 ನೇ ಸಾಯಂಕಾಲ ಸ್ಥಳೀಯ ಕಾಸ್ಮೊಪೊಲಿಟನ ಕ್ಲಬ್ಬಿನ ಆಶ್ರಯದಲ್ಲಿ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಜಿನರಾಜ ಇಂದ್ರರ ತಬ್ಲಾವಾದನ ಮತ್ತು ಶ್ರೀಮತಿ ಮನೋರಮಾಬಾಯಿಯವರ ಹಾರ್ಮೋನಿಯಮ್ ವಾದನದೊಂದಿಗೆ ಸಂಗೀತ ಏಜೇರಿಯನ್ನು ಘಿಡ್ಲ್‌ನಾದನವನ್ನೂ ಮಾಡಿದರು. ಶ್ರೀ. ವಿ. ಯನ್. ಶುದ್ದ ಬಿ. ಸಿ ಯಸ್. ಮೊದಲಾದ ಪ್ರತಿಷ್ಠಿತ ಗೃಹಸ್ಥ ಗೃಹಿಣಿಯರು ಬಂದು ಪ್ರೋತ್ಸಾಹಿಸಿದ್ದರು.

ನೋಟೀಸು

ದಕ್ಷಿಣ ಕನ್ನಡ ಬೆಂಗ್ರಾತು ಕೃಷಿಕರ ಭಂಡ್ಯಾಲೆ ಇಂಪ್ಯ ಎಲ್ಲಾ ಮೆಂಬರಿಗೆ ಮತ್ತು ಡಿಪೋಜಿಟ್‌ದಾರರಿಗೆ ಈ ಮೂಲಕ ತಿಳಿಸುವುದೇನಂದರೆ—

ಲಿಕ್ವಿಡೇಶನಿನಲ್ಲಿರುವ ಸದ್ರಿ ಭಾಗ್ಯಕ್ಕೆ ಕೃಷಿಕರ ಭಂಡ್ಯಾಲೆ ಸಾಲದ ವಸೂಲಾಗಬೇಕಿ ಮೂಲಗಳನ್ನು ವಸೂಲು ಮಾಡಿ, ಸಾಲದಿಂದ ಹೊರಗೆ ಸಲ್ಲತಕ್ಕ ಸಾಲಗಳನ್ನು ಆ ಮಟ್ಟಿಗೆ ತೀರ್ಮಾನ ಉತ್ಪದರಿಂದಲೂ, ಇನ್ನು ಸದ್ರಿ ಸಂಘದಲ್ಲಿ ವಸೂಲಾಗತಕ್ಕ ಮೂಲಗಳು ಇಲ್ಲದಿರುವುದರಿಂದಲೂ ಸದ್ರಿ ಸಂಘದ ಲಿಕ್ವಿಡೇಶನ್ ಪ್ರೊಸೀಡಿಂಗ್ಸನ್ನು ಕೊನೆಗೊಳಿಸುವ ಬಗ್ಗೆ ಇದೇ ಬರುವ ಜೂನ್ ತಿಂಗಳ ತಾರೀಕು 12ರಲ್ಲಿ ಹಗಲು ಘಂಟೆ 11ಕ್ಕೆ ಸದ್ರಿ ಮೂಸಾಫರಿ ಬಂಗ್ಲೆಯಲ್ಲಿ ಜನರಲ್ ಮೀಟಿಂಗನ್ನು ಜರಗಿಸುವುದಾಗಿ ನಿಶ್ಚಯಿಸಿರುವುದರಿಂದ, ಸದ್ರಿ ಮೀಟಿಂಗಿಗೆ ಎಲ್ಲಾ ಮೆಂಬರರೂ, ಡಿಪೋಜಿಟದಾರರೂ ತಪ್ಪದೆ ಹಾಜರಾಗಬೇಕಾಗಿ ತಿಳಿಸಲಾಗುತ್ತದೆ.

M. Srinivasa Shanbhogue,
For Deputy Registrar & Liquidator

31—5—38

ನೋಟೀಸು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು.

ಇದೇ ಬರುವ ದ. ಕ. ಜಿಲ್ಲಾ ಬೋರ್ಡಿಗೆ ಕಾಸರಗೋಡು ಸರ್ಕಲಿನಿಂದ ಆಗಲಿರುವ ಚುನಾವಣೆಗೆ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಿ ನಿಲ್ಲಬಯಸುವವರ ಇದೇ ಜೂನ್ ತಾ 8ರ ಸಂಜೆ 4 ಘಂಟೆಯೊಳಗೆ ತಮ್ಮ ಅರ್ಜಿಯನ್ನು ಅದರ ಬದ. ಅದರ ಬಾಬು ರೂಪಾಯಿ 25ರ ಸಮೇತ [illegible] ಕಳುಹಿಸಿಕೊಡಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ.

ಕಾಂಗ್ರೆಸ್ ಆಫೀಸು (ಸಹಿ) ಯು. ಶ್ರೀನಿವಾಸ
31—5—1938 ಮಲ್ಯ, ಅಧ್ಯಕ್ಷ/ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ನೋಟೀಸು

ಎಲ್ಲಾ ಜನರಿಗೆ ಈ ಮೂಲಕ ತಿಳಿಸುವುದೇನೆಂದರೆ— ಕಾರ್ಕಳ ತಾಲೂಕಿನ ನಾರಾವಿಯಲ್ಲಿರುವ ಲೋಕಲ್ ಆಸ್ಪತ್ರೆಯಲ್ಲಿ ಸರಿಯಾಗಿ ಕೆಲಸವು ನಡೆಯದಿರುವುದರಿಂದ ಮೂರು ತಿಂಗಳವರೆಗೆ ಅದು ಮುಚ್ಚಲ್ಪಡುತ್ತದೆ

(ಸಹಿ) ಎಮ್. ವಿ. ಪೆಲ್ಲೋಡಿ,
Ex Officio President.

ಜವಾಹರಲಾಲ ನೆಹರೂರವರ ಪರದೇಶ ಪ್ರವಾಸ

ಸ್ಪೇನ್, ಫ್ರಾನ್ಸ್, ರಷ್ಯ ದೇಶಗಳನ್ನು ಸಂದರ್ಶಿಸುವರು

ಭುಲಾಬಾಯಿ—ಝುಟ್ಲೆಂಡ—ಹ್ಯಾಲಿಫಾಕ್ಸ ಇವರ ವಿಚಾರವಿನಿಮಯ

ಸಾಧುಗಳಿಗೆ ಬುದ್ಧಿ ಕಲಿಸಿದನು

ಮಾಹುತನೊಬ್ಬನ 'ಮುಯ್ಯಿಗೆ ಮುಯ್ಯಿ'

ಹರಿದ್ವಾರದಿಂದ ಬಂದ ಕಥೆಯಿದು ಅಲ್ಲಿಗೆ ಬಂದ ಸಾಧುಗಳು ಕೆಲವರು ಅಲ್ಲಿಂದ ರೂಕಿಗೆ ತೆರಳಲು, ಒಂದು ಆನೆಯನ್ನು ಹತ್ತಿದರು, ರೂಕಿಯನ್ನು ಸೇರಿದೊಡನೆ ಅವರು ಮಾಹುತನನ್ನು ಆಶೀರ್ವದಿಸಿ, ಅವನಿಗೆ ಹಣ ಕೊಡದೆ ತಮ್ಮ ಆಶ್ರಮದ ಬಳಿಗೆ ನಡೆದು ಬಿಟ್ಟರು. ನಿರಾಶನಾದ ಮಾಹುತನು ತನ್ನ ಗಜವನ್ನು ಅಲ್ಲಿ ಆಶ್ರಮದ ಬಳಿ ಬಿಟ್ಟುಬಿಟ್ಟು ತೆರಳಿದನು ಯಾರು ಹತೋಟಿ ಮಾಡಲು ಇಲ್ಲದೆ ಆ ಆನೆಯು ಸಾಧುಗಳ ಆಶ್ರಮದ ಮೇಲೆ ದಾಳಿಯನ್ನು ನಡೆಯಿಸಲು ಪ್ರಾರಂಭಿಸಿತು ಸರಕಾರೀ ಅಧಿಕಾರಿಗಳಿಗೆ ಸಾಧುಗಳು ಅರ್ಜಿಮಾಡಿಕೊಂಡರೂ, ಅದರಿಂದ ಪ್ರಯೋಜನವಾಗಲಿಲ್ಲ ಕೆಲಮಂದಿ ಸ್ಥಳೀಯ ಮಾಹುತರನ್ನು ಆನೆಯನ್ನು ಸಮಜಾಯಿಸಲು ಕೇಳಿಕೊಳ್ಳಲಾಯಿತು ಅವರು ಆಗದೆಂದರು ಕೆಲದಿನಗಳ ನಂತರ ಆ ಆನೆಯ ಮಾಹುತನೆ ಬಂದು ಅದನ್ನು ಕೊಂಡೊಯ್ಯುವವನಾದನು ಆನೆಯನ್ನು ಕೊಂಡೊಯ್ಯುದಕ್ಕೆ ಸಾಧುಗಳು ಅವನಿಗೆ ತುಂಬ ಹಣವನ್ನು ಕೊಟ್ಟರು

ಬಹಳ ಖರ್ಚಿನ ಮಡಿ

ಆಫೀಸರನೊಬ್ಬರಿಗೆ ಗಂಗಾಜಲ

೨೪ ಕೊಡಗಳಲ್ಲಿ ತುಂಬಿಸಿದ ಗಂಗಾಜಲ, ಅಷ್ಟೆ ಮಣ್ಣಿನ ಪಾತ್ರಗಳಲ್ಲಿ ಗಂಗಾನದಿ ತೀರದ ಮಣ್ಣನ್ನು ತುಂಬಿಸಿ, ರೈಲ್ವೆ ಫಸ್ಟ್‌ಕ್ಲಾಸಿನಲ್ಲಿ ಪ್ರಯಾಣಮಾಡುತ್ತಿದ್ದ, ಯಾವದೋ ಸಂಸ್ಥಾನದ ಅಧಿಕಾರಿಯೊಬ್ಬರು ಹಾದಿಯಲ್ಲಿ ಟಿಕೇಟ್ ಕಲೆಕ್ಟರರು ಅವರೊಡನಿರುವ ಸಾಮಾನು, ನಿಯಮಿತ ಮಿತಿಗಿಂತ ಹೆಚ್ಚಿರುವುದರಿಂದ ಅದನ್ನು ತೂಕನೋಡಬೇಕಾಗಿ ಕೇಳುವವರಾದರು ಹಮಾಲರು ಅದನ್ನು ಮುಟ್ಟಿದರೆ ಗಂಗಾನೀರು ಅಶುದ್ಧವಾಗುವುದೆಂದು ಅಧಿಕಾರಿ ಹೇಳಿ ಆ ಸಂಪೂರ್ಣ ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟ್ ತನಗಿರಲಿ ಎಂದು ಹೇಳಿಬಿಟ್ಟು ತುಂಬಾ ಹಣವನ್ನು ರೈಲ್ವೆಗೆ ತುಂಬಿಸುವ ನಿರ್ಧಾರದಿಂದ ಅಷ್ಟು ಖರ್ಚುಮಾಡಿ ತಮ್ಮ ಮಡಿಯನ್ನು ರಕ್ಷಿಸಿದರು!

ಮುಸ್ಲಿಮರಿಗಾಗಿ ನಿಜವಾದ ವಾರ್ತೆಗಳು

'ದಿ ಇಂಡಿಯನ್ ಇನ್‌ಫೊರ್ಮೇಶನ್ ಬ್ಯುರೊ, ಲಿಮಿಟೆಡ್' ಎಂಬ ಸಂಸ್ಥೆಯು ಮುಸ್ಲಿಮ್ ಲೀಗಿನ ದಿಲ್ಲಿಯ ಕೆಲಮಂದಿ ಸದಸ್ಯರಿಂದ ಸ್ಥಾಪಿಸಲಾಗಿದೆ ಮುಸ್ಲಿಮರ ಕುರಿತೂ, ಇತರ ಅಲ್ಪ ಸಂಖ್ಯಾಕರ ಕುರಿತೂ ವಾರ್ತೆಗಳನ್ನು ಪ್ರಚಾರಗೊಳಿಸುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಂತೆ. ಇತರ ವಾರ್ತಾ ಸಂಸ್ಥೆಗಳು ತಮ್ಮ ಕುರಿತು ಸರಿಯಾದ ವಾರ್ತೆಗಳನ್ನು ಪ್ರಚುರಪಡಿಸುವುದಿಲ್ಲವೆಂದೂ ಈ ಸಂಸ್ಥೆಯವರ ದೂರು

ನೂತನ ಶಕ್ತಿ

ಚುನಾವಣಾ ಪ್ರಸಿದ್ಧಾ ಪತ್ರದಲ್ಲಿ ನಿರೂಪಿಸಿರುವಷ್ಟೆ ಸರಿಯಾದ ಪ್ರಾರಂಭದ ಧೋರಣೆಗಳನ್ನೆಲ್ಲಾ ಎಲ್ಲಾ ಕಾಂಗ್ರೆಸ್ ಮಂತ್ರಿಮಂಡಲಗಳು ನಡೆಯಿಸವೆ ಈ ಒಂಭತ್ತು ತಿಂಗಳಲ್ಲಿ ಇದಕ್ಕಿಂತ ಹೆಚ್ಚಿನದನ್ನು ಮಾಡುವುದು ಅಸಾಧ್ಯ

ಈ ಧೋರಣೆಗಳ ಪರಿಣಾಮಗಳು, ಹಳ್ಳಿಗಳ ಮೇಲೆ ಕಾಣಿಸಿಕೊಳ್ಳಲು, ಇನ್ನೂ ಕೆಲವು ವರ್ಷಗಳು ಹೋಗಬೇಕು ಆದರೆ, ಮಹತ್ವದ ಎಲ್ಲೆ ಯಾವದೆಂದರೆ, ಹಣವೂ ಯತ್ನಗಳೂ, ನೂತನ ಧಾಟಿಯಲ್ಲಿ ಉಪಯೋಗಿಸಲಾಗುತ್ತಿವೆ ಕೆಲ ವರ್ಷಗಳ ಹಿಂದೆ ನಿರೀಕ್ಷಿಸಲಾಗದ ತೆರದ ಒಂದು ತರದ ನೂತನ ಶಕ್ತಿಯು ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಕಾಣಿಸಿಕೊಂಡಿದೆ

ಸ್ಟೇಟ್ಸ್‌ಮನ್ ಪತ್ರಿಕೆ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಭವನ

ಅಲ್ಲಹಾಬಾದಿನ ಸ್ವರಾಜ್ಯ ಭವನ

ಅಲ್ಲಹಾಬಾದಿನಲ್ಲಿರುವ ಅ ಭಾ ಕಾ ಕಮಿಟಿಯವರು ಆಫೀಸು ಸದನದಲ್ಲಿ ಅನೇಕ ಬದಲಾವಣೆಗಳು ಮಾಡಲಾಗಿವೆ ಸ್ವರಾಜ್ಯ ಭವನದ ಮಧ್ಯದ ಹೋಲಿನಲ್ಲಿ, ಒಂದು ಪುಸ್ತಕ ಭಂಡಾರವು ಏರ್ಪಡಿಸಲ್ಪಟ್ಟಿರುತ್ತದೆ ಈ ಪುಸ್ತಕ ಭಂಡಾರದಲ್ಲಿ ಸಾಧಾರಣ ೧೦ ೦೦೦ ಗ್ರಂಥಗಳಿವೆ ಶ್ರೀ ಜವಾಹರಲಾಲ ನೆಹೂರುಗಳವರು ರಾಷ್ಟ್ರಪತಿಯರಾಗಿರುವಾಗ, ಈ ಪುಸ್ತಕ ಭಂಡಾರವನ್ನು ಸಂಗ್ರಹಿಸಿದರಂತೆ ಶ್ರೀ ಸಿದ್ದಾಕ್ ಆಲಿ ಎಂಬ ಉತ್ಸಾಹವಂತ ತರುಣರೂ ಕಾಂಗ್ರೆಸ್ಸಿಗಾಗಿ ಬಹಳವಾಗಿ ದುಡಿದವರು ಈ ಪುಸ್ತಕ ಭಂಡಾರದ ಚಾರ್ಜಿನಲ್ಲಿರುವರು

ಸ್ವರಾಜ್ಯ ಭವನದ ಹೆಚ್ಚಿನ ಕೋಣೆಗಳನ್ನು ಅ ಭಾ ಕಾ ಕಮಿಟಿಯ ಉಪಯೋಗಕ್ಕಾಗಿ ತೆಗೆಯಲಾಗಿವೆ ಈ ಕಾರಣದಿಂದ ಸ್ವರಾಜ್ಯ ಭವನದಲ್ಲಿ ಕಾಂಗ್ರೆಸ್ ಆಸ್ಪತ್ರೆಯ ಕೆಲಕೋಣೆಗಳನ್ನು ಸಮೀಪದ ಒಂದು ಕಟ್ಟಡಕ್ಕೆ ಒಯ್ಯಲಾಗಿದೆ ಶ್ರೀ ವಿಷ್ಣು ಕಾಮತರವರು ಪಾರ್ಲಿಮೆಂಟರಿ ಕೊಒರ್ಡಿನೇಶನ್ ಬ್ಯುರೊವಿನ ಕಾರ್ಯದರ್ಶಿಯರಾಗಿ ಕಾರ್ಯ ವಹಿಸುವುದರಿಂದ ಅವರಿಗಾಗಿ ಒಂದು ಆಫೀಸಿನ ಏರ್ಪಾಡು ಮಾಡಲಾಗಿದೆ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯವರಾದ ಶ್ರೀ ಕೃಪಾಲಾನಿಯವರು ಸ್ವರಾಜ್ಯ ಭವನದಲ್ಲೇ ವಾಸಮಾಡುತಿದ್ದಾರೆ

ಪಾರ್ಲಿಮೆಂಟರಿ ಸೆಕ್ರೆಟರಿಗಳ ವಿಚಾರವು ಸಂಯುಕ್ತ ಪ್ರಾಂತ್ಯದ ಮಂತ್ರಿಮಂಡಲದ ಮುಂದೆ ಚರ್ಚೆಗೆ ಬರುವುದಾಗಿ ತಿಳಿದು ಬರುತ್ತದೆ

ಮೌಲಾನಾ ಅಬುಲ್ ಕಲಂ ಆಜಾದರವರು ಶ್ರೀ ನೆಹರೂಗಳು ವಿಲಾಯಿತಿಗೆ ತೆರಳುವ ಮೊದಲು ಅವರನ್ನು ಕಾಣಲು ಅಲ್ಲಹಾಬಾದಿಗೆ ತೆರಳಿದ್ದರು

ಹಿಂದೆ ಯಶಸ್ವಿಯಾಗಿ ನಡೆದಿತ್ತು

ಟೀಪು ಸುಲ್ತಾನನ ಕಾಲದಲ್ಲಿ ಮದ್ಯ ನಿರೋಧ

'ಹಿಂದೂದೇಶದ ಚರಿತ್ರೆಯಲ್ಲಿ ಮದ್ಯಪಾನ ನಿರೋಧದ ಕುರಿತು ಬರೆಯುತ್ತಾ ಶ್ರೀ ನಟರಾಜನ್ ಎಂಬವರು ನ್ಯೂ ರಿವ್ಯೂ ಪತ್ರಿಕೆಯಲ್ಲಿ ಟಿಪ್ಪುಸುಲ್ತಾನನು ಅದನ್ನು ಯಶಸ್ವಿಯಾಗಿ ನಡೆಯಿಸಿದರ ಕುರಿತು ವಿವರಿಸಿರುವರು ಅದರ ಅಭಿಪ್ರಾಯವು ಹೀಗಿದೆ

ಟೀಪು ಸುಲ್ತಾನನು ತನ್ನ ರಾಜ್ಯದಲ್ಲೆಲ್ಲಾ ಮದ್ಯ ನಿರೋಧದ ಶಾಸನವನ್ನು ಜ್ಯಾರಿಮಾಡಿದ್ದರೂ, ತನ್ನ ಸೈನ್ಯವರ್ಗದ ಪಾಶ್ಚಾತ್ಯ ಸೈನಿಕರಿಗಾಗಿ ಮತ್ತು ಹುದ್ದೇದಾರರಿಗಾಗಿ ಪ್ರತ್ಯೇಕವಾದ ಒಂದು ಮದ್ಯದಂಗಡಿಯ ಏರ್ಪಾಡ ಮಾಡಿದ್ದನು ಅದರಂತೆ ದುಷ್ಟಾತ್ಮಾಜಿಯವರು, ಅನ್ಯಜನಾಂಗಿಕರ ಮೇಲೆ ಮದ್ಯಪಾನ ನಿರ್ಬಂಧ ಕಾನೂನು ಜ್ಯಾರಿಮಾಡಲು ತನ್ನ ಅಹಿಂಸಾ ನೀತಿಯು ಬಿಡುವುದಿಲ್ಲವೆಂದು, ಅಂದಿರುವರು

ಸೇಲಂ ಜಿಲ್ಲೆ ಟೀಪು ಸುಲ್ತಾನನ ಆಧೀನದಲ್ಲಿದ್ದು ಅಲ್ಲಿ ೧೫೦ ವರ್ಷಗಳ ಹಿಂದೆ ಮದ್ಯಪಾನ ನಿರೋಧವು ಬಹಳ ಯಶಸ್ವಿಯಾಗಿ ನಡೆದಿತ್ತು ಅದೇ ಜಿಲ್ಲೆಯಲ್ಲಿ ಮದ್ರಾಸಿನ ಸಚಿವ ಶ್ರೀ ರಾಜಗೋಪಾಲಾಚಾರ್ಯರಿಂದ ಪ್ರಾಂತ್ಯದ ಮದ್ಯ ನಿರೋಧವು ಪ್ರಚಾರವಾಗಿ, ಅತಿ ಯಶಸ್ವಿಯಾಗಿ ನಡೆಯುತ್ತಿದೆ ರಾಜಾಜಿಯವರು ಸೇಲವನ್ನು ಆರಿಸಿದುದರಲ್ಲಿ ಒಂದು ಅರ್ಥವಿದೆ

ಸುಧಾರಣೆಯ ವಿಚಾರಗಳಲ್ಲಿ ಮುಸ್ಲಿಮ ಸ್ತ್ರೀಯರು ತಮ್ಮ ಪುರುಷರಿಗಿಂತ ಮುಂದಿರುವರು.

ಗಾರ್ಡಿಯನ್

ಜವಾಹರಲಾಲನೆಹೂರವರ ಪರದೇಶ ಪ್ರವಾಸ

ಸ್ಪೇನ, ಫ್ರಾನ್ಸ, ರಶ್ಯಿಯ ದೇಶಗಳನ್ನು ಸಂದರ್ಶಿಸುವರು

ಅಮೇರಿಕದ ಆಮಂತ್ರಣ

ಅಖಿಲಭಾರತ ಕಾಂಗ್ರೆಸ ಕಮಿಟಿಯ ವಿದೇಶನೀತಿಯ ಕಾರ್ಯದರ್ಶಿಗಳಾದ ಶ್ರೀರಾಮ ಮನೋಹರಲೋಹಿಯಾ ಅವರು ಈ ರೀತಿ ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ

ಪಂ ಜವಾಹರಲಾಲ ನೆಹರು ಇವರು ಸಮುದ್ರಾಚೆ ಇರುವ ದೇಶಗಳಲ್ಲಿ ಮಾಡುವ ಪ್ರವಾಸವು ಹಿಂದುಸ್ಥಾನದ ಸಂದೇಶವು ಆ ದೇಶಗಳಲ್ಲಿರುವ ಜನರಿಗೆ ಮುಟ್ಟಿಸುವದಕ್ಕಾಗಿ ಇರುವದು ಮತ್ತು ಈ ಪ್ರವಾಸದಿಂದ ಜಗತ್ತಿನ ರಾಜಕಾರಣದಲ್ಲಿ ಹಿಂದುಸ್ಥಾನವು ಚೆನ್ನಾಗಿ ಮಿಲನವಾಗಿದೆಯೆಂಬುದು ವ್ಯಕ್ತವಾಗುವದು. ಸ್ಪೇನ ಸರಕಾರದ ಆಮಂತ್ರಣದ ಮೇರೆಗೆ ಪಂ ಜವಾಹರಲಾಲರು ಮೊದಲು ಸ್ಪೇನ ದೇಶಕ್ಕೆ ಹೋಗುವರು ಬಳಿಕ ಅವರು ಇಂಗ್ಲಂಡ ಮತ್ತು ಫ್ರಾಂನ್ಸದೇಶಗಳನ್ನು ಸಂದರ್ಶಿಸುವರು ವೇಳೆಯಿದ್ದರೆ ರಶ್ಯ ಮತ್ತು ಜೆಕೊ ಸ್ಲೊವಾಕಿಯಗಳಿಗೂ ಹೋಗಿ ಬರುವರು

ಅಮೇರಿಕಕ್ಕೂ ಬರಬೇಕೆಂದು ಅಲ್ಲಿನ ಸಂಸ್ಥಾನಗಳಿಂದ ಅತಿ ಉತ್ಕಟದ ಆಮಂತ್ರಣ ಬಂದಿವೆ ಜಗತ್ತಿನ ಹಣೆಬರಹವನ್ನು ಗೊತ್ತು ಮಾಡುವ ಮುಖ್ಯಶಕ್ತಿಯು ಅಮೇರಿಕದಲ್ಲಿರುವದು ಎಲ್ಲರಿಗೂ ಗೊತ್ತಿದ ಮಾತೇ ಆಗಿರುವದು

ಪ್ರವಾಸವನ್ನು ಮುಗಿಸಿಕೊಂಡು ಪಂ ಜವಾಹರಲಾಲರ ಭೂಮಾರ್ಗದಿಂದ ಹಿಂದುಸ್ಥಾನಕ್ಕೆ ಬರುವರು ಅಷ್ಟರಿಂದ ಅವರು ಏಶ್ಯಾಖಂಡದ ಕೆಲವು ದೇಶಗಳಿಗೂ ಹೋಗಿ ಬರುವರು ಈಗಾಗಲೇ ಸಮುದ್ರದಾಚೆಗೆ ದೇಶಗಳಲ್ಲಿ ಕಾಂಗ್ರೆಸ್ಸಿನ ಪ್ರಚಾರವು ಆಗಿದೆ ಇನ್ನು ಮುಂದೆ ಇದು ಹೆಚ್ಚಾಗುವದು. ಜವಾಹರಲಾಲರು ಬೇರೆ ಬೇರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಮುಖ್ಯವಾಗಿ ಕಾಣಬಹುದು

ಭುಲಾಭಾಯಿ—ಝುಟ್ಲೆಂಡ—ಹ್ಯಾಲಿಫಾಕ್ಸ್ ಇವರ ವಿಚಾರವಿನಿಮಯ

ಸಂಯುಕ್ತ ಘಟನೆಯ ಬಗ್ಗೆ ಸಂಧಾನ?

ಲಂಡನಿನಲ್ಲಿರುವ ಶ್ರೀ ಭುಲಾಭಾಯಿ ದೇಸಾಯಿಯವರು, ಮೊನ್ನೆ ದಿನ ಭಾರತ ಮಂತ್ರಿಗಳನ್ನು ಕಂಡು ಸುಮಾರು ಒಂದು ಗಂಟೆ ಕಾಲ ಮಾತುಕತೆ ನಡೆಸಿದರೆಂದು ತಿಳಿದು ಬಂದಿದೆ ಈ ಸಂದರ್ಭದಲ್ಲಿ ಶ್ರೀ ದೇಸಾಯಿಯವರು, ಸಂಯುಕ್ತ ರಾಜ್ಯಘಟನೆಯನ್ನು ಕುರಿತು ಕಾಂಗ್ರೆಸ್ಸಿನ ಧೋರಣವು ಏನಿರುವುದೆಂಬುದನ್ನು ಭಾರತಮಂತ್ರಿಗಳಿಗೆ ಸ್ಪಷ್ಟವಾಗಿ ತಿಳಿಸಿದರಂತೆ ಭಾರತಮಂತ್ರಿಗಳೊಡನೆ ಮಾತುಕತೆಯಾದ ಮೇಲೆ ದೇಸಾಯಿಯವರು ಲಾರ್ಡ ಸಭೆಗೆ ಹೋಗಿ ಅಲ್ಲಿ ನಡೆಯುತ್ತಿರುವ ಚರ್ಚೆಯನ್ನು ಕೇಳಿದರು. ಬಳಿಕ ಅವರು ಲಾರ್ಡ ಹ್ಯಾಲಿ ಫಾಕ್ಸರನ್ನು ಕಂಡು ಹಿಂದುಸ್ಥಾನದ ಪರಿಸ್ಥಿತಿಯನ್ನು ಕುರಿತು ದೀರ್ಘ ಸಂಭಾಷಣೆ ನಡೆಸಿದರಂತೆ ಹ್ಯಾಲಿಫಾಕ್ಸರು ಹಿಂದುಸ್ಥಾನದ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ವಿಶೇಷ ಆಸಕ್ತಿಯನ್ನು ತೋರಿಸಿದರಂತೆ

ಹಿಂದೂದೇಶದಲ್ಲಿ ಯುದ್ಧಶಸ್ತ್ರ ಕಾರ್ಖಾನೆ

ಬರೆ ಕಾರ್ಖಾನೆಯೊಂದು ಸಾಲದು

ಸಿಡಿಮದ್ದು ಇತ್ಯಾದಿಗಳನ್ನು ತಯಾರಿಸುವರೆ ಹಿಂದೂದೇಶದ ಜಬ್ಬಲ್‌ಪುರದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕಾಗಿ ರಕ್ಷಣಾ ಇಲಾಖೆಯವರ ನಿರ್ಧಾರವಾಗಿರುತ್ತದೆ ಈ ಕುರಿತು ಅಲ್ಲಹಾಬಾದಿನ 'ಲೀಡರ್' ಪತ್ರಿಕೆಯು ಹೀಗೆಂದು ಬರೆಯುತ್ತದೆ

ಬರೆ ಒಂದು ಸಿಡಿಮದ್ದಿನ ಕಾರ್ಖಾನೆಯನ್ನು ಹಿಂದೂದೇಶದಲ್ಲಿ ಸ್ಥಾಪಿಸಿದುದರಿಂದ ಹಿಂದ್ದ ದೇಶವು ಸ್ವಸಮರ್ಥ ಎಂದೆನಿಸಿಕೊಳ್ಳುವುದಿಲ್ಲ ಕಾರ್ಖಾನೆಯ ಕೆಲಸಗಾರರು ಹಿಂದೀಯರೆ ಆಗಬೇಕು ಇಶಾಪುರದಲ್ಲಿ ರೈಫಲ್‌ಗಳನ್ನು ತಯಾರಿಸುವ ಒಂದು ಕಾರ್ಖಾನೆಯು ಇದೆ ಅಲ್ಲಿನ ಮುಖ್ಯ ಹುದ್ದೆಗಳೆಲ್ಲಾ ಅನ್ಯ ಜನಾಂಗಿಕರಿಗೆ, ಸಂದಿರುವವು! ಇದು ನಮಗೆ ಸರಿಯೆನಿಸುವುದಿಲ್ಲ

ದಾಕು ವಿರುದ್ಧ ಭಾಷಣಗಳು

ಒಬ್ಬನ್ನು ಹಿಡಿವುದಕ್ಕಾಗಲಿ ನಿವಾರಿಸುವುದಕ್ಕಾಗಲಿ ದಾಕು ಹಾಕಿಸಿ ಪ್ರಯೋಜನವಿಲ್ಲವೆ ಮೂ ದಾಕು ಹಾಕಿದಲ್ಲಿ ಹಲ್ಲುಗಳ ರೋಗ ಫರಂಗೀ ರೋಗ ಕ್ಷಯ ರೋಗ, ಕುಷ್ಠರೋಗ ಮೊದಲಾದ ಮಹಾ ರೋಗಗಳಿಗೆ ಎಡೆಗೊಡುತ್ತದೆಂದೂ ಅಂಕಿಸಂಖ್ಯೆಗಳ ಪ್ರಮಾಣ ಕೊಟ್ಟು ಶ್ರೀ ವೆಂಕಟಸುಬ್ಬಯ್ಯ, ಎಂ.ಎಲ್.ಎ ಯವರು ನೆಲ್ಲೂರಿನಲ್ಲಿ ಬಹಿರಂಗವಾದ ಭಾಷಣ ಮಾಡಿದರು ದಾಕುಹಾಕಿದವರಲ್ಲೇ ಸಿಡುಬಿನಿಂದ ಸಾಯುವವರ ಸಂಖ್ಯೆ ಹೆಚ್ಚಾಗುತ್ತದೆಂದೂ ದಾಕು ಹಾಕದವರು ಬಹು ಕಡಮೆ ಸಂಖ್ಯೆಯಲ್ಲಿ ಸಾಯುವರೆಂದೂ ಪ್ರಕಾರ ತೋರಿಸಿದರು ದೇಹದೊಳಗೆ ಹೊಗಿಸಿದ ವಿಷವನ್ನು ಹೊರ ತಳ್ಳುವ ಶಕ್ತಿಯಿಲ್ಲದ ಮಕ್ಕಳಿಗೆ ಕಾನೂನು ಬಲತ್ಕಾರದಿಂದ ದಾಕು ಹಾಕಿಸುವುದು ಅನ್ಯಾಯವೆಂದರು

ಕೊನೆಗೆ ದಾಕು ಹಾಕುವ ವಿಷಯವು ಐಚ್ಛಿಕವಾದುದಿರಬೇಕೆಂದೂ, ಅಪೇಕ್ಷಿಸಿದಲ್ಲಿ ಮಾತ್ರ ದಾಕು ಹಾಕಿ, [illegible] ಕೊಡಬೇಕೆಂದೂ ಸರಕಾರವು ಅಪ್ಪಣೆಯಿತ್ತು ಭಿನ್ನಸಿದ ಠರಾವುಗಳಾಗಿವೆ

[illegible]ನಾಡಿನಲ್ಲಿ ಫ್ರಾನ್ಸಿನ ಸಿದ್ಧತೆಗಳು

ನಾಲ್ಕು ತಿಂಗಳ ವೆಚ್ಚಗಾಗಿ ಸರ್ವ ಸಿದ್ಧತೆಗಳು

ಯುರೋಪ್ಯದ ಈಗಿನ ಸ್ಥಿತಿಯಿಂದ, ಇನ್ನೊಂದು ಮಹಾಯುದ್ಧವು ಸಮೀಪದಲ್ಲಿ ಕಲೆದೋರುವುದೋ ಎಂಬ ಭೀತಿಯು ಉಂಟಾದುದರಿಂದ, ಯುರೋಪ್ಯದ ಪ್ರಭುತ್ವದ ಜನಾಂಗಗಳೆಲ್ಲಾ ಅವಸರದ ಸಿದ್ಧತೆಗಳನ್ನು ಮಾಡುತಿದ್ದಾರೆ

ಫ್ರಾನ್ಸು ಈ ಮೊದಲು ಜರ್ಮನ್ ಗಡಿಯ ಹತ್ತಿರ ಹಾಕಿಕೊಂಡ 'ಮೆಜಿನೊಟ್ ಲ್ಯಾನ್ಸ' ಸುರಂಗಗಳಿಂದ ಕೂಡಿದ ಕೋಟೆ ಕೊತ್ತಳಗಳಲ್ಲಿ ನಾಲ್ಕು ತಿಂಗಳ ಮುಕ್ತಿಗೆಗೆ ಬೇಕಾಗುವ ಸಿದ್ಧತೆಗಳನ್ನು ಮಾಡಿರುತ್ತದೆ

ವೈರಿಯನ್ನು ಹೊಡೆದೋಡಿಸುವ ಎಲ್ಲ ನೂತನ ತರದ ಮೆಶಿನ ಕೋವಿಗಳು ಗುಪ್ತವಾದ ಸ್ಥಳಗಳಲ್ಲಿ ಇರಿಸಿದ್ದಾರೆ ಈ ಕೋಟೆ ಕೊತ್ತಳಗಳನ್ನು ಜರ್ಮನರಿಗೆ ದಾಟಲು ಸುಲಭವೆನಿಸದಂತೆ

ಇಟಲಿಯ ರಾಜರಾದ ಇಮೇನುವೇಲರನ್ನು ಎಬಿಸಿನಿಯದ ಚಕ್ರವರ್ತಿಯನ್ನಾಗಿ ಮಾಡುವ ಕಿರೀಟಧಾರಣೆ ಸಮಾರಂಭವು ರೋಮಿನ ಸ್ಯೆಂಟ್ ಪೀಟರ್ಸ್ ಇಗರ್ಜಿಯಲ್ಲಿ ಪೋಪ್ ಸಾಹೇಬರಿಂದ ನಡೆಯಿಸಲಾಗುವುದು

ಯುದ್ಧನೌಕೆಗಳಿಗೆ ಹೊಸತೊಂದು ಪೀಡೆ

ಗಗನಮಂಡಳದಲ್ಲಿ ಚಲಿಸುವ ಟೊರ್ಪೆಡೊ

ಯುದ್ಧನೌಕೆಗಳನ್ನು ಧ್ವಂಸ ಮಾಡಲು [illegible] ವಿಜ್ಞಾನಿಯೊಬ್ಬನು ವಾಯುವಿನಲ್ಲಿ ಚಲಿಸುವ ತರದ ಟೊರ್ಪೆಡೊವಿನ ರಚನಾಕ್ರಮವನ್ನು ಕಲ್ಪಿಸಿರುವನು

ಈ ಮೊದಲು ಯುದ್ಧ ಜಹಜುಗಳನ್ನು [illegible] ಈ ತರದ ಟಿರ್ಪೆಡೊಗಳು ನೀರಿನೊಳಗಿನಿಂದ ಚಲಿಸುತಿದ್ದವು ಅದನ್ನು ನಡೆಸುವ ಮಾನವ ವ್ಯಕ್ತಿಯು ಸಾಮಾನ್ಯವಾಗಿ [illegible] ಆದರೆ ಈ ನವೀನ ಟೊರ್ಪೆಡೊವಿನಿಂದ ಅದನ್ನು ಚಲಿಸುವ ಮಾನವನು ಸುರಕ್ಷಿತನಾಗಿ ತಪ್ಪಿಸಿಕೊಳ್ಳಬಹುದು ಈ ಟೊರ್ಪೆಡೊವಿನಿಂದ ವಿಮಾನಗಳು ಹೊರಟ ಯುದ್ಧ ನೌಕೆಗಳ ಮೇಲೆ ಅತ್ಯಂತ ವಿಪರೀತ ದಾಳಿಯನ್ನು ನಡೆಯಿಸಬಹುದಂತೆ

ಈ ತರದ ಟೊರ್ಪೆಡೊಗಳನ್ನು ಧಾರಾಳ [illegible] ರಚಿಸುವರೆ ಅಮೇರಿಕದಲ್ಲಿ ಒಂದು ಕಾರ್ಖಾನೆಯು ಸ್ಥಾಪನೆಯಾಗಿರುತ್ತದೆ

ತುರ್ಕಿ ದೇಶದ ಅಧ್ಯಕ್ಷರಾದ ಕಮಾಲ್ ಅಟಾತುರ್ಕರು ಪಕ್ಷವಾತದ ದೆಸೆಯಿಂದ ಈಗ ಸರಕಾರದ [illegible] ವ್ಯವಹಾರದಲ್ಲಿ ಕೈ ಹಚ್ಚಲು ಶಕ್ತರಿಲ್ಲವಂತೆ

ಫೆಡರಲ್ ಯೋಜನೆ

ಇಂಡಿಯಾ ಸೆಕ್ರೆಟರಿ ಲೋರ್ಡ ಜೆಟ್ಲೆಂಡರ ಧ್ವನಿ

ರಾಷ್ಟ್ರಪತಿಯರ ಪ್ರತಿಧ್ವನಿ?

ವೈಸರಾಯರ ರಜೆಯ ಮೇಲೆ ಸ್ವದೇಶಕ್ಕೆ ತೆರಳುವರಷ್ಟೆ, ಆ ಕುರಿತು ಉಂಟಾದ [illegible] ವೈಸರಾಯರು ಬ್ರಿಟಿಷ ಅನೇಕ ಊಹೆಗಳಲ್ಲಿ [illegible] ರಾಜಾಂಗ ಶಾಸನದ ಸರಕಾರದೊಡನೆ [illegible] ಬದಲಾಯಿಸುವ ಫೆಡರಲ್ ವಿಭಾಗದ [illegible] ಕುರಿತು ಚರ್ಚಿಸುವರೆಂದು [illegible]

ಲಂಡನಿನಲ್ಲಿ ವಸ್ತೆ ಮುಂಬ್ಯಾ [illegible] ವೊಂದು ನಡೆದುಬಿಟ್ಟಿತು ಕೆಲವು ಗವರ್ನರರು ಕುರಿತು ಶ್ಲಾಘನೆಯಾದವು ಇಂಡಿಯಾ ಸೆಕ್ರೆಟರಿಯವರಿಂದ ನಂತರ ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತ, ವೈಸರಾಯರಾದ ಲೋರ್ಡ್ ಲಿನ್‌ಲಿತ್‌ಗೋರವರು ಲಂಡನಿಗೆ ಬರುವುದು ಫೆಡರಲ್ ರಾಜಕ್ರಮ ಬದಲಾಯಿಸುವಗೋಸ್ಕರವೆಂಬ ವಾರ್ತೆಗಳು ಹರಡಿದ ಈ ಸಮಯದಲ್ಲಿ ಇಂಡಿಯಾಕ್ಕೆ ಸಂಬಂಧಪಟ್ಟ ಬ್ರಿಟಿಷ್ ಸರಕಾರದಲ್ಲಿನ ಅಧಿಕಾರಿಯಾದ ನಾನು ಮೌನವಾಗಿದ್ದು ಬಿಟ್ಟರೆ ಪೆಡರಲ್ ಶಾಸನವು ಬದಲಾಯಿಸಲಾಗುವುದೆಂಬ ವಾರ್ತೆ ಸತ್ಯವೆಂದು ಎಲ್ಲರೂ ನಂಬಿದಬಹುದು ಆದರೆ ಆ ವಾರ್ತೆಗೆ ಆಧಾರವಿಲ್ಲವೆಂದು ನಾನು ಹೇಳುತ್ತೇನೆ ಫೆಡರಲ್ ರಾಜ ಶಾಸನವನ್ನು ಹಿಂದೀಯರೂ ಸ್ವೀಕರಿಸದ ವಿನಹ ಅದರಲ್ಲಿ ಬದಲಾವಣೆಗಳನ್ನು ಮಾಡುವ ಕುರಿತು ಬ್ರಿಟಿಷ್ ಸರಕಾರವು ಆಲೋಚಿಸುವುದಿಲ್ಲ ಅದು ಅನೇಕ ವರ್ಷ ಪರಿಶ್ರಮದ ಫಲವಾಗಿರುತ್ತದೆ ಪೆಡರೇಶನ್ ಶಾಸನವು ಈಗ ಇದ್ದ ಹಾಗೆ ಸ್ವೀಕರಿಸಪಟ್ಟರೆ ಅದರಿಂದ ಹಿಂದೂದೇಶಕ್ಕೆ ಉತ್ತಮವಿದೆ

ರಾಷ್ಟ್ರಪತಿಯರ ಪ್ರತಿಧ್ವನಿ

ಆಧುನಿಕ ಹಿಂದೂದೇಶದ ಕುರಿತ ಇಂಡಿಯಾ ಸೆಕ್ರೆಟರಿಯವರಿಗೆ ಸರಿಯಾದ ಜ್ಞಾನವಿಲ್ಲವೆಂದೇ ತಿಳಿಯಬೇಕಾಗಿದೆ ವೈಸರಾಯರು ಗವರ್ನರರ ಹಿಂದ ದೇಶಕ್ಕೆ ಬರುವುದು [illegible] ಇವುಗಳ ಕುರಿತ ನಮಗೆ ಒಂದಿಷ್ಟು [illegible] ವೈಸರಾಯರ [illegible] ಗಳನ್ನು ಹಾಕಿಕೊಂಡಿಲ್ಲ

ಫೆಡರಲ್ ಶಾಸನದಲ್ಲಿ ಕೆಲವೊಂದು ಅಲ್ಪ ಬದಲಾವಣೆಗಳನ್ನು ಮಾಡಿಬಿಟ್ಟರೆ ಅದರಿಂದ ಅದರ ಕಡೆ ನಮ್ಮ ವಿರೋಧವು ಕಡಿಮೆಯಾಗುವುದೆಂದು ಸೆಕ್ರೆಟರಿಯವರ ಭಾವನೆ [illegible] ಸಂಪೂರ್ಣ ಅಧಿಕಾರವು [illegible] ಕೈಗಳಿಗೆ ಬಂದ ವಿನಹ ನಮಗೆ ಸಮಾಧಾನವಾಗದು [illegible] ನಮ್ಮ [illegible] ನಾವು [illegible] ಬ್ರಿಟಿಷರಿಂದ ಅಧಿಕಾರವನ್ನು [illegible] ಈ ದೇಶದ ಭವಿಷ್ಯವು ನಮ್ಮ [illegible] ಲಿದೆ —

ಜಗತ್ತಿನಲ್ಲಿ ಅತಿ ಮಹತ್ವದ ಯುದ್ಧಜಹಜು

ಸೋವಿಯಟ್ ನೌಕಾಮಂಡಳಕ್ಕೆ

ಸ್ವಾಗ್ತಿಗೆ ಜಗತ್ತಿನಲ್ಲಿ ಅತಿ ಹತ್ತರದಿರುವ ಯುದ್ಧನೌಕೆಯೊಂದು ಅಮೇರಿಕದಲ್ಲಿ ಸಿದ್ಧವಾಗುತ್ತಿದೆ ಈ ಹಡಗದ ಉದ್ದವು 1000 ಅಡಿಗಳು,— ಅದು 50,000 ಟನ್ ಹೊರಬಲ್ಲುದು

ಯುರೋಪ್ಯದಲ್ಲುಂಟಾದ ಯುದ್ಧಸಂಭವಗಳ ದೆಸೆಯಿಂದ ಅಮೇರಿಕಕ್ಕೆ ಧಾರಾಳ ವ್ಯಾಪಾರ

ಜರ್ಮನಿಯಲ್ಲಿ ನೀರುಳ್ಳಿ ಅಭಾವ

ಜರ್ಮನಿಯ ಬರ್ಲಿನ್ ನಗರದಲ್ಲಿ ಮನೆಯೊಂದಕ್ಕೆ ಒಂದು ನೀರುಳ್ಳಿ ಮಾತ್ರ ದೊರಕುವ ಸ್ಥಿತಿಯು ಉಂಟಾಗಿರುತ್ತದೆ ದೇಶದಲ್ಲಿ ತಯಾರಾದ ನೀರುಳ್ಳಿ, ಎಲ್ಲಾ ವಿಷವಾಯು ಸಿದ್ಧತೆಗಾಗಿ ಉಪಯೋಗಿಸಲ್ಪಡುವುದರಿಂದ, ಅಲ್ಲಿ ನೀರುಳ್ಳಿ ಅಭಾವವು ಉಂಟಾಗಲು ಕಾರಣವಂತೆ ಸೈನ್ಯ ಇಲಾಖೆಯವರು ದೇಶದಲ್ಲಿ ತಯಾರಾದ ನೀರುಳ್ಳಿ ಎಲ್ಲವನ್ನು ಪಡಕೊಳ್ಳುತಿದ್ದಾರಂತೆ

ಜರ್ಮನಿಯಲ್ಲಿ ಕೆಲಸಗಾರರು ಉದ್ರೇಕಗೊಂಡಿರುವರು

ಶಸ್ತ್ರ ಕಾರ್ಖಾನೆಗಳಲ್ಲಿ ಅಶಾಂತಿ ಯುದ್ಧಶಸ್ತ್ರ ಸಿಡಿಮದ್ದುಗಳು ಧಾರಾಳ [illegible] ಯೋಜನೆಯಿಂದ ಶೇಖರ ಮಾಡುವ ಕೇಂದ್ರಗಳಲ್ಲಿ ಸಂದಿಗ್ಧ ಕೆಲವು ಯುದ್ಧ [illegible] ಟಾಗಿರುವುದೆಂದು ವಾರ್ತೆ. ಪರಿಸ್ಥಿತಿಯು ಬಂದಿದೆ— ಜರ್ಮನಿಯಿಂದ ಕೆಲಸಗಾರರು ಅವಿಶ್ರಾಂತವಾಗಿ ದಿನ ಒಂದಕ್ಕೆ ಹದಿನಾರು ಹದಿನೆಂಟು ತಾಸುಗಳ ಕೆಲಸ ಮಾಡಬೇಕಾಗ ಬಂದಿದೆ ಈ ಪರಿಸ್ಥಿತಿಗೆ ಪ್ರತಿಕೂಲೆಯಾಗಿ ಕೆಲಸಗಾರರು ಚಡಪಡಿಸಲು ಅವರನ್ನು ಪೊಲೀಸರ ದೊಣ್ಣೆಯಿಂದ ಸಂತವಿಸಲಾಯಿತು

ಬರ್ಲಿನ್ ಪೊಟ್ಸಡೆಮ್ ಮ್ಯೂನಿಚ್ ಇತ್ಯಾದಿ ಜರ್ಮನಿಯ ಕೈಗಾರಿಕೆ ಕೇಂದ್ರಗಳಲ್ಲಿ, ಯುದ್ಧ ಶಸ್ತ್ರ ಕಾರ್ಖಾನೆಗಳ ಕೆಲಸಗಾರರು ಮುಷ್ಕರ ಹೂಡಲು ಪ್ರಕ್ರಮಿಸಿರುವರೆಂದು [illegible] ನಗರದ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುತ್ತದೆ ಆದರೆ ಮುಷ್ಕರ ಹಿಡಿಯಲು ನಡೆದ ಅವರ ಯತ್ನಗಳ ಪೊಲೀಸರ ದಬ್ಬಾಳಿಕೆ ಕ್ರಮದಿಂದ [illegible] ವಾಗಿವೆ

ಮತ್ತೊಂದು ಮೈತ್ರಿ

ಪೋಲೇಂಡ್ ರುಮೇನಿಯಾಗಳೊಳಗೆ ಒಪ್ಪಂದ

ರಷ್ಯಕ್ಕೆ ಒತ್ತಾಗಿರುವ ಇವೆರಡು ರಾಜ್ಯಗಳ 1921ರಿಂದ ಮಿತ್ರರಾಷ್ಟ್ರಗಳ [illegible] ಇವೆರಡು ರಾಜ್ಯಗಳು [illegible] ಮೈತ್ರಿ [illegible] ಈಗ ಪುನಃ ಇವೆರಡೂ ರಾಜ್ಯಗಳು [illegible] ಇವೆರಡು ರಾಜ್ಯಗಳ [illegible] ಈಗ [illegible] ರುಮೇನಿಯಕ್ಕು [illegible] ಪೊಲೆಂಡ [illegible] ರುಮೇನಿಯದ [illegible] ಪೋಲೆಂಡ [illegible] ಹೇಳುವುದಿಲ್ಲ ಪೋಲೆಂಡ [illegible] ರಾಷ್ಟ್ರವೆಂದೇ ಇದೆ ಅವರೆ ಹಲ ವರ್ಷಗಳ ತನಕ ಜರ್ಮನಿಯೊಡನೆ ಯುದ್ಧ ಮಾಡ [illegible] ಯಿದೆ ರಷ್ಯ ಜರ್ಮನಿಗಳ ಚಿಕ್ಕಾಟದಲ್ಲಿ ತಾನು ನವೆದುಹೋಗಬಾರದೆಂದು ಪೋಲೇಂಡಿಗೆ ವಿಶೇಷ ಆಸೆ ಏಕೆಂದರೆ ಅವರೆಳಗೆ ಯಾರು ಗೆದ್ದರೂ ಪೋಲೇಂಡ ಪುನಃ ಚೂರಾಗುವುದು ಜರ್ಮನಿಯ ವಿಸ್ತಾರದ ಪ್ರಯತ್ನಗಳಲ್ಲಿ, ತನ್ನ ಚೂರುಗಳನ್ನು ಅದ ಪಟ್ಟಬಾರದೆಂಬ ಪರೀಕ್ಷೆಯಿದೆ, ಏಕೆಂದರೆ ಝೆಕೋಸ್ಲೋವಾಕಿಯದಲ್ಲಿರುವ ಜರ್ಮನರ ಸಂಖ್ಯೆಗೆ ಸಾಧಾರಣ ಸಮಾನವಾದ ಸಂಖ್ಯೆಯು ಪೋಲೇಂಡಿನಲ್ಲಿದೆ ಒಟ್ಟಿಯಾಗಿ [illegible] ರನ್ನು ಕೆಣಕಿಸುವ ಜರ್ಮನಿಯು ಮುಂದೆ ತನ್ನನ್ನು ನುಂಗಬಹುದೆಂದು ಪೋಲೇಂಡು ಹೆದರಿಕೊಂಡಿದೆ ಹೀಗಾಗಿ ಝೆಕ್ಕರ ಸಹಾಯಕ್ಕೆ ಪೋಲೇಂಡು ಮನ ಕೊಡಬಹುದು ಪೊಲೇಂಡ್ ರುಮೇನಿಯ, ಝೆಕ್ಕರು ಒಟ್ಟಾದರೆ ಬಾಲ್ಕನ್ ರಾಜ್ಯಗಳೊಡನೆ ಸೇರಿ, ಮಧ್ಯ ಯುರೋಪಿನಲ್ಲಿ ಶಾಂತಿ ಭಂಗವಾಗದಂತೆ ಕಾಪಾಡಬಹುದು, ಇವುಗಳಲ್ಲಿ ಯಾವುದೊಂದು ರಾಜ್ಯವು ಜರ್ಮನಿಗೆ ಅಥವಾ ರಷ್ಯಕ್ಕೆ ವಿರುದ್ಧವಾಗಿ ನಿಲ್ಲುವ ಬಲವುಳ್ಳುದಲ್ಲ ಇವೆಲ್ಲವೂ ಒಂದಾಗಿದಲ್ಲಿ ಇವನ್ನು ಮುರಿಯಲು ಯಾವುದೊಂದೇ ಮಹಾರಾಷ್ಟ್ರಕ್ಕೆ ಶಕ್ಯವಾಗದು

ಪುನಃ ಮುಸೋಲೊನಿ ಉವಾಚ

ಶಂಕನಾದ

ಫ್ರೆಂಕೋವಿನೊಡನೆ ಎರಕಹೊಯ್ಯುವ ತಿನದ ಆಚರಣೆಯು ಇಟಲಿಯಲ್ಲಿ ವಿಶಾಲ ಹಕ್ಕುಗಳಲ್ಲಿ ಸಾಮ್ರಾಜ್ಯದಿನವಾಗಿ ಜರುಗಿತು

ಫ್ರೆಂಕೋವಿನ ತಂತೀವಾರ್ತೆಯು ಈ ಉತ್ಸವವಾಗುವುದನ್ನು ಕಂಡ ದಂಗೆಖೋರರ ವಂದನೆಗಳನ್ನು ಇಟಲಿಗೆ ಸೂಚಿಸಿತು

ಆಗ ಮುಸೋಲಿನಿಯು— 'ನಮ್ಮ [illegible] ಯುದ್ಧವು ಇಂದಿನ ಇಟಲಿಗೆ ಬೇಕಾ[illegible] [illegible] ಇಟಲಿ [illegible] ಜಾಗ್ರತವಾಗಿ ದುಡಿಯಬೇಕಾಗಿದೆ' ಎಂದು ಗರ್ಜಿಸಿದನು

ಸ್ಪೆನಿಶ್ [illegible] ಸಂಗಡದ ಸ್ಥಾಪಕ ಜನರಲ [illegible] ಘೋಷಣ ಮಾಡ [illegible] ಸಂದಿಗ್ಧಸಮಯದಲ್ಲಿ ಇಟಲಿ [illegible] ಹನ್ನೆರಡ ವರ್ಷಗಳ ಹಿಂದೆಯೇ ಮುಸೋಲಿನಿಯು [illegible] ತಿಳಿಸಿದನು [illegible]

ಇದೇ ದಿನ [illegible] ದಲ್ಲಿ 21 [illegible] ಗಳ ಸಿಡಿಗುಂಡ [illegible]

[illegible] ಟಿಷ [illegible] ಒಡೆತದಲ್ಲಿ [illegible]

[illegible] ಶಕ್ತಿ [illegible]

ಐದ ದಿನಗಳ ಹಿಂದೆ [illegible] ಈ [illegible] ಬ್ರಿಟಿಷ ಸರಕಾರ [illegible] ಎಚ್ಚರಿಸಿಯಿದೆ ಇದಲ್ಲದೆ [illegible] ಕೊಡಬೇಕೆಂದು [illegible] ತಿಳಿಸಿಯಾದೆ

ಜ [illegible] ದರಿಂದ ಮಾಡು [illegible] ಈ [illegible] ವಿವರ ಒರಿಯಾಗಿದೆ

ಸ್ಪೆಯಿನ್ ರಣರಂಗ

ಸ್ಪೆಯಿನಿನ [illegible] ದ [illegible] ಈಗ ದಾಳಿ ನಡೆಯಿಸುತ್ತಿರುವರು ರಿಪಬ್ಲಿಕನ್ ಸ್ಪೆಯಿನ [illegible] ವನ್ನು ಬಲವಾಗಿ ವಿರೋಧಿಸುತ್ತಿದ್ದರು ಇಕ್ಕಡೆಯವರಿಗೂ ಯಾವ [illegible] ಗಳಿಲ್ಲ ಸ್ಪೆಯಿನಿಗೆ [illegible] ಸಹಾಯ [illegible] ಮುಸೊಲೀನಿಯ ಗರ್ಜನೆ ಆದರೆ ಸ್ಪೆಯಿನನ್ನು ಫ್ರೆಂಕೋನಿಗೆ ಹೇಗವಿಟ್ಟರೆ, ಆಗ ಫ್ರಾನ್ಸಿಗೆ ತನ ಆಫ್ರಿಕದ ವಸಾಹತುಗಳ ಮೇಲಿನ ಸಂಬಂಧಕ್ಕೆ ಒಂದು ಕುತ್ತುಂಟಾವಂತಾಗುವುದು ಆದುದರಿಂದಲೆ ಸಾಮ್ಯವಾದಿ ಫ್ರಾನ್ಸು ರಿಪಬ್ಲಿಕನ್ ಸ್ಪೆಯಿನಿಗೆ ಬೆಂಬಲವಾಗಿದೆ ಯುದ್ಧವು ಸಾಗುತ್ತಿದೆ

★ ಸ್ವರಾಜ್ಯವೆಂದಿಗೆ? ★

★★★★

[ಲಂಡನಲ್ಲಿ ಶ್ರೀ ಭೂಲಾಭಾಯಿ ದೇಸಾಯಿಯವರ ಭಾಷಣದಿಂದ.]

★

ಲಂಡನ್ ಮಜ್ಲಿಸ್‌ನಲ್ಲಿ, ತಾ. 22ರ ಸಾಯಂಕಾಲ ಶ್ರೀ ದೇಸಾಯಿಯವರು ಅಂದಿನ ಸಕಲ ಅಧಿಕಾರವಾಣಿಯಿಂದ ನಾನಾ ಬಗೆಯಾಗಿ ಭಾರತವರ್ಷದ ಭವಿತವ್ಯತೆಯನ್ನು ಕುರಿತು ಹೊರಟು ಅಭಿಪ್ರಾಯಗಳನ್ನು ವಿಮರ್ಶಿಸಿ, ಕೊಂಗ್ರೆಸಿನ ಪಕ್ಷವಾಗಿ ಉತ್ತರವೆಂಬಂತೆ ಬಂದು ಮಹತ್ವದ ಭಾಷಣಮಾಡಿದರು. ಶ್ರೀ ಜೆ. ಭಾಸುರವರು ಅಧ್ಯಕ್ಷರಾಗಿದ್ದರು. ಸರ್ ಹರೀಸಿಂಗ ಗೌರರೂ ಹಾಜರಾಗಿದ್ದರು.

ಹೊಸ ರಾಜ್ಯಾಂಗಶಾಸನ

ಶಾಸನೋಲ್ಲಂಘನ ಚಳವಳದ ತರುವಾಯ ಶ್ರೀ ವಿಟ್ಠಲಭಾಯಿ ಪಟೇಲರನ್ನೂ ಶ್ರೀ ಸುಭಾಷಚಂದ್ರ ಬೋಸರನ್ನೂ, ದೇಸಾಯಿಯು ಗಂಡನ್ನು—ಕೊಂಗ್ರೆಸು ಅಖಿಲಭಾರತದ ಪಕ್ಷವೆಂದು ಖಂಡಿತವಾಗುವ ತನಕ ಯಾವುದೊಂದು ವಿಧದಲ್ಲಿ ಭಾರತೀಯ ಸಲಹೆಗಳನ್ನು ಕೇಳುವಂತಿಲ್ಲವೆಂದು ನುಡಿದ್ದರು. ಈಗ ಕೊಂಗ್ರೆಸು ಭಾರತವರ್ಷದ ಒಂದೇ ಒಂದು ವ್ಯವಸ್ಥಿತವಾದ ಪ್ರತಿನಿಧಿ ಸಂಸ್ಥೆ ಎಂಬುದನ್ನೂ, ಶಾಸನದಲ್ಲಿ ಚುನಾವಣೆಯ ಕ್ರಮವನ್ನು ಅಂಗೀಕರಿಸ ನಡೆದುದರಿಂದ ಮಾತ್ರವೇ, ತೋರಿಸಿಕೊಟ್ಟಿದೆ. ಬ್ರಿಟಿಷ್

(ಶ್ರೀ ಭೂಲಾಭಾಯಿ ದೇಸಾಯಿಯವರು)

ಇಂಡಿಯದ ಜನಸಂಖ್ಯೆಯಲ್ಲಿ ಏಳು ನೂರರಿಯ ಲಿಲ್ಲಬ್ಬನಂತೆ ವೋಟಿನ ಅಧಿಕಾರ ಪಡಿದಿರುವರು. ಪ್ರಾಯಸ್ಥರಿಗೆ ವೋಟು ದೊರೆತಂತಾದಲ್ಲಿ 70 ಮಿಲ್ಲಿಯ ವೋಟರರಾಗುವರು. ಈಗ ವೋಟು ದೊರೆತವರು 35 ಮಿಲ್ಲಿಯ. ನ್ಯಾಯವಾಗಿ ವೋಟುದೊರೆಯಬೇಕಾದವರಲ್ಲಿ ಅರ್ಧಾಂಶ ಮಾತ್ರವೇ ವೋಟರ ಪಡಿದಿದ್ದಾರೆ. ಇಲ್ಲಿನ ಜನರಲ್ಲಿ ರೇ ಹೆಚ್ಚಾಗಿದ್ದು ರೈತರಿಗೆ ರಾಜಕೀಯ ಸಂಗಳೇ ಗೊತ್ತಿಲ್ಲದಿರುವ ಪ್ರಯುಕ್ತ, ಸರಕಾರದ ಕಣ್ಣುಗೊಂಬೆಯಾಗಿರುವವರಿಗೇ ವೋಟು ದೊರೆಯಬಹುದೆಂದು ಧಾರಾಳವಾಗಿ ಇಂಗ್ಲಿಷರು ಭಾವಿಸಿದ್ದರು. ಉದಾಹರಣೆಗಾಗಿ, ಸಂಯುಕ್ತ ಪ್ರಾಂತ್ಯದ ಗವರ್ನರರಿಗೆ ಅಲ್ಲಿನ ಮುಂದಾಳುಗಳು ಕೊಂಗ್ರೆಸಿಗೆ ನೂರರಲ್ಲಿ ಮೂವತ್ತರಷ್ಟು ವೋಟು ಮಾತ್ರ ಸಿಗಬಹುದೆಂದು ಭರವಸೆ ಕೊಟ್ಟಿದ್ದರು.

ವೋಟರರ ಸಂಖ್ಯೆಯಲ್ಲಿ ನೂರಕ್ಕೆ 80 ಮಾತ್ರ ವೋಟುಕೊಡ ಬಂದರು. ಅವರಲ್ಲಿ ನೂರಕ್ಕೆ 80ರಂತೆ ಕೊಂಗ್ರೆಸಿಗೇ ವೋಟು ಕೊಟ್ಟರು. ಮದ್ರಾಸಿನಲ್ಲಿ ಜಸ್ಟಿಸ್ ಪಕ್ಷವೆಂಬುದೇ ಮಾಯವಾಯಿತು. ವೋಟು ಕೂಡಿಸಲೂ ಸಮಯವಿಲ್ಲದವರೊಬ್ಬರು ಬೊಬ್ಬಿಲಿಯ ರಾಜರನ್ನೇ ಚುನಾವಣೆಯಲ್ಲಿ ಸೋಲಿಸಿದರು. ರಾಷ್ಟ್ರೀಯ ಕೃಷಕಕೂಟವೆಂದು ಸಂಯುಕ್ತ ಪ್ರಾಂತ್ಯದಲ್ಲಿನ ಜಮೀನ್ದಾರರು ಕಟ್ಟಿಕೊಂಡ ಒಂದು ಪಕ್ಷವು ಸೋತೇಹೋಯಿತು. ಬ್ರಿಟಿಷರ ಕ್ರಮನಿಯಮಗಳಂತೆ—ಕೂಡಿಸಿ ನೋಡಿದರೂ, ಮುಸ್ಲಿಮರ ವೋಟುಗಳ ಸಮೇತವಾಗಿಯೆ ಸಹ, ಕೊಂಗ್ರೆಸೇ ಅಧಿಕಮತವನ್ನು ಸಂಪಾದಿಸಿಕೊಂಡಿತು. ಕೊಂಗ್ರೆಸೇ ಭಾರತವರ್ಷದ ಪ್ರತಿನಿಧಿಯಾಯಿತು. ಆದರೆ ಜನತೆಯು ಸ್ಪಷ್ಟವಾಗಿ ತೋರಿಸಿದ ಈ ಅಭಿಪ್ರಾಯವನ್ನು ಬ್ರಿಟಿಷ್ ಅಧಿಕಾರಿಗಳು ಒಪ್ಪಿರುವರೇ ಎಂಬುದು ಸಂದೇಹ.

ಇಂಗ್ಲೆಂಡಿನಲ್ಲಿ ಪ್ರಶ್ನೆಗಳು

ಇಂಗ್ಲೆಂಡಿಗೆ ಬಂದೊಡನೆ, ಭಾರತವರ್ಷವು ಸ್ವರಾಜ್ಯ ಹೊಂದುವಂತೆ ತಾನೇನು ಮಾಡಬಹುದೆಂದು ಇಲ್ಲಿ ವಿದ್ಯಾರ್ಥಿಗಳು ಕೇಳುವರು. ಅವರೇ ಈ ಪ್ರಶ್ನೆಗೆ ಉತ್ತರ ಕೊಡುವುದು ಯೋಗ್ಯ. ಅವರು ವಿದ್ಯಾಭ್ಯಾಸದಿಂದ ಅತ್ಯುತ್ತಮ ಸಂಸ್ಕಾರ ಪಡೆಯಬೇಕೆಂಬುದು ನಿಜ; ಆದರೆ ಅವರೆಲ್ಲರಿಗೆ ದೇಶಪ್ರೇಮ ವಿಚಾರದಲ್ಲಿಯೂ ಕರ್ತವ್ಯವಿದೆಯಷ್ಟೆ. ಅವರು ಈ ವಿಷಯ ವಿಚಾರಿಸುವುದಾಗಲಿ, ಭಾರತವಾಸಿಗಳು ನಡೆಸುವ ಚಳವಳದ ರೀತಿಯನ್ನು ವಿಮರ್ಶಿಸುವುದಾಗಲಿ—ತಾವೇ ಚೆನ್ನಾಗಿ ತಿಳಿದುಕೊಂಡು ತಮ್ಮ ಕರ್ತವ್ಯವನ್ನು ತಾವು ಪೂರೈಸುವುದನ್ನರಿಯದೆ ಪ್ರಯೋಜನಕೊಡಲಾರದು. ಪ್ರತಿಯೊಬ್ಬ ಭಾರತೀಯನು ತನ್ನ ಕರ್ತವ್ಯವನ್ನು ತಿಳಿದುಕೊಂಡು, ಅದನ್ನು ಸಾಧಿಸಿ, ಪರಿಣಾಮಗಳ ಜವಾಬ್ದಾರಿಯನ್ನು ಹೊರುವಂತಾಗಬೇಕು. ಎಂದರೆ, ಚಳವಳಗಳ ಅಭಿಸಂಧಿಯ ವೇಳೆ, ಭಾರತೀಯರು ಮರಳಿ ತಮ್ಮೂರಿಗೆ ಬಂದು ತಾವೂ ಕೈಕೊಡಬೇಕು. ಅಥವಾ ಅವರು ಇಂಗ್ಲೆಂಡಿನಲ್ಲೇ ಉಳಿದು, ತಮ್ಮ ಮನಸ್ಸಾಕ್ಷಿಯಂತೆ ವರ್ತಿಸಿ, ತಮ್ಮ ಕರ್ತವ್ಯ ವೇನೆಂದರಿಯುವರೋ ಅದರಂತೆ ನಡೆದುಕೊಳ್ಳಬೇಕು. ಎಂತೂ ಭಾರತ ವರ್ಷವು ಒಂದು ಹೆಜ್ಜೆ ಮುಂದಿಟ್ಟಿದೆ ಎಂಬುದನ್ನು ಮರೆಯಬಾರದು; ಈ ಮುನ್ನಡೆಯ ಪರಿಣಾಮವನ್ನು ತಿಳಿದಿರಬೇಕು. ಭಾರತೀಯರ ಮೆದುಳು ಇತರರ ಮೆದುಳಿಗೆ ಸಮಾನವಾಗಿದೆ. ದಾಸ್ಯಮನೋವೃತ್ತಿ ಇಲ್ಲ, ಸ್ವಾತಂತ್ರ್ಯಸಾಧನೆಗಾಗಿ ಪ್ರಬಲವಾದ ಇಚ್ಛೆ ಉದ್ರೇಕಗೊಂಡಿದೆ. ಇದನ್ನು ಅಬಿಸೀನಿಯ ಸ್ಪೈಯಿನ್ ಚೀನಾ ಪ್ರಕರಣಗಳಲ್ಲಿ ಪ್ರಕಟಿಸಲಾಗಿದೆ. ವಿದ್ಯಾಭ್ಯಾಸದಲ್ಲಿ, ಕರ್ತವ್ಯಮಾಡುವ ಸ್ಥೈರ್ಯ, ವ್ಯವಸ್ಥಿತವಾಗಿ ನಡೆವ ಧೈರ್ಯ ಇವೆರಡನ್ನು ಮಾತ್ರ ಕಲಿತುಕೊಳ್ಳಬೇಕಾಗಿದೆ. ಇವೆರಡು ಇದ್ದಲ್ಲಿ, ಒಂದೇ ದಿನದಲ್ಲಿ ಸ್ವರಾಜ್ಯವನ್ನು ಸಾಧಿಸಿಕೊಳ್ಳಬಹುದು. ಒಂದು ವರ್ಷದಲ್ಲಿ ಸ್ವರಾಜ್ಯವು ಸಿದ್ಧವೆಂದು ಗಾಂಧಿಜೀಯವರೆಂದಾಗ ಎಲ್ಲರು ನಕ್ಕರು. ಸ್ವಾತಂತ್ರ್ಯವನ್ನು ಮತ್ತೊಬ್ಬರು ಕೊಡುವರೆಂಬುದು ಸುಳ್ಳು; ಅದು ಸ್ವಪ್ರಯತ್ನದಿಂದಾಗಿ ದೊರೆವುದು. ಸ್ವಸಹಾಯವೇ ಸ್ವಾತಂತ್ರ್ಯದ ಆತ್ಮ. ಎಳೆಯ ಭಾರತೀಯರು ಮುಂದಾಳುಗಳನ್ನು ಮಾತ್ರ ನೋಡುತ್ತಿದ್ದರೆ ಸಾಲದು, ತಾವೂ ಹೋರಾಡಬೇಕು.

ಐದು ವರ್ಷಗಳಲ್ಲಿ ಸ್ವಾತಂತ್ರ್ಯ

ಲಂಡನ್ ಮಜ್ಲಿಸ್ ಸಮಿತಿಯು ಈ ಭಾಗದಲ್ಲಿ ಮಾಡತಕ್ಕದ್ದು ಬಹಳ ಇದೆ. ಇಂಗ್ಲೆಂಡಿನ ಪರಿಚಿತರಾಗಿರುವ ಭಾರತೀಯರು ಯಾವ ಗೌರವದಿಂದ ದೇಶಕ್ಕಾಗಿ ಎಷ್ಟು ಸಾಧಿಸುವರೋ ಅದನ್ನು ಕಂಡು ಇಂಗ್ಲೆಂಡು ಇಂಡಿಯಕ್ಕೆ ಬೆಲೆ ಕಟ್ಟುವುದು. ಆದುದರಿಂದ ಪ್ರತಿಯೊಬ್ಬನೂ ತನ್ನ ನಡತೆಯಿಂದ ಸ್ವಾತಂತ್ರ್ಯ ಹೊಂದಲು ಯೋಗ್ಯನೆಂಬುದನ್ನು ತೋರಿಸಿ, ಖಂಡಿತವಾಗಿಯೂ ಅದನ್ನು ಸಾಧಿಸಬೇಕಾಗಿದೆ.

ಮುಂದೆ, ಅದೇನೂ ಬೇಸರದ ವಿಷಯವಿಲ್ಲ, ಸರಿಯಾದ ಮನೋಭಾವದಿಂದಲೂ ಸರಿಯಾದ ಹಾದಿಯಲ್ಲಿ ಮುನ್ನಡೆದರೆ, ಖಂಡಿತವಾಗಿಯೂ ಐದೇ ವರ್ಷಗಳಲ್ಲಿ ಭಾರತ ವರ್ಷವು ಸ್ವತಂತ್ರವಾಗುವುದು! ಹಿಂದೆ, ವಿದ್ಯಾಭ್ಯಾಸವು ಸಂಕುಚಿತ ದೃಷ್ಟಿಯಿಂದ ಸಂಕುಚಿತ ಆದರ್ಶದ ಕಡೆಗೇ ಬೋಧಿಸುತಿತ್ತು. ಆದರ್ಶವನ್ನೂ ದೃಷ್ಟಿಯನ್ನೂ ತಿದ್ದಿಕೊಳ್ಳಿರಿ; ಭಾವನೆಗಳನ್ನೂ ಬದಲಾಯಿಸಿರಿ! ಐದು ವರ್ಷಗಳಲ್ಲಿ ಸ್ವಾತಂತ್ರ್ಯವಿದೆ! ಕೊಂಗ್ರೆಸು ಏನನ್ನು ಸಾಧಿಸುವುದು. ಸಾಮಾನ್ಯರು ಚಿಂತಿಸುತ್ತಿಯೆಂದು ನಿರ್ಧಾರ ಮಾಡಲು ಹಿಂತೆಗೆವ ದಿನಗಳು ಇನ್ನಿಲ್ಲ. ಲಿಬರಲ್ ಪಕ್ಷವು ಇಲ್ಲ. ಕೊಂಗ್ರೆಸ್ ಎಂಬುದೇ ಭಾರತವರ್ಷ; ಕೈಕರೂ ಕೂಲಿಯವರೂ ಭಾರತವರ್ಷ. ರಾಷ್ಟ್ರಪಕ್ಷವೆಂದೇ ಕಾಂಗ್ರೆಸು ನ್ಯಾಯವಾದ ತನ್ನ ಗುರಿಯನ್ನು ಸಾಧಿಸುವುದು. ಅದು ಬ್ರಿಟಿಷ ದ್ವೇಷವಾದದ್ದಲ್ಲ; ಭಾರತ ಪ್ರೇಮದಿಂದ. ಇಂಗ್ಲಿಷರು ಭಾರತವರ್ಷವನ್ನು ತಮ್ಮ ಅಂಕೆಯಲ್ಲಿಯೇ ಇಟ್ಟುಕೊಳ್ಳಬೇಕೆನ್ನುವರು. ಇಂಗ್ಲಿಷರು ಇಂಗ್ಲೆಂಡಿಗಾಗಿ ಏನನ್ನು ಹಾರೈಸುವರೋ ಅಷ್ಟನ್ನು ಭಾರತೀಯರು ಭಾರತವರ್ಷಕ್ಕಾಗಿ ಹಾರೈಸದಿರುವಲ್ಲಿ, ಅವರು ದೇಶದ್ರೋಹಿಗಳು.

ಪ್ರಾಂತಿಕ ಸರಕಾರಗಳು

ಇವಕ್ಕೆ ಸಂಕೋಲೆ ಬಿಗಿದೇ ಇದೆ. ಆದರೂ ಇವು ಶ್ರೇಯಸ್ಸನ್ನು ಲಭಿಸಿಕೊಂಡಿವೆ ಎಂದು. ರಾಜ್ಯಾಂಗಶಾಸನವು ಉತ್ತಮವೆನ್ನಬರುವುದಿಲ್ಲ. ಹಾಳು ಶಾಸನದಿಂದಲಾದರೂ ಉತ್ತಮ ಫಲಗಳನ್ನು ಹಿಂಡಿ ತೆಗೆವ ಶಕ್ತಿ ಭಾರತೀಯರಿಗೆ ಉಂಟೆಂಬುದನ್ನು ಮಾತ್ರ ರುಜುವಾಗುವುದು. ಹೀಗಿರುವಾಗ, ಭಾರತೀಯರೆನ್ನುವಂತೆ ನಮ್ಮದೇ ಒಂದು ಸಭೆ ಸೇರಿ, ನಮಗೆ ಬೇಕಾಗಿರುವ ಬಗೆಯ ರಾಜ್ಯಭಾರವನ್ನು ನಿರ್ಣಯಿಸಿದಲ್ಲಿ ಎಂತಹ ದಿವ್ಯ ಪರಿಣಾಮಗಳಾದಾವೋ ಊಹಿಸಿರಿ. ಫೆಡರೇಶನಿಗೆ ಇದಿರಾಗಿ ಕೊಂಗ್ರೆಸು ಪ್ರಬಲವಾಗಿ ಹೋರಾಡಬೇಕಾಗಿದೆ. ದೇಶೀಯ ಸಂಸ್ಥಾನಗಳ ಕೋಟೆಯನ್ನು ಕಟ್ಟಿ, ಮುಖ್ಯ ಇಲಾಖೆಗಳ ಮೇಲೆ ಭಾರತೀಯರಿಗೆ ಅಧಿಕಾರವಿಲ್ಲದಂತೆ ಮಾಡಿ ಫೆಡರೇಶನು ಸ್ವರಾಜ್ಯದ ಪರಿಹಾಸ್ಯ ಮಾಡಿದೆ.

ಫೆಡರೇಶನ್

ಇದನ್ನು ಎದುರಿಸಲು ಏನು ಮಾಡುವೆವೆಂದು ಈಗಲೆ ತಿಳಿಸುವುದು ವಿಹಿತವಲ್ಲ. ಶಾಸನೋಲ್ಲಂಘನೆಯನ್ನು ಕೈಕೊಳ್ಳಲಾದೀತೆ ಎಂದು ಕೇಳುವುದು ತಪ್ಪು. ಯಾವ ಪಕ್ಷವಾದರೂ ತನ್ನ ಇದಿರಾಳಿಗೆ ತನ್ನ ತಂತ್ರ ಮಾಡಲಿದೆ ಎಂಬುದನ್ನು ತಿಳಿಸುವುದುಂಟೆ? ಶಾಸನೋಲ್ಲಂಘನೆ ನಡೆಯಬಾರದೆಂದೇನೂ ಇಲ್ಲ. ಮಾಡಬೇಕಾದದ್ದೇನೂ ಇಲ್ಲ. ಏನಾದರಾಗ, ಎಳೆಯ ಭಾರತೀಯರು ಸ್ವದೇಶಕ್ಕೆ ಮರಳಬೇಕು; ಹಾಗೆ ಮರಳದಿರುವಲ್ಲಿ ಇಲ್ಲಿ ಕೂತು ವಿಮರ್ಶೆಗಳಬಾರದು. ಭಾರತವಿರುದ್ಧವಾದ ಪ್ರಚಾರಗಳನ್ನು ಎದುರಾಡಲು ಕೊಂಗ್ರೆಸಿನವರ ರಾಷ್ಟ್ರೀಯ ಕಾರ್ಯಾಲಯ; ಅದರ ಕೆಲಸದಲ್ಲೂ ಇಲ್ಲಿರುವ ಭಾರತೀಯರು ಸಹಕರಿಸತಕ್ಕದ್ದು.

'ನೆಹರುವರನ್ನು ಬಹಿಷ್ಕರಿಸಿದ ಕೊಂಗ್ರೆಸು ಮೂರ್ಖತನ' ಎಂದು ನೀವೆಂದರೆ, ಅದು ಶಾಸನವಿರೋಧವಾದ ಕಾರಣ ನಾನು ವಿವರಿಸಲಿ? 'ರೈತರಿಗೆ ಬೇರೊಂದು ಸ್ಥಿತಿ ಬೇಕು' ಎಂದು ನೀವೆಂದರೆ, ಕೊಂಗ್ರೆಸು ರೈತಸಭೆಯಾಗಿರುವಾಗ ಇದೊಂದು ಬೇರೆ ಏಕೆ? ಎಂದು ನಾನೂ ಕೇಳಬೇಕಾಗಿದೆ.

ಅಹಿಂಸೆಯನ್ನಾಚರಿಸಿಯೆ ನಾವು ಜಯ ಹೊಂದೀತೆ? ಬಂದು ಕೇಳಿರಷ್ಟೆ. ಸೈನ್ಯ ಸಂಚಲನಗಳಿಂದ ಬಹಿರಂಗದ ಹಾಗೆ ದಂಗೆ ಏಳುವುದು ಸಾಧ್ಯವಿಲ್ಲ ಎಂಬ ಮೂಲ ಇರಲಿ. ಕೊಂಗ್ರೆಸು ಅಹಿಂಸೆಯನ್ನು ಧರ್ಮವೆಂದು ಹಿಡಿದೇ ಇದೆ... ನನ್ನ ತರಿಷ್ಟೋ ಬಂದಿ ಈ ತತ್ತ್ವವನ್ನು ಅಂಗೀಕರಿಸಿದ್ದೇವೆ. ಜಗತ್ತಿನ ಜ್ವಾಲೆ ವ್ಯವಹಾರಣೆಗೆ ಅಹಿಂಸೆಯೊಂದೇ ಚಿಕಿತ್ಸೆ. ಯುದ್ಧದಿಂದ ಆಗುವುದೇನೂ ಇಲ್ಲ, ಎಲ್ಲ ಹೋಗುವುದೇ. ಕಳೆದ ಮಹಾಯುದ್ಧದ ಪರಿಣಾಮ ನೋಡಿರಿ. ಕ್ರಾಂತಿ ಬೇಕಾದವರು ಮಾಡಲಿ, ನನ್ನಂತಹರು ಅಹಿಂಸೆಯನ್ನೆ ಅವಲಂಬಿಸುವರು. ಗಾಂಧಿಜೀಯವರು ಕೊಂಗ್ರೆಸಿನ ಡಿಕ್ಟೇಟರರಲ್ಲ, ಹಾಗೆನ್ನುವುದು ಅನ್ಯಾಯ, ಅಸತ್ಯ.

ಪದೋನ್ನತಿಗೆ ನೀವು ಯೋಗ್ಯರೆ?

ನಿಮ್ಮನ್ನು ನೀವೆ ನೋಡಿ: ನಿಮ್ಮಲ್ಲಿ ಶಕ್ತಿಯುರುವುದಿಲ್ಲ. ನಿಮ್ಮ ಮುಖದ ಮೇಲೆ ಸಂತೋಷವಿಲ್ಲ..... ನಿಮ್ಮ ಕಣ್ಣಲ್ಲಿ ಯಾವಾಗಲೂ ನಿದ್ರೆ ಕಾಣಿಸುತ್ತದೆ. ನಿಮ್ಮ ಉದರದೊಳಗೆ ಮತ್ತು ರಕ್ತದೊಳಗೆ ವಿಷವಿರುವುದೆಂದು ಇವುಗಳೆಲ್ಲ ಚಿಹ್ನೆಗಳು. ಇನೋಸ್ 'ಫ್ರುಟ್ ಸಾಲ್ಟ್' Eno's 'Fruit Salt' ಮಾತ್ರ ಈ ವಿಷವನ್ನು ನಿಮ್ಮ ದೇಹದಿಂದ ಹೊರದೂಡಬಲ್ಲದು. ಸಾವಿರಾರು ಮಂದಿ ಪುರುಷರು, ಸ್ತ್ರೀಯರು, ಮತ್ತು ಮಕ್ಕಳು ವೈದ್ಯರ ಬೋಧನೆ ಪಡೆಕೊಂಡು, ಇನೋಸ್ 'ಫ್ರುಟ್ ಸಾಲ್ಟ್'ನ್ನು Eno's 'Fruit Salt' ದಿನಾಲೂ ಸೇವಿಸುತಿದ್ದಾರೆ. ಆದರಿಂದ ಅವರು ಆರೋಗ್ಯವಂತರೂ, ಹರ್ಷಿತವಂತರೂ ಆಗಿರುವರು. ಆರೋಗ್ಯಕ್ಕಾಗಿ ಇಂದಿನಿಂದಲೇ ಇನೋವನ್ನು ತೆಗೆದುಕೊಳ್ಳಲುಪಕ್ರಮಿಸಿರಿ.

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ. ಪರಿಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳಿಂದ ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ತಯಾರಿಸಲ್ಪಟ್ಟಿರುತ್ತದೆ. ಇನೋ ಡೋಜಿಗೆ ಖರ್ಚು ಕಡಿಮೆ. ಎಲ್ಲರಿಗೂ ಈ ಆರೋಗ್ಯಕರ ಪಾನೀಯ ಪಡೆಯಲು ಸಾಧ್ಯವಿದೆ. ಎಲ್ಲಾ ಕಡೆಗಳಲ್ಲಿಯೂ ನೂರಾರು ವರಿಮಾಣದಲ್ಲಿ ಮಾರಲ್ಪಡುತ್ತದೆ.

"ಇಮಿಟೇಶನನ್ನು ತಿರಸ್ಕರಿಸಿರಿ. ಒಳ್ಳೆಯ ಮಾತ್ರ ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವವು ಮಾಡರಿಯ ಪಕಿಂಗು ತೀರ ಕಮಧಾನಕರದ್ದೆಂದು ಖಚಿತಪಡಿಸಿದೆ".

EVK 4



ಭಾಗ್ಯವನ್ನು ಮೀರಿಸಿದ ವೀರ ಕಾಲಪುರುಷ ಹರ್ ಹಿಟ್ಲರ್

[ಸಿಡ್ನೀ ವಿಶ್ವವಿದ್ಯಾಲಯದಲ್ಲಿ ಆಧುನಿಕ ಇತಿಹಾಸದ ಆಚಾರ್ಯರಾಗಿರುವ ಮಿ. ಯಸ್. ಯಚ್. ರೋಬರ್ಟ್ಸ್, ಯಮ್. ಎ., ಡಿ ಯಸ್‌ಸಿ., ಎಚ್. ಡಿ., ಯವರು ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರ್ ಮತ್ತು ಅವನ ನಾಜೀ ಪಾರ್ಟಿಯು ಅಧಿಕಾರಕ್ಕೆ ಬಂದ ರೀತಿಯನ್ನು ವರ್ಣಿಸಿ ಒಂದು ಸುಂದರವಾದ ಇತಿಹಾಸವನ್ನು 'ಹಿಂದೂ ಪತ್ರಿಕೆಗೆ ಬರೆದು ಕಳುಹಿಸಿದ್ದಾರೆ. ಸ್ವದೇಶಾಭಿಮಾನಿಯ ವಾಚಕರೂ ಅದನ್ನು ಓದಿ ಯಥಾಯೋಗ್ಯ ಪ್ರಯೋಜನವನ್ನು ಪಡೆಯಲಿ ಎಂಬ ಉದ್ದೇಶದಿಂದ ಮಿ. ರೋಬರ್ಟ್ಸರ ಆ ಲೇಖನಮಾಲೆಯ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತೇವೆ.]

ಮಹಾಯುದ್ಧವು ಮುಗಿದ ಅದೇ ವರ್ಷ ಸೆಪ್ಟೆಂಬರ ತಿಂಗಳ ಮಧ್ಯಕಾಲ. ಜರ್ಮನಿಯಲ್ಲಿ ನಾಯಿಕೊಡೆಗಳಂತೆ ಅನೇಕಾನೇಕ ಪಕ್ಷ ವಿಪಕ್ಷಗಳಾಗಿದ್ದವು. ಮ್ಯೂನಿಚ್‌ನಗರದ ಜರ್ಮನ ಕೂಲಿಕಾರ ಪಕ್ಷವೂ ಅವುಗಳಲ್ಲಿ ಒಂದಾಗಿತ್ತು. ಸಭಾಸದರ ಸಂಖ್ಯೆಯನ್ನು ನೋಡುವಾಗ ಅದನ್ನು ಒಂದು ಪಕ್ಷವೆಂದು ಕರೆಯುವುದು ಕಷ್ಟವಾಗಿತ್ತು. ಕಮಿಟಿಯಲ್ಲಿ ಆರು ಜನ ಪ್ರಮುಖರಿದ್ದರು. ಏಳನೆಯವನಾಗಿ ಅಡೋಲ್ಫ ಹಿಟ್ಲರನು ಅದರ ಮೆಂಬರನಾದನು. ಮುಂದಾಳು ಡ್ರೆಕ್ಸಲರ್ ಎಂಬವನು ಕಮ್ಮಾರ ವೃತ್ತಿಯಿಂದ ಜೀವಿಸಿದ್ದನು. ಕಾರ್ಲ್ ಹರೇರ್ ಎಂಬ ಪ್ರಸಿದ್ಧ ಪತ್ರಕಾರನೊಬ್ಬನು ಆ ಪಕ್ಷವನ್ನು ಸೇರಿದ್ದನಾದ್ದರಿಂದ ಮಾತ್ರ ಜನರ ಲಕ್ಷ್ಯವು ಕೊಂಚ ಅದರ ಕಡೆಗೆ ಹೋಗಿತ್ತು.

ಮರುವರ್ಷದ ಬೇಸಿಗೆಕಾಲ ಬಂದಿತು. ಆಗ ಇನ್ನೊಬ್ಬನು ಬಂದ. ಜರ್ಮನ್ ಕೂಲಿ ಪಕ್ಷವನ್ನು ಸೇರಿದನು. ಯೋಕ್ಹಾರ್ಟ ಎಂದು ಅವನ ಹೆಸರು. ಅವನದು ಭಾರವಾದ ಸ್ಥೂಲ ಶರೀರ. ಐವತ್ತಕ್ಕೆ ಮೀರಿದ ವಯಸ್ಸು. ದೊಡ್ಡ ಮದ್ಯಪಾಯಿ. ಯಹೂದಿಯರ ದ್ವೇಶಿಗ. ಜರ್ಮನಿಯಲ್ಲಿ ಒಂದು ನಾಗರಿಕ ಸಂಘವನ್ನು ಸ್ಥಾಪಿಸಬೇಕೆಂಬ ಹಂಬಲವು ಅವನಿಗೆ ವಿಶೇಷವಾಗಿದ್ದಿತು. ಆ ಸಂದರ್ಭದಲ್ಲಿ ಆಗಿನ ಭಿನ್ನ ಭಿನ್ನ ಧ್ಯೇಯಾದರ್ಶಗಳುಳ್ಳ ಬಾಲ್, ರೋಜನಬರ್ಗ, ಫೇಡರ್ ಮೊದಲಾದವರ ಪರಿಚಯವು ಹಿಟ್ಲರಿಗಾಗಿದ್ದಿತು. 'ದೇಶಾಭಿಮಾನಿಯಾಗು, ಇಲ್ಲವೆ ಸಾಯು' ಎಂಬ ಜೀವನಾದರ್ಶವನ್ನಿಟ್ಟುಕೊಂಡಿದ್ದ ಅದ್ಭುತ ವ್ಯಕ್ತಿ-ಕೆಪ್ಟನ ರೋಹೇಮನ ಗೆಳೆತನವೂ ಅವನಿಗೆ ಅನಂತರ ಪ್ರಾಪ್ತವಾಗಿದ್ದಿತು. ರೋಹೇಮನು ಎಂಥ ವಿಚಿತ್ರ ವ್ಯಕ್ತಿಯಾಗಿದ್ದನೆಂದರೆ-ಅವನ ಜೀವನಾದರ್ಶದ ಅನೇಕಾನೇಕ ಪ್ರಮಾಣಗಳು ಮ್ಯೂನಿಚ್‌ನಗರದ ವೀದಿ ಬೀದಿಗಳಲ್ಲಿ ಪ್ರತಿನಿತ್ಯ ದೊರೆಯುತ್ತಿದ್ದುವು.

ಹಿಟ್ಲರನ ಪ್ರಾದುರ್ಭಾವ.

ಜರ್ಮನ್ ಕೂಲಿಕಾರ ಪಕ್ಷದಲ್ಲಿ ಭಿನ್ನ ಭಿನ್ನ ಧ್ಯೇಯಾದರ್ಶಗಳುಳ್ಳ ಭಿನ್ನ ಭಿನ್ನ ವ್ಯಕ್ತಿಗಳ ಸಮಾವೇಶವಾಗಿದ್ದುದರಿಂದ ಅದರಲ್ಲಿ ಬಹಳ ಗೊಂದಲವಿದ್ದಿತು. ಹಿಟ್ಲರನು ಅದನ್ನು ಬಂದು ಸೇರುವ ಮೊದಲೇ ಯೋಕ್ಹಾರ್ಟ, ರೋಜನ್ ಬರ್ಗ, ಫೇಡರ್ ಮೊದಲಾದವರು ಆ ಪಕ್ಷದಲ್ಲಿದ್ದರು. ಆ ಸಮಯ ಹಿಟ್ಲರನು ಜರ್ಮನ್ ಸರಕಾರದ ಸೇನೆಯಲ್ಲಿ ಒಂದು ಚಿಕ್ಕ ಅಧಿಕಾರ ಪದದಲ್ಲಿದ್ದನು. ಕಮ್ಯೂನಿಸ್ಟರ ಚಲನವಲನಗಳ ರಹಸ್ಯವನ್ನು ತಿಳಿದು ಸರಕಾರಕ್ಕೆ ತಿಳಿಸುವ ಅವನೊಬ್ಬ ಬೇಹಿನವನಾಗಿದ್ದನು. ಆದರೆ ಫೇಡರನ ಭಾಷಣಗಳನ್ನು ಕೇಳಿ, ಯೋಕ್ಹಾರ್ಟನ ಪರಿಚಯಮಾಡಿಕೊಂಡು, ಕೂಲಿಕಾರ ಪಕ್ಷದ ಸಭೆಗಳಿಗೆ ಬಂದು, ಅವನು ಆ ಪಕ್ಷದ ಧ್ಯೇಯಾದರ್ಶಗಳೊಡನೆ ಸಹಾನುಭೂತಿಯುಳ್ಳವನಾಗಿದ್ದನು. ಆದಕಾರಣ ತನ್ನ ಸರಕಾರ ಹುದ್ದೆಯನ್ನು ಬಿಡುವ ಏಳೆಂಟು ತಿಂಗಳ ಮೊದಲು—೧೯೧೯ನೆ ಇಸವಿಯ ಸಪ್ಟೆಂಬರ ತಿಂಗಳಲ್ಲಿ ಅವನು ಜರ್ಮನ್ ಕೂಲಿಕಾರ ಪಕ್ಷದ ಸಭಾಸದನೂ ಕಮಿಟಿಯ ಮೆಂಬರನೂ ಆದನು.

ಹಿಟ್ಲರನು ಹೊಸಬನಾಗಿ ಆ ಪಕ್ಷವನ್ನು ಸೇರಿದ್ದಾಗ ಅವನೊಬ್ಬ ದೊಡ್ಡ ವಾಗ್ಮಿ ಎಂದು ಪ್ರಸಿದ್ಧನಾಗಿದ್ದರೂ, ಹಲವರು ಅವನನ್ನು ಮೆಚ್ಚುತ್ತಿರಲಿಲ್ಲ. ಸರಕಾರಿ ಸೇನೆಯೊಡನೆ ಸಂಬಂಧವನ್ನಿಟ್ಟುಕೊಂಡಿದ್ದನಾದ್ದರಿಂದ, ಅವನು ಅದರ ಗೂಢಚಾರನಾಗಿದ್ದಿರಬಹುದೇ ಎಂಬ ಸಂದೇಹವು ಪಕ್ಷದ ಕೆಲವು ಮೆಂಬರರಿಗೆ ಉಂಟಾಗಿದ್ದಿತು. ಆದರೆ ಹಿಟ್ಲರನ ಕಾರ್ಯೋತ್ಸಾಹ ಸ್ಫೂರ್ತಿಗಳನ್ನು ಕಂಡು ಎಲ್ಲರು ತಲೆದೂಗಿದ್ದರು—ಯೋಕ್ಹಾರ್ಟನ ಸೂಚನೆಯನ್ನು ಸ್ವೀಕರಿಸಿ ಅವರು ಅವನನ್ನು ತಮ್ಮ ಕೂಲಿಕಾರ ಪಕ್ಷದ ಪ್ರಚಾರಕನನ್ನಾಗಿ ನೇಮಿಸಿದರು.

ಹೀಗೆ ತನಗೆ ದೊರೆತ ಅನುಕೂಲ ಸಂದರ್ಭಗಳ ಒಳ್ಳೇಯ ಉಪಯೋಗವನ್ನು ಹಿಟ್ಲರನು ಮಾಡಿದನು. ಅವನು ಕಾರ್ಯ ನಿರ್ವಾಹಕ್ಕಾಗಿ ಮ್ಯೂನಿಚ್ಚಿನಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ನಿರುದ್ಯೋಗಿಯೂ ಯಾಗಿದ್ದ ಶುಸ್ಲರನನ್ನು ಪಕ್ಷದ ಗೌರವ ವ್ಯವಸ್ಥಾಪಕನನ್ನಾಗಿಮಾಡಿದನು. ದಿನಗಳು ಕಳೆದಂತೆ ಕೂಲಿಕಾರ ಪಕ್ಷದೊಳಗೆ ಹಿಟ್ಲರನ ಪ್ರಭಾವವು ಬೆಳೆದುಬಂದಿತು. ಪಕ್ಷದ ಮುಂದಾಳುವಾಗಿದ್ದ ಡೆಕ್ಸಲರನು ಅವನ ಕೈಗೊಂಬೆಯಾಗುತ್ತ ನಡೆದನು. ಈ ಎಲ್ಲ ಪರಿವರ್ತನೆಗಳಿಂದ ಸಮಾಜವಾದಕ್ಕೆ ಬಹಳ ನಷ್ಟವಾಗುವದೆಂದು ಎಣಿಸಿದ ಹರೇರನು ಕೂಲಿಕಾರ ಪಕ್ಷದ ತನ್ನ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟು ಆ ಪಕ್ಷದಿಂದ ಬೇರೆಯಾದನು. ಆದರೆ ಅದರಿಂದ ಹಿಟ್ಲರನಿಗೆ ತನ್ನ ಪಕ್ಷದೊಳಗೆ ಸ್ವೇಚ್ಛೆಯಂತೆ ಕಾರ್ಯಸಾಧಿಸಲಿಕ್ಕೆ ಬಹಳ ಅನುಕೂಲವಾಯಿತು.

ಚಿರಸ್ಮರಣೀಯ ದಿನ

1920ನೇ ಇಸವಿಯ ಫೇಬ್ರವರಿ 20ನೇ ತಾರೀಕಿನ ದಿನವು ಹಿಟ್ಲರ ಮತ್ತು ಅವನ ಕೂಲಿಕಾರ ಪಕ್ಷದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಇರತಕ್ಕುದ್ದಾಗಿದೆ. ಆ ದಿನದಲ್ಲಿಯೇ ಅವನಿಗೆ ಕಾರ್ಯಸಾಧನೆಗೆ ಖಾಸಗಿ ಸೇನೆಯು ಬಹಳ ಅನುಕೂಲವಾಗುತ್ತದೆಂಬ ವಿಚಾರವು ಹೊಳೆಯಿತು. ಮ್ಯೂನಿಚ್ ನಗರದಲ್ಲಿ ಕೂಲಿಕಾರ ಪಕ್ಷದ ಒಂದು ಪ್ರಚಂಡ ಸಭೆಯು ಆ ದಿನ ಕೂಡಿದ್ದಿತು. ಕೊಮ್ಯೂನಿಷ್ಟರು ಸಭೆಯಲ್ಲಿ ಗಲಾಟೆ ಮಾಡಿದರು. ಅಂಥ ಗಲಾಟೆಗಳು ಮುಂದಿನ ಪ್ರಸಂಗಗಳಲ್ಲಿ ಆಗದಂತೆ ಹಿಟ್ಲರನು ಎಮಿಲ್ ಮೋರಿಸ್ ಎಂಬ ಗೆಳೆಯನನ್ನು ಕರೆದು ಅವನ ಇಷ್ಟಮಿತ್ರರ ಸಹಾಯದಿಂದ ಒಂದು ಖಾಸಗಿ ಸೇನೆಯನ್ನು ರಚಿಸುವಂತೆ ಹೇಳಿದನು. ಈಗ ಅದೇ ಸೇನೆಯು ಎಮಿಲ್ ಮೋರಿಸನ ಅಧಿನತೆಯಲ್ಲಿ 'ಬ್ಲೇಕ್ ಗಾರ್ಡ್' ಎಂಬ ಹೆಸರಿನಿಂದ ಬಹು ಪ್ರಸಿದ್ಧವಾಗಿದೆ.

ಹಿಟ್ಲರನ ಕಾರ್ಯಕ್ಷೇತ್ರವು ಬೆಳೆಯುತ್ತ ಬಂದಿತು. ಬ್ಲೇಕ್ ಗಾರ್ಡ್ ಸೇನೆಯ ದರ್ಪವೂ ಹೆಚ್ಚಿತು. ಕೂಲಿಕಾರ ಪಕ್ಷದ ಕಾರ್ಯೋದ್ದೇಶಗಳ ಪ್ರಚಾರಕ್ಕಾಗಿ ಯೋಕ್ಹಾರ್ಟನು ಒಂದು ಪತ್ರಿಕೆಯನ್ನು ಹೊರಡಿಸಿದನು. 20 ವರ್ಷದ ಧೀರ ವೀರ ನರ್ಮನ್ ಎಸ್ಸರನು ಆ ಪತ್ರಿಕೆಯ ಸಂಚಾಲಕನಾಗಿದ್ದನು. ಹೀಗೆ ಪಕ್ಷಸ್ಥಾಪನೆಯಾದ ಎರಡು ವರ್ಷಗಳೊಳಗಾಗಿ—1921ನೇ ಇಸವಿಯ ಆರಂಭಕ್ಕೆ ಪಕ್ಷದಲ್ಲಿ ಮೂರು ಸಾವಿರ ಸಭಾಸದರಿದ್ದರು. ಒಂದು ವಾರ ಪತ್ರಿಕೆ, ಒಂದು ಪ್ರಧಾನ ಕಾರ್ಯಾಲಯ, ಜರ್ಮನಿಯ ದಕ್ಷಿಣ ಭಾಗದ ಕೆಲವು ಊರುಗಳಲ್ಲಿ ಕೆಲವು ಶಾಖಾ ಸಭೆಗಳು ಇವೆಲ್ಲ ಆಗಿದ್ದುವು. ಆಗ ಗೋಬೆಲ್ಸ್, ಗೋರಿಂಗರ ಹೆಸರುಗಳು ಮುಂದೆ ಬಂದಿರಲಿಲ್ಲ. ಹಿಟ್ಲರನು ಹಿಂದೆ ನಿಂತು ಯೋಕ್ಹಾರ್ಟನನ್ನು ಮುಂದು ಮಾಡಿ ಎಲ್ಲ ಕೆಲಸಗಳನ್ನು ಸಾಧಿಸುತ್ತಿದ್ದನು. ಯೋಕ್ಹಾರ್ಟನಿಗೆ ತಾನು ಮುಂದಾಳುವಾಗದಿದ್ದರೂ, ಇತರರನ್ನು ಮುಂದಾಳು ಮಾಡುವ ಶಕ್ತಿ ಸಾಮರ್ಥ್ಯಗಳು ತನ್ನಲ್ಲಿರುವವೆಂದು ಹಿಗ್ಗುತಿದ್ದನು. ಆದರೆ ಸತ್ಯಾಂಶವು ಬೇರೆಯಾಗಿದ್ದಿತು.

ಜರ್ಮನಿಯ ಅವಸ್ಥೆ.

ಆ ಕಾಲದ ಜರ್ಮನಿಯ ಅವಸ್ಥೆಯು ತೀರಾ ಕರುಣಾಜನಕವಾಗಿತ್ತು. ಮಹಾ ಯುದ್ಧಕ್ಕೆ ತಲೆ ಕೊಟ್ಟ ಜರ್ಮನರು ಶರೀರ ಮನಸ್ಸುಗಳಲ್ಲಿ ಕೆಟ್ಟು ಹೋಗಿದ್ದರು. ಅವರು ರಾಜ್ಯವನ್ನು ಸ್ವಾತಂತ್ರ್ಯವನ್ನು ಕಳಕೊಂಡಿದ್ದರು. ಅನ್ಯರಾಷ್ಟ್ರಗಳ ಮುಂದೆ ತಲೆ ಎತ್ತಿ ನಿಲ್ಲಲಾರದ ದೀನರೂ ಹೀನರೂ ಆಗಿದ್ದರು. ಎಲ್ಲೆಲ್ಲೂ ಕಷ್ಟ ದಾರಿದ್ರ್ಯಗಳ ತಾಂಡವನೃತ್ಯವಾಗುತಿತ್ತು. ಎರಡು ಮಿಲಿಯ ಜನರು ಯುದ್ಧದಲ್ಲಿ ಮಡಿದಿದ್ದರಾದರೆ ಹತ್ತು ಮಿಲಿಯ ಜನರು ಗತಿ ಗೋತ್ರವಿಲ್ಲದವರಾಗಿ ಅಲೆದಾಡುತಿದ್ದರು. ಅವರಿಗೆ ಜೀವನದಲ್ಲಿ ಆಶೆ, ಶ್ರದ್ಧೆ, ಸಸ್ಫೂರ್ತಿ, ಉತ್ಸಾಹ ಯಾವುದೂ ಇರಲಿಲ್ಲ.

ಜರ್ಮನ್ ಪ್ರಜಾತಂತ್ರ ಸರಕಾರವು ಶಕ್ತಿ ಹೀನವಾಗಿದ್ದಿತು. ಅವರ ಸ್ಥಿತಿಗತಿಗಳನ್ನು ಸುಧಾರಿಸುವ ಸಾಮರ್ಥ್ಯವು ಅವರಲ್ಲಿರಲಿಲ್ಲ. ಅದು ತನ್ನಲ್ಲೇ ರೂಢ ಮೂಲವಾಗಿದ್ದ ಕುಂದು ಕೊರತೆ ಲೋಪದೋಶಗಳ ಮೂಲಕ ಪೂರ್ಣ ಅಸಫಲವಾಗಿತ್ತು. ಜನರಿಗೆ ಅದರ ಮೇಲೆ ಆದರ ಭಕ್ತಿ ವಿಶ್ವಾಸಗಳು ಇರಲಿಲ್ಲ. ಆದಕಾರಣ ಜರ್ಮನಿಯಲ್ಲಿ ಅನೇಕ ಹಾಸಗಿಸೆನೆಗಳು ಉಂಟಾದುವು. ಅದು ಅಂತ ಕಲಹ, ಮಾರಾಮಾರಿ, ಲೂಟಿ ದರೋಡೆಗಳ ರಂಗಸ್ಥಳವಾಯಿತು. ಇವನ್ನು ಪೂರ್ಣತ ನಿಲ್ಲಿಸಿ ಶಾಂತಿ ರಕ್ಷಣೆ ಮಾಡುವದು ಪ್ರಜಾತಂತ್ರ ಸರಕಾರಕ್ಕೆ ಅಸಾಧ್ಯವಾಯಿತು.

ಜರ್ಮನಿಯ ಪ್ರಜಾತಂತ್ರ ಸರಕಾರದಲ್ಲಿದ್ದ ಮುಖ್ಯ ದೋಶವೆಂದರೆ ನಿವೀರ್ಯರಾದ ಜನರಲ್ಲಿ ವೀರ್ಯವನ್ನು ತುಂಬಿಸುವ, ಜೀವನ್ಮೃತರಾದವರಲ್ಲಿ ಹೊಸ ಪ್ರಾಣವನ್ನು ಊದುವ ಆಸೆ ಸ್ಫೂರ್ತಿಗಳನ್ನು ಕಳಕೊಂಡವರಲ್ಲಿ ಅವನ್ನು ಪುನ ಹುಟ್ಟಿಸುವ ಶಕ್ತಿಯೂ ಕಾರ್ಯಕ್ರಮವೂ ಅದಕ್ಕಿರಲಿಲ್ಲ. ಪ್ರಜಾತಂತ್ರ ಸರಕಾರದ ಪ್ರೋತ್ಸಾಹಕರಾಗಿದ್ದ ಸ್ಟ್ರೇಸ ಮೇನ್, ಬ್ರೂನಿಂಗ್ ಮೊದಲಾದವರು ಜರ್ಮನ್ ಜನತೆಯೊಡನೆ ಸಂಪರ್ಕವನ್ನು ಬೆಳಸಿ ಅದರೊಡನೆ ಒಂದಾಗಿರುವದರ ಬದಲಿಗೆ ಅದರಿಂದ ಪ್ರತ್ಯೇಕವಾಗಿ, ದೂರ ಸರಿದು ನಿಂತಿದ್ದರು. ಆದ್ದರಿಂದ ಜನರು ಪ್ರಜಾತಂತ್ರ ಸರಕಾರದ ಮಹತ್ವವನ್ನೂ ಉಪಕಾರವನ್ನೂ ಮರೆತರು. ಅದರ ಹೆಸರಿನಲ್ಲಾದ ತಪ್ಪು ತಡೆಗಳನ್ನು ಮಾತ್ರ ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡು ಆ ಸರಕಾರವನ್ನು ತಾತ್ಸಾರದಿಂದ ಕಾಣ ತೊಡಗಿದರು. ಆದ್ದರಿಂದ ಅಲ್ಲಿ ಆ ಸರಕಾರವು ಮುರಿದು ಬೀಳುವದು ಸುಲಭವಾಯಿತು.

ಹಿಟ್ಲರನು ಬ್ರೂನಿಂಗ್, ಸ್ಟ್ರೇಸಮೇನ್ ರಾಜಕಾರಣ ಪಟುಗಳಿಗಿಂತ ಬುದ್ಧಿವಂತನಲ್ಲ. ಆ ವಿಷಯದಲ್ಲಿ ಅವನು ಅವರಿಗಿಂತ ಬಹಳ ಕಡಿಮೆಯವನಾಗಿದ್ದನು. ಆದರೂ ಜರ್ಮನರು ಬ್ರೂನಿಂಗ್ ಸ್ಟ್ರೇಸಮೇನರನ್ನು ಬಿಟ್ಟು ಹಿಟ್ಲರನನ್ನು ಹಿಂಬಾಲಿಸಿದರು. ಅದರಲ್ಲಿ ಒಂದು ರಹಸ್ಯವಿದ್ದಿತು. ಅವನು ಜನತೆಯನ್ನು ತನ್ನದೆನ್ನಾಗಿ ಮಾಡಿಕೊಂಡನು. ಅವನ ಮತ್ತು ಜನತೆಯ ಹೃದಯಭಾವನೆಗಳು ಆಸೆ ಪ್ರತ್ಯಾಸೆಗಳು, ಧ್ಯೇಯಾದರ್ಶಗಳು ಒಂದೇಯಾಗಿದ್ದವು. ಜನತೆಯ ಸುಖವೇ ಅವನ ಸುಖ, ಜನತೆಯ ಕಷ್ಟವೇ ಅವನ ಕಷ್ಟ; ಅವನೇ ಜನತೆ, ಜನತೆಯೇ ಅವನಾದನು. ಹಿಟ್ಲರನು ಜನಸಮುದಾಯದೊಡನೆ ಸಂಪರ್ಕವನ್ನು ಬೆಳಸಿ, ಅವರೊಳಗಿನ ಒಬ್ಬನಾಗಿ ಇದ್ದುದರಿಂದ ಅವನು ಸಫಲನಾದನು.

ಜರ್ಮನರು ಬಹಳ ಸ್ವಾಭಿಮಾನಿಗಳು, ತಮ್ಮ ರಾಷ್ಟ್ರ ಮತ್ತು ರಾಷ್ಟ್ರೀಯರಿಗಾಗಿ ಅವರ ಜೀವನವಿದ್ದಿತು. ಆದರೆ ಮಹಾಯುದ್ಧದ ಪರಿಣಾಮವಾಗಿ ಅವರ ರಾಷ್ಟ್ರವು ಹರಿದು ಚೂರಾಗಿದ್ದಿತು. ರಾಷ್ಟ್ರೀಯರು ದೀನ ಹೀನರಾಗಿದ್ದರು. ವರ್ಸೇಲಿಯ ಒಪ್ಪಂದವು ಅವರ ಸ್ವಾಭಿಮಾನಕ್ಕೆ ದೊಡ್ಡದೊಂದು ಕೊರತೆಯಾಗಿದ್ದಿತು. ಆದ್ದರಿಂದ ಅವರಿಗೆ ಪ್ರಜಾತಂತ್ರದಿಂದ ತೃಪ್ತಿ ಇರಲಿಲ್ಲ. ಪ್ರತಿಕಾರವ ಬೇಕಾಗಿದ್ದಿತು. ಸೇಡು ತೀರಿಸುವ ಮಹತ್ವಾಕಾಂಕ್ಷೆ ಇದ್ದಿತು. ತಮ್ಮ ಮಹತ್ವಾಕಾಂಕ್ಷೆಯನ್ನು ಪೂರೈಸಲಿಕ್ಕೆ ಮುಂದಾಳುವು ಅವರಿಗೆ ಬೇಕಾಗಿದ್ದನು. ಅಂಥ ಮುಂದಾಳುವನ್ನು ಅವರು ಹುಡುಕಿಕೊಂಡಿದ್ದರು. ಆ ಸ್ಥಿತಿಯಲ್ಲಿ ಹಿಟ್ಲರನು ಅವರ ಮುಂದೆ ಬಂದುನಿಂತನು. 'ಏಳಿರಿ, ಎಚ್ಚರರಾಗಿರಿ ನನ್ನೊಂದಿಗೆ ಬನ್ನಿರಿ, ವಿಜಯಿಗಳಾಗಿರಿ' ಎಂದು, ಅವನು ಅವರನ್ನು ಕರೆದನು, ಅವರು ಅವನನ್ನು ಸಂತೋಷದಿಂದ ಹಿಂಬಾಲಿಸಿದರು. ಜನರು ಹಿಟ್ಲರನ ಬುದ್ಧಿಶಕ್ತಿಯನ್ನು ಮೆಚ್ಚಿ ಅವನನ್ನು ಹಿಂಬಾಲಿಸಿದ್ದಲ್ಲ, ಪರಂತು ಹೃದಯಸ್ಪರ್ಶಿಯಾದ ಅವನ ಭಾವನೆಗಳಿಗೆ ಅವರು ಮೋಹಿತರಾದರು, ಹುಚ್ಚಾದರು.

(ಮುಂದುವರಿಯುವದು)

ವಂದನೋಕ್ತಿ

ಗುರುಪುರ ಸರ್ಕಲಿನಿಂದ ನನ್ನನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಮೆಂಬರನಾಗಿ ಚುನಾವಣೆ ಮಾಡಿದ ಓಟರರಿಗೂ ಪ್ರೋತ್ಸಾಹಕರಿಗೂ ಈ ಮೂಲಕ ನನ್ನ ಮನಃಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

ಮಂಗಳೂರು, ತಾ. I 6—38 } K. R. Ballal, ಮೆಂಬರ್ ಡಿಸ್ಟ್ರಿಕ್ಟ್ ಬೋರ್ಡ್

ಪ್ರಕಟಣೆ

ಕಾರ್ಕಳ ಡಿ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 669/31 R. E. P. No 1834/37.

ವಾದಿ—ಶ್ರೀನಿವಾಸ ಭಟ್ಟ—ಇವನ ಟ್ರಾನ್ಸ್‌ಫರದಾರ ಶ್ರೀನಿವಾಸ ರೂರು ರಾಮಪ್ಪಯ್ಯ } ಅರ್ಜಿದಾರ

ಮತ್ತು

ಪದ್ಮನಾಭ ಭಟ್ಟ ವಗೈರೆ—ಎದ್ರಿರು.

ಇವರೊಳಗೆ

4, 5ನೇ ಪ್ರತಿವಾದಿ ಸರಸ್ವತಿ ಯಾನೆ ನೇತ್ರಾವತಿ ಅಮ್ಮ, ಪುಂಡಲೀಕ ಮಲ್ಯರ ವಿಧವೆ ಮಂಗಳೂರು ಕ್ಯಾಹಾರ ಡೊಂಗರಕೇರಿಯಲ್ಲಿ ವಕೀಲರು ಬೋಳ ನಾಗೇಶರಾಯರ ಮನೆಯಲ್ಲಿರುವವಳು ಇವರಿಗೆ—

ಮೇಲ್ಕಂಡ ಡಿಕ್ರಿ ಸಮಾಧಾನದ ಬಗ್ಗೆ ಅರ್ಜಿದಾರನು ನಡಿಸಿದ ಸದ್ರಿ ಅಮಲ್ಜಾರಿಯು ತಾ 21—6—'38ಕ್ಕೆ ಅಡ್ಜರ್ನಾಗಿಯದೆ. ಸದ್ರಿ ವ್ಯವಹರಣೆಯಲ್ಲಿ ನೀವು ಆಕ್ಷೇಪ ಕೊಡುವದು ಇರುವದಾದರೆ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಈ ದಿವಸ 11 ಗಂಟೆಗೆ ಹಾಜರಾಗಿ ಸದ್ರಿ ಕೋರ್ಟಿಗೆ ನಿಮ್ಮ ಆಕ್ಷೇಪಣೆಯನ್ನು ದಾಖಲು ಮಾಡಬಹುದು. ಇಲ್ಲವಾದರೆ ಸದ್ರಿ ವ್ಯವಹರಣೆಯು ನಿಮ್ಮ ಗೈರ್ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡೀತು ಎಂಬದನ್ನು ನೀವು ತಿಳಿಯಬೇಕು.

ಕೋರ್ಟ ಹುಕುಂ ಪ್ರಕಾರ

ನಕಲು, ಕಾರ್ಕಳ, ತಾ. 20—5—38 } ಯಂ. ಯೆಸ್. ಅಧಿಕಾರಿ, ಅರ್ಜಿದಾರನ ವಕೀಲರು.

WANTED

Agents for Silk Shirting, Coating, Sarees, etc. Pay Rs. 100 T. A. Extra. Ask free samples and particulars.

Gitson Knitting Works, Ludhiana.

DIAMONDS! DIAMONDS! BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಪರ್ಷ್ಯಾಡಮ್ಸಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಅ.	ರೂ. ಅ.
ಬೆಲ್ಲ ಗುಡ್ಡೆ ಮು.	1—14	1—14
ರಾಶಿ ಅಕ್ಕಿ ...	3—8	4—0
ಸುಗ್ಗಿ ...	4—2	4—2
ಗುಡ್ಡೆ ...	4—8	4—8
ಊರ ಅವ್ವಲ್ ಬೆಳ್ತಿಗೆ ...	4—7	4—7
ರಂಗೂನು ಬೆ. ಗೋ. ಕಳ್ಸೆ ..	7—2	7—4
ಎಲ್ಲೂರು ಬೆ. ಮು. ಕಳ್ಸೆ ...	3—14	4—0
ಗೋದಿ ಗೋಣಿ ಕಳ್ಸೆ ...	13—0	14—8
ತೊಗರಿ ಗೋಣಿ ಕಳ್ಸೆ ...	11—8	13—8
ಹುರುಳಿ ಗೋಣಿ ಕಳ್ಸೆ ..	6—0	6—2
ಕಡಲೆ ಗೋಣಿ ಕಳ್ಸೆ ...	9—8	10—8
ತೊಗರಿಬೇಳೆ ಗೋಣಿ ಕಳ್ಸೆ.	17—8	18—0
ಉದ್ದು ಗೋಣಿ ಕಳ್ಸೆ ...	9—0	9—8
ಹೆಸರು ಗೋಣಿ ಕಳ್ಸೆ ...	9—12	10—8
ಊರುಬೆಲ್ಲ ಖಂಡಿ ಕಳ್ಸೆ ...	36—0	40—0
ಉಪ್ಪು ಗೋಣಿ ಕಳ್ಸೆ .	4—8	5—4
ಕೊಬ್ರಿ ಖಂಡಿ ಕಳ್ಸೆ ...	46—8	46—8
ಎಣ್ಣೆಂಡಿ ಖಂಡಿ ಕಳ್ಸೆ ..	25—	26—0
ತೆಂಗಿನ ಎಣ್ಣೆ ಮುಡಿ ಕಳ್ಸೆ ...	3—7	3—7
ಎಳ್ಳೆಣ್ಣೆ ಮುಡಿ ಕಳ್ಸೆ ,	6—0	7—0
ಚಿಮಿಣಿ ಎಣ್ಣೆ ಪೆಟ್ಟಿಗೆ ಕಳ್ಸೆ ..	6—5	7—5
ಮೋರಿಸ ಸಕ್ಕರೆ ಮು. ಕಳ್ಸೆ ..	2—13	2—14
ಮೆಣಸು ..	4—8	6—0
ಸಾಸಿವೆ ಮುಡಿ ಕಳ್ಸೆ	5—8	6—8
ಕಾಳುಮೆಣಸು ಹ ವೇ.ಗೆ ...	16—0	17—8
ಯೇಲಕ್ಕಿ ಬೀಜ ಮಣ ಕಳ್ಸೆ .	80—0	85—0
ಗೇರುಬೀಜ ಮಣ ಕಳ್ಸೆ .	3—14	3—15
ಕಬ್ಬಿಣ ಖಂಡಿ ಕಳ್ಸೆ ..	50—0	55—0
ತಾಂಬ್ರ ತಗಡು ಮ ಕಳ್ಸೆ	14—12	15—0
ತಾಂಬ್ರ ಪಾತ್ರೆಗಳು ಮ ಕಳ್ಸೆ	14—8	15—0
ಚೀನಿಬೆಳ್ಳಿ ಸೇರು ಕಳ್ಸೆ .	13—8	14—0
ಹಿತ್ತಾಳೆ ತಗಡು ಮ ಕಳ್ಸೆ	12—0	12—0
ಪವನು ಕಳ್ಸೆ	22—8	23—0
ಹುಣಿಸೆ ಹುಳಿ ಖಂಡಿ ಕಳ್ಸೆ	40—0	45—8
ನೇಟಿವ್ ಕಾಫಿ ಖಂಡಿ ಕಳ್ಸೆ	140—0	148—0
ಪ್ಲಟೇರಿ ಕಾಫಿ ಖಂಡಿ ಕಳ್ಸೆ	185—0	198—0
ಮಡಿಕೇರಿ ಏಲಕ್ಕಿ ಮಣ	35—0	39—0

ಡೋಂಗರೇ ಬಾಲಾಮೃತ

ಇದರಿಂದ

ಸೊರಗಿ ಕಡ್ಡಿಯಂತಾದ ಮಕ್ಕಳು

ಆರೋಗ್ಯ ಹೊಂದಿ

ದೃಢಕಾಯರೂ ಪುಷ್ಟರೂ ಆಗುತ್ತಾರೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಜಗತ್ಪ್ರಸಿದ್ಧ ಆಯುರ್ವೇದೀಯ ಔಷಧಗಳು.

ಶ್ರೀಕರ ಕಸ್ತೂರಿ ಮಾತ್ರೆ

ಮಕ್ಕಳಿಗೆ ಸಂಜೀವನ, ಯುವಕರಿಗೆ ಮಿತ್ರ, ವೃದ್ಧರಿಗೆ ಆರೋಗ್ಯಪ್ರದ. ಘಮ ಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ದೇಶಗಳಲ್ಲೂ, ಎಲ್ಲಾ ಋತುಗಳಲ್ಲೂ ಶರೀರವನ್ನು ರಕ್ಷಿಸುತ್ತದೆ ಅಜೀರ್ಣವನ್ನು ಪರಿಹರಿಸುತ್ತದೆ. ಸೊಂಕುರೋಗಗಳನ್ನು ನಿವಾರಣೆ ಮಾಡುತ್ತದೆ ಆಬಾಲವೃದ್ಧರಿಗೂ ಕೆಮ್ಮು, ವಿಧವಿಧ ಜ್ವರ, ನೆಗಡಿ, ಹಲ್ಲುನೋವು, ಉಬ್ಬಸ, ಅರೋಚಕ, ಆಲಸ್ಯ ಮುಂತಾದ ಶೀತವಾತದಿಂದುಂಟಾಗುವ ಸಮಸ್ತ ರೋಗಗಳನ್ನೂ ಜಾಗ್ರತೆ ಗುಣಪಡಿಸುತ್ತದೆ ಬಾಣಂತಿಯರಿಗೆ ಅಮೃತತುಲ್ಯವಾದುದು ಎಲ್ಲಾ ಕಾಲದಲ್ಲೂ ನಿಮ್ಮನ್ನು ಕಾಪಾಡುವುದು ಬೆಲೆ —2 ಮತ್ತು 4 ಆಣೆ

ಬಾಲಸಂಜೀವಿನಿ

ಈ ಅಮೃತವು ಮಕ್ಕಳಿರುವ ಮನೆಯಲ್ಲಿ ಸರ್ವದಾ ಇರಬೇಕಾದುದು 1 ವರ್ಷದ ಲಾಗಾಯಿತು 10 ವರ್ಷದ ವರೆವಿಗೆ ಉಪಯೋಗಿಸಬಹುದು 1-2 ಮಾತ್ರೆಗಳನ್ನು ವಯೋಗುಣವಾಗಿ ಆಗಾಗ್ಯೆ ಉಪಯೋಗಿಸಿದರೆ ಸುಖವಾಗಿ 2-3 ವೇಳೆ ಭೇದಿಯಾಗಿ ಮಕ್ಕಳಿಗೆ ಯಾವ ರೋಗವೂ ಬರಲಾರದು. ಅಸಾಧ್ಯವಾದ ಪಕ್ಕೆ ಶೀತ ವಿಧವಿಧ ವಾಯು, (Convulsions and fits), ಹೊಟ್ಟೆಯುಬ್ಬರ, ಮಂದಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ಮಲಬಂಧಗಳಲ್ಲಿ ಒಂದು ಹೊತ್ತಿನ ಔಷಧದಿಂದಲೇ ಅದ್ಭುತ ಗುಣವು ತೋರುವುದು. 50 ಮಾತ್ರೆ 4 ಆಣೆ

ಗೋರೋಚನ ಮಾತ್ರೆ

ಈಗ ಹುಟ್ಟಿದ ಮಗುವಿನಿಂದ ಐದು ವರ್ಷಗಳ ವರೆವಿಗೆ ಉಪಯೋಗಿಸಬಹುದು ಬಹಳ ಸೂಕ್ಷ್ಮ ಪ್ರಕೃತಿಯುಳ್ಳ ಮಕ್ಕಳಿಗೆ ಸುಖವಾಗಿ 1-2 ವೇಳೆ ಮಾತ್ರ ಭೇದ ಮಾಡಿಸುವುದರಲ್ಲಿ ಈ ಮಾತ್ರೆಗಳು ಕೈಗೊಂಡ ಸಿದ್ಧಾಮೃತ ಯಾವ ಮಕ್ಕಳಿಗೆ ಗೋರೋಚನ ಮಾತ್ರೆಯಿಂದ ಭೇದಿಯಾಗುವುದಿಲ್ಲವೋ ಅಂಥಾ ಮಕ್ಕಳಿಗೆ 'ಬಾಲಸಂಜೀವಿನಿ ಮಾತ್ರೆ'ಯನ್ನು ಉಪಯೋಗಿಸಬಹುದು 24 ಮಾತ್ರೆ 6 ಆಣೆ

ಜ್ವರ ಕೇಸರಿ

ಸಮಸ್ತ ವಿಧವಾದ ಛಳಿಜ್ವರ, ಮಲೇರಿಯಾಜ್ವರ, ಪ್ಲೇಗುಜ್ವರ, ಇನ್‌ಫ್ಲುಯೆನ್‌ಜಾಜ್ವರ, ವಾಯಿದೇ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ —8 ಆಣೆ

ಆಮೋದಿನಿ

ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳು 25 ವರ್ಷಗಳಿಂದಲೂ ಜನರ ಪ್ರೀತಿಯನ್ನು ಸಂಪಾದಿಸಿರುವುದು. ಸಂಗೀತಗಾರರಿಗೆ ಸುಖವಾಗಿ ಹಾಡಲು ವಿಶೇಷ ಸಹಾಯ ಮಾಡುವುದು ಬಾಯಾರಿಕೆಯನ್ನು ಶಮನಮಾಡುವುದು ಸೊಂಕು ರೋಗಗಳು ಶರೀರಕ್ಕೆ ಅಂಟದಂತೆ ಶರೀರವನ್ನು ಕಾಪಾಡುವುದು ಮಕ್ಕಳ ಮತ್ತು ದೊಡ್ಡವರ ಕೆಮ್ಮನ್ನು ತಕ್ಷಣ ಪರಿಹರಿಸುವುದು ಆಬಾಲವೃದ್ಧರಾ ಪ್ರೀತಿಯಿಂದ ಸೇವಿಸಲು ಅರ್ಹವಾಗಿದೆ ಬೆಲೆ -0—4—0, 0—2—0

ನಮ್ಮ ನಂಜನಗೂಡು ಸದ್ವೈದ್ಯಶಾಲಾದಲ್ಲಿ ತಯಾರಾಗುವುದೇ "ನಂಜನಗೂಡು ಟೂತ್-ಪೌಡರ್" ಎಂಬುದು ಜ್ಞಾಪಕದಲ್ಲಿರಲಿ ನಕ್ಕಲ್ ಮಾಲುಗಳನ್ನು ಕೊಂಡು ಮೋಸಹೋಗಬೇಡಿರಿ, ಕ್ಯಾಟಲಾಗನ್ನು ಬರೆದು ತರಿಸಿರಿ

ಸದ್ವೈದ್ಯಶಾಲಾ, ನಂಜನಗೂಡು.

ಶಾಲಿವಾಹನ ಶಕ ೧೮೬೦ನೆಯ ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಶು ೫ ಶನಿವಾರದಿಂದ, ಜ್ಯೇಷ್ಠ ಶು ೧೧ ಶುಕ್ರವಾರದ ವರೆಗಿನ ಪಂಚಾಂಗ ([illegible] ವೃಷಭ ಮಾಸ)

ದಿ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ದಿನ	ವಿಶೇಷ
4	ಶನಿ	೫	೫೧॥	ಮಘಾ	೪೭।	೨೧	[illegible]
5	ರವಿ	೬	೪೨	ಪುಬ್ಬಾ	೪೫॥	೨೨	
6	ಸೋಮ	೭	೪೫॥	ಉತ್ತರಾ	೪೪	೨೩	
7	ಕುಜ	೮	೪೩॥	ಹಸ್ತಾ	೪೫	೨೪	
8	ಬುಧ	೯	೪೩।	ಚಿತ್ರಾ	೪೬।	೨೫	
9	ಗುರು	೧೦	೪೪।	ಸ್ವಾತೀ	೪೮॥	೨೬	
10	ಶುಕ್ರ	೧೧	೪೬।	ವಿಶಾಖಾ	೫೨।	೨೭	

THE PIE-MONEY BANK LTD,

Maidan Road, MANGALORE

Undertakes all kinds of Banking Business. Current account at 2½%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ toRs 5000/ run regularly on systematic lines. Unique Banking facilities to Businessmen and interested Public

Apply for particulars-K R. GURU, *Managing Director*

Use the soaps

KNOWN ALL OVER

WISICO'S.

MINAR

&

TAJAMAHAL 'Red'

Bar Soaps.

POPULAR IN THE MARKET

Sole Distributer-

P. G. KAMATH,

Kashmir House,

Marnamikatta, MANGALORE.

'DILROZ' Red g

'Dil Roz' is a sure cure for Oriental sores, local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary Abscess

There is no need of dressing the wounds, nor are baths prohibited

Price Rs. 2 Postage extra.

TAHIR DIN,

Anarkali, LAHORE.

THE

Bank of Mangalore Ltd.,

MANGALORE.

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months		3½%
"	6 "		4%
"	12 "		5%
"	24 "	& upwards	5½%

Interest Payable Quarterly

Saving Bank deposit 3½% ***on daily balances.***

All kinds of banking business transacted

ಅಹಿಂಸಾ ನೀತಿಯೇ ಶ್ರೇಷ್ಠವೆಂದು ಬ್ರಿಟಿಷ ಬಿಶೋಪರ ಹಿತಬೋಧನೆ

ಇಂಗ್ಲಾಂಡಿನ ಬರವಿಂಗ್ ಹೇಮಿನ ಬಿಶೋಪರಾದ ಡಾ| ಬಾರ್ನೆಸ್ಸರು, ವೆಸ್ಟ್ ಮಿನಿಸ್ಟರ್ ಇಗರ್ಜಿಯಲ್ಲಿ ಸರ್ಮನ್ ಭಾಷಣ ಮಾಡುತ್ತಾ, ಜಗತ್ತಿನಲ್ಲಿ ಚಿರಸ್ಥಾಯಿಯಾದ ಶಾಂತಿಯು ನೆಲೆಯಾಗಲು, ಅಹಿಂಸಾ ನೀತಿಯು ಮಹತ್ವದ ಒಂದೆ ಹಿಂದಾದ ಅನುಕೂಲವೆಂಬ ತಮ್ಮ ಅಭಿಪ್ರಾಯವನ್ನು ಸೂಚಿಸಿದರು

ಜಗತ್ತಿನ ಇಂದಿನ ಅಶಾಂತಿಯ ಕುರಿತು ಅವರು ಭಾಷಣವೀಯುತ್ತಿದ್ದರು ಅವರ ಭಾಷಣದ ಅಭಿಪ್ರಾಯವು ಹೀಗಿತ್ತು.

ಹಿಂಸೆಯಿಂದ ಕೊನೆಗೆ ಸೋಲೆ ದೊರಕುವುದೆಂದು, ಚರಿತ್ರೆಯಿಂದ ನಮಗೆ ಸಾರವಾಗಿ ದೊರೆತ್ತದೆ. ಕೊನೆಗೆ ಜಯವು ಲಭಿಸುವುದು. ಸಿಂಗೆ ಮತ್ತು ಸಂಗ್ರಾಮಿಕರಿಗಲ್ಲಿ ಅದು ತ್ಯಾಗಮೂರ್ತಿಗಳಿಗೆ, ಒಳ್ಳೆ ಜನರಿಗೆ ಸಲ್ಲುವುದು.

ಮಹಾಯುದ್ಧವು ನಡೆದುಬಿಟ್ಟರೆ ಆಗ, ಆಗ, ಈಗಿನ ಸ್ಥಿತಿಗೆ ಕಾರಣರಾದ ಯಾವ ನಾಯಕರೂ ಉಳಿಯರು ಆದರೆ ಈ ಯುದ್ಧದ ದೆಸೆಯಿಂದ ಎಲ್ಲಾ ಜನಾಂಗಗಳ ನೀತಿಭಾವವು ಕೆಟ್ಟು ಹೋಗಿ, ಕಡೆಗೆ ನಮ್ಮ ನವನಾಗರೀಕತೆಯು ಮಾಯವಾಗಿ, ಬರ್ಬರತೆಯು ತಲೆದೋರುವುದು.

'ಮುಯ್ಯಿಗೆ ಮುಯ್ಯಿ' ಎಂಬ ಸೂತ್ರವು ಎಂದಿಗೂ ಯೋಗ್ಯವಾದುದಲ್ಲ ಕ್ರಿಸ್ತನ ಬೋಧನೆಗೆ ನೀವು ಮಾನ ಕೊಡುವುದಾದರೆ ಕೊಲ್ಲುವ ಬದಲಾಗಿ ನೀವು ಕೊಲ್ಲಲ್ಪಡಲು ಸಿದ್ಧರಾಗಿರಬೇಕು. ಯಾವಾತನು ಒಂದು ಒಳ್ಳೆತನಕ್ಕಾಗಿ ವಿರೋಧವಿಲ್ಲದೆ ಹಿಂಸೆಯನ್ನು ಅನುಭವಿಸುವನೊ, ಅತನು ನ್ಯಾಯದ ಮತ್ತು ದೇವರ ಸೇವೆ ಮಾಡಿದಂತಾಗುವುದು.

ಈ ನೀತಿಯನ್ನು ಗಣ್ಯ ಮಾಡುವ ಜನಾಂಗಗಳು ಕಡಿಮೆ. ಕಾರಣ ಅದರಿಂದಾಗುವ ಸದ್ಯದ ಕಷ್ಟಗಳಿಗೆ ಅವರು ಸಿದ್ಧರಿಲ್ಲ ಆದರೆ ಯಾವದಾದರೊಂದು ಜನಾಂಗವು ತ್ಯಾಗಬುದ್ಧಿಯನ್ನು ತೋರಿಸಿ, ಈ ವಿಧದಲ್ಲಿ ಮಾರ್ಗದರ್ಶಕವಾದರೆ, ಆಗ ಅಹಿಂಸೆಯ ಮಹತ್ವವು ಅವರಿಗೆ ತಿಳಿಯುವುದು.

S. U. N. & Co.,

Silk Merchants,

Chaukhamba BENARES CITY

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ ಈಗ ಕಡ ತುಂಬಾ ಸುಲಭ ಬೆಲೆ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟ ಶೀರೆಗಳು ರೂ 35ರಿಂದ ರೂ 55 ವಡಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2¼ ರೂ 20ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು,

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನರಿಸ್ ಸಿಟಿ.

ಎಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ, ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

ಲಿಮ್ಡಾ ಸೋಪು ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ ಕಲ್ಲಿಕೋಟೆ-ಬೋಂಬಾಯಿ&ಮದ್ರಾಸು

ಒದಗಿಸಿಕೊಡುವವರು—

ಸೇಠ್ ನಾಗಜೀ ಪುರುಷೋತ್ತುಮ ಕಂಪೆನಿ,
ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd I wish the same every success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**
Minister of Labour

4-10-1937

Bhuvanendra Products Ltd, Katapady, S. Kanara

ಮದನಕಾಮೇಶ್ವರಿ ಲೇಹ.



ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ,
P. O. Peridepi (ನೆಲ್ಲೂರು ಡಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಅದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದು. ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರವಾದಿ ಔಷದ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮಾಹಿದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ. ಅಣೆ ೮

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜೆ, (S. M. C.)

The

Agricultural & Industrial Bank, Ltd.,

(Incorporated in British India)

Head Office LAXMINIVAS BUILDINGS *Coondapoor*

BRANCHES

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS 10 25 50 100 250 500 & 1000	Current Deposits From January to June 2% and From July to December 1% Savings Bank Deposits 3½ per cent per annum
REDEEMABLE AT ANY TIME CUMULATIVE DEPOSITS ARE ACCEPTED	Fixed Deposits for 6 Months 3½% 1 Year 4% 2 Years & above 4½

For Further Particulars Apply to—

HEAD OFFICE or BRANCHES

Buy Advertised Goods

DRINK

Delicious

WATERFALL

AND

PYKARA TEAS.

unrivlled for Taste & Aroma.

ಅತ್ಯುತ್ತಮವಾದ

ವಾಟರ್ ಫೋಲ್

ಮತ್ತು

ಪ್ಯಾಕರಾ ಚಹಾವನ್ನು

ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ

Distributors

Panchmal Krishnaya Shenoi & Son,
Bunder, Mangalore

USE

365 BAR SOAPS

SOLD

EVERYWHERE.

**
**

Sole Agent:

PANCHMAL KRISHNAYA SHENOI & SON,

Bunder, MANGALORE

ವಾಯುವೇಗದಿಂದ ಓಡುವ ಅದ್ಭುತ ವಾಹನ.

ಕೆಲವು ಸಮಯದಿಂದ ಯೂರೋಪ ಅಮೇರಿಕಗಳ ಕೆಲವು ಪ್ರಧಾನ ಶಹರುಗಳಲ್ಲಿ ಒಂದು ಅದ್ಭುತ ವಾಹನದ ಪ್ರತಿಕೃತಿಯು ಪ್ರದರ್ಶನವಾಗುತ್ತಲಿದೆ. ಅದನ್ನು ನೋಡಿದವರು, ಆಶ್ಚರ್ಯದಿಂದ ಬೆರಳು ಕಚ್ಚಿರುವರು ನೋಡಲಿಕ್ಕೆ ಅದು ಮಕ್ಕಳು ಕೈಗೆ ತೆಗೆದುಕೊಂಡು ಆಡುವ ಆಟದ ರೈಲ್ವೆಯಂತೆ ಇದೆ ಮಕ್ಕಳು ಅದನ್ನು ತಮ್ಮ ಬಳಿ ಇಟ್ಟುಕೊಳ್ಳಲಿಕ್ಕೆ ಬಹಳ ಸಂತೋಷಿಸಬಹುದು ಆದರೆ ಮಕ್ಕಳ ಆಟದ ರೈಲ್ವೆಗಿಂತ ಅದು ವಿಚಿತ್ರ ಪ್ರಕಾರದ್ದಾಗಿದೆ. ನೆಲದಿಂದ ಸುಮಾರು ಎಂಟಡಿ ಎತ್ತರಕ್ಕೆ ಕೆಲವು ಗೂಟಗಳನ್ನು ಎರಡು ಸಾಲಾಗಿ ನಟ್ಟು ಅದರ ಮೇಲೆ ಎರಡು ಸಾಲುಗಳಲ್ಲಿ ಉದ್ದಕ್ಕೆ ಕಂಬಿಗಳನ್ನು ಹಾಕಿದ್ದಾರೆ ಆ ಕಂಬಿಗಳ ಮೇಲೆ ಝೇಪೆಲಿನ ಆಕಾರದ ಒಂದು ಬಂಡಿಯು ಓಡಾಡುತ್ತದೆ ವಾಯು ವಿಮಾನಕ್ಕಿರುವಂತೆ ಅದಕ್ಕೂ ಅಲಗುಗಳಿವೆ ವಿದ್ಯುಚ್ಛಕ್ತಿಯಿಂದ ಅಲಗುಗಳು ತಿರುಗಿ ಬಂಡಿಯು ಕಂಬಿಗಳ ಮೇಲೆ ವಾಯುವೇಗದಿಂದ ಓಡುವದು ನೆಲದಿಂದ ಎತ್ತರಕ್ಕೆ ಅಂತರಿಕ್ಷದಲ್ಲಿ ಉಕ್ಕಿನ ಕಂಬಿಗಳ ಮೇಲೆ ಓಡುವ ಬಂಡಿಯಾಗಿದ್ದು, ರೈಲನ್ನೂ ವಿಮಾನವನ್ನೂ ಕೆಲ ಕೆಲವು ಅಂಶಗಳಲ್ಲಿ ಹೋಲುತ್ತಿರುವದರಿಂದ ಈ ಅದ್ಭುತ ವಾಹನಕ್ಕೆ 'ರೈಲು ಪ್ಲೇನು' ಎಂದು ಹೆಸರಿಟ್ಟಿದ್ದಾರೆ

ಮಕ್ಕಳು ತಮ್ಮ ಪ್ರೀತಿಯ ಆಟದ ಸಾಮಾನುಗಳನ್ನು ನೋಡುವದಕ್ಕಿಂತಲೂ ಹೆಚ್ಚಿನ ಲಕ್ಷ್ಯಕೊಟ್ಟು ಜಗತ್ತಿನ ದೊಡ್ಡ ದೊಡ್ಡ [illegible]ದವಾಳಿಗರು ಎಂಜಿನಿಯರು ಕೈಗಾರಿಕೆಗಳಲ್ಲಿ ತೊಡಗಿರುವ ಇತರ ಜನರು ಇಂದು ಅದನ್ನು ನೋಡಲಾರಂಭಿಸಿದ್ದಾರೆ ಬಹಳ ಮಂದಿಗಳು ಈ ಹೊಸ ಆವಿಷ್ಕಾರ ಮಾಡಿದವನನ್ನು ಮುಕ್ತಕಂಠದಿಂದ ಹೊಗಳಿದ್ದಾರೆ ಅವನ ಬುದ್ಧಿಚಾತುರ್ಯಕ್ಕೆ ತಲೆದೂಗಿದ್ದಾರೆ. ಆದರೆ ಕೆಲವರ ಎದೆಗಳಲ್ಲಿ ಮಾತ್ರ ಅವಲಕ್ಕಿ ಕುಟ್ಟಲಿಕ್ಕೆ ಆರಂಭವಾಗಿದೆ ಇದೊಂದು ವಾಹನವು ಪ್ರಚಾರಕ್ಕೆ ಬಂದುಬಿಟ್ಟರೆ ತಮ್ಮ ಹಣ ಕಾಸು ವ್ಯಕ್ತಿ ಉದ್ಯೋಗ ಎಲ್ಲಾ ಮುಳುಗಿ ಹೋಗುವದೆಂಬ ಚಿಂತೆ ಅವರನ್ನು ಪ್ರಬಲವಾಗಿ ಪೀಡಿಸತೊಡಗಿದೆ ಮುಂದೆ ನೆಲದ ಮೇಲೆ ಹಾಕಿದ್ದ ರೈಲು ಕಂಬಿಗಳು ಅವುಗಳ ಮೇಲೆ ಓಡಾಡುವ ರೈಲ್ವೆ ಬಂಡಿಗಳು. ಅವುಗಳ ರಚನೆಯಲ್ಲಿ ತೊಡಗಿರುವ ಯಂತ್ರೋಪಕರಣಗಳು ಎಲ್ಲಾ ತಿಪ್ಪೆರಾಶಿಯನ್ನು ಸೇರಬಹುದೆಂಬ ಭಯವು ಆ ಕೆಲವರನ್ನು ಅಂಟಿದೆ ಆದ್ದರಿಂದ ಅವರು ಈ ಹೊಸ ಆವಿಷ್ಕಾರವು ಜನತೆಯ ಗಮನಕ್ಕೆ ಬಾರದಂತೆ, ತನುಮಧನಗಳಿಂದ, ಸಾಮಧಾನ ಭೇದದಂಡೋಪಾಯಗಳಿಂದ ಭಗೀರಥ ಪ್ರಯತ್ನ ಮಾಡುತಿದ್ದಾರೆ ಪರಂತು 'ರೈಲು ಪ್ಲೇನು' ಮಾತ್ರ ಗಡಗಡ ಓಡಿ ಪ್ರಪಂಚ ಯಾತ್ರೆಯನ್ನು ಮುಗಿಸುತ್ತ ಬಂದಿದೆ

ಕಳೆದ ಹತ್ತು ವರ್ಷಗಳಿಂದ ಈ ಹೊಸ ವಾಹನದ ಆವಿಷ್ಕಾರವನ್ನು ಮಾಡಿದವನು, ಅದರ ಕುಂದು ಕೊರತೆಗಳನ್ನು ದೂರ ಮಾಡಲಿಕ್ಕೂ, ರೈಲ್ವೆ, ಎಣ್ಣೆ, ವಿದ್ಯುಚ್ಛಕ್ತಿ ಉದ್ಯೋಗದಲ್ಲಿ ತೊಡಗಿದ್ದವರ ಆಕ್ರಮಣಗಳನ್ನು ತಡೆಯಲಿಕ್ಕೆ ಹೆಣಗಾಡಿದ್ದಾರೆ ಅವರ ದೀರ್ಘಕಾಲದ ಸತತ ಪರಿಶ್ರಮದ ಫಲವಾಗಿ ಜನತೆಯ ಮತ್ತು ಕೆಲವು ದೇಶಗಳ ಸರಕಾರದ ಸಹಾನುಭೂತಿಯು ಪ್ರಾಪ್ತವಾಗಿದೆ ಸಹಾಯ ಪ್ರೋತ್ಸಾಹಗಳ ಭರವಸೆಯು ಅವರಿಗೆ ದೊರೆತಿದೆ

ಸ್ಕಾಟ್ಲೆಂಡಿನಲ್ಲಿ ಮೊದಲು ರೈಲು ಪ್ಲೇನಿನ ಪರೀಕ್ಷೆ ನಡೆಯಿತು ಲಂಡನ ಮತ್ತು [illegible] ರೈಲ್ವೆಯ ದಾರಿಯ ಮೇಲೆಯೇ ಸ್ವಲ್ಪ ದೂರದ ತನಕ ಗೂಟಗಳನ್ನು ನಟ್ಟು ಕಂಬಿಗಳನ್ನು ಹಾಕಿ ಆ ವಿಚಿತ್ರ ವಾಹನವನ್ನು ಓಡಿಸಿದರು ಆ ಅದ್ಭುತ [illegible] ನೆರೆದಿದ್ದರು [illegible] ಓಡುತ್ತಿದ್ದ ಎಕ್ಸ್‌ಪ್ರೆಸ್ [illegible] ರೈಲು ಪ್ಲೇನು [illegible] ಓಡಿ [illegible]) ಹೋಯಿತು ಇನ್ನು ಮುಂದೆ ಎಕ್ಸ್‌ಪ್ರೆಸ್ ಟ್ರೇನುಗಳನ್ನು ಸಾಮಾನು ಸಾಗಿಸಲಿಕ್ಕೆ ಮಾತ್ರ ಉಪಯೋಗಿಸಬಹುದೆಂದು ಜನರು ವೇಗದ ಸಂಚಾರಕ್ಕೆ ಬಹಳ [illegible] ರೈಲು ಪ್ಲೇನುಗಳನ್ನೇ ಉಪಯೋಗಿಸಬಹುದೆಂದು ಜನರು ಸಿದ್ಧಾಂತ ಮಾಡಿಕೊಂಡರು.

ಬ್ರೇಜಿಲಿನಲ್ಲಿ ಈಗ ರೈಲು ಪ್ಲೇನುಗಳನ್ನು ಪ್ರಚಾರಕ್ಕೆ ತರುವ ಪ್ರಥಮ ಪ್ರಯತ್ನಗಳು ನಡೆಯುತ್ತಿವೆ ಅಲ್ಲಿಯ ಸರಕಾರವು ರೈಲು ಪ್ಲೇನುಗಳ ಕಂಪನಿಯವರಿಗೆ, ಹೊಸ ದಾರಿಗಳನ್ನು ಹಾಕಲಿಕ್ಕೆ ಅನೇಕ ರಿಯಾಯಿತಿಗಳನ್ನು ಕೊಟ್ಟಿರುತ್ತಾರೆ ಅಲ್ಲಿ ರೈಲ್ವೆಗಳಿಗೂ, ರೈಲು ಪ್ಲೇನುಗಳಿಗೂ ಸ್ಪರ್ಧೆ ಬೇಡವೆಂದು ಆಲೋಚಿಸಿದ್ದಾರೆ ವೇಗದ ಸಂಚಾರಕ್ಕೆ ಟಪಾಲು ಒಯ್ಯಲಿಕ್ಕೆ ಕ್ಷಿಪ್ರದಲ್ಲಿ ಹಾಳಾಗುವ ಸಾಮಾನುಗಳನ್ನು ಸಾಗಿಸಲಿಕ್ಕೆ ರೈಲು ಪ್ಲೇನುಗಳನ್ನೂ, ಸಾಮಾನ್ಯ ಸಂಚಾರಕ್ಕೂ, ಸಾಮಾನು ಸಾಗಿಸಲಿಕ್ಕೂ ರೈಲ್ವೆ ಟ್ರೇನುಗಳನ್ನೂ ಉಪಯೋಗಿಸುವದೆಂದು ನಿರ್ಧರಿಸಿದ್ದಾರೆ ರೈಲು ಪ್ಲೇನುಗಳ ದಾರಿಗಳನ್ನು ಕೂಡ, ರೈಲ್ವೆಗಳ ಮೇಲೆಯೇ ಗೂಟ ನಟ್ಟು ಕಟ್ಟುವದೆಂದು ನಿರ್ಣಯಿಸಿದ್ದಾರೆ ಹೀಗೆ ಎಲ್ಲಾ ಕಡೆಗಳಲ್ಲಿಯೂ ಮಾಡಿದರೆ, [illegible] ರೈಲ್ವೆ ಟ್ರೇನುಗಳ ಮತ್ತು ತತ್ಸಂಬಂಧ ಇತರ ಉದ್ಯೋಗಗಳಲ್ಲಿ ತೊಡಗಿರುವರು ವಿಶೇಷ ನಷ್ಟಪಡುವ ಸಂಭವವಿರುವದಿಲ್ಲ

ರೈಲು ಪ್ಲೇನು ಆಕಾರದಲ್ಲಿ ಟಾರ್ಪೆಡೊವಿನಂತೆ ಇದೆ ಒಂದು ಬಾಗಿಲು ಹತ್ತು ಕಿಟಕಿಗಳಿವೆ ಎರಡು ಅಂಗಗಳು—ಒಂದು ಹಿಂದೆ ಒಂದು ಮುಂದೆ ಇರುತ್ತವೆ ಸ್ಟೇಶನಿಗೆ ಕಾಲಿಟ್ಟೊಡನೆಯೇ [illegible] ತೆರೆಯುತ್ತದೆ [illegible] ಒಂದು [illegible] ವೇಗದ [illegible] ಇರುವ [illegible] [illegible] ಯಾವದೇ ಕಾರಣದಿಂದ [illegible] ಸಂಭವಿಸಬಹುದಾದ [illegible] ನಿವಾರಿಸಲಿಕ್ಕೆ ತಕ್ಕ ಯೋಜನೆಗಳು ರೈಲು ಪ್ಲೇನಿನಲ್ಲಿ ಇರುತ್ತವೆ. ಅದರಲ್ಲಿರುವ ಒಂದು ಗುಬ್ಬಿಯನ್ನು ಒತ್ತಿದರೆ ಆಪತ್ಕಾಲದಲ್ಲಿ ರೈಲು ಪ್ಲೇನು ನಿಲ್ಲುವದು ಮಾತ್ರವಲ್ಲ, ಆ ಕಾಲವು ಕಳೆದ ಬಳಿಕ ಬಂಡಿಯು ತನ್ನಷ್ಟಕ್ಕೆ ಹೊರಟು ಹೋಗುವಂತೆಯೂ ಮಾಡುತ್ತದೆ.

ದೂರದಿಂದ ನೋಡುವಾಗ ರೈಲುಪ್ಲೇನು, ಗುರಿಯಾಗುತ್ತ ಹಾರಿಹೋಗುವ [illegible]ಬಾಣದಂತೆ ತೋರುತ್ತದೆ ಅದು ಹೋಗುವಾಗ ಕಂಬಿಗಳ ಸಂದುಗಳಲ್ಲಿ ಬೆಂಕಿಯ ಕಿಡಿಗಳು ಹಾರಿ ರೋಮಾಂಚನವಾಗುವದು ಅದರ ಕೆಳಗೆ ಓಡುವ ಎಕ್ಸ್‌ಪ್ರೆಸ್ ಟ್ರೇನುಗಳು ಹರಿದಾಡುವ ಕಂಬಳಿ ಹುಳುಗಳಂತೆ ಭಾಸವಾಗುತ್ತವೆ ಈಗ ಈ' ರೈಲು ಪ್ಲೇನುಗಳಿಗೆ ತಾಸಿಗೆ 126 ಮೈಲುಗಳ ವೇಗವಿದೆ, ಆದರೆ ಅದರಲ್ಲಿರುವ ಕೆಲವು ಕೊರತೆಗಳನ್ನು ದೂರ ಮಾಡಿ ಸಂಪಡಿಸಿದಾಗ ಆ ವೇಗವು ತಾಸಿಗೆ 188 ಮೈಲುಗಳ ತನಕ ಏರಬಹುದೆಂದು ಎಣಿಸಲಾಗಿದೆ ಅಂದರೆ ಒಂದು ಘಂಟೆಯ ಕಾಲದೊಳಗೆ ದಕ್ಷಿಣ ಕನ್ನಡದ ಸಮುದ್ರಕರಾವಳಿಯ ಉದ್ದಕ್ಕು ಸಂಚಾರ ಮಾಡಿರಬಹುದು! ನಿಮಗೆ ಆಶ್ಚರ್ಯ ಕಾಣುವದಿಲ್ಲವೆ?

"ಊ—ಎಟ್—ಇನ್"

ರಸ್ತೆಗಳ ಹೆಸರಲ್ಲಿ ಒದಲಾವಣೆ

ದಂಗೆಕೋರ ಸ್ಪೇಯಿನಲ್ಲಿ

ಅರ್ಧ ಸ್ಪೆಯಿನ್ ದೇಶವು ಈಗ ದಂಗೆ[illegible] [illegible] ವಶವಾಗಿರುವದಷ್ಟೆ ದಂಗೆಖೋರ ಪ್ರದೇಶದ [illegible] [illegible]ಗಳಿಗೆ ಈ ಮೊದಲಿನ ಹೆಸರುಗಳನ್ನು ಬದಲಾಯಿಸಿ ಹೊಸ [illegible] [illegible]ಗಿದೆ

[illegible] ಭಾಗಗಳಾದ ವೀರರ ಹೆಸರು [illegible] ಹೊಸ [illegible] ಕರಣವಾಗುವದಂತೆ.

The Bombay Life Assurance Company, Ltd.

ESTD: 1908

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,16,58,706
1930	59,97,500	9,83,367	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances Family Safe Guard Policy a special feature
Application for agencies will be received from honest and respectable gentlemen
Organisers appointed with pay and allowance
Gentlemen with organising ability and who can guarantee Business need apply

Kochikar Brothers, Ltd.,
(Incorporating Messrs Kochikar Brothers),
Madras Branch Secretaries.
Post Box 337, Mount Road, MADRAS
Phone No. 8245.

Apply to any of the following Offices:-

Ottapalam	Central Station Road, Trivandrum.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No 4

ಈ ವಾರದ ಗ್ರಹಗತಿಗಳ ಸಂಕ್ಷಿಪ್ತ ಫಲ

[ಈ ಶುಕ್ರವಾರದಿಂದ ಬರುವ ಶುಕ್ರವಾರದ ವರೇಗೆ]

(ನಮ್ಮ ಸ್ವಂತ ಜೋಯಿಸರಿಂದ)

[illegible] ಸೂಚನೆಗಳು —

[illegible] ಗೋಚರ ಫಲವು ಗ್ರಹಗತಿಗಳಿಂದ ಮಾನವನಲ್ಲಿ ಆಕರ್ಷಣೀಯಕವಾಗಿ ಸಹಜಾವಸ್ಥೆಯಿಂದ ಉಂಟಾಗತಕ್ಕ ಲಾಭ, ನಷ್ಟ, ದೋಷ, ಕೇಡು, ಸುಖ, ದುಃಖ, ಸಂತೋಷ, ಅಸಂತೋಷಗಳ ಕುರಿತು ಶಾಸ್ತ್ರರೀತಿಯಿಂದ ಗ್ರಹಚಾರವನ್ನರಿತು ಬರೆದುದಾಗಿರುತ್ತದೆ. ಸಾಮಾನ್ಯವಾಗಿ ಅದು ಎಲ್ಲರಿಗೂ ಒಂದೇ ರೀತಿಯಾಗಿ ಬರೆಯಲ್ಪಟ್ಟಿರುವುದಾದರೂ, ಎಲ್ಲರಿಗೂ ಅದು ಸರಿಸಮಾನವಾಗಿ ಆಕರ್ಷಕವಾಗಲಾರದು. ಅದು ಪ್ರತೀ ಒಬ್ಬನ ಜನನಾವಸ್ಥೆಯ ಮೇಲೆ ಹೊಂದಿಕೊಂಡಿರುವುದು. ಜನನ ಕಾಲದ ಗ್ರಹ ಬಲಾಬಲಗಳನ್ನು ಹೊಂದಿಕೊಂಡಿದ್ದು, ಆ ಬಲಾಬಲಗಳ ತ್ರೈರಾಶಿಕ ಪ್ರಮಾಣವಾಗಿ ಅದು ಬಾಂಧವ್ಯವನ್ನು ಸೂಚಿಸುವುದು. ಆದುದರಿಂದ ಇದರ ಅನುಸರಣೆಯುಳ್ಳವರು ತಮ್ಮ ತಮ್ಮ ಜಾತಕಗಳ ಲಗ್ನ, ಚಂದ್ರ, ಮೊದಲಾದ ಗ್ರಹಗಳ ಮತ್ತು ಅವುಗಳ ಅಂಶಕರ ಸ್ಥಾನಬಲವನ್ನರಿತು ಅನುಭವ ಮಾಡಿಕೊಳ್ಳುವವರಾಗಬೇಕು

ಲಗ್ನ ಮತ್ತು ಚಂದ್ರ ಇವುಗಳಲ್ಲಿ ಯಾವುದರ ಮತ್ತು ಯಾರ ಬಲಾಧಿಕ್ಯವಿರುವುದೋ ಆ ರಾಶಿಯಿಂದಲೇ ಫಲವನ್ನು ಅನುಭವಕ್ಕೆ ತೆಗೆದುಕೊಳ್ಳಬೇಕು. ಹಲಕೆಲವರಿಗೆ ಎರಡೂ ಸ್ಥಾನಗಳಿಂದ ಉಂಟಾಗುವ ಫಲವು ಅನುಭವಕ್ಕೆ ಬರುವುದೂ ಇದೆ. ಗ್ರಹಗಳ ಬಲಾಬಲವನ್ನರಿತುಕೊಳ್ಳುವ ಹಲಕೆಲವು ರೀತಿಗಳು ಬರುವ ವಾರದಿಂದ ಪ್ರಕಟವಾಗುವವು

ಮೇಷಲಗ್ನ ಮೇಷರಾಶಿಯವರಿಗೆ

ಗೋಚಾರದಲ್ಲಿ — ಜನ್ಮರಾಶ್ಯಾಧಿಪತಿಯಾದ ಕುಜನು ತೃತೀಯದಲ್ಲಿರುವನು. ತೃತೀಯ ಷಷ್ಠಾಧಿಪತಿಯು ಧನಸ್ಥಾನದಲ್ಲಿರುವನು. ಕೇತುವೂ ಧನಸ್ಥಾನದಲ್ಲಿದ್ದು ವ್ಯತ್ಯಸ್ಥಾನದಲ್ಲಿ ರಾಹುವು ನಿಂತು ಧನಸ್ಥಾನವನ್ನು ಈಕ್ಷಿಸುತ್ತಿರುವನು. ದ್ವಾದಶದಲ್ಲಿರುವ ಶನಿಯು ಸಾಡಿಸಾತ್ ಆಗಿರುವನು. ಆದರೂ ಈ ರಾಶಿಯವರು ಅಷ್ಟೊಂದು ಧೈರ್ಯಗುಂದಲಾರರು. ಭಾಗ್ಯವನ್ನು ಈಯುವ ಗುರು ಮಹಾರಾಜನು ಲಾಭಸ್ಥಾನದಲ್ಲಿದ್ದು ಧನ ಸಪ್ತಮಾಧಿಪತಿಯನ್ನೂ ಚಂದ್ರನನ್ನೂ ನೋಡುತ್ತಾನಾಗಿರುವುದರಿಂದ ಹಿಡಿದ ಕಾರ್ಯಗಳು ಕೈಗೂಡುವುವು. ಪ್ರೇಕ್ಷಣೀಯವಾಗಿರುವ ಅಭಿವೃದ್ಧಿ ಸ್ಥಾನವು ನಿಮಗೆ ದೊರಕುವುದು. ಶೋಚನೀಯವಾದ ಕಾರ್ಯಗಳಲ್ಲಿ ಅಲಕ್ಷ್ಯತೆ ವಹಿಸುವುದು ಅತೀ ಹಿತಕರ. ನಿಮ್ಮ ಆಜ್ಞೆಗಳು ಈಡೇರುತ್ತವೆಯಾದರೂ ಆ ಕುರಿತು ಹೆಚ್ಚಿಗೆ ದುಡುಕಲಾಗದು. ಆದರಿಂದ ದುಃಖಸಾಗರದಲ್ಲಿ ತೇಲಾಡುವ ಸಂದರ್ಭಗಳು ಉಂಟಾಗುವಂತಿವೆ

ವೃಷಭಲಗ್ನ ವೃಷಭರಾಶಿಯವರಿಗೆ

ಗೋಚಾರರೀತ್ಯಾ ಜನ್ಮರಾಶಿಯಲ್ಲಿ, ರವಿ ಬುಧ ಕೇತುಗಳಿದ್ದು ಶನಿಯು ಬಲಿಷ್ಠನಾಗಿ ಈಕ್ಷಿಸುತ್ತಿರುವನು. ಮೇಲಾಗಿ ರಾಹುದೃಷ್ಟಿ ಬೇರೆ. ವ್ಯಯಾಧಿಪತಿಯೂ ಧನಸ್ಥಾನವನ್ನು ಹೊಂದಿರುವನು. ರೋಗಸ್ಥಾನಾಧಿಪತಿಯೂ ಅಲ್ಲಿರುವನಾಗಿರುವ ಕಾರಣ ನಿಮಗೆ ರಾಜ, ಚೋರ, ರೋಗ ಮತ್ತು ಅಗ್ನಿಭಯವು ಕೊಂಚ ಬಾಧಿತವಾಗುವುದು. ಆದರೂ ಗುರುಮಹಾರಾಜನ ದೃಷ್ಟಿಯು ಅಲ್ಲಿರುವುದರಿಂದ ಅನುಭವಕ್ಕೆ ಬಾರದಂತಾಗಿ ಸ್ವಲ್ಪ[illegible] ರೀತಿಯಿಂದ ನಿವಾರಣೆಯಾಗುವುದು. ಪ್ರಯಾಣಿಕರಿಗೆ ಹೆಚ್ಚಿನ ಸುಖವಿಲ್ಲದೆ ದೇಹಾಯಾಸವು ಬಾಧಿತವಾಗಿ ರೋಗಗ್ರಸ್ತರಾಗುವ ಸಂಭವಗಳೂ ತಲೆದೋರದಿರವು. ಅಸುರ ಗುರುವರ್ಯನ ಕಟಾಕ್ಷವು ನಿಮ್ಮ ಮೇಲೆ ಬಹಳವಾಗಿರುವುದರಿಂದ ನಿಮಗೆ ಕುಟುಂಬ ಸೌಖ್ಯವು ಹೇರಳವಾಗಿ ದೊರಕಿ ಅನುಪಮ ರೂಪಲಾವಣ್ಯವತಿಯುವರ ದೆಸೆಯಿಂದಾಗಿ ಕುಸುಮರತ್ನಗಳ ಅಲಂಕಾರಾದಿಗಳಿಂದ ಹೇರಳ ಧನವ್ಯಯವನ್ನು ಮಾಡುವವರಾಗಿರುವಿರಿ. ನಿಮ್ಮ ಸ್ಥಾನಮಾನಗಳ ಕುರಿತು ಎಚ್ಚರಿಕೆ ಇರಲಿ.

ಮಿಥುನಲಗ್ನ ಮಿಥುನರಾಶಿಯವರಿಗೆ

ರವಿ ಮತ್ತು ಶನಿಗಳು ನಿಮಗೆ ಅಹಿತವನ್ನುಂಟುಮಾಡುವವರಾಗಿರುವರು. ಆದಕಾರಣ ರವಿ ಪ್ರಾರ್ಥನೆಯನ್ನು ಅಗತ್ಯವಾಗಿ ಮಾಡಿದರೆ ಸಕಲ ಇಷ್ಟಾರ್ಥವನ್ನು ಹೊಂದುವವರಾಗಿರುವಿರಿ. ಕುಜನು ಜನ್ಮರಾಶಿಯಲ್ಲಿರುವನಾದರೂ ಆತನು ಈ ವಾರ ನಿಮಗೆ ತೊಂದರೆಯನ್ನು ಕೊಡುವಂತಿಲ್ಲ. ಆದರೂ ಪರಾಕ್ರಮ ಕಾರ್ಯಗಳಲ್ಲಿ ಜಯದೇವತೆಯು ನಿಮ್ಮನ್ನು ವರಿಸುವಂತಿಲ್ಲ. ಜನ್ಮಸುಖಾಧಿಪತಿಯಾದ ಬುಧನು ವ್ಯಯರಾಶಿಯನ್ನು ಸೇರಿರುವನು. ಶತ್ರುಗಳೊಡನೆ ನೀವು ಕುಶಲತೆಯಿಂದ ವರ್ತಿಸಲೇಬೇಕು. ದಾಂಪತ್ಯ ಸುಖವು ಹೆಚ್ಚುವುದು. ಶುಭಕಾರ್ಯಗಳಿಂದ ನಿಮಗೆ ಮೃಷ್ಟಾನ್ನ ಭೋಜನ ಲಾಭವಾಗುವುದು. ತಾ ೬-೬-೩೭ರಿಂದ ವರ್ತಕರು ತಮ್ಮ ವಹಿವಾಟುಗಳಲ್ಲಿ ಹೆಚ್ಚಿನ ಕುಶಲತೆಯಿಂದ ವರ್ತಿಸುವವರಾಗಬೇಕು. ಸಾಮಾನ್ಯವಾಗಿ ಈ ರಾಶಿಯವರಿಗೆ ಈ ವಾರ ಶುಭಲಕ್ಷಣಗಳೇ ಜಾಸ್ತಿಯಾಗಿ ಅನುಭವಕ್ಕೆ ಬರುವಂತಿವೆ

ಕರ್ಕಲಗ್ನ ಕರ್ಕರಾಶಿಯವರಿಗೆ

ವರ್ತಕರಿಗೆ ಲಾಭಗಳಿಸುವರೆ ಈ ವಾರವು ಮಹತ್ವಿಕೆಯುಳ್ಳದ್ದಾಗಿರುವುದು. ವಾಣಿಜ್ಯ ಕ್ಷೇತ್ರದಲ್ಲಿ ಸೋತವರು ಜಯಶೀಲರಾಗುವರು. ಉದ್ಯೋಗಿಗಳೂ, ವಿದ್ಯಾರ್ಥಿಗಳೂ ಕುಸುಮ್ಲಾನವದನರಾಗುವರು. ೬-೬-೩೭ ರಿಂದ ೮-೬-೩೭ರ ವರೇಗೆ ಈ ರಾಶಿಯವರು ಬಹಳ ಜಾಗರೂಕತೆಯನ್ನು ವಹಿಸಬೇಕು. ಮಾಡುವ ಸಕಲ ಕಾರ್ಯಗಳಲ್ಲಿಯೂ ವಿಘ್ನಗಳು ಸಂಭವಿಸುವಂತಿವೆ. ಪ್ರಯಾಣಗಳಲ್ಲಿ ಹೆಚ್ಚಿನ ಸುಖ ದೊರೆಯುವಂತಿಲ್ಲ. ಪಿತ್ಥೋದ್ರೇಕಗಳು ತಕ್ಕ ಔಷಧಗಳನ್ನು ಸೇವಿಸುವುದರಿಂದ ಶಾಂತತೆಯಿಂದ ನಿವಾರಿಸಿಕೊಳ್ಳಬಹುದು. ನೇತ್ರರೋಗಿಗಳು ಸಹ ಅಂತೆಯೇ. ವಸ್ತ್ರ ವ್ಯಾಪಾರಿಗಳು ಹಳೆಯ ದಾಸ್ತಾನು ಮಾಲುಗಳನ್ನು ವಿಕ್ರಯಿಸಿ ಲಾಭಗಳಿಸುವರು. ಸ್ತ್ರೀ ಸುಖಪಿಡೆ. ದಾಂಪತ್ಯ ಪ್ರೇಮವೂ ತೋರಿಬರಲಿಕ್ಕಿದೆ

ಸಿಂಹಲಗ್ನ ಸಿಂಹರಾಶಿಯವರಿಗೆ

ಅಕ್ಕಿಯ ವ್ಯಾಪಾರಿಗಳಿಗೆ ಕಸಕ್ಕರೆ ಬೆಲ್ಲ ಮುಂತಾದ ವರ್ತಕರಿಗೆ ಲಾಭವು ಹೆಚ್ಚಾಗಿ ದೊರಕುವುದು. ವಸ್ತ್ರ ವ್ಯಾಪಾರಿಗಳು ತಮ್ಮ ಗಿರಾಕಿಗಳಿಗೆ ಬೇಕಾದ ತರದ ಬಟ್ಟೆಗಳನ್ನು ದಾಸ್ತಾನ ಇಟ್ಟು ಅದರಿಂದ ಲಾಭಗಳಿಸುವರು. ಗಳಿಸಿದ ಲಾಭದಲ್ಲಿ ಲಾಭಾದಾಯಸೇವೆ ಎಂದು ಧರ್ಮಕಾರ್ಯಾಸಕ್ತರಾಗುವರು. ಈ ರಾಶಿಯವರು ಈ ವಾರ ಯಾವ ಕಾರ್ಯದಲ್ಲಿ ನಿರತರಾಗುವರೋ ಅದರಲ್ಲಿ ಜಯವೊಂದನ್ನಲ್ಲದೆ ತುಂಬಾ ಲಾಭವನ್ನೂ, ಸ್ಥಾನಮಾನಗಳನ್ನೂ ಗಳಿಸಿ ಕೀರ್ತಿವಂತರಾಗುವರು. ಸಾಮಾನ್ಯ ಫಲವು ಶುಭದಲ್ಲಿಯೇ ಪರಿಣಮಿಸುವುದು. ಮದುವೆ ಮುಂತಾದ ಮಂಗಲ ಕಾರ್ಯಗಳೂ ಈಡೇರುವುವು

ಕನ್ಯಾಲಗ್ನ ಕನ್ಯಾರಾಶಿಯವರಿಗೆ

ಈ ರಾಶಿಯವರಿಗೆ ಈ ವಾರವು ಅಷ್ಟೊಂದು ಶುಭಪ್ರದವಲ್ಲ. ಆಪತ್ತುಗಳು ಒದಗುವ ಸಂಭವಗಳು ತೋರಿಬರಲಿಕ್ಕಿವೆ. ಎಲ್ಲ ಸುಖಸಾಧನಗಳೂ ನಿಮ್ಮ ಹಿಂಭಾಗದಲ್ಲಿರುವಂತೆ ತೋರುವುದು. ಆದರೆ ಅನುಭವದಲ್ಲಿ ಅವುಗಳ ಲೋಪವೇ ಕಂಡುಬರುವುದು. ಕಲಹಪ್ರಿಯರಾಗುವಿರಿ. ಆದರೆ ಅದರಿಂದ ಅವಮಾನಿತರಾಗುವ ಘಟನೆಗಳು ಸಂಭವಿಸಲಿಕ್ಕಿವೆ. ದೂರದರ್ಶಿಗಳು ಈ ಕುರಿತು ತಕ್ಕ ನಿಗಾ ಕೊಟ್ಟರೆ ಸ್ಥಾನಮಾನಗಳನ್ನು ಉಳಿಸಿಕೊಳ್ಳಬಹುದು. ಪ್ರಯಾಣದ ಕರೆಯೇ ಬರುವಂತಿದೆ, ಆದರೆ ಆ ಕುರಿತು ತಕ್ಕ ಕಾರಣಗಳನ್ನು ಕಲ್ಪಿಸಿಕೊಂಡು ಅದರಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಹೂಡಿರಿ. ಪ್ರಯಾಣದಿಂದ ಹೆಚ್ಚಿನ ಸುಖವಿಲ್ಲ. ಸಾಮಾನ್ಯ ಫಲವು ಅಸುಖದಲ್ಲಿ ಪರಿವರ್ತನಹೊಂದುವದು

ತುಲಾಲಗ್ನ ತುಲಾರಾಶಿಯವರಿಗೆ

ಅಡೇಕೋ, ಲಲನೆಯರು ನಿಮ್ಮಲ್ಲಿ ಜಿಗುಪ್ಸೆಗೊಂಡಂತೆ ನಿಮಗೆ ಭಾಸವಾಗುವುದು. ನೀವು ಸಂಶಯ ಪಿಶಾಚದಿಂದ ಗ್ರಸ್ತರಾಗುವಿರಿ. ತಾ ೬-೬-೩೭ರ ವರೇಗೆ ನೀವು ತಸು ಹುಷಾರಾಗಿರಬೇಕು. 'ಮನೋವ್ಯಾಧಿಯ ರೋಗಕ್ಕೆ ಮದ್ದಿಲ್ಲ' ಎಂದು ಚಿಂತಿಸುತ್ತಿರುವಿರಿ. ಆದರೆ ೬-೬-೩೭ರಿಂದ ನಿಮ್ಮ ನಿಶ್ಚಿತವು ನಿಶ್ಚಿತವನ್ನು ಪಡೆಯುವುದು. ನೀವು ಧರ್ಮಕಾರ್ಯಗಳಲ್ಲಿ ನಿರತರಾಗಿ ಕುಲಪುರೋಹಿತರಿಂದ, ಪತ್ನೀಸಹಿತ ದೇವತಾ ಕಾರ್ಯಗಳನ್ನು ನೆರವೇರಿಸಿ ಇಷ್ಟಾರ್ಥವನ್ನು ಹೊಂದಿ ಕುಟುಂಬ ಸುಖವನ್ನು ಹೆಚ್ಚಾಗಿ ಹೊಂದುವವರಿರುವಿರಿ. 'ಕಾಲಕ್ಕೆ ತಕ್ಕ ಕೋಲ' ಎಂಬ ನಾಣ್ಣುಡಿಯನ್ನನುಸರಿಸದೆ ಇದ್ದರೆ ನೀವು ನಿಮ್ಮ ಇಂದ್ರಿಯ ಸುಖಕ್ಕಾಗಿ ಹೇರಳ ದ್ರವ್ಯವನ್ನು ವ್ಯಯಿಸಿ ಆತ್ಮಸಂತೋಷಾಭಿವೃದ್ಧಿಯನ್ನು ಹೊಂದುವಿರಿ. ಕಷ್ಟವಿಲ್ಲದ ದವ್ಯಾರ್ಜನೆಯು ಯೋಗ್ಯ ನಿಮ್ಮ ಪಾಲಿನದು

ವೃಶ್ಚಿಕಲಗ್ನ ವೃಶ್ಚಿಕರಾಶಿಯವರಿಗೆ

ರಾಜಕಾರ್ಯಪಟುಗಳಾಗುವಿರಿ. ತಾ ೧೦-೬-೩೭ರ ತನಕ ನಿಮಗೆ ಇದರಲ್ಲಿ ಯಶಸ್ಸು ತೋರಿಬರಲಾರದ. ಆದುದರಿಂದ ಈ ವಾರದಲ್ಲಿ ಹೆಚ್ಚಿನ ಕಾತರತೆಯಿಂದ ಕಾರ್ಯ ನಿರ್ವಹಿಸುವ ಅಗತ್ಯ ತೋರಿಬರುವುದಿಲ್ಲ. ವಾಹನ ಇತ್ಯಾದಿಗಳಿಂದ ನಿಮಗೆ ಘಾಯಗಳಾಗಿ ರಕ್ತಸ್ರಾವವಾಗುವ ಭಯವೂ, ಅಂಗಊನವಾಗುವ ಸಂಭವಗಳೂ ತೋರಲಿಕ್ಕಿರುವುದರಿಂದ ವಾಹನ ಪ್ರಯಾಣಗಳಲ್ಲಿ ಹೆಚ್ಚಿನ ನಿಗಾ ಇಟ್ಟು ವರ್ತಿಸುವುದರಿಂದ ತಪ್ಪಿಸಿಕೊಳ್ಳುವರೆ ಅಸ್ಪದವು ಗ್ರಹಚಾರ ಯೋಗದಿಂದ ತೋರಿಬರುವುದು. ಅದನ್ನು ತಪ್ಪಿಸಿಕೊಳ್ಳುವುದು ನಿಮ್ಮ ಕೈಯಲ್ಲಿಯೇ ಇದೆ. ಬಂಧುಜನರು ನಿಮಗೆ ವಂಚಿಸುವ ಹಾರೈಕೆಯಲ್ಲಿರುವರು. ಅದರಿಂದಾಗಿ ನೀವು ಹೆಚ್ಚಿನ ದುಃಖವನ್ನು ಸಹಿಸಲಿಕ್ಕಿದೆ. ಜಾಗರೂಕತೆಯನ್ನು ವಹಿಸಿದರೆ ತಪ್ಪಿಸಿಕೊಳ್ಳಬಹುದು. ಮಳೆಗಾಲವು ಆರಂಭವಾಗುವುದರಲ್ಲಿದೆ. ಆ ಕುರಿತು ಗುಡು ಮಕ್ಕಳ ಆರೋಗ್ಯದ ಕುರಿತು ಹೆಚ್ಚಿನ ಗಮನ ಕೊಡುವುದು ಹಿತದೃಷ್ಟಿಯಿಂದ ಬರೆದದ್ದಾಗಿರುತ್ತದೆ

ಧನುರ್ಲಗ್ನ ಧನುರಾಶಿಯವರಿಗೆ

ದಾಂಪತ್ಯ ಸುಖಹೀನರಾಗಿರುವಿರಿ. ವಿರಹತಾಪವನ್ನು ಗೈಯುವಿರಿ. ಶತ್ರುಗಳನ್ನು ದೂರೀಕರಿಸಿರಿ. ನೀವು ಮಾಡಿದ ಕೆಲವು ಗೋಪ್ಯ ಕಾರ್ಯಗಳಿಂದಾಗಿ ನೀವು ಸದಾ ದುಃಖಿಸುವವರಾಗಿರುವಿರಿ. ಈ ವಾರದಲ್ಲಿ ನಿಮಗೆ ಅದರಿಂದ ಶಾಂತಿ ದೊರಕದು. ಹಾಗೆಂದು ಪರಸ್ತ್ರೀಯರನ್ನು (ಬೇಸರಿಸದಿರುವಿರಾ[illegible]) ಗಳಿಂದಾಗಿ, ನಿಮ್ಮ ಗುಟ್ಟು ರಟ್ಟಾಗಿ ನೀವು ಬಹಳ ಕಷ್ಟಪಡಬೇಕಾಗುವುದು. ನೌಕರರು ತಮ್ಮ ಕೆಲಸದ ಕಡೆಗೆ ನೆಟ್ಟ ದೃಷ್ಟಿಯುಳ್ಳವರಾಗಿದ್ದು ಅತೀ ಜಾಗರೂಕತೆಯಿಂದ ಕೆಲಸವನ್ನು ನಿರ್ವಹಿಸತಕ್ಕದ್ದು. ನಿಮ್ಮ ಸ್ಥಾನವನ್ನು ಕಾಯುತ್ತಿರುವವರು ನಿಮ್ಮ ದೃಷ್ಟಿಗೆ ಅಗೋಚರರಾಗಿರುವರು. ವಿರಹತಾಪಕಿಚ್ಚುಗಳಿಗಾಗದವರು ಮನೆಯಲ್ಲಿಯೇ ಕಲಹಬೀಜ ಬಿತ್ತುವದಕ್ಕೆ ಎಡೆಗೊಡದಂತೆ ತಾಳ್ಮೆಯಿಂದ ವರ್ತಿಸುವುದು ಹಿತಕರವಾಗಿ ತೋರುತ್ತದೆ.

ಮಕರಲಗ್ನ ಮಕರರಾಶಿಯವರಿಗೆ

ಶತ್ರುಸಮೂಹವು ಹೊಂಚುಹಾಕುತ್ತಿದೆ. ಆದರೆ ಅವರು ಈ ವಾರ ನಿಮ್ಮನ್ನು ಬಾಧಿಸುವಂತಿಲ್ಲ. ಗುರುಮಹಾರಾಯನೇನೋ ನಿಮ್ಮನ್ನು ಬಿಟ್ಟುಹಾಕುವಂತಿಲ್ಲ. ಆದರೂ ನೀವು ಸ್ವಲ್ಪ ಹುಶಾರಾಗಿರಬೇಕು. ಇಂದ್ರಿಯಸುಖ ನಿಗ್ರಹದಿಂದ ಯಾವತ್ತು ಶತ್ರುಗಳನ್ನು ನೀವು ಜಯಿಸಬಹುದು. ಇಲ್ಲವಾದರೆ ಹೇರಳ ನಷ್ಟದ್ರವ್ಯಕ್ಕಾಗಿ ನೀವು ಚಿಂತಿಸಬೇಕಾದೀತು. ಕೋರ್ಟು ವ್ಯವಹಾರದ ಕಡೆಗೆ ಗಮನ ಕೊಡಕೂಡದು. ಮಾಡುವ ಕಾರ್ಯಗಳಲ್ಲಾಗಲೀ ಹಿಡಿದ ಕಾರ್ಯಗಳಾಗಲೀ ಯಶಸ್ಸಿನಿಂದ ತುಂಬಿರುವದಿಲ್ಲ. ಆದುದರಿಂದ ಸಮಯ ಸಾಧಿಸಬೇಕೇ ಹೊರತು ಈ ವಾರ ಮುಂದುವರಿಯಕೂಡದು. ಕೃಷಿಕರು ಕುಬಾ ಲಾಭ ಹೊಂದುವರು

ಕುಂಭಲಗ್ನ ಕುಂಭರಾಶಿಯವರಿಗೆ

ಜನ್ಮೇಚ ರಾಮವಾರಣ್ಯ ಎಂಬ ಲೋಕೋಕ್ತಿಯಂತೆ ಗುರುವು ನಿಮ್ಮ ರಾಶಿಯಲ್ಲಿರುವನು. ಮೇಲಾಗಿ ಶನಿ ಮಹಾರಾಯನಿಂದ ನೀವು ದೂರಾಗಲು ಇನ್ನೂ ಸಮಯವಿದೆ. ನಿಮ್ಮ ಮನಸ್ಸಿನಲ್ಲುಂಟಾಗಿರುವ ಚಿಂತೆಯೇ ಚಿತೆಯಾಗಿ ನಿಮ್ಮನ್ನು ದಹಿಸುತ್ತಲಿದೆ. ಸ್ತ್ರೀ ಸುಖಕಾಂಕ್ಷಿಗಳಾಗಿರುವಿರಿ. ಆದರೆ ಅದಕ್ಕೆ ತಡೆಯುಂಟಾಗುವುದನ್ನು ನೀವು ತಿಳಿದುಕೊಳ್ಳುವಿರಿ. ಇದರಿಂದಾಗಿ ಬುದ್ಧಿಯು ಮಂದತ್ವವನ್ನೈಯ್ದುವುದರಲ್ಲಿ ಸಂದೇಹವಿಲ್ಲ. ನಿಮಗೆ ಮಡದಿ ಮಕ್ಕಳುಗಳಿಂದ ಅಪಾರವಾದ ಶೋಕ ಸಂಭವಿಸುವಂತೆ ತೋರುತ್ತಿರುವುದಾದರೂ ಅಸುರ ಗುರು[illegible] ಶುಕ್ರನು [illegible] ವನ್ನು ತಡೆಯುವನು. ಅದು ನಿಮಗೆ ತಾನು ತಾನಾಗಿಯೇ ತಿಳಿಯಬರುವುದು. ಜಾಗರೂಕತೆಯನ್ನು ವಹಿಸಿದರೆ ಪಾರಾಗುವ ದಾರಿ ತೋರದಿರಲಿಕ್ಕಿಲ್ಲ

ಮೀನಲಗ್ನ ಮೀನರಾಶಿಯವರಿಗೆ

ಸೀತಾಮಾತೆಯನ್ನಪಹರಿಸಿದ ರಾವಣನ ವಧೆಯಾದುದು ಗುರುಮಹಾರಾಜನು ಗೋಚಾರದಲ್ಲಿ ಆತನ ರಾಶಿಯು ದ್ವಾದಶಕ್ಕೆ ಬಂದಾಗ್ಗೆ. ನಿಮ್ಮ ರಾಶಿಯ ದ್ವಾದಶ ಭಾವದಲ್ಲಿ ಆತನಿರುವನು. ಮೇಲಾಗಿ ಶನಿವ ಹಾರಾಯನು ನಿಮ್ಮಲ್ಲಿಯೇ ನೆಲೆಸಿರುವನು. ನೀವು ಶತ್ರುಗಳ ಮಧ್ಯ ಇರುವಂತಾಗಿದೆ. ನಿಮ್ಮ ಸಹವಾಸವೂ ಕೂಡ ಪರಿಣಾಮಕಾರಿ ಮಾರ್ಗದಲ್ಲಿಲ್ಲ. ಶತ್ರುಗಳ ವಂಚನೆಗೊಳಗಾಗಿ ನೀವು ಪ್ರಯಾಣೋನ್ಮುಖರಾಗುವಿರಿ. ದಾರಿಯಲ್ಲಿ ತುಂಬಾ ತೊಂದರೆಗಳಿಗೀಡಾಗುವಿರಿ. ವೈದ್ಯ ಇಲಾಖೆಯವರ ಅನುಗ್ರಹವು ನಿಮಗೆ ಪಡೆಯಬೇಕಾದೀತು. ದಾರಿಯಲ್ಲಿ ದುಃಖಮಯವಾದ ವಾರ್ತೆ ಕೇಳಿ ಕಾತರಿಸುವವರಾಗುವಿರಿ. ಉದರ ವ್ಯಾಧಿಯು ಬಹುತೀಕ್ಷ್ಣ ಪ್ರಮಾಣದಿಂದ ಅಂಕುರಿಸುವಂತಿದೆ. ಅನುಮಾನಕರವಾದ ವಾರ್ತೆಗಳಿಂದ ಸಹ ನೀವು ದೂರವಾಗಿರಬೇಕು. ತಾತ್ಸಾರತೆಯು ವೃದ್ಧಿಯಾದರೂ ಚಿಂತೆ ಇಲ್ಲ. ಶತ್ರುಗಳ ಊಟೋಪಚಾರಕ್ಕೆ ಮರುಳಾಗಬೇಡಿರಿ. ಇದರಿಂದ ಶಾಂತತೆಯು ನಿಮಗೆ ದೊರಕುವುದು

'ಕರ್ನಾಟಕ ಪ್ರಾಂತ ನಿರ್ಮಾಣವು ಈಗಲೇ ಆಗಬೇಕು; ಇಲ್ಲವಾದರೆ ಇನ್ನೆಂದಿಗೂ ಆಗದು'

ಸ್ವತಂತ್ರ ಪ್ರಾಂತವಿಲ್ಲದ ಯಾವದೇ ಘಟನೆಯು ನಮಗೆ ನಿರುಪಯುಕ್ತವು.

ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರ ಭಾಷಣ.

ಧಾರವಾಡದಲ್ಲಿ ಕೂಡಿದ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಕೆ. ಆರ್. ಕಾರಂತರು ಈ ರೀತಿಯಾಗಿ ಭಾಷಣ ಮಾಡಿದರು

ಕರ್ನಾಟಕ ಏಕೀಕರಣದ ನಮ್ಮ ಬೇಡಿಕೆಯು ನ್ಯಾಯವಾದುದು. ಭಾಷಾವಾರ ಪ್ರಾಂತ ರಚನೆಯನ್ನು ಸರಕಾರದವರು ಕಾಲಕಾಲಕ್ಕೆ ಒಪ್ಪಿಕೊಂಡಿರುವರು. ಹಿಂದೀ ಶಾಸನಾಂಗವಾದರೂ ಈ ತತ್ವಕ್ಕೆ ಒಪ್ಪಿಗೆಯನ್ನಿತ್ತಿದೆ. ರಾಷ್ಟ್ರೀಯ ಮಹಾಸಭೆಯು ೧೯೨೦ರಿಂದ ಈ ತತ್ವವನ್ನು ಬಳಕೆಯಲ್ಲಿ ತಂದಿದೆ. ಕಳೆದ ಮಾರ್ಚ ತಿಂಗಳಲ್ಲಿ ಮುಂಬಾಯಿ, ಮದರಾಸ ಅಸೆಂಬ್ಲಿಗಳಲ್ಲಿ ನಿಮ್ಮ ಬೇಡಿಕೆಯು ಪುನರುಚ್ಚಾರವಾಗಿದೆ. ಇಂತಹ ಬೇಡಿಕೆಯನ್ನು ಭಾರತದ ಉಪಮಂತ್ರಿಗಳು ಅಲ್ಲಗಳೆದು ಈಗಿನ ಸಂದರ್ಭದಲ್ಲಿ ಪ್ರತ್ಯೇಕ ಪ್ರಾಂತಗಳನ್ನು ನಿರ್ಮಿಸುವುದು ಹಿತಾವಹವಲ್ಲ ಎಂದು ಹೇಳುವುದನ್ನು ನೋಡಿ ವಿಷಾದವಾಗುತ್ತದೆ. ನಾನು ನನ್ನ ಮಟ್ಟಿಗೆ ಹೇಳುವುದಾದರೆ ಇಂತಹ ಪ್ರಾಂತ ನಿರ್ಮಾಣವು ಈಗಲೇ ಆಗಬೇಕು, ಇಲ್ಲವಾದರೆ ಇನ್ನೆಂದಿಗೂ ಅದಕ್ಕೆ ಅನುಕೂಲ ಕಾಲವು ದೊರೆಯಲಿಕ್ಕಿಲ್ಲ. ವಸ್ತುಸ್ಥಿತಿಯು ಹೀಗಿದ್ದು ತತ್ವಕ್ಕೆ ಮಾನ್ಯತೆ ದೊರೆತಿರುವಾಗ ಕರ್ನಾಟಕವು ಆರ್ಥಿಕ ಸ್ಥಿತಿಯಿಂದ ಸ್ವತಂತ್ರ ಪ್ರಾಂತವಾಗಲು ಸಮರ್ಥವಿದ್ದಾಗ ಈ ಪ್ರಶ್ನೆಯನ್ನು ಈಗಲೇ ಬಗೆಹರಿಸದೆ ಅದನ್ನು ಮುಂದೂಡುವುದು ಯಾವ ನ್ಯಾಯವೊ ನನಗಂತೂ ಹೊಳೆಯದು. ಬ್ರಿಟನು ತನ್ನ ಯುದ್ಧನೀತಿಯನ್ನು ಮುಂದರಿಸುವುದರಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದರಲ್ಲಿ ಅಥವಾ ಸಂಯುಕ್ತ ಘಟನೆಯನ್ನು ಹೊರಗೆ ಕಟ್ಟುವ ಕಾರ್ಯದಲ್ಲಿ ತೊಡಗಿದ ಮೂಲಕ ಹೀಗೆ ಮಾಡುತ್ತಿರಬಹುದೆ? ೧೯೧೮ರಲ್ಲಿಯೇ ಪ್ರಾಂತ ನಿರ್ಮಾಣವು ಅವಶ್ಯಕವೆಂದು ಎಣಿಸಲ್ಪಟ್ಟಿದೆ. ಈ ಬಗ್ಗೆ ಮಾಂಟೆಗ್ಯೂ ಚೇಮ್ಸಫರ್ಡ ವರದಿಯು ತನ್ನ ಅಭಿಪ್ರಾಯವನ್ನು ಸ್ಪಷ್ಟಮಾಡಿದೆ

ಇಷ್ಟೆಲ್ಲ ಘಟನೆಗಳು ನಡೆದುಹೋಗಿ ಇಪ್ಪತ್ತು ವರ್ಷಗಳು ಕಳೆದು ಹೋದುವು. ನಾವು ಒಂದೇ ಸಮನೆ ಸ್ವತಂತ್ರ ಪ್ರಾಂತದ ಬೇಡಿಕೆಯನ್ನು ಗರ್ಜಿಸುತ್ತ ಬಂದೆವು. ಆದರೂ ಇನ್ನೂ ತಡೆಯಿರೆಂದು ಹೇಳುತ್ತಿರುವರು. ಕನ್ನಡಿಗರು ಇಂತಹ ನಿರಂಕುಶ ಆಜ್ಞೆಗಳಿಗೆ ಸೊಪ್ಪು ಹಾಕಲಾರರು. ಭಾರತ ಮಂತ್ರಿಗಳಾದರೂ ಇಂತಹ ಅಪ್ಪಣೆಗಳನ್ನು ಹೊರಡಿಸುವ ದಿನಗಳು ಕಳೆದುಹೋದವೆಂಬುದನ್ನು ತಿಳಿದುಕೊಳ್ಳಲಿ

ಕಳೆದ ಎಪ್ರಿಲ್ ತಿಂಗಳಲ್ಲಿ ಮಾನ್ಯ ಮಂತ್ರಿಗಳಾದ ಖೇರ ಮುಂತಾದವರು ಏಕೀಕರಣದ ಗೊತ್ತುವಳಿಯನ್ನು ಅಂಗೀಕರಿಸುವಾಗ ಮಾತನಾಡಿದುದನ್ನು ನೋಡಿ ನನಗೆ ವಿಷಾದವಾಗುತ್ತಿದೆ. ಮುಂಬಯಿ, ಮದ್ರಾಸದಂತಹ ಸಮರ್ಥ ಪ್ರಾಂತಗಳ ಭಾಗಗಳಾಗಿ ಇಲ್ಲಿಯ ವರೆಗೆ ಕರ್ನಾಟಕವು ಇದ್ದುದಕ್ಕೆ ಯಾವ ಲಾಭವನ್ನು ಹೊಂದಿದೆ? ಎಷ್ಟು ರೈಲ್ವೇ ಬಂದರಗಳನ್ನು ಪಡೆದಿವೆ? ಮಂಗಳೂರ ಜಿಲ್ಲೆಯಲ್ಲಿ ರೈಲ್ವೇ ದಾರಿಯು ಕೇವಲ ಮೂವತ್ತು ಮೈಲಾದರೆ ಕಾರವಾರದಲ್ಲಿ ಅದೂ ಕೂಡ ಇಲ್ಲ. ಕೊಂಗ್ರೆಸ ಮಂತ್ರಿಗಳು ಈ ರೀತಿಯಾಗಿ ಮಾತನಾಡಿದುದು ನಿಜವಾಗಿಯೂ ಶೋಚನೀಯವು.

ನಮಗೆ ಸ್ವತಂತ್ರ ಪ್ರಾಂತವು ದೊರೆಯದಿದ್ದರೆ ಕೊಂಗ್ರೆಸು ಕೇಳುವ ಮಧ್ಯವರ್ತಿ ಸರಕಾರದಂತಹ ಸಂಯುಕ್ತ ಘಟನೆಯಾಗಲಿ ಇನ್ನಾವ ಘಟನೆಯಾಗಲಿ ನಿರುಪಯುಕ್ತವೇ. ಆದುದರಿಂದ ನಾವು ನಮ್ಮ ಬೇಡಿಕೆಗಳನ್ನು ಸ್ಪಷ್ಟವಾಗಿ ಹೇಳಬೇಕು. ಕೊಂಗ್ರೆಸ್ಸಿನವರು ನಮ್ಮ ಕೂಗನ್ನು ಇಲ್ಲಿಯ ವರೆಗೆ ಸಾಕಷ್ಟು ಕೇಳುತ್ತಿರಲಿಲ್ಲ. ಅದು ಆಗದ ಹಾಗೆ ಉಚ್ಚ ಧ್ವನಿಯಲ್ಲಿ ಒತ್ತಿ ಹೇಳಬೇಕು. ಈ ಸಮಸ್ಯೆ ಬಿಡುಗಡೆಗಾಗಿ ದಾರಿ ಕಾಯುವುದು ನಿರುಪಯುಕ್ತವೂ ಭಯಾವಹವೂ ಆಗಿದೆ. ಯಾಕೆಂದರೆ ಈ ವರೆಗಾದ ಬೇರೆ ಭಾಷೆಯ ಪ್ರಾಂತಗಳ ಅವ್ಯಾಹತ ಆಕ್ರಮಣದಿಂದ ನಮ್ಮ ನಾಡು ಈಗಾಗಲೇ ಎಷ್ಟೋ ತೊಂದರೆಗಳಿಗೀಡಾಗಿದೆ ಮತ್ತು ಭವಿಷ್ಯತ್ತು ಇನ್ನು ಭೀಕರವಾಗಿ ತೋರುತ್ತದೆ

ಏಕೀಕರಣವಾದರೆ ಲಿಂಗಾಯತರ ರಾಜ್ಯವಾಗುವುದು. ಆದ್ದರಿಂದ ಬ್ರಾಹ್ಮಣರು ಈ ಆಂದೋಲನದಲ್ಲಿ ಭಾಗವಹಿಸುವುದಿಲ್ಲ ಎಂದು ಕೆಲವರ ಆಕ್ಷೇಪ. ಆದರೆ ಲಿಂಗಾಯತರು ನಮ್ಮವರು. ಅವರಿಂದ ನಾವು ಅಳಿಸಿಕೊಳ್ಳಬಹುದು. ಆದರೆ ತಮಿಳರಿಂದಾಗಲೀ ಮರಾಟಿಗರಿಂದಾಗಲೀ ಅಳಿಸಿಕೊಳ್ಳಲಾರೆವು

ಏಕೀಕರಣವು ಸ್ವರಾಜ್ಯಯುದ್ಧಕ್ಕೆ ತಡೆಯನ್ನುಂಟುಮಾಡುವುದೆಂದು ಕೆಲವರ ಅಭಿಪ್ರಾಯ. ನಾವು ವರ್ಕಿಂಗ್ ಕಮಿಟಿಗೆ ಈ ವಿಷಯವಾಗಿ ಚೆನ್ನಾಗಿ ಮನಗಾಣಿಸಿ ಕೊಟ್ಟು ಸಂಯುಕ್ತ ಘಟನೆಯು ಬರುವುದರೊಳಗಾಗಿ ಏಕೀಕರಣವಾಗದಿದ್ದರೆ ಸ್ವರಾಜ್ಯ ಯುದ್ಧಕ್ಕೆ ಅಡ್ಡಿಯಾಗುವುದು ಖಂಡಿತವೆಂದು ಒತ್ತಿ ಹೇಳಬೇಕು.

ನಾವು ಮಾಡಬೇಕಾದ ಕಾರ್ಯಗಳು ಇನ್ನೂ ಅನೇಕವಿರುವುವು. ಏಕೀಕರಣದ ಬಗ್ಗೆ ಪ್ರಚಂಡ ಆಂದೋಲನವನ್ನು ಹೂಡಬೇಕು. ಇಂಗ್ಲಂಡಕ್ಕೆ ಶಿಷ್ಟಮಂಡಳವನ್ನು ಕಳುಹಿಸಿ ಅಲ್ಲಿಯೂ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕು. ವರ್ಕಿಂಗ್ ಕಮಿಟಿ ಮತ್ತು ಅಖಿಲ ಭಾರತ ಕೊಂಗ್ರೆಸ್ ಕಮಿಟಿಗಳು ಈ ವಿಷಯವನ್ನು ಎತ್ತಿ ಹಿಡಿಯುವಂತೆ ಒತ್ತಾಯಪಡಿಸಬೇಕು ಎಂದು ಮುಂತಾಗಿ ಸುಮಾರು ಅರ್ಧ ಗಂಟೆಯ ವರೆಗೆ ಭಾಷಣ ಮಾಡಿದರು

ಠರಾವುಗಳು

ಈ ಸಲದ ಪರಿಷತ್ತಿನಲ್ಲಿ ಸ್ವೀಕೃತವಾದ ಠರಾವುಗಳೂ ಮಹತ್ವದ್ದಿವೆ. ಬ್ರಿಟಿಷ ಸರಕಾರದವರು ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತ ಕೊಟ್ಟು ಯೋಗ್ಯ ಕಾಲಕ್ಕೆ ಕನ್ನಡಿಗರ ಆಶೆ ಆಕಾಂಕ್ಷೆಯನ್ನು ಪೂರೈಸದೆ ಹೋದರೆ ಕನ್ನಡಿಗರು ತಮ್ಮ ಧ್ಯೇಯಸಿದ್ಧಿಗಾಗಿ ಸತ್ಯಾಗ್ರಹ ಹೂಡಬೇಕಾಗುವುದೆಂಬ ಎಚ್ಚರಿಕೆಯು ಈ ಪರಿಷತ್ತಿನಲ್ಲಿ ಕೊಡಲ್ಪಟ್ಟಿತು. ಇಷ್ಟೇ ಅಲ್ಲದೆ ಕೊಂಗ್ರೆಸ್ಸಿನಿಂದ ಸ್ವೀಕಾರಾರ್ಹವಾಗುವ ಯಾವುದೇ ಸಂಯುಕ್ತ ರಾಜ್ಯಾಂಗ ಘಟನೆಯಲ್ಲಿ ಕರ್ನಾಟಕವು ಸ್ವತಂತ್ರ ಪ್ರಾಂತವಾಗಿರತಕ್ಕದ್ದೆಂಬ ಘೋಷಣೆಯೂ ಮಾಡಲ್ಪಟ್ಟಿತು. ಮೊದಲನೆಯದು ಪಾರ್ಲಿಮೆಂಟಿಗೆ ಎಚ್ಚರಿಕೆ ಸ್ವರೂಪದ್ದಾಗಿದ್ದರೆ ಎರಡನೆಯದು ಕಾಂಗ್ರೆಸಿಗೆ ಎಚ್ಚರಿಕೆ ಸ್ವರೂಪದ್ದಾಗಿದೆ. ಕರ್ನಾಟಕವು ಕಾಂಗ್ರೆಸನಿಷ್ಠ ಪ್ರಾಂತವಾಗಿದ್ದರಿಂದ ಈ ವಿಷಯದಲ್ಲಿ ಕರ್ನಾಟಕವು ಕಾಂಗ್ರೆಸ್ಸಿನ ಆಜ್ಞೆ ಮೀರಿದಂತೆಯೇ ಮುಂದಡಿಯಿಡುವದೆಂಬಲ್ಲಿ ಪ್ರತ್ಯವಾಯವಿಲ್ಲ. ಕಾಂಗ್ರೆಸ್ಸು ಇದನ್ನು ಲಕ್ಷ್ಯಕ್ಕೆ ತಂದುಕೊಂಡು ಈ ವಿಷಯವನ್ನು ಕೂಡಲೆ ಕೈಯಲ್ಲಿ ತೆಗೆದುಕೊಳ್ಳಬೇಕು

ನೀವು

ಜೀವಾಮೃತದ ತಯಾರಿಯಲ್ಲಿ ಉಪಯೋಗಿಸಲ್ಪಡುವ ಗಿಡಮೂಲಿಕೆಗಳಲ್ಲಿ ಅಡಗಿರುವ ಅದ್ಭುತ ಗುಣ ಶಕ್ತಿಗಳನ್ನು ತಿಳಿಯಬಲ್ಲವರಾದರೆ, ಶಕ್ತಿಯಿಲ್ಲದ ನರನಾಳಗಳಿಗೆ ಚೈತನ್ಯವನ್ನು ಕೊಡುವ ಈ ಅದ್ಭುತವಾದ ಟಾನಿಕ್ಕನ್ನು ಹೊರತು ಮತ್ತಾವುದನ್ನೂ ವಿಚಾರ ಮಾಡದೆ ತೆಗೆದುಕೊಳ್ಳುವುದಿಲ್ಲ.

ಜೀವಾಮೃತ

ವೆಂದರೆ ಕಳೆದ 40 ವರ್ಷಗಳಿಂದಲೂ ಪರೀಕ್ಷೆ ಮಾಡಲ್ಪಟ್ಟ ಮತ್ತು ಕೀರ್ತಿ ಪಡೆದ ಅದ್ಭುತ ಶಕ್ತಿವರ್ಧಕ ಔಷಧ. ವೈದ್ಯಕೀಯ ಕಸುಬಿನವರೆಲ್ಲರೂ ಇದನ್ನೇ ಖಾತ್ರಿಯಾಗಿ ಶಿಫಾರಸು ಮಾಡುತ್ತಾರೆ

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ

ತಯಾರಿಸುವವರು –
ಆಯುರ್ವೇದಾಶ್ರಮಂ ಮದ್ರಾಸು
ಡಿಸ್ಟ್ರಿಬ್ಯೂಟರ್ಸ್ –
ಅಮರ್‌ಚಂದ್ ಸೊಬಾಚಂದ್, ಮದ್ರಾಸ್.

The Estates & Agency Co., Ltd.

Incorporated in England

ಮಿಶ್ರರಹಿತ ಟೀ ಬಗ್ಗೆ ಭದ್ರತೆ

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಈ ಕೆಳಗೆ ಸೂಚಿಸಿದ ನಿಶಾನಿ ಮತ್ತು ಅಡ್ಡಪಟ್ಟಿಗಳಿಂದ ಸುತ್ತಲ್ಪಟ್ಟು, ಸೀಲ್‌ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲ್ಲರಿಗೂ ತಿಳಿಸಲು ಅಪೇಕ್ಷಿಸುತ್ತೇವೆ



PYKARA NO 1 DUST.
SEAFORTH NO. 1 DUST
HIGHFOREST NO 1 DUST

ನಮ್ಮ ಜನಪ್ರೀತವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡೆಯುವಾಗ ನಮ್ಮ ನಿಶಾನಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡೆಕೊಳ್ಳುವದು.

The Estates & Agency Company Ltd.
Head Office:-NADUVATAM P. O.
Sales Branch:-COCHIN.

★ ಕೊನ್ರಾಡ್ ಹೆನ್ಲಿಯನ್ ★

ಝೆಕೊಸ್ಲೊವಕಿಯಾದಲ್ಲಿನ ಜರ್ಮನರ ಮುಂದಾಳು.

★ ★ ★

[illegible] ಕೊನ್ರಾಡ್ ಹೆನ್ಲಿಯನ್! ಸೂರ್ಯೋದಯಕ್ಕೆ ಮುಂಚೆಯೇ ಎದ್ದು, ವ್ಯಾಯಾಮ ಮುಗಿಸಿ [illegible] ಅಷ್ಟು ಹೊತ್ತಿಗೆ ಸೇದಿದ ಅಷ್ಟು ಮದ್ಯ ಕುಡಿಯದೆ ಇರುವವನು ಅವರಿಗೆ ನಾಯಕನು.

ಇಂದೀ ಯೂರೋಪಿನಲ್ಲಿ ಈತನೀಗ ಪ್ರಬಲನಾಗಿದ್ದು, ಶಾಂತಿಭಂಗಕ್ಕೆ ಮೊದಲನೆ ಕಾರಣನಾಗಲೂ ಬಹುದಾಗಿದೆ. ಅವನ ತಪ್ಪಿನಿಂದೇನೂ ಅಲ್ಲ, ವಿದ್ಯಮಾನಗಳು ಹಾಗಾಗಿವೆ.

ಸಾಮಾನ್ಯ ಮಧ್ಯಮಸ್ಥಿತಿಯ ಗೃಹಸ್ಥನವನು. ಬಲವಾದ ದವಡೆಗಳು, ಎತ್ತರ ಹಣೆ, ಹೊರಕ್ಕೆ ಅರಳಿದ ಕಿವಿಗಳು, ಮೊಂಡುಮೂಗಿನ ಮೇಲೇರಿರುವ ಚಿನ್ನದ ಕನ್ನಡಕ, ಕರಿಗೂದಲ ತಲೆ ಇವನ್ನು ಕಂಡರೇ ಇವನ ಗುಣ ತಿಳಿಯಬರುವುದು. ಸುಳ್ಳು ಅವನ ಬಾಯಿಂದ ಹೊರಡದು; ದೃಢಚಿತ್ತನು, ಮಿತ್ರನಾಗಲುಂಟು, – ಎಂದು ಭಾವಿಸಲು ಅವಕಾಶವಿದೆ.

ವಯಸ್ಸು 40. ಎತ್ತರ ಅಗಲ ವಯಸ್ಸಿಗೆ ತಕ್ಕಂತೆ. ದುಸ್ತೂ ಸಾಮಾನ್ಯವಾದುದೆ.

ಆದರೆ, – ಇವನಲ್ಲಿ ಸ್ಮರಣಶಕ್ತಿ ಬಲವಾಗಿದೆ, ತೈಲಬುದ್ಧಿಯವನಲ್ಲ. ಇಂಗ್ಲಿಷು ಭಾಷೆ ಬಾರದಿದ್ದರೂ, ಇಂಗ್ಲಿಷಿನಲ್ಲಿ ಬರೆದೊಂದು ಭಾಷಣವನ್ನು ಬಾಯಿಪಾಠಮಾಡಿ ತಪ್ಪಿಲ್ಲದೆ ನುಡಿಯಬಲ್ಲನು. ತೀರ ಸಾಮಾನ್ಯರೂ, ದೃಢಮನಸ್ಸಿನವರಾಗಿ ಒಳ್ಳೆಯ ನೆನಪಿನವರಾದರೆ, ಅಂತಹರು ಜನನಾಯಕರಾಗುವುದೆ ಕಷ್ಟವಲ್ಲ.

ಬೊಹೀಮಿಯ – ಜರ್ಮನಿಯ ಗಡಿಗೆ ಒತ್ತಿರುವ ನಾಡು – ಅಲ್ಲೇ 1898ರಲ್ಲಿ ಇವನ ಜನ್ಮ. ಇವನ ಹಿರಿಯರೂ ಸಾಮಾನ್ಯ ವ್ಯಾಪಾರಿಗಳು. ಅವರಲ್ಲಿ ಝೆಕ್ಕರ ರಕ್ತವಿದೆ, ಶುದ್ಧ ಜರ್ಮನರಲ್ಲ.

ಪಾಠಶಾಲೆಯಲ್ಲಿ ಇವನ ಪೈಯಲ್ಲಿ ಬಡವಾಗಿ, ಪುಸ್ತಕಪಾಠದಲ್ಲಿ ಮಗ್ನನಾಗಿ ತರಗತಿಯಲ್ಲಿ ಮೊದಲನೆಯವನಾಗಿದ್ದನು.

ಹದಿನೆಂಟನೆಯ ವಯಸ್ಸಿನಲ್ಲಿ ಆಗ (1918) ಯುದ್ಧ ನಡೆಯುತ್ತಿತ್ತಲ್ಲವೆ? ಒಸ್ಟ್ರಿಯದ ಸೇನೆಯಲ್ಲಿ ಸೇರಿ ಇಟಲಿಯ ಸೆರೆಯಾಳಾಗಿ – ಯುದ್ಧದಲ್ಲಿ ಕೀರ್ತಿ ಪಡೆದನು.

ಯುದ್ಧಾನಂತರದಲ್ಲಿ, ಸೆರೆಯಿಂದ ಬಂದು ನೂತನವಾಗಿ ಸ್ಥಾಪನೆಹೊಂದಿದ ಝೆಕೊಸ್ಲೋವಾಕಿಯದಲ್ಲಿ ಒಂದು ಬೇಂಕಿನ ಗುಮಾಸ್ತನಾಗಿ ನೇಮಕ ಹೊಂದಿದನು.

ಮೇಜಿನ ಬಳಿ ಕೂತೇ ದಿನಕಳೆವುದು ಬೇಸರ. ಅವನಿಗೆ ಬೇಕಾದುದು ವ್ಯಾಯಾಮ. ಜರ್ಮನರದೊಂದು ವ್ಯಾಯಾಮಮಂದಿರವನ್ನು ಸೇರಿದನು. ಅಲ್ಲಿ ತನ್ನಂತೆಯೆ ಇದ್ದು ಇತರ ಜರ್ಮನರು ಅವನಿಗೆ ಸಿಕ್ಕಿದರು. ಆಗ ರಾಷ್ಟ್ರೀಯತೆಯ ಕಡೆಗೆ ಅವನ ಮನಸ್ಸು ಹರಿಯಿತು. "ಆಗಲೆ, ತನ್ನವರನ್ನೆಲ್ಲ ಕೂಟಕೂಡಿಸಿ ಸುವ್ಯವಸ್ಥೆ ಮಾಡಿದನು." ಅದರಿಂದ ಸದಸ್ಯರ ಸಂಖ್ಯೆ ಹೆಚ್ಚಿತು. ತಾನೇ ಕಾರ್ಯದರ್ಶಿಯಾದನು.

ಮುಂದೆ ತನ್ನವರ ಭವಿಷ್ಯವನ್ನು ಕುರಿತೇ ಭಾವಿಸುತ್ತ, ಸುಖಸ್ವಪ್ನಗಳನ್ನು ಕಂಡನು. ಜರ್ಮನರೆಲ್ಲ ಸೇರುವುದಕ್ಕೂ, ಅಲ್ಲಿ ಭಾಷಣ ಮೂಲಕ ಅವರನ್ನು ಹುರಿದುಂಬಿಸುವುದಕ್ಕೂ ಈಗ ಅನುಕೂಲವಾಗಿತ್ತು. ಹೀಗಾಗಿ 1929ರಲ್ಲಿ ಎಲ್ಲ ಜರ್ಮನ್ ಕ್ಲಬ್‌ಗಳ 100,000 ಸದಸ್ಯರಿಗೂ ಇವನು ಸೆಕ್ರೆಟರಿಯಾದನು.

ನಿರುದ್ಯೋಗಿಗಳು, ಇತ್ತ ವ್ಯಾಯಾಮ ಮಾಡುವರು, ಅತ್ತ, ಕೂಟವಾಗಿ ಒಂದೂರಿನಿಂದ ಮತ್ತೊಂದಕ್ಕೆ ಸಂಚಾರಮಾಡುತ್ತ ಹಾಡುತ್ತ, ನಲಿಯುತ್ತ ಕಾಲಕ್ಷೇಪಮಾಡುತಿರುವರು. ಹಾದಿಯಲ್ಲಿ ಅಲ್ಲಲ್ಲಿ ಆತಿಥ್ಯ ಸತ್ಕಾರಗಳೂ ನಡೆಯುತಿದ್ದುವು. ಸಂಜೆ ವೇಳೆ ಒಂದುಗೂಡಿ, ಜರ್ಮನ್ ಗೀತಗಳ ಹಾಡುತ್ತ ಸುಖಸಂಪತ್ತಿನ ದಿನಗಳ ಕನಸ ಕಾಣುತ್ತಿದ್ದರು. ಆಗಾಗ ನೋಟರಿಯ ಮಾತುಗಳೂ ಆದುವು. ಒಸ್ಟ್ರಿಯದ ಸೋಲಿನ ಸ್ಥಾನಗಳಲ್ಲಿ ಝೆಕ್ಕರ ನೇಮಕ ಹೊಂದಿದ್ದುದೂ ಚರ್ಚೆಗೆ ಬರುತ್ತಿತ್ತು. ಸ್ವರಾಜ್ಯವಾದದ ಭಾಷಣಗಳ ತರ್ಕಗಳೂ ನಡೆದು, [illegible] ಕಡೆಗೆ ಇವರ ಪ್ರಾಣಗಳ ಓಡುತ್ತಿದ್ದುವು.

ಯೆಹೂದ್ಯರ ವಿರುದ್ಧವಾಗಿ [illegible] ಪ್ರಾಮುಖ್ಯತೆ ಹೊಂದಿದ್ದ ಕೆಲಸಗಾರರ ಕ್ಲಬ್ಬುಗಳೂ ಇದ್ದುವು. ಇವರು ರಾಜಕೀಯ ವಿಚಾರಗಳನ್ನೂ ಬಲ್ಲವರು. ವ್ಯವಸ್ಥೆಗೆ ಸರಿಯಾಗಿ ನಡೆವವರನ್ನು ನಡೆಸಬಲ್ಲ ಈತನ ಸುಲಭವಾಗಿ ಇವೆಲ್ಲ ಕ್ಲಬ್ಬುಗಳಿಗೆ ನಾಯಕನಾಗುವ ಸಂದರ್ಭವೊದಗಿತು. ನಮ್ಮ ಮುಂದಾಳು ಯಾರ ಎಂದ ಅವರ ಪ್ರಶ್ನೆಯೆತ್ತುವ ಮೊದಲೇ ಎಲ್ಲ ಜರ್ಮನರ ಕ್ಲಬ್ಬುಗಳ ಇವನ ಸಂಘಜೀವನಕ್ಕೆ ಮೆಚ್ಚಿ, ಇವನೇ ಪರಮೋತ್ತಮನೆಂದ ಆರಿಸಿದರು. ಆ ವರ್ಷವೇ (1933) ಹಿಟ್ಲರನ ಅಧಿಕಾರ ಸೆಳೆದುಕೊಂಡನು. ಝೆಕ್ಕರ [illegible]

ಆಗಲೆ ಹೆನ್ಲಿಯನನು ಜರ್ಮನರ ರಾಜಕೀಯ ಅಭ್ಯುದಯಕ್ಕಾಗಿ ತನ್ನವರನ್ನು ಮುನ್ನಡೆಯಿಸ ತೊಡಗಿದನು. ವ್ಯಾಪಾರ ಇಳಿದಿತ್ತು. ಸಾವಿರಾರು ಜರ್ಮನರು ಉದ್ಯೋಗವಿಲ್ಲದಿದ್ದರು. "ಪಕ್ಷವಿಲ್ಲ, ಭೇದವಿಲ್ಲ, ಜರ್ಮನರೆಲ್ಲ ಒಂದಾಗಿರಿ. ನಾನು ನಿಮ್ಮನ್ನು ನಡೆಸುವೆನು" ಎಂದೇ ಇವನೆಂದನು.

ಸಂಪತ್ತು ಶೂನ್ಯವಾಗುವಂತೆ ನಾಲ್ಕುದಿಕ್ಕುಗಳನ್ನು ಮುರಿಯುತ್ತ ಕಾಲಚಕ್ರವು ಉರುಳಿತು. ಇದೇ ಅತ್ಯನುಕೂಲ ಸಂದರ್ಭವೆಂದು ಈತನು ತಿಳಿದು ನಾಝಿಗಳನ್ನೂ ತನ್ನ ಕೂಟಗಳಿಗೆ ಸೇರಿಸಿಕೊಂಡು ಕಳೆದ ಒಕ್ಟೋಬರದಲ್ಲಿ ಪ್ರೇಗ್ ನಗರದಲ್ಲೇ [ರಾಜಧಾನಿ] ಒಂದು ಪರಿಷತ್ತನ್ನು ಕರೆದುಬಿಟ್ಟನು. ರಾಜ್ಯದ ಅಧಿಕಾರಿಗಳಿಗೆ ತಿಳಿಸದೆ ಸಭೆ ಕರೆದುದರಿಂದ ಪೋಲೀಸರು ಸಭಾಭಂಗವನ್ನುಂಟ ಮಾಡುವಾಗ ಇವನು ಅಯುಕ್ತವಾಗಿ ನುಗ್ಗಿಸಿದ ಒಳತಾಯಿತು. ತಾನೆಣಿಸಿದ್ದೊಂದು, ಆದುದು ಬೇರೇ ಒಂದು – ಎಂದು ಕೂಗಿದನು.

[illegible] ಜರ್ಮನಿಯ [illegible] ಬೆಂಬಲಕ್ಕಾಗಿ ಓಡಿಬಂದರ [illegible] ಇವನು [illegible] ಪ್ರಜಾಸತ್ತೆಯ ತನಗೆ ವಿಶ್ವಾಸವುಂಟೆಂದೂ ಆದರೆ ಈಗಣ ಪಾರ್ಲಿಮೆಂಟ [illegible] ಆದಾಗ ಅವನು [illegible] ಕಟ್ಟಿಸಿದನ.

[illegible]

ಅವನ ಕೈಸನ್ನೆ ಕಂಡರೂ ನೂರು ಮಲಿಯ ಜರ್ಮನರು ಸಿದ್ಧರಾಗಿರುವರು. ಒಸ್ಟ್ರಿಯವು ಜರ್ಮನಿಗೆ ಸೇರಿದ್ದೇ ಇವನ ಭಾಗ್ಯದೇವತೆಯು ಹಸನ್ಮುಖಿಯಾಗಿರುವಳು.

ಝೆಕ್ಕ ಸರಕಾರದಲ್ಲಿರುವ ಮುಖ್ಯೋದ್ಯೋಗಸ್ಥರಲ್ಲಿ ಕೆಲವರು ಇವನಿಗೆ ವಶವಾಗಿರುವರು; ಝೆಕ್ಕ ಸರಕಾರವು ಇವನಿಗೆ ವಿರುದ್ಧವಾಗಿ ನಿಂತರೇ ಹಿಟ್ಲರನಿಗೆ ವಿರುದ್ಧವಾಗಬೇಕಾಗಿ ಬಂದಿದೆ. ಝೆಕ್ಕ ರಾಜ್ಯವು ಉತ್ತಮ ಕ್ರಮಕ್ಕೆ ಒಳಪಟ್ಟಿದೆ ನಿಜ, ಹೆನ್ಲಿಯನನೂ ಪ್ರಜಾಸತ್ತೆಗೆ ಸೋತಿದ್ದವನು. ಆದರೆ ಈಗ ಎಲ್ಲ ಹಿಟ್ಲರನ ಆಜ್ಞೆಗೆ ಒಳಗಾಗಿ ನಡೆಯಬೇಕಾಗಿ ಬಂದಿದೆ.

ಸ್ಲೇವ್ ಐಲೆಂಡ್

"ಲೋಧ್ರ"ದ ಹಲವು ಬಾಟ್ಲುಗಳನ್ನು ನಾನು ಉಪಯೋಗಿಸಿದ್ದೇನೆ. ಅವುಗಳಿಂದ ನನಗೆ ಬಹಳ ಪರಿಹಾರ ದೊರೆಯಿತೆಂದು ಕೇಳಿ ತಮಗೆ ಸಂತೋಷವಾಗಬಹುದು. ನನ್ನ ಈಗಿನ ಕಾಯಿಲೆಗಾಗಿ ನಾನು ಹಿಂದೂಸ್ಥಾನದ ಮತ್ತು ಸಿಲೋನಿನ ಅನೇಕ ಡಾಕ್ಟರುಗಳಿಂದ ಚಿಕಿತ್ಸೆ ಪಡೆಯುತ್ತಿದ್ದೇನೆ. ಆದರೆ ಗುಣವೇನೂ ಆಗಲಿಲ್ಲ.

೧೦ ವೆಲ್ಲನ್ ಪ್ಯಾಸೇಜ್
ಸ್ಲೇವ್ ಐಲೆಂಡ್, ಕೊಲಂಬೊ

ಶ್ರೀಮತಿ ಥೆರೇಸಾ ಅಂಡ್ರೂ

ತಯ್ಯಾರಿಸುವವರು: — ಕೇಸರಿ ಕುಟೀರಂ, ಮದರಾಸು.

ದ್ರಾವಕಾಧಿಕ್ಯ.

ಉದರದೊಳಗೆ ದ್ರಾವಕಾಧಿಕ್ಯವಾಗುವುದು ಆಧುನಿಕ ಕಾಲದ ಒಂದು ದಂಡನೆಯು – ಕಾಲನಿಯಮವಿಲ್ಲದ ಊಟಗಳು, ಅಜೀರ್ಣದಿಂದ ಆಹಾರವು ಕೊಳೆಯುವುದು, ಅಯೋಗ್ಯ ಆಹಾರ, ಮನೋವ್ಯಥೆ, ಇವೆ ಮೊದಲಾದವುಗಳು. ಅದರ ಕಾರಣಗಳು ಕಾರಣ ಯಾವುದೆ ಇರಲಿ ಅದನ್ನು ಖಂಡಿತವಾಗಿಯೂ ಗುಣಪಡಿಸಬಹುದು.

ದ್ರಾವಕಾಧಿಕ್ಯವನ್ನು ಗುಣಪಡಿಸಲು, ನೀವು ಆಲ್ಕೇಲಿ ಪದಾರ್ಥವನ್ನು ಸೇವಿಸಬೇಕು. ಅದ ದ್ರಾವಕ ವಿರೋಧಿಯು. [illegible]

[illegible]

Alex C. Maclean

[illegible]

[illegible]

ಸ್ಟೆಡ ವ್ಹರ ಬಿಲ್ಡಿಂಗ್ ಹರ್ನ್ಬಿ ರೋಡ್ ಮುಂಬಯಿ

S N 66

ದಿ ಕಂಬಾಯಿಂಡು ಬುಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ದೀಪಾಲಂಕಾರಗಳ ಸೊಬಗು } **ಚಿತ್ತಾಕರ್ಷಣೀಯ ಚಾಮುಂಡಿ ಬೆಟ್ಟದ ನೋಟ.** { ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟ ಅರಮನೆಯ ಬೆಡಗು—

ಮೈಸೂರು ಶ್ರೀಮನ್ಮಹಾರಾಜರವರ ಜನ್ಮದಿನಾಚರಣೆಯ ಮಹೋತ್ಸವ.

ತಾರೀಕು **8—6—1938** ಪುರಮೆರವಣಿಗೆ ತಾರೀಕು **8-6-1938**

ಇದೇ ಬರುವ ತಾರೀಕು 8—6—38ರಲ್ಲಿ ಮೈಸೂರಲ್ಲಿ ಜರಗುವ ಶ್ರೀ ಮನ್ಮಹಾರಾಜರವರ ಜನ್ಮ ದಿನಾಚರಣೆಯ ಮಹೋತ್ಸವವನ್ನು ನೋಡ ಬಯಸುವವರಿಗೆ ಇಲ್ಲಿಂದ ಬೆಳಿಗ್ಗೆ 5-30, 6, 6—30, 7—15ಕ್ಕೆ ಹೊರಡುವ ನಮ್ಮ ಸರ್ವೀಸುಗಳಲ್ಲಿ ಹೊರಟರೆ, ಅಂದೇ ಸಾಯಂಕಾಲದೊಳಗೆ ಸುಖಕರವಾಗಿ ಮೈಸೂರಿಗೆ ತಲ್ಪುವಿರಿ

ಮಂಗಳೂರಿನಿಂದ ಮಡಿಕೇರಿ ಮಾರ್ಗವಾಗಿ ಮೈಸೂರಿಗೆ ಬಸ್ಸು ಚಾರ್ಜು ರೂಪಾಯಿ **4—4—0** ಮಾತ್ರ.

ದೀಪಾಲಂಕಾರಗಳಿಂದಲಂಕೃತವಾದ ಅರಮನೆಯ ಸೊಬಗು— ಬೃಂದಾವನದ ಕಾರಂಜಿಗಳ ನೋಟ.

ಚಾಮುಂಡಿ ಬೆಟ್ಟದ ಮೇಲೆ ಶೋಭಿಸುವ ಶ್ರೀ ಚಾಮುಂಡೇಶ್ವರೀ ದೇವಾಲಯದ ದರ್ಶನ— ಕನ್ನಂಬಾಡಿ ಕಟ್ಟೆಯ ಅತ್ಯಪೂರ್ವ ನೋಟ ಇವೇ ಮೊದಲಾದ ಚಿತ್ತಾಕರ್ಷಣೆಯ ಸ್ಥಳಗಳನ್ನು ನೋಡಿ ಆನಂದಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

THE

Canara Industrial & Banking Syndicate Ltd.,

Will open new Branches **at suitable centres** in order to **extend** their facilities and service to wider areas

Young men, preferably graduates, not above the age of 30 and of good influence and coming from business circles and respectable families will be enrolled for training for the post of Agents and Inspectors of Branches under the following conditions:

A sum of Rs. 500 will have to be first paid to the Syndicate by each of the candidates selected for training which amount is not returnable in any case.

Such candidates will have to be on probation at the Head Office of the Syndicate and undergo a course of practical training for one year, during which period they will have to attend 250 lectures on Banking and other allied subjects

During the period of probation, each will be given free quarters and Rs. 25 per month as stipends, from the Syndicate

They must pass an examination which will be held by the Bank at the end of one year. Those who fail will have to undergo an additional training for a period of 3 months during which period no stipends as above mentioned will be allowed

After passing the examination or further training as the case may be, they will be given suitable posts on a grade of Rs 10 10/2-200 (No extra allowance is given except free quarters wherever available and attached to Office premises

Applications for the posts under the above mentioned terms are ~~received up to 25th June, 1938, by which date they should reach the Head~~ Office of the Syndicate Applications should be in the Applicants' own handwriting and they must correctly state their age, qualification, the languages they know to read, write and speak and shall be accompanied by at least three recent testimonials (originals) regarding character, qualification etc, wherever possible they may be submitted through one of the Branches of the Syndicate.

30TH MAY 1938
"Mukund Nivas"
UDIPI

T. M. A. PAI,
Chairman

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು ಜೀವನ ಬದಲಾಯಿಸುವುದು ಒಳಿತು ಕೆಡುಕುಗಳನ್ನು ತೋರಿಸುವುದು ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿದ್ಯೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ [illegible] ನಿವಾರಣೆ ಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲ, ಗ್ರಹಶಾಂತಿಯೊಂದೇ ಉಪಾಯ. ನವಗ್ರಹ ಯಂತ್ರ [illegible] ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. [illegible] ಈ ವಸ್ತುವಿನಿಂದ ಮಹರ್ಷಿಗಳನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಉಪಯೋಗವನ್ನು ಕಳೆದುಕೊಳ್ಳುವಿರಿ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳಬಯಸಿದರೆ [illegible] ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. [illegible] ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ [illegible] ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ [illegible] ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳ [illegible] ನಿಮ್ಮ ಎಲ್ಲಾ ವಿಧವಾದ ಆಸೆಗಳನ್ನೂ ಪೂರ್ತಿ ಮಾಡುವುದು.

[illegible]



[illegible]

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಅಸ್ವೋಕೃತವಾದದ್ದು — ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು [illegible] ಬೇರೆ ಬೇರೆ ಹೆಸರುಗಳನ್ನಿಟ್ಟು [illegible] ತಮ್ಮ ಮನಸ್ಸಿಗೆ ತಿಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ [illegible] ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು. — [illegible] ನವಗ್ರಹ ಯಂತ್ರಗಳನ್ನು [illegible] ಈ ಯಂತ್ರಗಳು ನನಗೆ [illegible] ಲಾಭವನ್ನುಂಟು ಮಾಡಿವೆ. [illegible] ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

[illegible] ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ [illegible] ಯಂತ್ರವು ನಿಮ್ಮ ಮನೆಗೆ ಬಂದು [illegible]

ವಿಳಾಸ — **Pandit B. R. BHAVISYAVAKTA (S. S. M.) Bombay, No. 4.**

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಗಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಸ್ವದೇಶಾಭಿಮಾನಿ

ಸಂಪುಟ [illegible]] ತಾರೀಖು ೧೦ನೇ ಜೂನ್ ೧೯೩೮ (10-6-1938) [ಸಂ

★

24 ಪುಟಗಳು 24

ಅನುಕ್ರಮಣಿಕೆ

ಈ ವಾರದ ಸಂಕ್ಷಿಪ್ತ
[illegible]

ಹಸ ಮತ್ತು [illegible] ಶಕ್ತಿಯ
ಪ್ರತಿ[illegible]

❀

[illegible] ಷಾಹಾ, [illegible]
ಮುಂದಾಳ[illegible]

❀

[illegible]
[illegible]

❀

ಹಿಟ್ಲರನನ್ನು [illegible]
ದಾರಿಸಿದುದರ ಪರಿಣಾಮ
[illegible]ನ ಸೇನೆಯಲ್ಲಿ
ದಂಗೆ

❀

ಫ್ರೆಂಚ್ ಪ್ರಾಂತ್ಯದ ಮೇಲೆ
ಸಿಡಿಗುಂಡುಗಳು
ಮತ್ತೊಂದು ಕಿರುಕುಳ

❀

ಮತ್ತೊಂದು ಫೆಡರೇಶನು.
ಅಖಿಲಭಾರತದ ಜಮೀನ್ದಾ
ರರ ಮಹಾಸಮೂಹ

ಅಭಿನಯನೇತ್ರಿ ಕಮಲೇಶ ಕುಮಾರಿ

[illegible]
[illegible]
ಚಿತ್ರದಲ್ಲಿ ಅಭಿನಯಿಸುತ್ತಾಳೆ.

WHAT BUILDS A GREAT BANK.

The two vital features of a Bank are its financial policy and its service. When for over thirty years a Bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF A CRORE.

ESTD. 1906.
CANARA BANK LIMITED.

SWADESHABHIMANI, ESTD.

ವಿಚಿತ್ರ ಪ್ರಪಂಚ

ವಿದ್ಯುಚ್ಛಕ್ತಿಯನ್ನು ಪಳಗಿಸುವಿಕೆ

ಲಂಡನಿನ ಕ್ವೀನ್ ಮೇರಿ ಕಾಲೇಜಿನ ಇಲೆಕ್ಟ್ರಿಕಲ್ ಲೆಬೋರೆಟರಿಯಲ್ಲಿ ವಿದ್ಯುಚ್ಛಕ್ತಿಯನ್ನು ಪಳಗಿಸುವ ಒಂದು ನೂತನ ಸಂಶೋಧನ ನಡೆಯುತ್ತದೆ.

ವಿದ್ಯುಚ್ಛಕ್ತಿಯು ಮಹಾ ಅಪಾಯಕರ, ಗ್ರಿಡ್ ಸಿಸ್ಟೆಮ್' ಎಂಬ ವಿದ್ಯುಚ್ಛಕ್ತಿಯ ಸಾಧನಕ್ಕೆ ಒಂದು ಸೆಕುಂಡಿನ ಒಂದು ಮಿಲಿಯಂದ ೫ ಮಿಲಿಯದ ಅತ್ಯಲ್ಪ ಸಮಯದೊಳಗಾಗಿ ಗ್ರಿಡ್ ಟ್ರಾನ್ಸ್‌ಫೊರ್ಮರನ್ನು ಧ್ವಂಸ ಮಾಡುವ ಸಾಮರ್ಥ್ಯವು ಅದಕ್ಕಿದೆ. ೧೦೦ ಮೈಲು ವ್ಯಾಸದಲ್ಲಿರುವ ಸ್ಥಳಕ್ಕೆ ತತ್‌ಕ್ಷಣ ಅಂಧಕಾರವನ್ನು ಮುಸುಕುವಂತೆ ಮಾಡಬಲ್ಲದು, ವಿದ್ಯುಚ್ಛಕ್ತಿಯನ್ನು ಪೂರ್ಣ ಪಳಗಿಸುವುದು ಒಂದು ವೇಳೆ ಕಷ್ಟ ಸಾಧ್ಯವೆಂದು ತೋರಿದರೂ ಅದರ ಅಪಾಯಕರವಾದ ಸಾಮರ್ಥ್ಯವನ್ನು ತಗ್ಗಿಸಬಹುದೆಂದು ಲಿಬೋರೆಟರಿಯ ಮುಖ್ಯಾಧಿಕಾರಿಗಳ ಅಂಬೋಣ

ಗಾಜಿನ ಕಿಟಕಿಯುಳ್ಳ ತತ್ತಿ

ಬರ್ಲಿಂಗ್‌ಟನ್ ಹೌಸ್ ಎಂಬಲ್ಲಿ ರೊಯಲ್ ಸೊಸೈಟಿ ಎಂಬ ವಿಜ್ಞಾನಶೋಧಕರ ಒಂದು ಕೂಟದಲ್ಲಿ ಗಾಜಿನ ಕಿಟಕಿಯುಳ್ಳ ತತ್ತಿಯು ಜನರಿಗೊಂದು ಆಶ್ಚರ್ಯವನ್ನು ಉಂಟುಮಾಡಿತು. ಸ್ಯೆಂಟ್ ಮೇರಿ ಆಸ್ಪತ್ರೆಯ ದಾಕುತಾಳುವ ಶಾಖೆಯ ಸಹಾಯಕರಾದ ಡಾ। ಮ್ಯೆಲ್ ವೀಟ್ ಎಂಬವರು ಈ ಮೊಟ್ಟೆಯನ್ನು ತಯಾರು ಮಾಡಿದರು ಮೊಟ್ಟೆಯಲ್ಲಿರುವ ಸಜೀವ ಅಣುಗಳ ಕ್ರಿಯಾಶೋಧನೆಗಾಗಿ ಅವರು ಈ ತರದ ನೂತನ ಉಪಾಯವನ್ನು ಮಾಡಿದ್ದರಂತೆ

ಶಾಂತಿ ರಕ್ಷಕರಿಗೆ ಚರ್ಮವ್ಯಾಧಿಯಿಂದ ಅಶಾಂತಿ

ಲಂಡನಿನ ಹೆಂಡನ್ ಪೊಲೀಸ್ ಲಿಬೊರೆಟರಿಯಲ್ಲಿ ಅತಿ ವಿಚಿತ್ರ ಶೋಧೆಯೊಂದು ನಡೆಯುತ್ತದೆ ಯಾವುದೋ ಒಂದು ಅಪೂರ್ವ ಚರ್ಮವ್ಯಾಧಿಯು ಶಾಂತಿರಕ್ಷಕರಾದ ಪೊಲೀಸ ಆಫೀಸರರಿಗೇ ತಗಲುತ್ತಲಿದೆಯಂತೆ. ಇದರಿಂದಾಗಿ ನಗರರಕ್ಷಿಂತಲೂ ಮಿಕ್ಕಿದ ಪೋಲೀಸ್ ಆಫೀಸರರಿಗೆ ಶಾಂತಿಯಿಲ್ಲದೆ ನರಳುತ್ತಿರುವರಂತೆ ಬಹುಶಃ ಈ ವ್ಯಾಧಿಯು ಆಫೀಸರರ ಯುನಿಫೋರ್ಮು ಉಡಿಗೆಗಳಿಂದ ತಲೆದೋರಿರಬಹುದೋ ಏನೋ ಎಂಬ ಸಂಶಯದ ಆಧಾರದಿಂದ ಅಲ್ಲಿರುವ ಯುನಿಫೋರ್ಮು ಉಡಿಗೆಗಳನ್ನು ಪರೀಕ್ಷಿಸುತ್ತಿರುವರು

ಅತ್ಯಲ್ಪ ಖರ್ಚಿನಿಂದ ಶಾಖ

ಮಿನ್ನೆಸೋಟದ ಆರ್ಥರ್ ಲಜಾರಸ್ ಎಂಬ ಮಹಸೀಯರೊಬ್ಬರು ಅತ್ಯಲ್ಪ ಖರ್ಚಿನಿಂದ ಕೋಣೆಗಳಲ್ಲಿ ಶಾಖವನ್ನುಂಟುಮಾಡುವ ಒಂದು ವಿಚಿತ್ರ ವಿಧಾನವನ್ನು ಕಂಡು ಹಿಡಿದಿರುವರು. ಕಟ್ಟಿಗೆ ಕಲ್ಲಿದ್ದಲುಗಳ ಸಹಾಯವಿಲ್ಲದೆ ಏರೀ ಘರ್ಷಣದಿಂದಲೇ ಶಾಖವನ್ನುಂಟುಮಾಡುವುದೇ ಅವರ ವಿಚಿತ್ರ ವಿಧಾನ ಇರಲಿ, ಆರ್ಥಿಕ ದುಸ್ಥಿತಿಯು ಈ ಕಾಲದಲ್ಲಿ ಹೊಟ್ಟೆ ಬಟ್ಟೆಗಳಿಗೆ ಕಡಿಮೆಯಾದರೂ ಶೀತ ಪ್ರದೇಶಗಳ ನಿವಾಸಿಗಳಿಗೆ ಬೆಚ್ಚಗೆ ಮಲಗಿಕೊಳ್ಳಲಾಯಿತಲ್ಲವೇ?

ವಿದ್ಯುಚ್ಛಕ್ತಿಯ ನೂತನ ಉಪಯೋಗ

ಅಮೇರಿಕದ ನೋರ್ತ್‌ವೆಸ್ಟರ್ನ ವಿಶ್ವವಿದ್ಯಾಲಯದ ಮಾನಸಿಕ ಶಾಸ್ತ್ರಜ್ಞರೊಬ್ಬರು ಮಕ್ಕಳು ನಿದ್ದೆಯಲ್ಲೇ ಜೊಲ್ಲು ಸುರಿದು ಹಾಸಿಗೆಯನ್ನು ಒದ್ದೆ ಮಾಡದ ಹಾಗೆ ವಿದ್ಯುಚ್ಛಕ್ತಿಯ ಒಂದು ನೂತನ ಯಂತ್ರವನ್ನು ಕಂಡುಹಿಡಿದಿರುವರು ಬೆಡ್‌ಶೀಡಿಗೆ ನೆಗೆಟಿವ್ ಮತ್ತು ಪೊಜಿಟಿವ್ ವಾಯರ್‌ಗಳನ್ನು ಇಬ್ಬದಿಗಳಲ್ಲಿ ಸಿಕ್ಕಿಸಿದ್ದಾರೆ. ಆ ಶೀಡು ಒದ್ದೆಯಾದ ಕೂಡಲೇ ವಿದ್ಯುಚ್ಛಕ್ತಿಯ ಅಲ್ಪ ಪ್ರವಾಹವೊಂದು ಬಂದು ಗಂಟೆಯೊಂದನ್ನು ಬಾರಿಸಿ ಮಗುವನ್ನು ಎಬ್ಬಿಸಿ ಬಿಡುತ್ತದೆ.

ಅಮೇರಿಕದ ಬಾಲ ವಿಜ್ಞಾನಿ

ಹ್ಯಾಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಪಡೆಯುತಿದ್ದ ೧೬ ವರ್ಷ ಪ್ರಾಯದ ವಿದ್ಯಾರ್ಥಿಯೊಬ್ಬನು, ರೇಡಿಯಮಿನ ಬದಲಾಗಿ ಕೃತಕ ರೇಡಿಯಂ ಎಂಬುದೊಂದು ವಿಚಿತ್ರ ವಸ್ತುವನ್ನು ಕಂಡು ಹಿಡಿದಿರುವನು ಅವನು ತನ್ನ ಈ ಶೋಧನೆಯನ್ನು ಅಮೇರಿಕದ ಪ್ರಮುಖ ವಿಜ್ಞಾನಿಗಳ ಮತ್ತು ರೇಡಿಯಂ ಕೋವಿದರ ಸಭೆಯಲ್ಲಿ ಪ್ರದರ್ಶಿಸಲಿರುವನಂತೆ ಅವನ ಈ ವಿಚಿತ್ರ ವಿಧಾನದಿಂದ ಅಮೇರಿಕದ ಕಲವು ಗಸ್ತಿಗಳಿಂದ ಕೃತಕ ರೇಡಿಯಂ ಪಡೆಯಬಹುದಂತೆ. ನಿಜವಾದ ರೇಡಿಯಂ ಗೇ ೫೦೦೦ ಪೌಂಡುಗಳಾದರೆ ಕೃತಕ ರೇಡಿಯಂ ಗ್ರೇನಿಗೆ ೫೦ ಪೌಂಡು ಬೆಲೆ ಬಿದ್ದೀತಂತೆ. ಇರಲಿ ಏತ್ವ್ಯಯದ ಧಾರಿಗಳನ್ನು ಹುಡುಕುವವರು ಹೆಚ್ಚಿದರೆ ದೇಶದ ಸಂಪತ್ತು ಯುದ್ಧ ಸನ್ನಾಹಗಳಿಗೆ ಮಿಗಿಸಬಹುದಲ್ಲವೇ?

ಎಕ್ಸರೇ ಉಪಚಾರದಿಂದ ತಲೆ ಬೋಳು

ಅಮೇರಿಕದ ಕಿಂಗ್ಸ್ ಕೌಂಟೀ ಆಸ್ಪತ್ರೆಯಲ್ಲಿ ಮಿಸ್ಸೆಸ್ ಬೆಲ್ಲಾಲಿಸನ್ ಎಂಬ ಒಬ್ಬಳು ಎಕ್ಸರೇ ಪ್ರವೀಣೆ, ಆಲೆಯೊವೆ ರಿನೆ ಬರ್ಕೊವಿಚ್ ಎಂಬ ೯ ವರ್ಷದ ಬಾಲಿಕೆಗೆ ಎಕ್ಸರೇ ಉಪಚಾರ ಮಾಡಿದ್ದಳಂತೆ ಅದರಿಂದಾಗಿ ಆ ಹುಡುಗಿಯ ತಲೆಕೂದಲುಗಳೆಲ್ಲವೂ ಉದುರಿ ತಲೆ ಬೋಳಾಯಿತ ಆಕೆಯು ನಷ್ಟಕ್ಕಾಗಿ ದಾವೆ ಹೂಡಲು ನ್ಯಾಯಾಧೀಶರು ಹುಡುಗಿಗೆ ೬೦೦ ಪೌಂಡುಗಳನ್ನೂ ಆಕೆಯ ತಂದೆಗೆ ೪೦೦ ಪೌಂಡ ಗಳನ್ನೂ ನಷ್ಟ ಪರಿಹಾರ ದ್ರವ್ಯವಾಗಿ ಎಕ್ಸ್‌ರೇ ಪ್ರವೀಣೆಯು ತೆರಬೇಕಾಗಿ ತೀರ್ಪು ಕೊಟ್ಟರ ಹೀಗಾದರೆ ಎಕ್ಸ್‌ರೇ ಪ್ರವೀಣೆಯ ತಲೆ ಹೇಗಾದೀತು?

ಜಗತ್ತಿನ ಅತಿ ಕುಳ್ಳ ಬೇಡ

ಯುಗೊಸ್ಲೇವಿಯದಲ್ಲಿ ಬೊಶ್ಕೊ ಉಟ್ಕೊವಿಚ್ ಎಂಬವನು ಜಗತ್ತಿನ ಬೇಡರಲ್ಲಿ ಅತಿ ಕುಳ್ಳನು ಬರೇ ೨೭ ಇಂಚ ಎತ್ತರ ಆದರೂ ತನಗಾಗಿಯೇ ಮಾಡಿಸಿದ ಒಂದು ವಿಚಿತ್ರ ಬಂದೂಕಿನಿಂದ ತೋಳ, ಕರಡಿ, ಕಾಡು ಹೋತಗಳನ್ನು ಗುಂಡಿಕ್ಕಿ ಕೊಲ್ಲುವಷ್ಟು ಶಕ್ತನಂತೆ ನಂತೆ ಮೂರ್ತಿ ಸಣ್ಣದಾದರೇನ ? ಕೀರ್ತಿ ದೊಡ್ಡದಾಗಿರಬಾರದೆ!

ರಕ್ತದಿಂದ ಬೀಜ ಪರೀಕ್ಷೆ

ಕಳೆದ ಬಾರಿ ಡಾ। ಲಿಂಚ್ ಎಂಬವರು ರಕ್ತ ಪರೀಕ್ಷೆಯಿಂದ ಒಂದು ಮಗುವು ತಂದೆಯ ಬೀಜಕ್ಕೆ ಹುಟ್ಟಿದಲ್ಲವೆಂದು ಸ್ಪಷ್ಟಪಡಿಸಿದುದನ್ನು ಓದಿರುವಿರಲ್ಲವೇ? ಇತ್ತೀಚೆಗೆ ಪಿತೃವರ್ಜಿತ ವ್ಯಾಜ್ಯಗಳಲ್ಲಿ ರಕ್ತ ಪರೀಕ್ಷೆಯನ್ನು ಕಡ್ಡಾಯ ಮಾಡಬೇಕೆಂದು ಲಂಡನಿನಲ್ಲಿ ಒಂದು ಚಳವಳವುಂಟಾಗಿದೆ ಈ ಚಳವಳದಲ್ಲಿ ಅಲ್ಲಿನ ಪ್ರಮುಖ ವೈದ್ಯರೂ, ಪಾರ್ಲಿಮೆಂಟಿನ ಸದಸ್ಯರೂ ಕೈಹಾಕಿರುವರು ಸದ್ಯದಲ್ಲೇ ಈ ಪ್ರಶ್ನೆಯು ಹೌಸ್ ಆಫ್ ಕಾಮೆನ್ಸಿನಲ್ಲಿ ಚರ್ಚೆಗೆ ಬರಲಿರುವುದು ಜಯವಾಗಲಿ ಆ ಮಹಸೀಯರ ಸತ್ಕಾರ್ಯ! ಪತಿವ್ರತಾ ಧರ್ಮಕ್ಕೊಂದು ಸುಲಭ ಪರೀಕ್ಷೆಯ ವಿಧಾನ ದೊರಕಿತೆಂದಾಗಲಿ.

ಐದು ತಿಂಗಳ ತನಕ ಶವವು ಕೊಳೆಯದೆ?

ಒಬ್ಬ ಮುದಿ ಕಾಬೂಲಿಯ ಪ್ರಾರ್ಥನೆಯ ಮೇರೆಗೆ ಭಾರತ ಮಾತೆಯು ಆತನ ಮಡದಿಯ ಶವವನ್ನು ೫ ಮಾಸಗಳ ತನಕ ಜೋಪಾನ ಮಾಡಿದಳು ಈ ವಿಚಿತ್ರ ಸಂಗತಿಯು ಲಕ್ನೋ ಎಂಬಲ್ಲಿ ನಡೆಯಿತು ಒಬ್ಬ ಅಫಘಾನಿ, ಅಕ್ಬರ್ ಖಾನ್ ಎಂಬವನ ತನ್ನ ಮಡದಿಯೊಂದಿಗೆ ೫ ತಿಂಗಳ ಹಿಂದೆ ಸ ಚಾರಾರ್ಥವಾ ಪಂಜಾಬಿಗೆ ಬಂದನು ದಾರಿಯಲ್ಲಿ ಆತನ ಭಾರ್ಯೆಯು ಅಕಾಲ ಮರಣಕ್ಕೆ ತುತ್ತಾದಳ ಆಕೆಯ ಶವವನ್ನು ದಾರಿಯಲ್ಲಿಯೇ ಹುಗಿದು ಆತನು ಮರಳಿ ಅಫಘಾನಿಸ್ತಾನಕ್ಕೆ ತೆರಳಿದನ ಬಳಿಕ ಆತನು ಅಫಘಾನಿಸ್ತಾನದ ಸರಕಾರದಿಂದ ತನ್ನ ಹೆಂಡತಿಯ ಶವವನ್ನು ತನ್ನ ದೇಶಕ್ಕೆ ತಂದು ಸಂಸ್ಕಾರ ಮಾಡುವದಕ್ಕೋಸ್ಕರ ಹುಕುಂ ಪಡೆದು ಶವವನ್ನು ಅಗೆದು ಪರೀಕ್ಷಿಸಲಾಗಿ ಅದು ಏನೊಂದು ಕೊಳೆಯದೇ ಹುಗಿಯುವ ಮೊದಲು ಹೇಗಿತ್ತೋ ಅದೇ ರೀತಿ ಇತ್ತು ಕಾರಣ ಆ ಕಾಬೂಲಿಯು ತನ್ನ ಮಡದಿಯ ಶವವು ಒಂದ ವರ್ಷ ಪರ್ಯಂತರ ಕೊಳೆಯದ ಹಾಗೆ ಅದನ್ನು ಕಾಪಾಡುವಂತೆ ಭಾರತಮಾತೆಯಲ್ಲಿ ಆತನು ಪ್ರಾರ್ಥಿಸಿದುದಾಗಿ ತಿಳಿದು ಬಂತು ಭಾರತಮಾತೆಯು ತನ್ನ ಮಕ್ಕಳ ಮೊರೆಯನ್ನು ಪಾಲಿಸುವ ಈ ರೀತಿಯು ಬಹಳ ಸೋಜಿಗವಲ್ಲವೇ?

— — — —



ಅಸೌಖ್ಯದ ನಂತರ
ತ್ವರೆಯಾಗಿ ಆರೋಗ್ಯ
ವನ್ನುಂಟುಮಾಡುವುದು

ಓವಲ್ಟೀನು ಬಹಳ ಶ್ರೇಷ್ಠವಾದ ಪುಷ್ಟಿಯುಕ್ತ ಆಹಾರ ಪಾನೀಯ ಹಾಗೂ ಪ್ರಕೃತಿಯ ಉತ್ತಮ ಪೌಷ್ಟಿಕ ಪದಾರ್ಥಗಳಾದ, ಮಾಲ್ಟ್ ಸತ್ವದಿಂದಲೂ ದನದ ನವ ಕೆನೆಹಾಲಿನಿಂದಲೂ ತಯಾರಿಸಲ್ಪಟ್ಟದ್ದಾಗಿದ್ದು, ಇದರಲ್ಲಿ ದೇಹಕ್ಕೆ ಅಗತ್ಯವಿರುವ ವಿಟಮಿನ್ ಸತ್ವಗಳು ಕೂಡಿಕೊಂಡಿದೆ ಇದರಲ್ಲಿನ ... ಪೌಷ್ಟಿಕಗಳ ಶ್ರೇಷ್ಠತೆಯು ... ಅಸೌಖ್ಯವಲ್ಲ ... ದೇಹಗಳನ್ನು ಪುಷ್ಟಿಗೊಳಿಸಿ ಆರೋಗ್ಯವನ್ನುಂಟುಮಾಡುತ್ತದೆ

... ದಿನ ... ಜೀವನದ ... ಆರೋಗ್ಯ, ಶಕ್ತಿ ಚೈತನ್ಯಗಳನ್ನುಂಟುಮಾಡುವುದು,

'ಓವಲ್‌ಟೀನ್'

ಟಾನಿಕ್ ಆಹಾರ ಪಾನೀಯ

OVALTINE

ಮೆದುಳು, ನರ ಮತ್ತು ಮಾಂಸಗಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಸ್ಟೋರಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರೆಯುತ್ತದೆ
ಏಜಂಟರು — ಜೇಮ್ಸ್ ರೈಟ್, 85 ಎ ಕ್ಲಿವನ್ ಸ್ಟ್ರೀಟ್, ಕಲ್ಕತ್ತ,
ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ

OV/429

ರಕ್ಷ್ಯೈರ್ಮಹಾರ್ಹೈಸ್ತುತುಷುರ್ನ
ದೇವಾ । ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ
SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲುಸುಪೆಮ ರತ್ನಗಳು
ಸಾ । ಗರವ ಮಥಿಸಲು ಸುರರಿಂ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥
ಗರಳಕವರಂಜಿದರೆ! ಸುಧೆಯನ್ನು
ಪಡೆಯುವನ್ನುದ್ಧರ
ತೆರದಿ ಕಂಠಕರಿ । ತೆರಳ ಬಲ್ಲರೆ!
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಕು ೧೦-೬-೧೯೩೮

ತಾರೀಕು 10-6-1938

ಬ್ರಿಟಿಷರ ವಿಷಯವಾಗಿ ಜಪಾನು ಏನಂತೆ?

ನೌಕಾಧ್ಯಕ್ಷ ಮಸಟಾಕಾ ಎಂದೋ — ಬ್ರಿಟಿಷರ ಧೈರ್ಯ ಚರ್ಮ ಸುಲಿದು ಪೌರ್ವಾತ್ಯ ಜನಾಂಗಗಳಿಗೆ ಬ್ರಿಟಿಷರ ನಿಜಸ್ವರೂಪ ತೋರಿಸದಿದ್ದರೆ, ಈ ಭಾಗದಲ್ಲಿ ಎಂದಿಗೂ ಶಾಂತಿ ನೆಲೆಗೊಳ್ಳದು. ಈ ಮಹತ್ಕಾರ್ಯವನ್ನು ಜಪಾನೇ ಮಾಡಬೇಕಲ್ಲದು

ನೌಕಾಧ್ಯಕ್ಷ ಟೋವಾ ಯುಮೆಟ್ಸು — ಬ್ರಿಟಿಷರಿಗೂ ಜಪಾನಿಗೂ ಯುದ್ಧವಾಗುವ ಸಂಭವವೇ ಕಡಮೆ. ಆದರೆ, ಅಂತಹ ಯುದ್ಧ ನಡೆದರೆ ಬ್ರಿಟಿಷರನ್ನು ಜಪಾನು ಯಾವ ಬಗೆಯಲ್ಲೂ ಹೆದರುವ ಅಗತ್ಯವೇ ಇಲ್ಲ. ಬ್ರಿಟಿಷರಿಗೆ ಭೂಸೇನೆಯ ಪ್ರಯೋಜನವಿಲ್ಲ. ಅವರು ಡೇನ್ಸ್ ಮಾಡಲು ಕಲಿಯಲು ಯೋಗ್ಯರು ಹೊರತು, ಚೀನಿಯರೊಡನೆಯಾದರೂ ನೆಲಭಾಗದಲ್ಲಿ ಹೋರಾಡುವುದಕ್ಕೆ ಸಮರ್ಥರಲ್ಲ

ನೌಕಾಧ್ಯಕ್ಷ ಸೋಸಾ — ಮಹಾಯುದ್ಧ ಕಾಲದಲ್ಲಿ ಬ್ರಿಟಿಷರ ಪ್ರಮಾದವನ್ನು ಏನೆನ್ನಲಿ! ಜನರೊಳಗೆ ದೇಶಭಕ್ತಿ ಹುಟ್ಟಿಸಲು ಸರಕಾರವು ಎಷ್ಟೆಲ್ಲ ಪ್ರಯತ್ನಿಸಿತು! ಮುಂದೆ ಬಂದವರು ಕಡಮೆ, ದೇಶಕ್ಕಾಗಿ ಸಿಪಾಯರಾಗಲು ದಾಖಲಾದವರ ಸಂಖ್ಯೆ ತೀರ ಸಣ್ಣದು. ಆದಕ್ಕಾಗಿ ಇಂಡಿಯದಿಂದ ಸೇನೆಗಳು ಪಶ್ಚಿಮಫ್ರಾನ್ಸಿಗೂ, ಕೆನಡಾ ಆಸ್ಟ್ರೇಲ್ಯಗಳ ಸೇನೆಗಳೊಡನೆ ಹೋಗಬೇಕಾಯಿತು. ಬ್ರಿಟಿಷರ ಯುದ್ಧಗಳಲ್ಲಿ ಹೋರಾಡಲು ಇತರ ದೇಶಗಳ ಸೇನೆಗಳನ್ನೆ ಬ್ರಿಟಿಷರು ಮುಂದೆ ಕಳುಹುವರು. ಬ್ರಿಟಿಷ್ ನೌಕಾಬಲವು ತುಂಬ ಬಲವುಳ್ಳದು. ನಿಜ. ಭೂಸೈನ್ಯದೊಡನೆ ಹೋಲಿಸಿದರೆ ಅದು ಪ್ರಬಲವಾದುದೆನ್ನಬೇಕು

ನೌಕಾಧ್ಯಕ್ಷ ಕಿಸಾಬುರೋ ಮೋರಿಯಾಮಾ — ಪೂರ್ವ ಏಷ್ಯದಿಂದ ಬ್ರಿಟಿಷರನ್ನು ದೂರಕ್ಕೆ ಕಳ್ಳಿರಿ. ಇದೇ ನನ್ನ ಧ್ಯೇಯ

ಹೀಗೆ ಇವರೊಳಗಾದ ಚರ್ಚೆಯ ಮಾತು

ಟೋಕಿಯದಲ್ಲಿ ಪ್ರಮುಖ ಮಾಸ ಪತ್ರವಾದ 'ಹಿನೋದೆ'ದ ಸಲುವಾಗಿ ಆರು ಮಂದಿ ನೌಕಾಧ್ಯಕ್ಷ (ಎಡ್ಮಿರಲ್) ಇಬ್ಬರು ಜನರಲ್ ರೊಳಗೆ ಒಂದು ಸಂಭಾಷಣೆ ನಡೆಸಲಾಗಿದ್ದಿತು. 'ಬ್ರಿಟಿಷರೊಡನೆ ಜಪಾನು ಹೋರಾಡುವುದಾದರೆ ಪರಿಣಾಮವೇನು?' ಎಂಬ ಪ್ರಶ್ನೆಗೆ 'ಬ್ರಿಟಿಷರಿಗೆ ಮನಸ್ಸಿಲ್ಲ ಅಥವಾ ಧೈರ್ಯವಿಲ್ಲ ಎಂಬ ಕಾರಣದಿಂದ ಅವರು ಜಪಾನಿನೊಡನೆ ಹೋರಾಡರು ಎಂಬುದೇ' ಇವರ ಉತ್ತರ

ಜಪಾನಿನ ಭೂಸೈನ್ಯ ಬ್ರಿಟಿಷರಿಗೆ ವಿರುದ್ಧವಾದುದೆಂದೂ, ನೌಕಾಸೈನ್ಯವು ಬ್ರಿಟಿಷರಿಗೂ ಮೈತ್ರಿಯಿಂದಿದೆ ಎಂದೂ ಬ್ರಿಟಿಷರಲ್ಲಿಪ್ಪ ನಂಬಿಗೆಯನ್ನು ಈ ಮೇಲಣ ಸಂಭಾಷಣೆಯು ಅಲ್ಲಗಳೆದಿದೆ. ಎಲ್ಲರೂ ಬ್ರಿಟಿಷದ್ವೇಷಿಗಳೇ!

ನೌಕಾಧ್ಯಕ್ಷ ಮೋರಿಯಾಮಾ — ಚೀನವೇ ಹೇಡಿ, ಆದರೆ ಇಂಗ್ಲೆಂಡು ಸಹಕಾರಿ. ಚೀನವನ್ನು ಪ್ರೋತ್ಸಾಹಿಸಿದ್ದು ಇಂಗ್ಲೆಂಡು ಇಲ್ಲದಿದ್ದಲ್ಲಿ ಯುದ್ಧವಾಗುತ್ತಿರಲಿಲ್ಲ. ಜಪಾನು ಅಭ್ಯುದಯ ಹೊಂದದಂತೆ ಚೀನಕ್ಕೆ ಸಹಾಯ ಮಾಡಿ ಕಡೆದುದು ಇಂಗ್ಲೆಂಡು, ಮೈತ್ರಿಯು ಬೇರೆಯಾದ ದಿನದಿಂದ ಬ್ರಿಟನ್ನಿನ ವರ್ತನವೇ ಹೀಗೆ. ಜಪಾನಿಗೆ ವಿರುದ್ಧವಾಗಿ ಪ್ರಪಂಚ ಹೀಯಾಳಿಕೆ ಸಾರಿದುದು ಬ್ರಿಟನ್ನು. ಬ್ರಿಟಿಷರಿಗೆ ಯುನೈಟೆಡ್ ಸ್ಟೇಟ್ಸ್ ಸಹಾ ಋಣಿಯುವಂತಾಗಿದೆ, ನೇಂಕಿಂಗಿನಲ್ಲಿ ಜಪಾನು ಸಿಡಿಗುಂಡು ಚೆಲಿದುದಕ್ಕೆ ಬ್ರಿಟನ್ನು ಎಷ್ಟು ಕೋರ ಕೆಕ್ಕರಿಸಿತು! ಆದರೂ ಜಪಾನಿನ ನೌಕಾಬಲದಷ್ಟು ಚೆನ್ನಾಗಿ ಯುದ್ಧಕಾಲದಲ್ಲಿ ರಣನೀತಿಯ ಮರ್ಯಾದೆ ಕಾಪಾಡಿದ ಬೇರೆ ನೌಕಾಬಲವೇ ಇಲ್ಲವೆನ್ನಬೇಕು. ನಾವು ಮಾಡಿದುದರ ಮೇಲೆಲ್ಲ ಕಪ್ಪು ಬಳಿಯುತ್ತಿರುವುದೆಂದೇ ಬ್ರಿಟನ್ನಿನ ಉದ್ಯೋಗವಿದೆ. ಪ್ರಾಥಮಿಕ ಶಾಲಾ ಮಕ್ಕಳು ಬರೆದ ಪ್ರಬಂಧದಂತೆ ಒಕ್ಕಣೆಯಲ್ಲಿ ಹುಗೆಸ್ಸನ್ನನಿಗೆ ಗುಂಡಿಟ್ಟುದಕ್ಕಾಗಿ ಬ್ರಿಟಿಷರು ದೂರಿದರಲ್ಲ, — ಮೋಟರಿನ ಒಳಕ್ಕೆ ಕೂತವನಿಗೆ ವಿಮಾನದಿಂದ ಗುಂಡಿಕ್ಕಿದ್ದಾದರೆ ಮೋಟರಿನ ಮಾಡಿಗೆ ತೂತಾಗದಿದ್ದೀತೆ? ಎಂತಹ ಪ್ರವೀಯ ಮಾತುಗಳನ್ನು ಬರೆದರು! ಜಗಾತ್ತದ ವರೆಗೂ ಏಷ್ಯದಲ್ಲಿ ಪ್ರಮುಖವಾಗಿಯೇ ಇರಬೇಕೆಂದು ಬ್ರಿಟಿಷರ ಸಾಧನೆ ನಡೆಸಬಹುದೆ? ಹೀಗಾಗಿಯೇ, ಚೀನದಲ್ಲಿ ಶಾಶ್ವತವಿರಬೇಕು ಜಪಾನನ್ನು ಅಲ್ಲಿಂದ ಓಡಿಸಬೇಕೆಂದೇ ಬ್ರಿಟಿಷರ ಸಾಧನೆ. ಈಗ, ನವ ಗಾಗಿ ತೋರಿದ ಗಂಡಿಯಲ್ಲಿ ಬ್ರಿಟಿಷರೇ ಎಷ್ಟರಿ ಅವರೇ ಅದಕ್ಕೆ ಕಾರಣರಲ್ಲವೆ? ನಮ್ಮೊಡನೆ ಸ್ನೇಹ ಬೆಳೆಸುವ ಇಟಲಿಗೆ ಒಳ ಹೆಚ್ಚಾಗಿದೆ. ಬ್ರಿಟನ್ನು ಇನ್ನು ಹೇಳ ಪುದಕ್ಕಿಲ್ಲ — ಸರಿ ಎಂದ ಇಟಲಿಯ ಕೈಗುಟ್ಟಿದು. ಇಟಲಿಯಲ್ಲಿ ಇನ್ನು ಅಣಗಿಸಬೇಕಾಗಿದ್ದರೆ, ಬ್ರಿಟನ್ನು ಮೆಡಿಟರೇನಿಯನ್ ಸಮುದ್ರದಲ್ಲಿ ಎಚ್ಚರದಿಂದಿರಬೇಕಾದೀತು. ಜಪಾನು ದೂರದಲ್ಲಿದ್ದ ನಂಟನಾದ ಕಾರಣ ಇಟಲಿಯು ಧೈರ್ಯದಿಂದ ಬ್ರಿಟನ್ನನ್ನು ಎದುರಿಸಬಹುದು

ಲೆಫ್ಟಿನೆಂಟ್ ಜನರಲ್ ಇಸಾವಿಾ — 1902ರಿಂದ ಬ್ರಿಟನ್ನು ಜಪಾನನ್ನು ಗೌರವಿಸಿ ಹತ್ತಿರ ಕರೆದೊದಗಿ ಇದೆ, ದೂರಕ್ಕೆ ಸರಿಸಿದೂ ಇದೆ. ಎಂಗ್ಲೊ ಜಪಾನಿಸ್ ಒಪ್ಪಂದ ಮಾಡಿದ್ದ ಬ್ರಿಟನ್ನು ಈಗ ಬೇರೆಯೆ. ಈಗಣ ಬ್ರಿಟನ್ನಿನ ದರ್ಪ ಕಡಮೆ, ಜಪಾನಿಗೆ ಅದು ಸಮಬಲವಾಗಿಲ್ಲ. ಹಾಗಿಲ್ಲದಿರುವಲ್ಲಿ, ಸೋವಿಯಟ್ ರಷ್ಯವನ್ನೂ ಯುನೈಟೆಡ್ ಸ್ಟೇಟ್ಸ್‌ಗಳನ್ನೂ ತನ್ನ ವಶಕ್ಕೆ ಕರೆದು, ಜಪಾನನ್ನು ಅದು ಎದುರಾಡಲು ಯತ್ನಿಸುದೇಕೆ? ನನ್ನ ಮೊಮ್ಮಗನ ಕಾಲದೊಳಗೆ ಬ್ರಿಟನ್ನು ಖಂಡಿತವಾಗಿ ಕುಗ್ಗಿ ಹೋಗುವುದೆಂದು ನಾನು 1928ರಲ್ಲಿ ಬ್ರಿಟನ್ನಿಗೆ ಹೋದಾಗಲೇ ಗುಣಿಸಿ ನೋಡಿದ್ದೇನೆ. ಈಗಲಾದರೋ, ನನ್ನ ಜೀವಮಾನದೊಳಗೇ ಅದು ಕಗ್ಗುವಂತಿದೆ

ಯುನೈಟೆಡ್ ಸ್ಟೇಟ್ಸ್ ಸರಕಾರವು ಈಗ ಧೋರಣೆಯಿಂದಿದೆ; ಜಪಾನಿನೊಡನೆ ಅದರ ಪತ್ರವ್ಯವಹಾರವು ತೀರ ಎಚ್ಚರದಿಂದ ಸಾಗ್ಗುವ ಕಾರಣ, ಜಪಾನು ಅದನ್ನು ಕೆಣಕಬಾರದು. ಬ್ರಿಟನ್ನನ್ನು ಆಗ ತಾನೆ ಜಪಾನು ಎದುರಿಸ ಹೆಚ್ಚು ಬಂದಿರಬಹುದು. ಬ್ರಿಟನ್ನಿಗೆ ಈಗ ಅಷ್ಟು ಮಂದಿ ಸಹಾಯಕರೂ ಇಲ್ಲ

ಜಪಾನಿನ ಅಹಂಕಾರವು ಒಹಳ ಹೆಚ್ಚಾಗಿದೆ ಎಂದು ಈ ಮಾತುಗಳು ತಿಳಿಸವೆ?

ಸೇಲಮ್ಮಿನಲ್ಲಿ ಐದು ದಿನ

ಮಂತ್ರೀಶ್ವರರ ಸಂಚಾರಕಾಲದ ಭಾಷಣಗಳು

ಮದ್ಯಪಾನದ ಪರಿಸ್ಥಿತಿ

ಮದ್ಯರಾಕ್ಷಸನ ಹಾವಳಿಯಿಂದ ದೇಶವನ್ನು ಕಾಪಾಡೆಂದು ತಪಸ್ಸು ಮಾಡಿದ್ದ ನಮ್ಮ ತಾಯಿಂದಿರೂ ಮುತ್ತೈದೆಯರೂ ಪಡೆದ ವರದಂತೆ ಈಗ ಮದ್ಯಪಾನ ನಿವಾರಣೆಯಾಗುತ್ತಿದೆ. ಭಗೀರಥ ಯತ್ನವೇ ಇದಕ್ಕೆ ಸಮಾನವೆಂದು ಹೇಳಬಹುದು. ಅವನಾದರೋ ಸ್ವರ್ಗದಿಂದ ಗಂಗೆಯನ್ನು ತಂದನು. ನಾವೀಗ ಮದ್ಯದ ನರಕದಿಂದ ಜನವನ್ನು ಸ್ವರ್ಗಕ್ಕೆ ಕಳುಹುತ್ತೇವೆ

ಎಷ್ಟೋ ವರ್ಷಗಳ ದಿಕ್ಕರಿಕೆಯೇ ಹೇಳುತಿದ್ದರು — ಗಡಂಗುಗಳಲ್ಲಿದ್ದಲ್ಲಿ ನಾವು ಕುಡಿಯುತ್ತಿರಲಿಲ್ಲವೆಂದು. ಆಗ ಅವರ ಬೆಂಬಲಕ್ಕೆ ಸರಕಾರವು ಬಂದುದಿಲ್ಲ. ಈಗ ಮದ್ಯದ ಮಾರಾಟದಿಂದ ಹುಟ್ಟುವ ಸುಂಕದಿಂದ ಖಜಾನೆ ತುಂಬುವುದನ್ನು ತಡೆದು ಈ ಮಾಟಲ್‌ಗೆ ಸದ್ಯಕ್ಕೆ ನಷ್ಟವಾದರೂ ಆಗಲೆನ್ನುವ ಸರಕಾರವು ಅಧಿಕಾರಕ್ಕೆ ಬಂದಿದೆ.

ಮದ್ಯ ನಿವಾರಣೆಯಾದಲ್ಲಿ ಸಾಂಪತ್ತಿಕ ಪ್ರಗತಿಗೆ ಸಹಾಯವಿದೆ. ಹಣವು ತಾನಾಗಿ ಧಾರಾಳವಾಗಿ ಬರುವುದುಂಟು. ಹಣವು ಒಂದೇ ಕಡೆ ಜಡವಾಗಿ ಕೂಡಿಸಿಲ್ಲಲಾರದು. ಆದ ಇನ್ನು ಹೆಚ್ಚಿನ ವ್ಯಾಪಾರ ವಹಿವಾಟುಗಳಿಗೆ ಆಶ್ರಯ ಕೊಡುವುದು. ಸರಕಾರದ ಖಜಾನೆಗೆ ಆ ಮೂಲಕ ಹಣವು ತುಂಬುವುದು. ಆದರೂ, ವಿಶೇಷ ಖರ್ಚುಗಳಿದ್ದಂತೆ, ಆಯ ವ್ಯಯಗಳನ್ನು ಹೊಂದಿಸಿಯೇ ಆಗಬೇಕು.

ಪೂರ್ತಿ ಕಸುಬಿನವರೂ ದಿನಗೂಲಿ ತೋಟಗಾರರೂ ಈ ದೆಸೆಯಿಂದ ನಷ್ಟ ಹೊಂದಿರುವಲ್ಲಿ ಇತರ ವಿಧಾನಗಳಿಂದ ಲಾಭವುಂಟೆಂಬುದನ್ನು ತಿಳಿದು ಸರಕಾರದನ್ನು ದಿಂದ ವಂತಿಕ್ಕ

ಮದ್ಯನಿವಾರಣೆಯು ಜತೆಗೆ ಬೈತರ ಸಾಲ ನಿವಾರಣೆಗೂ ಕಾನೂನನ್ನು ಸರಕಾರವು ಮಾಡಿ ಕೊಟ್ಟಿದೆ. ಇವುಗಳಿಂದಲೂ ಬಡವರಿಗೆ ತುಂಬ ಸಂಕಟ ಪರಿಹಾರ ಮಾಡದಿರಲಾರದು. ಮಂತ್ರಿಗಳನ್ನು ಇನ್ನು ಯಾರೂ ದೂರುವಂತೆ ಅವಕಾಶವಿಲ್ಲ

ಹಿಂದಿಗಾಗಿ ಕದನ

ಹಿಂದಿಯನ್ನು ಕಲಿಸುವುದರಿಂದ ಮಕ್ಕಳಲ್ಲಿ ಹೆಚ್ಚಿನ ತಿಳುವಳಿಕೆ, ಹೆಚ್ಚಿನ ಶಿಕ್ಷಣ ಕೊಡಲಾಗುವುದಾಗಿ ನಂಬಿದ್ದೇವೆ. ಅದೂ ಹೈಸ್ಕೂಲ್‌ಗಳಲ್ಲಿಯೆ ಬಳಕೆಗೆ ಒರುವುದಾಗಿದೆಯಷ್ಟೆ. ಕಪ್ಪು ಬಾವುಟಗಳನ್ನು ಎತ್ತಿ ಕೂಗುವ ಕೆಲವರು ಮಾತ್ರ ವಿರೋಧ ಮಾಡುತ್ತಿದ್ದಾರೆ. ಕೆಲವರಂತೂ ಉಪವಾಸ ಸತ್ಯಾಗ್ರಹ ಮಾಡುವರಂತೆ. ಕೊಂಗ್ರೆಸು ಹಿಂದೀ ಪ್ರಚಾರದ ವಿಚಾರದಲ್ಲಿ ಯಾವ ಮನಸ್ಸುಳ್ಳದೆಂದು ಇವರು ಬಲ್ಲವರೇ ಆಗಿದ್ದರು. ಇದು ವರೆಗೆ, ಇಷ್ಟು ತಿಳಿದೂ ಒಂದೂ ಮಾತನ್ನಾಡದೆ, ಈಗ ತಮಿಳು ನಾಶವಾಗುವುದೆಂದು ಕೂಗೆಬ್ಬಿಸಿರುವರು!

ಹಿಂದಿಯು ಮೇಲೆ ಸಿಕ್ಕಾಗ ತಮಿಳಿನವರ ಅಭಿವೃದ್ಧಿಗೆ ಬರುವಂತಾದಲ್ಲಿ ನನಗೆ ತುಂಬಾ ಸಂತೋಷವಾದೀತು. ಎಲ ಕೂತಮಿಳನ್ನು ಅಭಿವೃದ್ಧಿಗೆ ತರುವ ರಾಗಲಿ. ಹಿಂದಿಯು ನೊಸರಿನಂತಿದೆ, ತಮಿಳು ತುಪ್ಪ. ತಮಿಳನ್ನು ವೃದ್ಧಿಗೆ ತರಲಿ, ಆದರೆ ಹಿಂದಿಯು ಇದ್ದರೆ ಮುಂದೆ ಪ್ರಯೋಜನವಿದೆ. ಉತ್ತರ ಹಿಂದುಸ್ಥಾನದಲ್ಲಿ ಎಷ್ಟೋ ಉಪಕಾರಕ್ಕೆ ಬಂದೀತು

ಹಿಂದಿಗೆ ವಿರೋಧವಿದ್ದಂತೆ, ಮದ್ಯನಿವಾರಣೆಗೇನೂ ವಿರೋಧವಿಲ್ಲವಷ್ಟೆ. ಜಗತ್ತಿನ ದೃಷ್ಟಿ ಸೇಲಮ್ಮಿನ ಕಡೆಗೆ ಹರಿದಿದೆ. ಸರಕಾರದ ಹಿಂಬಲಕ್ಕೆ ನಿಂತು ಸೇಲಮ್ಮಿನವರಲ್ಲಿಟ್ಟ ಸರಕಾರದ ವಿಶ್ವಾಸವು ಕಂದದಂತೆ ಜನರು ವರ್ತಿಸಿದರೆ ನಿವಾರಣೆಯ ಪ್ರಚಾರವನ್ನು ಬೇರೆ ಜಿಲ್ಲೆಯಲ್ಲಿಯೂ ಮುಂದರಿಸ ಬಹುದಾಗಿದೆ.

ಈಗಣ ಮಂತ್ರಿಮಂಡಲವು ಬೇಡವಾದರೆ ಜನತೆ ಹಾಗೆ ತಿಳಿಸಲಿ. ಜನತೆಗೆ ಹಿತವಾದುವುದಕ್ಕಿಂತ ಬೇರೆ ಕಾರ್ಯಕ್ರಮವಿಲ್ಲ; ಅದು ತಪ್ಪೆಂದಾದಲ್ಲಿ ಮಂತ್ರಿಗಳು ಕೂಡಲೇ, ಅಧಿಕಾರ ತ್ಯಜಿಸಲು ಸಿದ್ಧರಾಗಿಯೇ ಇರುವರು.

ಸ್ವದೇಶಾಭಿಮಾನಿ

ನೂರರಲ್ಲಿ ನೂರಹತ್ತನ್ನು ಕೊಡಿರಿ'

'ಸೇರಿಗ್ಗೆ ಸವಾಸೇರು' ಎಂಬುದು ಹಿಂದುಸ್ಥಾನಿಯಿಂದ ಹೇಗೋ ಹಾಗೆ ಬಂದ ಮಾತು. ಇದು ಚಾತುರ್ಯ ಸೂಚನೆಗೆ ಉತ್ತಮ, ವ್ಯವಹಾರದಲ್ಲಿ ಕನಿಷ್ಠ. 'ಮುಸಲ್ಮಾನರು ರಾಷ್ಟ್ರೀಯತ್ವವನ್ನು ಯಾವ ರೀತಿಯಾಗಿ ಪಾಲಿಸಿಕೊಂಡು ಬಂದರು' ಎಂಬುದನ್ನು ತಿಳಿಯಲು ಈ ಮಾತೇ ಯೋಗ್ಯವೆಂದು ನಾವೆನ್ನುವುದಿಲ್ಲ. ಅವರ ಮುಖಂಡರೇ ಹೇಳುತ್ತಾರೆ. ಜಿನ್ನಾಸಹಾರವರು ಪ್ರಕಟವಾಗಿ ತಾವೇ ರಾಷ್ಟ್ರೀಯರು ಹೊರತು, ಕಾಂಗ್ರೆಸು 'ಜಾತೀಯವಾದುದು' ಎಂದರಷ್ಟೆ ಅವರಿಗಿಂತ ರಾಷ್ಟ್ರೀಯರಾಗಿ ಲಾಹೋರಿನ ಮೌಲಾನಾ ಜಾಫರ್ ಅಲ್ಲೀಖಾನರು ಕಳೆದ ಶನಿವಾರ ಮುಂಬಾಯಿಯ ಕಬ್ಲಿಘ್ ಉಲ್ ಇಸ್ಲಾಮ್ ಸಂಘದ ಆಶ್ರಯದಲ್ಲಿ ತಮ್ಮ ಉದಾತ್ತ ವಿಚಾರಗಳನ್ನು ಉನ್ನತ ಭಾಷಣದ ಮೂಲಕ ಮುಂದಿಡಿಸಿರುವರು. ಹಿಂದುಸ್ಥಾನದ ಇಡೀ ರಾಜಕೀಯ ಪ್ರಶ್ನೆಯನ್ನು ನೀವು ಇತ್ಯರ್ಥಿಸಬೇಡವೇ ಎಂದು ಅವರೇ ಒಂದು ಪ್ರಶ್ನೆ ಕೇಳಿ, ಸಭಿಕರ ಪ್ರತಿನಿಧಿಯಾಗಿ ತಾವೇ ಒಂದು ಉತ್ತರವನ್ನು ಕೊಟ್ಟರು! "ಝುಗಲೂಲ್ ಪಾಶಾರವರ ಉಪಾಯವನ್ನು ತಿಳಿದು ಮುಂದರಿಸಿ, ಹಾಗೆ ಮಾಡಿದರೆ ಈ ರಾಜಕೀಯ ಪ್ರಶ್ನೆಯ ಇತ್ಯರ್ಥವಾಗುವುದು. ಇಜಿಪ್ಟಿನಲ್ಲಿ ಕೊಪ್ಟರೆಂಬ ಅಲ್ಪ ಸಂಖ್ಯಾಕರು ನೂರಕ್ಕೆ 8ರಂತೆ ಇರುವರು. ಆದರೂ ಝುಗಲೂಲ್ ಪಾಶಾರವರು ಅವರ ಪ್ರತಿನಿಧಿಗಳನ್ನಾಗಿ, ನೂರರಲ್ಲಿ 80 ಸದಸ್ಯರನ್ನು ಪಾರ್ಲಿಮೆಂಟಿಗೆ ಸೇರುವಂತೆ ತೀರ್ಮಾನಿಸಿರುವರು. ಅದರಂತೆ ಇಲ್ಲಿಯೂ ಮಾಡಿರಿ" ಎಂದರೆ, ಈ ಉದಾರ ಗಣಿತದಿಂದ ಮೌಲಾನರು ಉದರಗಣಿತವನ್ನೂ ಮಾಡಿದಂತಾಯಿತು. ಮುಸಲ್ಮಾನರು ಈ ದೇಶದಲ್ಲಿ ನೂರಕ್ಕೆ 80ರಂತಿರುವರಷ್ಟೆ, ಇದೇ ದಾಮಾಶಯದಲ್ಲಿ ಎಸೆಂಬ್ಲಿ ಮತ್ತು ಫೆಡರೇಶನ ಸಭೆಗಳಲ್ಲಿ ಮುಸ್ಲಿಮರಿಗೆ ನೂರಕ್ಕೆ 110ಕ್ಕೂ ಮಿಕ್ಕಿ ಸ್ಥಾನಗಳನ್ನು ಕೊಡಬೇಕಾಗುವುದಲ್ಲ!' ಇಷ್ಟು ಸ್ಥಾನಗಳನ್ನು ಪಡೆಯದೆ ಇರುವಲ್ಲಿ ಈ ರಾಷ್ಟ್ರೀಯ ಮುಸಲ್ಮಾನರಿಗೆ ರಾಷ್ಟ್ರೀಯ ಸಭೆಗಳಲ್ಲಿ ರಾಷ್ಟ್ರೀಯ ವಿಷಯಗಳನ್ನು ಕುರಿತು ಚರ್ಚಿಸಲೂ ಮನಸ್ಸುಂಟಾದೀತೆ? ಹಾಗೆ ಮಾಡಿದರೆ ಮಾತ್ರ ಇವರ ರಾಷ್ಟ್ರೀಯಾತ್ಮಗಳು ತಂಪಾಗುವುವು. ಅದಲ್ಲದೆ,-"ಅಸ್ಪೃಶ್ಯರಿಗೆ ಇವರು ಗತಿತೋರಿಸುವರು. ಹಿಂದುಗಳೊಡನೆ ಜಾತ್ಯಭಿಮಾನ ಕಾಪಾಡಿಕೊಳ್ಳಲು ಅಸ್ಪೃಶ್ಯರು ಒಪ್ಪುವುದಿಲ್ಲ, ಅವರು ಅದಕ್ಕಾಗಿ ಹಿಂದು ಧರ್ಮವನ್ನೆ ತ್ಯಜಿಸಬೇಕೆಂದಿರುವರು. ಅವರ ಕಡೆಗೆ ಮುಸ್ಲಿಮ ಧರ್ಮಾಭಿಮಾನಿಗಳ ಒಲಿಯದೆ ತಮ್ಮ ಸದ್ಧರ್ಮ ಪ್ರಚಾರ ಮಾಡದೆ ಶೋಚನೀಯ ಪರಿಣಾಮಗಳಾಗಿವೆ. ಈ ಬಡ ಅಸ್ಪೃಶ್ಯರಿಗೆ ಸತ್ಯದಾರಿಯನ್ನು ತೋರಿಸುವುದು ಮುಸ್ಲಿಮರ ಪರಮ ಪವಿತ್ರ ಕರ್ತವ್ಯವಾಗಿದೆ" ಎಂದು ಅಧಿಕ ವಿಚಾರಗಳನ್ನು ಈ ಮೌಲಾನರು ಬೋಧಿಸುವರು. ಮುಸಲ್ಮಾನರ ಈ ರಾಷ್ಟ್ರೀಯತ್ವ ಮತ್ತು ಕರ್ತವ್ಯಬುದ್ಧಿ ಉಪಾಯಗಳ ಸಿದ್ಧತೆ, ಇವನ್ನೆಲ್ಲ ಕಣ್ಣಿಟ್ಟು ನೋಡಿ ವಿಮರ್ಶಿಸಲು ಮಹಾತ್ಮಾಜಿಯವರು ಮತ್ತು ಡಾ। ಅಂಬೇಡ್ಕರರು ಇನ್ನೂ ಇದ್ದಾರೆಂಬುದು ಅಲ್ಲಿಯವರಿಗೆ ಸಮಾಧಾನವಾಗಿರಬೇಡವೆ?

ರಾಜಕುಮಾರೀ ಅಮೃತ ಕೌರ ಭಾರತ ಮಹಿಳಾ ಪರಿಷದದ ವೃತ್ತಾಂತವೇನು?

ಈ ಪರಿಷತ್ತಿನ ವೃತ್ತಾಂತವನ್ನೋದುವಾಗ್ಯ—ಅಧ್ಯಕ್ಷೆಯಾದ ಶ್ರೀ। ಕೌರರವರು ಹೇಳುವಂತೆ, ಭಾಷಣ ನಿರ್ಣಯಾದಿಗಳೇ ಮಾತ್ರವಲ್ಲದೆ, ಕಾರ್ಯತಃ ಮಹಿಳೆಯರು ಇನ್ನು ಸತ್ಪರಿಣಾಮಕಾರಿಗಳಾದ ವಿಚಾರ ಮಾಡುತ್ತಿರಬೇಕೆಂದು ಹೇಳಿರುವ ಕಾರಣ, ಈ ಪರಿಷತ್ತು ಬಹಳ ಚೇತನದಿಂದ ಮುಂದರಿಯಲು ನಿರ್ಧರಿಸಿರುವಂತೆ ತಿಳಿಯಬಹುದು. ಭಾರತವಾಸಿಗಳಾಗಿರುವ ಸಮಸ್ತ ಸ್ತ್ರೀ ವರ್ಗಕ್ಕೆ ಈ ಪರಿಷತ್ತಿನ ವಿಷಯವೇನೂ ಇನ್ನೂ ತಿಳಿದಿಲ್ಲ. ಏಕೆ? ಮುಖ್ಯ ಮಹಿಳಾವರ್ಗವು ನಗರಗಳಲ್ಲೇ ಇದೆ, ನಿಜವಾದ ಭಾರತ ಸ್ತ್ರೀತ್ವವು ಗ್ರಾಮಗಳಲ್ಲಿರುವಳು. ಪ್ರತಿಯೊಂದು ಪ್ರಾಂತ್ಯದಿಂದ ಪ್ರತಿನಿಧಿಗಳಾಗಿ ಬಂದ ಸ್ತ್ರೀಯರು ತಮ್ಮ ತಮ್ಮ ಅಭಿಪ್ರಾಯಗಳನ್ನೆ ಮುಂದೊತ್ತಿರುವರಲ್ಲದೆ, ಇವರು ಆಯಾ ಪ್ರಾಂತ್ಯದ ಸ್ತ್ರೀವರ್ಗದೊಡನೆ ಸಂಪರ್ಕವನ್ನಿಟ್ಟುಕೊಂಡು ಅವರ ಅಭಿಪ್ರಾಯವನ್ನೇನೂ ಸೂಚಿಸುವ ಹಾಗಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸದೆ ಪರಿಷತ್ತು ಇದ್ದೂ ಫಲವಿಲ್ಲವಾಗಿದೆ. ಸ್ತ್ರೀಯರ ಸಲುವಾಗಿ ಪ್ರಗತಿಯನ್ನು ಸಾಧಿಸುವ ಕರ್ತವ್ಯವು ಪರಿಷತ್ತಿನದು. ಸ್ತ್ರೀ ಸಮಾಜದ ಸ್ನೇಹ, ಅವರಲ್ಲಿ ಸರಿಯಾದ ತಿಳಿವಳಿಕೆಯನ್ನು ಹರಡುವಿಕೆ, ಅವರ ಸಂಕಟಗಳ ನಿವಾರಣೆ—ಇವಕ್ಕಾಗಿ ಪರಿಷತ್ತು ಮಾಡಿರುವುದೇನು?

ಪ್ರತಿಯೊಂದು ಶಾಖೆಯೂ ಅಲ್ಲಲ್ಲಿನ ಸ್ತ್ರೀ ಸಮೂಹವನ್ನು ಕರೆದು ಆಗಾಗ ಸಭೆ ಕೂಡಿಸಿ, ಅವರ ಕಷ್ಟ ತಾಪತ್ರಯಗಳನ್ನು ವಿಚಾರಿಸಿ ತಿಳಿದುಕೊಳ್ಳುವಂತಾಗಬೇಕು. ಎಲ್ಲ ಮಕ್ಕಳು ಓದುಬರಹದಲ್ಲಿಯೆ ಮಾತ್ರವಲ್ಲದೆ, ನಿಜವಾದ ಜೀವನ ಕ್ರಮ, ಸರಿಯಾದ ಭಾವನೆಗಳು, ನೆರೆಯವರೊಡನೆ ಸೌಜನ್ಯ, ಇವುಗಳನ್ನು ತಿಳಿದುಕೊಳ್ಳುವಂತಾಗಬೇಕು. ಕಷ್ಟಗಳು ಅಧಿಕಾರಿಗಳ ಗಮನಕ್ಕೆ ಬರುವಂತೆ ಮಾಡಿ, ಅಲ್ಲಿನ ಕ್ಲೇಶ ನಿವಾರಿಸಬೇಕು. ಪ್ರತಿಯೊಂದು ನಗರದಲ್ಲಿರುವ ಪರಿಷತ್ತಿನ ಶಾಖೆಯು ಹತ್ತಿರದ ಒಂದು ಹಳ್ಳಿಯನ್ನಾದರೂ ತನ್ನ ಆರೈಕೆಗೆ ತೆಗೆದುಕೊಂಡು, ಅದನ್ನು ಸದಾ ಪಾಲಿಸಿಕೊಂಡು ಬರುವಂತಾಗಬೇಕು—ಎಂದೇ ಅಧ್ಯಕ್ಷೆಯ ಮಹತ್ವದ ಸೂಚನೆಗಳಾಗಿವೆ.

ಸ್ತ್ರೀಯರಲ್ಲಿ ಮುಂದಾಳುಗಳಾಗಿರುವವರು ಮಿಶ್ನರಿಗಳಂತೆ, ಮನೆಮನೆಗೆ ತೆರಳಿ ಅಲ್ಲಿನ ಸ್ತ್ರೀಯರೊಡನೆ ಪರಾಮರ್ಶಿಸಬೇಕು. ಇದರಲ್ಲಿ ಮನೋಮಾಲಿನ್ಯವಿರದ ಸಾಮ್ಯವ ದರಿಯುವಂತಾದರೆ ಎಷ್ಟು ಸೊಗಸಾಗುವುದು. ಅಲ್ಲಲ್ಲಿ ಆರೋಗ್ಯವರ್ಧನೆಗಾಗಿ, ಶಿಶುಸಂಗೋಪನಕ್ಕಾಗಿ ಕುಂಬ ಪ್ರಯತ್ನಗಳಾದರೆ ಧಾರ್ಮಿಕ ಜೀವನಕ್ಕೂ ಸಹಾಯಕವಾದ ಪ್ರಯತ್ನಗಳಾದರೆ, ಗ್ರಾಮ ಸೌಕರ್ಯಗಳಿಗಾಗಿ ಚಳವಳಿವು ನಡೆದು ಅಧಿಕಾರಿಗಳು ಮನಗೊಡುವಂತೆ ಮಾಡಿದರೆ, ಕುಟುಂಬಗಳಿಗೂ ಗ್ರಾಮಗಳಿಗೂ ಎಷ್ಟೋ ಉಪಕಾರವಾದೀತು. ವಿದ್ಯಾವಂತೆಯರು ತಮ್ಮದೊಂದು ವರ್ಗವನ್ನೇ ಪ್ರತ್ಯೇಕವಾಗಿ ಮಾಡಿಕೊಳ್ಳದೆ, ಸಮಸ್ತರೊಡನೆ ಸೇರಿ ನಡೆದುಕೊಂಡರೆ ಬಲು ಬೇಗನೆ ಸ್ತ್ರೀ ವರ್ಗವು ಮುಂದರಿಯಬಹುದು.

ನೋಟಗಳು—Notes

ಗ್ರೇಟ್‌ಬ್ರಿಟನ್ ಡಿಫಾಲ್ಟರು! ಇದು ಕಳೆದ ಮಹಾಯುದ್ಧ ಕಾಲದಲ್ಲಿ ಯುರೋಪೀಯ ರಾಷ್ಟ್ರಗಳು ಯುನೈಟೆಡ್ ಸ್ಟೇಟ್ಸ್ ಸರಕಾರದಿಂದ ಪಡೆದ ಸಾಲದ ವಾರ್ಷಿಕ ಕಂತು. ಹದಿಮೂರು ಜನಾಂಗಗಳು ಈ ಸಾಲವನ್ನು ವಾಯಿದೆಯಾದ ಜೂನ್ ೧೫ರೊಳಗೆ ತೆರಬೇಕಾಗಿದೆ ಎಂದು ಸ್ಟೇಟ್ಸ್ ಸರಕಾರವು ಎಚ್ಚರಿಸಿಯದೆ. ತೆರುವವರು ಯಾರು? ಪ್ರತಿಯೊಂದು ಜನಾಂಗವೂ ಇನ್ನೊಂದು ಯುದ್ಧಕ್ಕಾಗಿ ಸಾಮಗ್ರಿಗಳನ್ನು ಕೂಡಿಸುತ್ತಿರುವಾಗ, ಹಿಂದಣ ಯುದ್ಧದಲ್ಲಾದ ಸಾಲದ ನೆನಪೂ ಉಳಿಯುವುದುಂಟೆ? ನೆನಪು ಇದ್ದರೂ ತೆರಲು ಹಣವೆಲ್ಲಿ?

o o o o

ಹಿಂದೂ ಮುಸ್ಲಿಮರ ಐಕ್ಯವಾಗಲೆಂದು ಬೊಂಬಾಯಿಯಲ್ಲಿ ಪ್ರಯತ್ನಗಳಾಗುತ್ತವೆ. ಅವು ಆಗಲಿ ಹೋಗಲಿ. ಐಕ್ಯತೆಯು ಇಲ್ಲದೆ ಸ್ವರಾಜ್ಯವು ಖಂಡಿತವೆಂದೂ, ಫೆಡರೇಶನನ್ನು ಬೇಗನೆ ಜ್ಯಾರಿಗೆ ತರಬೇಕೆಂದೂ ಹಿಂದೂ ಮಹಾ ಸಭೆಯ ಒತ್ತಾಯದ ನಿರ್ಣಯಗಳಾಗಿವೆ. ಹಿಂದುಗಳು ಇದು ವರೆಗೆ ರಾಜಕೀಯವೇ ಮೊದಲಾದ ರಂಗಸ್ಥಳಗಳಲ್ಲಿ ಹೋರಾಡಿ ದೊರೆತ ರಿಯಾಯಿತಿಗಳನ್ನು ಸಮಸ್ತರೂ ಅನುಭವಿಸುವಾಗ, ಹಿಂದುಗಳು ಸ್ವರಾಜ್ಯ ಪಡೆಯಲೂ ಸಾಧನೆ ಮಾಡಬಾರದೇಕೆ? ಹಾಗೆ ಸ್ವರಾಜ್ಯ ದೊರೆತಾಗ ಅದಂತೂ ಸಮಸ್ತರಿಗೆ ದೊರೆಯುವುದಲ್ಲವೆ? ಹೀಗಾದಲ್ಲಿ, ಈಗ ಈ ಐಕ್ಯ ಸಾಧನೆಯ ಸಂಕಟವೇಕೆ? ಎಂದೇ ಡಾ। ಮೂಂಜೆಯವರ ಅಭಿಪ್ರಾಯ.

o o o o

ಇತ್ತ ಲೀಗ್ ಕೌನ್ಸಿಲ್ ಕಾಂಗ್ರೆಸಿಗೆ ಐಕ್ಯ ಸಾಧನೆಯ ಸಂಭಾಷಣ ನಡೆದ ದಕ್ಕೆ ಒಂದು ಉತ್ತರ ರವಾನಿಸುವುದರಲ್ಲಿದೆ. ಮುಖ್ಯವಾಗಿ, ಮುಸ್ಲಿಮ ಸಮಾಜದ ಮುಖವಾಗಿ ಈ ಲೀಗ್ ಮಾತ್ರವೊಂದೇ ಇದೆ ಎಂಬುದನ್ನು ಪ್ರತ್ಯೇಕವಾಗಿ ಕಾಂಗ್ರೆಸು ಅಂಗೀಕರಿಸದ ವಿನಾ, ಅಂತಹ ಸಮಾಜವನ್ನು ಬಹುಸಂಖ್ಯಾಕರಾಗಿರುವ ಹಿಂದುಗಳುಳ್ಳ ಕಾಂಗ್ರೆಸಿನ ಒಳಗೆ ಸೇರುವಂತೆ ಯಾವ ರಕ್ಷಣಾಕವಚವೂ ಇಲ್ಲದಾಗುವುದಿಲ್ಲವೆಂದೇ ಮುಖಂಡರು ಅಭಿಪ್ರಾಯ ಪಡುವಂತಿದೆ. ಕಾಂಗ್ರೆಸು ಎಲ್ಲ ಜನತೆಯದೆಂದ ಬಳಿಕ ಒಂದೊಂದೇ ಸಮಾಜದ ಮುಖವಾಗಿ ಹಲವು ಲೀಗುಗಳನ್ನು ಅದು ಅಂಗೀಕರಿಸಿದಲ್ಲಿ ಅದು ರಾವಣನ ಹಾಗೆ ದಶಮುಖವಾಗಿ ರಾಕ್ಷಸ ರೂಪ ತಳೆಯಬಹುದು.

o o o o

ಕೊಚ್ಚಿಯಲ್ಲಿ ಆದರ್ಶವೊಂದೇ ಇರುವ ಎರಡು ಕಾಂಗ್ರೆಸ್ಸುಗಳ ಕಥೆ: ಒಂದು ಸ್ಟೇಟ್ ಕಾಂಗ್ರೆಸ್, ಮತ್ತೊಂದು ಕೊಚ್ಚಿನ್ ಕಾಂಗ್ರೆಸ್'. ಮೊದಲನೆಯದು ರಾಷ್ಟ್ರ ಸಭೆಯಂತಿದೆ, ಮೂರು ವರ್ಷದ ಹಿಂದೆ ಸ್ಥಾಪನೆ ಹೊಂದಿ ಇದ್ದು ಸ್ವತಂತ್ರವಾಗಿತ್ತು. ಅದು ರಾಷ್ಟ್ರಸಭೆಯೊಡನೆ ಸೇರಬೇಕೆಂದೂ ನಿಶ್ಚಯವಾಯಿತು. ಹರಿಪುರದ ನಿರ್ಣಯದಂತೆ, ಆದಾಗದೆಂದು ತಿಳಿದ ಕೂಡಲೆ, ಅದರ ಕೆಲವು ಮೆಂಬರರ್ ಎರಡನೆ ಸಂಸ್ಥೆಯನ್ನು ನಿರ್ಮಾಣ ಮಾಡಿದರು. ಆದರೆ ಇದರಲ್ಲಿ ಸಮಾಜಸ್ನಯ ಪ್ರಾತಿನಿಧ್ಯ ಬೇಕೆಂಬ ಕಿರುಕುಳ ಹುಟ್ಟಿತು. ಇದು ಕಾಂಗ್ರೆಸ್ ತತ್ವಕ್ಕೆ ವಿರುದ್ಧ. ಹೀಗಾಗಿ ಈ ಸೂತ್ರ ಬೇಕೆ ದವರ ಬೇಕೆ ಮಾದರ. ಈಗ ಇವರೊಳಗೆ ವಿರುದ್ಧ ಭಾವ ಉಂಟಾಗಿದೆ, ಇಬ್ಬರೂ ಮುಂದಿಟ್ಟ ಕಾರ್ಯಕ್ರಮ ಒಂದೇ. ಆದರೂ ಈ ದ್ವಂದ್ವಬೇಕೇ? ಇದೇ ದ್ವಂದ್ವ ಹಿಡಿದು ಇವರು ಚುನಾವಣೆ ಹೊಂದಿದರೂ ಕೌನ್ಸಿಲಿನಲ್ಲಿ ಹೀಗೆ ಎದುರಾಡುತ್ತಲಿದ್ದರೆ ಉಭಯ ಪಕ್ಷಗಳೂ ಸೋತು, ಮೂರನೆಯವರು ಗೆಲ್ಲುವರಲ್ಲ. ಕಾಂಗ್ರೆಸ್ ಧ್ಯೇಯ ವೇ ಉಳಿಯುವುದೇ? ಮಧ್ಯೆ, ಮಲಬಾರಿನಿಂದ ಕೆಲವರು ಅತ್ತ ಬಂದು, ಕೊಚ್ಚಿನ್ ಕಾಂಗ್ರೆಸ್ ಪಕ್ಷವೇ ಸರಿಯೆಂದು ಇನ್ನೂ ಈ ದ್ವಂದ್ವ ಹೆಚ್ಚಿಸಿರುವರು. ಇತ್ತಂಡಗಳೊಳಗೆ ರಾಜಿ ಮಾಡಬಹುದಿತ್ತು. ಹೀಗೆ ಇದ್ದ ಎರಡು ಕಾಂಗ್ರೆಸುಗಳನ್ನು ಮೂರನೆ ಕಾಂಗ್ರೆಸಿನವರು ಕೆಡಿಸದಂತಾಯಿತು.

o o o o

ನಮಗೀಗ ದೊರೆತಿರುವುದು ರೂಪಾಯಿಯಲ್ಲಿ ಒಂದು ದುಡ್ಡು ಮಾತ್ರ, ಇನ್ನು ಉಳಿದುದನ್ನು ಗಳಿಸಿಕೊಳ್ಳುವ ತನಕ ಸ್ವರಾಜ್ಯವೆಂಬುದಿಲ್ಲ. ಪ್ರಜಾಸತ್ತೆಯಿರುವಲ್ಲೆಲ್ಲ ಜನತೆಗೆ ಸರ್ವಾನುಕೂಲತೆಗಳನ್ನು ಸರಕಾರವೇ ಒದಗಿಸಿ ಕೊಡುವುದು. ಪ್ರತಿಯೊಬ್ಬನಿಗೂ ಉದ್ಯೋಗವಿರುವಂತೆ ನೋಡಿ, ಧರ್ಮಾರ್ಥವಾಗಿ ವೈದ್ಯ ಸಹಾಯ, ಪ್ರಾಥಮಿಕ ಶಿಕ್ಷಣ, ವೃದ್ಧಾಪ್ಯದಲ್ಲಿ ಪೆನ್ಶನು ಮೊದಲಾದುವನ್ನು ಸ್ವರಾಜ್ಯವನ್ನು ಅನುಭವಿಸುವ ಸರಕಾರಗಳು ಒದಗಿಸುವುವು. ನಮ್ಮಲ್ಲಿ 'ಇದಕ್ಕೆ ಇನ್ನೂ ಉಪಾಯವಿಲ್ಲ'—ಎಂಬುದೇ ಶ್ರೀ। ಗಿರಿ (ಮಂತ್ರಿಯವರು) ಸೇಲಂನಲ್ಲಿ ಬೋಧಿಸಿದ ಮಾತು.

o o o o

ಬ್ರಿಟಿಷರು ಈ ದೇಶದಿಂದ ಹೊರಟು ಹೋದ ಮೇಲೆ, ನಮ್ಮೊಳಗಣ ಕಚ್ಚಾಟಗಳನ್ನು ನಾವು ತೀರ್ಮಾನಿಸಿಕೊಳ್ಳಲು ಅನುಕೂಲವಾಗಿದೆ, ಗುಡಿ ಕೈಗಾರಿಕೆಗಳ ವ್ಯವಸ್ಥೆ ಮಾಡಿ, ದೊಡ್ಡ ಕಾರ್ಖಾನೆಗಳನ್ನು ನಿರ್ಮಿಸಿ, ಎಲ್ಲ ಸಂಕಟ ನಿವಾರಣೆಯ ಹಂಚಿಕೆಗಳಿಗೂ ಹಣ ಶೇಖರಿಸಬಹುದಾಗಿದೆ. ಅದು ವರೆಗೆ ಇದು ಸಾಧ್ಯವಾಗದ ಕಾರಣ, ಸ್ವಾತಂತ್ರ್ಯವನ್ನು ಲಭಿಸಿಕೊಳ್ಳಲೂ ಪರಕೀಯರ ಲೂಟಿಯಿಂದ ನಮ್ಮನ್ನು ಕಾಪಾಡಿಕೊಳ್ಳಲೂ ಸಾಧಿಸಬೇಕು. ಬ್ರಿಟಿಷ ಆಳಿಕೆ ಕೆಟ್ಟುದಲ್ಲ, ಆದರೆ ಸ್ವರಾಜ್ಯದಷ್ಟು ಒಳ್ಳೆಯದಲ್ಲ ಎಂದು ಅವರು ಜನರನ್ನು ಕಾಂಗ್ರೆಸಿಗೆ ಬೆಂಬಲವಾಗಿರಲು ತಿಳಿಸಿ ಪ್ರೇರೇಪಿಸಿರುವರು.

o o o o

ಸಾಟ್ಯಾದಲ್ಲಿ ಯಾರೋ ಒಬ್ಬ ಸಿಂಗ್ ಲಂಚ ಬೇಡಿದನೆಂದು ಒಬ್ಬ ಪೊಲೀಸ ಪ[illegible]ನನ್ನು ಕಾಂಗ್ರೆಸ್ ಪಕ್ಷದ ಕೆಲವರು ಒಂದು ಕಂಬಕ್ಕೆ ಕಟ್ಟಿಹಾಕಿದರೆಂದೂ, ಪೊಲೀಸ್ ಅಧಿಕಾರರೇ ಬಂದು ಹೇಳಿದರೂ ಬಿಡಲಿಲ್ಲವೆಂದೂ, ಕಲೆಕ್ಟರರ ಮಾತಿನಂತೆ ಬಿಟ್ಟು, ಈಗ ಆ ಎಂಟು ಜನ ದಿವಸ ಪೊಲೀಸರ ಕೈದುಮಾಡಿ ಮೊಕದ್ದಮೆ ಹೂಡಿರುವರೆಂದೂ ವಾರ್ತೆ. ಜವಾನನನ್ನು ಕಾಯಿದೆಯಂತೆ ಪೊಲೀಸರೇ ಕೈದು ಮಾಡುವಂತೆ ಇವರೇ ತಾವು ಪೊಲೀಸರಾಗಿ ಈಗ ಕೈದಿಗೆ ಒಳಗಾದರೆ ಅಷ್ಟೆ ಆಡುವ ಪಕ್ಷವೇ ಆಡಬೇಕು.

o o

ಸಿಂಧದ ಹೈದರಾಬಾದಿನಲ್ಲಿ 18 ವಯಸ್ಸಿನ ಒಬ್ಬ ಯುವಕನೂ 17 ವಯಸ್ಸಿನ ಒಬ್ಬ ಕುಮಾರಿಯೂ ಕಾಲೇಜಿನಲ್ಲಿ ಓದುತ್ತಿದ್ದರು. ಇಬ್ಬರು ಹಿಂದುಗಳಾದರೂ ಬೇರೆ ಬೇರೆ ಜಾತಿಯವರು. ಇವರು ಇದ್ದುದು ಕುಮಾರಿಯ ಮನೆಯಲ್ಲಿ, ಊಟವೂ ಅಲ್ಲಿಯೇ, ಪಾಠವೂ ಅಲ್ಲಿಯೆ. ಪರಿಚಿತಿ ಇದ್ದುದ ಸ್ನೇಹವಾಗಿ ಗಾಢವಾಯಿತು. ವಿವಾಹವಾಗುವುದೆಂದು ನಿಶ್ಚಯಿಸಿ ಇಬ್ಬರೂ ಯಾರಿಗೂ ಹೇಳದೆ ಹೈದರಾಬಾದಿನಿಂದ ಕಲ್ಕತ್ತೆಗೆ ಪ್ರಯಾಣ ಮಾಡಿದರು. ಕುಮಾರಿಯ ಹಿರಿಯರಿಗೆ ಈ ವಿವಾಹದಲ್ಲಿ ಸಮ್ಮತಿ ಇದ್ದಿಲ್ಲ. ಬಹಳವಾಗಿ ಚಿಂತಿಸಿಕೊಂಡು ಪೊಲೀಸರಿಗೆ ವರದಿಕೊಟ್ಟು ಇಬ್ಬರನ್ನೂ ಲಾಹೋರಿನಲ್ಲಿ ತಲಪಿ ಹಿಡಿದರು. ಪೊಲೀಸರು ಅವರ ಹೇಳಿಕೆ ಬರೆದುಕೊಂಡು ಹಾಗೆಯೇ ಬಿಡಲು ಅವರು ಕಲ್ಕತ್ತೆಗೆ ಸೇರಿದರು. ಹಿರಿಯರು ಬೆಂಬಳಿಸಿ ಬರುವರೆಂದು ತಿಳಿದು, ಇಬ್ಬರೂ ಕಾಶಿಗೆ ಬಂದರು. ಅಲ್ಲಿ ವಿವಾಹ ನೆರವೇರಿಸಿ ಕೂಡಲೆ ಬರ್ಮಕ್ಕೆ ತೆರಳಿದರು. ಪುನಃ ಕಾಶಿಗೆ ಮರಳಲು, ಅಲ್ಲಿ ಯುವಕನ ತಂದೆಗೆ ಮಗನ ಗುರುತು ಸಿಕ್ಕಿತು. ಅವನು ದಂಪತಿಗಳನ್ನು ಮರಳಿ ಹೈದರಾಬಾದಿಗೇ ಕರೆತಂದನು. ಇದನ್ನು ತಿಳಿದು ಕುಮಾರಿಯ ಹಿರಿಯರು ಅಲ್ಲಿಗೆ ಬಂದು ಅವಳನ್ನು ತಮ್ಮಲ್ಲಿಗೆ ಕೊಂಡೊಯ್ದರು, ಅಲ್ಲಿಂದ ಅವರು ಎಲ್ಲಿಗೆ ಹೋಗಿರುವರೆಂದು ಪತ್ತೆಯೇ ಇಲ್ಲವಾಗಿದೆ. ಈಗ ಉಭಯತರ ಹಿರಿಯರೂ ರಾಜಿಮಾಡಿಕೊಂಡು ಹೇಗೂ ವಿವಾಹವು ಸ್ಥಿರವಾಗಲೆಂದು ಸ್ಥಿರ ಪ್ರಯತ್ನ ಮಾಡುತ್ತಿದ್ದಾರೆ.

ವ್ಯಾಪಾರಿಯೊಬ್ಬನ ಹೃದಯ ಪರಿವರ್ತನೆ

ಮಹಾತ್ಮಾಜಿಯವರ ಸಂಪರ್ಕದಿಂದ ಪತಿತನೊಬ್ಬನು ಪಾವನನಾದ ಕಥೆ!

ಕೆಲವು ವರ್ಷಗಳಿಂದ ಈಚೆಗೆ, ಪರಿಚಯದ ಒಬ್ಬ ವ್ಯಾಪಾರಿಗಳು, ಗಾಂಧಿಜಿಯವರು ಅವರ ಅಥವಾ ಸಮೀಪದ ಬೇರೆ ಊರುಗಳಿಗೆ ಬಂದಾಗ, ಕೆಲವು ಕಟ್ಟು ಕೈ ನೂಲನ್ನೂ ನೂರು ರೂಪಾಯಿಗಳ ಒಂದು ನೋಟಿನೊಂದಿಗೆ ಕೆಲವು ಚಿಲ್ಲರೆ ರೂಪಾಯಿಗಳನ್ನೂ ಅವರಿಗೆ ಕೊಟ್ಟು ಹಿಂತೆರಳುವದು ಒಂದು ಪದ್ಧತಿಯಾಗಿತ್ತು. ನಾವು ಜುಹುದಲ್ಲಿದ್ದಾಗ ಆ ವ್ಯಾಪಾರಿಗಳು ಹೀಗೆ ಎರಡು ಬಾರಿ ಬಂದು ಹೋದರು. ಒಂದು ಬಾರಿ ಅವರು ಬಂದಿದ್ದಾಗ, ಗಾಂಧಿಜಿಯವರು ಅವಸರದ ಬೇರೆ ಕಾರ್ಯಗಳಲ್ಲಿ ತೊಡಗಿದ್ದುದರಿಂದ, ಅವರ ದರ್ಶನವಾಗಲಿಕ್ಕೆ ವ್ಯಾಪಾರಿಗಳು ಸ್ವಲ್ಪ ಹೊತ್ತು ಕಾದುಕೊಂಡಿರಬೇಕಾಯಿತು. ಆ ಸಮಯ, ನನಗೂ ಅವರ ಪರಿಚಯಮಾಡಿಕೊಳ್ಳಬೇಕೆಂದು ಅನ್ನಿಸಿತು. ಆ ದಿನ ವ್ಯಾಪಾರಿಗಳು ನಾಲ್ಕು ಘಂಟೆಯ ಕಾಲ ಕಾದುಕೊಂಡಿದ್ದರು. ಆದರೂ ಗಾಂಧಿಜಿಯವರು ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸದಸ್ಯರೊಡನೆ ಚರ್ಚೆಯಲ್ಲಿ ನಿರತರಾಗಿದ್ದರು. ಆದ್ದರಿಂದ ವ್ಯಾಪಾರಿಗಳಿಗೆ 'ನಮ್ಮೊಂದಿಗೆ ಊಟ ಮಾಡಿ ಹೋಗಿ'ರೆಂದು ಹೇಳಿ ಅವರನ್ನು ಊಟಕ್ಕೆ ಆಮಂತ್ರಿಸಿದೆ. 'ಓಹೋ, ಬೇಡ ಬೇಡ, ಗಾಂಧಿಜಿಯವರಿಗೆ ನೂಲನ್ನೂ ನನ್ನ ವಂತಿಗೆಯನ್ನೂ ಕೊಟ್ಟ ಹೊರತು ಊಟಮಾಡಲಾರೆ' ಎಂದು ಅವರು ಹೇಳಿದರು. 'ಆದರೆ ಸ್ವಾಮಿ, ಹಾಗೆ ಮಾಡುವದಾದರೆ ಬಹಳ ಹೊತ್ತು ಕಳೆದು ಹೋದೀತು. ಈಗಲೇ ೧೨ ಘಂಟೆಯಾಯಿತು ಅಲ್ಲಿ ಸಭೆ ನಡೆಯುತ್ತಾ ಇದೆ. ಗಾಂಧಿಜಿಯವರು ಸ್ನಾನ ಕೂಡ ಮಾಡಿಲ್ಲ. ಮೊದಲು ಊಟಮಾಡಿ ಅನಂತರ ಅವರನ್ನು ಕಾಯಬಹುದಲ್ಲ?' ಎಂದು ನಾನು ಪುನಃ ಹೇಳಿದಾಗ—'ಬೇಡ, ನಾನು ಸಾಯಂಕಾಲದ ತನಕ ಕಾದಿರಲಿಕ್ಕೆ ಸಿದ್ಧನಿದ್ದೇನೆ' ಎಂದು ಅವರು ಸಂತೋಷದಿಂದ ನಸುನಗುತ್ತ ಪ್ರತ್ಯುತ್ತರ ಕೊಟ್ಟರಾಗ ಶ್ರೀ ಮಹಾದೇವ ದೇಸಾಯಿಯವರು 'ಹರಿಜನ'ದಲ್ಲಿ ಒಂದು ಲೇಖನ ಬರೆದು ಆ ವ್ಯಾಪಾರಿಯ ಹೃದಯ ಪರಿವರ್ತನೆಯಾದ ಒಂದು ಕತೆಯನ್ನು ಸೊಗಸಾಗಿ ಅದರಲ್ಲಿ ವರ್ಣಿಸಿದ್ದಾರೆ. ಇದಾದ ಅನಂತರ ಶ್ರೀ ದೇಸಾಯಿಯವರು ಆ ಕತೆಯನ್ನು ಹೀಗೆ ಮುಂದರಿಸಿದ್ದಾರೆ—

ಆಗ ವ್ಯಾಪಾರಿಗಳು ಆಗಾಗ ಬಂದು ನೂಲನ್ನೂ ಹಣವನ್ನೂ ಗಾಂಧಿಜಿಯವರಿಗೆ ಒಪ್ಪಿಸುವ ರಹಸ್ಯವೇನಿರಬಹುದೆಂದು ನಾನು ಅವರನ್ನು ಕೇಳಿದೆ. 'ಹಲವು ವರ್ಷಗಳ ಹಿಂದೆ, ಮಾರ್ಚ ತಿಂಗಳ ೧ನೆ ತಾರೀಕಿನ ದಿನ ಗಾಂಧಿಜಿಯವರ ಕೈದು ಆದಾಗ, ಪ್ರತಿದಿನ ನೂಲನ್ನು ನೂಲುವೆನೆಂದೂ, ಪ್ರತಿ ತಿಂಗಳು ೧ನೆ ತಾರೀಕಿನ ದಿನ ಒಂದೊಂದು ರೂಪಾಯಿ ತೆಗೆದಿಡುವೆನೆಂದೂ ಪ್ರತಿಜ್ಞೆ ಮಾಡಿದ್ದೆನು. ದೇವರ ದಯೆಯಿಂದ ಇಂದಿನ ವರೆಗೂ ಆ ಪ್ರತಿಜ್ಞೆಯನ್ನು ಪಾಲಿಸಿಕೊಂಡು ಬರುತ್ತಿದ್ದೇನೆ. ಮತ್ತೆ ಗಾಂಧಿಯವರು ಸಮೀಪದಲ್ಲಿ ಸಂಚರಿಸುತ್ತಿರುವಾಗ ನೂತ ನೂಲನ್ನೂ ತೆಗೆದಿಟ್ಟ ಹಣವನ್ನೂ ಅವರ ಬಳಿಗೆ ಕೊಂಡುಹೋಗುತ್ತೇನೆ' ಎಂದು ಅವರು ಹೇಳಿದರು.

'ಆದರೆ ನೀವು ಆಗಾಗ ನೂರು ರೂಪಾಯಿಗಳ ಒಂದೊಂದು ನೋಟನ್ನೂ ಕೊಡುತ್ತಿರುವಿರಲ್ಲ?'

'ಓಹೋ,-ಅದು ಏನೂ ಇಲ್ಲ, ಸಾಮಾನ್ಯವಾದ್ದು. ನಾನು ಸಂಪಾದಿಸಿ ಜೀವದಲ್ಲಿ ಹಣ ಉಳಿದಾಗ ಸ್ವಲ್ಪವನ್ನು ತಂದು ಅವರಿಗೆ ಅರ್ಪಿಸುತ್ತೇನೆ. ಆದರೆ ಅದು ನಾನು ನನ್ನ ಸ್ವೇಚ್ಛೆಯಿಂದ ಕೊಡುವ ಹಣ. ಇದು ಮಾತ್ರ ನನ್ನ ಪ್ರತಿಜ್ಞೆಯ ಫಲ. ಈ ಪ್ರತಿಜ್ಞೆಯಿಂದಾಗಿಯೇ ನನ್ನ ಜೀವನವು ಸಫಲವಾಯಿತು ಎಂದು ನಾನು ಎಣಿಸಿದ್ದೇನೆ.'

'ಅಂದರೆ ಏನು ಅರ್ಥ? ದಯಮಾಡಿ ವಿವರಿಸಿ ಹೇಳಿರಿ.'

— ವ್ಯಾಪಾರಿಗಳು ಸರಳ ಜೀವನದ ಪ್ರತಿಮೂರ್ತಿಗಳಾಗಿದ್ದರು. ಅವರು ಸೀರಿಕೆಗಾಗಿ ಸಮಯವನ್ನು ಕಳೆಯದೆ ಹೀಗೆ ತಮ್ಮ ಕತೆಯನ್ನು ಆರಂಭಿಸಿದರು.—

'ನಾನು ಒಂದಾನೊಂದು ಸಮಯ ದೊಡ್ಡ ಕುಡುಕನಾಗಿದ್ದೆ. ಮೂಗಿನಿಂದ ಹೊರಗೆ ಬರುವಷ್ಟು ಕುಡಿದು ಮತ್ತನಾಗುತಿದ್ದೆ.'

'ಯಾವಾಗ ಆ ದುರ್ವ್ಯಸನವನ್ನು ಬಿಟ್ಟಿರಿ? ಪ್ರತಿಜ್ಞೆ ತೆಗೆದುಕೊಂಡಾಗಲೇ?'

'ಅಲ್ಲ. ಕುಡುಕತನವನ್ನು ಬಿಟ್ಟುಬಿಡಬೇಕು, ಅದು ತೀರಾ ಕೆಟ್ಟ ಅಭ್ಯಾಸ, ಎಂದು ಮೊದಲಿನಿಂದಲೂ ನಾನು ತಿಳಿದಿದ್ದೆ. ಆದರೆ ನನ್ನ ಹೃದಯವು ದುರ್ಬಲವಾಗಿತ್ತು. ಶರೀರವು ಅದನ್ನು ಇಚ್ಛಿಸುತಿತ್ತು. ಆದ್ದರಿಂದ ನಾನು ಎಷ್ಟು ಮನಸ್ಸು ಮಾಡಿದರೂ ಕೂಡಲೇ ಅದನ್ನು ಬಿಟ್ಟುಬಿಡಲಿಕ್ಕೆ ಆಗಲಿಲ್ಲ.'

'ಮತ್ತೆ ಎಷ್ಟು ಕಾಲದ ತನಕ ಕುಡಿಯುತ್ತಿದ್ದಿರಿ?'

'ಪ್ರತಿಜ್ಞೆ ತೆಗೆದುಕೊಂಡ ಮೇಲೆ, ಎರಡು ವರ್ಷಗಳಾಗುವ ತನಕ.'

'ಹಾಗಾದರೆ ಅದನ್ನು ಸರ್ವಥಾ ಬಿಟ್ಟುಬಿಡಲಿಕ್ಕೆ ಏನು ಕಾರಣವಾಯಿತು? ಅದಕ್ಕೆ ಬೇಕಾದ ಧೈರ್ಯ ಸ್ಥೈರ್ಯಗಳು ನಿಮಗೆ ಎಲ್ಲಿಂದ ಬಂದುವು?'

'ಅದು ನನಗೆ ಗೊತ್ತಿಲ್ಲ, ದೇವರಿಗೇ ಗೊತ್ತು. ಆದರೆ ಸ್ನಾನಮಾಡಿ, ಭಗವದ್ಗೀತೆಯ ಪಾರಾಯಣ ಮಾಡಿದ ಹೊರತು ನಾನು ಊಟ ಮಾಡುತ್ತಿರಲಿಲ್ಲ.'

'ಆದರೆ ಆಗ ಸಹ ಕುಡಿಯುತ್ತಿದ್ದಿರೆ?'

'ಹೌದು, ಭಗವದ್ಗೀತೆಯ ಪಾರಾಯಣದಿಂದ, ತಾತ್ಕಾಲಿಕ ಯಾವ ಪರಿಣಾಮವೂ ಉಂಟಾಗಲಿಲ್ಲ. ನಾನು ಒಬ್ಬ ಆರ್ಯಸಮಾಜಿ ಆಗಿದ್ದೇನೆ. ಭಗವದ್ಗೀತೆಯನ್ನು ಅನುಸಕ್ತ ಓದುವದು ನನ್ನ ಕ್ರಮವಾಗಿತ್ತು.'

'ಸಂಸ್ಕೃತ ಬಲ್ಲಿರಾ? ಎಷ್ಟರ ತನಕ ಓದಿದ್ದೀರಿ?'

'ನನಗೆ ಸಂಸ್ಕೃತ ಓದುವದಿಲ್ಲ. ಹೇಳಿಕೊಂಡು ಅಭಿಮಾನಪಡತಕ್ಕಷ್ಟು ಹೆಚ್ಚು ಶಿಕ್ಷಣವನ್ನು ಪಡೆಯಲೂ ಇಲ್ಲ. ಉರ್ದುವಿನಲ್ಲಿ ಗೀತೆಯನ್ನು ಓದುತ್ತೇನೆ. ತಿಲಕರ ಗೀತಾರಹಸ್ಯದ ಅನುವಾದದಿಂದ ಒಂದೊಂದು ಪುಟವನ್ನು ಓದುತ್ತೇನೆ.'

'ಹಾಗಾದರೆ ಕುಡಿಯುವ ಅಭ್ಯಾಸವನ್ನು ಮೆಲ್ಲಮೆಲ್ಲನೆ ಬಿಡಲಿಕ್ಕೆ ಪ್ರಯತ್ನಿಸಿದಿರಾ?'

'ಹೇ, ಇಲ್ಲ. ಕುಡಿಯುವದನ್ನು ಮೆಲ್ಲಮೆಲ್ಲಗೆ ಬಿಡಬಹುದೆಂಬುದು ಒಂದು ಭ್ರಮೆ. ಅದನ್ನು ಮೆಲ್ಲಮೆಲ್ಲಗೆ ಯಾರೂ ಬಿಡಲಾರರು. ಒಮ್ಮೆಗೆ, ಅದನ್ನು ಬಿಟ್ಟುಬಿಡುವೆನು. ಎರಡು ತಿಂಗಳ ಕಾಲ ಏನೂ ಕುಡಿಯದೆ ಇದ್ದೆ. ಆ ಮೇಲೆ ಪುನಃ ಒಂದು ಬಾಟಲಿಯನ್ನು ನೋಡಿ ಪ್ರೋತ್ಸಾಹಿತನಾದೆ. ಮತ್ತೆ ಕುಡಿಯಲಾರಂಭಿಸಿದೆ. ಪರಂತು ಯಾವಾಗ ಎಂದು ಸರಿಯಾದ ದಿನ ನೆನಪಿಲ್ಲ. ಅದು ಪ್ರಾಯಶಃ ಗಾಂಧಿಯವರನ್ನು ಜೈಲಿನಿಂದ ಬಿಟ್ಟ ಸಮಯವಾಗಿದ್ದಿರಬೇಕು. ನೂಲನ್ನು ನೂತು ಪ್ರತಿ ತಿಂಗಳು ಒಂದೊಂದು ರೂಪಾಯಿ ಗಾಂಧಿಯವರಿಗೆ ಕೊಡುವ ಪ್ರತಿಜ್ಞೆ ಮಾಡಿರುತ್ತಾ ನಾನು ಕುಡುಕನಾಗಿಯೇ ಇದ್ದಿರುವದು ಲಜ್ಜೆಯ ವಿಷಯವೆಂದು ಮನಸ್ಸಿನಲ್ಲೇ ಅಂದುಕೊಂಡೆ. ಬಾಟಲಿಯನ್ನು ನೆಲಕ್ಕೆ ಹೊಡೆದು ಚೂರು ಚೂರು ಮಾಡಿದೆ. ಆ ಮೇಲೆ, ಅಂದಿನಿಂದ ಇಷ್ಟರ ತನಕ ಅದನ್ನು ಮುಟ್ಟಿಲ್ಲ. ಈ ಘಟನೆ ನಡೆದು ೧೪ ವರ್ಷಗಳಾದುವು.'

'ಕುಡುಕತನದೊಂದಿಗೆ ಬೇರೆ ದುರ್ವ್ಯಸನಗಳು ಅಂಟಿಕೊಂಡೇ ಬರುತ್ತವೆ. ನೀವು ಅವುಗಳಿಗೂ ಬಲಿಯಾಗಿದ್ದಿರಾ?'

'ಇಲ್ಲ. ನನಗೆ ಸಂಗೀತದ ಮೇಲೆ ರುಚಿಯಿದ್ದಿತು. ಆದ್ದರಿಂದ ಆಗಾಗ ಸೂಳೆಯರ ಮನೆಗೆ ಹೋಗಿ ಸಂಗೀತ ಕೇಳುತಿದ್ದೆ. ಅಷ್ಟೇ ಅಲ್ಲದೆ ಅಲ್ಲಿ ಇನ್ನೇನನ್ನೂ ಮಾಡಲಿಲ್ಲ. ಅದು ನನಗೆ ಒಗ್ಗುವದಿಲ್ಲ. ಮತ್ತೆ ನಾನು ಮಿತಿಮೀರಿ ಕುಡಿಯುತಿದ್ದೆನಾದರೂ, ಕುಡಿದಾಗ ನನ್ನ ಮನೆ ಬಿಟ್ಟು ಹೊರಗೆ ಹೋಗುತ್ತಿರಲಿಲ್ಲ. ನನಗೆ ನನ್ನ ಹೆಸರಿಗೆ ಕಲಂಕ ಬರುವ ತುಂಬಾ ಹೆದರಿಕೆ ಇತ್ತು. ನನ್ನನ್ನು ಕುಡಿದ ಸ್ಥಿತಿಯಲ್ಲಿ ಯಾರಾದರೂ ಕಂಡಿದ್ದಾರೆಂದು ನಾನು ಎಣಿಸುವದಿಲ್ಲ.'

'ಅಲ್ಲರೀ, ಸೂಳೆ ಮನೆಗೆ ಹೋಗುವ ವಿಷಯ ನಾನು ಕೇಳಿದ್ದಲ್ಲ. ಕುಡುಕತನದೊಂದಿಗೆ ಇನ್ನೂ ಅನೇಕ ದುರ್ವ್ಯಸನಗಳಿಗೆ ಜನರು ಬಲಿಯಾಗುತ್ತಾರೆ. ಉದಾಹರಣಾರ್ಥವಾಗಿ, ನೀವು ದೊಡ್ಡ ವ್ಯಾಪಾರಿಗಳಾಗಿದ್ದೀರಿ. ಕುಡಿಯುವ ಜನರು ಹಣಕಾಸುಗಳೊಡನೆ ಮಂಗಳ ಮಾಟ ಮಾಡುತ್ತ ಇರುತ್ತಾರೆ. ಆದ್ದರಿಂದ ತಮ್ಮ ವ್ಯವಹಾರಗಳಲ್ಲಿ ಅವರು ಯಾವಾಗಲೂ ಸತ್ಯವಂತರಾಗಿ ಇರುವದಿಲ್ಲ. ನೀವು ಹೇಗಿದ್ದಿರಿ?'

'ಇಲ್ಲ. ನಾನು ಸತ್ಯದಿಂದಲೇ ವಹಿವಾಟು ಮಾಡಿದ್ದೇನೆ. ನಾನು ಯಾರನ್ನೂ ಮೋಸ ಮಾಡಿರುವದಿಲ್ಲ.'

ಸ್ವಲ್ಪ ಸಮಯ ನಾವಿಬ್ಬರೂ ಮೌನದಿಂದಿದ್ದೆವು. ಅವರನ್ನು ಪುನಃ ಪುನಃ ಪ್ರಶ್ನೆ ಕೇಳಿ ದಣಿಸುವ ಇರಾದೆ ನನಗಿರಲಿಲ್ಲ. ಆದರೂ ಅವರಲ್ಲಿ ಮುಚ್ಚುಮರೆ ಇಲ್ಲವಾದುದರಿಂದ ಇದ್ದುದನ್ನು ಇದ್ದ ಹಾಗೆಯೇ ಹೇಳಿದರು. ಆದಕಾರಣ ನಾನು ಇನ್ನೂ ಕೆಲವು ಪ್ರಶ್ನೆಗಳನ್ನು ಅವರಿಗೆ ಹಾಕಲಿಕ್ಕಿದೆ. ಆದರೆ ತಮ್ಮ ಕತೆಯನ್ನು ಹೇಳಿ ಪೂರ್ಣ ಮುಗಿಸಲಿಲ್ಲವೆಂದು ಅವರಿಗೆ ತೋರಿದಂತೆ ಕಾಣುತ್ತದೆ. ಆದ್ದರಿಂದ ಅವರಾಗಿ ಮುಂದರಿಸಿದರು—

'ನನ್ನ ಇನ್ನೊಂದು ಪಾಪಾಚರಣೆ,—ಅಂದರೆ ಹೊಗೆಸೊಪ್ಪಿನ ಸೇವನೆಯ ಕುರಿತು ನಾನು ನಿಮಗೆ ಹೇಳಲಿಲ್ಲ. ಕುಡುಕತನವನ್ನು ಬಿಡುವದು ಸುಲಭವಾಗಿತ್ತು. ಆದರೆ ಹೊಗೆಸೊಪ್ಪು ಬಿಡುವದು ಕಠಿನವಾಗಿತ್ತು. ಕುಡಿಯುವದನ್ನು ಬಿಡಬೇಕೆಂದಿದ್ದಂತೆ ಹೊಗೆಸೊಪ್ಪನ್ನೂ ಬಿಡಬೇಕೆಂಬ ಇಚ್ಛೆಯು ನನ್ನಲ್ಲಿ ಪ್ರಬಲವಾಗಿತ್ತು. ಆದರೂ ಭಗವದ್ಗೀತೆಯ ಪಾರಾಯಣೆ ಮತ್ತು ಪ್ರಾರ್ಥನೆಯ ಸಾಧನವಿದ್ದಾಗಲೂ ನಾನು ಕೆಲವು ವರ್ಷಗಳು ಕಳೆಯುವ ತನಕ ಹೊಗೆಸೊಪ್ಪಿನ ಗುಲಾಮನಾಗಿದ್ದೆ. ಮೊದಲು ಕರಡಿಗೆ ಕರಡಿಯಾಗಿ ಸಿಗರೇಟು ಸೇದುತಿದ್ದೆ. ಅನಂತರ ಹುಕ್ಕಾ ಸೇದಲಿಕ್ಕೆ ಆರಂಭಿಸಿದೆ. ದಿವಸದಲ್ಲಿ ೨೦ ೨೫ ಬಾರಿ ಹುಕ್ಕಾ ಸೇದಬೇಕಾಗುತಿತ್ತು. ಆಹಾರ ಜೀರ್ಣ ಮತ್ತು ಮಲವಿಸರ್ಜನೆಗೆ ಹೊಗೆಸೊಪ್ಪು ಸಹಾಯ ಮಾಡುವದೆಂದು ನನ್ನ ಭಾವನೆಯಾಗಿತ್ತು. ಈ ನಂಬಿಗೆಯು ಹಲವು ವರ್ಷಗಳ ತನಕ ಇದ್ದಿತು. ಮೆಲ್ಲಮೆಲ್ಲಗೆ ಅದನ್ನು ಬಿಡುವದರಿಂದ ಪ್ರಯೋಜನವಾದೀತೆಂದು ನಾನು ಎಣಿಸಿದ್ದೆ. ಮೊದಲು ನಾನು ಸಿಗರೇಟುಗಳನ್ನು ಬಿಟ್ಟೆ. ಆ ಮೇಲೆ ಮಲವಿಸರ್ಜನೆಗೆ ಹೋಗುವ ಮೊದಲು, ಪ್ರತಿದಿನ ಬೆಳಿಗ್ಗೆ ಒಂದು ಬಾರಿ ಮಾತ್ರ ಹುಕ್ಕಾ ಸೇದುವ ಕ್ರಮವನ್ನಿಟ್ಟುಕೊಂಡೆ. ಐದು ವರ್ಷಗಳ ಮೊದಲು, ನನ್ನ ಸೌಭಾಗ್ಯದಿಂದ ಒಂದು ಅಘಟಿತ ಘಟನೆಯು ಘಟಿಸಿತು. ನನಗೊಂದು ವಿಚಿತ್ರ ಕನಸು ಬಿದ್ದಿತು. 'ಮದ್ಯವನ್ನು ಬಿಟ್ಟಂತೆ ಹೊಗೆಸೊಪ್ಪನ್ನೂ—ಬಿಡು' ಎಂದು ಏನೋ ಒಂದು ಸಂದೇಶವನ್ನು ಕೇಳಿದೆ. ಅಂದಿನಿಂದ ಹುಕ್ಕಾ ಮತ್ತು ಹೊಗೆಸೊಪ್ಪನ್ನು ನಾನು ಮುಟ್ಟಲೂ ಕೂಡ ಇಲ್ಲ.'

'ಆದ್ದರಿಂದ ಗೀತೆಯಿಂದ ನಿಮಗೆ ಒಳ್ಳೆಯ ಪ್ರಯೋಜನವಾಯಿತು. ಮದ್ಯ ಮತ್ತು ಹೊಗೆಸೊಪ್ಪು ಬಿಟ್ಟುದರಿಂದ ನಿಮಗೆ ದುಃಖವಾಗಿಲ್ಲವಷ್ಟೆ?'

'ಹೋ, ಇಲ್ಲ. ಅದರ ಬದಲಿಗೆ ಸುಖವೇ ಆಗಿದೆ. ಈಗ ನನಗೆ ಮೊದಲಿಗಿಂತ ಹೆಚ್ಚು ಸುಖವೂ ತೃಪ್ತಿಯೂ ಇದೆ. ಮತ್ತೆ ಈ ದುರ್ವ್ಯಸನಗಳು ಕಡೆತನಕ ನನ್ನಲ್ಲಿ ಸುತ್ತಿಕೊಂಡು ಇರುತಿದ್ದುವಾದರೆ ನನ್ನ ಮಕ್ಕಳ ಪಾಡು ಏನಾಗುತಿತ್ತೊ? ಅವರು ಕೂಡ ನನ್ನನ್ನು ಅನುಸರಿಸುತಿದ್ದರು. ಆಗ ನನ್ನ ಎಲ್ಲಾ ಕುಟುಂಬವು ನಷ್ಟವಾಗುತಿತ್ತು. ಆದರೆ ಅದೆಲ್ಲ ಹಾಗೆ ಇರಲಿ. ನಾನು ಯಾವುದನ್ನು ಮರೆಮಾಚಲಾರೆ. ನನ್ನ ವ್ಯಾಪಾರ ವಹಿವಾಟುಗಳ ಕುರಿತು ನೀವು ಕೇಳಿದ್ದು ಒಳ್ಳೆಯದೇ ಆಯಿತು. ನನಗೆ ವ್ಯಾಪಾರ ವಹಿವಾಟಿನಲ್ಲಿ ಒಳ್ಳೇ ಲಾಭವಾಗುತ್ತದೆ. ಆದರೂ ಕೂಡ ನಾನು ಸಟ್ಟಿ ಆಟ ಆಡುತ್ತೇನೆ. ಅದು ಕೆಟ್ಟದ್ದೆಂದು ತಿಳಿದಿದ್ದರೂ, ಅನೇಕ ವರ್ಷಗಳಿಂದ ಅದನ್ನು ಆಡಿಕೊಂಡಿದ್ದೇನೆ.'

'ಅದನ್ನು ಬಿಡಬೇಕಾದರೂ ಇನ್ನೊಂದು ಕನಸು ಬೀಳುವ ತನಕ ಕಾಯಬೇಡಿರಿ.'

'ಇಲ್ಲ, ನಿಮಗೆ ಧನ್ಯವಾದ. ನೀವು ಹೇಳಿದ್ದನ್ನು ನೆನಪಿನಲ್ಲಿಟ್ಟುಕೊಂಡು, ಜುಗಾರನ್ನು ಬಿಟ್ಟುಬಿಡಲಿಕ್ಕೆ ಭಗೀರಥ ಪ್ರಯತ್ನ ಮಾಡುವೆನು.'

ಇಷ್ಟರೊಳಗೆ ಗಾಂಧಿಜಿಯವರು ಸ್ನಾನ ಮಾಡಿ ಹೊರಗೆ ಬಂದರು. ನನ್ನ ವ್ಯಾಪಾರಿ ಸ್ನೇಹಿತರು ಅವರ ಬಳಿಗೆ ಕರೆದೊಯ್ಯಲ್ಪಟ್ಟರು. ಅವರು ತಮ್ಮ ಭಕ್ತಿಯ ಕಾಣಿಕೆಯನ್ನು ಗಾಂಧಿಯವರ ಚರಣಕಮಲಗಳಿಗೆ ಸಮರ್ಪಿಸಿ ಕೂಡಲೇ ಹೊರಟುಹೋದರು. ಮಾತನಾಡಿ ಸಮಯ ವ್ಯರ್ಥಗೊಳಿಸುವದು ಅವರ ಅಭ್ಯಾಸವೇ ಅಲ್ಲ. ತಮ್ಮ ಕಾಣಿಕೆಯನ್ನು ಒಪ್ಪಿಸಬೇಕೆಂಬುವೇ ಅವರ ಮನಸ್ಸಿನ ಹಂಬಲ. ಪ್ರತಿಜ್ಞೆ ತೆಗೆದುಕೊಂಡಾಗ ಗಾಂಧಿಯವರು ಜೈಲಿನಲ್ಲಿದ್ದರೆಂಬುದು ತಮ್ಮ ಭಾಗ್ಯದ ವಿಷಯವಾಯಿತೆಂದು ಭಾವಿಸಿ ಅವರು ನಡೆದುಬಿಟ್ಟರು.

ತಾಹಾಪುರದಲ್ಲಾದ ಕೇಡಿಗಳ ಕೊಲೆ

ಅತ್ಯಂತ ಭಯಂಕರ ಕೇಡಿ. ಕೆಲ ಮಂದಿ ಗ್ರಾಮಸ್ಥರನ್ನು ಕೊಂದ ಆಪಾದನೆಗೆ ಗುರಿಯಾಗಿದ್ದ ಹತ್ತು ಹನ್ನೆರಡು ಇತರ ಜನರೊಡನೆ ಶಸ್ತ್ರಾಸ್ತ್ರ ಸಜ್ಜಿತನಾಗಿ, ಸರ್ವರೂ ಹೆಂಡ ಕುಡಿದು ಉನ್ಮತ್ತರಾಗಿ, ತನ್ನ ವಿರೋಧಿಗಳನ್ನು ಕಂಡಲ್ಲಿ ಕೊಲೆ ಮಾಡಲೆಳಸಿದನು. [illegible] ಇವನಿಗೆ ದೊರೆತ ಮೊದಲನೆ ಬಲಿ. ಅಷ್ಟರಲ್ಲಿ ಗ್ರಾಮಸ್ಥರೂ ಸೇರಿದರು. [illegible] ಗಳನ್ನು ಕೂಡಿಸಿದರು. ಕೇಡಿಗಳು ಎದುರಾದರು. ಕೇಡಿ ಮುಖಂಡನು ಎದುರಿನ ಜನರ ಸಂಖ್ಯೆ ನೋಡಿಯೇ ಪಲಾಯನ ಮಾಡಿ, ಒಂದು ಮನೆ ಹೊಕ್ಕು, ಬಾಗಿಲು ಭದ್ರ ಮಾಡಿ ಕೊಂಡನು. ಗ್ರಾಮಸ್ಥರು ಮನೆಯ ಸುತ್ತಲೂ ಬಿದ್ದ ಬೆಂಕಿ ಹತ್ತುವ ಸಾಮಗ್ರಿಗಳನ್ನು ಕೂಡಿಸಿಟ್ಟು ಬೆಂಕಿ ಹಚ್ಚಿದರು. [illegible] ನಿಗೆ ಇನ್ನು ಎಲ್ಲವೂ ಮುಗಿಯಿತೆಂದು ತಿಳಿದು, ಜತೆಯಲ್ಲಿದ್ದ ತನ್ನ ಹೆಂಡತಿ ಮಕ್ಕಳು ವಿರೋಧಿಗಳ ಕೈವಶವಾಗಬಾರದೆಂದು ಅವನು ಅವರನ್ನು ಉರಿಯುವ ಬೆಂಕಿಯಲ್ಲೇ ತಳ್ಳಿದನು. ಅನಂತರ, ಬೆಂಕಿ ಹೊಗೆಗಳಿಗೆ ಉಸಿರುಕಟ್ಟಿ, ಸುಟ್ಟು ಸಾಯುವ ಒಳಗಾಗಿ, ಬಾಗಿಲು ತೆರೆದು ಹೊರಕ್ಕೆ ಹಾರಿದನಾಗಲೆ, ಅವರಲ್ಲಿ ನಾಲ್ವರನ್ನು ಗ್ರಾಮಸ್ಥರು ಕೊಂದಿಕ್ಕಿದರು, ಮೂರೋ ನಾಲ್ಕೋ ಮಂದಿಯನ್ನು ಸೆರೆಹಿಡಿದರು. ಹೀಗೆಂದು ಅಮ್ಮ ಸರಕಾರ ಆರು ಹೆಣಗಳನ್ನು ಕಂಡ ಪೋಲೀಸ ಅಧಿಕಾರಿಗಳು ಪ್ರಕಟಿಸಿದ ವಾರ್ತೆ.

ಒಬ್ಬ ಅಭಾಗಿನೀ ಹಿಂದೂ ಯುವತಿಯ ಪತ್ರ

ಪ್ರಯಾಗದ 'ಚಾಂದ್' ಪತ್ರಿಕೆಯ ಸಂಪಾದಿಕೆಯರ ಹೆಸರಿನಲ್ಲಿ ಒಬ್ಬ ಅಭಾಗಿನೀ ಹಿಂದೂ ಯುವತಿಯು ಕಳಗಿಸ ಒಂದು ಪತ್ರವನ್ನು ಬರೆದಿದ್ದಾಳೆ —

ಮಾನ್ಯ ಸಂಪಾದಿಕೆಯರೆ,

ನಾನು ಒಂದು ಉಚ್ಚವಂಶದ ಹಿಂದೂ ಯುವತಿಯಾಗಿದ್ದೇನೆ. ನನ್ನ ತಂದೆತಾಯಿ, ಬಂಧುಬಾಂಧವರು-ಎಲ್ಲರು ಶ್ರೀಮಂತರಾಗಿದ್ದಾರೆ. ಆದರೆ ಹುಡುಗಿಯರನ್ನು ಪ್ರೀತಿಯಿಂದ ಕಾಣದೆಂಥ ಆ ಸಮಾಜದಲ್ಲಿ ನಾನು ಹುಟ್ಟಿದ್ದೇನು. ಹುಟ್ಟಿದ ಹುಡುಗಿಯರು ಸ್ವಾವಲಂಬಿನಿಯರಾಗಬೇಕು ಎಂಬ ಪವಿತ್ರ ಉದ್ದೇಶದಿಂದ ಹಿಂದೂ ಸಮಾಜದಲ್ಲಿ ಅವರಿಗೆ ಶಿಕ್ಷಣವನ್ನು ಕೊಡುವದಿಲ್ಲ. ಪರಂತು ವಿವಾಹದ ರೀತಿಯಲ್ಲಿ ಅವರನ್ನು ಸುಲಭದಲ್ಲಿ ಮಾರಿಬಿಡಲಿಕ್ಕಾಗಬೇಕು-ಎಂಬುದಕ್ಕೋಸ್ಕರ ಹಾಗೆ ಮಾಡುತ್ತಾರೆ. ಹಿಂದೂ ಸಮಾಜದಲ್ಲಿ ತಂದೆಯು ತನ್ನ ಮಗಳಿಗೊಂದು ವಿವಾಹ ಮಾಡಿಬಿಟ್ಟರೆ ಕರ್ತವ್ಯವು ಮುಗಿಯಿತೆಂದು ಭಾವಿಸುತ್ತಾನೆ. ಮಗಳ ಭವಿಷ್ಯವು ಸುಂದರವಾಗಬೇಕು ಎಂಬ ಇಚ್ಛೆಯು ಅವನಿಗಿರುವುದಿಲ್ಲ. ಮಗಳ ವಿವಾಹವು ಅವನದೊಂದು ಕರ್ತವ್ಯವಷ್ಟೆ ಆಗಿರುತ್ತದೆ. ಗಂಡನ ಮನೆಯಲ್ಲಿ ಮಗಳು ಸುಖಿಯಾಗಿದ್ದಾಳೆಯೋ, ದುಃಖಿಯಾಗಿದ್ದಾಳೆಯೋ ಎಂಬುದರ ಕಡೆಗೆ ಅವನ ಲಕ್ಷ್ಯವಿರುವುದಿಲ್ಲ. ಒಳ್ಳೆ ಮನೆಯೋ ಕೆಟ್ಟ ಮನೆಯೋ-ಅವಳಿಗೆ ದೊರೆಯುವುದು ಅವಳ ಭಾಗ್ಯದ ಮಾತು. ತಂದೆಯು ಇಚ್ಛಿಸಿದುದಕ್ಕಿಂತ ಹೆಚ್ಚು ಕಲಿಯಲಿಕ್ಕೆ ಮಗಳು ಆತುರಪಟ್ಟರೆ, ಅವನು ಅದನ್ನು ಅನಾವಶ್ಯಕ ಖರ್ಚು ಎಂದು ತಿಳಿಯುತ್ತಾನೆ. ಅವಳ ಶಿಕ್ಷಣಕ್ಕಾಗಿ ಖರ್ಚು ಮಾಡುವಷ್ಟು ಹಣದಿಂದ ಅವಳಿಗೊಂದು ಮದುವೆ ಮಾಡಿಬಿಟ್ಟರೆ ತನ್ನ ಕರ್ತವ್ಯವಾದರೂ ಆಗ ಮುಗಿಯುವದಲ್ಲ! ಎಂದು ಎಣಿಸುತ್ತಾನೆ. ಮತ್ತೆ ಸಮಯಾನುಸಾರ ತಂದೆಯೊಡನೆ ತನ್ನ ಆವಶ್ಯಕತೆಯ ಪೂರ್ತಿಯನ್ನಾದರೂ ಕೇಳಿದರೂ ಕೂಡ ಮಗಳಿಗೆ ಅನಾದರದ ಪ್ರತ್ಯುತ್ತರವಲ್ಲದೆ ಅವಳಿಗೆ ಮತ್ತೇನೂ ಲಭಿಸುವದಿಲ್ಲ.

ತಮಗೆ ನನ್ನ ಮಾತಿನಲ್ಲಿ ವಿಶ್ವಾಸವುಂಟಾಗಬೇಕು ಎಂಬುದಕ್ಕೋಸ್ಕರ ನಾನು ನಿಜವಾಗಿಯೂ ನಡೆದ ಒಂದು ಸತ್ಯಘಟನೆಯನ್ನು ಇಲ್ಲಿ ಬರೆಯುತ್ತೇನೆ. ನನ್ನ ತಂದೆಯು ತನ್ನ ಸ್ನೇಹಿತ ಸಂಬಂಧಿಗಳೊಡನೆ ಯಾವಾಗಲೂ ನನ್ನ ಅಣ್ಣನ ಪ್ರಶಂಸೆಯನ್ನು ಮಾಡುತ್ತ ಇರುತ್ತಾರೆ. 'ನನ್ನ ಹುಡುಗನು ಬಹಳ ಯೋಗ್ಯನಾಗಿದ್ದಾನೆ. ಇಂಥಿಂಥ ಪರೀಕ್ಷೆಯಲ್ಲಿ ಸರ್ವಪ್ರಥಮನಾಗಿ ಉತ್ತೀರ್ಣನಾದುದರಿಂದ ಅವನಿಗೆ ಸ್ವರ್ಣಪದಕ ಬಹುಮಾನವಾಗಿ ದೊರೆತಿದೆ. ಇಂಥಿಂಥ ವಿಷಯದಲ್ಲಿ ಸಫಲನಾದುದರಿಂದ ಯುನಿವರ್ಸಿಟಿಯ ಕಡೆಯಿಂದ ಪ್ರಶಸ್ತಿ ಸಿಕ್ಕಿದೆ. ನನ್ನ ಮಗ ಬಹಳ ಚೆನ್ನಾಗಿ ಲೆಕ್ಚರು ಕೊಡುತ್ತಾನೆ ?' ಎಂದು ಮೊದಲಾಗಿ ಅವರು ಮಂದಿಯ ಮುಂದೆ ಹೇಳುತ್ತ ಇರುತ್ತಾರೆ. ಇದೇ ತಂದೆಯೊಡನೆ ಒಂದು ದಿನ ನಾನು ಸ್ವಲ್ಪ ಹಣ ಕೇಳಿದೆ. 'ಯಾಕೆ?' ಎಂದು ಅವರು ಪ್ರಶ್ನಿಸಿದರು. 'ಒಂದು ಲೇಖನ ಬರೆದಿದ್ದೇನೆ. ಅದನ್ನು ಒಂದು ಪತ್ರಿಕೆಗೆ ಕಳುಹಿಸಿಕೊಡಬೇಕು. ಅದಕ್ಕೆ ಟಪ್ಪಾಲು ಖರ್ಚು ಮೂರು ಮುಕ್ಕಾಲು ಆಗುತ್ತದೆ' ಎಂದು ಹೇಳಿದೆ. 'ಹೋಗು, ಆರಾಮವಾಗಿ ಇರು. ಲೇಖನ ಬರೆದು ಏನು, ಮನೆ ಉದ್ಧಾರವಾಗಲಿಕ್ಕೆ ಉಂಟು'' ಎಂದು ತಂದೆಯ ಪ್ರತ್ಯುತ್ತರ ಬಂದಿತು. ನಾನು ಅಲ್ಲಿ ನಿಂತೇ ಇದ್ದೆ. ನನ್ನ ಕಣ್ಣುಗಳಿಂದ ಎರಡು ಹನಿ ನೀರು ಇಳಿದು ಹೋಯಿತು. ಒಬ್ಬ ಮಗನನ್ನು ಸುಯೋಗ್ಯನನ್ನಾಗಿ ಮಾಡುವುದಕ್ಕೋಸ್ಕರ ಸಾವಿರಾರು ರೂಪಾಯಿಗಳನ್ನು ತಂದೆಯು ಖರ್ಚುಮಾಡುತ್ತಾನೆ; ಆದರೆ ಮಗಳಿಗೆ ಮೂರು ಮುಕ್ಕಾಲು ಕೊಡುವದೆಂದರೆ ಅವನಿಗೆ ಬಹಳ ದುಃಖವಾಗುತ್ತದೆ. ಮುಂದೆ ಮುಂದೆ ಮಗನನ್ನು ಹೊಗಳಿ ದಣಿಯುವ ತಂದೆಯ ನಾಲಗೆಗೆ ಮಗಳನ್ನು ಗದರಿಸುವದಲ್ಲದೆ ಬೇರೇನೂ ತಿಳಿಯದು. ಅವಳಿಗೆ ಉತ್ತಮ ಶಿಕ್ಷಣವನ್ನು ಕೊಡುವುದು, ಅವಳ ಆವಶ್ಯಕತೆಯ ಪೂರ್ತಿ ಹಣ ಖರ್ಚುಮಾಡುವುದು, ಈ ಮಾತು ದೂರವೇ ಉಳಿಯಿತು. ಹಿಂದೇ ಒಂದು ವ್ಯಂಗದರೀತಿಯಿಂದ ತಂದೆಯು ಅವಳ ಎಲ್ಲಾ ಸಾಹಸವನ್ನು, ಎಲ್ಲ ಹುರುಪು ಉತ್ಸಾಹಗಳನ್ನು ಚೂರುಚೂರು ಮಾಡಿಬಿಡುತ್ತಾನೆ. ಹಾಯ್ ಇದೆಂತ ನ್ಯಾಯ?

ಈಗ ಆ ಶಿಕ್ಷಿತ ಅಣ್ಣನ ಆದರ್ಶವನ್ನಾದರೂ ನೋಡಿರಿ. ಸಮಾಜವು ಅವನನ್ನು 'ಸುಯೋಗ್ಯ' ಎಂದು ಹೇಳುತ್ತಿದೆ. ಯುನಿವರ್ಸಿಟಿಯು ಅವನಿಗೆ ಅನೇಕ 'ಉಪಾಧಿ'ಗಳನ್ನು ಕೊಟ್ಟಿರುತ್ತದೆ. ಆದರೆ ಅವನ ಬುದ್ಧಿಯು ಮಾತ್ರ ತನ್ನ ತಂಗಿಯ ವಿವಾಹವು ಬಳ್ಳೆ ಮನೆತನದಲ್ಲಿ ಆಗದಿರಬೇಕೆಂದು ಎಣಿಸುತ್ತದೆ. ಯಾಕೆಂದರೆ ತನ್ನಷ್ಟೇ ಶ್ರೀಮಂತರ ಮನೆತನದಲ್ಲಿ ನನ್ನನ್ನು ಕೊಟ್ಟರೆ, ತುಂಬಾ ಹಣ 'ವರದಕ್ಷಿಣೆ'ಗೆ ಹೋಗುತ್ತದೆ. ಮತ್ತೆ ಅಷ್ಟು ಹಣ ಕೊಡದೆ ಇದ್ದರೆ, ಮರ್ಯಾದೆಯು ಮೂಗು ಮುರಿದು ಹೋಗುತ್ತದೆ. ಸಾಧಾರಣ ಮನೆತನದಲ್ಲಿ ತಂಗಿಯನ್ನು ಮದುವೆ ಮಾಡಿಕೊಟ್ಟರೆ ಕೊಟ್ಟಷ್ಟು ವರದಕ್ಷಿಣೆಯಿಂದ ಅವರು ತೃಪ್ತರಾಗಿ ಇರುತ್ತಾರೆ. 'ನಾವು ಅವಳಿಗೆ ವರದಕ್ಷಿಣೆ ಏನೂ ಕೊಡುವ ಹಾಗಿಲ್ಲ' ಎಂದು ಅಣ್ಣನು ಎಲ್ಲರೊಡನೆ ಹೇಳುತ್ತಿರುತ್ತಾನೆ.

ವರದಕ್ಷಿಣೆಯಿಂದ ನಮ್ಮ ಸಮಾಜಕ್ಕೆ ಬಹಳ ಹಾನಿ ತಟ್ಟಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಕೆಲಕೆಲವು ಬಾರಿ ಕನ್ಯಾಪಕ್ಷದವರು ವರಪಕ್ಷದವರಿಗೆ ತಮ್ಮ ಸ್ಥಿತಿಗತಿಗಳಿಗೆ ಮೀರಿ ಬಹುವಳಿ ಕೊಡಬೇಕಾಗುತ್ತದೆ. ವರಪಕ್ಷದವರ ದುರಾಶೆಯು ನಮ್ಮ ಎಷ್ಟೋ ಭಗಿನಿಯರ ಜೀವನವನ್ನು ಅಂಧಕಾರಮಯ ಮಾಡಿದೆ. ಅತ್ಯಾಶೆಯು ಕೆಟ್ಟ ವಸ್ತು ಆಗಿದೆ. 'ಬಡವರಿಗಾದರೂ ತಮ್ಮ ಮಗಳನ್ನು ಕೊಡಿರಿ, ಆದರೆ ದುರಾಶೆ, ಅತ್ಯಾಶೆಯುಳ್ಳವರಿಗೆ ಕೊಡಬೇಡಿರಿ' ಎಂದು ನಾನು ಹೇಳುತ್ತೇನೆ. ಆದರೆ ಇಲ್ಲಿ ವಿಚಾರಿಸಬೇಕಾದ ಸಂಗತಿಯು ಅದಲ್ಲ. ಮಗನಿಗಾಗಿ ಖರ್ಚು ಮಾಡುವುದಕ್ಕಿಂತ ಮಗಳಿಗಾಗಿ ಖರ್ಚುಮಾಡುವುದು ತಂದೆ ತಾಯಿಗಳಿಗೆ ಯಾಕೆ ಕಷ್ಟವೆನ್ನಿಸುತ್ತದೆ? ತಂದೆಯು ತನ್ನ ಮಗನಿಗೆ ಉಚ್ಚಾತಿಉಚ್ಚ ಶಿಕ್ಷಣವನ್ನು ಕೊಡುತ್ತಾನೆ. ಮಗನ ಮದುವೆಗೆ ಸಾವಿರಾರು ರೂಪಾಯಿಗಳ ವಸ್ತ್ರಾಭೂಷಣಗಳನ್ನು ತಯಾರಿಸುತ್ತಾನೆ. ಜೀವನ ಪರ್ಯಂತ ಮಗನು ತಂದೆಯಿಂದ ಪಡೆದು ತಿನ್ನುತ್ತಾನೆ, ಸುಖದುಃಖದಲ್ಲಿ ಅವನ ಮೇಲೆ ತಾಯಿ ತಂದೆಗಳ ಕೈ ಇದೆ. ಮಗನು ತಾಯಿತಂದೆಗಳ ಸಂಪತ್ತಿಯ ಅಧಿಕಾರಿಯಾಗುತ್ತಾನೆ, ಆದರೆ ಅದೇ ತಾಯಿತಂದೆಗಳ ಮಗಳಿಗೆ ಎರಡು ಮೂರು ಸಾವಿರ ರೂಪಾಯಿ ವರದಕ್ಷಿಣೆ ಕೊಡುವದೆಂದರೆ ಅವರಿಗೆ ಅದೇಕೆ ಪ್ರಾಣಹೋದಂತೆ ಬಹಳ ಕಷ್ಟವೆನ್ನಿಸುತ್ತದೆ.

ನನ್ನ ಶ್ರೀಮಂತ ತಂದೆಯು ನನ್ನ ಆವಶ್ಯಕತೆಗಳನ್ನು ಪೂರ್ತಿಮಾಡುವುದನ್ನು ಯಾವಾಗ ತನ್ನ ಕರ್ತವ್ಯವೆಂದು ತಿಳಿಯುವುದಿಲ್ಲವೋ, ನನ್ನ ಶರೀರವನ್ನು ಮುಚ್ಚಲಿಕ್ಕೆ ವರ್ಷಕ್ಕೆ ಎರಡು ಸೀರೆಗಳನ್ನು ಕೊಡುವದನ್ನು ಅವನು ಯಾವಾಗ ಅಪವ್ಯಯವೆಂದು ತಿಳಿಯುತ್ತಾನೋ, ರೋಗಿಣಿಯಾಗಿ ಬಿದ್ದುಕೊಂಡಿದ್ದಾಗ್ಗೆ ಸ್ವಲ್ಪವಾದರೂ ಸಹಾನುಭೂತಿಯನ್ನು ತೋರಿಸುವುದಿಲ್ಲವೋ ಆಗ ನನಗೆ ಅವನ ಶ್ರೀಮದ್ಗಾಂಭೀರ್ಯವು ಮಾತ್ರ ಯಾಕೆ ಬೇಕಾಗುತ್ತದೆ. ಅವನ ಆಡಂಬರದ ಮೇಲೆ ನನಗೆ ಪ್ರೀತಿ ಹೇಗೆ ಹುಟ್ಟೀತು?

ನನ್ನ ಭಾವೀಪತಿ ದೇವನೊಡನೆ ನಾನು ಇಷ್ಟೇ ಹೇಳಲಿಚ್ಛಿಸುತ್ತೇನೆ 'ಸ್ವಾಮಿ, ತಮಗೆ ನನ್ನ ಗುಣ, ರೂಪ, ಸೌಂದರ್ಯಬೇಕಾಗಿದ್ದರೆ ಅವುಗಳಿಂದ ತಾವು ತೃಪ್ತರಾಗುವಿರಾದರೆ ಬನ್ನಿರಿ, ನಮಗೆ ಸುಸ್ವಾಗತವಿದೆ. ನಾನು ವರಮಾಲಿಕೆಯನ್ನು ಆತ್ಮಸಂತೋಷದಿಂದ ನಿಮ್ಮ ಕೊರಳಿಗೆ ಹಾಕುವೆನು. ನನ್ನ ನಿಸ್ವಾರ್ಥಪ್ರೇಮ ಸಹನಶೀಲತೆ, ಕೋಮಲತೆ ಮತ್ತು ತ್ಯಾಗವು ನಿಮಗೆ ಜೀವನಸುಧೆಯಾಗುವುದಾದರೆ, ನನ್ನ ಪ್ರೇಮಾಶ್ರುಗಳು ನಿಮ್ಮ ಪಾದಕಮಲಗಳ ಮೇಲೆ ಯಾವಾಗಲೂ ಹರಿಯುತ್ತ ಇರುವುವು. ಅದರ ಬದಲಿಗೆ ನೀವು ನಿಮ್ಮ ಭಾವೀಪತ್ನಿಯು ಒಂದು ಉಚ್ಚವಂಶದ ಶ್ರೀಮಂತ ತಂದೆತಾಯಿಗಳ ಮಗಳಾಗಿರುವುದರಿಂದ, ಅಗತ್ಯಬಿದ್ದರೆ ಏನಾದರೂ ಸಹಾಯ ಮಾಡಿಯಾಳು ಅಥವಾ ನನ್ನ ತಂದೆತಾಯಿಗಳು ನಿಮ್ಮನ್ನು ತಮ್ಮ ಪ್ರೇಮಪಾತ್ರರನ್ನಾಗಿ ಮಾಡಿಯಾರು ಎಂದು ಆಶಿಸುವುದಾದರೆ ಅದು ವ್ಯರ್ಥವೇ ಸರಿ.'

ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವ ಈ ಬಗೆಯ ಅತ್ಯಾಚಾರಗಳನ್ನು ಅವರು ಸುಮ್ಮಗೆ ಸಹಿಸಿಕೊಂಡು ಇರಬೇಕೆ, ಹೇಗೆ? ಅವರು ತಮ್ಮ ಹಕ್ಕು ಅಧಿಕಾರಗಳಿಗಾಗಿ ಕಾದಾಡಬೇಕೆ, ಬೇಡವೆ? ನ್ಯಾಯಕ್ಕಾಗಿ ಹೋರಾಡಬೇಕೆ, ಬೇಡವೆ? ನಾವು ಸ್ವಾತಂತ್ರ್ಯದ ಪಾಠವನ್ನು ಕಲಿಯಬೇಕೆ, ಅಥವಾ ಸಹನಶೀಲತೆಯ ಪಾಠವನ್ನು? ಎಂಬುದನ್ನು ನಾನು ತಿಳಿಯಲಪೇಕ್ಷಿಸುತ್ತೇನೆ.

ನಾವು ಎಲ್ಲ ಅತ್ಯಾಚಾರಗಳನ್ನು ಶಾಂತರಾಗಿ ಸಹಿಸಿಕೊಂಡಿರಬೇಕೆಂದು ನಾನು ಹೇಳುತ್ತೇನೆ. ನಮಗೆ ಅಧಿಕಾರವು ಪ್ರಾಪ್ತವಾದಾಗ ನಮ್ಮ ಬಾಧೆಯು [illegible], ಈ ಎಲ್ಲ ಕುರೀತಿಗಳನ್ನು ನಾಶಮಾಡುವ ಪ್ರಯತ್ನಗಳನ್ನು ಮಾಡಬೇಕು. ನಮ್ಮಗಿಂತ ಚಿಕ್ಕವರಿಗೆ ನಾವು ಎಲ್ಲ ಹಕ್ಕುಅಧಿಕಾರಗಳನ್ನು ಕೊಡಬೇಕು. ಅವರನ್ನು ಉನ್ನತರನ್ನಾಗಿ ಮಾಡಬೇಕು! ಎಂಬ ವಿಚಾರವುಳ್ಳವಳಾಗಿದ್ದೇನೆ.

ಏನು, ತಾವು ನನ್ನ ಅಭಿಪ್ರಾಯವನ್ನು ಸಮ್ಮತಿಸುತ್ತೀರಾ? ದಯೆಯಿಟ್ಟು ತಿಳಿಸಿರಿ.

ಹಿಂದೂ ಸಮಾಜದಲ್ಲಿ ಹುಟ್ಟಿದ "ಒಬ್ಬ ಭಗಿನಿ"

ಪ್ರಕಟನೆ.

ಕಾಸರಗೋಡು ತಾಲೂಕು ಬೆಡ್ರ್ಲು ಗ್ರಾಮದ ಕೋರಿಗದ್ದೆ ಎಂಬಲ್ಲಿರುವ ಪಾಟು ಮಗಳು ಬಾಕೆಹೆಂಗ್ಸು ಈ ಮೂಲಕ ಪ್ರಕಟಪಡಿಸುವುದೇನೆಂದರೆ:—

ಪುತ್ತೂರು ತಾಲೂಕು ಹಾಲ್ ಉದ್ರಿಪಾದೆಯಲ್ಲಿರುವ ನನ್ನ ಮೊಮ್ಮಗನ ಕುಟ್ಟಿಯ ಅಳಿಯ ಮೋನಪ್ಪ ಎಂಬವನು ನಿನ್ನೆ ದಿವಸ ಸಾಯಂಕಾಲ ಬಲತ್ಕಾರದಿಂದ ಒಂದು ಕಾಗದದ ಮೇಲೆ ನನ್ನ ಹೆಬ್ಬೆಟ್ಟನ್ನು ಒತ್ತಿಸಿ ಕೊಂಡು ಹೋಗಿರುತ್ತಾನೆ.

ಸದ್ರಿ ನನ್ನ ಹೆಬ್ಬೆಟ್ಟಿನಿಂದ ನನ್ನ ವಿರೋಧಕ್ಕಾಗಿ ಯಾವತ್ತು ರಿಕಾರ್ಡು ಮಾಡಿದ್ದಾದರೆ ಸದ್ರಿ ರಿಕಾರ್ಡು ಸಿಂಧುವ ಮಂಜೂರು ಆಗತಕ್ಕದ್ದಲ್ಲ ಎಂತ ಈ ಮೂಲಕ ಸರ್ವರಿಗೂ ತಿಳಿಸೋಣವಾಗಿರುತ್ತದೆ.

॥ ಈ ಮೂರು ಗೆರೆ ಮತ್ತು ಹೆಬ್ಬೆಟ್ಟಿನ
ಗುರ್ತು ಸದ್ರಿ ಬಾಕೆ ಹೆಂಗ್ಸಿನ

ಕಾಸರಗೋಡು 31-5-38

ಸಿಲ್ಕ್ ಶರ್ಟಿಂಗ್

ಎಲ್ ಮೆಹರ್‌ಚಂದ್, ರಿಜಿಸ್ಟ್ರಾರ್, ಸುಕೆಟ್ ಸ್ಟೇಟ್ ಇವರು ತಾ 31 1 38 ರಲ್ಲಿ ಬರೆದಿರುವ ಕಾಗದದಲ್ಲಿ ಹೀಗೆಂದು ಹೇಳಿರುತ್ತಾರೆ

ನೀವು ರೂ 5-6 [illegible] ಮೂಲಕ ಕಳುಹಿಸಿದ ಶರ್ಟಿಂಗ್ ವಸ್ತ್ರದ ಪಾರ್ಸೆಲನ್ನು ಪಡೆದು ನೋಡಿದೆನು. ಅದೇ ಸೈಜಿನ [illegible] ಇವರ ಅಂಗಡಿಯಿಂದ ರೂ 12-0ಕ್ಕೆ ಕೊಂಡ ಶರ್ಟಿಂಗ್ ವಸ್ತ್ರವನ್ನು ನೋಡಿದೆನು. ಆದರೆ ನೀವು ಕಳುಹಿಸಿದ ವಸ್ತ್ರವು ಬೆಲೆಯಲ್ಲಿ [illegible] ಉತ್ತಮವು [illegible] ಎಂಬುವದನ್ನು ತಿಳಿಸುವರೆ ನನಗೆ [illegible] ಸಂತೋಷವಾಗುತ್ತದೆ. ವ್ಯಾಪಾರ [illegible] ವೃದ್ಧಿಯನ್ನು ನೋಡಿ ನಿಮಗೆ ವ್ಯಾಪಾರದಲ್ಲಿ [illegible] ಯಶಸ್ಸು ಮತ್ತು ಲಾಭ ದೊರೆಯಲೆಂದು [illegible]

ಸಿಲ್ಕ್ ಶರ್ಟಿಂಗ್. [illegible] ಹತ್ತಿಯ ನೂಲಿನಿಂದ [illegible] ತಂಪಾಗಿಯೂ [illegible] ಎಷ್ಟು [illegible] ಬರಬಲ್ಲದು 9 ಗಜ ಉದ್ದ, 54 ಇಂಚು ಅಗಲದ 6 ಶರ್ಟುಗಳ ವಸ್ತ್ರಕ್ಕೆ ಬೆಲೆ ರೂ 5 8 0

ಸಿಲ್ಕ್ ಸೀರೆಗಳು: ಖಾತ್ರಿಯಾಗಿ ಬಣ್ಣಹೋಗದ [illegible] ಅಂಚುಗಳು [illegible] 7 8 9, 10 ಗಜ ಉದ್ದ ಮತ್ತು 45 ಇಂಚು ಅಗಲ ಕಪ್ಪುಬಣ್ಣ ವಿರಹಿತ ಇತರ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುತ್ತ ಕ್ರಯ ರೂ 4 12 0 5 9 0, 6 2 0 ಮತ್ತು 6 15 0 ಸಿಲ್ಕ್ ದುಪ್ಪಟಿಗಳು:- ಇವುಗಳ ಹೆಚ್ಚಿನ ಹೆಸರನ್ನು ಪಡೆದಿರುತ್ತವೆ ನಾವು ಪ್ರತ್ಯೇಕವಾಗಿ ಇವುಗಳ ಕುರಿತು ಹೇಳಬೇಕಾಗಿಲ್ಲ. ಸೈಜು 2½ ಗಜ ಉದ್ದ, 44 ಇಂಚು ಅಗಲ ಕ್ರಯ ರೂ 2 ಮಾತ್ರ

ಶರ್ಟಿಂಗ್ ಮತ್ತು ಅಂಚಿನ [illegible] ನಿಮಗೆ ಒಂದಿಷ್ಟು ಅಸಮಾಧಾನ ಕಂಡುಬಂದಲ್ಲಿ ನಿಮ್ಮ ಹಣವನ್ನು ಮರಳುಮಾಡಲು ನಾವು ಸಿದ್ಧವಿದ್ದೇವೆ

ಮಸ್ಲಿನ ಸಿಲ್ಕುಗಳನ್ನು ಇತರರು ಮಾರುವಂತೆ ನಮ್ಮಲ್ಲಿಯೂ ಸಿಗುತ್ತದೆ 9 ಗಜ ×54 ಇಂಚು ರೂ 5

GIRSON KNITTING WORKS, DEPT. 74, LUDHIANA

MIRA TOILET ARTICLES

MIRA PRODUCTS are of such excellence that they could compare favourably with the famous perfumes and toilet articles used by Indian Rulers in the glorious past.

H. H. The Maharajah of Sonepur

The Hon'ble Mr. B. K. Basu, C. I. E.

"MIRA" Products are in no way inferior to similar foreign products.

Sole Agents

The Modern Trading Company,
Opp. City Press, MANGALORE

Wanted a Canvassar to Book orders for Mira Products on pay of commission.

ಮರಾಟರೂ ಕರ್ನಾಟಕ ಏಕೀಕರಣ ಪರಿಷತ್ತೂ

ಮರಾಟಿ 'ಕೇಸರಿ'ಯ ಸಂವಾದ

ಏಕೀಕರಣ ಪರಿಷತ್ತಿನ ಸ್ವಾಗತಾಧ್ಯಕ್ಷರ ಭಾಷಣವು, ಏಕೀಕರಣದ ಚಳವಳದ ಇತಿಹಾಸವನ್ನು (ಕಾಂಗ್ರೆಸ ಪಕ್ಷದ ಮುಖಂಡ ದೊಡ ಮೇಟಿಯವರು) ಅತ್ಯಂತ ಜೋರಾದ ಭಾಷಣವಾಗಿತ್ತು. ಇದನ್ನು ಓದಿಯೇ ಹೇಳಿದ್ದರು ಇನ್ನಾಗಲಿರುವ ಏಕೀಕರಣದ ಮಹತ್ವವನ್ನೂ ಸ್ವರೂಪವನ್ನೂ ಇವರು ವರ್ಣಿಸಿ, ಧರ್ಮವನ್ನು ಲಕ್ಷಿಸದೆ, ಎಲ್ಲ ಜಾತಿಯವರ ಮತ್ತು ಪಳ ಅಲ್ಪಸಂಖ್ಯಾಕರ ಇತರ ಪರಭಾಷೀಯರ ಸಂರಕ್ಷಣೆಯೂ ಆಗತಕ್ಕದಿದೆ ಎಂದರು

ವೀರಶೈವರ ಜಗದ್ಗುರು ಚಿತ್ರದುರ್ಗದ ಸ್ವಾಮಿಯವರೇ ಉದ್ಘಾಟನ ಸಮಾರಂಭ ಮಾಡಿದರು ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ಕುರಿತಾಗಿಯೇ ಇವರಾಡಿದರು ಅಧ್ಯಕ್ಷ ಭಾಷಣ ಮುಗಿಯುವ ತನಕ ಸ್ವಾಮಿಜಿ ಕೂತಿದ್ದರು.

ಅಧ್ಯಕ್ಷರು ಮಂಗಳೂರಿನವರು, ಮದ್ರಾಸು ಅಸೆಂಬ್ಲಿಯವರು ಇವರು ತರುಣರಾಗಿರುವ ಕಾರಣ ಜೋರಿನವರು ಹೀಗೆಂದು ಅವರ ಭಾಷಣಕಾಲದಲ್ಲೂ ನಂತರವೂ ಪ್ರಕಟವಾಗುತ್ತಲೇ ಇದ್ದಿತ್ತು

ಶ್ರೀ। ಕೋಟ ಕಾರಂತರು, ಇವರು ಅಧ್ಯಕ್ಷ ಭಾಷಣವನ್ನು ಛಾಪಿಸಿಯೇ ಇದ್ದರು ಅಲ್ಲಲ್ಲಿ ಅದನ್ನು ಇವರು ಓದಿಯೂ ತೋರಿಸಿದ್ದರು ಇವರೂ ೩೦ ವರ್ಷಗಳ ಏಕೀಕರಣದ ಇತಿಹಾಸವನ್ನು ಸಂಕ್ಷೇಪಿಸಿ ಕೊನೆಗೆ ಮದ್ರಾಸು ಮುಂಬಾಯಿ ಅಸೆಂಬ್ಲಿಗಳಲ್ಲಿ ಏಕೀಕರಣಕ್ಕಾದ ಠರಾವನ್ನೂ ಕುರಿತು ಮಾತಾಡಿದರು

ಮುಖ್ಯವಾಗಿ ಮುಂಬಯಿಯ ಅರ್ಥ ಸಚಿವ ಲಟ್ಠೇಯವರ ಮೇಲೆ ಇವರ ಕಠಿನವಾದ ವಿಮರ್ಶೆಯಾಯಿತು. ಆದರೆ ಮುಂಬಯಿ ಅಸೆಂಬ್ಲಿಯಲ್ಲಿ ಈ ಏಕೀಕರಣದ ಠರಾವು ಬಂದಾಗ ಮಾತ್ರ ಕಾಂಗ್ರೆಸ್ ಪಕ್ಷದವರ ಬಲವಾದ ಬೆಂಬಲವೇನೂ ತೋರಿಬಂದಿಲ್ಲ ಶ್ರೀ। ಲಟ್ಠೆಯವರು ಚೆನ್ನಾಗಿ ಟೀಕಿಸಿಯಾದರೂ ಬೆಂಬಲಕೊಟ್ಟಿದ್ದರು ಅಧ್ಯಕ್ಷಭಾಷಣದಲ್ಲಿ ಲಿಂಗಾಯತರ ಸ್ವಾಮಿಯರು ಅಲ್ಲಿಗೆ ಬಂದಿದ್ದ ಕಾರಣದಿಂದಲೋ ಏನೋ, ಅಧ್ಯಕ್ಷರು ಲಿಂಗಾಯತರನ್ನು ಬಹಳವಾಗಿ ಎತ್ತಿ ಹಿಡಿದಿದ್ದರು ಕರ್ನಾಟಕ ಪ್ರಾಂತ್ಯವು ಪ್ರತ್ಯೇಕವಾದಲ್ಲಿ, ಅದರಲ್ಲಿ ಹೆಚ್ಚಿನ ಜನಸಂಖ್ಯೆ ಲಿಂಗಾಯತರದೇ ಆಗುವುದಷ್ಟೆ ಇದರಿಂದ ಬ್ರಾಹ್ಮಣರಾದಿಯಾದ ~~ಇತರ ಸಾಮಾಜಿಕರಲ್ಲಿ ಉಂಟಾಗಬಹುದಾದ~~ ಭೀತಿಯನ್ನು ಇವರು ತಿಳಿದೇ ಇದಕ್ಕೆ ಉತ್ತರವಾಗಿ, ನಮ್ಮ ಮೇಲೆ ಮಹಾರಾಷ್ಟ್ರ, ಗುಜರಾಥ, ಆಂಧ್ರ, ತಮಿಳು ಮೊದಲಾದವರ ವರ್ಚಸ್ವವು ಬೀರುವ ಬದಲಾಗಿ ಲಿಂಗಾಯತರದೇ ವರ್ಚಸ್ಸು ಬಿದ್ದರೂ ಅದರಿಂದ ಅಡಚಣೆ ಇಲ್ಲವೆಂದೂ ತಿಳಿಸಿದರು ಅನಂತರ ಕಾಂಗ್ರೆಸ್ ಪಕ್ಷವು ಬೇಡರೀಕನು ಉಂಟಾಗುವ ಮೊದಲಾ ಕರ್ನಾಟಕದ ಏಕೀಕರಣವನ್ನು ಮಾಡದಿದ್ದಲ್ಲಿ ಮುಂದಣ ಸ್ವರಾಜ್ಯಯುದ್ಧದಲ್ಲಿ ಕರ್ನಾಟಕವು ಅತಂಕವನ್ನುಂಟುಮಾಡೀತೆಂದೂ ಸೂಚನೆ ಕೊಟ್ಟರು

ಯಾವ ಠರಾವುಗಳನ್ನು ಮಂಜೂರು ಮಾಡಿದರೋ ಅವೆಲ್ಲ ತಡೆಯಲು ಅಧ್ಯಕ್ಷರು ತಮ್ಮ ಭಾಷಣದಲ್ಲೇ ಸೂಚಿಸಿದ್ದರು ಬಹಳ ಠರಾವುಗಳನ್ನು ಮಂಜೂರು ಮಾಡುವ ಬದಲಾಗಿ, ಬಹಳ ಕೆಲಸವನ್ನು ಮಾಡೋಣವೆಂದೇ ಅವರ ಬೋಧನೆಯಾಗಿತ್ತು. ಆದರೂ 10 12 ಉದ್ದ ಠರಾವುಗಳಾದವು.

ಹೊರ ಪರಿಷತ್ತಿನಲ್ಲಿ ಠರಾವುಗಳ ಮೇಲಾದ ಭಾಷಣಗಳಿಗಿಂತ, ಇವುಗಳ ಪ್ರಸವ ವೇದನೆಯ ಕಾಲದಲ್ಲಿ (ಸಬ್ಜೆಕ್ಟ್ಸ ಕಮಿಟಿ) ಬಹಳ ವಿನೋದವಾಗಿತ್ತು. 24ನೆ ತಾ ಇಡೀ ಹಗಲು ರಾತ್ರಿ, ಮರುದಿನವೆಲ್ಲ ಬೆಳಿಗ್ಗೆ ವಿಷಯ ನಿಯಾಮಕ ಕಮಿಟಿಯ ಚರ್ಚೆ ನಡೆದಿದ್ದಿತು.

ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದಲ್ಲಿ ಕರ್ನಾಟಕ ಏಕೀಕರಣವನ್ನು ಕುರಿತಾದ ಠರಾವಿಗೆ ನಿಷೇಧರೂಪವಾದ ಠರಾವನ್ನು ಶ್ರೀ। ನಾಯಕ್ ಇವರು ಕಮಿಟಿಯ ಮುಂದೆ ಇಟ್ಟಿದ್ದರು. ಕರ್ನಾಟಕ ಏಕೀಕರಣಗಳಲ್ಲಿ ಶರ್ತಗಳನ್ನು ಹಾಕುವ ಬದಲಾಗಿ ಮರಾಟರ ಠರಾವನ್ನು ನಿಷೇಧಿಸುತ್ತ, ಮರಾಟರ ಕೌಟಿಲ್ಯಚಾತುರ್ಯ, ತಂತ್ರಪ್ರವೀಣತೆ, ಇವನ್ನು ಕುರಿತಾಗಿಯೇ ಅವರು ವಿಶೇಷ ಆಡಿದರು ಆದರೆ ಅಧ್ಯಕ್ಷರೇ ಈ ಠರಾವನ್ನು ಮೂಲೆಗೊತ್ತಿದರು, ನಾಯಕರು ತಮ್ಮ ಸೂಚನೆ ಹಿಂತೆಗೆದರು.

ಶ್ರೀ। ಲಟ್ಠೆಯವರ ಅಸೆಂಬ್ಲಿ ಭಾಷಣಕ್ಕಾಗಿ ವ್ಯಸನ ಸೂಚಿಸುವ ಒಂದು ಠರಾವು ಇತ್ತು ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಳದ ಕೃತ್ರಿಮವನ್ನೆಲ್ಲ ತಲೆಯಲ್ಲಾಡಿಸುವವರಾದ ಶ್ರೀ। ಅಂದಾನಪ್ಪ ದೊಡಮೇಟೀಯವರೇ ಶ್ರೀ। ಲಟ್ಠೆಯವರ ವಿರುದ್ಧವಾದ ಈ ಠರಾವಿಗೆ ಬೆಂಬಲಕೊಟ್ಟುದು ವಿಚಿತ್ರವಾಗಿದೆ

ವಾಮೂಲಿನಂತೆ ಎಲ್ಲ ಠರಾವುಗಳು ಮಂಜೂರಾದುವು, ಭಾಷಣಗಳೂ ಆದುವು, ಅಲ್ಪ ಸಂಖ್ಯಾಕರಿಗೆ ಆಶ್ವಾಸನೆ, ಮೈಸೂರ ಸರಕಾರಕ್ಕೆ ಅಭಿನಂದನೆ, ಪ್ರಾಂತ್ಯದ ಏಕೀಕರಣವಾಗದಿರುವಲ್ಲಿ ಅಂತಿಮ ಉಪಾಯವಾದ ಸತ್ಯಾಗ್ರಹದ ಅವಲಂಬನೆ ಮೊದಲಾದ ಪರಕ್ಷದ ಠರಾವುಗಳಾದವು

ಆಗ ಈಗ ಎಂದಿಲ್ಲ; ಕಾನೂನು ಕಾನೂನೇ

ಸತ್ಯಾಗ್ರಹಿಗಳನ್ನು ಈ ಮಂತ್ರಿಗಳೂ ಕೈದುಮಾಡುತ್ತಾರೆ

ಕಾಲಚಕ್ರವು ತಿರುಗುವುದೆಂಬುದರ ಒಂದರ್ಥ,-ತಿರುಗಿದಷ್ಟಕ್ಕೆ ಪುನಃ ಮೊದಲ ಸ್ಥಳಕ್ಕೇ ಯಾವುದೊಂದು ಬಂದುವು ಬಂದು ತಲಪುವುದು. ಕಡ್ಡಾಯವಾಗಿ ಹಿಂದಿ ಕಲಿಸಬಾರದೆಂದು ಸತ್ಯಾಗ್ರಹಮಾಡಲು ಹೊರಟ ಮೂವರು ಚಳವಳಗಾರರನ್ನು ಮದ್ರಾಸಿನ ತ್ಯಾಗರಾಯನಗರದಲ್ಲಿ ಕೈದು ಮಾಡಿದ್ದಾರೆ (ತಾ 8). ಇವರಲ್ಲಿಬ್ಬರು ಇನ್ನು ಈ ಚಳವಳಿ ಮಾಡುವುದಿಲ್ಲವಾಗಿ, ಮುಚ್ಚಳಿಕೆ ಬರೆದುಕೊಟ್ಟು ಹೊರಬಿದ್ದರು ರಿಟೈರ್ಡ್ ಡಿಪ್ಯುಟಿ ಷಣ್ಮುಗಾನಂದ ಎಂಬವರೂ ಹೀಗೆ ಮುಚ್ಚಳಿಕೆ ಬರೆದುಕೊಟ್ಟು, ತನ್ನ ಉದ್ದೇಶವನ್ನು ಇನ್ನು ಕೈದಾ ಮಾಡಿಕೊಳ್ಳದೆ ಪೂರೈಸುವುದರಲ್ಲಿದ್ದಾರೆ ಒಂದೊಂದು ಸಾವಿರ ರೂಪಾಯಿ ಜಾಮೀನು ಭದ್ರತೆ ಕೊಡಬೇಕಾಗಿ ಬಂತು ಪೊನ್ನುಸಾಮಿ ಎಂಬಾತನು, ಮುಚ್ಚಳಿಕೆ ಕೊಡಲಾರ, ಚಳವಳ ಮಾಡುವುದಿಲ್ಲ, ಆದರೆ, ಮುಖ್ಯ ಮಂತ್ರಿಗಳು (ಸೇಲಂ ಜಿಲ್ಲೆಯಲ್ಲಿದ್ದಾರೆ) ನಿವಾಸ ಮಾಡುವ ಮದರಾಸು ಮಂದಿರದ ಎದುರಲ್ಲಿ ಕೂತು ಉಪವಾಸ ಮಾಡುವನೆಂದು ಮಾತ್ರ ತಿಳಿಸಿ, 17ನೇ ತಾರೀಕಿನ ವರೆಗೆ ರಿಮಾಂಡಿನಲ್ಲಿರಬೇಕಾಯಿತು ಕಾನೂನಿಗೆ ವಿರುದ್ಧ ಶಾಸನಭಂಗ ಸತ್ಯಾಗ್ರಹ ಮೊದಲಾದುವಕ್ಕೆ ಕೈಯೆತ್ತುವರಿಗೆ ಹಿಂದಣ ಮಂತ್ರಿಮಂಡಲವೂ ಕಾನೂನು ಪ್ರಕಾರ ಕೈದು ಮಾಡಿ, ಜೈಲು ವಿಧಿಸುತ್ತಿತ್ತು ಕಾಂಗ್ರೆಸ್ ಮಂತ್ರಿಗಳೂ ಹಾಗೆಯೇ ಮಾಡುತ್ತಾರಲ್ಲದೆ ಬೇರೆಯಲ್ಲ. ರಾಜ್ಯಭಾರ ತಿದ್ದುಪಡಿಯ ಹೊಸ ಕಾನೂನು ಉಂಟಾಗುವ ಮೊದಲಿನ ಸರಕಾರದ ಕೃತಿಯನ್ನು ಖಂಡಿಸುವವರು, ಸಿವಿಲ್ ಲಿಬರ್ಟೀಸ್‌ಗಳನ್ನು ಸಂರಕ್ಷಿಸುವ ಹೊಸ ಸರಕಾರಗಳ ಕೃತಿಯನ್ನು ಒಪ್ಪುವರೇ? ಎಂತೂ, ಚಳವಳಗಾರರ ಪ್ರದರ್ಶನಗಳಿಗೆ ಆಗ ಈಗ ಎಂದಿಲ್ಲ, ಕಾನೂನು ಕಾನೂನೇ ಮಂತ್ರಿಗಳಿಗೆ ಕೃತಿಗೆ ಪೋಲೀಸರ ಬೆಂಬಲವಿದೆ ಅದಿಲ್ಲವೊ ಎಂದು ನೋಡಬೇಕಾದಲ್ಲಿ ಹಿಂದೀ ವಿರುದ್ಧರು ಹೀಗೆ ಪರೀಕ್ಷಿಸಿ ನೋಡುವುದುತ್ತಮ ಹೊರತು ಯಾರನ್ನೊಬ್ಬ ಮನುಷ್ಯನನ್ನು ಉಪವಾಸಕ್ಕೊಪ್ಪಿಸಿ ಚಳವಳಿಸುವುದು ನೀತಿಯೆ?

ಇದಕ್ಕಾಗಿ ಫಂಡನ್ನು ಸಿ. ಎನ್. ಅಣ್ಣಾದೊರೆ ಭಕ್ತರು ತಮ್ಮ ವಂತಿಗೆ ಸೂಚಿಸಿದ್ದರು. ಒಟ್ಟು 2100 ರೂಪಾಯಿ ವಂತಿಗೆಯಾಯಿತು.

ಆಶ್ಚರ್ಯಕರ

ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸು ಒಂದು ಅಖಂಡವಾದ ಸಂಸ್ಥೆಯಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣವು ಅದು ರಾಜಕೀಯ ಸ್ವಾತಂತ್ರ್ಯದ ಸೂತ್ರಗಳನ್ನೂ ರಾಷ್ಟ್ರೀಯತೆಯನ್ನು ಸೂಚಿಸುವ ಸಂಸ್ಥೆಯಾಗಿರುವುದಾಗಿರುತ್ತದೆ

ಈ ಸಂಸ್ಥೆಯಲ್ಲಿರುವ ಐಕ್ಯದಿಂದ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಕಾರಣ, ಕೈಗಾರವಂತರು ಮತ್ತು ರೈತರು, ಗಿರಣಿಸ್ವಾಮ್ಯರು ಮತ್ತು ಸೌಮ್ಯವಾದಿಗಳು, ಅಹಿಂಸಾವಾದಿಗಳು ಮತ್ತು ಬಲಾತ್ಕಾರಿಗಳು, ಇತ್ಯಾದಿ ವಿರೋಧ ವರ್ಗಗಳು, ಇದರಲ್ಲಿ ಹೇಗೆ ರಾಜಕೀಯ ಸ್ವಾತಂತ್ರ್ಯ ದೃಷ್ಟಿಯಿಂದ ಹೇಗೆ ಐಕ್ಯಹೊಂದಿರುವರೆಂದು ಆಶ್ಚರ್ಯವಾಗುತ್ತದೆ ಲಾರ್ಡ್ ಲೋಥಿಯನ್,

The Estates & Agency Co., Ltd.

Incorporated in England

ಮಿಶ್ರರಹಿತ ಟೀ ಬಗ್ಗೆ ಭದ್ರತೆ

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಈ ಕೆಳಗೆ ಸೂಚಿಸಿದ ನಿಶಾನಿ ಮತ್ತು ಅಡ್ಡಪಟ್ಟಿಗಳಿಂದ ಸುತ್ತಲ್ಪಟ್ಟು, ಸೀಲ್‌ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲ್ಲರಿಗೂ ತಿಳಿಸಲು ಅಪೇಕ್ಷಿಸುತ್ತೇವೆ.



PYKARA NO. 1 DUST.
SEAFORTH NO. 1 DUST.
HIGHFOREST NO 1 DUST

ನಮ್ಮ ಜನಪ್ರೀತವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡಕೊಳ್ಳುವಾಗ ನಮ್ಮ ನಿಶಾನಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡಕೊಳ್ಳುವದು.

The Estates & Agency Company Ltd.
Head Office:-NADUVATAM P. O.
Sales Branch:-COCHIN.

ಸಾಹಸ ಮತ್ತು ಇಚ್ಛಾಶಕ್ತಿಯ ಪ್ರತಿಮೂರ್ತಿ

[illegible] ಕ್ರಾಂತಿಕಾರಿಗಳಾಗಿದ್ದ ಅನೇಕ ಮಂದಿ ದೇಶಭಕ್ತರು ಸ್ಯಾಬೇರಿಯದ ಹಿಮಗಿರಿ ಪ್ರಾಂತ್ಯದ ಒಂದು ಹಳ್ಳಿಯಲ್ಲಿ ನಿರ್ವಾಸಿತರಾಗಿದ್ದರು. ಈಸ್ಟರ್ ಹಬ್ಬದ ದಿನ. ಎಲ್ಲರೂ ರಜೆಯನ್ನು ಆನಂದದಿಂದ ಕಳೆಯುವ ದಿನ. ಅದೇ ಹಳ್ಳಿಯಲ್ಲಿ ಬೀಡು ಬಿಟ್ಟುಕೊಂಡಿದ್ದ ಕೆಲವು ಜನ ಸೈನಿಕರಿಗೆ ಆಟ ವಿನೋದದಿಂದ ಸಮಯ ಕಳೆಯಬೇಕೆಂದು ತೋರಿತು. ಆದ್ದರಿಂದ ಎಲ್ಲರೂ ತಂಬಾಕು ಕುಡಿದು ಮತ್ತರಾದರು. ಹಾರುತ್ತ ಕುಣಿಯುತ್ತ, ಢೋಲು ವಾದ್ಯ ಬಾರಿಸುತ್ತ ಸಾಯಂಕಾಲವಾಯಿತು. ಆ ಮೇಲೆ ಅವರಲ್ಲೊಬ್ಬನು, ಇದುವರೆಗೆ ಯಾರೂ ಆಡದಂಥ ಒಂದು ವಿಚಿತ್ರ ಆಟವನ್ನು ಆಡಬೇಕೆಂದು ಸೂಚಿಸಿದನು. ಎಲ್ಲರೂ ಒಪ್ಪಿ ಎರಡು ಸಾಲಾಗಿ ನಿಂತರು. ಎರಡೂ ಸಾಲುಗಳು ಎದುರುಬದುರಾಗಿದ್ದುವು. ಆ ಹಳ್ಳಿಯಲ್ಲಿ ನಿರ್ವಾಸಿತರಾಗಿದ್ದ ರಾಜದ್ರೋಹಿಗಳು ಬಂದು ಈ ಎರಡು ಸಾಲುಗಳ ನಡುವಿನಿಂದ ಹಾದು ಹೋಗಬೇಕೆಂದು ಆಜ್ಞೆಯಾಯಿತು. ನಿರುಪಾಯರಾಗಿದ್ದ ಆ ಬಡ ಪಾಪಿಗಳು ಹಾಗೆಯೇ ಮಾಡಿದರು. ಅವರು ಒಬ್ಬೊಬ್ಬರಾಗಿ ಹೋಗುತ್ತ ಇರುವಾಗ ಸಾಲುಕಟ್ಟಿ ನಿಂತಿದ್ದ ಸೈನಿಕರು ಅವರನ್ನು ಬೂಟು ಕಾಲ್ಗಳಿಂದ ಒದೆಯುತ್ತಲೂ ಕತ್ತಿ ಖಡ್ಗಗಳಿಂದ ಹೊಡೆಯುತ್ತಲೂ ಚಿತ್ರಹಿಂಸೆಯನ್ನು ಕೊಡುತ್ತಿದ್ದರು. ಪಾಪದ ಅವರು ಈ ಎಲ್ಲಾ ಹೊಡೆತ ಬಡಿತಗಳನ್ನು ತಿಂದು ಅನುಭವಿಸಿ, ಸಾಲನ್ನು ದಾಟಬರಬೇಕಾದರೆ ಸಾಕೋ ಸಾಕಾಗುತ್ತಿತ್ತು. ಕೆಲವರು ಕೈಗಳಿಂದ, ತಲೆ ಬಾಯಿಗಳನ್ನು ತಮ್ಮ ರಕ್ಷಣೆ ಮಾಡಿಕೊಳ್ಳುತ್ತಿದ್ದರಾದರೆ, ಬೇರೆ ಕೆಲವರು, ಅಂಗಿ ತೋಳುಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳುತ್ತಿದ್ದರು. ಎಷ್ಟೋ ಮಂದಿ, ರಕ್ತವು ಹರಿದು, ಪ್ರಜ್ಞೆತಪ್ಪಿ ಬಿದ್ದರು; ಕೆಲವರು ಜೀವ ಸತ್ತರು. ಇವರೊಳಗೆ ಒಬ್ಬ 80 ವರ್ಷ ಪ್ರಾಯದ ಒಬ್ಬ ಯುವಕ ವ್ಯಕ್ತಿಯೂ ಇದ್ದನು. ಅವನು ಸಾಹಸ ಮತ್ತು ಇಚ್ಛಾಶಕ್ತಿಯ ಪ್ರತಿಮೂರ್ತಿ ಆಗಿದ್ದನು. ಅವನು ಬಂಡೆಯ ಹಾಗೆ ದೃಢನಾಗಿದ್ದನು; ಗಂಭೀರನಾಗಿದ್ದನು. ಕೈಗಳಲ್ಲಿ ಒಂದು ಪುಸ್ತಕವನ್ನು ಅಮುಕಿಕೊಂಡು ಅವನೂ ಬಂದನು. ಹೃದಯಹೀನ ನೃಶಂಸ ಸಿಪಾಯಿಗಳ ಆಘಾತಗಳಿಂದ ತನ್ನನ್ನು ಕಾಪಾಡಿಕೊಳ್ಳುವ ಪ್ರಯತ್ನಗಳನ್ನು ಅವನು ಮಾಡಲಿಲ್ಲ. ಅವನು ಒಂದು ತುದಿಯಿಂದ ಸಾಲಿನ ಇನ್ನೊಂದು ತುದಿಯ ತನಕ ನೆಟ್ಟಗೆ ನಡೆದು ಹೋದನು. ಅವನ ಮುಖದ ಮೇಲೆ ತಿಲಮಾತ್ರ ಭಯದ ಸಂಚಾರವಾಗಿರಲಿಲ್ಲ. ಆದರೆ ಕಣ್ಣುಗಳಲ್ಲಿ ಮಾತ್ರ ಸಿಪಾಯಿಗಳ ಕ್ರೂರ ಕ್ರೀಡೆಯ ಕುರಿತಾದ ತಿರಸ್ಕಾರಭಾವವು ಒಡೆದು ಕಾಣುತಿತ್ತು.

ಅಂದು ಸೈನಿಕರಿಂದ ಪೆಟ್ಟುತಿಂದ ಇದೇ ಸಾಹಸಿ ಮತ್ತು ನಿರ್ಭೀತ ಯುವಕನು ಇಂದು ಜಗತ್ತಿನ ಆರನೆ ಒಂದು ಪಾಲಷ್ಟು ವಿಸ್ತಾರವಾದ ಸೋವಿಯಟ್ ರಷ್ಯದ ಪ್ರಜಾಸತ್ತೆಯ ಪ್ರೆಸಿಡೆಂಟನಾಗಿರುವನು. ಜನರು ಒಂದೊಂದು ಕಾಲದಲ್ಲಿ ಅವನನ್ನು ಒಂದೊಂದು ಹೆಸರಿನಿಂದ ಕರೆದಿದ್ದರೂ ಪೋಲೀಸರೂ ಅವನನ್ನು ಒಂದೊಂದು ಕಾಲದಲ್ಲಿ ಒಂದೊಂದು ಹೆಸರಿನಿಂದ ತಿಳಿದಿದ್ದರು. ಆದರೆ ಜಗತ್ತಿನ ಇತಿಹಾಸಿಕರು ಈಗ ಅವನನ್ನು ಪ್ರೆಸಿಡೆಂಟ ಸ್ಟಾಲೀನನೆಂದು ಕರೆಯುತಿದ್ದಾರೆ.

ಸ್ಟಾಲೀನನು ೧೮೭೯ರಲ್ಲಿ ಜೊರ್ಜಿಯಾ ಎಂಬಲ್ಲಿ ಹುಟ್ಟಿದನು. ಅವನ ತಂದೆ ಒಬ್ಬ ಬಡ ಸಮಗಾರನಾಗಿದ್ದನು. ಆದ್ದರಿಂದ ಸ್ಟಾಲೀನನ ಜೀವನವು ಶ್ರಮಜೀವಿಗಳ ನಡುವೆಯೇ ಕಳೆಯಿತು. ೧೯ ವರ್ಷದವನಾಗಿದ್ದಾಗ ಟಿಫ್ಲಿಸ ಶಾಲೆಯಲ್ಲಿ ಓದುತ್ತಿದ್ದ ಸಮಯಕ್ಕೆ ಅವನು ಸೋಶಿಯಲಿಸ್ಟ ಡೆಮೊಕ್ರೆಟಿಕ ಪಾರ್ಟಿಯ ಸದಸ್ಯನಾದನು. ಇದೇ ಪಾರ್ಟಿಗೆ ಬೋಲ್ಶೆವಿಕ್ ಎಂಬ ಹೆಸರು ಮತ್ತೆ ಬಂದಿತು. ರಾಜನೈತಿಕ ಕಾರ್ಯಗಳಲ್ಲಿ ಭಾಗ ತೆಗೆದುಕೊಳ್ಳುತ್ತಾನೆ ಎಂಬ ಕಾರಣದಿಂದಲೇ ಇವನನ್ನು ಶಾಲಾಧಿಕಾರಿಗಳು ಶಾಲೆಯಿಂದ ಹೊರ ತಳ್ಳಿದರು. ಅಂದಿನಿಂದ ಕ್ರಾಂತಿಕಾರಿ ಕೆಲಸಗಳನ್ನು ಬಿಟ್ಟು ಸ್ಟಾಲೀನನು ಮತ್ತೆ ಏನನ್ನೂ ಮಾಡಲಿಲ್ಲ. ರಷ್ಯದ ಉದ್ಧಾರಕ್ಕಾಗಿ ಸೊಂಟಕಟ್ಟಿದ ಕ್ರಾಂತಿಕಾರಿಗಳ ಸಂಘದಲ್ಲಿ ಸ್ಟಾಲೀನನು ೧೯೦೪ರಲ್ಲಿ ಸೇರಿದನು. ಬೋಲ್ಶೆವಿಕ ಶಬ್ದದ ಆವಿಷ್ಕಾರವಾದ ಬಳಿಕ ಇಂದಿನ ತನಕ ಅವನೇ ಆ ಶಬ್ದದ ಆತ್ಮಸ್ವರೂಪನಾಗಿದ್ದಾನೆ. ೧೯೦೪ರಿಂದ ೧೯೧೭ರ ತನಕ ಎಷ್ಟೋ ಬಾರಿ ಅವನಿಗೆ ಶಿಕ್ಷೆಯಾಯಿತು. ಎಷ್ಟೋ ಬಾರಿ ಬಿಡುಗಡೆಯಾಯಿತು. ರಕ್ತರಂಜಿತ ಮಹಾಕ್ರಾಂತಿಯ ಜನ್ಮದಾತ ಲೆನಿನನ ಇವನು ಬಲ ಕೈ ಆಗಿದ್ದನು. ಸ್ವರ್ಗವಾಸಿ ಲೆನಿನನ ಸಿದ್ಧಾಂತ ಮತ್ತು ಆದರ್ಶಗಳಲ್ಲಿ ಇವನಿಗೆ ಅಪೂರ್ವನಿಷ್ಠೆಯೂ ಶ್ರದ್ಧೆಯೂ ಇರುತ್ತದೆ ಮತ್ತು ಅವನ ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರುವ ಅದಮ್ಯ ಇಚ್ಛಾಶಕ್ತಿಯೂ ಸಾಹಸವೂ ಅವನಲ್ಲಿ ಇರುತ್ತದೆ. ೧೯೨೪ರಲ್ಲಿ ಆಗ ರಷ್ಯದ ಪ್ರೆಸಿಡೆಂಟನಾಗಿದ್ದ ಟ್ರಾಟ್ಸ್ಕಿಗೂ ಇವನಿಗೂ ಸಂಘರ್ಷವಾಗಿ, ಕಟ್ಟಕಡೆಗೆ ಟ್ರಾಟ್ಸ್ಕಿಯೇ ಸೋಲು ತಿಂದು ವಿದೇಶಗಳಲ್ಲಿ ನಿರ್ವಾಸಿತನಾಗಿ ಇರಬೇಕಾಯಿತು. ೧೯೨೪ರಿಂದ ಇಂದಿನ ತನಕ ಲೆನಿನನೇ ರಷ್ಯದ ಪ್ರೆಸಿಡೆಂಟನೂ ಭಾಗ್ಯವಿಧಾತನೂ ಆಗಿರುತ್ತಾನೆ.

ಸ್ಟಾಲೀನನು ದೃಢಕಾಯನಾದ ಆಜಾನುಬಾಹು ಆಗಿದ್ದಾನೆ. ಅವನು ಮಾಡಬೇಕಾದ ಪರಿಶ್ರಮದ ಪ್ರಭಾವವು ಅವನ ಮುಖದ ಮೇಲೆ ಕಾಣಿಸುತ್ತದೆ. ಅವನ ಶರೀರವು ಈಗ ಕೊಂಚ ಕೊಂಚ ಸ್ಥೂಲವಾಗುತ್ತಲೂ ಇದೆ. ಮುಖವು ಘನಗಂಭೀರವಾಗಿ ಇರುತ್ತದಾದರೂ, ಮಿತ್ರರೊಡನೆ ಕೂಡಿ ಅವನು ವಿನೋದ ಹರಟೆಯಲ್ಲಿ ಕಾಲಕಳೆಯುವದೂ ಇದೆ. ಸಂಗಡಿಗರು ಮತ್ತು ಸ್ನೇಹಿತರೊಂದಿಗೆ ಕಲೆತು ಇರುವದರ ಪ್ರಯೋಜನವು ಅವನಿಗೆ ಚೆನ್ನಾಗಿ ತಿಳಿದಿದೆ. ಸಮಾಚಾರ ಪತ್ರಗಳ ಸಂಪಾದಕರು ಮತ್ತು ಅನ್ಯ ದೇಶಗಳ ಪ್ರತಿನಿಧಿಗಳೊಡನೆ ಮಾತನಾಡಲಿಕ್ಕೆ ಸ್ಟಾಲೀನನಿಗೆ ಸಮಯವಿಲ್ಲ. ಪರಂತು ದೂರದೇಶಗಳಿಂದ ಬಂದ ಜನ ಮಜೂರರು ಮತ್ತು ಕಾರ್ಯಕರ್ತರನ್ನು ಕಂಡು ಅವರೊಡನೆ ಸಂಭಾಷಿಸದೆ ಅವನು ಇರುವದಿಲ್ಲ. ಜನತೆಯ ಮನೋಭಾವಗಳ ಮೇಲೆ ತನ್ನ ಅಧಿಕಾರವನ್ನು ಜಮಾಯಿಸಿ ಸದಾಕಾಲ ಇರುವದಕ್ಕೋಸ್ಕರ ಅವನು ಯಾವಾಗಲೂ ಅವರೊಡನೆ ಕೂಡಿಕೊಂಡು ಇರುತ್ತಾನೆ. ಸ್ಟಾಲೀನನ ಜೀವನಕ್ರಮವು ಅತ್ಯಂತ ಸರಳವಾಗಿದೆ. ಒಂದು ಸಾಧಾರಣ ತರಹದ ಖಾಕಿ ಕೋಟು, ಖಾಕಿಯದ್ದೇ ಪಾಯಜಾಮ ಮತ್ತು ಒಂದು ಜೋಡಿ ಬೂಟ್ಸು ಇದೇ ಅವನ ಉಡಿಗೆಯಾಗಿದೆ. ದೇಶದ ಸಾಮಾನ್ಯ ಜನರ ಉಡಿಗೆಗೂ, ಉಚ್ಚಪದಾಧಿಕಾರಿಯಾದ ಸ್ಟಾಲೀನನ ಉಡಿಗೆಗೂ ಯಾವ ಪ್ರಕಾರದ ವ್ಯತ್ಯಾಸವೂ ಇರುವದಿಲ್ಲ. ಯಾವಾಗಲೂ ಅವನು ಕಾರ್ಯನಿರತನಾಗಿ ಇರುತ್ತಾನೆ. ವ್ಯಕ್ತಿಗತ ಜೀವನದಲ್ಲಿಯೂ ಅವನಿಗೆ ಒಂದು ನಿಮಿಷ ಸುಮ್ಮನೆ ಇರುವದೆಂದರೆ ಆಗುವದಿಲ್ಲ. ಇವತ್ತಿನ ರಷ್ಯವು ಯಾವದು ಇದೆಯೋ, ಅದು ಅವನ ಗಂಭೀರ ಚಿಂತನದ ಪರಿಣಾಮವಾಗಿದೆ. ತನ್ನ ಧ್ಯೇಯ ಸಿದ್ಧಿಗಾಗಿ ಅವನು ತನ್ನನ್ನು ಜನಸಾಧಾರಣದ ಸಾಧನ ಮಾತ್ರವೆಂದು ತಿಳಿದು, ಕೆಲಸ ಮಾಡುತ್ತಾನೆ. ಆದ್ದರಿಂದಲೇ ಯಾವ ಜನರು ಅವನನ್ನು ಆರಿಸಿ ಕಳುಹಿಸಿದ್ದರೋ, ಯಾರು ಲೆನಿನನ್ನು ಶ್ರದ್ಧೆ ಭಕ್ತಿ ವಿಶ್ವಾಸಗಳಿಂದ ಕಾಣುವಷ್ಟೆ ಸ್ಟಾಲೀನನನ್ನು ಕಾಣುತ್ತಾರೋ ಅಂಥ ಜನರ ಮೂಲಕವೇ ಅವನಿಗೆ ಅಸೀಮ ಕ್ಷಮತೆಯು ಪ್ರಾಪ್ತವಾಗುತ್ತದೆ.

"ವಿಶ್ವ ಮಿತ್ರ"

ಜಪಾನಿನ ಸರಕಾರ ಮಂಡಳದಲ್ಲಿ ಬದಲಾವಣೆ.

ಜಪಾನೀಯ ಸರಕಾರ ಮಂಡಳದಲ್ಲಿ ಅನೇಕ ಬದಲಾವಣೆಗಳಾಗಿವೆ. ಈಗಿನ ಯುದ್ಧಮಂತ್ರಿಗಳು ರಾಜೀನಾಮೆ ಕೊಟ್ಟು, ಅವರ ಸ್ಥಳದಲಿ ಇನೋಷ್ಟಿ ಮಹಾಶಯರನ್ನು ನೇಮಿಸಲಾಗಿದೆ. ಚೀನಾದಲ್ಲಿರುವ ಸೈನ್ಯವರ್ಗದ ಮೇಲೆ ಒಳ್ಳೇ ಹತೋಟಿಯಿರುವಂತೆ ವ್ಯವಸ್ಥೆ ಮಾಡಲಾಗಿದೆ. ಅಂತೂ ಚೀನಾ ಯುದ್ಧರಂಗದಲ್ಲಿ ಜಪಾನಿಯರಿಗೆ ಉಂಟಾಗುವ ವಿಪರೀತ ಅವಸ್ಥೆಯಿಂದ ಸ್ವದೇಶದಲ್ಲಿ ಪರಿಣಾಮಗಳುಂಟಾಗಿದೆ ಎಂಬ ವಾರ್ತೆಯು ನಿಜ.

ಬೇಸಿಗೆಕಾಲದಲ್ಲಿ ಟೀಯನ್ನು ಮೀರಿಸಿದ ಪಾನೀಯವೇ ಇಲ್ಲ. ಅದು ಶರೀರದಲ್ಲಿ ಬೆವರನ್ನು ಹೊರಡಿಸಿ ದೇಹದ ಉಷ್ಣವನ್ನು ತಗ್ಗುವಂತೆ ಮಾಡುವುದು. ತಂಪನ್ನು ಅನುಭವಿಸಲು ಅಪಾಯರಹಿತವಾದ ಮತ್ತು ಅತ್ಯುತ್ತಮವಾದ ಸಾಧನವು ಇಂಡಿಯಾದ ಟೀಯೇ. ಬೇಸಿಗೆ ಕಾಲದಲ್ಲಿ ಬೇಕಾದಷ್ಟು ಬಿಸಿ ಬಿಸಿ ಟೀ ಕುಡಿಯಿರಿ. ತಂಪನ್ನೂ ಆನಂದವನ್ನೂ ಅನುಭವಿಸಿರಿ.

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ. ಶುಚಿಯಾಗಿರುವ ಮಣ್ಣಿನ (ಪಿಂಗಾಣಿ) ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗಾಗಿ ಒಂದು ಚಮಚ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ. ನೀರು ಕುದಿಯಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ.



ಅದು ತಂಪವನ್ನುಂಟುಮಾಡಿ ಆನಂದವನ್ನು ಕೊಡುವುದು

ಇಂಡಿಯಾದ ಟೀ

ತಂಪನ್ನೂ ತೃಪ್ತಿಯನ್ನೂ ಕೊಡುವುದು

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್ಷನ್ ಬೋರ್ಡ್‌ನವರಿಂದ ಪ್ರಕಟಿಸಲ್ಪಟ್ಟಿದ್ದು

IK 96 S

ಈ ವಾರದ ಸಂಕ್ಷಿಪ್ತ ಭವಿಷ್ಯತ್ಪರಿಣಾಮ

[ಈ ಶುಕ್ರವಾರದಿಂದ ಬರುವ ಶುಕ್ರವಾರದ ವರೇಗೆ]

(ನಮ್ಮ ಸ್ವಂತ ಜೋಯಿಸರಿಂದ)

ಒಂದು ವರ್ಷದಲ್ಲಿ ರವಿಯು ಮೇಷದಿಂದ ಮೀನದ ವರೆಗಿನ 12 ರಾಶಿಗಳಲ್ಲಿ ಒಂದುಸಲ ತಿರುಗಿದಂತೆ ಗೋಚರಿಸುವನು. ಸೂರ್ಯನಿರುವ ರಾಶಿಯು ಹೆಸರೇ ಆ ತಿಂಗಳಿಗೆ ಸಲ್ಲುವುದು. ಭೂಮಿಯು ತನ್ನ ಅಚ್ಚಿನಲ್ಲಿ ಒಂದು ಸುತ್ತು ತಿರುಗುವಾಗ ಪೂರ್ವ ದಿಗಂತದಲ್ಲಿ ಅಶ್ವಿನ್ಯಾದಿ 27 ನಕ್ಷತ್ರಗಳಿಂದ (ನ್ಯೂಲು ಕಲ್ಲುಗಳೆಂಬ ಭಾವನೆಯಿಂದ) ಆಳಿದ ಇಡೀ ಆಕಾಶ ಮಂಡಲವು 24 ತಾಸಿನೊಳಗೆ ಒಂದೊಂದೇ ನಕ್ಷತ್ರ ಪುಂಜವನ್ನು ಮೇಲಕ್ಕೆ ತರುತ್ತಾ, ಹಾದುಹೋಗುವಂತೆ ಗೋಚರಿಸುವುದು. ಈ ರೀತಿ ನಕ್ಷತ್ರ ಪುಂಜಗಳು ಪೂರ್ವ ದಿಗಂತದಲ್ಲಿ ಮೂಡುತ್ತಾ ಸೂರ್ಯನಂತೆಯೇ ಮಧ್ಯಾಹ್ನಕ್ಕೆ ಬಂದು ಕ್ರಮವಾಗಿ ಪಶ್ಚಿಮದಲ್ಲಿ ಅಸ್ತಮಾನವಾಗುವುದು. (ಇದು ಹಗಲಿನಲ್ಲಿ ನಮಗೆ ಗೋಚರಿಸುವುದಿಲ್ಲವಾದರೂ ರಾತ್ರಿಯಲ್ಲಿ ಕಾಣಬಹುದು.)

ಭೂಮಿಯು ತಿರುಗಾಟದಿಂದ ಸೂರ್ಯನು ಚಲಿಸಿದಂತೆ ನಮಗೆ ಭಾಸವಾಗುವುದು ಭೂಗೋಳ ಶಾಸ್ತ್ರವನ್ನು ಅರಿತವರಿಗೆ ವಿಶೇಷವಲ್ಲವಾದರೂ ಜ್ಯೋತಿಷ್ಯ ಶಾಸ್ತ್ರದ ಗಣಿತಭಾಗವು ಅದನ್ನು ಮೀರಿರುವುದಿಲ್ಲ.

27 ನಕ್ಷತ್ರದ ಆಕಾಶಮಂಡಲವು 60 ಘಳಿಗೆ (24 ತಾಸು) ಯಲ್ಲಿ ಒಂದು ಸುತ್ತು ಬಂದ ಹಾಗೆ ಗೋಚರಿಸುವುದರಿಂದ 2¼ ನಕ್ಷತ್ರಭಾಗವು ಮೂಡಿ ಮೇಲೆ ಬರುವಾಗ ಒಂದು ರಾಶಿಯು ಸಲ್ಲುವುದು. 60 ಘಳಿಗೆಯು ದಿನ ಪ್ರಮಾಣದಲ್ಲಿ ಸಂಕರಿ 5 ಘಳಿಗೆಗಳು ಸಲುವಾಗ ಒಂದು ರಾಶಿಯೂ ಮೂಡಿ ಪೂರ್ತಿಯಾಗಿ ಮೇಲೆ ಬಂದು ಇನ್ನೊಂದು ರಾಶಿಭಾಗವು ಮೂಡುವುದಕ್ಕೆ ಪ್ರಾರಂಭವಾಗುತ್ತದೆ. ಆದರೆ ರಾಶಿಭಾಗವು ನಕ್ಷತ್ರ ಪುಂಜಗಳ ಸಮಾನತೆಯು ಇಲ್ಲವದಿಂದ ಕೆಲವು ರಾಶಿಗಳಿಗೆ 5 ಘಳಿಗೆಗಳಿಗಿಂತ ಸ್ವಲ್ಪ ಹೆಚ್ಚು ಸಮಯವೂ ಕೆಲವಕ್ಕೆ ಸ್ವಲ್ಪ ಕಡಿಮೆ ಸಮಯವೂ ಬೇಕಾಗುತ್ತದೆ.

ಸೂರ್ಯನು ಪ್ರತಿಮಾಸದಲ್ಲಿ ಆಯಾ ರಾಶಿಯಲ್ಲಿ ಉದಯಕ್ಕೆ ಬರುತ್ತಾನೆ. ಅಂದರೆ ಪ್ರತಿ ತಿಂಗಳ ಹೆಸರಿನ ರಾಶಿಯು ಉದಯಕ್ಕೆ ಬರುವಾಗಲೇ ಸೂರ್ಯೋದಯವಾಗುವುದು. 30 ದಿನಗಳ ತಿಂಗಳಿನಲ್ಲಿ ಮೊದಲನೆ ದಿನ ರಾಶಿ ಉದಯವೂ ಸೂರ್ಯೋದಯವೂ ಒಟ್ಟಿಗೆ ಆಗಿ 30ನೇ ದಿನ, ರಾಶಿಯ ಅಂತ್ಯಭಾಗವೂ ಸೂರ್ಯನೂ ಒಟ್ಟಿಗೆ ಉದಯವಾಗುವುದು. ವೃಷಭ ಮಾಸದ ಮೊದಲನೇ ದಿನ ವೃಷಭ ರಾಶಿಯ ಆದಿಯೂ ಸೂರ್ಯನೂ ಒಟ್ಟಿಗೆ ಉದಯವಾಗುವುದು. ಆದುದರಿಂದ ಪ್ರತಿ ಮಾಸದ ಬಂದ ದಿನಗಳ ತ್ರೈರಾಶಿಕ ಪ್ರಮಾಣದಲ್ಲಿ ಆ ರಾಶಿಯ ನಿರ್ದಿಷ್ಟ ಭಾಗವು ಅಂಶಭಾಗವು ಸೂರ್ಯೋದಯಕ್ಕೆ ಮುಂಚಿತವಾಗಿ ಉದಯಕ್ಕೆ ಬರುತ್ತಿರುತ್ತದೆ. ಸೂರ್ಯೋದಯಕ್ಕೆ ಜನನವಾದ ಪರಜಾತಕದಲ್ಲಿ ಆ ರಾಶಿಯೇ ಲಗ್ನವೆನಿಸುತ್ತದೆ. ಅನಂತರದ ಜನನಗಳ ಸಮಯದಲ್ಲಿ ಪೂರ್ವದಿಕ್ಕಿನಲ್ಲಿ ಆ ಸಮಯ ಉದಯವಾದ ರಾಶಿಯೇ ಲಗ್ನವೆಂದು ಪರಿಗಣಿಸಲ್ಪಡುವುದು.

ಲಗ್ನದ ಮಹತ್ವಿಕೆಯನ್ನು ಬರುವ ಸಂಚಿಕೆಯಲ್ಲಿ ಬರೆಯುವೆವು.

ಮೇಷ ಲಗ್ನ ಮೇಷ ರಾಶಿಯವರಿಗೆ

"ಕೊಟ್ಟ ದೇವರು ಕೆಣಿಯ ಹೇರದೇ ಕಟ್ಟಿಕೊಂಡು ಅಳುವದ್ಯಾಕೆ?" ಎಂಬ ಪುರಂದರ ದಾಸರ ಕೀರ್ತನೆಯು ನೆನಪು ನ್ನು ಮಾಡಿದರೆ ಎಲ್ಲಾ ಕಷ್ಟಗಳ ದೂರ ಮಾಡುವಿರಿ. ತಾ 12-6-38ರಲ್ಲಿ ಶನಿಯ ಪ್ರಾ ರಾಯನು ನಿಮ್ಮ ರಾಶಿಗೆ ಬಂದ ಹೆಚ್ಚಿನ ಹತ್ತಿರ ಬರುವನು. ಶನಿಯೋ ನಿಮ್ಮ ಖರ್ಚಿನ ತಕನ, ಆದರೆ ಈಶ್ವರಾರಾಧನೆಯಿಂದ ಸಕಲವೂ ಶುಭಪ್ರದವಾಗುವುದೆಂಬುದನ್ನು ಶನಿಗೂ ಅಲ್ಲಗಳೆಯುವುದು ಸಾಧ್ಯ. ಸಮುದ್ರದ ತೆರೆಗಳನ್ನು ಎಣಿಸುತ್ತಾ ಕುಳಿತರೆ ಏನು ಪ್ರಯೋಜನವಿಲ್ಲ. ಅವು ಬರುತ್ತವೆ, ಮಾಯವಾಗುತ್ತವೆ. ಆದರೂ ತೆರೆಗಳು ಮತ್ತೆ ಮತ್ತೆ ಉಂಟಾಗುತ್ತಲೇ ಇವೆ. ಇದು ಪ್ರಕೃತಿಯ ನಿಯಮ. ಸುರ ಗುರುವರ್ಯನ ಪೂರ್ಣ ಕಟಾಕ್ಷವು ನಿಮ್ಮ ಮೇಲೆ ಇದ್ದೇ ಇದೆ. ತಾ 12-6-38ರ ನಂತರ ಯಾವ ದುರ್ಘಟನೆಯನ್ನಾದರೂ ನೀವು ಎದುರಿಸಬಹುದು. ಕಷ್ಟ ಸಾಧ್ಯವಾಗುವುದು ಮಾನುಷ ಪ್ರಯತ್ನವೆಂಬುವುದೇನೆಂದು ನೀವಾಗಿ ತಿಳಿಯುವಿರಿ. ಚಂಚಲಿತೆಯು ಅರ್ಥ ವಿಚಾರದಲ್ಲಿ ವಿರಾಮ ಗೊಳ್ಳುವಂತಿಲ್ಲ.

ವೃಷಭ ಲಗ್ನ ವೃಷಭ ರಾಶಿಯವರಿಗೆ

ಮನುಷ್ಯನಿಗೆ ವಿವೇಕವು ದೇವದತ್ತವಾಗಿರುವುದು. ಅವಿವೇಕತನದ ದೆಸೆಯಿಂದಲೇ ಮಾನವನ ಸಕಲ ವೈಭವಗಳು ನೀರು ಪಾಲಾಗುವುವು. ರಾಜ್ಯದ ಮುಖ್ಯಾಲಿಗಳಲ್ಲಿ ಶಾಂತತೆಯು ಹರಡಿರುವಾಗ ಪ್ರಜೆಗಳು ಸ್ವಾಭಾವೇಕ್ಷಿಗಳಾಗಿ ಸಮಾಜದ ರೀತಿ ನೀತಿಗಳನ್ನು ಕಂಡುಕೊಂಡು ನ್ಯಾಯಪರಿಪಾಲನಾಸಕ್ತರಾಗಿ ನಿಯುಮಿತರಾಗುವರು. ಆದರೆ ಅದೇ ಅಶಾಂತತೆಯು ನೆಲೆಗೊಳ್ಳುವಾಗ ರಾಜ್ಯದಲ್ಲೆಲ್ಲಾ ಗುಪ್ತ ಆಲೋಚನೆಗಳಿಂದ ಮನಃಸ್ವಾಸ್ಥ್ಯತೆಯು ಇಲ್ಲದೆಯೇ ಗುಂದ ತಪ್ಪಿ ಆಚಾರ ಭ್ರಷ್ಟರಾಗುವರು. ಆ ಸಮಯ ಮಾನವನ್ನು ಯಾರು ದೂರಿಯೂ ಪ್ರಯೋಜನವಿಲ್ಲ. ಆದರೂ ವಿವೇಕಪರರಾದವರು, ಸಾಧಕರು ಸಮಯವನ್ನು ಹೊಂಚು ಹಾಕುವವರು ತಾಳ್ಮೆಯ ಕಳ್ಳರೇ ಪಾರಾಗುವರು. ವಿವೇಕತೆಯೇ ನಿಮ್ಮನ್ನು ಈ ವಾರ ರಕ್ಷಿಸುವುದು. ತಾ 13-6-38 ರ ದ ವಿದ್ಯಾರ್ಥಿಗಳಿಗೆ ... ಉಚ್ಚ ಭಾವನೆಗಳು ... ಬರುವುದು.

ಮಿಥುನ ಲಗ್ನ ಮಿಥುನ ರಾಶಿಯವರಿಗೆ

... ತಾ 12-6-38ರಲ್ಲಿ ... ಧನಸ್ಥಾನ ... ಸೇರಲಿರುವನು ... ಅಂದಿನಿಂದ ... ರಾಶಿಗೂ ... ಚಿತ್ತವು ಸಮಾಧಾನವಾಗುವುದು ... ವಿವೇಕವನ್ನು ಕಾಲ ... ಗಳಿಂದ ಬರಲಿರುವ ... ಗಳನ್ನು ಪಾರು ಮಾಡಿಕೊಳ್ಳುವಿರಿ ... ಪಾಲನಾ ಕಾರ್ಯ ನಿರತರಾಗಿ ಯಶಸ್ಸನ್ನು ಗಳಿಸಿಕೊಳ್ಳುವವರಾಗುವಿರಿ ... ಗಳೇ ಅಥವಾ ... ಹೊರಗೆ ಹೋಗಲಾರಿರಿ ... ವೂ ಮನಶ್ಶಾಂತಿಯ ... ದೊರಕುವುದು. ಆರ್ಥಿಕ ವಿಷಯದಲ್ಲಿ ... ವಾದ ನಷ್ಟದ ಸಹನಶೀಲತೆಯ ಗೋಚರಿಸುವುದು. ನೌಕರರ ಮೂಲಕ ಸರ್ಧಿಸಬೇಕಾದೀತು.

ಕರ್ಕ ಲಗ್ನ ಕರ್ಕ ರಾಶಿಯವರಿಗೆ

ಸಂಕಷ್ಟ ... ನಿಮ್ಮ ಹೃದಯವು ಶಾಂತತೆಯ ... ಮಂತಹುದು. ಈ ... ಆದರೆ ತಕ್ಷಣ ಗೊಳ್ಳುವುದು. ನಿಮ್ಮ ... ರೋಗ ... ದಿಂದಲೂ ಜೀರ್ಣಶಕ್ತಿ ... ರಾತ್ರಿ ನಿದ್ರಾ ... ಭಾಗ್ಯವೇ ಸರಿ. ಇದರಿಂದ ನೀವು ... ಸ್ವಗೊ ... ರೋಗಗಳಿಂದ ಭಾದಿತರಾಗುವ ಸಂಭವವು ತೋರಿ ಬರುವುದು. ಈ ವಾರ ನಿಮಗೆ ಖಚಿತವಾಗುತ್ತದೆ. ಇದರಿಂದ ವೈರವು ಜಾಸ್ತಿಯಾಗಿ ... ಬೀಳಬಹುದು. ಅತೃಪ್ತತೆಯು ಕೊನೆಗೆ ಹೋಗಲಾರದೆ ಆ ತುಂಡು ವಿಘ್ನಗಳು ಸಂಭವಿಸಿ ಹೆಚ್ಚಿನ ನಷ್ಟ ಕಷ್ಟಗಳು ಒದಗಿ ಬಿದ್ದು ಹೋಗುವಂತಹುದನ್ನು ಮನಗಾಣುವಿರಾಗುವಿರಿ. ವ್ಯಾಪಾರ ವಹಿವಾಟುಗಳಿಗೆ ಯಾವ ತರದ ಅಭ್ಯಂತರ ತೋರಿಬರಲಾರದು.

ಸಿಂಹ ಲಗ್ನ ಸಿಂಹ ರಾಶಿಯವರಿಗೆ

ಸುಖಸ್ಥಾನದಲ್ಲಿ ರಾಹುಚಂದ್ರರೀರ್ವರೂ ನೆಲೆಸಿರುವರು. ನಿಮಗೆ ಯಾವಾಗಲೂ ಭಯ ಗ್ರಸ್ತತೆಯು ತೋರಿಬರುವುದು. ನಿಮ್ಮ ಸ್ವಕ್ಕೆ ನೀವು ತರತರದ ಕಾಲ್ಪನಿಕ ಆಲೋಚನೆಗಳನ್ನು ಅಂಕುರಿಸಿಕೊಂಡು ಖೇದರಾಗುವಿರಿ. ನಿಮ್ಮ ಪ್ರಯಾಣದಲ್ಲಿ ಅನೇಕ ವಿಘ್ನಗಳು ಒದಗಿ ದೊರೆಯುವುವು. ಆದರೆ ಇದು ಮಾನವ ಪ್ರಾಕೃತಿಕ ಲಕ್ಷಣಗಳಲ್ಲೊಂದಾಗಿರುವುದು. ಗೃಹಚಾರ ದೋಷವು ಕೆಟ್ಟಿರುವಾಗ ಇಂತಹುದರ ದುಷ್ಟ ಪರಿಣಾಮಗಳು ಹೊರಗೆ ಡಬಾರದೆ ಮಾನವನು ಒಂದಲ್ಲ ಒಂದು ತೆರದಿಂದ ಕಷ್ಟಗಳ ವಶಕ್ಕೆ ಮಾಡುವವನಾಗುವನು. ಆದರೆ ನೀವೇನೋ ಈ ವಾರ "ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ" ಎನ್ನುವಿರಿ. ಎಂತಹ ಕಠಿಣ ಪ್ರಸಂಗವನ್ನಾದರೂ ಎದುರಿಸುವ ಕೆಚ್ಚೆದೆಯು ನಿಮ್ಮದಾಗುವುದು. ಇದರಿಂದ ಜಯಶೀಲರಾಗಿ ಆಧುನಿಕ ಕಲಾನೈಪುಣ್ಯತೆಯನ್ನು ಹೊರಸೂಸುವ ಪದಾರ್ಥಗಳು ನಿಮ್ಮ ಉಪಯೋಗಕ್ಕೇನೆ ಬಳಿ ಬಿದ್ದು ಸುಖಾಭಿಲಾಷೆಯ ... ನೋಪಾನವನ್ನೇರವವರಾಗುವಿರಿ.

ಕನ್ಯಾ ಲಗ್ನ ಕನ್ಯಾ ರಾಶಿಯವರಿಗೆ

ಕನ್ಯಾ ರಾಶೀ ... ನಿಮ್ಮ ... ದಶಮ ಗೃಹ ... ನಿಮ್ಮ ... ಚಿಂತಿಸುವ ದೋಷಾದಿ ... ಈಗಣ ಸ್ಥಿತಿಯು ಇರುವುದು. ನಿಮ್ಮ ಅಪೇಕ್ಷೆಯೇನೋ ಬಹು ಗೂಢವಾಗಿರುವುದು. ಅದಕ್ಕೆ ತಕ್ಕಂತೆ ... ಗೋಚರಿಸುವುವು. ಆದರೆ ದುಡುಕಲಾಗದು. ಕೈ ... ದ್ರಾಕ್ಷೆ ಹಣ್ಣು ಹುಳಿ ಎಂಬಂತೆ ಭಾಸವಾಗುವುದು. ಅಭಿಪ್ರಾಯಗಳು ವಿರೋಧವಾಗಿ ಪರಿಣಮಿಸುವುವು. ಅವಮಾನವೂ ಅವಹೇಳನವೂ ... ವುದರಿಂದ ... ಅನುಭವಿಸಿ ... ಕಾರ್ಯವು ... ಭವಿಷ್ಯ ಕಾಲವನ್ನು ... ವರ್ತಿಸಿದರೆ ಕೀರ್ತಿಯು ನಿಮ್ಮ ಪಾಲಿನದಾಗುವುದು.

ತುಲಾ ಲಗ್ನ ತುಲಾ ರಾಶಿಯವರಿಗೆ

ತಾ 13-6-38ರ ವರೆಗೆ ನಿಮ್ಮ ... ಕಮಲ ... ಪ್ರಫುಲ್ಲವಾಗುವುದು. ಅಂದಿನಿಂದ ... ನೀವು ... ನಿಮ್ಮ ಮಾತುಗಳು ... ದಲ್ಲಿ ... ವಾಗ್ಮಿತೆಯು ಮುಂದುವರಿದಂತೆ ... ನೋಡಿ ವರ್ತಿಸುವುದು ಲೇಸು ... ಕೊಳ್ಳದಂತೆ ವರ್ತಿಸಿರಿ. ಆ ಭಾವನೆಯಿಂದಲೇ ... ಗಳಿಸಲಿರುವ ಲಾಭವನ್ನೆಲ್ಲಾ ಲೋಪ ಮಾಡುವಂತಿದೆ. ... ದಲ್ಲಿ ... ಗುರು ... ಸಂಪರ್ಕ ಶಕ್ತಿಗಳಿಂದೊಡಗೂಡಿದ್ದವರಂತೆ ... ಎತ್ತು, ಪುತ್ರರು, ಚಿನ್ನ, ರತ್ನ, ಸ್ತ್ರೀ, ವಸ್ತ್ರ, ಗೃಹ ಮೊದಲಾದ ಸುಖಸಾಧನಗಳ ಆಳಿಲರಾಗುವರು.

ವೃಶ್ಚಿಕ ಲಗ್ನ ವೃಶ್ಚಿಕ ರಾಶಿಯವರಿಗೆ

ತಾ 15-6-38ರ ತನಕ ನಿಮಗೆ ಶಾಂತಿಯು ಸ್ವಾಸ್ಥ್ಯತೆಯೂ ಇಲ್ಲಿ ತಿನ್ನಬೇಕಾಗುವುದು. ಪ್ರಯಾಣಕ್ಕೇನಿರಾಗುವಾಗಲೇ ಉದರ ರೋಗದ ಭೀತಿಯು ತಲೆದೋರುವುದು. ಊಟತಿಂಡಿಗಳಲ್ಲಿ ಅತೀ ಜಾಗರೂಕತೆಯಿಂದ ... ಗಾಸು ಹಿಡಿದೀತು. ಎಂದು ಹೊಟ್ಟೆ ಸವರಿನೋಡುವಂತಾಗುವಾಗಲೇ ಊಟದೆಲೆಯನ್ನು ಬಿಟ್ಟೇಳಿರಿ. ಅಜೀರ್ಣವಾಗಿ ಸಂಕಟಪಟ್ಟುಕೊಳ್ಳುವಂತಾಗುವಂತೆ ತೋರುವುದು. ಅಂತೆಯೇ ಮಕ್ಕಳ ಆರೋಗ್ಯ ಪಾಲನಾ ಕ್ರಮದಲ್ಲಿ ಹಿಂದುಳಿಯಬೇಡಿರಿ. ಅಲ್ಲಿಗೂ ಗ್ರಹಗತಿಯ ಕಾಟವಿದೆ. ಹಳಸನ್ನ ಭುಂಜಿಸುವುದು ಹಾನಿಕರವಾಗಿ ಪರಿಣಮಿಸೀತು. ಪರಸುಖಕ್ಕಾಗಿ ಹವಣಿಸದೆ ಮನೆಯಲ್ಲಿಯೇ ಎಲ್ಲಾ ಸುಖಸೌಖ್ಯಗಳ ಕಡೆಗೇನೇ ನೆಟ್ಟದೃಷ್ಟಿಯುಳ್ಳವರಾದರೆ ಸುಖಸಂಪತ್ತುಗಳಿಂದ ದೂರ ಉಳಿಯಲಾರಿರಿ.

ಧನುರ್ಲಗ್ನ ಧನು ರಾಶಿಯವರಿಗೆ

ನೌಕರರು ತಮ್ಮ ಕಾರ್ಯಗಳಲ್ಲಿ ಹೆಚ್ಚಿನ ನಿಗಾ ಇಟ್ಟುಕೊಳ್ಳುವದರಿಂದ ಶ್ರೇಯಸ್ಸು ಅವರ ಪಾಲಿನದಾಗುವುದು. ಮನೋಸ್ಥಿತಿಯು ಬದಲಾಯಿಸುವುದು. ಧನಿಗಳು ನೌಕರರ ಕಡೆಗೆ ಸಂಶಯಗ್ರಸ್ತರಾಗುವರು. ಸ್ತ್ರೀಯರ ಸಹವಾಸದಿಂದಾಗಿ ಅನೇಕ ತರದ ತೊಂದರೆಗಳು ಹೊಂಚು ಹಾಕುತ್ತಿವೆ. 12-6-38ರ ನಂತರ ಒಮ್ಮೆ ಕಷ್ಟಗಳು ಪರಿಹಾರವಾದಂತೆ ಕಂಡು ಬರುವುದಾದರೂ 15-6-38ರ ನಂತರ ಪುನಃ ಒದಗಲಿಕ್ಕಾರಂಭವಾಗುವುವು. ಜಾಗ್ರತೆಯಿಂದ ವರ್ತಿಸಿ ಕುಟಿಲತೆಯ ನೀತಿಯನ್ನು ಪಾಲಿಸುವುದಕ್ಕೆ ಹೋಗದಿದ್ದರೆ ಉನ್ನತಿಯೂ, ವಿಜಯವೂ ಈ ರಾಶಿಯ ಸರ್ವರ ಪಾಲಿನದಾಗುವುದು.

ಮಕರ ಲಗ್ನ ಮಕರ ರಾಶಿಯವರಿಗೆ

ಸ್ತ್ರೀ ಲೋಲರಾಗಬೇಡಿರಿ. ವೈರಿಗಳಿಲ್ಲೆಂದು ಭಾವಿಸಬೇಡಿರಿ. ಕುಲಧರ್ಮವನ್ನು ಮರೆಯದಿರಿ. ಇದರಿಂದ ಮುಂದೆ ಬರಲಿರುವ ಅಗ್ನಿಭಯ, ಚೋರಭಯ, ಕೃತಘ್ನರಭಯ ಇವೇ ಮುಂತಾದುದರಿಂದ ದೂರವಿರಬಹುದು. ಚತುಷ್ಪಾದ ಜಂತುಗಳಿಂದ ತುಂಬಾ ಪ್ರಯೋಜನವು ದೊರಕುವುದು. ಸ್ತ್ರೀಯರಿಂದ ಹೆಚ್ಚಿನ ಸಂಕಷ್ಟಗಳೊಳಗಾಗುವ ಘಟನೆಯು ಸಂಚರಿಸಲಿಕ್ಕಿರುವುದರಿಂದ ಆ ರೀತಿ ಹೆಚ್ಚಿನ ಜಾಗ್ರತೆಯನ್ನು ವಹಿಸಿಕೊಳ್ಳುವುದು ಹಿತಕರವಾಗಿ ಪರಿಣಮಿಸ ಬಹುದು. ಈ ವಾರದ ಗ್ರಹಗತಿ.

ಕುಂಭ ಲಗ್ನ ಕುಂಭ ರಾಶಿಯವರಿಗೆ

ರಾಜಾಂಗಣದಲ್ಲಿ ಕುಶಲತೆಯಿಂದ ವರ್ತಿಸದಿದ್ದರೆ ಹೆಚ್ಚಿನ ಸಂಕಷ್ಟಕ್ಕೆ ಬಲಿಬೀಳುವಂತಿದೆ. ಬಂಧು ಜನರ ಆಶ್ರಯದಾತರಾಗುವುದರಿಂದ ಹೆಚ್ಚಿನ ಗೌರವವೂ, ಯಶಸ್ಸೂ, ಕೀರ್ತಿಯೂ, ದೊರಕುವುದು. ತಾ. 19-6-38ರ ನಂತರ ದಲ್ಲಾಳಿಗಳಿಂದ ಹೆಚ್ಚಿನ ಪ್ರಯೋಜನವು ದೊರಕದು. ಗೃಹಚಾರವೆಂದು ಬಡಿದುಕೊಂಡ ಹೆಚ್ಚಾಗಿ ಬಳಲಿದ ನಿಮ್ಮ ಮನೋಬಲವು ತಾ 12-6-38ರಂದು ತುಸು ಸ್ವಾಸ್ಥ್ಯತೆಯನ್ನು ಹೊಂದಿದಾಗುವುದು. ಸ್ಥಾನ ಚ್ಯುತಿಯ ಭಯವು ಒಮ್ಮೆ ನಿಮಿಲು ಬಡಿದಂತೆ ಭಾಸವಾಗುವುದಾದರೂ ಅಷ್ಟೇನೂ ಅನಿಷ್ಟಕಾರಕವಾಗಿ ಪರಿಣಮಿಸಲಾರದು.

ಮೀನ ಲಗ್ನ ಮೀನ ರಾಶಿಯವರಿಗೆ

... ನಾವು ಹಿಂದೆಸ್ಸಿಗಿಂದರು ... ಎಂಬ ಭಾವನೆಯು ನಿಮ್ಮನ್ನು ... ವದ ... ಲೋಕ ... ಇದ್ದರೇನು? ... ಹೋಗದರೇನು? ತೆಗಳಿದರೇನು? ಎಂಬ ತತ್ವ ... ದ ಬಲೆಗೆ ಒಳಿದ್ದ ಆಲೋಚನಾತಕ ... ಗಾಳಿಗೆ ಸಿಲುಕಿದಂತಿವೆ, ವ್ಯಕ್ತದ ನಿಮ್ಮ ಮನೋಭಾವನೆಗಳು. ಆದರೆ ಧೈರ್ಯ ತಾಳಿರಿ. ಈ ವಾರಾಂತ್ಯದೊಳಗೆ ಪ್ರವಾಸಾಂತರಗ್ಯಯುಕ್ತಿಷ್ಟ ಭಾವನೆಗಳು ಮನೆಯ ಹಾದಿಯನ್ನು ಸೇರುವುವು. ದುಸ್ಸಹವಾಸದಿಂದ ದೂರವಾಗಿರುವುದು ಸುಲಭವಾಗುವುದು. ಸೂರ್ಯದೇವನ ತಾಪಕ್ಕೊಳಗಾದ ಪಾಂಥನು ನೆಳಲನ್ನು ಕಂಡು ಆಶಾಪನಕನಾದಂತೆ ಎಲ್ಲವೂ ಸುಲಭವಾಗಿ ಕಂಡುಬರುವುದು.

THE

Bank of Mangalore Ltd.,

MANGALORE.

ESTD 1931.

Branches:-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit** 3½% **on daily balances.

All kinds of banking business transacted

ಹುಣ್ಣುಗಳಿಗೆ ಮತ್ತು ಕಜ್ಜಿಕಾಲುಗಳಿಗೆ ವಿಚಿತ್ರ ಗುಣಕಾರಿ

ಜಾಂಬಕ್ ಕಲೆಗಳನ್ನು ಬಿಡುವುದಿಲ್ಲ.



ಕಡಿಯಾಗುವುದು, ಹುಣ್ಣು ಮತ್ತು ಕಾಲುಗಳಿಗೆ ಕಜ್ಜಿಯಾಗುವುದು, ಸಣ್ಣದೊಂದು ಕಡಿತದಿಂದ ಯಾ ಕೆರೆಯುವಿಕೆಯಿಂದ ಆಗಬಹುದು, ಆದರೆ ಅವುಗಳನ್ನು ಖಂಡಿತವಾಗಿ ಗುಣಪಡಿಸುವದು ಜಾಂಬಕ್ ಮಾತ್ರ ಔಷಧಿಯು. ಜಾಂಬಕ್ಕಿನಲ್ಲಿರುವ ವನಸ್ಪತಿ ತೈಲಗಳು ಚರ್ಮದಡಿಯಲ್ಲಿರುವ ಗ್ರಂಥಿಗಳನ್ನು ನೋವು ನಿವಾರಣೆ ಮಾಡುವುದು. ಉಂಟಕವನ್ನು ಕಡಿಮೆ ಮಾಡುವುದು, ಜಾಂಬಕ್ ವಿಷಕಾರಿ ರೋಗಾಣುಗಳನ್ನು ನಾಶಗೊಳಿಸುವುದು, ಕಜ್ಜಿಯನ್ನು ಒಣಗಿಸುವುದು ಕಲೆಯನ್ನು ಬಿಡದೆ ಗುಣಪಡಿಸುವುದು. ಎಲ್ಲಾ ದವಾಖಾನೆಗಳಲ್ಲಿ ಜಾಂಬಕ್ ರೂ 1 ಮತ್ತು 2-4-0ರ ಪ್ರಕಾರ ಮಾರಾಟವಾಗುತ್ತದೆ.

ಏಜಂಟರು.— ಮೆಸರ್ಸ್ ದಾಧಾ ಎಂಡ್ ಕೊ.,
ಪಾರ್ಕ್ ಟೌನ್, ಮದ್ರಾಸು.

ಪ್ರಾಣಿ ಕೊಬ್ಬು ಮಿಶ್ರವಾಗಿಲ್ಲ.

ಜಾಂಬಕ್

Zam Buk

S. U. N. & Co.,

Silk Merchants,

Chaukhamba, BENARES CITY.

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಶೀರೆಗಳು ರೂ. 35ರಿಂದ ರೂ. 55 ವಡಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 16, ಅಗಲ 2¼ ರೂ. 20ರಿಂದ 35ರ ವರೆಗೆ. ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಿಸ್ ಸಿಟಿ

ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ,

ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

ಲಿಮ್ಡಾ ಸೋಪು

ಉಪಯೋಗಿಸಿರಿ

ವೆಜಿಟಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ & ಮದ್ರಾಸು

ಒದಗಿಸಿಕೊಡುವವರು—

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**
Minister of Labour

4-10-1937

Bhuvanendra Products Ltd, Katapady, S. Kanara

ಮಂಗಳೂರು ವಾರ್ತೆ

ಪ್ರಧಾನ ಸಚಿವರ ಆಗಮನ:—ನಮ್ಮ ಪ್ರಧಾನ ಸಚಿವರಾದ ಶ್ರೀ ಸಿ ರಾಜಗೋಪಾಲಾಚಾರ್ಯರವರು ಇದೇ ತಾ. ೧೧ನೇ ಶನಿವಾರ ಮಧ್ಯಾಹ್ನ ಇಲ್ಲಿಗೆ ದಯಮಾಡಿಸುವರು. ಅದೇ ದಿವಸ ಒಂದು "ಸಾರ್ವಜನಿಕ ಭಾಷಣವನ್ನು ಇತ್ತು ಬಂದು ಸತ್ಕಾರ ಕೂಟದಲ್ಲಿ ಭಾಗಿಯಾಗಿ ಮರುದಿನ ಕೆಲವು ಆಧ್ಯರಿಗೆ ಭೇಟಿ ಇತ್ತು ಅಂದೇ ಮಲಬಾರ ಕಡೆ ತೆರಳುವರೆಂದು ತಿಳಿದುಬಂದಿದೆ.

ಪುಷ್ಪ ಪ್ರದರ್ಶನ

ನಮ್ಮ ಜಿಲ್ಲೆಯ ಎಡ್ವಾನ್ಸ್‌ಮೆಂಟ್ ಸೊಸೈಟಿಯವರು ಇದೇ ಬರುವ ದಸರೆಯ ಸಮಯದಲ್ಲಿ ಒಂದು ಪುಷ್ಪ ಪ್ರದರ್ಶನವನ್ನು ಸ್ಥಳೀಯ ಕೆನರಾ ಹ್ಯಾಸ್ಕೂಲಿನಲ್ಲಿ ಜರುಗಿಸಲು ನಿರ್ಧರಿಸಿರುವುದರಿಂದ ಅಗತ್ಯವಿರುವ ವಿಷಯದ ಮಾಹಿತಿಯನ್ನು ಆ ಸಂಘದ ಕಾರ್ಯದರ್ಶಿಯವರಿಂದ ಪಡೆಯಬಹುದು

ನಗರ ಸಭೆ

ನಮ್ಮ ನಗರ ಸಭೆಯು ತಾ ೬-೬-೩೮ರ ಸೋಮವಾರ ಸಾಯಂಕಾಲ ೫-೩೦ಕ್ಕೆ ಚೇರ್‌ಮೆನ್‌ರಾದ ಶ್ರೀ ಬಿ ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ರಂಗರಾಯ ಶಿಟೇಂಕರರ ರಾಜಭಕ್ತಿಯ ಪ್ರಮಾಣವಾದೊಡನೆ ಅಧ್ಯಕ್ಷರು ಕಳೆದ ಸ್ವತಂತ್ರ ಭಾರತದ ಸಂಚಿಕೆಯಲ್ಲಿ ಮುನ್ಸಿಪಲ್ ನೌಕರರಿಗೆ ಸಂಬಂಧಪಟ್ಟ ಒಂದು ಆಕ್ಷೇಪಕರವಾದ ಲೇಖನವು ಪ್ರಕಟವಾಗಿದೆಯೆಂದೂ ಅದು ಯಾವ ಮುನಿಸಿಪಾಲಿಟಿಗೆ ಅನ್ವಯಿಸಿವೆಂದು ಇಲ್ಲದಿದ್ದರೂ ಅದು ಆಕ್ಷೇಪಕರವಾದದೆಂದು ತಿಳಿಸಿ ಪತ್ರಿಕೆಯು ಕ್ಷಮೆಯನ್ನು ಕೇಳದಿದ್ದರೆ ಅದರ ವಿಷಯ ಯಾವ ಧೋರಣೆಯನ್ನು ಕೈಕೊಳ್ಳಬೇಕೆಂಬುದನ್ನು ಸಭೆಯು ಮುಂದೆ ನಿರ್ಧರಿಸಬೇಕೆಂದು ಸೂಚಿಸಿದಲ್ಲದೆ ಮುನ್ಸಿಪಲ್ ಕಮಿಷನರು ಕಳೆದ ಆರು ತಿಂಗಳಿಂದ ಎಷ್ಟು ಮಂದಿ ಮುನ್ಸಿಪಲ್ ನೌಕರರಿಗೆ ಯಾವ ಯಾವ ದಂಡನೆ ಯಾವ ಯಾವ ತಪ್ಪಿಗಾಗಿ ಎಂಬ ಬಗ್ಗೆ ವಿಷಯವುಳ್ಳ ಒಂದು ಸ್ಟೇಟ್‌ಮೆಂಟನ್ನು ತಯಾರಿಸಿ ಸಭೆಯ ಮುಂದಿರಿಸಬೇಕೆಂದು ಸೂಚಿಸಿದರು

ನಗರದ ಕೆಲವು ರಸ್ತೆಗಳಿಗೆ ಡಾಮರು ಹಾಕಿದರೂ ಅಲ್ಲಲ್ಲಿ ಹೊಂಡಗಳಿದ್ದು ಅವುಗಳಲ್ಲಿ ನೀರು ನಿಂತು ರಸ್ತೆಯು ಕೆಟ್ಟುದುದಕ್ಕೆ ಕಾರಣವೇನೆಂದು ಕೆಲವು ಸದಸ್ಯರು ಪ್ರಶ್ನಿಸಲು ರಸ್ತೆಗೆ ಟಾರು ಹಾಕಿದ ಕಂಪೆನಿಯ ಪ್ರತಿನಿಧಿಯಾದ ಶ್ರೀ ರಂಗಾಚಾರ್ಯರು ಆ ಕೆಲಸಗಾರರ ತಮ್ಮ ಅಜಾಗ್ರತೆಯಿಂದ ಅದು ಕೆಟ್ಟುಹೋದದ್ದರಿಂದ ಅದನ್ನು ತಮ್ಮ ವೆಚ್ಚದಿಂದಲೇ ದುರುಸ್ತಿ ಮಾಡಲು ಸಿದ್ಧರಿರುವೆವೆಂದು ಆಶ್ವಾಸನೆಯನ್ನಿತ್ತರು ಮತ್ತು ಮುನಿಸಿಪಲ್ ಸುಪರ್‌ವೈಜರರ ಸಂಗಡ ಎಲ್ಲಾ ರಸ್ತೆಗಳನ್ನು ಸಂದರ್ಶಿಸುವರಾಗಿಯೂ ತಿಳಿಸಿದರು

ಕೆಲವು ಖರ್ಚುಗಳ ಬಾಬಿನ ವ್ಯವಸ್ಥೆಯಾದ ಮೇಲೆ ಕಮಿಟಿಗಳೇರ್ಪಟ್ಟು, ಅವುಗಳ ಮೆಂಬರುಗಳ ಹೆಸರುಗಳನ್ನು ಅಧ್ಯಕ್ಷರು ಹೇಳಿದರು—ಅಕ್ರಮಣದ ವಿಚಾರದ ಕಮಿಟಿ—ಶ್ರೀಗಳಾದ ಸಿ ಎಲ್ ಲೋಬೋ ಮಿಸೆಸ್ ಬ್ರಿಟೋ, ರಾಘವೇಂದ್ರಪೈ, ಎ ಆರ್ ಡಿಸೋಜಾ ಐಮನ್, ಕುಂಞಂಬು ಸಾಹೇಬ್, ಗಜಾನನ ರಾವ್ ಬೆಳಕಿನ ಕಮಿಟಿ—ಶ್ರೀಗಳಾದ ಮುಖಾದೋ, ಗುರ್ವ ನಾಗಣ್ಣ ಹೆಗ್ಗಡೆ, ಕೆ ಪಿ ರೇಗೋ, ಬಿ ಎಂ ಡಿ ಸೋಜಾ, ಶಿವಪ್ಪ, ಮಿಸೆಸ್ ಬ್ರಿಟೋ ಫೈನಾನ್ಸ್ ಮತ್ತು ಎಸ್ಟಿಮೇಟ್ ಕಮಿಟಿ—ಡಾ॥ ಆಡಪ್ಪ, ಡಾ॥ ಮಲ್ಯ, ಶ್ರೀಗಳಾದ ಫೆ ಅಲ್ಬುಕರ್ಕ್, ಲಕ್ಷ್ಮಣ ಶೆಣೈ, ಆರ್ ಬಿ ಸಿ ಡಿ. ಅಂದ್ರಾದೆ; ಕುಂಞಂಬು ಸಾಹೇಬ್, ಲೀಲಾ ಬಾಯಿ ಟ್ಯಾಕ್ಸ್ ಅಪೀಲ್ ಕಮಿಟಿ—ಶ್ರೀಗಳಾದ ಅಂದ್ರಾದೆ, ಪಾಂಡುರಂಗ ಭಂಡಾರಿ; ಶ್ರೀಪಾ; ಲಕ್ಷ್ಮಣ ಶೆಣೈ; ಎ. ಆರ್. ಡಿ'ಸೋಜಾ, ಫೆ. ಅಲ್ಬುಕರ್ಕ್ ಕುಂಞಂಬು ಸಾಹೇಬ್. ವಿದ್ಯಾಂಗದ ಕಮಿಟಿ. ಶ್ರೀಗಳಾದ ಐಮನ್; ಲಕ್ಷ್ಮಣ ಶೆಣೈ; ಎಂ. ಮಾಧವ ರಾವ್, ಲೀಲಾ ಬಾಯಿ, ಕುಂಞಂಬು ಸಾಹೇಬ್, ಶ್ರೀಪಾ, ಎಚ್. ಕೆ ತಿಂಗಳಾಯ. ಸ್ಯಾನಿಟೇಶನ್ ಕಮಿಟಿ—ಶ್ರೀಗಳಾದ ಡಾ॥ ಮಲ್ಯ, ತಿಂಗಳಾಯ, ಜೆ ಪಿ ರೇಗೋ, ಡಾ॥ ಆಡಪ್ಪ; ಎಂ ಆರ್. ಭಟ್; ಮುಖಾದೋ, ಮೂಸಬ್ಬ. ಲಾ ಕಮಿಟಿ—ಶ್ರೀಗಳಾದ ಮಾಧವರಾವ್, ಎ ಡಿ. ಪೈ, ಮೂಸಬ್ಬ; ಸಿ ಎಲ್ ಲೋಬೋ, ಶ್ರೀಪಾ, ಗಜಾನನ ರಾವ್, ಐಮನ್ ಲೈಬ್ರರಿ ಕಮಿಟಿ—ಶ್ರೀಗಳಾದ ಮಾಧವ ರಾವ್, ಬಿ ಎಂ ಡಿ'ಸೋಜಾ, ಐಮನ್, ಎಂ ಆರ್ ಭಟ್, ಲೀಲಾ ಬಾಯಿ ಕುಂಞಂಬು ಸಾಹೇಬ್, ಮುಖಾದೋ, ನೇಮಕದ ಕಮಿಟಿ:—ಶ್ರೀಮತಿ ಲೀಲಾ ಬಾಯಿ ಕಂಟ್ರಾಕ್ಟಿನ ಕಮಿಟಿ:—ಡಾ॥ ಆಡಪ ಈ ಎಲ್ಲ ಕಮಿಟಿಗಳಿಗೂ, ಚೇರ್‌ಮ್ಯಾನ್ ಮತ್ತು ವೈಸ್ ಚೇರ್‌ಮ್ಯಾನರು ಎಕ್ಸ್ ಒಫಿಶಿಯೋ ಮೆಂಬರರು

ಹೊಸ ಸಂಕ ತೆರೆಯೋಣ—ಇದೇ ತಾ 9ನೇ ಬೆಳಿಗ್ಗೆ 9½ ಘಂಟೆಗೆ ಹೊಸತಾಗಿ ಕಟ್ಟಿಸಿದ ಚಾರ್ಮಾಡಿ ಮಾರ್ಗದ ಸಿಡಲ್ಲು ಸಂಕದ ತೆರೋಣ ಸಮಾರಂಭ ಜಿಲ್ಲಾ ಕಲೆಕ್ಟರರ ನೆರವೇರಿಸಲಿದ್ದಾರೆ ಎಂದು [illegible] ತಿಳಿಸುತ್ತಾರೆ.

ಜಿಲ್ಲಾ ಎಲಿಮೆಂಟರಿ ಶಾಲಾ ಮೆನೇಜರ ಸಂಘದ ಸಭೆಯು, ಕಳೆದ ತಾ ೨೫ನೇ ದಿನ ಕೆನರಾ ಹೈಸ್ಕೂಲಿನಲ್ಲಿ ಸೇರಿ ಉಪಾಧ್ಯಾಯರ ಸಂಬಂಧನೆಗಳ ಕುರಿತು ಚರ್ಚಿಸಲಾಯಿತು. ಅವುಗಳ ತೀರ್ಮಾನವು ದಿನ [illegible] ಗನ್ನು ಇದೇ ತಾ ೧೧ನೇ ಶನಿವಾರ ದಿನ ಬೆಳಿಗ್ಗೆ ಘಂಟೆ ೧೦ಕ್ಕೆ ಸದ್ರಿ ಶಾಲೆಯ ಸರ್ವೆಂಟ್ಸ್ ಮೆಮೋರಿಯಲ್ ಹೋಲಿನಲ್ಲಿ ಜರಗಿಸಿ ಉಪಾಧ್ಯಾಯ ಸಂಘಟನೆಗಳನ್ನು ಮುಂಜೂರ ಮಾಡಿ ಅಧ್ಯಕ್ಷ ಕಾರ್ಯದರ್ಶಿಗಳ ಚುನಾವಣೆ ನಡೆಸುವುದಲ್ಲದೆ, ಮುಂದಿನ ಕಾರ್ಯಕಲಾಪಗಳ ಕುರಿತು ನಿರ್ಣಯಿಸುವುದಾಗಿ ಸಭೆ ನಿಶ್ಚಯ ಮಾಡಿರುತ್ತದೆ, ಆದುದರಿಂದ ಎಲ್ಲಾ ಎಯಿಡ್ ಎಲಿಮೆಂಟರಿ ಶಾಲೆಗಳ ಮೆನೇಜರರು ಟೀಚರ್ ಮೆನೇಜರರುಗಳು ಸಹ ಈ ಸಭೆಗೆ ದಯಮಾಡಿ ಬಂದು ಸೂಚನೆಗಳನ್ನು ಕೊಡುವುದಲ್ಲದೆ ಇದರ ಮೆಂಬರರಾಗಿ ಸೇರಿ ಎಯಿಡೆಡ್ ಶಾಲೆಯ ಗೌರವವು ಹೆಚ್ಚಿಸಲು ಸಹಾಯಿಸುವರೆಂದು ನಂಬುತ್ತೇವೆ ಎಂದು ಸದರಿ ಸಂಘದ ಚಾಲಕರ ಹಾರೈಕೆ

ನೋಟೀಸು

ಮೂಡು ಪೆರಾರ ಪಂಚಾಯಿತಿ ಕೋರ್ಟಿನಲ್ಲಿ

C S No 5 1938

ನಾರಾಯಣ ಮುಡ್ಗರಿ ಪ್ರಭು ಎಂಡ್ ಬ್ರದರ್—ವಾದಿ

ಅಬ್ದುಲ್ ಖಾದರ್ ಸಾಹೇಬ ಎಂಬ ಸಾಹೇಬನ ಮಗ, ಮುಂಡೇವು ಮುಂಡು ಸ್ವರಾಂಬ ಗ್ರಾಮ—ಪ್ರತಿವಾದಿ

ರೂ 14-0-6ಕ್ಕೆ ದಾಖಲಾದ ಈ ದಾವೆಯನ್ನು ಪ್ರತಿವಾದಿಯು ಹಾಜರಾಗಿ ಎದುರಿಸದಿದ್ದರೆ, ಏಕಪಕ್ಷ ವಿಚಾರಣೆಯಿಂದ ಅದನ್ನು ತಾರೀಕು 25-6-38ಕ್ಕೆ ತೀರ್ಮಾನಿಸಲಾಗುವುದು ಎಂದು ಆತನಿಗೆ ತಿಳಿಸಲಾಗುತ್ತದೆ

ಕಿನ್ನಿಗೋಳಿ, ತಾ 4-6 38 — R S Baglodi, President

FOR SALE

Lorry, S K No 1047 (1936 model Dodge) in good condition is offered for sale. Write for particulars to—

'X'

C/o Swadeshabhimani

ತಾಲೂಕು ವಾರ್ತೆ

ಉಡುಪಿ ಎಸ್. ಎಸ್. ಎಲ್ ಸಿ. ಪರೀಕ್ಷೆ ಫಲಿತಾಂಶ.

ಕಳುಹಲ್ಪಟ್ಟವರು		ಪಾಸ್ಸಾದವರು
ಬೋರ್ಡ್ ಹೈಸ್ಕೂಲು	೩೮	೨೮
ಪೈಕಿ ಹುಡುಗಿಯರು	೪	೩
ಕ್ರಿಶ್ಚನ್ ಹೈಸ್ಕೂಲು	೩೫	೨೦
ಸ್ಟೆಂಟ್ ಸಿಸಿಲಿಯಾ		
ಗರ್ಲ್ಸ್ ಹೈಸ್ಕೂಲು	೧೩	೧೩
ಸ್ಯೆಂಟ್ ಮಿಲಾಗ್ರಿಸ್ ಹೈಸ್ಕೂಲ್		
ಕಲ್ಯಾಣಪುರ	೩೫	೨೭
ಪೈಕಿ ಹುಡುಗಿಯರು	೪	೪

ಉಡುಪಿ:—ಸ್ವತಂತ್ರ ಭಾರತದ ಸಂಪಾದಕರಾದ ವಿ ಕೆ ಹೈದರರು ತಮಗೂ ಪತ್ರಿಕಾ ಡಳಿತದವರಿಗೂ ಪರಸ್ಪರ ವೈಮನಸ್ಸವುಂಟಾದ ಪರಿಣಾಮವಾಗಿ ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟರೆಂದೂ ಮತ್ತು ಜುಲಾಯಿ ಪ್ರಾರಂಭದಲ್ಲಿ ಹೊಸತೊಂದು ವಾರ್ತಾ ಪತ್ರಿಕೆಯನ್ನು ಹೊರಡಿಸಲಿರುವರೆಂದು ಕೇಳುತ್ತೇವೆ

ಕಳೆದ ತಾರೀಕು 7-6-38ರಲ್ಲಿ ಕುಂಜಿಬೆಟ್ಟಿನಲ್ಲಿ ಒಂದು ಮೋಟರು ಅಪಘಾತವಾಗಿ ಹೆಂಗಸಿಗೆ ಪೆಟ್ಟಾಗಿದೆಯೆಂದು ತಿಳಿದು ಬಂದಿದೆ [illegible]

ಕಾರ್ಕಳ

ಕಾರ್ಕಳ ಬೋರ್ಡ ಹೈಸ್ಕೂಲಿನಿಂದ ಈ ವರ್ಷ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಕೊಟ್ಟ 40 ಮಂದಿ ವಿದ್ಯಾರ್ಥಿಗಳಲ್ಲಿ 16 ಮಂದಿ ಉತ್ತೀರ್ಣರಾಗಿರುತ್ತಾರೆ ಸೇಕಡಾ 40ರಷ್ಟು ಈ ಶಾಲೆಯ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದವರಾಗಿರುತ್ತಾರೆ

ಇಲ್ಲಿ ಹಲವು ವರ್ಷಗಳಿಂದ ವೈದ್ಯ ಧರ್ಮೋಪದೇಶಿಗಳಾಗಿದ್ದ ರೆವರೆಂಡ್ [illegible] ಧೊರೆಗಳ ಉದ್ಯೋಗದಿಂದ ನಿವೃತ್ತರಾಗಿ ಜರ್ಮನಿಗೆ ಹಿಂತಿರುಗುವ ಸಂದರ್ಭದ ಅವರನ್ನು ಬೀಳ್ಕೊಡುವ ಒಂದು ಸಮಾರಂಭವು ತಾ 2-6-1938ರ ದಿನ [illegible] ಶಾಲೆಯಲ್ಲಿ ಜರುಗಿತು [illegible] ಅನೇಕ ಜನ [illegible] ಆರೋಗ್ಯಗಳನ್ನು ಕೂರಿ ತಮ್ಮ [illegible] ಕಾಣಿಕೆಗಳನ್ನು ಸಮರ್ಪಿಸಿದರು

ವೇಣೂರಿನಲ್ಲಿಯೂ ಮಂಗಳೂರ [illegible] ಡರೂ ಶಿ [illegible] ಅನ ಮಂಗಳ [illegible] ಆಗಿರುವ ಡಾ [illegible] 30-0-1938ರ ದಿನ [illegible] ಒಂದು [illegible] ಕೊಟ್ಟು [illegible] ಅದರ [illegible] ಹೋಗಿದೆ

[illegible]

ಪಂಚಾಯತ ಬೋರ್ಡಿನ ಚುನಾವಣೆಗಳ ಬಗ್ಗೆ ತಾ 3-6-38ರ ದಿನ ನಾಮ ಪತ್ರಗಳು ಸ್ವೀಕರಿಸಲ್ಪಟ್ಟವೆ ಒಟ್ಟು ಚುನಾವಣೆ ಯಾಗಬೇಕಾದ 15 ಸ್ಥಾನಗಳಿಗೆ 24 ಮಂದಿ ತಮ್ಮ ಉಮೇದುವಾರಿಕೆಯನ್ನು ಸೂಚಿಸಿರುವುದರಿಂದ ಚುನಾವಣೆಯು ತಾ. 20-6-1938ರ ದಿನ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ನಡೆಯುವದು.

ಸೆಕೆಗಾಲದ ರಜೆಯು ಮುಗಿದು ಮ್ಯುನ್ಸಿಪಲ್, ಬೋರ್ಡ್, ಎಲ್ಲಾ ಶಾಲೆಗಳೂ ತೆರೆಯಲ್ಪಟ್ಟಿವೆ ಅನೇಕ ತರಗತಿಯ ತರಹ ಕ್ಲಾಸುಗಳಿಲ್ಲದ ಎಲ್ಲ ಬೋರ್ಡ್ ಎಲಿಮೆಂಟರಿ ಶಾಲೆಗಳಲ್ಲಿ ಅಂಥ ತರಗತಿಗಳನ್ನು ತೆರೆಯಬೇಕಾಗಿ ಜಿಲ್ಲಾ ಬೋರ್ಡ್ ಆಜ್ಞಾಪಿಸಿರುವ ಪ್ರಯುಕ್ತ ಸಮೀಪದ ಖಾಸಗಿ ಶಾಲೆಗಳ ಮಕ್ಕಳ ಸಂಖ್ಯೆಗೆ ಈ ಆಜ್ಞೆಯಿಂದ ಬಹಳ ಹಾನಿತಟ್ಟುವ ಸಂಭವವು ಕಂಡುಬರುತ್ತಿದೆ

ಸ್ಥಳೀಯ ಜುಮ್ಮಾ ಮಸೀದಿ ಬಳಿಯ ಒಂದು ತೆಂಗಿನ ಮರವನ್ನು ಕಡಿಯುವಾಗ ಒಬ್ಬನು ಆದರಡಿ ಬಿದ್ದು ಸತ್ತನೆಂದು ಕೇಳುತ್ತೇವೆ

ಕುಂದಾಪುರ:—ಇಲ್ಲಿಯ ಪಂಚಾಯತ್ ಬೋರ್ಡಿನ ಲೆಕ್ಕಚಾರ ರುಪಾಯಿ 1089 ಹೆಚ್ಚು ಕಡಮೆ ಕಾಣುವುದರಿಂದ ಕ್ಲಾರ್ಕರನ್ನು ರಿಮಾಂಡಿನಲ್ಲಿ ಇಟ್ಟಿರುವುದಾಗಿ ತಿಳಿದುಬಂದಿದೆ

ಪುತ್ತೂರು:—ಪುತ್ತೂರು ತಾಲೂಕು ಕೆಮ್ಮಿಂಜೆ ಗ್ರಾಮದಲ್ಲಿಯ ಕುರ್ಡ್ಕದಲ್ಲಿ ಒಂದು ಹರಿಜನರ ಮದುವೆಯು ಜರುಗಿತು ಈ ಶುಭಕಾರ್ಯದಲ್ಲಿ ಕೆಮ್ಮಿಂಜೆ ರಾಮದೇವಾಲಯದ ಸುಬ್ಬಣ್ಣಯ್ಯನವರು ಪೌರೋಹಿತ್ಯವನ್ನು ವಹಿಸಿದ್ದರು ಈ ಶುಭಕಾರ್ಯದಲಿ ಬ್ರಾಹ್ಮಣರೂ ಸಹಾ ಭಾಗಿಗಳಾಗಿದ್ದರು

[illegible] ಎಮ್ಮೆಯ ಸೌತ್ [illegible] ಕಲ್ ಕಲ್ಚರ್ ಇನ್ ಸ್ಪೆಕ್ಟರವರು, ಕಳೆದ ತಾ 28-5 38ರಲಿ [illegible] ಸರ್ಕಾರಿ [illegible] ಹೋಲಿನಲ್ಲಿ [illegible] ವಾನ್ ಲೆಸ್ ಟ್ಯುಬರ್ ಕ್ಯುಲೋಸಿಸ್ [illegible] ಸಹಾಯಾರ್ಥವಾಗಿ ಮುಂಬಾಯಿ ಪ್ರಾಂತ್ಯದ ಕಿವಿನ್ನಾ ಮಂಡಳಿ ಶ್ರೀಗಳಾದ ನಾಮದೇವ ಮುರಾರ್‌ಜಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ತಮ್ಮ ಅಮೋಘವಾದ ಅಂಗಸಾಧನೆಯನ್ನು ಪ್ರದರ್ಶಿಸಿ ಆ ದೇಣಾವೆ [illegible] ದರಿಂದ 1693 ರೂಪಾಯಿಗಳನ್ನು ಮೇಲಿನ ಟ್ಯುಬರ್ ಕ್ಯುಲೋಸಿಸ್ ಸೆನಿಟೋರಿಯಮಿಗೆ ಕೊಟ್ಟಿದ್ದಾರೆ

NOTICE

A[illegible] are invited from [illegible] to the post of Driver for the Diesel Road R[illegible] under this D[illegible] Salary Rs 25 per [illegible] plus an allowance of Rs. 5 per mense[illegible] the working season.

Applications should contain the following particulars and [illegible] 30th June 1[illegible]

1) N[illegible]

[illegible]

Age (Date [illegible] to be furnished)

4) Qualifications (diplomas or certificates [illegible] should be enclosed)

5) Previous service if any

6) Complete address of the applicant

M. V. Vellodi, B. A., Ex-Officio President.

South Kanara Dt Board
Mangalore 6th June 38

ಫೆಡರೇಶನು ಆಗಿಯೇ ಆಗುವುದು! — ಬ್ರಿಟಿಷ

ಪಂಚ ಪ್ರಾಂತ್ಯದ ಮೇಲೆ ಸಿಡಿ ಗುಂಡುಗಳು! ಮತ್ತೊಂದು ಕಿರುಕುಳ * * * *

ಶ್ರೀ ಜಿನ್ನಾರವರ ಎದೆಯಲ್ಲಿ ಏನಿದೆ?

ಜಾತಿಯೋ? : : ಜನಾಂಗವೇ?

ಶ್ರೀ ಜಿನ್ನಾರವರು ಕಳೆದವಾರ ಕೊಂಗ್ರೆಸು ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ 'ಎರಡು ಪಕ್ಷದವರೂ ಹಿಂದಣ ಕಥೆಯನ್ನೆಲ್ಲ ಮರೆಯಬೇಕು' ಎಂದು ಸೂಚಿಸಿ, ಮುಂದೆ ಐಕ್ಯವಾಗುವಂತೆ ಕೊಂಗ್ರೆಸೂ ಲೀಗೂ ಏನುಮಾಡಬಹುದೆಂದು ಶರ್ತ ಹೇಳಿದ್ದಾರೆ.

ಹಿಂದಣದೆಲ್ಲವನ್ನು ಮರೆಯಬೇಕು ಮುಂದಣ ಹೊಸ ಇತಿಹಾಸಕ್ಕೆ ಪ್ರಾರಂಭವಾಗಲೆನ್ನುವ ರಭಸದಲ್ಲಿ, ಜಿನ್ನಾರವರು 'ಮರೆಯಬೇಕೆಂದು' ಹೇಳಿರುವುದನ್ನೇ ಮರೆತಿರುವಂತೆ ತೋರುತ್ತದೆ. ಕೂಡಲೆ ಬೊಂಬಾಯಿಯಲ್ಲಿ ನಡೆದೊಂದು ಸಭೆಯಲ್ಲಿ ಭಾಷಣಮಾಡುತ್ತಾ,— "ಕೊಂಗ್ರೆಸು ಎಂದೂ ಹಿಂದೀ ಜನಾಂಗದ ಪ್ರತಿನಿಧಿಗಳ ಸಭೆಯಾಗಿದ್ದಿಲ್ಲ, ಅದು ತುಂಬಾ ಜಾತಿಯ ಅಭಿಮಾನಗಳದೇ ಒಂದು ಸಂಸ್ಥೆ" ಎಂದು ಸಾರಿರುವರು.

ಪೀರಪುರದ ರಾಜರು ನಾಗಪುರದಲ್ಲಿ ಇವರಿಗೂ ಒಂದು ಹೆಜ್ಜೆ ಮುಂದೆ ಕಾಲಿಟ್ಟಿರುವರು 'ಕೊಂಗ್ರೆಸು ಒಂದು ಜಾತಿಯವರ ಸಂಸ್ಥೆ, ಮುಸ್ಲಿಂ ಲೀಗ್ ಮಾತ್ರ ಇಡೀ ಜನಾಂಗದ ಪಕ್ಷವಾಗಿರುವುದು' ಜನಾಂಗದ ಪಕ್ಷವಾಗಿರುವುದೂ, ರಾಷ್ಟ್ರೀಯವಾಗಿರುವುದೂ ಎಂದರೆ ಒಂದೇ ಅರ್ಥವಲ್ಲ ನಿಜ, ಆದರೆ ಅಷ್ಟೇ ಅರ್ಥವಿದ್ದೀತಾಗಿ ಸಭೆಗೆ ಹೇಳುವಾಗ್ಗೆ ಈ ಮುಸ್ಲಿಮ ಲೀಗ್ ಮುಖಂಡ ರಾಜರೂ, ಸಭಿಕರೂ ತಿಳಿದುಕೊಂಡಿರಬಾರದೆಂದೇನೂ ಇಲ್ಲ

ಮತ್ತೊಬ್ಬ ಲೀಗ್ ಮುಖಂಡರು ಸರ್ ಸಿಕಂದರ ಹಯ್ಯಾತ ಖಾನರು, ಮುಸ್ಲಿಮ ಧ್ವಜವನ್ನೆತ್ತಿ ಹಿಡಿದು, ಭಾರತವರ್ಷದ ಒಂಬತ್ತು ಕೋಟಿ ಮುಸ್ಲಿಮರ ಆಶಾಭರವಸೆಗಳ ಧ್ವಜವಿದು ಎಂದರು! ೧೯೩೧ನೇ ಇಸವಿಯ ಖಾನೆಸುಮಾರಿಯಲ್ಲಿ ೭,೮೦೦,೦೦೦ ಮುಸ್ಲಿಮರಿಂದಿದೆ ಈಗ ಅವರು ೯ ಕೋಟಿಯರಾಗಿರುವಂತಾದಲ್ಲಿ, ಇನ್ನು ಕೆಲವೇ ವರ್ಷಗಳಲ್ಲಿಯೇ ಮುಸ್ಲಿಮ ಲೀಗ್ ಇಡೀ ಜನಾಂಗದ ೩೫ ಕೋಟಿಯನ್ನು ಕೂಡಿಕೊಳ್ಳಬಹುದು ಸಂಖ್ಯಾಬಲವೇ ರಾಷ್ಟ್ರೀಯತೆಯ ಕುರುಹು ಎಂತಾಗಿ ಕೊಂಗ್ರೆಸು ಹಿಂದುಗಳದು ಎಂದು ಮುಸ್ಲಿಂ ಲೀಗಿನವರು ಎನ್ನುವಂತೆ, ಮುಸ್ಲಿಮರದೆಂದು ಈ ಲೀಗ್ ಹೇಳಬೇಕಾದರೂ ಬಹು ವರ್ಷಗಳು ಬೇಕಾದಾವು

ಇವೆರಡೂ ಪಕ್ಷಗಳ ಸಂಬಂಧವೇ ಇಲ್ಲದೆ, ಜನಾಂಗದ ಸಂಬಂಧವಾಗಿ ಮಾತ್ರ ಆಲೋಚಿಸುವವರಿಗೆ ಇದೊಂದು ವ್ಯರ್ಥ ವಿನೋದವೆಂದೇ ತೋರದಿರದು. ಇವರ ಮತ್ತು ಅವರ ಹಕ್ಕು ಅಧಿಕಾರ ಮೊದಲಾದ ಮಾತುಗಳು ಇಲ್ಲದೆ ಹೋಗಿದ್ದರೆ, ಉಳಿದ ಅಲ್ಪ ಸಂಖ್ಯಾಕರಾದರೂ ಸುಖವಾಗಿರುತ್ತಿದ್ದರು ಈಗ ಹೇಗೂ ಇತ್ತಂಡಗಳಿಗೂ ಅಲ್ಪ ಸಂಖ್ಯಾಕರ ಬೆಂಬಲ ಬೇಕಾಗಿದೆ ರಾಷ್ಟ್ರೀಯತೆಯ ಸಂಸ್ಥೆಯೆಂ~~ಬುದು ಯಾವುದೋ ಅದಕ್ಕೆ ಖಂಡಿತವಾಗಿಯೂ~~ ಅಲ್ಪ ಸಂಖ್ಯಾಕರ ಬೆಂಬಲ ಅಗತ್ಯವಾಗಿಯೂ ಬೇಕಾಗಿದೆಯಲ್ಲವೆ? ಹಾಗಿಲ್ಲದಿರುವಲ್ಲಿ, ಅವೆಲ್ಲ ಯಾವುದೊಂದೇ ಜಾತಿಯ ಅಥವಾ ಸಮಾಜದ ಅಥವಾ ಧರ್ಮಬಂಧುಗಳ ಸಂಸ್ಥೆಯಾಗುವುದಲ್ಲವೆ? ಹೀಗಿರುವುದರಿಂದಲೇ, ಅಲ್ಪ ಸಂಖ್ಯಾಕರು ಬೆದರಿ, ಎರಡೂ ಸಂಸ್ಥೆಗಳಲ್ಲಿ ಸಂದೇಹ ಕಾಣುತ್ತಿರುವರು. ಕ್ರೈಸ್ತರೊಳಗೆ ದೊಡ್ಡ ಸಂಗಡವೆಲ್ಲಿರುವುದೊ ದೇವರೂ ಅಲ್ಲಿ ಅದರ ಪಕ್ಷವಾಗಿರುವರೆಂಬ ಅಭಿಪ್ರಾಯ ಉಳ್ಳವರಿರುವರು. ಕೆಲವರು— ಎರಡು ಪಕ್ಷಗಳೂ ಹಾಳಾಗಲಿ, ನಮಗೇಕೆ ಈ ರಗಳೆ! ಎನ್ನುವರು.

ಫೆಡರೇಶನು ಆಗಿಯೇ ಆಗುವುದು.

ಬ್ರಿಟಿಷ ಸರಕಾರವು ಇದಕ್ಕಾಗಿ ಸಂದರ್ಭ ಕಾಯುತ್ತಲೇ ಇದೆ.

'ವೈಸ್ರಾಯರು ಇಂಗ್ಲೆಂಡಿಗೆ ತೆರಳಿಬರಲಿ'

ಸ್ಥಳೀಯ ರಾಜ್ಯಗಳ ತಿದ್ದುಪಡಿಯಾದ ಸೇರುಗೆಯ ಪ್ರಮಾಣಪತ್ರವು ಇನ್ನೂ ಪ್ರಕಟವಾಗಿಲ್ಲವಾದರೂ, ನರೇಂದ್ರ ಮಂಡಲವನ್ನು ಪುನರ್ಘಟಿಸಿ ತರಲು ಅತ್ಯಧಿಕ ಪ್ರಯತ್ನಗಳು ಸಾಗುತ್ತಲೇ ಇವೆ. ಪ್ರಮಾಣಪತ್ರವನ್ನು ಈ ಘಟನೆಯಾಗುವ ತನಕ ಹಾಗೆಯೇ ಬಾಕಿ ಇಡುವರಂತೆ, ವೈಸ್ರಾಯರು ಲಂಡನಿಗೆ ತೆರಳಿ, ಇಂಡಿಯಾ ಸೆಕ್ರೆಟರಿಯರೊಡನೆ ಸಂಭಾಷಿಸಿ ಬಂದ ಬಳಿಕವೇ, ಅವರು ಅಲ್ಲಿರುವಾಗ ಬೇಕಾದ ತಿದ್ದುಪಡಿಗಳನ್ನು ಮಾಡಿಸಿಕೊಂಡು ಬಂದ ತರುವಾಯ, ಪ್ರಮಾಣಪತ್ರವು ಹೊರಡುವುದು ಈ ವರ್ಷದ ಡಿಸೆಂಬರಿನ ಮೊದಲು ಈ ಪ್ರಕಟನೆಗೆ ಅವಕಾಶ ದೊರೆಯಲಾರದು

ವೈಸ್ರಾಯರು ಎರಡು ವರ್ಷಗಳ ಹಿಂದೆ ಅಧಿಕಾರ ಬರುತ್ತಲೇ, ಆತ್ಮವಸರವಾಗಿ ಫೆಡರೇಶನನ್ನು ಜ್ಯಾರಿಗೆ ತರುವೆದೆಂದರೂ, ಈಗೇನೂ ಅಷ್ಟು ಆವಸರವು ಕಂಡುಬರುತ್ತಿಲ್ಲ ಸಾಧನೆ ಮಾಡಿ ಹೊತ್ತು ಕಾಯುತ್ತ, ಸಂದರ್ಭವು ಅನುಕೂಲವಾದೊಡನೆ ಫೆಡರೇಶನನ್ನು ಸ್ಥಾಪಿಸುವುದಾಗಿ ಅವರು ನಿರ್ಧರಿಸಿರುವರೇ ವಿನಾ, ಫಕ್ಕನೆ

ಅಲ್ಪ ಸಂಖ್ಯಾಕರನ್ನು ಒಲಿಸಿಕೊಳ್ಳುವುದಕ್ಕಾಗಿ ಇತ್ತಂಡಗಳ ಪ್ರಯತ್ನಗಳೂ ಧಾರಾಳವಾಗಿ ನಡೆಯುತ್ತಿವೆ ಇದೊಂದು ತಂತ್ರವಲ್ಲ, ಖಂಡಿತವಾಗಿಯೂ ರಾಷ್ಟ್ರೀಯತೆಯಲ್ಲಿ ಇವರ ಸ್ಥಾನಮಾನಗಳನ್ನು ಬಹುಸಂಖ್ಯಾಕರು ಕಾಪಾಡುವರು ಎಂಬುದು ನಿಶ್ಚಿತವಾಗದ ಅಲ್ಪ ಸಂಖ್ಯಾಕರು ಯಾವ ಪಕ್ಷವನ್ನೂ ಗಮನಕ್ಕೆ ತರಲಾರರು ಇತ್ತಂಡಗಳ ಕೋಲಾಹಲಗಳಲ್ಲಿ ಸಂಕಟವೆಂದರೆ ಅಲ್ಪಸಂಖ್ಯಾಕರಿಗೆ ಅವರು ಈಗ ಏನೊಂದು ಕರಾರ ಮಾಡಿ ಯಾವುದೊಂದು ಪಕ್ಷವನ್ನು ಸೇರಬಹುದು, ಮುಂದೆ ಅವರನ್ನು ವರ್ಜಿಸುವ ಪ್ರಯತ್ನಗಳನ್ನು ಆ ಸಂಗಡವು ಮಾಡಲಾರದೆಂದು ಯಾರು ಭರವಸೆ ಕೊಡಬಲ್ಲರು? ಅವರು ಯಾವ ಪಕ್ಷವನ್ನೂ ಸೇರದೆ, ಇತ್ತಂಡಗಳ ಕಾದಾಟ ಮುಗಿದ ಬಳಿಕ, ತಾವು ತಟಸ್ಥರಾಗಿದ್ದುದಕ್ಕೆ ಏನೊಂದು ಒಗೆಯಲ್ಲಿ ಉತ್ತಮ ಪರಿಣಾಮ ಹೊಂದುವುದಕ್ಕೆ ಯೋಗ್ಯರೆಂದು ಎದ್ದ ಪಕ್ಷವು ಅವರನ್ನು ಸನ್ಮಾನಿಸಬಹುದು ಅಥವಾ ದೂರವಿದ್ದರೆ, ಮುಂದೆ ಇವರು ಯಾವ ಪಕ್ಷಕ್ಕಾದರೂ ಪ್ರಯೋಜನಕ್ಕೆ ಬಾರದ 'ಗೆದ್ದವರ ಕಡೆಯವರು' ಎಂದು ಎಲ್ಲರ ಘೃಣೆಗೂ ಪಾತ್ರರಾಗಬಹುದು ಆಗ ಇವರ ಸಹಕಾರದಿಂದ ಯಾರಿಗೂ ಹೆಚ್ಚಿನ ಕುಂದೇನೂ ನಿವಾರಣೆಯಾಗತಕ್ಕದಿಲ್ಲ

ಅಲ್ಪ ಸಂಖ್ಯಾಕರು ದೂರವಿರ ಪಷ್ಟು ಕಾಲಕ್ಕೆ ಯಾವ ಪಕ್ಷವೂ ರಾಷ್ಟ್ರೀಯವೆನಿಸುವುದಿಲ್ಲ ಜನಾಂಗವೆಲ್ಲವೂ ತನ್ನದೆನ್ನುವಂತೆ ~~ಕಾಂಗ್ರೆಸೂ ಲೀಗೂ ಪ್ರಯತ್ನಿಸಬಹುದು; ಕಾ~~ನೇ ಜನಾಂಗವೆನ್ನಬೇಕಾದರೆ, ಸ್ವಲ್ಪ ಹೆಚ್ಚಿನ ಯೋಗ್ಯತೆ ಅಗತ್ಯ ಆದುದರಿಂದ ರಾಷ್ಟ್ರೀಯತೆಯ ಕಡೆಗೆ ಎಲ್ಲರೂ ಪ್ರಯತ್ನಿಸಲಿ ಅಧಿಕ ಸಂಖ್ಯಾಕರು ರಾಷ್ಟ್ರೀಯರೆಂತಾದಲ್ಲಿ, ಅಲ್ಪ ಸಂಖ್ಯಾಕರ ಕಡೆಗೆ ಅವರ ಸಹಾನುಭೂತಿಯಿರಬೇಕು. ಅದನ್ನು ಅವರು ಪ್ರತ್ಯಕ್ಷ ತೋರಿಸಬೇಕು. ಅಲ್ಪ ಸಂಖ್ಯಾಕರೂ ದೂರವಿದ್ದರೂ ಚಿಂತಿಲ್ಲ, ಜನಾಂಗದ ಹಾಗೂ ದೇಶದ ಹಿತಸಾಧಕವಾದ ಸಂಸ್ಥೆಯಾವುದೋ ಅದರ ಪಕ್ಷವಾಗಿ ಅಗತ್ಯಕಂಡಂತೆ ಮಾತ್ರ ವರ್ತಿಸುತ್ತಿರಲಿ

ಕೆಂಪು ಬಾವುಟ!

ಮಧ್ಯಪ್ರಾಂತ್ಯದಲ್ಲೊಂದು ಮಹಾ ಚಳವಳ

ಎಲ್ಲ ನೇಯಿಗೆಯ ಗಿರಣಿಗಳಲ್ಲಿ ಮಹಾ ಮುಷ್ಕರವು ಉಂಟಾಗುವಂತೆ ಅಪ್ರತಿಮ ಏರ್ಪಾಡಾಗಿರುವುದೆಂದು ಶ್ರೀ ರುಯಿಕರರು ಸೂಚಿಸಿ, ಈ ವಿಷಯದ ನಿರ್ಧಾರವು ಜೂನ್ ತಾ ೧೨ರಲ್ಲಾಗಿರುವಂತೆ, ಎಲ್ಲ ಗಿರಣಿ ಕಾಮಗಾರರ ಸಂಘಗಳ ಪ್ರತಿನಿಧಿಗಳನ್ನು ನಾಗಪುರಕ್ಕೆ ಕರೆದಿದ್ದಾರೆ

ಈ ಕೈಗಾರಿಕೆಯನ್ನು ಕುರಿತಾದ ರಿಪೋರ್ಟು, ತತ್ಸಂಬಂಧದಲ್ಲಾದ ಕಮಿಟಿಯವರಿಂದ ಸರಕಾರಕ್ಕೆ ತಲುಪಿ ಒಂದು ತಿಂಗಳು ಕಳೆದರೂ ಮಂತ್ರಿಗಳು ಅದರಲ್ಲಿನ ಶಿಫಾರಸುಗಳನ್ನಾಗಲಿ ಮನ್ನಿಸಿಲ್ಲವೆಂಟೇ ಮಹಾಮುಷ್ಕರವೊಂದು ಸರ್ವತ್ರವೂ ಪ್ರಾರಂಭವಾಗಲಿದೆ

ಶ್ರೀ ಸುಭಾಷಚಂದ್ರಬೋಸರು

ಕೊಂಗ್ರೆಸ್-ಲೀಗ್ ಸಂಭಾಷಣೆಗಳನ್ನು ಕುರಿತು ಏನಂತೆ?

ಅವರಿಗೆ ಇನ್ನೂ ಲೀಗಿನವರ ಪತ್ರ ತಲುಪಿಲ್ಲ (ತಾ 7) ಆದರೂ ಲೀಗಿನ ಮುಖಂಡರ ಮಹಾಭಿಪ್ರಾಯವನ್ನು ತಿಳಿದ ಬೋಸರು, ಐಕ್ಯ ಸಾಧನೆಯ ಸಮಸ್ಯೆಯನ್ನು ಕುರಿತು ಮಾತಾಡುವಾಗ,—"ಬರೀ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೀಗಿನ ಅಭಿಪ್ರಾಯವನ್ನು ಎಣಿಸಿ ಅಭಿಪ್ರಾಯಕೊಡುವುದು ಸರಿಯಲ್ಲ ಎಲ್ಲೆಲ್ಲಿಯೂ ಸಂಭಾಷಣೆ ಪತ್ರವ್ಯವಹಾರಾದಿಗಳಿಂದ ಫಲವೇನೂ ಉಂಟಾಗಲಾರದೆಂದು ನುಡಿಯುತ್ತಾರಾದರೂ, ಹಾಗೆನ್ನ ಬರುವುದಿಲ್ಲ ಈಗ ಕಡುಕತ್ತಲಾಗಿ ಹೋಗುವುದರಿಂದಲೇ ಸೂರ್ಯನು ಖಂಡಿತವಾಗಿ ಮೂಡುವ ವೇಳೆ ಬಂದಿದೆ ಎಂದು ತಿಳಿಯಬೇಡವೆ? ಜಿನ್ನಗವರ ಪತ್ರ ಬರ ಕೂಡಲೆ, ಪುನಃ ಸಂಭಾಷಣೆಗಳಿಗೂ ತೊಡಗುವುದು ಅತ್ಯವಸರದಲ್ಲಾಗದು ಆದರೂ ಪುನಃ ಕೊಂಗ್ರೆಸು ತನ್ನ ಉತ್ತರ ಕೊಡುವುದು ಆದರೆ, ಅದಕ್ಕೆ ಮೊದಲಾಗಿಯೇ, ಮಹಾತ್ಮಾಜಿಯವರೂ, ಕೊಂಗ್ರೆಸಿನ ಕಾರ್ಯಕಾರೀ ಮಂಡಲವೂ ವಿಮರ್ಶಿಸಿ, ಕೊಂಗ್ರೆಸಿನವರು ಹೇಳಿಕೆಯೊಡನೆ ಜಿನ್ನರವರ ಹೇಳಿಕೆಯನ್ನು ತೂಗಿನೋಡಿಯೇ ಒಂದು ಇತ್ಯರ್ಥ ಮಾಡುವರು" ಎಂದರು.

ಬೇರೆ ಧ್ವಜ-ಬೇರೆ ಸಂಸ್ಥೆ-ಬೇರೆ ರಿಯಾಯತಿ— ಎಲ್ಲವೂ ಇನ್ನೂ ಬೇರೆಯೇ ಎಂದ ಸಾರುತ್ತಿರುವ ಮುಸ್ಲಿಮ ಮುಖಂಡರಿರವಾಗ, ಇತ್ಯರ್ಥವಾಗಲಿರುವ ವ್ಯಾಖ್ಯವು ಪಕ್ಷಪಾತ ದೃಷ್ಟಿಯಿಂದ ಹಾಳಾಗುವಂತೆ ಪ್ರಯತ್ನಗಳಾಗುವಾಗ, ಕತ್ತಲು ಇನ್ನೂ ಕತ್ತಲಾಗುವುದೇ ವಿನಾ ಸೂರ್ಯೋದಯಕ್ಕೆ ಅವಕಾಶ ಕಡಿಮೆ ಎನಿಸದೆ?

ಪದುಕುವಂತಿಲ್ಲ ನವೆಂಬರಿನ ತನಕವಂತೂ ಈ ಕಾರ್ಯಕ್ರಮವು ಮುಂದರಿಯಲಾರದು.

~~ಚಿಕ್ಕದೊಂದು ರೌಂಡ್ ಟೇಬಲ್ ಕೊನ್ಫ~~ರೆನ್ಸನ್ನು ಕರೆಯುವರಂತೆ ಎಂಬ ವಾರ್ತೆಯು ಹರಡಿದೆಯಾದರೂ, ಸಿಮ್ಲಾದಲ್ಲಿ ಯಾವ ಆಫೀಸರರೂ ಇದನ್ನು ನಂಬುವುದೇ ಇಲ್ಲ ಆದರೆ, ವೈಸ್ರಾಯರು ಯೂರೋಪಿನಿಂದ ಹಿಂದೆ ಬಂದ ಬಳಿಕ, ಇಲ್ಲಿನ ಮುಖಂಡರನ್ನು ಕರೆಯಿಸಿಕೊಂಡು ಅಭಿಪ್ರಾಯ ಪಡೆದು, ಅದರ ಜತೆಯಲ್ಲಿ 6000 ಮೈಲು ದೂರದಲ್ಲಿ ಕೂತು ನಿಶ್ಚಯ ಮಾಡಿದ ಭಾರತಸಂರಕ್ಷಣೆಯ ಏರ್ಪಾಡನ್ನೂ ತಿಳಿಸಿ, ಫೆಡರೇಶನಿಗೆ ಮುಂದಾಲೋಚನೆ ಮಾಡಬಹುದು

ಮೂವರು ಮುಖಂಡರು ಜಿನ್ನರನ್ನು ಖಂಡಿಸಿರುವರು

ಮೊನ್ನಿನತನಕ ಮುಸ್ಲಿಮ ಲೀಗ್ ಪಕ್ಷದ ನಾಯಕರಾದ ಜಿನ್ನಾರವರ ಬಲಕೈಯಂತಿದ್ದವರಾದ ಮೌಲಾನಾ ಜಾಫಾರಾಲಿ ಖಾನ್, ಪಂಜಾಬ ಪ್ರಾಂತ್ಯದ ಎಸೆಂಬ್ಲಿ ಸದಸ್ಯರು, ಈಗ ಜಿನ್ನಾರಿಗೆ ವಿರೋಧವಾಗಿ ಚಳವಳ ಎಬ್ಬಿಸಿದುದರ ಕುರಿತು ವಾರ್ತೆಯು ಬಂದಿರುತ್ತದೆ. ಶ್ರೀ. ಜಾಫರ್ ಅಲಿಖಾನರೊಡನೆ ಇನ್ನೂ ಮೂವರು ಮುಸ್ಲಿಮ ಮುಖಂಡರು ಸೇರಿರುವರು.

"ಜಿನ್ನಾರವರು, ಮುಸ್ಲಿಮ ಲೀಗೂ, ಮುಸಲ್ಮಾನರ ನಿಜವಾದ ಪ್ರತಿನಿಧಿಯಲ್ಲವೆಂದೂ, ಮುಸ್ಲಿಮಲೀಗಿನ ಕೌನ್ಸಿಲಿನಲ್ಲಿ ಮುಸ್ಲಿಮರ ನಿಜವಾದ ನಾಯಕರನ್ನು ಸೇರಿಸಿಕೊಳ್ಳಲಿಲ್ಲವೆಂದೂ, ಅದು ಈಗ, ಭಾರತೀಯ ರಾಷ್ಟ್ರೀಯತೆಗೆ ವಿರೋಧವೆನಿಸುವ ಜನರಿರುವ ಒಂದು ಸಂಘವಾಗಿರುವುದೆಂದೂ ಜಿನ್ನಾರವರು, ಲೀಗಿನ, ಕೌನ್ಸಿಲಿನ ಚುನಾವಣೆಯಲ್ಲಿ, ಮುಸ್ಲಿಮರಲ್ಲಿ ಅನೇಕ ಸಂಗಡಗಳ ನಿರ್ಲಕ್ಷ್ಯ ಮಾಡಿರುವರೆಂದೂ, ತಮ್ಮ ತಮ್ಮ ಸ್ವಹಿತಗಳನ್ನು ರಕ್ಷಿಸಿಕೊಳ್ಳುವ ಕೆಲವರು ಜಿನ್ನಾರವರ ಮುಖಂಡತನದಲ್ಲಿ ಕೂಡಿರುವರೆಂದೂ, ಅಭಿಪ್ರಾಯ ಸೂಚಿಸ ಮೌಲಾನಾ ಜಾಫಾರಾಲಿ ಖಾನ್‌ರವರ ಸಂಪಾದಕತ್ವದಲ್ಲಿ ನಡೆಯುವ ಲಾಹೋರಿನ "ಜಮೀನ್ದಾರ" ಎಂಬ ಪತ್ರಿಕೆಯ ಅಗ್ರಲೇಖನದಲ್ಲಿದೆ

ಹಿಂದೂ ತರುಣಿಯೊಬ್ಬಳ ವಿವಾಹ ದೆಸೆಯಿಂದ ಗಲಿಬಿಲಿ

ಮೊದಲಿನ ಪತಿಯು ಜೀವಂತನಾಗಿರುವಾಗಲೇ?

ಅತ್ಯಂತ ಮಡಿವರ್ಗದ ಬ್ರಾಹ್ಮಣ ವರ್ಗದ ಇಚ್ಛಾವತಿ ದೇವಿ ಎಂಬ ಒರಿಸ್ಸಾ ಪ್ರಾಂತ್ಯದ ತರುಣಿಯು, ಮೊದಲಿನ ಪತಿಯು ಇರುವಾಗಲೆ, ಎರಡನೆ ಸಲ ವಿವಾಹವಾಗಿ ಆ ಮಡಿಬ್ರಾಹ್ಮಣ ವರ್ಗದಲ್ಲಿ ತುಂಬಾ ಗಲಿಬಿಲಿಗೆ ಕಾರಣವಾದಳು

ಒರಿಸ್ಸಾ ಪ್ರಾಂತ್ಯದ ಕಟ್ಟಾಕಿನ ಮಡಿಬ್ರಾಹ್ಮಣನೊಬ್ಬನ ಮಗಳು ಇಚ್ಛಾವತಿ ದೇವಿಯು ಹದಿನೆಂಟು ವರುಷಗಳ ಹಿಂದೆ ಆಕೆಯ ವಿವಾಹವು ಮಧುಸೂದನ ರಾವ್ ಎಂಬವನೊಡನೆ ನಡೆದಿತ್ತು ಆಗ್ಗೆ ದಂಪತಿಗಳಿಬ್ಬರೂ, ಪುಟ್ಟ ಬಾಲಕ, ಬಾಲಕಿಯರಾಗಿದ್ದರು

ಈ ವಿವಾಹದ ಶೋಭಾನ ಮಹೂರ್ತ ಬರಲು, ತಾನು ಬಾಲಕನಾಗಿರುವ ನಡೆದ ಈ ವಿವಾಹಕ್ಕೆ ತಾನು ಜವಾಬ್ದಾರನಲ್ಲವೆಂದು ಬೆಳೆದ ತರುಣನು ಅಂದುಬಿಟ್ಟ ಹುಡುಗಿಯನ್ನು ಮತ್ತೊಬ್ಬ ವಿವಾಹವಾಗುವರೆ ತನ್ನ ಅಡ್ಡಿಯಿಲ್ಲವೆಂದ ಹೇಳಿಬಿಟ್ಟ ಹಿಂದೂ ಕ್ರಮದ ಪ್ರಕಾರ ವಿವಾಹಕ್ಕೆ ವಿಚ್ಛೇದವಿಲ್ಲ ಆದರೆ ತರುಣನು ತನ್ನ ಮೊದಲಿನ ವಿವಾಹವನ್ನು ವಿಚ್ಛೇದ ಮಾಡುವ ಒಂದು ಕರಾರನ್ನು, ಹುಡುಗಿಗೆ ರಿಜಿಸ್ಟ್ರನಿಸಿ ಬರೆದುಕೊಟ್ಟ. ಆದರೂ ಕೂಡ ಹುಡುಗಿಯು ಮೂರು ವರ್ಷ ಕಾಲ ಆತನಿಗೋಸ್ಕರ ಕಾದುನಿಂತಳು ತರುಣನು ತನ್ನ ಮನವನ್ನೆ ಬದಲಾಯಿಸಲಿಲ್ಲ.

ತನ್ನ ಮೊದಲಿನ ಪತಿಗೆ ತಾನು ಬೇಡವಾದುದನ್ನು ನೋಡಿ, ಇಚ್ಛಾವತಿ ದೇವಿಯು, ನಿತ್ಯಾನಂದನೆಂಬವನನ್ನು ಎರಡನೆ ಸಲ ವಿವಾಹವಾದಳು ಮಡಿಬ್ರಾಹ್ಮಣರಲ್ಲಿ ಗದ್ದಲಕ್ಕೆ ಕಾರಣವಾದಳು

...ರಕಾರವು ಇದಕ್ಕಾಗಿ ಸಂದರ್ಭ ಕಾಯುತ್ತಲೇಯಿದೆ!

ಮೂವರು ಮುಖಂಡರು ಜಿನ್ನಾರವರನ್ನು ಖಂಡಿಸಿರುವರು!

ಕೊಂಗ್ರೆಸ್ ಕೂಟಗಳ ಸದ್ಯಸ್ಥಿತಿ

ಕೊಂಗ್ರೆಸು ಈಗಣ ಸ್ಥಿತಿಗೆ ಬಹು ಕ್ಲೇಶಗಳನ್ನು ತೆಗೆದು ಬೆಳೆದುಬಂದಿದೆ ಯಥಾರ್ಥವರ್ತನೆ, ನಿಷ್ಪಕ್ಷಪಾತ, ಲಂಚಹಿತತ್ವ, ನಿಪುಣತೆ, ಅರೆಹೊಟ್ಟೆಯಿಂದ ಜೀವಿಸುವವರಲ್ಲಿ ಅತಿದೀನರ ಸಲುವಾಗಿ ದುಡಿಯುವ ಬುದ್ಧಿ-ಇವುಗಳಿಗಾಗಿ ತಾನಿದೆಯೆಂದು ಕೊಂಗ್ರೆಸು ಕೋಟ್ಯಾವಧಿ ಜನಗಳಲ್ಲಿ ವಿಶ್ವಾಸವನ್ನುಂಟು ಮಾಡಿರುವುದು ಸರಕಾರಗಳಿಗೆ ಎದುರಾಡುವುದರಲ್ಲಿ ಅಗ್ರಗಣ್ಯವೆನಿಸಿಯದೆ. ಆದರೆ, ತಾನೇ ಸರಕಾರವನ್ನು ವಹಿಸುವುದರಲ್ಲಿ ಜಾಣವಾಗಿದೆ ಎಂದು ಮಾತ್ರ ಇನ್ನೂ ರುಜುಪಡಿಸಬೇಕಾಗಿದೆ ಮಧ್ಯಪ್ರಾಂತ್ಯದಲ್ಲಿ ಅದೀಗ ಅಷ್ಟಗುಣವನ್ನು ಉಳ್ಳುದಲ್ಲವೆಂದೇ ಹೇಳುವಂತಾಗಿರುವ ರುಜುವಾತು ದೊರೆತಿದೆ. ಆದರೆ ಮಧ್ಯಪ್ರಾಂತ್ಯದಲ್ಲಿ ಹೀಗೆ ಕೊಂಗ್ರೆಸಿಗೆ ಹುಳುಹಿಡಿದೆಯೆನ್ನುವುದು ಸರಿಯಾಗದು ಅಲ್ಲಿನ ಮಂತ್ರಿಗಳೊಳಗೇ ವೈಮನಸ್ಸು ಇದ್ದುದರಿಂದ ಅಲ್ಲಿನ ಹಳುವು ಹೊರಬಿತ್ತು, ಇಲ್ಲದಿದ್ದಲ್ಲಿ, ಈ ಹುಳುವು ಎಂದೂ ಪ್ರಕಟವಾಗುತ್ತಿರಲಿಲ್ಲ ಅಲ್ಲಿ ತೋರಿಸಿಕೊಟ್ಟಿರುವ ಪ್ರಮಾದಗಳನ್ನೂ ಸರ್ವರೂ ತಿಳಿದ ಎಚ್ಚರಗೊಂಡು, ಅಲ್ಲಿನ ಮಂತ್ರಿಗಳ ತಮ್ಮ ತಿದ್ದಿದ ನಡೆವಳಿಕೆದಿಂದ ಅವರು ಬರೀ ಮನುಷ್ಯಪ್ರಾಣಿಗಳಂತೆ ತಪ್ಪಿಹೋದರೂ ಧೀರತನದಿಂದ ತಿದ್ದಿಕೊಂಡು ಇನ್ನು ಎಂದೂ ತಪ್ಪದಂತೆ ಜಾಗರೂಕರಾಗಿದ್ದಾರೆಂದು ತೋರಿಸಿಕೊಳ್ಳುವರಾಗಿ ನಂಬಬೇಕಾಗಿದೆ

ಕಾಯಂ ಸರ್ವಿಸುಗಳಿಗಿಂತ ಕೊಂಗ್ರೆಸ್‌ವಾಲರು ಜಾಣರೆಂದು ತೋರಿಸುಕೊಳ್ಳಲು ಇನ್ನೂ ಸಮಯಬೇಕು. ಎಲ್ಲ ವಿಷಯಗಳ ಕೂಲಂಕಶವಾದ ಅನುಭವಗಳಿಸಿಕೊಳ್ಳದ ಯಾರೂ ಜನತೆಯನ್ನು ವರಿಪಾಲಿಸುವ ವಹಿವಾಟು ಮಾಡಲು ಅಶಕ್ತರು ಪೊಲೀಸರೂ ಸಿವಿಲಿಯಾನರೂ ಗೇಲಿಮಾಡದಂತೆ ಕೊಂಗ್ರೆಸ್‌ವಾಲರು ಜಾಣತನದಿಂದ ವರ್ತಿಸಬೇಕು ಒಂದರೆ, ಈ ಅಧಿಕಾರಿಗಳ ಮೇಲೆ ಕೊಂಗ್ರೆಸಿಗೆ ಹೆಚ್ಚಿನ ಅಧಿಕಾರವಿಲ್ಲ

ಕೊಂಗ್ರೆಸ್‌ವಾಲರು ತಮ್ಮ ಪ್ರೋತ್ಸಾಹಕರಿಗೆ ಬಂಧುಬಾಂಧವರಿಗೆ ಸ್ನೇಹಿತರಿಗೆ ಬೇಕಾಗಿರುವಂತೆ ವರ್ತಿಸಬಾರದು. ನೇಮಕಗಳನ್ನು ಮಾಡುವಾಗ ಯೋಗ್ಯತೆಯೊಂದನ್ನೆ ನೋಡಬೇಕು ಅಚತುರನಾದವನು ತನಗೂ ಕೊಂಗ್ರೆಸಿಗೂ ನಾಚುಗೆಯನ್ನುಂಟು ಮಾಡುವನು ಕೊಂಗ್ರೆಸಿಗೆ ಸೇರದಿರುವ ಯೋಗ್ಯನ ಚಾತುರ್ಯದಿಂದ ಕಾರ್ಯನಿರ್ವಹಿಸಿ ತನ್ನನ್ನು ನೇಮಕ ಮಾಡಿದ ಕೊಂಗ್ರೆಸ್ ಮಂತ್ರಿಗಳಿಗೂ ತನ್ನ ಹುದ್ದೆಗೂ ಸರಕಾರಕ್ಕೂ ಗೌರವ ತರುವದು ಎದುರಿರುವ ಉಮೇದುವಾರುಗಳಿಗೆ ಸರಿಸಮಾನರಾದರೂ ಇಲ್ಲದವರನ್ನು ಕೊಂಗ್ರೆಸಿನವರು ಅಥವಾ ಬಂಧುಗಳೆಂದು ಕೆಲಸಕ್ಕೆ ನೇಮಿಸಬಾರದು, ಇವರ ಸಂಬಳವೂ ಇವರ ಸಮಾನರಾಗಿರುವ ಇತರರಿಗಿಂತ ಕಡಮೆಯಿರಬೇಕು. ಕೊಂಗ್ರೆಸು ಅಧಿಕಾರದಲ್ಲಿರಬೇಕೋ, ಸಂಬಂಧಪಟ್ಟ ಸರ್ವರೂ ಸಮಸ್ತರ ವಿಶ್ವಾಸಪಾತ್ರರಾಗಿರಬೇಕೇ ವಿನಾ, ಇತರರು ಸಂಶಯಪಡುವುದಕ್ಕೆ ಕಾರಣ ಕೊಡುವವರಾಗಬಾರದು ಆಗ ತಾನೆ ಕೊಂಗ್ರೆಸಿನ ರಚನೆ ಬಂಡೆಯ ಮೇಲೆ ಕಟ್ಟಿದಂತೆ ಭದ್ರವಾಗಿದ್ದೀತು, ಎಂತಹ ಕುಘಾತನೂ ಹಾವಳಿಯನ್ನುಂಟುಮಾಡದು

[ಹರಿಜನಪತ್ರಿಕೆಯಲ್ಲಿ—M D.]

ರಾಜಕೀಯ ಕೈದಿಯ ತೃತೀಯ ಪತ್ನಿ.

ಮೊದಲೆ ಇರ್ವರು ತರುಣಿಯರ ಗಂಡನಾದ ರಾಜಕೀಯ ಕೈದಿಯೊಬ್ಬನಿಗೆ ಮೂರನೆ ಸಲ ವಿವಾಹ ಮಾಡಿಸಿ, ಪಂಜಾಬಿನ ಕೆಲ ಮಂದಿ ಕಾಂಗ್ರೆಸ್‌ವಾಲರು ಉಭಯ ಸಂಕಟಕ್ಕೆ ಒಳಗಾಗಿರುವರು

ಚೌಧುರಿ ಶೆರ್ ಸಿಂಗನೆಂಬವನು ಅಹಮ್ಮದ್ ನಗರ ಡಕಾಯಿಟಿ ಮೊಕದ್ದಮೆಯಲ್ಲಿ ಶಿಕ್ಷೆ ಹೊಂದಿದವನು, ಈಚೆಗೆ ಬಿಡುಗಡೆ ಮಾಡಲ್ಪಟ್ಟವನು. ಬಿಡುಗಡೆಯಾದ ಕೆಲವೆ ದಿವಸಗಳ ನಂತರ ಅವನು, ಕ ಮಾರಿ ನಿರ್ಮಲಾ, ಬಿ ಎ, ಎಂಬಾಕೆಯನ್ನು ವಿವಾಹವಾದನು ಈ ವಿವಾಹವು ನಡೆದುದು ಕೆಲವು ಕಾಂಗ್ರೆಸ್ ಮುಖಂಡರ ಸಹಾಯದಿಂದ. ವಿವಾಹ ಆದ ಕೆಲವೇ ದಿನಗಳ ನಂತರ ಸಿಂಗ ಸಿಂಧುಸಿರ್ಲಕ್ಷಿಸಲ್ಪಟ್ಟ ಆತನ ಮೊದಲಿನ ಈರ್ವರು ಪತ್ನಿಯರು ವಿಮೋಚನೆ ಹೊಂದಿದ ತಮ್ಮ ಪತಿದೇವನ ಬರುವಿಕೆಯನ್ನು ಮನ್ನೋಡ ವ ವಾರ್ತೆಯ ಈ ಕಾಂಗ್ರೆಸ್ ಮುಖಂಡರಿಗೆ ತಿಳಿಯ ಬಂತು

ಶೆರ್ ಸಿಂಗನ ಈ ಕೃತ್ಯದಿಂದ ಜನರಲ್ಲಿ ಅದರಲ್ಲೂ ಸ್ತ್ರೀಯರಲ್ಲಿ ತುಂಬಾ ಜಿಗುಪ್ಸೆಯು ಉಂಟಾಗಿರುವುದ

ಫ್ರೆಂಚ ಪ್ರಾಂತ್ಯದ ಮೇಲೆ ಸಿಡಿಗುಂಡುಗಳು!

ಮತ್ತೊಂದು ಕಿರುಕುಳ!

೬ ಭತ್ತ ಒಂದು ಒಟ್ಟಾದ ವಿಮಾನಗಳು ಸ್ಪೈನ್-ಫ್ರಾನ್ಸ್ ಸೇರಿರುವ ಗಡಿಯನ್ನು ದಾಟಿ, ಜನ್ ನಾ [illegible] ಸಿಡಿಗುಂಡುಗಳನ್ನು ಚೆಲ್ಲಿದುವು [illegible] ಹಾನಿಯಾದರೂ ಅಷ್ಟು ಪ್ರಾಣಾಪಾಯವಾಗಿಲ್ಲ [illegible] ಫ್ರೆಂಚ್ ರಾಜ್ಯದೊಳಕ್ಕೆ ೫೦ ಮೈಲಿ ದೂರ ಹಾರಾಡಿದವು

ಇವು ಸ್ಪೈನಿನವು ಫ್ರೆಂಚ್ [illegible] ಗುಂಡು ಹಾರಿಸುತ್ತಲೇ ಓಡಿಹೋದುವು. ಫ್ರೆಂಚ ಸರಕಾರದ ಮುಖ್ಯ ವ್ಯಕ್ತಿಗಳ ಆದೇಶದ ಮೇರೆಗೆ ಕೂಡಲೇ [illegible] ಜರುಗಿದ ಇಂತಹ ಘಟನೆ ಮತ್ತೆ ಆಗದಂತೆ ಸರಕಾರವು ಮುಂಜಾಗ್ರತೆ ತೆಗೆದುಕೊಳ್ಳುತ್ತಿದೆ

ಫ್ರೆಂಚ ರಾಜ್ಯದೊಳಗೆ ಸಿಡಿಗುಂಡೆಸೆದ ದಕ್ಷಿಣ [illegible] ಬಹಳವಾಗಿ [illegible] ಈ ವಿಮಾನಗಳು ಫ್ರೆಂಕೋವಿನದೆನ್ನುವುದಕ್ಕೆ ಕೆಲಪತ್ರಿಕೆಗಳ ಹಿಂತೆಗೆಯಲ್ಲ ಆದರೂ ವಿಮಾನಗಳು ಯಾರವೆಂದೆನ್ನುವುದಕ್ಕೆ ಯಾವ ಆಧಾರವೂ ದೊರೆತಿಲ್ಲ

'ಇಂತಹ ಆಕ್ರಮಣಗಳನ್ನು ವರ್ಗಿಸಿಯೇ ಬಿಡಬೇಕು ಫ್ರೆಂಕೋವು ಇಂತಹ ದುಷ್ಟ ಹುಚ್ಚಾಟಗಳನ್ನು ಮುಗಿಸಲಾರನಾದರೆ ~~ಆತನಿಗೆ ಪ್ರತೀಕಾರ ಮಾಡಲಾದೀತೆಂದು ಸರ~~ಕಾರವು ತಿಳಿಸಬೇಕು' ಎಂದೊಂದು ಪತ್ರಿಕೆ ಬರೆದಿದೆ

ಇಟಲಿಯಲ್ಲಿ ಅದು ರಷ್ಯದವರ ಸಹಾಯವುಳ್ಳ ಸರಕಾರದ್ದೇ ಕೆಲಸ. ಹೇಗೂ ಮಾಡಿ ವೇಷಪಲ್ಲಟಿಸಿದ ವಿಮಾನಗಳ ಮೂಲಕವಾದರೂ ಫ್ರೆಂಚರನ್ನು ಉದ್ರೇಕಗೊಳಿಸಿದರೆ, ಸ್ಪೈನಿನ ಅನಾಥ ಸರಕಾರವು ರಕ್ಷಣೆ ಹೊಂದುವ ಹಾಗೆ, ಯುರೋಪ ಖಂಡದಲ್ಲಿ ಯುದ್ಧವೊಂದು ತಲೆದೋರುವಂತಾಗುವುದಲ್ಲವೆ? ಎಂದೇ ಸ್ಪೈನ್ ಸರಕಾರವೇ ಮಾಡಿದ ಕೃತ್ರಿಮವಿದು ಎಂದು ಪತ್ರಿಕೆಗಳಲ್ಲಿದೆ.

ಒಂದು ಕುದುರೆಗೆ ೪೦ ಮೋಟಾರು ಕಾರುಗಳು

ಅಘಾಖಾನ್ ಹಿಟ್ಲರ್ ಭೇಟಿ!

ಕೆಲಸಮಯದ ಹಿಂದೆ ನಡೆದ ಮೇಲಿನ ಭೇಟಿಯ ಕುರಿತು ನಿಜವಾದ ವಾರ್ತೆಗಳು ಈಗ ತಿಳಿದು ಬಂದಿದೆ

ಹಿಟ್ಲರನು ಆಘಾಖಾನರ ಜೂಜಾಟದ ಕುದುರೆಗಳ ಕುರಿತು ಕುತೂಹಲವನ್ನು ಈ ಸಂಭಾಷಣೆಗಳಲ್ಲಿ ವ್ಯಕ್ತಪಡಿಸಿದನಂತೆ ಆಘಾಖಾನರಿಂದ ಒಳ್ಳೆ ಜಾತಿಯ ಕುದುರೆಯೊಂದನ್ನು ಪಡೆಕೊಂಡ ಜರ್ಮನಿಯ ಕುದುರೆ ಜಾತಿಯನ್ನು ಉದ್ಧರಿಸುವ ದೃಷ್ಟಿಯಿಂದ, ಅದರ ಬೆಲೆಯನ್ನು ಕೇಳಿದನಂತೆ ಬೆಲೆಯು [illegible] ಸಾವಿರ ಪೌಂಡುಗಳೆಂದ ಆಘಾಖಾನರು ಹೇಳಿದೊಡನೆ, ಹಿಟ್ಲರನ ಅವಾಕ್ಕಾದನು ಆದರೆ ಸ್ವಲ್ಪ ಸಮಯದ ನಂತರ ಆತನು ಚೇತರಿಸಿಕೊಂಡು, ಒಂದಿಷ್ಟು ಆಲೋಚನೆ ಮಾಡಿದವನಾಗಿ,' ಬದಲಿಗೆ ನಮ್ಮ ೪೦ ಮೋಟಾರು ಕಾರುಗಳನ್ನು ಕೊಟ್ಟರೆ, ನೀವೊಂದು ಕುದುರೆಯನ್ನು ಕೊಡುವಿರೊ' ಎಂದು ಕೇಳಿದನಂತೆ ಅದಕ್ಕೆ ಆಘಾಖಾನರು ಅವುಗಳಿಂದ ನನಗೇನು ಪ್ರಯೋಜನ,—ಲಂಡನ ಕೇಂದ್ರದಲ್ಲಿ ಒಂದು ಮೋಟಾರು ಪ್ರದರ್ಶನವನ್ನು ತೋರಿಸುವುದೆ? ಎಂದರಂತೆ

ಅಲ್ಲಿಗೆ ವ್ಯವಹಾರವು ಮುಗಿಯಿತಂತೆ

ಬ್ರಿಟನಿನಲ್ಲಿ ಸಾಮಾಜಿಕ ದುರವಸ್ಥೆ

ಬಿಶೋಫರೊಬ್ಬರು ಲೋರ್ಡರನ್ನು ದೂರುತ್ತಿದ್ದಾರೆ

ಬ್ರಿಟನಿನ ಸದ್ಯದ ಸಾಮಾಜಿಕ ಸ್ಥಿತಿಯು ಹೇಗಿದೆ ಈ ಪ್ರಶ್ನೆಗೆ ಉತ್ತರವಾಗಿ [illegible] ಸ್ಟನ್ [illegible] ಬಿಶೋಪರು [illegible] ಕ್ತಿರವು

[illegible] ಬ್ರಿಟನ್ [illegible] ಆದರ್ಶ [illegible] ಮನ್ನಣೆ [illegible] ಸಾಮಾನ್ಯ ಜನ [illegible] ಹೆಚ್ಚಿನ ಕರದಲ್ಲಿ ಈ [illegible] ವರ್ತಿಸ [illegible] ಲೋರ್ಡ [illegible] ಹಿಡಿದದ [illegible]

[illegible] ಸಮ್ಮಸ್ಯೆ [illegible] ಸಾಮಾಜಿಕ [illegible]

[illegible] ವರ್ಗದವರ [illegible] ಏನೇ ವಿಷಯ [illegible]

ಇಂಗ್ಲೀಷ ಜೀವನಕ್ರಮಗಳಿಗೆ ಮಾರ್ಗದರ್ಶಕರೆ [illegible] ಲೋರ್ಡರೆ ಈ [illegible] ಮಾಡಿದರೆ ಆಗ ಇತರ ಜನರ ಪಾಡೇನ

ಹಿಟ್ಲರನ ನಾಜಿ ಪ್ರಚಾರ

ಯಹೂದ್ಯರ ಮೇಲೆ ನೂತನ ಅಸ್ತ್ರಪ್ರಯೋಗ

ಯಹೂದ್ಯರೆಂದರೆ ನರರಾಕ್ಷಸರು ಎಂಬ ಅಭಿಪ್ರಾಯವನ್ನು ಹುಟ್ಟಿಸುವ ಕಥೆಗಳಿರುವ ಒಂದು ಕಥಾವಳಿಯು, ಹಿಟ್ಲರನ ಜರ್ಮನಿಯಲ್ಲಿ ಶಾಲಾ ಹುಡುಗರ ಉಪಯೋಗಕ್ಕಾಗಿ ಪ್ರಕಟವಾಗಿರುತ್ತದೆ. ಜರ್ಮನ್ ಹುಡುಗರು ಯಹೂದ್ಯರ ಮೇಲೆ ತಿರಸ್ಕಾರ ದೃಷ್ಟಿಯನ್ನು ಹೊಂದಲು ಸರಕಾರದ ಈ ಉಪಾಯವಂತೆ. ಈ ಕತೆಗಳನ್ನು ಹುಡುಗರಿಂದ ಓದಿ ಕೇಳಲೇಬೇಕೆಂಬ ಒತ್ತಾಯವು ಉಪಾಧ್ಯಾಯ[illegible]

ಹಿಟ್ಲರನನ್ನು ಝೆಕ್ಕರು ಎದುರಿಸಿದುದರ ಪರಿಣಾಮ

ಫ್ರಂಕೋವಿನ ಸೇನೆಯಲ್ಲಿ ದಂಗೆ

ಸ್ಪೈಯಿನಿನ ಸರಕಾರಕ್ಕೆ ಉಳಿಗಾಲ ವೆನ್ನಬಹುದು ಈ ದಂಗೆಯ ಮಾತು ಸತ್ಯವಾದರೆ! ಇದು ವರೆಗೆ ಸರಕಾರವು ಆತ್ಮರಕ್ಷಣೆಯನ್ನು ಮಾಡಿಕೊಂಡಿರುವುದು ಅತ್ಯದ್ಭುತವಾದ ಮಹಿಮೆಯ ಬಲದಿಂದಲೇ ಫ್ರೇಂಕೊವು, ಆತನನ್ನು ಪ್ರತಿನಿಧಿಯಾಗಿಟ್ಟು ಕೆಲಸ ಮಾಡಿಸುವ ಸರಕಾರಗಳೂ ಎಣಿಸಿದಷ್ಟು ಬೇಗನೆ ಆತನೂ, ಜಯ ಹೊಂದಿಲ್ಲ ಜರ್ಮನರೂ ಇಟಲಿಯನರೂ ಫ್ರೆಂಕೋವಿಗಾಗಿ ಕಾದಿರುವರಾದರೂ, ಇನ್ನು ಅವರಿಗೆ ಸಹನೆ ಮುಗಿದಿದೆ, ಜಯವು ದೂರವೇ ಇದೆ ಅವರನ್ನು ಕರ್ಕಶರಾಗಿ, ಫ್ರೆಂಚ್ ನಾಡಿನೊಳಕ್ಕೂ ನುಸುಳಲು ಹಿಂತೆಗೆದಿಲ್ಲ ಪುನಃ ಹೀಗೆ ಮಾಡಿದಲ್ಲಿ ಫ್ರೆಂಚ ಕಾವಲುಗಾರರು ಈ ವಿಮಾನಗಳನ್ನು ಮುಗಿಸದೆ ಬಿಡಲಾರರು, ಝೆಕ್ಕರು ಹಿಟ್ಲರನಿಗೆ ಅಲ್ಲಿದ್ದ ಜರ್ಮನರ ಪ್ರಚಾರದಲ್ಲಿ ಕೊಟ್ಟ ಎದುರುಮಾತುಗಳಿಂದ, ಪ್ರಜಾಪಕ್ಷೀಯುಳ್ಳ ಸರಕಾರಗಳಲೆ ಹೊಸ ಜೀವ ಸಲ್ಲಿಯುವ ಹಾಗಾಗಿದೆ [illegible] ಭೆಸಿಸ್ಟರು ಗೆದ್ದುದಿಲ್ಲ, ಇನ್ನು ಗೆಲ್ಲುವುದು ಕಠಿನವಾಗಿದೆ ಫ್ರಂಕೋವಿಗೆ [illegible] ಸಹಾಯ ಕಡಿದಂಗೆಯೆ [illegible]ರಿಗಿರುವುದೆಂದು ತಿಳಿದುಬರುತ್ತದೆ

ಯಹೂದ್ಯರು ಜರ್ಮನರ ಮೇಲೆ ಅತ್ಯಾಚಾರ ನಡೆಯಿಸುವ ಕಥಿತ ವಿಷಯಗಳು ಈ ಕಥೆಗಳಲ್ಲಿ [illegible] ಸೇರಿಸಿದೆಯಾಗಿಯೂ ಈ ಕಥೆಗಳನ್ನು ಓದುವುದರಿಂದಲೆ ಜರ್ಮನರಲ್ಲಿ ಯಹೂದ್ಯರ ಮೇಲೆ ವೈರತ್ವ ಬೆಳೆಯುವಂತಿದೆ ಎಂದು [illegible] ಬರುತ್ತದೆ

ಶಾಲಾಹುಡುಗರಿಗೆ ನೂತನ ಎಟ್ಲಾಸು

ಜರ್ಮನ್ ಶಾಲೆಗಳ ಉಪಯೋಗದ [illegible] ನೂತನ ತರದ ಒಂದು ಎಟ್ಲಾಸ್ ಪುಸ್ತಕ [illegible] ಭೂಗೋಳದೊಡನೆ, [illegible] ಇದರ [illegible] ಜರ್ಮನಿಯ [illegible] ಪ್ರಚಾರ ಮಾಡು[illegible] ಜರ್ಮನಿಯ [illegible] ಸಾಧನ [illegible] ಒಟ್ಟಾಗಿದೆ

ವಿಯನ್ನಾದಲಿ ನಾಜಿತತ್ವವು.

ವಿಯನ್ನಾದಲ್ಲಿನ ಶಾಲೆಗಳ ವಾಚನಾ[illegible] ಪೂರ್ಣ ಬದಲಾವಣೆ [illegible] [illegible] ಮತ್ತು ಅವ [illegible] ಜರ್ಮನ್ ಸಂಸ್ಕೃತಿಯೇ [illegible] ಲಿ [illegible] ಶ್ರೇಷ್ಠವೆಂದ ಅಭಿಪ್ರಾಯವನ್ನು ತೋರಿಸುವ ಪುಸ್ತಕಗಳ ನಿರ್ಭರ [illegible] ಲಾಗಿದೆ

ಶಾಂತಿತತ್ವವನ್ನು ಮತ್ತು ಜನಾಂಗಮುಂದಲದ ಕುರಿತ ಆಲೋಚನೆಗಳನ್ನು ತೋರಿಸುವ ಪುಸ್ತಕಗಳು ಹೊರತಳ್ಳಲಾಗಿವೆ

ಧರ್ಮಾನುರಾಗವನ್ನು ಹೊರಡಿಸುವ ಪುಸ್ತಕಗಳು ಹೊರಗಿಡಲಾಗಿವೆ

ಯಹೂದ್ಯರಿಂದ ಮತ್ತವರ ಬೆಂಬಲಕ್ಕಿರುವ ಜನರಿಂದ ಬರೆಯಲ್ಪಟ್ಟ ಪುಸ್ತಕಗಳು ನಿಷೇಧಿಸಲ್ಪಟ್ಟಿವೆ.

ನಾಜಿತತ್ವ ಪ್ರಚಾರಕ್ಕೆ ಅನುಕೂಲವಾಗುವ ತರದ ಪುಸ್ತಕಗಳನ್ನು ಮಾತ್ರ ಇಡಲಾಗಿದೆ.

ಝೆಕೊಸ್ಲೊವಾಕಿಯದ ಧ್ವನಿ

ಕಷ್ಟಪಡುತ್ತಿದ್ದ ನಿಜ. ಇಲ್ಲದಿದ್ದರೆ, ಸ್ಲೊವಾಕಿಯ ತನಗೆ ಸ್ವರಾಜ್ಯ ನಮಗೆ ಬೇರೆ ಬೇಕೆಂದೇಕೆ ಹಟ ಹಿಡಿಯುತ್ತಿದ್ದುದೇಕೆ? ಜರ್ಮನ್ನರು ತನ್ನ ಮೈನೋರಿಟಿಗೆ ತೀರ ಉತ್ಕೃಷ್ಟವಾದ ಹಕ್ಕನ್ನು ಕೇಳುತ್ತಿದ್ದುದೇಕೆ? ಉತ್ತರದ ಪೋಲೆಂಡೂ ತನ್ನವರಿಗಾಗಿ. ಈ ರಾಜ್ಯದಲ್ಲಿ ಸಲ್ಲದ ಸ್ಥಾನಮಾನಗಳಿಗೂ ದಕ್ಷಿಣದ ಹಂಗೇರಿಯೂ ತನ್ನವರು ತನಗೆ ಬರಲೆಂದೂ ಒತ್ತಾಯ ಮಾಡುತ್ತಿದ್ದುದೇಕೆ?

ಝೆಕೊಸ್ಲೊವಾಕಿಯದ ಜರ್ಮನರ ಪ್ರಜಾಸತ್ತಾತ್ಮಕವಾದ ಗಳ ಸಮೂಹದ ಒಂದು ಲಕ್ಷಜನರದೊಂದು ಮೆರವಣಿಗೆಯು ಪ್ರೇಗ್ ನಗರದಲ್ಲಿ ಕಾಲಿರಲ್ಲಿ ಮೆರೆಯಿತು. ಸ್ಲೊವಾಕರ 60,000 ಮಂದಿ ಅದೇ ಸಮಯ ಬ್ರೆಟಿಸ್ಲಾವದಲ್ಲಿ ನೆರೆದು, ಸ್ಲೊವಾಕಿಯವು ಸ್ವತಂತ್ರವೆಂದು ನಿರ್ಣಯವಾದ 20ನೆಯ ವಾರ್ಷಿಕೋತ್ಸವವನ್ನೂ ಆಚರಿಸಿತು.

ಆಗಲೇ, ಒಂದೂವರೆ ಮಿಲ್ಲಿಯ ಸಂಖ್ಯೆಯ ಸ್ಲೊವಾಕರಿಗೆ ಸಂಪೂರ್ಣ ಸ್ವರಾಜ್ಯ ದಾನ ಮಾಡಬೇಕೆಂಬ ಅದೊಂದು ಮಸೂದೆಯನ್ನು ಸ್ಲೊವಾಕೀಯ ಭಾಷೆಯಲ್ಲೇ ಬರೆದು ಅದೇ ರಾಜ್ಯದ ಭಾಷೆಯಾಗಬೇಕೆಂದೂ, ಸ್ಲೊವಾಕರೇ ಸೈನ್ಯದಲ್ಲಿರಬೇಕೆಂದೂ, ಇತರ ವಿಷಯಗಳು ಇಡೀ ರಾಜ್ಯಕ್ಕೆ ಸಂಬಂಧವುಳ್ಳವಾಗಬಹುದೆಂದೂ ಸಹ ಒಪ್ಪಿಸಿರುವುದು ಮಹತ್ವದ ವಿಷಯವಾಗಿದೆ.

"ನಾವು ಝೆಕೊಸ್ಲೊವಾಕಿಯ ದೇಶಕ್ಕೆ ಸೇರಿದವರು ನಿಜ. ಆದರೆ ನಾವು ಮನುಷ್ಯರಾಗಿ ಬಾಳಬೇಕೆಂದಿದ್ದೇವೆ, ಗುಲಾಮರಾಗಿ ಅಲ್ಲ. ನಮಗೆ ತೃಪ್ತಿಯಾದಲ್ಲಿ ಮಾತ್ರ ನಾವು ಝೆಕ್ಕರೊಡನೆ ಮೈತ್ರಿಯಿಂದಿರುವೆವು. ಇಲ್ಲವೆ, ನಮ್ಮ ಉಪಾಯ ಬೇರೆ. ನಾವು ಸೋವಿಯಟ್ಟಿಗೆ ವಿರುದ್ಧರು, ಕೊಮ್ಯೂನಿಸ್ಟರು ನಮಗೊಲ್ಲದವರು. ನಮಗೆ ಸ್ವತಂತ್ರರಾಗಿರಬೇಕೆಂಬಾಸೆ, ನಮ್ಮ ದೇಶವು ಸುರಕ್ಷಿತವಾಗಿರಬೇಕು" ಎಂದು ಸ್ಲೋವಾಕ ಮುಖಂಡನಾದ ಫಾದರ್ ಹ್ಲಿಂಕನ ಘರ್ಜನೆ.

ಸ್ಲೊವಾಕರಿಗೆ ಅಲ್ಲಿನ ಪಾರ್ಲಿಮೆಂಟಿನಲ್ಲಿರುವ ಸೇಕಡಾ 29 ಸ್ಥಾನಗಳಲ್ಲಿ ಕೆಲವು ಸ್ಥಾನದವರು ಮಾತ್ರ ಈ ಪಂಗಡಕ್ಕೆ ಸೇರಿದವರು. ಬಹುಸಂಖ್ಯಾಕರು ಸೇರಿಲ್ಲ. ಹೀಗಾಗಿ ಇವರೊಳಗೊ ಒಡಕು ಇದೆ. ಇಷ್ಟು ಚೂರುಗಳಾಗಿ ಝೆಕೊಸ್ಲೊವಾಕಿಯವು ಒಡೆದು ಹೋಗುವಂತೆ ಈಗ ವಿದ್ಯಮಾನಗಳಾಗಿರುವಾಗ,— ಈ ರಾಜ್ಯದ ಇರವಿಗೆ ಇನ್ನು ದೇವರೇ ಗತಿ.— ಇದರ ಹಿತವನ್ನು ಆಧರಿಸಿದೆ ಮಧ್ಯಯೂರೋಪಿನ ಶಾಂತಿ.

ಮತ್ತೊಂದು ಫೆಡರೇಷನು!

ಅಖಿಲ ಭಾರತದ ಜಮೀನ್ದಾರರ ಮಹಾಸಮೂಹ!

ಇದೊಂದು ಕಲ್ಕತ್ತದಲ್ಲಿ ಸ್ಥಾಪನೆ ಹೊಂದುವ ಸಂಸ್ಥೆ. "ಬ್ರಿಟಿಷ್ ಇಂಡಿಯದ ಪ್ರಾಂತ್ಯಗಳಲ್ಲೂ ದೇಶೀಯರಾಜ್ಯಗಳಲ್ಲೂ ಇರುವ ಎಲ್ಲ ಜಮೀನ್ದಾರರನ್ನು ಕೂಡಿಸಿಕೊಂಡು 'ಈ ಸಂಘವು, ದೇಶದ ಐಕ್ಯವನ್ನು ಮುರಿಯುವ ಪ್ರಾದೇಶಿಕವಾದದ ಪ್ರಯತ್ನಗಳನ್ನು ಮುರಿಯುವಂತೆ.

ಜಮೀನ್ದಾರರುಗಳಿಗೆ ಇರುವ ಮೂಲ ಹಕ್ಕುಗಳನ್ನು, (ಇವು ರೈತಒಕ್ಕಲುಗಳ ಮೂಲ ಹಕ್ಕುಗಳಿಗೆ ತೀರ ಸನಿಹದ ಸಂಬಂಧವುಳ್ಳವಾಗಿರುವ ಪ್ರಯುಕ್ತ,) ಕಡಿಮೆ ಮಾಡುವ ಎಲ್ಲ ಪ್ರಯತ್ನಗಳನ್ನು ಈ ಸಂಘವು ಎದುರಾಡಿ ಮುರಿಯುವುದಂತೆ.

ಅದಲ್ಲದೆ, ಕೃಷಿಕರ್ಮಕ್ಕೆ ಸಂಬಂಧವಿರುವ ಸಮಸ್ತರನ್ನು ಒಂದಾಗಿಸಿ, ಜಮೀನ್ದಾರರು ಒಕ್ಕಲುಗಳೊಳಗೆ ಉತ್ತಮ ಸಂಬಂಧಗಳು ಬೆಳೆವಂತೆ ಮಾಡಲು ಉಪಯುಕ್ತವಾದ ಎಲ್ಲ ಸಾಧನಗಳ ಮೂಲಕವಾಗಿ ಸಾಂಪತ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉಂಟುಮಾಡುವುದಂತೆ.

ವರ್ಗಗಳೊಳಗೆ ದ್ವಂದ್ವ, ವಾಣಿಜ್ಯ ಮತ್ತು ಇತರ ಹೋರಾಟಗಳು, ಕ್ರಾಂತಿಕಾರರ ಉಪಟಳಗಳು ಮೊದಲಾದುವನ್ನು ಅಣಗಿಸುವುದಂತೆ.

ಕನಡದಷ್ಟೆ ಯುಕ್ತವಾದ ಡೊಮಿನಿಯನ್ ಸ್ಟೇಟಸನ್ನು ನಮಗೆ ಒದಗಿಸುವರೆ ಶಾಸನ ಸಮ್ಮತವಾದ ಚಳವಳ ಮಾಡುವುದಂತೆ.

ದೇಶೋದ್ಧಾರಕ್ಕಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದಂತೆ.

150 ಮೆಂಬರರಿರುವ ಈ ಸಂಘಕ್ಕೆ ಮದ್ರಾಸಿನವರು 20 ಸದಸ್ಯರಂತೆ.

ಸೋಯಾಬೀನ್ಸುಗಳಿಂದ ರೇಷ್ಮೆ

ಜಪಾನೀಯ ವಿಜ್ಞಾನಿಯೊಬ್ಬನ ಹೊಸ ಶೋಧ.

ಸೋಯಾಬೀನುಗಳಿಂದ ಕೃತಕ ರೇಷ್ಮೆಯನ್ನು ತಯಾರಿಸುವ ಉಪಾಯವೊಂದು ಜಪಾನೀಯ ವಿಜ್ಞಾನಿಯೊಬ್ಬನು ಕಲ್ಪಿಸಿರುವನು.

ಈ ರೇಷ್ಮೆಗೆ ನಿಜವಾದ ರೇಷ್ಮೆಗಿಂತ ಹೆಚ್ಚಿನ ತರದ ಗುಣಗಳಿವೆಯೆಂದೂ ತಿಳಿದುಬರುತ್ತದೆ.

ಈ ತರದ ರೇಷ್ಮೆಯನ್ನು ಸಿದ್ಧಪಡಿಸಲು ಒಂದು ದೊಡ್ಡ ಕಾರ್ಖಾನೆಯು ಸ್ಥಾಪನೆಯಾಗಿರುತ್ತದೆ. ಈ ತರದ ಮೂವತ್ತು ಟನ್ನು ರೇಷ್ಮೆಯು ಈ ವರ್ಷ ಸಿದ್ಧವಾಗುವುದಂತೆ.

ಕೆನ್ಸರನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

"ಕೆನ್ಸರು ಬೆಳೆಯುವ ಮೊದಲೇ ನಮ್ಮ ಬಂದರೆ ಅದನ್ನು ನಾವು ಸಂಪೂರ್ಣವಾಗಿ ಗುಣಪಡಿಸುವೆವು" ಎಂಬುದಾಗಿ ಇಂಗ್ಲಾಂಡಿನ ಪ್ರಸಿದ್ಧ ವೈದ್ಯರು ಹೇಳಿಕೊಳ್ಳುತ್ತಿರುವರು.

ರೇಡಿಯಮ್ ಬಲ್ಬುಗಳನ್ನು ಉಪಯೋಗಿಸಿ, ಕೆನ್ಸರನ್ನು ಕ್ರಮೇಣವಾಗಿ ತೆಗೆದುಬಿಡಬಹುದಂತೆ. ಈ ಉಪಾಯದಿಂದ, ಮುಖ, ತುಟಿ, ಚರ್ಮ ಇತ್ಯಾದಿಗಳ ಮೇಲೆ ಕೆನ್ಸರನ್ನು ಗುಣಪಡಿಸಿರುವರಂತೆ.

ಬಾಲಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಾದ, ಲಿವರ್ ...
ಪ್ಲೀಹದ ಬೆಳವಣಿಗೆ ರೋಗವನ್ನು ... ಸುವ ... ಕಡೆಯ ...
... ಗುಣಗಳ ... ಔಷಧಿ
... ವಿಧಗಳ ... ದವಾಖಾನೆ
...
ಆಯುರ್ವೇದ ... ಮದ್ರಾಸು
ಪ್ರವರ್ತಕರು - ಅಮರ್‌ಚಂದ್ ಸೊಭಾಚಂದ್, ಮದ್ರಾಸು

ಗಾಡಿಯವನೇ ಒಂದು ನಿಮಿಷ ಎತ್ತಿ ನಡೆದರೆ ಆಗ ಅದರ ಭಾರದ ಅರಿವು ಹುಟ್ಟೀತು. ಹಾಗೆಯೆ, ಮಂತ್ರಿಗಳಿಗೆ ಈ ಸುಧಾರಣೆಯು ಸುಲಭವಲ್ಲವೆಂಬ ಅಭಿಪ್ರಾಯವು ತಿಳಿದೇ ಇದೆ. ಜನರು ಗಾಡಿಯಲ್ಲಿ ಸವಾರಿಮಾಡುವವರಂತಿದ್ದು, ಮಂತ್ರಿಗಳು ಗಾಡಿಯನ್ನು ಬೇಗನೆ ಓಡಿಸಲೆನ್ನುವರು. ಆದರೆ ಎತ್ತುಗಳು ಪಕ್ಕ ಬದಲಾಯಿಸಿವೆ. ಗಾಡಿ ಎಳೆವುದು ಕಷ್ಟವಾಗಿರುವಲ್ಲಿ ಸವಾರರು ಕೆಲವೇಳೆ ಗಾಡಿಯನ್ನು ಎತ್ತಿ ಸ್ವಲ್ಪ ದೂಡಲೂ ಬೇಕಾಗುವುದುಂಟಲ್ಲವೇ? ಹಾಗೆಯೇ ಜನರು ಧಾರಾಳವಾಗಿ ಸರಕಾರದ ಹುದ್ದೆದಾರರಿಗೆ ಸಹಾಯಕರಾಗಬೇಕು. ... ಮಾತ, ... ಯು ಸುಲಭವಾಗಬಹುದು. ಆಫೀಸರರ ... ಜನರಿಗೆ ನೆರವಾಗಿರುವಂತೆ, ಜನರೇಕೆ ಆಫೀಸರರಿಗೆ ... ಸಹಾಯ ಮಾಡದಿರಬೇಕು?

(ರಾಜಾಜಿಯವರ ಭಾಷಣದಿಂದ)

ವಿಶಿಷ್ಟ ಗುಣಗಳಿಂದ ಕೂಡಿದ 'ಸೆವೆನೊ ಕ್ಲೊಕ್ ಸೆಕ್ಯೂರಿಟಿ ಸೆಟ್ಟು' ... ವಾಗಿರುವುದು. ಇದ ... ಸೆವೆನೊ ಕ್ಲೊಕ್ ಬ್ಲೇಡುಗಳೊಂದಿಗೆ ಒಂದು ಸುಂದರವಾದ ಅಂದದ ಪೆಟ್ಟಿಗೆಯಲ್ಲಿ ... ಸೆವೆನೊಕ್ಲೊಕ್ ಬ್ಲೇಡು ... ಸುಖದಾಯಕ ... ಮಾಡಲು ಅನುಕೂಲ ... ಕಡಿಮೆ ... ಇಂದೇ ಪಡೆಯಿರಿ ...

12 ಆಣೆಗಳು



7 o'clock
SLOTTED BLADE
7 O'CLOCK
7 O.S.

ವೀರ ನಾಚಿಯಪ್ಪನ್

ಈತನು ತಿರುಚಿ ಗೋಡು ತಾಲೂಕಿನ ಕುಮಾರಂಡಿ ಪಾಳ್ಯದ ... ವಳನು. ... ವರ್ಷಗಳ ಹಿಂದೆ, ಈತನು ಅಲ್ಲಿ ಕಳ್ಳಸಾರಾಯಿ ಮಾಡುತಿದ್ದವರನ್ನು ಕುರಿತು ಸರಕಾರಕ್ಕೆ ತಿಳಿಸಿ ಪತ್ತೇ ಮಾಡಿಸಿ ಅವರನ್ನು ದಂಡನೆ ಹೊಂದುವಂತೆ ಮಾಡಿದ್ದನು. ಅದಕ್ಕಾಗಿ ಅವನ ಕಣ್ಣುಗಳನ್ನು ದ್ವೇಷದಿಂದ ... ಗಳು ಕಿತ್ತಿದ್ದರು. ಈಗ 21 ವಯಸ್ಸಿನ ಈ ಕುರುಡನು ನಾಲ್ಕುತ್ತ ಕಳೆದ ತಿಂಗಳಲ್ಲಿ 21000 ಯಾರ್ಡು ನೂಲನ್ನು ತಯಾರಿಸಿರುವನು. ಅಲ್ಲಿಗೆ ತೆರಳಿದ ಮಂತ್ರೀಶ್ವರ ರಾಜಾಜಿಯವರು ಈತನೊಡನೆ ಕುಶಲ ಸಂಭಾಷಣೆ ಮಾಡಿದರು.

ಜನರ ಮೇಲಣ ಜವಾಬ್ದಾರಿ

ಮದ್ಯನಿವಾರಣೆಯನ್ನು ಕೈಕೊಂಡ ಜವಾಬ್ದಾರಿಯು ಬಲು ಕಠಿನವಾದುದು. ಅಬ್ಕಾರೀ ಇಲಾಖೆಯವರೇ ಜಿಲ್ಲೆಯಲ್ಲಿಲ್ಲ. ಕಲೆಕ್ಟರರೂ ಪೋಲೀಸರೂ ಈ ಜವಾಬ್ದಾರಿಯನ್ನು ಹೊರಬೇಕಾಗಿದೆ. ಗಾಡಿಯವನು ಎತ್ತನ್ನು ಹೊಡೆದು ಎತ್ತೆಯುದರಿಂದ ದಾರಿ ನಡೆಸಲು ಸಂತೋಷಪಡುವನು ನಿಜ, ಆದರೆ, ಅದೇ ಗಾಡಿಯನ್ನು

KANTI
Toilet Soap

ಡಿಸ್ಟ್ರಿಬ್ಯುಟರರು —
ಎಸ್. ಆರ್. ನ್ಯಾಕ್ ಎಂಡ್ ಕೋ,
ಮಂಗಳೂರು.

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕ 'ಕಾಂತಿ' ಟೊಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು

'ಕಾಂತಿ' ಸಾಬೂನನ್ನು ಹಿಂದೂಸ್ತಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಟಲೆ ಜನರು ಪ್ರೀತಿಸಿ ಉಪಯೋಗಿಸುವರು

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ.

WANTED

Agents for Silk Shirting, Coating, Sarees, etc. Pay Rs. 100 P. A. Extra. Ask free samples and particulars.

Girson Knitting Works,
Ludhiana.

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ಗೋಚರಿಸುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್ ಕೆ ಶೆಟ್, ಜುವೆಲ್ಲರ್,
ಮಂಗಳೂರು

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ ಆ
ಬೆಲ್ಲ, ಗುಡ್ಡ ಪಟ.	1 —14	1 —14
ರಾಶಿ ಅಕ್ಕಿ ...	3— 8	4— 0
ಸುಗ್ಗಿ .	4 —2	4— 2
ಗುಡ್ಡು ...	4— 8	4— 8
ಊರ ಅವ್ವಲ್ ಬೆಳ್ತಿಗೆ ..	4— 7	4— 7
ರಂಗೂನು ಬೆ ಗೋ ಗೋ. ಗ್ಳೈ ..	7 — 2	7— 4
ಎಲ್ಲೂರು ಬೆ. ಪಾ. ಗ್ಳೈ. .	3—14	4— 0
ಗೋದಿ ಗೋಣಿ ಗ್ಳೈ ...	13 — 0	14— 8
ತೊಗರಿ ಗೋಣಿ ಗ್ಳೈ ..	11— 8	13— 8
ಹುರುಳಿ ಗೋಣಿ ಗ್ಳೈ	6— 0	6— 2
ಕಡಲೆ ಗೋಣಿ ಗ್ಳೈ ...	9 — 8	10 — 8
ತೊಗರಿಬೇಳೆ ಗೋಣಿ ಗ್ಳೈ .	17— 8	18— 0
ಉದ್ದು ಗೋಣಿ ಗ್ಳೈ	9— 0	9 — 8
ಹೆಸರು ಗೋಣಿ ಗ್ಳೈ	9—12	10— 8
ಊರುಬೆಲ್ಲ ಖಂಡಿ ಗ್ಳೈ .	36— 0	40— 0
ಉಪ್ಪು ಗೋಣಿ ಗ್ಳೈ	4— 8	5— 4
ಕೊಬ್ರಿ ಖಂಡಿ ಗ್ಳೈ	46 — 8	16— 8
ಎಳ್ಳೆಂಡಿ ಖಂಡಿ ಗ್ಳೈ .	25 —	26 — 0
ತೆಂಗಿನ ಎಣ್ಣೆ ಮಣ ಗ್ಳೈ	3 — 7	3— 7
ಎಳ್ಳೆಣ್ಣೆ ಮಣ ಗ್ಳೈ	6— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗ್ಳೈ	6— 5	7— 5
ಮೋರಿಸ್ ಸಕ್ಕರೆ ಮ. ಗ್ಳೈ	2— 13	2 —14
ಪುಣಸು	4— 8	6— 0
ಸಾಸಿವೆ ಮುಡಿ ಗ್ಳೈ	5 — 8	6— 6
ಕಾಳುಮೆಣಸು ಹ ವೇಗೆ..	16 — 0	17 8
ಯೇಲಕ್ಕಿಬೀಜ ಮಣಗ್ಳೈ	80— 0	85— 0
ಗೇರುಬೀಜ ಮು ಗ್ಳೈ	3—14	3—15
ಕಬ್ಬಿಣ ಖಂಡಿ ಗ್ಳೈ	50— 0	55— 0
ತಾಂಬ್ರತಗಡು ಮ ಗ್ಳೈ	14— 12	15— 0
ತಾಂಬ್ರಪಾತ್ರಗಳು ಮ ಗ್ಳೈ	14— 8	15— 0
ಚೀನಿಬೆಳ್ಳಿ ಸೇರು ಗ್ಳೈ	13— 8	14— 0
ಹಿತ್ತಾಳೆ ತಗಡು ಮ ಗ್ಳೈ	12— 0	12— 0
ಪವನು ಗ್ಳೈ	2 — 8	2 — 0
ಹುಣಸೆ ಹುಳಿ ಖಂಡಿ ಗ್ಳೈ	40— 0	45— 0
ನೇಟಿವ್ ಕಾಫಿ ಖಂಡಿ ಗ್ಳೈ	110— 0	148 0
ಪ್ಲಾಂಟೇಶನ್ ಕಾಫಿ ಖಂಡಿ ಗ್ಳೈ	185— 0	195— 0
ಪಾಡಿಶೇರಿ ಏಲಕ್ಕಿ ಮಣ	30— 0	39 — 0

ಡೋಂಗರೇ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ಪುಷ್ಟಕಾಯರೂ ಪುಷ್ಟರೂ ಆಗುತ್ತಾರೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಜಗತ್ಪ್ರಸಿದ್ಧ ಆಯುರ್ವೇದೀಯ ಔಷಧಗಳು.

ಶ್ರೀಕರ ಕಸ್ತೂರಿ ಮಾತ್ರೆ

ಮಕ್ಕಳಿಗೆ ಸಂಜೀವನ, ಯುವಕರಿಗೆ ಮಿತ್ರ, ವೃದ್ಧರಿಗೆ ಆರೋಗ್ಯಪ್ರದ ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ದೇಶಗಳಲ್ಲೂ, ಎಲ್ಲಾ ಹವಗಳಲ್ಲೂ ಶರೀರವನ್ನು ರಕ್ಷಿಸುತ್ತದೆ ಅಜೀರ್ಣವನ್ನು ಪರಿಹರಿಸುತ್ತದೆ ಸೊಂಕ ರೋಗಗಳನ್ನು ನಿವಾರಣೆ ಮಾಡುತ್ತದೆ ಅಬಾಲವೃದ್ಧರಿಗೂ ಕೆಮ್ಮು, ವಿಧವಿಧ ಜ್ವರ, ನೆಗಡಿ, ಹಲ್ಲುನೋವು ಉಬ್ಬಸ, ಅತಿಸಾರ, ಆಲಸ್ಯ ಮುಂತಾದ ಶೀತವಾತದಿಂದ ಉಂಟಾಗುವ ಸಮಸ್ತ ರೋಗಗಳನ್ನೂ ಜಾಗ್ರತೆ ಗುಣಪಡಿಸುತ್ತದೆ ಬಾಣಂತಿಯರಿಗೆ ಅಮೃತತುಲ್ಯವಾದುದು ಎಲ್ಲಾ ಕಾಲದಲ್ಲೂ ಸಿಮ್ಮನ್ನು ಕಾಪಾಡುವುದು
ಬೆಲೆ —2 ಮತ್ತು 4 ಆಣೆ

ಬಾಲಸಂಜೀವಿನಿ

ಈ ಅಮೃತವು ಮಕ್ಕಳಿರುವ ಮನೆಯಲ್ಲಿ ಸರ್ವದಾ ಇರಬೇಕಾದುದು 1 ವರ್ಷದ ಲಾಗಾಯತು 10 ವರ್ಷದ ವರೆವಿಗೆ ಉಪಯೋಗಿಸಬಹುದು 1-2 ಮಾತ್ರೆಗಳನ್ನು ವಯೋಗುಣವಾಗಿ ಆಗಾಗ್ಯೆ ಉಪಯೋಗಿಸಿದರೆ ಸುಖವಾಗಿ 2-3 ವೇಳೆ ಬೇದಿಯಾಗಿ ಮಕ್ಕಳಿಗೆ ಯಾವ ರೋಗವೂ ಬರಲಾರದು. ಅಸಾಧ್ಯವಾದ ಪಕ್ಕೆ ಶೀತ ವಿಧವಿಧ ವಾಯು, (Convulsions and fits), ಹೊಟ್ಟೆಯುಬ್ಬರ ಮಂದಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ಮಲಬಂಧಗಳಲ್ಲಿ ಒಂದು ಹೊತ್ತಿನ ಔಷಧದಿಂದಲೇ ಅದ್ಭುತ ಗುಣವು ತೋರುವುದು
50 ಮಾತ್ರೆ 4 ಆಣೆ.

ಗೋರೋಚನ ಮಾತ್ರೆ

ಈಗ ಹುಟ್ಟಿದ ಮಗುವಿನಿಂದ ಐದು ವರ್ಷಗಳ ವರೆವಿಗೆ ಉಪಯೋಗಿಸಬಹುದು. ಬಹಳ ಸೂಕ್ಷ್ಮ ಪ್ರಕೃತಿಯುಳ್ಳ ಮಕ್ಕಳಿಗೆ ಸುಖವಾಗಿ 1-2 ವೇಳೆ ಮಾತ್ರ ಭೇದಿ ಮಾಡಿಸುವುದರಲ್ಲಿ ಈ ಮಾತ್ರೆಗಳು ಕೈಗೊಂಡ ಸಿದ್ಧಾಮೃತ ಯಾವ ಮಕ್ಕಳಿಗೆ ಗೋರೋಚನ ಮಾತ್ರೆಯಿಂದ ಭೇದಿಯಾಗುವುದಿಲ್ಲವೋ ಅಂಥಾ ಮಕ್ಕಳಿಗೆ 'ಬಾಲಸಂಜೀವಿನಿ ಮಾತ್ರೆ'ಯನ್ನು ಉಪಯೋಗಿಸಬಹುದು.
24 ಮಾತ್ರೆ 6 ಆಣೆ.

ಜ್ವರ ಕೇಸರಿ

ಸಮಸ್ತ ವಿಧವಾದ ಛಳಿಜ್ವರ, ಮಲೇರಿಯಾಜ್ವರ, ಪ್ಲೇಗುಜ್ವರ, ಇನ್‌ಫ್ಲುಯಾನ್ಜಾಜ್ವರ, ವಿಷಮ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ
ಬೆಲೆ — 8 ಆಣೆ

ಆಮೋದಿನಿ

ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳು 25 ವರ್ಷಗಳಿಂದಲೂ ಜನರ ಪ್ರೀತಿಯನ್ನು ಸಂಪಾದಿಸಿರುವುದು. ಸಂಗೀತಗಾರರಿಗೆ ಸುಖವಾಗಿ ಹಾಡಲು ವಿಶೇಷ ಸಹಾಯ ಮಾಡುವುದು ಬಾಯ್ದುರ್ವಾಸನೆಯನ್ನು ಶಮನಮಾಡುವುದು. ಸೊಂಕು ರೋಗಗಳು ಶರೀರಕ್ಕೆ ಅಂಟದಂತೆ ಶರೀರವನ್ನು ಕಾಪಾಡುವುದು ಮಕ್ಕಳ ಮತ್ತು ದೊಡ್ಡವರ ಕೆಮ್ಮನ್ನು ತಕ್ಷಣ ಪರಿಹರಿಸುವುದು. ಅಬಾಲವೃದ್ಧರೂ ಪ್ರೀತಿಯಿಂದ ಸೇವಿಸಲು ಅರ್ಹವಾಗಿದೆ.
ಬೆಲೆ. —0—4—0, 0—2—0

ನಮ್ಮ ನಂಜನಗೂಡು ಸದ್ವೈದ್ಯಶಾಲಾದಲ್ಲಿ ತಯಾರಾಗುವುದೇ "ನಂಜನಗೂಡು ಟೂತ್-ಪೌಡರ್" ಎಂಬುದು ಜ್ಞಾಪಕದಲ್ಲಿರಲಿ. ನಕ್ಕಲ್ ಮಾಲುಗಳನ್ನು ಕೊಂಡು ಮೋಸಹೋಗಬೇಡಿರಿ. ಕ್ಯಾಟಲಾಗನ್ನು ಬರೆದು ತರಿಸಿರಿ.

ಸದ್ವೈದ್ಯಶಾಲಾ, ನಂಜನಗೂಡು.

ಶಾಲಿವಾಹನ ಶಕ ೧೮೫೯ನೆಯ ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಶು ೧೩ ಶನಿವಾರದಿಂದ ಜ್ಯೇಷ್ಠ ಬ ೪ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ ವೃಷಭ ಮಾಸ)

[illegible]	[illegible]	[illegible]	[illegible]	[illegible]	[illegible]	[illegible]	[illegible]
11	ಶ	[illegible]	[illegible]	[illegible]	[illegible]	[illegible]	ಜ್ಯೇಷ್ಠ 14 ... [illegible]
12	ರವಿ	[illegible]	[illegible]	ಜ್ಯೇಷ್ಠಾ	[illegible]	[illegible]	
13	ಸೋಮ	[illegible]	[illegible]	ಜ್ಯೇಷ್ಠಾ	[illegible]	[illegible]	
14	ಕುಜ	[illegible]	[illegible]	ಮೂಲಾ	[illegible]	[illegible]	
15	ಬುಧ	[illegible]	[illegible]	ಪೂ.ಷಾಢ	[illegible]	[illegible]	
16	ಗುರು	[illegible]	2	ಉ.ಷಾಢ	[illegible]	[illegible]	
17	ಶುಕ್ರ	[illegible]	[illegible]	ಶ್ರವಣಾ	[illegible]	[illegible]	

THE PIE-MONEY BANK LTD,

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auctions ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—K R. GURU, *Managing Director*

Use the soaps

KNOWN ALL OVER

WISCO'S.

MINAR
&
TAJAMAHAL 'Red'

Bar Soaps.

POPULAR IN THE MARKET

Sole-Distributer:-

P. G. KAMATH,
Kashmir House,
Marnamikatta, MANGALORE.

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,
Anarkali, LAHORE.

★ ಚಿತ್ರ-ವಿಚಿತ್ರ ★

(ಎರಡನೇ ಪುಟದಿಂದ ಮುಂದುವರಿದುದು)

ಸ್ತ್ರೀ ಸ್ವಾತಂತ್ರ್ಯದ ಪರಿಣಾಮ

ಸಣ್ಣ ಮನೆ, ಸಣ್ಣ ಕಾರು, ಚಿಕ್ಕ ಸಂಸಾರದ ಹುಚ್ಚು ನಮ್ಮವರಿಗೆ ಹಿಡಿದುದರ ಫಲವಾಗಿ ಜನಾಂಗದೇಳಿಗೆಗೆ ಧಕ್ಕೆ ಬಡಿದಂತಾಗುವುದು. ಇಂದು ಸ್ತ್ರೀ ಸ್ವಾತಂತ್ರ್ಯದ ಪರಿಣಾಮವಾಗಿ ಜನನಗಳು ಕಡಿಮೆಯಾಗುತ್ತಾ ಬಂದವೆ. ಜನಸಂಖ್ಯೆಯ ಕಡೆಗೆ ಜನನಿಜನಿಕರ ದೃಷ್ಟಿಯೇ ಕಡಿಮೆ ಎಂದು ಲಿವರ್‌ಪೂಲಿ ಹೆಲ್ತ ಆಫೀಸರರಾದ ಡಾ। ಡಬ್ಲ್ಯು. ಎಂ. ಫ್ರೇಜರ್ ಎಂಬವರ ಅಭಿಪ್ರಾಯ. ಇರಲಿ ಹಿಟ್ಲರ್ ಮುಸ್ಸೋಲಿನಿಯವರು ಜನಸಂಖ್ಯೆಯನ್ನೇರಿಸಲಿಕ್ಕೆ ಕಂಡು ಹಿಡಿದ ವಿಧಾನವನ್ನು ಪರಿಶೀಲಿಸಿ ಇವರೂ ಬೋಧಿಸತೊಡಗಿದರು.

ಹಾವು ಆಡಿನಂತೆ ಕೂಗುತ್ತದೆ?

ಬೆಚ್ಚಾಲೇಂಡಿನ ಜನರ ಒಂದು ಕಟ್ಟು ಕಥೆಯು ಈಗ ಪ್ರಕಾಶಕ್ಕೆ ಬಂದಿದೆ. ಹಾವು ಆಡಿನ ಹಾಗೆ ಕೂಗಬಲ್ಲುದಂತೆ!

ಮೊಲಿಪ್ಲೋಲ್ ಎಂಬಲ್ಲಿಂದ ೬ ಮೈಲು ದೂರದಲ್ಲಿರುವ ಕಾಡು ಒಂದನ್ನು ಕಡಿಯಲಿಕ್ಕಾಗಿ ಒಬ್ಬ ಜೈಲು ಗಾರ್ಡರನ್ನೂ ನಾಲ್ಕು ಮಂದಿ ಕೈದಿಗಳನ್ನೂ ಕಳುಹಿಸಲಾಯಿತು. ಅವರ ಪೈಕಿ ಒಂದು ದೊಡ್ಡ ಪೊಟ್ಟರೆಗೆ ತಗಲಿತು ಮತ್ತು ಇಬ್ಬರು ಅದರ ದೊಡ್ಡ ಹೆಡೆಯನ್ನು ನೋಡಿದರು. ಇದನ್ನು ಕೇಳಿ ಎಲ್ಲರೂ ಬೆನ್ನಿಗೆ ಕಾಲು ಕೊಟ್ಟು ಮೂರು ಮೈಲು ದೂರದ ಚಿಕ್ಕ ಹಳ್ಳಿಗೆ ಓಡಿದರು. ಓಡುವಾಗ ಅವರು ಆ ಸರ್ಪವು ಆಡಿನಂತೆ ಕೂಗುವುದನ್ನು ಕೇಳಿದರು.

ಮರುದಿನ ಈ ಘಟನೆಯು ನಡೆದ ಸ್ಥಳವನ್ನು ಪರೀಕ್ಷಿಸಲಾಗಿ ಏನೂ ಕುರುಹು ತೋರಲಿಲ್ಲ. ಆದರೆ ಆ ಸರ್ಪವನ್ನು ನೋಡಿದವರು ಈ ವಿಚಿತ್ರ ಸಂಗತಿಯನ್ನು ಈ ರೀತಿ ವಿವರಿಸುತ್ತಾರೆ.

೫೦ ವರ್ಷಗಳ ಹಿಂದೆ ಆ ಸರ್ಪವನ್ನು ನೋಡಿದ ಒಬ್ಬನು ಅದು ಸುರುಳಿಕೊಂಡಿದ್ದ ಕಾರಣ ಅದರ ತಲೆಯನ್ನು ನೋಡಲಾಗಲಿಲ್ಲವೆಂತಲೂ, ಆದರೂ ಆತನು ಆ ಪ್ರಾಣಿಯು ಮತ್ತೆ ತನ್ನ ಸುರುಳಿವಿಕೆಯಿಂದ ಹೊರಬಂದು ಅದು ಹೋದಂತೆ ದೊಡ್ಡ ದೊಡ್ಡ ಕಲ್ಲುಗಳು ಉರುಳಿದುದನ್ನೂ ಅದರ ಘರ್ಜನೆಯು ದೊಡ್ಡದೊಂದು ಹುಲಿಯ ಘರ್ಜನೆಯ ಹಾಗಿತ್ತು ಎಂತಲೂ ತಿಳಿದುಬಂದುದನ್ನು ಆತನು ತನ್ನ ಯಜಮಾನನೊಡನೆ ನಿವೇದಿಸಲು ಆತನು ಆ ಪ್ರಾಣಿಯನ್ನು ಕೊಲ್ಲಲಿಕ್ಕಾಗಿ ಜನರನ್ನು ಕಳುಹಿಸಿದನು.

ಅವರು ಆ ಸ್ಥಳವನ್ನು ತಲಪುವ ಮುಂಚೆ ಅದು ಮಾಯವಾದುದಾಗಿಯೂ ತಿಳಿಯಿತು. ಆದರೂ ಅಲ್ಲಿ ಆ ಪ್ರಾಣಿಯು ಗುಹೆಯನ್ನು ಈಗಲೂ ನೋಡಬಹುದಾಗಿದೆಯಂತೆ.

ಇನ್ನೊಬ್ಬ ನಿವಾಸಿಯು ಅಂಥ ಮೃತ ಸರ್ಪವನ್ನು ನೋಡಿದುದಾಗಿಯೂ ಅದು ೩೦ ಕಲಿ ದನಕರುಗಳನ್ನು ಆ ರಾತ್ರಿ ತಿಂದುದಾಗಿಯೂ ಅದು ಸಾಧಾರಣ ೨೦ ಫೀಟಿಗಿಂತಲೂ ಉದ್ದವಿದ್ದುದಾಗಿಯೂ ಹೇಳುತ್ತಾನೆ.

ದೇಹ ಪ್ರಮಾಣ

ಅಂಥಾ ಸರ್ಪಗಳು ಸಾಧಾರಣ ೨೦ ರಿಂದ ೪೦ ಫೀಟು ಉದ್ದವಿರುವುದಾಗಿಯೂ, ಅದರ ತಲೆಯು ಆಡಿನ ತಲೆಯಂತೆ ಇರುವುದಾಗಿಯೂ ಅದರ ತಲೆಯ ಮಧ್ಯ ಭಾಗದಲ್ಲಿ ಒಂದು ಚಿಕ್ಕ ಕೊಂಬು ಇರುವುದೆಂತಲೂ ಮತ್ತು ನಾಲ್ಕು ಚಿಕ್ಕ ಕಾಲುಗಳಂತಿರುವ ಮಾಂಸಪಿಂಡಗಳಿರುವುದಾಗಿಯೂ ಹೇಳುತ್ತಾರೆ. ಅಲ್ಲದೆ ಅದರ ತಲೆಯು ಆಡಿಗಿಂತಲೂ ಸಾಧಾರಣ ಒಂದು ಮುಖದ ಆಕಾರದಲ್ಲಿರುವುದೆಂತಲೂ, ಅದರ ಮೂಗಿನ ಹೊಳ್ಳೆಗಳಿಂದ ಅದು ಒಂದು ನಮೂನೆಯ ಪ್ರಾಣಹಾರಕ ಹೊಗೆಯನ್ನು ಬಿಡುವುದಾಗಿಯೂ ಅದರ ಕೂಗು ಆಡಿನಂತೆಯೂ, ಹಲವರು ಕುದುರೆಯು ಕೆನೆಯುವಂತೆಯೂ ಇರುವುದಾಗಿಯೂ ಹೇಳುತ್ತಾರೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 18/1938.

ನಾರಾಯಣ ಭಟ್ಟ—ವಾದಿ

ಮತ್ತು

ಸುಬ್ರಾಯ ಭಟ್ಟ ಸಹ-ಪ್ರತಿವಾದಿರು.

ಇವರೊಳಗೆ

5ನೇ ಪ್ರತಿವಾದಿ ವೆಂಕಟ್ರಮಣ ಭಟ್ಟ, 6ನೇ ಪ್ರತಿವಾದಿ ಕೃಷ್ಣ ಭಟ್ಟ, ವೆಂಕಟೇಶ ಭಟ್ರ ಮಗ ಗೋವಿಂದ ಭಟ್ರ ಮಕ್ಕಳು, ಕುಂಬಡಾಜೆ ಗ್ರಾಮದ ಬಲೆಕ್ಕಳ. 1ನೇ ಪ್ರತಿವಾದಿ ವಗೈರೇರು ವಾದಿಗೆ ತಾ. 28—9—1918ಲ್ಲು ಬರ ಕೊಟ್ಟ ಅಡವಿನ ಬಾಬ್ತು ಒಂದು ವರುಷದ ಬಡ್ಡಿ ರೂ. 60—0—0ಕ್ಕೂ ಅದರ ಬಡ್ಡಿಗೂ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು 24-6-1938ಲ್ಲು ಅಖೈರು ತನಿಖೆ ಬಗ್ಗೆ ಇಡೋಣಾಗಿಯದೆ. ಆ ದಿವಸ ಪ್ರತಿವಾದಿರು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ತಾರೀಖು 3—6—38, ಕಾಸರಗೋಡು.

B. Amrit Rao,
Vakil for Plaintiff.

ಎರಡು ಹಾವುಗಳು ಕೊಲ್ಲಲ್ಪಟ್ಟವು

ಒಬ್ಬನು ಸ್ವಲ್ಪ ವರ್ಷಗಳ ಹಿಂದೆ ತನ್ನ ಆಡುಗಳನ್ನು ಆಕ್ರಮಣ ಮಾಡಿದ ಇಂಥಾ ಎರಡು ಹಾವುಗಳನ್ನು ಕೊಂದುದಾಗಿಯೂ, ಅವು ಸಾಧಾರಣ ೨೦ ಫೀಟು ಉದ್ದವಿದ್ದು ಎರಡು ಚಿಕ್ಕ ಕೊಂಬುಗಳುಳ್ಳದಾಗಿಯೂ, ಅದು ಬೂದು ಬಣ್ಣದಾಗಿದ್ದು ಎರಡು ಚಿಕ್ಕ ಕೋರೆ ಹಲ್ಲುಗಳುಳ್ಳದಾಗಿದ್ದುವೆನಂತೆ.

ಹಲವರು ಅಂಥಾ ಸರ್ಪಗಳು ಇರಲಿಕ್ಕೆ ಕಾರಣವಿರುವುದೆಂತಲೂ, ಅವುಗಳು ಮುಪ್ಪಿನಲ್ಲಿ ಮನುಷ್ಯರಿಗೆ ಕಾಣಿಸಿಕೊಳ್ಳುವುದಾಗಿಯೂ ಅದರ ಕೂಗು ಅಪಸ್ವರದಿಂದ ಗಂಡಾಂತರದ್ದಲ್ಲವೆಂತಲೂ ಹೇಳುತ್ತಾರೆ.

Canara Bank Limited
BANTWAL.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಅಡವಿನ ಮೇಲೆ ಸದ್ರಿ ಬೇಂಕಿನಿಂದ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಕೊಡದೆ, ಆ ಕುರಿತು ರಿಜಿಷ್ಟ್ರ ನೋಟೀಸು ಕೊಟ್ಟಲ್ಲಿ ಸದ್ರಿ ಅಸಾಮಿಗಳ ಪೈಕಿ ಕೆಲವರು ಮೃತಪಟ್ಟಿದ್ದಾರಾಗಿಯೂ, ನೋಟೀಸುಗಳು ವಾಪಾಸು ಬಂದಿರುವುದರಿಂದಲೂ, ಕೆಲವರು ನೋಟೀಸ್ಸು ಪಡೆಕೊಂಡು ಬಡ್ಡಿ ಕೊಡದೇ ಇರುವುದರಿಂದಲೂ, ಸದ್ರಿ ಸಾಲಗಳಿಗೆ ಜವಾಬ್ದಾರಿಯಾಗಿರುವ ಡಾಗಿನೆಗಳನ್ನು ಇದೇ ಬರುವ ಜುಲ್ಯಾ ತಾ॥ 6ನೇ ಬುಧವಾರ, ಮಧ್ಯಾಹ್ನ ಗಂಟೆ 12ಕ್ಕೆ, ಯಾ ಬ್ಯಾಂಕಿಗೆ ಯುಕ್ತ ಕಂಡ ಬೇರೆ ಯಾವುದಾದರೂ ಒಂದು ದಿವಸ, ಪುನಃ ನೋಟೀಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು ಎಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

(1) ಸಾಲದ ನಂಬ್ರ L 829/35, ವೆಂಕಟ್ರಾಯ ಆಚಾರ್ಯ, ರಾಮಣ್ಣ ಆಚಾರ್ಯನ ಮಗ, ಕಾವಲಪಡೂರು ಗ್ರಾಮ. ಪೋಸ್ಟು ವಗ್ಗಾ. ಅಸಲು ರೂ. 115—0—0.

(2) ಸಾಲದ ನಂಬ್ರ L 899/35, ಅಬ್ದುಲ್ ರಹೀಮಾನ ಬ್ಯಾರಿ, ಇದಿನೆ ಹಾಜರ ಬ್ಯಾರಿ ಮಗ, ಉಲ್ತೂರು ಗ್ರಾಮ, ಪೋಸ್ಟು ವೇನೂರು. ಅಸಲು ರೂ. 40—0—0.

(3) ಸಾಲದ ನಂಬ್ರ L 1095/35, ಅಬ್ದುಲ್ ರಹೀಮಾನ್ ಬ್ಯಾರಿ, ಇದಿನೆ ಹಾಜರ ಬ್ಯಾರಿಯ ಮಗ, ಉಲ್ತೂರು ಗ್ರಾಮ, ಪೋಸ್ಟು ವೇನೂರು. ಅಸಲು ರೂ. 40—0—0.

(4) ಸಾಲದ ನಂಬ್ರ L 757/36, ಇದಿನೆ ಬ್ಯಾರಿ, ಅಬ್ದುಲ್ ರಹೀಮಾನ ಬ್ಯಾರಿ ಮಗ, ಅಮುಂಜೆ ಗ್ರಾಮ, ಪೋಸ್ಟು ಗುರುಪುರ. ಅಸಲು ರೂ. 10—0—0.

(5) ಸಾಲದ ನಂಬ್ರ L 254/37, ಸಂಕು ಶೆಟ್ಟಿ, ಜಾರು ಆಳ್ವನ ಅಳಿಯ, ಕುರಿಯಾಳ ಗ್ರಾಮ, ಪೋಸ್ಟು ಬಂಟ್ವಾಳ. ಅಸಲು ರೂ. 25—0—0.

Office of the Bank, Bantwal, 4—6—1938.

B. Damodar Baliga,
Agent.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ನಮ್ಮ ಆಫೀಸುಗಳು:
1. ರಥಬೀದಿ ಮಂಗಳೂರು.
2. ಪುತ್ತಿಯಾರ ಕಲ್ಲಿಕೋಟೆ.
3. ಪಿ. ಬಿ. 387 ಮೌಂಟ್ ರೋಡ್ ಮದ್ರಾಸು. (ಟೆಲಿಫೋನ್ ನಂಬ್ರ 8245)
4. ವಿಶ್ವೇಶರಪುರಂ ಸರ್ಕಲ್ ಬೆಂಗಳೂರು ಸಿಟಿ. (ಟೆಲಿಫೋನ್ ನಂಬ್ರ 2182.)
5. ಗೌತಮ ನಿವಾಸ್, ಚಾರ್ನಿ ರೋಡ್, ಗಿರ್‌ಗಾಂವ್, ಬೊಂಬಾಯಿ. (ಟೆಲಿಫೋನ್ ನಂಬ್ರ 26314.)

ಇನ್ಸ್‌ಪೆಕ್ಟೋರೇಟ್ ಆಫೀಸು:
6. ಒಟ್ಟಪಾಲ, ದಕ್ಷಿಣ ಮಲಬಾರು.
7. ಸೆಂಟ್ರಲ್ ಸ್ಟೇಶನ್ ರೋಡ್, ತ್ರಿವೇಂಡ್ರಮ್.

ಮದ್ರಾಸು ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,
(ಕೊಚ್ಚಿಕಾರ್ ಬ್ರದರ್ಸ್ ರಿಜಿಸ್ಟರ್ ಆದುದು)
ರಿಜಿಸ್ಟರ್ಡ್ ಆಫೀಸು: ಉಡುಪಿ.

ಜೀವವಿಮಾಕಾರ್ಯದಲ್ಲಿ ಅತ್ಯಾಧುನಿಕ ವಿಶೇಷ ನೂತನ ಸೌಕರ್ಯಾದಿಗಳನ್ನು ಒದಗಿಸುವ

ಆದರ್ಶ ಜೀವವಿಮಾ ಸಂಸ್ಥೆ

ಪ್ರಗತಿಯು ಪ್ರಖ್ಯಾತಿಯನ್ನು ಸೂಚಿಸುತ್ತದೆ.

ನೂತನ ವಹಿವಾಟು	ರೂ. 1,40,08,725
ವಿಮಾಕಂತುಗಳಿಂದ ಆದಾಯ	ರೂ. 30,00,000ಕ್ಕೆ ಮಿಕ್ಕುತ್ತದೆ
ಒಟ್ಟು ಆಸ್ತಿಪಾಸ್ತಿಯು	ರೂ. 100,00,000ಕ್ಕೆ ಮಿಕ್ಕುತ್ತದೆ
ಈ ವರೇಗೆ ಕ್ಲೇಮುಗಳಿಗೆ ಸಂದದ್ದು	ರೂ. 50,00,000ಕ್ಕೆ ಮಿಕ್ಕುತ್ತದೆ.

ಉತ್ತಮ ಪ್ರತಿಫಲದ ಮೇಲೆ ಏಜನ್ಸಿಗಳಿಗಾಗಿ, ಒಳ್ಳೆ ಗುಣವಂತ ಮತ್ತು ಪ್ರಭಾವಶಾಲಿ ಸ್ತ್ರೀ ಪುರುಷರಿಂದ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗುವುದು.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,
ಬೊಂಬೆ ಲ್ಯಾಫ್ ಕಟ್ಟಡ,
ಸೆಂಟ್ರಲ್ ಆಫೀಸು: ಉಡುಪಿ.

ನೆಹಾಸ್ ಪಾಷಾ, ಇಜಿಪ್ತದ ಮುಂದಾಳು

ಇವರೊಡನೆ ಒಂದು ದಿನ

★ ★ ★

ಪ್ರೊಫೆಸರ್ ಎನ್. ಆರ್ ಮಾಲಕಾನಿ ಯವರು ಇಜಿಪ್ತಿಗೆ ಹೋದಾಗ, ಮೇ ತಾ. ೧ ರಲ್ಲಿ ನೆಹಾಸ್ ಪಾಷಾರವರಿಂದ ಅವರ ಭೇಟಿ ಕರೆ ಬರಲು, ಇಜಿಪ್ತಿನ ಮಾಜಿ ಮಂತ್ರಿಗಳ ಒಬ್ಬರನ್ನು ಕಾಣುವ ಸುಯೋಗ ದೊರೆತುದಕ್ಕಾಗಿ ಇವರು ತೆರಳಿದರು. ದಿಲ್ಲಿಯಲ್ಲಿರುವ ಅಧಿಕಾರಿಗಳ ಬಂಗಲೆಗಳಂತಹ ಮನೆ; ಯುರೋಪಿಯನ್ ಮಾದರಿಯ ಆಸನಾದಿ ಉಪಕರಣಗಳು. ನೆಹಾಸ ಪಾಷಾರಿಗೆ ೫೫ ವಯಸ್ಸಿದೆ. ಉಡಿಗೆಯು ಸ್ವಲ್ಪ ಮಂದ ಇಂಗ್ಲಿಷರ ಉಡುಪು.

'ಹಸ್ತಲಾಘವವಾಯಿತು ಕೈಯಲ್ಲಾಡಿಸಿದ ಎದೆಯ ತನಕವೂ ನನ್ನನ್ನು ನಡುಗಿಸಿತು. ಬೇಗಬೇಗನೆ ಭಾಷಣ ಮಾಡುವವರಿವರು ನನಗೆ ಇಂಗ್ಲಿಷು, ಅರಬಿ, ಫ್ರೆಂಚು ತಿಳಿಯುತ್ತದೇ ಎಂದರು. ಅವರಿಗೆ ಇಂಗ್ಲಿಷು ಬಾರದು, ನನಗೆ ಉಳಿದೆರಡು ಭಾಷೆಗಳ ಗಂಧವೂ ಇಲ್ಲ. ಹೀಗಾಗಿ ಭಾಷಾಂತರ ಮಾಡಲು ಮತ್ತೊಬ್ಬ ಗೆಳೆಯರನ್ನು ಕರೆಯಬೇಕಾಯಿತು.

ಕಿತ್ತಳೆ ರಸವನ್ನು ಪಾನ ಮಾಡಿದೆವು. ಹತ್ತು ನಿಮಿಷಗಳಲ್ಲೇ ಹಿಂದೂ ಮುಸ್ಲಿಮ ಸಮಸ್ಯೆಯನ್ನೆತ್ತಿ ಅವರು ಮಾತಾಡತೊಡಗಿದರು 'ಭಾರತ ವರ್ಷದಲ್ಲಿ ಎರಡು ಸಮಸ್ಯೆಗಳಿವೆ, ಜಾತಿಗಳ ರಗಳೆಯೊಂದು, ಹಿಂದೂ ಮುಸ್ಲಿಮ ರಗಳೆಯೊಂದು. ಒಂದೇ ಜನಾಂಗವಾಗುವಿರಾದರೆ ಜಾತಿಗಳನ್ನು ಅಳಿಸಿರಿ. ನಿಮ್ಮಂತೆ ನಮ್ಮಲ್ಲಿಯೂ ಮೈನೋರಿಟಿಗಳ ತಂಟೆಯುಂಟು. ಜಾಗ್ಲುಲ್ ಪಾಷಾರವರಿಗೆ ಅದರ ತೀಕ್ಷ್ಣತೆ ಗೊತ್ತಿತ್ತು. ಅವರನ್ನು ಬಹಳ ವಿಧಾನಗಳಿಂದ ತೃಪ್ತಿಗೊಳಿಸಿ, ಅವರಿಗೆ ಸಲ್ಲತಕ್ಕುದಕ್ಕಿಂತ ಅಧಿಕವಾದ ರಿಯಾಯತಿಗಳನ್ನು ನಾವು ಕೊಟ್ಟೆವು. ಅದಕ್ಕಾಗಿ ನಮ್ಮೊಡನೆ ಸೇರಿ ಅವರು ರಕ್ತ ಸುರಿಸುವ ಮುಂದೆ ಎಂದರು ನಮ್ಮಂತೆಯೆ ನಮ್ಮಷ್ಟೆ ಅವರು ನಮ್ಮ ಜನಾಂಗದವರಾಗಿದ್ದಾರೆ.'

'ಆದರೆ ಅವರು ಶಿಕ್ಷಿತರು, ಎಲ್ಲ ಸ್ಕೀಮುಗಳನ್ನು ಮುಂದೆ ತಂದವರೇ? ಅವರು ಸಂಪನ್ನರು, ಸೀಟುಗಳನ್ನು ರಿಜರ್ವ ಮಾಡಬೇಕೆಂದರೇ? ಪ್ರತ್ಯೇಕ ಪ್ರಾತಿನಿಧ್ಯ ಕೊಡಬೇಕೆಂದವರೇ? ಎಂದು ಕೇಳಲು, ಇಜಿಪ್ತದ ಮುಸ್ಲಿಮರು ಹೇಗಿರುವರೋ ಹಾಗೆಯೆ ಈ ಅಲ್ಪಸಂಖ್ಯಾಕರೂ ಇದ್ದರು, ಪ್ರತ್ಯೇಕ ಪ್ರಾತಿನಿಧ್ಯವೆಂಬುದು ಹಾಳು, ಬಹಳ ಹೊಲಸು, ಇದರ ದ್ವಾರದಿಂದ ಇಂಗ್ಲಿಷರು ನಿಮ್ಮನ್ನು ತಪಿಸಿದ್ದಾರೆ ಎಂದು ಪಾಷಾರು ಎಂದರು.

ಮುಂದೆ ಕಾಫಿ ಪಾನವಾಯಿತು. ಚಿಕ್ಕ ಕಪ್ಪು. ಕಾಫಿ ಬೆಚ್ಚಗೆ ಮಾತ್ರ, ಬಹಳ ಸಿಹಿ, ದಪ್ಪ, ಹಾಲಿಲ್ಲ. ಈ ಕಾಫಿ ಬರುವುದು ದಕ್ಷಿಣ ಅಮೇರಿಕದಿಂದ, ಅರಬಿಯ ತಯಾರಿಸಿದುದು, ಹೆಸರಿಗೆ ಮಾತ್ರ 'ಟರ್ಕಿಶ್ ಕೊಫಿ'.

ಅನಂತರ, 'ನಮ್ಮಲ್ಲಿ ಮುಖ್ಯವಾಗಿ ಬ್ರಿಟಿಷರಿಂದಾಗಿ, ಹಿಂದೆಗಳು, ಮುಸ್ಲಿಮರು, ಹೀಗೆ ಹೋರಾಟಕ್ಕಿಟ್ಟಿದೆ. ಹೀಗಾಗಿ, ನಿಮ್ಮಲ್ಲಿ ರುವಂತೆ ನಮ್ಮಲ್ಲಿಯೂ ಸ್ವರಾಜ್ಯವು ದೂರವಾಗಿದೆ. ನಮ್ಮದು ಮುಸ್ಲಿಮ ರಾಜ್ಯ. ಇಸ್ಲಾಂ ಪ್ರಜಾಸತ್ತೆಗೆ ಅನುಕೂಲವಾದುದು, ಅದರ ಆಳಿಕೆಯನ್ನು ತೀರ ನಿರಂಕುಶವಾಗಿ ವರಿಣಿಸುವುದು. * * * ನಾವು ನಮ್ಮಲ್ಲಿ ರಾಜಕೀಯ ಪಕ್ಷವಾಗಿ ರಾಷ್ಟ್ರಸಭೆ (ಕೊಂಗ್ರೆಸ್)ಯನ್ನು ನಿರ್ಮಿಸಿಕೊಂಡಿದ್ದೇವೆ. ಅದು ಎರಡು ಬಾಳಿಕೆಯಲ್ಲಿ ಸರಕಾರಕ್ಕೆ ಒಂದಾದ ಕೂಟ; ತಾನೇ ಸರಕಾರ ನಿರ್ವಹಿಸಿಕೊಂಡಿದೆ. ನಿಶ್ಚಲ. ಹೀಗಿದ್ದರೂ ನಮಗಿನ್ನೂ ಸಮಾಧಾನವಿಲ್ಲ.''

ನೆಹಾಸ್ ಪಾಷಾರ ಹಿಂಬಾಲಕರು ಇಜಿಪ್ತದ ಪಾರ್ಲಿಮೆಂಟಿನ 284 ಸದಸ್ಯರಲ್ಲಿ ಬರೇ 12 ಮಾತ್ರ. ಆದರೂ, ಇಜಿಪ್ತ ಜನಾಂಗಕ್ಕೆ ಇವರಷ್ಟು ಉಚ್ಚಸ್ಥಾನದ ಪ್ರತಿನಿಧಿ ಇಲ್ಲ.

'ಬಾಗಿಲು ದಾಟಿ ನಾನು ಹೊರಗೆ ಕಾಲಿಡುತ್ತಲೇ ಅವರು' ವಿಲಾಯತಿಯಿಂದ ಹಿಂತಿರುಗುವಾಗ ಕಾಣಬೇಕು. ಆಗ ನಿಮ್ಮ ಸ್ಥಿತಿ ಇನ್ನಷ್ಟು ಉತ್ತಮವಾದೀತೆಂದು ಭಾವಿಸುತ್ತೇನೆ' ಎಂದರು "'ನಾನು ಹಾಗೆಯೆ ಭಾವಿಸೋಣ ಎಂದೆನು''

ಹಿಂದು ಮುಸ್ಲಿಮ ಐಕ್ಯಕ್ಕಾಗಿ ಸಾಧಿಸಿದವರು ಈ ಪಾಷಾರ ಅಭಿಪ್ರಾಯವನ್ನು ವಿಮರ್ಶಿಸುವರೇ?

ಭಾರತೀಯ ಕೆಲಸಗಾರರ ಆವಶ್ಯಗಳು

ಅವರಿಗೆ ಶಿಕ್ಷಣ ಮತ್ತು ವಿರಾಮ ಬೇಕು

ನಿರಕ್ಷರಕುಕ್ಷಿಗಳಾದ ಕೆಲಸಗಾರರಿಂದ ಒಳ್ಳೇ ಕೆಲಸವನ್ನು ಬಯಸಬಹುದೆ? ಎಂಬುದರ ಕುರಿತು ಚರ್ಚಿಸುತ್ತಾ, ಡಾ ಕಾಂಜಿ ದ್ವಾರಕದಾಸರವರು, ಇಂಡಿಯನ್ ವರ್ಕರ್ಸ್ ಪತ್ರಿಕೆಯಲ್ಲಿ ಈ ಕೆಳಗಣ ಅಭಿಪ್ರಾಯವನ್ನು ಕೆಳಗಿನ ಲೇಖನವನ್ನು ಬರೆದಿರುವರು.

ಹಿಂದೀ ಕೆಲಸಗಾರನು ತನ್ನ ಜೀವನ ಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಆತನು ತನ್ನ ಸಂಪಾದನೆಯನ್ನು ವೃದ್ಧಿಪಡಿಸಬೇಕು, ತನ್ನ ಮಕ್ಕಳು ಒಳ್ಳೇ ಕೆಲಸಗಾರರಾಗುವಂತೆ ಆತನು ಅವರಿಗೆ ವಿದ್ಯೆಯನ್ನು ಕೊಡಬೇಕು ಮಾತ್ರವಲ್ಲದೆ, ತನ್ನ ಹಿತಕ್ಕೂ ಆತನು ಶಿಕ್ಷಣ ಹೊಂದಬೇಕು. ಹಿಂದೀಯ ಕೆಲಸಗಾರನು ತನ್ನ ಕೆಲವು ನಂಬುಗೆಗಳನ್ನೂ ಅಂಧಶ್ರದ್ಧೆಯನ್ನೂ ಬಿಡಬೇಕಾಗಿದೆ. ಇವುಗಳಿಂದ ಆತನಿಗೆ ಬಹಳ ಹಾನಿಯುಂಟಾಗಿದೆ. ಆತನ ತನ್ನ ಸಾಮಾಜಿಕ ಸ್ಥಿತಿಯನ್ನು ಉದ್ಧರಿಸಿಕೊಳ್ಳಬೇಕು. ಆರೋಗ್ಯದಾಯಕ ಮತ್ತು ವಿರಾಮದಾಯಕ ಚಟುವಟಿಕೆಗಳಲ್ಲಿ ಆತನು ಹೆಚ್ಚಾಗಿ ಭಾಗವಹಿಸಬೇಕು. ಈ ಕುರಿತು ಸರಕಾರವೂ ಇತರ ಸಂಬಂಧಪಟ್ಟವರೂ ಆಲೋಚಿಸಬೇಕಾಗಿದೆ.

ರಾಷ್ಟ್ರಧ್ವಜ ಏರಿಸುವುದಾರು?

ಇಳಿಸುವುದಾರು?

ಕುಮನಹಟ್ಟಿ ಎಂಬ ನೀಲಗಿರಿ ಜಿಲ್ಲಾ ಹಳ್ಳಿಯಲ್ಲಿ ಕೊಂಗ್ರೆಸ್‌ವಾಲರು ಶ್ರೀ ವಿ. ವಿ. ಗಿರಿಯವರಿಂದ ರಾಷ್ಟ್ರಧ್ವಜವನ್ನು ಏರಿಸಿದ್ದರು. ವಿರುದ್ಧ ಪಕ್ಷದವರು ಈ ಧ್ವಜವನ್ನು ಇಳಿಸಿದರು. ಧ್ವಜಸ್ತಂಭವನ್ನು ಕಡಿದು ತಮ್ಮ ಮನೆಗೊಯ್ದರು. ಪೋಲೀಸರು ಈ ವಿಷಯವನ್ನು ಜಿಲ್ಲಾ ಮೆಜಿಸ್ಟ್ರೇಟರ ಮುಂದಿಟ್ಟರು. ಇನ್ನು ಈ ಧ್ವಜವನ್ನು ಏರಿಸಿದರೆ, ಶಾಂತಿಭಂಗವಾದೀತೆಂದು ಕಾರಣ, ಅದನ್ನೇರಿಸಬಾರದೆಂದು ಮೆಜಿಸ್ಟ್ರೇಟರು ಅಪ್ಪಣೆಕೊಟ್ಟರು. ಆದರೂ ಕೊಂಗ್ರೆಸ್‌ವಾಲರು ಇದಕ್ಕೊಪ್ಪದೆ, ರಾಷ್ಟ್ರಧ್ವಜವನ್ನು ಪುನಃ ಏರಿಸ ಕೊಡಲು ನಿಂತರು.

ಈ ವಿಷಯವನ್ನು ಮುಖ್ಯ ಮಂತ್ರಿಗಳಿಗೆ ನಿವೇದಿಸಲು, ತಾಲೂಕು ಕೊಂಗ್ರೆಸ್ ಕಮಿಟಿಯವರು, ಜಿಲ್ಲಾ ಮೆಜಿಸ್ಟ್ರೇಟರ ಅಪ್ಪಣೆಗೆ ವಿರುದ್ಧ ನಡೆದುದು ತಪ್ಪೆಂದೂ, ಮೊದಲು ಚುನಾವಣೆ ಕಾಲದಲ್ಲಿ ಏರಿಸಿದ್ದುದರ ಉದ್ದೇಶವು ಈಗ ಮುಗಿದುದರಿಂದ ಇನ್ನು ಧ್ವಜವನ್ನೇರಿಸುವುದು ಅಗತ್ಯವಿಲ್ಲೆಂದೂ, ಮುಖ್ಯ ಮಂತ್ರಿಗಳು ತಿಳಿಸಿರುವರು.

ಅಜೀರ್ಣದ ಎಂಥ ನೋವು ಉಂಟಾಗುವುದನ್ನು ತಡೆಯಿರಿ

ತಲೆ ತಿರುಗುವುದು, ಗಂಟಲಲ್ಲಿ ಉರಿತ, ವಾಯು ಇತ್ಯಾದಿ ಹೊಟ್ಟೆನೋವು, ಉದರಪೀಡೆಗಳುಂಟಾಗುವುದು ಊಟವಾದ ನಂತರ

ಈ ತರದ ಸಂಕಟಗಳುಂಟಾಗುವುದು ಹಾಳು ಹೊಟ್ಟೆಯಿಂದ. ನಿಮ್ಮ ಹೊಟ್ಟೆಯನ್ನು ಸುಖವಾದ ರೀತಿಯಲ್ಲಿ ನಿರ್ಮಲಗೊಳಿಸುವುದಕ್ಕೆ ಒಂದು ಉಪಾಯವೆಂದರೆ, ಇನೋಸ್ 'ಫ್ರುಟ್ ಸಾಲ್ಟ್'ನ Eno's 'Fruit Salt' ಒಂದು ಗ್ಲಾಸನ್ನು ಕುಡಿಯುವುದು. ಊಟವನ್ನು ರುಚಿಸಲು, ಇನೋಸ್ ಅನುಕೂಲ ಮಾಡಿಕೊಡುವುದು.

ಜಗತ್ತಿನ ಎಲ್ಲಾ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟ, ಉತ್ತಮ ಪರಿಪಕ್ವವಾದ ಹಣ್ಣುಗಳಲ್ಲಿರುವ ಉತ್ತಮ ಗುಣಗಳಿರುವ ಪದಾರ್ಥಗಳು ಇನೋಸ್ ಫ್ರುಟ್ ಸಾಲ್ಟ್ Eno's 'Fruit Salt' ನಲ್ಲಿವೆ. ಇನೋ ಸೇವನೆಯಿಂದ ಖರ್ಚು ಕಡಿಮೆ. ಎಲ್ಲಾ ಅಂಗಡಿಗಳಲ್ಲಿ ಮೂರು ಪರಿಮಾಣದಲ್ಲಿ ದೊರೆಯುತ್ತದೆ.

ನಕಲಿ ವಸ್ತುಗಳನ್ನು ಕೊಡುವುದರಿಂದ ಜಾಗ್ರತೆಯಾದ ಫ್ರುಟ್ ಸಾಲ್ಟ್ ಬಾಟ್ಲಿ ಉಳಿದ ವಸ್ತುಗಳಂತಲ್ಲದೆ ಈ ಮಾದರಿಯ ಪೆಕಿಂಗ್ ಮಾತ್ರ ಕೇಳಿ ಮಾಡುವುದೆಂದು ನಮ್ಮ 70 ವರ್ಷದ ಅನುಭವ ಸಿದ್ಧಾಂತವಾಗಿರುತ್ತದೆ

EVK 6



ಅಧಿಕಾರ ಸ್ವೀಕಾರದಿಂದ ಕೊಂಗ್ರೆಸ್ಸಿಗಾದ ಲಾಭನಷ್ಟಗಳು

ಪಂ। ಜವಾಹರಲಾಲ ನೆಹರೂರವರಿಂದ

ಕೊಂಗ್ರೆಸು ಅಧಿಕಾರ ಸ್ವೀಕಾರದಲ್ಲಿ (ಪುಣಾ) ಮಹಾಜನಸತ್ತೆಯ ಪರಿಣಾಮ ... ಲಾಲರು ಒಂದು ಭಾಷಣ ... ಅವರೀಗ ... ಯುರೋಪು ... ರಾಜ್ಯಗಳಲ್ಲಿ ಸಂಚಾರಕ್ಕೆ ತೆರಳಿದ್ದಾರೆ.

'ಕೊಂಗ್ರೆಸ್ಸು ಅಧಿಕಾರ ಸ್ವೀಕರಿಸಿದ ... ಕೊಂಗ್ರೆಸಿನ ಪ್ರಾಬಲ್ಯವು ಹೆಚ್ಚಿಗಿದೆ. ಅದರ ಗೌರವವು ಅಧಿಕವಾಗುತ್ತ ಬಂದಿದೆ. ಕೊಂಗ್ರೆಸಿನ ... ಜನತೆಗೆ ಉಪಕಾರ ... ಫಲವು ವಿಶದವಾದುದು.

ನಷ್ಟವೇನೆಂದರೆ? ಪೂರ್ಣ ಸ್ವರಾಜ್ಯಕ್ಕಾಗಿ ಕೆಲಸ ... ಹೋರಾಟ ನಡೆಸ ... ಕಾರ್ಯಕ್ರಮದ ಮೇಲೆ ... ಸ್ವರಾಜ್ಯ ಸಾಧನೆಯ ರಸ್ತೆಯನ್ನು ಬಿಟ್ಟು ಕೊಂಗ್ರೆಸ್ ಕೆಲಸಗಾರರು ಓಣಿಗಳನ್ನು ಹಿಡಿದು ಅಡ್ಡಾಡುವಂತಾಗಿದೆ. ಒಂದೆ ... ತಮ್ಮ ಆದರ್ಶವನ್ನು ಏಕ ನಿಷ್ಠೆಯಿಂದ ಸಾಧಿಸುವ ಬದಲಾಗಿ, ತತ್ಕಾಲಿಕ ಪ್ರಸಂಗಗಳಲ್ಲಿ ಕಾಲಕ್ಷೇಪ ಮಾಡತೊಡಗಬೇಕಾಗಿ ಬಂದಿದೆ.

ಸ್ವರಾಜ್ಯವು ದೊರೆಯಬೇಕೆಂಬ ಅಭಿಲಾಷೆಯೇ ಇಲ್ಲದೆ, ಹೋರಾಡುವ ಆಸಕ್ತಿಯೇ ಇಲ್ಲದೆ, ಸ್ವಕೀಯ ಲಾಭಕ್ಕಾಗಿಯೇ ಕೊಂಗ್ರೆಸನ್ನು ಸೇರಿದವರು ಈಗ ಬಹುಸಹಸ್ರವಾಗಿದ್ದಾರೆ. ಸಾಮ್ರಾಜ್ಯಶಾಹಿಯನ್ನು ಹೋರಾಡುವುದರಲ್ಲಿ ಆಸಕ್ತಿ ತೋರಿಸಿ ತನ್ನ ಬಲವನ್ನು ಬೆಳಸುವ ಸುಸಂಧಿಗಳನ್ನು ಕೊಂಗ್ರೆಸ್ಸು ಕಳೆದುಕೊಂಡಿದೆ. ಸಾಮ್ರಾಜ್ಯಕ್ಕಾಗಿ, ಸಂಪತ್ತಿಕ ವಿಚಾರಗಳಲ್ಲಿ ನಡೆವ ಸುಲಿಗೆಯನ್ನು ಎದುರಿಸುವ ಶಕ್ತಿಯೇ ಈಗ ಕೊಂಗ್ರೆಸಿಗಿಲ್ಲವಾಗಿದೆ. ಜನರ ದಾರಿದ್ರ್ಯ ಕ್ಲೇಶಾದಿಗಳನ್ನು ನಿವಾರಿಸುವ ಬಲವೂ ಕುಂದಿದೆ.

ಆದುದರಿಂದ ದುರ್ಬಲತೆಯಿಂದ ನಮ್ಮ ಲಾಭ ಹೆಚ್ಚಿಸಿಕೊಳ್ಳುವುದು ವ್ಯರ್ಥ. ತನ್ನ ಬಲದ ಮೇಲೆ ನಿರ್ಭರವಾಗಿರುವುದು ಅಷ್ಟು

ನಿರಪರಾಧಿ ಜನ ಘರ್ಷಣ ಬೊಂಬುಗಳಿಗೆ ಬಲಿ

ಹಿಂಸಾ ಪ್ರಯೋಗ ಮಾಡಲಾರದೆ, ದೇಶದ ಶಕ್ತಿಗಳ ಪ್ರೇರಣೆಯಿಂದ, ಹಿಂದೆ 'ದ್ರವಿಡ ಪಾಕಿಸ್ತಾನಕ್ಕೆ ನಿಷೇಧವಾಯಿತು ಪ್ರಯೋಗ ನಡೆಸದೆ ಇದ್ದರೂ, ಅನಾಯಾಸವಾಗಿ ನಿರಸ್ತ್ರರಾಗಿ ಇರುವ ಕೆಂಟನ್ ನಗರವಾಸಿಗಳ ಮೇಲೆ ಪ್ರತಿದಿನವೂ ... ವಿಮಾನದಿಂದ ಬೊಂಬುಗಳನ್ನು ಚೆಲ್ಲುತ್ತ ಅತ್ಯಾಚಾರ ನಡೆಸಿ ನೂರಾರು ಮಕ್ಕಳನ್ನು ಬಲಿತೊಳ್ಳುತ್ತಿದ್ದಾರೆ. ಇತರ ಮಹಾ ಸರಕಾರಗಳ ಈ ಅನ್ಯಾಯವನ್ನು ನಿಷೇಧಿಸಿ, ಎಚ್ಚರಿಸಿ ಜಪಾನಿಗೆ ದೂರುಕೊಟ್ಟವೆ. ಹಾಗೆ ಕೊಡುವುದರಿಂದ ಬ್ರಿಟಿಷರೂ ಅಮೇರಿಕವೂ ಹೇಳಿದರೆ, ಜಪಾನು ಕಿವಿಗೊಡುವಂತಿಲ್ಲ. ಅವರು ಇತರ ವಿಧಾನಗಳ ಮೂಲಕ ತಮ್ಮ ಅಸ್ವೀಕೃತ ಪ್ರಾಬಲ್ಯವನ್ನು ಜಪಾನು ತಿಳಿಯುವಂತೆ ಸ್ವಲ್ಪ ಕೈಯಿಂದ ಮಾತ್ರ ಪ್ರಯೋಜನವಿದೆ. ರಾಜಕೀಯ ಅಥವಾ ಸಾಂಪತ್ತಿಕ ಬಹಿಷ್ಕಾರ ನಿಶ್ಚಿತವಾದರೆ ಜಪಾನು ವಿವೇಕ ತಳೆದೀತು. ಯುದ್ಧದ ಮೂಲಕವೇ ಅಲ್ಲವೆ, ಇತರ ವಿಧಾನಗಳಿಂದ ದರ್ಪಗೊಂಡು ಕೈಮೀರುವವರನ್ನು ತಡೆಯ ಬರುತ್ತದಲ್ಲವೆ? ನೈತಿಕ ಸೂತ್ರಗಳಿಗೆ ಎದುರಾಗಿ ನಡೆವವರನ್ನು ತಡೆಯಬೇಕಾದರೆ, ಏನು ಮಾಡಬಹುದೋ ಎಂಬುದನ್ನು ಈಗ ಪ್ರಬಲ ರಾಷ್ಟ್ರಗಳು 'ನಿರ್ಧರಿಸುವುದುತ್ತವು. ಯುದ್ಧವನ್ನು ಕೈಕೊಳ್ಳಬಾರದು. ಆದರೆ, ನೈತಿಕ ಬಲವನ್ನು ಗಳಿಸಿ, ಸಾಂಪತ್ತಿಕ ವಿಷಯಗಳಲ್ಲಿ ಬಹಿಷ್ಕರಿಸಬೇಕು. ಹಾಗಿದ್ದರೆ, ಜಗತ್ತಿನ ಕೈ ದುಡುಕುವಾಗ ಸ್ವಲ್ಪ ವಿವೇಕದಿಂದ ಆಲೋಚಿಸಲು ಕಲಿತುಕೊಂಡೀತು. ಆಸತ್ಯ ಕಾರತ್ವವು ಇಲ್ಲಿ ಅಗತ್ಯ. ಅದರ ಇತ್ತರದಕ್ಕಾ ನಷ್ಟವಿದೆ. ಮಹಾರಾಷ್ಟ್ರಗಳ ... ನಿಜವಾಗಿಯೂ 'ಮಹಾ' ಆಗಿದ್ದಲ್ಲಿ, ಈ ನಷ್ಟವನ್ನು ಸುಲಭವಾಗಿ ಕಳೆಯಬಹುದು, ಸಹಿಸಬಹುದು. ಮಹಾಸತ್ತೆಗಳೆಯುವರು ನಾರಿ ಹೇರುವ ಅಹಿಂಸಾತ್ಮಕವಾದ ಬಹಿಷ್ಕಾರ ತತ್ತ್ವವನ್ನು ಪ್ರಬಲ ಅಮೇರಿಕಾ ಬ್ರಿಟನ್ ಮೊದಲಾದ ರಾಷ್ಟ್ರಗಳು ಈಗ ವಿವೇಚನೆಯಿಂದ ವಿಮರ್ಶಿಸುವುದರಿಂದ ಪ್ರಯೋಜನವುಂಟು. ಹಾಗೆ ಮಾಡದೆ, ಸುಮ್ಮನೆ ಠರಾವುಗಳನ್ನು ಕಾಗದ ಮೂಲಕ ತಿಳಿಸಿದರೆ, ಬಗ್ಗುವುದಿಲ್ಲ, ತಗ್ಗುವುದಾದರೂ ಜಪಾನೇ!

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದೌರ್ಬಲ್ಯ, ನಿಶ್ಶಕ್ತಿ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರ್ಡೇಪಿ,
P. O. Peridepi (ನೆಲ್ಲೂರು ಜಿ.)

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲಿ ಬೇಕ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿಡುವುದು, ಶರೀರಕ್ಕೆ ಏನೂ ಅಪಾಯವಾಗದ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರ್ಣ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಡಕರ, ಇವರು ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ. ಪಿ. ಅಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)

The

Agricultural & Industrial Bank, Ltd.,

(Incorporated in British India.)

Head Office "LAXMINIVAS BUILDINGS" *Coondapoor.*

BRANCHES:-

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:-

5 YEARS CORONATION CASH CERTIFICATES BEARING 6 PER CENT INTEREST ARE ISSUED IN DENOMINATIONS OF RS. 10, 25, 50, 100, 250, 500 & 1000, REDEEMABLE AT ANY TIME. CUMULATIVE DEPOSITS ARE ACCEPTED

Current Deposits
From January to June 2%
and
From July to December 1%

Savings Bank Deposits
3½ per cent per annum

Fixed Deposits
for 6 Months 3½%
„ 1 Year 4%
„ 2 Years &above 4½%

For Further Particulars Apply to:—
HEAD OFFICE or BRANCHES

Buy Advertised Goods

DRINK

Delicious

WATERFALL

AND

PYKARA TEAS.

unrivlled for Taste & Aroma.

ಅತ್ಯುತ್ತಮವಾದ
ವಾಟರ್‌ಫೋಲ್
ಮತ್ತು
ಪಾೖಕರಾ ಚಹಾವನ್ನು
ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ.

Distributors:
Panchmal Krishnaya Shenoi & Son,
Bunder, Mangalore.

USE

365 BAR SOAPS

SOLD

EVERYWHERE.

**
**

Sole Agent:

PANCHMAL KRISHNAYA
SHENOI & SON,
under, MANGALORE.

ಯುದ್ಧ ಆಕ್ರಮಣಗಳ ಭಯಂಕರ ಪರಿಣಾಮ

ವಿಜಯೀ ಸೈನಿಕರ ಪೈಶಾಚಿಕ ಲೀಲೆ.

ಪಟ್ಟಣಗಳ ಧ್ವಂಸ .·. .·. ಹಳ್ಳಿಪಳ್ಳಿಗಳ ನಾಶ

ಸ್ತ್ರೀಯರು ಮಕ್ಕಳ ಮೇಲೆ ಭೀಕರ ಅತ್ಯಾಚಾರ

ಸ್ಪೈನಿನ ಅಂತಃಕಲಹದಲ್ಲಿ ಬಂಡಾಯಗಾರರು, ಚೀನದ ಆಕ್ರಮಣದಲ್ಲಿ ಜಪಾನಿಯರು ಭಯಂಕರ ಯುದ್ಧಗಳನ್ನು ಹೂಡಿದ್ದಾರೆ. ರಕ್ಷಣೋಪಾಯಗಳು ಇಲ್ಲದ ಪೇಟೆ ಪಟ್ಟಣ—ಹಳ್ಳಿ ಪಳ್ಳಿಗಳ ಮೇಲೆ ಬೊಂಬುಗಳ ಕರಿಮಳೆಯನ್ನು ಸುರಿಸಿ, ತುಪಾಕಿ ಫಿರಂಗಿಗಳಿಂದ ಸುಟ್ಟು, ಅವುಗಳನ್ನು ಸಂಪೂರ್ಣ ನಾಶಮಾಡಿದ್ದಾರೆ. ಅಸಹಾಯಕರೂ ಅನಾಥರೂ ಆದ ಸ್ತ್ರೀಯರು, ಮಕ್ಕಳು ವಿಕಲಾಂಗಿಗಳು ಮೊದಲಾದವರನ್ನು ಕೂಡ ಬಲಿ ತೆಗೆದುಕೊಂಡು ಭೀಕರ ಅತ್ಯಾಚಾರ ಅನಾಚಾರಗಳನ್ನು ನಡೆಯಿಸಿರುತ್ತಾರೆ. ಇಂಥ ಯುದ್ಧದ ಪರಿಣಾಮವಾದರೂ ಹೀಗೆ ಆಗ ತಕ್ಕದ್ದೇ ಆಗಿದೆ. ಸ್ಪೇನಿನ ಬಂಡಾಯಗಾರರ, ಚೀನದಲ್ಲಿ ಜಪಾನಿಯರ ಅತ್ಯಾಚಾರ ಅನಾಚಾರಗಳ ಕತೆಗಳನ್ನು ಕೇಳಿ ಎಂಥ ಕಲ್ಲೆದೆಯವನಾದರೂ ಕರಗಿ ನೀರಾಗಬೇಕು, ಎಂಥ ಧೈರ್ಯ ಸ್ಥೈರ್ಯವುಳ್ಳವನಾದರೂ ಒಮ್ಮೆಗೆ ಬೆದರಿ ಬೆಚ್ಚಿಬೀಳಬೇಕು.

'ಚ್ಯಾನಾ ವೀಕ್ಲಿ ರಿವ್ಯು' ಎಂಬ ಪತ್ರಿಕೆಯು ಚೀನದಲ್ಲಿ ಜಪಾನಿಯರ ಆಕ್ರಮಣ—ಅನರ್ಥಗಳ ಕುರಿತು ಬರೆಯುತ್ತ ಹೀಗನ್ನುದಿದೆ — ಜಪಾನಿಯರ ಸೈನಿಕರಿಂದ ಅಪಹರಿಸಲ್ಪಟ್ಟು ಅವರ ಬಲತ್ಕಾರದ ಪರಿಣಾಮವಾಗಿ ಅನೇಕಾನೇಕ ಜನನಾಂಗ ರೋಗಗಳಿಗೆ ಬಲಿಯಾಗಿ ನರಳುತ್ತಿರುವ ಬಡಪಾಯಿಗಳಾದ ಚೀನೀ ಸ್ತ್ರೀಯರ ಒಂದು ಭಯಂಕರ ಸಮಸ್ಯೆಯು ಈಗ ನಮ್ಮ ಮುಂದೆ ಉಪಸ್ಥಿತವಾಗಿದೆ ಯೆಂದು, ಜಪಾನಿಯರ ಅಧೀನವಾಗಿರುವ ಒಂದು ಚೀನಾ ಪ್ರದೇಶದಲ್ಲಿನ ಅಮೇರಿಕದ ಮಿಶನ ಆಸ್ಪತ್ರೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಆ ಸ್ತ್ರೀಯರಿಗೆ ಧರ್ಮಾರ್ಥ ಚಿಕಿತ್ಸೆ ಮಾಡಲಿಕ್ಕೂ ಅವರ ಔಷಧೋಪಚಾರ—ಶಸ್ತ್ರ ಚಿಕಿತ್ಸೆ ನಡೆಸಲಿಕ್ಕೂ ಆಸ್ಪತ್ರೆಯು ಬಡಾವಣೆ ಮಾಡಬೇಕಾದ ಹೊತ್ತು ಬಂದಿದೆ ಎಂದು ಅವರು ಹೇಳುತ್ತಾರೆ. ಚೀನಿ ಸ್ತ್ರೀಯರ ಜಪಾನೀ ಸೈನಿಕರ ಕಾಮಾಗ್ನಿಗೆ ಬಲಿಯಾಗಿ ನರಳುತ್ತಿರುವದು ಮಾತ್ರವಲ್ಲದೆ, ಆ ಸೈನಿಕರ ದೆಸೆಯಿಂದ ಕಂಗೆಟ್ಟು ಅನೇಕ ಅವಿವಾಹಿತ ಗರ್ಭಿಣಿ ಕನ್ನಿಕೆಯರೂ, ಲೋಕ ಲಜ್ಜೆಯಿಂದ ತಮ್ಮನ್ನು ಕಾಪಾಡಿಕೊಳ್ಳುವದಕ್ಕೋಸ್ಕರ, ಗರ್ಭಪಾತ ಮಾಡಿಸಿಕೊಳ್ಳಲಿಕ್ಕೆ ಆಸ್ಪತ್ರೆಗೆ ಬರುವರೆಂದೂ, ಆಸ್ಪತ್ರೆಯವರು ಅದನ್ನು ತಿರಸ್ಕರಿಸಿದಾಗ, ನಿರುಪಾಯರಾಗಿ ಪೂರ್ವದ ಒರಟು ಕ್ರಮಗಳಿಂದ ಗುಟ್ಟಾಗಿ ಗರ್ಭವನ್ನು ಇಳಿಸಿಕೊಂಡು, ತಮ್ಮ ಶಾರೀರಿಕ ಮಾನಸಿಕ ಆರೋಗ್ಯವನ್ನು ಸದಾ ಕಾಲಕ್ಕೆ ಕೆಡಿಸಿಕೊಳ್ಳುವರೆಂದೂ, ಇಂತಹ ಚೀನೀ ಸ್ತ್ರೀಯರ ಸಂಖ್ಯೆಯು ಅಧಿಕವಾಗಿ ಬೆಳೆಯುತ್ತಿದೆಯೆಂದೂ ಆಸ್ಪತ್ರೆಯ ವರದಿಯಿಂದ ~~ಸ್ಪಷ್ಟವಾಗುತ್ತದೆ.'' ಚೀನೀ ಸ್ತ್ರೀಯರ ಮೇಲೆ~~ ಜಪಾನೀ ಸೈನಿಕರ ಎಂಥೆಂಥ ಅತ್ಯಾಚಾರ ಅನಾಚಾರಗಳು ನಡೆಯುತ್ತಿದ್ದು, ಆ ಸ್ತ್ರೀಯರು ಯಾವ ರೀತಿಯಲ್ಲಿ ನಾರಕೀಯ ಜೀವನವನ್ನು ಕಳೆಯುತ್ತಿರುವರೆಂದು ವಾಚಕರು ಊಹಿಸಿಕೊಳ್ಳಬಹುದು.

ಚೀನಿಯರ ಮೇಲೆ ಜಪಾನಿಯರು ಮಾತ್ರ ಪಾಪಾಚರಣೆ ಮಾಡುತ್ತಿದ್ದಾರೆಂದಲ್ಲ, ಅಲ್ಲಿಗೆ ಹೋಗಿರುವ ಹಿಂದೀಯರೂ ಆ ಕಾರ್ಯದಲ್ಲಿ ಹಿಂದೆ ಬಿದ್ದಿಲ್ಲ. ಅದೇ ಪತ್ರಿಕೆಯು ಇನ್ನೊಂದು ಕಡೆ ಬರೆದಿರುವ ಒಂದು ಮಾತು ಎಂಥ ಭಾರತೀಯು ತಲೆಯನ್ನಾದರೂ ಲಜ್ಜೆಯಿಂದ ತಗ್ಗಿಸಬೇಕು —''ಜನನಾಂಗ ರೋಗಗಳಿಂದ ಧರ್ಮಾರ್ಥ ಚಿಕಿತ್ಸೆ ಪಡೆಯಲಿಕ್ಕೆ ಇಂಟರ ನೇಶನಲ್ ಸೆಟ್ಲ್‌ಮೆಂಟ್‌ನಲ್ಲಿ ಅರ್ಜಿಗಳನ್ನು ಹಾಕಿದವರಲ್ಲಿ ಜಪಾನಿಯರು ಮೂರನೆಸ್ಥಾನದಲ್ಲಿದ್ದಾರೆ. ಮೊದಲಿನ ಎರಡು ಸ್ಥಾನಗಳನ್ನು ರಶ್ಯನರೂ ಇಂಡಿಯನರೂ ಪಡೆಯುವರು'' ಅಂದರೆ ಕಾಮಾಂಧರಾಗಿ ಪಾಪಾಚರಣೆ ಮಾಡುವವರಲ್ಲಿ ಚೀನದ ಭಾರತೀಯರು ಜಪಾನಿಯರನ್ನು ಮಿಗಿಸಿದ್ದಾರೆ!

ಈ ಎಲ್ಲಾ ಅತ್ಯಾಚಾರ ಅನಾಚಾರಗಳ ಪರಿಣಾಮವಾಗಿ ಈಗ ಚೀನಿಯರಲ್ಲಿ ಪ್ರತಿಹಿಂಸೆಯ ಭಾವವು ಕಂಡು ಬಂದಿದೆ. ಜಪಾನಿಯರು ತಾವು ಗೆದ್ದ ಪ್ರದೇಶದಲ್ಲಿನ ಚೀನೀ ಸ್ತ್ರೀಯರನ್ನು ಹಾರಿಸಿಕೊಂಡು ಹೋಗಿ ಅವರ ಮೇಲೆ ಪೈಶಾಚಿಕ ಲೀಲೆಯನ್ನು ನಡೆಸಿ ಕಾಮತೃಪ್ತಿ ಮಾಡಿಕೊಳ್ಳುವ ಅನೇಕಾನೇಕ ಘಟನೆಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಿರುವದರ ಜೊತೆಗೇ, ಚೀನೀ ಸ್ತ್ರೀಯರೂ ತಮ್ಮ ಮಾನಭಂಗ ಮಾಡಿ ಸತೀತ್ವವನ್ನು ಕೆಡಿಸಿದ ಜಪಾನಿಯರ ಮೇಲೆ ಭಯಂಕರ ರೀತಿಯಿಂದ ಸೇಡು ತೀರಿಸಿಕೊಂಡ ವಾರ್ತೆಗಳನ್ನು ಈಗ ಓದಬಹುದು. 'ಚ್ಯಾನಾ ವೀಕ್ಲಿ ರಿವ್ಯು' ಪತ್ರಿಕೆಯೇ ಇಂಥ ಕೆಲವು ಘಟನೆಗಳನ್ನು ಕೊಟ್ಟಿದೆ —

'ದಕ್ಷಿಣ ಅನ್ಹ್ವೆ ಪ್ರಾಂತ್ಯದ ಸಜನ್‌ಚಾಂಗ ಹಳ್ಳಿಯಲ್ಲಿ ಒಬ್ಬ ಜಪಾನೀ ಸೈನಿಕನ ದೃಷ್ಟಿ ಒಬ್ಬ ಚೀನೀ ಯುವತಿಯ ಮೇಲೆ ಬಿದ್ದಿತ್ತು. ಇಬ್ಬರೂ ಒಂದು ಕಡೆ ಒಟ್ಟಾದರು. ಯುವತಿಯು ಸೈನಿಕನನ್ನು ಪ್ರೀತಿಯಿಂದ ಆಲಿಂಗಿಸಿ ಸೈನಿಕನ ಚುಂಬನವನ್ನು ಮುಕ್ತಿಗೆ ಅರ್ಪಿತವೆಂದು ನಟಿಸಿ, ಅವನ ಮುಗಿಗೆ ಒಲವಿನಿಂದ ಗದ್ದನ್ನು ಕೊಟ್ಟಳು. ಸೈನಿಕನ ಮೂಗು ಕಚ್ಚಿಹೋಗಿ ರಕ್ತವು ಕೊಡಕಟ್ಟಲೆ ಸುರಿದು ಹೋಯಿತು. ಅವನು ರಕ್ತಸ್ರಾವದಿಂದಲೇ ಸತ್ತುಹೋದನು.''

ಇನ್ನೊಂದು ಘಟನೆ ಈ ಪ್ರಕಾರ ಇದೆ— ''ಹೊಪೆ ಪ್ರಾಂತ್ಯದ ಒಂದು ನಗರದಲ್ಲಿ ಜಪಾನಿಯ ಒಂದು ಸಣ್ಣ ದಂಡು ಬೀಡಿಟ್ಟು ಕೊಂಡಿತ್ತು. ಬೇರೆ ನೂರಾರು ಊರುಗಳಲ್ಲಿ ಮಾಡಿದಂತೆ ಅಲ್ಲಿಯೂ ಅವರು ನೂರು ಜನ ಚೀನೀ ಯುವತಿಯರನ್ನು ತಮ್ಮ ಬಳಿಗೆ ಆ ರಾತ್ರಿ ಕಳುಹಿಸಿ ಕೊಡಬೇಕೆಂದು ಆಜ್ಞೆ ಕೊಟ್ಟರು. ಆಗ ಊರಿನ ಹಿರಿಯರು ಗುಟ್ಟಾಗಿ ಸಭೆಸೇರಿ ಏನು ಮಾಡಬೇಕೆಂದು ಆಲೋಚಿಸಿದರು. ಊರವರು—'ಆಗಬಹುದು ರಾತ್ರಿಗೆ ಕಳುಹಿಸಿಕೊಡುತ್ತೇವೆ' ಎಂದು ಹೇಳಿ ಕಳುಹಿದರು. ಇವರು ಭಯಂಕರ ರೋಗಗಳಿಂದ ಕೊಳೆತು ನಾರುತ್ತಿದ್ದ ನೂರು ಮಂದಿ ಚೀನೀ ವ್ಯಭಿಚಾರಿಣಿಯರನ್ನು ಬಹು ಪ್ರಯಾಸದಿಂದ ಒಟ್ಟುಮಾಡಿ ಕರೆತಂದರು. ಅವರನ್ನು ಬೆಡಗಿನ ಉಡುಗೆಯಿಂದ ಶೃಂಗರಿಸಿ ಜಪಾನಿ ಸೈನಿಕರ ಬಳಿಗೆ ಕಳುಹಿಸಿ ಕೊಟ್ಟರು. ಆಗ ಊಟ ಉಪಚಾರಗಳಾಗುತ್ತಿದ್ದವು. ಸೈನಿಕರು ಬಹಳ ಗಮ್ಮತ್ತಿನಲ್ಲಿದ್ದರು. ಸೂಳೆಯರು ಹೋಗಿ ಅವರಿಗೆ ಮೂಗಿನಿಂದ ಹೊರಗೆ ಇಳಿದು ಬರುವ ತನಕ ಸಾರಾಯಿ ಕುಡಿಸಿದರು. ಅವರು ಕುಡಿದು ದಾಕ್ಷಿಣ್ಯ ಅಮಲೇರಿ ಮುಂದಿನ ಕೆಲಸಕ್ಕೆ ಆರಂಭಿಸಿದರು. ಎಲ್ಲರೂ ನಿರೀಕ್ಷಿಸಿಕೊಂಡಿದ್ದುದು ಅಲ್ಲಿ ನಡೆಯಿತು; ನಿರೀಕ್ಷಿಸದೆ ಇದ್ದದ್ದೂ ನಡೆಯಿತು. ಸೂಳೆಯರು 'ಸೂಳೆಗಾರಿಕೆಯ ಪ್ರಸಾದವನ್ನು ಆ ಸೈನಿಕರಿಗೆ ಚೆನ್ನಾಗಿ ತಿನ್ನಿಸಿದರು, ಮಾತ್ರವಲ್ಲ, ಕೆಲವು ಸೂಳೆಯರು, ನೆಲದ ಮೇಲೆ ಚೆಲ್ಲಿ ಬಿದ್ದುಕೊಂಡಿದ್ದ

ಸಾರಾಯಿ ಬಾಟಲಿಗಳಿಂದ ಹಲವು ಸೈನಿಕರ ತಲೆ ಒಡೆದು ಅವರನ್ನು ವೈಕುಂಠ ಲೋಕಕ್ಕೆ ಕಳುಹಿಸಿಯೇ ಹಿಂದಿರುಗಿದರು.''

ಸರ್ವಾಧಿಕಾರ ಅಥವಾ ಸರ್ವತಂತ್ರಸ್ವಾತಂತ್ರ್ಯ

ಭಾರತದ ಫೆಡರಲ್ ನ್ಯಾಯಸ್ಥಾನದ ಪ್ರಧಾನ ನ್ಯಾಯಾಧೀಶರಾದ ಸರ್ ಮೋರಿಸ್ ಗ್ವಾಯರರವರು ದಿಲ್ಲಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ ಕಾಲದಲ್ಲಿ ಒಂದು ವಿಚಾರ ಪರಿಪ್ಲುತವಾದ ಭಾಷಣವನ್ನು ಕೊಟ್ಟಿದ್ದರು. ಅದರ ಸಾರಾಂಶವು ಹೀಗಿದೆ:—

ರಾಜ್ಯದಲ್ಲಿ ವಾಸಮಾಡಿಕೊಂಡಿರುವ ಎಲ್ಲ ಸ್ತ್ರೀಪುರುಷ ಮಕ್ಕಳ ಹಿತಾಭಿವೃದ್ಧಿಗೋಸ್ಕರ ರಾಜ್ಯಾಂಗ ವ್ಯವಸ್ಥೆಯು ಆಗಿರುತ್ತದಾಗಿ ನಮ್ಮೆಲ್ಲರ ತಿಳುವಳಿಕೆಯಾಗಿರುತ್ತದೆ. ಆದರೆ ಇಂಥ ರಾಜ್ಯಾಂಗ ವ್ಯವಸ್ಥೆಯ ಕುರಿತು ಈಗ ಅದೊಂದು ಭಯಂಕರ ಮತ್ತು ನವೀನ ಭಾವನೆಯು ಪ್ರಕಾರ—ರಾಜ್ಯಾಂಗ ವ್ಯವಸ್ಥೆಯು, ಆ ರಾಜ್ಯಕ್ಕೆ ಸೇರಿದ ಪ್ರಜಾಜನರಿಗಾಗಿ ಇರುವುದಿಲ್ಲ, ಪರಂತು ಪ್ರಜಾಜನರು ಆ ರಾಜ್ಯಾಂಗ ವ್ಯವಸ್ಥೆ ಹಾಗೆ ಇರುತ್ತಾರೆ. ಅಂಥ ರಾಜ್ಯಾಂಗ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ವ್ಯಕ್ತಿಗತ ಅಥವಾ ಸಾಮೂಹಿಕ ಯಾವ ಹಕ್ಕು ಅಧಿಕಾರಗಳೂ ಇರುವುದಿಲ್ಲ. ರಾಜ್ಯಾಂಗ ವ್ಯವಸ್ಥೆಯ ರಕ್ಷಣೆಗಾಗಿ ಅವರು ಬದುಕಿ ಬಾಳಿಕೊಂಡೇ ಇರಬೇಕು ಹೊರತು ಅವರ ರಕ್ಷಣೆಗಾಗಿ ರಾಜ್ಯಾಂಗ ವ್ಯವಸ್ಥೆಯು ಆಗಿದೆಯೆಂದು ಹೇಳಬರುವುದಿಲ್ಲ. ರಾಜ್ಯಾಂಗ ವ್ಯವಸ್ಥೆಯ ಕುರಿತಾದ ಈ ನವೀನ ಕಲ್ಪನೆ—ಅಥವಾ ಭಾವನೆಯ ಮರೆಯಲ್ಲಿ ನಿಂತು, ಪ್ರಪಂಚದ ಸರ್ವಾಧಿಕಾರಿಗಳೆಂಬವರು ತಮ್ಮ ಕೆಲಸಕಾರ್ಯಗಳು ನ್ಯಾಯನ್ಯಾಯ ನೀತಿಗೂ ಸಮಂಜಸವಾಗಿವೆ ಎಂದು ಸ್ಪಷ್ಟ ಮಾಡಲಿಕ್ಕೆ ಪ್ರಯತ್ನಿಸುತ್ತಾರೆ. ಈ ಸರ್ವಾಧಿಕಾರಿಗಳು ತಾವು ಬಹುಮತವನ್ನು ಪಡೆದು ಸರಕಾರವನ್ನು ನಡೆಸುತ್ತಿರುವೆವಾಗಿ ಕೊಚ್ಚಿಕೊಳ್ಳುತಾರೆ. ಆದರೆ ಇವರಿಗೆ ಇರುವಂಥ ಬಹುಮತವು ಯಾವ ಸ್ವರೂಪದ್ದೆಂಬುದನ್ನು ನಾವು ಸ್ವಲ್ಪ ಆಲೋಚಿಸಬೇಕು. ಬಹುಮತದ ಆಡಳಿತವು ಯಾವಾಗಲೂ ಉತ್ಕೃಷ್ಟವಾಗಿ ಇರುವುದೆಂದು ಹೇಳಲಿಕ್ಕೆ ಬರುವುದಿಲ್ಲ. ಆಡಳಿತವು ಉತ್ಕೃಷ್ಟವಾಗಿರುವುದೇ ನಿಕೃಷ್ಟವಾಗಿರುವದೇ ಎಂಬುದು, ಆ ಆಡಳಿತಕ್ಕೆ ಇರುವ ಬಹುಮತವನ್ನು ಹೊಂದಿಕೊಂಡು ಇರುವುದಿಲ್ಲ. ಪರಂತು ಆ ಬಹುಮತವು ಹೇಗೆ ಪ್ರಾಪ್ತವಾಯಿತು ಎಂಬುದನ್ನು ಹೊಂದಿಕೊಂಡಿದೆ. ಕತ್ತಿಯ ಬಲದಿಂದ ದೊಣ್ಣೆ ತುಪಾಕಿಗಳ ಬಲದಿಂದ ದೊರೆತ ಬಹುಮತದ ಆಡಳಿತವು ಎಷ್ಟು ಮಾತ್ರಕ್ಕೂ ಶ್ರೇಯಸ್ಕರವಾಗುವುದಿಲ್ಲ. ಸರ್ವಾಧಿಕಾರಿಗಳಿಗೆ ದೊರೆತ ಬಹುಮತವು ... ಜಾತಿಯ ... ಮತ್ತು ಸೌಜನ್ಯದಿಂದ ಪಡೆದ ಬಹುಮತವಲ್ಲ, ಆದ್ದರಿಂದ ತ್ಯಾಜ್ಯವಾಗಿದೆ.

ಜನತೆಯ ಮತವೆಂದು ಜನಾರ್ದನನ ಮತವಾಗಿದೆ. ಜನತೆಯೇ ಜನಾರ್ದನನಾಗಿದ್ದಾನೆ. ಆದ್ದರಿಂದ ಜನಮತವನ್ನು ಅನುಸರಿಸಿ ರಾಜ್ಯಾಡಳಿತವನ್ನು ನಡೆಸುವದು ಅನುಕೂಲವಾಗಿದೆ. ಯಾವುದಾದರೊಂದು ವಿಷಯದ ನಿರ್ಣಯವನ್ನು ಅನುಕೂಲ ಅಥವಾ ಪ್ರತಿಕೂಲರಾಗಿರುವ ಜನರನ್ನು ಲೆಕ್ಕಿಸಿ ಮಾಡುವುದು ಸುಲಭವಾಗಿದೆ. ಅವರನ್ನು ಹೊಡೆದು, ಬಡಿದು ಮಾಡುವುದು ಕಷ್ಟವಾಗಿದೆ. ಆದಕಾರಣ ಜನಮತವನ್ನು ಹೇಗಿದೆ ಎಂದು ತಿಳಿಯುವುದಕ್ಕೆ ರಾಜ್ಯಾಂಗ ವ್ಯವಸ್ಥೆಯಲ್ಲಿ ಶಾಸನ ಕೌನ್ಸಿಲುಗಳು ಇರುತ್ತವೆ; ಪರಂತು ಈಗಿನ ಕಾಯಿದೆ ಕೌನ್ಸಿಲುಗಳು ನಿಜವಾದ ಜನಮತವನ್ನು ಪ್ರತಿಬಿಂಬಿಸುತ್ತವೋ ಎಂದು ಹೇಳುವುದು ಅಸಾಧ್ಯ. ಯಾಕೆಂದರೆ ಇವುಗಳ ಸದಸ್ಯರಾಗಿರುವವರು ಪ್ರಜೆಗಳ ಸ್ವೇಚ್ಛೆಯಿಂದ ಆರಿಸಲ್ಪಟ್ಟವರು ಆಗಿರುವುದಿಲ್ಲ.

ಪ್ರಜಾಸತ್ತೆ ಅಥವಾ ಜನಮತವನ್ನು ಅನುಸರಿಸಿ ರಾಜ್ಯಾಡಳಿತವು ನಡೆಯುತ್ತದೆಂಬುದಕ್ಕೆ ಕೆಲವು ಲಕ್ಷಣಗಳಿವೆ. ಹಾಗೆಯೇ ಸರ್ವಾಧಿಕಾರಿಗಳು ಸರ್ವತಂತ್ರ ಸ್ವತಂತ್ರರಾಗಿ, ಆಡಳಿತವನ್ನು ನಡೆಸುತ್ತಾರೆಂಬುದಕ್ಕೂ ಕೆಲವು ಲಕ್ಷಣಗಳಿವೆ. ಪ್ರಜಾಸತ್ತೆಯು ವಿಚಾರಸ್ವಾತಂತ್ರ್ಯವನ್ನು ಒಪ್ಪುತ್ತದೆ, ಮನ್ನಿಸುತ್ತದೆ. ಆದರೆ ಸರ್ವಾಧಿಕಾರಿಗಳ ನಿರಂಕುಶ ಪ್ರಭುತ್ವವು ವಿಚಾರ ಸ್ವಾತಂತ್ರ್ಯವನ್ನು ಒಪ್ಪುವುದೂ ಮನ್ನಿಸುವುದೂ ಇಲ್ಲ. ಯಾವ ಸರ್ವಾಧಿಕಾರಿಯೂ ತನ್ನ ಮತ್ತು ತನ್ನ ಆಡಳಿತ ನೀತಿಯ ವಿಚಾರ ವಿಮರ್ಶೆಯನ್ನು ಇತರರಿಗೆ ಮಾಡಬಿಡುತ್ತದಿಲ್ಲ. ಬಲ್ಲನು ಹೀಗೆಯೇ ಮಾಡಬೇಕೆಂದು ಮಾತ್ರವಲ್ಲ, ಹೀಗೆಯೇ ಆಡಬೇಕು, ಹೀಗೆಯೇ ವಿಚಾರಿಸಬೇಕು ಎಂದು ಕೂಡ ಸರ್ವಾಧಿಕಾರಿಗಳು ನಿರ್ಬಂಧವನ್ನು ಹಾಕುತ್ತಾರೆ. ಕಡೆತನಕ ಇಂಥ ನಿರಂಕುಶ ಪ್ರಭುತ್ವವು ಬದುಕಿಬಾಳೀತೆಂದು ನನಗಂತೂ ವಿಶ್ವಾಸವಾಗುವುದಿಲ್ಲ. ಹೊರಗಿನ ಆಕ್ರಮಣಗಳಿಂದ ಸ್ವಂರಕ್ಷಣೆ ಮಾಡಿಕೊಳ್ಳುವುದಕ್ಕೋಸ್ಕರ, ಒಂದೊಂದು ಕಾಲದಲ್ಲಿ ಒಂದು ಜಾತಿಯು ವಿಚಾರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬೇಕಾದಂಥ ವಿಶೇಷ ಪರಿಸ್ಥಿತಿಯುಂಟಾಗಬಹುದು. ಅಂಥ ಪರಿಸ್ಥಿತಿಯಲ್ಲಿ ವಾಕ್ ಸ್ವಾತಂತ್ರ್ಯ, ಕರ್ಮ ಸ್ವಾತಂತ್ರ್ಯಗಳಿಗೂ ಆ ಜಾತಿಯು ಎಳ್ಳುನೀರು ಬಿಟ್ಟು ಸರ್ವಾಧಿಕಾರಿಯ ಸರ್ವತಂತ್ರ ಸ್ವಾತಂತ್ರ್ಯವನ್ನು ಒಪ್ಪಬೇಕಾಗಬಹುದು. ಆದರೆ ಹೊರಗಿನ ಆಕ್ರಮಣದ ಭಯವು ಹೋದ ಅನಂತರ ಅಂಥ ವಿಶೇಷ ಪರಿಸ್ಥಿತಿಯು ಹೋಗುತ್ತದೆ. ಆದರೆ ಸರ್ವಾಧಿಕಾರಿಗಳು ಸದಾಕಾಲ ತಾವು ಆಲೋಚಿಸಿದ ಹಾಗೆ ಜನರು ಆಲೋಚಿಸಬೇಕು, ತಾವು ಆಡಿದ ಹಾಗೆ ಜನರು ಆಡಬೇಕು, ಮತ್ತು ತಾವು ಮಾಡಿದ ಹಾಗೆ ಜನರು ಮಾಡಬೇಕು ಎಂದು ಎಣಿಸುವುದೂ, ಅದಕ್ಕೋಸ್ಕರ ಪ್ರಯತ್ನಿಸುವುದೂ ಅವಮಾನಪ್ರದವಾಗಿದೆ.

ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಮತ್ತು ಕರ್ಮಸ್ವಾತಂತ್ರ್ಯಗಳಿಗಾಗಿ ಮನುಷ್ಯ ಸಮಾಜವು ಅನಾದಿಯಿಂದ ಭಗೀರಥ ಪ್ರಯತ್ನಗಳನ್ನು ಮಾಡಿ ಈಗೀಗ ತನ್ನ ಪ್ರಯತ್ನಗಳಲ್ಲಿ ಸಫಲವಾಗುವುದರಲ್ಲಿದೆ ಎನ್ನುವಷ್ಟರಲ್ಲಿ, ಇಪ್ಪತ್ತನೇ ಶತಮಾನದ ಕೆಲವು ಸರ್ವಾಧಿಕಾರಿಗಳಿಂದ ಆ ಎಲ್ಲ ಪ್ರಯತ್ನಗಳ ಪುನಃ ವಿಫಲವಾಗಿ ಅದು ಈ ತನಕ ಅನುಭವಿಸಿದ ಕಷ್ಟನಷ್ಟಗಳೂ, ಪಟ್ಟ ಪರಿಶ್ರಮವೂ ನೀರಿನಲ್ಲಿ ಹೋಮ ಮಾಡಿದಂತೆ ವ್ಯರ್ಥವಾಗುತ್ತಲಿದೆ ಎಂಬುದನ್ನು ನೋಡಿದಾಗ ಬಹಳ ಖೇದವಾಗುತ್ತದೆ. ಸರ್ವಾಧಿಕಾರ ಮತ್ತು ಸರ್ವತಂತ್ರ ಸ್ವಾತಂತ್ರ್ಯದ ನಿರಂಕುಶ ಪ್ರಭುತ್ವವು ಮನುಷ್ಯ ಸಮಾಜಕ್ಕೂ ಮನುಷ್ಯನಿಗೂ ಮಾಡಿದ ದೊಡ್ಡ ಪಾಪವೆಂದರೆ, ಅದು ಮನುಷ್ಯನ ಈ ತ್ರಿಗುಣಾತ್ಮಕ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಒಂದೇ ಆಗಿದೆ.

ಚೆಕೊಸ್ಲೊವಕಿಯಾ ಪ್ರಕರಣ.

ಚೆಕೊಸ್ಲೊವಕಿಯಾದಲ್ಲಿನ ನಗರ ಸಭೆಗಳ ಚುನಾವಣೆ ಏನೊಂದೂ ಗೊಂದಲವಿಲ್ಲದೆ ನಡೆದುಬಿಟ್ಟವು. ಜರ್ಮನರು ಚೆಕ್ ದೇಶದ ಬಳಿಯಲ್ಲಿನ ಗಡಿಯಲ್ಲಿ ಯುದ್ಧಸನ್ನಾಹವನ್ನು ಮಾಡಿದ್ದು ನಿಜ. ಆದರೆ, ಆಸ್ಟ್ರಿಯಾವನ್ನು ನುಂಗಿದಂತೆ ಚೆಕೊಸ್ಲೊವಕಿಯಾವನ್ನು ನುಂಗಲು, ಅವರಿಗೆ ಧೈರ್ಯ ಕಡಿಮೆಯಾಯಿತು. ಚೆಕ್ಕರಿಗೆ ಸೋವಿಯಟ್ ರಷ್ಯಾ, ಫ್ರಾನ್ಸು, ಫ್ರಾನ್ಸಿನ ದೆಸೆಯಿಂದ ಇಂಗ್ಲೆಂಡಿನ ಬೆಂಬಲವಿರುವುದರಿಂದಲೆ ಹಿಟ್ಲರನು ಈ ರೀತಿ ಹಿರಿಗಿ ಬಿದನು!

ಜಪಾನಿನಲ್ಲಿ ಭಾರತೀಯ ಅವಶೇಷ.

[ಐವತ್ತು ವರ್ಷಗಳ ಹಿಂದೆ ಭಾರತೀಯ ಮುಸಲ್ಮಾನನೊಬ್ಬನು ಜಪಾನಿಗೆ ಹೋಗಿದ್ದನು. ಅಂದಿನಿಂದ ಇಂದಿನ ತನಕ ಅಲ್ಲೇ ಮನೆ ಮಾಡಿ ಸಂಸಾರ ಕಟ್ಟಿಕೊಂಡು ಮಕ್ಕಳು ಮರಿಗಳೊಡನೆ ಸುಖವಾಗಿ ಕಾಲ ಕಳೆಯುತಿದ್ದಾನೆ. ಅವನು 'ಕುಮುಜಾವಾ ಕಾದರ್' ಎಂದು ಜಪಾನೀ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ ಎಪ್ಪತ್ತು ವರ್ಷಗಳ ಮುದುಕನಾಗಿದ್ದಾನಾದರೂ ತನ್ನ ದೀರ್ಘಕಾಲದ ಜೀವನದಲ್ಲಿ ಕಂಡು ಕೇಳಿದ ಸಂಗತಿಗಳನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡು ಬಹು ಮನೋರಂಜಕವಾಗಿ ಹೇಳುತ್ತಾನೆ. ಅವನ ವಿಷಯಕವಾದ ಒಂದು ಲೇಖನವು 'ಬೊಂಬಾಯಿ ಕ್ರಾನಿಕಲ್'ನಲ್ಲಿ ಪ್ರಕಟವಾಗಿರುವದನ್ನು ಇಲ್ಲಿ ಕೊಟ್ಟಿದ್ದೇವೆ.

[illegible] ವರ್ಷಗಳ ಹಿಂದೆ ನಡೆದ [illegible] ನಾನು ಜಪಾನಿನ ದಡೆಯ ಮೇಲೆ [illegible]ಗಳನ್ನು ನೆನಪಿಗೆ ತಂದು [illegible] ನನಗೆ ಅದೊಂದು ಕನಸಿನಂತೆ ಭಾಸವಾಗುತ್ತದೆ ಎಂದು ಕುಮುಜಾವಾ ಕಾದರನು ಹೇಳಿದನು. ಜಪಾನಿನಲ್ಲಿ ಅವನೇ ಅತಿ ಪುರಾತನ ಭಾರತೀಯ ಅವಶೇಷನಾಗಿರುವನು. ಜಪಾನಿನಲ್ಲಿ ವಾಸವಾಗಿರುವ ಭಾರತೀಯರಲ್ಲಿ ಅವನೇ ಅತಿವೃದ್ಧನು. ಅವನು ಜಪಾನಿಗೆ ಪ್ರಯಾಣಮಾಡಿದ್ದ ಆ ಕಾಲದಲ್ಲಿ ಜಪಾನಿಯರು ಭಾರತೀಯರನ್ನು ಗೌರವದಿಂದ ಕಾಣುತಿದ್ದರು. ದೇವತೆಗಳ ದೇಶದಿಂದ ಬಂದವರೆಂದು ಅವರನ್ನು ಆದರದಿಂದ ನೋಡುತಿದ್ದರು. ಅಬ್ದುಲ್ ಕಾದರ್ ಎಂಬವನು ಜಪಾನೀ ಶ್ರೀಮಂತರೊಡನೆ ಬಹಳ ಸಲಿಗೆಯಿಂದ ಇರುತಿದ್ದನು. ಅವನು ಕಬ್ಬಿಣದ ಕುದುರೆಲಾಳಗಳನ್ನು ಮಾಡಿ ಜೀವನ ಮಾಡುತಿದ್ದನು. ಆ ಕಾಲದಲ್ಲಿ ಜಪಾನಿಯರಿಗೆ ಕಬ್ಬಿಣದ ಲಾಳಗಳನ್ನು ಮಾಡುವದು ತಿಳಿದಿರಲಿಲ್ಲ. ಅವರು ಹುಲ್ಲಿನ ಲಾಳಗಳನ್ನು ಉಪಯೋಗಿಸುತಿದ್ದರು. ಆದ್ದರಿಂದ ಅಬ್ದುಲ್ ಕಾದರನ ಬುದ್ಧಿವಂತಿಕೆ-ಚಾತುರ್ಯಗಳನ್ನು ನೋಡಿ ಅವರು ತಲೆದೂಗುತಿದ್ದರು. ಅವನ ಮಗ-ಅಲಿಯು ಟೋಕಿಯೋ ರೈಲ್ವೆ ಸ್ಟೇಶನಿನ ಉಚ್ಚಪದಾಧಿಕಾರಿ ಸ್ಟೇಶನ ಮಾಸ್ತರನಾಗಿದ್ದನು.

ಆ ಕಾಲದ ಜಪಾನಿಯರು

ಆ ಕಾಲದಲ್ಲಿ ವಿದೇಶಿಯರು ಜಪಾನಿಯರನ್ನು ತಿರಸ್ಕಾರದಿಂದ ಕಾಣುತಿದ್ದರು. ಅವರನ್ನು ಸಿಕ್ಕಿದ್ದಲ್ಲಿ ತೆಗಳುತಿದ್ದರು, ಒದೆಯುತಿದ್ದರು. ವಿದೇಶೀ ಅಪರಾಧಿಗಳನ್ನು ತಮ್ಮ ನ್ಯಾಯಸ್ಥಾನಗಳಲ್ಲಿ ವಿಚಾರಿಸಿ ದಂಡಿಸುವ ಅಧಿಕಾರವು ಜಪಾನಿಯರಿಗಿದ್ದಿರಲಿಲ್ಲ. ಪ್ರತಿಯೊಂದು ಪರದೇಶೀ ಜನಾಂಗಕ್ಕೆ ಹಲಕೆಲವು ಹಕ್ಕು-ರಿಯಾಯತಿಗಳು ಪ್ರಾಪ್ತವಾಗಿದ್ದುವು. ಪರದೇಶಿಯರ ಕೋರ್ಟುಗಳಿಗೆ ಹೋಗಿ ನ್ಯಾಯವನ್ನು ಪಡೆಯುವುದು ಕಠಿನವಾಗಿತ್ತು. ಆದ್ದರಿಂದ ವಿದೇಶಿಯರ ಅತ್ಯಾಚಾರ ಅನಾಚಾರಗಳನ್ನು ಜಪಾನಿಯರು ಸುಮ್ಮನೆ ಸಹಿಸಿಕೊಂಡು ಇರುತಿದ್ದರು. ರಶ್ಯ ಜಪಾನು ಯುದ್ಧವಾಗುವ ತನಕ ಜಪಾನಿಯರಿಗೆ ಯಾರೂ ಮರ್ಯಾದೆ ಕೊಡುತ್ತಿರಲಿಲ್ಲ. ಆ ಕಾಲದಲ್ಲಿ ವಿದೇಶಿಯರು ತಮ್ಮ ಜಪಾನೀ ಹಕ್ಕು ಅಧಿಕಾರಗಳನ್ನು ಜಪಾನ ಸರಕಾರಕ್ಕೆ ಹತ್ತು ವರ್ಷಗಳ ತನಕ ಬಿಟ್ಟಿರಲಿಕ್ಕೆ ಸಮ್ಮತಿಸಿದರು. ರಶ್ಯ ಜಪಾನ ಯುದ್ಧವು ಮುಗಿಯುವಷ್ಟಕ್ಕೆ, ಜಪಾನರು ತಮ್ಮ ಮನೆಯಲ್ಲಿ ತಾವೇ ಯಜಮಾನರಾದರು. ಪರಂತು ಅದಕ್ಕೆ ಮೊದಲು ಹಾಗಲ್ಲ. ವಿದೇಶೀಯರ ಕೋರ್ಟುಗಳಲ್ಲಿ ವ್ಯಾಜ್ಯಗಳನ್ನು ಹೂಡುವದು ಭಯಂಕರ ಕಷ್ಟನಷ್ಟಗಳಿಗೆ ಕಾರಣವಾಗುತಿತ್ತು. ಖರ್ಚು ವಿಪರೀತವಾಗುತಿತ್ತು. ಅಲ್ಲಿಯ ವಕೀಲರು ಬಕಪಕ್ಷಿಗಳಂತೆ ಕಕ್ಷಿಗಾರರನ್ನು ನುಂಗಿ ಹೊಟ್ಟೆ ತುಂಬಿಸಲಿಕ್ಕೆ ಕಾದು ಇರುತಿದ್ದರು. ವ್ಯಾಜ್ಯತೀರ್ಮಾನವು ಶೀಘ್ರದಲ್ಲಿ ಆಗದಂತೆ ವಾದಿ ಪ್ರತಿವಾದಿ ಎರಡು ಕಡೆಗಳ ವಕೀಲರೂ ತಮ್ಮೊಳಗೆ ಒಪ್ಪಂದ ಮಾಡಿಕೊಳ್ಳುತಿದ್ದರು. ಆದರ ಬದಲಿಗೆ ಜಪಾನೀ ಕೋರ್ಟುಗಳಲ್ಲಿ ನ್ಯಾಯತೀರ್ಮಾನವು ಚೆನ್ನಾಗಿ ಆಗುತಿತ್ತು. ಆದರೆ ತಮ್ಮ ತೀರ್ಮಾನವನ್ನು ಕಾರ್ಯರೂಪಕ್ಕೆ ತರುವ ಪೂರ್ಣಾಧಿಕಾರವು ಆ ಕೋರ್ಟುಗಳಿಗೆ ಇರಲಿಲ್ಲವಾದ ಕಾರಣ ಜಪಾನಿಯರಿಗೆ ಆ ಕೋರ್ಟುಗಳಿಂದ ಪ್ರಯೋಜನವಿರಲಿಲ್ಲ.

ಆ ಕಾಲದಲ್ಲಿ ಆಮದು ರಫ್ತು ವ್ಯಾಪಾರವೆಲ್ಲ ವಿದೇಶಿಯರ ಕೈಯಲ್ಲಿತ್ತು. ಕುಮುಜಾವ ಕಾದರನಿಗೂ ಯೊಕೋಹಾಮಾದಲ್ಲಿ ಒಂದು ಭಂಡಸಾಲೆ ಇದ್ದಿತು. ಅವನು ಹಿಂದೂಸ್ಥಾನದಿಂದ ತೊಗಲು ಮತ್ತು ನೀಲಿಯ ಆಮದು ಮಾಡಿ ರೇಶ್ಮೆಯನ್ನು ರಫ್ತುಮಾಡುತಿದ್ದನು. 1923ರ ಭೂಕಂಪದಲ್ಲಿ ಅವನ ಸರ್ವಸ್ವವು ನಷ್ಟವಾಯಿತು. ಪುನಃ ವ್ಯಾಪಾರ ಉದ್ಯೋಗದಲ್ಲಿ ತೊಡಗೋಣ—ಎಂದರೆ ವೃದ್ಧನಾಗಿ ಬಿಟ್ಟಿದ್ದನು. ಈಗವನು ಫುಜಿಸಾವಾದಲ್ಲಿ ಏಕಾಕಿಯಾಗಿ ಕಾಲಯಾಪನೆ ಮಾಡುತ್ತಾನೆ.

ಕುಮುಜಾವಾ ಕಾದರನ ಕಣ್ಣೆದುರಿನಲ್ಲಿಯೇ ದೊಡ್ಡ ಕೈಗಾರಿಕೆಗಳ ಸ್ಥಾಪನೆಯಾಗಿದೆ. ಎಷ್ಟೋ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಗೆ ಬಂದಿವೆ. ಎಸೋಶಿವಾದ ಚಪ್ಪಿನ ಕೈಗಾರಿಕೆಯು ಆಗ ಪ್ರಾರಂಭಾವಸ್ಥೆಯಲ್ಲಿತ್ತು. ಈಗ ಅದು ನೂರಾರು ಪಾಲು ಬೆಳೆದಿದೆ. ಎಸೋಶಿವಾದ ನೂರಾರು ಚಪ್ಪಿನ ಅಂಗಡಿಗಳು ಜನಸ್ತೋಮದಿಂದ ಕಿಕ್ಕಿರಿದು ಇರುತ್ತವೆ. ಆ ಕಾಲದಲ್ಲಿ ಸಿಮೆಂಟಿನ ಗಾರೆಯ ರಸ್ತೆಗಳು ಇರಲಿಲ್ಲ. ಮೊಣಗಾಲು ಮುಳುಗುವಷ್ಟು ಕೆಸರು ನಿಂತ ಟೋಕಿಯೋ ರಸ್ತೆಯಲ್ಲಿ ತಿರುಗಾಡಿದ ನೆನಪು ಕಾದರನಿಗೆ ಇನ್ನೂ ಅಚ್ಚಳಿಯದೆ ಇದೆ. ಆದರೆ ಇದರಲ್ಲೆಲ್ಲಾ ಈಗ ಅತ್ಯಪೂರ್ವ ಪರಿವರ್ತನೆಗಳಾಗಿರುವುವು.

ಜಪಾನಿಯರಿಗೆ ಹಣ್ಣುತಿಂದೂ ಗೊತ್ತಿಲ್ಲ!

ಕಾದರನು ವಾಚಾಳಿ ಅಲ್ಲ. ಅವನು ತಾನಾಗಿ ಇತರರೊಡನೆ ಮಾತನಾಡುವುದು ಬಹಳ ಕಡಿಮೆ. ಆದರೆ ಯಾರಾದರೂ ಅವನನ್ನು ಪ್ರಶ್ನಿಸುತ್ತ ಹೋದರೆ, ಒಂದು ಹರಿಕತೆಯನ್ನೇ ಆರಂಭಿಸಿ ಬಿಡುವನು. ಎಷ್ಟೋ ಅದ್ಭುತ ಮತ್ತು ಮನೋರಂಜಕ ಸಂಗತಿಗಳನ್ನು ಹೇಳುವನು. ಆ ಕಾಲದಲ್ಲಿ ವಿದೇಶಗಳಿಂದಬಂದ ವಸ್ತುಗಳಲ್ಲಿ ಜಪಾನಿಯರಿಗೆ ಚಿತ್ರವಿಚಿತ್ರವಾಗಿ ಕಾಣುತಿದ್ದುವು. ಹಣ್ಣುಹಂಪಲುಗಳನ್ನು ಸಹ ಅವರು ನೋಡಿರಲಿಲ್ಲ. ಕಾದರನು ಆಗಾಗ ಹಿಂದೂಸ್ಥಾನದಿಂದ ತನ್ನ ಖಾಸಗಿ ಉಪಯೋಗಕ್ಕೆ ಬಾಳೆಕಾಯಿಗಳನ್ನು ತರಿಸಿಕೊಳ್ಳುತಿದ್ದನು. ಕೆಲಕೆಲವು ಬಾರಿ ಜಪಾನೀ ಸಾಹುಕಾರರನ್ನು ಊಟಕ್ಕೆ ಕರೆಸಿ ಬಾಳೆಕಾಯಿ ಪಲ್ಲೆಗಳನ್ನು ಅವರಿಗೆ ಬಳಸುತಿದ್ದನು. ಮೊದಲಿಗೆ ಬಾಳೆಹಣ್ಣುಗಳನ್ನು ನೋಡಿ ಆ ಸಾಹುಕಾರರಿಗೆ ಮುಟ್ಟಲಿಕ್ಕೂ ಒಂದು ಬಗೆಯ ಅಂಜಿಕೆ ಅಸಹ್ಯವಾಗುತಿತ್ತು. ಆದರೆ ಅವುಗಳನ್ನು ಸುಲಿದು ಬಾಯೊಳಗಿಟ್ಟಾಗ—'ಓಹೋ! ಎಷ್ಟು ರುಚಿ' ಎಂದು ನೀರು ಸುರಿಸುತಿದ್ದರು. ಕಾದರನಿಗೆ ಜಪಾನಿ ಭಾಷೆಯನ್ನು ಕಲಿಯುವದು ಬಹಳ ಕಷ್ಟವಾಯಿತು. ಅದನ್ನು ಪೂರ್ಣ ಕಲಿಯುವ ತನಕ ತುಂಡು ತುಂಡು ಶಬ್ದಗಳನ್ನು ಆಡಿ, ಕೈಸನ್ನೆಯಿಂದ ವ್ಯವಹಾರ ಮಾಡುತಿದ್ದನು. ಹೊಟ್ಟೆ ಹಸಿವೆಯಾದಾಗ, 'ಊಟಕ್ಕೆ ಬಳಸು' ಎಂದು ಹೊಟೇಲಿನವನಿಗೆ ತಿಳಿಸಲಿಕ್ಕೆ ಅವನು ಹೊಟ್ಟೆ ಬಡಕೊಂಡುದೂ ಇದ್ದಿತ್ತಂತೆ. ಮೊದಮೊದಲು ಜಪಾನಿ ಪಲ್ಲೆಪಚ್ಚಡಿಗಳು ಅವನಿಗೆ ಸೇರುತ್ತಿರಲಿಲ್ಲ. ಅವನ್ನು ತಿಂದು ಅವನಿಗೆ ವಾಂತಿಯಾದುದೂ ಇದೆ. ಈಗ ಅವನಿಗೆ ಅವುಗಳೆಲ್ಲ ರುಚಿಸುತ್ತವೆ. ಆದರೆ ದಿನಕ್ಕೊಂದು ಬಾರಿ ಭಾರತೀಯ ಕ್ರಮದಲ್ಲಿಯೇ ಅಡಿಗೆ ಊಟಮಾಡುತ್ತಾನೆ.

ಜಪಾನಿಗೆ ಕಾದರನು ಹೋಗಿದ್ದಾಗ 'ಪಾಸ್ ಪೋರ್ಟ'-ರಹದಾರಿಯ ಅಗತ್ಯವಿರಲಿಲ್ಲ. ಅವನ ಪಾಸ ಪೋರ್ಟ ತೆಗೆದುಕೊಂಡ ಅಲ್ಲಿಗೆ ಹೋಗಿರಲಿಲ್ಲ. ಆದರೆ ಮುಂದೆ ಕನ್ಸಲರ್ ಆಫೀಸಿನಲ್ಲಿ ತನ್ನ ಹೆಸರು ದಾಖಲು ಮಾಡಿಕೊಳ್ಳುವ ಅಗತ್ಯ ಬಿದ್ದಿತು. ಫ್ರೆಂಚ ಕಾರೀಕಲ್ಲಿನಿಂದ ಕಾದರನು ಜಪಾನಿಗೆ ಹೋಗಿದ್ದನು. ಆದ್ದರಿಂದ ಫ್ರೆಂಚ ಕನ್ಸಲರ ಆಫೀಸಿಗೆ ತೆರಳಿ, ತನ್ನ ಹೆಸರು ದಾಖಲಾತಿಗೆ ಸೂಚಿಸಿದನು. ಆದರೆ ಪಾಸಪೋರ್ಟ ಅಥವಾ ಬೇರೆ ಯಾವದಾದರೂ ದಾಖಲೆ ಇದ್ದಿರಲಿಲ್ಲವಾದ್ದರಿಂದ ತಾನು 'ಫ್ರೆಂಚ ಕಾರೀಕಲ್ ನಿವಾಸಿ' ಎಂದು ರುಜು ಮಾಡುವದು ಅವನಿಗೆ ಬಹಳ ಕಷ್ಟವಾಯಿತು. 'ಕಾದರನು ಫ್ರೆಂಚ ಕಾರೀಕಲ್ ನಿವಾಸಿ ನಿಜವಾಗಿದ್ದರೆ ಫ್ರೆಂಚ ಭಾಷೆಯಲ್ಲಿ ಮಾತಾಡಲಿ, ನೋಡೋಣ' ಎಂದು ಅಧಿಕಾರಿಯು ಹೇಳಿದನು. ಕಾದರನಿಗೆ ಬಹಳ ಕಷ್ಟವಾಯಿತು. ಕಾರೀಕಲ್ಲಿಗೆ ಬರುವ ಫ್ರೆಂಚರು, ದೇಶೀಭಾಷೆಯನ್ನು ಕಲಿಯುವರೇ ಹೊರತು, ದೇಶಿಯರು ಫ್ರೆಂಚ ಭಾಷೆಯನ್ನು ಕಲಿಯಬೇಕಾಗಿಲ್ಲವೆಂದು ಎಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ. ಮತ್ತೆ ಬ್ರಿಟಿಷ ಕನ್ಸಲರ್ ಆಫೀಸಿಗೆ ಹೋಗಿ ತನ್ನ ಹೆಸರನ್ನು ದಾಖಲು ಮಾಡಿದನು. ಅದು ಹೆಚ್ಚು ಸುಲಭವಾಯಿತು.

ಈಗ ಅವನು ಜಪಾನೀ ನಾಗರಿಕನಾಗಿದ್ದಾನೆ. ಜಪಾನೀ ಹೆಂಗಸನ್ನು ಮದುವೆಯಾಗಿ, ಅವಳಿಂದ ನಾಲ್ವರು ಗಂಡುಮಕ್ಕಳನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಪಡೆದಿದ್ದಾನೆ. ಒಬ್ಬ ಹುಡುಗನು ಕ್ಷಯದಿಂದ ನರಳುತ್ತಾನೆ. ಉಳಿದವರೆಲ್ಲರಿಗೆ ಮದುವೆಯಾಗಿವೆ. ಮುಸಲ್ಮಾನ ಪದ್ಧತಿಯನ್ನನುಸರಿಸಿಯೇ ಅವನು ತನ್ನ ಮಕ್ಕಳ ಮದುವೆ ಮಾಡಿದ್ದಾನೆ. ಅವನ ಮೊಮ್ಮಗನೊಬ್ಬನು ಯೊಕೋಹಾಮದ ಸ್ಯೆಂಟ್ ಜೋಸೇಫ ಕಾಲೇಜಿನಲ್ಲಿ ಕಲಿತು ಉಪಾಧಿ ಪಡೆದಿದ್ದಾನೆ. ಜಪಾನೀ ಕ್ರಮವನ್ನನುಸರಿಸಿ ಅವನ ಮಕ್ಕಳೆಲ್ಲರಿಗೆ ಸೈನಿಕ ಶಿಕ್ಷಣವು ದೊರೆತಿದೆ. ಎಂಬುದರ ಕುರಿತು ಕಾದರನಿಗೆ ಬಹಳ ಸಂತೋಷವಾಗಿದೆ.

ಕಾದರನು ಭಾರತದ ಸಂಬಂಧ ಕಡಿದಿದ್ದಾನೆ.

ಕಾದರನಿಗೆ ಈಗ ಭಾರತದೊಡನೆ ಯಾವ ಸಂಬಂಧವೂ ಇರುವುದಿಲ್ಲ. ಅವನ ಒಬ್ಬಳೇ ಒಬ್ಬ ಸಹೋದರಿಯು ಕೆಲವು ವರ್ಷಗಳ ಹಿಂದೆ, ಭಾರತದಲ್ಲಿ ಸತ್ತುಹೋದಳು. ಅವಳ ಮಗನು ಮಹಾಯುದ್ಧಕಾಲದಲ್ಲಿ ಫ್ರಾನ್ಸಿನಲ್ಲಿ ಸತ್ತಿರುವನು.

ಎಪ್ಪತ್ತು ವರ್ಷದವನಾದರೂ ಕಾದರನು ದೃಢಕಾಯನಾಗಿದ್ದಾನೆ, ನಡೆಯುವದರಲ್ಲಿ ಓಡುವುದರಲ್ಲಿ ತರುಣರನ್ನೂ ಹಿಂದೆ ಹಾಕಬಲ್ಲನು. ಆದರೆ ಬಹು ಬೇಗ ದಣಿಯುತ್ತಾನೆ.

ಜಪಾನ ರೀತಿಯಿಂದ ಕಟ್ಟಿದ ಒಂದು ಸಣ್ಣ ಮನೆಯಲ್ಲಿ ಅವನು ವಾಸವಾಗಿದ್ದಾನೆ. ಅದರ ಸುತ್ತಲೂ ಅವನೇ ಮಾಡಿದ ಜಪಾನೀ ಕ್ರಮದ ತೋಟವಿದೆ. ಈಗ ಅವನಿಗೆ ಜಪಾನೀ ಭಾಷೆಯು ಬಹು ಚೆನ್ನಾಗಿ ಬರುತ್ತದೆ. ಊರಿನಲ್ಲಿ ಒಳ್ಳೇ ಹೆಸರು ಪಡೆದಿದ್ದಾನೆ. ಕುಮುಜಾವಾ ಇರುವದು ಎಲ್ಲಿ ಎಂದು ಆ ಊರವರು ಯಾರು ಬೇಕಾದರೂ ನಿಮಗೆ ಹೇಳಬಲ್ಲರು.

Prescription Work a Speciality

Eye Testing Free.

For Stylish FRAMES
Up to-date shape LENSES
and
All kinds of optical goods

Please Visit

Nayaks Optical Stores
Scientific Opticians,
Temple Square, MANGALORE

ಸ್ಲೇವ್ ಐಲೆಂಡ್

"ಲೋಧ್ರ"ದ ಹಲವು ಬಾಟ್ಲುಗಳನ್ನು ನಾನು ಉಪಯೋಗಿಸಿದ್ದೇನೆ ಅವುಗಳಿಂದ ನನಗೆ ಬಹಳ ಪರಿಹಾರ ದೊರೆಯಿತೆಂದು ಕೇಳಿ ತಮಗ ಸಂತೋಷವಾಗಬಹುದು. 'ನನ್ನ ಈಗಿನ ಕಾಯಿಲೆಗಾಗಿ ನಾನು ಹಿಂದೂಸ್ಥಾನದ ಮತ್ತು ಸಿಲೋನಿನ ಅನೇಕ ಡಾಕ್ಟರುಗಳಿಂದ ಚಿಕಿತ್ಸೆ ಪಡೆಯುತ್ತಿದ್ದೇನ. ಆದರೆ ಗುಣವೇನೂ ಆಗಲಿಲ್ಲ.

೧೦ ವೆಲ್ಲನ್ ಪ್ಯಾಸೇಜ್
ಸ್ಲೇವ್ ಐಲೆಂಡ್, ಕೊಲಂಬೊ.

ಶ್ರೀಮತಿ ಥೆರೇಸಾ ಅಂಡ್ರ್ಯೂ.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

ನಮಗೆ ದೇವಸ್ಥಾನಗಳು ಬೇಕೇ?

ಈಗಿನ ಕಾಲದಲ್ಲಿ ನಮಗೆ ದೇವಸ್ಥಾನಗಳು ಬೇಕೇ ಎಂಬುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಕೆಲವರು ಅಗತ್ಯ ಬೇಕು ಅನ್ನುವರು, ಕೆಲವರು ನಮಗೆ ಬೇಡವೆನ್ನುವರು. ಈ ಬೇಡವೆನ್ನುವವರು ಆ ಮರದ ಹಾಗೂ ಮಣ್ಣಿನ ಗೊಂಬೆಗಳಲ್ಲಿ ಏನಿರುವದು? ಇಲ್ಲವೇ ಆ ಕಲ್ಲಿನ ಹಾಗೂ ಪಂಚಲೋಹದ ವಿಗ್ರಹಗಳಲ್ಲಿ ಏನಿರುವದು? ಎನ್ನುವರು. ದೇವರು ನಮ್ಮ ಹೃದಯದಲ್ಲಿ ಇರುವಾಗ್ಯೆ ಮೂರ್ತಿಗಳಿಗೆ ಕೈಮುಗಿದು ಏನು ಪ್ರಯೋಜನವೆನ್ನುವರು. ದೇವರು ಇದ್ದಾನೆ ಎಂಬುದು ದೊಡ್ಡ ತತ್ವಗಳನ್ನು ಓದಿ ಕಲಿತವರಿಗೆ ಗೊತ್ತಿರಬಹುದು. ಆದರೆ ಚಿಕ್ಕ ಮಕ್ಕಳಿಗೆ ಇದು ಗೊತ್ತಾಗುವ ಬಗೆ ಹೇಗೆ? ಅವರಿಗೆ ಅಕ್ಷರ ಜ್ಞಾನ ಕಲಿಸದೆ ದೊಡ್ಡ ಪುಸ್ತಕಗಳನ್ನು ಕೊಟ್ಟರೆ ಹೇಗಾಗುವದು? ಓದಲಿಕ್ಕೆ ತಿಳಿಯುವದೇ? ಹಾಗೆಯೇ ಚಿಕ್ಕಂದಿನಿಂದಲೇ ನಮ್ಮನ್ನು ಉಂಟುಮಾಡಿ ಸಂರಕ್ಷಿಸುವ ದೇವರು ಎಂಬವನು ಇದ್ದಾನೆ ಎಂಬುದು ಅವರ ಮನಸ್ಸಿಗೆ ಹೋಗುವ ಬಗ್ಗೆ ಈ ದೇವಸ್ಥಾನಗಳನ್ನು ರಚಿಸಿ ಅದರಲ್ಲಿ ವಿಗ್ರಹಗಳನ್ನು ಪ್ರತಿಷ್ಠೆಮಾಡಿ ಅಂಥಾ ಪ್ರತಿಮೆಗಳಲ್ಲಿ ದೇವರು ಇದ್ದಾನೆಂದು ಅವರಿಗೆ ಪ್ರಥಮ ಪಾಠವಾಗಿ ಕಲಿಸುವದು ಅಗತ್ಯ. ಅಂಥಾ ಕಲಿಸುವಿಕೆಯಿಂದ ಅವರಿಗೆ ದೇವಸ್ಥಾನಗಳನ್ನು ನೋಡಿದ ಕೂಡಲೇ ದೇವರು ಇದ್ದಾನೆ ಎಂಬುದು ಯಾವಾಗಲೂ ನೆನಪಾಗುವದು. ಇದು ಪ್ರಥಮತಃ ಕಲಿಸದಿದ್ದರೆ ಅವರಿಗೆ ಮುಂದಿನ ಜ್ಞಾನವು ಬರಲು ಪ್ರಯಾಸವಾಗುವದು. ದೇವಸ್ಥಾನಗಳು ನಮಗೆ ಅಗತ್ಯ ಬೇಕೆಂಬದಾಗಿ ದೊಡ್ಡ ಅದ್ವೈತಿಗಳಾದ ವಿವೇಕಾನಂದ ಸ್ವಾಮಿಗಳು ಕೂಡಾ ಹೇಳಿರುವರು. ಕೆಲವು ವರ್ಷಗಳ ಹಿಂದೆ ವಿವೇಕಾನಂದ ಸ್ವಾಮಿಗಳು ತಿರುಗಾಡುತ್ತಾ ಏಕಾಂಗಿಯಾಗಿ ರಾಜಪುತಾನಕ್ಕೆ ಬಂದರು. ಮತ್ತು ಅಲ್ಲಿಯ ದಿವಾನರ ಮನೆಯಲ್ಲಿ ಉಳಕೊಂಡರು. ದಿವಾನರು ಇವರ ಬುದ್ಧಿ ಕೌಶಲ್ಯಗಳನ್ನು ಕಂಡು ಇವರಿಗೆ ಅರಸರ ಭೇಟಿಮಾಡಿಸಬೇಕೆಂದು ನೆನಸಿ ಅರಸರ ಕೂಡೆ ಹೇಳಿದರು. ಅದಕ್ಕೆ ಅರಸರು ಒಪ್ಪಿ ತಮ್ಮ ಪರಿವಾರದೊಡನೆ ಒಂದು ಸ್ವಾಮಿಯವರನ್ನು ಕಂಡರು. ಅರಸರಿಗೆ ದೇವರ ಮೇಲೆ ವಿಶ್ವಾಸ ಸ್ವಲ್ಪ ಕಡಿಮೆ. ಆದ್ದರಿಂದ ಬಂದವರೇ "ಸ್ವಾಮಿಯವರೇ, ನಮಗೆ ದೇವಸ್ಥಾನಗಳು ಮತ್ತು ಪ್ರತಿಮಾ ಪೂಜೆ ಅಗತ್ಯವೇ? ಆ ಪಂಚಲೋಹದ ಕಲ್ಲಿನ ಮೂರ್ತಿಗಳಲ್ಲಿ ದೇವರು ಇದ್ದಾನೆಯೇ? ಎಂದು ಪ್ರಶ್ನಿಸಿದರು. ಆಗ ಸ್ವಾಮಿಗಳು ಏನೂ ಉತ್ತರವೀಯದೇ ಅತ್ತಿತ್ತ ನೋಡಿ ಆ ಅರಸರ ಭಾವಚಿತ್ರವನ್ನು ತೆಗೆದು ಮೇಜಿನಲ್ಲಿ ಇಟ್ಟು ಇದರ ಮೇಲೆ ಉಗುಳಿ ಎಂದು ದಿವಾನರಿಗೂ ಅಲ್ಲಿ ಕೂಡಿದ ಇತರ ಅಫೀಸರರಿಗೂ ಹೇಳಿದರು. ಅವರೆಲ್ಲಾ "ಇದೇನು? ಇಂಥಾ ದೊಡ್ಡ ವಿದ್ವಾಂಸರು ಹೀಗೆನ್ನುವರು!" ಎಂದು ಗಾಬರಿಯಾದರು. ಅವರನ್ನು ಕುರಿತು 'ಇದೇನು ಸ್ವಾಮೀಜಿಯವರೇ, ತಾವು ಹೇಳುವದು? ನಮ್ಮ ಅರಸರ ಎದುರಿನಲ್ಲಿಯೇ ಅವರ ಭಾವಚಿತ್ರದ ಮೇಲೆ ಉಗುಳುವರೆ ಹೇಳುವಿರಿ! ಅವರು ನಮ್ಮ ಅರಸರಲ್ಲವೇ? ಆ ಭಾವಚಿತ್ರದ ಮೇಲೆ ನಾವು ಉಗುಳಬಹುದೇ? ಎಂದರು. ಆಗ ಸ್ವಾಮೀಜಿಯವರು ನಕ್ಕು 'ಈ ನಿರ್ಜೀವ ಭಾವಚಿತ್ರದ ಮೇಲೆ ನಿಮಗೆ ಇಷ್ಟು ಅಭಿಮಾನವಿರುವಾಗ ಅದೇ ದೇವಸ್ಥಾನಗಳಲ್ಲಿ ಇರುವ ದೇವರ ವಿಗ್ರಹಗಳ ಮೇಲೆ ಎಷ್ಟು ಅಭಿಮಾನವಿರಬೇಕು?' ಎಂದರು. ಅರಸರೂ ಅಲ್ಲಿ ಕೂಡಿದ ಇತರರೂ ಬೆರಗಾದರು. ಈ ಭಾವನೆ ಉಂಟಾಗುವುದಕ್ಕೇನೇ ಮೂರ್ತಿ ಪೂಜೆಯು ಅಗತ್ಯವೆಂದರು. ಕೂಡಿದವರೆಲ್ಲಾ ಒಪ್ಪಿದರು. ಅಂಥಾ ವಿವೇಕಾನಂದ ಸ್ವಾಮಿಗಳ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರು ಕಲ್ಕತ್ತೆಯ ಹತ್ತಿರ ದಕ್ಷಿಣೇಶ್ವರ ದೇವಾಲಯದಲ್ಲಿ ಶ್ರೀ ಕಾಳೀದೇವಿಗೆ ದಿನನಿತ್ಯ ಪೂಜೆಮಾಡುತ್ತಾ ಆ ದೇವಿಯ ವರಪ್ರಸಾದದಿಂದ ಜೀವನಮುಕ್ತರಾದರು. ಈಗ ನಮ್ಮ ಕಣ್ಣಾರೆ ನಾವು ಕಾಣುತ್ತೇವೆ. ಅಂಥಾ ಮಹಾಪುರುಷರ ಸಾವಿರಾರು ಮಂದಿ ಶಿಷ್ಯಾನುಶಿಷ್ಯರು ಅಮೇರಿಕ, ಫ್ರಾನ್ಸು, ಇಂಗ್ಲೆಂಡ ಮೊದಲಾದ ಸ್ಥಳಗಳಲ್ಲಿ ಮತ್ತು ಇಡೀ ಹಿಂದುಸ್ಥಾನದಲ್ಲಿ ಮಠಗಳನ್ನು ಸ್ಥಾಪಿಸಿ ಎಷ್ಟೋ ಲೋಕೋದ್ಧಾರದ ಕೆಲಸಗಳನ್ನು ಮಾಡುತ್ತಲಿದ್ದಾರೆ. ಇಂಥಾ ಮಠಗಳಲ್ಲಿ ಗುರುಗಳ ಭಾವಚಿತ್ರಗಳನ್ನು ಇಟ್ಟು ಪ್ರತಿನಿತ್ಯವೂ ಪೂಜೆಯು ನಡೆಯುತ್ತಲಿದೆ. ಅಲ್ಲದೇ ಈಗ ತಿರುವಣ್ಣಾಮಲೈಯಿಗೆ ಹೋಗಿ ನೋಡಿರಿ. ಜೀವನಮುಕ್ತರಾದ ಭಗವಾನ್ ಶ್ರೀ ರಮಣ ಮಹರ್ಷಿಗಳ ಆಶ್ರಮದಲ್ಲಿ ಅವರಿಗೆ ಸ್ವತಹ ದೇವಸ್ಥಾನಗಳ ಅಗತ್ಯವಿಲ್ಲದಿದ್ದರೂ ಅರುಣಾಚಲ ಪರ್ವತದ ಬುಡದಲ್ಲಿ ತಮ್ಮ ಮಾತೆಯನ್ನು ದಹನ ಮಾಡಿದ ಸ್ಥಳದಲ್ಲಿ ಒಂದು ದೇವಸ್ಥಾನವನ್ನು ರಚಿಸಿ ನಿತ್ಯಪೂಜೆಯು ನಡಿಯುತ್ತಲಿದೆ. ಇಂಥಾ ಮಹಾಪುರುಷರು ಕೂಡಾ ದೇವಸ್ಥಾನಗಳನ್ನು ರಚಿಸಿದ್ದನ್ನು ಕಂಡರೆ ಇಂಥಾ ದೇವಸ್ಥಾನಗಳು ನಮ್ಮಂಥಾ ಸಂಸಾರದಲ್ಲಿ ಬಿದ್ದು ಹೋರಾಡುವವರಿಗೆ ದೇವರ ನೆನಪು ಬರುವುದಕ್ಕಾದರೂ ಅಗತ್ಯವೆಂತ ಕಂಡುಬರುವುದಿಲ್ಲವೇ? ಮುಂಚಿನ ಕಾಲಕ್ಕಿಂತಲೂ ಈಗಿನ ಕಾಲದಲ್ಲಿ ನಮಗೆ ಈ ಪಾಶ್ಚಿಮಾತ್ಯ ವಿದ್ಯೆಯಿಂದ ದೇವರ ಮೇಲಿನ ಭಕ್ತಿ ವಿಶ್ವಾಸಗಳು ಕಡಿಮೆ ಆಗುತ್ತಾ ಬರುವಾಗ್ಯೆ ಇಂಥಾ ದೇವಸ್ಥಾನಗಳು ಅತೀ ಅಗತ್ಯವಲ್ಲವೇ? ಅಲ್ಲದೇ ಹಳ್ಳಿಹಳ್ಳಿಗಳಲ್ಲಿ ಇನ್ನೂ ದೇವಸ್ಥಾನಗಳನ್ನು ರಚಿಸುವುದು ಅಗತ್ಯ. ನಮ್ಮ ಜಿಲ್ಲೆಯಲ್ಲೇ ನೋಡಿರಿ. ಹತ್ತು ಅಥವಾ ಹದಿನೈದು ವರ್ಷಗಳ ಈಚೆಗೆ ಕ್ರಿಶ್ಚನರು ಎಷ್ಟು ಬಲವಾಗಿ ಅವರ ಮತ ಪ್ರಚಾರಮಾಡಿ ಮುಂದುವರಿಯುತ್ತಾರೆ. ಎಲ್ಲಿ ನೋಡಿದರೂ ಪ್ರತೀ ಒಂದು ಹಳ್ಳಿಯಲ್ಲಿಯೂ ಕೂಡಾ ಚರ್ಚೆಗಳನ್ನು ಕಟ್ಟಿಸುತ್ತಾರೆ. ನಾವು ಹೊಸ ದೇವಸ್ಥಾನಗಳನ್ನು ಕಟ್ಟಿಸುವ ಬದಲಾಗಿ ಇದ್ದ ದೇವಸ್ಥಾನಗಳೇ ಬೇಕೋ? ಎಂಬ ಚರ್ಚೆಯಲ್ಲಿದ್ದೇವೆ. ಈಗಿನ ಸ್ಥಿತಿಯಲ್ಲಿ ಹೊಸ ದೇವಸ್ಥಾನಗಳನ್ನು ಕಟ್ಟಿಸಲು ಸಾಧ್ಯವಿಲ್ಲದಿದ್ದಲ್ಲಿ ಇದ್ದ ದೇವಸ್ಥಾನಗಳನ್ನಾದರೂ ಪ್ರಬಲಮಾಡಿ ನಮ್ಮ ಹಿಂದೂ ಮತವನ್ನು ಪ್ರಚಾರಮಾಡಿ ಕಾಪಾಡಿಕೊಳ್ಳುವುದು ಅಗತ್ಯವೆಂದು ತೋರುತ್ತದೆ.

ರಾಮದಾಸ.

(ಮುಂದುವರಿಯುವದು)

The Bank of Mangalore Limited,
MANGALORE.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಬಾಕಿಮಾಡಿಕೊಂಡದ್ದರಿಂದ ಸದ್ರಿ ಅಡವಿಟ್ಟ ನಗಗಳನ್ನು ಬೇಂಕಿನ ಆಫೀಸಿನಲ್ಲಿ ಏಲಂಮಾಡಿ ಸದ್ರಿ ಸಾಲಗಳ ಅಸಲು, ಬಡ್ಡಿ, ಖರ್ಚು ವಗೈರೆಗಳ ಬಾಬ್ತು ವಜಾಕಳೆದು ಬಾಕಿ ಮೊಬಲಗನ್ನು ಸದ್ರಿಯವರ ಹೆಸರಲ್ಲಿ ಅಮಾನಾತು ಖಾತೆಯಲ್ಲಿ ಈ ಮೊದಲು ತಿಳುಹಿಸಿದಾಗ್ಯೂ, ಈ ಕೆಳಗೆ ಕಾಣಿಸಿದಂತೆ ಕಳೆದ ಮೂರು ವರ್ಷಗಳಿಂದಲೂ ನಿಬಡ್ಡಿಯಲ್ಲಿರುವ ಪ್ರಯುಕ್ತ, ಸದ್ರಿಯವರು ಯಾ ಅವರ ನ್ಯಾಯವಾದ ವಾರಿಸುದಾರರು ತಾ. 25—6—'38ರ ಒಳಗಾಗಿ ಸದ್ರಿ ಐವೇಜನ್ನು ಪಡೆದುಕೊಂಡು ಹೋಗದಿದ್ದಲ್ಲಿ—ಸದ್ರಿ ಐವೇಜನ್ನು ಬೇಂಕಿನ ಕ್ಷೇಮನಿಧಿಗೆ ವಜಾ ಮಾಡಲಾದೀತು

ಈ ಪ್ರಕಟಣೆಯ ನೋಟೀಸು ಖರ್ಚು ಅವರೀ ತೆರತಕ್ಕವ ಪ್ರಯುಕ್ತ ಅವರ ಅಮಾನಾತು ಖಾತೆಗೆನೇ ಸದ್ರಿ ಖರ್ಚನ್ನು ಬರೆಯಲಿಕ್ಕಿರುವುದು

1	ಜೋನ್ ಕ್ವಿನ್ನಿ	1	1	2
2	ಶೇಕ, ರಾಮದಾಸ್ ಬೀಡಿ ವರ್ಕ್ಸ್, ಮಾರ್ಕೆಟ್ ರಸ್ತೆ, ಮಂಗಳೂರು	34	15	2
3	ಹುಸ್ಸೇನ್ ಖಾನ್ ಸಾಹೇಬ್	2	0	0
4	ಜೋರ್ಜ್ ಪೆರಾಂ, ಕಸ್ಬಾ ಗಲ್ಲಿ, ನಂದಿಗುಡ್ಡೆ ಮಂಗಳೂರು	8	13	3
5	ಡಿ ಡಿ ಡಿ ಡಿ	7	12	0
6	ಸೋಮಪ್ಪ, ಕೊರಗನ ಮಗ, ಕಣ್ಣೂರು ಗ್ರಾಮ, ಕಂಕನಾಡಿ ಪೋಸ್ಟು	1	3	3
7	ಪರಮೇಶ್ವರ ಶೆಟ್ಟಿ, ಸೋಮ ಶೆಟ್ಟಿಯ ಮಗ, ಪಣಂಬೂರು	8	9	6
8	ಬಡವ ಬ್ಯಾರಿ, ಕಾಟ್ಟಿ ಅಹಮದ್ ಬ್ಯಾರಿಯ ಮಗ, ಕೈರಂಗಳ ಗ್ರಾಮ, ಮಂಜೇಶ್ವರ	4	4	6
9	ಜನ್ನಪ್ಪ ಅಧಿಕಾರಿ, ಕೊಯ್ಯೂರು ಗ್ರಾಮ ಬೆಳ್ತಂಗಡಿ ಮುನಿಯಾರ್ಡರ ಒಂದರ ಬಾಬ್ತು	3	3	0

OFFICE OF THE BANK
MANGALORE
6th June 1938

M S Rao,
Ag Secretary

THE
Canara Banking Corporation, Udipi, Ltd.
INCORPORATED IN BRITISH INDIA.
ESTD 1906

Head Office: UDIPI, South Canara.

BRANCHES

1 Byndoor	7 Malpe	14 Shimoga
2 Coondapoor,	8 Mercara	15 Shirva
3 Erode	9 Mettupalayam	16 Tellicherry
4 Madras	10 Mysore	17 Thirthahalli
5 Mangalore Car Street	11 Sagar	18 Virarajendrapet
6 Mangalore Bunder	12 Saklaspur	19 Vellore
	13 Salem	20 Udipi

All kinds of Banking Transactions undertaken.

ಅದರಮೂಲಕವಾಗಿ
ನೋಡಬಹುದಾದಷ್ಟು
ಶುದ್ಧವಾಗಿದೆ.

ಪೀಯರ್ಸ್ ಸೋಪಿನ ಪ್ರತಿಯೊಂದು ಬಿಲ್ಲೆ ತನ್ನ ಪರಿಶುದ್ಧತೆಯ ಗುರುತನ್ನು ತಾನೇ ಇಟ್ಟುಕೊಂಡಿದೆ. ನೀವು ಅದರ ಮೂಲಕವಾಗಿ ನೋಡಬಹುದಾದಷ್ಟು ಅದು ಸ್ವಚ್ಛವಾಗಿದೆ. ಅಷ್ಟು ಶುದ್ಧವಾದ ಸೋಪನ್ನು ಪೀಯರ್ಸ್ ಫ್ರಾನ್ಸ್ ಎಂದರೆ ಎರಡು ಶುದ್ಧ ಮಾಡುವ ಏಕೈಕ ಕ್ರಮದಿಂದಮಾತ್ರವೇ ತಯಾರಿಸಬಹುದು. ಪೀಯರ್ಸನ್ನು ನಿಮ್ಮ ಸೋಪನ್ನಾಗಿ ಉಪಯೋಗಿಸಿರಿ. ಅದರ ಆಶ್ಚರ್ಯಕರವಾದ ದೇಹಪೋಷಣೆಯ ಕಾರ್ಯದಿಂದ ನಿಮ್ಮ ಚರ್ಮದಲ್ಲಿ ನವಚೇತನವು ಉತ್ಪತ್ತಿಯಾಗಿ ಬಾಳುವ ನವ ಸೌಂದರ್ಯವನ್ನು ಪಡೆಯುವುದನ್ನು ನಿರೀಕ್ಷಿಸಿರಿ.



Pears

ದೇಹಕಾಂತಿಯನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದು.

J.T.G. 1304-8 A & F PEARS LTD ISLEWORTH ENGLAND
KANARESE

ರೂಪಾಯಿಯ ಬೆಲೆ

[illegible]ಕ್ಕೊಂದು ಪ್ರಾಂತೀಯ ಸರಕಾರಗಳ ಟೀಕೆ

ಕೇಂದ್ರದ ಸರಕಾರದ ಫೈನೆನ್ಸ್ ಮೆಂಬರರು, ಕಾಂಗ್ರೆಸು ಮಂತ್ರಿಮಂಡಲಗಳ ವಾತ್ರವಲ್ಲದೆ, ಕಾಂಗ್ರೆಸೇತರ ಪ್ರಾಂತೀಯ ಫೈನೆನ್ಸ್ ಮೆಂಬರರಿಗೆ ಒಂದು ಪತ್ರ ಬರೆದು ಕೊಂಡು, ಅದರಲ್ಲಿ ಅವಶ್ಯವಾಗಿಯೂ ರೂಪಾಯಿಯ ವಿನಿಮಯದ ಬೆಲೆಯ ವಿಷಯ ಕುರಿತ ಬದಲಾವಣೆಗಳಾಗಬೇಕಾದುದರಿಂದ, ಎಲ್ಲರೂ ಏಕೀಭವಿಸಿ ರೂಪಾಯಿಯ ಬೆಲೆಯನ್ನು 18 ಪೆನ್ಸಿನಿಂದ 16ಕ್ಕೆ ಇಳಿಸುವ ಹಾಗೆ ಇಂಡಿಯಾ ಸರಕಾರವನ್ನು ಕೇಳಿಕೊಳ್ಳಲು ಏನು ಮಾಡ ಬೇಕೆಂದು ಪ್ರಶ್ನಿಸಿರುವರೆಂದು ಪ್ರಕಟವಾಗಿದೆ. ಹೀಗೆ ಬೆಲೆಯು ಮೇಲಾಗಿ ಕೋಟಿಕೋಟಿ ರೂಪಾಯಿಗಳ ನಷ್ಟವೂ ಪ್ರತಿವರ್ಷ ನಮ್ಮ ಸರಕಾರಕ್ಕಾಗಿ, ಬಡವರು ಇನ್ನೂ ಬಡವ ರಾಗುತ್ತ ಬರುತ್ತಿದ್ದಾರೆ. ಈ ಬ್ಲೆಕೆಟ್ ಸಾಹೆ ಬರು ಹಿಂದೆ ಮಾಡಿದ್ದ ದಾಮಾಶಾಯವು ಸುಮ್ಮನೆ ಎಂದಿನಂತೆ ಶಾಶ್ವತವಾಗಿದ್ದರೆ, ರೂಪಾಯಿಯಲ್ಲಿ ಎರಡಾಣೆಯಷ್ಟು ಕಡಮೆ ಹಣವೇ ಹಿಂದೀಯರಿಗೆ ದೊರೆವುದು ಮಾತ್ರವಲ್ಲದೆ, ಯುರೋಪಿಯರಿಗೆ ಎರಡಾಣೆ ಹೆಚ್ಚಿಗೆ ತುಂಬಿ ಸಿ ಕೊಡಬೇಕಾಗುತ್ತದೆ. ಈ ವಿಷಯವಾಗಿ ಸಾವಿರ ಸಲ ತರ್ಕಗಳು ನಡೆದರೂ, ಸರಕಾರವು ಇನ್ನೂ ನಿಶ್ಚಿಂತವಾಗಿದ್ದು, ತಮ್ಮ ಧೋರಣೆಯೆ ಸರಿ ಎನ್ನುತ್ತಿದ್ದಾರೆ. ಬೆಲೆಯ ಏರಿಳಿತಗಳನ್ನು ಮಾಡುವ ಸ್ವತಂತ್ರಾಧಿಕಾರವು ರಿಜರ್ವ ಬೇಂಕಿಗೆ ಇದೆ. ಆದರೆ, ಇಂಡಿಯಾ ಸರಕಾರವು ಈ ಭಾಗದಲ್ಲಿ ಪ್ರಾಂತೀಯ ಸರಕಾರಗಳ ಅನುಮತಿಯಂತೆ ತಾನೂ ಅನುಮತಿಯಿತ್ತರೆ ಇವೆಲ್ಲ ಸರಕಾರಗಳ ಸೂಚನೆಗೆ ವಿರುದ್ಧ ನಡೆವುದು. ರಿಜರ್ವ ಬೇಂಕಿಗೆ ಕಷ್ಟವಾಗಿ, ಆ ಬೇಂಕೂ ದಾಮಾಶಾಯವನ್ನಿಳಿಸಿ, ದೇಶಕ್ಕೆ ಉಪಕಾರ ಮಾಡುವುದರಲ್ಲಿ ಹಿಂದೆಗೆಯದೆಂದು ನಂಬಲಾಗಿದೆ. ಕಾಂಗ್ರೆಸೇತರ ಪ್ರಾಂತ್ಯಗಳು ತಮ್ಮ ಬಡವರ ಕಡೆಗೆ ಹೀಗಾದರೂ ಗಮನ ಕೊಡಬೇಡವೆ?

ಪೊಲೀಸರಿಗೆ ಹೆದ್ದಾರಿಗಳಲ್ಲಿ ಸಂಚಾರ ಮಾಡುವಾಗ ಸೂಚನೆಗಳು

ಕಳೆದ ವರ್ಷ ಮದ್ರಾಸಿನಲ್ಲೇ ಹೆದ್ದಾರಿಗಳಲ್ಲಾದ ಅಪಘಾತಗಳಲ್ಲಿ ಪೊಲೀಸರೇ ಸೇರಿದ್ದ ೩೭ ಅಪಘಾತಗಳಿದ್ದುವು. ಇವನ್ನು ವಿಮರ್ಶಿಸಿ, ಕಮ್ಮಿಶನರರವರು ಯಾವತ್ತು ಪೊಲೀಸರಿಗೆ ವಿನಯಪೂರ್ವಕ ಬುದ್ಧಿ ಸೂಚಿಸಿರುವರು. ಹೆಚ್ಚಿನ ಅಪಘಾತಗಳಿಗೆ ಪೊಲೀಸರು ಕಾರಣರಾಗಿಲ್ಲವಾದರೂ, ಮಾವುದೊಂದೇ ಒಂದರಲ್ಲಿ ಯಾದರೂ ಅವರು ಸೇರದಂತೆ ಎಚ್ಚರಿಕೆ ಇಟ್ಟಿರ

ಬೇಕು, ರಾಜ್ಯದ[illegible] ಅಧಿಕಾರಿಗಳಾಗಿ ವಿಧೇಯತೆಯಿಂದ ನಡೆದುಕೊಳ್ಳುವ ಮೂಲಕ ಜನರಿಗೂ ಉತ್ತಮ ಮಾದರಿಯಾಗುವಂತೆ ವರ್ತಿಸಬೇಕಾಗಿದೆ. ಇತರ ಸಂಚಾರಿಗಳಿಗೆ ಯಾವಾಗಲೂ ಮೊದಲ ಸೌಕರ್ಯಗಳನ್ನು ಕೊಡುವುದರ ಮೂಲಕ, ವಿನಯದೊಡನೆ ಮಾದರಿಯನ್ನು ಪೊಲೀಸ್ ಸಂಸ್ಥೆಯವರೇ ತೋರಿಸುತ್ತಿರಬೇಕು ಎಂಬುದು ಅವರ ಬೋಧನೆಯ ಸಾರಾಂಶ.

ವಿದ್ಯಾರ್ಥಿಗಳೂ ರಾಜಕೀಯ ವಿಷಯಗಳೂ ಸರಕಾರದ ಹೊಸ ನಿಯಮಗಳನ್ನು ಕುರಿತಾದ ವಿಮರ್ಶೆ

ರಾಯಲ ಸೀಮೆಯ ಯುವಕ ಸಂಘದ ಪರಿಷತ್ತಿನಲ್ಲಿ (ತಾ. 8ರಲ್ಲಿ) ಈ ಸರಕಾರೀ ಹುಕುಮನ್ನು ಕುರಿತಾಗಿ, ಪ್ರೊಫೆಸರ್ ಎನ್. ಜಿ. ರಂಗರವರು ಭಾಷಣ ಮಾಡಿದರು. ಕೆಲವೇ ವರ್ಷಗಳ ಹಿಂದೆ, ವಿದ್ಯಾರ್ಥಿಗಳು ರಾಜಕೀಯ ವಿಚಾರಗಳಲ್ಲಿ ಕೈಯಿಕ್ಕದೆ ಇರಬೇಕು ಎಂದು ಹೇಳುತ್ತಿದ್ದ ನಮ್ಮ ಮುಂದಾಳುಗಳು ಈಗ ರಾಜಕೀಯ ವಿಷಯಗಳ ಕಡೆಗೆ ಗಮನ ಕೊಡಬೇಡಿರೆಂದೇಕೆ ಸಾರುವುದೆಂದರೇನು? 1917ರಲ್ಲಿ ಮದ್ರಾಸು ಸರಕಾರವು ಹೀಗೆಯೆ ಕಟ್ಟಪ್ಪಣೆ ಕೊಟ್ಟಾಗ, 1920ರಲ್ಲಿ ಪುನಃ ಶಾಲೆಗಳನ್ನೆ ಬಹಿಷ್ಕರಿಸಿರೆಂದು ಮುಖಂಡರು ಸಾರಿದಾಗ ಸರಕಾರವು ಎದುರಿಸಿದಾಗ, ಮುಖಂಡರು ಏನು ಮಾಡಿದ್ದರು? ಈಗ ಇವರು ಮಾಡುತ್ತಿರುವುದೇನು? ಅಂದಿನಿಂದೀಚೆಗೆ ಸರಕಾರದಲ್ಲಿ ಬದಲಾವಣೆ ನಡೆದೇ ಇದೆ. ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಡನೆ ನಮ್ಮ ಹೋರಾಟವು ಇನ್ನೂ ಮುಗಿದಿಲ್ಲ. ನಮ್ಮ ಪಾಳೆಯವರನ್ನು ಬಲಪಡಿಸ ಬೇಕಾಗಿದೆ. ಹೀಗಿರುವಾಗ, ರಾಜಕೀಯ ವಿಚಾರಗಳೇ ಇಲ್ಲದ ಯಾವ ವಕ್ರವಾದ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡಿಸುವರೆ ಮುಖಂಡರು ಮನಸ್ಸು ಮಾಡಿರುವರಂತೆ? 1920ರಲ್ಲಿ ತಪ್ಪೆಂದು ತಿಳಿದುದನ್ನೇ ಈಗ ಇವರೂ ಬೋಧಿಸುತ್ತಿಲ್ಲವೆ? ಅವರಲ್ಲೇ ಕೆಲವರೀಗ ವಿದ್ಯಾಮಂತ್ರಿಗಳಾಗಿರುವ ಮಾತ್ರಕ್ಕೆ ಹೀಗೆ ಅಡಿಗಾ ಹಾಕುವುದೇ? ಜಪಾಂಗದ ಕಷ್ಟಕಾಲದಲ್ಲಿ ಯುವಕರು ಹೇಗೆ ನಡೆದುಕೊಳ್ಳಲು ಕಲಿತುಕೊಳ್ಳತಕ್ಕದೋ ಅದನು ಈಗ ತಿಳಿಯಲೂ ಬಾರದೆಂದುಂಟೆ? ಈಗ್ಗೆ ತಾನೇ ಫೆಡರೇಶನ್ ದೆಸೆಯಿಂದ ಕಷ್ಟಕಾಲ ಉಂಟಾಗಲಾರದೆ? ಅಂತಹ ವೇಳೆ ಯುವಕರು ನಮ್ಮೊಡನೆ ಸೇರಿ ಅದನ್ನು ಎದುರಿಸ ಬೇಡವೇ? ಹೀಗಿರುವಾಗ, ವಿದ್ಯಾರ್ಥಿಗಳಿಗೆ ಇರುವ ಈ ಹಕ್ಕನ್ನು ಅವರು ಕಳೆದುಕೊಳ್ಳ ಬಾರದಾಗಿ ನೆನಪಿನಲ್ಲಿಟ್ಟು ಕೊಳ್ಳಲಿ.

ಪ್ರೊಫೆಸರ್ ರಂಗರವರು – ಎಲ್ಲ ವಿದ್ಯಾರ್ಥಿಗಳು ಈ ಅಪ್ಪಣೆಯನ್ನು ಆಕ್ಷೇಪಿಸುವುದಕ್ಕಾಗಿ, ಒಂದು ದಿನ ಎಲ್ಲ ಶಾಲೆಗಳನ್ನು ತ್ಯಜಿಸಬೇಕೆಂದೂ ಆಂಧ್ರ ವಿದ್ಯಾರ್ಥಿ ವರ್ಗಕ್ಕೆ ಸಾರಿರುವರು.

ವರ್ಷಗಳ ಉಪಯೋಗಾನಂತರ
ಸಹ ಹೊಸರೂಪ—

ಇದು ಮನೆಯಲ್ಲಿ ಸನ್‌ಲೈಟ್ ಸೋಪಿನಿಂದ ಒಗೆಯುವುದರ ಉಪಕಾರ.



ಪ್ರತಿದಿನವೂ ಒಗೆಯಬೇಕಾದ ಉಡುಪುಗಳನ್ನು ಸನ್‌ಲೈಟ್ ಹೊಸದಾಗಿಯೂ ಸುವಾಸನೆಯಾಗಿಯೂ ಇಡುತ್ತದೆ.

ಸನ್‌ಲೈಟ್ ಸೋಪಿನಿಂದ ಒಗೆದ ಬಟ್ಟೆಗಳು ಇತರ ಅಗ್ಗವಾದ ಮತ್ತು ಕೀಳಾದ ಸೋಪುಗಳಿಂದ ಒಗೆದ ಬಟ್ಟೆಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ. ನಷ್ಟಪಡಿಸುವ ಉಜ್ಜುವಿಕೆ ಮತ್ತು ಬಟ್ಟೆಯ ಸೂಕ್ಷ್ಮ ಎಳೆಗಳನ್ನು ನಾಶಪಡಿಸುವ ಹೊಡೆಯುವಿಕೆ ತಪ್ಪುದೇ ಸನ್‌ಲೈಟ್ ಸೋಪು ಕೊಳೆಯನ್ನು ಹೋಗಲಾಡಿಸುತ್ತದೆ. ಸನ್‌ಲೈಟ್ ಸೋಪಿನಿಂದ ಒಗೆಯಲ್ಪಡುವ ಬಟ್ಟೆಗಳ ಬಣ್ಣ ಕಲ್ಪಿತವಾಗಿಯೂ ಕ್ಷೇಮ.



ಸನ್‌ಲೈಟ್ ಸೋಪು

ಅತ್ಯುತ್ತಮ ಸಾಮಗ್ರಿಗಳಿಂದ ಹಿಂದೂದೇಶದ ಕೆಲಸಗಾರರಿಂದ ಹಿಂದೂದೇಶದಲ್ಲಿ ತಯಾರಿಸಲ್ಪಟ್ಟಿದ್ದು.

X-S 1264-50 LEVER BROTHERS INDIA LIMITED KANARESE

ಅಗ್ನಿಮಾಂದ್ಯ

ಅಜೀರ್ಣಾವಸ್ಥೆಗಳಲ್ಲಿ ಬಂದಾದ ಅಗ್ನಿಮಾಂದ್ಯವನ್ನು ಮಾಯಾವಿ ತರದಲ್ಲಿ ಗುಣಪಡಿಸಲು ಸಾಧ್ಯವಿಲ್ಲ. ಅದಕ್ಕೆ ತಕ್ಕ ಚಿಕಿತ್ಸೆಯು ನಡೆಯಬೇಕು. ಸಮಾಧಾನವನ್ನು ತಾಳಿ ಆ ಚಿಕಿತ್ಸೆಯನ್ನು ನಡೆಯಿಸಿದರೆ, ಆಗ ಗುಣವು ದೊರೆಕುವುದು.

ಖಂಡಿತವಾಗಿಯೂ ಗುಣಪಡಿಸುವ ಜನಜನಿತವಾದ ಚಿಕಿತ್ಸೆಯೆಂದರೆ "ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡ" ರೆನ್ನಬಹುದು. ಅಗ್ನಿಮಾಂದ್ಯವನ್ನು ಅನುಭವಿಸುತ್ತಿರುವ ರೋಗಿಗಳಿಗೆ ಬೇಕಾದ ಔಷಧಿಗಳು ಇದರಲ್ಲಿ ಒಳ್ಳೇ ದಾಮಾಶಾಯದಲ್ಲಿ ಕೂಡಿವೆ. ಅಗ್ನಿಮಾಂದ್ಯಕ್ಕೆ ಜೀರ್ಣವು ಸರಿಯಾಗಿ ನಡೆಯುವಂತೆ ಮಾಡುವುದು ಅಗತ್ಯವು. ಮೆಕ್ಲೀನ್ ಬ್ರಾಂಡ್ ಹುಡಿಯಿಂದ ಈ ಉಪಕಾರವನ್ನು ಹೊಂದಬಹುದು. ಅದು ಜೀರ್ಣವನ್ನುಂಟುಮಾಡಲು ಖಾತ್ರಿ ಗುಣಕಾರಿಯು.

ಜೀರ್ಣಕ್ಕೆ ಬೇಕಾದ ರಸಗಳು ಹೊಟ್ಟೆಯಲ್ಲಿ ಉಂಟಾಗದಿದ್ದಲ್ಲಿ ಮೆಕ್ಲೀನ್ ಬ್ರಾಂಡ್ ಹುಡಿಯು ಜೀರ್ಣಕೋಶದ ಅಂಗಗಳೊಡನೆ ಸಹಕರಿಸಿ, ಜೀರ್ಣವನ್ನು ಸರಿಪಡಿಸುವುದು.

ಅಗ್ನಿಮಾಂದ್ಯವನ್ನು ಅನುಭವಿಸುತ್ತಿರುವವರು ಒಂದು ವಾರ ಯಾ ಎರಡು ವಾರಗಳ ತನಕ ಮೆಕ್ಲೀನ್ ಬ್ರಾಂಡ್ ಹುಡಿಯನ್ನು ತಪ್ಪದೆ ಸೇವಿಸಬೇಕು. ಆ ಅವಧಿಯಲ್ಲಿ ಅವರಿಗೆ ವಾಸಿಯು ಗುಣವು ಕಾಣಿಸುವುದು. ಅದರಿಂದ ಅವರು ಆಶ್ಚರ್ಯಚಕಿತರಾಗಿ ಸಂತೋಷ ಹೊಂದುವವರಾಗುವರು. ಖಾತ್ರಿಯಾದ ಮೆಕ್ಲೀನ್ ಬ್ರಾಂಡನ್ನು ಪಡೆಯುವಂತೆ ಜಾಗರೂಕರಾಗಿರಿ. ಪೆಟ್ಟಿಗೆಯ ಮೇಲೂ ಬಾಟ್ಲಿಯ ಮೇಲೂ ಕೆಂಪು ಮುದ್ರೆಯ ಮೇಲೆ

Alex. C. McLean

ಎಂಬ ಸಹಿಯಿರುವಂತೆಯೂ, ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿರಿ. ಅದನ್ನು ಉಪಯೋಗಿಸಿದ ನಂತರ ಸಂಕಟಪಡಲಾರಿರಿ.

ಇಂತಹ ನಮೂನೆಯು ಕಡಿಮೆ ದರದ ಪರಕೀಯ ವಸ್ತುಗಳನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ದೊರೆಯುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ಎಚ್. ಪ್ರೊರಿಸನ್, ಸನ್ ಎಂಡ್ ಜೋನ್ (ಇಂಡಿಯಾ) ಲಿಮಿಟೆಡ್, ಸ್ಟೆಂಡಾರ್ಡ್ ಬಿಲ್ಡಿಂಗ್, ಹಾರ್ನ್‌ಬೀ ರೋಡ್, ಮುಂಬೈ



ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ



ಗೊನೋಕಿಲರ್ (ರಿಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3–0–0 (ಮೂರು) ವಿ. ಪಿ. ಛಾರ್ಜು ಬೇರೆ.

[illegible] ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋ[illegible] ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, [illegible]

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಘ್ರ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1 ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ

2 ಕುಂದಾಪುರದಿಂದ ಬಾಳೆಬರೆಗಾಗಿ ಶಿವಮೊಗ್ಗಾ

3 ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಳ್ಳಿ ಶಿವಮೊಗ್ಗಾ ಹಂಹರ ವರೆಗೆ

4 ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ

5 ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ ಹಾಸನ ಬೇಲೂರು, ಇತ್ಯಾದಿ ಸ್ಥಳಗಳಿಗೆ

6 ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ ವೀರರಾಜೇಂದ್ರಪೇಟ ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency, MANGALORE.

The Joint Booking Office, KODIALBAIL

THE

Canara Industrial & Banking Syndicate Ltd.,

Will open new Branches **at suitable centres** in order **to extend** their facilities and service to wider [illegible]

Young men, preferably graduates, not above the age of 30 and of good influence and coming from business circles and respectable families will be enrolled for training for the post of **Agents** and Inspectors of Branches under the following conditions

A sum of Rs [illegible] will have to be first paid to the Syndicate by each of the candidates selected for training, which amount is not returned in any case.

Such candidates will have to be on probation at the Head Office of the Syndicate and undergo a course of practical training for one year, during which period they will have to attend 250 lectures on Banking and other allied subjects.

During the period of probation each will be given free quarters and Rs. 25 per month as stipends from the Syndicate.

They must pass [illegible] examination which will be held by the Bank at the end of one year. Those who fail will have to undergo an additional training for a period of 3 months during which period no stipend [illegible] mentioned will be allowed.

After passing the examination and the training [illegible] they will be given suitable posts on a scale of Rs. 40-10/2-200 (No extra allowance is given except free quarters wherever available and attached to Office premises.

Applications for the posts under the above mentioned terms are received up to 25th June, 1938, by which date they should reach the Head Office of the Syndicate. Applications should be in the Applicants own handwriting and they must correctly state their age, qualification, the languages they know to read, write and speak and shall be accompanied by at least three recent testimonials (originals) regarding character, qualification etc. wherever possible they may be submitted through one of the Branches of the Syndicate.

30TH MAY 1938.
"Mukund Nivas"
UDIPI.

T. M. A. PAI,
Chairman

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು ಜೀವನ ಬದಲಾಯಿಸುವುದು ಒಳಿತು ಕೆಡುಕುಗಳನ್ನು ತೋರಿಸುವುದು ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇವೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸ[illegible]ವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ [illegible] ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇರದೆ, ಗ್ರಹಶಾಂತಿಗೋಸ್ಕರ [illegible] ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ಜನರಿಗೆ [illegible] ಲಾಭವಾಗುತ್ತ ಬಂದಿದೆ. [illegible] ಈ ವಸ್ತುವಿನಿಂದ ಮನುಷ್ಯರನೇಕರು [illegible] ಲಾಭವನ್ನು ಪಡೆದಿದ್ದಾರೆ. [illegible] ಶಾಸ್ತ್ರದ [illegible] ವಿಶ್ವಾಸವನ್ನಿಡದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. [illegible] ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು. ಎಷ್ಟೋ ಜನರು ಬೇರೆ ಬೇರೆ [illegible] ಆರಾರು-ಎಂಟೆಂಟು ಅಲ್ಲ ಹನ್ನೆರಡು-ಹನ್ನೆರಡು ನವಗ್ರಹ ಯಂತ್ರಗಳನ್ನು ತರಿಸಿದ್ದಾರೆ. ವಿಶ್ವಾಸವಿರಿಸದಿದ್ದರೆ [illegible]

[illegible]



[illegible]

ಹಸ್ತರೇಖೆ — [illegible]

[illegible]

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷ್ಟಿನಲ್ಲಿ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ [illegible] ಯಂತ್ರಗಳ ಅದ್ಭುತ ಶಕ್ತಿಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತ [illegible]

ಕೆಲವು ಪ್ರಶಂಸನಾ ಪತ್ರಗಳು.— [illegible] ಜನತೆಯು ಈ ಯಂತ್ರದಿಂ ಲಾಭ ಪಡೆಯಲೆಂದು ಹಾರೈಸುತ್ತೇನೆ.

[illegible] ಯಂತ್ರವು ನಿಮ್ಮ ಮನೆಗೆ ಬಂದು ತಲುಪುವದು. [illegible]

ವಿಳಾಸ.— **Pandit B. R. BHAVISYAVAKTA (S. S. M.) Bombay. No. 4**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಛಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವಾಯು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಸಿಕ್ಕೆ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮುಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS
BOMBAY MADRAS CALCUTTA

ಸ್ವದೇಶಾಭಿಮಾನಿ

ಸಂಪುಟ ೩೨] ತಾರೀಕು ೧೭ನೇ ಜೂನ್ ೧೯೩೮ (17-6-1938) [ಸಂಚಿಕೆ ೨೩

★

24 ಪುಟಗಳು 24

ಅನುಕ್ರಮಣಿಕೆ

ಇನ್ನೂ ಕವಿ ... ದ ... ತ

ಆಕಾಶದಲ್ಲಿ ಪ್ರಪಂಚ ಸುತ್ತಾಟ

...ದೂಸ್ಥಾನವು ಬೇಹಿನವರ ...

ಬೀಚರ ಯುದ್ಧ

...ಡು ತೀರಿಸುವ ವಿಚಿತ್ರ ...ಕಾರದ ಮನೋವೃತ್ತಿ

...ಬ್ರಿಟಿಷ ಧ್ವಜವೊಂದು ...ಪರಿಹಾಸಕ್ಕೆ ಕಾರಣ ...ತು

...ಹಿಂದೂ ಮುಸ್ಲಿಂ ...ವಾಗುವುದೆ? ಅದಾಗ ...ತೆ ಮಾಡಿಬಿಟ್ಟಿರುವರು ...ಸ್ಲಿಂ ಲೀಗಿನ ನಾಯಕರು

★

ಪಹಾರಿ ಸನ್ಯಾಲ್, ಕನ್ನನ್ ಬಾಲಾ ಮತ್ತು ಛಾಯಾ ದೇವಿ.

ವಿದ್ಯಾಪತಿಯಲ್ಲಿ (ನ್ಯೂ ಥಿಯೇಟರ್ಸ್)

WHAT BUILDS A GREAT BANK.

The two vital features of a Bank are its financial policy and its service. When for over thirty years a Bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF A CRORE.

ESTD. 1906.
CANARA BANK LIMITED.

SWADESHABHIMANI ESTD 19

ಚಿತ್ರ-ವಿಚಿತ್ರ

ಹುಚ್ಚು ತಾಗದಂತೆ ತಲೆ ಒಡೆದರು!

ಎರಡು ವರೆ ವರ್ಷ ಪ್ರಾಯದ ಹುಡಗನೊಬ್ಬ. ಆಗಾಗ್ಗೆ ಆತನು ಬೋದ ತಪ್ಪಿ ಬೀಳುತ್ತಿದ್ದನು. ಕಾರಣವೇನೆಂದು ಡಾಕ್ಟರರು ಪರೀಕ್ಷಿಸಲಾಗಿ, ಆತನ ತಲೆ ಬುರುಡೆಯು ಕಲ್ಲಿನಂತೆ ಗಟ್ಟಿಯಾಗಿ, ಮಿದುಳಿನ ಬೆಳವಣಿಗೆಯನ್ನು ತಡೆಗಟ್ಟುತ್ತಿದೆಯೆಂದು ಕಂಡು ಹಿಡಿಯಲಾಯಿತು.

ಇದು ಮ್ಯಾಕ್ರೊ ಫೇಲಿ ಎಂಬ ಅಸಾಮಾನ್ಯ ರೋಗವು. ಅದುದರಿಂದ ಹುಡುಗನಿಗೆ ಹುಚ್ಚು ತಾಗದಂತೆ ನೋಡಿಕೊಳ್ಳಬೇಕಾದರೆ, ತಲೆ ಬುರುಡೆಯನ್ನು ಇಬ್ಭಾಗವಾಗಿ ಒಡೆಯದೆ ನಿರ್ವಾಹವಿಲ್ಲವೆಂದು ಡಾಕ್ಟರರು ಆತನ ತಲೆಯನ್ನು ಸೀಳುವುದೆಂದು ಆಲೋಚಿಸಿದರು.

ಒಡನೆ ತಲೆಯು ಒಡೆಯಲಾಯಿತು. ಎರಡೂ ಹೋಳುಗಳನ್ನು ½ ಇಂಚಿನಷ್ಟು ದೂರದಲ್ಲಿ, ಲೋಹದ ಕಾಲುಗಳ ಸಹಾಯದಿಂದ ನಿಲ್ಲಿಸಲಾಯಿತು.

ಅಪಾಯಕರವಾದ ಸಮಯವು ಏನೊಂದು ಹಾನಿಯಿಲ್ಲದೆ ದಾಟಿರುವುದರಿಂದ, ರೋಗಿಯು ಗುಣಹೊಂದಬಹುದೆಂದು ಡಾಕ್ಟರರು ಆಶಿಸುತ್ತಿರುವರು. ಅಲ್ಲದೆ ಆ ಎರಡು ಹೋಳುಗಳ ನಡುವಿನ ಭಾಗವು ಕೂಡಿ ಬಂದ ನಂತರ, ಒಳಗೆ ಮಿದುಳು ಬೆಳೆದು, ಹುಡುಗನ ಉನ್ಮಾದ ಭಯವು ಇಲ್ಲದಂತಾಗುವುದೆಂದು ನಂಬುವರು.

ರಾಕ್ಷಸ ಗಿಡ.

ಒಂದು ಹೂಗಿಡ! ಅದನ್ನು ಎತ್ತಿ ಒಂದು ಗಾಡಿಯಲ್ಲಿ ಹಾಕಲು 12 ಮಂದಿ ಆಳುಗಳಿಗೆ ಮೂರು ಗಂಟೆಗಳ ಸಮಯ ಹತ್ತಿತು. ಅದರ ಎತ್ತರ ಬರಿ 9 ಅಡಿ. ಭಾರ 2¼ ಟನ್. ಅದರಲ್ಲಿ 1500 ಹೂವಿನ ಗೊಂಚಲುಗಳಿದ್ದುವಂತೆ.

ಚುಂಬನ ಮಾಪಕಯಂತ್ರ.

ಇದು ಯಂತ್ರಯುಗ. ಯಾವ ವಿಷಯಕ್ಕೂ ಈಗ ಯಂತ್ರವೊಂದಿದೆ. ಮಾನವರ ಸೆಕ್ಸ್ ಎಪೀಲ್ (sexappeal) ಎಷ್ಟೆಂದು ನೋಡಲು ಒಂದು ಯಂತ್ರವು ಇತ್ತೀಚೆಗೆ ಕಂಡುಹಿಡಿಯಲಾಗಿತ್ತಷ್ಟೆ. ಅದರ ಹೆಸರು ಚುಂಬನಮಾಪಕ ಯಂತ್ರ—(kiss-meter) ಪ್ರತಿಯೊಬ್ಬ ದಂಪತಿಗಳು ಚುಂಬಿಸುವಾಗ ಅವರ ಚುಂಬನದ ತೀವ್ರತ್ವವನ್ನು ಅದು ಸೂಚಿಸುತ್ತದೆ. ಅದರಲ್ಲಿ ಸೊನ್ನೆಯಿಂದ 120ರ ತನಕ ಗುರುತುಗಳಿವೆ. ಮುಳ್ಳು 90ಕ್ಕೆ ಬಂದೊಡನೆ ಒಂದು ಗಂಟೆ ತಾನಾಗಿ ಬಾರಿಸುವುದು!

ಅದನ್ನು ಕೆಲವರು ಉಪಯೋಗಿಸಿದಾಗ ಈ ಕೆಳಗಿನಂತೆ ಅದು ಕೆಲಸಮಾಡಿತು. ವಿವಾಹನಿಶ್ಚಿತದಂಪತಿಗಳು 95 ಮದುವೆಯಾಗಿ ಸ್ವಲ್ಪ ಸಮಯವಾದವರು 87 ಹಳೆ ದಂಪತಿಗಳು 30 ಸ್ನೇಹಿತರು 16.

ಹೇಗಿದೆ ಚುಂಬನ ಮಾಪಕ ಯಂತ್ರದ ಕೆಲಸ!

ಕೃತಕ ಚಂದ್ರ ಬಿಂಬ.

ಚಂದ್ರೋದಯವಾದಾಗ ಪ್ರಣಯಿಗಳ ಹೃದಯದಲ್ಲಿ ಕಾಮೋತ್ಪತ್ತಿಯಾಗುವುದು ಕವಿವರ್ಣಿತ ವಿಷಯವಷ್ಟೆ. ಇನ್ನು ಮುಂದೆ ರಾತ್ರಿ ದಿನ ಬೇಕಾದ ಸಮಯದಲ್ಲಿ, ಬೇಕಾದ ಸ್ಥಳದಲ್ಲಿ ಚಂದ್ರನ ಪ್ರಕಾಶವನ್ನು ತಿರುಗಿಸಿಕೊಳ್ಳಲು ಸಾಧ್ಯವಿದೆ.

ನ್ಯೂಯೋರ್ಕಿನ ಮಿ. ಓಬರಂ ಈ ನೋಬಲ್ ಎಂಬವರು ಗೇಸಿನ ಸಹಾಯದಿಂದ ಚಂದ್ರಬಿಂಬದಷ್ಟೇ ಶೀತಲವಾದ ಪ್ರಕಾಶವುಳ್ಳಂತೆ ದೀಪಗಳನ್ನು ಉರಿಸಲು ಸಾಧ್ಯವಿದೆಯೆಂದು ಕಂಡು ಹಿಡಿದಿರುವರು.

ಪ್ರಣಯಿಗಳಿಗಿನ್ನು ಸೂರೆ ಸುಗ್ಗಿ! ಬೇಕಾದಾಗ ಚಂದ್ರ ಪ್ರಕಾಶವನ್ನು ಪಡೆದು ವಿಹರಿಸಬಹುದು!

ಆಫ್ರಿಕದ ಬಿಸಿಮನುಷ್ಯ.

ಓರೆಂಜ್ ಫ್ರೀ ಸ್ಟೇಟಿನ ಹೆರಿಸ್ಮಿತ್ ಎಂಬೂರಿನಲ್ಲಿ ವೇನ್ ತಿನೆಪ್ ಎಂಬ ಬಿಸಿಮನುಷ್ಯನಿರುವನು—ಅಂದರೆ ಆತನ ಮೈ ಬಹಳ ಬಿಸಿ ಇರುವುದು. ಕಳೆದ ಐದು ವರ್ಷಗಳಿಂದ ಆತನ ಮೈಯ ಶಾಖವು 100 ಡಿಗ್ರಿ ಇದ್ದರೂ ಆತನು ಸುಖದಿಂದ ಇರುವನು

ಹೀಗೆ ತನ್ನ ಮೈಯು ಬಿಸಿಯಾದೊಡನೆ, ಆತನು ಅನೇಕ ವೈದ್ಯರನ್ನು ಕಂಡನು. ಒಬ್ಬರು ಆತನ ಟೊನ್ಸಿಲುಗಳನ್ನು ಕಡಿದೊಗೆದರು; ಇನ್ನೊಬ್ಬರು ಆತನ ಎಪ್ಪೆಂಡಿಕ್ಸನ್ನು ಕಿತ್ತೊಗೆದರು. ಆದರೂ ಮೈಯ ಶಾಖವು ಕಡಿಮೆಯಾಗಲಿಲ್ಲ. ಆದುದರಿಂದ ಅಲ್ಲಿಂದ ಆತನು ಜೋಹಾನ್ಸ್‌ಬರ್ಗಿಗೆ ತೆರಳಿ, ಅಲ್ಲಿ ಅನೇಕ ಮಂದಿ ವಿಲಕ್ಷಣರೊಡನೆ ವಿಚಾರಿಸಿದನು. ಅದರೆ ಎಲ್ಲರೂ ಆಶ್ಚರ್ಯವನ್ನು ಪ್ರಕಟಿಸಿದರಲ್ಲದೆ, ಅದರ ಕಾರಣವನ್ನು ಪತ್ತೆ ಹಚ್ಚದಾದರು.

ಲಿಂಗ ಬದಲಾಯಿಸುವ ಹೇಂಟೆ.

ಬ್ರಿಟನ್ನಿನಲ್ಲಿ ಮಿ. ಟೋಮ್ ನ್ಯೂಮನ್ ಎಂಬವರೊಡನೆ ಒಂದು ಹೇಂಟೆ ಇದೆ. 1933ರಿಂದ ಕಳೆದ ವರ್ಷದ ತನಕ ಅದು ಕ್ರಮಪ್ರಕಾರವಾಗಿ ಮೊಟ್ಟೆಗಳನ್ನು ಇಡುತಿತ್ತು. ಕಳೆದ ವರ್ಷ ಅದು ಥಕ್ಕನೆ ಲಿಂಗಬದಲಾಯಿಸಿ, ಹುಂಜವಾಯಿತು. ಈ ವರ್ಷ ಅದು ಪುನಃ ತನ್ನ ಸ್ತ್ರೀತ್ವವನ್ನು ಪಡೆದು ಮೊಟ್ಟೆಗಳನ್ನು ಇಡಲು ಪ್ರಾರಂಭಿಸಿರುವುದು.

ಸಿಗರೇಟು ಪೆಟ್ಟಿಗೆ ಪ್ರಾಣ ಉಳಿಸಿತು.

ಒಂದು ದಿನ ಫ್ರೆಂಕ್‌ಟ್ಸ್ಕಿ ಎಂಬವನು ಮಾರ್ಗದಲ್ಲಿ ಒಬ್ಬನೇ ಹೋಗುವಾಗ ಕೆಲವು ಮಂದಿ ದಾರಿಗಳ್ಳರು ಆತನನ್ನು ಮುತ್ತಿ, ಆತನ ಎದೆಗೆ ಗುರಿಯಿಟ್ಟು ಗುಂಡಿಕ್ಕಿದರು. ಕೂಲೆಟ್ಸ್ಕಿಯು ದೊಪ್ಪನೆ ನೆಲಕ್ಕುರುಳಲು, ಆತನು ಮೃತಿಯನ್ನೈದಿದನೆಂದು ಬಗೆದು ಕಳ್ಳರು ಪಲಾಯನ ಮಾಡಿದರು. ಸ್ವಲ್ಪ ಹೊತ್ತಿನ ಸಂತರ ಆತನು ಚೇತರಿಸಿಕೊಂಡು ಸಮೀಪದಲ್ಲಿದ್ದ ತನ್ನ ಮನೆಗೆ ತಡವರಿಸುತ್ತ ಸೊರಳಿಕೊಂಡು ಹೋದನು. ಮನೆಯವರು ಆತನನ್ನು ಪರೀಕ್ಷಿಸಿದಾಗ, ಎದೆಯ ಬಳಿಯಲ್ಲಿ ಒಂದು ಸಣ್ಣ ಗಾಯವಲ್ಲದೆ ಮತ್ತೇನೂ ಆಗಿಲ್ಲವೆಂದು ಕಂಡು ಹಿಡಿಯಲಾಯಿತು.

ಗುಂಡಿನ ಗೋಳಿಯು ಆತನ ಕಿಸೆಯಲ್ಲಿದ್ದ ಒಂದು ಸಿಗರೇಟು ಪೆಟ್ಟಿಗೆಗೆ ನಾಟಿಯೇ ಕಿಸೆಯಲ್ಲಿ ಬಿದ್ದಿತ್ತು. ಆದುದರಿಂದ ಪ್ರಾಣವು ಉಳಿಯಿತು!

—o—

ನೆಸೆಟ್ ಧರ್ಮಾರ್ಥ ಬಹುಮಾನ ಯೋಜನೆ!



ಕ್ಷೌರ ಮಾಡಿಕೊಂಡು ಬಹುಮಾನ ಪಡೆಯುವ ಬಗೆ ಹೇಗೆ?



ನೆಸೆಟ್ಟಿನ ಈ ಮಹತ್ವದ ಅರ್ಪಣೆಯಿಂದ ಲಾಭವನ್ನು ಪಡೆಯುವವರಾಗಿರಿ, ಅದರ ಕ್ಷೌರದಿಂದ ನೀವು ಲಾಭದ್ವಯವನ್ನು ಪಡೆಯಬಹುದು.

ನೆಸೆಟ್ ಬ್ಲೇಡುಗಳು ನಿಮಗೆ ಇದುವರೆಗೆ ಸುಲಭ ಬೆಲೆಯ ಬ್ಲೇಡುಗಳಲ್ಲಿ ಅಸಾಧ್ಯವೆನಿಸುವ ತರದಲ್ಲಿ ಚೊಕ್ಕಟವೂ ಸುಲಭ ತರದ ಕ್ಷೌರವನ್ನು ಒದಗಿಸಿದೆ. ಈಗ ಅವರೆಡಿದನೆ ಒಬ್ಬು ಧರ್ಮಾರ್ಥ...

ಅದಕ್ಕಾಗಿ ನೀವು ಹೀಗೆ ಮಾಡಬೇಕು. ಬ್ಲೇಡುಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿ, ಅದರಲ್ಲಿ ಒಂದು ದೊಡ್ಡ ... ಅಕ್ಷರವು ಇರುವಂತೆ ನೋಡಿರಿ—ಉಪಯೋಗದ ನಂತರ ಅವುಗಳನ್ನು ... "NACET BLADE"—ಎಂಬ ಶಬ್ದವು ದೊರಕುವರೆಗೆ ಅವುಗಳನ್ನು ಕೂಡಿಸಿರಿ.

ನೆಸೆಟ್ ಕಲೆಕ್ಟಿಂಗ್ ಕಾರ್ಡಿಗಾಗಿ ನಿಮ್ಮೂರಿನ ವರ್ತಕರೊಡನೆ ವಿಚಾರಿಸಿರಿ. ಮೇಲೆ ಹೇಳಿದ ರೀತಿ ನಿಮ್ಮ ಸೆಟ್ ಪೂರ್ಣವಾದ ನಂತರ ಅದರ ಮೇಲೆ ನಿಮ್ಮ ಹೆಸರನ್ನು ಬರೆಯಿರಿ, ಅವರ ನೀವು ನಿಮ್ಮ ವಿಳಾಸವನ್ನು ಸರಿಯಾಗಿ ಬರೆದು ಈ ಕೆಳಗಿನ ... ಕಳುಹಿಸಿಕೊಡಿರಿ.

ಕೂಡಿದ ರೂ. ಒಂದು ಬೆಲೆ ಬಾಳುವ ಒಂದು ಪೆಟ್ಟಿಗೆ ... ಬರುವುದು.

ಹೀಗೆ ನೀವು ಅನೇಕ ... ಪಡೆಯಬಹುದು. ಆದುದರಿಂದ ... ಕೂಡಿಸಲು ಉಪಯೋಗಿಸಿಲ್ಲ ... ಅನೇಕವು ದೊರಕಿದರೆ ಅವುಗಳನ್ನು ನಿಮ್ಮ ಸ್ನೇಹಿತರೊಡನೆ ಬದಲಿಸಿಕೊಳ್ಳಿರಿ. ನೆಸೆಟ್ ಬ್ಲೇಡುಗಳನ್ನು ಇಂದೇ ಕೊಂಡುಕೊಳ್ಳಿರಿ. ಅದರ ಕವಚವು ಭದ್ರವಾಗಿರುವಂತೆ ಜಾಗರೂಕರಾಗಿ.

ಇಂದೇ ನೆಸೆಟ್ ಬ್ಲೇಡಿನ ಪೆಕೆಟನ್ನು ಪಡೆಯಿರಿ. ಅದರ ಸೆಲೋಫೆನ್ ಕವಚವು ಭದ್ರವಾಗಿರುವಂತೆ ನೋಡಿರಿ.

7 ಆಣೆಗಳಿಗೆ ಬ್ಲೇಡು 10

ನೆಸೆಟ್ ಬ್ಲೇಡುಗಳು—ಮೂರು ಗೂಟದ ರೇಜರುಗಳಿಗೆ ಫಿಟ್ ಆಗುತ್ತದೆ.

ಮುಲ್ಲರ್ ಮತ್ತು ಫಿಪ್ಸ್ (ಇಂಡಿಯಾ) ಲಿಮಿಟೆಡ್, ಕಂಟ್ರಾಕ್ಟರ್ ಬಿಲ್ಡಿಂಗ್, ಬಲಾರ್ಡ್ ಎಸ್ಟೇಟ್, ಮುಂಬಯಿ ★ ಎಪಿಸ್ ... ಹೌಸ್, ಚೌರಂಗಿ ಸ್ಕ್ವೇರ್, ಕಲ್ಕತ್ತಾ ★ ... ಮದರಾಸು ★ ... ನೇಪಿಯರ್ ರೋಡ್, ಕರಾಚಿ ★ ... ಬಿಲ್ಡಿಂಗ್, ಚಾಂದ್ನಿ ಚೌಕ್, ದೆಲ್ಹಿ. ಗುಂಬಜ್, ಲಾಹೋರ್, ★ ...

"NACET" BLADES

INS

ರಕ್ಷೈರ್ಮರ್ಹಾರ್ಹೈಗಸ್ತುತುರ್ಮನ ದೇವಾ । ನ್ನಭೀಜರೀ ಭೀದು ವಿಶೀಣ ಭೀತಿನ್ಯ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಗ್ರಾಮಂ ನ ನಿಶ್ಚಿತಾರ್ಥದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ

SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲಸದವು ರತ್ನಗಳು ನಾ । ಗರವ ನುಥಿಸಲು ಸುರರಿ ಗದರಿಂ । ಹರುಷವಾಯಿತೆ! ನುತ್ತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ! ಸುಧೆಯನ । ವ ರೆತ ಕೈಬಿಡ್ಡರ ಕಿರಿದ ಕೊರತೆ । ಕದಲೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು ೧೭–೬–೧೯೩೮ | ತಾರೀಕು 17–6–1938

ಪ್ರೂರ್ವ ಯುದ್ಧರಂಗ

ಪೆಲೆಸ್ತೀನ

ಪೆಲೆಸ್ತೀನ ಮತ್ತು ಜೋರ್ಡನ್ ನದಿಯಾಚೆಯ ರಾಜ್ಯಗಳನ್ನು ಒಂದಾಗಿ, ಅವಿಶರ್ಬ್ರಿಬ್ಬ್ಲನ ಕೈಗಿತ್ತು, ಅಲ್ಲಿ ಯೆಹೂದ್ಯರಿಗೆ ಒಂದು ಕನಿಷ್ಠತೆ ನಿರ್ಧರಿಸುವ ರೀತಿಯಲ್ಲಿ ಅಲ್ಲಲ್ಲಿ ಸ್ವರಾಜ್ಯವನ್ನಿತ್ತರೆ ಶಾಂತಿ ಎಂದು ಬ್ರಿಟಿಷ ಅಧಿಕಾರಿಗಳಿಗೆ ಸೂಚನೆಯು ಅರಬರಿಂದಾಗಿದೆ

ಈ ಮಧ್ಯೆ, ಪೆಲೆಸ್ತೀನವನ್ನು ಸಂಪೂರ್ಣ ಆಗಿ ಅರಬರಿಗೇ ಬಿಟ್ಟುಕೊಡಬೇಕಾಗಿ ಮತ್ತೊಂದು ರಗಳೆ ಎದ್ದಿದೆ ಕಳೆದ ೧೬ ವರ್ಷಗಳಿಂದಲೂ ಒಂದು ವ್ಯಾಜ್ಯವು ಅತ್ತ ನಡೆಯುತ್ತಿದೆ ಸುಲ್ತಾನ ಅಬ್ದುಲ್ ಹಮೀದನ ಭಾಗ್ಯವನ್ನೆಲ್ಲ ಹರಿಹಂಚಾಗಿ ಮಾಡಿಕೊಂಡವರು, ಪೆಲೆಸ್ತೀನ ಸಿರಿಯಾ ಮೊದಲಾದ ಅಂಶಗಳನ್ನು ಪಡೆದು, ೫೦ ಮಿಲ್ಲಿಯ ಪವನು ಬೆಲೆಯ ಸೊತ್ತನ್ನು ಸೆಳೆಕೊಂಡರೆಂದು, ಸುಲ್ತಾನನ ದ್ವಿತೀಯ ... ಪುನಃ ಪಡೆಯಲು ಎಲ್ಲ ಉತ್ತರಾಧಿಕಾರಿಗಳ ಹೆಸರಲ್ಲಿ ವ್ಯಾಜ್ಯಮಾಡಿರುವನು ಜಫ್ಫಾದಲ್ಲಿನ ಕೋರ್ಟು ಈ ವ್ಯಾಜ್ಯದಂತೆ ಅಬ್ದುಲ್ ಹಮೀದನಿಗೆ ಗುಣವಾಗುವಂತೆ ತೀರ್ಮಾನಿಸಿಯದೆ ಬ್ರಿಟಿಷ ಸರಕಾರವು ಪೆಲೆಸ್ತೀನವನ್ನು ಆಳುವಾಗ ಪಡೆದ ಕಂದಾಯವೆಲ್ಲವನ್ನು ಈತನಿಗೆ ಕೊಟ್ಟರೂ ಸಾಲದಷ್ಟು ಈ ಮೊಬಲಗಾಗಿದೆ ಅದಕ್ಕಾಗಿ ಈಗ ಪೆಲೆಸ್ತೀನದ ರಾಜಧಾನೀ ಕೋರ್ಟಿನಲ್ಲಿ ಅಪ್ಪೀಲನ್ನು ಬ್ರಿಟಿಷ ಅಧಿಕಾರಿಗಳು ದಾಖಲುಮಾಡಿರುವರು

ಜಪಾನು.

೬೨೦೦೦ ಮೋಟರು ಹಡಗುಗಳು ಬರೇ ಮೀನು ಶಿಕಾರಿಗಾಗಿವೆ ಎಂದು ಜಪಾನು ರಿಜಿಸ್ಟರು ಮಾಡಿಕೊಂಡಿದ್ದರೂ, ಈ ಹಡಗುಗಳು ಶಾಂತಿಯ ನೆವದಿಂದ ಇಡೀ ಸಾಗರದಲ್ಲೆಲ್ಲ ಸಂಚಾರಮಾಡುತ್ತ, ಇತರ ರಾಷ್ಟ್ರಗಳ ಗುಟ್ಟುಗಳನ್ನು ತಿಳಿದುಕೊಳ್ಳುತ್ತಲೂ, ತಮಗೆ ಮುಂದೆ ಬೇಕಾಗುವ ಯುದ್ಧಕಾಲದಲ್ಲಿ ಉಪಯುಕ್ತವಾಗುವ ಪ್ರದೇಶಗಳನ್ನು ಗೊತ್ತುಹಚ್ಚುತ್ತಲೂ ಇವೆ. ಇವುಗಳಲ್ಲಿ ಬೇಕಷ್ಟು ಮದ್ದುಗುಂಡು ಇದ್ದು, ಮಹಾ ನಾವೆಗಳನ್ನು ಮುಳುಗಿಸಲು ಶಕ್ತವಾದ ತೋಟೆಗಳೂ, ಜಲಾಂತರ್ಗಾಮಿ ಟಾರ್ಪೆಡೋಗಳೂ ಇವೆ. ದೊಡ್ಡ ಹಡಗುಗಳಿಗೆ ಕೇವಲ ಮೀನು ಹಿಡಿಯುವ ಹಡಗಾಗಿ ಕಂಡು ಅವನ್ನು ಸುಲಭವಾಗಿ ಇವು ಮುಳುಗಿಸಬಲ್ಲವು

ಹೊಂಗ್‌ಕೊಂಗ್ ಬಳಿಯ ಚೀನೀಯರ ಮೀನು ಶಿಕಾರಿ ಹಡಗುಗಳಲ್ಲಿ ಸುಮಾರು ೧೦೦೦ವನ್ನಾಗಲೇ ಜಪಾನಿನವರು ಮುಳುಗಿಸಿದ್ದಾರೆಂದೂ, ನಾಲ್ಕೈದು ಸಾವಿರ ಚೀನೀಯರು ಇದರಿಂದಾಗಿ ಮಡಿದಿರಬೇಕೆಂದೂ ತಿಳಿದುಬಂದಿದೆ. ಇಂತಹ ದೋಣಿಗಳನ್ನು ಯಾಂತ್ರಿಕ ತೋಪುಗಳಿಂದ ಗುಂಡಿಕ್ಕುವುದು ಜಪಾನಿನ ಕ್ರಮ. ಸೆರೆಬಿದ್ದ ಕೆಲಾಸಿಗಳನ್ನು ರಾಕ್ಷಸಕರ್ತೆ ಧ್ವಂಸಮಾಡುವರು ನೀರಲ್ಲಿ ಬಿದ್ದುಕೊಂಡವರನ್ನು ಸಹ ಹೀಗೆ ಹಿಂಸಿಸುವರು

ಇದರ ಕಾರಣದಿಂದ ಈಗ ಮಾಯಾಬಂಧಮಾಡಲು ಚೀನೀಯರು ಸಿದ್ಧರಾಗಿ, ತರಬೇತು ಹೊಂದ ... ದ್ವಾರಿ ... ಚೀನಿ ... ಸ್ವಂತರ ... ನ್ನು ಧರಿಸಿಕೊಂಡೇ ... ಗಳನ್ನು ಉಳಿಸುತ್ತಿರುವರು.

ಚಿಯಾಂಗ ... ಜನರಲ್‌ನ ... ಇನ್ನು ... ಜನಾ ... ಹಿಂಜರಿದು, ... ಅಕ್ಷ ... ಕೋಲ ಸೋತು ... ಬಾರದೆ ... ಬಿಡಬೇಕಾಗಿಲ್ಲವೆಂದೂ, ಚೀನದ ದೈನ್ಯ ... ವೆಂದೂ ಜಯವು ನಿಶ್ಚಿತವೆಂದೂ ... ಜಯವು ... ನಿಶ್ಚಯವೆಂದೂ ...

ಇಂಗ್ಲೆಂಡ – ದೇಸಾಯಿ ಸಮಾಗಮ

ಲೋರ್ಡ್ ಜೆಟ್ಲೆಂಡರು (ಇಂಡಿಯಾ ಕಾರ್ಯದರ್ಶಿಯವರು) ಶ್ರೀ ಭೂಲಾಭಾಯಿ ದೇಸಾಯಿಯವರನ್ನು ತಮ್ಮಲ್ಲಿಗೆ ಆಮಂತ್ರಿಸಿ ಸುಮಾರು ಒಂದು ತಾಸು ಸಂಭಾಷಣ ಮಾಡಿದರೆಂದು ಪ್ರಕಟವಾಗಿದೆ ಈಗ ಉಂಟಾಗಿರುವ ಎಲ್ಲಾ ಸಮಸ್ಯೆಗಳನ್ನು ಕುರಿತಾಗಿ ಈ ಮಾತುಕತೆ ನಡೆದಿತ್ತೆನ್ನುವರು ಆದರೆ, ಏನಾದರೂ ಒಪ್ಪಂದಕ್ಕಾಗಿ ಅಥವಾ ಅವರ ಸಲಹೆಯಾಗಿ ಇದೇನೂ ಸಂಭವಿಸಿದುದಲ್ಲವೆಂದು ಶ್ರೀ ದೇಸಾಯಿಯವರು ಎಚ್ಚರಿಸಿರುವರು.

ಫೆಡರೇಶನ ವಿಷಯವೇ ಮೊದಲು, ಮುಖ್ಯ. ಈಗ ಹೊರಡಿಸುವ ಬಗೆಯ ಫೆಡರೇಶನು ಅಸಾಧ್ಯವೂ ಅಶಾಪವಿರುದ್ಧವೂ ಎಂದು ಕೊಂಗ್ರೆಸು ಖಂಡಿವಾಗಿ ನಿರ್ಧರಿಸಿದ್ದು, ಪ್ರಾಂತ್ಯಗಳಲ್ಲಿ ಅಧಿಕಾರ ಸ್ವೀಕರಿಸಿರುವುದರ ಕಾರಣದಿಂದ ತಾನೆ ಫೆಡರೇಶನನ್ನೂ ಕೊಂಗ್ರೆಸು ಒಪ್ಪಿತೆಂಬ ಅಭಿಪ್ರಾಯವು ತಪ್ಪೆಂದೂ ದೇಸಾಯಿಯವರು ಕರಣಿಕರಿಗೆ ತಿಳಿಸಿಯೇ ಇರುವರು ಇದಲ್ಲದೆ, ಪ್ರಮುಖ ಬ್ರಿಟಿಷ ಪತ್ರಿಕಾ ಕರ್ತರೂ ಶ್ರೀ ದೇಸಾಯಿಯವರನ್ನು ಕಾಣುವಂತಾಗಿದ್ದು, ಅತಿ ಮಹತ್ವದ ಹೋರಾಟವು ಈ ಫೆಡರೇಶನ್ ವಿಚಾರದಲ್ಲಿ ಉಂಟಾಗಲಿದೆ ಎಂದೂ, ಇದರ ಬದಲಾಗಿ ತೃಪ್ತಿಕರವಾದ ಇತರ ರಾಜಕೀಯ ಸುಧಾರಣೆಗಳಾಗಬೇಕೆಂದು ದೇಸಾಯಿಯವರು ತಿಳಿಸಿರುವರು

ಬ್ರಿಟನ್ನಿಗೂ, ಬ್ರಿಟಿಷ ಸಾಮ್ರಾಜ್ಯಕ್ಕೂ ಭಾರತವರ್ಷದ ದೆಸೆಯಿಂದಲೇ ಸ್ಥಾನಮಾನ ಭದ್ರತೆಗಳು ಸಿಗುವುದೆಂಬುದನ್ನು ದೇಸಾಯಿಯವರು ಸ್ಪಷ್ಟ ಪಡಿಸಿರುವರು.

ಮೂರು ವರ್ಷ ನಡೆದ ಮೊಕದ್ದಮೆ.

ತೀರ್ಮಾನಿಸಿದ ಸಬ್‌ಮೆಜಿಸ್ಟ್ರೇಟರ ಕೊಲೆ

ರಾಮನಾಡಿನ ಬಳಿ ಅಬಿರಾಮನ್ ಎಂಬಲ್ಲಿ ಯೂನಿಯನ್ ಪಂಚಾಯತಿನ ಚುನಾವಣೆಗಳು 1935ರಲ್ಲಿ ಜರುಗಿದಾಗ ... ಹಿಂದುಗಳಿಗೂ ... ಸಂಘಗಳ ... ಈ ... ಬೆಳೆಯಿತು ಅದೇ ... ಗಳಲ್ಲಿ ... ಎರಡು ... ಗಳು ... ಗಳು ಅವಿರಾಮ ... ಇವು ... ಅರ್ಜಿ ... ಮುಸ್ಲಿಮರಿಗೆ ... ಸರರು ಪಾಚರಿಸ ... ಪೆಣಿಗೆ ನಡೆಯಿತ ... ಹಿಂದುಗಳ ... ದಾರಿಯಲ್ಲಿ ... ಎಂದು ... ಲೈಸನ್ಸು ... ದಿಂದ ಹಿಂದುಗಳು ... ಹಾಗು ... ಹಿಂದುಗಳು 300 500 ಸಂಖ್ಯೆ ... ಇವರನ್ನು ಹಿಂಬಾಲಿಸಿ ಮುಸ್ಲಿಮರಲ್ಲಿ ಅನೇಕರಿಗೆ ಗಾಯಮಾಡಿದರು ರಿಜರ್ವ ಪೋಲೀಸರು ಬಂದ ಒಳಿಕ ಶಾಂತಿಯುಂಟಾಯಿತು. ... ಫಿರ್ಯಾದು ಮಾಡಿದರು 25 ಹಿಂದುಗಳನ್ನು ಕೈದು ಮಾಡಿ 1935ನೇ ಇಸವಿ ಮೇ ತಾ 8ರಲ್ಲಿ ಮೊಕದ್ದಮೆ ಪ್ರಾರಂಭವಾಯಿತು

ಈ ಮೊಕದ್ದಮೆ ಮೂರು ವರ್ಷ ನಡೆಯಿತು! ಪ್ರತಿ ಮೆಜಿಸ್ಟ್ರೇಟರೂ ಇದನ್ನು ಹೊಸದಾಗಿ ಪ್ರಾರಂಭಿಸಬೇಕಾಗುವಂತೆ, ಅಷ್ಟು ಬೇಗನೆ ಮೆಜಿಸ್ಟ್ರೇಟರ ವರ್ಗಾವರ್ಗಗಳಾದುವು, ಗಾಯಗಳಾಗುವ ಸಮಯದಲ್ಲಿ ಹಾಜರಿದ್ದ ಶ್ರೀ ರಂಜಿತ ಪೆರಿಯಾನಾಯಕರ್ ಎಂಬ ಮೆಜಿಸ್ಟ್ರೇಟರು ಸಾಕ್ಷಿ ಹೇಳಲೂ ಬೇಕಾಗುವ ಕಾರಣ, ಮೊಕದ್ದಮೆಯನ್ನು ಇನ್ನೊಬ್ಬ ಮೆಜಿಸ್ಟ್ರೇಟರಿಗೆ ಒಪ್ಪಿಸಲಾಯಿತು ಹತ್ತೆಂಟು ಮೆಜಿಸ್ಟ್ರೇಟರ ತರುವಾಯ, 1937ನೇ ಇಸವಿ ಜೂನ್ ತಿಂಗಳಲ್ಲಿ 25 ಹಿಂದುಗಳ ಮೇಲೆ ಚಾರ್ಜು ಮಾಡಲಾಗಿ, ವಿಚಾರಣೆ ಮುಂದುವರಿಸಿತು ಇದೇ ಮೇ ತಿಂಗಳಲ್ಲಿ ಅದನ್ನು ಪುನಃ ತನಿಖೆ ಮಾಡಲು ಶ್ರೀ ಪೆರಿಯಾನಾಯಕರ್‌ರವರ ಪಾಲಿಗೇ ಬಂತು ಅವರು 11 ಮಂದಿಗೆ ಕೈದು ವಿಧಿಸಿ, ಹನ್ನೊಂದು ಮಂದಿಯನ್ನು ಖುಲಾಸುಪಡಿಸಿದರು

ಅಪ್ಪೀಲಾಯಿತು ಜೊಯಿಂಟ್ ಮೆಜಿಸ್ಟ್ರೇಟರು ಮೂಲ ದಂಡನೆಯನ್ನ ಜೂನ್ ತಾ 4 ರಲ್ಲಿ ಕಾಯಂ ಮಾಡಿದರು. ಜೂನ್ ತಾ 6 ರಲ್ಲಿ ಶ್ರೀ ಪೆರಿಯಾ ನಾಯಕರ್‌ರವರ ಕೊಲೆಯಾಗಿದೆ! ಯಾಕೆಂದು ಇದುವರೆಗೆ ಪತ್ತೆಯಿಲ್ಲ.

ರಾಕ್ಷಸನ ಸುಳಿವು

ಪುನಃ ಜಲಪಾಯ್ಗುರಿಯಲ್ಲಿ ಸಂಚಾರ

ಉತ್ತರ ಬಂಗಾಳದ ಜಲಪಾಯ್ಗುರಿ ಎಂಬ ಸ್ಥಳದಲ್ಲಿ ಇದೇ ವಾರ, ಇದುವರೆಗೆ ಹನ್ನೆರಡು ವರ್ಷಗಳಲ್ಲಿ ಮೂರನೆಯ ಸರ್ತಿ, ರಾಕ್ಷಸನೊಬ್ಬನ ಸಂಚಾರಕ್ಕೆ ಪ್ರಾರಂಭವಾಗಿದೆ ಅದು ಬೇಲಾಕೋಬಾ ಯೂನಿಯನ್ (ಪಂಚಾಯತ) ಬೋರ್ಡಿಗೆ ಸೇರಿದ್ದು. ಅದರ ಪ್ರೆಸಿಡೆಂಟ್ ಶ್ರೀ ಕಮ್ರುದ್ದೀನ ಅವರು ಒದಿಪ್ಪದೇನೆಂದರೆ—"ರಾಕ್ಷಸ ಮನುಷ್ಯನು ಪ್ರೆಸಿಡೆಂಟರ ಮನೆಯ ವಠಾರದಲ್ಲಿ ಸುಳಿದುದರಿಂದ ಅವನ ಕಾಲು ಹೆಜ್ಜೆಗಳ ಗುರುತು ಅಲ್ಲಲ್ಲಿ ಕಾಣ ಸಿಕ್ಕಿದೆ ಅವನು ರಾತ್ರಿಕಾಲದಲ್ಲಿ ಸಂಚಾರ ಮಾಡುತ್ತಾನೆ. ಮೇ ತಾ 29ರ ಬೆಳಗ್ಗೆ, ಒಂದೊಂದ ಹೆಜ್ಜೆಯಿಂದ ಇನ್ನೊಂದಕ್ಕೆ 35 ಗೇಳ ದೂರವಾಗಿ,—ಪ್ರತಿ ಹೆಜ್ಜೆಯ ಗುರುತು ಎರಡು ಅಡಿ ಉದ್ದ, ಹನ್ನೊಂದು ಇಂಚು ಅಗಲವಾಗಿ, ಕಾಣುತ್ತಿವೆ ೧೨ ವರ್ಷಗಳ ಹಿಂದ ಈ ರಾಕ್ಷಸನು ದಕ್ಷಿಣದಿಂದ ಉತ್ತರಕ್ಕೆ ನಡೆದಿದ್ದರು 1926ನೆ ಜೂನ್‌ನಲ್ಲಿ ವಾಯವ್ಯದಿಂದ ಆಗ್ನೇಯಕ್ಕೆ ನಡೆದಿದ್ದನು ಈ ಸಲ ಆಗ್ನೇಯದಿಂದ ನೈಋತ್ಯಕ್ಕೆ ನಡೆದಿರುವನು ಇವನ ಕೆಲ ಹೆಜ್ಜೆ ಗುರುತುಗಳಲ್ಲಿ ಅಲ್ಲಲ್ಲಿ ಕಾಪಿಡಲಾಗಿದೆ ಮಳೆ ನೀರು ಅದಕ್ಕೆ ತಟ್ಟದಂತೆ ಜಾಗ್ರತೆ ಮಾಡಲಾಗಿದೆ, ಇಚ್ಛೆಯಿರುವವರು ಬಂದು ನೋಡಬಹುದು." ಈ ಹೆಜ್ಜೆಗಳ ಗುರುತು, ದೂರಗಳಿಂದ, ಇವನ ಎತ್ತರ 18 ಅಡಿಯಾದರೂ ಆಗಿರಬೇಕೆಂದು ಲೆಕ್ಕಹಾಕಲಾಗಿದೆ

ಸ್ಕೊಟ್ಲೆಂಡಿನಲ್ಲಿ ಲೋಕ್‌ನೆಸ್ ಮೋನ್ಸ್ಟರ್ ಎಂಬೊಂದು ರಾಕ್ಷಸ ಮೀನನ್ನು ಕುರಿತಾಗಿ ಪದೇ ಪದೇ ವಾರ್ತೆಗಳಿದ್ದು ಶೋಧಕರು ಬಹಳ ಶೋಧಿಸಿ, ಲಕ್ಷಗಟ್ಟಲೆ ಪವನು ಧ್ವಂಸಮಾಡಿ, ಸುಳ್ಳೇ ಸುಳ್ಳೆಂದರು. ಕೇವಲ ಪ್ರಯೋಜನವಾದುದು, ವಾರ್ತಾ ಪತ್ರಿಕೆಗಳಿಗೆ! ಅವು ಪ್ರತಿ ದಿನವೂ ನಾನಾ ಶೋಧಗಳ ವಿವರಗಳಲ್ಲಿ ಫೋಟೋ ಚಿತ್ರಗಳೊಡನೆ ಪ್ರಕಟಿಸುತ್ತಿದ್ದರು. ಈಗ ಈ ರಾಕ್ಷಸನ ಸುಳಿವು, ಪ್ರಕಟವಾಗಿದೆ, ಪತ್ರಗಳಿಗೇನೂ ಲಾಭವಿಲ್ಲ ಆದರೆ, ಇದರ ಶೋಧೆ ನಡೆದರೆ, ಅತಿಮಾನವರನ್ನು ಕುರಿತು, ಈ ವಿಚಿತ್ರಗಳುಳ್ಳ ಭಾರತವರ್ಷದಲ್ಲಿ, ವಿಮರ್ಶಿಸಬಲ್ಲ ವಿಲಾಯಿತಿಯವರೆ ಹಿಂದುಗಳು ಸುಳಿವ, ಅಕ್ಕಿಕ್ಷದ ಗ್ರಾಮಸ್ಥರು ನೋಟ ನೋಡ ಬಂದು, ಜಾತ್ರೆಯ ಹಣವೂ ಜನವೂ ಸೇರಿವರೆ, ಜಲಪಾಯ ಗುರಿಯ ಗುರಿಗೂ ಒಂದು ಗತಿಯುಂಟು

ಸ್ವದೇಶಾಭಿಮಾನಿ

ನೋಟುಗಳು.—Notes

ದೇವಸ್ಥಾನಗಳ ಮುಕ್ತದ್ವಾರ.

ಮಲಬಾರಿನಲ್ಲಿ ಈ ವಿಷಯವನ್ನು ಕುರಿತಾಗಿ ಶ್ರೀ ರಾಜಗೋಪಾಲಾಚಾರ್ಯರನ್ನು ಕಂಡವರಿದ್ದಾರೆ. ಒತ್ತಾಯದಿಂದ ದೇವಸ್ಥಾನಗಳನ್ನು ಸರ್ವಹಿಂದುಗಳಿಗೆ ನಿರಾತಂಕವಾಗಿ ತೆರೆಯಬೇಕೆಂದು ಕಾನೂನು ಮಾಡುವುದಕ್ಕೆ ಮಂತ್ರಿಯವರು ಒಪ್ಪಲಿಲ್ಲ. ಎಸೆಂಬ್ಲಿಯ ಮುಂದೆ, 'ಬಹುದು' ಎಂಬ ಬಗೆಯ ಅಪ್ಪಣೆ ಕೊಟ್ಟಲ್ಲಿ ತಪ್ಪಲ್ಲ, ಅನ್ಯಾಯವಲ್ಲ ಎಂಬ ಸೂಚನೆಕೊಡುವ ಇಂತಹ ಕಾನೂನು ಚರ್ಚೆಗೆ ಬರುವುದು; ಹೊರತು, 'ಬೇಕು' ಎಂದು ಅಪ್ಪಣೆ ಕೊಡುವ ಮಸೂದೆ ತರಲಾಗುವುದಿಲ್ಲ. ಈ ಅಭಿಪ್ರಾಯವನ್ನು ಕೇಳಿ, ಸವರ್ಣರ ಬಹುಮತದ ಬೆಂಬಲವಿದೆ ಎಂದು ಎರಡನೆ ಬಗೆಯ ಮಸೂದೆಗೆ ಕಾದಿದ್ದವರು ನಿಂರಾಶರಾಗಲೇ ಬೇಕು. ಆದರೆ, ಸರಕಾರದ ರೀತಿ ನ್ಯಾಯವಾದುದೇ ಎನ್ನಬೇಕು. ಸುಧಾರಣೆ ಮಾಡುವುದರಲ್ಲಿ ತನ್ನ ಸಹಾನುಭೂತಿಯು ಯಾವ ಕಡೆಗೆ ಇದೆ ಎಂಬುದನ್ನು ಸರಕಾರವು ತೋರಿಸಿಯದೆ. ಧಾರ್ಮಿಕ ವಿಚಾರಗಳಲ್ಲಿ, ಬಹು ಮಂದಿಗೆ ಅನ್ವಯಿಸುವ ವಿಚಾರಗಳನ್ನು ಸರಕಾರವು ತಾನಾಗಿ ಚರ್ಚೆಗೆ ರೂಢಿಗೆ ತರುವುದಕ್ಕೆ ಕಡ್ಡಾಯದ ಅಪ್ಪಣೆ ಕೊಡಲಾರದು. 'ಟ್ರಸ್ಟಿ'ಗಳನ್ನು ನಮಗೆ ಬೇಕಾದಂತೆ ತಿದ್ದಿಕೊಳ್ಳೋಣ ಎಂದು ಹಲವರು ಎನ್ನುವರಾದರೂ, ಅಷ್ಟು ಅಧಿಕಾರವು ಸರಕಾರಕ್ಕೆ ತನ್ನಲ್ಲೇ ಇದ್ದೀತೆ? ಎಂಬ ಪ್ರಶ್ನೆ ಚರ್ಚಾಸ್ಪದವಾದುದು. ಶತಮಾನಗಳ ತರುವಾಯದಲ್ಲಿ ಮೂಲ-ಉಂಬಳಿ ಬಿಟ್ಟಾತನ ಮನೋಭಿಪ್ರಾಯವನ್ನು ಸ್ಪಷ್ಟವಾಗಿ ಇಂತಹದೆಂದು [illegible] ಯಲ್ಲಿ ತಿದ್ದಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಈಗ ಇರುವ ತೆರದ ಚಳವಳವು ಆಗ ಇದ್ದಿದ್ದರೆ ದೇವಸ್ಥಾನದ ಹೊರಗೇ ಇರಬೇಕಾಗಿ ಈಗ ಯಾವ ಸಮಾಜದ ಮೇಲೆ ಬಹಿಷ್ಕಾರವಿದೆಯೋ ಅದು ಆಗಲೂ ಇರಲೆಂದು ಆತನು ಹೇಳುತಿದ್ದನೇ ಇಲ್ಲವೇ ಎಂದು ಯಾರು ನಿಷ್ಕರ್ಷಿಸಬಹುದು?

ಹಿಂದೂ ಪ್ರಪಂಚವೆಲ್ಲ ದೇವಳಗಳಲ್ಲಿ ಪ್ರವೇಶಿಸುವುದು ಒಳ್ಳೆಯದೆಂದು ಸಾಧಾರಣವಾಗಿ ಅಭಿಪ್ರಾಯವುಳ್ಳ ಒಂದು ಪಂಗಡವು ಸಂಖ್ಯೆಯಲ್ಲಿ ಕಿರಿದಾದರೂ ಸಂತಾನಗೊಳ್ಳುವುದರಲ್ಲಿ ಹಿರಿದಾಗಿ ಉಳಿದಿರುವಾಗ, ಸರಕಾರದ ಕರ್ತವ್ಯವು ಸ್ಪಷ್ಟವಾಗಿದೆ. ಯಾರಿಗೆ ಈಗ ಸ್ಥಾಪನೆಗೊಂಡಿರುವ ದೇವಾಲಯಗಳಿಗೆ ಪ್ರವೇಶವಿಲ್ಲವೋ ಅವರು ತಮ್ಮದೇ ಆಗಿರುವ ದೇವಾಲಯಗಳನ್ನು ಸ್ಥಾಪಿಸಬಹುದೆನ್ನುವವರಿದ್ದಾರೆ. ಮಲಬಾರಿನಲ್ಲಿ ಬಹುಮತವು ದೇವಾಲಯಗಳಿಗೆ ಪ್ರವೇಶವೆಲ್ಲರಿಗಿರಲಿ ಎಂದೇ ಇದೆಯಂತೆ. ಹೀಗಿರುವಾಗ, ಸವರ್ಣರೂ ಅವರ್ಣರೂ ಸೇರಿ ಕೆಲವು ದೇವಾಲಯಗಳನ್ನು ಸ್ಥಾಪಿಸಬಾರದೇಕೆ? ಇವುಗಳಿಗೆ ಸವರ್ಣರು ಬಹು ಸಂಖ್ಯಾತರಾಗಿ ಸೇರಿ; ಪ್ರಾಚೀನ ದೇವಾಲಯಗಳಿಗಿಂತ ಇವನ್ನು ಹೆಚ್ಚಾಗಿ ಪ್ರೀತಿಸುವರಾದರೆ, ಈ ಪ್ರೋತ್ಸಾಹದ ಫಲವಾಗಿ ಹಳೆಯ ದೇವಾಲಯಗಳು ಅವರ್ಣರನ್ನು ದೂರವಿಡಲಾಪವೆ? ಇದೇ ಉದಾರ ಬುದ್ಧಿಯುಳ್ಳವರ ಅಧಿಕ ಮತದ ಪ್ರದರ್ಶನದ ಪ್ರತ್ಯಕ್ಷಫಲವಾಗುವುದು. ಇದರ ಪರಿಣಾಮವು, ಸರಕಾರವು ಮಾಡುವ ಯಾವ ಕಡ್ಡಾಯದ ಕಾನೂನಿಗಿಂತ ಮಿಗಿಲಾದ್ದಾಗುವುದು.

ಝೆಕ್ಕರ ಮ್ಯುನಿಸಿಪಲ್ ಚುನಾವಣೆಯು ರವಿವಾರ ಬಂದಿತು. ರಾಜಕೀಯ ವಿಷಯಗಳಲ್ಲಿ ಎಲ್ಲರೂ ಉದ್ರೇಕಗೊಂಡರು. ಅಲ್ಲಲ್ಲಿ ಶಾಂತಿಭಂಗವಾಗುತ್ತಲಿದೆ ಎಂಬ ವಾರ್ತೆ. ರಕ್ತಪಾತ ಒಂದು ಹೊರತು, ಮಿಕ್ಕೆಲ್ಲ ವಿಪರೀತಗಳಾಗಿವೆ. ರಕ್ತಪಾತ ಉಳಿದಿದೆ; ಅದಾವಾಗಲೊ!

ಂ ಂ ಂ ಂ

ಈ ಚುನಾವಣೆಯಾದ ಕೂಡಲೆ, ಜರ್ಮನರ ಹಕ್ಕುಗಳನ್ನು ಕುರಿತಾದ ಸಂಭಾಷಣೆಗಳು (ಸೈನ್ಯದ ಬೆಂಬಲ ಸಮೇತ) ಜರುಗುವುವಂತೆ. ಒಂದು ಕಡೆ ಸರ್ಜಾಂಟರು ಬಂದೂಕು ಗುರಿಯಿಟ್ಟೇ ಜರ್ಮನರನ್ನು ಕಾಣುತ್ತಾರಂತೆ. ಕೊಮ್ಯುನಿಸ್ಟರ ತಿರುಗಿ ಬಹಳ ಎಂದು ಮಾತು ಹರಡಿದೆ (ಸುಳ್ಳೇ ಆದರೂ ಉತ್ತಮ ಸಿಮನ). ಮೊಸ್ಕೋ ಹಿಂದಣಿಂದ ಇದೆ ಎಂದೂ ಮಾತು (ಕೆಣಕಾಟ).

ಂ ಂ ಂ ಂ

ಯುದ್ಧವಾದರೆ? ಗಡಿಯ ಮೇಲೆ ಅಲ್ಲಲ್ಲಿ ಮೆಶೀನ್‌ಗನ್‌ಗಳನ್ನಿಟ್ಟು ಕಾವಲಾದ ಸೈನಿಕರಿದ್ದಾರೆ. ಅವನ್ನು ದಾಟಿ ಶತ್ರುಗಳು ಬಂದರೆ ಇತರ ಅಬಕವಿದೆ. ಅಲ್ಲಲ್ಲಿ ಚಿಕ್ಕ ಯುದ್ಧಗಳಾಗುವುವು. ಸೈನ್ಯಗಳೇ ಬಂದು ಮುತ್ತುವುದಕ್ಕೆ ಪರ್ವತಗಳ ಗೋಡೆ ಬಿಡದು. ವಿಮಾನಗಳಿಂದ ಮೇಶನ್‌ಗನ್‌ಗಳನ್ನು ಧ್ವಂಸಮಾಡುವುದು ಕಷ್ಟ. ಹೀಗೆಂದು ಝೆಕ್ಕರ ಆತ್ಮರಕ್ಷಣೆಯ ವಚನ.

ಂ ಂ ಂ ಂ

ಈ ಮಧ್ಯೆ, ಬ್ರುಸೆಲ್ಸ್, ಪಾರಿಸ್, ಎಮ್ಸ್ಟರಡಾಮ್, ಲಂಡನ್ ನಗರಗಳನ್ನೆ ಅರ್ಧ ಮಿನಿಟಿನ ವರೆಗೆ ಗುಡುಗಿಸಿ ಭೂಕಂಪವುಂಟಾ[illegible] ಆರಂಭದ ಬೆಲ್ಜಿಯಮಿನ ರಾಜಧಾನಿ; ಹಿಂದೆ ಜರ್ಮನರು ಫ್ರಾನ್ಸಿನ ಮೇಲೇರಿ ಬರುತ್ತಾ ದಾರಿಯನ್ನು ಆಕ್ರಮಿಸಿ ಧ್ವಂಸಗೊಳಿಸಿ ಈಗ ಪುನಃ ನಿರ್ಮಾಣದಿಂದ ನಗರ. ಅಲ್ಲೇ 70 ಸಲ ಭೂಮಿ ನಡುಗಿತು. ಫ್ರಾನ್ಸಿನಲ್ಲೂ ಜರ್ಮನರು ಆಕ್ರಮಿಸಿರುವ ರ್ಹೈನ್ ನದೀ ಕರೆಯಲ್ಲಿ ಆಯಿತು. ಇದು ವಿಪನ್ನೇ ಸೂಚಿಸಲಿ, ಅಂತು ಝೆಕ್ಕರ ಚುನಾವಣೆಯು ಗುಡುಗಿನಂತಾಗಿದೆ.

ಂ ಂ ಂ ಂ

ಬ್ರಿಟಿಷ ಯುದ್ಧ ಇಲಾಖಾ ಮಂತ್ರಿ ಆಗಲೇ ಭಾಷಣ ಮಾಡುತ್ತಾ, ಸ್ಪೇಯಿನಿನಲ್ಲಿ ಬ್ರಿಟಿಷನಾವೆಗಳನ್ನು ಗುಂಡಿಕ್ಕಿ ಮುಳುಗಿಸುವ ಪ್ರಯತ್ನಗಳನ್ನು ಕುರಿತಾಗಿ ಯಾವ ಹುಚ್ಚನೂ ಇಂತಹ ಸಂದರ್ಭದಲ್ಲಿ ಸುಲಭವಾಗಿ ಯುದ್ಧಾರಂಭ ಮಾಡಿದರೆನ್ನ ಬಹುದು; ಆದ್ರೆ ನಮ್ಮ ಹಕ್ಕುಗಳಿಗೆ ಲೋಪವಾದಂತೆ ನಾವೆಂದಿನಂತೆ ಸ್ಪೇಯಿನಿನ ಕಡೆಗೆ ವರ್ತಿಸುವುದಕ್ಕೆ ಬಹಳ ಜಾಣತನ ಬೇಕು." ಎಂದರು. ಲೋಯ್ಡು ಜೋರ್ಜರು — ಈಗಣ ಪಾರ್ಲಿಮೆಂಟಿನಲ್ಲಿ ಮುತ್ಸದ್ದಿತನದಿರುವವರು ಇದಕ್ಕೆ ವಿರುದ್ಧ ಭಾಷಣ ಮಾಡಿರುವರು. ಅವರು ಹುಚ್ಚರಲ್ಲ; ಹಿಂದಣ ಮಹಾಯುದ್ಧದಲ್ಲಿ ಬ್ರಿಟನ್ನಿಗೆ ಜಯ ಒದಗಿಸಿದವರು.

ಂ ಂ ಂ ಂ

ಮಾಜೀ ಮಂತ್ರಿ ಇಡನ್ ಸಾಹೆಬರೂ ಮಾತಾಡಿದರು. ಎಲ್ಲರೂ ಮಹಾಪ್ರಬಲ ಸಂಯುಕ್ತ ಜನಾಂಗಿಕ ಪ್ರಯತ್ನಗಳಿಂದ ಯುದ್ಧವಾಗದಂತೆ ನೋಡೋಣ ಎಂದರು. ಅಂತರಿಕ್ಷದಲ್ಲಿ ನಾವು ತೇಲಾಗಿದ್ದೇವಲ್ಲ; ಇದೊಂದು ಲೋಪವನ್ನು ಹೋಗಲಾಡಿಸಿಕೊಳ್ಳದೆ ನಿರ್ವಾಹವಿಲ್ಲವೆಂದರು. ಇವರೂ ಯುದ್ಧವಾದೀತೋ ಎನ್ನುತ್ತಾರೆ.

ನಮ್ಮ ಭೂಲಾಭಾಯಿಯವರೂ ವಿಲಾಯತಿ ಸಂಚಾರ ಮುಗಿಸಿ, ವಿಮಾನ ಹತ್ತಿ, ಕರಾಚಿಯಲ್ಲಿಳಿದವರೇ,—ಶಾಂತಿಗಾಗಿ ಯಾರೂ ಏನೇ ಆಶಿಸಲಿ, ಯುದ್ಧವಾಗುವುದು ನಿಶ್ಚಿತ. ಆದಾದರೆ, ನಾವು ಅವರ ಬೆಂಬಲಕ್ಕಿರಲಾರೆವು ಎಂದು ಬ್ರಿಟಿಷರಿಗೆ ಈಗ ಚೆನ್ನಾಗಿ ಗೊತ್ತಾಗಿದೆ. ಏಕೆ? ಹಿಂದಣ ಯುದ್ಧಕಾಲದಲ್ಲಿ ಮತ್ತೊಬ್ಬರ ಕೈಕೆಳಗಿರುವ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡುವುದೆಂದು ಬ್ರಿಟಿಷರು ನಂಬಿಸಿದಂತೆ ಇನ್ನು ನಂಬಿಸಲಾಸ್ಪದವಿಲ್ಲ. ಬ್ರಿಟಿಷರೇ ಮಾತ್ರ ಯಾವ ಯುದ್ಧವನ್ನೂ ತಾವೇ ಹೋರಾಡಬೇಕಾಗುವುದು ಎಂದರು.

ಂ ಂ ಂ ಂ

ಯುನೈಟೆಡ್ ಸ್ಟೇಟ್ಸಿಗೆ ಇತರ 13 ರಾಜ್ಯಗಳಿಂದ ವಸೂಲಾಗಬೇಕಾಗಿರುವ 1700,000,000 ಹಣವನ್ನು ಹಿಂತೆರುವವರು ಯಾರು? ಎಂದು ಪ್ರಶ್ನೆ ಒತ್ತಾಯದಿಂದ ಮುಂದೆ ಬಂದಿದೆ. ಬ್ರಿಟನ್ನು ತೆರುವುದಿಲ್ಲ. ಮೆಕ್ಸಿಕೋವಿನಲ್ಲಿ ಬ್ರಿಟಿಷರಿಗೆ ವಶದಲ್ಲಿದ್ದ ಎಣ್ಣೆಬಾವಿಗಳನ್ನು ಆ ಸರಕಾರವು ಜಪ್ತು ಮಾಡಿದೆ; ಆ ಹಣವೇನೂ ಬ್ರಿಟಿಷರಿಗೆ ಸಿಗದು. ಅದಕ್ಕಾಗಿ, ಬ್ರಿಟಿಷರ ಸಾಲಪತ್ರಗಳಲ್ಲಿ 50 ಮಿಲ್ಲಿಯ ಬೆಲೆಯವನ್ನು ಯುನೈಟೆಡ್ ಸ್ಟೇಟ್ಸ್ ಸರಕಾರವು ಮೆಕ್ಸಿಕೋಗೆ ಐದೇ ಮಿಲ್ಲಿಯ ಪವನಿಗೆ ಮಾರಿ, ಅವೇ ಪತ್ರಗಳನ್ನು ಬ್ರಿಟಿಷರಿಗೇ ತೆರುವುದಂತೆ. ಅಮೇರಿಕದಲ್ಲಿ ಕಾಸಿನ ಬೆಲೆಗೆ ಬಾರದ ಈ ಸಾಲಪತ್ರಗಳನ್ನು 5 ಮಿಲ್ಲಿಯಕ್ಕಾದರೂ ಮಾರಿ, ಮೆಕ್ಸಿಕೋವು 50 ಮಿಲ್ಲಿಯವನ್ನು ಬ್ರಿಟಿಷರಿಗೆ ತೆರುವಂತೆ ಮಾಡಿರುವ ಈ ಜಾಣತನಕ್ಕೇನೆನ್ನಬೇಕು?

ಂ ಂ ಂ ಂ

ಹಿಂದೀ ಬೇಡವನ್ನುವ ಕೂಟವು ಕವಿಮಿಕಸ್ಕಾದರೂ ಉದ್ಧರಿಸಬಾರದೇಕೆ? ಎಂದು ಮಂತ್ರೀಶ್ವರರು ಎಂದರು. 'ತಿರುವಾಳ್ಳುವಾರ ದಿನ' ಆಚರಿಸಲ್ಪಟ್ಟಿತು. ಎಲ್ಲರೂ ಈ ಕವಿಯ ಕುರುಳ್ ಕಾವ್ಯವನ್ನೋದಲೇಬೇಕಾಗಿ ಭಾಷಣಗಳಾದುವು. ತಂಜಾವೂರಿನಲ್ಲಿ ಮಾತ್ರ ಈ ದಿನ ಆಚರಿಸಿದರೆ ಶಾಂತಿ ಭಂಗವಾದೀತಾಗಿ ಜಿಲ್ಲಾ ಮೆಜಿಸ್ಟ್ರೇಟರ ಬೆದರಿಕೆ. ಈ ಭಯವು ಕುರುಳ್‌ಗಾಗಿ ಇಲ್ಲ. ಹಿಂದೀ ವಿರುದ್ಧಭಾವವಿದೆ ಎಂದು ಸೂಚಿತವಾದಂತಾಯಿತು.

ಂ ಂ ಂ ಂ

ತಿರುಪತಿಯಲ್ಲಿ ಗೋವಿಂದ ರಾಜ ಸ್ವಾಮಿಯ ಗೋಪುರದ ಮೇಲೆ ಎರಡು ಕಾಂಗ್ರೆಸ್ ಧ್ವಜಗಳನ್ನು ಯಾರೋ ಏರಿಸಿದ್ದರು. ದೇವಸ್ಥಾನದ ಆಡಳಿತ ನೋಡುವ ಕಮಿಶನರರು ಶ್ರೀ ರಂಗನಾಥ ಮುದಲಿಯಾರರು. ಇವರು ಅವನ್ನು ಇಳಿಸಿದರು. ಅದು ಅಗತ್ಯವಿರಲಿಲ್ಲವೆಂದು ಜಿಲ್ಲಾ ಕಾಂಗ್ರೆಸು ಕಮಿಟಿಯವರು ಆಕ್ಷೇಪವೆತ್ತಿ, ಥಿಯೊಸೊಫಿಕಲ್ ಸೊಸಾಯಿಟಿಯ ಬಿರುದು ಬಿಲ್ಲೆಯನ್ನು ಅದೇ ದೇವಾಲಯದ ಗೋಪುರದ ಮೇಲೆ ವಿದ್ಯುದ್ದೀಪಗಳಿಂದ ಬೆಳಗಿಸಿಟ್ಟ ಕಮಿಶನರರು, ಅದನ್ನೇಕೆ ಇಳಿಸಲಿಲ್ಲ ಎಂದೂ ಇದರಿಂದ ಮೊಕದ್ದಮೆಗೆ ಕಾರಣವಿದೆಯೆಂದೂ ಈಗ ನೋಟಿಸು ಕೊಟ್ಟಿದ್ದಾರೆ. ಅಂತೂ ಧ್ವಜಗಳ ರಗಳೆ ಹೇಳತೀರದು.

ಂ ಂ ಂ ಂ

ಹಿಮಾಲಯದ ಎವರೆಸ್ಟ್ ಶಿಖರ ಹತ್ತಿ ಅಲ್ಲಿ ಬ್ರಿಟಿಷ್ ಧ್ವಜವನ್ನು ನೆಡಬೇಕಾಗಿ ಹೊರಟ ಕೂಟದವರು, ಅದು ಕೈಲಾಗದೆಂದು ಹಿಂದಿರುಗಿರುವರು. ಗೋವಿಂದರಾಜನು ಯಾರ ಧ್ವಜಕಷ್ಟು ಗೋಪುರ ಒಪ್ಪಿಸಿ, ನಿದ್ರಿಸಿರುವ ಆಧುದೇವರು; ಕೈಲಾಸದ ರುದ್ರನಲ್ಲ!

ಲಂಚದ ಸುಳಿವೂ ಇರಬಾರದು

ತಿನ್ನವೆಲ್ಲಿ ಜಿಲ್ಲಾ ಸರಸ್ವತೀ ಮೋಟರ್ ಸರ್ವಿಸಿನ ಮಾಲಿಕರು ಸರಕಾರಕ್ಕೆ ಬರೆದು ಕೊಟ್ಟ ವರದಿಯನ್ನು ಪೋಲಿಸ್ ಉಚ್ಚಾಧಿಕಾರಿಗಳು ತನಿಖಿ ಮಾಡಿದರು. ಆಗ ಪೋಲೀಸರು ಕೆಳಗಣ ರೀತಿಯಲ್ಲಿ ದುರ್ವರ್ತನೆ ಮಾಡುತಿದ್ದುದು ಅವರ ಗೋಚರಕ್ಕೆ ಬಂತು. ಹೊರ ಸ್ಟೇಶನುಗಳಲ್ಲಿ ಮಾಮೂಲು ಸ್ವೀಕಾರ; ಪಬ್ಲಿಕ್ ಸರ್ವಿಸ್ ಕಂಪೆನಿಗಳಿಂದ ಬಸ್ಸುಗಳಲ್ಲಿ ಧರ್ಮಾರ್ಥ ಸಂಚಾರ; ಸಬ್ ಇನ್ಸ್‌ಪೆಕ್ಟರರು ಬಸ್ಸುಗಳಲ್ಲಿ ಕಾಸೂ ಕೊಡದೆ ತಮಗೆ ಅಗತ್ಯ ತೋರುವಂತೆ ಪಡೆಯುವುದು.

ಇದು ಸರಕಾರಕ್ಕೆ ತಿಳಿದುಬಂದು, ಇಂತಹದೆಲ್ಲ ನಾಚಿಕೆಗೇಡೆಂದೂ, ಜಿಲ್ಲೆಯಲ್ಲಿನ ಉಚ್ಚಾಧಿಕಾರಿಗಳು ಸರಿಯಾಗಿ ನಿಗಾ ಕೊಡುತಿದ್ದರೆ ಹೀಗೆ ಆಗುತ್ತಿರಲಿಲ್ಲವೆಂದೂ, ಜನತೆಯಲ್ಲಿ ಗೌರವವುಳ್ಳವರೊಡನೆ ಈ ಅಧಿಕಾರಿಗಳು ಬೆರೆಯುತಿದ್ದಲ್ಲಿ ಇಂತಹದಕ್ಕೆ ಆಸ್ಪದವಿರುತ್ತಿರಲಿಲ್ಲೆಂದೂ ಇನ್ಸಪೆಕ್ಟರರುಗಳು ಸರಿಯಾಗಿ ಮನಸಾಕ್ಷಿಗೊಪ್ಪುವಂತೆ ಕರ್ತವ್ಯ ಮಾಡುತಿದ್ದರೆ ಸಬ್ ಇನ್ಸ್‌ಪೆಕ್ಟರರು ತಪ್ಪಿ ನಡೆಯುತ್ತಿರಲಿಲ್ಲವೆಂದೂ ಟೀಕಿಸಿಯದೆ.

ಆದರೆ, ಇಂತಹ ಅಫೀಸರರೇ ಹೀಗೆ ಮಾಡುತಿದ್ದರೆಂಬುದನ್ನು ಗೊತ್ತುಹಚ್ಚಲಾರದಾದುದರಿಂದ, ತಿನ್ನವೆಲ್ಲಿಯಲ್ಲಿ ಮಾತ್ರವಲ್ಲದೆ ಇತರ ಪ್ರಾಂತ್ಯದಲ್ಲಿನ ಎಲ್ಲ ಪೊಲೀಸ್ ಫೋರ್ಸಿಗೆ ಇದೊಂದು ಎಚ್ಚರಿಕೆ ಕೊಡುವಂತಾದ ಘಟನೆಯಾಗಿದೆಯೆಂದೂ, ಇಂತಹ ನಾಚಿಕೆಗೇಡಿನ ವರ್ತನವನ್ನು ನಿವಾರಿಸಲು ಎಲ್ಲರೂ ಪ್ರಯತ್ನಿಸಲು ಅಗತ್ಯವೆಂದು ಸರ್ವರೂ ತಿಳಿಯುವಂತಾಯಿತೆಂದೂ ಸರಕಾರವು ನಂಬಿ, ಎಲ್ಲಾ ಜಿಲ್ಲಾ ಪೊಲೀಸ್ ಸುಪರಿಂಟೆಂಡೆಂಟರುಗಳು, ಇಂತಹ ದುರ್ಲಕ್ಷಣಗಳು ಅವರ ತಿಳಿವಳಿಕೆಗೆ ಬಂದಲ್ಲಿ ಅವುಗಳನ್ನು ಅಲ್ಲೇ ಅಣಗಿಸಲು ಯತ್ನಿಸದೆ ಇದ್ದುದಕ್ಕಾಗಿ [illegible] ಜವಾಬುದಾರರಾಗುವರು ಎಂದು ಸರಕಾರವು ಇಸ್ತಿಹಾರನ್ನು ಪ್ರಕಟಿಸಿಯದೆ.

ಕೆಳಹಂತರರ ದುರ್ವರ್ತನೆಗೆ ಉಚ್ಚಾಧಿಕಾರಿಗಳು ಜವಾಬುದಾರರೆಂದು ಎಚ್ಚರಿಸಿದ ಪ್ರಕಟನೆ ಇದೇ ಮೊದಲನೆಯದೆಂದು ಪತ್ರಿಕೆಗಳು ಹೇಳುತ್ತಿವೆ.

ದೇಹವನ್ನೂ ದಾನಮಾಡಿದಳು.

ಕೆನ್ಸಿಂಗ್ಟನ್ನಿನ ಮಿಸ್. ಮೆರಿಯನ್ ಆರ್ಮ್‌ಸ್ಟ್ರಾಂಗ್ ಎಂಬಾಕೆಯು ತನ್ನ 13,000 ಪೌಂಡಿನ ಸಂಪತ್ತನ್ನು, ತನ್ನ ಬಂಧು ಬಳಗದವರಿಗೆ ಬರೆದಿಟ್ಟು, ತನ್ನ ದೇಹವನ್ನು ಮರಣ ನಂತರ ವಿಜ್ಞಾನದ ಉಪಯೋಗಾರ್ಥವಾಗಿ ಒದಗಿಸಬೇಕೆಂದು ವಿಲ್ಲಿನಲ್ಲಿ ಬರೆದಿರುವಳು. "ನನ್ನ ದೇಹವು ಏನಾದರೂ ಉಪಯೋಗಕ್ಕೆ ಬೀಳದಾದರೆ ಅದನ್ನು ಒಂದು ಆಸ್ಪತ್ರೆಗೆ ದಾನಮಾಡಬೇಕು." ಎಂದೇ ಆಕೆಯ ವಿಲ್ಲಿನ ಒಕ್ಕಣೆ.

ಏನಲ್ಲದಿದ್ದರೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಿಗಯಲಾದರೂ ಆಗಿತಲ್ಲವೆ?

ಮೂರು ಮಂದಿ ಅಣ್ಣತಮ್ಮಂದಿಯರನ್ನು ಮದುವೆಯಾದಳು.

ಜಗೋಸ್ಲಾವಿಯದಲ್ಲಿ ಸ್ಲೆವಿಟ್ಸಾ ಕಾಂಚಿತ್ ಎಂಬ ಕೃಷಿಕ ತರುಣಿ, ಮೂವರು ಮಂದಿ ಅಣ್ಣ ತಮ್ಮಂದಿಯರು. ಒಂದು ಮನೆಯಿಂದ ಹಿರಿಯವನನ್ನು ಮೊದಲು ಮದುವೆಯಾದಳು. ನಾಲ್ಕು ವರ್ಷಗಳ ಹಿಂದೆ ಆತನು ಮೃತನಾಗಲು, ಎರಡನೆಯವನಾದ ಸ್ಟ್ಯಾಪನ್ ಎಂಬಾತನನ್ನು ಪಾಣಿಗ್ರಹಣ ಮಾಡಿಕೊಂಡಳು. ಒಂದು ಕುದುರೆಯ ಕಾಲಡಿಯಲ್ಲಿ ಬಿದ್ದು ಸ್ಟ್ಯಾಪನನು ಕಾಲಾಧೀನನಾಗಲು, ಈಗ ಆತನ ನಂತರದವನಾದ ಎಂಟನ್ ಎಂಬಾತನ ಕರಗ್ರಹಣಮಾಡಿದವಳಾಕೆ?

ನಾಲ್ಕು ಪ್ರಾಂತಗಳಲ್ಲಿ

★ ★ ★

ಸುಪ್ರಭಾತ, ಆದರೆ ಅತಿಶೀತಲ, ಬಾಲಸೂರ್ಯನು ಕಾರುಮೇಘಗಳ ಅವಕುಂಠನವನ್ನು ಭೇದಿಸಿ ನಿಸರ್ಗದ ಕಡೆ ಹಸನ್ಮುಖವನ್ನು ಪ್ರದರ್ಶಿಸಲು ಪ್ರಯತ್ನಿಸುತ್ತಿದ್ದನಷ್ಟೆ. ರೈಲುಬಂಡಿ 'ಬೆಳಗಾಂವಿಯ' ರೈಲ್ವೆ ನಿಲ್ದಾಣವನ್ನು ಹಾದುಹೋಗುತ್ತಲಿತ್ತು. ನಾನು ಗಾಡಿಯೊಳಗಿಂದೊಮ್ಮೆ ಹೊರಗೆ ಇಣಿಕಿ ಇತ್ತಿತ್ತ ನೋಡಿದೆ. ಅದೇನೋ ಉತ್ಸಾಹದಿಂದ ಮುನ್ನೋಡುವ ಮುಖಗಳೊಂದೆಡೆ ಗುಂಪುಗೂಡಿದ್ದುವು. ಉತ್ತೇಜಕವೂ ಮನೋಹರವೂ ಆದೊಂದು ಭಾವಪೂರಿತ ಹೃದಯಗಳು ಅವರಿರುವರೆಂದು ನನಗೆನಿಸಿತು. ಬಿಸಿಲ ಬೇಗೆಗೆ ಬೇಗುದಿಗೊಂಡ ದಿನದ ಕೊನೆಗೊಂದು ತಂಗಾಳಿಗೆ ಮೈಯೊಡ್ಡಿ ದಣಿವಾರಿಸಿಕೊಂಡವರ ತೆರನಿದ್ದ ಅವರನ್ನು ಕಂಡು ಪಯಣದಿಂದಾಗಿ ದಣಿದ ನನಗೆ ಹೊಸ ಶಾಂತಿ ದೊರೆತಂತಾಯಿತು. ಮುಂದೆ ಬರಲಿರುವ ಆಶೆ ಇಲ್ಲಿ ಕೂಡಿ ಸರಿಪಡಿಸಿದ ತೆರನಿತ್ತು. ನಾನು ರಾಮದುರ್ಗಕ್ಕೆ ಹೋಗ ಹೊರಟಿದ್ದೆ. ಅಲ್ಲಿನ ಪ್ರಜೆಗಳು ಧೀರತನ ಕೋರಿ ಕಂದಾಯನಿರಾಕರಣೆಯ ಸತ್ಯಾಗ್ರಹ ಚಳವಳ ಹೂಡಿದ್ದರು. ನೂರಾರು ವಾರಗಳ ಎಡೆಬಿಡದ ದೇಶಪರ್ಯಟನವನ್ನು ಮಾಡಿ ನಾಲ್ಕು ಪ್ರಾಂತ್ಯಗಳನ್ನು ಒಮ್ಮೆ ಆ ಕಡೆ ದಾಟಿ ಮತ್ತೊಮ್ಮೆ ಹಿಂದುರುಗಿ ನಮ್ಮ ವಿಸ್ತಾರವಾದ ಭಾರತ ಭೂಮಿ ಯುದ್ದಕ್ಕೂ ಕೆಸರ ಮಣ್ಣಿನಲ್ಲಿ ಕಾಲನೆಳೆದುಕೊಂಡತ್ತಿತ್ತ ತಿರುಗಿ ಬಲು ಬಳಲಿದ ತೆರನಿದ್ದ ನನಗೆ ಕೊನೆಗಾದರೊಂದು ನಿರ್ಮಲ ಶಿಲಾವಾಟಿಕೆಯ ಮೇಲೆ ತಂಪಾಗಿ ಸುಖವಾಗಿ, ಶುಚಿಯಾಗಿ ನಡೆವಂತಾಗುವುದೇ?

ಪರ್ವತ ಪ್ರದೇಶದಲ್ಲಿ ಹಾವಿನಂತೆ ಇತ್ತಿತ್ತ ತಿರುಗಿಕೊಂಡಿಳಿವ ದಾರಿಯುದ್ದಕ್ಕೂ ಹಿಂದಾದ ಮೂರು ವಾರಗಳ ಘಟನೆಗಳ ಚಿತ್ರಗಳೇ ಕಣ್ಮುಂದೆ ಕನಸಿನಲ್ಲಿ ಕಂಡದಂತೆ ತೋ[illegible] ನಿಮಿಷಕ್ಕೂ ವಿವಿಧ ತೆರನಾಗುತ್ತಿತ್ತು.

ಮಹಾರಾಷ್ಟ್ರದ ಸಾಂಸ್ಥಾನಿಕ ಪ್ರಜಾಪರಿಷದದ ದೃಶ್ಯದ ಚಿತ್ರ! ಏನು ಸಂಸ್ಥಾನವೋ, ಏನು ಪ್ರಜೆಗಳೋ ಅವರು, ಏನು ಪರಿಷದೋ ಅದು! ವಿಡಂಬನೆ! 'ರಕ್ತನಯನಗಳ ಮುಖ, ನೂರುಗಟ್ಟಲೆಯಲ್ಲಿ ರಾಶಿಹಾಕಿದ್ದ ಜನರ ಹಿಂಡೊಂದು. ಒಮ್ಮೊಮ್ಮೆ ಕಣ್ಣಲ್ಲಿ ಬಿಜಲಿಯೋಡಿದ ರೀತಿ ಕಿಡಿ ಮೂಡಿ ಬೆಳಗುವುದು. ವಿಸ್ತಾರವಾದ ಚಪ್ಪರವಿತ್ತು. ಅಧಿಕಾರ ವೇದಿಕೆಯು ಒಂದು ಮೂಲೆಯಲ್ಲಿತ್ತು. ಇಬ್ಬರು ಮೂವರು ಮಹಾನುಭಾವರು ಅಲ್ಲಿ ಮಂಡಿಸಿದ್ದರು. ಪರಿಷದದ ನಾಟಕದ ಸೂತ್ರಧಾರತ್ವ ಅವರಲ್ಲಿತ್ತು. ಪರಿಷದವೆ ಪರಿಷದವು. ಭಾರಿ ಬಯಲಾಟವದು! ಹರಿ ಹಿಂಡು ಕುರಿಗಳನ್ನು ದೊರೆ ಕುರುಬ ನಡೆಸುತಲಿದ್ದ ತೆರನಂತಿತ್ತು. ವೇದಿಕೆಯ ಮೇಲೇರಿ ನಿಂದವರು ಹೇಳಿಕೊಟ್ಟಂತೆ ಕಲಿತಿರು ನಾಲ್ಕು ಮಾತುಗಳನೊದರುತ್ತಿದ್ದರು. ಸ್ವತಂತ್ರಾಭಿಪ್ರಾಯಕ್ಕೆ ಅಪಹಾಸ್ಯಮಾಡಿದಂತಾಗಿತ್ತು. ಸರ್ವಾಧಿಕಾರವೇ ಭಾಪು! ಭಾಪು! ಎನಬೇಕು ಆ ಪ್ರಜಾಪರಿಷದದ ರೀತಿಯನ್ನು ಕಂಡವರು. ಮತ್ತೇಕೆ ಜರ್ಮನಿಯೊ ಇಟಲಿಯೋ ಸರ್ವಾಧಿಕಾರಿಗಳ ಕೈಗೊಂಬೆಯೆನ್ನಬೇಕು.

ಮರುದಿನ ನಾನು ಉತ್ತರದತ್ತ ಹೊರಟೆ. ಶ್ರೀ ವಲ್ಲಭಭಾಯಿ ಮತ್ತು ಶ್ರೀ ಮೌಲನಾ ಅಜಾದ ಇವರುಗಳು ಆ ಬಂಡಿಯನ್ನು ಏರಿದ್ದರು. ಅವರು ಪಚ್ಮಾರಿ ಕಡೆ ಪಯಣವಾಡುತಿದ್ದರು. ಮಹಾರಾಷ್ಟ್ರದಿಂದ ಬೊಂಬಾಯಿಗೆ ತಲುಪಿದುದೊಂದೆ ಗೊತ್ತು. ಎಲ್ಲೆಡೆ ಮಧ್ಯಪ್ರಾಂತ್ಯದ ಮಂತ್ರಿಮಂಡಳದ ಒಡಕಿನ ಸೊಲ್ಲು ಗುಲ್ಲಾಗಿ ತುಂಬಿತ್ತು. ಮುಂದು ಮುಂದಕ್ಕೆ ಸಾಗಿ ಮಧ್ಯಪ್ರಾಂತಕ್ಕೆ ಬರಲು ಈ ಗುಲ್ಲು ಬಲವಾಗಿ ಊರಿದೀ ತುಂಬಿ ನಾರ್ಲುವ ರೀತಿಯಾಗಿತ್ತು. ಇಡೀ ಪ್ರಾಂತವೇ ಎರಡು ಪಂಗಡವಾಗಿ ವಿಭಾಗಿಸಲ್ಪಟ್ಟಂತಾಗಿ ಒಂದು ಪಕ್ಷದ ಜನರು ಇನ್ನೊಂದು ಪಂಗಡವನ್ನು ಹಳಿಯುವುದು, ಅವರನ್ನು ಉಳಿದವರು ದೂರುವುದು, ಹೀಗೆಯೇ ಲೇವಡಿಯು ಬೆಳೆದಿತ್ತು. ನನಗೇಕೊ ಈ ಗೊಂದಲಿನ ಹರಟೆಯಲ್ಲಿ ಉಸಿರುಕಟ್ಟಿದಂತಾಯಿತು. ಒಂದು ವರ್ಷದ ಹಿಂದೆ ವಿಜಯಸಂತೋಷದಿಂದುಬ್ಬಿ ಮುಂದಕ್ಕೆ ಬಂದ ಕಾಂಗ್ರೆಸ್ಸು ಇಂದೇಕೆ ಹೀಗಾಯಿತು? ಗೌರವದ ಅಧಿಕಾರ ಸ್ವೀಕರಿಸಿ ಇನ್ನಿದೂ ಹತ್ತು ತಿಂಗಳು ಕೂಡ ದಾಟಿಲ್ಲ. ಇಷ್ಟರಲ್ಲೆ ಹೀಗಾಯಿತೆ? ನನ್ನ ಪ್ರಾಂತ್ಯದ ಸ್ಥಳೀಯ ಆಡಳಿತ ಸಂಸ್ಥೆಗಳ ಚುನಾವಣೆಯಾಗಿ ಬೋರ್ಡು ಮುನಿಸಿಪಾಲಿಟಿಗಳಲ್ಲಿದ್ದ ಕಾಂಗ್ರೆಸ್ ಬಹುಮತವು ಒಂದೊಂದು ದಿನದೊಳಗೆ ಅಲ್ಪ ಸಂಖ್ಯಾಕ ಪಕ್ಷಗಳಾದ ಚೋದ್ಯಗಳು, ಕಾಂಗ್ರೆಸ್ ಬಹುಮತವಿದ್ದಲ್ಲಿ ಕಾಂಗ್ರೆಸೇತರ ಮಂದಿ ಅಧ್ಯಕ್ಷಸ್ಥಾನವನ್ನು ಗೆದ್ದುಕೊಂಡ ಹಾಳು ಕಥೆಗಳು ನನಗೆ ಬೇಸರ ಹುಟ್ಟಿಸಿದ್ದುವು. ಅದರಿಂದಾಗಿ ನಾನೇಕೊ

ಖಿನ್ನಳಾಗಿದ್ದೆನು. ಇಂಥ ವಾಚಕರನ್ನು ಮರೆಯುತ್ತಿದ್ದೇ ನಾನು ಬೇರೆ ಪತ್ರಿಕೆಗೆ [illegible] ಬೆಳೆಸಿದ [illegible] ಬರುವ [illegible] ನಂತೆ ಈ ಹಾಳು ಹರಟೆಯು ಎತ್ತಿ [illegible] ದಲ್ಲಿಯೂ ದಿನದ ಹೊತ್ತಾಗಿ [illegible]. ನಾನೇ ಅದಕ್ಕೆಲ್ಲಾ ಕಾರಣಳೋ ಎಂಬಂತೆ ನನ್ನ ಕಂಡವರೆಲ್ಲ ''ಇದೇನು ಕಾಂಗ್ರೆಸ್ ದ್ರೋಹ ನಿಮ್ಮ ಪ್ರಾಂತದಲ್ಲಿ?'' ಎಂದು ನೋಟದ ಮೇಲೆ ಬಿರುಸು ನುಡಿ ಬಾಣಗಳನ್ನೆಷ್ಟೋ ಹೂಡಿದರು. ಅನೇಕ ಪ್ರಾಮುಖ್ಯ ಪತ್ರಿಕೆಗಳು ಮದ್ರಾಸು ಸಂಸ್ಥಾನದಲ್ಲಿ ಚುನಾವಣೆಗಳು, ಕಾಂಗ್ರೆಸ್ ದ್ರೋಹ, ವಿಶ್ವಾಸಘಾತುಕಿಗಳ ಮೇಲೆ ಶಿಸ್ತು, ಕಾಂಗ್ರೆಸ್ ಬಹುಮತದಲ್ಲಿ ಸದಸ್ಯರ ಪ್ರಾಮಾಣಿಕತೆ, ಅಧಿಕಾರಸ್ವೀಕಾರದ ಆ ವೇಳೆ, ಬಹುಮಾನಕ್ಕೆ ಬಾಯಿಬಿಡುವವರ ಸೇವೆ ಎಂದು ಮುಂತಾಗಿ ಲೇಖನಗಳನ್ನು ಬರೆದಿದ್ದುದ ಪುಟಗಳನ್ನು ನನ್ನ ಮಿತ್ರರು ನನ್ನ ಮುಂದೆ ರಾಶಿಯಿಟ್ಟಿದುದನ್ನು ಕಂಡು ಛಿ ಛೀ! ಎನ್ನಿಸಿತು. ಇಷ್ಟೆಲ್ಲ ನಿರಾಶೆಯ ಅಂತರಾಳದ ಮುಂದೆ ಕಿರಿಯಾಸೆ ಮೂಡಿತ್ತು. ಈ ಗುಲ್ಲುಗಳನ್ನೆಲ್ಲಾ ಬದಿಗಿಕ್ಕಿ ಅಲಹಾಬಾದಿನಲ್ಲಿ ಒಂದು ದಿನವಾದರೂ ಬಿಡುಗಡೆಯೆಂದು ಎಣಿಸಿದ್ದೆ. ನನ್ನ ಗೆಳತಿಯರೆಲ್ಲ ನನ್ನನ್ನಿದಿರುಗೊಂಡರು. ಬಂದು ಕಂಡರು ಕೆಲವರು. ಊಟವು ಮುಗಿದು ಹಾಯಾಗಿ ಕುಳಿತು ಬೇಸರವ ಕಳೆಯಲಿಕ್ಕಾಗಿ ಸಿಕ್ಕಿದುದೊಂದೆ ಸಂಜೆ. ಆದರೆ ನನ್ನ ವಿರಾಮದ ಆಸೆ ಹಾಳಾಯಿತು. ಮಾತಿಗೆ ಮಾತು ಬಂದು ಅತಿ ತೀಕ್ಷ್ಣವಾದ ಹಿಂದು-ಮುಸ್ಲಿಂ ಪ್ರಶ್ನೆ ಮೊದಲಾಯಿತು. ಚರ್ಚೆ ನಡೆಯಿತು. ಜಗಳವೇರಿತು. ಹಿಂದು ಮುಸ್ಲಿಂ ಜಗಳದ ಅತಿ ಭಯಂಕರ ದೃಶ್ಯಗಳ ಪತ್ರಿಕೆಗಳಲ್ಲಿ ಓದಿ 'ಓಹೋ' ಎನ್ನಬಹುದು. ಆದರೆ ಅಂತಹ ಅನಿಷ್ಟಗಳು ನಡೆವ ವೇಳೆ ಅದರಲ್ಲಿ ಸಿಕ್ಕಿ ಬೆನ್ನಬಿಟ್ಟವರ ಬಾಯಿಂದಲೇ ಆ ಕತೆಯನ್ನು ಕೇಳಬೇಕು. ಬಲಿಬಿದ್ದ ಮಂದಿಗಳ ನೆತ್ತರಲ್ಲಿ ತೋಯಿಸಿ ಬಟ್ಟೆಗಳನುಟ್ಟವರ ಬಾಯಿಂದ ಬಂದ ಕತೆ ಕೇಳುವವರದು ಅಲ್ಲಿ ಕೂಗಿಸುವ ತೆರದಿತ್ತು. ಒಬ್ಬ ಮುಸ್ಲಿಂ ಹುಡುಗ ನನ್ನ ಒಬ್ಬ ಹಿಂದೂ ತಾಯಿ ತನ್ನ ಮನೆಯ ಆಶ್ರಯ ಕೊಟ್ಟು ರಕ್ಷಿಸಿದ ಕತೆಯೊಂದು ಕರುಣಾಜನಕವಾಗಿದೆ. ಅತಿ ಪ್ರಾಚೀನ ಕಾಲದಿಂದಲೂ ನಡೆದು ಬಂದ ಸ್ನೇಹಪಾಶದಿ ಬಂಧಿತವಾದ ಹಿಂದು ಮುಸ್ಲಿಂ ಕುಟುಂಬಗಳು ಎಷ್ಟೋ ಇವೆ. ಈ ಜಗಳದಿಂದಾಗಿ ಎಲ್ಲವೂ ಹಾಳಾಯ್ತು. ಕಾಂಗ್ರೆಸ್ ಕೆಲಸಗಾರನಾದ ಧೀರ ಪಶುಪತಿಯ ವಿಷಯವು ಹೃದಯವ ಕರಗಿಸುವ ರೀತಿಯದು. ಅಂಥ ಶ್ರದ್ಧೆಗೆ, ವಿಚಾರವಿಲ್ಲ, ಧರ್ಮದ ಅರಿವಿಲ್ಲ, ನ್ಯಾಯದ ಪರಿಚಯವಿಲ್ಲ, ತಾತ್ಕಾಲಿಕ ಬುದ್ಧಿಭ್ರಮಣೆಯೇ ಅದು. ಇಂಥ ಜಗಳಗಳಲ್ಲಿ ಕೆಲಮಂದಿ ತಮ್ಮನ್ನೆ ತಾವು ಮರೆಯುವರು. ಮೃಗಗಳಂತಾಗುವರು. ಕ್ರೂರವಧೆಗಳು ಕಡೆಯ ಸೋದರರ ಕೊಲ್ಲುವರು, ಸಿಗಿಯುವರು, ಬಗಿಯುವರು, ನೆತ್ತರಲ್ಲಿ ಮೀಯುವರು, ಮಕ್ಕಳನ್ನು ಹೊತ್ತು ಅಳಿಸಿದ ಕೈಗಳೇ ಶಿಶುವಧೆಯ ನಡೆಸುವವು. ಅಂಧಶ್ರದ್ಧೆಯ ಪರಿಣಾಮವಿದು.

ಆನಂದ ಭವನದಲ್ಲಿ ನಾನಿಳಿದುಕೊಂಡಿದ್ದೆ. ರೈಲುಗಾಡಿ ಬಿಟ್ಟೋಡಿದ [illegible] ತಿಂಗಳ [illegible] ಶ್ರೀ ಪಂಡಿತ ಜವಾಹರಲಾಲರು ಪರ ಊರಿನಿಂದ ಇನ್ನೂ ಬಂದಿರಲಿಲ್ಲ. [illegible] ನೊಳ ಬರುವವರಿದ್ದವರು. ಬೇರೆಲ್ಲ ಗೆಳೆಯರು ಕಾರ್ಯಾರ್ಥಿಗಳಾಗಿ ಇತ್ತ ಹೋಗಿದ್ದರು. ನಾನು ಅಲ್ಲಿಯೆ ಏಕಾಂಗಿಯಾಗಿ ಉಳಿಯಬೇಕಾಯಿತು. ರಾತ್ರಿಯೆಲ್ಲವ ನಿದ್ದೆ ನೋಡದೆ ಕಳೆಯಬೇಕಾಯಿತು. ಜೀವನದ [illegible] '' ಆಗಸದ ತೆರೆಗಳ. ಪ್ರತಿಯೊಂದು ಕೋಮಲಾಕಾಂಕ್ಷದ ಹೃದಯಕ್ಕೆ ಸರಿಸಿಟ್ಟ ಕತ್ತಿಗಳ ತಿವಿದಂತೆಯೆ ಕಂಡು ಬರುತಿತ್ತು. ಮಾನವನು ಮಾನವನ ಕತ್ತು ಕೊಯ್ಯುವ ದಿನದ ಕ್ಷಿತಿಧರ್ಮದ ನೆರೆ ಏಸಿಹುದೊ? ಏತಕೆ? ವೈಪರೀತ್ಯವೋ! ಮನುಜನಲ್ಲೇಕಿಷ್ಟು ಕ್ರೌರ್ಯ, ಸಂಕುಚಿತತೆಯು! ಹೇಯ ಬಾಳನೆ, ಹಿಂಸಾತುರತೆ! ಕ್ರೋಧ ಮಾತ್ಸರ್ಯಗಳ ಬೀಡೇನು ಮನುಜನದೆ? ಎಂದೆಲ್ಲ ಪ್ರಶ್ನೆಗಳು ನನ್ನ ಚಿತ್ತಕ್ಕೆ ಅಶಾಂತಿಯನ್ನುಂಟುಮಾಡಿದುವು. ಪ್ರಶಾಂತವಾದ ವಾಯುಮಂಡಲವನ್ನುದ್ದೇಶಿಸಿ ಕೇಳಿದ ಪ್ರಶ್ನೆಗಳಿವು. ಉತ್ತರದ ಬದಲು ಆ ರಾತ್ರಿಯ ಮೌನವು ನನ್ನ ಪ್ರಶ್ನೆಗಳನ್ನೆ ನನ್ನ ಕಡೆ ಪುಟನೆಗೆದಂತೆ ಮಾಡಿದುವು. ಜೋಂಪು ಹತ್ತಿತು. ಕೂಡಲೆ ಮತ್ತೊಂದು ದಿನ ನಿದ್ದೆ ಕಣ್ಣಾಲೆ ಎದ್ದು ಹೊರಬರಲು ಮೊದಲ ರಾತ್ರಿಯ ಪ್ರಶ್ನೆಗಳು ನನ್ನ ಬಾಯ್ದೆರೆಯಿಸಿದುವು. ಸೀಳಗೂಡಲು ಒಟ್ಟು ಉದ್ದಕ್ಕೆ ನಿಂತಿದ್ದ ಆಚಾರ್ಯ ಕೃಪಾಲಾನಿಯವರು ಅಲ್ಲೆ ನಿಂತಿದ್ದರು. 'ಅಣ್ಣ! ಇದೇಕೆ ಮಾನವನಲ್ಲಿ ಇಷ್ಟು ದುಷ್ಟತನ, ಸಂಕುಚಿತಚಿತ್ತವೃತ್ತಿ' ಎಂದು ಕೇಳಿದೆ.

'ಸರಿ ತಂಗಿ, ಕೆಲವೇಳೆ ಮಾನವನ ಪಾಡೇ ಅದು. ಪ್ರಾಮಾಣಿಕತೆ, ನೀತಿಗಳು ಬೆಂಗೋಲು ಕಳೆಕೊಂಡು ಪಾಡುಗೆಟ್ಟ ಮಂದಿಗಳ ಗುಂಪಿನಂತೆ ಮಾನವರು ಒಮ್ಮೊಮ್ಮೆ ವರ್ತಿಸುವರು.' ಎಂದರು ಶ್ರೀ ಆಚಾರ್ಯರು.

ಅದನ್ನು ಒಪ್ಪುವುದು ಬೇಡವೆನಿಸಿತು. ನಾನು ಮತ್ತೊಮ್ಮೆ ಈ ಉತ್ತರದಿಂದ ಉಂಟಾಗಿದ್ದ ನಿರುತ್ಸಾಹವನ್ನು ಹಿಂದಿಕ್ಕಿ ಅವರನ್ನು ಪ್ರಶ್ನಿಸಿದೆ.

'ಹಾಗಾದರೆ, ಅಣ್ಣಾ! ನಮ್ಮ ಪಾಡುಗೆಟ್ಟಿದೆ. ಪ್ರಾಮಾಣಿಕತೆ, ಶಕ್ತಿಯಿಲ್ಲದವರು ನಮ್ಮ ಜನಗಳು ಎಂದು ನೀವೇ ಒಪ್ಪುವಿರಿ. ಮತ್ತೇಕೆ ಈ ಸ್ವಾತಂತ್ರ್ಯ ಯುದ್ಧದಲ್ಲಿ [illegible] ಇಷ್ಟು ನಿಮ್ಮ ನೀವೇ ನೋಯಿಸಿಕೊಂಬಿರಿ?'

'ಕಾರಣ, ನನ್ನನ್ನೆ ನಾನು ಹೊಸ ಗೌರವಿಸಿಕೊಳ್ಳಲು ಕಲಿತವನು ನಾನಿರುವುದರಿಂದ' ಎಂದು ಕೂಡಲೇ ಆಚಾರ್ಯರ ಉತ್ತರ ಬಂತು.

ಏನೋ ಎಲ್ಲವೂ ಗಾಢಾಂಧಕಾರಮಯವಾಗಿ ಕಾಣಿಸಿತೆನಗೆ. ಕಡುಕಪ್ಪುಗಳ ತಮ್ಮದೇನೋ ಅತಿ ದೂರವಿರ್ಪ ಮಹಾಧ್ಯೇಯದ ಕಡೆಗೆ ನೋಳ್ಪರೀತಿಯ ನಯನಜ್ಯೋತಿಯು ಪಂಡಿತಜೀಯರ ಕಣ್ಣಲಿತ್ತು. ಮೇಜಿನ ಆ ಬದಿ ಶ್ರೀಯುತರು ಕುಳಿತಿದ್ದರು. ನನ್ನ ಮನಸ್ಸಿನಲ್ಲಿ ಮತ್ತೊಂದು ಆಶೆಯಂಕುರ ಮೂಡಿ, ಹಾರುತ್ತಾ ಹಕ್ಕಿ ಮರಿ ರೆಕ್ಕೆಯಲಿ ಕಸುವು ಹೆಚ್ಚುವ ರೀತಿ ನನಗೊಂದು ನೈತಿಕ ಧೈರ್ಯ ಉಂಟಾಗಿ ಕೇಳಿದ ಈ ಪ್ರಶ್ನೆಗಳನ್ನು ಆಲಿಸುತಿದ್ದ ಪೂಜ್ಯ ಜವಾಹರಲಾಲರು ಹೀಗೆಂದರು.

'ನಮ್ಮ ದೇಶವು, ದೇಶದಲ್ಲಿರುವ ಪ್ರತಿಯೊಂದು ವಿಷಯವು ಅತಿಗಹನ, ಮಹತ್ತು, ವಿಶಾಲ, ಗಂಭೀರ, ಮನೋಹರ, ಪರ್ವತಗಳು ನದಿನದಗಳು, ಗಿರಿದುರ್ಗಗಳು. ಆದರೂ ಹಿಂದೂದೇಶವು ಮಹಿಳೆಯರ ರಾಜ್ಯ' ಎಂದು ನನ್ನನ್ನು ಗೇಲಿ ಮಾಡುವ ರೀತಿ ನಗನಗುತ ಹೇಳಿಬಿಟ್ಟರು.

''ಅಂದರೆ ಹಿಂದೂದೇಶದಲ್ಲಿ ಪುರುಷತ್ವವಿಲ್ಲ' ಎಂದೆ ನಾನು.

'ಹಾಗಲ್ಲ. ಸ್ತ್ರೀಯರು ಪೂಜಿಸಲ್ಪಡುವ ರಾಷ್ಟ್ರ' ಎಂದು ಮತ್ತಷ್ಟು ನಕ್ಕುಬಿಟ್ಟರು. ನನ್ನನ್ನು ಕೆಣಕಲೆಂದೇ ಹಾಗೆ ಹೇಳಿದರು. ಆಟ ನೋಡಬೇಕೆಂಬ ಕುತೂಹಲ. ನಾನಾದರೋ ಸಿಟ್ಟಿಗೇಳುವ ರೀತಿಯವಳಲ್ಲ.

'ಈ ವಿಶ್ವವು ಸಂಪತ್ಸಮೃದ್ಧವಾದುದು ಉದಾರಿಯಾದ ವಿಶ್ವದ ಆಶ್ರಯದಲ್ಲಿ ಇದೇಕೆ ಇಂಥ ಅಶಕ್ತಮಾನವರ, ಇಷ್ಟು ಚಂಚಲಮತಿಯ ಮಂದಿಗಳ ಇರವು' ಎಂದು ನಾನು ಪ್ರಶ್ನಿಸಿದೆ.

'ನೀವು ಆ ಪ್ರಶ್ನೆಯನ್ನೇನೊ ಕೇಳಿದಿರಿ ಕಾರಣ, ನೀವು ಚರಿತ್ರೆಯನ್ನು ಚೆನ್ನಾಗಿ ತಿಳಿದಿಲ್ಲ. ವಿಶಾಲ ದೇಶವಿದ್ದ ಮಾತ್ರಕ್ಕೆ ಸಶಕ್ತ ಜನಾಂಗವಾಗಬೇಕೆಂದಿಲ್ಲ. ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರವಾಗಲೊಲ್ಲದು. ಚಿಕ್ಕ ರಾಷ್ಟ್ರಗಳೇ ಸಣ್ಣ ಜನಾಂಗಗಳೇ ಮಹಾಶಕ್ತಿಯುತವಾಗಿ ಸಂಪೂರ್ಣ ಪ್ರಜಾಸತ್ತಾತ್ಮಕ ರಾಜ್ಯಭಾರವನ್ನು ನಡೆಸಿದವುಗಳು' ಎಂದು ವಿಶ್ವಚರಿತ್ರೆಯನ್ನು ಬರೆದ ಇತಿಹಾಸಗಾರ ಶ್ರೀ ನೆಹರು ಹೇಳಿದರು.

'ನೀವೇನೋ ಎರಡು ಭಾಗಗಳಲ್ಲಿ ವಿಶ್ವದ ಚರಿತ್ರೆಯನ್ನೇ ಬರೆದಿರುವಿರಿ. ಆದರೂ ನೀವು ಈಗ ಹೇಳಿದ ಮಾತನ್ನು ನಾನು ಒಪ್ಪೆನು. ರಷ್ಯವನ್ನು ನೋಡಿರಿ, ಅದು ವಿಶಾಲ ದೇಶ, ಅಲ್ಲಿ?'' ಎಂದೆ.

ಅದನ್ನು ಅವರು ಕೇಳಿದರೊ, ಇಲ್ಲವೋ ಅನ್ಯಮನಸ್ಕರಾಗಿ ಯೋಚನೆಯ ಮುಖವನ್ನು ಹಾಕಿದರು. ಆ ಮೇಲೆ ಹುಸ ನಗುತ್ತ ಬಿಟ್ಟು ಹೇಳಿದರು.

'ಹಿಂದೂದೇಶವು ದೊಡ್ಡ ಆನೆಯಂತಿದೆ ಮಲಗಿದಲ್ಲಿಂದ ಏಳಲು ಆನೆ ಪ್ರಯತ್ನಿಸುವ ತೆರ ನಮ್ಮ ಚಳವಳ. [illegible] ಯದ ರೀತಿ. ವಿದ್ಯಮಾನಗಳಲ್ಲಿ ಘಟಿಸುವುವೆಲ್ಲವೂ ಹೊಸ ರೀತಿ' ಅಷ್ಟು ಹೇಳುತ್ತ ಹೇಳುತ್ತಾ ಮುಗುಳುನಗೆ ನಗುತ್ತಿದ್ದವರೆ ಮುಂದಿನ ಮಾತನ್ನು ಮುಂದುವರಿಸಿ 'ನಾನು ಬರುತ್ತಿದ್ದ ರೈಲುಗಾಡಿಗೆ ಅಡ್ಡ ಕೋಣವೊಂದು ಸಿಕ್ಕಿತು. ಎಂಜಿನನು ಪಟ್ಟಿಯಿಂದ ಕೆಳಕ್ಕೆ ಇಳಿಸಿತು. ಕಂಬಿಯು ಬಿದ್ದು ಹೋದು [illegible]' ಎಂದು ಮಾತು ಮುಗಿಸಿದರು.

'ಪ್ರಾಯಶಃ ನೀವು ಆ ಬಂಡಿಯಲ್ಲಿ ಇದ್ದಿರೆಂದು ಆ ಕೋಣಕ್ಕೆ ತಿಳಿದಿರಲಿಲ್ಲ. [illegible] ಹೆನ್ನು ತಿಳಿದಿದ್ದರೆ—ಆದರೆ ಅದು ಅಷ[illegible]

[೮ನೇ ಪುಟವನ್ನು ನೋಡುವುದು]

ಉದ್ಧರಿಸಲು ಕೋರಿಸುತಿದ್ದಿಲ್ಲ" ಎಂದು ಕಮಾ ಷಗಾಗಿ ಹೇಳಿದೆ. ಪರಿಣಾಮವಾಗಲಿಲ್ಲ. ಸಂಜೆಯಾಗುತಲಿತ್ತು. ಪಶ್ಚಿಮಾಕಾಶದಲ್ಲಿ ನೇರಲವೋ ಹೊಂಬಣ್ಣವೋ ಹರಡಿನೇಸರನು ಶುಭ್ರಪ್ರಕಾಶಮಯನಾಗಿ ಕಿರಣಗಳನು ಇಳಿಬಿಟ್ಟಿದ್ದನು. ತಂಪಾದ ತರಬತ್ತು ಈಂಟುತ್ತ ನಾವಲ್ಲಿ ಕುಳಿತು ಮಾಧಿಗೆ ಮಾತು ಬೆಳಸುತ್ತ ಅನಿವಾರ್ಯವಾದ ಹಿಂದೂಮುಸಲ ಪ್ರಶ್ನೆಯಲ್ಲಿ ಧುಮುಕಿದೆವು ಎಲ್ಲಿಯೇ ಇರಲಿ, ಕಾಟಕೊಡುವ ಭೂತದಂತೆಹ ಪ್ರಶ್ನೆ!

"ಮೊನ್ನೆ ಮೌಲಾನರೊಬ್ಬರ ವ್ಯಾಖ್ಯಾನ ಕೇಳಿದೆ. ಕೂಡಲೇ ಹಿಂದೂ ಮಹಾಸಭೆಯನ್ನು ಸೇರಬೇಕೆಂದೆನಿಸಿತು ನನಗೆ" ಎಂದು ಬಳಿ ಕುಳಿತ ಮುಸಲ ಬಂಧುವೊಬ್ಬರು ಮೇಜಿಗೆ ಮುಷ್ಟಿಯನ್ನು ಗುದ್ದಿ ಹೇಳಿದರು

"ಮುಸಲರಿಗೆ ನನ್ನ ಮೇಲೆ ತುಂಬ ದ್ವೇಷ. ಕಾರಣ ನಾನು ಕೊಂಗ್ರೆಸಿನ ಮುಸ್ಲಿಂ ಸಂಪರ್ಕ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತರುವ ಪ್ರಯತ್ನಮಾಡಿ ಮುಸ್ಲಿಮರನ್ನು ಕೊಂಗ್ರೆಸಿಗೆ ಸೇರಿಸುವೆನು." ಎಂದು ಶ್ರೀ ಜವಾಹರಲಾಲರೆಂದರು.

ಅದರಲ್ಲಿ ಸತ್ಯವಿಶ್ತೆಂದು ಹನ್ನೆರಡು ಘಂಟೆಗಳೊಳಗೆ ನನಗೆ ತಿಳಿದು ಕಾರಣ ಒಂದೆಡೆ ಶ್ರೀಯುತರಿಗೆ ಮುಸ್ಲಿಮರು ಕಲ್ಲೆಸೆದರು ಆದರೆ ಅವರಿಗೆ ಪೆಟ್ಟುತಟ್ಟಲಿಲ್ಲವೆನ್ನಿ

ಒಂದೆಡೆ ಈ ಜಾತಿವೈಷಮ್ಯಗಳು ಅತ ಸಂಯುಕ್ತ ಸ್ಥಾನಗಳಲ್ಲಿಯಾದರೊ ಕಾನ್ಪುರದ ಮುಷ್ಕರದಿಂದಾಗಿ ವಾತವರಣ ಬಲು ಕೆಟ್ಟಿದೆ ಇತ್ತ ಕೆಲವು ಸಮಯದಿಂದ ವರ್ಗಸಮರವನ್ನು ಮಾಡುವವರು ವರ್ಗಘರ್ಷಣೆಯಾಗುವಂತೆ ಉಪದೇಶಿಸುವವರು ಕೊಂಗ್ರೆಸ್ ಸೋಶಿಯಲಿಸ್ಟರೆಂಬ ದೂರು ಯಿತ್ತು. ಆದರೆ ಈಗ ಸಂಯುಕ್ತ ಪ್ರಾಂತಗಳ ಪಂಕ್ತಿ ಸತ್ಯವನ್ನು ಹೊರಗೆಡವಿತು ಅಲ್ಲಿ ಮುಖ್ಯ ಮಂತ್ರಿಯೂ ವರ್ಗಸಮಾರಕ್ಕೆ ಜವಾಬ್ದಾರರೇ ಕಾರಣರೆನ್ನುತ್ತಿರುವರು ಜಮೀನ್ದಾರರು ಆರೋಪವನ್ನು ಕೊಂಗ್ರೆಸ್ ಮಂತ್ರಿ ಮಂಡಳದ ಮೇಲೆ ಹೊರಿಸಿದವರು ಇದೊಂದು ಪ್ರಹಸನದ ತೆರನಾಗಿದೆ—ಆದರೂ ಅದರಿಂದ ನನಗೆ ತುಂಬಾ ಖೇದವೆನಿಸುತ್ತದೆ ಕಾರಣ ಇಷ್ಟರವರೆಗೆ ದಬ್ಬಾಳಿಕೆ, ತುಳಿತ, ಸುಲಿಗೆಗೆ ತುತ್ತಾಗಿ ಸತ್ತಬಾಳು ಬಾಳುತ್ತಿದ್ದ ಮಜೂರರು, ಈಗ ಕೊನೆಯುಸಲ ಕಷ್ಟ ಪರಿಹರಿಸಿಕೊಳ್ಳಬೇಕೆಂದು ವಿಶ್ವಪ್ರಯತ್ನ ಮಾಡಿ ಮನೋದಾರ್ಢ್ಯದಿಂದ ಸಾಮೂಹಿಕ ಚಳವಳಹೂಡಿದುದಾಗಿದೆ ಅರೆಹೊಟ್ಟೆಯುಲ್ಲಿದ್ದು ನರಳುವ ಮಾನವ ಕೋಟಿಗಳವರ ಕುಟುಂಬಗಳು ಇಂದು ಎಂಹೊಟ್ಟೆಯಿಂದ ಇದ್ದು ಚಳವಳಮಾಡಿ ಸ್ವಲ್ಪ ಹೆಚ್ಚು ಅನ್ನಕ್ಕಾಗಿ ಹಾತೊರೆಯುತ್ತಿದ್ದಾರೆ ಇದೇನು ವೈಪರೀತ್ಯವು! ಮಾನವ ಕುಟುಂಬ ಜೀವನದಲ್ಲ ಕಷ್ಟವನ್ನು ಕೊಟ್ಟವರು ಯಾರು? ಅಲ್ಲಿ ಹಾಗಾಯಿತು ಸರಿ. ಇತ್ತ ಬಿಹಾರದಲ್ಲಿ ರೈತರ ಒಪಣೆ ಹೇಳಿ ಕೀರದಷ್ಟಿದೆ ಜಮೀನ್ದಾರರು ಕೊಂಗ್ರೆಸಿನ ಎಲ್ಲಾ ರೈತರ ಹಿತಕಾರ್ಯದೆಗಳನ್ನು ಮುರಿಯುವುದಕ್ಕಾಗಿ ಸತ್ಯಾಗ್ರಹ! ಹೂಡಲು ಸೈನ್ಯ ಸಿದ್ಧತೆ ಮಾಡುತಿದ್ದಾರೆ ಎಲ್ಲವೂ ನಿರುತ್ಸಾಹಜನಕವಾಗಿದೆ ದೇಶದ ಚಿತ್ರವೇ ವಿಚಿತ್ರವೂ ವಿಲಕ್ಷಣವೂ ಆಗಿದೆ ಇದನೆಲ್ಲ ಕಣ್ಣು ಮುಟ್ಟನೋಡಿ, ಮನಮುಟ್ಟ ತಿಳಿದು, ಮನೆಗೆ ಹಿಂದಿರುಗುತಲಿದ್ದೆ. ರಾಮದುರ್ಗದ ಪ್ರಜಾ ಪರಿಷದದ ಆಮಂತ್ರಣವಿತ್ತೆಂದು ನೆನಪಾಯಿತು. ಅಲ್ಲಿ ಹೋಗಬೇಕೆಂಬ ಉತ್ಕಟೇಚ್ಛೆಯುಂಟಾಗಿ ಸಾನಂತೆ ಮಾಡಿದೆನು.

ಹಳೆಯ ಕೋಟೆಯೊಂದರ ಮಹಾದ್ವಾರದ ಒಳಹೊಕ್ಕೆವು, ಅದೇ ರಾಮದುರ್ಗ. ಸದೂರ ಸಂದಿದ್ದನಷ್ಟೆ. ಅತಿಮಹತ್ವಾದ ದೃಶ್ಯವೊಂದು ಕಣ್ಣೆ ಹಬ್ಬಮಾಡಿತು. ಮರೆ

ನಾಲ್ಕು ಪ್ರಾಂತಗಳಲ್ಲಿ

[೬ನೇ ಪುಟದಿಂದ ಮುಂದುವರಿದುದು]

ಯಲು ಬಾರದ ಚಿತ್ರವದು. ಮಾನವ ಕೋಟಿ ಎಲ್ಲಿಲ್ಲೂ ಜನಸಂದಣಿ. ಕಣ್ಣೆ ಎಟಕುವ ವರೆಗೂ, ಜನರು ಗಜಬಿಜಿಸುತ್ತ ನಿಂತುದನ್ನು ಕಂಡೆ ಸಾವಿರ ಸಾವಿರ ಗಟ್ಟಲೆ ಹೆಂಗಸರು ಗಂಡಸರು ರಾಷ್ಟ್ರೀಯಧ್ವಜಗಳನ್ನು ಹಿಡಿದುಕೊಂಡು ನಿಂತಿದ್ದರು. ಕೋಪಗೊಂಡ ಸಮುದ್ರದ ಬೋರ್ಗರೆಯ ತೆರನಿತ್ತು ನೆರೆದು ಬಂದ, ಮಹಾಸಮುದಾಯದವರ ಜಯಘೋಷ ಸಮುದ್ರದ ಅಲೆಗಳಂತೆ ಜನಸಂದಣಿ ಸಾಲು ಸಾಲಾಗಿ ಅತ್ತಿತ್ತ ಅಲೆಯುತ್ತಿತ್ತು ನಾನು ಅವರಲ್ಲಿ ಒಬ್ಬಳಾದೆ ಜನಸಂದಣಿಯನ್ನು ನಾನು ನೋಡಿ ಅಭ್ಯಾಸವಿಟ್ಟವಳೆ ಆದರೂ ಇಷ್ಟು ರೀತಿಯ, ಕ್ರಮದ, ಪ್ರಶಾಂತವಾದ ಮತ್ತು ಉತ್ಸಾಹಪೂರಿತವಾದ ಜನಸಂದಣಿಯನ್ನು ಬೇರೊಂದೆಡೆ ಕಂಡುದಿಲ್ಲ

ರಾಮದುರ್ಗದಲ್ಲಿ ಕರನಿರಾಕರಣೆಯ ಚಳವಳವು ತುಂಬಾ ಜೋರಾಗಿಯೇ ಇದೆ ಮೂವತ್ತು ಸಾವಿರ ರೈತರಲ್ಲಿ ಒಬ್ಬನು ಕೂಡಾ ಒಂದು ಚಿಕ್ಕಾಸನ್ನು ಕೊಡಲು ಸಿದ್ಧನಿಲ್ಲ ಅನ್ಯಾಯವಾದ ಕರಗಳನ್ನು ತೆತ್ತು ತೆತ್ತು ಬಳಲಿ ಬೆಂಡಾಗಿ ಹೋದ ಪ್ರಜೆಗಳವರು ಅವರ ಪಾಡು ಪಾಡಲ್ಲ ಪಾಪ! ಸತ್ತ ಬಾಳ ಒಲೆಗೆ ಕರವಿದೆ ಹುಲ್ಲು ಸಗಣಿ ರಾಶಿಗಳ ಮೇಲೆ ಕರ ಪ್ರತಿಯೊಂದು ಗೇಣಿ ನೆಲಕ್ಕೂ ಕರ, ಅಂಗಳಕ್ಕೆ ಸುಂಕ, ಹುಲ್ಲು, ಕಾಳ ಒಣಗಿಸುವ ಕಳಕ್ಕೆ ಸುಂಕ ದನದ ಮೇಲೆ, ಆಡಿನ ಮೇಲೆ ತೆರಿಗೆ, ಹೀಗೆ ಮುಂದಿಗೆ ಮಾತ್ರವಲ್ಲ ಮೇಕೆಗಳ ಮೇಲೂ ತಲೆತ ಲೆ ತೆರಿಗೆ ಹೇರಿದ ಲಾದ ಆ ದರ್ಬಾರ ರಾಮದುರ್ಗದಲ್ಲಿದೆ ಆಳಳುಗಳು ಹೊಲಕ್ಕೆ ಹೋಗುವ ಮಾರ್ಗ ಬಿದಿದ್ದರೆ ಆ ಬದಕ್ಕೂ ಮಾರ್ಗವೊಂದರ ರೂಪಾಯಿ ಒಂದರಂತೆ ೫ ರೂಪಾಯಿ ತೆರಬೇಕೆಂದೊಂದು ಕಾನೂನು ಅಲ್ಲಿದೆ ಮಗ್ಗದ ತೆರಿಗೆ, ನೂಲಿಗೆ ಬಣ್ಣಹಾಕುವ ಕೆಲಸದ ಮೇಲೆ ತೆರಿಗೆ, ಎಂದು ಕೈಗಾರಿಕೆಗಳ ಮೇಲೂ ತೆರಿಗೆಯಿದೆ ಆಡಳಿತೆಯ ಕರ್ಬುನಗ್ಗೆಯ ಹಿಡಿತಕ್ಕೆ ಬಲಿಬೀಳದ ಸೂರೆಯಾಗದ ವೃತ್ತಿಯಿಲ್ಲ, ನಡೆಯಿಲ್ಲ, ನುಡಿಯಿಲ್ಲ, ಆಹಾರವಿಲ್ಲ, ವಿಹಾರವಿಲ್ಲ ಇದು ರಾಮ್ಯಭಾರ' ಇದನ್ನೆಲ್ಲ ಸಹಿಸಿ ಸಹಿಸಿ ಬೇಸತ್ತ ಪ್ರಜೆಗಳು ಕರನಿರಾಕರಣ ಚಳವಳ ಹೂಡಿದರು ಕಾಸು ಕೂಡಾ ಕಾಣಿಸೆವೆಂದು ಸದಾಗ್ರಹ ತೊಟ್ಟರು ಸರಕಾರದ ಶಾಸನದ ಕೈ ಮುಂದೆ ಬಂತ ದಂಡ ಬಂತ, ದೊಣ್ಣೆಯೇಟುಗಳಿಗೆ ಪ್ರಜೆಗಳ ತಲೆಯೊಡೆಯಿತು ಸಾವಿರರು ಹಸಿದ ಹೊಟ್ಟೆಗಳನ್ನು ನೀಲಿಸಬಿಟ್ಟ ಕುದುರೆ ಕಾಲ್ಗರಿಂದ ತಳಿಸಿದರು ಹೊಸ ಸರ್ಗಂ ಕಾಶ್ಮೆಗಳ ಹೊರಟವು ದಸ್ತಗಿರಿ, ಗಡಿಪಾರು, ಜೈಲು ವಾಗ್ಬಂಧ ಆವರಣ ಬಂಧಗಳು ಸಾಂಗವಾಗಿ ಸಕಾಲದಲ್ಲಿ ಸರಕಾರದವರಿಂದ ನಡೆಸಲಾದುವು ಆದರೆ ಕೆಚ್ಚೆದೆಯ ರೈತರ ಹಿಡಿದ ಹಟಬಿಡಲಿಲ್ಲ ಒಟ್ಟುಗೂಡಿ ಮುಂದರಿದರು. ಹಿಂದರಿಯುತಲಿಲ್ಲ ಆ ಕಥ ಸ್ಥಳದಲ್ಲಿ ಆ ರೈತರಿರ ವಲ್ಲಿ ನಾನು ಕೆಲವು ಸಮಯವಿದ್ದೆ ಅವರ ಸರಳಗುಣ ನಡತೆಗಳು ನನ್ನ ಮನಕೆ ಶಾಂತಿಯನ್ನು ಕೊಟ್ಟವು. ಅರೆಬಿಸಿಲ ದಿನದಂತೆ ಸಂಜೆಯಲ್ಲಿ ತಣ್ಣೇ... ಸ... ತಾಯಿತು. ಉಚ್ಚ ಧ್ಯೇಯಕ್ಕಾಗಿ ಸಂಪೂರ್ಣ ತ್ಯಾಗ ಮಾಡುವ, ನಿರ್ಮಲವೂ, ಅಚಲವೂ, ಗೌರವಾನ್ವಿತವೂ ಆದ ಉದಾರತೆಯ ನಿರಕ್ಷರ ಕುಕ್ಷಿಗಳಾಗಿ ದೀನರೂ ಅರ್ಥವಿಹೀನರೂ, ಕಷ್ಟಪರಂಪರೆಗೀಡಾದವರೂ ಆದ ಬಡಬಗ್ಗರಲ್ಲಿ ತುಂಬಿತುಳುಕುತ್ತಿದೆ. ರಾಷ್ಟ್ರ ಪುನರುಜ್ಜೀವನದ ದಿವ್ಯ ಬೀಜಾಣುಗಳು ಇಂಥಹ ಮಾನವಕೋಟಿಯ ಒಡಲಲ್ಲಿದೆ ಅವರು ಮಾತೃಭೂಮಿಗೆ ಅತಿ ಸಮೀಪದ ಬಂಧುಗಳು ನಮ್ಮನ್ನವನ್ನುಕೆಟ್ಟ ಸಾಕಿ ಸಲಹುವ ತಾಯಿ ಭಾರತಾಂಬೆಯ ದಿವ್ಯ ಪಾದರಜಗಳ ಸೌರಭವನಾಘ್ರಣಿಸುತ ಶಕ್ತಿಯುತರಾಗಿರುವ ಕರ್ಷಕರೇ ಮಾತೃಭೂಮಿಯ ಆಪ್ತ ಬಂಧುಗಳು. ಆ ಮಹಾರಾತ್ರಿ ಒಂದೊಂದಾಗಿ ತಾರೆಗಳ ಮೂಡುತ್ತ ಹೊಸತು ಜೀವನ-ಹೊಸತು ಆಶೆಗಳ—ಮುಂದೆ ಬರಲಿರುವ ಮಹಾವಿಜಯದ ಪೂರ್ವ ಮಂಗಲ ಚಿಹ್ನೆಗಳ ತೋರಿದುವು.

ಕಮಲಾದೇವಿ
11-6-'38

Prescription Work a Speciality

Eye Testing Free.

For Stylish FRAMES
Up-to-date shape LENSES
and
All kinds of optical goods

Visit

Nayaks Optical Stores

Scientific Opticians
Temple Square, MANGALORE

The Estates & Agency Co., Ltd.

Incorporated in England

ಮಿಶ್ರರಹಿತ ಟೀ ಬಗ್ಗೆ ಭದ್ರತೆ

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಈ ಕೆಳಗ ಸೂಚಿಸಿದ ನಿಶಾನಿ ಮತ್ತು ಅಚ್ಚುಪಟ್ಟೆಗಳಿಂದ ಸುತ್ತಲಟು, ಸೀಲ್ ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲ್ಲರಿಗೂ ತಿಳಿಸಲು ಅಪೇಕ್ಷಿಸುತ್ತೇವೆ



PYKARA NO 1 DUST.
SEAFORTH NO. 1 DUST
HIGHFOREST NO 1 DUST

ನಮ್ಮ ಜನಪ್ರೀತವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡಕೊಳ್ಳುವಾಗ ನಮ್ಮ ನಿಶಾಣಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡಕೊಳ್ಳುವದು.

The Estates & Agency Company Ltd.
Head Office:-NADUVATAM P. O
Sales Branch:-COCHIN.

ಜರ್ಮನಿ ಝೆಕೊಸ್ಲೊವಾಕಿಯಾ ಇಟಲಿ ಇವು ಒಂದು ಕಡೆ; ಬ್ರಿಟನ್ನು ಫ್ರಾನ್ಸು ಝೆಕೊಸ್ಲೊವಾಕಿಯಾ ಮತ್ತೊಂದು ಕಡೆ. ಎರಡನೆಯವರಿಗೆ ಪೋಲೆಂಡಿನ ನೌಕೆಗಳ ಅಥವಾ ರಷ್ಯದ ನೌಕೆಗಳ ಕಿಂಚಿತ್ತು ಬೆಂಬಲವಿದ್ದರೆ ಮಾತ್ರ, ಮೊದಲನೆಯವರನ್ನು ಅಂತರಿಕ್ಷ ಯುದ್ಧದಲ್ಲಿ ಗೆಲ್ಲಬಂದೀತು. ಇಲ್ಲದಿದ್ದರೆ ಪ್ರಜಾಸತ್ತೆಗೆ ಲೋಪಗೊಳ್ಳುವ ಸಂದರ್ಭವಿದೆ.

ಇವುಗಳಿಗೆ ಪುನಃ ಜರ್ಮನಿ ಇಟಲಿಗಳ ಸನ್ನಾಹ ಪ್ರಬಲವೇ ಇದೆ. ಇವೆರಡು ರಾಷ್ಟ್ರಗಳು ಯುದ್ಧವನ್ನೇ ಕಣ್ಣೆದುರಲ್ಲಿಟ್ಟು ಎಲ್ಲ ಕೈಗಾರಿಕೆಯನ್ನು ಅದಕ್ಕೇ ಹೊಂದಿಸಿಕೊಂಡಿವೆ. ಇಲ್ಲೀಗ ರಷ್ಯವು ಕೈವಶವಾದರೆ, ಅದರ ಕೈಗಾರಿಕೆಗಳ ಮೂಲಕ ಯುದ್ಧ ಸನ್ನಾಹವನ್ನು ಬಲು ಬೇಗನೆ ಹೆಚ್ಚಿಸಿಕೊಳ್ಳಬರುವುದು.

ಹಿಂದಿನ ಸಂಚಿಕೆಯಲ್ಲಿ ನಮಗೆ ದೇವಸ್ಥಾನಗಳು ಅಗತ್ಯವಾಗಿವೆ ಎಂದು ತೋರಿಸಿರುವೆನಷ್ಟೆ. ಹಾಗಾದರೆ ನಮ್ಮ ಹಿರಿಯರು ಈ ದೇವಸ್ಥಾನಗಳನ್ನು ಯಾವೆಲ್ಲ ಪ್ರಯೋಜನಗಳನ್ನು ಹೊಂದುವುದಕ್ಕಾಗಿ ನಿರ್ಮಿಸಿದರು ಎಂಬುದನ್ನು ಗೊತ್ತುಮಾಡಬೇಕು. ಸಂಸಾರದಲ್ಲಿ ಬಿದ್ದು ಹೋರಾಡುವ ನಮ್ಮಂಥವರಿಗೆ ಆರ್ಥಿಕ ಮತ್ತು ಪಾರಮಾರ್ಥಿಕ ಮಾರ್ಗಗಳನ್ನು ತೋರಿಸುವ ಬಗ್ಗೆ ಅವನ್ನು ನಿರ್ಮಿಸಿದುದಾಗಿರುತ್ತದೆ. ಆರ್ಥಿಕ ಅಥವಾ ಲೌಕಿಕ ಮಾರ್ಗವನ್ನು ಹಿಡಿದು ಪಾರಮಾರ್ಥಿಕಕ್ಕೆ ಹೋಗಬೇಕು. ಆದ್ದರಿಂದ ಆರ್ಥಿಕ ಮಾರ್ಗವನ್ನು ಕುರಿತು ನಾವು ಪ್ರಥಮತಃ ಆಲೋಚಿಸೋಣ. ದೇವಸ್ಥಾನಗಳಲ್ಲಿ ಉತ್ಸವಗಳು, ಸಮಾರಾಧನೆಗಳು, ಪುರಾಣ ಪಠಣ ಹರಿಕೀರ್ತನೆ ಇತ್ಯಾದಿ ನಡೆಯುವುದರಿಂದ ಜನರು ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಲು ಆಸ್ಪದವಿದೆ. ಅದು ಹೇಗೆಂದರೆ ಈ ಉತ್ಸವ ಮತ್ತು ಸಮಾರಾಧನೆಗಳ ಸಮಯದಲ್ಲಿ ಇಡೀ ಸಮಾಜದವರು ದೇವಸ್ಥಾನಗಳಲ್ಲಿ ಒಟ್ಟು ಕೂಡುತ್ತಾರೆ. ಆಗ ಅದರಲ್ಲಿ ಒಬ್ಬನು ಬಡವನು ಮತ್ತೊಬ್ಬನು ಐಶ್ವರ್ಯವಂತನು ಎಂಬ ಭೇದಾ ಭೇದಗಳು ಕಾಣಬರುವುದಿಲ್ಲ. ಎಲ್ಲರೂ ದೇವರ ಎದುರಿನಲ್ಲಿ ಸರಿಸಮಾನರು ಎಂಬ ಭಾವನೆ ಉಂಟಾಗುತ್ತದೆ. ತಮ್ಮ ಸುಖದುಃಖಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾರೆ. ಸಜ್ಜನರ ಸಹವಾಸದಿಂದ ತಮ್ಮ ಕೆಟ್ಟ ಗುಣಗಳನ್ನು ತಿದ್ದಿಕೊಳ್ಳುತ್ತಾರೆ. ಪುರಾಣಗಳನ್ನು ಮತ್ತು ಹರಿಕೀರ್ತನೆಗಳನ್ನು ಕೇಳುವುದರಿಂದ ಅವುಗಳಲ್ಲಿ ಆ ಅವತಾರ ಪುರುಷರ ಹಾಗೆ ತಾವು ನಡೆದುಕೊಳ್ಳಬೇಕೆಂಬ ಉತ್ಸುಕತೆ ಅವರಿಗೆ ಉಂಟಾಗುತ್ತದೆ. ಉದಾಹರಣೆಗಾಗಿ ರಾಮಾಯಣದಲ್ಲಿ ಶ್ರೀ ರಾಮನು ತನ್ನ ಪಿತೃವಾಕ್ಯ ಪಾಲನೆಗಾಗಿ ರಾಜ್ಯವೇ ಮೊದಲಾದ ಸುಖಸುಖಗಳನ್ನು ತ್ಯಜಿಸಿ, ಹದಿನಾಲ್ಕು ವರ್ಷಗಳ ಪರ್ಯಂತ ಅರಣ್ಯವಾಸಕ್ಕೆ ಹೋದದ್ದೂ, ಲಕ್ಷ್ಮಣನು ಸಹೋದರ ವಾತ್ಸಲ್ಯದಿಂದ ಅವನನ್ನು ಅರಣ್ಯಕ್ಕೆ ಹಿಂಬಾಲಿಸಿದ್ದೂ, ಭರತನು ತನ್ನ ಭ್ರಾತೃಪ್ರೇಮದಿಂದ ಅನಾಯಾಸವಾಗಿ ಸಿಕ್ಕಿದ ಸಾಮ್ರಾಜ್ಯ ಸುಖವನ್ನು ತ್ಯಜಿಸಿದ್ದೂ, ಆ ಪತಿವ್ರತಾಶಿರೋಮಣಿಯಾದ ಸೀತಾದೇವಿಯು ತನ್ನ ಪತಿಯ ಕೂಡೆ ಅರಣ್ಯವನ್ನು ಪ್ರವೇಶಿಸಿದ್ದೂ, ಆ ಭಕ್ತಶಿರೋಮಣಿಯಾದ ಶ್ರೀ ರಾಮನ ಸೇವೆಯನ್ನು ಮಾಡಿದ್ದೂ ಮೊದಲಾದುವನ್ನು ಕೇಳುತ್ತಲೆ ಸ್ತ್ರೀಯರಿಗೂ ಪುರುಷರಿಗೂ ತಮ್ಮಲ್ಲಿರುವ ದುರ್ಗುಣಗಳನ್ನು ತ್ಯಜಿಸಿ ನಾವೂ ಹಾಗೆಯೇ ನಡೆಕೊಳ್ಳಬೇಕೆಂಬ ಮನಸ್ಸು ಉಂಟಾಗುವುದಿಲ್ಲವೇ? ಅಂಥಾ ಪುರಾಣಗಳನ್ನು ಅನೇಕ ವರ್ಷಗಳ ಹಿಂದೆ ಋಷಿಗಳು ವೇದಗಳಲ್ಲಿ ಹೇಳಿದ ಮತವನ್ನು ಪ್ರಚಾರಿಸುವ ಬಗ್ಗೆ ಆಗಿನ ಕಾಲದ ಸಾಮಾನ್ಯ ಜನರಿಗಾಗಿ ಸಂಸ್ಕೃತ ಭಾಷೆಯಲ್ಲಿ ಬರೆದದ್ದಾಗಿರುತ್ತದೆ. ಯಾಕೆಂದರೆ ಮಹಾ ವಿದ್ವಾಂಸರಿಗಲ್ಲದೆ ಸಾಮಾನ್ಯ ಜನರಿಗೆ ಆ ವೇದಗಳಲ್ಲಿ ಹೇಳಿದ ತತ್ವಗಳು ತಿಳಿಯುವ ಹಾಗಿರಲಿಲ್ಲ. ಮತ್ತು ವೇದಗಳ ಬಹಳ ಪುರಾತನ ಸಂಸ್ಕೃತದಲ್ಲಿ ಬರೆಯಲ್ಪಟ್ಟುದರಿಂದ ಈ ಕಾರಣಗಳು ಆ ಬಳಿಕ ಸಂಸ್ಕೃತ ಭಾಷೆಯಲ್ಲಿ ಬರೆಯುವರೆ ಕಾರಣವಾಯಿತು. ಆದ್ದರಿಂದ ಅಂಥಾ ಪುರಾಣಗಳನ್ನು ದೇವಸ್ಥಾನಗಳಲ್ಲಿ ಪಠಣಮಾಡಿಸಿ ಸರ್ವರೂ ಅದನ್ನು ಕೇಳಿ ಆ ಪುರಾಣಗಳಲ್ಲಿ ಹೇಳಿದಂತೆ ಆಚರಿಸಲು ಪ್ರಯತ್ನಿಸಿ ಲೌಕಿಕ ಸುಖವನ್ನು ಪಡೆಯಬಹುದು. ಅದಕ್ಕಾಗಿಯೇ ಮುಂಚೆ ದೇವಸ್ಥಾನಗಳಲ್ಲಿ ಸಂಸ್ಕೃತ ಪಂಡಿತರನ್ನು ಇಟ್ಟು ವಿದ್ಯಾಭ್ಯಾಸ ಕೊಡಿಸುತ್ತಿದ್ದರು. ಇದರಿಂದ ಅನೇಕರು ವೇದ ವೇದಾಂತಗಳನ್ನೂ ಪುರಾಣಗಳನ್ನೂ ಕಲಿತು ಸಮಾಜದ ಸಾಮಾನ್ಯ ಜನರಿಗೆ ವಿವೇಕವನ್ನು ಬೋಧಿಸುತ್ತಿದ್ದರು. ಈಗಿನ ಕಾಲದಲ್ಲಿ ಅದೆಲ್ಲಾ ನಿಂತು ಹೋಗಿಯದೆ. ಇನ್ನಾದರೂ ನಾವು ನಮ್ಮ ಹಿರಿಯರ ಉದ್ದೇಶಗಳನ್ನು ನಮ್ಮ ಸ್ಸಿಗೆ ತಂದು ದೇವಸ್ಥಾನಗಳಲ್ಲಿ ಈ ಮೇಲೆ ಹೇಳಿದ ವಿಷಯಗಳನ್ನೆಲ್ಲಾ ಊರ್ಜಿತಕ್ಕೆ ತರುವುದು ಉತ್ತಮ. ಹಾಗೆ ಮಾಡುವುದರಿಂದ ನಮ್ಮ ಮೇಲೆ ದೇವರ ಮತ್ತು ಹಿರಿಯರ ಕೃಪೆಯು ಉಂಟಾಗುವದು. ಇದಲ್ಲದೇ ನಮ್ಮ ಹಿರಿಯರ ಕಾಲದಲ್ಲಿ ಸಮಾಜದೊಳಗೆ ಏನಾದರೂ ವಾದ ವಿವಾದಗಳು ಬಂದರೆ ದೇವಸ್ಥಾನಗಳಲ್ಲಿ ಮುಖಂಡರು ಕೂಡಿ ತೀರ್ಮಾನ ಪಡಿಸುತ್ತಿದ್ದರು. ಅಂಥಾ ತೀರ್ಮಾನಕ್ಕೆ ಜನರು ಒಪ್ಪುತ್ತಿದ್ದರು. ಈಗ ಅಂಥಾ ನಿಸ್ವಾರ್ಥಿಗಳಾದ ಮುಖಂಡರು ವಿರಳ. ಅಲ್ಲದೆ ಈಗಿನ ಜನತೆಯಲ್ಲಿ ಪ್ರತಿ ಒಬ್ಬನಿಗೂ ಮುಖಂಡನಾಗಬೇಕೆಂಬ ಅಪೇಕ್ಷೆಯಲ್ಲದೆ ಅನುಯಾಯಿಯಾಗಬೇಕೆಂಬ ಅಪೇಕ್ಷೆ ಯಾರಿಗೂ ಇಲ್ಲ. ಈಗಿನ ಜನರು ಸ್ವಾರ್ಥಪರರಾಗಿ, ಇಂತಹ ಸಂಸ್ಥೆಗಳನ್ನು ತಮ್ಮ ಸ್ವಾರ್ಥಸಾಧನೆಗಾಗಿ ಉಪಯೋಗಿಸಿ ಆ ಸಾಧನೆಯು ಸಫಲವಾಗದಿದ್ದಲ್ಲಿ ಅದರಿಂದ ಉಂಟಾಗುವ ದ್ವೇಷ ಅಸೂಯೆಗಳಿಂದ ಕಲಹಗಳನ್ನು ತಂದು ಒಡ್ಡುತ್ತಿರುವುದು ಬಹಳ ಶೋಚನೀಯ. ಈ ಶೋಚನೀಯ ಸ್ಥಿತಿಯನ್ನು ನಿವಾರಿಸಿ ನಮ್ಮ ಹಿರಿಯರು ಈ ದೇವಸ್ಥಾನಗಳನ್ನು ಧರ್ಮಸಂಸ್ಥೆಗಳನ್ನಾಗಿ ಸ್ಥಾಪಿಸಿದರೆಂಬ ಆ ಉದ್ದೇಶವನ್ನು ನಾವು ಲಕ್ಷ್ಯದಲ್ಲಿಟ್ಟುಕೊಂಡು ಆ ಸಂಸ್ಥೆಗಳನ್ನು ನಾವು ಹ್ಯಾಗೆ ನಡೆಸತಕ್ಕದೆಂದು ವಿಚಾರಿಸುವದು ಅಗತ್ಯ.

ರಾಮದಾಸ.

(ಮುಂದುವರಿಯುವುದು)

ಇನ್‌ಫ್ಲುಯೆಂಜಾ

ಈ ವಿಶೇಷ ಪೀಡಕವಾದ ಜ್ವರದ ನಿವಾರಣೆ

ಸ್ವಾಭಾವಿಕವಾಗಿಯೇ ಚಳಿ, ಶೀತ, ತಂಪು ಬಿರುಸಾದ ಗಾಳಿ ಬೀಸುವ ಈ ಕಾಲದಲ್ಲಿ ಈ ಜ್ವರವನ್ನು ಕುರಿತಾಗಿ ಎಚ್ಚರವಿಡುವುದು ಆವಶ್ಯಕವಾಗಿದೆ.

ಈ ಜ್ವರವು ಜೀವಾಣುಗಳಿಂದ ಹುಟ್ಟುವುದು. ಸಣ್ಣ ತರದ ಜೀವಾಣುಗಳಿಂದಲೇ ಇದು ಹುಟ್ಟುವುದೆಂದೂ ಎಂತ್ರ... ಇದೇ ಕಾರಣದಿಂದ ಕೆಲವೇಳೆ ಅಷ್ಟು ಸಾಂಕ್ರಾಮಿಕವಾಗಿರದೆಯೂ ಕೆಲವೇಳೆ ಸಾಂಕ್ರಾಮಿಕವಾಗಿಯೂ ಇಂತಹ ರೋಗಗಳು ಹುಟ್ಟುವುದೆಂದೂ ಈಗ ತಿಳಿದು ಬಂದಿದೆ.

ಈ ರೋಗದ ಜೀವಾಣುವು ಮನುಷ್ಯ ದೇಹದಿಂದ ಹೊರಗೆ ಬಹುಕಾಲ ಬಾಳದು. ಇತರ ಯಾವನೊಬ್ಬನಿಗೆ ಈ ರೋಗವು ಹಿಡಿದು, ಅವನ ಕೊರಳು ಅಥವಾ ಮೂಗುಗಳಿಂದ ಈ ಜೀವಾಣುಗಳು ಹೊರಟು ರೋಗ ಹುಟ್ಟುವಂತೆ ಮತ್ತೊಬ್ಬನಿಗೆ ಅಂಟುವುವು. ಕೆಮ್ಮು, ಸೀನು, ಗುಲ್ಲುಗಳ ಮೂಲಕವಾಗಿಯೆ ರೋಗವಿದ್ದವನಿಂದ ಈ ಜೀವಾಣುಗಳು ರೋಗವಿಲ್ಲದವನ ಕಡೆಗೆ ಹರಡಿ ಅಂಟುವುವು. ಇವರಿಬ್ಬರೊಳಗೆ ಇರುವ ದೂರವು ಕಡಿಮೆಯಾಗಿರುವಷ್ಟೆ ಅಂಟುವ ಜೀವಾಣುಗಳ ಸಂಖ್ಯೆಯು ರೋಗ ಹುಟ್ಟುವ ಸಂಭವಗಳೂ ಹೆಚ್ಚು.

ರೋಗವಿರುವವನನ್ನು ನಾವು ಕಾಣುವ ಸಂಭವಗಳು ಕಡಿಮೆಯಾಗುವಂತೆ ನೋಡಿ ನೋಡಿಕೊಳ್ಳಬೇಕು. ಥೇಟರ್, ಬಸ್ಸುಗಳನ್ನು ಉಪಯೋಗಿಸುವಲ್ಲಿ ನಿರ್ವಾಹವಿರುವುದು ಕಡಿಮೆಯಾದರೂ, ನಾಟಕಶಾಲೆ ಸಭೆಗಳನ್ನೂ ಗುಂಪುಕೂಡುವ ಸ್ಥಳಗಳನ್ನೂ ನಾವಾಗಿ ಸಂದರ್ಶಿಸದೆ ಇರುವುದು ಸುಲಭ. ರೈಲುಗಾಡಿಗಳೂ ಉತ್ತಮವಾಗಿ ಗಾಳಿ ಹರಿಯಲು ಉಪಾಯವುಳ್ಳ ಸ್ಥಳಗಳೂ ಈ ಜೀವಾಣುಗಳನ್ನು ... ಹೆಚ್ಚಿನ ಸಂದರ್ಭ ಕೊಡವಾರವು. ಏಕೆಂದರೆ, ಗಾಳಿ ಹಾದುಹೋಗುತ್ತಿರುವಾಗ ಜೀವಾಣುಗಳೂ ದೂರದೂರಕ್ಕೆ ಓಡುವುವು ಹೊರತು ಅಂಟುವುದು ಕಡಿಮೆ.

ಈ ಜೀವಾಣುಗಳು ಕಾರಣ ಮೂಗುಗಳಲ್ಲಿ ಅಂಟಿದ ತಕ್ಷಣ ಅಲ್ಲಿಯೇ ನಿಂತು ವಿಪರೀತವಾಗಿ ಸಂಖ್ಯೆಯಲ್ಲಿ ಬೆಳೆದು ವಿಷಗಳನ್ನುಂಟುಮಾಡುವುದರಿಂದ ರೋಗವುಂಟಾಗುವುದು.

ಚಿಕ್ಕದಾದ ಜನವುಳ್ಳ ಸ್ಥಳಗಳಲ್ಲಿ ಮೂಗೂ ಕೊರಳೂ ಈ ರೋಗಗಳಿಗೆ ಉತ್ತಮ ನೆಲೆಯಾಗವುವು. ಹೀಗಿದ್ದ ಸಂದರ್ಭದಲ್ಲಿಯೇ ಇವು ಬಹುಬೇಗನೆ ಅಧಿಕಸಂಖ್ಯೆಯಲ್ಲಿ ಬೆಳೆದು ವಿಷಹುಟ್ಟಿಸುವುವು. ನಮಗೆ ನೆಗಡಿಯುಂಟಾದಾಗ ದೇಹವು ರೋಗಗಳನ್ನು ತಡೆವ ಶಕ್ತಿ ಅತಿ ಕಡಿಮೆಯುಳ್ಳದ್ದಾಗಿ ಕಾಯುತ್ತಿರುವ ಜೀವಾಣುವಿಗೆ ಅತ್ಯುತ್ತಮ ಸಂದರ್ಭವು ಸಿಗುವುದು.

ಇನ್‌ಫ್ಲುಯೆಂಜಾ ರೋಗವು ಉಂಟಾಗದಂತೆ ನೋಡುವುದು ಪ್ರತಿಯೊಬ್ಬನ ಕರ್ತವ್ಯವಾಗಬೇಕು. ಪ್ರತಿದಿನವೂ ಅಲ್ಪ ಪರಿಮಾಣ (3 ಗ್ರೇನ್) ಕ್ವಿನೀನನ್ನು ಉಪಯೋಗಿಸುವದರಿಂದ ಈ ರೋಗವನ್ನು ನಿವಾರಿಸಬಹುದಾಗಿ ವಿಜ್ಞಾನವು ತಿಳಿಸುವುದು. ಈ ಉಪಾಯದಿಂದ ನಿಮ್ಮನ್ನು ನೆರೆಯವರನ್ನೂ ರೋಗವು ಬಾಧಿಸದಂತೆ ನೋಡಬಹುದು. ಎಷ್ಟೋ ದೊಡ್ಡ ಕಾರ್ಖಾನೆಗಳಲ್ಲಿ ಧನಿಗಳು ಆಫೀಸು ಕಾರ್ಖಾನೆಗಳಲ್ಲಿನ ಜನರು ನಿವಾರಣೋಪಾಯವನ್ನು ಕೈಕೊಳ್ಳಬೇಕೆಂದು ಅಗತ್ಯವಾಗಿ ಸೂಚಿಸಿ ಒತ್ತಾಯ ಪಡಿಸುವುದುಂಟು. ಇದರಿಂದ ನಿವಾರಣೆಗಾಗಿ ಉಪಯೋಗ ಮಾಡುವ ಕ್ವಿನೀನಿನ ಅಲ್ಪ ಬೆಲೆಗೆ, ರೋಗ ಹಿಡಿದು ಕೆಲಸಗಾರರ ಹಾಜರಿಯದ್ದಲ್ಲಿ ನಷ್ಟವಾಗುವ ಮೊಬಲಗು ಎಷ್ಟೋ ದೊಡ್ಡದಲ್ಲವೆ?

WANTED

Agents for Silk Shirting, Coating, Sarees, etc. Pay Rs 100 T A Extra. Ask free samples and particulars.

Girson Knitting Works,
Ludhin

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣಗಿಂತ ಐದು ಪರ್ಸೆಂಟಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ...ದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾ...ಯೂ, ಸಲ್ಲಕ್ಷಣಗಳೂ ತಾನಾಗಿಯೇ ...ದು ಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
...ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

... ಶೇಟ್, ಜುವೆಲ್ಲರ್,

ಮಂಗಳೂರಿನ ಪೇಟೆ ಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಅ.	ರೂ ಅ
ಬತ್ತ ಗುಡ್ಡೆ ಮೂ	1 – 14	1 — 14
ರಾಶಿ ಅಕ್ಕಿ ...	3 — 8	4 — 0
ಸುಗ್ಗಿ ..	4 — 2	4 — 2
ಗುಡ್ಡೆ ...	4 — 8	4 — 8
ಊರ ಅವ್ಲಕ್ ಬೆಳ್ತಿಗೆ ..	4 — 7	4 — 7
ರಂಗೂನು ಬೆ ಗೋ ಇಕ್ಕೆ ..	7 — 2	7 — 4
ಎಲ್ಲೂರು ಬೆ. ಮು. ಇಕ್ಕೆ ...	3 — 14	4 — 0
ಗೋಧಿ ಗೋಣಿ ಇಕ್ಕೆ .	13 — 0	14 — 8
ತೊಗರಿ ಗೋಣಿ ಇಕ್ಕೆ	11 — 8	18 — 8
ಹುರುಳಿ ಗೋಣಿ ಇಕ್ಕೆ .	6 — 0	6 — 2
ಕಡಲೆ ಗೋಣಿ ಇಕ್ಕೆ .	9 — 8	10 — 8
ತೊಗರಿಬೇಳೆ ಗೋಣಿ ಇಕ್ಕೆ	17 — 8	18 — 0
ಉದ್ದು ಗೋಣಿ ಇಕ್ಕೆ .	9 — 0	9 — 8
ಹೆಸರು ಗೋಣಿ ಇಕ್ಕೆ .	9 — 12	10 — 8
ಊರುಬೆಲ್ಲ ಖಂಡಿ ಇಕ್ಕೆ	36 — 0	40 — 0
ಉಪ್ಪು ಗೋಣಿ ಇಕ್ಕೆ	4 — 8	5 — 4
ಕೊಬ್ರಿ ಖಂಡಿ ಇಕ್ಕೆ	46 — 8	46 — 8
ಎಣ್ಣೆಂಡಿ ಖಂಡಿ ಇಕ್ಕೆ .	25 —	26 — 0
ತೆಂಗಿನ ಎಣ್ಣೆ ಮುಡಿ ಇಕ್ಕೆ	3 — 7	3 — 7
ಎಳ್ಳೆಣ್ಣೆ ಮುಡಿ ಇಕ್ಕೆ .	6 — 0	7 — 0
ಚಿಮಿಣಿ ಎಣ್ಣೆ ಪೆಟ್ಟಿಗೆ ಇಕ್ಕೆ	6 — 5	7 — 5
ಮೋರಿಸ ಸಕ್ಕರೆ ಮೂ ಇಕ್ಕೆ	2 — 13	2 — 14
ಮೆಣಸು	4 — 8	6 — 0
ಸಾಸಿವೆ ಮುಡಿ ಇಕ್ಕೆ	5 — 8	6 — 8
ಕಾಳುಮೆಣಸು ಹ ವೇಗೆ.	16 — 0	17 — 8
ಯೇಲಕ್ಕಿ ದೇಶ ಮಣಇಕ್ಕೆ	80 — 0	85 — 0
ಗೇರುಬೀಜ ಮು. ಇಕ್ಕೆ	8 — 14	9 — 15
ಕಟ್ಟಿಗ ಖಂಡಿ ಇಕ್ಕೆ	50 — 0	55 — 0
ಕಾಂಪ್ಯ ಕಗದು ಮು ಇಕ್ಕೆ	14 — 12	15 — 0
ಕಾಂಪ್ಯ ಪಾತ್ರಗಳು ಮು ಇಕ್ಕೆ	14 — 8	15 — 0
ಚೀನಿಬೆಳ್ಳಿ ಸೇರು ಇಕ್ಕೆ .	13 — 8	14 — 0
ಹಿತ್ತಾಳೆ ಕಗದು ಮು ಇಕ್ಕೆ	12 — 0	12 — 0
ಪವನು ಇಕ್ಕೆ	22 — 8	23 — 0
ಮುಂಡಿ ಹುಳಿ ಖಂಡಿ ಇಕ್ಕೆ	40 — 0	45 — 8
ನೇಟಿವ್ ಕಾಫಿ ಖಂಡಿ ಇಕ್ಕೆ	140 — 0	148 — 0
ಫ್ಲಾಂಟೇರಿ ಕಾಫಿ ಖಂಡಿ ಇಕ್ಕೆ	185 — 0	198 — 0
[illegible]	[illegible]	39 — 0

ಡೋಂಗರೇಃ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರ

ಶಾಲಿವಾಹನ ಶಕ ... ಶನಿವಾರದಿಂದ
ಜ್ಯೇಷ್ಠ ಬ| ೧೧ ಶುಕ್ರವಾರದ ವರೇಗಿನ ಪಂಚಾಂಗ. (೧೯೩೦ನೇಯ ವೃಷಭ ಮಾಸ)

ತಾ	ವಾರ	ತಾ	ತಿಥಿ	ನಕ್ಷತ್ರ	ಘಟಿ	...	...
18	ಶನಿ	೧೯	೧೫	ಧನಿಷ್ಠಾ	೩೩	೪	
19	ರವಿ	೨೦	೧೨	ಶತಭಿಷಾ	೩೬	೫	
20	ಸೋಮ	೨೧	೯	ಪೂ ಭಾದ್ರ	೩೮॥	೬	
21	ಕುಜ	೨೨	೧೮।	ಉ ಭಾದ್ರ	೩೯।	೭	
22	ಬುಧ	೨೩	೧೩॥	ರೇವತೀ	೩೯॥	೮	
23	ಗುರು	೨೪	೧೪॥	ಅಶ್ವಿನೀ	೪೯	೯	
24	ಶುಕ್ರ	೨೫	೧೦॥।	ಭರಣೀ	೩೬	೧೦	

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಜಗತ್ಪ್ರಸಿದ್ಧ ಆಯುರ್ವೇದೀಯ ಔಷಧಗಳು.

ಶ್ರೀಕರ ಕಸ್ತೂರಿ ಮಾತ್ರೆ

... ಸಂಜೀವ ... ವಿ ತ್ರ, ವೃದ್ಧರಿಗೆ ಆರೋಗ್ಯಪ್ರದ ಮಮ ಘಮಿಸುವ ವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ದೇಶಗಳಲ್ಲೂ, ಎಲ್ಲಾ ಹವೆಗಳಲ್ಲೂ ಶರೀರವನ್ನು ರಕ್ಷಿಸುತ್ತವೆ ಅಜೀರ್ಣವನ್ನು ಪರಿಹರಿಸುತ್ತದೆ ಸೂಂಕ ರೋಗಗಳನ್ನು ನಿವಾರಣೆ ಮಾಡುತ್ತದೆ ಆಬಾಲವೃದ್ಧರಿಗೂ ಕೆಮ್ಮು, ವಿಧವಿಧ ಜ್ವರ ನೆಗಡಿ, ಹಲ್ಲುನೋವು, ಉಬ್ಬಸ, ಅರೋಚಕ, ಅಲಸ್ಯ ಮುಂತಾದ ಶೀತವಾತದಿಂದ ಬರುವ ಸಮಸ್ತ ರೋಗಗಳನ್ನೂ ಜಾಗ್ರತೆ ಗುಣಪಡಿಸುತ್ತದ ಬ್ರಾಹ್ಮಣಂತಿಯರಿಗ ಅತ್ಯುಪಯುಕ್ತವಾದುದು ಎಲ್ಲಾ ಕಾಲದಲ್ಲೂ ನಿಮ್ಮನ್ನು ಕಾಪಾಡುವುದು

ಬೆಲೆ — 2 ಮಾತ್ರೆ 4 ಆಣೆ

ಬಾಲಸಂಜೀವಿನಿ

ಈ ಅಮೃತವು ಮಕ್ಕಳಿರುವ ಮನೆಯಲ್ಲಿ ಸರ್ವದಾ ಇರಬೇಕಾದುದು. 1 ವರ್ಷದ ಲಾಗಾಯಿತು 10 ವರ್ಷದ ವರೆವಿಗೆ ಉಪಯೋಗಿಸಬಹುದು 1-2 ಮಾತ್ರೆಗಳನ್ನು ವಯೋಗುಣವಾಗಿ ಆಗಾಗ್ಯೆ ಉಪಯೋಗಿಸಿದರೆ ಸುಖವಾಗಿ 2-8 ವೇಳೆ ಭೇದಿಯಾಗಿ ಮಕ್ಕಳಿಗೆ ಯಾವ ರೋಗವೂ ಬರಲಾರದು. ಅಸಾಧ್ಯವಾದ ಪಕ್ಕೆ ಶೆಳತ ವಿಧವಿಧ ವಾಯು, (Convulsions and fits), ಹೊಟ್ಟೆಉಬ್ಬರ ಮಂದಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ಮಲಬಂಧಗಳಲ್ಲಿ ಒಂದು ಹೊತ್ತಿನ ಔಷಧದಿಂದಲೇ ಅದ್ಭುತ ಗುಣವು ತೋರುವುದು

50 ಮಾತ್ರೆ 4 ಆಣೆ

ಗೋರೋಚನ ಮಾತ್ರೆ

ಈಗ ಹುಟ್ಟಿದ ಮಗುವಿನಿಂದ ಐದು ವರ್ಷಗಳ ವರೆವಿಗೆ ಉಪಯೋಗಿಸಬಹುದು. ಬಹಳ ಸೂಕ್ಷ್ಮ ಪ್ರಕೃತಿಯುಳ್ಳ ಮಕ್ಕಳಿಗೆ ಸುಖವಾಗಿ 1-2 ವೇಳೆ ಮಾತ್ರ ಭೇದ ಮಾಡಿಸುವುದರಲ್ಲಿ ಈ ಮಾತ್ರೆಗಳು ಕೈಗೊಂಡ ಸಿದ್ಧಾಮೃತ ಯಾವ ಮಕ್ಕಳಿಗೆ ಗೋರೋಚನ ಮಾತ್ರೆಯಿಂದ ಭೇದಿಯಾಗುವುದಿಲ್ಲವೋ ಅಂಥಾ ಮಕ್ಕಳಿಗೆ 'ಬಾಲಸಂಜೀವಿನಿ ಮಾತ್ರೆ'ಯನ್ನು ಉಪಯೋಗಿಸಬಹುದು.

24 ಮಾತ್ರೆ 6 ಆಣೆ.

ಜ್ವರ ಕೇಸರಿ

ಸಮಸ್ತ ವಿಧವಾದ ಛಳಿಜ್ವರ, ಮಲೇರಿಯಾಜ್ವರ, ಪ್ಲೇಗುಜ್ವರ, ಇನ್‌ಫ್ಲುಯಂಜಾಜ್ವರ, ವಾಯುದೇ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ.

ಬೆಲೆ.—8 ಆಣೆ.

ಆಮೋದಿನಿ

ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳು 25 ವರ್ಷಗಳಿಂದಲೂ ಜನರ ಪ್ರೀತಿಯನ್ನು ಸಂಪಾದಿಸಿರುವುದು. ಸಂಗೀತಗಾರರಿಗೆ ಸುಖವಾಗಿ ಹಾಡಲು ವಿಶೇಷ ಸಹಾಯ ಮಾಡುವುದು ಬಾಯಿದುರ್ವಾಸನೆಯನ್ನು ಶಮನಮಾಡುವುದು. ಸೊಂಕು ರೋಗಗಳು ಶರೀರಕ್ಕೆ ಅಂಟದಂತೆ ಶರೀರವನ್ನು ಕಾಪಾಡುವುದು ಮಕ್ಕಳ ಮತ್ತು ದೊಡ್ಡವರ ಕೆಮ್ಮನ್ನು ತಕ್ಷಣ ಪರಿಹರಿಸುವುದು. ಆಬಾಲವೃದ್ಧರೂ ಪ್ರೀತಿಯಿಂದ ಸೇವಿಸಲು ಅರ್ಹವಾಗಿದೆ

ಬೆಲೆ. -0-4-0, 0-2-0

ನಮ್ಮ ನಂಜನಗೂಡು ಸದ್ವೈದ್ಯಶಾಲಾದಲ್ಲಿ ತಯಾರಾಗುವುದೇ "ನಂಜನಗೂಡು ಟೂತ್-ಪೌಡರ್" ಎಂಬುದು ಜ್ಞಾಪಕದಲ್ಲಿರಲಿ. ನಕ್ಕಲ್ ಮಾಲುಗಳನ್ನು ಕೊಂಡು ಮೋಸಹೋಗಬೇಡಿರಿ. ಕ್ಯಾಟಲಾಗನ್ನು ಬರೆದು ತರಿಸಿರಿ.

ಸದ್ವೈದ್ಯಶಾಲಾ, ನಂಜನಗೂಡು.

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs. 5000/ run regularly on systematic lines Unique Banking facilities to Businessmen and interested Public

Apply for particulars—K R. GURU, *Managing Director*

Use the soaps
KNOWN ALL OVER
WISICO'S.
MINAR
&
TAJAMAHAL 'Red'
Bar Soaps.
POPULAR IN THE MARKET
Sole Distributer-
P. G. KAMATH,
Kashmir House,
Marnamikatta, MANGALORE.

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,
Anarkali, LAHORE.

★ ಇನ್ನೂರು ವರ್ಷದ ಭೂತ!!!

ಈಗ ಅದಕ್ಕೊಂದು ಸ್ಮಾರಕ ಗುಡಿ.

ವಿಲಾಯತಿಯ ಪೋರ್ಟಸ್ಮಾತಿನಲ್ಲಿ!

★ ★ ★

ಬ್ಲೂಪೋಸ್ಟ್ಸ್ ಕೋಚಿಂಗ ಸ್ಟೇಶನಿನ ಅಂಗಳದ ಒಂದು ಭಾಗದಲ್ಲಿ ೨೦೦ ವರ್ಷಗಳ ಹಿಂದೆ ಕೊಲೆಯಾಗಿದ್ದ ನಾವಿಕನೊಬ್ಬನ ಸ್ಮಾರಕವಾಗಿ ಈಗ ಆ ಭೂಮಿಯ ಒಡತಿಯಾಗಿರುವ ಮಹಿಳೆಯು ಒಂದು ಸ್ಮಾರಕವನ್ನು ಕಟ್ಟಿಸುತ್ತಿದ್ದಾಳೆ.

ಈ ಛತ್ರವು ಹಳೆಯ ಪೋರ್ಟ್ ಸ್ಮಾತ್ ನಗರದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿತ್ತು. ಅದು ೧೮೭೦ನೆ ಇಸವಿಯ ಅಗ್ನಿಜ್ವಾಲೆಯಲ್ಲಿ ಸುಟ್ಟು ಭಸ್ಮೀಭೂತವಾಯಿತು.

ಹದಿನೆಂಟನೆ ಶತಮಾನದ ಆದಿಯಲ್ಲಿ ಒಂದು ದಿನ ಒಬ್ಬ ನಾವಿಕನು ಆ ಛತ್ರದಲ್ಲಿ ಬಂದು ಇಳಿದುಕೊಂಡನು. ಬರುವಾಗ ಸಂಜೆಯಾಗಿದ್ದಿತು. ಸಂಗಡ ಏನೋ ತುಂಬಿದ ಒಂದು ಕರಿಯ ಚೀಲವನ್ನೂ ತಂದಿದ್ದನು. ಒಡತಿಯ ಹತ್ತಿರ ಮಾತನಾಡಿಕೊಂಡು, ಒಂದು ಕೋಣೆಯನ್ನು, ಆ ರಾತ್ರಿ ಕಳೆಯಲಿಕ್ಕೆ ತೆಗೆದುಕೊಂಡನು.

ರಾತ್ರಿ ಊಟವಾಗುತಿದ್ದಾಗ ಮಾತಿನ ಪ್ರಸಂಗದಲ್ಲಿ—ಅವನು—ಚೀಲದಲ್ಲಿ ಬಹಳ ನಾಣ್ಯಗಳಿರುವವೆಂದೂ, ತಾನು ಸಮುದ್ರ ಸಂಚಾರ ಮಾಡುತ್ತ ಇರುವಾಗ ಅವುಗಳನ್ನು ಸಂಪಾದಿಸಿ ತಂದೆನೆಂದೂ ತಮಾಷೆಗಾಗಿ ಹೇಳಿದನು. ಹತ್ತು ಗಂಟೆಯ ಸುಮಾರಿಗೆ ಮಲಗಲಿಕ್ಕೆ ತನ್ನ ಕೋಣೆಯನ್ನು ಸೇರುವಾಗ ವೇಷವಲ್ಲಟಿಸಿಕೊಂಡಿದ್ದ ಒಬ್ಬ ವಿಚಿತ್ರ ವ್ಯಕ್ತಿಯು ಅವನನ್ನು ಅನುಸರಿಸಿದ್ದನು,

ಮುಷ್ಟಾಮುಷ್ಟಿ.

ಕೋಣೆಯನ್ನು ಸೇರುತ್ತಲೇ ಅವರಿಬ್ಬರೊಳಗೆ ಮುಷ್ಟಾಮುಷ್ಟಿ [illegible] ಆ ವಿಚಿತ್ರ ವ್ಯಕ್ತಿಯು ಸುಲಭದಲ್ಲಿ ತನ್ನ ಕಾರ್ಯ ಸಾಧಿಸದಿರುವದನ್ನು ಕಂಡು, ಸೊಂಟಕ್ಕಿದ್ದ ಕತ್ತಿಯನ್ನು ಹೊರಗೆ ತೆಗೆದು ಎರಡು ಮೂರು ಬಾರಿ ನಾವಿಕನನ್ನು ತಿವಿದನು. ನಾವಿಕನು ರಕ್ತ ಕಕ್ಕುತ್ತ ಸತ್ತು ನೆಲದ ಮೇಲೆ ಬಿದ್ದನು.

ನಾವಿಕನ ಗುರುಗುಟ್ಟನ್ನು ಕೇಳಿ ಛತ್ರದ ಒಡತಿಯೂ ಅವಳ ಮಗನೂ ಕೋಣೆಯೊಳಗೆ ಬಂದರು. ನಾವಿಕನ ಸತ್ತ ದೇಹವನ್ನು ಕಂಡು ಅವರು ಹೆದರಿದರು. ತಮ್ಮ ಛತ್ರದಲ್ಲಿ ಒಬ್ಬನ ಕೊಲೆಯಾಗಿದೆ ಎಂದು ವರ್ತಮಾನ ಹರಡಿದರೆ ಅಪಕೀರ್ತಿ ಕಟ್ಟುವದೆಂದು ತಿಳಿದು, ಅವರು ಆ ಹೆಣವನ್ನು ಆಗಿಂದಾಗಲೇ ಅಂಗಳಕ್ಕೆ ಎಳೆದು ತಂದು, ಒಂದು ಹೆಂಡ ತೋಡಿ, ಅದರಲ್ಲಿ ಹೂಗಿದುಬಿಟ್ಟರು.

ಒಂದೆರಡು ತಾಸುಗಳ ಅನಂತರ ಇನ್ನೊಬ್ಬ ಪ್ರಯಾಣಿಕನು ಅದೇ ಕೋಣೆಗೆ ಮಲಗಲಿಕ್ಕೆ ಬಂದನು. ಮರುದಿನ ಬೆಳಗಾಗಬೇಕಾದರೆ ಅವನು ಎದ್ದು, ಒಡತಿಯ ಬಳಿಗೆ ಹೋಗಿ, 'ಅಮ್ಮಾ! ನನ್ನ ಕೋಣೆಗೆ ಇನ್ನೊಬ್ಬನನ್ನು ಯಾಕೆ ಮಲಗಲಿಕ್ಕೆ ಕಳುಹಿಸಿದಿ?' ಎಂದು ದೂರಿಟ್ಟನು.

ಬಿಳಿಮುಖದ ಭೂತ!

'ಇಲ್ಲ, ಆ ದಿನ ರಾತ್ರಿ, ನೀನು ಒಬ್ಬನೇ ಆ ಕೋಣೆಯಲ್ಲಿ ಮಲಗಿದ್ದಿ. ಮತ್ತಾರೂ ಅದನ್ನು ಪ್ರವೇಶಿಸಲಿಲ್ಲ' ಎಂದು ಒಡತಿಯು ಎಷ್ಟು ಬಾರಿ ಹೇಳಿದರೂ ಹೊಸಬನು ಅವಳ ಮಾತುಗಳನ್ನು ಎಳ್ಳಷ್ಟು ನಂಬಲಿಲ್ಲ. 'ಇಲ್ಲವಮ್ಮಾ! ನನ್ನೊಟ್ಟಿಗೆ ಮಲಗಿದ್ದವನು ಬಿಳಿ ಮುಖದವನು, ಕ್ರೂರದೃಷ್ಟಿಯವನೂ ಆಗಿದ್ದನು, ರಕ್ತದಿಂದ ತೊಯಿದುಹೋದ ಒಂದು ಅಂಗವಸ್ತ್ರ ಅವನ ಕುತ್ತಿಗೆಯನ್ನು ಸುತ್ತಿದ್ದಿತು' ಎಂದನವನು.

ಕೊಲೆಯಾದ ಆ ನಾವಿಕನೇ—ಈ ಬಿಳಿ ಮುಖದ ಭೂತ! ಎಂದುಕೊಂಡು ಒಡತಿ ಹೆದರಿ ಕಂಗಾಲಾದಳು. ಅವಳು ನಡುಗಿ ತತ್ತರಿಸಿದಳು. ಹಿಂದಿನ ರಾತ್ರಿ, ಹೊಸಬನು ಬರುವ ಮೊದಲು ನಡೆದ ಸಂಗತಿಗಳನ್ನೆಲ್ಲ, ಒಂದೂ ಬಿಡದೆ ಅವನೊಡನೆ ಹೇಳಿಬಿಟ್ಟಳು.

ಅನಂತರ ಆ ಛತ್ರವು ಭೂತಗಳ ಮನೆಯಾಗಿದ್ದಿತು. ಬೆಂಕಿಯಲ್ಲಿ ಸುಟ್ಟು ಬೂದಿಯಾದ ಅನಂತರವೂ ಕೊಲೆಯಾದ ನಾವಿಕನು, ಅಲ್ಲಿ ಕಟ್ಟಿದ ಹೊಸ ಮನೆಯನ್ನು ಬಂದು ಸುಳಿಯುತಿದ್ದನಂತೆ.

ಸ್ಮಾರಕ ಗುಡಿ.

ದಫನ ಸ್ಥಾನದಲ್ಲಿ ನಾವಿಕನನ್ನು ಹೂಗಿಯದೆ ಇದ್ದುದರಿಂದ ಅವನಿಗೆ ಸದ್ಗತಿ ದೊರೆಯಲಿಲ್ಲವೆಂದು ಜನರ ನಂಬಿಗೆಯಾಗಿದ್ದಿತು. ಅದ್ದರಿಂದ ಅವನಿಗೆ ಗತಿ ಕಾಣಿಸುವುದಕ್ಕೆ, ಅಲ್ಲಿಗೆ ಬಂದವರು, ಅವನ ದಫನಸ್ಥಾನದ ಮೇಲೆ ಹೂ

★ ಹಿಂದೂಸ್ಥಾನವು ಜೇಹಿನವರ ಲೀಲಾಭೂಮಿ?

ಲಂಡನಿನಲ್ಲಿ ಸಮ್ಮಾನ ಊಟವು ನಡೆಯುತಿದ್ದಾಗ ರೋಬರ್ಟ ಎಡಿಸನ್ ಪೂಲ್ಮನ್ ಎಂಬವರು ಮಾತಿನ ಭರದಲ್ಲಿ, ತನಗೆ ಯಾರಾದರೂ ಒಂದು ಮೋಟರ ಸ್ಕಾಕಲನ್ನು ಕೊಟ್ಟರೆ, ಲೋಕವನ್ನೇ ಸುತ್ತಿ ಬಂದೆನೆಂದು ಹೇಳಿದರು.

ಆಮಂತ್ರಿತ ಅತಿಥಿಯೊಬ್ಬನು. ಪೂಲ್ಮನರನ್ನು ಪರೀಕ್ಷಿಸಿ ತಿಳಿಯಬೇಕೆಂದು ಬಗೆದರು. ಅವನು ಅವರಿಗೆ ನಿಜಕ್ಕೂ ಒಂದು ಮೋಟರ ಸ್ಕಾಕಲನ್ನು ಕ್ರಮಕ್ಕೆ ತೆಗೆಸಿಕೊಟ್ಟರು.

ಡೋವರ್ ರಸ್ತೆಯಿಂದ ಹೊರಟು, ಯೂರೋಪಿನಿಂದ ಗ್ರೀಸಿಗೆ ಹೋಗಿ, ಟರ್ಕಿ ಸಿರಿಯಗಳನ್ನು ದಾಟಿ, ಡಾಮಸ್ಕಸಿನಿಂದ 600 ಮೈಲು ಅಗಲದ ಮರುಭೂಮಿಯನ್ನೂ ಪಾರುಮಾಡಿ ಬಗದಾದಿಗೆ ಬಂದರು.

ಆ ಮೇಲೆ ಅವರು — ವಿದೇಶಿಯರು ಯಾರೂ ಹೋಗ ಕೂಡದೆಂದು ನಿಷೇಧಿಸಿದ ಹಿಮಾಲಯ ಪ್ರಾಂತ್ಯಗಳನ್ನೂ ಸಂಚರಿಸಿ, ಅಲ್ಲಿಯ ಕಾಯದೆ ಕಾನೂನುಗಳನ್ನೂ ಮುರಿದು, ಯಾರ ಕಣ್ಣಿಗೂ ಬೀಳದೆ ಅಫಘಾನಿಸ್ಥಾನಕ್ಕೆ ಕಾಲಿಟ್ಟರು.

ಅಲ್ಲಿಂದ ಅವರು ಹಿಂದೂಸ್ಥಾನಕ್ಕೆ ಬಂದರು. ಉಧಯಪುರದಲ್ಲಿ ಇಳಿದಿದ್ದಾಗ ಅಲ್ಲಿಯ ಒಬ್ಬ ಪೋಲೀಸ ಸುಪರಿಂಟೆಂಡೆಂಟನು—ಇಲ್ಲಿಯ ವಿದ್ಯಾರ್ಥಿಗಳ ಚಳವಳದ, ಬೇಹಿನವರ ಸಂಚುಗಳ ಚಿತ್ರವಿಚಿತ್ರವಾದ ವಾರ್ತೆಗಳನ್ನು ಹೇಳಿದನಾಗಿ ಅವರು ಕೆಲವು ತಿಂಗಳುಗಳ ಹಿಂದೆ ಒಡೆದು ಪ್ರಕಟಿಸಿರುವ 'ವನ್ ಮೇನ್ ಕೆರಿವನ್' ಎಂಬ ಪುಸ್ತಕದಲ್ಲಿ ಬಹು ಮನೋರಂಜಕವಾಗಿ ತಿಳಿಸಿದ್ದಾರೆ.

'ಹಿಂದೂದೇಶದಲ್ಲಿ ಸಮ್ಮಖದಲ್ಲಿ ಯಾವ ಒಂಟಿ ಮಾಲಿಯನ್ನಿಟ್ಟು ಪ್ರಾರ್ಥಿಸುತ್ತ ಇದ್ದರು.

ಹೀಗೆ ಬಹಳ ಕಾಲವು ಕಳೆದುಹೋಯಿತು. ಈಗ ಆ ಮನೆಯ ಒಡತಿ ಒಂದು ಹೆಜ್ಜೆ ಇನ್ನೂ ಮುಂದೆ ಹೋಗಿ, ಕೊಲೆಯಾದ ನಾವಿಕನ ಭೂತಕ್ಕೆ, ಅವನನ್ನು ಹೂಗಿದ ಸ್ಥಾನದಲ್ಲಿ ಒಂದು ಸ್ಮಾರಕ ಗುಡಿಯನ್ನು ಕಟ್ಟಿಸುತ್ತಿದ್ದಾಳೆ.

ಅಂಧವಿಶ್ವಾಸವೇ?

ಇದು ಅಂಧವಿಶ್ವಾಸವೆ? ಮೂಢಭಕ್ತಿಯೆ? ಯಾರು ಹೇಳಬಲ್ಲರು?

ಮಾಡಲಿಕ್ಕೆ ಇರುವದು ಇದು ಒಂದೇ ಉಪಾಯ' ಎಂದು ಆ ಸುಪರಿಂಟೆಂಡೆಂಟನು, ಸರಕಾರ ಸಿ. ಐ. ಡಿ. ಕುರಿತು ಹೇಳಿದನಂತೆ. 'ಸರಕಾರವು ಕೋಟ್ಯಾಂತರ ರೂಪಾಯಿಗಳ ಖರ್ಚು ಮಾಡಿ ಈ ಇಲಾಖೆಯನ್ನು ಇಟ್ಟಿರುತ್ತದೆ. ಈ ಇಲಾಖೆಯ ನೌಕರ ಚಾಕರರು ಹಿಂದೂದೇಶದ ಹಳ್ಳಿಹಳ್ಳಿಗಳಲ್ಲಿಯೂ ಇರುವರು. ಅವರದೊಂದು ಜಾಲವು ಇಡೀ ದೇಶದಲ್ಲಿ ಹರಡಿದೆ.

'ಕೂಲಿ, ಸಾಹುಕಾರ, ಉಪಾಧ್ಯಾಯ, ಬೇಸಾಯಗಾರ, ಯಾರೂ ಆ ಇಲಾಖೆಯಲ್ಲಿ ಇದ್ದರೆ ಬಹುದು. ಅದರಲ್ಲಿ ಯಾರು ಇದ್ದಾರೆ, ಯಾರು ಇರುವುದಿಲ್ಲ, ಎಂದು ಹೇಳುವದು ಯಾರಿಗೂ ಸಾಧ್ಯವಲ್ಲ.

'ಅಷ್ಟು ಮಾತ್ರವಲ್ಲ, ತನ್ನ ಚಲನವಲನಗಳನ್ನು ಸರಕಾರದ ಗುಪ್ತಚಾರರು ನಿರೀಕ್ಷಿಸುತ್ತಿರುವರೆ, ಅವರು ತನ್ನ ಕುರಿತು ಏನು ಮಾಡುತ್ತಾರೆ, ಏನು ಮಾಡುವುದಿಲ್ಲ, ಎಂದು ಹೇಳುವದು ಕೂಡ ಯಾರಿಗೂ ಸಾಧ್ಯವಾಗಿರುವದಿಲ್ಲ

'ವಿದ್ಯಾರ್ಥಿ ಆಂದೋಲನಕ್ಕೆ ಸೇರಿದವರೆಲ್ಲರನ್ನು ಇವರು ನಿರೀಕ್ಷಿಸುತ್ತ ಇದ್ದಾರೆ. ಆ ವಿದ್ಯಾರ್ಥಿಗಳ ಪ್ರತಿಯೊಂದು ಚಲನವಲನವನ್ನು ಅವರು ಸರಕಾರಕ್ಕೆ ತಿಳಿಸುತ್ತ ಇದ್ದಾರೆ.

'ಯಾರೂ ಮನಸ್ಸಿನಲ್ಲಿ ಕಲ್ಪಿಸಿಕೂಡ ಇರದಂಥ ಒಂದು ದಿನ ಒಬ್ಬ ಬೇಹಿನವನು ಬಂದು—ಬಾ, ನನ್ನೊಟ್ಟಿಗೆ ಎಂದು ತಟ್ಟನೆ ರಾತ್ರಿ ಮಲಗಿರುವವನನ್ನು ಕರಕೊಂಡು ಹೋಗಬಹುದು.

'ಎಲ್ಲಾ ಒಂದು ಸ್ಥಳದಲ್ಲಿ ನಡೆಯುವವು. ಆದರೆ ಅಪರಾಧಿಗೆ ನ್ಯಾಯವು ದೊರೆಯುವಂತೆ ಎಲ್ಲ ಜಾಗರೂಕತೆಗಳನ್ನು ತೆಗೆದುಕೊಳ್ಳುತ್ತಾರೆ'

'ಡಿಲ್ಲಿಯಲ್ಲಿ ಒಂದು ವಿಚಾರಣಾ ಮಂಡಳವಿದೆ. ಅದೇ ಪ್ರತಿ ಒಬ್ಬ ಅಪರಾಧಿಗೆ ಶಿಕ್ಷೆಯನ್ನು ವಿಧಿಸುವದು. ಆದರೆ ಅನೇಕ ತಿಂಗಳುಗಳ ತನಕ ಸಿ. ಐ. ಡಿ. ಅಧಿಕಾರಿಗಳು ಮಾಡಿದ ತನಿಖೆಯಿಂದ ಅವರು ತಪ್ಪಿತಸ್ಥರೆಂದು ಕಂಡು ಬಂದ ಹೊರತು ಅವರನ್ನು ವಿಚಾರಣೆಗೆ ಗುರಿಮಾಡುವುದಿಲ್ಲ.'

ಹೀಗೆಂದು ಆ ಪೋಲೀಸ ಅಧಿಕಾರಿಯು ಪೂಲ್ಮನರಿಗೆ ಹೇಳಿದನಂತೆ.

ಪೂಲ್ಮನರು ಇನ್ನೊಂದು ಊರಿಗೆ ಹೋಗಿದ್ದಾಗ, ಪೋಲೀಸರು ವಿದ್ಯಾರ್ಥಿಗಳ ಒಂದು ದೊಡ್ಡ ಗುಂಪನ್ನು ಸುತ್ತು ಹಾಕಿದ್ದರು. ಅದರಲ್ಲಿ 1000 ವಿದ್ಯಾರ್ಥಿಗಳಾದರೂ ಇದ್ದಿರಬಹುದು. ಅವರೆಲ್ಲರೂ ಅಪರಾಧಿಗಳಾಗಿ, ಯಾರೂ ಬಲ್ಲರು? ಆದರೆ ಅವರೆಲ್ಲರೂ ವಿದ್ಯಾರ್ಥಿಗಳಾಗಿದ್ದರು. ಓದು ಬರಹ ಬಲ್ಲವರಾಗಿದ್ದರು. ವಿಚಾರವಂತರಾಗಿದ್ದಲಿಕ್ಕು ಸಾಕು—ಎಂದು ಪೂಲ್ಮನರು ತಮ್ಮ ಲೋಕಸಂಚಾರದ ಕತೆಯಲ್ಲಿ ಬರೆದಿದ್ದಾರೆ.

'ಆ ವಿದ್ಯಾರ್ಥಿಗಳು ಬೆಳಗ್ಗೆ ಎದ್ದು, ಹೊಟ್ಟೆ ತುಂಬಾ ತಿಂದಾದ ಬಳಿಕ, ಅದು ಜೀರ್ಣವಾಗುವ ತನಕ, ಸುಮ್ಮನೆ ಹಿಂದೆಡೆ ಬಿದ್ದುಕೊಂಡು ಸೋಮಾರಿಗಳಾಗಿ ಕಾಲಹರಣ ಮಾಡುವ ಕಾಡು ನಿವಾಸಿಗಳಾಗಿರಲಿಲ್ಲ' ಎಂದು ಪೂಲ್ಮನರು ವಿದ್ಯಾರ್ಥಿಗಳ ಕುರಿತು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ.

ಇಂಥ ಬೇರೆ ಎಷ್ಟೋ ಸ್ವಾರಸ್ಯವಾದ ಸಂಗತಿಗಳು ಅವರ ಆ ಪುಸ್ತಕದಲ್ಲಿ ಅಡಕವಾಗಿವೆ.

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು. ಅದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು. ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಅದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಲೋಧ್ರದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

THE

Bank of Mangalore Ltd.,

MANGALORE.

ESTD 1931

Branches -

Panemangalore, Mudabidri & Padubidri.

Fixed Deposits will be received at following rates of interest

For 3 months		3½%
6		4%
12		5%
24	& upwards	5½%

Interest Payable Quarterly

Saving Bank deposit 3½% on daily balances.

All kinds of banking business transacted

ಥಟ್ಟನೆ ಬರುವ ಶೀತದಿಂದ
ನಿಮೋನಿಯಾ ಪರಿಣಮಿಸಬಹುದು.

ಏಜಂಟರು - ಮೆಸರ್ಸ್ ದಾಧಾ ಎಂಡ್ ಕೊ, ಪಾರ್ಕ್ ಟೌನ್, ಮದ್ರಾಸು

ಪೆಪ್ಸ್ PEPS

S. U. N. & Co.,

Silk Merchants,

Chaukhamba, BENARES CITY

ಈಗಿನ ತರಹ (ಕಾಶಿ) ಬನಾರಿಸ್ ಸೀರೆ ತಮಗೆ ಬೇಕಾದರೆ ನಮ್ಮನ್ನು ...
18 ಮೊಳದ 2½ ಅಗಲದ ಸಣ್ಣ ಬುಟ್ಟ ಸೀರೆಗಳು ... 45ರಿಂದ 150 ಸಾಧಾರಣ ತರದ 18 ಮೊಳ ಸಣ್ಣ ಬುಟ್ಟ ಸೀರೆಗಳು ರೂ 30ರಿಂದ 55 ವರೆಗೆ ಸಾದಾ ಸೀರೆ 18 ಮೊಳ ... 32ರಿಂದ ... 65 ... 2½ ... 20ರಿಂದ 35ರ ವರೆಗೆ ... ಕ್ಯಾಟಲಾಗು ಉಚಿತವಾಗಿ ಕಳುಹಿಸಲಾಗುವುದು

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಿಸ್ ಸಿಟಿ

ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ, ನಿಮ್ಮ ಸೌಂದರ್ಯವನ್ನೂ ಆರೋಗ್ಯವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

ಲಿಮ್ಡಾ ಸೋಪು
ಉಪಯೋಗಿಸಿರಿ
ವೆಜಿಟೆಬಲ್ ಸೋಪುವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ&ಮದ್ರಾಸು

ಒದಗಿಸಿಕೊಡುವವರು—

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,
ಕಲ್ಲಿಕೋಟೆ (ಮಲಬಾರ)

I visited the office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

~~(Sd) V. V.~~ Giri,
Minister of Labour

4-10-1937

Bhuvanendra Products Ltd, Katapady, S. Kanara

ಸೇಡು ತೀರಿಸುವ ವಿಚಿತ್ರ ಪ್ರಕಾರದ ಮನೋವೃತ್ತಿ

★ ★ ★

ಮಂಜಿನ ಮನೆಯಲ್ಲಿ ಮದುವೆಮಾಡಿಸುವ ಪ್ರತೀಕಾರ ಬುದ್ಧಿ!

★ ★ ★

ರಶ್ಯದ ಮಹಾರಾಜ್ಞಿ — ಎನ್ನಳ ದರ್ಬಾರಿನಲ್ಲಿ ನಡೆದ ಒಂದು ಕಥೆ!

★

ಈಗ ಸುಮಾರು ಎರಡು ಶತಮಾನಗಳ ಮೊದಲು ಎನ್ನಳು ರಶ್ಯದ ಮಹಾರಾಜ್ಞಿಯಾಗಿದ್ದಳು. ಅವಳಷ್ಟು ಕಠಿನ ಹೃದಯದ ಸ್ತ್ರೀ ಮತ್ತಾರೂ ಇರುವುದಿಲ್ಲವೆಂದು ಇತಿಹಾಸವು ಹೇಳುತ್ತದೆ.

ಎನ್ನಳ ಮನೋವೃತ್ತಿ ವಿಚಿತ್ರ ಪ್ರಕಾರದ್ದಾಗಿತ್ತು. ಅವಳ ನಡೆನುಡಿ, ಆಚಾರ ವಿಚಾರ—ಎಲ್ಲಾ ಒಂದು ಅದ್ಭುತ ವಿಷಯವಾಗಿದ್ದಿತು. ಆಲೋಚನೆ ಒಂದಾದರೆ ಮಾತು ಇನ್ನೊಂದು, ಮಾತು ಒಂದಾದರೆ ಕೃತಿ ಇನ್ನೊಂದು. ಈ ರೀತಿ ಬಾಲ್ಯದಿಂದ ಅವಳ ಜೀವನದ ದಿನಗಳು ಕಳೆದು ಬಂದಿದ್ದುವು.

ವಿಲಿಯಮನು ಎನ್ನಳ ಅಚ್ಚುಮೆಚ್ಚಿನ ಹುಡುಗ. ಅವನು ಅಜಾನುಬಾಹು, ಸುಂದರ ಕಾಯ, ಕುಲೀನ, ಗುಣಸಂಪನ್ನ, ವಿದ್ಯಾವಂತ ಆದ್ದರಿಂದ ಎನ್ನಳೇ ಅವನನ್ನು ಮೋಹಿಸಿದ್ದಳು. ಇತರ ಹುಡುಗಿಯರ ಮಾತು ಹೇಳುವದೇನು? 'ವಿಲಿಯಮನು ಸೌಂದರ್ಯದ ಗಣಿ, ಗುಣದ ಮಣಿ. ಮಹಾರಾಜ್ಞಿಯ ಅಂತಃಪುರಕ್ಕೆ ಅವನು ಅಲಂಕಾರ ಸ್ವರೂಪನಾಗಿದ್ದಾನೆ' ಎಂದು ಎನ್ನಳೇ ಒಮ್ಮೆಗೆ ಅವನನ್ನು ಬಾಯಿ ತುಂಬಾ ಹೊಗಳಿದ್ದಳು.

ಆದರೆ ಎನ್ನಳ ಹೃದಯ ಪರೀಕ್ಷೆ ಮಾಡುವದು ಯಾರೊಬ್ಬನಿಗೂ ಸಾಧ್ಯವಲ್ಲ. ವಿಲಿಯಮನು ಅವಳ ಮಾತಿನಲ್ಲಿ ಏನೋ ಮೋಸವಿರಬೇಕೆಂದು ಊಹಿಸಿದನು. ಆದ್ದರಿಂದ ಅವಳ ಮನಮೋಹನವಾದ ಮಾತುಗಳಿಗೆ ~~ಮರುಳಾಗದೆ~~ ಯಾರಾದರೂ ಒಬ್ಬ ಯೋಗ್ಯ ಹುಡುಗಿಯನ್ನು ತಾನು ಮದುವೆಯಾಗುವುದಾಗಿ ನಿರ್ಧಾರಮಾಡಿಕೊಂಡನು.

ವಿಲಿಯಮನು ಹೀಗೆ ನಿರ್ಧಾರ ಮಾಡಿದ್ದರಲ್ಲಿ ಅವನ ತಪ್ಪಿಲ್ಲ. ಎನ್ನಳು ಅವನನ್ನು ಸಮಯಾಸಮಯ ನೋಡದೆ ಹೊಗಳುತ್ತಿದ್ದಳು. ಅವನನ್ನು 'ಪ್ರಿಯಕರ, ಪ್ರಿಯತಮ, ಮೋಹನಾಂಗ' ಎಂದು ಮೊದಲಾಗಿ ಸಂಭೋಧಿಸುತ್ತಿದ್ದಳು. ಆದರೆ ಅವಳ ಪ್ರೀತಿಗೆ ಒಂದು ರೀತಿ ಇರಲಿಲ್ಲ. ಇವತ್ತು ಪ್ರೀತಿಸುತ್ತಿದ್ದವನನ್ನೇ ನಾಳೆ ಅವಳು ಬೇರೆ ಎಲ್ಲರಿಗಿಂತಲೂ ಹೆಚ್ಚಾಗಿ ದ್ವೇಷಿಸುತ್ತಿದ್ದಳು. ಎಷ್ಟೋ ಮಂದಿ ಅವಳ ಪ್ರೀತಿಗೆ ಪಾತ್ರರಾದವರು ಸೈಬೀರಿಯದ ಅರಣ್ಯ ಕಾಡುಗಳಲ್ಲಿ ಅಜ್ಞಾತ ವಾಸಮಾಡಿ ಕೊಂಡಿದ್ದರು.

1789ರಲ್ಲಿ ವಿಲಿಯಮನು ಇಟಲಿಯಿಂದ ಬಂದ ಸುಂದರ ಯುವತಿಯನ್ನು ಕಂಡು ಮೋಹಿಸಿ, ಅವಳನ್ನು ಮದುವೆಯಾದನು. ಈ ದಂಪತಿಗಳು ಸುಖದಿಂದ ಕೆಲವು ದಿನಗಳನ್ನು ಕಳೆಯುವಷ್ಟರಲ್ಲಿ ವಾರ್ತೆಯು ಎನ್ನಳ ಕಿವಿಗೆ ಬಿದ್ದಿತು. ವಿಲಿಯಮನು ತನ್ನನ್ನು ಅಲಕ್ಷಿಸಿ ನಡೆದನೆಂದು ಅವಳು ಸಿಟ್ಟಿನಿಂದ ಸಂತಪ್ತಳಾದಳು. ಕೂಡಲೇ ಅವನನ್ನು ಕರೆಕಳುಹಿಸಿದಳು.

'ನೀನು ಮದುವೆಯಾದೆಯೆಂದು ನಾನು ಕೇಳಿದ ವರ್ತಮಾನ ನಿಜವೆ, ವಿಲಿಯಮ್?' ಎಂದು ಅವಳು ಅವನನ್ನು ಕೇಳಿದಳು.

ಅವನು ವಿನೀತನಾಗಿ—'ಹೌದು, ಮಹಾರಾಜ್ಞಿ' ಎಂದನು.

'ಯಾರನ್ನು ಕೇಳಿ ಮದುವೆಯಾದೆ?'

'ಹೃದಯವು ಮದುವೆಯಾಗೆಂದು ಹೇಳಿತು, ನಾನು ಮದುವೆಯಾದೆ. ಇಂಥ ವಿಷಯಗಳಲ್ಲಿ ಇತರರನ್ನು ಕೇಳುವ ಆವಶ್ಯಕತೆ ನನಗೆ ತೋರಲಿಲ್ಲ.'

ಎನ್ನಳು ಪ್ರತಿಹಿಂಸೆಯ ಸೂಚಕವಾದ ಒಂದು ನಸುನಗುವನ್ನು ನಕ್ಕಳು. ಮತ್ತೆ ಕಠೋರಳಾಗಿ—'ಹಾಗಾದರೆ ಶೀಘ್ರದಲ್ಲಿಯೇ ನಿನ್ನ ಈ ವಿವಾಹದ ವಿಚ್ಛೇದ ಆಗಲೇಬೇಕು' ಎಂದಳು.

'ಆದರೆ, ಮಹಾರಾಜ್ಞಿ ...'

'ಇಲ್ಲ, ಇನ್ನು ಏನನ್ನೂ ಮಾತನಾಡ ಬೇಡ. ನಿನ್ನ ವಿವಾಹದ ವಿಚ್ಛೇದ ಆಗಲಿಕ್ಕೇಬೇಕು. ಅಲ್ಲವಾದರೆ ಗೊತ್ತಿದೆಯಲ್ಲ? ಕೊಲೆಗಡುಕರ ಕೊಡಲಿಗೆ ತಲೆ ಕೊಡಲಿಕ್ಕೆ ಸಿದ್ಧನಾಗು.'

ಹೀಗೆ ಹೇಳಿ ಎನ್ನಳು ಪುನಃ ನಕ್ಕಳು. 'ಗೊತ್ತಾಯಿತೆ, ವಿಲಿಯಮ್?' ಎಂದು ಅವಳು ಕೇಳಿದಳು.

ಬೇರೆ ಉಪಾಯವಿರಲಿಲ್ಲ. ಸ್ಯೆಂಟ ಪೀಟರ್ಸ ಬರ್ಗಿನ ಬಿಷೋಪನ ಸಮಕ್ಷದಲ್ಲಿ ವಿಲಿಯಮನ ವಿವಾಹ ವಿಚ್ಛೇದನವಾಯಿತು. ಅಭಾಗಿನಿಯಾದ ಇಟಲಿಯ ಹುಡುಗಿ ಬಾಡಿದ ಮೋರೆ ಮಾಡಿಕೊಂಡು ತನ್ನ ಊರಿಗೆ ಹಿಂತೆರಳಿದಳು.

ಎನ್ನಳು ಹೇಳಿದ ಹಾಗೆ ವಿಲಿಯಮನು ಕೇಳಿದ್ದ ... ಅವಳಿಗೆ ತೃಪ್ತಿ ... ಅವನ ವಿಷಯದ ... ಆದರೆ ... ಹೇಗೆ ಆಗಬೇಕು? ... ಕೊಳ್ಳುವ ಅವಳ ವಿಚಿತ್ರ ಪ್ರಕಾರದ ... ವೃತ್ತಿಯು ಪುನಃ ಜಾಗ್ರತವಾಯಿತು. ಅವಳು ~~ವಿಲಿಯಮನನ್ನು~~ 'ವಿಲಿಯಮ್! ನಿನ್ನ ಮದುವೆಗೆ ಎಲ್ಲಾ ಸಿದ್ಧತೆಗಳೂ ಸಿದ್ಧವಾಗಿವೆ. ಹೆಣ್ಣು ಯಾವುದು ಗೊತ್ತೇ? ಒಲ್ಗಾ ಎಂಬ ಅವಳ ಹೆಸರು. ಒಲ್ಗಾಳನ್ನು ನೀನು ನೋಡಿದ್ದೀಯಾ?' ಎಂದಳು.

'ಇಲ್ಲ, ಮಹಾರಾಜ್ಞಿ!'

'ಹಾಗಾದರೆ ತಡೆ. ಈಗಲೇ ಅವಳನ್ನು ಇಲ್ಲಿ ಕರೆಸುತ್ತೇನೆ' ಎಂದಳು.

ಒಲ್ಗಾ ತುಂಬಿದ ದರ್ಬಾರಿನಲ್ಲಿ ತರಿಸಲ್ಪಟ್ಟಳು. ವಿಲಿಯಮನು ಅವಳನ್ನು ನೋಡಿದೊಡನೆಯೇ ಕಣ್ಣು ಕತ್ತಲೆ ಬಂದಂತಾಗಿ ಅಲ್ಲೇ ಗೋಡೆಗೆ ಒರಗಿದನು. ಒಲ್ಗಾ ಎಂದರೆ ಅರ್ಧ ಬೆಳೆದ ಗಿಡ್ಡ, ರಶ್ಯದಲ್ಲೇ ಅತ್ಯಂತ ಕುರೂಪಿ ಎಂದು ಹೆಸರು ಪಡೆದವಳು. ಅವಳನ್ನು ವಿಲಿಯಮನಿಗೆ ಕೊಟ್ಟು ಮದುವೆ ಮಾಡುವದು ಎಂಥ ದುಃಸ್ವಪ್ನ ...

'ನನ್ನ ಪ್ರಿಯತಮಾ, ನನ್ನ ಮೋಹನಾಂಗ ... ಕಟ್ಟಕಡೆಗೆ ... ಒಲ್ಗಾಳನ್ನು ಮದುವೆಯಾಗಬೇಕಾಯಿತು' ಅಯ್ಯೋ ನನ್ನ ಭಾಗ್ಯ ಎಂದು ... ಅವನ ... ಕತ್ತಿಗೆಯನ್ನು ... ಬಾಹುಗಳಿಂದ ಬಿಗಿದು ಹಿಡಿದ, ಅವನನ್ನೇ ನೋಡುತ್ತ ... ನಕ್ಕಳು.

ಎಲ್ಲಾ ಸಿದ್ಧವಾಯಿತು.

ಮದುವೆಗೆ ಎಲ್ಲಾ ಸಿದ್ಧವಾಯಿತು. ~~ಉತ್ತರ ಧ್ರುವ ಪ್ರದೇಶದ ಒಂದು ಕಡೆಯಲ್ಲಿ~~ ಎನ್ನಳಿಂದ ಆಜ್ಞಾಪಿತರಾದ ಕೆಲಸಗಾರರು ಒಂದು ಮಂಜಿನ ಮನೆಯನ್ನು ಕಟ್ಟಿದರು. ಅಲ್ಲಿಗೆ ವಿಲಿಯಮು ಮತ್ತು ಒಲ್ಗಾ ಕರೆದೊಯ್ಯಲ್ಪಟ್ಟರು. ಮನೆಯೊಳಗೆ ಮಂಜಿನಿಂದ ಕಟ್ಟಿದ ಎರಡು ಆಸನಗಳಿದ್ದುವು. ಅವುಗಳ ಮೇಲೆ ಇಬ್ಬರೂ ಕೂತುಕೊಳ್ಳಿಸಲ್ಪಟ್ಟರು.

ರಶ್ಯದ ಕುರೂಪಿಗಳು ವಿಕಲಾಂಗಿಗಳು ಅಂಗಹೀನರು ಮೂರ್ಖರು ಹುಚ್ಚರು ಮದುವೆಗೆ ಆಮಂತ್ರಿತರಾಗಿ ಬಂದಿದ್ದರು. ಹುಸ್ತರಲ್ಲಿ ಯಾರೂ ಬರಕೂಡ

~~ದೆಂದು ಎನ್ನಳ ಕಠಿಣ ಆಜ್ಞೆ ಆಗಿತ್ತು.~~ ಮದುವೆಗೆ ಬಂದ ಆ ದೊಡ್ಡ ಜನಸಂದಣಿಯಲ್ಲಿ ಸಭ್ಯಯೋಗ್ಯ ಅಂದರೆ ಅವನೊಬ್ಬನೆ—ವಿಲಿಯಮ್ ಮಾತ್ರ.

ಮದುವೆಯಾದ ವೇಳೆ ಎಲ್ಲರೂ ಹಿಂತಿರುಗಿದರು. ಆದರೆ ವಿಲಿಯಮನಿಗೆ ಮಾತ್ರ ರಾಣಿಯ ಹಿಂತಿರುವ ಆಜ್ಞೆ ಇರಲಿಲ್ಲ. ಅವನು ಕುಬ್ಜೆಯೊಡನೆ ಐದಾರು ತಿಂಗಳು—ಬೇಸಗೆಯು ಬರುವ ತನಕ—ಅದೇ ಮಂಜಿನ ಮನೆಯಲ್ಲಿ ವಾಸವಾಗಿ ಇರಬೇಕಾಯಿತು.

ಬೇಸಗೆಯಲ್ಲಿ ಆ ಮನೆ ಕರಗಿ ನೀರಾದ ...

ರಾಜಧಾನಿಗೆ ಕರೆಸಲ್ಪಟ್ಟರು. ಆದರೆ ಅವರು ಬಹುಕಾಲ ಬದುಕಲಿಲ್ಲ. ಮಂಜಿನ ಮನೆಯಲ್ಲಿ ಅವರ ಶಾರೀರಿಕ ಮಾನಸಿಕ ಆರೋಗ್ಯವು ಕೆಟ್ಟಿದ್ದಿತು. ರಾಜಧಾನಿಗೆ ಬಂದ ಕೆಲವೇ ದಿನಗಳಲ್ಲಿ ವಿಲಿಯಮನೂ, ಕುಬ್ಜೆಯೂ ಸತ್ತು ಹೋದರು.

ಸರ್ವತಂತ್ರ ಸ್ವಾತಂತ್ರ್ಯವು ಒಬ್ಬ ವ್ಯಕ್ತಿಯ ಕೈಗೆ ಒಂದರೆ ಏನೆಲ್ಲಾ ಆದೀತೆಂಬುದಕ್ಕೆ ಇದನ್ನು ಒಂದು ದೃಷ್ಟಾಂತವಾಗಿ ತೆಗೆದು ಕೊಳ್ಳಬಹುದು. ಇದು ಅಜ್ಞಾತಕತೆಯೇನೂ ಅಲ್ಲ, ಒಂದು ಐತಿಹಾಸಿಕ ಘಟನೆಯಾಗಿದೆ.

ಜೋನ್ ಬ್ಲಾಂಡೆಲ್

ಚಲನ ಚಿತ್ರಗಳಲ್ಲಿ ಸುಂದರಿಯಾಗಿರುವುದಲ್ಲದೆ ಸ್ವತಃ ಸುಂದರಿಯಾಗಿಯೇ ಇರುವುದರಿಂದ ಎಲ್ಲರಿಂದಲೂ ಹೊಗಳಲ್ಪಟ್ಟಿರುತ್ತಾಳೆ.

ಜೋನ್‌ಬ್ಲಾಂಡೆಲ್ ತನ್ನ ಸೌಂದರ್ಯವನ್ನು ಕಾಪಾಡುವ ಲಕ್ಸ್ ಟಾಯಿಲೆಟ್ ಸಾಬೂನಿನ ಆದರಣೆಯಲ್ಲಿ ಬಹಳ ಮುಂದಾಳಾಗಿದ್ದಾಳೆ. ಅವಳು ಹೇಳುವುದೇನೆಂದರೆ ಲಕ್ಸ್ ಟಾಯಿಲೆಟ್ ಸಾಬೂನನ್ನು ಬಹಳ ನಂಬಿಕೆಯಿಂದ ಉಪಯೋಗಿಸಿದ ಯುವತಿಯ ಚರ್ಮವು ಯಾವರೀತಿ ಸೌಂದರ್ಯದಿಂದಿರುತ್ತೆಂಬುದನ್ನು ನಂಬಲೂ ಸಹಾ ಅಸಾಧ್ಯವಾದದ್ದು. ಲಕ್ಸ್ ಟಾಯಿಲೆಟ್ ಸಾಬೂನು ನಿಮ್ಮ ಚರ್ಮದ ಸೌಂದರ್ಯವನ್ನು ನುಣುಪಾಗಿಯೂ, ಮೃದುವಾಗಿಯೂ ಇರುವಂತೆ ಇಡಲಿ. ಅದರ ಆಹ್ಲಾದಕರವಾದ ಬಿಳಿಯ ನೊರೆಯು ಒಂದೊಂದು ಚರ್ಮದ ಮೇಲೆ ಊಹಿಸಲಸಾಧ್ಯವಾದ ಕೆಲಸಗಳನ್ನು ಮಾಡುತ್ತದೆ. ಈ ದಿನವೇ ಪರೀಕ್ಷಿಸಿ.

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP

ಇಂದಿನ ಸಿನೆಮಾ ತಾರೆಗಳು ಉಪಯೋಗಿಸುವ ಸುಂದರ ಸಾಬೂನು

X LTS 80 - 2 80

LEVER BROTHERS (INDIA) LIMITED

KAN

ನಿದ್ರಾಹೀನತೆ

ಹಗಲೆಲ್ಲಾ ಕಷ್ಟಪಟ್ಟು ... ಸರಿಯಾದ ನಿದ್ರೆ ಬಾರದೆ ... ಕೊಡತಕ್ಕ ... ಸ್ವಭಾವ ... ಯಲ್ಲ ...

★ **ಜೀವಾಮೃತಂ** ★

ಅಮೋಘವಾದ ಟಾನಿಕ್

ಪ್ರತಿದಿನವೂ ಮಲಗುವುದಕ್ಕೆ ಮುಂಚೆ ಒಂದು ಅಥವಾ ಎರಡು ಚಮಚ ಸೇವಿಸಿದರೆ – ಆಶ್ಚರ್ಯಕರವಾಗಿ ಕೆಲಸ ಮಾಡುವುದು

ಒಳ್ಳೇ ನಿದ್ರೆಯೇ ಒಳ್ಳೇ ಆರೋಗ್ಯದ ಗುರುತು

ತಯಾರಿಸುವವರು – ಆಯುರ್ವೇದಾಶ್ರಮ, ಮದ್ರಾಸು

ವಿತರಣಾಕಾರ – ಅಮರಚಂದ ಶುಭಚಂದ, ಮದ್ರಾಸು.

ಸ್ಟಾಕಿಸ್ಟರು – ಪೊಪ್ಯುಲರ್ ಸ್ಟೋರ್ಸ್,

ರಥಬೀದಿ, ಮಂಗಳೂರು

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ. 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ ಕಂಡೇಪಿ
P O Peridepi (ನೆಲ್ಲೂರು ಡಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟ್ಯಾನ್,
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ
ಈ ದಿನವೇ ಚಂದಾದಾರರಾಗಿರಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೀವು ದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮತ್ತು ಸರ್ಟಿಫಿಕೇಟು ... ವೈದ್ಯ ಎಲ್. ಸಿ. ಪಿ. ಎಸ್. ... ಈ ಚೂರ್ಣದಿಂದ ಯಾವ ತರದ ಅಪಾಯವೂ ... ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ...

... ಮು. ಪೋ. ಮಿರಜಿ, (S M. C.)

The

Agri cultural & Industrial Bank, Ltd,

(Incorporated in British India)

Head Office LAXMINIVAS BUILDINGS *Coondapoor*

BRANCHES -

COONDAPOOR	BYNDOOR	SIWABILT
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS. 10 25 50 100 250 500 & 1000

REDEEMABLE AT ANY TIME

CUMULATIVE DEPOSITS ARE ACCEPTED

Current Deposits

From January to June 2%
and
From July to December 1%

Savings Bank Deposits

3½ per cent per annum

Fixed Deposits

for 6	Months	3½%
1	Year	4%
„ 2	Years & above	4½%

For Further Particulars Apply to:—

HEAD OFFICE or BRANCHES

Buy Advertised Goods

DRINK
Delicious
WATERFALL
AND
PYKARA TEAS.
unrivalled for Taste & Aroma.

ಅತ್ಯುತ್ತಮವಾದ
ವಾಟರ್ ಫೋಲ್
ಮತ್ತು
ಪ್ಯಾಕರಾ ಚಹಾವನ್ನು

ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ

Distributors

Panchmal Krishnaya Shenoi & Son,
Bunder, Mangalore

USE
365 BAR SOAPS
SOLD
EVERYWHERE.

**
**

Sole Agent:

PANCHMAL KRISHNAYA SHENOI & SON,

Bunder, MANGALORE

ಮರಣಶಾಸ್ತ್ರ.

ಸ್ವಲ್ಪ ಕಾಲದ ಹಿಂದೆ ಎಡಿನಬರ್ಗ ನಗರದ ಇನ್‍ಸ್ಟಿಟ್ಯೂಟ್ ಆಫ್ ಎನಿಮಲ್ ಜೆನಿಟಿಕ್ಸ ಎಂಬ ಸಂತತಿ ವಿಜ್ಞಾನ ಸಂಸ್ಥೆಯ ಡ್ಯಾರೆಕ್ಟರ ಎಂದರೆ ಪ್ರಧಾನರಾಗಿರುವ ಪ್ರೊಫೆಸರ ಎ. ಇ. ಕ್ರೂ ಎಂಬವರು ಕಲ್ಕತ್ತೆಗೆ ಬಂದಿದ್ದಾಗ ಅಲ್ಲಿ 'ಮರಣಶಾಸ್ತ್ರ'ದ ಕುರಿತು ಒಂದು ಅಮೋಘವಾದ ಭಾಷಣವನ್ನು ಕೊಟ್ಟು, ಮರಣವೆಂದರೇನು? ಅಮರನಾಗುವದು ಹೇಗೆ? ಇವೇ ಮೊದಲಾದ ಪ್ರಶ್ನೆಗಳಿಗೆ, ವೈಜ್ಞಾನಿಕ ಕ್ರಮದಿಂದ ತರ್ಕಿಸಿ ಉತ್ತರಗಳನ್ನು ಕೊಟ್ಟಿದ್ದರು ಅದು ಸ್ವಾರಸ್ಯವಾಗಿರುವದರಿಂದ, ವಾಚಕರ ಉಪಯೋಗಾರ್ಥ ಆ ಭಾಷಣದ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಕೊಟ್ಟಿದ್ದೇವೆ

ಮರಣ ಅಥವಾ ಜೀವನದ ಅಂತ್ಯವು ಇಂದು ನಾಳೆ ಅಥವಾ ಯಾವಾಗಲಾದರೂ ಒಂದಿಲ್ಲೊಂದು ದಿನ ಪ್ರತಿಯೊಬ್ಬನಿಗೆ ಬರಲಿಕ್ಕಿದೆ. ಮೃತ್ಯುವಿನ ವಕ್ರದೃಷ್ಟಿಯು ನಮ್ಮೆಲ್ಲರ ಮೇಲೆ ಸದಾ ಕಾಲ ಬಿದ್ದಿರುವದನ್ನು ನೋಡಿ ನಾವು ಭಯದಿಂದ ತತ್ತರಿಸುತ್ತೇವೆ. ಆದ್ದರಿಂದ ನಾವು ನಿರ್ಭಯರಾಗಿ, ಬದುಕಿ ಇದ್ದಷ್ಟು ಕಾಲವನ್ನು ಸುಖ, ಶಾಂತಿ ಮತ್ತು ಸಮಾಧಾನದಿಂದ ಕಳೆಯುವಂತೆ ನಮ್ಮ ತತ್ವಜ್ಞಾನಿಗಳೂ ಪಾರಮಾರ್ಥಿಗಳೂ ಕೂಡಿ—ಮರಣವು ಸತ್ಯವಲ್ಲ, 'ನಾವು ಅಮರರಾಗಿರಬಹುದು—ಎಂಬೀ ಮೊದಲಾದ ಮನಮೋಹಕ ಮಾತುಗಳಿಂದ, ಮನುಷ್ಯನಿಗೆ ಸಾವಿರಾರು ವರ್ಷಗಳಿಂದ ಬೋಧಿಸುತ್ತ ಬಂದಿದ್ದಾರೆ. ತತ್ವಜ್ಞಾನಿಗಳ ಮತ್ತು ಪಾರಮಾರ್ಥಿಗಳ ಬೋಧನೆಯ ಮಾತುಗಳು, ಬೇರೆ ಬೇರೆ ಗುಣ ಸ್ವಭಾವಗಳ ಜನರ ಮನೋಸ್ಥಿತಿಗೊಪ್ಪುವಂತೆ ಹಲವು ತೆರನಾಗಿರುವವು ಇವುಗಳ ಉತ್ಕೃಷ್ಟವಾದ ನೀತಿಯು ಅಡಕವಾಗಿರುವ'ದನ್ನು ನಾವು ಅಲ್ಲಗಳೆಯುವುದಿಲ್ಲವಾದರೂ, ಹೇಗಾದರೂ ಮಾಡಿ ಮನುಷ್ಯನು ಮರಣದ ಭಯದಿಂದ ದೂರನಾಗಿರಬೇಕೆಂಬ ಅಭಿಪ್ರಾಯದಿಂದ ಅವುಗಳಲ್ಲಿ ಪಾರಲೌಕಿಕ ವಿಚಾರಗಳು ಸೇರಿಸಲ್ಪಟ್ಟಿವೆ ಎಂಬುದನ್ನು ಒಪ್ಪಲೇಬೇಕು

ಮರಣದ ಅನಂತರ ಜೀವಿಗೆ ಏನಾಗುತ್ತದೆಂಬುದನ್ನು ವಿಜ್ಞಾನವು ಇದುವರೆಗೆ ಶೋಧಿಸಿ ತಿಳಿದಿರುವದಿಲ್ಲ, ವಿಜ್ಞಾನದ ಮೂಲಕ ಪಾರಲೌಕಿಕ ಸತ್ಯವನ್ನು ತಿಳಿಯದೆ ಇರುವ ಕಾರಣ, ನಾವು ತತ್ವಜ್ಞಾನಿಗಳ ಮತ್ತು ಪಾರಮಾರ್ಥಿಗಳ ವಿಶ್ವಾಸದ ಮಾತುಗಳನ್ನು ನಂಬಿಕೊಂಡು ಇರಬೇಕಾಗುತ್ತದೆ ಪರಂತು ಒಂದು ವಿಷಯವನ್ನು ಮಾತ್ರ 'ಹೀಗೆಯೇ ಸರಿ' ಎಂದು ಹೇಳಬಹುದು. ಸತ್ತ ಕೂಡಲೇ ಜೀವಿಯ ಏನೋ ಒಂದು ಅಂಶವು ಶರೀರವನ್ನು ಬಿಟ್ಟು ಹೋಗುತ್ತದೆಂಬ ತಾತ್ವಿಕರ ಮತ್ತು ಪಾರಮಾರ್ಥಿಗಳ ಮಾತನ್ನು ವಿಜ್ಞಾನಿಗಳು ಒಪ್ಪುವದಿಲ್ಲ ಮುಸ್ತಿಷ್ಕದ ತನ್ನುವ್ಯಕ್ತಿ[illegible] ಜೀವಿತನ ಸಿದ್ಧಾಂತವಾಗುವದಿಲ್ಲ. ಒಂದು ಬಾವು ಅಥವಾ ಶಕ್ತಿಯ ಗಾಯದಿಂದ ಒಬ್ಬ ಮಸ್ತಿಷ್ಕವು ಸ್ವಲ್ಪ ಸ್ವಲ್ಪವಾಗಿ ನಾಶವಾಗುತ್ತ, ಒಂದು ಸಮಯ ಅದು ತನ್ನ ಪೂರ್ಣ ಪ್ರಜ್ಞೆಯನ್ನು ಕಳಕೊಂಡರೆ ಆ ಮನುಷ್ಯನಲ್ಲಿ ವ್ಯಕ್ತಿತ್ವವು ಲವಲೇಶ ಉಳಿಯದಿದ್ದರೂ ಅದು ಮಾತ್ರ ಬದುಕಿದ್ದ ನಿದರ್ಶನಗಳು ಹಲವು ಇರುತ್ತವೆ

ಬೇರೆ ಬೇರೆ ವರ್ಗದ ಪ್ರಾಣಿಗಳ ಜೀವನಾವಧಿಯು ಕೆಲವು ತಾಸುಗಳಿಂದ ನೂರಿನ್ನೂರು ವರ್ಷಗಳ ತನಕ ಬೇರೆ ಬೇರೆಯಾಗಿರುವುದನ್ನು ನೋಡಿ ವಿಜ್ಞಾನಿಗೆ ಬಹಳ ಆಶ್ಚರ್ಯವಾಗಿದೆ ಜೀವಿಗಳ ಶಾರೀರಿಕ ಪರಿಮಾಣ, ಅವುಗಳ ಕಾರ್ಯಾಸಕ್ತಿ ಅಥವಾ ಜೀವನದ ಅನುಭವ ಯಾವುದರ ಮೇಲಿಂದಲೂ ಈ ವಯೋಮಾನದ ಅಂತರವು ಯಾಕಿರುತ್ತದೆಂಬುದನ್ನು ಹೇಳಲಿಕ್ಕೆ ಬಂದಿರುವದಿಲ್ಲ ಬೇಗನೇ ಅಥವಾ ತಡವಾಗಿ ಎಲ್ಲರೂ ಸಾಯಬೇಕಾಗಿದೆಯಾದರೂ ಅವರೆಲ್ಲರು ಒಂದೇ ಪ್ರಾಯದಲ್ಲಿ ಸಾಯುವದಿಲ್ಲ ಆದ್ದರಿಂದ ಮರಣವು ಯಾಕೆ ಬರುತ್ತದೆ ಮತ್ತು ಮರಣಕಾಲವು ಬೇರೆ ಬೇರೆ ವರ್ಗ ಮತ್ತು ವ್ಯಕ್ತಿಗಳಲ್ಲಿ ಬೇರೆ ಬೇರೆಯಾಗಿ ಯಾಕೆ ಇರುತ್ತದೆ ಎಂಬೆರಡು ಸಮಸ್ಯೆಗಳು ನಮ್ಮ ಮುಂದೆ ಉಪಸ್ಥಿತವಾಗಿವೆ.

ಸಮಾಜದಿಂದ ಭಿನ್ನನಾದವನ ಮೇಲೆ ~~ಸಾಮಾಜಿಕ ಬಹಿಷ್ಕಾರವು ಬಂದು ಬೀಳುವಂತೆ~~ ಜೀವಿಗಳು ಒಂದರಿಂದೊಂದು ಭಿನ್ನವಾಗಿರುವ ಕಾರಣದಿಂದಲೇ ಬಹಿಷ್ಕಾರ ರೂಪವಾದ ಮರಣವು ಅವುಗಳಿಗೆ ಪ್ರಾಪ್ತವಾಗುತ್ತದೆಂದು ಹೇಳಬಹುದು ಕೆಸರು ನೀರಿನಲ್ಲಿ ಲಕ್ಷೋಪಲಕ್ಷ ಒಂದರೆಯ ಜೀವಿಗಳು ವಾಸವಾಗಿವೆ ಇವುಗಳಿಗೆ ನಮಗಿರುವಂತೆ ಸ್ವಾಭಾವಿಕ ಮರಣವೆಂಬುದು ಇಲ್ಲವೇ ಇಲ್ಲ ಅವುಗಳಲ್ಲಿ ಪ್ರತಿಯೊಂದು, ಒಂದೊಂದು ಸ್ಥಿತಿಯ ತನಕ ಬೆಳೆದು ಅನಂತರ ಎರಡಾಗಿ ಒಡೆದು ಪುನಃ ಬೆಳೆಯುವ ಕ್ರಮವನ್ನಿಟ್ಟುಕೊಂಡಿವೆ. ಆಹಾರ, ಶಾಖ, ಮತ್ತು ಆರ್ದ್ರತೆಯು ಬೇಕಾದಷ್ಟು ಇರುವ ಕಾಲ, ಅವು ಇದೇ ರೀತಿ ಬೆಳೆಯುತ್ತವೆ ಈ ಒಂದರೆಯ ಜೀವಿಗಳಲ್ಲಿ ಭಿನ್ನತೆಯು ಇಲ್ಲದಿರುವದರಿಂದ ಅವು ಸಾಯುವದಿಲ್ಲ, ಅಮರವಾಗಿವೆ.

ಬಹು ಅರೆಯ ಜೀವಕೋಟಿಗೆ ಸೇರಿದ ಮನುಷ್ಯ ಮತ್ತು ಇತರ ಪ್ರಾಣಿಗಳಲ್ಲಿ ಕೂಡ ಒಂದು ದೃಷ್ಟಿಯಿಂದ ವಿಚಾರಮಾಡಿದರೆ—ಸ್ವಾಭಾವಿಕ ಮರಣವು ಇರುವದಿಲ್ಲವೆಂದೂ, ಅವುಗಳೂ ಅಮರವಾಗಿರುವವೆಂದೂ ನಾವು ಹೇಳಬಹುದು ಬಹು ಅರೆಯ ಜೀವಿಗಳಲ್ಲಿರುವ ಬೇರೆ ಬೇರೆ ಜಾತಿಯ ಅರೆಗಳಲ್ಲಿ ಒಂದರೆಯ ಜೀವಿಗಳಲ್ಲಿರುವಂತೆಯೇ ಅನಂತ ಜೀವನದ ಪ್ರವಾಹವು ಪ್ರವಹಿಸಿಕೊಂಡು ಇರುತ್ತದೆ ಈ ಪ್ರವಾಹವು ಜೀವಿಗಳ ಹಳೆಯ ಶರೀರದಿಂದ ಹೊಸ ಶರೀರಗಳಿಗೆ ಹರಿಯುತ್ತ ಇರುತ್ತದೆ ಈ ಬೇರೆ ಬೇರೆ ಜಾತಿಯ ಅರೆಗಳು ಯಾವಾಗ ಹುಟ್ಟಿದುವು ಮತ್ತು ಯಾವಾಗ ಸಾಯುವವು ಎಂಬುದನ್ನು ಹೇಳುವದ ಯಾರಿಂಗೂ ಸಾಧ್ಯವಲ್ಲ ಪ್ರಪಂಚದ ಲಯದೊಂದಿಗೆ ಅವುಗಳ ಲಯವೆಂದೂ ಹೇಳಬಹುದ

ಮೇಲೆ ಹೇಳಿದ ಎಲ್ಲಾ ವಿಷಯಗಳಿಂದ ಎರಡು ಸಂಗತಿಗಳು ತಿಳಿಯುತ್ತವೆ ಸ್ವಾಭಾವಿಕ ಮರಣ ಇರುವದಿಲ್ಲ ಬಹುಅರೆಯ ಜೀವಿಗಳಿಗೆ ಮಾತ್ರ ಇಂಥ ಮರಣವು ಇರುತ್ತದೆ ಎರಡನೆಯದಾಗಿ—ಬಹುಅರೆಯ ಜೀವಿಗಳಲ್ಲಿರುವ ಒಂದೊಂದು ಜಾತಿಯ ಅರೆಗೂ ಸ್ವಾಭಾವಿಕ ಮರಣವು ಇರವದಿಲ್ಲ ಅದೂ ಒಂದರೆಯ ಜೀವಿಯಂತೆ ಅಮರವಾಗಿರುತ್ತವೆ

ಪ್ರಾಣಿಗಳ ಗುಲ್ಮ, ಹೃದಯ, ಮೂತ್ರಪಿಂಡ ಮೊದಲಾದ ಬೇರೆ ಬೇರೆ ಗ್ರಂಥಿಗಳನ್ನು ಅವುಗಳ ಶರೀರದಿಂದ ಬೇರೆಯಾಗಿ ತೆಗೆದಿಟ್ಟಾಗಲೂ ಅನುಕೂಲ ಪರಿಸ್ಥಿತಿ ಮತ್ತು ವಾತಾವರಣದಲ್ಲಿ ಅವುಗಳು ಪರಿಮಾಣ ಮತ್ತು ಭಾರದಲ್ಲಿ ಹೆಚ್ಚಾಗಿ ಬೆಳೆದು ಬಂದುದು ಪರಿಶೋಧನೆಯಿಂದ ತಿಳಿದುಬಂದಿದೆ ಈ ಗ್ರಂಥಿಗಳಲ್ಲಿರುವ ಅರೆಗಳು, ಒಂದರೆ ಜೀವಿಗಳಂತೆ ಬೆಳೆದು ಒಡೆದು ಪುನಃ ಬೆಳೆದುದೇ ಹೀಗಾಗಲಿಕ್ಕೆ ಕಾರಣವಾಗಿರುವದು ಆದಕಾರಣ ಒಂದರೆಯ ಮತ್ತು ಬಹುಅರೆಯ ಜೀವಿಗಳ ಶರೀರದ ರಚನಾ ಭೇದ ಹಾಗೂ ಆ ಜೀವಿಗಳ ಅಂಗೋಪಾಂಗಗಳನ್ನು ಅವುಗಳ ಶರೀರದ ಒಳಗೆ ಅವುಗಳ ಸ್ಥಾನದಲ್ಲಿ, ಅಥವಾ ಶರೀರದ ಹೊರಗೆ ಅನ್ಯತ್ರ ಇಟ್ಟಾಗ ಆಗುವ ಸ್ಥಿತ್ಯಂತರದಲ್ಲಿಯೇ ಬಹುಅರೆಯ ಜೀವಿಗಳ ಮರಣವು ಅಡಕವಾಗಿರುತ್ತದೆಂಬುದು ಸ್ಪಷ್ಟವಾಗುತ್ತದೆ

ಮನುಷ್ಯನು ಅಮರನಾಗುವದು ಸಾಧ್ಯವೆ? ಎಂಬ ಪ್ರಶ್ನೆಗೆ ವಿಜ್ಞಾನಿಯು ಹೀಗೆ ದು ಉತ್ತರ ಕೊಡುತ್ತಾನೆ ಮನುಷ್ಯನೆಂದರೆ ಯಂತ್ರದೋಪಾದಿ ಚಲಿಸುತ್ತಿರುವ ಅವನ ಭೌತಿಕ ಶರೀರವಲ್ಲದೆ ಬೇರೇನೂ ಆಗಿರುವದಿಲ್ಲವೆಂದು ಅವನ ಅಭಿಪ್ರಾಯವಾಗಿರುವದಾದರೆ, ಮನುಷ್ಯನು ಅಮರನಾಗುವದು ಸುಲಭವಾಗಿದೆ ಅವನ ಶರೀರದ ಬೇರೆ ಬೇರೆ ಅಂಗಗಳನ್ನು ತೆಗೆದು ಅನುಕೂಲ ಪರಿಸ್ಥಿತಿ ಮತ್ತು ವಾತಾವರಣದಲ್ಲಿ ಇಟ್ಟರೆ ಅವುಗಳನ್ನು ಜಾಗ್ರತೆಯಿಂದ ಬೆಳೆಯುತ್ತ, ಒಡೆಯುತ್ತ ಬೆಳೆಯುತ್ತ ಸದಾ ಕಾಲ ಬದುಕಿಕೊಂಡು ಇರುವವು ಆದರೆ ಮನುಷ್ಯನೆಂದು ಹೇಳುವಂಥಾದ್ದು, ಯಂತ್ರದಂತೆ ಚಲಿಸುತ್ತಿರುವ ಅವನ ಭೌತಿಕ ಶರೀರಕ್ಕೆ ಅಲ್ಲ ವ್ಯಕ್ತಿತ್ವದಿಂದ ಕೂಡಿದ ಶರೀರವೇ ಮನುಷ್ಯನಾಗಿದ್ದಾನೆ ಶರೀರದ ಅಂಗೋಪಾಂಗಗಳನ್ನು ಕತ್ತರಿಸಿ ಬೇರೆಯಾಗಿ ಇಟ್ಟರೆ ಮನುಷ್ಯನ ವ್ಯಕ್ತಿತ್ವವು ಹೋಗಿಬಿಡುತ್ತದೆ ಆದ್ದರಿಂದ ಮರಣವೆಂಬುದು ನಿಜವಾಗಿ ವ್ಯಕ್ತಿತ್ವಕ್ಕೆ ಇರುತ್ತದೆಯೇ ಹೊರತು ಶರೀರಕ್ಕಲ್ಲ ವ್ಯಕ್ತಿತ್ವವು ಇಲ್ಲದ ಮನುಷ್ಯನು ಅಥವಾ ಅವನ ಅಂಗಭಾಗಗಳು ಎಷ್ಟು ಕಾಲ ಬದುಕಿದ್ದರೂ ಪ್ರಯೋಜನವಿಲ್ಲ ಹೀಗಾಗಿ ಮನುಷ್ಯನು ವ್ಯಕ್ತಿತ್ವವನ್ನು ಕಾಪಾಡಿಕೊಂಡು ಅಮರನಾಗಿ ಇರುವದು ಸಾಧ್ಯವೆಂದು ವೈಜ್ಞಾನಿಕ ದೃಷ್ಟಿಗೆ ತೋರುವದಿಲ್ಲ

ಮನುಷ್ಯನು ಅಮರನಾಗದಿದ್ದರೂ ದೀರ್ಘಕಾಲ ಬದುಕಿ ಬಾಳಿಕೊಂಡಿರಬಹುದು. ಒಬ್ಬನ ತಂದೆ ತಾಯಿ, ಅಜ್ಜ ಅಜ್ಜಿ, ಮುತ್ತಜ್ಜ ಮುತ್ತಜ್ಜಿಯರು ದೀರ್ಘ ಜೀವಿಗಳಾಗಿದ್ದರೆ ಅವನೂ ದೀರ್ಘಜೀವಿಯಾಗುವನು. ದೀರ್ಘಜೀವಿಗಳಾಗಬೇಕೆನ್ನುವವರು ದೀರ್ಘಜೀವಿಗಳ ವಂಶದಲ್ಲಿ ಹುಟ್ಟಿದರೆ ಇಚ್ಛಿತ ಫಲವು ಪ್ರಾಪ್ತಿಯಾಗುತ್ತದೆ. ಒಬ್ಬನ ಜೀವಮಾನವನ್ನು ತಿಳಿಯಲಿಕ್ಕೆ ಅವನ ವಂಶದ ಕೂಲಂಕುಶ ವಿವರಗಳು ಮುಖ್ಯ ಸಾಧನಗಳಾಗಿವೆ. ಶೇಕಡಾ ೫೦ರಿಂದ ೭೫ರ ತನಕ ಜನರ ಸ್ವಾಭಾವಿಕ ಮರಣಕಾಲವನ್ನು ಅವರ ವಂಶವೃಕ್ಷವನ್ನು ನೋಡಿಯೇ ಹೇಳಬಹುದು. ಸಾಮಾನ್ಯವಾಗಿ ನೈರ್ಮಲ್ಯ ಅಥವಾ ಔಷಧೋಪಚಾರದಿಂದ ಅವರ ಆಯುಃಪ್ರಮಾಣದಲ್ಲಿ ಹೆಚ್ಚುಕಡಿಮೆಗಳಾಗುವುದಿಲ್ಲ

ಒಂದು ತಲಾಂತರದ ಜನರು ಇನ್ನೊಂದು ತಲಾಂತರದವರಿಗೆ ಜನ್ಮ ಕೊಡುತ್ತಾರೆ ಈ ರೀತಿ ಜೀವನದ ಪ್ರವಾಹವು ದೊಡ್ಡ ದೊಡ್ಡದಾಗುತ್ತ ಹರಿಯುತ್ತದೆ ಈ ತತ್ವವನ್ನು ನಾವು ಎಷ್ಟು ಚೆನ್ನಾಗಿ ತಿಳಕೊಳ್ಳುತ್ತೇವೋ, ಅಷ್ಟಕ್ಕೆ ಒಬ್ಬೊಬ್ಬ ವ್ಯಕ್ತಿಯು ಅಮರನಾಗುವ ಅಥವಾ ಮುಕ್ತನಾಗುವ ಭಾವನೆಯು ಲುಪ್ತವಾಗಿ ವ್ಯಕ್ತಿಯು ಕೂಡಿದ ಸಮಾಜವು ಅಮರ ಅಥವಾ ಮುಕ್ತವಾಗುವ ಭಾವನೆಯು ಹುಟ್ಟಿ ಹರಡಿಕೊಳ್ಳುವದು ಇದರಿಂದ ಸಮಾಜಕ್ಕೆ ಲಾಭವಿದೆ ಮನುಷ್ಯನು ತನ್ನಲ್ಲಿ ಸಮಾಜವನ್ನೂ ಸಮಾಜದಲ್ಲಿ ತನ್ನನ್ನೂ ಗುರುತಿಸುವನು ಅವನ ಪ್ರಯತ್ನದಿಂದ ಸ್ವರ್ಗವು ಭೂಮಿಗೆ [illegible] ತಪ್ಪದಿರದೆ 'ತೌನ್, ತ್ವಮ್' ಅಂಶದಿಂದ ಪ್ರಪಂಚವು ಆಗಿದೆ ಎಂಬ ಯಥಾರ್ಥ ಭಾವನೆಯು ಮನುಷ್ಯನಿಗೆ ಉಂಟಾದರೆ, ಲೋಕೋದ್ಧಾರಕ್ಕೆ ಮತ್ತೇನ ಬೇಕಾಗಿದೆ? ಅಷ್ಟೇ ಸಾಕು

FOR SALE

Lorry S K No 1047 (1936 model Dodge) in good condition is offered for sale Write for particulars to

'X'

C/o Swadeshabimani.

ಇಂಗ್ಲೆಂಡಿನಲ್ಲಿ ಘಟೋತ್ಕಚ ಬಾಧೆ

ಲೋರ್ಡ್ ನಫೀಲ್ಡ್‌ರನ್ನು ಕದ್ದೊಯ್ಯುವ ಹಂಚಿಕೆ

★ ★ ★

ಹದಿನೈದು ಲಕ್ಷರೂಪಾಯಿ ಕೊಟ್ಟರೆ ಬಂಧವಿಮೋಚನೆ

★

ಲಾರ್ಡ್ ನಫೀಲ್ಡರೆಂಬವರು ಮೋಟರು ಕಾರ್ಖಾನೆಯ ಕಾರ್ಖಾನಾಧನಿಗಳೂ 8-10ಮಿಲ್ಲಿಯ ಪವನು ದಾನಾರ್ಥವಾಗಿ ಕೊಟ್ಟವರು ಆಗಿರುವ ಶ್ರೀಮಂತರನ್ನು, ಘಟೋತ್ಕಚನು ಕನಕಾಂಗಿಯನ್ನು ಕದ್ದೊಯ್ದಂತೆ ಕದ್ದೊಯ್ದು, ಹದಿನೈದು ಲಕ್ಷರೂಪಾಯಿ ದೊರೆತರೆ ಮಾತ್ರ ಬಿಡುಗಡೆ ಮಾಡುವುದಾಗಿ ನಡೆದ ದೊಡ್ಡದೊಂದು ಒಳಸಂಚು ಈಗ ಲಂಡನಿನ ಕೋರ್ಟಿನಲ್ಲಿ ಮೊಕದ್ದಮಾ ವಿಚಾರ ಕಾಲದಲ್ಲಿ ಪ್ರಕಟವಾಗಿದೆ

ಥೋರ್ನಟನ್ ಎಂಬಾತನೇ ಈ ಘಟೋತ್ಕಚನು. ಲೋರ್ಡ ನಫೀಲ್ಡ್‌ರ ದಾನ ಬದ್ಧಿಗೆ ಮೆಚ್ಚಿ ಅವರನ್ನು ಅಭಿವಂದಿಸ ಬಂದ ಅಮೇರಿಕನ್ ಪತ್ರಿಕಾ ಲೇಖಕನಂತೆ ವೇಷಧಾರಿಯಾಗಿ ಲೋರ್ಡರನ್ನು ಕಂಡು, ಅವರ ನಿರ್ಮಾಣ ಮಾಡಿರುವ ಹೊಸ ಆಸ್ಪತ್ರೆಯನ್ನು ಕಾಣಬೇಕೆಂದು ಅವರೊಡನೆ ಅವರ ಬಂಗಲೆಯಿಂದ ಹೊರಡುವುದಾಗಿ ನಿರ್ಧರಿಸಿದ್ದನು.

ಹಾಗೆ ಅವರು ಆಸ್ಪತ್ರೆಗೆ ಹೊರಡಲು ಸಿದ್ಧರಾಗುತ್ತಲೇ, ಅವರಿಗೊಂದು ಪತ್ರವನ್ನು ಕೊಡಲಾಗುವುದು. ಥೋರ್ನಟನನು ಹೀಗೆ ಒಕ್ಕಣಿಸಿದನು — ನನ್ನ ಚೀಲದಲ್ಲಿ ಎರಡು ರಿವಾಲ್ವರುಗಳೂ ಮದ್ದು ಗುಂಡೂ ಇವೆ 'ಢಂ' ಎಂದು ಅತ್ತಿತ್ತ ಕೂಗಿಟ್ಟರೆ ಕೂಡಲೆ ಕೊಟ್ಟಿಗೇ ಹೊಡೆವೆನು ನನ್ನ ಕಾರು ಹೊರಗಿದೆ ಅಲ್ಲಿಗೆ ಬಾ ಯಾರೂ ತಡೆದಲ್ಲಿ ನಿನಗೆ ಮರಣ ನೋಯುವಾಗಲಿಲ್ಲ ನಗುತ್ತಿರು ಹೇಳಿದಂತೆ ಮಾಡು ಎಂದಿತ್ತು ಬರೆದು.

ಥೋರ್ನಟನನ್ನು ಪೋಲೀಸರು ಕೈದ ಮಾಡಿದಾಗ, ಅವನ ಚೀಲದಲ್ಲಿ ರಿವಾಲ್ವರುಗಳೂ ಇದ್ದವು ಗುಂಡುಗಳೂ ಇದ್ದವು ತೋಟಾ ತುಂಬಿಸಿಲ್ಲವೆಂದು ಅವನೆಂದನು.

ಆ ಪತ್ರವು ಕೇವಲ ಯಾವುದೊಂದು ಸಿನೆಮಾ ನಾಟಕ ರಚನೆಗಾಗಿ ಬರೆದುದ್ದು ಹೊರತು ಲೋರ್ಡರಿಗೆ ಕೊಡುವುದಕ್ಕಲ್ಲ ಎಂದನು

ಥೋರ್ನಟನನ ಒಂದು ಯೋಜನೆಯನ್ನು ರಹಸ್ಯ ಬಾಯಿಗೆ ಮಾಡಿ ಕಾದಿಟ್ಟುದೂ ಸಾಹುಕಾರನೊಬ್ಬನ ಮಾತಿನಿಂದ ತಿಳಿದು ಬಂದಿದೆ

ಪೋಲಿಸರು, ಥೋರ್ನಟನಿಗೆ ಗೆಳೆಯನಾದನೊಬ್ಬನನ್ನು ಎತ್ತಿತಂದರು. ಇವನ ಹೆಸರು ರೀವ್ಸ್‌ಡನ್ ಬ್ರಿಟಿಷ ಸೇನಾಂಗದಲ್ಲಿದ್ದ ಅಧಿಕಾರಿ. "ನಫೀಲ್ಡರನ್ನು ದೋಣಿಗೊಯ್ದು ಬಳಿಕ ಅವರ ಮೇಲೆ ಶಸ್ತ್ರಕ್ರಿಯೆ ನಡೆಸುತಿರು" ಎಂದು ಥೋರ್ನಟನನು ಹೇಳಿದ್ದನೆಂದೂ, ಹಾಗೆ ಕದ್ದೊಯ್ದ ಮರುದಿನವೇ ವಾಯರ್ಲೆಸ್ ಮೂಲಕವಾಗಿ ಒಂದು ಲಕ್ಷ ಪವನು ಬೇಂಕಿನವರು ಥೋರ್ನಟನನಿಗೆ ಕೊಡುವಂತೆ ನಫೀಲ್ಡರು ತಿಳಿಸುವಂತೆ ಮಾಡುವ ನೆಂಬೂ, ಅತನು ಮತ್ತೊಂದು ಹೆಸರಿನ ಬೇಂಕಿನಿಂದ ಆ ಹಣ ಪಡೆದು, ನಫೀಲ್ಡರ ಕಣ್ಣಿಗೆ ಅಂಟಿನ ಪಟ್ಟಿ ಹಚ್ಚಿ ಕಂಪಾರ್ಟಮೆಂಟಿನಲ್ಲಿ ಬಿಡುಗಡೆ ಮಾಡುವುದೆಂದೂ ನಿಶ್ಚಿತವಾಗಿತ್ತು. ರೀವ್ಸ್‌ಡನನಿಗೆ ಈ ರೀತಿಯ ಯೋಜನೆ ಪೋಲಿಸರ ಅನುಜ್ಞೆಯಂತೆ ಥೋರ್ನಟನನು ಈ ಕೃತಿಮಾಡದಂತೆ ಸಾಧಿಸಿದರು ಅದ ವ್ಯರ್ಥವಾಯಿತು. ಆಗ ರೀವ್ಸ್‌ಡನನು ನಫೀಲ್ಡರಿಗೆ ಇದನ್ನೆಲ್ಲ ಗೋಪನದಲ್ಲಿ ತಿಳಿಸಿ, ಮುಂದೆ ಪೋಲೀಸರಿಗೂ ಸೂಚಿಸಿ, ಹುಚ್ಚಿಯಿಂದ ಥೋರ್ನಟನನ ಕೈದ ಆಗುವಂತೆ ಮಾಡಿದರು !

ಈಗ ವಿಚಾರಣೆ ನಡೆಯುತ್ತಿದೆ

ಜಮೇಯಿಕ

ಹಿಂದೀಯರು ನೆಲೆಮಾಡಿಕೊಂಡಿರುವ ದ್ವೀಪ ಮುಷ್ಕರಗಳು — ದಂಗೆಗಳು

ಈ ದ್ವೀಪದಲ್ಲಿ ಹನ್ನೊಂದೂವರೆ ಲಕ್ಷ ಜನಸಂಖ್ಯೆಯಿದೆ ಇವರೊಳಗೆ 16,000 ಯುರೋಪಿಯರು, ಎಂಟೂವರೆ ಲಕ್ಷ ನಿಗ್ರೋಗಳು, ಉಳಿದವರು ಹಿಂದೀಯರು ಚೀನಿಯರು ಮೊದಲಾದವರು.

ಇಂಗ್ಲೆಂಡಿನ ವಸಾಹತು ಎಲ್ಲಾವೆ ಇದರ ಆಡಳಿತ ನೋಡುವುದಾದರೂ, ಹೆಚ್ಚಿನ ಮಟ್ಟಿಗೆ ಸ್ವರಾಜ್ಯವೇ ಇದೆ ನ್ಯಾಯಸಭೆಗೆ 29 ಮಂದಿ ಸದಸ್ಯರ 15 ಮಂದಿಯನ್ನು ಗವರ್ನರು ನೇಮಕ ಮಾಡುವರು. 14 ಮಾತ್ರ ಚುನಾಯಿತರು ಹೀಗಾಗಿ ಗವರ್ನರರ ಕರ್ತೃ ಸಭೆ ಬಂದಿರುವಂತಾಗಿದೆ

ಸ್ಥಳೀಯ ಇತರ ಬ್ರಿಟಿಷ ವ್ಯಾಪಾರಿಗಳು—ಇವರ ಪ್ರತಿನಿಧಿಗಳ ಸಮಾಗಮದಿಂದ ವರೊಳಗೆ ಸೇರುವರು ನಿಗ್ರೋಗಳಿಗೆ ಕೇಳುವವರು ಅಂತೆಯೆ ಹಿಂದೀಯರು

MIRA TOILET ARTICLES

MIRA PRODUCTS are of such excellence that they could compare favourably with the famous perfumes and toilet articles used by Indian Rulers in the glorious past.

H H The Maharajah of Sonepur

The Hon'ble Mr. B. K. Basu, C. I. E.

"MIRA" Products are in no way inferior to similar foreign products.

Sole Agents

The Modern Trading Company,

Opp. City Press, MANGALORE

Wanted a Canvassar to Book orders for Mira Products on pay or commission.

ಮೊದಲೆಲ್ಲ 1884ನೇ ಇಸವಿಯ ತನಕ, ಗುಲಾಮರನ್ನು ತಂದು ಇಲ್ಲಿನ ಕೃಷಿ ಸಾಗುತಿತ್ತು. ಈಗ ಗುಲಾಮಗಿರಿ ಇಲ್ಲವಾದರೂ, ಆ ಗಿರಿ ಹತ್ತಿದ ಸಂಕಟವಿನ್ನೂ ಇದೆ. ಮಜೂರಿ ಅತ್ಯಲ್ಪ. ಜನರ ಸ್ಥಿತಿ ಅತಿ ನಿಕೃಷ್ಟ. ಎಷ್ಟೆಂದರೂ ಗುಲಾಮರನ್ನೆ ಕಂಡಂತೆ ಎಲ್ಲಿ ಕೆಲಸಗಾರರನ್ನು ಇನ್ನೂ ಕಾಣುತ್ತಿರುವರು.

ಮುಖ್ಯವಾಗಿ ಇಲ್ಲಿ ಕಬ್ಬು ಬೆಳಸಿ, ಸಕ್ಕರೆ ಮಾಡುವರು. ಸಕ್ಕರೆ ಕಾರ್ಖಾನೆಗಳಲ್ಲಿ ಈಗ ದಿನಕ್ಕೆ 2 ಶಿಲಿಂಗ್ ಮಜೂರಿ ಇದೆ. ಅದು 4 ಶಿಲಿಂಗ್ ಆಗಬೇಕೆಂದು ಕೂಲಿಯವರ ಕೇಳಿಕೆ ಇದನ್ನು ಕಾರ್ಖಾನೆಯು ಕೊಡುವುದಿಲ್ಲ

ಕಬ್ಬಿನ ಸಕ್ಕರೆಗೆ ವಿರುದ್ಧವಾಗಿ ಬೀಟ್ ಸಕ್ಕರೆ ತಯಾರಿಸುವಂತೆ ಇಂಗ್ಲೆಂಡಿನಲ್ಲಿ, ಜನರಿಂದ ತೆರಿಗೆ ಎತ್ತಿ, ಸರಕಾರವು ಇದು ವರೆಗೆ ಬೀಟ್ ಸಕ್ಕರೆ ಕಾರ್ಖಾನೆಗಳಿಗೆ 40 ಮಿಲ್ಲಿಯ ಪವನು ಕೊಟ್ಟು, ಆ ಕೈಗಾರಿಕೆಗೆ ಬೆಂಬಲ ನಿಂತಿದೆ ಇದರಿಂದ ಕಬ್ಬಿನ ಸಕ್ಕರೆಗ ಉಪವಾಸ ಕೂಲಿಯವರಿಗೆ ಇದರಿಂದ ಇನ್ನಷ್ಟು ದಾರಿದ್ರ್ಯ

ಬೀಟ್ ಸಕ್ಕರೆ ನಿಲ್ಲಿಸಿ, ಕಬ್ಬಿನ ಸಕ್ಕರೆ ಆಧರಿಸಿತೆಂದರೆ ಸರಕಾರವು ಒಲ್ಲದು. ಒಂದು ವರ್ಷದಿಂದಲೂ ಈ ಕಚ್ಚಾಟ ನಡೆದಿದೆ. ಹೀಗಾಗಿ ಮುಷ್ಕರವಾಯಿತು ದಂಗೆಯೂ ಆಯಿತು ಕೆಲವರು ಸತ್ತರು, ಹಲವರು ಗಾಯಗೊಂಡರು

ಈಗೇನೋ ಶಾಂತವಾಗಿದೆಯಂತೆ, ನಂಬಲಿರುವುದಿಲ್ಲ

ಜವಹಿರಲಾಲರ ಪರದೇಶ ಪ್ರವಾಸದಿಂದ ಲಾಭವೇನು?

ಜವಾಹಿರಲಾಲರ ಪರದೇಶದಲ್ಲಿಯ ಕಾರ್ಯಕಲಾಪಗಳು, ಚಲನವಲನಗಳು, ಹಿಂದೀಯರಿಂದ ಅತ್ಯಾತುರದಿಂದ ಊಹಿಸಲಾಗುವುವು ಸ್ಪೈನ್ ಇಂಡಿಯಾ ಕಮಿಟಿಯವರ ಕೆಲಸವು, ಆ ದೇಶದವರೊಳಗೂ ಇಲ್ಲಿಯವರೊಳಗೂ [illegible] ಜವಾಹಿರಲಾಲರ ಸ್ಪೈನ್ ಸಂದರ್ಶನದಿಂದಾಗಿ [illegible] ಇನ್ನೂ ಬಲಪಡುವುದೆಂಬುದರಲ್ಲಿ ಸಿಸ್ಸಂದೇಹ

[illegible], ಇಂಗ್ಲಾಂಡಿನಲ್ಲಿ ಈ [illegible] ಅವರ ಸಾನಿಧ್ಯವು [illegible] ಉಪಕಾರಿಯಾಗಬಹುದು ಲೋರ್ಡ್ ಲೋಥಿಯನ್ ಮೊದಲಾದ ಲೋರ್ಡ್ ಮಹಾಶಯರ ಉಂಟುಮಾಡಿದ ತಿರುಕುಳವನ್ನು ಕಿತ್ತುಗೆಯುವುದು ಅತ್ಯಗತ್ಯ. ಫೆಡರಲ್ ಯೋಜನೆಯು ಕುರಿತ [illegible] ಅಭಿಪ್ರಾಯದ ತಪ್ಪು ಭಾವನೆಗಳನ್ನು ಇಂಡಿಯಾದ ಪೊಲಿಟೀಶಿಯನರ [illegible] ಉಂಟುಮಾಡಿದ್ದರೆ ಅದನ್ನು [illegible] ಈ ಕಾರ್ಯವನ್ನು ಮಾಡಲು ಯೋಗ್ಯರೆ ಸಿವರಿರೊಳಗೆ, ವಿಚಕ್ಷಣತೆಯ [illegible] ಅವನ್ನು ಕೈಗೊಳ್ಳಲು ಸಮರ್ಥರು ಜವಹಿರಲಾಲರಲ್ಲದೆ ಮತ್ತಾರು?

(೨ನೇ ಪುಟದಿಂದ ಮುಂದುವರಿದುದು)

[illegible] ಅಂದರೆ ಬಡವರ ಹಿತದ ಕಾಂಗ್ರೆಸ್ಸಿನ ಧೋರಣೆಯು ವರ್ಗ ತತ್ವಾನುಸಾರವಾಗಿಯೆ [illegible] ವರ್ಗ ಸಮರದ ಮೂಲ ತತ್ವವೇ ಬೇಡವೆಂದಾದರೆ, ಕಾಂಗ್ರೆಸ್ ಬಡವರದಲ್ಲವೆಂಬುದು ಸ್ಪಷ್ಟವಾಯಿತು ಮಾತ್ರವಲ್ಲ 'ಕಾಂಗ್ರೆಸ್ ಬಡವರ ಪಕ್ಷಪಾತಕ್ಕಾಗಿಯೇ ಇದೆ' ಎಂಬ ಮಾತಿನಲ್ಲಿ ಸತ್ಯವಿಲ್ಲವೆಂದಾಯಿತು ಇದಿಷ್ಟು ಮಜೂರ ಪ್ರಶ್ನೆಯಾಯಿತು ರೈತ ಸಮಸ್ಯೆಯೂ ಹೀಗೆಯೇ ಇದೆ. ಇಲ್ಲೂ ಕಾಂಗ್ರೆಸ್ಸಿನ ಪಾಲಿಗೆ ವರ್ಗ ಸಮರವನ್ನು ಇದಿರಿಸುವ ಯೋಗ ಬಂದಿದೆ.

ರೈತರ ಕಷ್ಟ ನಿವಾರಿಸುವ ಉದ್ದೇಶದಿಂದ ಸಂಯುಕ್ತ ಪ್ರಾಂತ ಮತ್ತು ಬಿಹಾರಗಳ ಎಸೆಂಬ್ಲಿಗಳಲ್ಲಿ ಈಗ ಎರಡು ಮಸೂದೆಗಳು ಚರ್ಚೆಯಲ್ಲಿವೆ. ಎಸೆಂಬ್ಲಿಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿರುವ ಜಮೀನ್ದಾರರು ಈ ಮಸೂದೆಯ ಕುರಿತು ಯಾವ ನಡತೆ ತೋರುತ್ತಿದ್ದಾರೆ ಎಂದು ನೋಡುವ. ಸಂಯುಕ್ತ ಪ್ರಾಂತದಲ್ಲಿ ಎಸೆಂಬ್ಲಿಯಲ್ಲಿರುವ ಕಾಂಗ್ರೆಸ್ ಪಕ್ಷದ 50 ಮಂದಿ ಸದಸ್ಯರು ಬೇರೊಂದು ಪಕ್ಷವನು ರಚಿಸಿ ಈ ಮಸೂದೆಯನ್ನು ಹೊಡೆದು ಹಾಕುವುದಕ್ಕಾಗಿ ಸೊಂಟಕಟ್ಟಿದ್ದಾರೆ. ಕಾಂಗ್ರೆಸ್ ಪಾರ್ಟಿಯ ಸದಸ್ಯರೊಳಗೆ ಒಕ್ಕಟ್ಟು ಹೀಗೆಯೆ? ಕಾಂಗ್ರೆಸ್ ಪಕ್ಷದಲ್ಲಿರುವ 145 ಸದಸ್ಯರಲ್ಲಿ ಈ 50 ಬೇರೆ ಬಿಡಾರ ಮಾಡಿಕೊಂಡರೆ? ಈ 50 ಮಂದಿಗಳು ಯಾರು? ಚುನಾವಣೆಯ ಪ್ರಕಟಣಾಪತ್ರದಲ್ಲಿ ಹೇಳಲ್ಪಟ್ಟಂತೆ ಬಡವರ ಉದ್ಧಾರಕ್ಕಾಗಿ ಏನೆಲ್ಲಾ ಮಾಡುವೆವೆಂದು ಪ್ರತಿಜ್ಞೆ ಕೊಟ್ಟು ಭರವಸೆ ಕೊಟ್ಟು ಕಾಂಗ್ರೆಸ್ಸಿನ ಪ್ರತಿಜ್ಞಾಬದ್ಧರಾಗಿ ಎಸೆಂಬ್ಲಿ ಸೇರಿದ ಮಹಾಶಯರಲ್ಲವೇ? ಇವರು ಕಾಂಗ್ರೆಸ್ ಸದಸ್ಯರಲ್ಲವೇ? ಇದೇಕೆ ಈಗ ಪಕ್ಷದೊಳಗೆ ಒಡಕು? ಪಾಳ್ಯದೊಳಗೇ ಕಚ್ಚಾಟ, ಕಾರಣ ಅವರ ವರ್ಗಹಿತಕ್ಕೆ ವಿರೋಧವಾಗಿ ಅವರೇ ಮಾಡುವ ಕೆಲಸಕ್ಕೆ ಅವರೊಪ್ಪರು. ಅದು ಸ್ವಾಭಾವಿಕ. ಆ ವರ್ಗ ಹಿತಸಾಧನಾ ಬುದ್ಧಿ ಇದೆ. ಅದೇ ವರ್ಗ [illegible] ಈ ಒಡಕು ಇನ್ನಷ್ಟು ವಿಪರೀತವೇ ಇದೆ ಈ ವರ್ಗ ಹಿತರಕ್ಷಣೆ, ವರ್ಗ ಸಮರ ಬುದ್ಧಿಯಿಂದಾಗಿ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯು ತನ್ನ [illegible] ದರ್ಶಿತ್ವ ಮಾತ್ರವಲ್ಲ ಕಾರ್ಯಕಾರಿ ಮಂಡಳಿಯ ಸದಸ್ಯತನ ಮಾತ್ರವಲ್ಲ ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯತನವನ್ನು ರಾಜಿಕೊಟ್ಟಿರುತ್ತಾರೆ. ಕಾರಣ ಇವರೂ ಒಬ್ಬ ಜಮೀನ್ದಾರರು

ಬಿಹಾರದ ಜಮೀನ್ದಾರರು ತಮ್ಮ ಸರಕಾರ ವಿರುದ್ಧ ಸತ್ಯಾಗ್ರಹ ಹೂಡಲು ಸಕಲ ಸಿದ್ಧತೆಗಳನ್ನು ಈಗಾಗಲೇ ಮಾಡಿದ್ದಾರೆ ರೈತರ ಹಿತಕ್ಕಾದರೆ ನಾವೆಲ್ಲ ಸರಕಾರವನ್ನು ವಿರೋಧಿಸ ಬೇಕು' ಎಂಬ ಬೆದರಿಕೆಯ ಮಾತು ಹಾಕಿದರು ಪರಿಣಾಮವಾಗಿ ಸರಕಾರವು ಹೊಸ ಮಸೂದೆಯ ಮುಖ್ಯ ಕೆಲವು ಭಾಗಗಳನ್ನು ಬಿಟ್ಟು ಬಿಡಬೇಕಾಯಿತು ರೈತರಿಗೆ ಒದಗಿಸಿ ಕೊಡುವ ಅನುಕೂಲತೆಗಳನ್ನು ಕಡಿಮೆ ಮಾಡಬೇಕಾಯಿತು ಯಾರಿಗಾಗಿ ಈ ಅಂಜಿಕೆ [illegible] ಕೊಟ್ಟರೂ ಪ್ರಜಾಪ್ರಭುತ್ವ [illegible] ಜಮೀನ್ದಾರರೇ ವರ್ಗಹಿತದ ಧ್ವಜಸ್ತಂಭಕ್ಕೆ ರೈತರ ಹಿತವನ್ನು ತಂದು ಕಟ್ಟಿ ಬಲಿ ಕೊಡಬೇಕಾಯಿತು. ಈ [illegible] ಜಮೀನ್ದಾರರಿಗೆ ಹೆದರಿ ಕಾಂಗ್ರೆಸ್ಸೇ ಬಡವರ ಹಿತಕ್ಕಿರುವ ಕಾಂಗ್ರೆಸ್ಸೇ ತನ್ನ ಕೈಯಿಂದಲೇ ಕೊಡಬೇಕಾಯಿತು. ಆದರೂ ಜಮೀನ್ದಾರರಿಗೆ ಇನ್ನೂ ತೃಪ್ತಿಯಾಗಲಿಲ್ಲ ಅವರ ಸಮರ ಸಾಗುತ್ತಿದೆ.

ಬಂಗಾಳದ ಸರಕಾರದಲ್ಲಿಯೂ ರೈತರ ಹಿತಕ್ಕಾಗಿ ಒಂದು ಮಸೂದೆ ತಯಾರಾಗಿದೆ. ಇದನ್ನು ಮುಂದೊತ್ತಿ ಕಾನೂನಾಗಿ ಮಾಡುವ ಪ್ರಯತ್ನ ನಡೆದಲ್ಲಿ ತಾನು ಪ್ರಾಂತೀಯ ಕಾಂಗ್ರೆಸ್ ಕಮಿಟಿಯಲ್ಲಿರುವ ತನ್ನ ಅಧಿಕಾರಸ್ಥಾನಕ್ಕೂ ಸೆಂಟ್ರಲ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದಲ್ಲಿ ತನಗಿರುವ ಅಧಿಕಾರಕ್ಕೂ ರಾಜಿ ಕೊಡುವುದಾಗಿ ಈಗಾಗಲೇ ಒಬ್ಬ ಕಾಂಗ್ರೆಸ್ ಸದಸ್ಯರು ತನ್ನ ನಿರ್ಧಾರವನ್ನು ಬರೆದು ತಿಳಿಸಿರುವರೆಂದೂ ನಮ್ಮ ಕರ್ಣಾಟಕದಲ್ಲೊಂದು ವರ್ತಮಾನವಿದ್ದಿದೆ ರೈತರು ಕಾಂಗ್ರೆಸ್ ಸದಸ್ಯರಾಗಬಾರದೆಂದು ಕರ್ಣಾಟಕದ ಕೆಲವೆಡೆ ಭೂಮಾಲಿಕರು ಬೆದರಿಕೆ ಹಾಕಿದ್ದಾರಂತೆ ಇದನ್ನೆಲ್ಲಾ ನೋಡುವಾಗ ವರ್ಗ ಸಮರವನ್ನು ಹುಟ್ಟಿಸುವವರ್ಯಾರು? ಕಾಂಗ್ರೆಸ್ಸೇ ಸಮಾಜವಾದಿಗಳೇ, ಅಥವಾ ಜಮೀನ್ದಾರರ ಮತ್ತು ಬಂಡವಾಳಗಾರರೇ? ಅಥವಾ ಇಂದಿನ ಬಂಡವಾಳಶಾಹಿ ಪದ್ಧತಿಯಲ್ಲಿ ನಡೆವ ಸಮಾಜದ ಆರ್ಥಿಕ ವಿಷಮತೆಯ ಸಹಜವಾಗಿರುವ ಪರಸ್ಪರ ಪ್ರತಿಕೂಲಶಕ್ತಿಗಳೇ ಎಂಬುದನು ಮಹಾಜನರೇ ಕೂಲಂಕುಷವಾಗಿ ತಿಳಿದುಕೊಳ್ಳದಿರಲಾರರು.

ಕಮಲಾದೇವಿ

18-6-'38

[illegible]ಲ್ಲಿ ಹಿಂದುಸ್ಥಾನಿ — ಐಕ್ಯತಾ ವಿಚಾರ

ಮತ್ತೇ[illegible] ಕೇವಲ [illegible] ಹಿಂದುಸ್ಥಾನಿ.

ಮದ್ರಾಸು ಸರಕಾರವು ಹಿಂದುಸ್ಥಾನೀ ಕಲಿಸುವ ಉಪಾಧ್ಯಾಯರನ್ನು ಸ್ವಲ್ಪ ತಿದ್ದುವ ಬಗ್ಗೆ ಒಂದು ಪ್ರಕಟನೆ ಕೊಟ್ಟಿರುವುದು.

ಭಾರತ ವರ್ಷದಲ್ಲಿ ಅತಿ ವಿಸ್ತಾರವಾದ ಪ್ರಾಂತ್ಯದಲ್ಲಿನ ಭಾಷೆಯ ತಿಳಿವು ನಮ್ಮ ಪ್ರಾಂತ್ಯದಲ್ಲೂ ಉಂಟಾದರೆ, ಸುಶಿಕ್ಷಿತರಿಗೊಂದು ಕೀರ್ತಿ ಎಂದು ತಿಳಿದೇ ಸೆಕೆಂಡರಿ ಶಾಲೆಗಳಲ್ಲಿ ಮಾತ್ರ—ಎಲಿಮೆಂಟರಿಶಾಲೆಗಳಲ್ಲಲ್ಲ—ಹಿಂದುಸ್ಥಾನಿ ಕಲಿಸಲು ಏರ್ಪಾಡಾಗಿದೆ. ಎಲಿಮೆಂಟರಿ ಶಾಲೆಗಳಲಿಲ್ಲ ಮಾತೃಭಾಷೆಗೇ ಪ್ರಾಧಾನ್ಯ, ಅದೇ ಮಹತ್ವದ ಭಾಷೆ. ಸೆಕೆಂಡರಿ ಶಾಲೆಗಳಲ್ಲಿ ಸಹ 1, 2, 3ನೇ ಫೋರ್ಮುಗಳಲ್ಲಿ ಮಾತ್ರ ಎಂದರೆ ವಿದ್ಯಾರ್ಥಿಯ ಶಿಕ್ಷಣ ಜೀವನದ 6,7,8ನೇ ವರ್ಷಗಳಲ್ಲಿ ಮಾತ್ರ ಹಿಂದುಸ್ಥಾನಿ ಕಲಿಸಲಾದೀತು.

ಹಿಂದುಸ್ಥಾನಿಯಲ್ಲಿ ಫೈಲಾದರೆ ತೇರ್ಗಡೆಗೇನೂ ಆತಂಕವಿಲ್ಲವಾದರೂ, ಮಾತೃಭಾಷೆಯಲ್ಲಿ ಫೈಲಾದರೆ ತೇರ್ಗಡೆಸಿಗಲಾರದು. ಹಿಂದುಸ್ಥಾನಿ ಪಾಠಕ್ಕೆ ಮಾತ್ರ ಹಾಜರಾಗಲೇಬೇಕೆನ್ನುವಷ್ಟು ಕಡ್ಡಾಯವಿದೆ, ಮಾತೃಭಾಷೆಯ ಬದಲಾಗಿ, ವಿದ್ಯಾರ್ಥಿಗಳು ಹಿಂದುಸ್ಥಾನಿ ಕಲಿಯಲೇ ಕೂಡದಾಗಿದೆ; ಮಾತೃಭಾಷೆಗೆ ಕೂಡಿಸಿಯೆ ಈ ಪಾಠವು ಹೆಚ್ಚು ನಡೆಸಬೇಕು, ಅದರ ಸ್ಥಾನದಲ್ಲಿ ಹಿಂದುಸ್ಥಾನಿ ಕೂಡದು.

ಇದೀಗ ಜಿನ್ನಾರವರಿಗೆ ಬೇಕಾದದು ಶಾಸನ್ವರ್ಗಣವು ಕಾರಣವಾಗಿರುವಲ್ಲಿ ಐಕ್ಯತೆಗೆ ಏನಾದರೂ ಸಾಧ್ಯತೆ ಇತ್ತು. ಸಭೆಕೂಡಿಸಿ, ಪೆಂಡಾಲಗಳಲ್ಲಿ ನಿಂತು, ಲೀಗ್ ಮುಖಂಡರು ಐಕ್ಯವಾಗದ ರೀತಿಯಲ್ಲಿ ವಾತಾವರಣ ಹುಟ್ಟಿಸುವ ಭಾಷಣಾದಿಗಳಲ್ಲಿ ಮಾಡುತ್ತಿರುವರು. ಕಳೆದ ವಾರವೆಲ್ಲ ಪತ್ರಿಕೆಗಳಲ್ಲಿ ಪ್ರಕಟವಾದ ತುಂಡುಗಳಲ್ಲಾದರೂ, ಮುಖಂಡರ ಭಾಷಣಗಳೂ ಔದಾರ್ಯವಾಗಿಲ್ಲವೆಂದೇ ತೋರುತ್ತದೆ.

ಉರ್ದುವನ್ನಾಗಲಿ ಹಿಂದಿಯನ್ನಾಗಲಿ ತಿಳಿಯದೆ ಇರುವ ಜಿನ್ನಾರವರು ಉರ್ದು—ಹಿಂದೀವಾದವನ್ನು ಕುರಿತಾಗಿ ಅಭಿಪ್ರಾಯ ಕೊಡುವಾಗ; ಉರ್ದುವಿನ ಕಡೆಗೆ ಒಲಿದು ಮಾತಾಡುವಾಗ, ಯಾರೂ ಇತರರು ಹೇಳಿರುವುದನ್ನೇ ಸೈ ಹಾಕುತ್ತಿರುವಂತೆಯೆ ತಿಳಿಯಬಹುದಲ್ಲವೆ?

ಸಂಧಾನವಾಗಲಿರುವಾಗ, ಪರಸ್ಪರವಾಗಿ ಆಡಿಕೊಳ್ಳುವುದರಿಂದ, ಉಭಯ ಪಕ್ಷಗಳಲ್ಲೂ ಅನುರಾಗ ವೃತ್ತಿಗಳಿಗೆ ಅವಕಾಶ ದೊರೆವುದಿಲ್ಲವೆಂದು ಜಿನ್ನರವರಿಗೆ ಇನ್ನು ಹೇಳ ಬೇಕೆ?

ಡಾ| ಜಾಕೀರ್ ಹುಸೇನರಂತಹರು ಹಿಂದುಸ್ಥಾನೀ ಪಾಠಗಳನ್ನು ಬರೆದುಕೊಟ್ಟಿರುವಾಗ, ಅವುಗಳಲ್ಲೂ, ಉರ್ದು ಪಕ್ಷಪಾತಿಗಳ ಬರೆಹವಿದು ಎಂದರಿಯದೆ; ಕೊಂಗ್ರೆಸಿನಲ್ಲಿರುವ ಮುಸ್ಲಿಮ ಮುಖಂಡರು ಇದನ್ನೆಲ್ಲ ಒಪ್ಪಿರುವರೆಂಬುದನ್ನು ಮರೆತ್ತು ಅದರಲ್ಲೂ ಉತ್ತರ ಹಿಂದುಸ್ಥಾನದ ಉರ್ದು ಜನ್ಮಭೂಮಿಯ ಮಾತೇ ಸರ್ವತ್ರವೂ ಮೆರೆವಂತೆ, ದೇವನಾಗರಿ ಅಥವಾ ಉರ್ದು ಲಿಪಿಯಲ್ಲಿ ಅದನ್ನು ಬೇಕಾದಂತೆ ಕಲಿಯಬಹುದೆನ್ನುವಾಗ—ಇದಕ್ಕೆಲ್ಲ ಆಕ್ಷೇಪ ವೇತಕ್ಕೆ? ಇಷ್ಟಾದರೂ ಇದೆಲ್ಲ ಹಿಂದೂ ಪಕ್ಷ[illegible] ಹೇಗೆ ಉರುಳುತ್ತದೆ!

ನೋಟೀಸು.

ದಕ್ಷಿಣ ಕನ್ನಡಾ ಉಡಿಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 20/1938

1. N. ನರಸಿಂಹ ಶ್ಯಾನುಭಾಗ, 2. N. ಶ್ರೀನಿವಾಸ ಶ್ಯಾನುಭಾಗ, 3. N. ಮಂಜುನಾಥ ಶ್ಯಾನುಭಾಗ, 4. N. ರಮಾನಾಥ ಶ್ಯಾನುಭಾಗ, 5. N. ನಾರಾಯಣ ಶ್ಯಾನುಭಾಗ, 6. N. ರಾಮಚಂದ್ರ ಶ್ಯಾನುಭಾಗ, (ಮ್ಯಾನರ್) ನಗರದಾಮೋದರ ಶ್ಯಾನುಭಾಗರ ಮಗಂದಿರು, 7. ಸುಂದರಿ ಯಾನೆ ಸರಸ್ವತಿ ಅಮ್ಮ, ದಾಮೋದರ ಶ್ಯಾನುಭಾಗರ ವಿಧವೆ, ಮ್ಯಾನರರ, 6ನೇ ಅರ್ಜಿದಾರರ ಕ್ಷೇಮ ಚಿಂತಕ 1ನೇ ಅರ್ಜಿದಾರ—ಅರ್ಜಿದಾರರು.

ಉಡ್ಪಿ ತಾಲೂಕು ಬಾಯಾರು ಗ್ರಾಮದ ಬ್ರಹ್ಮಾವರ ಕಸಬೆಯಲ್ಲಿರುವರು.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ:—

1ರಿಂದ 6ನೇ ವರೇಗಿನ ಅರ್ಜಿದಾರರ ತಂದೆ ವ 7ನೇ ಅರ್ಜಿದಾರಳ ಗಂಡ ತಾರೀಕು 10–4–38ರಲ್ಲಿ ಬ್ರಹ್ಮಾವರ ಕಸಬೆಯಲ್ಲಿ ಮೃತಪಟ್ಟ ನಗರ ದಾಮೋದರ ಶ್ಯಾನುಭಾಗರಿಗೆ ದಿ ಬೊಂಬ್ಯಾ ಲೈಫ್ ಎಶ್ಯೂರೆನ್ಸ್ ಕಂಪನಿಯ ನಂಬ್ರ 6186ನೇ ಪೊಲಿಸಿ ಬಾಬ್ತು ಬರತಕ್ಕ ರೂಪಾಯಿ 600ನ್ನು ವಸೂಲುಮಾಡುವರೆ ಕುಟುಂಬದ ಈಗಿನ ಯಜಮಾನನಾದ 1ನೇ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಖಲುಮಾಡಿದ ಸದ್ರಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾ. 4–7–38ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟು ಮುಂದೆ ಸದ್ರಿ ಅರ್ಜಿ ತನಿಖೆ ಸಮಯ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಸಲಾಗುತ್ತದೆ.

M. DAMODAR KAMATH,
Advocate for Petitioners.

Advocate's Office, Udipi.
Dated 11-6-38.

ಮಧ್ಯಪ್ರಾಂತ್ಯದಲ್ಲಿ ಮುಷ್ಕರ.

ಪ್ರಾಂತಿಕ ಮಜೂರರ ಪರಿಷತ್ತಿನ ಪ್ರತಿನಿಧಿಗಳ ಹೇಳಿಕೆಯಂತೆ, ಸರಕಾರವು ಇನ್ನೂ ಮಜೂರರ ವಿಚಾರವನ್ನು ತೆಗೆದುಕೊಳ್ಳದಿರುವ ಪ್ರಯುಕ್ತ, ವಿಮರ್ಶಾ ಕಮಿಟಿಯ ರಿಪೋರ್ಟು ಸರಕಾರಕ್ಕೆ ತಲಪಿ ಎರಡು ತಿಂಗಳು ಕಳೆದರೂ ಇನ್ನೂ ತೀರ್ಮಾನವಾಗದ್ದರಿಂದ, ಇವರೂ ಜುಲಾಯಿ ತಾ. 1ರಿಂದ ನೇಯ್ಗೆಗೆ ಸಂಬಂಧಪಟ್ಟ ಮುಷ್ಕರ ಹಾಕಲು ನಿರ್ಧಾರಮಾಡಿರುವರು. 1934ನ ಇಸ್ವಿಯಲ್ಲಿ ಮಾಡಿದ ಕಡಿತವು ಇನ್ನೂ ಜ್ಯಾರಿಯಲ್ಲಿದೆ; ಅದರ ಮುಕ್ಕಾಲಂಶವನ್ನಾದರೂ ಕೂಡಿಸಿ ಕೊಡಿರೆಂದು ಬರೆದುಕೊಂಡುದು ಇನ್ನೂ ಇತ್ಯರ್ಥವಾಗಿಲ್ಲ. ಎಲ್ಲ ಕಡೆಯ ಕಾರ್ಖಾನೆಗಳ ಕೂಲಿಗಳೂ ಧನಿಗಳಿಗೆ ಈಗಲೇ ನೋಟೀಸು ಕೊಡುವರೆ ಸೂಚನೆ ಪಡೆದಿದ್ದಾರೆ.

ಮಂತ್ರಿಗಳನ್ನು ಪ್ರತಿನಿಧಿಗಳು ಕಾಣಲಿರುವರು.

ಈ ವರ್ಷದ 4ನೆ ಫೋರ್ಮಿನಿಂದ, ದ್ವಿಭಾಷಾ ವರ್ಗಗಳಿಲ್ಲದಿರುವಲ್ಲಿ, ಇಂಗ್ಲಿಷಲ್ಲದ ಎಲ್ಲ ವಿಷಯಗಳಲ್ಲಿ ಮಾತೃಭಾಷೆಯಲ್ಲೇ ಕಲಿಯಬೇಕಾಗಿ ನಿಯಮವಾಗಿದೆ. ಇದೀ ವಿದ್ಯಾರ್ಥಿಜೀವನದಲ್ಲಿ ಮಾತೃಭಾಷೆಗೆ ಅತಿ ಹೆಚ್ಚಿನ ಮಹತ್ವಕೊಡಲಾಗುವುದು.

ಏಸ್. ಎಸ್. ಎಲ್. ಸಿ. ಪಾಠಕ್ರಮವನ್ನು ಸರಕಾರವು ಈಗ ತಿದ್ದುತ್ತಲಿದೆ. ಮಾತೃಭಾಷೆಯಲ್ಲಿ ಮಾತಾಡುವ ಬರೆಯುವ ಯೋಗ್ಯತೆ ವಿದ್ಯಾರ್ಥಿಗಳನ್ನು ಹೆಚ್ಚುವಂತೆ ಪ್ರಯತ್ನ ಮಾಡಲಾದೀತು. ಇದು ಮೊದಲು ಇದ್ದುದಕ್ಕಿಂತಲೂ ಮೇಲಾದ ಸ್ಥಾನವು ಮಾತೃಭಾಷೆಗೆ ದೊರೆಯುವಂತೆ ನಿಯಮಗಳಾಗುವುವು.

ಹೊಟ್ಟೆನೋವು

ಖಾರ ಮತ್ತು ರುಚಿ ಆಹಾರದಿಂದ ಹೊಟ್ಟೆನೋವು, ಅಜೀರ್ಣವುಂಟಾದುವುಗಳು ಉಂಟಾಗುತ್ತವೆ. ಹೊಟ್ಟೆಯು ಅಕ್ರಮ ತೊಂದುತ್ತಲೇ ಒಂದು ಗ್ಲಾಸು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಕುಡಿಯಿರಿ. ಅದು ಬಹಳ ರುಚಿಕರ. ರಕ್ತವನ್ನು ತಣ್ಣಗಿರಿಸಿ, ಹೊಟ್ಟೆಯನ್ನು ಕ್ರಮವಾಗಿರಿಸುತ್ತದೆ. ಅದು ಅನ್ನಕೋಶವನ್ನು ಏನೊಂದು ಅಪಾಯವಿಲ್ಲದೆ ಹೊಕ್ಕು ಸಾವಧಾನದಿಂದ ತನ್ನ ಕೆಲಸ ಮಾಡುತ್ತದೆ.

ಜಗತ್ತಿನ ಎಲ್ಲಾ ಡಾಕ್ಟರರಿಂದ ಶಿಫಾರಸು ಮಾಡಲ್ಪಟ್ಟಿದೆ. ಒಳ್ಳೇ ಮಾಗಿದ ಫಲ ಮೂಲ ಮತ್ತು ಅನೇಕ ಔಷಧಮಿಶ್ರಿತವಾದ ಈ ಲವಣವು ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುವುದು.

"ಇಮಿಟೇಶನನ್ನು ತಿರಸ್ಕರಿಸಿರಿ. ಒಳ್ಳೆಯ ಖಾತ್ರಿ ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವದಿಂದ ಅದು ಕ್ರಮಪ್ರಕಾರ ತಯಾರಿಸಲ್ಪಡುತ್ತದೆ."

E V K 1

ಕಾನ್ಪುರದಲ್ಲಿನ ಮುಷ್ಕರ

ಎರಡು ತಿಂಗಳ ಹಿಂದಣಿಂದಲೂ ಗಿರಣಿಗಳಲ್ಲಿ ಮುಷ್ಕರವುಂಟಾಗಿ ಅರ್ಧಲಕ್ಷ ಜನರು ನಿರುದ್ಯೋಗಿಗಳಾಗಿ ನರಳುತಿದ್ದರೂ, ಸರಕಾರವು ನೇಮಿಸಿದ ಕಮಿಟಿಯ ತೀರ್ಮಾನಗಳಿಗೆ ಗಿರಣಿಗಾರರ ಪ್ರತಿಕಕ್ಷಿ ಇದ್ದುದರಿಂದ [illegible] ತಾರೀಕಿನಿಂದ ಮುಷ್ಕರ ಪ್ರಾರಂಭವಾಗುವುದಾಗಿ ಅಲ್ಲಿನ ಕೂಲಿಗಾರರ ಸಭೆ ನಿರ್ಧರಿಸಿರುವುದರಿಂದಲೂ, ಈಗ ಸರಕಾರವು ಅಲ್ಲಿ ಕೂಲಿನಿರ್ಧಾರಕ ಬೋರ್ಡನ್ನು ಸ್ಥಾಪಿಸಲು ನಿಶ್ಚಯಿಸಿ, ಕೂಲಿಯವರಿಗೂ ಧನಿಗಳಿಗೂ ಒಪ್ಪಂದ ಮಾಡುವ ಅಧಿಕಾರಿಗಳನ್ನು ನೇಮಿಸುವುದಾಗಿ ಪ್ರಕಟಿಸಿಯದೆ.

ರಾತ್ರಿಕಾಲದಲ್ಲಿ ಕೆಲಸಮಾಡಬಾರದೆನ್ನುವುದರಿಂದ ಗಿರಣಿಗಳಿಗೆ ನಷ್ಟವಿದ್ದರೂ, ನಾಲ್ಕಾರು ಪಂಗಡಗಳ ಮೂಲಕ ಕೆಲಸ ಮಾಡಿಸುವುದಕ್ಕೆ ಸರಕಾರವು, ಈ ಪರ್ಯಾಯ ಪರಿಶ್ರಮಕ್ಕೆ ಸಮ್ಮತಿಸಿಲ್ಲ. ಪ್ರತಿಯೊಬ್ಬ ಕೆಲಸಗಾರನಿಗೂ ಅವನ ಮಜೂರಿ ನಿರ್ಧರಿಸಿದ ಕಾರ್ಡು ಇರುವಂತೇರ್ಪಾಟಾಗಿದೆ. ಕಾನ್ಪುರ ಮಜೂರ ಸಭೆಯನ್ನು ಸರಕಾರವು ಮಂಜೂರು ಮಾಡಿಯದೆ. ಒಂದೊಂದೇ ಸಭೆಯು ಕೆಲಸಗಾರರ ಹಿತವನ್ನು ನೋಡಿ ಅಡಚಣೆಗಳನ್ನು ದೂರವಿಡುವುದು. ಕಾನೂನಿನಲ್ಲಿ ಮಾರ್ಪಾಟುಗಳಾಗಬೇಕಾಗಿರುವಲ್ಲಿ ಸರಕಾರವು ಕಾನೂನನ್ನು ತಿದ್ದಬೇಕೆಂದಿದೆ. ಕೂಲಿಯವರಿಗೆ ನಿವಾಸಗಳನ್ನು ಒದಗಿಸಲೂ, ಅವರನ್ನು ಸಾಲಗಾರರ ಕೈಯಿಂದ ತಪ್ಪಿಸಲೂ, ಪ್ರಯತ್ನಗಳನ್ನೂ ಸರಕಾರವು ಮಾಡುವುದು.

ಕೂಲಿಯವರಿಗೆ ಪ್ರತಿ ತಿಂಗಳಿಗೊಮ್ಮೆ ಮಜೂರಿ ಸಲ್ಲಬೇಕಾಗಿಯೂ, ರೂಪಾಯಿ 15ಕ್ಕೆ ಮಿಕ್ಕಿ ಸಿಗಬೇಕಾಗಿಯೂ ಕಮಿಟಿಯ ಶಿಫಾರಸು ಇವೆ. ಇದನ್ನು ಅಷ್ಟರಲ್ಲೇ ಇಟ್ಟು, ಸರಕಾರವು ಇದನ್ನು ಅಂಗೀಕರಿಸಿಲ್ಲ.

ಮಜೂರರ ಪ್ರತಿನಿಧಿಗಳು ಮಂತ್ರಿಗಳನ್ನು ಕಂಡಿದ್ದು, ಈ ಮಾತುಕತೆಗಳ ಪರಿಣಾಮವು ಉತ್ತಮವಾದೀತೆಂದು ನಂಬುತ್ತಾರೆ. ಮಜೂರರಿಗೆ ಸರಕಾರದ ತೀರ್ಮಾನ ಹೆಚ್ಚಿನ ಮಟ್ಟಿಗೆ ಸರಿಯಾಗಿಗೆ ಎಂದೇ ತೃಪ್ತಿಯಾಗಿದೆ. ಇದನ್ನು ಗಿರಣಿಗಾರರು ಅಂಗೀಕರಿಸದಿರುವಲ್ಲಿ ಮದ್ರಾಸಿನಲ್ಲಿ ಮಾಡಿದಂತೆ 144ನೇ ಸೆಕ್ಷನು ಪ್ರಕಾರ ಗಿರಣಿಗಳನ್ನು ತೆರೆಯುದಂತೆ ನಿರ್ಬಂಧವನ್ನು ಸರಕಾರವು ಹೊರಡಿಸಬಹುದೆಂದೂ ನಂಬಿಗೆದೆ.

ಇನ್ನು ಧನಿಗಳು ಏನು ಮಾಡುವ ನೋಡಬೇಕು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. S. No. 50/1938.

ಜಾಂಪ್ಪ ಪುರೋಹಿತ – ವಾದಿ.

ಮತ್ತು

1. ಕೃಷ್ಣ (ಮ್ಯಾನರ) ಫಲಿನಾರು [illegible] ಮಗ-ಇವನ ಗಾರ್ಡಿಯನು ಸದ್ರಿಯವನ ತಂದೆಯ ತಾಯಿ [illegible] ಫಲಿಮಾರು ಶ್ರೀನಿವಾಸಯ್ಯನವರ [illegible] ಶಾಲಿ ಉಡುಪಿ ತಾಲೂಕು ಬೆಳಗ್ರಾಮ ನರಸಿಂಗರಾಯರ ಮನೆಯಲ್ಲಿರುವವಳು.

2. ವೆಂಕಟ್ರಮಣಯ್ಯ—ಸುಬ್ರಣ್ಣನವರ ಮಗ – ಮಂಗಳೂರು ತಾಲೂಕು [illegible]ಲಂತಬೆಟ್ಟುಗ್ರಾಮದಲ್ಲಿರುವವ–ಪ್ರತಿವಾದಿ

ಸದ್ರಿ ಪ್ರತಿವಾದಿರಿಗೆ ಈ ಮೂಲಕ [illegible]ಯಪಡಿಸುವುದೇನೆಂದರೆ–

ಮ್ಯಾನರ 1ನೇ ಪ್ರತಿವಾದಿಯ ಹಾಲಿ ಮೃತಪಟ್ಟ ಫಲಿಮಾರು ನಾರಾ[illegible] ರಾಯರು ವಾದಿಗೆ ತಾರೀಕು 21 – 11–1[illegible]ರಲ್ಲಿ ರೂಪಾಯಿ 425–0–0ಕ್ಕೆ ರಿಜಿ[illegible] ಬರಕೊಟ್ಟ ತೋರಣವು ದಸ್ತವೇಜಿನ ಬ[illegible] ದಸ್ತವೇಜು ತಾರೀಕುಲಾಗಾಯಿತು [illegible]ಕು 22–11–1937ರ ವಾಯಿದೆ ವ[illegible] ಬಡ್ಡಿ ವಗೈರೆ ವಸೂಲಿ ಬಗ್ಗೆ ವಾದಿಯು ದಾ[illegible] ಮಾಡಿದ ಈ ದಾವೆಯು ತನಿಖೆ ಬಗ್ಗೆ ತಾ[illegible] 11 – 7–1938ಕ್ಕೆ ಇಟ್ಟಿರುತ್ತದೆ. ಸದ್ರಿ [illegible] ಬೆಳಿಗ್ಗೆ 10 ಗಂಟೆಯೊಳಗೆ ಸದ್ರಿ ಪ್ರತಿವಾ[illegible] ಸದ್ರಿ ಕೋರ್ಟು ಮುಂದೆ ಹಾಜರಾಗಿ [illegible] ಹರಣೆ ಮಾಡಿಕೊಡದಿದ್ದರೆ ಸದ್ರಿ ದಾವೆ [illegible] ಅವರ ಗೈರುಹಾಜರಿಯಲ್ಲಿ ತೀರ್ಮಾನ[illegible]ತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಯ[illegible]ಲಾಗುತ್ತದೆ.

P. V. UPADHYAYA, B. A., LL[illegible]
Vakil for Plain[illegible]

ಕಾರ್ಕಳ, 14–6–38.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ತೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1 ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ

2. ಕುಂದಾಪುರದಿಂದ ಬಾಳೆಬರೆಗಾಗಿ ಶಿಮೊಗ್ಗಾ

3 ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಹಳ್ಳಿ, ಶಿಮೊಗ್ಗಾ ಹರಿಹರ ವರೆಗೆ

4 ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ

5 ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ.

6 ಮಂಗಳೂರಿನಿಂದ ಪುತ್ತೂರು, ಸಂಪಾಜಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

THE
Canara Industrial & Banking Syndicate Ltd.,

Will open new Branches **at suitable centres in** order **to extend** their facilities and service to wider areas

Young men, preferably graduates, not above the age of 30 and of good influence and coming from business circles and respectable families will be enrolled for training for the post of Agents and Inspectors of Branches under the following conditions

A sum of Rs. 500 will have to be first paid to the Syndicate by each of the candidates selected for training which amount is not returnable in any case

Such candidates will have to be on probation at the Head Office of the Syndicate and undergo a course of practical training for one year during which period they will have to attend 250 lectures on Banking and other allied subjects.

During the period of probation, each will be given free quarters and Rs 25 per month as stipends, from the Syndicate

They must pass an examination which will be held by the Bank at the end of one year. Those who fail will have to undergo an additional training for a period of 3 months during which period no stipends as above mentioned will be allowed

After passing the examination or further training as the case may be they will be given suitable posts on a grade of Rs. 40 10/2-200 (No extra allowance is given except free quarters wherever available and attached to Office premises

Applications for the posts under the above mentioned terms are received up to 25th June, 1938, by which date they should reach the Head Office of the Syndicate. Applications should be in the Applicants' own handwriting and they must correctly state their age, qualification, the languages they know to read, write and speak and shall be accompanied by at least three recent testimonials (originals) regarding character, qualification etc., wherever possible they may be submitted through one of the Branches of the Syndicate.

30th May 1938.
"Mukund Nivas"
UDIPI.

T. M. A. PAI,
Chairman.

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ **ಲಾಭ**

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು ಒಳಿತು ಕೆಡುಕುಗಳನ್ನು ತೋರಿಸುವುದ ಜೀವನವನ್ನ ಸುಖ ಅಥವಾ ದುಃಖವಯವನ್ನಾಗಿ ಮಾಡುವುದು—ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ. ಈ ನವಗ್ರಹ ಯಂತ್ರದ [illegible] ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಧಿಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ–ತಂತ್ರ–ಯಂತ್ರಗಳೂ ಇಲ್ಲದೆ, ಗ್ರಹಶಾಂತಿಯೊಂದೇ [illegible] ನವಗ್ರಹ ಯಂತ್ರವಾಗಿದೆ [illegible] ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು

ಈ ಯಂತ್ರದಿಂದ ಕೋಟ್ಯಾವಧಿ ಜನಗಳಿಗೆಲ್ಲಾ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು [illegible] ಈ ವಸ್ತುವಿನಿಂದ ಮಹಾರಾಜರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ [illegible] ಕಳೆದುಕೊಂಡಿರುವ ಎಲ್ಲ ಸುಖಗಳೂ ಪುನಃ ಪ್ರಾಪ್ತವಾಗಬೇಕೆಂದಿದ್ದರೆ ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. [illegible] ಜ್ಯೋತಿಷಿಗಳು ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು [illegible] ಗ್ರಹಗಳನ್ನು ಶಾಂತವನ್ನಾಗಿ ಮಾಡಿ [illegible] ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಗಳಿಂದ ಆರಾರು–ಎಂಟೆಂಟು ಅಲ್ಲ ಹನ್ನೆರಡು–ಹನ್ನೆರಡು ನವಗ್ರಹ ಯಂತ್ರಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ [illegible] ಪ್ರಶಂಸಾ ಪತ್ರಗಳನ್ನು [illegible] ಒಂದು ನೋಡಿ [illegible]



[illegible] ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು.—ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು [illegible] ಯಂತ್ರ ಮಂತ್ರ, ಕವಚ ಎಂದು ಬೇರೆ ಬೇರೆ ಹೆಸರು [illegible] ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. [illegible] ಯಂತ್ರದ ಅದ್ಭುತ [illegible] ಶಕ್ತಿಯನ್ನು ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:—[illegible] ನವಗ್ರಹ ಯಂತ್ರಗಳನ್ನು [illegible] ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. [illegible] ಇಂಥ ವಸ್ತುವನ್ನು [illegible] ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

[illegible] ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದ್ದರೆ ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ [illegible] ಶಿಲಿಂಗು ಬೀಳುವುದು. [illegible] ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ. ಯಿಂದ ಬೇಡಿದಲ್ಲಿ [illegible] ಆಣೆ ಬೀಳುವುದು.

ವಿಳಾಸ.— **Pandit B. R. BHAVISYAVAKTA (S. S. M.) Bombay. No. 4.**

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

Edited Printed & Published By A. S. Kamath at [illegible] Yada Press, Car Street, Mangalore.

"ಸ್ವದೇಶಾಭಿಮಾನಿ"

ಪುಸ್ತಕ ೩೨] ತಾರೀಕು ೨೪ನೇ ಜೂನ್ ೧೯೩೮ (24 – 6 – 1938) [ಸಂಚಿಕೆ ೨೪

★

ಪುಟಗಳು **24**

ಅನುಕ್ರಮಣಿಕೆ

ಪೆನ್ಸಿಲ್ವೇನಿಯಾ ಪಟ್ಟಣದಲ್ಲಿ ಸ್ತ್ರೀಯರು ಪೋಲಿಸರಾದರು

❀

... ಹೋಗಲಿ ... ಭೇದವು ಇರಲಿ

❀

... ಶಾಲೆಗಳ ಆಡ ... ನ್ನು ಸರಕಾರವು ತಾನೆ ನೋಡುವುದಂತೆ!

❀

... ಹೆಣ್ಣುಗಳ ಸಂಯೋಗ ... ಮಕ್ಕಳು ಮರಿಗಳು ಹುಟ್ಟಿದುವು

❀

... ಬಾದಶಹ ... ತಾತ್ಮದ ...

❀

... ಮಿಲಿಯಾಂತರ ... ಮುಸಲ್ಮಾನರ ಬೆಂಬಲ

❀

ಸ್ವಾತಂತ್ರ್ಯದ ಪಥದಲ್ಲಿ ಭಾರತದ ಮುನ್ನಡೆ

★

'ನಂದಕುಮಾರ' ದ ಒಂದು ದೃಶ್ಯ.

... ರಾವ್ ... , ಗೋವಿಂದ ... ಗೋ ... ಅವರ ...

ANNOUNCEMENT.

We have the pleasure of informing our friends and patrons that a branch of the Bank will be opened at Belgaum on the 26th instant

RESOURCES OVER A CRORE.

ESTD. 1906
CANARA BANK LIMITED.

SWADESHABHIMANI, ESTD. 1906.

ವಿಚಿತ್ರ ಪ್ರಪಂಚ

ಉಣ್ಣೆಯನ್ನು ಉದುರಿಸುವ ಮದ್ದು.

ಥಾಲಿಯಮ್ ಎಂಬುದೊಂದು ಮದ್ದು. ಇದನ್ನು ಕುರಿಗಳಿಗೆ ಕೊಟ್ಟು ಉಣ್ಣೆಯು ಉದುರುವಂತೆ ಮಾಡಲಾಗುವದೆಂದು ಎಸ್. ಎ. ವಿಲ್ಕಿನ್ ಎಂಬ ಸೋವಿಯಟ್ ಪ್ರೊಫೆಸರರೊಬ್ಬರ ಅಂಬೋಣ.

ಕುರಿಯ ಆರೋಗ್ಯವನ್ನೂ ಉಣ್ಣೆಯನ್ನೂ ಹಾಳು ಮಾಡದ ರೀತಿಯಲ್ಲಿ ಒಂದೊಂದು ಕುರಿಗೆ ಎಷ್ಟೆಷ್ಟು ಮದ್ದು ಕೊಡಬಹುದೆಂದು ತನಿಖೆ ಶೋಧೆಗಳನ್ನು ನಡೆಸುತ್ತಿದ್ದರು.

ಔಷಧಿ ಕೊಡುವಾಗ ಸಾಧಾರಣ ಸ್ವಲ್ಪ ಹೆಚ್ಚೇ ಮದ್ದನ್ನು ಕೊಟ್ಟರೆ, ನುಣುಪಾದ ಮತ್ತು ದರಗಾದ ಉಣ್ಣೆಯು ತನ್ನಷ್ಟಕ್ಕೆ ಉದುರುವುದೆಂದೂ, ಕಮ್ಮಿ ಕೊಟ್ಟರೆ ನುಣುಪಾದ ಉಣ್ಣೆ ಮಾತ್ರ ಉದುರುವುದೆಂದೂ ಅವರು ಕಂಡು ಹಿಡಿದಿರುವರು. ಈಗ ಅವರು ಬೇಕಾದ ಬಣ್ಣದ ಉಣ್ಣೆಯನ್ನು ಕುರಿಗಳು ಬೆಳೆಯಿಸುವಂತೆ ಶೋಧೆಗಳನ್ನು ನಡೆಸುತ್ತಿರುವರು.

ಉತ್ತರ ಧ್ರುವದಡಿಯಲ್ಲಿ ಸಬ್ ಮೇರಿನು.

ಉತ್ತರ ಧ್ರುವದ ಹವಾಗುಣವನ್ನು ಕಂಡು ಹಿಡಿಯಲು ಶಾಶ್ವತವಾದ ಒಂದು ಠಾಣ್ಯವನ್ನು ಸಬ್ ಮೇರಿನಿನ ಉಪಯೋಗದಿಂದ ಸ್ಥಾಪಿಸಬಹುದೆಂದು ಒಸ್ಟ್ರೇಲಿಯದ ಪ್ರವಾಸಿಗಳಾದ ಸರ್ ಹ್ಯೂಬರ್ಟ್ ವಿಲ್ಕಿನ್ಸ್ ಎಂಬವರು ಹೇಳುತ್ತಿರುವರು.

ಆರ್ಕಟಿಕ್ ಸಾಗರದ ಹವಾಗುಣವನ್ನು ಕಂಡು ಹಿಡಿಯಬೇಕಾದರೆ, ಉತ್ತರಧ್ರುವದ ಬಳಿ ಒಂದು ಠಾಣ್ಯವಿಲ್ಲದೆ ಸಾಧ್ಯವಿಲ್ಲ. ಆದರೆ ಅಲ್ಲಿಯ ಹಿಮವು ಯಾವಾಗಲೂ ಕರಗಿ ಕೆಳ ಹರಿಯುತ್ತಿರುವುದರಿಂದ ನೆಲದಮೇಲೊಂದು ಠಾಣ್ಯವನ್ನು ಮಾಡುವುದು ಅಸಾಧ್ಯವಾದ ಮಾತು.

ಆದುದರಿಂದ ಉಕ್ಕಿನ ಒಂದು ಸಬ್ ಮೇರೀನನ್ನು ತಯಾರಿಸಿ, ಹಿಮದಡಿಯಿಂದ ಉತ್ತರ ಧ್ರುವದತ್ತ ಕೊಂಡು ಹೋಗಬೇಕೆಂದೂ ಹಾಗೆ ಹೋದ ಸಬ್ ಮೆರೀನಿಗೆ ಮೂರು ವರ್ಷಗಳ ತನಕ ಅಲ್ಲಿರಲು ಸಾಧ್ಯವಿದೆಯೆಂದೂ ಹ್ಯೂಬರ್ಟರ ಅಭಿಪ್ರಾಯವಾಗಿರುವುದು.

ಈ ಬಗೆಯ ಯಾತ್ರೆಯು ಬಾಕಿ ಎಲ್ಲಾ ವಿಧದವುಗಳಿಗಿಂತ ಸುರಕ್ಷಿತವಾದುದೆಂದೂ, ಹಾಗೆ ಅಲ್ಲಿ ಹೋಗಿ ನೆಲೆನಿಂತವರಿಗೆ ಪ್ರತಿ ವರ್ಷ ಚಳಿಗಾಲ ತಲೆದೋರುವ ಮೊದಲೇ ಆಹಾರ ಸಾಮಗ್ರಿಗಳನ್ನು ಒದಗಿಸಿಕೊಡಬಹುದೆಂದೂ ಅವರು ಅಭಿಪ್ರಾಯಪಡುತ್ತಿರುವರು.

ಕ್ರಿಮಿನಾಶಕ.

1,000 ಅಡಿ ಮೇಲ್ಗಡೆ ಹಾರಾಡಿ ಹತ್ತು ಮಂದಿ ಬ್ರಿಟಿಷ್ ಪ್ರವೀಣ ಡಾಕ್ಟರರು, ಶಾಸ್ತ್ರೀಯ ರೀತಿಯಲ್ಲಿ 300 ಸೊಳ್ಳೆಗಳು ನಾಶವಾಗುವುದನ್ನು ಕಂಡರು.

ಈ ಪ್ರವೀಣರು ಅದೊಂದು ನವೀನ ಕ್ರಿಮಿನಾಶಕ ಮದ್ದಿನ ಪರಿಣಾಮವೇನಾಗುವುದೆಂದು ಶೋಧೆಗಳನ್ನು ನಡೆಸುತ್ತಿದ್ದರು. ಈ ಶೋಧೆಗಾಗಿ ಲಂಡನಿನ ಅದೊಂದು ಆರೋಗ್ಯ ಶಾಲೆಯವರು ಸಾಕಿದ ಸೊಳ್ಳೆಗಳನ್ನು 35 ಗೂಡುಗಳಲ್ಲಿ ತುಂಬಿಸಿಕೊಂಡು ಹೋಗಲಾಗಿತ್ತು. ಮನುಷ್ಯರಿಗೆ, ಇಲ್ಲವೆ ಇತರ ವಸ್ತುಗಳಿಗೆ ಯಾವ ತರದ ತೊಂದರೆಯನ್ನೂ ಮಾಡದೆ, ಈ ನವೀನ ಕ್ರಿಮಿನಾಶವು, ವಿಮಾನಗಳಲ್ಲಿ ನುಗ್ಗುವ ಕ್ರಿಮಿಕೀಟಗಳನ್ನು ನಾಶ ಮಾಡಬಲ್ಲುದಂತೆ.

ಪ್ರಾಯಬದಲಾವಣೆ.

ಬರ್ಮಿಂಗೇಮಿನಲ್ಲಿ ಅರ್ಲ್ ಟೂರ್ನ್ ಎಂಬ ಕಂಪೆನಿಯಲ್ಲಿ ಆಲ್ಫ್ರೆಡ್ ಬರ್ನರ್ಸ್ ಎಂಬ ಕೆಲಸಗಾರ, ಕಳೆದ ಎಪ್ರಿಲಿನಲ್ಲಿ ಒಂದು ಯಂತ್ರದಲ್ಲಿ ಆತನ ಕೈಬೆರಳುಗಳು ಸಿಕ್ಕಿಕೊಂಡು, ನುಜ್ಜುಗುಜ್ಜಾದುವು. ಮುಂದೆ ಯಾವ ಕೆಲಸವನ್ನೂ ಮಾಡಲಾಗದುದರಿಂದ ಆತನು ಕಂಪೆನಿಯ ಮೇಲೆ ನಷ್ಟ ವ್ಯಾಜ್ಯವನ್ನು ಹೂಡಿದನು.

ವ್ಯಾಜ್ಯವು ನಡೆಯುತ್ತಿರಲು ಇತ್ತ ಆತನ ಪ್ರಕೃತಿಯಲ್ಲೂ ಆಶ್ಚರ್ಯಕರವಾದ ಪರಿವರ್ತನಗಳಾದುವು. ಆತನ ತಲೆಗೂದಲುಗಳು ಉದುರಿದುವು. ಅವು ಪುನಃ ಬೆಳೆಯುವಾಗ ಎಲ್ಲಾ ಕೂದಲುಗಳು ಬಿಳಿ! ಆತನ ಮುಖದಲ್ಲೂ ಮಾರ್ಪಾಟುಗಳಾಗಿ ವೃದ್ಧಾಪ್ಯದ ಚಿಹ್ನೆಗಳು ಕಂಡುವು. ಆತನಲ್ಲಿ ಯಾವ ಬಗೆಯ ಪರಿವರ್ತನೆಯುಂಟಾಯಿತೆಂದರೆ, ಆಪ್ತ ಮಿತ್ರರಿಂದಲೂ ಆತನ ಗುರುತು ಹಿಡಿಯಲು ಅಸಾಧ್ಯವಾಯಿತು. ಹೀಗೆ ಸ್ವಲ್ಪ ಸಮಯ ಕಳೆಯಿತು. ಪುನಃ ಆತನು ತಾರುಣ್ಯವನ್ನು ಹೊಂದಿದನು. ಕೂದಲು ಕಪ್ಪು ತಿರುಗಿತು. ಈ ಬಗೆಯ ಬದಲಾವಣೆಗಳಾಗಲು ಆತನ ಪಿಟ್ಯುಟರಿ ಗ್ರಂಥಿಗಳ ಅಸ್ತವ್ಯಸ್ತತೆಯೇ ಕಾರಣವಾಗಿರಬೇಕೆಂದು ವೈದ್ಯರು ಅಭಿಪ್ರಾಯಪಟ್ಟಿರುವರು.

ಆತನಿಗೆ 26 ಪವನುಗಳು ಪರಿಹಾರ ದ್ರವ್ಯವಾಗಿ ದೊರೆತುದಲ್ಲದೆ, ಮರಣ ಪರ್ಯಂತರ ವಾರಕ್ಕೆ 4 ಶಿಲ್ಲಿಂಗುಗಳು ಆತನಿಗೆ ದೊರಕುವುವು.

ಮರಗಳಿಗೆ ಎಣ್ಣೆಯ ಚಿಕಿತ್ಸೆ

ದಕ್ಷಿಣಾಫ್ರಿಕದಲ್ಲಿ ಫಲಪುಷ್ಪಗಳ ಮರಗಳನ್ನು, ಆಗಾಗ್ಗೆ ಎಣ್ಣೆ ಕೊಟ್ಟು ಬೆಳೆಸುತ್ತಿರುವರು. ಚಳಿಗಾಲದ ನಂತರ ಮರಗಿಡಗಳು ಸರಿಯಾಗಿ ಹೂ ಬಿಡದುದನ್ನು ಕಂಡು, ಹೂ ಬಿಡುವಂತೆ ಮಾಡಲು ಅನೇಕ ರೀತಿ ಪ್ರಯತ್ನಗಳು ಮಾಡಲ್ಪಟ್ಟುವು. ಕೊನೆಗೆ ಒಬ್ಬನು ಅಗಸೆ ಬೀಜದ ಎಣ್ಣೆಯನ್ನು ಮರದ ಮೇಲೆ ಚಿಮುಕಿಸಿದನು. ಮರವು ತುಂಬಾ ಹೂ ಬಿಟ್ಟು, ಯಥೇಷ್ಟ ಹಣ್ಣುಗಳಾದುದಲ್ಲದೆ, ಗಾತ್ರದಲ್ಲಿಯೂ ಅವು ದೊಡ್ಡದಾಗಿ ಬೆಳೆದಿದ್ದುವು. ಆದುದರಿಂದ ಅಗಸೆ ಬೀಜದ ಎಣ್ಣೆಯನ್ನು ಮರಗಳ ಮೇಲೆ ಚಿಮುಕಿಸುವುದು ಈಗ ಅಲ್ಲಿ ಪ್ರಚಾರಕ್ಕೆ ಬಂದಿರುವುದು.

ಸುವರ್ಣದ ಸೋಪಾನ

ದುಡ್ಡು ಹೆಚ್ಚಾದರೆ ಮನುಷ್ಯನಿಗೆ ಅದನ್ನು ಯಾವ ರೀತಿಯಲ್ಲಿ ಖರ್ಚು ಮಾಡುವುದೆಂದು ತಿಳಿಯುವುದಿಲ್ಲ. ಬ್ರಿಟನ್ನಿನ ಶ್ರೀಮಂತರೊಬ್ಬರು ತನ್ನ ಕೆಡ್ರಿಫ್ ಕೋಟೆಯ ಸೋಪಾನಗಳಿಗೆ ಬಂಗಾರದ ತಗಡನ್ನು ಮುಚ್ಚಬೇಕೆಂದು ಆಲೋಚಿಸುವವರಂತೆ. ಅವರ ಹೆಸರು ಮಾರ್ಕ್ವಿಸ್ ಒಫ್ ಬ್ಯೂಟ್ ಎಂದು. ಅವರ ಆ ಕೋಟೆಯಲ್ಲಿ ಕಾರ್ಯಕಲಾಪಗಳೆಲ್ಲ ಬಹು ವಿಜೃಂಭಣೆಯಿಂದ ಜರಗುತ್ತಿರುವುವು. ಅವರ ಸೇವೆಯನ್ನು ಮಾಡಲೆಂದೇ 50 ಮಂದಿ ಆಳುಗಳಿರುವರು.

ಆ ಕೋಣೆಯಲ್ಲಿ 'ಅರಬೀಯ ಕೊಠಡಿ' ಎಂಬುದೊಂದು ಇದೆ. ಅರಬೀಯರು ಯಾವ ರೀತಿಯಲ್ಲಿ ತಮ್ಮ ಕೋಣೆಯನ್ನು ಅಲಂಕರಿಸುತ್ತಾರೋ ಅದೇ ರೀತಿಯಲ್ಲಿದು ಸಿಂಗರಿಸಲ್ಪಟ್ಟಿರುವುದು.

ಆ ಕೋಟೆಯ ಮಾಳಿನ ಮುಚ್ಚಿಗೆಗೆ ಬಂಗಾರದ ವರಕವನ್ನು ಎಳೆದಿರುವರು; ನೆಲಕ್ಕೆ ಮಣಿಶಿಲೆಯನ್ನು ಮುಚ್ಚಿರುವರು; ಬಣ್ಣದ ಕನ್ನಡಿಯ ಬಾಗಿಲುಗಳು ಅದರ ಕಿಟಕಿಗಳಿಗೆ. ಅವರ ಸಂಪತ್ತು ಯಾವ ರೀತಿಯಲ್ಲಿ ಅಭಿವೃದ್ಧಿಯನ್ನು ಪಡೆಯುತ್ತಿಂಬುದನ್ನು ಅವರಿಗೆ ನೆನಪು ಮಾಡಿಕೊಡಲು, ಅವರ ಜಮಾನಿನಲ್ಲಿ ದೊರಕುವ ಖನಿಜಗಳಿಂದ ಖಚಿತವಾದ ಒಂದು ಹೂಗಿ ನಳಿಗೆಯನ್ನು ಶಯ್ಯಾಗಾರ ಒಂದಕ್ಕೆ ಇಟ್ಟಿರುವರು.

ಮಣಿಶಿಲಾ ನಿರ್ಮಿತ ರೋಮಿನಿಂದ ತಂದ ಒಂದು ಸ್ನಾನಪಾತ್ರವು ಅದರ ಸವಿಪದ ಕೋಣೆಯಲ್ಲಿರುವುದು. ಆ ಸ್ನಾನಪಾತ್ರದ ಬದಿಗಳಲ್ಲಿ ಲೋಹನಿರ್ಮಿತ ಮೀನುಗಳನ್ನು ಹಾಕಿರುವುದರಿಂದ, ಅವು ನೀರಿನಲ್ಲಿ ಈಸುವಂತೆ ಭಾಸವಾಗುತ್ತದೆ.

ಮಾರ್ಕ್ವಿಸ್ ಒಫ್ ಬ್ಯೂಟರ ಸಂಪತ್ತು ಸಾಧಾರಣ 60,000,000 ಪವನುಗಳಿರಬಹುದೆಂದು ಅಂದಾಜುಮಾಡಲಾಗಿದೆ!

ಹಿಂದುಸ್ಥಾನಿ ವಿರೋಧ ಚಳವಳ.

ಅನೇಕರ ದಸ್ತಗಿರಿ.

ಹಿಂದೂಸ್ಥಾನಿಯನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಬೇಕಾಗಿ ಹೊರಟ ಮದ್ರಾಸು ಸರಕಾರದ ಅಪ್ಪಣೆಗೆ ವಿರೋಧವಾಗಿ ಮದ್ರಾಸಿನಲ್ಲಿ ಚಳವಳವು ಪ್ರಾರಂಭವಾಗಿರುವುದು. ಚಳವಳದಲ್ಲಿ ಭಾಗವಹಿಸಿದವರನ್ನು ಸೆರೆಹಿಡಿಯಲಾಗಿದೆ. ಅವರ ಕುರಿತು ವಿಚಾರಣೆ[illegible] ಅವರ ಮೇಲೆ ಕ್ರಮಕಾಯಿದೆಗಳ ಜಾರಿಯಾಗುವವು.

'ಓವಲ್‌ಟಿನ್ನು' ಪುಷ್ಟವಾದ ದೇಹವನ್ನೂ ಚಟುವಟಿಕೆವುಳ್ಳ ಮನಸ್ಸನ್ನೂ ಉಂಟು ಮಾಡುತ್ತದೆ

ಮಲಗುವ ವೇಳೆಯಲ್ಲಿಯೂ, ಊಟದ ಸಮಯದಲ್ಲೂ ಓವಲ್‌ಟಿನ್ನನ್ನು ನಿಮ್ಮ ಮಕ್ಕಳ ದಿನನಿಕ್ಕದ ಪಾನೀಯವನ್ನಾಗಿ ಮಾಡಿದರೆ ಗಟ್ಟಿ ಮತ್ತು ಆರೋಗ್ಯವುಳ್ಳ ದೇಹವನ್ನೂ, ನರಗಳನ್ನೂ ಮತ್ತು ಚುರುಕಾದ ಮಾನಸಿಕ ಶಕ್ತಿಯನ್ನೂ ಬೆಳೆಸಲಿಕ್ಕೆ ಬೇಕಾಗುವ ಪೌಷ್ಟಿಕ ಪದಾರ್ಥಗಳು ಅದರಿಂದ ದೊರೆಯುತ್ತದೆಂದು ಖಂಡಿತವಾದ ಮಾತು.

ಶ್ರೇಷ್ಠವಾದ ಪಕ್ವ ಬಾರ್ಲಿ ಸತ್ವದಿಂದಲೂ, ಹಸಿಯಾದ ದನದ ಕೆನೆಹಾಲಿನಿಂದಲೂ ಶಾಸ್ತ್ರೀಯವಾಗಿ ತಯಾರು ಮಾಡಲ್ಪಟ್ಟದ್ದರಿಂದ 'ಓವಲ್ಟಿನ್' ಕಮ್ಮಿ ವೆಚ್ಚದಲ್ಲಿ ಹೆಚ್ಚಿನ ಆರೋಗ್ಯ ಪುಷ್ಟಿಯನ್ನು ಕೊಡುತ್ತದೆ. ಕೊಳ್ಳಬಹುದಾದ ಆಹಾರಗಳಲ್ಲೆಲ್ಲಾ ಇದು ಸರ್ವಶ್ರೇಷ್ಠವಾದ ಏಕಮಾತ್ರ ಆಹಾರವಾಗಿರುತ್ತದೆ

ಶ್ರೇಷ್ಠತೆಯಲ್ಲಿಯೂ ಬೆಲೆಯಲ್ಲಿಯೂ ಓವಲ್ಟಿನ್ ಏಕಮಾತ್ರವಾಗಿ ನಿಲ್ಲುತ್ತದೆ. ಆದರೆ ಮನೆಯಲ್ಲಿ ಉಪಯೋಗಿಸುವ ಸಕ್ಕರೆಯಂತಹ ಅಗ್ಗವಾದ ವಸ್ತುಗಳು ಓವಲ್ಟಿನ್‌ನಲ್ಲಿಲ್ಲ. ನಿಮ್ಮ ಮಕ್ಕಳ ಆರೋಗ್ಯಹಿತಕ್ಕಾಗಿ ಓವಲ್ಟಿನ್ನನ್ನೇ ಉಪಯೋಗಿಸಿರಿ. ನಕಲಿಗಳಿಗೆ ಮೋಸಹೋಗದಿರಿ

OVALTINE

'ಓವಲ್‌ಟಿನ್' ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ.

ಏಜಂಟ್ಸ್:— ಜೇಮ್ಸ್ ರೈಟ್ ಲಿಮಿಟೆಡ್, ಕಲ್ಕತ್ತಾ, ಕರಾಚಿ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ.

OV/133

ರತ್ನೈರ್ಮಹಾರ್ಹೈಸ್ತುತುಷುರ್ನ
ದೇವಾ । ನ ಭೇಜಿರೇ ಭೀಮ
ವಿಷೇಣ ಭೀತಿಮ್ । ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲನುಪಮ ರತ್ನಗಳು
ಸಾ । ಗರನ ಮಥಿಸಲು ಸುರರಿ
ಗದರಿಂ ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ।
ಗರಳಕವರಂಜಿದರೆ! ಸುಧೆಯಂ ।
ಪಡೆದು ಕೃತಾರ್ಥ
ರಿರದ ಕೆಲಸದೆ । ತೆರಳಿ ಬಲ್ಲರೆ!
ತೊರೆದು ಧೀರರು,
ನಿಶ್ಚಿತಾರ್ಥವನೆಂ ॥

ತಾರೀಕು ೨೪-೬-೧೯೩೮ ತಾರೀಕು 24-6-1938

ಸಾಂಪತ್ತಿಕ ಸ್ವರಾಜ್ಯವೆಂದರೇನು?

ಮಂತ್ರಿಯವರು ಶ್ರೀ ಗಿರಿಯವರ ಸೂಚನೆ.

ಏಳು ಲಕ್ಷ ಗ್ರಾಮಗಳೂ, ಏಳು ಕೋಟಿ ಕುಟುಂಬಗಳೂ ಇರುವ ದೇಶವಿದು ಈ ಏಳು ಕೋಟಿಗೆ ಪ್ರತಿ ದಿನ ಮೂರು ಹೊತ್ತು ಊಟಸಿಗಬೇಕು; ಏಳು ಕೋಟಿ ಕುಟುಂಬಗಳಿಗೆ ಏಳು ಕೋಟಿ ಮನೆಗಳಾಗಬೇಕು, ಪ್ರತಿದಿನಕ್ಕೆ 6 ಪ್ರತ್ಯೇಕ ಉಡುಪುಗಳಿರಬೇಕು, ಎಲ್ಲ ಮಕ್ಕಳಿಗೆ ಧರ್ಮಾರ್ಥ ವಿದ್ಯಾದಾನ ಒದಗಬೇಕು, ಇವರೆಲ್ಲರಿಗೆ ಮುಂದೆ ವೃತ್ತಿಯಿರಬೇಕು 55 ವರ್ಷ ವಯಸ್ಸು ದಾಟುತ್ತಲೆ, (ಹಾಗೆ ವಿಧವೆಯಾಗಿ) ಸಮಸ್ತರಿಗೆ ಪೆನ್ಶನು ಜೀವನಾರ್ಥಕ್ಕಾಗಿ ಸಿಗಬೇಕು, ಅತ್ಯುತ್ತಮ ವೈದ್ಯರ ವೈದ್ಯ ಸಹಾಯವು ಸಮಸ್ತರಿಗೆ ಸಿಗಬೇಕು,—ಹೀಗಾದರೆ ಮಾತ್ರ ಸಾಂಪತ್ತಿಕ ಸ್ವರಾಜ್ಯವು ನಮಗೆ ದೊರಕಿತೆಂತಾಗುವುದು

ಹೀಗೆಂದು ಸರಿಯಾಕುಲಂ ಗಾಂಧಿ ಮೈದಾನಿನಲ್ಲಿ ಶ್ರೀ ಗಿರಿಯವರು ಭಾಷಣ ಮಾಡಿದರು. 'ಕಾಂಗ್ರೆಸು ಅಧಿಕಾರಕ್ಕೆ ಬಂದು ಬಂದು ವರ್ಷವಾಗುತ್ತದೆ, ಇದುವರೆಗೆ ಮಾಡಿದ್ದೇನ? ಎಂದು ಕೇಳುವವರಿದ್ದಾರೆ ಕಾಂಗ್ರೆಸು ಮಾಡಿದ್ದುದೇನು? ಎಂದು ಮಂತ್ರಿಯವರ ಕೇಳುತ್ತಾರೆ ಹಿಂದಣ ಮಂತ್ರಿಮಂಡಲಗಳು 40 ವರ್ಷಗಳಲ್ಲಿ ಮಾಡಿರಲಾರದನ್ನು, ಈ ಕಾಂಗ್ರೆಸು ಮಂತ್ರಿಗಳು ಹತ್ತೇ ತಿಂಗಳಲ್ಲಿ ಸಾಧಿಸಿರುವರೆಂದು ಉತ್ತರ ಹೇಳಿದ್ದಾರೆ

ಕಾಂಗ್ರೆಸು ಸರಕಾರವು, ಚುನಾವಣೆಯ ಕಾಲದಲ್ಲಿ, ವಾಗ್ದಾನಮಾಡಿದ್ದನ್ನು ಮಾಡಬೇಕಾಗಿದೆ ಶಿಮಂತರಲ್ಲಿ ಕೆಲವರು ತಮಗೆ ನಷ್ಟವಾಗಿದೆ ಎನ್ನುತ್ತಾರೆ ಅವರೊಡನೆ ಮಂತ್ರಿಗಳಿಗೆ ಸಹಾನುಭೂತಿಯುಂಟು. ರೈತರ ಸಾಲ ವಿಮೋಚನೆಯ ಆಕ್ಟಿನಿಂದ ಉಪಕಾರಹೊಂದಿದವರು ಶ್ರೀಮಂತರಿಗೆ ಕೃತಜ್ಞರಾಗಬೇಕು ಜನತೆಯಲ್ಲಿನ ನಾನಾ ವರ್ಗಗಳೊಳಗೆ ರಾಜಿಯಾಗಿ ಸಮಾಧಾನವಾಗುವಂತೆ ಪ್ರಯತ್ನ ಮಾಡುತ್ತಿರುವುದು, ಕಾಂಗ್ರೆಸ್ ಮಂತ್ರಿಮಂಡಲ

'ಸರಕಾರವು ಶ್ರೀಮಂತರ ಕಡೆಗೆ ಉದಾರ ಭಾವದಿಂದೇ ಇದೆಯೆಂಬುದಕ್ಕೆ ಶ್ರೀಮಂತರಾದರೂ ಕೃತಜ್ಞರಾಗಿರಬೇಕು ನಿಜವಾಗಿಯೂ 'ಕಾನಿನಮಾದರಿ' ಸರಕಾರವು ಅಧಿಕಾರದಲ್ಲಿದ್ದಿದ್ದರೆ, ರೈತರ ಋಣವಿಮೋಚನಾ ಆಕ್ಟಿನ ಬದಲಾಗಿ, ಸರಕಾರವು ಶ್ರೀಮಂತರದೆಲ್ಲವನ್ನೂ ಕಸಿದುಕೊಳ್ಳುತಿತ್ತು. ಅಲ್ಪ ಸ್ವಲ್ಪ ಕಳೆದುಕೊಂಡು ನೆಮ್ಮದಿಯಾಗಿರುವುದುತ್ತಮವೆ, ಸರ್ವಸ್ವವನ್ನೂ ಕಳೆದುಕೊಳ್ಳುವುದುತ್ತಮವೆ? ತಿಳಿಸಿರೆಂದರು.

'ನಾವೆಲ್ಲ ಭಾರತವಾಸಿಯರು, ಒಂದೇ ಕುಟುಂಬದವರು. ನಮ್ಮೊಳಗೆ ವೈಯಕ್ತಿಕ ಭೇದಗಳಿರಬಾರದು. ಸ್ವರಾಜ್ಯ ಬೇಕಾದರೆ ನಾವೆಲ್ಲ ಒಂದಾಗಬೇಕು. ನಾನು ದೇಶಕ್ಕಾಗಿ ಏನೂ ಮಾಡಿಲ್ಲ. ಸ್ವರಾಜ್ಯದ ರೂಪಾಯಿ

ಗ್ರಾಮಗಳಲ್ಲಿ ಶಿಕ್ಷಣ ಪ್ರಚಾರಕ್ಕೆ ರಷ್ಯದ ಕ್ರಮ ಉತ್ತಮವೆಂದು ಮಾಜಿ ಕೃಷಿ ಇಲಾಖಾ ಡೈರೆಕ್ಟರರ ಸೂಚನೆ

ಕೊಡೆಕ್ಕನಾಲಿನಲ್ಲಿ—ಗ್ರಾಮ ಸ್ವರಕ್ಷೆ—ಎಂಬ ವಿಷಯವನ್ನೆತ್ತಿ ಶ್ರೀ ಡಿ ಆನಂದರಾವ್ ಕೃಷಿ ಇಲಾಖೆಯ ಮಾಜಿ ಡೈರೆಕ್ಟರರ ಭಾಷಣ ಮಾಡಿದರು. ಭಾರತವಾಸಿಗಳಲ್ಲಿ ನೂರರಲ್ಲಿ 90 ಮಂದಿ ಗ್ರಾಮಾಂತರಗಳಲ್ಲಿರುವರು. ಇವರು ಅಜ್ಞಾನಾಂಧಕಾರದಲಿ ನರಳುತ್ತಿರುವರು. ಇವರಿಗೆ ಕೃಷಿಯೊಂದೇ ಮಾತ್ರ ಜೀವನಾಧಾರವಾಗಿದೆ ಕಾವಾಗಿ ಜನಸಮೂಹಕ್ಕೆ ಮಾಡುವ ಸೌಕರ್ಯ ದೊರೆಯದೆ ವಲಂಬದ ಆಶ್ರಯ ಹೊಂದಿ ಇವರ ಬಾಳಬೇಕಾದೆ ಇವರು ತಮಗೆ ಬೇಕಾದಂತೆ ಜನಸಮೂಹಕ್ಕೆ ಎಲ್ಲ ಪೂರೈಸುವ ಕಾರಣ, ಕೃಷಿಕರಿಗೆ ನಷ್ಟವು ಅಪಾರವಾಗಿದೆ ಹೀಗಿರುವಲ್ಲಿ ಅವರ ಕೃಷಿಯ ಕಡೆಗೆ ಮನಸ್ಸು ಕೊಡುವುದು ಸಾಧ್ಯವೇ? ಹೀಗಿದ್ದರೆ ಅವರು ಹೇಗೆ ಮಾಡಿ ಬದುಕುತ್ತಿದ್ದಾರೆ

ಇವರ ದಾರಿದ್ರ್ಯಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಕಾರಣಗಳೇ ಮುಖ್ಯವಾಗಿವೆ. ರಾಜಕೀಯ ಕಾರಣಗಳು ಅಷ್ಟಲ್ಲ. ಹೊಸ ಬಗೆಯ ಉತ್ತಮ ನೇಗಿಲಿಗಳನ್ನು ಇತರ ಉಪಕರಣಗಳನ್ನು ಹೆಚ್ಚಿಗೆ ಉಪಯೋಗಿಸಲೊಲ್ಲದ ಬೇಸಾಯಗಾರರು ಒಂದು ಮದುವೆ ಅಥವಾ ಉತ್ತರ ಕ್ರಿಯೆಗಾಗಿ ಭೂಮಿಯಿಂದ ನೂರು ರೂಪಾಯಿ ಸಾಲವಾಗುವುದು ಉಂಟಾಗುವುದು

ಸಂಪೂರ್ಣವಾಗಿ ಅಕ್ಷರಸ್ಥರಾಗುವ ತನಕ ಹಳ್ಳಿಗಳು ಉದ್ಧಾರ ಹೊಂದುವುದಿಲ್ಲ ವಿದ್ಯಾಪ್ರಚಾರದಿಂದ ಗ್ರಾಮಸ್ಥರು ಕಣ್ತೆರೆದ ಬಳಿಕ ಬಹುದಾದ ಕಾರಣ ಗ್ರಾಮಗಳಲ್ಲಿ ಶಿಕ್ಷಣ ಪ್ರಚಾರಮಾಡುವುದು ಸರಕಾರದ ಮೊದಲ ಕರ್ತವ್ಯವಾಗಿದೆ ಆದರೆ, ಈಗಣ ವಿಧಾನಗಳಿಂದ ಶಿಕ್ಷಣ ಸಿರ್ವತ್ರ ವಾಗಬೇಕಾದರೆ, ಹಲವು ಶತಮಾನಗಳು ಬೇಕಾದಾವು ಅದಕ್ಕಾಗಿ ರಷ್ಯದ ವಿಧಾನಗಳನ್ನು ಜಾರಿಗೆ ತಂದು ಪ್ರತಿಯೊಬ್ಬ ಅಕ್ಷರಸ್ಥನೂ ನಿರಕ್ಷರರನ್ನ ಕಲಿಸುವಂತೆ ಏರ್ಪಡಿಸಿದರೆ ಮಾತ್ರ ಬೇಗನೆ ಸರ್ವತ್ರವೂ ಶಿಕ್ಷಣ ಪ್ರಚಾರವಾದೀತು

ಸರಿ,—ಇನ್ನು ಕಾಂಗ್ರೆಸ್ ಮಂತ್ರಿಗಳು ಈ ವಿಚಾರದಲ್ಲಿ ಏನನ್ನುವರೋ! ಬಿಹಾರ, ಮಧ್ಯಪ್ರಾಂತ್ಯದಲ್ಲಿನ ಕ್ರಮಗಳನ್ನು ಮದ್ರಾಸು ಪ್ರಾಂತ್ಯದಲ್ಲಿ ಜಾರಿಗೆ ತರಬಾರದೇ?

ಯಲ್ಲಿ ಅಧಿಕಾರ ಕೊಡ ಇನ್ನೂ ಲಭಿಸಿಲ್ಲ. ಲಾಠಿಚಾರ್ಜಿಗೆ ಗುರಿಮಾಡಿ ಸೆರೆಮನೆಗೆ ನಿಮ್ಮನ್ನು ಕಳುಹಲು ಸರಕಾರವು ಒಪ್ಪದು. ಒಂದೊಂದು ಕುಟುಂಬದಿಂದ ಒಬ್ಬನಾದರೂ ಕಾಂಗ್ರೆಸ್ ಸದಸ್ಯನಾಗಬೇಕೆಂದು ನಾವೆನ್ನುತ್ತೇವೆ. ಹಾಗಾದಲ್ಲಿ, ನಮಗೆ ಸ್ವರಾಜ್ಯ ಸಿಗುವುದು ಖಂಡಿತ.

ಕಾಂಗ್ರೆಸ್ ಧ್ವಜವನ್ನು ಎಲ್ಲಿ ಪ್ರದರ್ಶಿಸಬಹುದು?

ಮದ್ರಾಸ್ ಮುಖ್ಯಮಂತ್ರಿಗಳ ನಿರ್ಧಾರ

ಕಾಂಗ್ರೆಸು ಇದೀ ರಾಷ್ಟ್ರದ್ದೆಂದು ನಿರ್ಧರಿಸುವ ಧ್ವಜವನ್ನು ರಾಷ್ಟ್ರಧ್ವಜವೆಂದು ಎಲ್ಲರೂ ನಂಬಬೇಕಾದರೆ, ಅದನ್ನು ಚುನಾವಣೆಗಳ ಕಾಲದಲ್ಲಿ ಮತ್ತು ದೇವಸ್ಥಾನಗಳ ಮೇಲೆ ಪ್ರದರ್ಶಿಸಬಾರದೆಂದು ಮದ್ರಾಸ ಶ್ರೀ ರಾಜಗೋಪಾಲಾಚಾರಿ ರುವುದು. ಪ್ರತ್ಯೇಕ ದೇವಸ್ಥಾನಗಳ ಮೇಲೆ ಅದನ್ನು ಹಾರಾಡಿಸುವುದರಿಂದ, ಅದು ಹಿಂದುಗಳ ಧ್ವಜವೆಂದು ಭಾವಿಸಲು ತಕ್ಕ ಕಾರಣವಾಗುವುದು.

ಆದರೆ ಮಾಡುವುದೇನು? ಒಂದು ಪಕ್ಷದವರ ಧ್ವಜವೆಂದು ತಿಳಿದ ಕಾಂಗ್ರೆಸು ಧ್ವಜವು ಅಂಗೀಕೃತವಾದ ಬಳಿಕ, 'ಅದು ಪಕ್ಷದ್ದಲ್ಲವೆಂದಾದರೂ ಹೇಗೆ ಹೇಳಬಹುದು? ಕಾಂಗ್ರೆಸಿಗರು ಅದನ್ನು ಮಂತ್ರಿಶ್ವರರ ಮಾತಿನಂತೆ ಹಾಗೆ ಅಂಗೀಕರಿಸದಿರುವರೇ" ಮತದಾರರು ಏನೆಂದಾರು? ಅವರಿಗೆ ಇದು ರಾಷ್ಟ್ರದ್ದು, ಹೊರತು ಕಾಂಗ್ರೆಸಿನದೇ ಮಾತ್ರವಲ್ಲವೆಂದು ತಿಳಿಯಬಂದೀತೇ? ಕಾಂಗ್ರೆಸ ರಾಷ್ಟ್ರದ ಸಂಘವೆಂದು ಇದುವರೆಗೆ ಸಾಧಿತವಾಗ, ಈಗ ಕಾಂಗ್ರೆಸ್ ಪಕ್ಷದ ಚುನಾವಣೆ ಕಾಲದಲಿ ಅದನ್ನು ಪ್ರದರ್ಶಿಸಬಾರದೆನ್ನುವುದೆ?

ಪುನಃ—ಕಾಂಗ್ರೆಸು ರಾಷ್ಟ್ರೀಯದ ಒಂದು ಚುನಾವಣೆಗೆ ನಿಲ್ಲಾಗ ಎಲ್ಲರೂ ಗೆದ್ದವರಿಗೆ ಓಟುಗಳು ಸಿಗುವುವಲ್ಲವೆ? ಆಗ ಈ ಧ್ವಜವು ಇಡೀ ಜನಾಂಗದ ಧ್ವಜವೆನ್ನುವುದು ಸರಿಯಾದೀತೆ? ಎದುರಾಳಿಯೂ ಜನಾಂಗದವನಲ್ಲವೆ? ಗೆದ್ದವನು ರಾಷ್ಟ್ರೀಯ ಭಾವವನ್ನು ಹೊತ್ತಾಗ ಕಳೆದಿರಬಹುದಾದರೂ, ಎದುರಾಳಿಯೂ ರಾಷ್ಟ್ರದವನಲ್ಲವೆ? ಈ ಧ್ವಜವು ಅವನಿಗೂ ಸಂಬಂಧಪುಳ್ಳದ್ದೇ, ಅಲ್ಲವೆ?

ಗುಂಟೂರಿನಲ್ಲಿ ಉಂಟಾದ ಧ್ವಜದ್ವಂದ್ವದ ಉಪಟಳವು ಇನ್ನೂ ತೀರ್ಮಾನವಾಗಿಲ್ಲ ಅದೂ ಮಂತ್ರಿಯವರ ಸ್ಮರಣೆಯಲ್ಲಿರಬಹುದು ರಾಜಕೀಯ ಪಕ್ಷಗಳಲ್ಲಿ ಹಲವು ಇವೆ ಕಾಂಗ್ರೆಸ್ ಧ್ವಜವನ್ನ ಈ ಪಕ್ಷಗಳೆಲ್ಲ ಸೇರುವಲ್ಲಿ ಹಾರಿಸುತ್ತಿದ್ದರೆ, ಕಾಂಗ್ರೆಸೇತರ ಪಕ್ಷದವರಿಗೆ ಅವರು ಸದಾ ಅಲ್ಪಸಂಖ್ಯಾಕರೆಂಬುದರ ಸೂಚನೆಯು ಮಾಡಿದಂತೆ ಆಗದೆ? ಗೆದ್ದವರ ಜಯಧ್ವಜವನ್ನು ನೋಡಿ ನೋಡಿ ಅವರು ನೊಂದು ಬಾಡರೇ? ಕಾಂಗ್ರೆಸ್ ಧ್ವಜದೊಡನೆ ಲೀಗಿನ ಧ್ವಜವನ್ನು ಹಾರಿಸಬೇಕೆಂದರೆ,—ಕಾಂಗ್ರೆಸ್ ಧ್ವಜವು ಒಂದು ಪಕ್ಷದ ಹೊರತು ಒಂದು ಜನಾಂಗದ ಧ್ವಜವೆನಿಸದಲ್ಲ! ಲೀಗಿನ ಧ್ವಜವನ್ನು ತೂಗಿಸಿರೆಂದರೆ,—ಇನ್ನು ಸರಕಾರದ ಕಟ್ಟಡಗಳ ಮೇಲೆ ಯಾವ ಧ್ವಜವನ್ನು ಪ್ರದರ್ಶಿಸಬಹುದೆಂಬ ದೊಡ್ಡದೊಂದು ಪ್ರಶ್ನೆಯು ಉಂಟಾಗಲಾರದೆ? ರಾಷ್ಟ್ರಧ್ವಜವೆಂದ ಧ್ವಜದ ಹತ್ತಿರ ಇನ್ನಾವುದೊಂದು ಧ್ವಜವಿದ್ದರೆ, ಅದರ ಇಂಗಿತವೇನು? ಇದರ ಅರ್ಥಸೂಚನೆಯೇನು?

ಮುಸ್ಲಿಂ ಲೀಗ್ ಯಾರ ಪ್ರತಿನಿಧಿ?

ಬೊಂಬಾಯಿಯ ಮುಸ್ಲಿಂ ಸಂಗಡದೊಂದು ಮಹಾಪ್ರಶ್ನೆ.

ರಾಷ್ಟ್ರೀಯ ಮುಸ್ಲಿಮರು ಬೊಂಬಾಯಿನ ಕಾಂಗ್ರೆಸ್ ಮಂದಿರದಲ್ಲಿ, ಶ್ರೀ ಅಲಿವಾಹಿದ್ ಖಾನರ ಅಧ್ಯಕ್ಷತೆಯಲ್ಲಿ ತಾ 19ರಲ್ಲಿ ಸೇರಿದಾಗ ಮುಂದೆ ಬಂದ ಅಂಗೀಕೃತವಾದ ಸೂಚನೆಯಿದು — ಅಖಿಲಭಾರತದ ಮುಸ್ಲಿಂ ಲೀಗಿನ ಅಧ್ಯಕ್ಷರಾಗಿರುವ ಶ್ರೀ ಜಿನ್ನಾರವರು ಮುಸ್ಲಿಂ ಲೀಗ್ ಎಂಬುದು ಭಾರತವರ್ಷದಲಿನ ಮುಸ್ಲಿಮರ ಪ್ರತಿನಿಧಿ ಸಂಸ್ಥೆಯೆಂದು ಸೂಚಿಸುವುದು ಅತಿರೇಕವಾದ ಉದ್ದಾಮತನ ಇದು ನ್ಯಾಯ ಸಮ್ಮತವೂ ಅಲ್ಲ, ಅಂಗೀಕಾರಯೋಗ್ಯವೂ ಅಲ್ಲ ಏಕೆಂದರೆ, ಇದನ್ನು ಕಾಂಗ್ರೆಸು ಅಂಗೀಕರಿಸುವುದಾದಲ್ಲಿ ತಿರಿತಿರುಗಿ ಕಾಂಗ್ರೆಸ ರಾಷ್ಟ್ರದ ಉದ್ದೇಶಕ್ಕೆಂದು ತಲೆತಲಾಂತರಗಳಿಂದಲೂ ಸಮಸ್ತವನ್ನು ತ್ಯಾಗ ಮಾಡಿ ಸರಕಾರದ ಘೋರ ಸ್ವಾತಂತ್ರ್ಯವಾದ ಬಲಿಯಾದ ಮುಸ್ಲಿಮರು ಕಾಂಗ್ರೆಸಿನ ಕರೆಯನ್ನು ಒಪ್ಪಿಸಿ ಅದರ ಆಶಯದಕ್ಷದ್ದನ್ನು ವಿರೋಧಿಸಿದ ಲೀಗಕ್ಕೆ ಕಾಂಗ್ರೆಸ ಬಳಸಿದು ಪುದು, ಮಾತ್ರವಲ್ಲದೆ, ರಾಷ್ಟ್ರೀಯ ಮಾತ್ರ ಜನಾಂಗದ ನಿರ್ಣಯದಿಂದ ಎಲ್ಲ ಪಕ್ಷಗಳ ತಳಮಳಗಳನ್ನು ಬಹುಮಾನಿಸಿದಂತಾದೀತ

ರಾಷ್ಟ್ರೀಯ ಹಿತಕ್ಕಾಗಿ ಯಾವ ನಿರ್ಧಾರವನ್ನು ರಾಷ್ಟ್ರೀಯ ಪಕ್ಷದ ಮುಸ್ಲಿಮರು ಮುಸ್ಲಿಮರು ಆದರೆ ಜನಾಂಗದ ಹಕ್ಕುಗಳನ್ನು ಎಷ್ಟು ಮಾತ್ರ ಕಾಪಾಡಿದರೂ ಅದು ಕಾಂಗ್ರೆಸ ಮುಸ್ಲಿಮ ಮನೋಭಾವ ನೀತಿಯನ್ನು ಗಳಿಸಲಿಯುವಷ್ಟು ಉಂಟುಮಾಡಿರ ಪ್ರತಿಯುತ್ತಿಗೆ ಏರಪಡಿಸಿದ ತಳಮಳವನ್ನು ಉತ್ತೇಜನ ಕೊಟ್ಟೀತು

ಶ್ರೀ ಸಭೋವದ ತಯಾರು ಪೂರ್ವ ಬಂಗಾಳದಲ್ಲಿ ಸಂಚಾರಮಾಡುವಾಗ, ಮುಸ್ಲಿಂ ಲೀಗಿನ ಅಭಿಮಾನಿಗಳು ಅವರಿಗೆ ಹಿಂಸೆಪಡಿಸಿದುದನ್ನು ಈ ಸಭೆ ಖಂಡಿಸಿದುದೆ

ಕೊನೆಗೆ,— ಮುಸ್ಲಿಮರೊಳಲ್ಲಿ ' ಕೆಚ್ಚಾಗಿ ಕಾಂಗ್ರೆಸಿನ ಅರಿವು ಉಂಟಾಗುವ ಹಾಗೆ ಕಮಿಟಿಗಳು ಪ್ರಚಾರದ ಕೆಲಸಮಾಡತಕ್ಕದೆಂದು ನಿರ್ಧಾರವಾಗಿ ಸಭೆ ಮುಗಿಯಿತು

ಅದಕ್ಕಾಗಿಯೇ, ಮಂತ್ರೀಶ್ವರರ ವಿಧಾನ ಹೀಗಾಗಿರಬೇಕು)

ಪರಂತು, ರಾಷ್ಟ್ರಧ್ವಜವೆಂಬುದನ್ನು ಹಾಗೆ ಹೆಸರಿಟ್ಟಕೂಡಲೆ ಅದು ರಾಷ್ಟ್ರಧ್ವಜವೆನಿಸದು, ಸಮಸ್ತರೂ ಅದನ್ನು ಹಾಗೆ ಗಣನೆಗೆ ತಂದುಕೊಳ್ಳುವಂತಾಗಬೇಕು ಅಲ್ಲಲ್ಲಿ ಈ ಧ್ವಜವನ್ನು ಪ್ರದರ್ಶಿಸಿ, ಈ ಪ್ರದರ್ಶನದಿಂದಾದ ಕೆಲ ಉಪಟಳಗಳಿಂದಾದರೂ ಈಗ ಇದು ಒಂದು ಪಕ್ಷದವರ ಧ್ವಜವಾಗಿ ನಿಲ್ಲಬೇಕಾಗಿ ಬಂದಿರುವುದು ಶೋಚನೀಯವಾಗಿದೆ.

ಸ್ವದೇಶಾಭಿಮಾನಿ

ನೋಟಗಳು.—Note.....s

ಇಂಗ್ಲೆಂಡಿನಲ್ಲಿ ವೈಸ್ರಾಯರು.

ನಮ್ಮ ವೈಸ್ರಾಯರು ಲೋರ್ಡ್ ಲಿನ್‌ಲಿಥ್ಗೋರವರು ನಾಳೆ ಬೆಳಗ್ಗೆ ಮುಂಬಾಯಿಂದ ನಾಲ್ಕು ತಿಂಗಳ ರಜಾ ಪಡೆದು ಇಂಗ್ಲೆಂಡಿಗೆ ತೆರಳುವರು. ರಜೆಯ ಕಾರಣವು, "ಸಾರ್ವಜನಿಕ ವಿಚಾರಗಳ ಕಾರಣದಿಂದಾಗಿ" ಎಂದು ತಿಳಿಸಲಾಗಿದೆ. ಲೋರ್ಡ್ ಝೆಟ್ಲೆಂಡರು ಈ 'ಮನೆಗೆ ಮರಳೋಣವು' "ಫೆಡರೇಶನ್ ವಿಷಯವೆಲ್ಲ ಬ್ರಿಟಿಷ ಸರಕಾರದೊಡನೆ ಚರ್ಚಿಸಲಿಕ್ಕಾಗಿ ಎಂಬುದು ನಿರಾಧಾರವಾಗಿದೆ" ಎಂದು ಕೆಲದಿನಗಳ ಹಿಂದೆ ಲಂಡನಿನಲ್ಲಿ ತಿಳಿಸಿರುವರು. ಆದರೂ ಹಲಕೆಲವು ಸಿವಿಲ್ ಮತ್ತು ಮಿಲಿಟರಿ ಇಲಾಖಾ ಮುಖ್ಯಾಧಿಕಾರಿಗಳೂ ಇದೇ ಕಾಲದಲ್ಲಿ ಲಂಡನಿನಲ್ಲಿರುವ ಪ್ರಯುಕ್ತ, ಭಾರತವರ್ಷದ ರಾಜಕೀಯ ಭವಿತವ್ಯತೆಯನ್ನು ಕುರಿತಾಗಿ ನಾಲ್ಕು ಮಾತುಗಳಾದರೂ ಪ್ರಸಂಗಾವಕಾಶದಲ್ಲಿ ನಡೆಯದಿರಲಾರವು ಎಂದು ಊಹಿಸಲು ಒಳ್ಳೆಯ ಕಾರಣಗಳಿವೆ. ಬ್ರಿಟಿಷ ಸೆಕ್ರೆಟರಿಯವರು ಯಾವಾಗಲು, ಕೊನೆಯ ತನಕ ನಿಷೇಧಿಸಿರುವುದನ್ನು ಕಡೆಯ ನಿಮಿಷದಲ್ಲಿ ತಿದ್ದಿ ಪ್ರಕಟಣೆಗಳನ್ನು ಹೊರಡಿಸುವ ಕ್ರಮವೊಂದಿದೆ ಹೀಗಾಗಿ ಫೆಡರೇಶನ್ ವಿಚಾರದ ನಿರ್ಧಾರದ ವಿಷಯದಲ್ಲೂ ಹೀಗಾಗಬಾರದೆಂದಿದೆಯೆ?

ಫೆಡರೇಶನಿಗೆ ವಿರುದ್ಧವಾಗಿ ಪ್ರಚಂಡವಾಗಿ ಇಲ್ಲಿ ಅಭಿಪ್ರಾಯವಿದೆ ಇಲ್ಲಿನವರ ಮಾತಿರಲಿ, ವಿದೇಶದಿಂದ ಇಲ್ಲಿಗೆ ವಿಹಾರಕ್ಕಾಗಿ ಬಂದವರೂ ಇದನ್ನು ಕಂಡಿದ್ದು, ಲಂಡನಿನಲ್ಲಿ ತಿಳಿಸಿಯೂ ಇದ್ದಾರೆ ಪ್ರಾಂತಿಕ ಸ್ವರಾಜ್ಯಕ್ಕೆ ಜನತೆ ಒಡಂಬಟ್ಟಂತೆ ಫೆಡರೇಶನಿಗೂ ಒಡಂಬಡಬಹುದೆಂದು ಲಂಡನಿನಲ್ಲಿ ಯಾರೂ ಭ್ರಮಿಸಿರುವರಾದರೆ, ಅದು ಮೋಸಕರವಾದೀತು. 'ಸ್ವಾತಂತ್ರ್ಯದಾನದ ಬದಲಾಗಿ, ಇನ್ನೂ ಬಲುವಾಗಿ ಸಂಕೋಲೆಯಿಕ್ಕುವ ಫೆಡರೇಶನು ಎಂದು ಭಾರತೀಯರು ನನ್ನುವರೆಂದು. ಲೋರ್ಡ ಸಾಮುವೇಲರೇ ತಿಳಿಸಿರುವರ ವಿಕೆಂಪರೆ ಸ್ಥಳೀಯ ರಾಜ್ಯಗಳ ಪ್ರತಿನಿಧಿಗಳು ಈ ಫೆಡರೇಶನ್ ಕೌನ್ಸಿಲಲ್ಲಿರುವರೋ ಅದುವರೆಗೆ ಪುರಾತನ ನಿಶ್ಶಂಖಲವಾದವೇ ಗೆದ್ದಿರುವುದಾಗಿಯೂ, ಪ್ರಾಂತೀಯ ಪ್ರತಿನಿಧಿಗಳ ಉದಾರ ಪ್ರಗತಿಪರ ಧೋರಣೆಗಳು ನಿರ್ವೀರ್ಯವೊಂದುವುವಾಗಿಯೂ ಭಾರತೀಯರು ನಂಬಿರುವುದರಲ್ಲಿ ತಪ್ಪಿಲ್ಲ ದೇಶರಕ್ಷಣೆ ಮತ್ತು ಪರದೇಶೀಯ ವ್ಯವಹಾರ ವಿಭಾಗಗಳಲ್ಲಿ ಭಾರತೀಯರಿಗೆ ಕೈಹಾಕಬಾರದೆಂದಾದಲ್ಲಿ, ಫೆಡರೇಶನಿನಿಂದ ಏನು ಮಹಾ ಉಪಯೋಗವಿರಬಹುದು? ಸೈನ್ಯದ ಖರ್ಚು ಕಂದಾಯದ ಹಿರಿದ್ದ ಅಂಶವಾಗಿ ತೋರಿದರೂ, ಎಷ್ಟೋ ವರ್ಷಗಳಿಂದ ಅಷ್ಟಕ್ಕೇ ನಿಂತಿದೆ ಎಂದು ಸಮಾಧಾನ ಮಾಡುವ ಉಪಕರಣೀಕರ ಮಾತಿಗೆ ಅರ್ಥವಿಲ್ಲ

ಹೀಗಿರುವ ಕಾರಣ, ಫೆಡರೇಶನಿನ ಯೋಜನೆಯನ್ನು ಬದಲಾಯಿಸಬೇಕೆಂದಲ್ಲಿ, ಅದೇನೂ ಆಗಲಾರದು, ಎಷ್ಟಾಗಬೇಕಿತ್ತೋ ಅಷ್ಟೂ ವಿಚಾರವಾಗಿಯೇ ಮುಗಿದಿದೆ' ಎಂದು ಝೆಟ್ಲೆಂಡರೆಂದುದರಿಂದ, ಅವರು 1935ರ ಶಾಸನ ಭಾರತದ ಪ್ರಚಲಿತ ವಿದ್ಯಮಾನಗಳನ್ನು ತಿಳಿದಿರುವುದಿಲ್ಲವೆಂದು ಖಂಡಿತವಾಗಿ ಹೇಳಬಹುದಾಗಿದೆ, ಭಾರತೀಯರು ತಮ್ಮ ದೇಶವನ್ನು ತಾವೇ ಆಳಲಾರದವರೆಂದು ಮೂಲಸೂತ್ರವನ್ನು ಹಾಕಿಕೊಂಡು, ಹೊಸ ಕಾನೂನನ್ನು ಬ್ರಿಟಿಶರು ಮಾಡಿಕೊಡುವರಾದರೆ, ಅದು ಮೂಲದಲ್ಲಿಯೇ ಕೊಳೆತುದೆಂದು ಅದನ್ನು ಮುಟ್ಟುವುದಕ್ಕೂ ಹೇಸಿ, ಕೈತೊಳೆದುಕೊಳ್ಳುವುದೂ ಅಗತ್ಯವಾದೀತಲ್ಲವೆ?

ಕರ್ಜನರ ಕಾಲದಲ್ಲಿದ್ದ ಗೋಖಲೆಯವರ ನೆನಪು ನಮಗೆ, ಪ್ರತಿವರ್ಷವೂ, ಒಂದು ಸಲವಾದರೂ ಉಂಟಾಗುವಂತೆ, ಸರ್ವೆಂಟ್ಸ ಒಫ್ ಇಂಡಿಯಾ ಸೊಸಾಯಿಟಿಯ ವಾರ್ಷಿಕ ವರದಿ ಎಚ್ಚರಿಸುತ್ತದೆ. ಈ ಸೊಸಾಯಿಟಿಯ ಉತ್ಪಾದಕರು ಅವರೇ ಆಗಿದ್ದರೂ, ಈಗ ಅವರ 'ಸ್ಥಾನದಲ್ಲಿ ನಿಂತು, ಕರ್ಜನರ ಎದುರಲ್ಲಿದ್ದ ಅರ್ಜುನರಂತೆ ಕಾದಾಡಬಲ್ಲವರೊಬ್ಬರೂ ಇಲ್ಲ! ಈ ಕಾರಣದಿಂದಲೇ ಅವರ ನೆನಪು ನಮ್ಮಲ್ಲಿ ಉಂಟಾಗುವುದು.

ಂ ಂ ಂ ಂ

ಈಸ್ಟ್ ಇಂಡಿಯನ್ ರೈಲ್ವೆಯಲ್ಲಿ ಮತ್ತೊಂದು ಅನಘಡವುಂಟಾದಾಗ, ರೈಲುಗಾಡಿಯಲ್ಲಿದ್ದ ಬ್ರಿಟಿಷ್ ಸಿಪಾಯರು ಕೂಡಲೆ ಅಕ್ಕು ದಾರ ಬುದ್ಧಿಯಿಂದ ಯಾವ ಕೂಲಿಯವರಿಗೂ ಮೀರಿದ್ದಷ್ಟು ಪರಾಕ್ರಮದಿಂದ, ಗಾಡಿಯ ಅಡಿಯಲ್ಲಿ ಬಿದ್ದು ಗಾಯಗೊಂಡವರನ್ನು ಉದ್ಧರಿಸಿದರು. 'ಇವರ ಈ ಸಂಕಟನಿವಾರಣೆಯ ಸಾಧನೆಗಾಗಿ ಅವರನ್ನು ಕೊಂಡಾಡಿದಷ್ಟು ಸಾಲದು. ಬ್ರಿಟಿಷರನ್ನು ಈ ಗುಣಗಳಿಗಾಗಿ ಹೊಗಳದಿದ್ದರೆ ಅವರಲ್ಲಿ ಅಭಿಮಾನವನ್ನಿಡದಿದ್ದರೆ ಮಹಾ ಪಾತಕವಾಗುವುದು.

ಹೀಗಿರುವುದರಿಂದ, ಆ ಕಾನೂನನ್ನು ತಿದ್ದಬೇಕಾದರೆ, ಇದೀಗ ವೈಸ್ರಾಯರು ಇಂಗ್ಲೆಂಡಿನಲ್ಲಿರುವಾಗಲೇ, ಅದಕ್ಕೆ ಯೋಗ್ಯ-ಮುಹೂರ್ತ. ಇಂಡಿಯಾಬ್ರಿಟನ್ನುಗಳೊಳಗಣ ಸಂಭಂಧವನ್ನು ಈಗ ನಿರ್ಧರಿಸಲು ಯೋಗ್ಯವಾಗಿದೆ ಈಗ ಭಾರತೀಯರು ವಿಮರ್ಶಿಸಿ ನಿರ್ಧರಿಸುವುದಕ್ಕೆ ಮನಕೊಟ್ಟಿರುವರು ಇನ್ನಿಷ್ಟು ಕಾಲ ಕಳೆಯುತ್ತ, ಅವರ ಮನಸ್ಸು ಇನ್ನಷ್ಟು ಖೇದಗೊಂಡು ಉದ್ರೇಕಗೊಂಡು ವಿಮರ್ಶೆಯು ಅನರ್ಥಕ್ಕೆ ಕಾರಣವಾದೀತು 'ಬೇಕಾದರೆ ಇಲ್ಲಿದೆ, ಬೇಡವಾದರೆ ಬಿಡಿ' ಎಂದು ಝೆಟ್ಲೆಂಡರು ಇನ್ನೂ ಎನ್ನುವರಾದರೆ, ಭಾರತೀಯರು ಬೇಡವಾದುದನ್ನು ಬಿಟ್ಟೇಬಿಡುವುದಕ್ಕೆ ಹಿಂಜರಿಯರು ಇದ್ದುದನ್ನು ತಿದ್ದಿ ನೋಡೋಣವೆಂದರೆ, ಕೆಲವರಾದರೂ ಒಪ್ಪಬಹುದು ಹಾಗಲ್ಲದಿದ್ದರೆ, ಅದನ್ನೆಲ್ಲ ರದ್ದುಮಾಡಬೇಕಾದೀತು

ವೈಸ್ರಾಯರು ಈ ರಾಯಭಾರವನ್ನು ವಹಿಸಿಕೊಂಡಿದ್ದಾರೆಯೋ?

ಮಹಾ ವಿವೇಕಿಗಳು!
ಮುಖದ ಮೇಲೆ ಸಿಟ್ಟಾಗಿ,
ಮೂಗು ಕೊಯ್ಯುವರಂತೆ!

ಹಿಂದೀ ವಿರುದ್ಧ ಚಳವಳದಲ್ಲಿ ಸೇರಿರುವ ಹಿಂದಣ ಜಸ್ಟಿಸ್ ಪಕ್ಷದ ಒಂದಾದ ಸೆಲ್ಫ್ ರೆಸ್ಪೆಕ್ಟ್ (ಆತ್ಮ ಗೌರವ ಪಕ್ಷದವರು) ಮುಸ್ಲಿಂಲೀಗಿನವರ ಅಧ್ಯಕ್ಷರನ್ನೊಬ್ಬರನ್ನು ಆರಿಸಿಕೊಂಡು,—ಹಿಂದಿಯನ್ನು ಕಡ್ಡಾಯವಾಗಿ ವಿಧಿಸಿದ್ದೇ ಅಲ್ಲದೆ ಅದರ ನಿರ್ಬಂಧಕ್ಕಾಗಿ ಚಳವಳ ಮಾಡಿದವರನ್ನು ಕೈದುಮಾಡಿದುದು ತಪ್ಪಾಯಿತೆಂದು ಕೊಂಗ್ರೆಸ್ ಮಂತ್ರಿಗಳನ್ನು ದೂರಿದರ ಈ ಮಹಾಪಾತಕದ ಪ್ರಾಯಶ್ಚಿತ್ತಕ್ಕಾಗಿಯೂ, ಒಂದು ಪತ್ರಿಕೆಯು ಕೊಂಗ್ರೆಸ್ ಮೆಂಬರರ ಮಾನನಷ್ಟ ಮಾಡಿದುದೆಂದು ಕೋರ್ಟಿನಲ್ಲಿ ಜಜ್‌ಮೆಂಟ್ (ತೀರ್ಮಾನ) ಆದುದರ ಪ್ರಾಯಶ್ಚಿತ್ತಕ್ಕಾಗಿ, ಮುಸ್ಲಿಂಲೀಗಿನ ಧ್ಯೇಯಗಳೇ ಈ ಆತ್ಮಗೌರವಿಗಳ ಧ್ಯೇಯವಾಗಿರುವ ಕಾರಣ,—ಇನ್ನು ಬಹಳ ಚಳವಳ ನಡೆಯಿಸಿ ಹರಿಜನರನ್ನು ಮುಸ್ಲಿಮರನ್ನಾಗಿ ಮಾಡುವ ಅತಿಜೋರಾದ ಚಳವಳವು ನಡೆಯುವುದೆಂದೂ ಎಚ್ಚರಿಸಿರುವರು ಎಚ್ಚರಿಸಿ ಭಾಷಣ ಕೊಟ್ಟವರು ತಾನೇ ಮುಸ್ಲಿಮರಾಗುವುದಲ್ಲ, ಧ್ಯೇಯಗಳು ಹರಿಜನರಿಗೆ, ಮುಸ್ಲಿಮರಾಗುವುದು ಅವರು! ಹಿಂದೀ ವಿರುದ್ಧ ಚಳವಳ ಮಾಡುವಾಗಲೂ ಸೂಚಿಸಿದುದ್ದು ಮೂರನೆಯವರು ಉಪವಾಸ ಮೂಲಕ ಸತ್ಯಾಗ್ರಹ ಮಾಡಬೇಕೆಂದು! ಆತ್ಮಗೌರವವೆಂದರೆ ಇಷ್ಟಿರಬೇಕು—ಗೌರವ ನಮಗೆ, ಆತ್ಮ ಮತ್ತೊಬ್ಬರದು! ಮತ್ತೊಬ್ಬರ ಆತ್ಮ ಕೆಡಿಸಿ, ನಮಗೆ ಆತ್ಮಗೌರವ!

ಂ ಂ ಂ ಂ ಂ

ಕೊಂಗ್ರೆಸ್ಸಿನವರು ಒತ್ತಾಯದಿಂದ ಹಿಂದಿಯನ್ನು ಎಲ್ಲೆಲ್ಲೂ ಕಲಿಸಲೆತ್ನಿಸಿ ಹಿಂದೂಗಳ ಧರ್ಮ ಸಂಸ್ಕೃತಿಗಳನ್ನು ಸಮಸ್ತರಿಗೂ ಬೋಧಿಸುವುದರಿಂದ, ಮುಸ್ಲಿಮರು ಇದನ್ನು ವಿರೋಧಿಸಲೇಬೇಕೆಂದೂ ಕೊಂಗ್ರೆಸು ಹಿಂದು ಜಾತಿಯದೆಂದೂ ಇತರರ ಜಾತಿಕೆಡಿಸುವುದೆಂದೂ ಮೊದಲಾಗಿ ಹೇಳುವ ಜಿನ್ನಾರವರು, ಹೈದ್ರಾಬಾದು ಸಂಸ್ಥಾನದ ಕಡೆಗೆ ಕಣ್ಣೆತ್ತುವುದಿಲ್ಲವೇಕೆ? ತೆಲುಗು ಮರಾಠಿ ತೆಲುಗುಗಳನ್ನು ಕೊಂದು ಉರ್ದುವನ್ನು ರಾಜಭಾಷೆಯನ್ನಾಗಿ ಅಲ್ಲಿ ಮಾಡಿರುವರಲ್ಲ! ಇದ ನ್ಯಾಯವೆ? ಕಾಶ್ಮೀರದ ಮುಸ್ಲೀಮ ಅಧಿಕ ಸಂಖ್ಯಾತರ ಸಲುವಾಗಿ ಅಲ್ಲಿನ ಹಿಂದೂ ಮಹಾರಾಜರ ಪತನ ಹಿಂದೂ ಸಂಸ್ಥಾನದ ಅಧಿಕಾರವನ್ನಾದರೂ, ಹೈದ್ರಾಬಾದಿನ ಅಧಿಕ ಸಂಖ್ಯಾತ ಹಿಂದುಗಳ ಸಲುವಾಗಿ ನಿಜಾಮರು ಪಡತ್ತಿರುವರೇ? ಉರ್ದು ಹಿಂದೀ ಎರಡರ ಗಂಧವೂ ಇಲ್ಲದ ಗುಜರಾಥಿ ಮನೆಮಾತಾಗಿರುವ ಜಿನ್ನಾರವರು ಇದಕ್ಕೇನಂತೆ?

ಂ ಂ ಂ ಂ

ಪೋಸ್ಟಲ್ ಮತ್ತು ತಂತೀ ಇಲಾಖೆಗಳಿಗೆ ವಾರ್ಷಿಕ ಬಿರುದುಪಟ್ಟಿ ಪ್ರಕಟವಾದ ವಾರದಲ್ಲಿ ಒಂದು ಹಳೆಯ ವಿನೋದ ನಡೆಯಿತಂತೆ. ಬಿರುದುಬಾವಲಿಗಳನ್ನು ಪಡೆದವರಿಗೆ ಇತರರು (ಬಿರುದು ಹೊಂದಿದವರೇ ಹೆಚ್ಚಾಗಿ ಅಥವಾ ನೌಕರರು) ವಂದನೆಗಳನ್ನು ಸಮರ್ಪಿಸುವುದಕ್ಕಾಗಿ ಹಣ ವ್ಯಯಿಸಿದರು ಈ ಇಲಾಖೆಗಳ ನಷ್ಟಗಾಯಿತು. ಟಪಾಲ ಕೆಲಸಗಳಿಗೆ ನಷ್ಟ ಹೆಚ್ಚಾಗಿದೆ ಇದಕ್ಕೂ ಬಿರುದುಗಳಿಗೂ ಸಂಬಂಧವಿಲ್ಲವಷ್ಟೆ

ಂ ಂ ಂ ಂ

ಈ ವರ್ಷದ ಬಿರುದುಪಟ್ಟಿಯು ಅಷ್ಟು ಸಮರ್ಪಕವಾಗಿಲ್ಲ ಸಾಮ್ರಾಜ್ಯದ ಕಿರೀಟಧಾರಣೆಯಾದಂದು ಬಿರುದುಗಳನ್ನೆಲ್ಲ ಹಂಚಲಾಗಿದ್ದ ಕಾರಣ ಈ ಸಲದ ಪಟ್ಟಿ ಚಿಕ್ಕದಾಗಿದೆ. ಕೊಂಗ್ರೆಸ್ ಪ್ರಾಂತ್ಯಗಳವರು ತಮ್ಮ ಪ್ರಾಂತ್ಯಗಳಲ್ಲಿ ಬಿರುದುಗಳನ್ನು ಹಂಚುವುದೇ ಬೇಡವೆಂದು ಸೂಚಿಸಿಕೊಂಡುದೂ ಇದಕ್ಕೆ ಕಾರಣವಾಗಿರಬಹುದು. ಸಿವಿಲ್ ಡಿಸ್‌ಓಬಿಡಿಯನ್ಸಿನ ವೇಳೆ ಸಾವಿರಾರು ಜನರಿಗೆ ಬಿರುದುಗಳನ್ನು ಹೊರಿಸಿ, ಅವುಗಳನ್ನು ಅಸಹಕಾರಿಗಳು ಓರೆಗಣ್ಣಿಂದ ಕಾಣುವಂತಾಗಿ ಹೋಗಿದೆ ಕೊಂಗ್ರೆಸಿನವರಿಗೆ ಅದರಲ್ಲಿದ್ದ ಜಿಗುಪ್ಸೆಯ ನ್ಯ ಶ್ರೀ ವಿ ಜೆ ಪಟೇಲರು ಹಿಂದೆ ಎಸೆಂಬ್ಲಿಯ ಅಧ್ಯಕ್ಷರಾಗಿದ್ದಾಗ, ತನ್ನ ಪೇದೆಗೂ ಎಂದು ಖಾನ್ ಬಹದ್ದೂರ್ ಬಿರುದು ಕೊಡಬಹುದೆಂದು ಮಾಡಿದ ಶಿಫಾರಸಿಂದ ತಿಳಿಯಬಹುದು.

ಂ ಂ ಂ ಂ

ಮೇಲ್ದರಗತಿಯ ಬಿರುದುಗಳನ್ನು ಅದನ್ನು ಪಡೆದವರ ಸಂಖ್ಯೆ ಇಷ್ಟೇ ಇರಬೇಕಾಗಿ ನಿರ್ಧಾರವಿದೆಯಂತೆ ಹಿಂದೆ ಈ ಬಿರುದುಗಳನ್ನು ಪಡೆದವರ ಸ್ಥಾನಗಳು ಖಾಲಿಯಾಗದೆ, ಇನ್ನು ಆ ಬಿರುದುಗಳನ್ನು ಕೊಡಲೂ ಆತಂಕವಾಗಿದೆ ಹೀಗಾಗಿ, ಈ ಪಟ್ಟಿಯಲ್ಲಿ ಪೋಲಿಸ್ ಅಧಿಕಾರಿಗಳು ಹೈಕೋರ್ಟು ಜಡ್ಜರುಗಳೇ ಮಾತ್ರ ಬಿರುದುಗಳಿಗೆ ಯೋಗ್ಯರು ದೊರಕು, ಕವಿಗಳು, ತತ್ವಜ್ಞಾನಿಗಳು, ಔದಾರ್ಯಶಿರೋಮಣಿಗಳು ಇವರಿಗೆ ಇಲ್ಲವೆಂಬಂತೆ ತೋರಹತ್ತಿದೆ.

ಂ ಂ ಂ ಂ

ವಾತಾವರಣದ ಉಸಿರಲ್ಲೇ ಯುದ್ಧವಿದೆಯೆನ್ನಿ. ದಕ್ಷಿಣ ಅಮೇರಿಕದ ಇಕ್ವೇಡರ್ ಪೆರೂರಾಜ್ಯಗಳೊಳಗೊಂದು ಮಹಾ ಯುದ್ಧವಾಯಿತು. ಇಕ್ವೇಡರ ಕಡೆಯ ಒಬ್ಬ ಸಿಪಾಯಿಯನ್ನು ಸತ್ತನು ಒಬ್ಬನಿಗೆ ಗಾಯವಾಯಿತು! ಪೆರುವಿನವರು ಒಬ್ಬ ದಳವಾಯಿಯನ್ನು ಸೆರೆಹಿಡಿದು ಇಬ್ಬರು ಸಿಪಾಯರನಷ್ಟೆ ಕೊಂದೊಯ್ದರು.

ಂ ಂ ಂ ಂ

ಪಂಜಾಬಿನಲ್ಲೂ ಒಂದು ಯುದ್ಧವಾಯಿತು, ಕೊಂಗ್ರೆಸಿನ ಎರಡು ಪಕ್ಷಗಳೊಳಗೆ. ಕೊನೆಗೆ ಪಂಚಾಯಿತಿಯಾಗಿ ಮುಗಿಯಿತು.

ಂ ಂ ಂ ಂ

ಬಿಹಾರದಲ್ಲಿ ಯುದ್ಧ,—ಬಿಹಾರಿಗಳಿಗೂ ಬಿಹಾರದಲ್ಲಿರುವ ಬಂಗಾಳಿಗಳಿಗೂ. ಬಿಹಾರದಲ್ಲಿನ ನೌಕರ್ ಇತ್ಯಾದಿಗಳು ಬಿಹಾರಿಗಳಿಗೇ ಸಲ್ಲಬೇಕೆಂದು ಒಂದು ಪಕ್ಷ. ನಾವು ಬಂಗಾಳಿಗಳಾದರೂ ಬಿಹಾರಿಗಳು ಎಂದೂ ಅವರ ಎದುರು ಪಕ್ಷ ನೌಕರಿಗಾಗಿ ಕಲಹಗಳಾಗುವುದು ಹೀಗೆ. ನೌಕರಿಗಳ ಪ್ರಾಂತಿಕ ನೇಮಕಗಳಿರುವಷ್ಟು ದಿನ, ದೇಶವೂ ಜನಾಂಗವೂ ಒಂದಾಗುವಂತಿಲ್ಲ

ಂ ಂ ಂ ಂ

ಜಸ್ಟಿಸ್ ಪಕ್ಷವು ಸೋತುದೇಕೆಂದು ಶ್ರೀ ಪನ್ನೀರಸೆಲ್ವರವರ್ ಹೇಳಿರುತ್ತಾರೆ "ಬ್ರಿಟಿಷರಿಗೆ ವಿರುದ್ಧವಾದ ಕೂಗುಗಳನ್ನು ಎಬ್ಬಿಸಿ ಜನರ ಹೃದಯಗಳನ್ನು ಕೊಂಗ್ರೆಸಿನವರು ಸೆಳೆದರು" ಎಂದು ಅವರ ಮಾತು ಬ್ರಿಟಿಷರಿಗೆ ತಾವು ಮಾಡಿದ್ದು ತಪ್ಪೆಂದು ತಿಳಿದೇ ಇದ್ದಾಗಲೂ, ಅವರಿಗೆ ಪ್ರೀತಿಯಾಗಲೆಂದು ಕಂಗೆಟ್ಟು ಸ್ನೇಹದವರು ಜಸ್ಟಿಸ್ ಪಕ್ಷದವರು ಜೈ ಎ ದವರು ಕೊಂಗ್ರೆಸಿನವರು ಯೆಂದ ಸೋಲು 'ಜೈ'ಯ ದಜಯ—ಹೀಗಾದುದಕ್ಕೆ ಶ್ರೀ ಪನ್ನೀರಸೆಲ್ವಮ್ ಏನು ಮಾಡುವರು?

ಂ ಂ ಂ ಂ

ಶ್ರೀ ನಾರಾಯಣ ಸಿಂಹರ ಪೋಲಿಸ್ ಇಲಾಖೆಯಲ್ಲಿ ಡಿಪ್ಯೂಟಿ ಸುಪರಿಂಟೆಂಡೆಂಟರು. ಒಬ್ಬ ಲೋರಿ ಡ್ರೈವರನನ್ನು ಒಬ್ಬ ಸಬ್ ಇನ್ಸ್‌ಪೆಕ್ಟರ 50 ರೂಪಾಯಿಗಾಗಿ ಪೀಡಿಸುತ್ತಿದ್ದನತ್ತೆ ಸಿಸ್ಪರ ಒಬ್ಬ ಇಂಗ್ಲಿಷ ಕಂಪೆನಿಯ ನೌಕರನ ವೇಶದಲ್ಲಿ ಪೋಲಿಸ್ ಸ್ಟೇಶನಿಗೆ ಬಂದರು ಅಲ್ಲೇ ಆ ಲೋರಿ ಡ್ರೈವರನು ಹಿಡಿದ್ದ ಹೆಡ್‌ಕಾನ್‌ಸ್ಟೇಬಲನೊಬ್ಬನು ಅವನ ಪರವಾಗಿ ಕೆಲಸ ಮಾಡಲು ಕೊನೆಗೆ 20 ರೂಪಾಯಿ ಪಡೆಕೊಂಡ, ಮೂಗುತ, ರೂಪಾಯಿ ಮತ್ತೆ ಕೇಳ ಪುದಗಾಯಿತು ಲೋರಿ ಡ್ರೈವರಿಗೆ ಈ ವೇಷಧಾರಿನೋಕರನೇ ಜಾಮೀನಾದ ಸಬ್ ಇನ್ಸ್‌ಪೆಕ್ಟರರು ಈ ಜಾಮೀನು ಒಪ್ಪಿದರೆ ಅವನಿಗೆ ಉಳಿದ 80 ರೂಪಾಯಿ ತರಬಾಯಿತು ಒಬ್ಬ ಹಣಕ್ಕಾ ನೋಟುಗಳ ಡಿ ಎಸ್ ಪಿ (ದಸ್ಕತಿನ) ಗುರುತು ಇತ್ತು. ವೇಷಧಾರಿಯು ತಾನೆ ಡಿ ಎಸ್ ಪಿ ಎಂದು ತಿಳಿಸಿ ಹೆಡ್‌ಕಾನ್ಸ್‌ಟೇಬಲನನ್ನೂ ಕೈದುಮಾಡಿದ ಒಳಿಕ ಇಗ ಲಂಚ ಪಡೆದುದಕ್ಕಾಗಿ ಮೊಕದ್ದಮೆಯಾಗಿದೆ!

ಂ ಂ ಂ ಂ

ಈ ವರ್ಷದ ಪ್ರಪಂಚದಲ್ಲಿ ಚೀನದ ಒಬ್ಬ ಜೋಯಿಸನು ಪಂಚಾಂಗ ಪ್ರಕಟಿಸುವಾಗ, (1) ಮಾರ್ಚ 12ರಲ್ಲಿ ಹುಟ್ಟಿದನು ಒಂದು ಭಾಷಣ ಮೂಲಕ ಪ್ರಪಂಚವನ್ನೆ ತಲ್ಲಣಗೊಳಿಸುವನ (2) ಎಪ್ರಿಲಿನಲ್ಲಿ ಚೀನಿಯರಿಗೊಂದು ಜಯವುಂಟು (3) ಅಗೋಸ್ತಿನಲ್ಲಿ ಜಪಾನಿಯರು ಚೀನಿಯರಿಂದ ಸೋತು ಹೋಗುವರಾದರೂ, ಚೀನದಲ್ಲಿ ಚಳವಳವಾಗುವುದು ಎಂದು ತಿಳಿಸಿದ್ದನು ಮಾರ್ಚ 12ರಲ್ಲಿ ಆಸ್ಟ್ರಿಯವನ್ನು ಹಿಟ್ಲರು ಜರ್ಮನಿಗೆ ಸೇರಿಸಿದನು, ನಿಜ, ಜಗತ್ತು ತಲ್ಲಣಗೊಂಡಿತು. ಎಪ್ರಿಲಿನಲ್ಲಿ ಚೀನೀಯರು ತೈಚರ್‌ಚಿಯಾಂಗ ಜಯಿಸಿ, ಜಪಾನನ್ನು ಹಿಮ್ಮೆಟ್ಟಿಸಿದರು, ನಿಜ. ಇನ್ನು ಈ ಮೂರನೆಯ ಭವಿಷ್ಯವು ಸತ್ಯವಾದೀತೋ ಎಂದು ತಿಳಿಯಲು ಇನ್ನೂ ಎರಡು ತಿಂಗಳು ಇದೆ!

ದಾಕ್ಷಿಣ್ಯದ ಮೂರ್ತಿ—ಜಿನ್ನಾ!

ಶ್ರೀ। ಮಹಮ್ಮದಾಲಿ ಜಿನ್ನಾರವರು

ಶ್ರೀಮಾನ್ ಮುಹಮ್ಮದ್ ಆಲಿ ಜಿನ್ನಾ ರೇ ದಾಕ್ಷಿಣ್ಯದ ಮೂರ್ತಿ. ಸಮಾನರಾದ ಳಗೆ ಮಾತ್ರ ಸಂಧಾನವಿರಬಹುದೆಂಬ ವನ್ನು ಇವರು ಚೆನ್ನಾಗಿ ಬಲ್ಲರು. ಅವರೇ ತ್ರವಲ್ಲ, ಇದೇ ಸದಭಿಪ್ರಾಯವೆಂದು ಅವ ಮೆದುಳಾಗಿರುವ ಮುಸ್ಲಿಂ ಲೀಗ್ ಸಹಾ ಲ್ಲದು. ಲೀಗ್ ದೇಹದ ಎಲುವು ರಕ್ತ ಯೂ ನರನಾಡಿಗಳೆಲ್ಲ ಜಿನ್ನಾರವರೇ ಆಗಿ ವ ಕಾರಣ, ಅದೊಂದು ರಾಷ್ಟ್ರೀಯ ಸಂಘ ಲ್ಲೆಂದು ಅವರೇ ಹೇಳಬೇಕಾಗಿದೆ. ಹೀಗಿ ತ್ತ, ಎಷ್ಟು ಕಾಲ ಕೊಂಗ್ರೆಸು ಬಲವಾಗಿದ್ದು, ಗ್ ಜಾತೀಯ ಸಂಘವಾಗಿರುವುದೋ ಅಷ್ಟ ು ಇವೆರಡರೊಳಗೆ ಸಮಾನತೆಗೆ ಅವಕಾಶ ರಬಹುದು? ಸಮಾನವಾಗದಲ್ಲಿ ಸ್ನೇಹ ಲ್ಲಿ? ಸ್ನೇಹಕ್ಕಾಗಿ ಸಮಾನರಾಗ ಬೇಕು? ತೀ ಹಗಲೂ ಚಿಂತಿಸಿ, ಜಿನ್ನಾರವರು ಸಮಾ ಯ ಸಾಧನೆಗಾಗಿ ಉಪಾಯ ಶೋಧಿಸಿರು ು ಇದೀಗ ಪ್ರಕಟಿತ.

ಂ ಂ ಂ ಂ ಂ

ಕೊಂಗ್ರೆಸು ರಾಷ್ಟ್ರೀಯವಾಗಿಯೂ, ಗ್ ಜಾತೀಯವಾಗಿಯೂ ಇರುವ ಕಾರಣ, ದು ರಾಷ್ಟ್ರೀಯವಾಗದೆ, ಅಥವಾ ಇದೂ ತೀಯವಾಗದೆ, ಸಂಧಾನದ ಸಾಧನೆ ಸಫಲ ಗದು. ಅದಕ್ಕಾಗಿ, ಜಿನ್ನಾರವರ ಉಪಾಯ ಚನೆ-ಕೊಂಗ್ರೆಸು ತನ್ನ ರಾಷ್ಟ್ರೀಯತೆ ಕಳೆ ಕೊಳ್ಳತಕ್ಕದು, ತನ್ನಲ್ಲಿ ಸೇರಿದ ರಾಷ್ಟ್ರೀ ು ಮುಸ್ಲಿಮ ಸದಸ್ಯರನ್ನು ಹೊರತಳ್ಳಿದಾ ತು; ಅದು ರಾಷ್ಟ್ರೀಯತೆ ಕಳೆದುಕೊಳ್ಳು ದು. ಆಗಲೆ ಅದು ಲೀಗಿನಂತೆ ಜಾತೀ ಯವಾಗಿ, ಲೀಗಿನ ಸಮಾನತೆಗೆ ಬಂ ಆಗ ಸಂಧಾನ ಸುಲಭ.

ಂ ಂ ಂ ಂ ಂ

ಇನ್ನು ಮುಸ್ಲಿಮು ಲೀಗ್ ರಾಷ್ಟ್ರೀಯವಾ ಲು ಇಚ್ಛಿಸಲಾರದು. ಅದು ಜಾತೀಯ ಘವಷ್ಟೆ. ಆದರೂ ಅದು ಎಲ್ಲ ಮುಸ್ಲಿಮರ ಪ್ರತಿನಿಧ್ಯವನ್ನು ನಿರ್ವಹಿಸುವಷ್ಟಾದರೂ ಜಾ ಯವಾಗಿದೆಯೆ? ಆದರೂ ಮುಸ್ಲಿಮರ ಏಕ ಮಾತ್ರ ಮುಖಸಂಘವಾಗಿ ಲೀಗನ್ನು ಕೊಂ ಸು ಅಂಗೀಕರಿಸಿ ಗೌರವಿಸಬೇಕು. ಕೊಂ ಸು, ತನ್ನಲ್ಲಿನ ಮುಸ್ಲಿಮರನ್ನು ಕಳೆದು ಂಡು, ತನ್ನ ರಾಷ್ಟ್ರೀಯತೆಯನ್ನು ತೊರೆದು ತೀಯವಾದರೂ ಸಾಲದು, ಲೀಗ್ ಎಂದರೆ ಲ್ಲ ಮುಸ್ಲಿಮರ ಮುಖಸಂಘವೆಂದೇ ಕೊಂ ಸ್ ಅಂಗೀಕರಿಸಬೇಕು.' ಆಗ ಹಿಂದೂ (ಕೊಂಗ್ರೆಸ್) ಮುಸ್ಲಿಮ್ (ಲೀಗ್) ಸಂಧಾ ಕ್ಕೆ ಅವಕಾಶವಾಗುವುದು— ಇನ್ನು, ಜಿನ್ನಾ ವರ ಭರವಸೆ, ಶರ್ತ.

ಂ ಂ ಂ ಂ ಂ

ಎಲ್ಲ ಮುಸ್ಲಿಮ ಸಮಾಜಗಳಿಗೆ ಮುಸ್ಲಿಂ ೕಗ್ ಎಂಬುದೇ ಪ್ರತಿನಿಧಿ ಸಂಸ್ಥೆಯೆ? ಎಂಬ ಶ್ನೆಯನ್ನು ಆ ಸಮಾಜಗಳೇ ನಿರ್ಧರಿಸಬೇಕಾ ದೆ. ಕೊಂಗ್ರೆಸು ಇದನ್ನು ಒಪ್ಪಿಕೊಳ್ಳಬೇಕಾ ದ್ದು,—ಜಮಿಯತ್ ಉಲ್ ಉಲೇಮ, ಕೊಂ ಸಿನಲ್ಲಿರುವ ಮುಸ್ಲಿಮ ಮೆಂಬರರು, ಪಂಜಾ ನ ಅಹ್ರಾರ್ ಪಕ್ಷ, ಬಂಗಾಳದ ಪ್ರಜಾಪಕ್ಷ ಮೊದಲಾದವರೆಲ್ಲರು ಲೀಗಿನ ಎಲ್ಲ ಧ್ಯೇಯಗ ಳಲ್ಲಿ ವಿಶ್ವಾಸವಿದ್ದು ಜಿನ್ನರೇ ತಮ್ಮ ಅಧಿನಾಯಕ ರೆಂದು ಒಪ್ಪಿಕೊಳ್ಳಬೇಕು. ಮುಸ್ಲಿಮರೊಳಗೆ ಉತ್ಕೃಷ್ಟವಾದ ಈ ಸಂಘಗಳು ಲೀಗನ್ನು ಸೇರಿದರೆ, ಅಲ್ಲಿಗೆ ಜಿನ್ನರ ಪ್ರಾತಿನಿಧ್ಯ ಪ್ರಶ್ನೆಗೆ ಮತ್ತೆ ಆಕ್ಷೇಪವೇನೂ ಇರಲಾರದು. ಹೀಗಿ ರುವಾಗ, ಕೊಂಗ್ರೆಸಿನೊಡನಿರುವುದಕ್ಕಿಂತಲೂ ಹೆಚ್ಚಾಗಿ ಈ ಮುಸ್ಲಿಮ ಸಂಘಗಳೊಡನೆಯೆ ಜಿನ್ನರ ವೈಮನಸ್ಸು ಹೆಚ್ಚಿರುವ ಈ ಕಾಲದಲ್ಲಿ, ಕೊಂಗ್ರೆಸು ಜಿನ್ನರನ್ನೂ ಅವರ ಲೀಗನ್ನೂ ಮುಸ್ಲಿಮರ ಮುಖವೆಂದು ಅಂಗೀಕರಿಸುವುದು ಹೇಗೆ? ಅಂಗೀಕರಿಸಿದರೆ, ಕೊಂಗ್ರೆಸು ತನ್ನ ಮೂರ್ಖತನವನ್ನು ಪ್ರದರ್ಶಿಸಿದಂತಾಗದೆ? ಮುಸ್ಲಿ ಮರೇ ಇದಕ್ಕೇನೆನ್ನುವರು?

ಂ ಂ ಂ ಂ ಂ

ಮುಸ್ಲಿಮ್ ಲೀಗನ್ನು ಮುಸ್ಲಿಮ ಸಮಾ ಜದ ಮುಖವೆಂದು ಕೊಂಗ್ರೆಸು ಅಂಗೀಕರಿಸಿದ ಕೂಡಲೆ, ಮುಸ್ಲಿಮರೆಲ್ಲ ಅದನ್ನೊಪ್ಪುವರೇ? ಅಥವಾ ಅಂಗೀಕರಿಸದಿರುವಲ್ಲಿ ಲೀಗಿನಲ್ಲಿಲ್ಲದ ಮುಸ್ಲಿಮರು ಕೊಂಗ್ರೆಸಿನಲ್ಲಿ ತಪ್ಪೆಣಿಸುವರೆ? ಕಳೆದ ೫೦ ವರ್ಷಗಳ ಇತಿಹಾಸವನ್ನು ತೊರೆದು ಬಿಟ್ಟು, ದಾಕ್ಷಿಣ್ಯಮೂರ್ತಿ ಜಿನ್ನರ ಪ್ರೀತ್ಯರ್ಥ ವಾಗಿ ಕೊಂಗ್ರೆಸು ಎಷ್ಟೋ ಸಲ ತನ್ನ ಅಧ್ಯಕ್ಷ ರಾಗಿ ರಾಷ್ಟ್ರಪತಿಪದವಾಗಿ ಮೆರೆದ ಮುಸ್ಲಿಮ ರನ್ನೇ ಅವಮಾನಪಡಿಸಬಹುದೆ? ಕೊಂಗ್ರೆಸು ಹಿಂದೂ ಸಂಸ್ಥೆಯೆಂದರೆ, ಈ ಪುಣ್ಯಾತ್ಮರ ಆತ್ಮ ಗಳಿಗೆ ಸುಖವಿದ್ದೀತೆ?

ಂ ಂ ಂ ಂ ಂ

ಅಖಿಲ ಭಾರತದ ಕೊಂಗ್ರೆಸ್ ಕಾರ್ಯ ಕಾರೀ ಮಂಡಲದಲ್ಲಿ ಜಿನ್ನಾರವರೂ ಒಬ್ಬ ಸದಸ್ಯರಾಗಿದ್ದಿಲ್ಲವೆ? ಅದೆಂದೋ ಎಂದರೂ, ಈಗ ಲೀಗಿನಲ್ಲಿರುವ ಮುಸ್ಲಿಮರ ಸಂಖ್ಯೆಗೂ ಮಿಕ್ಕ ಕೊಂಗ್ರೆಸ್ ಸದಸ್ಯರಾಗಿರುವ ಮುಸ್ಲಿಮರ ಸಂಖ್ಯೆಯನ್ನು ಸ್ವೀಕರಿಸಿಯಾದರೂ, ಕೊಂಗ್ರೆಸು ತಾನು ಹಿಂದೂ ಸಂಸ್ಥೆಯೆನ್ನಲು ಸಾಧ್ಯವಿದೆಯೆ?

ಂ ಂ ಂ ಂ

ಸಮಾನರೊಡನೆ ಸಂಧಾನವೆಂಬ ತತ್ವವು ಜಿನ್ನಾರವರಿಗೆ ಮಾನ್ಯವಾದರೆ, ಇವರ ಲೀಗಿ ನಂತೆಯೆ ಜಾತೀಯ ಸಂಸ್ಥೆಯಾದ ಹಿಂದೂ ಮಹಾಸಭೆಯೊಡನೆ ಇವರೇಕೆ ಸಂಧಾನ ಪ್ರಸ್ತಾಪವೆತ್ತುವುದಿಲ್ಲ? ಕೊಂಗ್ರೆಸು ಯಾವ ಅಧಿಕಾರವನ್ನು ಪಡೆದಿದ್ದರೂ, ಅದನ್ನು ಹಿಂದೂ ಮಹಾಸಭೆ ಒಪ್ಪುತ್ತದೆ ಎಂತೆ ಹೇಳಬಹುದು, ಸಂತ ರವೇ ಜಿನ್ನಾರವರಿಗೆ ಕೊಂಗ್ರೆಸು ಒಪ್ಪಿಸಬೇಕೆಂತೆ ಆಗಬಹುದು ಲೀಗಿಗೆ ಗಾಢವಾದ ಹೃದಯಕ್ಕೆ ಇದೇಕಷ್ಟು? ಕೊಂಗ್ರೆಸು ಹಿಂದೂ ಸಂಸ್ಥೆಯೆಂದು ಜಿನ್ನಾರವರು ಅವಹೇಳನ ಮಾಡುವಾಗ, ಪುನಃ ಮಹಾಸಭೆ ಯೊಂದರೊಡನೆ ಕೊಂಗ್ರೆಸು ಸಂಧಾನಮಾಡಿ ಕೊಳ್ಳಬೇಕೆಂದೇ ಕೊಂಗ್ರೆಸನ್ನು ಕೇಳುವುದೇಕೆ?

ಂ ಂ ಂ ಂ ಂ

ಹಿಂದುಗಳದೇ ಮಾತ್ರವಾಗಿ ಕೊಂಗ್ರೆಸಿಲ್ಲ ವೆಂದು ನೂರು ಸಲ ಹೇಳಿದ್ದರೂ, ಅದನ್ನು ಕೇಳದೇ ಸಂಭಾಷಣೆಗಳಿಗೆ ಒಪ್ಪಿಕೊಂಡ ಜಿನ್ನರು ಈಗ, ಕೊಂಗ್ರೆಸು ಹಿಂದುಗಳದೇ ಆಗುವ ಹಾಗೆ ಅದರಿಂದ ಮುಸ್ಲಿಮರನ್ನು ಹೊರತಳ್ಳಿರಿ ಎನ್ನುವುದೇಕೆ? ಈ ಮಾತಿನಿಂದಲೆ, ಕೊಂಗ್ರೆಸಿ ನಲ್ಲಿ ಮುಸ್ಲಿಮರಿದ್ದಾರೆಂದು ಅವರಿಗೂ ಅರ್ಥ ವಾಗಿಲ್ಲವೆ?

ಂ ಂ ಂ ಂ

ಈ ಹಂಚಿಕೆಯ ಅಂತರಂಗವನ್ನು ಒಡೆದು ಕಾಣಬಲ್ಲ ಮುಸ್ಲಿಮರೂ ಇದ್ದಾರಷ್ಟೆ. ಶಿಯಾ ಪಂಗಡವೆಲ್ಲ ನಿನ್ನೆಯೋ ಇನ್ನು ಜಿನ್ನರೂ ಬೇಡ, ಮುಸ್ಲಿಮ್ ಲೀಗೂ ತಮ್ಮ ಪ್ರತಿನಿಧಿಯಲ್ಲ ಎಂದೇ ಹೊರಗೇ ನಡೆದರೇಕೆ? ಅವರು ಮುಸ್ಲಿ ಮರಲ್ಲವೆ? ಅವರನ್ನು ಕೊಂಗ್ರೆಸು ಪ್ರೇರೇಪಿ ಸಿತೇ? ಅಥವಾ ಅವರು ಕೊಂಗ್ರೆಸಿಗೆ ಸೇರಿ ದ್ದಲ್ಲಿ ಬೇಡವೆಂದು ಕೊಂಗ್ರೆಸು ಹೇಳುವುದೆ?

ಂ ಂ ಂ ಂ

ಜಾತಿಯ ಉದ್ಧಾರಕ್ಕಾಗಿ ಮಾತ್ರ— ರಾಷ್ಟ್ರದ ಉದ್ಧಾರಕ್ಕಾಗಿ ಅಲ್ಲ. ಏನೊಂದು ಕರಾರು ಮಾಡೋಣವೆಂದು ಜಿನ್ನರು ಮುಂದೆ ಬಂದಿರುವರಾದರೆ, ಅವರು ಹಿಂದೂ ಮಹಾ ಸಭೆಯೊಡನೆ ಸಂಭಾಷಿಸುವುದು ಉತ್ತಮ. ಜಾತಿಯ ಪಕ್ಷವೊಂದೂ ಇಲ್ಲದ, ಜನಾಂಗದ ಸಂಸ್ಥೆಯಾಗಿ ಬಾಳಿರುವ ಕೊಂಗ್ರೆಸು,—ಲೀಗ್ ಮಹಾಸಭೆಗಳೊಳಗೆ ಉಂಟಾಗಬಹುದಾದ ಯಾವ ಕರಾರನ್ನಾದರೂ ಅಂಗೀಕರಿಸಲು ಮನಸ್ಸು ಕೊಟ್ಟೀತು. ವಿನಾ— ತನ್ನ ರಾಷ್ಟ್ರೀಯ ಧ್ಯೇಯಗಳನ್ನೆ ತೊರೆದು, ಜಾತೀಯ ಸಂಸ್ಥೆ ಯಾಗಿ ಬಾಳಲು ಎಂದಿಗೂ ಒಪ್ಪಲಾರದು. ರಾಷ್ಟ್ರೀಯ ಉದ್ಧಾರವು ಜಿನ್ನರಿಗೆ ಬೇಡ. ತನ್ನ ದೊಂದ ಜಾತಿ, ಅದರಲ್ಲೂ ತನ್ನ ಗುಂಪು ಮಾತ್ರ, ಉದ್ಧಾರವಾದರೆ ಸಾಕು —ಎಂದು ತೋರುತ್ತದೆ. ಅದಕ್ಕಾಗಿ ಕೊಂಗ್ರೆಸನ್ನು ತನ್ನ ಸರಿಗೆ ತರುವುದು ಅಗತ್ಯವಿಲ್ಲ.

ಂ ಂ ಂ ಂ

ಲಕ್ಷಾವಧಿ ಜನರು ಹಲವು ವರ್ಷಗಳಿಂದ ಅತಿರೇಕ ಕಷ್ಟ ಕ್ಲೇಶಗಳನ್ನು ಸಹಿಸಿ, ಆತ್ಮಶಕ್ತಿ ಯಿಂದ ಬೆಳಸಿ ತಂದಿರುವ ಕೊಂಗ್ರೆಸನ್ನು ಇಡೀ ಪ್ರಪಂಚದಲ್ಲಿ ಭಾರತೀಯರ ಪ್ರಧಾನ ಸಂಸ್ಥೆ ಯೆಂದು ಗಣಿಸಿಯಾರ ಗಣನೆಗೆ ತರುವ ಕೊಂ ಡಿ ವಾಗ, ರಾಷ್ಟ್ರಪತಿಗೆ ... ಗಳೂ ... ಜಾತಿಯ ... ತನ್ನ ... ದಂತೆ ಮಾಡಿಸಲು, ದಾಕ್ಷಿಣ್ಯಮೂರ್ತಿಯಾಗಿ ಜಿನ್ನಾರವರು ಪ್ರಯತ್ನಿಸುವುದು ಶ್ರೇಯಸ್ಕರವೆ? ಬ್ರಿಟಿಷ ಸರಕಾರದಿಂದರೂ ಕೊಂಗ್ರೆಸನ್ನು ಕುರಿ ತಾಗಿ ಇದುವರೆಗೆ ಭಾವಿಸಿರುವುದನ್ನು ತಿದ್ದಿ ಕೊಳ್ಳನೆ?

ಂ ಂ ಂ ಂ

ತಾನು ಉತ್ತಮನಾಗಬೇಕು ಎಂಬುದು ಧ್ಯೇಯವುಳ್ಳವರ ಸಾಹಸ. ಇತರರಿಗೆ ತಾನು ಸಮಾನನಾಗಬೇಕೆಂದೇ ಪುರುಷ ಪ್ರಯತ್ನ ಮಾಡುವವರಿದ್ದಾರೆ. ಅದರ ಬದಲಾಗಿ, ಉತ್ತ ಮರಾದ ಇತರರನ್ನು ತನ್ನ ಸಮಾನತೆಗೆ ತರ ಬೇಕೆಂದು ಯತ್ನಿಸುವ ಸರ್ವೋತ್ತಮರಿದ್ದಾರೆ. ಇದೊಂದೆಸೆ ಬಗೆಯಲ್ಲದೆ, ಉತ್ತಮರಾದ ಇತರ ರನ್ನು ಕಡಮೆಯವನಾದ ತನ್ನಷ್ಟಕ್ಕೆ ಇಳಿಸಬೇಕೆ ನ್ನುವುದು ಯಾರಿಗೂ ಗೌರವವಾದೀತೆ? ಏರಿ ಏರಿಸುವುದುತ್ತಮವಲ್ಲದೆ, ಜಾರಿಗೆಳೆಗ್ನಿಸುವುದು ವ್ಯಥಾ ಪ್ರಲಾಪ.

ಂ ಂ ಂ ಂ

ಇತರರ ಪುರುಷೋತ್ತಮತೆಯನ್ನು ತಿಕ್ಕಿ ತೀಡಿ ನೆಲಸಮ ಮಾಡುವುದಕ್ಕೆ ಸಂಭಾಷಣೆಗಳ ಅಗತ್ಯವಾಗದು. ಕೇವಲ ನಿಂದಿಸಿ, ದೂರಿ, ಆಕ್ಷೇಪಿಸಿ, ತಿರಸ್ಕರಿಸಿ, ಜರೆದು ಬೈದರೆ ಸಾಕಾ ಗುವುದು. ಇದನ್ನಾದರೂ ಹಿಂದೆ ಸರಕಾರವು ಎದುರು ನಿಂತು, ಸಮಯೋದ್ಧ ಮಾಡಿದಂತೆ ಮರ್ಯಾದೆಯಿಂದ ಧರ್ಮಯುದ್ಧವೆಂದು ತಿಳಿ ದಂತೆ ಹೋರಾಡುವ ಮೂಲಕ ಸಾಧಿಸಿಯದೆ. ಲಾಠಿಗಳನ್ನು ಪ್ರಯೋಗಿಸಿಯದೆ, ಕಾರಾವಾಸ ವನ್ನೂ ವಿಧಿಸಿದೆ; ಅದಕ್ಕೊಂದು ಕಾನೂನಾದರೂ ಬೆಂಬಲಕ್ಕಿತ್ತು, ಒಪ್ಪಬೇಕು. ಕೊಂಗ್ರೆಸು ಸ್ವೈರಿಸಿ, ಸಹಿಸಿ, ತ್ಯಜಿಸಿ, ಕತ್ತು ಪಾರಾಗಿ ಬಲ ಹೊಂದಿ ಬಾಳಿಕೊಂಡಿದೆ. ಅದರ ಬದಲು, ಹಿಂದಣಿಂದ ಪಕ್ಕದಿಂದ ತಿವಿದು ಪಾತಿಸುವುದು ನ್ಯಾಯವೆಂದು ಸರಕಾರವೇ ತಿಳಿದಿಲ್ಲ. ಮುಸ್ಲಿ ಮರ ಬೆಂಬಲವು ಕೊಂಗ್ರೆಸಿಗಿಲ್ಲವೆಂದು ಪ್ರಪಂ ಚಕ್ಕೆ ಸಾರಿದ ಮಾತ್ರಕ್ಕೇ ಕೊಂಗ್ರೆಸು ಮುಸ್ಲಿಮ ಸದಸ್ಯರನ್ನು ತ್ಯಜಿಸಿದಂತಾಗಲಿಲ್ಲ, ಮುಸ್ಲಿಮರು ಕೊಂಗ್ರೆಸಿನ ತಾವೇ ದೂರವಾಗುವರಾದರೆ, ಸಂತಾಪದಿ ... ಒಂದು ದಿನ ಪುನಃ ಮರಳುವರು, ಸಹಾನುಭೂತಿಯಿಂದ ಮರಳಿ ... ಸ್ವಾಗತವನ್ನು ಸಿದ್ಧಮಾಡು ವುದು ... ಕೊಂಗ್ರೆಸು ... ಕೊಂ ಗ್ರೆಸಿನ ರಾಷ್ಟ್ರೀಯತೆ ... ಲೀಗಿನ ಜಾತೀಯತೆಗೆ ಕೊಂಗ್ರೆಸು ಎಂದಿಗೂ ಇಳಿಯಲಾರದು.

A B

Prescription Work a Speciality

Eye Testing Free.

For Stylish FRAMES
Up to-date shape LENSES
and
All kinds of optical goods

Please Visit

Nayaks Optical Stores

Scientific Opticians,
Temple Square, MANGALORE

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕಾ 'ಕಾಂತಿ' ಟೊಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು.

'ಕಾಂತಿ' ಸಾಬೂನನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿತಿ ಯಿಲ್ಲದೆ ಜನರು ಶ್ಲಾಘಿಸಿ ಉಪಯೋಗಿಸುವರು.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ.

ಡಿಸ್ಟ್ರಿಬ್ಯುಟರರು:—
ಎಸ್. ಆರ್. ನ್ಯಾಕ್ ಎಂಡ್ ಕೋ.,
ಮಂಗಳೂರು.

HOUNSA

ಹಂಸಾ ಸ್ನೋ ಮತ್ತು

ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

P. O. Puttur

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿವಸವೇ ಚಂದಾದಾರರಾಗಿರಿ.

(S. K. C.)

the

Agricultural & Industrial Bank, Ltd.

Head Office ... Coondapoor

BRANCHES:—

Deposits are accepted at following rates:

Current Deposits

and

Savings Bank Deposits

per cent per annum

Fixed Deposits

for 6 Months

1 Year

2 Years & above

CUMULATIVE DEPOSITS ARE ACCEPTED

For Further Particulars Apply to:—

HEAD OFFICE or BRANCHES

Buy Advertised Goods

DRINK

Delicious

WATERFALL

AND

PYKARA TEAS.

unrivalled for Taste & Aroma.

ಅತ್ಯುತ್ತಮವಾದ

ವಾಟರ್‌ಫೋಲ್

ಮತ್ತು

ಪೈಕರಾ ಚಹಾವನ್ನು

ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ.

Distributors:

Panchmal Krishnaya Shenoi & Son,

Bunder, Mangalore.

USE

365 BAR SOAPS

SOLD

EVERYWHERE.

**

**

Sole Agents

PANCHMAL KRISHNAYA

SHENOI & SON,

Bunder, MANGALORE

ಖಾಸಗಿ ಶಾಲೆಗಳ ಆಡಳಿತವನ್ನು ಸರಕಾರವು ತಾನು ನೋಡುವದಂತೆ!

ಮುನ್ಸಿಪಲ್ ಸಂಸ್ಥೆಗಳ ಅಧಿಕಾರ ಸೂತ್ರವನ್ನು ಕಾಂಗ್ರೆಸ್ ಮುಕ್ತ ಗುಂಪುಗಳು ತಮ್ಮ ಕೈಗೆ ತೆಗೆದು ಕೊಂಡಂದಿನಿಂದ ಖಾಸಗಿ ಶಾಲೆಗಳ ಆಡಳಿತವನ್ನು ಸರಕಾರವು ತಾನು ನೋಡಿಕೊಳ್ಳುವದಾಗಿ, ಮಂತ್ರಿಗಳು ತಮ್ಮ ಅಲ್ಲಲ್ಲಿಯ ಭಾಷಣಗಳಲ್ಲಿ ಹೇಳಿದ್ದರು. ಇದರಿಂದ ತಮ್ಮ ಸ್ಥಿತಿಗತಿಗಳು ಸುಧಾರಿಸಿ ಕೊಂಡಾವು ಎಂದು ಖಾಸಗಿ ಶಾಲೆಗಳ ಉಪಾಧ್ಯಾಯರು ಆಶಿಸಿಕೊಂಡಿದ್ದರಬಹುದು. [illegible]

[illegible]

ಗಂಡು ಹೆಣ್ಣುಗಳ ಸಂಯೋಗವಾಗದೆ ಮಕ್ಕಳು ಹುಟ್ಟಿದುವು!

[illegible]

ಈ ರೋಗವನ್ನು ನಿವಾರಿಸಿರಿ.

[illegible] ಕಾಪಾಡಿಕೊಳ್ಳಿರಿ.

ಸಿಗುವ ಸ್ಥಳ:— ಕೇಸರಿ ಕುಟೀರ, ಮಡಿಕೇರಿ.

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ
P O Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ ವೈದ್ಯ ಎಲ್. ಸಿ. ಪಿ ಎಸ್, ಕೆಳವಾಡ್ಯಾಹರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. - ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ ಪಿ ಅಹೆ, ಳ.

ವಿಳಾಸ.—ಸಂಜೀವಿನೀ ಔಷಧಾಲಯ, ಮು, ಪೋ. ಮಿರಜೆ, (S. M. C.)

DRINK
Delicious
WATERFALL
AND
PYKARA TEAS.
unrivlled for Taste & Aroma

ಅತ್ಯುತ್ತಮವಾದ
ವಾಟರ್‌ಫೋಲ್
ಮತ್ತು
ಪೈಕರಾ ಚಹಾವನ್ನು
ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ

Distributors.

Panchmal Krishnaya Shenoi & Son,
Bunder, Mangalore

The
Agricultural & Industrial Bank, Ltd ,
(Incorporated in British India)

Head Office "LAXMINIVAS BUILDINGS *Coondapoor*

BRANCHES -

COONDAPOOR	BYNDOOR	SIWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS 10 25 50 100 250 500 & 1000

REDEEMABLE AT ANY TIME

CUMULATIVE DEPOSITS ARE ACCEPTED

Current Deposits
From January to June 2%
and
From July to December 1%

Savings Bank Deposits
3½ per cent per annum

Fixed Deposits

for 6	Months	3½%
„ 1	Year	4%
„ 2 Years &above		4½%

For Further Particulars Apply to:—

HEAD OFFICE or BRANCHES

Buy Advertised Goods

USE
365 BAR SOAPS
SOLD
EVERYWHERE.

**
**

Sole Agent:

PANCHMAL KRISHNAYA SHENOI & SON,
under, MANGALORE

ಪ್ರಾಥಮರಿ ಶಾಲೆಗಳ ಆಡಳಿತವನ್ನು ಸರಕಾರವು ತಾನು ನೋಡುವದಂತೆ!

ಮದ್ರಾಸು ಸಂಸ್ಥಾನದ ಅಧಿಕಾರ ಸೂತ್ರವನ್ನು ಕಾಂಗ್ರೆಸು ಮಂತ್ರಿ ಮಂಡಳವು ತನ್ನ ಕೈಗೆ ತೆಗೆದು ಕೊಂಡಂದಿನಿಂದ ಪ್ರಾಥಮರಿ ಶಾಲೆಗಳ ಆಡಳಿತವನ್ನು ಸರಕಾರವು ತಾನು ನೋಡಿಕೊಳ್ಳುವದಾಗಿ, ಮಂತ್ರಿಗಳು ತಮ್ಮ ಹಲ್ಲವಿಯ ಭಾಷಣಗಳಲ್ಲಿ ಹೇಳಿದ್ದದೆ ಇದರಿಂದ ತಮ್ಮ ಸ್ಥಿತಿಗತಿಗಳು ಸುಧಾರಿಸಿ ಕೊಂಡಾವು ಎಂದು ಪ್ರಾಥಮರಿ ಶಾಲೆಗಳ ಉಪಾಧ್ಯಾಯರು ಆಶಿಸಿಕೊಂಡಿದ್ದರಬಹುದು ಪರಂತು ಅವರ ಆಸೆ ಪ್ರತ್ಯಾಸೆಗಳು ಎಷ್ಟರ ಮಟ್ಟಿಗೆ ಕೈಗೂಡಿ ಬಂದಾವು ಎಂಬುದು ಒಂದು ವಿಚಾರಣೀಯ ವಿಷಯವಾಗಿದೆ.

ಪ್ರಾಥಮರಿ ಶಾಲೆಗಳ ಆಡಳಿತವನ್ನು ಸರಕಾರವು ನೋಡುವದು ಹೇಳಿದಷ್ಟು ಸುಲಭ ಕಾರ್ಯವಾಗಿರುವದಿಲ್ಲ ಇಲ್ಲವಾದರೆ ಆ ಕಾರ್ಯವು ಎಂದೋ ಆಗಿ ಹೋಗಬೇಕಿತ್ತು. ಈಗ ತತ್ಕಾಲಕ್ಕೆ ಬೋರ್ಡು ಮತ್ತು ಪಂಚಾಯತ ಶಾಲೆಗಳನ್ನು ಮಾತ್ರ ತನ್ನ ಆಡಳಿತಕ್ಕೆ ತೆಗೆದುಕೊಳ್ಳುವ ವಿಚಾರವು ಸರಕಾರಕ್ಕಿರುತ್ತದೆ ಆದಾಗ್ಯೂ ಕೂಡ ಸರಕಾರದ ವಿದ್ಯಾ ಇಲಾಖೆ, ಲೋಕಲ್ ಬೋರ್ಡ ಇಲಾಖೆ ಮತ್ತು ಆರ್ಥಿಕ ಇಲಾಖೆಯವರೂ ಒಟ್ಟಿಗೆ ಕೂಡಿ ಈ ಪ್ರಶ್ನೆಯನ್ನು ಆಲೋಚಿಸಬೇಕಾಗಿದೆ. ಈ ಇಲಾಖೆಯ ಮೇಲುದ್ಯೋಗಸ್ಥರು ಈಗ [illegible] ಒಂದು ನಿರ್ಧಾರಕ್ಕೆ ಬಂದಿರುವದಾಗಿ ಈಗ ತಿಳಿದುಬರುತ್ತದೆ ಈ ವಿಷಯವು ಹೀಗಿಯೇ ಸರಿ ಎಂದು ಸರಕಾರವು ಸದ್ಯದಲ್ಲೇ ಹೇಳಲಿಕ್ಕಿರುವದು ಸರಕಾರವು ಕೆಲವು ಅಕ್ಷರ [illegible]ಗಳನ್ನು ಹೆಚ್ಚಿಗೆಯಾಗಿ ಈ ಇಲಾಖೆಗಳ ಆಡಳಿತಕ್ಕೆ ಖರ್ಚು ಮಾಡಬೇಕಾದ ಪ್ರಸಂಗ ಬಂದರೆ ಅದು ಬೋರ್ಡ ಮತ್ತು ಪಂಚಾಯತ ಶಾಲೆಗಳನ್ನು ತನ್ನ ಆಡಳಿತಕ್ಕೆ ತೆಗೆದುಕೊಳ್ಳುವದು [illegible] ಶಾಲೆಗಳನ್ನು ತೆಗೆದುಕೊಳ್ಳುವ [illegible], ಸದ್ಯಕ್ಕೆ ಸರಕಾರಕ್ಕೆ ಇರುವದಿಲ್ಲ ಎಲ್ಲಾ [illegible]ಗಳನ್ನು ತನ್ನ ತಾಬೆಗೆ ತೆಗೆದುಕೊಳ್ಳುವ ವಿಷಯವನ್ನು ಆಲೋಚನೆಗೆ ತೆಗೆದುಕೊಂಡಾಗ ಅದು ಅಸಾಧ್ಯವೆಂದು ಸರಕಾರಕ್ಕೆ ತೋರಿಬಂದಿದೆ. [illegible]ದರೂ ಕೂಡ ಖಾಸಗೀ ಶಾಲೆಗಳ ಉಪಾಧ್ಯಾಯರ ಸ್ಥಿತಿಗತಿಗಳನ್ನು ಸುಧಾರಿಸುವ ವಿಷಯವನ್ನು ಸರಕಾರವು ಸಹಾನುಭೂತಿಯಿಂದ ವಿಮರ್ಶಿಸುವದಾಗಿ ಭರವಸೆ ಕೊಡೋಣಾಗಿದೆ ಖಾಸಗಿ ಶಾಲೆಗಳ ಮೆನೇಜರರ ಹಕ್ಕು-ಅಧಿಕಾರಗಳಿಗೆ ಲೋಪಬಾರದಂತೆ ಎಚ್ಚರ ತೆಗೆದುಕೊಂಡು, ಸರಕಾರವು ಆ ಶಾಲೆಗಳ ಉಪಾಧ್ಯಾಯರಿಗೆ ನಿರ್ದಿಷ್ಟವಾದ ಕಲಬ್ಯುಕ್ತಪ್ತ ಕಾಲಕ್ಕೆ ದೊರೆಯುತ್ತಿರುವಂತೆಯೂ, ಅವರ ಸ್ಥಾನವು ಭದ್ರವಾಗಿರುವಂತೆಯೂ ತಕ್ಕ ಉಪಾಯಗಳನ್ನು ಕಂಡುಕೊಂಡು ಅವನ್ನು ಅದು ಕ್ರಮಕ್ಕೆ ತರುವದರಲ್ಲಿದೆ

ಸರಕಾರದ ಈಗಿನ ಧೋರಣ ಮತ್ತು ಕಾರ್ಯನೀತಿಯನ್ನು ನೋಡುವಾಗ, ಪ್ರಾಥಮರಿ ಶಾಲೆಗಳ ಉಪಾಧ್ಯಾಯರ ಸ್ಥಾನಮಾನಗಳು ಆರ್ಥಿಕ ದೃಷ್ಟಿಯಿಂದ ಈಗಿರುವದಕ್ಕಿಂದ ಬಹಳ ಉತ್ತಮಗೊಳ್ಳುವವೆಂದು ಹೇಳಲಿಕ್ಕೆ ಯಾವ ಆಧಾರಗಳೂ ಇರುವದಿಲ್ಲ ಉಪಾಧ್ಯಾಯರ ಸಂಘಗಳ ಬಲಗೊಂದು, ಅವರ ಚಳವಳಿಯ ಒತ್ತಾಟವು ಸರಕಾರದ ಸೂತ್ರಧಾರರ ಮೇಲೆ ಒಬಳವಾಗಿ ಬಿದ್ದ ಹೊರತು, ಅವರು ಉಪಾಧ್ಯಾಯರ ಸರ್ವತೋಮುಖವಾದ ಉನ್ನತಿಗೆ ಎಲ್ಲಾ ಪ್ರಯತ್ನಗಳನ್ನು ಮಾಡುವರಲ್ಲ ವಾಗಿ ಊಹಿಸಲಿಕ್ಕೆ ತ[illegible] ಎಡೆ ಇರುತ್ತದೆ

ಬ್ರಿಟನಿನಲ್ಲಿ ನಾಜಿ ಪ್ರಚಾರ
ಅಧಿಕಾರ ವರ್ಗದ ಹೆಚ್ಚಿನ ಹತೋಟಿ

ನಾಜಿಗಳು ತಮ್ಮ ದೇಶವನ್ನು ಪ್ರವೇಶಿ, ಅವರ ತತ್ವಗಳ ಪ್ರಸಾರಣೆಯನ್ನು ಮಾಡದಂತೆ ಬ್ರಿಟಿಷ ಸರಕಾರವು ಈಗ ಹೆಚ್ಚಿನ ನಿಗಾ ತೆಗೆದುಕೊಳ್ಳುತ್ತಿದೆ ಕಳೆದ ಮೂರು ತಿಂಗಳಲ್ಲಿ ಸಂಶಯಕ್ಕೊಳಗಾದ 90 ಮಂದಿ ಜರ್ಮನರನ್ನು [illegible] ಅವರ ದೇಶಕ್ಕೆ ಕಳುಹಿಸಿಕೊಟ್ಟಿದ್ದರೆ.

ನಾಜಿ ಪ್ರಸಾರಣೆಯು ಅಲ್ಲಲ್ಲಿ ನಡೆ[illegible] ಪೋಲೀಸ ವ್ಯವಸ್ಥೆ ಮಾಡಲಾಗಿದೆ

ಇ[illegible]ದಿನಲ್ಲಿ ಅಲ್ಲಲ್ಲಿ ಉಪಯೋಗ್ಯದ [illegible] ಬಹಿರಾ [illegible]ಗಳನ್ನು [illegible] ಸೇರಿಸಿಕೊಳ್ಳುವುದರಲ್ಲಿ ಅತ್ಯಂತ ಜಾಗರೂಕರಾಗಿರಬೇಕಾಗಿ ಬ್ರಿಟಿಷ ಸರಕಾರದ ಅಪ್ಪಣೆಯಿಂದ, ಎಲ್ಲಾ ಗಿರಣಿಗಳಿಗೂ [illegible] ವ್ಯಾಪಾರಿಗಳಿಗೂ, ಸರಕಾರಿ ಉದ್ಯೋಗಸ್ಥರಿಗೂ ಹೋಗಿರುತ್ತದೆ

ಇತ್ತೀಚೆಗೆ ಜರ್ಮನ್ ಶಾಲಾ ಮಕ್ಕಳು ಇಂಗ್ಲಂಡಿನ ಶಾಲಾ ಮಕ್ಕಳಿಗೆ ಬರೆಯುತ್ತಿರುವ ಪತ್ರಗಳಲ್ಲಿ ಹೆಚ್ಚಾಗಿ ಜರ್ಮನಿಯ ರಾಜಕೀಯ ಕುರಿತು ಬರೆಯುತ್ತಿರುವದಾಗಿ ಕಂಡುಹಿಡಿಯಲಾಗಿದೆ ಏದನ್ನರು ರಾಜಯುಕ್ತ ಸಮಯ ಓರ್ವ ವಿದ್ಯಾರ್ಥಿಯು ಕೆಳಗಿನ ಅಭಿಪ್ರಾಯವನ್ನುಳ್ಳ ಒಂದು ಪತ್ರವನ್ನು ಬರೆದಿದ್ದನಂತೆ

'ಏದನ್ನರು ಹೋದದರಿಂದ [illegible] ಸಂತೋಷವಾಗುತ್ತದೆ [illegible] ದೇಶವು ನಮ್ಮ [illegible] ತೋರಿಸದು'

ಕಾಂಗ್ರೆಸ್ಸನ್ನು ಸೇರಿರಿ, ಅಥವಾ ರಾಜೀನಾಮೆ ಕೊಡಿರಿ

ಅಸ್ಸಾಮು [illegible] ವಿಭಾಗದ [illegible] ಸಭೆಯು ಜರಗಿ ಅಲ್ಲಿಂದ ಕಳುಹಿಸಿದ ಪತ್ರಿಕೆಗಳಿಂದ ಶ್ರೀ [illegible] ಯವರು, ಕಾಂಗ್ರೆಸ್ಸನ್ನು ಸೇರಬೇಕು ಅಥವಾ ರಾಜೀನಾಮೆ ಕೊಡಬೇಕು ಎಂದು ನಿರ್ಣಯ ಮಾಡಿರುವರು

ಅಲ್ಲದೆ ಪ್ರಾಂತ್ಯದಲ್ಲಿ ಮುಖ್ಯವಾಗಿ ಚಹಾ ತೋಟಗಳಿರುವಲ್ಲಿ, ಮದ್ಯದಂಗಡಿಗಳನ್ನು ಮುಚ್ಚಿಸುವಂತೆ ಸರಕಾರವನ್ನು ಬೇಡಿಕೊಳ್ಳಬೇಕೆಂದೂ ನಿರ್ಣಯವಾಯಿತು.

ಗಂಡು ಹೆಣ್ಣುಗಳ ಸಂಯೋಗವಾಗದೆ
ಮಕ್ಕಳು ಮರಿಗಳು ಹುಟ್ಟಿದುವು!

ಹೋರಿ ಹೊಲ್ಲಿಂಡಿನಲ್ಲಿತ್ತು. ದನ ಇಂಗ್ಲೆಂಡಿನಲ್ಲಿತ್ತು. ಈ ಜನ್ಮದಲ್ಲಿ ಅವುಗಳೆರಡು ಒಂದರ ಮುಖ ಒಂದು ಕಂಡಿಲ್ಲ. ಆದರೂ ಆ ಹೋರಿಯಿಂದ ಈ ದನಕ್ಕೆ ಒಂದು ಕರು ಹುಟ್ಟಿದೆ ಕೇಳಿ ನಿಮಗೆ ವಿಚಿತ್ರ ವಾರ್ತೆ ಎಂದು ತೋರಬಹುದು ಆದರೆ ಇದು ಸುಳ್ಳಲ್ಲ. ಸಂಪೂರ್ಣ ನಿಜ ತಾಯಿ ದನವೂ ಆ ಕರುವೂ ಕ್ಷೇಮದಲ್ಲಿವೆ. ಕರುವು ದೃಢಕಾಯವಾಗಿ ಆರೋಗ್ಯವಾಗಿದೆ ಶುಕ್ಲ ಪಕ್ಷದ ಬಿದಿಗೆಯ ಚಂದ್ರನಂತೆ ಸುಂದರವಾಗಿ ಬೆಳೆದು ಬರುತ್ತಲಿದೆ.

ಕೇಂಬ್ರಿಜ್ ವಿಶ್ವಾಲಯದ ಎನಿಮಲ್ ನುಟ್ರೀಶನ್ ರಿಸರ್ಚ ಇನ್ಸ್‌ಟಿಟ್ಯೂಟಿನವರೂ, ಹೊಲ್ಲಿಂಡಿನ ಪ್ರಸಿದ್ಧ ಗೋವೈದ್ಯರಾಗಿರುವ ಡಾ॥ ಸಿ ಬೆಂಗಾರನರೂ ಕೂಡಿ ಈ ಕಾರ್ಯವನ್ನು ಸಾಧ್ಯಮಾಡಿದ್ದಾರೆ. ಕಳೆದ ಫೆಬ್ರುವರಿ ತಿಂಗಳಲ್ಲಿ ಡಾಕ್ಟರ್ ಸಿ ಬೆಂಗರು ತಮ್ಮ ಬೀಜದ ಹೋರಿಯ ವೀರ್ಯವನ್ನು ಒಂದು ಶೋಧನಾ ನಳಿಗೆಯಲ್ಲಿ ಸಂಗ್ರಹಿಸಿ ಅದನ್ನು ಮಂಜ ಮುಚ್ಚಿಟ್ಟು, ವಿಮಾನದ ಮೂಲಕ ಇಂಗ್ಲೆಂಡಿಗೆ ಕಳುಹಿಸಿ ಕೊಟ್ಟರು 28 ತಾಸುಗಳು ಕಳೆದ ಮೇಲೆ ಎಸೆಕ್ಸಿನ ಆ ದನದ ಗರ್ಭಕೋಶದೊಳಗೆ ಈ ವೀರ್ಯವನ್ನು ಸೇರಿಸಿ ಗರ್ಭ ನಿಲ್ಲುವಂತೆ ಮಾಡಿದರು. ಈಗ ಆದನಕ್ಕೆ ಒಂದು ಚೆಂದವಾದ ಕರುವು ಹುಟ್ಟಿದೆ ಹೀಗೆಯೇ ಕೇಂಬ್ರಿಜಿನಿಂದ ಕಳೆದ ವರ್ಷದ ಮೇ-ಜೂನ್ ತಿಂಗಳಲ್ಲಿ ಒಂದು ಹೋರಿಯ ವೀರ್ಯವನ್ನು ಹೊಲ್ಲಿಂಡಿಗೆ ಡಾ॥ ಸಿ ಬೆಂಗರಿಗೆ ಕಳುಹಿಸಿ ಕೊಟ್ಟರು, ಅವರು ಅದನ್ನು 81 ದನಗಳ ಕೋಶದಲ್ಲಿ ಇಳಿಸಿದರು. ಈಗ ಅವುಗಳಲ್ಲಿ ಸುಮಾರು ಅರ್ಧದಷ್ಟು ಗರ್ಭತಾಳಿರುವವು.

ಗಂಡು ಹೆಣ್ಣುಗಳ ಸಂಯೋಗವಾಗದೆ ದನಕರುಗಳು ಮಾತ್ರ ಹುಟ್ಟಿವೆಯೆಂದಲ್ಲ. ಕುರಿಗಳ ಮೇಲೂ ಇಂಥ ಪ್ರಯೋಗಗಳು ನಡೆದು, ದನಗಳಿಗೆ ಮೇಲೆ ಹೇಳಿದ ಪ್ರಕಾರ ಕರುಗಳು ಹುಟ್ಟಿರುವಂತೆ ಕುರಿಗಳೂ ಹುಟ್ಟುವದು ಸಾಧ್ಯವೆಂದು ತಿಳಿದು ಬಂದಿರುತ್ತದೆ ಇಂಥ ಪ್ರಯೋಗಗಳು ಯೂರೋಪಿನ ಹಲವು ದೇಶಗಳಲ್ಲಿಯೂ, ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿಯೂ ನಡೆದಿರುವುವು

ಎಲ್ಲಾ ಪ್ರಯೋಗಗಳು ಸಫಲವಾಗಿರುವದಿಲ್ಲ ಆದರೆ ವೀರ್ಯವನ್ನು ಬೇರೆಡೆಯಿಂದ ಇನ್ನೊಂದೆಡೆಗೆ ಕಳುಹಿಸಲಿಕ್ಕೆ ಅದನ್ನು ಕಟ್ಟಿದ ಕ್ರಮದಲ್ಲಿ ಎದ್ದ ಕುಂದು ಕೊರತೆಗಳು ಈ ಅಫಲಿತೆಯ ಕಾರಣವೆಂದು ಹೇಳಲಾಗುತ್ತದೆ ಆದರೆ ಹೆಣ್ಣು ಗಂಡುಗಳ ಸಂಯೋಗವಾಗದೇನೇ ಸಂತಾನ ವೃದ್ಧಿಗಳ ದೂರದಲ್ಲಿರುವ ಗಂಡುಪ್ರಾಣಿಗಳಿಂದ ಅದೇ ಜಾತಿಯ ಹೆಣ್ಣು ಪ್ರಾಣಿಗಳಿಗೆ ಮರಿಗಳು ಹುಟ್ಟುವದು ಸಂಪೂರ್ಣ ಸಾಧ್ಯವೆಂದಾದರೆ ಲೋಕಕ್ಕೆ ದೊಡ್ಡ ಪ್ರಯೋಜನವಾಗುವದು. ಉತ್ತಮ ಜಾತಿಯ ಜಾನುವಾರುಗಳನ್ನು ಉಂಟುಮಾಡಲಿಕ್ಕೆ ಆಗ ಗಂಡುಗಳನ್ನು ಹೆಣ್ಣುಗಳಿದ್ದಲ್ಲಿಗೆ ದೂರದೂರದಿಂದ ತರಬೇಕಾಗಿಲ್ಲ ಅವುಗಳ ವೀರ್ಯವನ್ನು ಮಾತ್ರ ತಂದರಾಯಿತು

ನಾಲ್ವತ್ತರ್ತೈದು ವರ್ಷಗಳ ಹಿಂದೆಯೇ ಶೋಧನಾ ನಳಿಗೆಯಲ್ಲಿ ವೀರ್ಯವನ್ನು ಹಿಡಿದ ಕೃತ್ರಿಮ ಉಪಾಯದಿಂದ ಜಾನುವಾರುಗಳ ಮರಿಗಳನ್ನು ಹುಟ್ಟಿಸುವ ಪ್ರಯತ್ನವು ನಡೆದಿತ್ತು ಮೊದಲ ಪ್ರಯತ್ನವು ಇಟಲಿಯಲ್ಲಿ ಆಯಿತು. ಈಗ ರಷ್ಯದಲ್ಲಿ ಈ ಕ್ರಮವು ಬಹಳ ಬಳಕೆಯಲ್ಲಿದೆ ಕಳೆದ ಒಂದು ವರ್ಷದಲ್ಲಿಯೇ ಆ ದೇಶದಲ್ಲಿ 2 ಮಿಲಿಯ ದನಗಳು 8 ಮಿಲಿಯ ಹಂದಿಗಳು, 6 ಲಕ್ಷ ಕುದುರೆಗಳು 2 ಲಕ್ಷ ಆಡುಗಳು ಈ ಕ್ರಮದಲ್ಲಿ ಮರಿ ಹಾಕಿರುವವು. ಈ ಜಾತಿಗಳ ಗಂಡು ಪ್ರಾಣಿಗಳ ವೀರ್ಯವನ್ನು ನಳಿಗೆಯಲ್ಲಿ ತೆಗೆದುಕೊಂಡ 2 ದಿವಸಗಳ ತನಕ ಕಾಪಾಡಿಗಿಡಬಹುದಾಗಿ ಗೊತ್ತಾಗುತ್ತದೆ

ಮನುಷ್ಯನಲ್ಲಿ ಮಾತ್ರ ಈ ಕ್ರಮವು ಪೂರ್ಣ ಸಾಧ್ಯವಲ್ಲವಂತೆ. ಜನನೇಂದ್ರಿಯಗಳಲ್ಲಿ ಕುಂದುಕೊರತೆಗಳಿದ್ದರೆ ಮಾತ್ರ ಮನುಷ್ಯರ ಬಂಜೆತನವನ್ನು ಹೋಗಲಾಡಿಸಬಹುದಲ್ಲದೆ, ಇತರರಲ್ಲಿ ಮೇಲೆ ಹೇಳಿದ ಪ್ರಕಾರ ಸಂತತಿಯನ್ನು ಹುಟ್ಟಿಸುವದು ಇಷ್ಟರ ತನಕ ಅಸಾಧ್ಯವೆಂದು ತೋರಿ ಬಂದಿರುವದು. ಜನೇಂದ್ರಿಯ ಸಂಬಂಧವಾದ ಕುಂದುಕೊರತೆಗಳಿದ್ದ 200 ಮಂದಿಯಲ್ಲಿ ಮಾಡಿದ ಮೇಲಿನಂಥ ಪ್ರಯೋಗಗಳಲ್ಲಿ ಸುಮಾರು 6 ಮಂದಿಯ ಬಂಜೆತನವು ದೂರವಾಗಿದೆ.

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು ಆದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಅದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಔಷಧದ ಕಡೆಗೆ ಗಮನ ಕೊಡಬೇಕು.

ಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

ರಾಷ್ಟ್ರಪತಿಯ ವಿಜಯಯಾತ್ರೆ!

★ ★ ★

ಶ್ರೀ ಸುಭಾಷಚಂದ್ರ ಬೋಸರು ಗಾಯಗೊಂಡರು

ಶ್ರೀ ಸುಭಾಷ್‌ಚಂದ್ರ ಬೋಸರು

ಪೂರ್ವ ಬಂಗಾಳದ ಕೊಮಿಲ್ಲಾ ಬಳಿಯ ಬ್ರಾಹ್ಮಣಬಾರಿಯಾ ಊರಲ್ಲಿ ರಾಷ್ಟ್ರಪತಿಯ ಮೆರವಣಿಗೆಯಲ್ಲಿ ಸ್ವಾಗತಹೊಂದುತ್ತಿರುವಾಗ, ಮುಸ್ಲಿಂ ಲೀಗಿಗೆ ಸಂಬಂಧಪಟ್ಟ ಕೆಲವರು ಅವರ ಕಡೆಗೆ ಕಲ್ಲು ಬಿಸಾಡಿದುದರಲ್ಲಿ, ಬಲ ಕಿವಿಯ ಹತ್ತಿರವೊಂದು ತಲೆಗಾಯವು ಉಂಟಾಯಿತು.

ಮೊದಲನೆ ಕಲ್ಲು ಬಲದಿಕ್ಕಿಗೆ ಬಿತ್ತು; ಎರಡನೆಯದು ತಲೆಗೆ ಬಡೆಯಿತು; ಮೂರನೆಯದನ್ನು ಬಂಗಾಳ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿ ಶ್ರೀ ಮೌಲ್ವಿ ಅಶ್ರಫ್ ಉದ್ದೀನರು ತಡೆದರು. ಡಾಕ್ಟರರು ಕೂಡಲೆ ಉಪಚಾರ ನಡೆಸಿದರು.

ಕೂಡಲೆ, ರಾಷ್ಟ್ರಪತಿಯವರು ಸಭೆಗೆ ನಡೆದು, (ಸಭಿಕರಲ್ಲಿ ಅರೆವಾಸಿ ಮುಸ್ಲಿಮರೇ ಇದ್ದರು.) ಈ ವಿಚಾರದಲ್ಲಿ ತಮ್ಮ ಹೇಳಿಕೆಯನ್ನು ಮುಂದಿಟ್ಟರು.

ಕಾಂಗ್ರೆಸಿಗೆ ನಾನಾ ತೆರದಲ್ಲಿ ನಿಂದೆ ಆರು ಆಕ್ಷೇಪಾದಿಗಳು ಉಂಟಾಗುವಂತೆ ಬರೆದು ಪ್ರಕಟಿಸಿದ ಪತ್ರಗಳನ್ನು ಇವರು ಮೊದಲೇ ಕಂಡಿದ್ದರು. 'ಒಂಬತ್ತು ಕೋಟಿ ಮುಸ್ಲಿಮರನ್ನು ಗುಲಾಮರನ್ನಾಗಿ ಮಾಡಿ ಹಿಂದೂ ರಾಜ್ಯವನ್ನು ಸ್ಥಾಪಿಸುವುದಕ್ಕೆ ಕಾಂಗ್ರೆಸ್ಸು ಹೊರಟಿದೆ' ಎಂಬೂ 'ಕಾಂಗ್ರೆಸು ಆಳುವ ಪ್ರಾಂತ್ಯಗಳಲ್ಲಿನ ಮುಸ್ಲಿಮರ ಜೀವ ಸೊತ್ತು ಮತ ಮಾನ ಎಲ್ಲವೂ ತೀಕ್ಷ್ಣವಾದ ಗಂಡಾಂತರದಲ್ಲಿವೆ' ಎಂದೂ ಒಂದು ಪತ್ರದಲ್ಲಿತ್ತು.

'ಬಂಗಾಳದ ಗೇಣಿ ಕಾನೂನು ಜ್ಯಾರಿಗೆ ಬಾರದಂತೆ ಕಾಂಗ್ರೆಸ್ ಸದಸ್ಯರೇ ಕಾರಣರೆಂದೂ ಅದರಲ್ಲಿದ್ದುದನ್ನು ರುಜುಮಾಡಿ ಕೊಡಿರೆಂದು ಮುಸ್ಲಿಮ್ ಲೀಗಿನವರಿಗೆ ತಿಳಿಸಿದರೂ ಯಾರೂ ರುಜುಪಡಿಸಿಲ್ಲ. ಬಂಗಾಳದ ಮಂತ್ರಿಗಳಿಗೆ ಬೆನ್ನೆಲುಬೇ ಇಲ್ಲದ ಕಾರಣ ಮಾತ್ರ ಆ ಕಾನೂನು ಜಾರಿಗೆ ಬಂದಿಲ್ಲ. ಸಂಯುಕ್ತ ಪ್ರಾಂತ್ಯ, ಬಿಹಾರ, ಒರಿಸ್ಸಾಗಳಲ್ಲಿನ ಕಾಂಗ್ರೆಸ್ ಮಂತ್ರಿಗಳು ತಮ್ಮ ಕಾನೂನುಗಳನ್ನು ಜಾರಿಗೆ ತಂದುದಿಲ್ಲವೆ? ಅವರಷ್ಟು ಬಲ ಇವರಿಗೆ ಇದ್ದಿದ್ದರೆ, ಗವರ್ನರರು ಕಾನೂನನ್ನು ಅಂಗೀಕರಿಸದೆ ಇರುತ್ತಿದ್ದರೇ?

'ಮೌಲಾನಾ ಅಬುಲ್ ಕಲಮ್ ಅಜದ್‌ರವರೇ ಮುಖ್ಯವಾಗಿರುವ ಕಮಿಟಿಯವರು ಎಷ್ಟು ಸಲ ಕೇಳಿಕೊಂಡರೂ ಮುಸ್ಲಿಮರಿಗೆ ಕಾಂಗ್ರೆಸ್ ಸರಕಾರಗಳಿಂದ ಉಂಟಾದ ಅನ್ಯಾಯವನ್ನು ಮಾನ್ಯ ಫಜಲುಲ್ ಹುಕ್ಕರು ಇದುವರೆಗೂ ತಿಳಿಸದಿರುವುದೇಕೆ?

'ಬಂಗಾಳದ ಮಂತ್ರಿಮಂಡಲಕ್ಕೆ ಕಾಂಗ್ರೆಸು, ಅವರು ಮುಸ್ಲಿಮರೆಂಬ ಕಾರಣದಿಂದ ವಿರೋಧಿಯಾಗಿಲ್ಲ; ಯೋಗ್ಯರಲ್ಲವೆಂದೇ ಅವರಿಗೆ ವಿರೋಧ. ಕಾಂಗ್ರೆಸನ್ನು ವಿರೋಧಿಸುವಾಗ ಹೀನ ರೀತಿಯಿಂದ ವರ್ತಿಸಬಾರದು. ಕಲ್ಲುಗಳನ್ನು ಬಿಸಾಡಿದರೂ, ಅಹಿಂಸಾ ವ್ರತದ ಬಲದಿಂದ ತನ್ನ ನಿಶ್ಚಿತ ಧ್ಯೇಯವನ್ನು ಕಾಂಗ್ರೆಸು ಸಾಧಿಸುವುದು ಖಂಡಿತ.'

ಈ ಕಲ್ಲೆಸೆತದ ಫಲವಾಗಿ ೧೫ ಮಂದಿಗೆ ಗಾಯಗಳಾಗಿವೆ. ರಾಷ್ಟ್ರಪತಿಯವರಿಗೇ ಅಲ್ಲದೆ, ಮೌಲ್ವಿ ಅಶ್ರಾಫ್ ಉದ್ದೀನರಿಗೂ ಗಾಯಗಳಾಗಿವೆ. ಯುನೈಟೆಡ್ ಪ್ರೆಸ್ಸಿನ ವಾರ್ತೆಯಲ್ಲಿ 'ಮುಸ್ಲಿಂ ಲೀಗಿಗೆ ಸಂಬಂಧಪಟ್ಟವರ ತಂಟೆಯ ಫಲವಾಗಿ' ಎಂದೂ ಉಲ್ಲೇಖವಿದೆ. ಇದು ಟಿಪ್ಪೇರಾ (ತ್ರಿಪುರಾ) ಜಿಲ್ಲೆಗೆ ಸೇರಿದ ಊರು. ಇಲ್ಲಿ ಕಾಂಗ್ರೆಸಿಗೆ ಸೇರುವ ಮುಸ್ಲಿಮರ ಸಂಖ್ಯೆ ಬಂಗಾಳದಲ್ಲಿ ಇನ್ನೆಲ್ಲಿಯೂ ಇಲ್ಲ. ರಾಷ್ಟ್ರಪತಿಯ ಸ್ವಾಗತ ಸಂಭ್ರಮದಲ್ಲಿ ಹೆಚ್ಚಿನ ಪರಿಶ್ರಮ ಇವರದು. ಇದರಿಂದಾಗಿ ಮತ್ಸರಗೊಂಡು ಕ್ರೋಧದಿಂದ ಲೀಗಿನವರು ಕೆಲವು ಕರೀ ಪತಾಕೆ ಹಿಡಿದು ಗಲ್ಲೆಬ್ಬಿಸಿದರು. ಅಧಿಕ ತರವಾಗಿ ಮುಸ್ಲಿಮರು ಮೆರವಣಿಗೆಯಲ್ಲಿ ಸೇರಿದ ಕಾರಣ, ಲೀಗಿನವರು ತಮ್ಮ ಸಂಖ್ಯೆ ಅತ್ಯಲ್ಪವಾಗಿ, ಸಂಗಟ್ಟು ಹೀಗೆ ಕೊನೆಗೆ ಕಲ್ಲು ಬಿಸಾಡಿದರು.—ಕಾನಸಲ್ಲಿಯೇ ರಾಷ್ಟ್ರಪತಿಯವರು ಹೀಗೆಂದರು:—

'ಒಂದೊಂದು ಕಲ್ಲು, ಕಾಂಗ್ರೆಸಿನ ದಿಗ್ವಿಜಯ ಮುನ್ನಡೆವಾಗ ಒಂದೊಂದು ಮೈಲಿಕಲ್ಲಾಗುವುದು! ಅವರ ಸಿಟ್ಟಿಗೆ ನಮ್ಮ ಶಾಂತಿ ಸ್ಮರಣೆ; ಅವರ ತುಂಟತನಕ್ಕೆ ನಮ್ಮ ಸ್ನೇಹವು, ಅವರ ದ್ವೇಷಕ್ಕೆ ನಮ್ಮ ಪ್ರೇಮ. ಇದರಿಂದ ಗೆಲ್ಲುವೆವು.'

ಸಪ್ತಮ ಎಡ್ವರ್ಡ ಬಾದಶಹರಿಗೆ ಬಂದ

ಪ್ರೇತಾತ್ಮದ ಮರಣ ಸಂದೇಶ

ಫಿಂಗಾಲಿನ ಕೌಂಟೆಸ ಆಗಿರುವ ಎಲಿಜಬೆತ್ತ ಎಂಬ ಮಹಿಳೆಯು ತನ್ನ ಜೀವಮಾನದ ಕೆಲವು ಸ್ಮರಣೆಗಳನ್ನು ವರ್ಣಿಸಿರುವ 'ಸೆವೆಂಟಿ ಇಯರ್ಸ್ ಯಂಗ್' ಎಂಬ ಒಂದು ಪುಸ್ತಕವನ್ನು ಬರೆದಿದ್ದಾಳೆ. ಈಗ ಕೀರ್ತಿ ಶೇಷರಾಗಿರುವ ಸಪ್ತಮ ಎಡ್ವರ್ಡ ಬಾದಶಾಹರಿಗೆ ಬಂದು ಪ್ರೇತಾತ್ಮದ ಮೂಲಕ ಬಂದಿದ್ದ ಮರಣಸಂದೇಶದ ಅದ್ಭುತವಾರ್ತೆಯು ಅದರಲ್ಲಿ ಪ್ರಕಟವಾಗಿದೆ. ದಿವಂಗತರಾಗುವ ಕೆಲವು ತಿಂಗಳುಗಳ ಮೊದಲಿಂದ ಎಡ್ವರ್ಡರು ತಾವು ಶೀಘ್ರದಲ್ಲಿ ಸಾಯಲಿರುವದನ್ನು ತಿಳಕೊಂಡಿದ್ದರೆಂದು ಇದರಿಂದ ಗೊತ್ತಾಗುತ್ತದೆ.

ಆ ಘಟನೆಯನ್ನು ಕುರಿತು ಲೇಡಿ ಫಿಂಗಾಲಳು, ತನ್ನ ಗ್ರಂಥದಲ್ಲಿ ಹೀಗೆ ಹೇಳುತ್ತಾಳೆ:— '1910ನೆ ಇಸವಿಯ ಜನವರಿ ತಿಂಗಳು. ಎಡ್ವರ್ಡರು ಲಿವಡಸ್ಸಿನ ಲೋರ್ಡ ಇವೇಗ್ಹರ ಮನೆಯಲ್ಲಿ ಉಳಕೊಂಡಿದ್ದರು. ಒಂದು ರಾತ್ರಿ ಅವರು ನನ್ನನ್ನು ತನ್ನ ಬಳಿಗೆ ಕರಕೊಂಡು— ಶ್ರೀಮತಿ ಜೇಮ್ಸನ್ನಳು ನನಗೆ ಒಂದು ಕಾಗದವನ್ನು ಬರೆದಿದ್ದಾಳೆ. ಅದನ್ನು ಓದಿ ನನಗೆ ಬಹಳ ಕರಕರೆಯಾಗಿದೆ. ಅದರಲ್ಲಿ ಅವಳು— ತನ್ನ ದಿವಂಗತ ಸಹೋದರ ಜೋರ್ಜ ಹೇಗನ ಮೂಲಕ ನನ್ನ ತಂಗಿ ರಾಜಕುಮಾರಿ ಎಲ್ಯಾಸಳು ತನಗೊಂದು ಸಂದೇಶವನ್ನು ಕಳುಹಿಸಿಕೊಟ್ಟಿದ್ದಾಳಾಗಿಯೂ, ಆ ಸಂದೇಶದಲ್ಲಿ— ನನಗೆ ಕೊಂಚವೇ ಸಮಯ ಉಳಿದಿದೆ, ನಾನು ಹೊರಡಲಿಕ್ಕೆ ಸಿದ್ಧನಾಗಬೇಕು — ಎಂದು ಬರೆದಿದೆಯಾಗಿಯೂ ಹೇಳಿದರು. ಶ್ರೀಮತಿ ಜೇಮ್ಸನ್ನಳು ಲೋರ್ಡಹೇಗರ ಸಹೋದರಿಯಾಗಿದ್ದಳು.

'ಮಹಾಸ್ವಾಮಿ, ಜೇಮ್ಸನ್ನಳು ಹಾಗೆ ಬರೆದಿರುವಳಾದರೆ, ತನ್ನ ಕರ್ತವ್ಯವೆಂದು ತಿಳಕೊಂಡು ಅವಳು ಹಾಗೆ ಮಾಡಿರಬೇಕು. ಆದರೆ ಆ ಸಂದೇಶವು ಯಥಾರ್ಥವಾಗಿತ್ತೆಂಬುದಕ್ಕೆ ಅವಳೇನಾದರೂ ದಾಖಲೆಗಳನ್ನು ಕೊಟ್ಟಿರುವಳೆ?' ಎಂದು ನಾನು ನಮ್ರಭಾವದಿಂದ ಬಾದಶಹರನ್ನು ಕೇಳಿದೆ.

'ಹೌದು; ಅವಳು ದಾಖಲೆಗಳನ್ನು ಕೊಟ್ಟಿದ್ದಾಳೆ. ರಾಜಕುಮಾರಿ ಎಲ್ಯಾಸಳು ತಾನೇ ಆಗಿರುವಳೆಂಬುದಕ್ಕೆ ಆ ಸಂದೇಶದಲ್ಲಿ ಅವಳು ನನ್ನ ಮತ್ತು ಅವಳ ಹೊರತು ಬೇರೆ ಯಾರೂ ಅರಿಯದ ಒಂದು ಪೂರ್ವ ಘಟನೆಯ ನೆನಪು ಮಾಡಿಸಿದ್ದಾಳೆ.' ಎಂದರು

'ಹೌದು, ಈ ಸಂಗತಿ ಜೇಮ್ಸನ್ನಳಿಗೆ ಹೇಗೆ ಗೊತ್ತಾಗಬಹುದು?' ಎಂದು ನಾನೂ ಆಶ್ಚರ್ಯದಿಂದ ಅವರನ್ನು ಕೇಳಿದೆ.

ಅವರು ಹಿಂದೆ ಹೇಳಿದುದನ್ನೇ ಮತ್ತೆ ಹೇಳಿ, ತನಗೆ ಬಹಳ ಕರಕರೆಯಾಗಿದೆ ಎಂದು ಪುನಃ ಹೇಳಿದರು. ತನ್ನ ಮನಸ್ಸು ಬಹಳ ಉದ್ವಿಗ್ನವಾಗಿರುವದನ್ನು ನಾನು ಜೇಮ್ಸನ್ನಳಿಗೆ ಬರೆದು ತಿಳಿಸಬೇಕೆಂದೂ ಅಪ್ಪಣೆಕೊಡಿಸಿದರು.

'ಸ್ವಾಮಿ, ಅದನ್ನು ನಾನು ಹೇಗೆ ಬರೆಯಲಿ?' ಎಂದೆ. ನಮ್ಮ ಸಂಭಾಷಣೆಯು ಅಂದಿಗೆ ಅಲ್ಲಿಗೇ ಮುಗಿಯಿತು.

ನಾನು ಅವರನ್ನು ಮತ್ತೆ ನೋಡಲಿಲ್ಲ. ಅವರು ಅದಾದ ಕೆಲವೇ ತಿಂಗಳಲ್ಲಿ ಸ್ವರ್ಗಸ್ಥರಾದರು.'

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ನಮ್ಮ ಆಫೀಸುಗಳು:

1. ರಥಬೀದಿ
ಮಂಗಳೂರು.

2. ಪುತ್ತಿಯಾರ
ಕಲ್ಲಿಕೋಟೆ.

3. ಪಿ. ಬಿ. 337
ಮೌಂಟ್ ರೋಡ್
ಮದ್ರಾಸು.
(ಟೆಲಿಫೋನ್ ನಂಬ್ರ 8245)

4. ವಿಶ್ವೇಶರಪುರಂ ಸರ್ಕಲ್
ಬೆಂಗಳೂರು ಸಿಟಿ.
(ಟೆಲಿಫೋನ್ ನಂಬ್ರ 2182.)

5. ಗೌತಮ ನಿವಾಸ್,
ಚಾರ್ನಿ ರೋಡ್,
ಗಿರ್‌ಗಾಂವ್, ಬೊಂಬಾಯಿ.
(ಟೆಲಿಫೋನ್ ನಂಬ್ರ 26314.)

ಇನ್ಸ್‌ಪೆಕ್ಟೊರೇಟ್ ಆಫೀಸು:

6. ಒಟ್ಟಪಾಲ,
ದಕ್ಷಿಣ ಮಲಬಾರು.

7. ಸೆಂಟ್ರಲ್ ಸ್ಟೇಶನ್ ರೋಡ್,
ಟ್ರಿವೆಂಡ್ರಮ್.

ಮದ್ರಾಸು ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

(ಕೊಚ್ಚಿಕಾರ್ ಬ್ರದರ್ಸ್ ರಿಜಿಸ್ಟರ್ ಆದುದು)

ರಿಜಿಸ್ಟರ್ಡ್ ಆಫೀಸು: ಉಡುಪಿ.

ಜೀವವಿಮಾಕಾರ್ಯದಲ್ಲಿ ಅತ್ಯಾಧುನಿಕ ವಿಶೇಷ ನೂತನ ಸೌಕರ್ಯಾದಿಗಳನ್ನು ಒದಗಿಸುವ

ಆದರ್ಶ ಜೀವವಿಮಾ ಸಂಸ್ಥೆ

ಪ್ರಗತಿಯು ಪ್ರಖ್ಯಾತಿಯನ್ನು ಸೂಚಿಸುತ್ತದೆ.

ನೂತನ ವಹಿವಾಟು	ರೂ. 140,08,725
ವಿಮಾಕಂತುಗಳಿಂದ ಆದಾಯ	ರೂ. 30,00,000ಕ್ಕೆ ಮಿಕ್ಕುತ್ತದೆ
ಒಟ್ಟು ಆಸ್ತಿಪಾಸ್ತಿಯು	ರೂ. 100,00,000ಕ್ಕೆ ಮಿಕ್ಕುತ್ತದೆ
ಈ ವರೇಗೆ ಕ್ಲೇಮುಗಳಿಗೆ ಸಂದದ್ದು	ರೂ. 50,00,000ಕ್ಕೆ ಮಿಕ್ಕುತ್ತದೆ.

ಉತ್ತಮ ಪ್ರತಿಫಲದ ಮೇಲೆ ಏಜನ್ಸಿಗಳಿಗಾಗಿ, ಒಳ್ಳೆ ಗುಣವಂತ ಮತ್ತು ಪ್ರಭಾವಶಾಲಿ ಸ್ತ್ರೀ ಪುರುಷರಿಂದ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗುವುದು.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಬೊಂಬೆ ಲೈಫ್ ಕಟ್ಟಡ,
ಸೆಂಟ್ರಲ್ ಆಫೀಸು: ಉಡುಪಿ.

ಸ್ಪೈಯಿನಿನಲ್ಲೊಂದು ವಾರ

ಪಂಡಿತ ನೆಹರುಗಳು ಯುದ್ಧರಂಗವನ್ನು ಕಂಡರು

ಇತರ ರಾಷ್ಟ್ರಗಳ ಪ್ರತಿನಿಧಿಗಳ ಸಂಚಾರ

ಬ್ರಿಟಿಷ್ ಸರಕಾರವು, ಇತರ ಸರಕಾರಗಳ ಪ್ರತಿನಿಧಿಗಳ ಮೂಲಕ, ಸ್ಪೈನ್ನದಲ್ಲಿಯ ದ[illegible] ಜ್ಯಗಳಲ್ಲಿ ಧ್ವಂಸಗೊಳಿಸುವುದರಿಂದಾದ [illegible]ವಳಿಯನ್ನು ಲೆಕ್ಕ ಮಾಡಲು ಒಂದು ಕಮಿ[illegible]ನ್ನು ನೇಮಿಸುವುದರಲ್ಲಿದೆ. ಈ ಕಮಿಶನು [illegible] ಸ್ಪಿನ್ನಿನ ಗಡಿನಾಡಿನಲ್ಲಿದ್ದು, ಸ್ಪೈಯಿನನಲ್ಲಿ ಹೋ[illegible]ಡುವ ಯಾವ ಪಕ್ಷದವರೂ ಸೂಚಿಸಿದಾಗ, [illegible]ಲ್ಲಿಗೆ ತೆರಳಿ, ಪ್ರತಿಯೊಂದು ಪ್ರಸಂಗದಲ್ಲಿ [illegible]ಂಸಮಾಡಿದವರಾರು ಎಷ್ಟು ಹಾವಳಿಯಾಗಿದೆ [illegible]ಂಬುದನ್ನು ವಿಚಾರಮಾಡುವದು.

ಬ್ರಿಟಿಷ, ನೋರ್ವೆಯನ್, ಸ್ವಿಡಿಸ್ ಸರ[illegible]ರಗಳು ಪ್ರತಿನಿಧಿಗಳನ್ನು ಕಳುಹಲೊಪ್ಪಿ[illegible]ತ್ತೆ, ಅಮೇರಿಕದ ಸರಕಾರವು, ತನ್ನ ಪ್ರತಿ[illegible]ಧಿ ಬರುವ ತನಕ ಕಾಯದೆ ಅಪೇಕ್ಷಿತಕಾರ್ಯ[illegible]ನ್ನು ಮುಂದರಿಸುವ ಹಾಗೆ ಸೂಚಿಸಿಯದೆ [illegible]ಕ್ಷಪಾತದ ದೂರು ಕಟ್ಟಿದ ಹಲವು ಸರಕಾರ[illegible]ಳು ಇಲ್ಲಿಗೆ ಪ್ರತಿನಿಧಿಗಳನ್ನು ಕಳುಹಬೇಕೆಂತೆ [illegible]ಟಿಷ ಸರಕಾರದ ಸೂಚನೆಯಾಗಿದೆ.

ಪಂಡಿತ ಜವಾಹರಲಾಲ ನೆಹರುರವರನ್ನು [illegible]ಗತ ಮಾಡಿಕೊಂಡು ಅವರೊಡನೆ ಮೈತ್ರಿ[illegible]ಂಭಾಷಣೆಗಳನ್ನು ಮಾಡಲು ಒಂದು ಪ್ರಮು[illegible] ಕೂಟವು ಬಾರ್ಸೆಲೋನದಲ್ಲಿ ತಾ 18 [illegible] ಸೇರಿತ್ತು ಪತ್ರಿಕಾ ಪ್ರತಿನಿಧಿಗಳ ಸರ[illegible]ದ ಮುಖ್ಯ ಮುದ್ದೇದಾರರೂ ಇದರಿಗೂ ವಿ[illegible]ರು ಪಂಡಿತರ ಅತ್ತ ಹೋದ ಬಳಿಕ [illegible] ಸಲ ವೈಮಾನಿಕರು [illegible] ಗಳನ್ನು [illegible]ಸಿದುದರಿಂದ, ಈ ಜಗಿಯ ಯುದ್ಧದ ಪರಿ[illegible]ಮವನ್ನು ತಿಳಿದುಕೊಳ್ಳಲು ಅವರಿ ಅನು[illegible]ಲವಾಯಿತು.

ಕೆಟಲೋನಿಯಾ ಪ್ರಾಂತ್ಯದ ಪ್ರಿಡೆಂಟ [illegible] ತಾ 19ರಲ್ಲಿ ಶ್ರೀ ನೆಹ[illegible] ಸ್ವಾಗತ ಮಾಡಿಕೊಂಡರು.

ಇಷ್ಟರಲ್ಲಿ ಪೂರ್ವ ಭೂಭಾಗದಲ್ಲಿ ಸ್ಪ್ರಿಂ[illegible]ರಿಗೂ ತುರ್ಕರಿಗೂ ಸಂಧಾನದ ಸಂಭಾಷಣ[illegible]ಳಾಗಿ, ಇನ್ನು ಈ ವಾರದೊಳಗೆ ಮೈತ್ರಿಯು [illegible]ರಾರಿಗೆ ಸಹಿಯಾಗುವುದೆಂದೂ [illegible]ಗಿದೆ.

[illegible] ಅದೇ ರೀತಿ ಫ್ರೆಂಕ್ಕರೂ ಅಲಿನ ಜರ್ಮನ[illegible] ಜೊಡನೆ ಮೈತ್ರಿ ಸಂಪಾದನೆಗಾಗಿ ಸಂಭಾಷಿಸು[illegible] ದ್ವಾರೆ. ಇವರೂ ತಮ್ಮೊಳಗೆ [illegible] ಮಾಡಿ[illegible]ಳ್ಳುವರು.

ಸ್ಪೈಯಿನಿನ ದಂಗೆಖೋರರ [illegible] ದರ[illegible]ಲಿ, ~~ಸರಕಾರವು ಬಲವಾಗಿದ್ದು~~ [illegible] ಂಡಿದೆ.

ಸ್ಪೈಯಿನಿನಲ್ಲೊಂದು ದಿನ

ಶ್ರೀ ನೆಹರುವರು—"ಸ್ಪೆನಿಶ ಜನಾಂಗದ ಧೀರತನಕ್ಕೆ ಯಾರೂ ಕೊಂಡಾಡುವ ಹಾಗಿದೆ. ಎರಡು ಪ್ರಬಲ ವಿಲಾಯತಿ ಸರಕಾರಗಳ ಮುಖ್ಯ ಸೇನಾ ಮಂಡಳಗಳನ್ನು ಈ ಸರಕಾರವು ಎದುರಿಸಿರುವುದು ಅತ್ಯಾಶ್ಚರ್ಯವಾಗಿದೆ" ಎಂದರು.

ವಿಮಾನ ಹಾವಳಿಯಾಗಿಸುವ ಸರಕಾರದ ಸರಂಜಾಮು ಕಂಡು ಇವರು ಚಕಿತರಾಗಿದ್ದಾರೆ. ಮುಖ್ಯ ಮಂತ್ರಿಯವರು ಮೇಡ್ರಿಡನಲ್ಲಿರುವ ಕಾರಣ, ಅವರನ್ನು ಮಾತ್ರ ಭೇಟಿ ಮಾಡಲಾರದಾದರು.

ಶ್ರೀ ವಿ. ಕೆ. ಕೃಷ್ಣಮೆನೊನರು ಇವರ ವಿಲಾಯತಿ ಪ್ರವಾಸವನ್ನು ಅಣಿಮಾಡಿದರು. ನೆಹರುರವರು ಸ್ಪೈಯಿನ ಗಡಿನಾಡಿಗೆ ಬಂದು, ಅಲ್ಲಿಂದ ಪಾರಿಸಿಗೆ ತೆರಳಿದರು. ಲಂಡನಿಗೆ ಹೊರಡುವರೆ ಎರಡು ದಿನ ತಡವಾದ ಅಲ್ಲಿ ಸೇರಿ ತಮ್ಮ [illegible] ಕಾಣುವರು.

ನೆಹರುರವರ ಆರೋಗ್ಯ ಚೆನ್ನಾಗಿದೆ. [illegible] ವಿಮಾನಗಳು ಬಾಂಬು ಸುರಿಸು[illegible] ಇವರು ಬಾರ್ಸೆಲೋನದಲ್ಲೇ ಇದ್ದರು. ಅದರಿಂದಾದ ಹಾವಳಿಯನ್ನು ಇವರೂ ನೋಡಿರುವರು. ಸಿಡಿದ [illegible] ಗಳನ್ನೂ ಇವರು ಸಂದರ್ಶಿಸಿ[illegible] ಒನೆ ಸಲ ವಿಮಾನಗಳ [illegible] 15 [illegible] ಪಕ್ಷರ [illegible] ಎರಡನೆ ಸಲ [illegible] ವಾಗಿದೆ [illegible] ದಲ್ಲೇ ವಿಧ್ವಂಸ [illegible]

ಸರಕಾರೀ ನೌಕರರಿಗೆ ಪಿಂಚಣಿ

ಬರ್ಮಾ ಸರಕಾರದ ಇತ್ಯರ್ಥ

[illegible] ಗಳನ್ನು ಜನು[illegible] ಸರಕಾರಿ [illegible] ದರಿಯ [illegible] ಇನ್ನೆರ [illegible] ರದ, ಬ್ರಿಟಿಷ್ [illegible] ವಾದಿಯನ್ನು ಉಪಯೆ [illegible] ಸರಕಾರದ ಅಪ್ಪಣೆ [illegible] ಸರಕಾರದವರು [illegible] ಯನ್ನು [illegible] ಸ್ವಾ[illegible] ತಿಳಿಸ ಬಲುತ್ತಿದೆ.

ಬರ್ಮಾದಲಿ [illegible] ಎಂದು [illegible] ಬಂದರೆ ತೈದೆ.

ಚೀನದಲ್ಲೊಂದು ವಾರ

ಚೀನರಿಗೆ ಬೆಂಬಲವಾಗಿ ಪ್ರಲಯ - ಪ್ರಕೃತಿಯ ಶಕ್ತಿಯಿಂದ

ಜಪಾನಿನ ಸೋಲು

ಹೋನಾನ್ ಪ್ರಾಂತ್ಯದ ಕೈಫೆಂಗದಿಂದ 80 ಮೈಲು ದೂರಕ್ಕೆ ಹಳದೀ ನದಿಯ ನೆರೆಯ ನೀರು ಪ್ರವಹಿಸಿಯದೆ. ಈ ನದಿಯ ಇಕ್ಕಡೆಗಳಲ್ಲೂ ಕಟ್ಟಿದ ಅಡ್ಡಗೋಡೆಗಳಲ್ಲಿ ಚೀನಿಯರು ಹಿಂದೆ, ಜಪಾನಿಯರು ಅತ್ತ ಬಂದಲ್ಲಿ ಮೋಸಹೋಗುವಂತೆ, ನಾನಾ ಬಗೆಯ ಬಿರುಕುಗಳನ್ನು ಮಾಡಿಟ್ಟಿದ್ದರು. ಅವನ್ನು ಹಾದು ನೀರು ನೂರು ಮೈಲು ದೂರಕ್ಕೂ ಹರಿದು ಬಂದಿದೆ.

ಜಪಾನಿನ ಸೈನ್ಯಾಧ್ಯಕ್ಷರು ಇನ್ನು ಈ ಭಾಗದಲ್ಲಿ ಯುದ್ಧ ಮುಗಿಸಲೇಬೇಕಾಗಿದೆ ಎಂದು ಸೈನ್ಯಗಳಿಗೆ ಹಿಂದೋಡಲು ಅಪ್ಪಣೆಯಿತ್ತು ಗುಳ್ಳೆಕೆಗೆದರು. ಏಕೆಂದರೆ, ಅಲ್ಲಿ ಒಂದು ಸಾವಿರ ಚದರಮೈಲು ವಿಸ್ತೀರ್ಣಕ್ಕೆ ನೀರೆಲ್ಲ ಹರಡಿ, 2000 ಗ್ರಾಮಗಳಲ್ಲಿ ಕುಂಬಿಮುಳಗಿಸಿ, 7,00,000 ಜನಗೆ ನೆಲೆಯಿಲ್ಲದಂತೆ ಮಾಡಿ, ಒಂದು ಲಕ್ಷ ಜನರನ್ನಾದರೂ ನುಂಗಿದೆ. ವಿಮಾನಗಳಲ್ಲಿ [illegible] ನೋಡಿದರೆ, ಅಲ್ಲಲ್ಲಿ [illegible] ಗಳನ್ನೂ [illegible] ಜನರು ಜೀವನ [illegible] ವುದನ್ನು ತಿಳಿಯಬಹುದು!

[illegible] ಸರ್ [illegible] ವರದಿ [illegible] ಕಿಂತ ಇಂಥ ಪ್ರಲಯಗಳು [illegible] ಗಳಿಗೆ [illegible] ವುದಕ್ಕೆ ಎಷ್ಟೋ [illegible] ಪುವ ಚಿನ್ಹೆಗಳಿವೆ [illegible]

[illegible] ಪರದೇಶೀ [illegible] ನ್ನು [illegible] ಕರ [illegible] ನದೀ ಮೊದಲಾದ [illegible] ಭಯವಿಲ್ಲವೆ [illegible] ಚುಕ [illegible] ವಿ ಗಡ್ಡೆಗಳನ್ನು [illegible] ದಗಳ ಮೇಲೆ [illegible] ಜತ್ತ [illegible] ಇಳಿ [illegible] ಉಪಾಯ [illegible] ಈಗ ಶಕ್ತಿಶಾಲಿ [illegible] ಇವರ ಪಟ್ಟಣಗಳ ಮೇಲೆ ಚೀನಿಯರು ಗುಂಡುಮಳೆಗೆರೆದು ಧ್ವಂಸಗೊಳಿಸುತ್ತಾರೆ.

ಚೀನದಲ್ಲೊಂದು ದಿನ

ಸುಮ್ಮನೆ ಈ ಯುದ್ಧವೇಕೆ? ಇದರ ದುಷ್ಪರಿಣಾಮಗಳನ್ನು ನಿವಾರಿಸಲು ಇನ್ನು ಒಂದು ಶತಮಾನವಾದರೂ ಬೇಕಾದೀತು. ಈಗ ನಮ್ಮ ಹೇಳಿಕೆಗೆ ಒಪ್ಪಿ ರಾಜಿಗೆ ಬನ್ನಿರಿ—ಎಂದು ಜಪಾನೀಯರು ಹಂಕೋವಿನಿಂದ ಚೀನಿಯರಿಗೆ ವಾರ್ತೆ ಕಳುಹಿಸಿರುವುದರಿಂದ ಜಪಾನೂ ಯುದ್ಧದ ತಾಪತ್ರಯಗಳನ್ನು ಅನುಭವಿಸಿದ್ದು ಸಾಕೆನ್ನುವ ಹಾಗೆ ಸೂಚಿಸಿರುವಂತಾಗಿದೆ ಎಂದು ಯುದ್ಧರಂಗದ ವಾರ್ತೆ.

ಯುದ್ಧಕಾಲದಲ್ಲಿ ವ್ಯಾಪಾರವನ್ನೂ ತಮಗೆ ಬೇಕಾಗಿರುವ ಸರಕನ್ನೂ ಪರ್ಯಾಲೋಚಿಸಿ, ಹತ್ತಿಗಿರಣಿಗಳ ಉತ್ಪನ್ನ ಮತ್ತು ವ್ಯಾಪಾರಗಳ ಮೇಲಿದ್ದ ಆತಂಕಗಳನ್ನು ಸರಕಾರವು ಈಗ ಹಿಂದೆಗೆದಿದೆ. ಹೆಚ್ಚಿನ ಹತ್ತಿ ಒಳಗೆ ಬಾರದಂತೆಯೂ, ಆಗುವಷ್ಟು ಸರಕು ರಫ್ತಾಗುವಂತೆಯೂ ಪ್ರಯತ್ನಗಳಾಗುತ್ತವೆ.

ಯುದ್ಧಚೀನದಲ್ಲಿರುವ ಜಪಾನ ಸೈನ್ಯಾಧ್ಯಕ್ಷರು—[illegible] ನಮ್ಮ ಮೊದಲೇ ಸಿದ್ಧಾರವಂದ [illegible] ಸರಿಯಾಗಿ [illegible] ಳ್ಳದೆ [illegible] ಎಂದು [illegible] ತಿಳಿಸಿರುವರು [illegible] 216ನೆ ಇಸ್ಪಿಯಿಂದ [illegible] ಇನ್ನು ಅಂದ [illegible] ಎಂದೇ [illegible]

ಒಂದೇ ವರದಲ್ಲಿ ಹಿಂದುಸ್ಥಾನಿ

ಬಿಹಾರಿಯೂ ನಿಂದ [illegible]

ಲಾದ ನೂತನ ಕ್ರಮ

ಬೂರಿಜನ ವರ್ಗವನ್ನು ಶಿಕ್ಷಿತ

ಗೊಳಿಸುವ ಯೋಜನೆ

[illegible] ಯನ್ನು [illegible] ಮಂತ್ರಿ [illegible]

[illegible] ಈ ಜ [illegible] ವ ಶ್ರೀ ರಾಜೇಂದ್ರ [illegible] ಲಕ್ಷ ಧಾಪಿಸಿ [illegible] ಚಿರುವರು [illegible] ಪುಸ್ತಕ [illegible]

ಅನೇಕ ಹೊಸ ಕೇಂದ್ರಗಳು

[illegible] ವಲವು [illegible] ನಡೆಯುತ್ತಿದೆ. ಈ [illegible] ಕಡೆ ವಲ್ಲಿ ಒಂದು [illegible] ನ್ನು ಸ್ಥಾಪಿಸವದೆ [illegible] ಕಾಂಗ್ರೆಸ್‌ವಾಲರೂ, [illegible] ದಲ್ಲಿ ಶ್ರಮವಹಿ[illegible] ಈ ಬಗ್ಗೆ ಅಲ್ಲಿ [illegible]

~~ಸಿನಿಮಾ ನಟಿಯದ ಮೇಲೆ ಸ್ಟಾಲಿನ~~

ನನ ವಕ್ರದೃಷ್ಟಿ

38 ಜನರನ್ನು ಸೆರೆಹಿಡಿಯಲಾಗಿದೆ—

"ಮಿಸ್ ಸೋವಿಯಟ್ ರಷ್ಯ" ಎಂಬ ಬಿರುದನ್ನು ಪಡೆದ ಪ್ರಭಾತ ಸಿನಿಮಾ ನಟಿಯು ಇತರ 37 ಸಿನಿಮಾ ನಟಿಯರೊಡನೆ, ಸ್ಟೆಲೀನಿಗೆ ವಿರೋಧವಾಗಿ ಪ್ರಚಾರವನ್ನು ನಡೆಯಿಸದರಾದ ಚಲಚಿತ್ರಗಳನ್ನು ಹೊರಡಿಸಿದುದರ ತಪ್ಪಿಗೆ ಸೆರೆಹಿಡಿಯಲ್ಪಟ್ಟಿರುವರು. ಅವರ ಕುರಿತು ವಿಚಾರಣೆಯು ನಡೆಯುತ್ತಿದೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ

ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

GONO KILLER

ಇಂದಿನ ಅಪ್ರತಿಮ ಔಷಧ, ಇಂಗ್ಲೀಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೂಡಲೆ ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಿಳುಪು ಎಲ್ಲ ಪ್ರಕಾರದ ಪ್ರಮೇಹ(ಎಪ್ಪೆಲೆ) ಯಾ ಯಾವುದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮಾತ್ರ ಹೋಗದಿರುವಿಕೆ ಇವು ಸ್ವಾಭಾವಿಕರುವುದು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕ್ಕಸ್‌ದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವ್ಹಿ. ಪಿ. ಖರ್ಚು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: Dr. D. N. JASANI, Vithalbhai Patel Road, BOMBAY

...ರದಲ್ಲಿ ಸ್ತ್ರೀಯರು ಪೋಲೀಸರಾದರು

...ಕೆಲವು ದಿನಗಳಿಂದ ಇಷ್ಟರ ವರೆಗೆ ...ದೇಶದಲ್ಲೆಲ್ಲಿಯೂ ನಡೆಯದಂಥ ಗಿರಣಿ ...ಗಾರರ ದೊಡ್ಡ ಮುಷ್ಕರವು ಕಾನಪುರದಲ್ಲಿ ...ಬಂದಿರುವದಷ್ಟೆ. ಮುಷ್ಕರ ಹೂಡಿದ ...ಗಾರರ ಗಿರಣಿಗಳ ಹೆಬ್ಬಾಗಿಲುಗಳ ...ಮುಂದೆ ಪಿಕೆಟಿಂಗನ್ನು ನಡೆಸುತ್ತಿದ್ದಾರೆ. ಸಾವಿ ...ರಷ್ಟು ಮಂದಿ ಸ್ತ್ರೀಪುರುಷರು ಈ ಮುಷ್ಕರದಲ್ಲಿ ...ರುವವರಾದ್ದರಿಂದ ಅವರು ಹಿಂಸಾಪರ ...ಸೋವೃತ್ತಿಯುವರಾಗದಂತೆ ಬಂದೋಬಸ್ತಿ ...ಡುವದು ಪೋಲೀಸರಿಗೆ ದೊಡ್ಡ ಕೆಲಸ ...ವಾಗಿದೆ. ಪುರುಷ ಪೋಲೀಸರು ಸ್ತ್ರೀಯರನ್ನು ...ಬಂದೋಬಸ್ತಿನಲ್ಲಿಡುವದು ಕಷ್ಟದ ಕೆಲಸ. ...ವರು ಸ್ತ್ರೀಯರ ಮೈ ಮುಟ್ಟುವದೂ ಅವ ...ಕೀರ್ತಿಗೆ ಕಾರಣವಾಗಿದೆ. ಆದಕಾರಣ ಊರ ...ಸ್ಥಿತಿಯನ್ನು ಕಾಪಾಡುವದಕ್ಕೋಸ್ಕರ ಕಾನ ...ಪುರದ ಪೋಲೀಸ ಸುಪರಿಂಟೆಂಡೆಂಟರು ಇದೇ ...ಮೊದಲನೆಯದಾಗಿ ಅಲ್ಲದೆ 16 ಮಂದಿ ಸ್ತ್ರೀಯ ...ರನ್ನು ಪೋಲೀಸರನ್ನಾಗಿ ನೇಮಿಸಿ, ಸ್ತ್ರೀಯರು ...ಗಿರಣಿಗಳ ಪಿಕೆಟಿಂಗ ಮಾಡುವಲ್ಲಿಗೆ ಕಳುಹಿಸಿ ...ಕೊಟ್ಟಿದ್ದಾರೆ. ಹಿಂದೂ ಸ್ತ್ರೀ ಪೋಲೀಸಳು ...ನ್ನ ಜಾತಿಯ ಬೇರೆ ಸ್ತ್ರೀಯೊಡನೆ ವ್ಯವಹಾರ ...ಸಂಪರ್ಕವನ್ನಿಟ್ಟುಕೊಳ್ಳುವದು ಎಷ್ಟು ಸುಲ ...ಭವೂ ಸುಗಮವೂ ಆಗಿದೆಯೋ ಅಷ್ಟು ...ಲಭ್ಯವಾಗಿ ಅನ್ಯ ಜಾತಿಯ ಸ್ತ್ರೀಯರೊಡನೆ ಇರು ...ವದು ಸುಲಭವಾಗಿರುವುದಿಲ್ಲ. ಹಾಗೆಯೇ ಮುಸಲ್ಮಾನ ಸ್ತ್ರೀಯು ಹಿಂದೂ ಕ್ರೈಸ್ತ ಸ್ತ್ರೀ ...ಯರ ಮೇಲಾಗಲೀ, ಕ್ರೈಸ್ತಳು ಹಿಂದೂ— ಮುಸಲ್ಮಾನರ ಮೇಲಾಗಲೀ ಒಂದೇ ರೀತಿ ...ಯಿಂದ ಬಂದೋಬಸ್ತು ಇಡಲಾರಳು. ಆದ ...ಕಾರಣ ಸುಪರಿಂಟೆಂಡೆಂಟರು ಬೇರೆ ಬೇರೆ ಜಾತಿಗಳಿಗೆ ಸೇರಿದ ಹಿಂದುಗಳು 7, ಕ್ರೈಸ್ತರು ..., ಮತ್ತು ಮುಸಲ್ಮಾನರು 3 ಸ್ತ್ರೀಯರನ್ನು ...ಈ ಕೆಲಸಕ್ಕೆ ನೇಮಿಸಿರುವರು. ಇದು ಯುಕ್ತಿ ...ಯುಕ್ತವಾಗಿರುವದೆಂಬುದು ಯಾವ ವಿಚಾ... ...ವಂತರೂ ತಿಳಿದು ಬಂದೀತು.

ಪರಂತು ಜಾತೀಯತೆಯ ಭೂತವು ಮೈ ...ಮೇಲೆ ಬಂದ ಕೆಲವರು ಈ ನೇಮಕಗಳಲ್ಲಿ ಸುಪರಿಂಟೆಂಡೆಂಟರ ಹಿಂದೂಪಕ್ಷಪಾತಿಗಳಾ ...ದ್ದಾರೆಂದು ಬೊಬ್ಬಿಟ್ಟು ಅಪಪ್ರಚಾರ ನಡೆ... ...ರುವದು ದೇಶದ ದೌರ್ಭಾಗ್ಯವಾಗಿದೆ. ಜನ ...ಸಂಖ್ಯೆಯ ಮಾನದಿಂದ ನೋಡುವದಾದರೆ ...ಕಾನಪುರ ಜನಸಂಖ್ಯೆಯು ಪ್ರತಿ 7 ಜನ ಹಿಂದು ...ಗಳಿಗೆ 6 ಕ್ರೈಸ್ತರು ಮತ್ತು 3 ಮುಸಲ್ಮಾನರ ...ಪ್ರಮಾಣದಲ್ಲಿ ಇರುವುದಿಲ್ಲ. ಜಾತಿಯ ...ದೃಷ್ಟಿಯಿಂದ ನೇಮಕಗಳಾಗಿದ್ದಲ್ಲಿ, ದೇಶದ ...ಮಹಿಳಾ ಸಂಘಗಳ ಅದನ್ನು ವಿರೋಧಿಸ ...ತ್ತಿದ್ದವು. ಯಾಕೆಂದರೆ ನಮ್ಮ ದೇಶದ ಸ್ತ್ರೀಯ ...ರು ಪುರುಷರಂತೆ ಜಾತಿಯ ದುರಭಿಮಾನಿಗಳಾಗಿ ...ರುವದಿಲ್ಲ. ಅವರು, ಸರಕಾರಿ ಇಲಾಖೆ ...ಗಳಲ್ಲಿ ನೌಕರರನ್ನು ಜಾತಿವಾರಾಗಿ ನೇಮಿಸ ...ವದಕ್ಕೆ ಬದ್ಧ ವಿರೋಧವಾಗಿದ್ದಾರೆ. ಪೋಲೀಸ ...ರವರೆಯೊಳಗೂ ಜಾತಿಯತೆಯ ಭೂತದ ಪ್ರವೇ ...ಶವಾಗಿದ್ದರೂ, ತಮ್ಮ ಸಹೋದರಿಯರ ಪೋ ...ಲೀಸರಾಗದಂತೆ ಭಾರತೀಯ ... ...ವರನ್ನು ತಡೆಯುತ್ತಿದ್ದರು. ಅಂಥ ಸಂಗತಿ ...ಯೇನೂ ಕಾನಪುರದಲ್ಲಿ ನಡೆದಂತೆ ತೋರ ...ದಿಲ್ಲ. ಆದ್ದರಿಂದ ಯೋಗ್ಯತೆ, ಸಾಮರ್ಥ್ಯ ...ಮತ್ತು ಕಾರ್ಯ ನಿರ್ವಾಹದ ಅನುಕೂಲತೆ ...ಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಸುಪರಿಂಟೆಂ ...ಡೆಂಟರು ಈ 16 ಮಂದಿಯನ್ನು ಪೋಲೀಸರ ...ನ್ನಾಗಿ ಮಾಡಿರುವರೆಂದು ನಿಸ್ಸಂಕೋಚವಾಗಿ ...ಹೇಳಬಹುದು.

ಭಾರತದ ಆಧುನಿಕ ಇತಿಹಾಸದಲ್ಲಿ ಸ್ತ್ರೀ ...ಯರು ಪೋಲೀಸರಾಗಿ ಕೆಲಸಕ್ಕೆ ಸೇರಿದ್ದು ...ಇದು ಮೊದಲನೆಯ ಬಾರಿ ಆಗಿದೆ. ಆದ್ದ ...ರಿಂದ ಈ ಘಟನೆಯು ಸ್ವರ್ಣಾಕ್ಷರಗಳಲ್ಲಿ ಬರೆ ...ಯಲಿಕ್ಕೆ ಯೋಗ್ಯವಾಗಿದೆ. ದೇಶದ ದೃಷ್ಟಿಯು ...ಕಾನಪುರದ ಆ ಸ್ತ್ರೀ ಪೋಲೀಸರ ಕಡೆಗೆ ...ಆಕರ್ಷಿತವಾಗಿದೆ. ಅವರು ತಮಗೊಪ್ಪಿಸಿದ ...ಕಾರ್ಯವನ್ನು ಯಥಾವತ್ತಾಗಿ ಮಾಡಿ, ಸ್ತ್ರೀ ...ಮುಷ್ಕರಗಾರರೊಳಗೆ ಶಾಂತಿಯನ್ನು ಕಾಪಾ ...ಡಲು ಸಮರ್ಥರಾದರೆ, ದೇಶದ ಗೌರವವು ...ನೂರಾರು ಪಾಲು ಹೆಚ್ಚುವದು.

ಜೊಹೋರಿನ ವೃದ್ಧ ಸುಲ್ತಾನರು

ಜೊಹೋರಿನ ನವಕೋಟಿ ಕುಬೇರ ಸುಲ್ತಾನರು ಏಳು ವಾರಗಳ ಹಿಂದೆ ತಮ್ಮ ಸ್ಕಾಟ್ಲೆಂಡಿನಿಂದ ವರಿಸಿ ತಂದ ಪತ್ನಿಯನ್ನು 'ತಲಾಕ್' ಎಂಬ ಮೂರಕ್ಷರಗಳ ಶಬ್ದವನ್ನು ಉಚ್ಚರಿಸಿ ದಾಂಪತ್ಯ ವಿಚ್ಛೇದನ ಮಾಡಿಕೊಂಡು, ವಿಮಾನದಲ್ಲಿ ಸವಾರಿಮಾಡಿ ಸಿಂಗಾಪುರಕ್ಕೆ ಬಂದಿಳಿದರು.

ಆಗ ಅವರ ಜತೆಯಲ್ಲಿ ಹರ್ನ್ F ಬೇ ಯಲ್ಲಿ ಒಂದು ಹೊಟೆಲಿನಲ್ಲಿ ಪ್ರಂಥ್ಯಾವಿನೋದಿನಿಯಾಗಿ, ನರ್ತನಮಾಡುತ್ತಿದ್ದ 24 ವರ್ಷ ವಯಸ್ಸಿನ ಮಿಸ್ ಲಿಡಿಯಾ ಸಿಸಿಲಿಬಾಯಿಯು ಹಾಜರಾಗಿದ್ದಳು.

ಹದಿನೈದು ತಿಂಗಳ ಹಿಂದೆ ಸಿಸಿಲಿ ಬಾಯಿಯ ಮನೆಯಲ್ಲಿ 5000 ಪವನು ಬೆಲೆಯ ಆಭರಣಾದಿಗಳು ಕಳವಾಗಿದ್ದುವು. ಅವುಗಳ ಪಟ್ಟಿಯನ್ನು ಪೋಲಿಸರಿಗೆ ಒಪ್ಪಿಸಿದಾಗ, ಎರಡು ಆಭರಣಗಳ ವರ್ಣನೆಯನ್ನು ಕೊಡುತ್ತಾ ಅವು ಗಳಲ್ಲಿ "ನನ್ನ ಸಂಪೂರ್ಣ ಪ್ರೇಮಾನುರಾಗ ಗಳಿಂದ, ಸು. ಇ. (S. I)" ಎಂಬಕ್ಷರಗಳು ಕೆತ್ತಿದ್ದವುವೆಂದೂ ತಿಳಿಸಲಾಗಿತ್ತು. ಈ ಅಕ್ಷರ ಗಳ ಬಳಿ ಒಂದು ಕಿರೀಟದ ಚಿತ್ರವು ಕೆತ್ತಿದ್ದಿತು.

ಸುಲ್ತಾನರಿಗೆ ಸದ್ಯದಲ್ಲೇ ವಿವಾಹವಾಗು ವಂತಿಲ್ಲ. ಸಿಂಗಾಪುರದಲ್ಲಿ ಬ್ರಿಟಿಷ ಅಧಿಕಾರಿ ಗಳು ಈ ಪ್ರಯಾಣಕ್ಕೆ ತೊಡಕನ್ನುಂಟುಮಾಡಿ ರುವರು. ಸರಕಾರದ ಗಜೆಟಿನಲ್ಲಿ ಸುಲ್ತಾ ನರು ತಮ್ಮ ರಾಜ್ಯಕ್ಕೆ ಮರಳಿದ ಪ್ರಕಟನೆಯಿಲ್ಲ.

ಸುಲ್ತಾನರೂ ಶ್ರೀಮತಿಯೂ ಬಹಿರಂಗ ವಾಗಿ ಕಾಣಿಸಿಕೊಂಡಿಲ್ಲ. ಸಿಂಗಾಪುರದ ಒಂದು ಪ್ರಮುಖ ಬೀದಿಯಲ್ಲಿ ಇಬ್ಬರೂ ... ಬಂದು ... ಜಿನಸುಗಳನ್ನು ಕೊಂಡುಕೊಳ್ಳ ... ... ಬೀದಿಯಲ್ಲಿ ನೇರ, ತನ್ನ ... ... ಸುಲ್ತಾನರು ಸವಾರಿಮಾಡಲಿಲ್ಲ.

ಶ್ರೀಮತಿಯ ವಿವಾಹವಾಗಿಕೊಳ್ಳ... ... ಹೇಳಬ ... ... ಅವಳಿಗೆ ಒಗ್ಗದ" ಎಂದೇ ಇದನ್ನು ... ಹೇಳಿಯೊಬ್ಬಳು (ಶ್ರೀಮತಿಯ ಗೆಳತಿ) ತಿಳಿಸಿದ್ದಾಳೆ.

ಸುಲ್ತಾನರ ವಯಸ್ಸು ಈಗ ಸುಮಾರು 65ಕ್ಕೆ ಸಮೀಪಿಸಿದೆ. ಶ್ರೀಮತಿ ಒಪ್ಪದೇ ... ಸುಲ್ತಾನ ... ಸರಕಾರದ ಅಪ್ಪಣೆಯನ್ನು ಮನ್ನಿಸದೆ ಈಕೆಯನ್ನು ವಿವಾಹವಾಗದಿರರು. ಏಕೆಂದರೆ—"ಗ್ರೀನಿನಲ್ಲಿ ತನ್ನ ... 'ತಲಾಕ್' ಮಾಡುತ್ತಾ ... ಸರಕಾರದ ಗೊಡವೆ ನನಗೇಕೆ? ನನಗೆ ಬೇಕಾದವಳನ್ನು ವರಿಸಲು ನಾನು ಸ್ವತಂತ್ರನೇ ಸರಿ" ಎಂದು ಸಾರಿದ್ದರು. ಈಗಣ ಶ್ರೀಮತಿಯ ತಂದೆ,— ಲೆಫ್ಟಿನೆಂಟ್ ಹಿಲ್‌ರವರು "ನನ್ನ ಮಗಳು ಸುಲ್ತಾನರಿಗೆ ಒಲಿದುದ ನನಗಿಷ್ಟವಿಲ್ಲ. ಆದರೂ ಅವಳು ತಾನಾಗಿ ಒಪ್ಪಿ ಬರೆಯುವ ವರೆಗೆ ಅವಳ ಈ ವಿವಾಹವನ್ನು ಕುರಿತು ನಾನೇನೂ ಹೇಳ ಲಾರೆನು" ಎಂದರು.

ತನ್ನ ಹಿಂದಣ ಪತ್ನಿಯ ವಿವಾಹದಿಂದ ಕಾನೂನು ಪ್ರಕಾರ ಬಿಡುಗಡೆ ಹೊಂದುವ ತನಕ, ಬ್ರಿಟಿಷ ಮತ್ತು ಇಸ್ಲಾಮಿನ ಕಾನೂನಿ ನಂತೆ ಅದು ನಿಶ್ಚಿತವಾಗದೆ, ಹೊಸ ಮದುವೆ ಯಾಗಲಾರದು.

ಲಂಡನಿನ ಡೈಲಿ ಹೆರಲ್ಡ್ ಪತ್ರಿಕೆಯು— 'ತಲಾಕ್' ನಾಲ್ಕು ಸಲ ಹೇಳಿದರೂ, ಬ್ರಿಟಿಷ ಕಾನೂನು ಅದನ್ನು ಅಂಗೀಕರಿಸದು. ಮಾಜಿ ಸುಲ್ತಾನಾಳು ಯಾವ ಕಾನೂನಿನಂತೆ ವ್ಯವಹರಿ ಸುವಳೋ ಅದನ್ನು ಅನುಸರಿಸಿಯೇ ತೀರ್ಮಾ ನವಾಠವೀತು. ಇಂಗ್ಲಿಷ ಕಾನೂನೇ ಅಕೆಗೆ ಮುಖ್ಯ ಎಂದು ತಿಳಿಸಿಯದೆ.

65ಕ್ಕೆ 24ನ್ನು ಕೂಡಿಸಲು ಎಷ್ಟು ಕಾಲ ಕಳೆವುದೋ! ಎಂದು ಸುಲ್ತಾನರು ನಿರೀಕ್ಷಿಸಿ ದ್ದಾರೆ. ಹಾಗೆಯೆ ಸಿಂಗಾಪುರದ ಪ್ರಜೆಗಳೂ!

ನಿಮ್ಮ ಮಕ್ಕಳ ದುರವಸ್ಥೆಗೆ ಕಾರಣವೇನು?

ನಿಮ್ಮ ಸಣ್ಣ ಮಕ್ಕಳ ಹೊಟ್ಟೆಯೊಳಗೆ ತುಂಬಿರುವ ವಿಷಭರಿತ ಪದಾರ್ಥಗಳೇ ಅವರ ಅನಾರೋಗ್ಯಕ್ಕೆ ಕಾರಣವಾಗಿದೆ. ಅವುಗಳಿಗೆ ಒಂದು ಗ್ಲಾಸು ಇನೋಸ್ 'ಫ್ರುಟ್ ಸೋಲ್ಟ್' Eno's Fruit Salt ಕುಡಿಯಕೊಡಿರಿ ಕೂಡಲೇ ಅದರ ಫಲಿತಾಂಶವು ನಿಮಗೆ ಕಂಡುಬರುವುದು. 'ಇನೊ' ಇದು ಹೊಟ್ಟೆಯೊಳಗಿರುವ ಜೀರ್ಣಾಂಗಗಳಲ್ಲಿನ ವಿಷಪದಾರ್ಥಗಳನ್ನು ಹೊರಗೆಡವಿ ನಿರ್ಮಲಗೊಳಿಸುತ್ತದೆ. ನಿಮ್ಮ ಮನೆಗಳಲ್ಲಿ ಯಾವಾಗಲೂ ಒಂದು ಬಾಟ್ಲಿ ಇನೊಸ್ 'ಫ್ರುಟ್ ಸೋಲ್ಟ್' Eno's Fruit Salt ಇಟ್ಟುಕೊಳ್ಳಿರಿ.

ಜಗತ್ತಿನ ಎಲ್ಲಾ ಡಾಕ್ಟರರು ಅದನ್ನು ಶಿಫಾರಸುಮಾಡಿರುತ್ತಾರೆ. ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ಇದನ್ನು ಪರಿಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ಪದಾರ್ಥಗಳಿಂದ ತಯಾರಿಸಲ್ಪಟ್ಟಿದೆ. ಎಲ್ಲಾ ಕಡೆಗಳಲ್ಲಿಯೂ ಮೂರು ಸೈಜಿನ ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ.

"... ... ... ಇನೊಸ ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ ... ..."

E/K



MIRA TOILET ARTICLES

MIRA PRODUCTS ... ...
... ...
... ...
H H The Maharajah of Sonepur

The Hon ble Mr B K Basu, C I E
MIRA ... ... inferior to similar ... products

Sole Agents
The Modern Trading Company,
Opp ... MANGALORE
Wanted a Canvasser ... Book ... for Mira Products on ... or commission

ನಿಪ್ಪು ಕೂಡ

... ...
... ...
... ...
ಪಂಡಿತ ಡಿ ಗೋಪಾಲಾಚಾರ್ಲುರವರ

ಬಾಲ ಭಾಸ್ಕರವನ್ನು

ಕೊಡಿರಿ.

ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ರೋಗಗಳನ್ನು ಎಷ್ಟೇ ... ... ನಾಶಮಾಡುವುದು ಮತ್ತು ಮುಂದೆ ಬರದಂತೆ ತಡೆಯುವುದು

ತಯಾರಿಸುವವರು
ಆಯುರ್ವೇದಾಶ್ರಮಂ, ಮದರಾಸ್
ಡಿಸ್ಟ್ರಿಬ್ಯೂಟರ್ಸ್,
ಅಮರಚಂದ್ ಸೋಬಾಚಂದ್, ಮದರಾಸ್.
ಮೈಸೂರು ದೇಶದ ಚೀಫ್ ಸ್ಟಾಕಿಸ್ಟರು.
ದಿ ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಸ್ಟಾಕಿಸ್ಟರು
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

★ ಮಂಗಳೂರು ವಾರ್ತೆ ★

ಜಿ. ಬೋರ್ಡು ಅಧ್ಯಕ್ಷರ ಚುನಾವಣೆ.

ನಮ್ಮ ಜಿಲ್ಲಾ ಹೊಸ ಬೋರ್ಡಿನ ಸಭೆಯು ತಾ 20ನೇ ಸೋಮವಾರ ಮಧ್ಯಾಹ್ನ ಗಂಟೆ 12ಕ್ಕೆ ಎಕ್ಸ ಒಫಿಸಿಯೋ ಪ್ರೆಸಿಡೆಂಟರಾದ ಶ್ರೀ ಎಂ. ವೆಲ್ಲೋಡಿಯವರ ಅಧ್ಯಕ್ಷತೆಯಲ್ಲಿ ಜರುಗಿತು ಈ ಸಭೆಯಲ್ಲಿ ನೆರೆದಿದ್ದ ಮೆಂಬರುಗಳೆಲ್ಲರ ರಾಜಭಕ್ತಿ ಪ್ರಮಾಣ ಪ್ರವಚನವಾದ ಮೇಲೆ ಜಿಲ್ಲಾ ಬೋರ್ಡು ಕೊಂಗ್ರೆಸ್ ಪಾರ್ಟಿಯ ಮುಖಂಡರಾದ ಶ್ರೀ ವೈಕುಂಠ ಬಾಳಿಗರು ಕೊಂಗ್ರೆಸು ಪಾರ್ಟಿಯ ವಿಷಯ ಕೆಲವು ಮಾತುಗಳನ್ನಾಡಿ ಅಧ್ಯಕ್ಷ ಸ್ಥಾನಕ್ಕೆ ಶ್ರೀ ವಿಠಲ ಶೆಟ್ರ ಹೆಸರನ್ನು ಸೂಚಿಸಿದರು ಇದನ್ನು ಶ್ರೀ ಖಾನ್ ಬಹದೂರ್ ಶಮ್ನಾಡರು ಅನುಮೋದಿಸಿ ಶ್ರೀ ಡಾಕ್ಟರ್ ವಿಠಲ ಶೆಟ್ರು ಪ್ರತಿ ಸ್ಪರ್ಧಿಗಳಿಲ್ಲದೇ ಬಹುಮತದಿಂದ ಆರಿಸಲ್ಪಟ್ಟರು ತದನಂತರ ಶ್ರೀ ಡಾ ವಿಠಲ ಶೆಟ್ಟರು ಅಧ್ಯಕ್ಷಸ್ಥಾನವನ್ನು ವಹಿಸಿ ಭಾಷಣಮಾಡುತ್ತಾ ಈ ತನ್ನ ಚುನಾವಣೆಯ ಸಂಬಂಧ ವಂದನೆಗಳನ್ನು ಅರ್ಪಿಸುವ ಮೊದಲು ಜಿಲ್ಲಾ ಕಲೆಕ್ಟರರ ಬೋರ್ಡಿನ ಆಡಳಿತವನ್ನು ಅಭಿನಂದಿಸಿ ತಾನೂ ಸಾಧ್ಯವಾದಷ್ಟು ಜನಸೇವೆಯನ್ನು ಮಾಡುವೆನೆಂದೂ ಮತ್ತು ತಾನು ಜನತೆಯ ಸೇವಕನೇ ಆಗಿದ್ದೇನೆ ಹೊರತು ಅನ್ಯಥಾ ಅಧಿಕಾರಿಯಲ್ಲವೆಂದು ತನ್ನ ಚಿಕ್ಕ ಭಾಷಣದಲ್ಲಿ ವಿವರಿಸಿ ಹೇಳಿದ .

ಕಲೆಕ್ಟರರು ಶ್ರೀ ಶೆಟ್ಟರಿಗೆ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ಪತ್ರಿಕಾ ಪ್ರತಿನಿಧಿಗಳ ಪರವಾಗಿ ಶ್ರೀ ಜೋರ್ಜ ಹರ್ಬರ್ಟರು ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ಅಧ್ಯಕ್ಷರು ಪಾರ್ಟಿಮೆಂಬರಾಗಿ ವರ್ತಿಸಬಾರದೆಂದು ಸೂಚಿಸಿ ಶ್ರೀ ಶೆಟ್ಟರ ಗುಣಕಥನವನ್ನು ಮಾಡಿದರು ಸಭೆಯು ನಂತರ 4 ಘಂಟೆಗೆ ಮುಂದಿಡಲಾಯಿತು

ಜಿ ಬೋ ಉಪಾಧ್ಯಕ್ಷರ ಚುನಾವಣೆ.

ಅದೇ ದಿನ ಅಪರಾಹ್ನ ಗಂ 4ಕ್ಕೆ [illegible] ಜಿಲ್ಲಾ ಬೋರ್ಡಿನ ಸಭೆಯು ಹೊಸ ಅಧ್ಯಕ್ಷರಾದ ಶ್ರೀ ಡಾ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ವೈಕುಂಠ ಬಾಳಿಗರಿಂದ ಸೂಚಿಸಲ್ಪಟ್ಟು, ಶ್ರೀ ಎಫ್ ಎನ್ ಹೆ[illegible]ರಿಂದ ಅನುಮೋದಿಸಲ್ಪಟ್ಟು ಉಡುಪಿ ಮುನಿಸಿಪಲ್ ಚೆಯರ್ಮೇನರಾದ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರು (ಕೊಂಗ್ರೆಸ್) ಉಪಾಧ್ಯಕ್ಷರ ಸ್ಥಾನಕ್ಕೆ ಆರಿಸಲ್ಪಟ್ಟರು

ನಗರ ಸಭೆ

ನಮ್ಮ ನಗರಸಭೆಯು ಕಳೆದ ಶುಕ್ರವಾರ ಸಂಜೆ ಘಂಟೆ 5ಕ್ಕೆ ಸ್ಥಳೀಕ ನಗರಸಭಾಭವನದಲ್ಲಿ ಶ್ರೀ ಬಿ ವಿ ಬಾಳಿಗ ಎಂ ಎಲ್ ಎ. ರವರ ಅಧ್ಯಕ್ಷತೆಯಲ್ಲಿ ಜರುಗಿತು ದಂಡನೆಗೆ ಗುರಿಯಾದ ಮುನ್ಸಿಪಲ್ ನೌಕರರ ಪಟ್ಟಿ ಈ ಕೌನ್ಸಿಲಿನ ಪರಿಶೀಲನೆಗಾಗಿ ಮುಂದೆ ಬರಿಸಲ್ಪಟ್ಟಿತು ವಾಸ್ ಲೇನ್ ರಸ್ತೆಗಳು ಕೂಡುವಲ್ಲಿ ಮೂಲೆಗಳನ್ನು ಸರಿಗೊಳಿಸಬೇಕೆಂದೂ ಶ್ರೀ ಶ್ರೀಪ್ಪರು ಸೂಚಿಸಿದರು ಇದಕ್ಕೆ ಪ್ರತಿಯಾಗಿ ಕೊಂಗ್ರೆಸ್ ಪಾರ್ಟಿಯ ಸದಸ್ಯರಾದ ಮಿ ಮೂಸಬ್ಬನವರು ಒಂದೊಂದೇ ಸಂಗತಿಯ ಕುರಿತು ಚರ್ಚೆ ಬೇಡ, ಹೀಗೆ ಎಷ್ಟು ಕಡೆ ನಗರದ ರಸ್ತೆಗಳ ಮೂಲೆಗಳು ಅಗಲವಾದಬೇಕೆನ್ನುವ ಕುರಿತು ಸಾಮುದಾಯಕ ಪ್ರಶ್ನೆಯಾಗಿ ವಿಚಾರಿಸೋಣ ಎಂದರು ಶ್ರೀ ಡಾ ಯು ಪಿ. ಮಲ್ಯರು ಇದನ್ನು ಅನುಮೋದಿಸಿದರು. ಆಗ ಶ್ರೀಪ್ಪರು ಈ ಪ್ರಶ್ನೆಯನ್ನು ಈಗಲೇ ಕೈಕೊಂಡರೆ ನಮಗೆ ಬೇಕಾದ ಸ್ಥಳಗಳು ಬರೇ ಕಮ್ಮಿ ಖರ್ಚಿನಲ್ಲಾಗುವುವೆಂದೂ ನಂತರ ಕಟ್ಟಡ ಮೊದಲಾದುವುಗಳನ್ನು ಕಟ್ಟಿಸಿದರೆ ಹೆಚ್ಚು ಖರ್ಚು ಬೀಳುವುದೆಂದು ಸೂಚಿಸಿ, ವಾರ್ಡು ಕೌನ್ಸಿಲರಾದ ಮಿ ಐಮನರನ್ನು ತನ್ನ ಸೂಚನೆಯನ್ನು ಸಮರ್ಥಿಸುವಂತೆ ಕೇಳಿಕೊಂಡರು. ಅವರು ಕೊಂಗ್ರೆಸ್ ಪಕ್ಷದ ಅಭಿಪ್ರಾಯಕ್ಕೆ ವಿರೋಧ ಹೇಳಲಿಲ್ಲ.

ಆಗ ಅಧ್ಯಕ್ಷರು ಕಾಂಗ್ರೆಸ್ ಪಕ್ಷದವರು ಈ ಪ್ರಶ್ನೆಯನ್ನು ಮೊದಲೇ ತಮ್ಮ ಸಭೆಯಲ್ಲಿ ನಿರ್ಧರಿಸಿದ್ದರಿಂದ ಮಿ ಶೀಪ್ಪರು ಮುಂದೆ ಠರಾವುಗಳನ್ನು ತರುವ ಮೊದಲು ಕಾಂಗ್ರೆಸ ಪಕ್ಷದವರು ಮಾಡಿರುವ ನಿರ್ಣಯಗಳನ್ನು ಬೇಕಾದರೆ ಮುಂದಾಗಿ ತಿಳಿದುಕೊಳ್ಳಬಹುದೆಂದು ಸೂಚಿಸಿದರು ಮಿ ಶೀಪ್ಪರು ತನ್ನ ಸೂಚನೆಯನ್ನು ಹಿಂದೆಗೆದರು

ಮಿ ಶ್ರೀಪ್ಪರು ಕಂಕನಾಡಿ ಜಂಕ್ಷನಿನ ಬಳಿ ಕಾನ್ ಸ್ಟೇಬಲರಿಗೆ ನಿಲ್ಲಲಿಕ್ಕೆ ಚಲಿಸದಾಗುವ ಒಂದು ಸ್ಟೆಂಡ್ ಮಾಡಬೇಕೆಂದು ಸೂಚಿಸಿದರು – ಡಾ ವಿಠಲ ಶೆಟ್ರು ನಗರದಲ್ಲಿ ಎಲ್ಲೆಲ್ಲಿ ಇಂಥಾ ಅವಶ್ಯಕತೆ ಇದೆಯೆಂದು ವಿಚಾರಿಸಿ ಮುಂದರಿಯಲು ಟೌನ್ ಪ್ಲನಿಂಗ ಕಮಿಟಿಗೆ ಬಿಟ್ಟು ಬಿಡುವುದುತ್ತಮವೆಂದರು – ಮಿ ಶ್ರೀಪ್ಪರು ತನ್ನ ಸೂಚನೆ ಅಗತ್ಯವಾದದ್ದೂ, ಇದರ ಅಭಾವದಿಂದ ಹಲವು ತೊಂದರೆಗಳು ಸಂಭವಿಸಿವೆಯೆಂದೂ [illegible] ಕೊಂಗ್ರೆಸ್ ಪಾರ್ಟಿಯವರ [illegible] ಯಾವ ನಿರ್ಣಯಗಳನ್ನು [illegible] ಠರಾವು ತರುವ [illegible] ಹೇಳಿದರು.

ಅಧ್ಯಕ್ಷರು ಕಾಂಗ್ರೆಸ ಪಕ್ಷದ [illegible] ಮಿ ಶೀಪ್ಪರ ಯಾವ [illegible] ಆಕ್ಷೇಪವಿಲ್ಲ [illegible] ಹಕ್ಕು [illegible] ಇದೆ [illegible] ಹೇಳಿದರು

[illegible] ಸ್ವಲ್ಪ ಚರ್ಚೆ ನಡೆದ ಬಳಿಕ [illegible] ಸಭೆಯು ಅಂತ್ಯವಾಯಿತು

ಬೆಂಗರೆಯಲ್ಲಿ ಮೊಗವೀರ ಯುವಕರ ಅಪೂರ್ವ ಸಾಹಸ

ಮಂಗಳೂರು [illegible] 20ನೇ ಸಾಯಂಕಾಲ 5 ಘಂಟೆಗೆ [illegible] ದೋಣಿಯಲ್ಲಿ [illegible] ಹೋಗ[illegible] ದೋಣಿಯು [illegible] ಭಯಂಕರ [illegible] ಪ್ರವಾಹವು ಅವರನ್ನು ದೋಣಿ ಸಮೇತ ಬಹುದೂರ [illegible] ಹೋಯಿತು

ನೂರಾರು ಜನರು ಕರೆಯಲ್ಲಿ ನಿಂತು ನೋಡುತಿದ್ದರೂ ಅವರನ್ನು ರಕ್ಷಿಸುವುದು ಅಸಾಧ್ಯವೆಂದು [illegible] ಇಷ್ಟರಲ್ಲಿ ಬೆಂಗರೆ ರಂಗಪ್ಪ ಸಾಲ್ಯಾನ್ ಸಂಜೀವ ಸಾಲ್ಯಾನ್ ಮತ್ತು ಫಕೀರ ಸಾಲ್ಯಾನ್ ಈ ಮೂವರ ನಾಯಕತ್ವದಲ್ಲಿ ಹತ್ತು ಜನ ಯುವಕರು ಒಟ್ಟಾಗಿ ಎರಡು ದೋಣಿಗಳನ್ನು ಭೀಕರವಾದ ತೆರೆಗಳ ನಡುವೆ ನಡಿಸಿ ಕೊಂಡು ಹೋಗಿ ಮರಣೋನ್ಮುಖರಾದ ಆ ಐವರನ್ನು ರಕ್ಷಿಸಿದುದು ಸಾಹಸದ ಕಾರ್ಯವಾಗಿದೆ

o o o o

ಮದ್ರಾಸಿನಲ್ಲಿರುವ ಗವರ್ನ್ಮೆಂಟ್ ಒಫ್ ಇಂಡಿಯಾ ಮೆಡಿಕಲ್ ಸ್ಕೂಲಿನಲ್ಲಿ ತಾ 26, 27ಕ್ಕೆ ಜರಗಲಿಕ್ಕಿರುವ 9ನೇ [illegible] ವೈದ್ಯಕೀಯ ಪರಿಷತ್ತಿಗೆ ಮಂಗಳೂರಿನ ಸುಪ್ರಸಿದ್ಧ ದೇಶೀಯ ಚಿಕಿತ್ಸಕರಾದ ಶ್ರೀಯುತ ಎಂ. ವಿ ಶಾಸ್ತ್ರಿಗಳ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ

o o o o

ನಮ್ಮ ಜಿಲ್ಲಾ ಬೋರ್ಡಿನಲ್ಲಿ 38 ವರ್ಷ ಸರ್ವಿಸನ್ನು ಮಾಡಿ 25 ವರ್ಷ ಗಳಿಂದ್ಲ ನಿವೃತ್ತರಾಗಿರುವ ಬೋರ್ಡು ಸುಪರ್ವಾಯ್ಸರ್ ಶ್ರೀ ಬಂಟ್ವಾಳ ವೈಕುಂಠ ಬಾಳಿಗರು ಇಂದಿನ ತಮ್ಮ 81ನೆಯ ಜನ್ಮದಿನದ ವರ್ಧಂತಿಯು ಅಭಿನಂದನೆಗಳಿಗೆ ಪಾತ್ರರಾಗಿರುವರು. ಶ್ರೀಯುತರು ಜಿಲ್ಲಾ ಬೋರ್ಡಿನಲ್ಲಿರುವಾಗ ಜನಸೇವೆ ಮಾಡಿದವರು ಈಗ ನಿವೃತ್ತರಾದ ಮೇಲೆ ತಮ್ಮ ಆರೋಗ್ಯವನ್ನು ಕಾಪಾಡಿಕೊಟ್ಟಿರುವ ಪರಮಾತ್ಮನಿಗೆ ವಂದನೆಗಾಗಿ ಇವರು ಕೆಲವು ಅನುಭವಸಿದ್ಧವಾಗಿರುವ [illegible] ಔಷಧಗಳನ್ನು ತಯಾರಿಸಿ ಇತರರ ಆರೋಗ್ಯಕ್ಕಾಗಿ ಪ್ರಚಾರ ಮಾಡುವರು ಅವುಗಳ ಜಾಹೀರಾತು ಈ ಸಂಚಿಕೆಯ ಮತ್ತೊಂದ ಕಡೆಯಲ್ಲಿದೆ

ದಿ ಟ್ರಾವನ್ಕೂರ್ ನೇಶನಲ್ ಎಂಡ್ ಕ್ವಿಲೋನ್ ಬೇಂಕ್ ಒಫ್ ಇಂಡಿಯಾ ಲಿಮಿಟೆಡ್ ಇವರು ತಮ್ಮ ಎಲ್ಲಾ ಶಾಖೆಗಳಲ್ಲಿ ಕೆಲವು ದಿನಗಳ ಕನಕ [illegible] ಗಳನ್ನು [illegible] ಮಾಡಿರುತ್ತಾರೆ

ಮಜೂರ ಕೇಂದ್ರದ ಉದ್ಘಾಟನೆ

ಇದೇ ತಾ 20 6—'38ನೇ [illegible] ವಾರ ಸಂಜೆ ಘಂಟೆ 6 30ಕ್ಕೆ [illegible] ಟೌನ್ ಕೊಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಮಂಗಳೂರಿನಲ್ಲಿ [illegible] ಮಜೂರರ [illegible] ಉದ್ಘಾಟನ [illegible] ಮುನಿಸಿಪಲ್ ಕೌನ್ಸಿಲರೂ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ ಆದ ಶ್ರೀ ಜಾನ್ ಫೆಲಿಕ್ಸ್ [illegible] ಇವರಿಂದ ಫೆಲಿಕ್ಸ್ [illegible] ನಲ್ಲಿ ತೆರೆಯಲಾಯಿತು ಶ್ರೀ ಎಸ್ ಎನ್ ಹೊಳ್ಳರು ಅಧ್ಯಕ್ಷರನ್ನು [illegible] ಅಧ್ಯಕ್ಷರು ಭಾಷಣ [illegible] ಟೌನ್ ಕೊಂಗ್ರೆಸ್ ಕಮಿಟಿ [illegible] ಈ ಮಜೂರ ಕೇಂದ್ರವನ್ನು [illegible] ಮಜೂರರಿಗಾಗಿ ತೆರೆದುದು [illegible] ಇಂಥ ವಾಚನಾಲಯ ಮತ್ತು ಕ್ಲಬ್ ಗಳಿಂದಾಗಿ ಮಜೂರರಿಗೆ ದೇಶವಿದೇಶಗಳ [illegible] ಗಳೂ, ರಾಜಕೀಯ ಜನ ಭವಗಳೂ [illegible] ಗತ್ತವಲ್ಲದೆ ಇಂಥ ವಿಷಯಗಳನ್ನು ಮಜೂರರು ತಮ್ಮತಮ್ಮೊಳಗೆ [illegible] ಅದರಿಂದಾಗಿ ಒಳ್ಳೇ ಅನುಭವಗಳನ್ನು ಪಡೆಯುತ್ತಾರೆಂದೂ ಮತ್ತು ಈ ವಾಚನಾಲಯವು ದೀರ್ಘಕಾಲ ಬಾಳಲೆಂದೂ, ಇದರಿಂದಾಗಿ ಕೆಲಸಗಾರರು ಇನ್ನೂ ಹೆಚ್ಚಿನ ಪ್ರಯೋಜನ ಪಡೆಯಲೆಂದು ಹಾರೈಸಿ ಅಧ್ಯಕ್ಷ ಭಾಷಣವನ್ನು ಕೊನೆಗೊಳಿಸಿದರು [illegible] ಶ್ರೀ ಕೆ ಎ ಶೆಟ್ಟಿ [illegible] ಎಲ್ಲಾ ಕೆಲಸಗಾರರ ಪರವಾಗಿ ಧನ್ಯವಾದಗಳನ್ನರ್ಪಿಸಲಾಗಿ ಸಭೆಯು [illegible] ವಾಯಿತು

ಶ್ರೀ ಕಾಳಿಕಾಂಬ ಪ್ರಸಾದಿಕ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾ ಮಂಗಳೂರು

ಈ ಸಂಘದ ಮಹಾಸಭೆಯು ಕಳೆದ ಎಪ್ರಿಲ್ ತಾ 8ರಲ್ಲು ಜರಗಿಸಿದಲ್ಲಿ ಮೆಂಬರರ ಸಂಖ್ಯೆಯು ಸಂಘದ ನಿಬಂಧನೆ ಪ್ರಕಾರ ಭರ್ತಿಯಿಲ್ಲದಿರುವದರಿಂದ ಎರಡನೆ ಸಭೆಯನ್ನು ಇದೇ ಬರುವ ಜುಲಾಯಿ ತಾ 10ರಲ್ಲಿ ಕಂಕನಾಡಿ ಗೇಟಿನ ಬಳಿಯಲ್ಲಿರುವ ಭಾಗೀರಥಿ ಬಿಲ್ಡಿಂಗಿನಲ್ಲಿ ಸಭೆ ಜರಗಿಸುವದೆಂತ ನಿಶ್ಚೈಸಿರುವದರಿಂದ ಎಲ್ಲಾ ಮೆಂಬರರು ದಯಮಾಡಿ ಬಂದು ಸದರಿ ಸಭೆಯನ್ನು ಸಾಂಗವಾಗಿ ನಡಿಸಿಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ

ಕೆ ರಾಮಚಂದ್ರ ಆಚಾರಿ,
ಕಾರ್ಯದರ್ಶಿ.

★ ತಾಲೂಕುಗಳಿಂದ ★

ಉಡುಪಿ: ಶ್ರೀಗಳಾದ ಬಿ. ವಾಸುದೇವರಾವ್, ಯು ಎಸ್. ಭಟ್, ಪಿ ಎನ್ ಮಾಧವರಾವ್, ಪಿ ವಿ ಆಚಾರ್ಯ, ಶಾಂತಪ್ಪ ಕರ್ಕಡ, ಎಸ್ ಎ. ಟಿ. ಬಲ್ಲಾಳ, ಟಿ ಎನ್ ಬಾಳನ್ ನಂಬಿಯಾರ್, ಟಿ. ಎನ್. ಕಣ್ಣನ್ ನಂಬಿಯಾರ್, ಪಣಿಯಾಡಿ ಅನಂತ ಕೃಷ್ಣ ಉಪಾಧ್ಯಾಯ, ಕೆ ಲಕ್ಷ್ಮಣ ಬಲ್ಲಾಳರ ಸಹಿಯಿಂದ ಹೊರಟ್ಟಿದ್ದ ವಿನಂತಿ ಪತ್ರದಂತೆ ತಾ [illegible]ನೇಗೆ ಉಡುಪಿ ಪಟ್ಟಣದೊಳಗಣ ಕೊಂಗ್ರೆಸು ಪ್ರಾಥಮಿಕ ಸದಸ್ಯರ ಸಭೆಗೆ ಜನರು ನೆರೆದಿದ್ದರು ಉಡುಪಿ ಶಹರಿಗೆ ಪ್ರತ್ಯೇಕ ಟೌನ್ ಕೊಂಗ್ರೆಸು ಕಮಿಟಿಯನ್ನು ಸ್ಥಾಪಿಸುವ ವಿಷಯ ಉದ್ದೇಶ ಈ ಬಗ್ಗೆ ಚಳವಳಿಸಿದಾಗಲೂ ತಾಲೂಕು ವ ಜಿಲ್ಲಾ ಕಮಿಟಿಗಳು ಉದಾಸೀನ ತಾಳಿದ್ದರಿಂದಲೂ ಅವರು ಅದನ್ನು ಕಾರ್ಯರೂಪಕ್ಕೆ ತರುವರೆಂಬ ಬಗ್ಗೆ ಆಶೆಯಿಲ್ಲದ್ದರಿಂದಲೂ ಈ ಸಭೆ ಕರೆಯಲಾಗಿದೆಯೆಂದು ವಿನಂತಿ ಪತ್ರದಲ್ಲಿತ್ತು. ಆದರೆ ಸದ್ರಿ ಸಭೆಗೆ ಕೊಂಗ್ರೆಸು ಸದಸ್ಯರಲ್ಲದವರು (ವಿಶೇಷತಃ ಪರ್ಯಾಯ ಮಠದ ಹೊಲ ಜಾತಿಯ, ಶಿವಳ್ಳಿ ಮೊದಲಾದ ನೌಕರರೂ ಕೆಲಸದವರೂ) ಹಾಜರಿದ್ದರು. ನಿಶ್ಚಿತ ವೇಳೆಮೀರಿ ಒಂದು ತಾಸು ದಾಟಿ ಸಭಾ ಕಾರ್ಯ ಆರಂಭವಾಗುವಂತಾಯಿತು ಕೊಂಗ್ರೆಸು ಸದಸ್ಯರಾದವರು ಮಾತ್ರ ಸಭಾ ಸ್ಥಾನದಲ್ಲಿರಬೇಕೆಂದು ಸೂಚನೆ ಬಂದುದರಿಂದ ಸಭೆಯ ವ್ಯವಸ್ಥಾಪಕರಲ್ಲೊಬ್ಬರಾದ (ಹೆಚ್ಚಿನವರು ಗೈರು ಹಾಜರಿದ್ದರು) ಶ್ರೀ ಬಿ ವಾಸುದೇವರಾಯರು ಈ ಕುರಿತೂ, ಸಭಾ ಕಾರ್ಯದ ಕುರಿತೂ ಕೆಲ ಕೊಂಗ್ರೆಸು ಕೆಲಸಗಾರರೊಡನೆ ಸಲ್ಲಾಪ ಮಾಡಿ, ಕೊಂಗ್ರೆಸು ಸದಸ್ಯರು ಹಲವರು ಸಾಮೂಹಿಕವಾಗಿ ಒಂದು ಮನವಿಯನ್ನು ಜಿಲ್ಲಾ ಕೊಂಗ್ರೆಸು ಕಮಿಟಿಗೆ ಮಾಡುವುದಾಗಿ [illegible] ಈ ಕುರಿತು [illegible] ಒಂದು ಹೇಳಿಕೆ [illegible] ಜಿಲ್ಲಾ ಕಮಿಟಿಯವರು ಉಡುಪಿ [illegible] ಟೌನು ಕೊಂಗ್ರೆಸ ಕಮಿಟಿಯನ್ನು [illegible] ಉತ್ತರವೇ [illegible] ಮುಂದಣ ಕಾರ್ಯ [illegible] ಆಗುವುದೆಂದೂ [illegible] ಕೂಡಿದ ಮುಂದೆ [illegible] ಈ ಯೋಚನೆಯನ್ನು, ಬಲ್ಲಿದರೂ [illegible] ಕಾರ್ಯದಲ್ಲಿ ನೂತನರೂ ಆದ ಶ್ರೀ ವಾಸುದೇವರಾಯರ ವಿನಂತಿ [illegible] ಕಮಿಟಿಗಳನ್ನು [illegible] ಅರ್ಜಿಯ ಮೂಲಕ ಜಿಲ್ಲಾ ಕೊಂಗ್ರೆಸ ಕಮಿಟಿಯವರಿಂದ ಮಾಡಿಸುವ ಬದಲಿಗ ತಾವೇ ಕೆಲ ಮಂದಿಗಳು ಕೂಡಿ ಕೊಂಗ್ರೆಸ ಸದಸ್ಯರ ಸಭೆಯೊಂದು ಸೇರಿಸಿ [illegible] ಟೌನ್ ಕೊಂಗ್ರೆಸು ಕಮಿಟಿಯನ್ನು ಸ್ಥಾಪಿಸಲೆತ್ನಿಸಿದ್ದೂ ಅದರಲ್ಲಿ ಭಗ್ನ ಮನೋರಥರಾದುದೂ ಅತೀ ವಿಷಾದ ಸಂಗತಿ

[illegible] ಮುನಿಸಿಪಾಲಿಟಿಯ ಅಧ್ಯಕ್ಷರು [illegible] ಬ್ರಾಹ್ಮಣ ವೃಂದದವರಲ್ಲಿ ನಿರ್ಭೀತವಾಗಿ ಕೊಂಗ್ರೆಸು ಸೇವಕರೂ ಜನ[illegible] ಆದ ಶ್ರೀ ಅರೂರು ಲಕ್ಷ್ಮೀನಾರಾಯಣರಾವ ಬಿ ಎ, ಬಿ ಎಲ್. ರವರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟುದ ಸಂತೋಷದ ವಾರ್ತೆ [illegible] ಈ ಬಹುಮಾನವು [illegible] ಕೊಂಗ್ರೆಸ ಕಡೆಯಿಂದ ಇದು [illegible] ಜಾತೀಯತೆಯು [illegible] ಈ ಸಲದ ಚುನಾವಣೆಯಲ್ಲಿ ವಿಶ್ವರೂಪವನ್ನು ತಾಳಿದಾಗ್ಯೂ ಅದಕ್ಕೆ [illegible]ರವಾಗಿಯಾದರೂ [illegible] ಜಿಲ್ಲಾ ಕೊಂಗ್ರೆಸಿನಲ್ಲಿ ಅಂತಹ ಭೇದಾಭೇದಗಳಿಲ್ಲವೆಂಬುದಕ್ಕೆ ಇದೊಂದು ಪ್ರಬಲನಿದರ್ಶನವಾಗಿದೆ?

ಕಾರ್ಕಳ:— ತಾ. 10 6—1938ರ ದಿನ ಅತ್ತೂರು– ಬಜೆಗೋಳದಲ್ಲಿ ಹೆಗ್ಡೆ ಜಾತಿಯ ಕಾಳಹೆಗ್ಡೆ ಮತ್ತು ಕರಿಹೆಗ್ಡೆ ಎಂಬಿಬ್ಬರು ದಾಯಾದಿ ಸಹೋದರರು ಆಸ್ತಿ ಉತ್ಪತ್ತಿ ಸಂಬಂಧ ಹೊಡೆದಾಡಿಕೊಂಡು, ಬಿದ್ದ ಪೆಟ್ಟುಗಳಿಂದ ಕರಿಹೆಗ್ಡೆಯು ಸತ್ತುಹೋದನು. ಪೋಲೀಸ ವ್ಯವಹರಣೆ ಆಗಲಿದೆ.

...ಘಾರ್ಯುಷ್ಯಕ್ಕೆ : : : ಸಣ್ಣ ನಿದ್ರೆಗಳು

(ನಿದ್ರಾದೇವಿಯ ಮಹಿಮೆ)

ಅವಳ ಮಹಿಮೆಯ ರಹಸ್ಯಗಳನ್ನು ಕಂಡು ಹಿಡಿಯಲು ವಿಜ್ಞಾನಿಗಳಿಗೂ ಸಾಧ್ಯವಾಗಲಿಲ್ಲ!

...ಗೊಸ್ಲಾವ್ ದೇಶದ ಕೈಲ್ಜೀ ಕ್ಲಾರ್ಕನಾದ ಹೋಜಿ ಓಸ್ಟೊನೊವಿಕ್ ಎಂಬಾ... ವಡದ ಒಂದೇಬಾರಿಗೆ 865 ತಾಸುಗಳ ತನಕ ನಿದ್ರಿಸಿದಳು. ಜೀವಂತ ...ಲು ಅವಳಿಗೆ ದ್ರಾವಕರೂಪದಲ್ಲಿ ಆಹಾರ ಕೊಡಲಾಯಿತು ಈಗ ...ವಳು ಎಚ್ಚೆತ್ತಿರುವಳು ದೀರ್ಘ ಸಮಯ ಮಲಗಿದ ಭಾವವು ತನ್ನಲ್ಲಿ ...ವುದಿಲ್ಲವೆಂದೂ, ಬರೇ ರಾತ್ರೆ ಮಲಗಿ ಬೆಳಗಾತ ಎದ್ದ ಭಾವವು ತನ್ನಲ್ಲಿ ರುವುದೆಂದೂ ಹೇಳಿದ್ದಾಳೆ!

...ವು 70 ವರ್ಷ ಪ್ರಾಯದ ವರೇಗೆ ...ವಿಸುವಿರಾದರೆ, ನಿಮ್ಮ ಆ ಜೀವಾವಧಿ ...ಲ್ಲಿ ಒಟ್ಟಿನಲ್ಲಿ 20 ವರ್ಷಗಳನ್ನು ನಿದ್ರೆ ...ಲ್ಲಿ ಕಳೆಯುವಿರಿ ಆಹಾರ ಮತ್ತು ...ರು ಜೀವಕ್ಕೆ ಅತ್ಯಗತ್ಯವಾದವುಗಳು ... ದಿನಗಳ ವರೆಗೂ ಆಹಾರ ಇಲ್ಲದೆನೇ ...ರಬಹುದು, ಒಂದು ವಾರವನ್ನು ನೀರು ...ಡಿಯದೆಯೂ ಕಳೆಯಬಹುದು, ಆದರೆ ...ಥೇ 5 ದಿವಸ ನಮಗೆ ನಿದ್ರೆಯಿಲ್ಲವಾ...ರೆ, ಆಗ ನೀವು ಮರುಳರಾಗಿ ತಿರುಗ...ಬೇಕಾಗುವುದು

ಮರಣದ ನಂತರ ಒಂದು ಮಹಾ ರಹಸ್ಯ ...ದರೆ ನಿದ್ರೆ ಈ ರಹಸ್ಯದ ವಿಚಾರ ಸರಿ...ಯಾದ ಜ್ಞಾನವು ವಿಜ್ಞಾನಿಗಳಿಗೂ ಆಗಲಿಲ್ಲ ...ದ್ರೆಯ ಸರಿಯಾದ ಕಾರಣಗಳನ್ನು ಗೊತ್ತು ...ಪಡಿಸಿದವರಿಲ್ಲ ಆಯಾಸದಿಂದ ದೈಹದೊಳಗೆ ...ಉಂಟಾಗುವ ವಿಷಗಳಿಂದ ನಿದ್ರೆ ಉಂಟಾಗುವು...ದು ಕೆಲವರ ಹೇಳಿಕೆ ಈ ವಿಷದಿಂದ ...ವು ಭ್ರಮೆಹತ್ತುವುದಂತೆ

ಆದರೆ ಅನೇಕ ವರ್ಷಗಳ ಸಮಯ ನಿದ್ರಿಸ...ದಿರುವ ವ್ಯಕ್ತಿಗಳನೇಕರಿರುವರು ಥೋಮಸ್ ...ಶ್ಮೇನ್ ಎಂಬ ಸಂಗೀತಗಾರನೊಬ್ಬನು ...ರ್ಷದಲ್ಲಿ ಎರಡು ಸಲ ಮಲಗುತ್ತಿರುವನು— ...ಗಲೂ ಆತನು ಸರಿಯಾಗಿ ನಿದ್ರಿಸುವುದಿಲ್ಲ

★ ★

... ವರ್ಷಗಳಲ್ಲಿ ಒಂದೇ ಒಂದು ಮಿನುಟು ನಿದ್ರೆಯಿಲ್ಲ!

40 ವರ್ಷಗಳ ಹಿಂದೆ ಆತನು ಕ್ರಮವಾಗಿ ...ದ್ರೆಹೋಗುವ ಅಭ್ಯಾಸವನ್ನು ತೊರೆದು ...ಟ್ಟನಂತೆ ಕೆಲಸ ಬಹಳವಿದ್ದುದರಿಂದ ಆತ...ನಿಗೆ ಮಲಗಲು ಅವಕಾಶವೆ ದೊರಕುತ್ತಿರಲಿಲ್ಲ ...ತೆ ಮಲಗಲಿಕ್ಕೆ ಹೋಗಲು ಆತನು ಮರೆ...ಯುತ್ತಿದ್ದನಂತೆ

ಪೊಲ್ ಕರ್ನ್ ಎಂಬಾತನಿಗೆ 1915ರಲ್ಲಿ ...ಯಲ್ಲಿ ಒಂದು ಕಡಿತವಾಯಿತು ಅದರ ...ತರ ಇಷ್ಟರ ತನಕ ಆತನು ಮಲಗಲೇ ...ಲ್ಲವಂತೆ ಅವನಿಗೆ ನಿದ್ರೆಯೇ ಬರುವುದಿಲ್ಲ ...ತೆ ಆತನು ದಿನಂಪ್ರತಿ 8 ಊಟಗಳನ್ನು ...ಉಣ್ಣುತ್ತಿದ್ದಾನೆ ಸಾಮಾನ್ಯ ವ್ಯಕ್ತಿಗಳಿಗಿಂತ ...ಮ್ಮಡಿಯಷ್ಟು ತಂಬಾಕು ಸೇದುತ್ತಿದ್ದಾನಂತೆ

ಆದರೆ ನಿದ್ರೆಬಾರದ ಎಲ್ಲರೂ ಹಾಗೆ ಸುಖ...ದಿರುವುದಿಲ್ಲ ಹಿಂದೂದೇಶದಲ್ಲಿ ಮಹಾ...ರ್ಣಿಕನೊಬ್ಬನಿಗೆ 6 ವರ್ಷಗಳ ಸಮಯ ...ದ್ರೆಯೇ ಬರಲಿಲ್ಲವಾಯಿತು ತನಗೆ ನಿದ್ರೆ...ಯನ್ನು ತರಿಸಿಕೊಟ್ಟವರಿಗೆ ಮಹತ್ತಾದ ಬಹು...ಮಾನವನ್ನು, ತಾನು ಕೊಡುವೆನೆಂದು ಅವರು ...ಹೀರುಮಾಡಿದ್ದರು 20,000 ಪವನಿನ ...ಬಹುಮಾನವನ್ನು ಕೊಡುವೆನೆಂದು ಸಾರಿದ್ದರು ...ನಿಗೆ ಅವರು ಅಮೇರಿಕದ ವಿಜ್ಞಾನಿಗಳೊ...ರು ಕಲ್ಪಿಸಿದ ಒಂದು ನಿದ್ರಾಯಂತ್ರವನ್ನು ...ಪಯೋಗಿಸಿದರಂತೆ ಈ ಯಂತ್ರವು ಒಂದು ...ಗ್ರಾಮೋಫೋನಿನಂತಿದ್ದು, ಅದರಿಂದ ಹೊರ...ಡುವ ಮಧುರವಾದ ಸ್ವರದಿಂದ ನಿದ್ರಾದೇವಿಯ ...ಆಗಮನವಾಗುವುದಂತೆ.

★ ★

ಇಷ್ಟರ ತನಕ ನಿದ್ರೆ ಬಾರದವರ ಕುರಿತು ...ತಿಳಿಸಲಾಯಿತು. ಈಗ ನಿದ್ರೆಹೋದವರು ...

ಸಿಯಾ ಮೆಗ್ವಾಯರ್ ಎಂಬವಳು ಅಮೇರಿಕದ ಅತಿ ಸೌಂದರ್ಯವತಿ ತರುಣಿ, ಟೆನ್ನಿಸ್ ಆಟವಾಡಿ, ತರುಣನೊಬ್ಬನೊಡನೆ ಪ್ರಣಯ ಬೆಳೆಯಿಸಿ, ಒಂದು ದಿನ ರಾತ್ರೆ ನಿದ್ರೆಹೋದವಳು, ಮತ್ತೆ ಏಳದೆ ಐದೂವರೆ ವರ್ಷಕಾಲ ನಿದ್ರೆಯಲ್ಲಿ ಕಳೆದು, ಕೊನೆಗೆ ಮೃತ್ಯುವನ್ನೈದಿದಳು ಆಕೆಯನ್ನು ಜಾಗರಿಸಲು ಹಲವು ವೈದ್ಯರೂ ವಿಜ್ಞಾನಿಗಳೂ ಮಾಡಿದ ಪ್ರಯತ್ನಗಳು ನಿಷ್ಫಲವಾದುವು ಆಕೆಯ ಪ್ರಣಯಿಯು ದಿನಾಲೂ ಬಂದು ಆಕೆಯು ಎಚ್ಚೆತ್ತಿರುವಳೋ ಎಂದು ಎದುರುನೋಡಿ ಐದೂವರೆ ವರ್ಷಗಳ ನಂತರ ನಿರಾಶನಾಗಿ ತೆರಳುವವನಾದನು ಈ ಐದೂವರೆ ವರ್ಷಗಳಲ್ಲಿ ಚಿಂತನೆಯಿಂದ ಆಕೆಯ ತಾಯಿಯ ತಲೆಕೂದಲು ಬಿಳುಪೇರಿದ್ದರೂ, ಪೆಟ್ರಿಸಿಯಾಳು, ಸೌಂದರ್ಯವತಿಯಾಗಿಯೇ ನಿದ್ರಿಸುತ್ತಿದ್ದಳು

★ ★

ಬೆಟಿನಾಪೆರ ಎಂಬವಳು ಆಕೆಯ ಪ್ರಾಯ 88 ಈಕೆಯು ತನ್ನ 15 ವರ್ಷ ಪ್ರಾಯದ ನಂತರ ಒಂದೆರಡು ಸಲ ಜಾಗರದಲ್ಲಿದ್ದು ವಿಕ್ಕ ಸವ ಯವನ್ನು ನಿದ್ರೆಯಲ್ಲೆ ಕಳೆದುಬಿಟ್ಟಳು, ಈಗಲೂ ಕಳೆಯುತ್ತಿರುವಳು ಇದರ ರಹಸ್ಯವನ್ನು ಕಂಡುಹಿಡಿಯಲು ಮನಶ್ಯಾಸ್ತ್ರದಿಂದ ಸಾಧ್ಯವಾಗಲಿಲ್ಲ ಜಾರ್ಜ ಮೆಕ್ಕಿನ ... ಗ್ರನ್ ಎಂಬ ಸಣ್ಣ ಹುಡುಗಿಯು ಎಳಡುವರೆ ವರ್ಷಗಳ ಹಿಂದೆ ನಿದ್ರೆಹೋದವಳಿಗೆ ಈಗಲೂ ಎಚ್ಚರವಾಗಲಿಲ್ಲ

ನಿದ್ರೆ ರಹಸ್ಯದ ಕುರಿತು ವಿಜ್ಞಾನಿಗಳಲ್ಲಿ ಬಹಳ ಜಿಗುಪ್ಸೆಯು ಉಂಟಾಗಿರುವುದು ಜೊನ್ ಬೆಗ್ರೊನೊ ಎಂಬಾತನ ಕುರಿತು ಅವರನ್ನು ವಿಚಾರಿಸಲು ಅವರ ಸುಮ್ಮನೆ ತಲೆ ಪರಚಿಕೊಂಡು ಆಲೋಚಿಸುವವರಾದರು ಮಾರ್ಗದಲ್ಲಿ ... ಕೆಂದ ದಾಗಿ ಬೊಗ್ರೊನೊನನ್ನು ಅನೇಕ ಒಂಟಿ ಶಿಕ್ಷಿಸಿದ್ದರ ಆದರೆ ಆತನು ~~ಹಾಗೆ ಮಾಡಲು ಕಾರಣವೇನೆಂದರೆ~~ ನಡೆಯುತ್ತಿರ ವಾಗಲೆ ಸಿ ತಹಂಗೆ ಇದ್ದವಂಗೆ ನಿದ್ರೆ ಹತ್ತುತ್ತಿತ್ತು ಕದಡಿದರೆ, ಅರ್ಧ ಪ್ರಜ್ಞೆಯನ್ನು ಹೊಂದಿದರೂ ಆತನಿಗೆ ನಡೆಯಲು ಆಗುತ್ತಿರಲಿಲ್ಲವಂತೆ

ರಷ್ಯನನೊಬ್ಬನ ಸೂಚನೆ.

ನಿದ್ರೆಯ ಇನ್ನೊಂದು ವೈಚಿತ್ರವೆಂದರೆ—ನಿದ್ರೆಯಲ್ಲಿದ್ದವನು, ಹಾಸಿಗೆಯಿಂದೆದ್ದು ಅಸಾಧ್ಯವಾದ ಕೆಲಸಗಳನ್ನು ಮಾಡಿ ಪ್ರಜ್ಞೆಹೊಂದದೆ ಮತ್ತೊಮ್ಮೆ ತನ್ನ ಹಾಸಿಗೆಯ ಮೇಲೆ ಮಲಗುವುದು. ಇದರ ರಹಸ್ಯವಾದರೂ ಏನು? ಇದೇ ತರದಅವಸ್ಥೆಯಲ್ಲಿರುವಾಗ ಮೊಜಾರ್ಟನೆಂಬ ಕವಿಯು ಜಗತ್ಪ್ರಸಿದ್ಧವಾದ 'ಮೆಜಿಕ್ ಫ್ಲೂಟ್' ಎಂಬ ತನ್ನ ಕೃತಿಯನ್ನು ಬರೆದುಬಿಟ್ಟನಂತೆ ಅದೇ ತರದಲ್ಲಿ ಅಮೇರಿಕದ ಓರ್ವ ಕವಿಯು ನಿದೆಯಲ್ಲೆ ಒಂದು ಮಹತ್ತಾದ ಪದ್ಯದ ರಚನೆಯನ್ನು ಮಾಡಿರುವನಂತೆ.

★ ★

ವಿಜ್ಞಾನದಿಂದ ನಮ್ಮ ಆಹಾರವನ್ನು ಉತ್ತಮಗೊಳಿಸುವ ನಮ್ಮ ಜೀವನಕ್ರಮಗಳನ್ನು ಉತ್ತಮಗೊಳಿಸುವ ನಮ್ಮ ಆರೋಗ್ಯವನ್ನು ಉತ್ತಮಗೊಳಿಸುವ ಅನೇಕ ಉಪಾಯಗಳು ನಮಗೆ ತಿಳಿದುಬಂದಿವೆ. ಆದರೆ ನಿದ್ರಾಕ್ರಮವನ್ನು ಉತ್ತಮಗೊಳಿಸುವ ಉಪಾಯವು ಇಷ್ಟರ ...

ಲಿನಾಸ್ಟನ್ ಎಂಬ ರಷ್ಯದ ಪ್ರೊಫೆಸರರ ಮಾತುಗಳನ್ನು ಕೇಳುವಿರಾದರೆ, ಪ್ರತಿದಿನವೂ ಒಂದೊಂದು ತಾಸಿನ ಐದು ನಿದೆಗಳನ್ನು ಮಾಡುವುದು ಉತ್ತಮ ಒಂದೇ ಬಾರಿಗೆ ದೀರ್ಘ ನಿದ್ರೆಯನ್ನು ತೆಗೆಯುವ ಬದಲಾಗಿ ಹೀಗೆ ದಿವಸದಲ್ಲಿ ಆಗಾಗ್ಗೆ ಒಂದೊಂದು ತಾಸಿನ ನಿದ್ರೆಯನ್ನು ಐದು ಸಲ ಪಡೆದರೆ ಉತ್ತಮವಂತೆ ಈ ನಿದ್ರೆಯನ್ನು ಊಟವಾದ ನಂತರ ತೆಗೆದರೆ ಉತ್ತಮವಿದೆಯೆಂದು ಅವರ ಹೇಳಿಕೆ ಕಾರಣ, ಅದರಿಂದ ಜೀರ್ಣವು ಸರಿಯಾಗಿ ನಡೆಯುವುದಂತೆ ಈ ಉಪಾಯದಿಂದ ಆಯುಷ್ಯವನ್ನು ಕಡಿಮೆಯೆಂದರೆ 10 ವರ್ಷಕ್ಕಾದರೂ ಹೆಚ್ಚಿಸಿಕೊಳ್ಳಬಹುದಂತೆ

ಸೊಳ್ಳೆಯೊಂದು ಜಗಮಂಡಳದ ರೂಪನ್ನೆ ಬದಲಾಯಿಸಿಬಿಟ್ಟಿತು!

ಮಲೆರಿಯಾ ಮತ್ತು ಅಂಧಶ್ರದ್ಧೆ!

ರೋಗಗಳನ್ನು ಗುಣಪಡಿಸುವ ಕೆಲ ಪ್ರಾಚೀನ ಪದ್ಧತಿಗಳ ಪರಿಶೀಲನೆ ಮಾಡಿ ನೋಡಿದರೆ, ಅವುಗಳು ಕೆಲವು ದೇವರು ಯಾ ಭೂತಗಳಿಂದ ಉಂಟಾದವುಗಳೆಂಬ ಭಾವದ ಮೇಲೆ ಚಿಕಿತ್ಸೆಯು ನಡೆಯಿಸಲಾದುದನ್ನು ಕಾಣಬಹುದು ರೋಗಗಳನ್ನು ಗುಣಪಡಿಸಲು ಮಂತ್ರೋಚ್ಚಾರಣೆಯನ್ನು ಉಪಯೋಗಿಸುವುದನ್ನು ನೋಡಬಹುದು

ಆದರೆ, ಕಳಚಿದ ಗಂಟು, ಮುರಿದ ಎಲುಬು, ರಕ್ತಸುರಿಯುವ ಕಡಿತ ಇವುಗಳ ಕುರಿತು ಅದೆ ಅಭಿಪ್ರಾಯದಿಂದ ಚಿಕಿತ್ಸೆಯು ನಡೆಯುತ್ತಿರಲಿಲ್ಲ ಸರಿಯಾದ ಕಾರಣಗಳಿಂದ ಆಧರಣೀಯವಾದ ಶಸ್ತ್ರಚಿಕಿತ್ಸೆಯು ಈ ವಿಚಾರಗಳಲ್ಲಿ ಉಪಯೋಗಿಸಲಾಗುತ್ತಿದ್ದವು ಇಲ್ಲಿ ಕೆಲವು ಬಾರಿ ಅದರಲ್ಲಿ ರಕ್ತಸ್ರಾವದ ಚಿಕಿತ್ಸೆ ... ಮಂತ್ರಚಿಕಿತ್ಸೆಯು ಉಪಯೋಗ ಮಾಡಿದ್ದುಂಟು

★ ★

ದೇಹದೊಳಗಿನ ರೋಗಗಳ ಸರಿಯಾದ ಜ್ಞಾನವು ಆಗಿನ ವರೆಗೆ ಇರಲಿಲ್ಲವಾದುದರಿಂದಲೆ ಅವರು ಸ್ವಪ್ನದಲ್ಲಿನ ದೇವರ ವಾಕ್ಯ ಇತ್ಯಾದಿಗಳನ್ನು ರೋಗದ ಚಿಕಿತ್ಸೆಗಾಗಿ ಉಪಯೋಗಿಸುತ್ತಿದ್ದರು ದೈವಗಳನ್ನು ಸಂತೈಸಿದರೆ ಸರಿ ರೋಗವು ಗುಣವಾಗುವುದೆಂಬ ಭಾವವು ಅವರಲ್ಲಿತ್ತು. ದೈವದ ಆವೇಶದಲ್ಲಿ ಪ್ರಶ್ನೆಗಳು ಕೇಳಲಾಗಿ, ಆ ದೈವದ ವಚನಗಳಿಗೆ ಸರಿಯಾಗಿ ರೋಗಗಳನ್ನು ಗುಣಪಡಿಸುವ ಉಪಾಯಗಳನ್ನು ನಡೆಯಿಸುತ್ತಿದ್ದರು ಆದರೆ ಈ ತರದ ಚಿಕಿತ್ಸೆಗಳಿಂದ ಪ್ರಾಪ್ತಿಯಾದ ಗುಣಲಭಿಸಿದುದು ತೀರ ಕಡಿಮೆ

ಹೆಚ್ಚಿನ ಭೀತಿಗೆ ಕಾರಣವಾದ ಮತ್ತು ಔಷಧಿಯೇ ಇಲ್ಲದ ಆಗಿನ ರೋಗವು ಮಲೇರಿಯಾ ಈ ಜ್ವರವನ್ನು ಗುಣಪಡಿಸುವರೆ ಅನೇಕ ವಿಚಿತ್ರ ತರದ ಚಿಕಿತ್ಸೆಗಳು ನಡೆಯುತ್ತಿದ್ದವು ಈ ಜ್ವರದ ಕುರಿತು ಅನೇಕರಲ್ಲಿ ಅನೇಕ ತರದ ಆಲೋಚನೆಗಳಾಗುತ್ತಿದ್ದವು ಕೆಲವರು ಈ ರೋಗಕ್ಕೆ ಔಷಧಿಯಾಗಿ ಆನೆ ರಕ್ತ ಕೆಲವರು ಮೊಸಳೆಯ ಸೆಗಣಿ ಕೆಲವರು ಜಚ್ಚಿ ಜೇಡರ ಹುಳ, ಕೆಲವರು ಕುತ್ತಿಗೆಯಲ್ಲಿ ಒಂದು ಪಚ್ಚೆ ಬಣ್ಣದ ಕಲ್ಲನ್ನು ಕಟ್ಟುವುದು ... ಔಷಧಿಗಳೆಂದು ಹೇಳುತ್ತಿದ್ದರು.

ಆದರೆ, ಮಲೇರಿಯಾವನ್ನು ತೊಡೆದೋಡಿಸುವ ಅತ್ಯವಶ್ಯಕವಾದ ಮ್ಯಾಕ್ರೊಸ್ಕೊಪ್ ಮತ್ತು ಕ್ವಿನೀನ ಕುರಿತ ಜ್ಞಾನವು ನಮ್ಮ ಪ್ರಾಚೀನರಿಗೆ ಆಗಲಿಲ್ಲ ಮಲೇರಿಯಾ ಜ್ವರದ ಆಧುನಿಕ ಚಿಕಿತ್ಸೆ ವೈದ್ಯಕೀಯ ಜ್ಞಾನದ ಒಂದು ಮಹಾ ವಿಜಯವಾಗಿರುತ್ತದೆ

ಮ್ಯಾಕ್ರೊಸ್ಕೊಪಿನ ಮೂಲಕ ಮನುಷ್ಯನ ರಕ್ತವನ್ನು ಪರೀಕ್ಷಿಸಿ ಅದರಲ್ಲಿ ಮಲೇರಿಯಾ ರೋಗಾಣುವು ಇರುವುದೊ, ಎಂದು ಕಂಡುಹಿಡಿಯಲು ಸಾಧ್ಯವಿದೆ ಹಾಗೆ ಕಂಡುಹಿಡಿದ ಮೇಲೆ, ಕ್ವಿನೀನನ್ನು ಉಪಯೋಗಿಸಿ ಆ ರೋಗಾಣುಗಳನ್ನು ನಾಶಪಡಿಸಿ, ಮಲೇರಿಯಾವನ್ನು ನಿವಾರಿಸಬಹುದು. ಮಲೇರಿಯಾಕ್ಕೆ ಕಾರಣವಾದ ಸೊಳ್ಳೆಯ ಕುರಿತು ಸರಿಯಾದ ಜ್ಞಾನವನ್ನು ಪಡೆಯಲು ಮ್ಯಾಕ್ರೊಸ್ಕೊಪಿನಿಂದ ಸಾಧ್ಯವಿದೆ ಮಲೇರಿಯಾದ ರೋಗಾಣುಗಳ ಸ್ಥಿತಿಯನ್ನು ಕಂಡು ಹಿಡಿದು ಅದನ್ನು ನಾಶಪಡಿಸಲು ಎಷ್ಟು ಕ್ವಿನಿನ್ ಬೇಕಾಗುವುದೆಂದು ಕಂಡುಹಿಡಿಯಬಹುದು.

★ ★

ಮಲೇರಿಯಾ ಜ್ವರವು ತಲೆದೋರಿದ ಕೂಡಲೆ, 7 ದಿವಸಗಳವರೆಗೆ ದಿನಾಲೂ 15–18 ಗ್ರೇನು ಕ್ವಿನೀನಿನ ಪ್ರಕಾರ ಕೊಟ್ಟರೆ, ಆಗ ರೋಗಿಯು ಬೇಗನೆ ಗುಣಹೊಂದುವನು ನಂತರ ಯಾವ ಚಿಕಿತ್ಸೆಮಾಡಬೇಕಾಗಿಲ್ಲ ಆದರೆ ಮತ್ತೊಮ್ಮೆ ಜ್ವರವು ಬಂದು ಬಿಟ್ಟರೆ, ಇದೇ ಚಿಕಿತ್ಸೆಯನ್ನು ನಡೆಯಿಸಿದರೆ ಸಾಕಾಗುವುದು ಮಲೇರಿಯಾವು ಬಾರದಂತೆ ಮಾಡಲು ಮಲೇರಿಯಾ ತಲೆದೋರಿದ ಸಮಯದಲಿ, ದಿನಾಲೂ ಆರು ಗ್ರೇನುಗಳಂತೆ ಕ್ವಿನೀನನ್ನು ಸೇವಿಸಿದರೆ, ಆಗ ಮಲೇರಿಯಾ ಸೊಳ್ಳೆಗಳ ಕಡಿತದಿಂದ ಜ್ವರವು ಬಾಧಿಸದಂತೆ

★ ★

ಕಾರಣಗಳು ಸಣ್ಣವು— ಆದರೆ ಮಹತ್ತಾದ ಪರಿಣಾಮಗಳು

ಮೆಸೆಡೋನಿಯಾದ ಅಲೆಕ್ಸಾಂಡರನು, "ಮಹಾ ಮನಷ್ಯ" ನೆಂಬ 2000 ವರ್ಷಗಳ ಹಿಂದೆ ಪಡೆದ ಕೀರ್ತಿಯು ಇಂದಿಗೂ ಇದೆ ಚರಿತ್ರೆಯಲ್ಲಿ ಇಷ್ಟರತನಕ ಚಿರಂಜೀವಿಯಾಗಿರುವುದು ಈತನ ಹೆಸರ ಮಾತ್ರ ಬರಿ 20 ವರ್ಷ ವಯಸ್ಸಿನಲ್ಲಿ ಆತನು ಪಟ್ಟವನ್ನೇರಿದನು ನಂತರ 12 ವರ್ಷಗಳಲ್ಲಿ ಧೂಮಕೇತುವಿನಂತೆ ಸಮಸ್ತ ಜಗತ್‌ಮಂಡಳದ ದಿಗ್ವಿಜಯ ಯಾತ್ರೆಯನ್ನು ನಡೆಸಿ ಒಟ್ಟಿನ ಅನೇಕ ಸಾಮ್ರಾಜ್ಯಗಳನ್ನು ಕೆಡವಿದನು ಅನೇಕ ಮನೆತನಗಳನ್ನು ನಾಶಪಡಿಸಿದನು

ಆತನು ಮೊದಲಾಗಿ ಗ್ರೀಸ್‌ದೇಶವನ್ನು ಜಯಿಸಿದನು ... ಸಂಗೀತ ನಗರವನ್ನು ನಾಶಮಾಡಿದನು ಅಲ್ಲಿಂದ ಸಿರಿಯಾವನ್ನು ಹಿಡಿದು ಇಜಿಪ್ತಿಗೆ ತೆರಳಿದನು ಅಲ್ಲಿಂದ ಮತ್ತೊಮ್ಮೆ ಪರ್ಶಿಯಾಕ್ಕೆ ಬಂದನು ಆದರೆ ಅಷ್ಟರಲ್ಲೆ ಸಮಾಧಾನ ಹೊಂದದೆ, ಇನ್ನೂ ಪೂರ್ವಕ್ಕೆ ಇಳಿದನು ಉತ್ತರ ಹಿಂದೂಸ್ತಾನದ ಪಂಜಾಬದವರೆಗೆ ಬಂದಿದ್ದನು ಇಲ್ಲಿ ಈವತ್ತಿಗೂ ಆತನ ಹೆಸರು ಚಿರಸ್ಥಾಯಿಯಾಗಿರುವುದು ಆದರೆ ಆತನ ಸೈನ್ಯಮಂಡಲವು ಒಳಲಿದುದರಿಂದ ಆತನು ಹಿಂತಿರುಗಬೇಕಾಯಿತು ಪರ್ಶಿಯಾಕ್ಕೆ ತೆರಳಿ ಬೆಬಿಲೋನಿಯಾದ ಗದ್ದುಗೆಯನ್ನು ಏರಿ ಸಮಸ್ತ ಜಗತ್ತೆ ತನ್ನ ರಾಜ್ಯವನ್ನಾಗಿ ಮಾಡಿಬಿಡುವ ಆಲೋಚನೆಗಳನ್ನು ಮಾಡಿದನು

★ ★

ಆದರೆ ಸೊಳ್ಳೆಯೊಂದು ಬಂದು ಬಿಟ್ಟಿತು ಅಲೆಕ್ಸಾಂಡರನ ಕೈರಟ್ಟೆಯ ಮೇಲೆ ಕಚ್ಚಿತು ಈ ಸೊಳ್ಳೆಯು ಮಲೇರಿಯಾ ಸೊಳ್ಳೆಯಾಗಿತ್ತು ಆ ಮಹಾ ಚಕ್ರವರ್ತಿ ಅಲೆಕ್ಸಾಂಡರನಿಗೆ ಮಲೇರಿಯಾ ಜ್ವರ ಹಿಡಿಯಿತು. ಹನ್ನೊಂದು ದಿವಸ ಶಯ್ಯೆಯಲ್ಲಿ ನರಳಿ ಮಹಾಬಲಿಷ್ಠನಾಗಿದ್ದ ಚಕ್ರವರ್ತಿಯು ದುರ್ಬಲನಾಗಿ ತನ್ನ ಮಹತ್ವಾಕಾಂಕ್ಷೆಗಳನ್ನೆಲ್ಲಾ ತೊರೆದುಬಿಟ್ಟು ಮೃತ್ಯುವನ್ನೈದಿದನು

ಆತನು ಹಿಡಿದ ಮಹತ್ತಾದ ಸಾಮ್ರಾಜ್ಯವು ಒಡೆಯನಿಲ್ಲದೆ, ಸರಿಯಾದ ವ್ಯವಸ್ಥೆಯಿಲ್ಲದೆ ಬೇಗನೆ ನುಚ್ಚುನೂರಾಯಿತು. ಹೀಗೆ ಬರೆ ಸೊಳ್ಳೆಯೊಂದರ ಕಡಿತದಿಂದ ಜಗತ್‌ಮಂಡಳದ ರೂಪೆ ಬದಲಾಗಿಬಿಟ್ಟಿತು ಅನೇಕ ವರ್ಷಗಳ ಅಲೆಕ್ಸಾಂಡರನ ಪರಿಶ್ರಮದ ಫಲವು ವ್ಯರ್ಥವಾಯಿತು ಆಗಿನ ವೈದ್ಯರಿಗೆ ಕ್ವಿನೀನ ಕುರಿತು ಜ್ಞಾನವಿರಲಿಲ್ಲವಿತ್ತು.

ಕಾನೂನು ಭಂಗ

ಬರೆದವರು:
ಬಿ. ಆರ್. ಕಾಮತ್

ಒಂದು ದಿನ ಮುಂಜಾನೆ ನಿದ್ದೆಯಿಂದ ಎಚ್ಚೆತ್ತು ಕಣ್ಣು ಬಿಡುವಾಗಲೆ, 'ಗುಡುಗುಡು ಗುಮ್ಮಟ ದೇವರ' ಹಾಗೆ ಅದೊಂದು ಸಮಸ್ಯೆಯು ಸುಬ್ಬನ ತಲೆಯಲ್ಲಿ ಉರುಳಿಕೊಂಡು ಬಂದಿತು. ಅದೇನು ಗೊತ್ತೇ? ಅನೇಕ ದಿನಗಳಿಂದ ಹೊಟ್ಟೆಗಿಲ್ಲದೆ ಸುಬ್ಬನು ದೊಡ್ಡ ಪೀಕಲಾಟದಲ್ಲಿ ಬಿದ್ದಿದ್ದನು. ಈ ಒಂದು ಹೊಟ್ಟೆಯಿಲ್ಲದಿದ್ದರೆ ಲೋಕದಲ್ಲಿ ಎಷ್ಟೋ ಕೆಟ್ಟ ಕೆಲಸಗಳು ಸಂಭವಿಸಲಿಕ್ಕೆ ಆಸ್ಪದವೇ ಇದ್ದಿಲ್ಲ. ಉದರ ನಿಮಿತ್ತಂ ಬಹುಕೃತವೇಷಂ ಅಲ್ಲವೇ? ಎಲ್ಲರು ಮಾಡುವುದು ಹೊಟ್ಟೆಗಾಗಿ, ಗೇಣುದ್ದ ಬಟ್ಟೆಗಾಗಲ್ಲವೆ? ಅದರಲ್ಲೂ ಸುಬ್ಬನ ಹೊಟ್ಟೆಯೆಂದರೆ ಊರಿನಲ್ಲೆಲ್ಲಾ ಸುಪ್ರಸಿದ್ಧ! ಅಂತಹ ಹೊಟ್ಟೆಗೆ ಈಗ ಒಂದು 'ತಿಪ್ಪಿ' ಗಂಜಿಯು ನೀರಿಗೂ ತತ್ವಾರ! ಆದಕಾರಣ ಸುಬ್ಬನಿಗೆ ತನ್ನ ಹೊಟ್ಟೆಯ ವಿಚಾರವೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು.

ಸುಬ್ಬನ ಆಕಾಂಕ್ಷೆಗಳೇನು ಉಚ್ಚತರ ಗತಿಯವುಗಳಲ್ಲ. ಕಾಲ ಮೇಲು ಕಾಲು ಹಾಕಿ ಕೂತು ತಿನ್ನುವಷ್ಟು ಸಿರಿತನವು ಆತನಿಗೆ ಬೇಕಾಗಿದ್ದಿಲ್ಲ, ತಿರುಗಾಡಲು ಮೋಟಾರು ಕಾರು ಬೇಕೆಂಬ ಆಶೆ ಆತನಿಗಿಲ್ಲ, ಚಿತ್ರಾಟೋಕೀಯವರು ಒಂದು ಫ್ರೀ ಪಾಸು ಕಳುಹ ಬೇಕೆಂದು ಆತನು ಬಯಸುದ್ದಿಲ್ಲ. ದಿನನಿತ್ಯ ದುಡಿದು ಹೊಟ್ಟೆಗೆ ಬಗೆ ಮಾಡುವಷ್ಟು ಬಡತನದ ವಿಚಾರವೂ ಆತನಿಗೆ ಹೊಳೆಯಲಿಲ್ಲ. ಕೇವಲ ಕಷ್ಟನಿಷ್ಠುರಗಳಿಲ್ಲದೆ ಸುಖದಿಂದ ಕಾಲಕ್ಷೇಪಮಾಡಿದರಾಯಿತು. ಇದಿಷ್ಟೇ ಆತನ ಮಹತ್ವಾಕಾಂಕ್ಷೆ.

ಸುಬ್ಬನೇನು ಚಿಲ್ಲರೆ ಆಸಾಮಿ ಯಲ್ಲ. ಬಹಳ 'ಗಟ್ಟಿ' ತಲೆಯವನು. ಏನಾದರೊಂದು ವಿಚಾರವು ಆತನ ತಲೆಯೊಳಗೆ ನುಸುಳುವುದೇ ತಡ—ಮತ್ತೆ ಅದು ಕೀಟದೋಪಾದಿ ಆತನ ತಲೆಯನ್ನೇ ಕೊರೆಯುವುದು. ಬಳಿಕ ಆ ಕಾರ್ಯ ಸಾಧನೆಯಲ್ಲಿ ಎಷ್ಟು ವಿಘ್ನೋರಗಳು ಬಂದರೂ ಆತನು ಲೆಕ್ಕಿಸುವವನಲ್ಲ. ಆದುದರಿಂದ ಇಂದು ಹೊಟ್ಟೆಗಿಲ್ಲದ ಸಮಯದಲ್ಲಿ, ಹೊಟ್ಟೆಗೇನೂ ಮಾಡಲೆಂದು ಆತನು ನೆಟ್ಟಗೆ ಆಲೋಚನಾಪರನಾದನು. ಆಲೋಚನೆಮಾಡಿ ಮಾಡಿ ತಲೆಯು ಪಕ್ವವಾಯಿತು. ಆದರೂ ಒಂದು ಆಲೋಚನೆ ಹೊಳೆಯಬಾರದೆ? ಏನು ಬಂಜೆ ಮಿದುಳು! ಈ ಬಗೆಯ ತನ್ನ ದುರದೃಷ್ಟಕ್ಕಾಗಿ ಸುಬ್ಬನು ಅಲ್ಲಿಯೇ ಬಳಿಯಲ್ಲಿ ಬಿದ್ದಿದ್ದ ಒಂದು ಕಲ್ಲನು ತೆಗೆದು ತಲೆಗೆ ಬಡಕೊಂಡನು. ಆಗಲೇ, ಎರಡು ಬೆಣಚುಕಲ್ಲುಗಳ ಘರ್ಷಣದಿಂದ ವಿದ್ಯುತ್ಕಿಡಿಯು ಸಿಡಿಯುವಂತೆ, ಆತನ ತಲೆಯು ಮತ್ತು ಕಲ್ಲಿನ ಬಡಿದಾಟದಿಂದಾಗಿ ಮಿಂಚಿನಂತೆ ಒಂದು ದಿವ್ಯ ಆಲೋಚನೆಯು ಸುಬ್ಬನಿಗೆ ಹೊಳೆಯಿತು. ಕಾರಾಗೃಹವಾಸ! ಕಾರಾಗೃಹವಾಸವಾಗಬೇಕಾದರೆ ಕಾನೂನು ಭಂಗ!

ಒಮ್ಮೆ ಸುಬ್ಬನು ಬಿಕ್ಕೆ ಬೇಡಿಯಾದರೂ ಹೊಟ್ಟೆ ಹೊರಲೇ ಎಂದು ಆಲೋಚಿಸಿದನು. ಆದರೆ ಅದು ಒಮ್ಮೆಯೆ ಎರಡನೆಯ ಬಾರಿ ಆ ವಿಚಾರವೇ ಆತನ ಮನಸ್ಸಿನ ಮೇಲೆ ಆತಿಕ್ರಮವನ್ನೆ ನಡೆಸಲಿಲ್ಲ. ಧರ್ಮದ ಹೆಸರಿನಲ್ಲಿ ಅನೇಕಾನೇಕ ಪ್ರತ್ಯಾತ್ಮರು ಊರಿನವರಿಗೆ ಮಾಡುತ್ತಿರುವ ಉಪಕಾರವು ಆತನಿಗೆ ಒಗ್ಗಲಿಲ್ಲ. ಭೂತದಯೆಗಿಂತ ಸರಕಾರದ ಕಾನೂನೇ ಮೇಲೆಂದು ಆತನ ಮತ. ಧರ್ಮಕ್ಕೆ ಶರಣುಹೋಗುವುದಾದರೆ ಅನೇಕ ಮುನಿಸಿಪಲ್ ಮುಕ್ತ ಧರ್ಮಛತ್ರಗಳಿರುವುವು. ಆದರೆ ಸುಬ್ಬನಂತಹ ಸ್ವಾತಂತ್ರ್ಯ ಪ್ರಿಯ ಮನುಷ್ಯನಿಗೆ ಧರ್ಮದ ಪುರಸ್ಕಾರವು ಆದೊಂದು ಹೊರೆಯೇ ಸರಿ. ಹಣಕೊಡದಿದ್ದರೇನು? ಧರ್ಮವನ್ನು ಪಡೆಯುವಾಗ ಬಗ್ಗಿ, ಆತ್ಮದ ದೈನ್ಯತೆಯಿಂದಲಾದರೂ ಅದರ ಮೌಲ್ಯವನ್ನು ಕೊಡಬೇಡವೇ? ಅದುಕಾರಣ ಬಿಕ್ಕೆ ಬೇಡಿ ಉದರ ಪೋಷಣೆ ಮಾಡುದಕ್ಕಿಂತ, ಸರಕಾರದ ಮಾನ್ಯ ಅತಿಥಿಯಾಗಿ ಕಾಲಕಳೆಯುವುದೇ ಲೇಸೆಂದು ನಿಷ್ಕರ್ಷಿಸಿದನಾತನು.

ಆಲೋಚನೆಯಾದುದೇ ತಡ— ಕಾರ್ಯ ಸಾಧನೆಗಾಗಿ ಸುಬ್ಬನು ಕೂಡಲೆ ಹೊರಟೇ ಬಿಟ್ಟನು. ಜೈಲಿಗೆ ಹೋಗಬೇಕಾದರೆ ಇರುವ ಸುಲಭೋಪಾಯಗಳೇನು ಅಷ್ಟಿಷ್ಟೇ? ಬಹಳ ಡೌಲಿನಿಂದ ಒಂದು ಹೊಟೇಲಿಗೆ ಹೋಗಿ ಬೇಕಾದಷ್ಟು ತಿಂಡಿತಿನಸುಗಳನ್ನು ಭುಂಜಿಸುವುದು, ಬಳಿಕ ಐ. ಪಿ. ದಾಖಲ ಮಾಡಿ ನಿರಾಯಾಸವಾಗಿ ಪೋಲೀಸರ ಕೈಯೊಳಗೆ ಕೈದಿಯಾಗಿ ಸೇರುವುದು. ಉಳಿದುದೆಲ್ಲವನ್ನೂ ಆ ಎತ್ತರ ಪೀಠದ ಮೇಲೆ ಕುಳಿತ 'ಮುಂಡಾಸು ಮೂವತ್ತು ಮೊಳ'ದ ಮಹಾತ್ಮನು ತೀರಿಸಿಬಿಡುವನು.

ಹೀಗೆಂದು ಆಲೋಚಿಸಿ ಸುಬ್ಬನು ತಾನು ಕೂತಲ್ಲಿಂದ ಎದ್ದು ರಥಬೀದಿಯಲ್ಲಿ ಮೂರು ಮಾರ್ಗಗಳು ಕೂಡುವಲ್ಲಿ ಬಂದು ನಿಂತನು. ಅಲ್ಲಿಂದ ಎಡಕ್ಕೆ ತಿರುಗಿ ಒಂದು ಪ್ರಸಿದ್ಧ ಹೋಟೇಲಿನ ಮಾರ್ಗವಾಗಿ ಹಾದು ಹೋಗುವಾಗ, ಒಳಗೆ ಮಿಠಾಯಿ, ಲಾಡ್ಡು, ಅಂಬೋಡೆ ಮೊದಲಾದ ಖಾದ್ಯಗಳನ್ನು ತಯಾರಿಸುವ ಪರಿಮಳವು ಆತನ ನಾಸಿಕ ಗುಹೆಗಳನ್ನು ಪ್ರವೇಶಿಸಿ, 'ಗಮಗಮ ಒಳಗು ಹೊರಗು ಕೆಂಪು ಇಡುಗಿತು'.

ಸುಬ್ಬನು ಕಾಲಿನ ಉಂಗುಷ್ಠದ ನಖದಿಂದ ತಲೆಯ ಕೂದಲಿನ ಜುಟ್ಟಿ ತುದಿಯತನಕ ಬಹಳ ಧೈರ್ಯಶಾಲಿ. ನೋಡಿದರೆ ಆತನ ಅವಯವಗಳಲ್ಲೂ ಪೋಷಾಕಿನಲ್ಲೂ ಏನೊಂದು ಕುಂದು ಕೊರತೆಯು ಇದ್ದಿಲ್ಲ. ಆತನು ಒಳಗೆ ನುಗ್ಗಿ ಹೊಟೇಲಿನ ಒಂದು ಮಾರ್ಬಲ್ ಮೇಜಿನ ಬಳಿಯಲ್ಲಿ ಆಸೀನನಾದನೆಂದರೆ, ಬಳಿಕ ಅರ್ಧ ಯುದ್ಧವನ್ನು ಗೆದ್ದಂತೆಯೇ ಸರಿ. ಎಷ್ಟೆ ಒಳ್ಳೊಳ್ಳೇ ಖಾದ್ಯಗಳನ್ನು ಆತನು ತರಿಸಿ ತಿಂದರೂ ಹೊಟೇಲಿನ ಮಾಲಕನಿಗೆ ಸಂಶಯಕ್ಕೆಡೆಯಾಗಲಿಕ್ಕಿಲ್ಲ. ಒಂದು ತುಪ್ಪದದೋಸೆ, ಒಂದುತುಂಡು ಹಾಲ್ವಾ, ಎರಡು ಬಿಸ್ಕೂಟು ಅಂಬೋಡೆ, ಒಂದು ಬಾಳೆಯ ಸಜ್ಜಿಗೆ, ಮತ್ತು ಅದಾದಬ್ಬಳಿಕ ರಿಮ್ಮನ್ ಕಾಫಿ, ಸಾಕು. ಇಷ್ಟು ಆತನ ಹೊಟ್ಟೆಯ ನ್ಯಾಯ ತೃಪ್ತಿಗೊಳಿಸುವುದಲ್ಲದೆ, ಕಾರಾಗೃಹವಾಸ ಪ್ರಯಾಣದ ಟಿಕೇಟನ್ನು ಕೊಂಡುಕೊಳ್ಳಬಲ್ಲುದು.

ಸುಬ್ಬನು ಹೊಟೇಲಿನ ಒಳನುಗ್ಗಿ, ಕಾಫಿ ಕುಡಿದು ಮುಗಿಸಿ ಎವಾಳಿ ಅರ್ಜಿಯನ್ನು ದಾಖಲುಮಾಡಿದುದಾಯಿತು. ಯಾರೂ ಆತನ ಅರ್ಜಿಯತ್ತ ಹೆಚ್ಚಿನ ಗಮನವನ್ನು ಕೊಟ್ಟಂತೆ ತೋರಲಿಲ್ಲ. ಹೊಟೇಲಿನ ಹೊರ ಬಾಗಿಲಿನ ಬಳಿಯಲ್ಲಿರುವ ಜವಾನನ ಮಾತ್ರ, ಆತನ ಕುತ್ತಿಗೆಗೆ ಕೈಕೊಟ್ಟು ಹೊಟೇಲಿನ ಹೊರಗೆ ತಳ್ಳಿಬಿಟ್ಟನು.

ಹೊಟೇಲಿನ ಮೆಟ್ಟಲುಗಳಿಂದ ಧಾವಿಸಿ ಇಳಿದ ಸುಬ್ಬನು ಸುರಕ್ಷಿತವಾಗಿ ಮಾರ್ಗಕ್ಕಿಳಿದೊಡನೆ, ರಥಬೀದಿಯನ್ನು ಬಿಟ್ಟುಹೊರಟನು. ಕೇವಲ ದೇಹ ಎೞ್ಛಿಕ ವಿಚಾರವು ಆತನ ಕಾರಾಗೃಹವಾಸ ಯೋಜನೆಗೆ ಅನುಕೂಲವಿಪ್ಪಂತೆ ತೋರಲಿಲ್ಲ. ಆತನು ಏನಾದರೂ ಬೇರೊಂದು ಉಪಾಯವನ್ನು ಚಿಂತಿಸತಕ್ಕದ್ದ.

ಮುಂದೆ ಸ್ವಲ್ಪ ಮುಂದೆ ಒಂದು ಕನ್ನಡಿಯ ಕಪಾಟಿನಲ್ಲಿ ಥಳಥಳನೆ ಹೊಳೆಯುತ್ತಿದ್ದ ಬೆಳ್ಳಿಯ ಸಾಮಗ್ರಿಗಳು ಕಣ್ಣುಗಳನ್ನು ಕುಕ್ಕುವಂತಿದ್ದುವು. ಒಂದು ಕಲ್ಲನ್ನು ಸುಬ್ಬನು ಕಪಾಟಿಗೆ ಗುರಿಯಿಟ್ಟು ಹೊಡೆದನು. ಕನ್ನಡಿ ಜಯದ್ರಥನ ಪಿತನಾದ ವೃದ್ಧಕ್ಷತ್ರನ ತಲೆಯೋಪಾದಿ ಸಹಸ್ರ ಚೂರಾಯಿತು! ಒಡನೆ ಒಂದು ನೂರು ಜನರು ಜಮೆಯಾದರು. ಒಬ್ಬ ಪೋಲೀಸಿನವನೂ ಬಂದನು. ಸುಬ್ಬನು 'ಕಿಸೆಯೊಳಗೆ ಕೈಗಳನ್ನು ತುರುಕಿಸಿ ನಿಂತು, ಕೆಂಪು ಟೊಪ್ಪಿಯವನನ್ನು ನೋಡಿ ಮುಗುಳ್ನಕ್ಕನು.

'ಯಾರವ ಕಪಾಟನ್ನು ಒಡೆದ ಪೋಕರಿ? ಎಲ್ಲಿರುವನಾತನು?' ಪೋಲೀಸಿನವನು ಉಗ್ರ ಬಗೆಯಿಂದ ವಿಚಾರಿಸಿದನು.

'ಸ್ವಾಮಿ, ಆ ಕೆಲಸವನ್ನು ಮಾಡಿದವನು ನಾನೇ. ಗೊತ್ತಿಲ್ಲವೇ ನಿಮಗೆ? ಒಂದುತ್ತರವಿತ್ತು ಸುಬ್ಬನು ಆ ಜನಸಂದಣಿಯಿಂದ ಮುಂದೆ ಬಂದು, ಪೋಲೀಸ್ ಅಧಿಕಾರಿಯ ಸಮ್ಮುಖದಲ್ಲಿ ನಿಂತನು.

ಪೋಲಿಸಿನವನು ಸುಬ್ಬನನ್ನು ಕಣ್ಣೆತ್ತಿ ಕೂಡ ನೋಡಲು ನಿರಾಕರಿಸಿದನು. ಅನ್ಯಾಯವನ್ನು ಮಾಡಿದ ಅಪರಾಧಿಗಳು ನ್ಯಾಯದೇವತೆಯ ಅಸ [illegible] ಬಲ್ಲರೆ? ಆ [illegible] ಕಾಲಿಗೆ ಬಿದ್ದು ಹೇಳುವುದೇ ನಿಶ್ಚಯ. [illegible] ದ ಸುಬ್ಬನು ಅಪರಾಧಿಯೆಂಬುದನ್ನು ಪೋಲೀಸಿನವನು [illegible] ದಾದನು. ದಂಡದಲ್ಲಿ ಒಬ್ಬ ಮನುಷ್ಯನು ಒಂದು ಮೋಟಾರನ್ನು ಬೆಂಬತ್ತಿ ಓಡುವುದನ್ನು ಕಂಡ ಆತನು ಕೈಯಲ್ಲಿದ್ದ ಬೆತ್ತ [illegible] ಸುತ್ತ ಅತ್ತ ಕಡೆ ಧಾವಿಸಿದನು. [illegible] ಸುಬ್ಬು ಹೃದಯುವನ್ನುಚಪ್ಪರಿಸಿ, ಸುಬ್ಬನು ಮೆಲ್ಲನೆ ಮುಂದೆ ಹೊರಟನು.

ರಸ್ತೆಯ [illegible] ಭಾಗದಲ್ಲಿ ಒಂದು ಸಣ್ಣ 'ಬೀಡಾ ಬೀಡಿ' ಅಂಗಡಿ. ಅದರ ಸಮೀಪ ಹೋಗಿ ನಿಂತು ಸುಬ್ಬನು ಒಂದು ಹರಿವಾಣದಲ್ಲಿದ್ದ ಕೆಲವು ಬೀಡಗಳನ್ನು ತೆಗೆದು ಕಿಸೆಯಲ್ಲಿ ತರುಕಿಸಿದನು. ಒಂದನ್ನು ತೆಗೆದು ಬಾಯಿಯಲ್ಲಿ ಹಾಕಿ ಜಗಿಯತೊಡಗಿದನು. ಬಳಿಕ ಕೆಲವು ಬೀಡಿಗಳನ್ನೂ ತೆಗೆದು ಜೇಬಿನಲ್ಲಿ ಸೇರಿ ಹಾಕಿ ಆ ಗದಿಯವನಿಗ [illegible] ಹೊರಟನಾತನು.

ಇದೇನು [illegible] ವನು ಸುಬ್ಬನನ್ನು [illegible] ದನು. ಸುಬ್ಬನು [illegible] "ಯಾಕಯ್ಯಾ, ನನ್ನನ್ನು [illegible] ಒಬ್ಬ ಪೋಲೀಸನನ್ನಾದರೂ ಕರೆ [illegible] ಎ [illegible] ಬಾಯಿ ತೆರೆದು [illegible] ವನ ಆ ತೆರೆದ ಬಾಯಿಯಲ್ಲಿ ತನ್ನ ವಚನಾಮೃತವನ್ನು ಸುರಿಸಿಬಿಟ್ಟನು.

"ನಿನ್ನಂತಹ ಮೂರುಕಾಸಿನವನಿಗೆ ಪೋಲೀಸಿನವನೇಕೆ? [illegible] ಯವನು ಕೆಳನೆಗೆದು, ಸುಬ್ಬನ ಕಿಸೆಯಲ್ಲಿದ್ದ ಸಾಮಗ್ರಿಗಳೆಲ್ಲವನ್ನು ಕಸಕೊಂಡು ಕತ್ತನ್ನು ನೀಡಿ ಬಾತುಕೋಳಿಯಂತೆ 'ನಡೆ ಇಲ್ಲಿಂದ' ಎಂದು ಒದ್ದು, ಒದೆದನು.

ಸುಬ್ಬನು ಮಣ್ಣಿನಲ್ಲಿ ಉರುಳಿದನು. ಬಿದ್ದವನೇ ಎದ್ದು ಉಟ್ಟ ವಸ್ತ್ರವನ್ನೊಮ್ಮೆ ಜಾಡಿಸಿದನು. ಕಾರಾಗೃಹವಾಸವೆಂಬುದು ಆಕಾಶಗೋಪುರಗಳಂತೆ ಅಸಾಧ್ಯವಾಗಿ ತೋರಿತಾತನಿಗೆ. ಮಾರ್ಗದಲ್ಲಿ ಹೋಗುತಿದ್ದ ಪೋಲೀಸಿನವನೊಬ್ಬನು ಈತನ ಪರಿಸ್ಥಿತಿಯನ್ನು ಕಂಡು ನಕ್ಕು ಮುನ್ನಡೆದನು.

ಪುನಃ ಮುಂಚಿನ ಧೈರ್ಯವನ್ನು ತಂದುಕೊಳ್ಳಬೇಕಾದರೆ ಸುಬ್ಬನು ಹತ್ತಿಪ್ಪತ್ತು ಮಾರು ದೂರ ನಡೆಯಬೇಕಾಯಿತು. ಈ ಸಲ ಆತನಿಗೆ ಒಂದು ಒಳ್ಳೇ ಸಂದರ್ಭವು ದೊರೆಯಿತು. ಓರ್ವ ತರುಣಿಯು ಒಂದು ಅಂಗಡಿಯ ಮುಂದುಗಡೆ ನಿಂತು, ಒಳಗೆ ಕನ್ನಡಿಯ ಕಪಾಟಿನಲ್ಲಿ ಪ್ರದರ್ಶನಿಕ್ಕಿಟ್ಟ ಸಾಮಾನುಗಳನ್ನು ನೋಡುತ್ತಿದ್ದಳು. ಸ್ವಲ್ಪ ದೂರದಲ್ಲಿ ಒಬ್ಬ ದಿಂಡೆ ಪೋಲೀಸಿನವನು ಬಂದು ಲಾಟನಿನ ಕಂಭಕ್ಕೆ ಒರಗಿ ನಿಂತುಕೊಂಡಿದ್ದನು.

ಆ ಸ್ತ್ರೀಯ ಮುಂದುಗಡೆ ಹೋಗಿ ಆಕೆಗೆ ಕುಚೇಷ್ಟೆ ಮಾಡಬೇಕೆಂದು ಸುಬ್ಬನು ಬಗೆದನು. ಹಾಗೆ ಮಾಡಿದರೆ ಆ ಲಾಟನಿನ ಕಂಭಕ್ಕೆ ಅಂಟಿದಂತೆ ಆತು ನಿಂತುಕೊಂಡಿದ್ದ ಪೋಲೀಸಿನವನು ತಾನಾಗಿ ಬಂದು ಆತನ ಕೈಗಳನ್ನು ಹಿಡಿದೆಳೆಯುವನೆಂದೂ ಊಹಿಸಿದನಾತನು. ಒಮ್ಮೆ ಪೋಲೀಸಿನವನು ಬಂದು ಆತನ ಕೈಗಳನ್ನು ಹಿಡಿದನೆಂದರೆ ಮತ್ತೆ ಜೈಲಿನಲ್ಲಿ ಒಂದು ಸ್ಥಾನ ಆತನಿಗೆ ರಿಜರ್ವ್ ಮಾಡಿದಂತೆಯೇ ಸರಿ.

ಸುಬ್ಬನು ತನ್ನ ವೇಷ ಭೂಷಣಗಳನ್ನೆಲ್ಲ ಸರಿಪಡಿಸಿಕೊಂಡು, ಬೈತಲೆಯನ್ನು ಕೈಯಿಂದ ಬಾಚಿ, ಬಹಳ ಬೆಡಗಿನಿಂದ ಆ ಸ್ತ್ರೀಯಿದ್ದೆಡೆಗೆ ನಡೆದನು. ಆಕೆಯನ್ನು ಮಿಕಿ ಮಿಕಿ ನೋಡುತ್ತ ಕಣ್ಣರೆಪ್ಪೆಗಳನ್ನು ಹೊಡೆದನು, ಕೆಮ್ಮಿದನು, ನಕ್ಕನು—ವಿಕಟನಾಟಕವೆಲ್ಲವನ್ನೂ ಅಭಿನಯಿಸಿದನು. ಆಗ ತನ್ನನ್ನೇ ನೋಡುತ್ತಿದ್ದ ಪೋಲೀಸಿನವನನ್ನು ಕಣ್ಣಿನ ಕುಡಿನೋಟದಿಂದ ಈಕ್ಷಿಸಲು ಆತನು ಮರೆಯಲಿಲ್ಲ. ತರುಣಿಯು ಸ್ವಲ್ಪ ಹಿಂದೆ ಸರಿದು ಎಂದಿನಂತೆ ಕಪಾಟಿನಲ್ಲಿದ್ದ ವಸ್ತುಗಳನ್ನು ನೋಡತೊಡಗಿದಳು. ಸುಬ್ಬನು ಧೈರ್ಯದಿಂದ ಮುಂದೆ ಬಂದು ಆಕೆಗೆ ಮುನ್ನುಡಿಯೆಸಿ,

"[illegible] ಯೇ, ಇನ್ನು ಹೊತ್ತಾಯಿತು ಮನೆಗೆ ಹೋಗೋಣ" ಎಂದನು. ಪೋಲೀಸಿನವನು [illegible] ತನ್ನ ಕತ್ತಲೇ ಇದ್ದನು. ಆ ತರುಣಿಯು ಒಮ್ಮೆ ಪೋಲೀಸಿನವನತ್ತ ಕಣ್ಣುಹೊರಳಿಸಿದಾಗಲಂತೂ — ಸುಬ್ಬನಿಗೆ ತನ್ನ ಕಾಮಿತ [illegible] ದಂತೆ ಸಿದ್ಧ! ಈಗಾಗಲೇ ಆತನ ಮನಸಿನಲ್ಲಿ ಕಾರಾಗೃಹವಾಸದ ಶಾಖವು ಮೈಗೆ ತಾಗಿದಂತೆ [illegible] ತೊಡಗಿತು. ಆಗಲೇ ಆ ತರುಣಿಯು ತನ್ನ ಬಲಗೈಯನ್ನು ಚಾಚಿ ಸುಬ್ಬನ ಕೈ ಹಿಡಿದೆಳೆದು, "ನಾನು ಆಗಲೆ ಬರುತ್ತಿದ್ದೆ. ಆದರೆ ಆ ಹಾಳು ಪೋಲೀಸಿನವನು ನೋಡುತ್ತಿದ್ದನು. ಇನ್ನು ತಡಮಾಡಬೇಡಿ" ಎಂದು ಮಂದಹಾಸವನ್ನು ಬೀರಿ ಉತ್ತರವಿತ್ತಳು. ಮರಕ್ಕೆ ಸುತ್ತಿಕೊಂಡು [illegible] ಸ್ತ್ರೀ [illegible] ಆತನ ಮೈಗೆ ಅಂಟಿಕೊಂಡಂತೆ ಹಿಡಿದೆಳೆಯ ತೊಡಗಲು ಸುಬ್ಬನು [illegible] ತಿರಸ್ಕಾರದಿಂದ [illegible] ಮುನ್ನಡೆದನು. ಮಾರ್ಗದಲ್ಲಿ ಹೋಗುತ್ತಿದ್ದ ಜನರೆಲ್ಲರೂ ಆ ದೃಶ್ಯವನ್ನು ನೋಡುತ್ತ ನಗುತ್ತಿದ್ದರು. ಸುಬ್ಬನು [illegible] ದ ನಾಚಿಕೆ [illegible] ಅಧೋಮುಖನಾಗಿ ಹೋಗುತ್ತಿದ್ದನು. [illegible] ಕೇವಲ ಒಂದು ಸ್ವಪ್ನದಂತೆ ಕಳೆದಿತು!

ಸ್ವಲ್ಪ ದೂರ ಹೋದೊಡನೆ ಸುಬ್ಬನು ಮೊಗವೆತ್ತಿ ನೋಡಿದನು. ಮಾರ್ಗದಲ್ಲಿ ಯಾರ ಸುಳಿವೂ ಇಲ್ಲದುದನ್ನು ಕಂಡು ತಕ್ಷಣ ಆ ತರುಣಿಯ ಹಿಡಿತದಿಂದ ಬಿಡಿಸಿಕೊಂಡು, ನಾಗಾಲೋಟದಿಂದ ಓಡತೊಡಗಿದನು. ಓಡಿ ಓಡಿ ದಣಿದು, ಒಂದು ಓಣಿಯಲ್ಲಿ ಒಂದೆಡೆ ನಿಂತುಕೊಂಡನು. ಜನರು ಶಾಂತತೆಯಿಂದ ಅತ್ತಿತ್ತ ಹೋಗುತ್ತಿದ್ದರು. ಆದರೆ ಆತನ ಎದೆಯಲ್ಲಿ ಮಾತ್ರ ಅವಲಕ್ಕಿ ಕುಟ್ಟಿದಂತಾಗುತ್ತಿತ್ತು. ಅದೊಂದು ಬಗೆಯ ಅಂಜಿಕೆಯು ಆತನನ್ನು ಆವರಿಸಿತ್ತ. ಆತನು ಏನೂ ಮಾಡಿದರೂ ಪೋಲೀಸರೂ ಆತನನ್ನು ಹಿಡಿಯಲಾರರೇಕೆ? ಅನೇಕ ವಿಧಗಳಲ್ಲಿ ಆತನು ಕಾನೂನು ಭಂಗ ಮಾಡಿ ನೋಡಿದನು. ಆದರೆ ಸರಕಾರದವರು ಅತ್ತ ಲಕ್ಷ್ಯ ಕೊಟ್ಟಂತೆ ತೋರುವುದಿಲ್ಲ. ಸರಕಾರ ನಿರಪರಾಧಿಗಳಾದ ಪ್ರಜೆಗಳನ್ನು ತುರಂಗಗಳಲ್ಲಿ ತುಂಬುವರು. ದೇವರು ಕೊಟ್ಟ ಸಮುದ್ರದ ನೀರನ್ನು ತೆಗೆದು ಉಪ್ಪು ಮಾಡಿದರೆ ಕೈಗೆ ಕೋಳಗಳನ್ನು ತೊಡಿಸುವರು. ಸ್ವದೇಶಹಿತಕ್ಕಾಗಿ ದುಡಿದರೆ, ನಿರ್ಗತಿಕ ಬಡಪಾಯಿ ನಾಯಿಗಳನ್ನು ಬಡಿಯುವಂತೆ, ಲಾಠಿಗಳಿಂದ ತಲೆ ಹೊಡೆಯುವರು. ಈ ಸರಕಾರದ ಮಹಿಮೆಯನ್ನು ಯಾರು ಬಲ್ಲ? ಪರಮಾತ್ಮನ ಲೀಲೆಯಂತೆ ಸರಕಾರದ ವರ್ತನೆಯು ವಿಚಿತ್ರವಾದುದೇ ಸರಿ. ಇಲ್ಲದಿದ್ದರೆ ಅಪರಾಧಿಯಾದ ಸುಬ್ಬನನ್ನು ಒಬ್ಬ ಪೋಲೀಸಿನವನೂ ಹಿಡಿಯುವ ಸಾಹಸವನ್ನು ಮಾಡಲೊಲ್ಲನೇಕೆ?

ಎಷ್ಟಾದರೂ ಹಠವಾದಿ ಸುಬ್ಬನು ಮೆಲ್ಲನೆ ಅಂಗಡಿಯ ಮುಂದುವರಿದನು. ದೂರದಲ್ಲಿ ಒಬ್ಬ ಪೋಲೀಸಿನವನು ನಿಂತುಕೊಂಡಿದ್ದನು. ನ್ಯಾಯದೇವತೆಯ ಆ ಪ್ರತಿನಿಧಿಯನ್ನು ಕಂಡೊಡನೆ ಉನ್ಮಾದನಂತೆ ಓಡಿಹೋಗಿ ಸುಬ್ಬನು ಆತನಿಗೊಂದು ಕಪಾಳಕ್ಕೆ ಕೊಟ್ಟನು. ಪೋಲೀಸಿನವನು ಹೆದರಲಿಲ್ಲ. ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಒಂದೆರಡು ಹತ್ತು ಪೆಟ್ಟುಗಳನ್ನು ಕೊಟ್ಟು, 'ತೊಲಗು ಹುಚ್ಚ!' ಎಂದು ಗರ್ಜಿಸಿ, ಸೊಂಟ ಮೇಲೆ ಹಿಡಿದು ಒತ್ತಡವೆ ನೂಕಿ ಬಿಟ್ಟನು.

ಪೂರ್ಣ ನಿರಾಶನಾಗಿ ಸುಬ್ಬನು ಅಲ್ಲಿಯೇ ಒಂದೆಡೆ ಕುಳಿತುಕೊಂಡನು. ನಿಜವಾಗಿಯೂ ಈತನೀಗ ಹುಚ್ಚನಂತಾಗಿದ್ದನು. ಇಲ್ಲದಿದ್ದರೆ ಒಬ್ಬ ಪೋಲೀಸಿನವನಾದರೂ ಆತನನ್ನು ಹಿಡಿಯಲಾರನೇಕೆ? ಬಗೆಬಗೆಯ ಅನ್ಯಾಯ ಕೃತ್ಯಗಳನ್ನು ಮಾಡಿದುದಾಯಿತು, ದೊರೆತ ಶಿಕ್ಷೆ ಮಾತ್ರ ಸೊನ್ನೆ. ಅಳಿಯತನವನ್ನು ಹೊಂದುವೆನೆಂದಿದ್ದ ಸುಬ್ಬನ ಲೊಗಟಿನ ಚಪ್ಪರವೆಲ್ಲ ಕುಸಿದುಬಿತ್ತು. ಆದರೂ ನಿರಾಶನಾಗದೆ 'ಬಂದದ್ದು ಬರಲಿ, ಗೋವಿಂದನ ದಯೆ ಒಂದಿರಲಿ' ಎಂದುಸುರಿ, ಸುಬ್ಬನು ಪುನಃ ಎದ್ದು ನಿಂತು, ವಸ್ತ್ರವನ್ನೆಲ್ಲ ಸರಿಪಡಿಸಿ ಮುಂದೆ ತನ್ನ ಕಾರ್ಯಸಿದ್ಧಿಗಾಗಿ ಹೊರಟನು.

ಒಂದು ಜವಳಿ ಅಂಗಡಿಯಲ್ಲಿ ಒಬ್ಬ ಮನುಷ್ಯನು ಕುಳಿತುಕೊಂಡು ಸಿಗರೇಟನ್ನು ಸೇದುತ್ತಿದ್ದನು. ಒಂದು ಹೊಸ ಮಿಶನ್ ಕೊಡೆಯು ಆತನ ಬಳಿಯಲ್ಲೇ ಮಡಿಸಿತ್ತು. ಸುಬ್ಬನು ಅಲ್ಲಿಗೆ ಹೋಗಿ, ಕೊಡೆಯನ್ನು ಕೈಕೊಳ್ಳಿರಿಸಿ, ಬಾಲ ಬಿಡಿಸಿ ಕುಣಿಯುವ ನವಿಲಿನಂತೆ ಎದೆಯನ್ನುಬ್ಬಿಸಿ ಠೀವಿಯಿಂದ ಮುಂದೆ ನಡೆದೇ ಬಿಟ್ಟನು. ಆ ಮನುಷ್ಯನು ಸಿಗರೇಟನ್ನು ಅಲ್ಲಿಯೆ ಬಿಸುಟು ಸುಬ್ಬನನ್ನು ಹಿಂಬಾಲಿಸಿದನು.

"ಅಯ್ಯ ನನ್ನ ಕೊಡೆ!" ಎಂದು ಗದರಿಸಿದನವನು.

'ನಿನ್ನ ಕೊಡೆ! ಎಲ್ಲಿಯ ಕೊಡೆ! ನಿನ್ನದೆಂತಹುದೇ!!' ಸುಬ್ಬನು ತುಚ್ಛೀಕಾರದಿಂದ ಕಣ್ಣುಗಳನ್ನು ಕೆರಳಿಸಿ ನುಡಿದನು. 'ಹಾಗಾದರೆ ಒಬ್ಬ ಪೋಲೀಸಿನವನನ್ನೇಕೆ ಕರೆಯುವುದಿಲ್ಲವೆ? ಅಗೋ, ಅಲ್ಲೊಬ್ಬ ಪೋಲೀಸಿನವನು ನಿಂತಿರುವನು ನೋಡು—ಕರೆ ಆತನನ್ನು.''

ಕೊಡೆಯ ಅಸಾಮಿಯು ತನ್ನ ನಡಿಗೆಯನ್ನು ಮೆಲ್ಲನೆ ಮಾಡಿದನು. ಸುಬ್ಬನು ಈ ಸಾರಿಯಾದರೂ ಕೈದಿಯಾಗುವುದು ಖಂಡಿತವೆಂದು, ಮೆಲ್ಲನೆ ನಡೆಯ ತೊಡಗಿದನು. ಪೋಲೀಸಿನವನು ಕುತೂಹಲಪೂರ್ವಕವಾಗಿ ಇಬ್ಬರನ್ನೂ ನೋಡುತ್ತಿದ್ದನು.

'ಹಾಗಲ್ಲವಯ್ಯಾ,'' ಕೊಡೆವಾಲನೆಂದ, "ನೋಡಿ, ಈ ಲೋಕದಲ್ಲಿ ಯಾರೂ ತಪ್ಪಿಬೀಳುವುದಿದೆ. ಆ ಕೊಡೆ ನನ್ನದಲ್ಲವೆ?—ನನಗೆ ನೆನಪಿಲ್ಲ. ನಾನು ಈ ದಿನ ಬೆಳಗ್ಗೆ ಕೋರ್ಟಿನ ವಿಲಾಸಕ್ಕೆ ಹೋಗಿದ್ದೆ. ಅಲ್ಲಿ ನನ್ನದೆಂದೇ ಭಾವಿಸಿ ಈ ಕೊಡೆಯನ್ನು ಹಿಡಿದುಕೊಂಡು ಬಂದಿರಬಹುದು. ಅದು ನಿಮ್ಮದಾದರೆ ನೀವು.. ನೀವು ''

"ಇದು ನನ್ನ ಕೊಡೆ ಖಂಡಿತ"

ಸುಬ್ಬನು ಗುಡುಗಿ, ಕಣ್ಣುಗಳಿಂದ ಕಿಡಿಗಳನ್ನು ಸೂಸಿದನು.

ಮೋಜಿ ಕೊಡೆವಾಲನು ಹಿಂದಿರುಗಿದನು. ಸುಬ್ಬನು ಪೂರ್ವಕ್ಕೆ ತಿರುಗಿದನು. ಕೊಡೆಯನ್ನು ಅಲ್ಲಿಯೇ ಒಂದು ಚರಂಡಿಯಲ್ಲಿ ಎಸೆದನು. ಆತನಿಗೆ ಕೋಪ ಬಂದಿತ್ತು. ಮುಖಗಿನ ಕುದಿಯು ರಾಮಪ್ಪನ ಕೊಕ್ಕಿನಂತೆ ಕೆಂಪಗಾಗಿತ್ತು. ಜಗತ್ತಿನಲ್ಲಿರುವ ಪೋಲೀಸು ಜಾತಿಯ ಎಲ್ಲಾ ಜನರನ್ನೂ ಆತನು ಮನಸ್ಸಿನಲ್ಲಿ ನಿಂದಿಸಿದನು. ಪೋಲೀಸರ ಕೈಸೇರಬೇಕೆಂದು ಆತನು ಎಷ್ಟು ಸಾಧಿಸಿದರೂ ಅವರು ಆತನನ್ನು ತಮ್ಮ ಅರಸನಂತೆ ಸನ್ಮಾನಿಸುವರು. ಸುಬ್ಬನಿಗೆ ಕೋಪ ಬಂದಾಗ ವ್ಯಯ ಕೋಮವೆಲ್ಲವೂ ನವಿರೇಳುವುದು. ಆಗ ಏನು ಮಾಡುವುದೆಂದು ತೋಚದೆ ಆತನ ನಿಂತಲ್ಲಿಯೇ ಥರಥರನೆ ಕಂಪಿಸುವನು.

ಸ್ವಲ್ಪ ಸಮಯದಲ್ಲಿ ಮೈಯ ನಡುಕವು ನಿಲ್ಲಲು, ಕೋಪವು ಶಾಂತವಾಗಲು, ಒಂದು ನಿರ್ಜನವಾದ ಓಣಿಯಲ್ಲಾತನು ಇಳಿದನು. ತುಸು ವಿಶ್ರಾಂತಿಯನ್ನು ತೆಗೆದುಕೊಳ್ಳಲೆಂದು ಸ್ಥಳವನ್ನು ಹುಡುಕ ತೊಡಗಿದನು. ಸ್ವಲ್ಪ ಮುಂದೆ ಒಂದು ಪಾಳು ಗುಡಿಯಿದ್ದಿತು. ಗುಡಿಯ ಒಳಗಿನಿಂದ ಭಟ್ಟರ ಮಂತ್ರೋಚ್ಚಾರಣೆಯ ಶಬ್ದವೂ, ಗಂಟಾರವವೂ, ಗಾಳಿಯಲ್ಲಿ ತೇಲಿಕೊಂಡು ಬಂದು ಸುಬ್ಬನ ಶ್ರವಣೇಂದ್ರಿಯದಲ್ಲಿ ಪ್ರವೇಶಿಸುತಿತ್ತು. ಅವುಗಳನ್ನು ಕೇಳಿ ಆತನಿಗೆ ಮೈ ಪುಳಕಿತವಾಯಿತು.

ಅಂತರಿಕ್ಷದಲ್ಲಿ ನಿಶಾಪತಿಯು ಪ್ರಕಾಶಮಾನವಾಗಿ ಪ್ರಶಾಂತತೆಯಿಂದ ಮಿನುಗುತ್ತಿದ್ದನು. ಜನಸಂಚಾರವು ಹೆಚ್ಚುಕಡಿಮೆ ಇದ್ದಿಲ್ಲವೆನ್ನಬಹುದು. ಅಲ್ಲೊಂದು ಪಕ್ಷಿ, ಇಲ್ಲೊಂದು ಸುಂಡಿಲಿ ಮಾತ್ರ ತಮ್ಮ ಕೂಗಿನಿಂದ ಪ್ರಕೃತಿಯ ಮೌನವನ್ನು ಭಂಗಗೊಳಿಸುತಿದ್ದುವು. ಗಾಳಿಯು ತಂಪಾಗಿ ಬೀಸುತಿತ್ತು. ಅದರ ತಣ್ಣಗೆ ಸ್ಪರ್ಶದಿಂದ, ನಡೆನಡೆದು ಬಾಯಾರಿ ಬಸವಳಿದು ಹಸಿದ ಸುಬ್ಬನಿಗೆ ಅಮೃತಪಾನವನ್ನು ಮಾಡಿದಷ್ಟು ಆನಂದವಾಯಿತು. ಸೃಷ್ಟಿಕರ್ತನ ಲೀಲಾವಿಶೇಷವನ್ನು ನೆನೆದು, ಆತನ ನೆಲೆಯಾದ ಆಹಾಳು ಗುಡಿಯೊಳಗೆ ಭಕ್ತಿಭಾವದಿಂದ ಇಣಿಕಿ ನೋಡಿದನು. ಅವನ ಮನಸ್ಸು ಉನ್ಮತ್ತವಾಯಿತು. ಅದೊಂದು ಬಗೆಯ ವೈರಾಗ್ಯವು ಆತನಲ್ಲಿ ಮೂಡಿತು.

ಹೀಗೆ ಹೊತ್ತು ಹೋಗುತ್ತ ಆತನಲ್ಲಿ ಒಂದು ಅಪೂರ್ವ ಮಾರ್ಪಾಟಾಯಿತು. ತಾನೇಕೆ ಆಹಾಳ ಗುಡಿಯ ಕಿಟಕಿಯಿಂದ ಒಳಗೆ ಇಣಿಕಿನೋಡುತ್ತಿರುವೆನೆಂದು ಆತನಿಗೆ ತಿಳಿಯಲಿಲ್ಲ. ಒಂದ ಗುಪ್ತ ಶಕ್ತಿಯು ಹಾಗೆ ಮಾಡಲು ತನ್ನನ್ನು ಪ್ರೇರೇಪಿಸುವಂತೆ ಆತನಿಗೆ ಭಾಸವಾಯಿತು. ಆಗಲೆ ತನ್ನ ಹಿಂದಿನ ದಿನಗಳ ಚಿತ್ರವು ಆತನ ಕಣ್ಣುಗಳಿಗೆ ಕಟ್ಟಿದಂತಾಯಿತು. ಎದೆಂಭಸದಿಂದ ಪ್ರಕೋಪಿಸಿತೊಡಗಿತು. ಬಾಲ್ಯದ ಆಟಪಾಠಗಳು ಯೌವನದ ಹೊಲ್ಲ ಆಶಾಕಾಂಕ್ಷೆಗಳು, ಈಗಿನ ಹೀನಸ್ಥಿತಿ ಎಲ್ಲವೂ ಆತನ ಕಣ್ಣಪರದೆಯಲ್ಲಿ ನಲಿದು ಮರೆಯಾದುವು.

ಆತನ ಕಣ್ಣುಗಳಲ್ಲಿ ನೀರು ಇಳಿಯಿತು, ಎದೆ ಕುದಿಯ ತೊಡಗಿತು. ಮನಸ್ಸಿನಲ್ಲಿ ತನ್ನ ನೀಚವಾಸನೆಗಳನ್ನು ದೂರ ಮಾಡಲು ದುರ್ಧರ ತುಮುಲಕ್ಕಾರಂಭವಾಯಿತು. ಇನ್ನು ಪಾಪವನ್ನು ಮಾಡಲಾರೆನೆಂದು ಬಗೆದನಾತನು. ಮಹತ್ವವೆಂಬುದರ ತಿರುಳು ಇಂದು ತಿಳಿಯಿತಾತನಿಗೆ. ಇನ್ನೇಕೆ ನೀಚ ಜೀವನವನ್ನು ಸಾಗಿಸುತ್ತಿರಬೇಕು? ಕೆಲಸ ಕೈ ಮಿರಿಲ್ಲ, ಇನ್ನೂ ಸವ ಯ ವಿದೆ, ತುಂಬಿದ ಯೌವನವಿದೆ, ನಾಳೆ ಪೇಟೆಗೆ ಹೋಗಿ ಒಂದು ಕೆಲಸವನ್ನು ಸಂಪಾದಿಸುವುದು. ಆದಿಪ್ಪರ ಸಾಕು ಸತ್ಯಶೀಲನಾದ ಕಷ್ಟಜೀವಿಗೆ ಯಾರ ತಾನೆ ಕೆಲಸವನ್ನು ಕೊಡಲಿಕ್ಕಿಲ್ಲ? ಸುಬ್ಬನಿನ್ನು ಯಾರೋ ಭುಜಗಳ ಮೇಲೆ ಕೈಯಿಟ್ಟಂತೆ ಸುಬ್ಬನಿಗೆ ಭಾಸವಾಯಿತು. ಥಟ್ಟನೆ ಹಿಂದಿರುಗಿ ನೋಡಿದನಾತನು. ಪೋಲೀಸಿನವನು!

"ಎಲಾ, ಇಲ್ಲೇನು ಮಾಡುತ್ತಿರುವೆ?" ಪೋಲೀಸಿನವನ ಪ್ರಶ್ನೆ. "ಏನಿಲ್ಲ"

ಹಾಗಾದರೆ ನನ್ನೊಡನೆ ಬಾ''

o o o o o

ಮರುದಿನ 'ಮೂರು ತಿಂಗಳ ಕಠಿಣಸಜೆ' ಎಂದು ಆ ಉತ್ತರ ಪೀಠದ ಮೇಲೆ ಪ್ರತಿಷ್ಠಿತನಾದ ಮುಂಡಾಸು ಮೂವತ್ತು ಮೊಳದ ಮಹಾತ್ಮನು ಗಟ್ಟಿಯಾಗಿ ಕೂಗಿ ಹೇಳಿದನು.

ಊಟದ ನಂತರ ನೋವು ಉಂಟಾಗುವುದನ್ನು ತಡೆಯಿರಿ

ತಲೆ ತಿರುಗುವುದು, ಗಂಟಲಲ್ಲಿ ಉರಿತ, ವಾಯು ಇತ್ಯಾದಿ ಹೊಟ್ಟೆನೋವು, ಉದರಪೀಡೆಗಳುಂಟಾಗುವುದು ಊಟವಾದ ನಂತರ.

ಈ ತರದ ಸಂಕಟಗಳುಂಟಾಗುವುದು ಹಾಳು ಹೊಟ್ಟೆಯಿಂದ. ನಿಮ್ಮ ಹೊಟ್ಟೆಯನ್ನು ಸುಖವಾದ ರೀತಿಯಲ್ಲಿ ನಿರ್ಮಲಗೊಳಿಸುವ ಒಂದೇ ಒಂದು ಉಪಾಯವೆಂದರೆ, ಇನೊಸ್ 'ಫ್ರುಟ್ ಸಾಲ್ಟ್'ನ Eno's 'Fruit Salt' ಒಂದು ಗ್ಲಾಸನ್ನು ಕುಡಿಯುವುದು. ಊಟವನ್ನು ರುಚಿಸಲು, ಇನೊಸ್ ಅನುಕೂಲ ಮಾಡಿಕೊಡುವುದು.

ಜಗತ್ತಿನ ಎಲ್ಲಾ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟು, ಉತ್ತಮ ಪರಿಪಕ್ವವಾದ ಹಣ್ಣಿನಲ್ಲಿರುವ ಉತ್ತಮ ಗುಣಗಳಿರುವ ಪದಾರ್ಥಗಳು ಇನೊಸ್ ಫ್ರುಟ್ ಸಾಲ್ಟ್ Eno's Fruit Salt' ನಲ್ಲಿವೆ. ಇನೋ ಸೇವನೆಯಿಂದ ಖರ್ಚು ಕಡಿಮೆ. ಎಲ್ಲಾ ಕಡೆಗಳಲ್ಲಿ ಮೂರು ಪರಿಮಾಣದಲ್ಲಿ ಮಾರಾಟವಾಗುತ್ತದೆ.

ನಕಲಿ ಮಾಲನ್ನು ತಡೆಯಬೇಡಿರಿ. ಖಾತ್ರಿಯಾದ ಫ್ರುಟ್ ಸಾಲ್ಟ್ ಬಾಟ್ಲಿಯಲ್ಲಿ ಮಾರಲ್ಪಡುತ್ತದೆ. ಈ ಮಾದರಿಯ ಪೆಕಿಂಗ್ ಮಾತ್ರ ಶ್ರೇಷ್ಠವಾದುದೆಂದು ನಮ್ಮ 70 ವರ್ಷದ ಅನುಭವ ಸಿದ್ಧಾಂತವಾಗಿರುತ್ತದೆ.

EVK 5

THE

Canara Banking Corporation, Udipi, Ltd.

INCORPORATED IN BRITISH INDIA
ESTD 1906

Head Office: UDIPI, South Canara.

ANNOUNCEMENT.

A Branch of the CORPORATION
will be opened
at

ARNI
(N. Arcot Dt.)
Shortly

Total Resources Exceed Rs. 62 Lakhs.

7 O'CLOCK

SLOTTED BLADE

ಸೆವೆನೊಕ್ಲೋಕ್ ಮಾರ್ಕಿನ ಬ್ಲೇಡುಗಳು ಅತಿ ಅಗ್ಗವಾದ ಅತ್ಯುತ್ತಮ ಬ್ಲೇಡುಗಳು. ಅವುಗಳ ಬಾಯಿ ಒಳ್ಳೆ ಹರಿತವಾಗಿದ್ದು ಚೊಕ್ಕಟವಾದ ತ್ರಾಸವಿಲ್ಲದ ಕ್ಷೌರಗಳನ್ನು ಕೊಡಬಲ್ಲುವು. ಅವುಗಳ ಬಾಕ್ಸಿನ ಒಳಗೆ ಹಳೆ ತರದ ಬ್ಲೇಡುಗಳಿಗಿಂತ ಇವು ಉತ್ತಮವಾದವುಗಳು.



8 ಆಣೆಗಳಿಗೆ ಬ್ಲೇಡುಗಳು 10

THE

Bank of Mangalore Ltd.,

MANGALORE.

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest

For 3 months		3½%
„ 6		4%
„ 12		5%
24	& upwards	5½%

Interest Payable Quarterly

Saving Bank deposit** 3½% **on daily balances.

All kinds of banking business transacted

ಕಡಿತ ಮತ್ತು ಕಜ್ಜಿಗಳಿಗೆ ಮನೆವೈದ್ಯ ಪಕ್ಕನೆ ಸಂಭವಿಸುವ ಅವಘಡಗಳಿಂದ ಜ್ಯಾಂಬಕು ನಿತ್ಯದ ಅವಶ್ಯವಾಗಿರುತ್ತದೆ.

ಕಡಿತಗಳನ್ನು ಅಥವಾ ಕಜ್ಜಿಗಳನ್ನು ಅವುಗಳಷ್ಟಕ್ಕೆ ಬಿಟ್ಟುಬಿಟ್ಟರೆ, ರಕ್ತಕ್ಕೆ ವಿಷವೇರುವ ಅಪಾಯವು ಬಂದೊದಗುವುದು, ಆದುದರಿಂದ ಕಡಿತಗಳನ್ನೂ ಕಜ್ಜಿಗಳನ್ನೂ ವಿಷಹಾರಿ ಜಾಂಬಕ್ ಮುಲಾಮನ್ನುಪಯೋಗಿಸಿ ಗುಣಪಡಿಸಿರಿ. ಜಾಂಬಕ್ಕಿನಲ್ಲಿರುವ ವನಸ್ಪತಿ ತೈಲಗಳು ನಿಮ್ಮ ಚರ್ಮದ ಅಡಿಯಲ್ಲಿರುವ ಗ್ರಂಥಿಗಳನ್ನು ಸೇರಿ ರೋಗವನ್ನು ನಿವಾರಿಸುತ್ತದೆ, ಉರಿತವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ವಿಷಕಾರಿ ರೋಗಾಣುಗಳನ್ನು ನಾಶ ಮಾಡುತ್ತದೆ. ಕಲೆಯನ್ನು ಬಿಡದೆ ಗುಣಪಡಿಸುತ್ತದೆ.

ಎಲ್ಲಾ ದವಾಖಾನೆಗಳಲ್ಲಿ ಜಾಂಬಕ್ ರೂ ಒಂದರ ಪ್ರಕಾರ ಮತ್ತು 2-4-0 ಪ್ರಕಾರ ಮಾರಾಟವಾಗುತ್ತೆ

ಏಜಂಟರು

ಮೆಸರ್ಸ್ ದಂಥಾ ಎಂಡ್ ಕೋ ಪಾರ್ಕ್, ಮದ್ರಾಸು

ಸ್ಯಾಂಪಲ್ ಕೇಳಬ್ಯಾಡಿರಿ

ಜಾಂಬಕ್

Zam-Buk

S. U. N. & Co.,

Silk Merchants,

Chaukhamba, BENARES CITY

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ಕುಬುಸ ಬೇಕಾದರೆ ನಮ್ಮ ... ಈಗ ಕಮಿ ... ಸುಲಭ ಜಾತಿ ... 18 ಮೊಳದ 2½ ಅಗಲದ ಸಣ್ಣ ಬುಟ್ಟಿ ಶೀರೆಗಳು 1½ ... 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಶೀರೆಗಳು ರೂ 35ರಿಂದ ರೂ 55 ವರೆಗೆ ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35ರ ವರೆಗೆ ಚೀಟಿ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾಗುವುದು

ವಿಳಾಸ —

ಸೋಮಣಿ ನಾರಾಯಣಾಚಾರ್ಯ,
ಚೌಕಂಬಾ ಬನಾರಿಸ್ ಸಿಟಿ

ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ, ನಿಮ್ಮ ಸೌಂದರ್ಯವನ್ನೂ ಆರೋಗ್ಯವನ್ನೂ ವೃದ್ಧಿಗೊಳಿಸುವ ಗುಣಗಳು ಇದರಲ್ಲಿವೆ

ಲಿಮ್ಡಾ ಸೋಪು

ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ-ಮದ್ರಾಸು

ಒದಗಿಸಿಕೊಡುವವರು—

ಸೇಟ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

(*Sd*) **V. V. Giri,**
Minister of Labour

1-10-1937

Bhuvanendra Products Ltd, Katapady, S. Kanara

ತಮ್ಮಿಂದಲೇ ಸಂಭವಿಸದಂಥ ಭಯಂಕರ ಘಟನೆಗಳನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು, ಚಿಂತಾಗ್ನಿಯಿಂದ ಸುಟ್ಟು ಸುಣ್ಣವಾಗುವ ಬಹಳ ಜನರು ನಮ್ಮಲ್ಲಿರುತ್ತಾರೆ. ಸಂಕಷ್ಟಗಳು ಬಂದಾಗ ಅವುಗಳಿಂದ ಪಾರಾಗುವ ಶಕ್ತಿ ಸಾಮರ್ಥ್ಯಗಳು ನಮಗೆ ಸ್ವಾಭಾವಿಕವಾಗಿ ಬರುತ್ತವೆ. ಆದ್ದರಿಂದ ಭವಿಷ್ಯದ ಕುರಿತು ಆಲೋಚಿಸುತ್ತ, ಕೊರಗುಕೊಳ್ಳುವದು ಮೂರ್ಖತನವಾಗದೆ. ಇಂದಿನ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನಗಳನ್ನು ಮಾಡುವದು ಬುದ್ಧಿವಂತರ ಲಕ್ಷಣವಾಗಿರುವದು.

ಜಾತಿಭೇದವು ಹೋಗಲಿ ಆದರೆ ವರ್ಗಭೇದವು ಇರಲಿ

ತೀವ್ರಗಾಮಿ ಮತ್ತು ಮಂದಗಾಮಿಗಳೊಳಗೆ ಅಧಿಕಾರ ಪದವಿಗಳನ್ನು ಪಡೆಯುವದಕ್ಕೋಸ್ಕರ ಘನಘೋರ ಸಂಗ್ರಾಮವು ನಡೆಯುತ್ತಲಿದೆ. ಆಲೋಚಿಸಿದರೆ ಈ ಎರಡು ತುಂಡುಗಳಿಂದ ಪ್ರಪಂಚಕ್ಕೆ ಅಹಿತವಲ್ಲದೆ ಹಿತವಾಗಲಾರದು. ಈ ಎರಡು ತುಂಡುಗಳು ಕೇವಲ ತಮ್ಮ ಸ್ವಾರ್ಥಸಾಧನೆಗಾಗಿಯೇ ಬಗೆ ಬಗೆಯ ವೇಷಗಳನ್ನು ಹಾಕಿಕೊಂಡು ಅರಿಯದ ಜನರ ಕಣ್ಣಿಗೆ ಮಣ್ಣು ಹಾಕುತ್ತವೆ. ಆದ್ದರಿಂದ ಇವುಗಳ ಕುರಿತು ಜನತೆಯು ಎಚ್ಚರದಿಂದ ಇರುವದು ಅವಶ್ಯಕವಾಗಿದೆ, ಮಧ್ಯಮಿಗಳು ಜನತೆಗೆ ಸರಿಯಾದ ಮಾರ್ಗವನ್ನು ತೋರಿಸಿಕೊಡುವದು ಅಗತ್ಯವಾಗಿದೆ ಎಂದು 'ಕುತೂರಿಯು ಕೃಸರ-ಇ-ಹಿಂದ್' ಪತ್ರಿಕೆಯಲ್ಲಿ ತುತೂರಿಯನ್ನು ಊದಿದೆ. ವಾಚಕರು ಅದನ್ನು ಕಿವಿಗೊಟ್ಟು ಕೇಳಿದರೆ ಪ್ರಯೋಜನವಿದೆ. ಆದ್ದರಿಂದ ಅದು ಊದಿದ ಮಾತುಗಳನ್ನು ಕೆಳಗೆ ಕೊಟ್ಟಿರುತ್ತದೆ

★

ಕಲಹ ಪ್ರಸಂಗ

ಸಮಾಜವು ತೀವ್ರಗಾಮಿಯ ಮತ್ತು ಮಂದಗಾಮಿಯ ಎಂಬ ಎರಡು ದೊಡ್ಡ ತುಂಡುಗಳಾಗಿ ವಿಭಕ್ತವಾಗಿದೆ. ಇವುಗಳೊಳಗೆ ತೀವ್ರ ಸ್ಪರ್ಧೆ–ಸಂಘರ್ಷಗಳಿವೆ. ಎರಡೂ ತುಂಡುಗಳು ಒಂದರಮೇಲೊಂದು ಅಧಿಕಾರ ಸ್ಥಾಪನೆಗೆ ಪ್ರಯತ್ನಿಸುತ್ತಲಿವೆ. ಆಸ್ತಿವಂತರು ಮತ್ತು ಬಂಡವಾಳಿಗರು ತಮ್ಮ ಆಸ್ತಿ ಪಾಸ್ತಿ ಬಂಡವಾಳಗಳ ರಕ್ಷಣೆಗಾಗಿಯೂ, ಶ್ರಮಜೀವಿಗಳು, ತಮ್ಮ ಹಕ್ಕು ಅಧಿಕಾರಗಳ ಸ್ಥಾಪನೆಗಾಗಿಯೂ, ತಮ್ಮ ತಮ್ಮೊಳಗಿನ ಭೇದ ಭಾವನೆಗಳನ್ನು ಮರೆತು ಒಂದಾಗುತ್ತಿದ್ದಾರೆ, ಮತ್ತು ತಮ್ಮ ಕಾರ್ಯಸಾಧನೆಗಾಗಿ ಸರಕಾರವನ್ನೇ ಕೈವಶ ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಈ ಎರಡು ತುಂಡುಗಳಲ್ಲಿ ಯಾವುದಕ್ಕೆ ವಿಜಯವಾದರೂ ಲೋಕಕ್ಕೆ ಕ್ಷೇಮವಾಗುವದಿಲ್ಲ. ಮುಂದಿನ ಅಪಾಂತರಗಳಿಂದ ಪ್ರಪಂಚವನ್ನು ಕಾಪಾಡಲಿಕ್ಕೆ ತೀವ್ರಗಾಮಿ — ಮಂದಗಾಮಿಗಳೊಳಗಿನ ಸಂಘರ್ಷವನ್ನು ನಿವಾರಿಸುವದು ಮಧ್ಯಗಾಮಿಗಳ ಕರ್ತವ್ಯವಾಗಿರುವದು. ಎಲ್ಲ ಮಧ್ಯಗಾಮಿಗಳು ಪ್ರತಿಷ್ಠಿತರೂ ಅಧಿಕಾರ ಸಂಪನ್ನರೂ ಆಗಿರುತ್ತಾರೋ ಆ ರಾಷ್ಟ್ರವು ಮಾತ್ರ ಸುರಕ್ಷಿತವಾಗುವದು; ಅದು ಸುಖ ಶಾಂತಿ ಸಮಾಧಾನಗಳಿಂದ ವಿರಾಜಮಾನವಾಗುವದು.

ಶ್ರಮಜೀವಿಗಳನ್ನು ಮನ್ನಿಸಬೇಕು

ಪ್ರಪಂಚದಲ್ಲಿ ದವಸಧಾನ್ಯ ಹಣಕಾಸು ತುಂಬಿತುಳುಕುತ್ತಿರುವವಾದರೂ ಅದರಲ್ಲಿ ನಿರುದ್ಯೋಗ ಸಮಸ್ಯೆಯು ಮಹದಾಕಾರವನ್ನು ತಾಳಿರಲಿಕ್ಕೆ ತೀವ್ರಗಾಮಿಗಳ ಸೂತ್ರಚಾಲನೆಯು ಕಾರಣವಾಗಿದೆ. ಅವರು ಸರಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ತಮಗೆ ಅನುಕೂಲವಾದ ಕಾಯಿದೆಕಾನೂನುಗಳನ್ನು ಮಾಡಿದ್ದಾರೆ ಯಾರ ಸಹಕಾರ ಸಹಾಯಗಳನ್ನು ಪಡೆದು ಅವರು ಆಸ್ತಿವಂತರೂ ಶ್ರೀಮಂತರೂ ಆಗಿರುತ್ತಾರೋ, ಅಂಥ ಶ್ರಮಜೀವಿಗಳಿಗೆ ತಮ್ಮ ಲಭ್ಯದ ಒಂದು ಚಿಕ್ಕ ಅಂಶವನ್ನಾದರೂ ಕೊಡಲಿಕ್ಕೆ ಅವರು ಸಿದ್ಧರಿರುವದಿಲ್ಲ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿರುವ ತೀವ್ರಗಾಮಿಗಳು ಒಂದಾಗಿ ಶ್ರಮಜೀವಿಗಳನ್ನು ಯುದ್ಧಕ್ಕೆ ಕರೆಯುತ್ತಿದ್ದಾರೆ. ಹೊಟ್ಟೆಪಾಡಿನ ಚಿಂತೆಯಿಂದ, ತಮ್ಮ ಹಕ್ಕು ಅಧಿಕಾರಗಳಿಗಾಗಿ ಕಾದಾಡದೆ ಶ್ರಮಜೀವಿಗಳಿಗೆ ಬೇರೆ ಉಪಾಯವು ಇರುವದಿಲ್ಲ, ಆದ್ದರಿಂದ ಇವರೊಳಗೆ ಉಂಟಾಗಿರುವ ಈ ಕಲಹವನ್ನು ನಿವಾರಿಸಿ ಪ್ರಪಂಚದ ಕ್ಷೇಮವನ್ನು ಕಾಪಾಡುವದು ಮಧ್ಯಗಾಮಿಗಳ ಕರ್ತವ್ಯವಾಗಿ ಪರಿಣಮಿಸಿದೆ, ಮಧ್ಯಗಾಮಿಗಳೇ ಇವರಿಗೆ ಮಾರ್ಗದರ್ಶಕರೂ ಆದರ್ಶಪ್ರಾಯರೂ ಆಗಿರಬೇಕು. ಶ್ರಮಜೀವಿಗಳ ನ್ಯಾಯವಾದ ಹಕ್ಕು ಅಧಿಕಾರಗಳನ್ನು ಮನ್ನಿಸಬೇಕಾದ ದಿನಗಳು ಈಗ ಸಮೀಪವಾಗಿವೆ. ಅವರಿಗೆ ಉತ್ಪನ್ನದ ಒಂದು ಪಾಲು ಸಿಕ್ಕಬೇಕಾದ್ದು ನ್ಯಾಯಯುಕ್ತವಾಗಿದೆ.

ಜಾತಿ ಭೇಧವು ಬೇಡ.

ಈ ದಿನಗಳಲ್ಲಿ ವರ್ಗಕಲಹಕ್ಕೆ ಪ್ರೋತ್ಸಾಹವು ದೊರೆಯುತ್ತಲಿದೆಯೆಂದೂ ಯಾರೂ ಹೆದರಬೇಕಾಗಿಲ್ಲ. ನಮ್ಮ ದೇಶವನ್ನು ಅನೇಕಾನೇಕ ಅನರ್ಥಗಳಿಗೆ ಗುರಿಮಾಡಿದ್ದ ಜಾತಿಕಲಹವು ವರ್ಗಕಲಹದಿಂದ ನಿರ್ಮೂಲವಾಗಬಹುದು. ಹೊಟ್ಟೆಯ ಮುಂದೆ ಜಾತಿಯು ಯಾರಿಗೂ ಬೇಡವಾಗಿದೆ. ಹೊಟ್ಟೆಯನ್ನು ತುಂಬಿಸುವದು ಮುಖ್ಯ ಪ್ರಶ್ನೆ. ಮಿಕ್ಕ ಎಲ್ಲ ಪ್ರಶ್ನೆಗಳು ಗೌಣವಾಗಿವೆ. ಜಗತ್ತಿನ ಎಲ್ಲಾ ತೊಂದರೆಗಳಿಗೆ ಹೊಟ್ಟೆಯ ತೊಂದರೆಯು ಪ್ರಧಾನ ಕಾರಣವಾಗಿರುವದೆಂದು ಹೆನ್ರಿ ಫೋರ್ಡನು ಹೇಳಿರುವನು. ನಮ್ಮ ದೇಶದಲ್ಲಿ ಜಾತಿಕಲಹವು ಸರ್ವತ್ರ ಹರಡಿದೆ. ಆದ್ದರಿಂದ ದೇಶವು ಪರಸ್ಪರ ಹೊಡೆದಾಟ ಬಡಿದಾಟಗಳ ರಂಗಸ್ಥಳವಾಗಿ ಪರಿಣಮಿಸಿದೆ. ಅದು ಹಲವು ವಿಧದ ಅತ್ಯಾಚಾರ ಅನಾಚಾರಗಳ ಲೀಲಾಭೂಮಿಯಾಗಿದೆ. ಅದನ್ನೆಲ್ಲ ತಡೆಯುವದಕ್ಕೋಸ್ಕರ ಮಧ್ಯಗಾಮಿಗಳು ವರ್ಗಕಲಹಕ್ಕೆ ಪ್ರೋತ್ಸಾಹ ಕೊಡಬೇಕು. ತೀವ್ರಗಾಮಿಗಳು ಅಥವಾ ಮಂದಗಾಮಿಗಳು ಇವರೊಳಗೆ ಯಾರು ಅಧಿಕಾರಕ್ಕೆ ಬಂದರೂ ದೇಶಕ್ಕೆ ಸುಖವಿಲ್ಲ. ಆದ್ದರಿಂದ ಅವರವರ ಸ್ಥಾನ ಮರ್ಯಾದೆಗಳು ಅವರವರಿಗೆ ದೊರೆತು ಎಲ್ಲರೂ ನ್ಯಾಯ ಪಡೆಯುವಂತೆ ಮಧ್ಯಗಾಮಿಗಳು ಪ್ರಯತ್ನಿಸಬೇಕು.

ವರ್ಗ ಭೇಧವಿರಲಿ.

ಧವಳ ಮತ್ತು ಮತದ ಹೆಸರಿನಲ್ಲಾಗುತ್ತಿರುವ ಅತ್ಯಾಚಾರ ಅನಾಚಾರಗಳನ್ನು ಜನತೆಯು ಇನ್ನೂ ಎಷ್ಟು ಕಾಲ ಸಹಿಸಿಕೊಂಡಿರಬೇಕು? ವಾತಾವರಣವು ಧರ್ಮಾಚಾರ್ಯರು ಮತ್ತು ಸಾಧುಸಂತರ ತಂಟೆತಕರಾರುಗಳಿಂದ ವಿಷಮಯವಾಗಿದೆ. ಈಗ ಯಾವ ಮಾತನ್ನು ವಿಶ್ವಾಸ ತಮ್ಮ ನಂಬಿಕೆಯ ಬಲದಿಂದ ಒಪ್ಪಲಿಕ್ಕಾಗುವದಿಲ್ಲ. ಪ್ರತಿಯೊಂದು ಮಾತನ್ನು ತರ್ಕ ಮತ್ತು ವಿಚಾರದ ಒರೆಗಲ್ಲಿಗೆ ತಿಕ್ಕಿ ಅದರ ಸತ್ಯವನ್ನು ತಿಳಕೊಳ್ಳುವ ವಿಜ್ಞಾನಯುಗವಿದು. ಸಾಧು ರೂಪದಲ್ಲಿರುವ ಧೂರ್ತರು ನಮ್ಮ ದೇಶದಲ್ಲಿ ಅಶಾಂತಿಯನ್ನು ಹರಡಿಸುತ್ತಿದ್ದಾರೆ. ಜಾತಿ ಭೇದವು ಸಮೂಲ ನಾಶವಾಗದೆ ಈ ಧೂರ್ತರ ಆಟವು ಕೊನೆಗಾಣುವದಿಲ್ಲ. ಈಗ ಪ್ರಪಂಚದಲ್ಲಿ ಎಲ್ಲಿಯೂ ಜಾತಿಗೆ ಸ್ಥಾನವಿಲ್ಲ, ನೀತಿಗೆ ಇದೆ. ಆದ್ದರಿಂದ ಒಟ್ಟು ಸಮುದಾಯದ ಒಳಿತಕ್ಕಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ ತಮ್ಮ ತಮ್ಮ ಪಾಲಿಗೆ ಬಂದ ಕಾರ್ಯಗಳನ್ನು ಯಥಾವತ್ತಾಗಿ ಮಾಡುವ ವರ್ಗಗಳು ನಮಗೆ ಬೇಕು. ವರ್ಗಗಳಿಲ್ಲದ ಸಮಾಜವನ್ನು ಕಲ್ಪಿಸಲಿಕ್ಕಾಗುವದಿಲ್ಲ; ಆದರೆ ಜಾತಿಯಿಲ್ಲದ ಸಮಾಜವನ್ನು ಕಲ್ಪಿಸಬಹುದು. ಆದಕಾರಣ ಜಾತಿಭೇಧವು ಹೋಗಲಿ; ಪರಂತು ವರ್ಗ ಭೇಧವು ಇರಲಿ

ಹುಡುಗಿಯೊಬ್ಬಳು ಪ್ರಾಣತ್ಯಾಗ ಮಾಡಿಕೊಳ್ಳಲು ಹೊರಟಳು

ಹುಡುಗನ ವೇಶಹಾಕಿ ಹೊರಟಳು, ಆದರೆ . . . ?

ಪಂಢರಪುರ ಎಂಬಲ್ಲಿ ಒಂದು ಶಾಲೆಯ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಾರದವಳಾದವಳು ಪ್ರಾಣತ್ಯಾಗ ಮಾಡಿಕೊಂಡಿರುವಳು, ಎಂಬುದಾಗಿ ಎಣಿಸಲ್ಪಟ್ಟ ಹುಡುಗಿಯೊಬ್ಬಳು, ಪುರುಷನ ವೇಶದಲ್ಲಿ ರಾಜಬಾಗ ಎಂಬಲ್ಲಿ ದೊರಕಿರುವಳು

ಪರೀಕ್ಷೆಯ ಫಲಿತಾಂಶವು ತಿಳಿದ ಕೂಡಲೆ, ಒಮ್ಮೆ ಪ್ರಾಣತ್ಯಾಗ ಮಾಡಿಕೊಳ್ಳುವ ಆಲೋಚನೆಯು ಆ ಹುಡುಗಿಯಲ್ಲಿ ಉಂಟಾಗಿದ್ದರೂ, ಬಡವನಾದ ತನ್ನ ತಂದೆ ತಾಯಿಗಳ ಪೋಷಣೆ ಬಗ್ಗೆ ಆಕೆಯು ವೇಶ ಮಲ್ಲಟಿ, ರಾಜಬಾಗಿಗೆ ರೈಲ್ವೆಯಲ್ಲಿ ತೆರಳಿ ಉದ್ಯೋಗ ಹುಡುಕುವವಳಾದಳು

ರಾಜಬಾಗಿನಲ್ಲಿ ಪುಣ್ಯಾತ್ಮರೊಬ್ಬರು ಹುಡುಗನೊಬ್ಬನ ಕುರಿತು ಕನಿಕರವಟ್ಟು ಆತನನ್ನು ತನ್ನ ಮನೆಗೆ ಒಯ್ದರು. ಅಲ್ಲಿ ಗುಟ್ಟು ರಟ್ಟಾಯಿತು. ಪ್ರಶ್ನಿಸಲು ಹುಡುಗನ ನಿಜವಾದ ವೇಶವು ತಿಳಿಯಿತು. ಅಲ್ಲಿನ ಮುನ್ಸಿಫರು ಹುಡುಗಿಯ ಸಂಕಟದ ಕುರಿತು ವಾರ್ತೆಯನ್ನು ಕೇಳಿ, ಆಕೆಗೆ ಮುಂದಿನ ವಿದ್ಯಾಭ್ಯಾಸಕ್ಕೆ ಬೇಕಾಗುವ ಸಹಾಯವನ್ನೀಯುವ ಜವಾಬ್ದಾರಿಕೆಯನ್ನು ವಹಿಸಿರುವರು

ಹಾಂಗ್ಕಾಂಗ್ ಮತ್ತು ದಿಪ್ಲೊಮೆಟಿಕ್ ಸಮಾಜಮನ್ನಿಸಿದುದಕ್ಕಾಗಿ, ಧನಾಢ್ಯ ಆಘಾಖಾನರಿಗೆ ತಿಂಗಳು ಒಂದರ 751 ಪವನುಗಳ ಪ್ರಕಾರ ಪನ್ನನು ಬ್ರಿಟಿಷ ಸರಕಾರದಿಂದ ದೊರೆಯುತ್ತದೆಂದು ವಾರ್ತೆಯಿದೆ

ಸಾವಿತ್ರೀ ಮಾತೆಯ
ಕೇಶಚಂದನ ತೈಲ

ಕಳೆದ 75 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು

ವಕೀಲರು, ನ್ಯಾಯಾಧೀಶರು, ವೈದ್ಯರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಆಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ

ತಲೆನೋವನ್ನೂ ದೃಷ್ಟಿಮಾಂದ್ಯವನ್ನೂ ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ, ಅಂಗೈ ಮತ್ತು ಅಡಿಗಳು ಉರಿಯುವ ಪ್ರಕಾರಗಳನ್ನು ಹೋಗಲಾಡಿಸಿ, ಮಿದುಳಿಗೆ ತಂಪಿನಿತ್ತು ಕೊಟ್ಟು, ಕಣ್ಣುನೋವನ್ನು (ಕೆಂಗಣ್ಣು ಮೊದಲಾದುವು) ದೂರಗೊಳಿಸಿ ದೃಷ್ಟಿಯು ಚುರುಕಾಗಿಸಿ, ತಲೆಯಲ್ಲಿ ಕೂದಲ ಬುಡದಲ್ಲಿ ನಾನಾ ಕೊಳೆ ಕಟ್ಟುವ ಹೊಟ್ಟಿಗೆ ಅವಕಾಶಕೊಡದೆ, ಸುಖ ನಿದ್ರೆಯಾಗುವಂತೆಯೂ ನಿದ್ರಾಭಂಗ ಅವಧಿ ಮೊದಲಾದವುಗಳಿಗೆ ಎಡೆಗೊಡದಂತೆಯೂ ಪರಿಣಮಿಸಿ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದಾಗಿದೆ.

ಸ್ನಾನಕ್ಕೆ ಅರ್ಧತಾಸು ಮೊದಲು ತಲೆಗೆ ಹಚ್ಚಿಕೊಳ್ಳುವುದು

ಬೆಲೆ –2 ಔನ್ಸು ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್ ಬಹದ್ದೂರ್ ಎಂ ಕೇಶವಪೈ, ಎಮ್. ಡಿ, ಓ ಬಿ ಇ. ಇವರ ಅಭಿಪ್ರಾಯ:

ಶ್ರೀನಿವಾಸ, 4 ಪೆಟ್ರಿಸನ್ ರೋಡ್,
ಮೌಂಟ್ ರೋಡ್, ಮದ್ರಾಸು.
27–3–1938

ಶ್ರೀಯುತ ಬಾಳಿಗರೇ,

ನೀವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ ಮಾತೆಯ ಕೇಶಚಂದನ ತೈಲವನ್ನು ನಾನು ಉಪಯೋಗಿಸಿರುವೆನು. ಅದು ತಲೆಗೆ ತಂಪನ್ನುಂಟುಮಾಡುವ ಗುಣವುಳ್ಳದು. ಎಷ್ಟೋ ವರ್ಷಗಳಿಂದ ಆಗಾಗ ನನಗೆ ನಿದ್ರಾಭಂಗದ ಬಾಧೆಯಿತ್ತು, ಕಳೆದ ಸಲ ಈ ಬಾಧೆ ಬಹಳ ಪ್ರಬಲ ರೂಪದಲ್ಲಿತ್ತು. ನಿಮ್ಮ ಈ ಎಣ್ಣೆಯು ನನಗೆ ತುಂಬ ಗಾಢನಿದ್ರೆಯನ್ನು ಅನುಗ್ರಹಿಸಿಯದೆ, ಇದರಿಂದ, ನನ್ನಂತೆ ಈ ಪೀಡೆಯಿಂದ ಬಾಧೆ ಹೊಂದುವ ಇತರರೂ ಇದನ್ನು ಧಾರಾಳವಾಗಿ ಉಪಯೋಗಿಸಬಹುದೆಂದು ನನ್ನ ಶಿಫಾರಸು.

ನಿಮ್ಮ ವಿಶ್ವಾಸಪಾತ್ರನಾಗಿರುವ
(ಸಹಿ)
ಎಮ್. ಕೇಶವ ಪೈ

ನಮ್ಮ ಪ್ರತಿಯೊಂದು ಔಷಧಕ್ಕೂ ಅನೇಕ ಯೋಗ್ಯತಾ ಪತ್ರಗಳು ಬಂದಿರುವುದು.

ಸಾವಿತ್ರಿ ಮಾತೆಯ ಸಿದ್ಧೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ.

ಶ್ರೀ ಬಿ ವೈಕುಂಠ ಬಾಳಿಗ.

Born on 24th June 1858

ಶ್ರೀ ಎಮ್ ಸುಂದರರಾವ್, ಬಿ ಎ., ಎಲ್ ಟಿ, ಇವರ ಅಭಿಪ್ರಾಯ.

ನಿಮ್ಮ ಈ ಮಾರುತೀ ಲೇಹ್ಯವು ನಿಜವಾಗಿಯೂ ಅಮೋಘವಾಗಿದೆ, ಅದನ್ನು ನಾನು ಕ್ಲಪ್ತ ಪ್ರಮಾಣದಲ್ಲಿ ಸೇವಿಸಿಲ್ಲವಾದರೂ, ಸಾಕಾಗ ತುಂಬ ಸಮಯವಾಗಿರುವಷ್ಟು ಉತ್ತಮ ಫಲಗಳು ನನಗೆ ದೊರೆತಿವೆ ನನ್ನ ಮಕ್ಕಳಿಗೆ ಇದು ಅಪ್ಪುವಾಗಿದ್ದು, ಅವು ತಾವಾಗಿ ಈ ಲೇಹ್ಯವನ್ನು ಕೊಡೆಂದು ಕೇಳುತ್ತವೆ. ದೇಹವನ್ನೂ ಮನಸ್ಸನ್ನೂ ಉತ್ತೇಜನಗೊಳಿಸುವುದಕ್ಕೆ ಇದು ದಿವ್ಯ ಔಷಧವೆಂದು ಹೇಳಬಹುದು,

(ಸಹಿ)
ಎಮ್ ಸುಂದರರಾವ್.

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಜರ್
ಸಾವಿತ್ರೀ ಮಾತೆಯ ಔಷಧಗಳ ಮ್ಯಾನೇಜರು,
ಡೊಂಗರಕೇರಿ ರಸ್ತೆ ಮಂಗಳೂರು, ದಕ್ಷಿಣ ಕನ್ನಡ

ಸಾವಿತ್ರೀ ಮಾತೆಯ
ಮಾರುತೀ ಲೇಹ್ಯ

(ದಿವ್ಯ ಸಾಧುವೊಬ್ಬನಿಂದ ಪ್ರಾಪ್ತವಾದದು)

ಇದನ್ನು 1927ನೆ ಇಸ್ವಿ ಎಪ್ರಿಲ್ ತಿಂಗಳಲ್ಲಿ ಮೊದಲು ತಯಾರಿಸಿದ ಬಾಗಿದೆ.

ಇದರಲ್ಲಿ ಅಪೋಷ್ಯವಾದದಿವ್ಯ ಗಿಡಮೂಲಿಕೆಗಳೂ, ಶುಷ್ಕವಾದ ದನದ ಹಾಲು, ಬೆಣ್ಣೆ, ತುಂಡುಮ, ಜೇನು, ಸಕ್ಕರೆ ಸೇರಿಸಿ, ರಾಷ್ಟ್ರವಾಯ ಮಾದಕ ಪದಾರ್ಥಗಳಾಗಲಿ, ಧರ್ಮನಿರುದ್ಧವಾಗಿರುವ ಯಾವ ಬಗೆಯ ಕೊಬ್ಬಾಗಲೀ ಇರುವುದಿಲ್ಲ ಯೌವನಸ್ಥರೂ ಎಷ್ಟೋ ವಯಸ್ಸಿನವರದ್ದ ರೂ–ಬಾಲಕರು ಸಹ ಇದನ್ನು ಸೇವನೆ ಮಾಡಬಹುದು, ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸು ಆರೋಗ್ಯ ಚೇತನಗಳನ್ನು ವರ್ಧಿಸುವುದು ದೇಹದ ಉಷ್ಣವನ್ನು ಹೋಗಲಾಡಿಸಿ, ಬಹುಮೂತ್ರ, ಸಿಹಿಮೂತ್ರ ಮೊದಲಾದವುಗಳನ್ನು ಗುಣಪಡಿಸಿ, ಹಸಿವನ್ನು ಹೆಚ್ಚಿಸಿ, ಅಂಗಾಂಗಗಳನ್ನು ದೀರ್ಘ ಬಲಾದಿಗಳಿಂದ ಸಂಪೂರ್ಣ ಪುಷ್ಟಿಯನ್ನಾಗಿ ಫಲಿಸಿ ತರುತ್ತದೆ.

ಬೆಲೆ– ಅರ್ಧ ರಾತ್ತಲ ಸೀಸೆಗೆ ರೂ 1–8–0
ಒಂದು ರಾತ್ತಲ ,, ರೂ. 3–0–0

ವಿಶೇಷ ಈ ಲೇಹ್ಯವನ್ನು ಸಾವಿತ್ರೀ ಮಾತೆಯ ಚಂದನ ಕೇಶ ತೈಲವನ್ನು ಉಪಯೋಗಿಸುವಾಗಲೆ ಸೇವಿಸಿದಲ್ಲಿ ಉಸ್ನಾದ ರೋಗವು ಕೂಡ ಗುಣವಾಗುವುದು.

ಐದು ರೂಪಾಯಿಗೆ ಕಡಿಮೆಯಾದ ಬೆಲೆಯ ಔಷಧಗಳನ್ನು ವಿ. ಪಿ. ಮೂಲಕ ರವಾನಿಸುವುದಿಲ್ಲ, ಪ್ರತಿಯೊಂದು ಸಲ ಬೇಕಾಗುವ ಔಷಧದ ಬೆಲೆಯ ಹಣವನ್ನು ಮುಂಗಡ ತೆರಬೇಕಾಗಿದೆ, ಭದ್ರವಾಗಿ ಕಟ್ಟಿ ಕಳಿಸುವ, ರೈಲ್ವೆ ಯಾ ಇತರ ರವಾನಾ ಖರ್ಚು ಪ್ರತ್ಯೇಕ

ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು, ವಿಳಾಸ, ರವಾನಾ ಕ್ರಮ, ಅತಿ ಸಮೀಪದ ಪೋಸ್ಟ್ ಅಥವಾ ರೈಲ್ವೆ ಆಫೀಸು ಮೊದಲಾದವನ್ನು ಪ್ರತಿ ಸಲ ಔಷಧ ಆರ್ಡರುಗಳು ಶುದ್ಧಾಕ್ಷರಗಳಿಂದ ನಮೂದಿಸಬೇಕಾಗಿದೆ.

KANARESE

ಹಿಟ್ಲರನ ಕುರಿತು ಆಗಾಖಾನರ ಶ್ಲಾಘನೆ

ಶಾಂತಿಸ್ಥಾಪನಾಚಾರ್ಯನಂತೆ!

ಆ ಕುರಿತು ಲಂಡನ್ ಪತ್ರಿಕೆಯೊಂದರ ಟೀಕೆ

"ನಾನೂ ನನ್ನ ಮಡದಿಯೂ ಹಿಟ್ಲರನಿಂದ ಆಹ್ವಾನಿಸಲ್ಪಟ್ಟಾಗ ನಾವು ರಾಜಕೀಯದ ಯಾವತ್ತು ವಿಚಾರಗಳನ್ನೆತ್ತಿ ಮಾತನಾಡಲಿಲ್ಲ. ಹಿಟ್ಲರು ಓರ್ವ ಮಹಾವ್ಯಕ್ತಿಯು ಎಂಬ ಅಭಿಪ್ರಾಯದಿಂದ ಕೂಡಿದವರಾಗಿ ನಾವು ಅವನ ಸದನದಿಂದ ಹೊರಡುವವರಾದೆವು. ಜರ್ಮನಿಯು ಜನಾಂಗಮಂಡಳದ ಹೊರಗಿರಲಿ, ಒಳಗಿರಲಿ, ಹಿಟ್ಲರನು ಶಾಂತಿಸ್ಥಾಪನಾಚಾರ್ಯನು. ಯಾಕೆ? ಹಿಟ್ಲರನು ಈವರೆಗೆ ಹಾಕಿಕೊಂಡ ಯೋಜನೆಗಳು ನಡೆಯಬೇಕಾದರೆ ಶಾಂತಿಯು ಅತ್ಯಗತ್ಯವು" ಎಂಬುದಾಗಿ ಆಘಾಖಾನರು ಬಹೀರ್ ದೇಶದ ಒಂದು ಪತ್ರಿಕೆಯಲ್ಲಿ ಬರೆದಿರುವರು.

ಹಿಟ್ಲರನಿಂದ ಸ್ಥಾಪಿಸಲಾದ ನೂತನ ಜರ್ಮನಿಯ ಕುರಿತು ಖಾನರು ಬಹಳ ಶ್ಲಾಘನೆಯನ್ನು ಮಾಡಿರುವರು.

ಮಹತ್ತರ ಸುಖವು ಜರ್ಮನಿಯಲ್ಲಿದೆ

"ನಿಜವಾದ ಸಾಮ್ಯವಾದವು ಕಾರ್ಯತಃ ನಡೆಯುವುದೆಂದರೆ ಅದು ಹಿಟ್ಲರನ ಜರ್ಮನಿಯಲ್ಲಿ. ಇನ್ನು ಸ್ವಲ್ಪ ಸಮಯದಲ್ಲೇ ಅಲ್ಲಿ ವರ್ಗವಾರು ಭೇದಗಳಿರಲಾರವು. ಧನಾಢ್ಯರಾಗಲಿ, ಸಮೃದ್ಧಿಶಾಲಿಗಳಾಗಲಿ, ದೇಶದ ಆಡಳಿತವನ್ನು ನಡೆಯಿಸುವುದಿಲ್ಲ. ವರ್ಗವಾರು ಭೇದಗಳು ಮಾಯವಾಗುತ್ತಿರುವಾಗ, ಅತ್ಯಂತ ಮೂಢತನವೆನಿಸುವ ಎಲ್ಲರೂ ಸಮಸಮಾನರೆಂಬ ಭಾವವು ಅಲ್ಲಿ ಉಂಟಾಗಲಿಲ್ಲ. ಕೆಲವರು ಮಿಕ್ಕವರಿಗಿಂತ ಜಾಣರೆಂದು ಹೇಳಿಕೊಂಡರೆ, ಅವರಿಗೆ ಒಳ್ಳೆ ಪಾರಿತೋಷಕಗಳು ಕೊಡಲಾಗುವವು. ಹೆಚ್ಚಿನವರಿಗೆ ಮಹತ್ತರದ ಸುಖಲಾಭವುಂಟಾಗುವ ತರದ್ದು ಹಿಟ್ಲರನ ಧೋರಣೆಯು."

ಗಾಂಧಿಜಿಯವರ ತತ್ವದ ಮೇಲೆ ಆಧಾರಣೀಯವಾದ ಸಾಮ್ಯವಾದವೆ ಶ್ರೇಷ್ಠವಾದುದು

ಡಾಕ್ಟರ್ ಘೋಷರ ಭಾಷಣ

ಬಂಗಾಳದ ಮಾನ ಬ್ಯಾನರ್ ರಾಜಕೀಯ ಪರಿಷತ್ತಿನಲ್ಲಿ ಭಾಷಣವೀಯುತ್ತಾ ಡಾ. ಪ್ರಫುಲ್ಲ ಚಂದ್ರ ಘೋಷರು ಹೀಗೆಂದರು.

ಮಹಾತ್ಮಾಗಾಂಧಿಗಳ ನಿಜವಾದ ಸಾಮ್ಯವಾದದ ಅಡಿಗಲ್ಲನ್ನು ಹಾಕುತ್ತಿರುವರು. ಎಲ್ಲರೂ ಅವರ ಅಹಿಂಸಾಮಯ ಸಾಮ್ಯವಾದೀ ಆದರ್ಶಗಳನ್ನು ಅನ್ವಯಿಸತಕ್ಕದು. ನಿಜವಾದ ಸಾಮ್ಯವಾದವು ಅಹಿಂಸೆಯಿಂದ ಮಾತ್ರ ಸಾಧಿಸಲು ಸಾಧ್ಯವು. ಹಿಂಸೆ ಮತ್ತು ಸಾಮ್ಯವಾದವೆಂಬವುಗಳು ಎರಡು ವಿರೋಧ ಅರ್ಥವುಳ್ಳವುಗಳು.

ಹಿಂಸೆಯ ಮೂಲಕ ಒಂದು ದೇಶದ ಗತಿಯ ರಚನೆಯಾಗುವುದರಲ್ಲಿ ಮಹಾಜನರ ... ಸ್ವಾತಂತ್ರ್ಯವಾಗಿ ರಚನೆಯಾದ ರಾಜ್ಯದಲ್ಲಿಯೂ ... ದಬ್ಬಾಳಿಕೆಯು ದೆ ನಡೆವ ಬದಲು ... ಹಿಂಸೆಯಿಂದ ದೊರೆತ ಸ್ವಾತಂತ್ರ್ಯವು, ಸ್ವಾತಂತ್ರ್ಯವಲ್ಲ.

ಹಿಂದಗಳು ... ಮುಸ್ಲಿಮರು ಕಿಸಾನರು, ಕೆಲಸಗಾರರು, ವ್ಯಾಪಾರಿಗಳು, ಎಲ್ಲರಿಗೂ ಒಂದೇ ತರದ ಸ್ವಾತಂತ್ರ್ಯ ಬೇಕು. ವಿವಿಧ ತರದವರಿಗಾಗಿ ವಿವಿಧ ತರದ ಸ್ವಾತಂತ್ರ್ಯಗಳಿರುವುದಿಲ್ಲ.

ಎಲ್ಲರಿಗೂ ಕಾಂಗ್ರೆಸಿನಲ್ಲಿ ಪ್ರವೇಶವಿದೆ. ಎಲ್ಲರೂ ಕಾಂಗ್ರೆಸ್ಸಿನೊಡನೆ ಸೇರುವಂತೆ ಕಾಂಗ್ರೆಸ್ಸು ಬಲವಾದ ಪ್ರಯತ್ನಗಳನ್ನು ಮಾಡುತ್ತಿದೆ. ಕಾಂಗ್ರೆಸ್ಸು ಎಲ್ಲಾ ಜನರ ಪ್ರಾತಿನಿಧ್ಯ ಸಂಸ್ಥೆಯಾಗಿದೆ.

ಮುಂದೆಂದೂ ಸಂಭವಿಸದಂಥ ಭಯಂ ಕರ ಘಟನೆಗಳನ್ನು ಮನಸ್ಸಿನಲ್ಲಿಯೇ ಕಲ್ಪಿಸಿ ಕೊಂಡು, ಚಿಂತಾಗ್ರಸ್ತರಾದ ನೂರು ಸಣ್ಣ ಮನಸ್ಸಿನ ಬಹಳ ಜನರು ನಮ್ಮಲ್ಲಿರುತ್ತಾರೆ. ಕಷ್ಟಗಳು ಬಂದಾಗ ಅವುಗಳಿಂದ ಪಾರಾ ಗುವ ಶಕ್ತಿ ಸಾಮರ್ಥ್ಯಗಳು ನಮಗೆ ಸ್ವಾಭಾ ವಿಕವಾಗಿ ಬರುತ್ತವೆ. ಅದ್ದರಿಂದ ಭವಿಷ್ಯದ ಕುರಿತು ಆಲೋಚಿಸುತ್ತ, ಕೊರಗುತ್ತಿರುವದು ಅನಾವಶ್ಯಕವಾಗಿದೆ. ಇಂದಿನ ಸಮಸ್ಯೆ ಗಳನ್ನು ಬಿಡಿಸುವ ಪ್ರಯತ್ನಗಳನ್ನು ಮಾಡು ವದು ಬುದ್ಧಿವಂತರ ಲಕ್ಷಣವಾಗಿರುವದು.

ಕಲಹ ಪ್ರಸಂಗ

ಸಮಾಜವು ತೀವ್ರಗಾಮಿಯ ಮತ್ತು ಮಂದಗಾಮಿಯ ಎಂಬ ಎರಡು ದೊಡ್ಡ ತುಂಡು ಗಳಾಗಿ ವಿಭಕ್ತವಾಗಿದೆ. ಇವುಗಳೊಳಗೆ ತೀವ್ರ ಸ್ಪರ್ಧೆ-ಸಂಘರ್ಷಗಳಿವೆ. ಎರಡೂ ತುಂಡುಗಳು ಒಂದರಮೇಲೊಂದು ಅಧಿಕಾರ ಸ್ಥಾಪನೆಗೆ ಪ್ರಯತ್ನಿಸುತ್ತಲಿವೆ. ಅಸ್ತಿವಂತರು ಮತ್ತು ಬಂಡವಾಳಿಗರು ತಮ್ಮ ಆಸ್ತಿ ಪಾಸ್ತಿ ಬಂಡ ವಾಳಗಳ ರಕ್ಷಣೆಗಾಗಿಯೂ, ಶ್ರಮಜೀವಿಗಳು, ತಮ್ಮ ಹಕ್ಕು ಅಧಿಕಾರಗಳ ಸ್ಥಾಪನೆಗಾಗಿಯೂ, ತಮ್ಮ ತಮ್ಮೊಳಗಿನ ಭೇದ ಭಾವನೆಗಳನ್ನು ಮರೆತು ಒಂದಾಗುತ್ತಿದ್ದಾರೆ, ಮತ್ತು ತಮ್ಮ ಕಾರ್ಯಸಾಧನೆಗಾಗಿ ಸರಕಾರವನ್ನೇ ಕೈವಶ ಮಾಡಿಕೊಳ್ಳುವ ಕೆಲಸಮಾಡುತ್ತಿದ್ದಾರೆ. ಈ ಎರಡು ತುಂಡುಗಳಲ್ಲಿ ಯಾವುದಕ್ಕೆ ವಿಜಯ ವಾದರೂ ಲೋಕಕ್ಕೆ ಕ್ಷೇಮವಾಗುವದಿಲ್ಲ. ಮುಂದಿನ ಅನಾಂತರಗಳಿಂದ ಪ್ರಪಂಚವನ್ನು ಕಾಪಾಡಲಿಕ್ಕೆ ತೀವ್ರಗಾಮಿ – ಮಂದಗಾಮಿ ಗಳೊಳಗಿನ ಸಂಘರ್ಷವನ್ನು ನಿವಾರಿಸುವದು ಮಧ್ಯಗಾಮಿಗಳ ಕರ್ತವ್ಯವಾಗಿರುವದು. ಎಲ್ಲ ಮಧ್ಯಗಾಮಿಗಳು ಪ್ರತಿಷ್ಠಿತರೂ ಅಧಿಕಾರ ಸಂ ಪನ್ನರೂ ಆಗಿರುತ್ತಾರೋ ಆ ರಾಷ್ಟ್ರವು ಮಾತ್ರ ಸಂರಕ್ಷಿತವಾಗುವದು, ಅದು ಸುಖ ಶಾಂತಿ ಸಮಾಧಾನಗಳಿಂದ ವಿರಾಜಮಾನವಾಗುವದು.

ಶ್ರಮಜೀವಿಗಳನ್ನು ಮನ್ನಿಸಬೇಕು

ಪ್ರಪಂಚದಲ್ಲಿ ದವಸಧಾನ್ಯ ಹಣಕಾಸು ಸಂಚಿತವಾಗುತ್ತಿರುವವಾದರೂ ಅದರಲ್ಲಿ ನಿರು ದ್ಯೋಗ ಸಮಸ್ಯೆಯು ಮಹದಾಕಾರವನ್ನು ತಾಳಿ ದ್ದಕ್ಕೆ ತೀವ್ರಗಾಮಿಗಳ ಸೂತ್ರಚಾಲನೆಯೇ ಕಾ ರಣವಾಗಿದೆ. ಅವರು ಸರಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ತಮಗೆ ಅನುಕೂಲ ವಾದ ಕಾಯಿದೆಕಾನೂನುಗಳನ್ನು ಮಾಡಿದ್ದಾರೆ. ಸರಕಾರ ಸಹಕಾರ ಸಹಾಯಗಳನ್ನು ಪಡೆದು ಅವರು ಆಸ್ತಿವಂತರೂ ಶ್ರೀಮಂತರೂ ಆಗಿರು ತ್ತಾರೋ, ಅಂಥ ಶ್ರಮಜೀವಿಗಳಿಗೆ ತಮ್ಮ

ಜಾತಿಭೇದವು ಹೋಗಲಿ ಆದರೆ ವರ್ಗಭೇದವು ಇರಲಿ

ತೀವ್ರಗಾಮಿ ಮತ್ತು ಮಂದಗಾಮಿಗಳೊಳಗೆ ಅಧಿಕಾರ ಪದವಿಗಳನ್ನು ಪಡೆಯುವದಕ್ಕೋಸ್ಕರ ಘನಘೋರ ಸಂಗ್ರಾಮವು ನಡೆಯುತ್ತಲಿದೆ. ಆಲೋಚಿಸಿದರೆ ಈ ಎರಡು ತುಂಡುಗಳಿಂದ ಪ್ರಪಂಚಕ್ಕೆ ಅಹಿತ ವಲ್ಲದೆ ಹಿತವಾಗಲಾರದು. ಈ ಎರಡು ತುಂಡುಗಳು ಕೇವಲ ತಮ್ಮ ಸ್ವಾರ್ಥಸಾಧನೆ ಗಾಗಿಯೇ ಬಗೆ ಬಗೆಯ ವೇಷಗಳನ್ನು ಹಾಕಿಕೊಂಡು ಅರಿಯದ ಜನರ ಕಣ್ಣಿಗೆ ಮಣ್ಣು ಹಾಕುತ್ತವೆ. ಅದ್ದರಿಂದ ಇವುಗಳ ಕುರಿತು ಜನತೆಯು ಎಚ್ಚರ ದಿಂದ ಇರುವದು ಅವಶ್ಯಕವಾಗಿದೆ, ಮಧ್ಯಮಗಳು ಜನತೆಗೆ ಸರಿಯಾದ ಮಾರ್ಗವನ್ನು ತೋರಿಸಿಕೊಡುವದು ಅಗತ್ಯವಾಗಿದೆ ಎಂದು 'ಕುತೂರಿಯು ಕೈಸರ-ಇ-ಹಿಂದ್' ಪತ್ರಿಕೆಯಲ್ಲಿ ತುತೂರಿಯನ್ನು ಊದಿದೆ. ವಾಚಕರು ಅದನ್ನು ಕಿವಿಕೊಟ್ಟು ಕೇಳಿದರೆ ಪ್ರಯೋಜನವಿದೆ. ಅದ್ದರಿಂದ ಅದು ಊದಿದ ಮಾತು ಗಳನ್ನು ಕೆಳಗೆ ಕೊಟ್ಟಿರುತ್ತದೆ

★

ಲಭ್ಯದ ಒಂದು ಚಿಕ್ಕ ಅಂಶವನ್ನಾದರೂ ಕೊಡ ಲಿಕ್ಕೆ ಅವರು ಸಿದ್ಧರಿರುವದಿಲ್ಲ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿರುವ ತೀವ್ರಗಾಮಿ ಗಳು ಒಂದಾಗಿ ಶ್ರಮಜೀವಿಗಳನ್ನು ಯುದ್ಧಕ್ಕೆ ಕರೆಯುತ್ತಿದ್ದಾರೆ. ಹೊಟ್ಟೆಪಾಡಿನ ಚಿಂತೆ ಯಿಂದ, ತಮ್ಮ ಹಕ್ಕು ಅಧಿಕಾರಗಳಿಗಾಗಿ ಕಾದಾಡದೆ ಶ್ರಮಜೀವಿಗಳಿಗೆ ಬೇರೆ ಉಪಾ ಯವು ಇರುವದಿಲ್ಲ, ಅದ್ದರಿಂದ ಇವರೊಳಗೆ ಉಂಟಾಗಿರುವ ಈ ಕಲಹವನ್ನು ನಿವಾರಿಸಿ ಪ್ರಪಂಚದ ಕ್ಷೇಮವನ್ನು ಕಾಪಾಡುವದು ಮಧ್ಯ ಗಾಮಿಗಳ ಕರ್ತವ್ಯವಾಗಿ ಪರಿಣಮಿಸಿದೆ. ಮಧ್ಯ ಗಾಮಿಗಳೇ ಇವರಿಗೆ ಮಾರ್ಗದರ್ಶಕರೂ ಆದರ್ಶಪ್ರಾಯರೂ ಆಗಬೇಕು. ಶ್ರಮಜೀವಿ ಗಳ ನ್ಯಾಯವಾದ ಹಕ್ಕು ಅಧಿಕಾರಗಳನ್ನು ಮನ್ನಿಸಬೇಕಾದ ದಿನಗಳು ಈಗ ಸಮೀಪವಾ ಗಿವೆ. ಅವರಿಗೆ ಉತ್ಪನ್ನದ ಒಂದು ಪಾಲ ಸಿಕ್ಕಬೇಕಾದ್ದು ನ್ಯಾಯಯುಕ್ತವಾಗಿದೆ.

ಜಾತಿ ಭೇದವು ಬೇಡ.

ಈ ದಿನಗಳಲ್ಲಿ ವರ್ಗಕಲಹಕ್ಕೆ ಪ್ರೋ ತ್ಸಾಹವು ದೊರೆಯುತ್ತಲಿದೆಯೆಂದು ಯಾರೂ ಹೆದರಬೇಕಾಗಿಲ್ಲ. ನಮ್ಮ ದೇಶವನ್ನು ಅನೇಕಾ ನೇಕ ಅನರ್ಥಗಳಿಗೆ ಗುರಿಮಾಡಿದ ಜಾತಿಕಲ ಹವು ವರ್ಗಕಲಹದಿಂದ ಸಮೂಲನಾಶವಾಗು ವದು. ಹೊಟ್ಟೆಯ ಮುಂದೆ ಜಾತಿಯೂ ಯಾರಿಗೂ ಬೇಡವಾಗಿದೆ. ಹೊಟ್ಟೆಯನ್ನು ತುಂಬಿಸುವದು ಮುಖ್ಯ ಪ್ರಶ್ನೆ. ಮಿಕ್ಕ ಎಲ್ಲ ಪ್ರಶ್ನೆಗಳು ಗೌಣವಾಗಿವೆ. ಜಗತ್ತಿನ ಎಲ್ಲಾ ತೊಂದರೆಗಳಿಗೆ ಹೊಟ್ಟೆಯ ತೊಂದರೆಯು

ಪ್ರಧಾನ ಕಾರಣವಾಗಿರುವದೆಂದು ಹೆನ್ರಿ ಫೋ ರ್ಡನು ಹೇಳಿರುವನು. ನಮ್ಮ ದೇಶದಲ್ಲಿ ಜಾತಿಕಲಹವು ಸರ್ವತ್ರ ಹರಡಿದೆ. ಅದ್ದರಿಂದ ದೇಶವು ಪರಸ್ಪರ ಹೊಡೆದಾಟ ಬಡಿದಾಟಗಳ ರಂಗಸ್ಥಳವಾಗಿ ಪರಿಣಮಿಸಿದೆ. ಅದು ಹಲವು ವಿಧದ ಅತ್ಯಾಚಾರ ಅನಾಚಾರಗಳ ಲೀಲಾ ಭೂಮಿಯಾಗಿದೆ. ಅದನ್ನೆಲ್ಲ ತಡೆಯುವದ ಕ್ಕೋಸ್ಕರ ಮಧ್ಯಗಾಮಿಗಳು ವರ್ಗಕಲಹಕ್ಕೆ ಪ್ರೋತ್ಸಾಹ ಕೊಡಬೇಕು. ತೀವ್ರಗಾಮಿಗಳು ಅಥವಾ ಮಂದಗಾಮಿಗಳು ಇವರೊಳಗೆ ಯಾರು ಅಧಿಕಾರಕ್ಕೆ ಬಂದರೂ ದೇಶಕ್ಕೆ ಸುಖ ವಿಲ್ಲ. ಅದ್ದರಿಂದ ಅವರವರ ಸ್ಥಾನ ಮರ್ಯಾ ದೆಗಳು ಅವರವರಿಗೆ ದೊರೆತು ಎಲ್ಲರೂ ನ್ಯಾಯ ಪಡೆಯುವಂತೆ ಮಧ್ಯಗಾಮಿಗಳು ಪ್ರಯತ್ನಿಸ ಬೇಕು.

ವರ್ಗ ಭೇದವಿರಲಿ.

ಧವಳ ಮತ್ತು ಮುಕದ ಹೆಸರಿನಲ್ಲಾಗು ತ್ತಿರುವ ಅತ್ಯಾಚಾರ ಅನಾಚಾರಗಳನ್ನು ಜನ ತೆಯು ಇನ್ನು ಎಷ್ಟು ಕಾಲ ಸಹಿಸಿಕೊಂಡಿರ ಬೇಕು? ವಾತಾವರಣವು ಧರ್ಮ ಜಾ ಯಂತ್ರ ಮತ್ತು ಸಾಧು ಸಂತರ ತತ್ತ್ವ ಚಿಂತನ ಗಳಿಂದ ವಿಷಮಯವಾಗಿದೆ. ಈಗ ಯಾವ ಮಾತನ್ನು ವಿಶ್ವಾಸ ಮತ [illegible] ಮೇಲೆ ಸತ್ಯವೆಂದ ಒಪ್ಪಲಿಕ್ಕಾಗುವದಿಲ್ಲ. ಪ್ರತಿ ಯೊಂದು ಮಾತನ್ನು ತರ್ಕ ಮತ್ತು ವಿಚಾರದ ಒರೆಗಲ್ಲಿಗೆ ತಿಕ್ಕಿ ಅದರ ಸತ್ಯವನ್ನು ತಿಳಕೊಳ್ಳುವ ವಿಜ್ಞಾನಯುಗವಿದು. ಸಾಧು ರೂಪದಲ್ಲಿ ರುವ ಧೂರ್ತರು ನಮ್ಮ ದೇಶದಲ್ಲಿ ಅಶಾಂತಿ ಯನ್ನು ಹರಡಿಸುತ್ತಿದ್ದಾರೆ. ಜಾತಿ ಭೇದವು ಸಮೂಲ ನಾಶವಾಗದೆ ಈ ದುರಳರ ಆಟವು ಕೊನೆಗಾಣುವದಿಲ್ಲ. ಈಗ ಪ್ರಪಂಚದಲ್ಲಿ ಎಲ್ಲಿಯೂ ಜಾತಿಗೆ ಸ್ಥಾನವಿಲ್ಲ, ನೀತಿಗೆ ಇದೆ. ಅದ್ದರಿಂದ ಒಟ್ಟು ಸಮುದಾಯದ ಒಳ್ಳಿತಕ್ಕಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ ತಮ್ಮ ತಮ್ಮ ಪಾಲಿಗೆ ಬಂದ ಕಾರ್ಯಗಳನ್ನು ಯಥಾವತ್ತಾಗಿ ಮಾಡುವ ವರ್ಗಗಳು ನಮಗೆ ಬೇಕು. ವರ್ಗ ಗಳಿಲ್ಲದ ಸಮಾಜವನ್ನು ಕಲ್ಪಿಸಲಿಕ್ಕಾಗುವ ದಿಲ್ಲ, ಆದರೆ ಜಾತಿಯಿಲ್ಲದ ಸಮಾಜವನ್ನು ಕಲ್ಪಿಸಬಹುದು. ಆದಕಾರಣ ಜಾತಿಭೇದವು ಹೋಗಲಿ, ಪರಂತು ವರ್ಗ ಭೇದವು ಇರಲಿ.

ಹುಡುಗಿಯೊಬ್ಬಳು ಪ್ರಾಣತ್ಯಾಗ ಮಾಡಿಕೊಳ್ಳಲು ಹೊರಟಳು

ಹುಡುಗನ ವೇಶಹಾಕಿ ಹೊರಟಳು, ಆದರೆ . ?

ಪಂಢರಪುರ ಎಂಬಲ್ಲಿ ಒಂದು ಶಾಲೆಯ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂ ದಲಾರದವಳಾದವಳು ಪ್ರಾಣತ್ಯಾಗ ಮಾಡಿಕೊಂ ಡಿರುವಳು, ಎಂಬುದಾಗಿ ಎಣಿಸಲ್ಪಟ್ಟ ಹುಡು ಗಿಯೊಬ್ಬಳು, ಪುರುಷರ ವೇಶದಲ್ಲಿ ರಾಜಬಾ ಗ ಎಂಬಲ್ಲಿ ದೊರಕಿರುವಳು.

ಪರೀಕ್ಷೆಯ ಫಲಿತಾಂಶವು ತಿಳಿದ ಕೂಡ ಲೆ, ಒಮ್ಮೆ ಪ್ರಾಣತ್ಯಾಗ ಮಾಡಿಕೊಳ್ಳುವ ಆ ಲೋಚನೆಯು ಆ ಹುಡುಗಿಯಲ್ಲಿ ಉಂಟಾ ದ್ದರೂ, ಬಡವರಾದ ತನ್ನ ತಂದೆ ತಾಯಿಗಳ ಪೋಷಣೆ ಬಗ್ಗೆ ಆಕೆಯು ವೇಶ ಪಲ್ಲಟಿಸಿ ರಾಜಬಾಗಿನ ಗಿರಣಿಯಲ್ಲಿ ತಿರಳಿ ಉದ್ಯೋಗ ಹುಡುಕುವವಳಾದಳು.

ರಾಜಬಾಗಿನಲ್ಲಿ [illegible] ಹುಡುಗನೊಬ್ಬನ ಕುರಿತು ಸಂಶಯಪಟ್ಟು ಅ ವನನ್ನು ತನ್ನ ಮನೆಗೆ ಒಯ್ದರು. ಅಲ್ಲಿ [illegible] [illegible] ಪ್ರಶ್ನಿಸಲು ಹುಡುಗನ ನಿಜವಾದ ವೇಶವು [illegible] ಹುಡುಗಿಯ [illegible] ಕೇಳಿ, ಆಕೆಗೆ [illegible] ವಿದ್ಯಾಭ್ಯಾಸಕ್ಕೆ [illegible] ಸಹಾಯ [illegible] ಮನ್ನು [illegible]

[illegible] ಡಿಸ್ಟ್ರಿಕ್ಟ ಬೋರ್ಡ [illegible] ಧನಾಢ್ಯ [illegible] ಗಳು [illegible] 751 [illegible] ಪ್ರಕಾರ [illegible] ಸರಕಾರದಿಂದ [illegible] ಕುತ್ತದೆಂದ ವಾರ್ತೆಯಿದೆ.

ಸಾವಿತ್ರೀ ಮಾತೆಯ
ಕೇಶಚಂದನ ತೈಲ

ಕಳೆದ 75 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿ ರುವ ಸುಪ್ರಸಿದ್ಧ ಈ ಕೇಶ ತೈಲವು

ವಕೀಲರು, ನ್ಯಾಯಾಧೀಶರು, ವೈದ್ಯರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಅಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹ ವಾಗಿದೆ.

ತಲೆನೋವನ್ನೂ ದೃಷ್ಟಿಮಾಂದ್ಯವನ್ನೂ ಇದು ಸಂ ಪೂರ್ಣವಾಗಿ ನಿವಾರಿಸ ವುದಾಗಿದೆ. ಅಂಗೈ ಮತ್ತು ಅಡಿ ಗಳು ಉರಿಯುವ ಪ್ರಕಾರಗಳನ್ನು ಹೋಗಲಾಡಿಸ್ಸಿ ಮೈ ಗಳಿಗೆ ತಂಪನ್ನು ಕೊಟ್ಟು, ಕಣ್ಣುನೋವನ್ನು (ಕೆಂಗಣ್ಣು ಮೊದಲಾದುವು) ದೂರಗೊಳಿಸಿ ದೃಷ್ಟಿಯು ಚುರುಕಾ ಗಿಸಿ, ತಲೆಯಲ್ಲಿ ಕೂದಲು ಬುಡದಲ್ಲಿ ನವನಾ ಕೂಡಿ ಬೆಳೆಯುವ ದುದವಕ್ಕೆ ಅವಕಾಶಕೊಡದೆ, ಸುಖ ನಿದ್ರೆಯೂ ಸಿವಂತೆಯೂ ನಿಸ್ತ್ರಾಭಂಗ ಅಜೀರ್ಣ ಮೊದಲಾದ ವುಗಳಿಗೆ ಹೆಸಿಗದಂತೆಯೂ ಪರಿಣಮಿಸಿ, ಮನಸ್ಸಿಗೆ ಉಲ್ಲಾಸವ ನ್ನುಂಟುಮಾಡುವುದಾಗಿದೆ.

ಸ್ನಾನಕ್ಕೆ ಅರ್ಧತಾಸು ಮೊದಲು ತಲೆಗೆ ಹಚ್ಚಿಕೊಳ್ಳುವುದು.
ಬೆಲೆ –8 ಔನ್ಸು ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್ ಬಹದ್ದೂರ್ ಸಂ ಕೇಶವಯ್ಯ, ಎಮ್. ಡಿ, ಓ ಬಿ ಇ., ಇವರ ಅಭಿಪ್ರಾಯ.

ಶ್ರೀನಿವಾಸ, 49 ಹೆರ್ರಿಸನ್ ರೋಡ್,
ಮೌಂಟ್ ರೋಡ್, ಮದ್ರಾಸು
27–3–1938

ಪ್ರಿಯರ ಬಾಳಿಗರೇ,
ತೀವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ

ಸಾವಿತ್ರಿ ಮಾತೆಯ ಸಿದೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ

ಮಾತೆಯ ಕೇಶ ಚಂದನ ತೈಲವನ್ನು ನಾನು ಉಪಯೋ ಗಿಸುತ್ತಲಿರುವೆನು. ಅದು ತಲೆಗೆ ತಂಪನ್ನುಂಟುಮಾಡುವ ಗುಣ ವುಳ್ಳದು. [illegible] ವರ್ಷಗ ಳಿಂದ ಆಗಾಗ ನನಗೆ ದ್ರ ಭಂಗದ ಬಾಧೆಯುತ್ತು ಕಳೆದ ಸಲ ಈ ಬಾಧೆ ಬಹಳ ಪ್ರಬ ಲ ರೂಪದಲ್ಲಿತ್ತು. ನಿಮ್ಮ ಈ ಎಣ್ಣೆಯು ನನಗೆ ತುಂಬ ಗಾಢನಿದ್ರೆಯನ್ನು ಅನುಗ್ರಹಿ ಸಿಬಿಟ್ಟಿ. ಇದರಿಂದ, ನನ್ನಂತೆ ಈ ಪೀಡೆಯಿಂದ ಬಾಧೆ ಹೊಂದುವ ಎತರರ ಇದ ನ್ನು ಧಾರಾಳವಾಗಿ ಉಪ ಯೋಗಿಸಬಹುದೆಂದು ನನ್ನ ತಿಳುವಳಿಕೆ.

ನಿಮ್ಮ ವಿಶ್ವಾಸಪಾತ್ರ ನಾಗಿರುವ
(ಸಹಿ)
ಡಾ. ಕೇಶವ ಪೈ

ನಮ್ಮ ಶ್ರಮೆಯಿಂದು ಔಷಧಕ್ಕೂ ಅನೇಕ ಯೋ ಗ್ಯತಾ ಪತ್ರಗಳು ಬರೆದಿರುವು ದು.

ಶ್ರೀ ಎಮ್. ಸುಂದರರಾವ್, ಬಿ. ಎ., ಎಲ್. ಟಿ, ಇವರ ಅಭಿಪ್ರಾಯ.

ಶ್ರೀ ಬಿ ವೈಕುಂಠ ಬಾಳಿಗ

Born on 24th June 1858

ನಿಮ್ಮ ಈ ಮಾರುತೀ ಲೇಹ್ಯವು ನಿಜವಾಗಿಯೂ ಅ ಮೋಘವಾಗಿದೆ. ಅದನ್ನು ನಾನು ಕ್ಲಿಷ್ಟ ಶ್ರಮದಲ್ಲಿ ಸೇ ವಿಸಿಲ್ಲವಾದರೂ, ಸಾಧಾರಣ ತಿಂಗಳು ಸೇವಿಸಿರುವೆನು. ಉತ್ತಮ ಫಲಗಳು ನನಗೆ ದೊರೆತಿವೆ. ನನ್ನ ಮಕ್ಕಳಿಗೆ ಇದು ಇಷ್ಟವಾಗಿದ್ದು ಅವ್ರ ತಾವಾಗಿ ಈ ಲೇಹ್ಯವನ್ನು ಕೊಡೆಂದು ಕಾಡುತ್ತವೆ. ದೇ ಹವನ್ನೂ ಮನಸ್ಸನ್ನೂ ಉ ತ್ತೇಜನಗೊಳಿಸುವುದಕ್ಕೆ ಇ ದು ದಿವ್ಯ ಔಷಧವೆಂದು ಹೇ ಳಬಹುದು.

(ಸಹಿ)
ಎಮ್ ಸುಂದರರಾವ್

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಸರ್
ಸಾವಿತ್ರೀ ಮಾತೆಯ ಔಷಧಗಳ ವ್ಯಾಲಿಕರು,
ದೊಂಗರಕೇರಿ ಬಸ್ತಿ ಮಂಗಳೂರು, ದಕ್ಷಿಣ ಕನ್ನಡ

ಸಾವಿತ್ರೀ ಮಾತೆಯ
ಮಾರುತೀ ಲೇಹ್ಯ

(ದಿವ್ಯ ಸಾಧುವೊಬ್ಬರಿಂದ ಪ್ರಾಪ್ತವಾದದು)

ಇದನ್ನು 1893ನೆ ಇಸ್ವಿ ಎಪ್ರಿಲ್ ತಿಂಗಳಲ್ಲಿ ಮೊದ ಲು ತಯಾರಿಸಿದ ವಾಗಿದೆ.

ಇದರಲ್ಲಿ ಅಪೀಮು ಮಾದಕವಸ್ತು [illegible] ಶುಷ್ಕವಾದ ದನದ ಹಾಲು, ಬೆಣ್ಣೆ ಕುಂಕುಮ ಜೇನು, ಸಕ್ಕರೆ ಸೇರಿದ ಪುಷ್ಟಿಕರ ಪದಾರ್ಥಗಳಾಗಲಿ ಧರ್ಮವಿರುದ್ಧವಾಗಿರುವ ಯಾವ ಬಗೆಯ ಕೂಟವ್ಯ ವೂ ಇರುವುದಿಲ್ಲ. ಯಾವನೂ ಎಷ್ಟೇ ವಯಸ್ಸಿನವರಿದ್ದ ರೂ ಬಾಲಕರು ಸಹ ಇದನ್ನು ಸೇವನೆ ಮಾಡಬಹುದು. ಇದು ರಕ್ತವನ್ನು ವೃದ್ಧಿಗೊಳಿಸಿ, ತೇಜಸ್ಸು ಆರೋಗ್ಯ ಚೇ ತನಗಳನ್ನು ವರ್ಧಿಸವುದು. ದೇಹದ ಉಷ್ಣವನ್ನು ಹೋಗ ಲಾಡಿಸಿ, ಬಹುಮೂತ್ರ ಸಿಹಿಮೂತ್ರ ಮೊದಲಾದುವ ನ್ನು ಗುಣಪಡಿಸಿ ಹಸಿವನ್ನು ಹೆಚ್ಚಿಸಿ ಅಂಗೂ ಪುಷ್ಟಿ ಯನ್ನು ಪಿತ್ತ ಬಲಾದಿಗಳಿಂದ ಸಂಪೂರ್ಣ ಪುರುಷತ್ವವನ್ನು ಘಟಿಸಿ ತರುತ್ತದೆ.

ಬೆಲೆ ಅರ್ಧ ರಾತ್ತಲ ಸೀಸೆಗೆ ರೂ 1–8–0
ಒಂದು ರಾತ್ತಲ , ರೂ 3–0 0

ವಿಶೇಷ – ಈ ಲೇಹ್ಯವನ್ನು ಸಾವಿತ್ರೀ ಮಾತೆಯ ಚಂದ ನ ಕೇಶ ತೈಲವನ್ನು ಉಪಯೋಗಿಸುವಾಗಲೆ ಸೇವಿಸಿದಲ್ಲಿ ಉತ್ತಮ ಫಲವು ಕೂಡ ಗುಣವಾಗುವುದು.

ವಿ ಸೂ ಐದು ರೂಪಾಯಿಗೆ ಕಡಿಮೆಯಾದ ಬೆಲೆಯ ಔಷ ಧಗಳನ್ನು ವಿ ಪಿ ಮೂಲಕ ರವಾನಿಸುವುದಿಲ್ಲ. ಪ್ರತಿ ಯೊಂದು ಸಲ ಬೇಕಾಗುವ ಔಷಧದ ಬೆಲೆಯ ಹಣವನ್ನು ಮುಂಗಡ ತೆರಬೇಕಾಗಿದೆ. ಭದ್ರವಾಗಿ ಕಟ್ಟಿ ಕಳು ಹುವ, ರೈಲ್ವೆ ಯಾ ಇತರ ರವಾನಾ ಖರ್ಚು ಪ್ರತ್ಯೇಕ.

ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು, ಊರು ಪೋ ಸ್ಟಾಫೀಸು, ಅಂಚೆ ಕಚೇರಿ ಅಥವಾ ರೈಲ್ವೆ ಸ್ಟೇಶನ್ ಮೊದಲಾದವನ್ನು ಪ್ರತಿ ಸಲ ಔಷಧ ಗಿರಾಕಿಗಳು ಶುದ್ಧಾಕ್ಷರಗಳಿಂದ ನಮೂದಿಸಬೇಕಾಗಿದೆ.



ಹಿಟ್ಲರನ ಕುರಿತು ಆಗಾಖಾನರ ಶ್ಲಾಘನ

ಶಾಂತಿಸ್ಥಾಪನಾಚಾರ್ಯನಂತೆ!

ಆ ಕುರಿತು ಲಂಡನ್ ಪತ್ರಿಕೆಯೊಂದರ ಟೀಕೆ

"ನಾನೂ ನನ್ನ ಮಡದಿಯ ಹಿಟ್ಲರಿಂದ ಆಹ್ವಾನಿಸಲ್ಪಟ್ಟಾಗ ನಾವು ರಾಜಕೀಯದ ಯಾವತ್ತು ವಿಚಾರಗಳನ್ನೆತ್ತಿ ಮಾತನಾಡಲಿಲ್ಲ. ಹಿಟ್ಲರು ಓರ್ವ ಮಹಾವ್ಯಕ್ತಿಯು ... ಆತಿಥ್ಯದಿಂದ ಕೂಡಿದವರಾಗಿ ನಾವು ಅವನ ಸದನದಿಂದ ಹೊರಡುವವರಾದೆವು. ಜರ್ಮನಿಯು ಜನಾಂಗಮಂಡಳದ ಹೊರಗಿರಲಿ, ಒಳಗಿರಲಿ, ಹಿಟ್ಲರನು ಶಾಂತಿಸ್ಥಾಪನಾಚಾರ್ಯನು ಆಗಲಾರನೆ? ಹಿಟ್ಲರನು ಈವರೆಗೆ ಹಾಕಿಕೊಂಡ ಯೋಜನೆಗಳು ನಡೆಯಬೇಕಾದರೆ ಶಾಂತಿಯು ಅವಶ್ಯಕವು" ಎಂಬುದಾಗಿ ಆಘಾಖಾನರು ... ದೇಶದ ಒಂದು ಪತ್ರಿಕೆಯಲ್ಲಿ ಬರೆದಿರುವರು.

ಹಿಟ್ಲರಿಂದ ... 'ಸಲಾದ ನೂತನ' ಜರ್ಮನಿ ... ಕುರಿತು ಖಾನರ ಬಹಳ ಶ್ಲಾಘನೆಯನ್ನು ಮಾಡಿರುವರು.

ಮಹತ್ತರ ಸುಖವು ಜರ್ಮನಿಯಲ್ಲಿದೆ

"ನಿಜವಾದ ಸಾಮ್ಯವಾದವು ಕಾರ್ಯಧಾನದೆಯೆನ್ನುವುದೆಂದರೆ ಅದು ಹಿಟಲರನ ಜರ್ಮನಿಯಲ್ಲಿ. ಇನ್ನು ಸ್ವಲ್ಪ ಸಮಯದಲ್ಲೇ ಅಲ್ಲಿ ವರ್ಗವಾರು ಭೇದಗಳಿರಲಾರವು. ಧನಾಢ್ಯರಾಗಲಿ, ಸಮೃದ್ಧಿಕಾರರಾಗಲಿ, ದೇಶದ ಆಡಳಿತವನ್ನು ನಡೆಯಿಸುವುದಲ್ಲ. ವರ್ಗವಾರು ಭೇದಗಳು ಮಾಯವಾಗುತ್ತಿರುವಾಗ, ಅತ್ಯಂತ ಮೂಢತನವೆನಿಸುವ ಎಲ್ಲರೂ ಸರಿಸಮಾನರೆಂಬ ಭಾವವು ಅಲ್ಲಿ ಉಂಟಾಗಲಿಲ್ಲ. ಕೆಲವರು ಮಿಕ್ಕವರಿಗಿಂತ ಜಾಣರೆಂದು ಹೇಳಿಕೊಂಡರೆ, ಅವರಿಗೆ ಒಳ್ಳೆ ಪಾರಿತೋಷಕಗಳು ಕೊಡಲಾಗುವವು. ಹೆಚ್ಚಿನವರಿಗೆ ಮಹತ್ತರದ ಸುಖಲಾಭವುಂಟಾಗುವ ತೆರದ್ದು ಹಿಟ್ಲರನ ಧೋರಣೆಯು."

ಗಾಂಧಿಜಯವರ ತತ್ವದ ಮೇಲೆ ಆಧಾರಣೀಯವಾದ ಸೌಮ್ಯವಾದವೆ ಶ್ರೇಷ್ಠವಾದುದು

ಡಾಕ್ಟರ್ ಘೋಷರ ಭಾಷಣ

ಬಂಗಾಳದ ಮಾನ ... ರಾಜಕೀಯ ಪರಿಷತ್ತಿನಲ್ಲಿ ಭಾಷಣವೀಯುತ್ತಾ ಡಾ. ಪ್ರಫುಲ್ಲ ಚಂದ್ರ ಘೋಷರು ಹೀಗೆ ಅಂದರು.

ಮಹಾತ್ಮಾಗಾಂಧಿಗಳ ಸಿದ್ಧಾಂತದ ಸೌಮ್ಯವಾದದ ಅಡಿಗಟ್ಟನ್ನು ಹಾಕುತ್ತಿರುವರು. ಎಲ್ಲರೂ ಅವರ ಅಹಿಂಸಾಮಯ ಸೌಮ್ಯವಾದೀ ಆದರ್ಶಗಳನ್ನು ಅನುಸರಿಸತಕ್ಕದ್ದು. ನಿಜವಾದ ಸೌಮ್ಯವಾದವು ಅಹಿಂಸೆಯಿಂದ ಮಾತ್ರ ಸಾಧಿಸಲು ಸಾಧ್ಯವು. ಹಿಂಸೆ ಮತ್ತು ಸೌಮ್ಯವಾದವೆಂಬವುಗಳು ಎರಡು ವಿರೋಧ ಅರ್ಥವುಳ್ಳವುಗಳು.

ಹಿಂಸೆಯ ಮೂಲಕ ಒಂದು ಜಾತಿಯ ... ತನಯ ... ವುದರಲ್ಲಿ ಮ... ಶಕ್ತವಾಗಿ ರಚನೆ ... ಮತ್ತು ದಬ್ಬಾಳಿಕೆ ನಡೆಯ ... ಹಿಂಸೆಯಿಂದ ದೊರೆತ ... ತ್ರ್ಯವು, ಸ್ವಾತಂತ್ರ್ಯವಲ್ಲ.

ಹಿಂದುಗಳು ಮುಸ್ಲಿಮರು ಕಿಸಾನ ಕೆಲಸಗಾರ ... ಎಲ್ಲರಿಗೂ ... ತರದ ಸ್ವಾತಂತ್ರ್ಯ ಬೇಕು ... ವಿವಿಧ ತರಗಾಗಿ ವಿವಿಧ ತರದ ಸ್ವಾತಂತ್ರ್ಯಗಳಿರುವು.

ಎಲ್ಲರಿಗೂ ಕಾಂಗ್ರೆಸಿನಲ್ಲಿ ಪ್ರವೇಶ ... ಎಲ್ಲರೂ ಕಾಂಗ್ರೆಸ್ಸಿನೊಡನೆ ಸೇರುವಂತೆ ... ಗ್ರೆಸ್ಸು ಬಲವಾದ ಪ್ರಯತ್ನಗಳನ್ನು ಮಾಡುತ್ತಿದೆ. ಕಾಂಗ್ರೆಸ್ಸು ಎಲ್ಲಾ ಜನರ ಪ್ರಾತಿನಿಧಿಕ ಸಂಸ್ಥೆಯಾಗಿದೆ.



ಟೀ ಕುಡಿದು ತಂಪನ್ನು ಅನುಭವಿಸಿರಿ

ಬಿಸಿ ಬಿಸಿ ಟೀ ಕುಡಿದು ಶರೀರದಲ್ಲಿ ತಂಪನ್ನುಂಟುಮಾಡಿಕೊಳ್ಳುವ ಪದ್ಧತಿಯ ವಿಷಯದಲ್ಲಿ ವೈಜ್ಞಾನಿಕರ ಅಭಿಪ್ರಾಯವು ಒಮ್ಮತವಾಗಿರುವುದು. ಮಂಜುಗಡ್ಡೆ (ಐಸ್) ಯಿಂದ ತಣ್ಣಗೆ ಮಾಡಲ್ಪಟ್ಟ ಪಾನೀಯದ ಮೂಲಕ ಆಗುವ ಲಾಭವು ಅಲ್ಪಕಾಲ ಮಾತ್ರವೇ ಇರುವುದು. ಆದರೆ ಬಿಸಿ ಬಿಸಿ ಟೀಯಿಂದ ದೇಹಕ್ಕೆ ಆಗುವ ಪ್ರಯೋಜನವು ಶಾಶ್ವತವಾದದ್ದು. ಬಿಸಿ ಬಿಸಿ ಟೀಯು ಮೈಯೊಳಗಿನ ರೋಮಕೂಪಗಳನ್ನು ತೆರೆದು ಚೆನ್ನಾಗಿ ಬೆವರುವಂತೆಮಾಡುವುದು. ಇದರಿಂದ ಶರೀರದ ಉಷ್ಣವು ಹೊರಗಾಗುವುದು. ದೇಹದಲ್ಲಿ ತಂಪನ್ನುಂಟುಮಾಡಿಕೊಳ್ಳಲು ಪ್ರಕೃತಿಯ ಸಹಜಮಾರ್ಗವಿದು. ಬಿಸಿ ಬಿಸಿ ಟೀ ಕುಡಿದು ತಂಪನ್ನು ಅನುಭವಿಸಿರಿ.

ಇಂಡಿಯಾದ ಟೀ ತಂಪನ್ನೂ ತೃಪ್ತಿಯನ್ನೂ ಕೊಡುವುದು

ಚಿತ್ರಗಳನ್ನೊಳಗೊಂಡ ನಮ್ಮ ಪುಸ್ತಕ

ಇಂಡಿಯನ್ ಟೀಯ ಚರಿತ್ರೆಯು ಓದುವುದಕ್ಕೆ ಒಂದು ಕಾದಂಬರಿಯಂತಿದೆ. ಟೀಯ ವ್ಯವಸಾಯ, ಅದರ ತಯಾರಿಕೆಯ ವಿಧಾನಗಳು ಮತ್ತು ಅದನ್ನು ಪಾನಮಾಡುವುದರಿಂದ ಆಶಿಷ್ಯದ ಉಪಯೋಗತೆ ಮತ್ತು ಅನುಕೂಲಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವಿದ್ದಲ್ಲಿ "ಯಾವ ಕಾಲವಾದರೂ ಟೀಗೆ ಸಕಾಲವೇ" ಎಂಬ ಚಿತ್ರಗಳನ್ನೊಳಗೊಂಡಿರುವ ಪುಸ್ತಕವನ್ನು ನಮ್ಮಿಂದ ಕೇಳಿ ತರಿಸಿಕೊಳ್ಳಿ. ಈ ಜಾಹಿರಾತನ್ನು ಕತ್ತರಿಸಿ ನಿಮ್ಮ ಹೆಸರು, ವಿಳಾಸ ಮತ್ತು ಹುದ್ದೆ ಇವುಗಳನ್ನು ಆ ಜಾಹಿರಾತಿನಲ್ಲಿ ಬರೆದು ಈ ಕೆಳಗೆ ಕೊಟ್ಟಿರುವ ವಿಳಾಸಕ್ಕೆ ಬರೆದರೆ ಮುಫತ್ತಾಗಿ ನಿಮಗೆ ಚಿತ್ರಗಳನ್ನೊಳಗೊಂಡ ಪುಸ್ತಕದ ನಕಲೊಂದನ್ನು ಕಳುಹಿಸುತ್ತೇವೆ. ವಿಳಾಸ–ಕಮಿಷನರ್ ಫಾರ್ ಇಂಡಿಯಾ, ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್‌ಷನ್ ಬೋರ್ಡ್ ಪಿ. ಪೋ. ಬಾಕ್ಸ್ ೨೧೭೭, ಕಲ್ಕತ್ತೆ.

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್‌ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟದ್ದು

I K 97 S V B

...ಎಷ್ಟೋ ವೇಳೆ ಸಾಮಾಜಿಕ ಕಲಹಗಳೂ ...ಗೆಗಳೂ ಉಂಟಾಗುವ ಸಂದರ್ಭಗಳಲ್ಲಿ, ...ಲೀಸರು ಅಥವಾ ಸೈನಿಕರು ಮಾಡಬೇಕಾ...ವ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಈ ...ಥಕವನ್ನು ಏರ್ಪಡಿಸುವ ಭಾವನೆಯುಂಟಾ...ತು. ಇದು ಅಸಾಧ್ಯವೆಂದೂ ತೋರ...ಹುದು.

ಆದರೂ, ಅಹಿಂಸಾ ತತ್ವವನ್ನೇ ಆಧರಿಸಿ ...ಧಿಕಾರ ನಿರ್ವಹಿಸುವರೆ ನಿರ್ಧರಿಸಿರುವ ಕಾಂ...ಸ್ಸು, ಇಂತಹ ಉಪಟಳಗಳು ಉಂಟಾದಾಗ, ...ಂತರೀತಿಯಿಂದ ವರ್ತಿಸಿ ಅವನ್ನು ಸಮಾಧಾನಗೊಳಿಸಬೇಕಾಗಿದೆಯಷ್ಟೆ. ಆದಕ್ಕಾಗಿ ...ಕಾಂಗ್ರೆಸಿನಲ್ಲಿ ಶಕ್ತಿಯು ಹೆಚ್ಚಬೇಕು. ರಾಜ...ೀಯದಲ್ಲಿ ಚಳವಳಿಸುವವರೇ ಈ ಸಾಮಾ...ಕ ಅಂತಃಕಲಹಗಳನ್ನು ಎಬ್ಬಿಸುವವರು. ...ವರ ಬಲದ ಅಡಿಯಾಳಾಗಿರುವವರು ಹೆಚ್ಚಾಗಿ ಈ ದಂಗೆಗಳಲ್ಲಿ ಭಾಗವಹಿಸುವರು. ಆಗ, ...ಕಾಂಗ್ರೆಸಿನವರು ಈ ದಂಗೆಗಳನ್ನು ಅಡಗಿಸಲು ...ಕ್ತಿ ಸಾಮರ್ಥ್ಯ ಸಹಾಯಗಳಾವವೂ ಇಲ್ಲ...ವರಾಗಬಾರದಷ್ಟೆ.

ಅಂತರ್ಸಾಮಾಜಿಕ ಕಾರಣ ಇರಲಿ, ...ಇಲ್ಲದಿರಲಿ. ಒತ್ತಾಯದಿಂದ ಹಿಂಸಾಮೂಲಕ...ವಾಗಿ ಯಾವುದೊಂದು ಪಕ್ಷವು ಮತ್ತೊಂದರ ಮೇಲೆ ಕೆಲಗಾಗುವಂತೆ ಪ್ರಯತ್ನಿಸಲಾರದು. ...ಇಂತಹ ರೀತಿಯಲ್ಲಿ ಕಾರಣರಾದರೂ, ಅದನ್ನು ...ರಿದ ಕಾಗದದ ಹಾಳೆಯ ಬೆಲೆಯೂ ಆ...ರಾರಿಗೆ ಬರಲಾರದು. ಕಾರಣರ ಹಿಂದೆ, ...ಕಾರಿಗೆ ಸೇರಿದವರೆಲ್ಲಿ ಸಮ್ಮತಿ ಮನೋಬಲವಿರಬೇಕಷ್ಟೆ! ಒಂದುವೇಳೆ ಕಾರಣ ಇದ್ದರೂ, ...ದಂಗೆಗಳಾಗಬಾರದೆಂದೇನೂ ಖಂಡಿತ ಭವಿಷ್ಯ ಹೇಳಬರುವುದಿಲ್ಲ.

ಆದುದರಿಂದ ಶಾಂತಿವಿಧಾಯಿಸುವ ಈ ...ದಳದವರ ಯೋಗ್ಯತೆಯೇನು, ವಿಚಾರಮಾಡೋಣ.

೧. ದಳದ ಸದಸ್ಯರು ಅಹಿಂಸೆಯಲ್ಲಿ ಕುಂದು ವಿಶ್ವಾಸವುಳ್ಳವರಾಗಬೇಕು. ದೇವ...ರಲ್ಲಿ ಸಜೀವ ಭಕ್ತಿಯಿಲ್ಲದಿದ್ದಲ್ಲಿ ಇದು ಸಾಧ್ಯವಾಗದು. ಅಹಿಂಸಾ ವ್ರತಿಯಾದವರು ದೇವರ ದಯೆಯಿಂದಲ್ಲದೆ ಏನನ್ನೂ ಮಾಡಲಾರರು. ...ಅದನ್ನು ಸಂಪಾದಿಸದಿದ್ದಲ್ಲಿ, ಕ್ರೋಧವಿಲ್ಲದೆ ಮರಣಹೊಂದುವ ಧೈರ್ಯ, ಭಯವಿಲ್ಲದೆ ಪ್ರತೀಕಾರ ಬುದ್ಧಿಯಿಲ್ಲದೆ ಮರಣವನ್ನು ಎದುರಿಸುವ ಸಾಹಸ ಶಕ್ತಿಗಳು ಅವರಲ್ಲಿ ಉಂಟಾಗವು. ಎಲ್ಲರ ಹೃದಯದಲ್ಲೂ ದೇವರು ಇರುವನೆಂಬುದನ್ನು ವಿಶ್ವಾಸದಿಂದ ನಂಬಿದವರೇ ಮಾತ್ರ, ದೇವರ ಸನ್ನಿಧಿಯಲ್ಲಿ ಭಯವಿರಬಾರದೆಂದು ತಿಳಿದವರು ಮಾತ್ರ ಇಂತಹ ಧೈರ್ಯವನ್ನು ಹೊಂದುವರು.

ದೇವರ ಸರ್ವತ್ರ ಸನ್ನಿಧಿಯನ್ನು ತಿಳಿದುಕೊಳ್ಳುವಾಗ, ತನಗೆ ವಿರೋಧಿಯಾಗಬಹುದಾದ ಕೇಡಿಯಲ್ಲೂ ಆತನಿರುವುದನ್ನು ನಂಬಬೇಕು. ತನ್ನಲ್ಲಿದ್ದ ಪಾಶವಿಕ ಚಾಂಚಲ್ಯವು ಉಕ್ಕುತ್ತಿರುವಾಗ, ಈ ಭಾವನೆಯುಂಟಾದರೆ, ಅದು ಕ್ರೋಧವನ್ನು ಇಳಿಸುವುದು.

೨. ಈ ಶಾಂತಿದೂತನು ಪ್ರಪಂಚದ ಸರ್ವ ಧರ್ಮಗಳನ್ನೂ ಸಮಾನವಾಗಿ ಕಾಣುವವನಾಗಬೇಕು. ಹಿಂದುವಾಗಿರುವಲ್ಲಿ, ಭಾರತ ವರ್ಷದಲ್ಲಿ ಈಗ ಪ್ರಚಾರದಲ್ಲಿರುವ ಎಲ್ಲ ಧರ್ಮಗಳನ್ನು ಗೌರವಿಸುವವನಾಗಬೇಕು. ಹೀಗೆ ಎಲ್ಲ ಇತರ ಧರ್ಮಗಳ ಮೂಲತತ್ವಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

೩. ಹೆಚ್ಚಿನಮಟ್ಟಿಗೆ ಶಾಂತಿಯ ಸ್ಥಾಪನೆಗಾಗಿ ಕೆಲಸಮಾಡುವವರು ಅಲ್ಲಲ್ಲಿನವರೇ ಆಗಿರುವುದುತ್ತಮ.

೪. ಒಬ್ಬನಾಗಿಯೋ ಪಂಗಡವಾಗಿಯೋ ಇವರು ಸಾಧನೆಮಾಡಬಹುದು. ಹೀಗಿರುವುದರಿಂದ ಸಂಗಾತಿಗಳಿಲ್ಲವೆಂದು ಕಾಯುವ ಅಗತ್ಯವಿಲ್ಲ. ಪ್ರತಿಯೊಬ್ಬನೂ ತನ್ನೂರಿನವರನ್ನೇ ತನ್ನ ಪಥಕದಲ್ಲಿರುವಂತೆ ಸಾಧಿಸುವನು. ಹೀಗೆ ಪ್ರತಿಯೊಂದು ಊರಿನದೊಂದು ಪಥಕವಾಗುವುದುತ್ತಮ.

೫. ಈ ಶಾಂತಿದೂತನು ಸ್ವಯಂಸೇವೆಯಿಂದ ತನ್ನ ಊರಿನ ಅಥವಾ ನಿಶ್ಚಿತ ಕೇಂದ್ರದಿಂದ ಸುತ್ತಲಿನವರ ಪರಿಚಯಾದಿ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕು. ಹೀಗಿದ್ದರೆ, ಎಂಥಾದರೂ ಕಠಿನ ಪ್ರಸಂಗಗಳಲ್ಲಿ ಅವರು ಒದಗಿದಾಗ ಅಲ್ಲಿ ಚಳವಳ ನಡೆಸುವವರ ನಡುವೆ ಅಪರಿಚಿತನೊಬ್ಬನು ಬಂದಂತಾಗಲಿ ಅಯಾಚಿತವಾಗಿ ಬಂದವನೆಂದಾಗಲಿ ಯಾರೂ ಭಾವಿಸಲು ಅವಕಾಶವುಂಟಾಗುವುದಿಲ್ಲ.

೬. ಶಾಂತಿ ಸ್ಥಾಪಿಸ ಬರುವವನು ಖಂಡಿತವಾಗಿ ನಿಷ್ಪಕ್ಷಪಾತಿಯೆಂದೂ, ಕಿಂಚಿತ್ತೂ ಸಂದೇಹವಿಲ್ಲದ ಸದ್ಗುಣಿಯೆಂದೂ ತೋರುವಷ್ಟು ಗುಣಭರಿತನಾಗಿರಬೇಕೆಂದು ತಿರುಗಿ ಹೇಳಬೇಕಾಗಿಲ್ಲ.

೭. ಸಾಳೆ ತುಫಾನು ಉಂಟಾಗುವ ಲಕ್ಷಣಗಳು ಇಂದೇ ಕಾಣುವುದು ಸ್ವಾಭಾವಿಕವಷ್ಟೆ. ಇಂತಹ ಲಕ್ಷಣಗಳನ್ನು ತಿಳಿದುಕೊಂಡಾಗಲೆ ಪಥಕದವರು, ಅನಾಹುತವಾಗುವ ತನಕ ಕಾದಿರುವ ಅವಶ್ಯಕತೆಯಿಲ್ಲ.

೮. ಈ ವ್ಯವಸ್ಥೆಯು ಬೆಳೆದು ಬರುವಂತೆ, ಹಗಲೂ ರಾತ್ರಿಯೂ ಶಾಂತಿವಿಧಾನಕ್ಕಾಗಿ ದುಡಿಯುವ ಕೆಲವರಾದರೂ ಬೇಕೇಬೇಕೆಂದಿಲ್ಲವಾದರೂ, ಇರುವುದು ಯೋಗ್ಯವಾಗಿದೆ. ಯೋಗ್ಯ ಗೃಹಸ್ಥರೂ ಗೃಹಸ್ಥೆಯರೂ ಪಥಕದಲ್ಲಿ ಸೇರಿರುವುದು ಒಳ್ಳೆಯದು. ನಾನಾ ವ್ಯಕ್ತಿಗಳಿಗೆ ಸಂಬಂಧಿಸಿರುವವರಿಂದ ಸ್ವಯಂಸೇವಕರನ್ನು ಆರಿಸಿ, ಅವರು ತಕ್ಕಷ್ಟು ಅವಕಾಶವುಳ್ಳವರಾಗಿ ಇತರರೊಡನೆ ಮೈತ್ರಿ ಪ್ರೀತಿಭಾವಗಳಿಂದ ಬಡುಕುತ್ತಿರುವಂತಾದಲ್ಲಿ, ಎಷ್ಟೋ ಸೊಗಸು.

೯. ಈ ಪಥಕಕ್ಕೆ ಸೇರಿರುವವರು ಪ್ರತ್ಯೇಕವಾಗಿ ಸೂಚಿತವಾಗುವ ಉಡುಪನ್ನು ಧರಿಸಿಕೊಂಡರೆ, ಅವರನ್ನು ಕಂಡಾಗಲೆ ಇಂತಹರೆಂದು ತಿಳಿಯಲು ಕಷ್ಟವೇ ಆಗದು.

ಇವು ಸಾಮಾನ್ಯ ಸೂತ್ರಗಳು. ಅಲ್ಲಲ್ಲಿನವರು ತವತಮಗೆ ಯುಕ್ತಕಂಡ ಸೂತ್ರಗಳನ್ನು ಮಾಡಿಟ್ಟುಕೊಳ್ಳಬಹುದು.

ನಾನು ಇದರಲ್ಲಿ ಸೇರಿ ಅನುಸಿಕ್ಕವೂ ಚಟುವಟಿಕೆ ತೋರಿಸಲಿರುವೆನೆಂದು, ಯಾರೂ ತಿಳಿಯಬಾರದಾಗಿ ಮುಂದಾಗಿ ಹೇಳಬೇಕಾಗಿದೆ. ನನಗೆ ಯೋಗ್ಯವಾದ ಆರೋಗ್ಯವಿಲ್ಲ, ಬೇಕಾದ ಬಲವಿಲ್ಲ, ಸಾಕಾಗುವ ಸಮಯವೂ ಇಲ್ಲ. ಈಗ ಪಿರುಪಾಯನಾಗಿ ಸಂಭಾಷಣೆ ಮಾಡಬೇಕಾದಷ್ಟನ್ನು ಪೂರೈಸಲೂ ಕಷ್ಟವಾಗಿದೆ. ಇದನ್ನೋದಿ, ಯಾರಿಗೆ ಇದು ಸಾಧ್ಯವೆಂದು ತೋರುತ್ತದೆಯೋ ಅವರು ಈ ಕಾರ್ಯಕ್ಕೆ ಪ್ರಾರಂಭಿಸಬಹುದು. ಈ ಪಥಕವನ್ನು ವ್ಯವಸ್ಥೆಗೊಳಿಸಬೇಕೆಂಬ ಭಾವನೆಯೂ ಅದರಿಂದುಂಟಾಗುವ ಸಂಘಟನೆಗಳೂ ಉತ್ಸಾಹವೂ ಸಾಧ್ಯವೇ ಆಗವೆ. ವ್ಯವಹಾರದಲ್ಲಿ ಇವು ಸಹಜವಾಗಿ ಕಾಣ್ಬರಬೇಕುವವೆಂದು ನಾನು ಬಲ್ಲೆ.

ಜೈಲುಗಳಲ್ಲಿ ಕೆಲಸ

ಜೈಲುಗಳಲ್ಲೂ ಪ್ರೌಢ ವಯಸ್ಕರ ಶಿಕ್ಷಣದ ಬಗ್ಗೆ ಏರ್ಪಾಡುಗಳು ಬಿಹಾರಿನ ಕಾಂಗ್ರೆಸ್ ಸರ್ಕಾರದಿಂದ ಮಾಡಲಾಗಿವೆ. ಗಯಾ ಸೆಂಟ್ರಲ್ ಜೈಲಿನಲ್ಲಿ ಈ ಯೋಜನೆಯು ಈಗಾಗಲೆ ಕಾರ್ಯರೂಪಕ್ಕೆ ಬಂದಿರುತ್ತದೆ. ಅತ್ತ ಕಡೆಗೆ ತೆರಳಿದ ವಿದ್ಯಾಮಂತ್ರಿಗಳಾದ ಡಾ॥ ಮಹಮ್ಮದ್ ರವರು, ಗಯಾ ಜೈಲು ಒಂದು ಶಾಲೆ ತರದ ಕಾಣುತ್ತದೆ. ಅಲ್ಲಿರುವ ಕೈದಿಗಳು, ಒಳ್ಳೆ ಸುಧಾರಣೆ ಹೊಂದುತ್ತಿದ್ದಾರೆ, ಎಂಬ ಅಭಿಪ್ರಾಯವನ್ನು ಪಟ್ಟಿರುವರು.

ಸಾಧಾರಣ ಒಂದು ಸಾವಿರ ಕೈದಿಗಳು, ಮೇಲಿನ ಪ್ರೌಢ ವಯಸ್ಕರ ಶಿಕ್ಷಣ ಚಳವಳವು ಪ್ರಾರಂಭವಾದಂದಿನಿಂದ ವಿವಿಧ ಕಡೆಗಳಲ್ಲಿ ಶಿಕ್ಷಣ ಪಡೆಯುತ್ತಿರುವರು. ಅಲ್ಲದೆ ಕೈದಿಗಳ ಸುಧಾರಣೆಯನ್ನು ಆರೋಗ್ಯಾಭಿವೃದ್ಧಿ ಬಗ್ಗೆ, ಕೈದಿಗಳ ಸಂಘಗಳು ಸ್ಥಾಪನೆಯಾಗಿವೆ.

ಅಲ್ಲಲ್ಲಿರುವ ಪ್ರಾಥಮಿಕ ಶಾಲಾ ಉಪಾಧ್ಯಾಯರಲ್ಲಿ ಪ್ರತಿಯೊಬ್ಬನು ಕಳೆದ ಶಿಬಿರಾಲದ ರಜೆಯಲ್ಲಿ ಸರಾಸರಿಯಲ್ಲಿ 20 ಜನ ಪ್ರೌಢ ವಯಸ್ಕರ ಶಿಕ್ಷಣ ಕೆಲಸವನ್ನು ಮುಗಿಸಿ ದುಡಿದಿದ್ದರು.

ವಿದ್ಯಾರ್ಥಿಗಳು ಈ ನೂತನ ಚಳವಳದಲ್ಲಿ ಒಳ್ಳೆ ಉತ್ಸಾಹವನ್ನು ತೋರಿಸುತ್ತಿರುವರು.

ಸ್ವಾತಂತ್ರ್ಯಪಥದಲ್ಲಿ ಭಾರತದ ಮುನ್ನಡೆ

“ತುರುಕರೇ, ಎದ್ದೇಳಿರಿ, ಜಾಗ್ರತರಾಗಿರಿ, ಆತ್ಮವಿಶ್ವಾಸದನ್ನಿಟ್ಟುಕೊಂಡು ಕರ್ತವ್ಯ ಪರರಾಗಿರಿ!” ವಂಬೀವಾತುಗಳು ತುರ್ಕಿಸ್ಥಾನದ ಸ್ವಾತಂತ್ರ್ಯ ದಿನವನ್ನು ಆಚರಿಸುವ ಕಾಲಕ್ಕೆ ಅಂಗೋರದಲ್ಲಿ ರಚಿಸಿದ ಸ್ಮಾರಕಶಿಲೆಯ ಮೇಲೆ ಬರೆಸಿದ ಮುಸ್ತಫಾ ಕೆಮಲ್‌ಪಾಶರ ಮಾತುಗಳು

ಇದೇ ಸಂದೇಶವನ್ನು ನಾನು ನಿಮಗೂ ಕೊಡುತ್ತೇನೆ.'

ಎಂದು ಪಂಡಿತ ಜವಾಹರಲಾಲ ನೆಹರೂ ಅವರು ವಿದೇಶಸಂಚಾರಕ್ಕೆ ಹೊರಟಾಗ ಅವರನ್ನು ಬೀಳ್ಕೊಡಲಿಕ್ಕೆ ಬೊಂಬಾಯಿಯಲ್ಲಿ ಇದೇ ಮೇ ತಿಂಗಳ 30ನೇ ತಾರೀಕಿನ ದಿನ ಕೂಡಿದ ಪ್ರಚಂಡವಾದ ಸಾರ್ವಜನಿಕ ಸಭೆಯಲ್ಲಿ ಅಪ್ಪಣೆ ಕೊಟ್ಟರು ಸರದಾರ ವಲ್ಲಭಭಾಯಿ ಪಟೇಲರು ಅಗ್ರಾಸನವನ್ನು ಸ್ವೀಕರಿಸಿದ್ದರು

ಪಂಡಿತರ ಭಾಷಣದ ಸಾರವನ್ನು ಕೆಳಗೆ ಕೊಟ್ಟಿದ್ದೇವೆ

‘ನೀವು ನನಗೆ ಸಮರ್ಪಿಸಿದ ಈ ಹೂಮಾಲೆಯ ರಾಶಿಯು ಬಾಡಿ ಹೋಗಬಹುದು ದರೊಳಗಿಂದ ಗಮಗಮಿಸುತ್ತಿರುವ ಸುವಾಸಯೂ ಹಾರಿಹೋಗಬಹುದು ಆದರೆ ನೀವು ಇಂದು ನನ್ನ ಮೇಲೆ ತೋರಿಸಿದ ನಿಮ್ಮ ಪ್ರೇಮ ಮ್ಮ ಆದರಭಾವವು ಎಂದೂ ನಷ್ಟವಾಗುವಂತಹದುದಾಗಿಲ್ಲ ನಾನು ಅದನ್ನು ಸದಾ ಸರ್ವದಾ ನೆನಪಿನಲ್ಲಿಟ್ಟುಕೊಳ್ಳುವೆನು

ಪಂಡಿತ ಜವಾಹರಲಾಲ ನೆಹರೂರವರು

‘ಅಂತರಾಷ್ಟ್ರೀಯ ಪರಿಸ್ಥಿತಿಯ ಅಧ್ಯಯನ ಮಾಡಲಿಕ್ಕೆ ನಾನು ವಿದೇಶಗಳಿಗೆ ಪ್ರಯಾಣ ಹೊರಟಿದ್ದೇನೆ ಅಂತರಾಷ್ಟ್ರೀಯ ಮತ್ತು ಭಾರತೀಯ ಸಮಸ್ಯೆಗಳು ಸರಪಳಿಯ ಗೊಣಸುಗಳಂತೆ ಒಂದನ್ನೊಂದು ಕೂಡಿರುವವು. ಪ್ರಪಂಚದ ಯಾವ ಭಾಗದಲ್ಲಿ ಏನು ನಡೆದರೂ ಅದರ ಪರಿಣಾಮವು ಹಿಂದುಸ್ಥಾನದ ಮೂಲೆ ಮೂಲೆಯಲ್ಲಿಯೂ ಕಾಣಿಸಿಕೊಳ್ಳುವುದು ಆದ್ದರಿಂದ ನಾವು ಅಂತರಾಷ್ಟ್ರೀಯ ಚಲನವಲನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು

‘ಇಂದು ವಿದೇಶಕ್ಕೆ ಹೊರಡಿರುವಾಗ ನನ್ನ ಎದೆಯು ಅಭಿಮಾನದಿಂದ ಉಬ್ಬಿದೆ. ಹಲವು ವಿಧಗಳಿಂದ ಭಾರತವು ತನ್ನ ಯೋಗ್ಯತೆ, ಶಕ್ತಿಸಾಮರ್ಥ್ಯಗಳನ್ನು ಲೋಕಕ್ಕೆ ಪ್ರದರ್ಶಿಸಿ ಪ್ರಪಂಚದ ಆದರ ಗೌರವಗಳಿಗೆ ಪಾತ್ರವಾಗಿದೆ ಶಕ್ತಿಸಾಮರ್ಥ್ಯಗಳು ಮತ್ತು ಯೋಗ್ಯತೆಯು ಬರೀ ತರ್ಕ, ಶಾಸ್ತ್ರಾರ್ಥಗಳಿಂದ ಬರುವುದಿಲ್ಲ. ಅದಕ್ಕೆ ತಾಳ್ಮೆ, ಸಹನಶೀಲತೆ, ಆತ್ಮವಿಶ್ವಾಸ, ಇಚ್ಛಾಶಕ್ತಿ ದೃಢನಿರ್ಧಾರ ಬುದ್ಧಿಗಳು ಇರಬೇಕು ಸವಿನಯ ಕಾಯದೆ ಭಂಗ ಚಳವಳವು ಭಾರತವು ಎಷ್ಟು ಶಕ್ತಿಸಂಪನ್ನವಾಗಿದೆ ಎಂಬುದನ್ನು ಪ್ರಪಂಚಕ್ಕೆ ಸಾರಿದೆ ಹಾಗೆಯೇ ಜಾಂಜಿಬಾರನ್ನು ನೆನಪಿಗೆ ತಂದುಕೊಳ್ಳಿರಿ ಕೇವಲ ಲವಂಗ ಬಹಿಷ್ಕಾರದ ಪ್ರಶ್ನೆಯು ನಮ್ಮ ಮುಂದೆ ಇದ್ದುದಲ್ಲ. ಆ ಬಹಿಷ್ಕಾರ ಚಳವಳವನ್ನು ಕೈಕೊಂಡು, ವಿದೇಶಗಳಲ್ಲಿ ಮನೆಮಾಡಿಕೊಂಡಿರುವ ನಮ್ಮ ಬಂಧುಭಗಿನಿಯರಿಗಾಗಿ ನಾವೇನು ಮಾಡಲಿಕ್ಕೆ ಸಮರ್ಥರಾಗಿದ್ದೇವೆ ಎಂಬುದನ್ನು ತೋರಿಸಿಕೊಟ್ಟಿದ್ದೇವೆ ಜನಬಲವೇ ಎಂಥಹ ಶಕ್ತಿಸಂಪನ್ನ ಸರಕಾರವನ್ನಾದರೂ ತಲೆ ತಗ್ಗಿಸುವಂತೆ ಮಾಡುವದು

‘ಹಿಂದೂ ಮುಸಲ್ಮಾನ ಪ್ರಶ್ನೆಯು ಈಗ ಧಾರ್ಮಿಕ ಪ್ರಶ್ನೆಯಾಗಿರುವುದಿಲ್ಲ ಅದು ಒಂದು ರಾಜಕೀಯ ಸಮಸ್ಯೆಯಾಗಿದೆ ಧರ್ಮಕ್ಕೂ ಅದಕ್ಕೂ ಯಾವ ಸಂಬಂಧವೂ ಇರುವುದಿಲ್ಲ ನೌಕರಿಚಾಕರಿ ಗುತ್ತು ಸ್ಥಾನಮಾನಗಳ ಲಾಲಸೆಯೇ ಹಿಂದು ಮುಸಲ್ಮಾನ ಐಕ್ಯಯನ್ನು ಸ್ಥಾಪಿಸಲಿಕ್ಕೆ ಒಂದು ದೊಡ್ಡ ತಡೆಯಾಗಿರುವಂತೆ ಕಾಣುತ್ತದೆ.

‘ಹಿಂದೂದೇಶದ ಭಾಗ್ಯವು ತಲೆಮೇಲೆ ಕಿರೀಟವನ್ನಿಟ್ಟುಕೊಂಡ ವ್ಯಕ್ತಿಯ ಕೈಯಲ್ಲಿರುವದಿಲ್ಲ. ಆ ಭಾಗ್ಯವು ಈ ದೇಶದ ಮಕ್ಕಳವರಿಗಳ ಕೈಯಲ್ಲಿದೆ ಮಾಡಲಾರದುದನ್ನು ಹಿಂದೂದೇಶವು ಮಾಡದಂತೆ ಒಲತ್ಕರಿಸುವ ಸಾಮರ್ಥ್ಯವು ಭೂಲೋಕದ ಯಾರಿಗೂ ಇರುವುದಿಲ್ಲ

‘ಲೋರ್ಡ ಲ್ಯೋಟ್ಲಿಂದರು ಫೆಡರೇಶನಿನ ಕುರಿತು ಮಾತನಾಡುತ್ತ 1935ನೆ ಇಸವಿಯ ರಾಜಕೀಯ ಘಟನೆಯನ್ನು ತಿದ್ದಲಿಕ್ಕಾಗುವ ದಿಲ್ಲವೆಂದು ಸ್ಪಷ್ಟೋಕ್ತಿಗಳನ್ನು ಆಡಿದುದಕ್ಕಾಗಿ ನನಗೆ ತುಂಬ ಸಂತೋಷವಾಗಿದೆ ಆದರೆ ಬ್ರಿಟಿಷ ಮುತ್ಸದ್ದಿಗಳಲ್ಲಿ ದೂರದರ್ಶಿತೆಯು ಇಲ್ಲದಿರುವದಕ್ಕಾಗಿ ನನಗೆ ಬಹಳ ಬೇಸರವಾಗಿದೆ ಅವರಿಗೆ ಯಾವಾಗಲೂ ಪೆಟ್ಟು ಮೇಲೆ ಬುದ್ಧಿ ಬರುತ್ತದೆ ಬ್ರಿಟಿಷ ಸಾಮ್ರಾಜ್ಯವು ಒಡೆದು ಚೂರುಚೂರಾಗಲೆಂದು ಇದೆ ನಾನು ಸಾಮ್ರಾಜ್ಯವಾದವನ್ನು ದ್ವೇಷಿಸುತ್ತಿದ್ದೇನೆಂಬುದರಿಂದ ಹೀಗ ಹೇಳುವುದಲ್ಲ. ಬ್ರಿಟಿಷ ಜನಾಂಗದ ಮೇಲೆ ನನಗೆ ಆದರವಿದೆ ಬ್ರಿಟಿಷರು ಅನೇಕ ಒಳ್ಳೆಯ ಸಂಗತಿಗಳನ್ನು ಮಾಡಿದ್ದಾರೆ ಆದರೆ ಅವರು ಅವುಗಳೊಂದಿಗೆ ಕೆಟ್ಟದನ್ನು ಮಾಡಿರುವರು ಇಂಗ್ಲಿಷರು ಕುಂದಿಲ್ಲ ಆದರೆ ಅವರ ಸುತ್ತಮುತ್ತಲಿನ ಪರಿಸ್ಥಿತಿಯು ಅವರಿಗೆ ಪ್ರತಿಕೂಲವಾಗಿದೆ ನೂರು ವರ್ಷಗಳ ಮೊದಲು ಆಸ್ಟ್ರಿಯವು ಒಂದು ದೊಡ್ಡ ಸಾಮ್ರಾಜ್ಯವಾಗಿತ್ತು ಈಗ ಅದು ಜರ್ಮನಿಯ ಒಂದು ಸಣ್ಣ ಪ್ರಾಂತ್ಯವಾಗಿದೆ ಕಳೆದ ಮಹಾಯುದ್ಧದಲ್ಲಿ ಅನೇಕ ಸಾಮ್ರಾಜ್ಯಗಳು ಮುರಿದು ಹೋದುವು ಇನ್ನೊಂದು ಮಹಾಯುದ್ಧದಲ್ಲಿ ಮತ್ತುಳಿದ ಸಾಮ್ರಾಜ್ಯಗಳು ಮುರಿಯುವವು ಜಗತ್ತಿನ ರಾಜಕೀಯಗತಿಯು ಎಷ್ಟು ವೇಗವಾಗಿರುವದೆಂದರೆ, ಅದನ್ನು ಅನುಸರಿಸಿ ಮುಂದರಿಯುವದು ಬ್ರಿಟಿಷ ರಾಜಕಾರಣಪಟುಗಳಿಗೆ ಅಸಾಧ್ಯವಾಗಿದೆ

‘ಫೆಡರೇಶನಿಗೆ ಕಾಂಗ್ರೆಸ್ಸಿನ ವಿರೋಧವು ಮೊದಲಿನಂತೆಯೇ ಇದೆ ಅದು ಕಾಂಗ್ರೆಸ್ಸಿನಲ್ಲಿ ಮಂಜೂರಾದ ಠರಾವುಗಳಿಂದ ಸ್ಪಷ್ಟವಾಗುತ್ತದೆ ಕಾಂಗ್ರೆಸ್ಸನ್ನು ಸದೆ ಬಡಿಯಲಿಕ್ಕೆ ಪ್ರಯತ್ನಿಸಿದರೆ, ಅದು ಪ್ರಚಂಡ ಆಂದೋಲನವನ್ನು ಹೂಡಲಿಕ್ಕೆ ಸಿದ್ಧವಾಗಿಯೇ ಇರುವದು ಬ್ರಿಟಿಷ ಮುತ್ಸದ್ದಿಗಳು ಭ್ರಮಿತರಾಗದಿರಲಿ. ಇಂದು ಭಾರತದಲ್ಲಿ ಫೆಡರೇಶನಿಗೆ ಇದ್ದಷ್ಟು ವಿರೋಧವು ಮತ್ತಾವುದಕ್ಕೂ ಇರುವುದಿಲ್ಲವೆಂಬುದನ್ನು ಅವರು ಚೆನ್ನಾಗಿ ತಿಳಿದಿರಲಿ.

‘ಗೇಟ್ ವೇ ಆಫ್ ಇಂಡಿಯಾ (ಹಿಂದುಸ್ಥಾನದ ಹೆಬ್ಬಾಗಿಲು) ಮೂಲಕ ನಾನು ವಿದೇಶಗಳಿಗೆ ಪ್ರಯಾಣ ಹೊರಟಿದ್ದೇನೆ ಹಿಂತಿರುಗುವಾಗ ಖೈಬರ ಕಣಿವೆಯ ಮಾರ್ಗವಾಗಿ ಸ್ವದೇಶಕ್ಕೆ ಬರುವೆನು ಯೂರೋಪ ಅಮೇರಿಕಗಳನ್ನು ಸಂಚರಿಸಿ ಚೀನಕ್ಕೂ ಹೋಗಿ ಬರಬೇಕೆಂದಿದ್ದೇನೆ ಕಾಂಗ್ರೆಸ್ಸಿನ ಮಹಾಶಕ್ತಿಯು ನನ್ನ ಈ ಪ್ರವಾಸದಲ್ಲಿ ನನಗೆ ಬೆಂಬಲವಾಗಿದೆ. ಭಾರತದ ಕರೆಯು ಪ್ರಪಂಚದ ಸ್ವತಂತ್ರ ರಾಷ್ಟ್ರಗಳಲ್ಲಿ ಕೇಳಬರಬೇಕೆಂಬುದು ನನ್ನ ಪ್ರಯಾಣದ ಉದ್ದೇಶವಾಗಿರುವದು.

‘ಭಾರತೀಯರೇ! ನೀವು ನಿಮ್ಮ ಕುರಿತು ಅಭಿಮಾನಪಡಿರಿ ಕೆಲಸ ಮಾಡಿರಿ, ಮತ್ತು ಆತ್ಮವಿಶ್ವಾಸವುಳ್ಳವರಾಗಿರಿ. ಇದೇ ನಾನು ಹೊರಡುವಾಗ ನಿಮಗೆ ಕೊಡುವ ಸಂದೇಶವಾಗಿರುವುದು.

ಕೊಚ್ಚಿ ಮಹಾರಾಜರ ಔದಾರ್ಯ
ಸರಕಾರದಲ್ಲಿ ಪ್ರಜಾಪಕ್ಷದ ಮಂತ್ರಿಯ ನೇಮಕ

ಬಹುದಿನಗಳಿಂದಲೂ ನಿರೀಕ್ಷಿತವಾದ ರಾಜಕೀಯ ಸುಧಾರಣೆಗಳು ಈಗ ಕೊಚ್ಚಿಯಲ್ಲಿ ಮೊನ್ನೆ ಪ್ರಾರಂಭವಾಗಿವೆ. ದೇಶೀಯ ಸಂಸ್ಥಾನಗಳು ಬ್ರಿಟಿಷ ಪ್ರಾಂತ್ಯಗಳ ಸಾಲಿಗೆ ಬರುವಂತೆ ನಡೆವ ಪ್ರಯತ್ನಗಳಲ್ಲಿ ಇದೂ ಒಂದು ತಿರುವಾಂಕೂರು ದೇವಳ ಪ್ರವೇಶದಲ್ಲಿ ಮುಂದಾಯಿತು, ಮೈಸೂರು ಮಾದರಿಯೆನಿಸಿತು, ನಿಜ, ಆದರೆ, ಪ್ರಜಾಪಕ್ಷಕ್ಕೆ ಮಂತ್ರಿಪದವಾದರೂ ದೊರೆತುದು ಕೊಚ್ಚಿಯಲ್ಲೇ ಮೊದಲು. ಇಂಡಿಯಾ ಸರಕಾರದ ಗಣತಂತ್ರದ ಮಾದರಿಯನ್ನು ಅನುಸರಿಸಿಯೇ ಈ ಹೊಸ ಕಾನೂನು ಇಲ್ಲಿ ಜ್ಯಾರಿಗೆ ಬಂದಿದೆ.

ದೇಶದ ಎಲ್ಲ ಅಧಿಕಾರವೂ ಮಹಾರಾಜರ ಕೈಯಲ್ಲಿದೆ ಹಾಗೆಂದು ನಿರಂಕುಶಾಧಿಕಾರವಲ್ಲ ಏಕೆಂದರೆ, ಅಧಿಕಾರವನ್ನೆಲ್ಲ ಪ್ರಜಾ ಪ್ರತಿನಿಧಿಯಾಗಿರುವ ಮಂತ್ರಿಯ ಕೈಯ ಮೂಲಕ ನಡೆವಂತೆ ವಿಧಾನವಾಗಿದೆ. ಹೀಗಾಗಿ ಪ್ರಜಾ ಪ್ರತಿನಿಧಿಗಳ ಅಭಿಪ್ರಾಯವನ್ನಾಲಿಸಿಯೆ ಮಹಾರಾಜರು ಆಳುವರೆಂದು ತಿದ್ದುಪಡಿಗಳ ಇಪ್ಪತ್ತಾರರಿಂದ ತಿಳಿಯಬರುತ್ತದೆ.

ನ್ಯಾಯವಿಧಾಯಕ ಸಭೆಯು ಇನ್ನು ಪಾರ್ಲಮೆಂಟಿನ ಗೌರವ ತಳೆವುದು ಆಡಳಿತ ವರ್ಗದ ಮೇಲೂ ಅದಕ್ಕೆ ವಿಚಾರಸ್ವಾತಂತ್ರ್ಯದ ಅಧಿಕಾರವಿದೆ ಸರಕಾರದ ನೀತಿ ವಿಮರ್ಶೆ ಪ್ರಶ್ನೋತ್ತರ ಮೂಲಕ ಖಂಡನ, ನೂತನ ಶಾಸನಾ ವಿಸ್ತರಣ ಮೊದಲಾದವು ಅದಕ್ಕೇ ಸೇರಿವೆ ಒಜೆಟು ಚರ್ಚಾ ಕಾಲದಲ್ಲೂ, ವ್ಯಯದ ಮೇಲೆ ತಡೆಹಾಕುವ ಎಷ್ಟೋ ಇಸಮುಗಳುಂಟು ಕೃಷಿ, ಆಯುರ್ವೇದ, ಸಹಕಾರ, ಪಂಚಾಯತು, ಆರೋಗ್ಯ, ಕೈಗಾರಿಕೆಗಳು, ಹಿಂದುಳಿದ ಸಮಾಜ—ಇವುಗಳಿಗೆ ಸಂಬಂಧಪಟ್ಟ ಇಲಾಖೆಗಳನ್ನು ಪ್ರಜಾಪಕ್ಷದ ಮುಂದಾಳುಗಳಿಗೆ ಒಳಪಟ್ಟ ಮಂತ್ರಿಗಳೇ ನಡೆಸ ಬೇಕಾಗಿದೆ

ಕೌನ್ಸಿಲಿನಲ್ಲಿ 58 ಮಂದಿ ಸದಸ್ಯರು, ಇಲ್ಲಿನಂತೆ ನುಕದಾರರನ್ನು ನೇಮಿಸಿ, ಅವರಿಂದ 8 ಮಂದಿಯನ್ನು ಚುನಾವಣೆ ಮೂಲಕವೂ ಸುಮಾರು 10 ಮಂದಿಯನ್ನು ಸರಕಾರವು ನೇಮಿಸುವ ಮೂಲಕವೂ ಆರಿಸ ಗರು.

ಹಾಗೆಂದು ಯಾವತ್ತು ಅಧಿಕಾರವು ಪ್ರತಿನಿಧಿಗಳ ಕೈಗೆ ಒರುವುದಿಲ್ಲ ದಿವಾನರೇ ವಿದ್ಯಾಭ್ಯಾಸ ವೈದ್ಯಸಹಾಯ ಇಲಾಖೆಗಳನ್ನು ಆಳುವರು ಆದರೆ, ಮಂತ್ರಿಗಳ ಅಧಿಕಾರ ದೊಳಗೆ ಮಲ್ಲನೆ ಇತರ ಇಲಾಖೆಗಳನ್ನು ಸೇರಿಸಿಕೊಳ್ಳಲು ಬಹುದೆಂದು ದಿವಾನರಿಗೆ ಅವರ ಕೆಳಗಿನ ಇಲಾಖೆಗಳ ಮೇಲಿನ ಅಧಿಕಾರವು, ಮಂತ್ರಿಗಳಿಗೆ ಒಪ್ಪಿಸಿದ ಇಲಾಖೆಗಳ ಮೇಲೆ ಮಂತ್ರಿಗಳಿಗೆ ಇದೆ

ಮೊದಲನ ಮಂತ್ರಿಗಳಾಗಿ ಶ್ರೀ ಶಿವರಾಮ ಮೆನೋನ್ (ಕಾಂಗ್ರೆಸ್) ಇವರನ್ನು ನೇಮಿಸಲಾಗಿದೆ

ಶಬರಿ ಮಲೆಯ ಬೌದ್ಧದೇವಾಲಯ
ಎಲ್ಲೆಲ್ಲಿಯೂ ಸರ್ವಧರ್ಮಭಕ್ತರ ಶ್ರದ್ಧೆ

ಇದು ತ್ರಿವಾಂಕೂರಲ್ಲಿರುವ ಬೌದ್ಧದೇವಾಲಯಗಳಲ್ಲಿ ಅಗ್ರಗಣ್ಯವಾಗಿದೆ. ದುರ್ಭೇದ್ಯ ಕಾಡು (ಮಲೆಯಲ್ಲಿದೆ) ಸರಕಾರವೇ ಇದರ ಆಡಳಿತವನ್ನು ನೋಡುತ್ತದೆ. ಪೂಜೆ ಮಾಡುವಾತನು ಬ್ರಾಹ್ಮಣ (ಅಯ್ಯರ್) ಮಕರ ಸಂಕ್ರಮಣದ ಕಾಲಕ್ಕೆ ಇಲ್ಲಿ ಲಕ್ಷಾಂತರ ಭಕ್ತರ ಹಿಂಡೇ ಬರುವುದು ಅಲ್ಲಿಟ್ಟ ಧರ್ಮಪಂಡಿತನ ಪಟ್ಟಿಗೆಯಲ್ಲಿ ಈ ವರ್ಷ 80,000 ರೂಪಾಯಿ ಭಕ್ತರಿಂದ ಪಂಕ್ತಿಗೆ ದೊರೆತಿದೆ. ಕಲಾ 2 ಆಣೆ ಎಂದರೂ, ಸುಮಾರು 2½ ಲಕ್ಷ ಜನರು ಕಾಣಿಕೆ ಹಾಕಿದರೆಂದು ತೋರುವುದು ಇಲ್ಲಿಗೆ ಬರುವ ಮೊದಲು ಜನರು 40 ದಿನ ವ್ರತಬದ್ಧರಾಗಿರಬೇಕು ಇಲ್ಲಿಂದ ಅರೆದೂರವಾಗಿ ಎರುಮೇಲಿ ಇದೆ. ಅಲ್ಲಿ ಮುಸ್ಲಿಮರ ಮಸೀದಿ ಇದೆ ಶಬರಿ ಮಲೆಯಲ್ಲಿ ದರ್ಶನಕ್ಕೆ ಬರುವ ಮೊದಲಿನ ರಾತ್ರಿ ಭಕ್ತರೆಲ್ಲ ಈ ಮಸೀದಿಗೆ ಬಂದು ಅಲ್ಲಿ ಆರಾಧನೆ ಮಾಡಿ, ಪ್ರಸಾದ ತೆಗೆದುಕೊಳ್ಳುವರು. ಅಲ್ಲಿನ ಮುಸ್ಲಿಮ ವೈದಿಕರಿಂದ ಪ್ರಸಾದ ಪಡೆದು, ಭಕ್ತರೆಲ್ಲ ‘ಅಯ್ಯಪ್ಪ ಶರಣಂ’ ಎಂದು ಭಜನೆ ಮಾಡುತ್ತ ನರ್ತನ ಮಾಡುವರು ಈ ಪ ಸೀದಿಗ ಗೌರವ ಕೊಡದವರಿಗೆ ದೇವಾಲಯದಲ್ಲಿ ದೇವದರ್ಶನವಿಲ್ಲ ಹಾಗೆಂದು, ಬೌದ್ಧಪ್ರತಿಮೆಯು ಮೊದಲು ಯಾವ ಆರಾಧನೆಯನ್ನೂ ಈ ಹಿಂದು ಪಡೆದುದಿಲ್ಲ ಬೌದ್ಧ ಹಿಂದು ಮುಸ್ಲಿಮ ಧರ್ಮಗಳೆಲ್ಲ ಈ ಬಗೆಯಾಗಿ ಗೌರವಪಡೆಯುತ್ತವೆ ಕಂಡಿರಾ?

ತಿರುವನಂತಪುರದಲ್ಲಿ ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಆರಾಟ ಉತ್ಸವ ಇದೇ ರಾಜ್ಯದಲ್ಲೆಲ್ಲ ಪ್ರಾಮುಖ್ಯವಾದುದು ಮಹಾರಾಜರು ಸರಕಾರದ ಅಧಿಕಾರಿಗಳ ದೇವವಿಗ್ರಹಗಳ ಮುಂದೆ ನೂರು ಮೈಲವರೆಗೆ ನಡೆದುಕೊಂಡೇ ಹೋಗುವರು. ಆದರೆ ಈ ಉತ್ಸವದ ಮುಂಭಾಗದಲ್ಲಿದ್ದು, ಮೆರವಣಿಗೆ ನಡೆಸಿಕೊಡುವನು ಒಬ್ಬ ಮುಸಲ್ಮಾನ, ಆತನನ್ನು ‘ಅಂಬಲ ಪಟ್ಟಿ’ ಎನ್ನುವರು ಹಳೆಯ ಪದ್ಧತಿಯಂತೆ, ಆತನ ಸರಕಾರವೇ ವೇತನಕೊಟ್ಟು ಇಟ್ಟುಕೊಂಡಿದೆ

ನಾಗರ ಕೋಯಿಲ್‌ನ ಸ್ಮಿಟ್ ಜೆ ವಿ ಸ್ಸ್ ಚರ್ಚ ಕ್ರಿಸ್ತ ದೇವಾಲಯ. ದಕ್ಷಿಣ ಹಿಂದ ಸ್ಥಾನದಲ್ಲಿ ಅತಿ ದೊಡ್ಡದಾದ ಕೆಥೆಡ್ರಲ್ ದೇವಾಲಯ, ಗೋಪುರ ದೇಲಯಕ್ಕೆ ಎರಡನೆಯದು ವಿಶೇಷವಿದೆ ಇಲ್ಲಿ ವಾರ್ಷಿಕ ಜಾತ್ರೆಯಾಗ ವುದ ಹಿಂದು ಮುಸ್ಲಿಮ್ ಕ್ರೈಸ್ತರೆ ಇರದೆ ಸರ್ವ ಭಕ್ತರೆರೆದ ಕಾಣಿಕೆ ಇಡುವರು

ರಾಮೇಶ್ವರ ದೇವಾಲಯದ ಎದುರು ಬಾಗಿಲಿನ ಎಷ್ಟೋ ದೂರದಲ್ಲಿ ಯಾವ ಜನಸಿಗೂ ನಿಲ್ಲಲು ಅಪ್ಪಣೆಯಿಲ್ಲ ಮುಸುರು ಇಲ್ಲಿ ಜೋರನ ಬಾಣದ ವರೆಗೆ ಒಂದು ಅಲ್ಲಿ ಕೃತಿಗಳನ್ನು ಮಾಡುವರು! ಪಾಸ್ಲಿನ ಇಲ್ಲಿ ಸಾಲಿಗ್ರಾಮ, ಶಂಖ, ಶಿವಲಿಂಗ, ದೇವವಿಗ್ರಹ ಮೊದಲಾದವನ್ನು ಮಾರುವರು ಹಿಂದುಗಳು ಪ್ರತಿದಿನ ಆರಾಧಿಸುವ ಪೂಜಾವಸ್ತುಗಳನ್ನು ಇವರೇ ಮಾರುವರು.

ಸುಬ್ರಹ್ಮಣ್ಯ ದೇವಸ್ಥಾನದ (ಪಲನಿ) ವಿಭೂತಿಯನ್ನು ಮಾರುವವರು ಮುಸ್ಲಿಮರು ಇವರು ಪಂಚಾಮೃತವನ್ನೂ ಪ್ರಿಗ್ರಾಪ್ರಕ್ಷಗಳನ್ನು ಮಾರುತ್ತಾರೆ.

ಶ್ರೀರಂಗ ಕಂಚಿಗಳಲ್ಲೂ ಸರ್ವಭಕ್ತಾಧಿಕಾರವುಂಟು, ತಂಜಾವೂರದಲ್ಲಿ ನಾಗಮಸೀದಿಯಲ್ಲಿ ಎಲ್ಲ ಜಾತಿಯವರೂ ಜಮಸುವರು.

ಹೀಗಿರುವಾಗ, ನಾನಾ ಜಾತಿಗಳ ಒಡೆದಾಡಿಕೊಳ್ಳಲೇಕೆ?

ಚೀನಕ್ಕೆ ಮಿಲಿಯಾಂತರ ಮುಸಲ್ಮಾನರ ಬೆಂಬಲ

ಚೀನದಲ್ಲಿ ಮಿಲಿಯಾಂತರ ಮುಸಲ್ಮಾನರು ವಾಸವಾಗಿದ್ದಾರೆ. ಚೀನದ ಜನಸಂಖ್ಯೆಯ ಸೇಕಡಾ 10ರಷ್ಟು ಮುಸಲ್ಮಾನರಾಗಿರುವರು. ಇವರು ಸಾಮಾನ್ಯತ ವಾಯುವ್ಯದ ಗಡಿನಾಡಾಗಿರುವ ಕಾನ್ಸು, ನಿಂಗ್ಸಿಯಾ ಮತ್ತು ಚಿಂಗ್ಹಾಯ ಪ್ರಾಂತ್ಯಗಳಲ್ಲಿ ವಾಸವಾಗಿರುವರು.

ಇವರೇ ಈಗ ಜಪಾನಿಯರ ಪ್ರಬಲ ಆಕ್ರಮಣಗಳಿಂದ ಚೀನವನ್ನು ಕಾಪಾಡಲಿಕ್ಕೆ ಸರ್ವಸ್ವವನ್ನೂ, ಕೊನೆಗೆ ತಮ್ಮ ಪ್ರಾಣಗಳನ್ನೂ ಕೊಡಲಿಕ್ಕೆ ಸಿದ್ಧರಾಗಿ ನಿಂತಿದ್ದಾರೆ.

★

[illegible] 651ರಲ್ಲಿ [illegible] ಮುಸಲ್ಮಾನರು ಚೀನದಲ್ಲಿ ಕಾಲಿಟ್ಟರು. ಮಹಮ್ಮದ ಪೈಗಂಬರರ ಮಾವಂದಿರಲ್ಲಿ ಒಬ್ಬರಾದ ವಾಹಬ್–ಅಬಿ–ಕಾಬ್ಶಾ ಎಂಬವರು ಆಗ್ಗೆ ಆಳುತ್ತಿದ್ದ ಚೀನದ ಚಕ್ರವರ್ತಿ ಕಾವೋ ಸಿಂಗರನ್ನು ಸಂದರ್ಶಿಸಿದ ಮೇಲೆ ಮುಸಲ್ಮಾನರು ಒಬ್ಬರ ಹಿಂದೆ ಒಬ್ಬರಾಗಿ ಚೀನಕ್ಕೆ ಬರಲಾರಂಭಿಸಿದರು. ಏಳನೆ ಶತಮಾನವು ಮುಗಿಯುವದರೊಳಗೆ–ಅಂದರೆ ವಾಹಬರು ಬಂದ 50 ವರ್ಷಗಳಲ್ಲಿ ಸಾವಿರಾರು ಮಂದಿ ಮುಸಲ್ಮಾನರು ಚೀನವನ್ನು ತಮ್ಮ ಮನೆಯಾಗಿ ಮಾಡಿಕೊಂಡಿದ್ದರು. ಕೆಲವರು ಸಮುದ್ರ ಮಾರ್ಗವಾಗಿಯೂ, ಉಳಿದವರು ಪರ್ಶಿಯ ಅಫಘಾನಿಸ್ತಾನಗಳ ಮೂಲಕವೂ ಚೀನದಲ್ಲಿ ಬಂದು ನೆಲಸಿದರು. 755ನೆ ಇಸವಿಯಲ್ಲಿ ಚೀನದ ಸರಕಾರದ ವಿರುದ್ಧ ಅಲ್ಲಿ ಒಂದು ದೊಡ್ಡ ಬಂಡಾಯವಾಗಿತ್ತು. ಚೀನದ ಸರಕಾರವು ಅಪೇಕ್ಷಿಸಿದ ಪ್ರಕಾರ ಬಂಡಾಯವನ್ನು ಅಣಗಿಸಲಿಕ್ಕೆ ಕಲೀಫ್ ಅಬುಗಾಫರನು 4000 ಅರಬ್ಬಿ ವೀರರನ್ನು ಚೀನಕ್ಕೆ ಕಳುಹಿಸಿಕೊಟ್ಟಿದ್ದನು. ಈಗ ಇರುವ 50 ಮಿಲಿಯ ಮುಸಲ್ಮಾನರು, ಹಿಂದೆ ಬಂದ ಆ ಕೆಲವು ಸಾವಿರ ಮುಸಲ್ಮಾನರ ವಂಶಜರಾಗಿದ್ದಾರೆ.

ಚೀನದ ಈ ಮುಸಲ್ಮಾನರು–ಸಾವಿರಾರು ವರ್ಷಗಳು ಕಳೆದು ಹೋದರೂ, ತಮ್ಮ ಹಳೇ ಸಂಪ್ರದಾಯಗಳನ್ನನುಸರಿಸಿಯೇ ಜೀವನ ಮಾಡುತ್ತಿರುವದು ಒಂದು ವಿಶೇಷವಾಗಿದೆ. ಆದರೆ ಇವರು ಬಹಳ ಧೀರರೂ, ಕಷ್ಟಸಹಿಷ್ಣುಗಳೂ, ಬಹಳ ಸಂಘಟಿತರಾಗಿ ಕೆಲಸ ಮಾಡುವವರೂ ಆಗಿದ್ದಾರೆ. ಪ್ರತಿಯೊಬ್ಬರು ಬಾಲ್ಯದಿಂದ ಸೈನಿಕ ಶಿಕ್ಷಣವನ್ನು ಪಡೆದಿರುತ್ತಾರೆ. ಪಶ್ಚಿಮ ಸುಯಿಯಾನ ಪ್ರಾಂತ್ಯದಲ್ಲಿರುವ ಜಪಾನರು ಒಂದು ವೇಳೆ ಈ ಅಪ್ರತಿಮ ಸಾಹಸಿಗಳಾದ ಮುಸಲ್ಮಾನರು ವಾಸವಾಗಿರುವ ಚೀನದ ವಾಯುವ್ಯ ಪ್ರಾಂತ್ಯಗಳನ್ನು ಆಕ್ರಮಿಸುವ ಆಲೋಚನೆ ಮಾಡಿದರೆ, ಅವರನ್ನು ಸಮರಾಂಗಣದಲ್ಲಿ ಯುದ್ಧ ಮಾಡಿ ಸೋಲಿಸುವದು ಜಪಾನಿಯರಿಗೆ ಕಠಿಣವಾಗಿರುವದು.

ಜಪಾನಿಯರ ಕುಟಿಲೋಪಾಯ.

ಆದ್ದರಿಂದ ಬೇರೋಪಾಯದಿಂದ ಈ ದೇಶಾಭಿಮಾನಿಗಳಾದ ಈ ಮುಸಲ್ಮಾನರನ್ನು ತಮ್ಮ ಪಕ್ಷಕ್ಕೆ ಮಾಡಿಕೊಂಡು ಅವರ ಸಹಾಯದಿಂದ ಚೀನವನ್ನು ಗೆಲ್ಲಬೇಕೆಂದು ಜಪಾನು ನಾನಾ ರೀತಿಯ ಕುತಂತ್ರಗಳನ್ನು ಮಾಡಿದೆ. ಆದರೆ ಇಷ್ಟರ ತನಕ ಅವರ ಪ್ರಯತ್ನವು ವ್ಯರ್ಥವಾಗಿದೆ. ಈ ಮುಸಲ್ಮಾನರ ಸಂಘಟನೆಯನ್ನು ಮುರಿಯುವದು ಜಪಾನಿಯರಿಗೆ ಸಾಧ್ಯವೆಂದು ತೋರುವುದಿಲ್ಲ. ಮಾತ್ರವಲ್ಲ ಚೀನದಲ್ಲಿ ನಾದಿಯಿಂದ ವಾಸಮಾಡಿಕೊಂಡು ಬಂದ ಬೇರೆ ಬೇರೆ ಜಾತಿ ಮತ ಪಂಗಡಗಳವರೊಳಗೆ ಅಂತಃಕಲಹವುಂಟಾಗುವಂತೆ ಮಾಡಿ, ಅದರಿಂದ ತಾನು ಪ್ರಯೋಜನ ಪಡೆಯುವ ಜಪಾನಿನ ದುಸ್ಸಾಧನೆಯೂ ನಿರರ್ಥಕವಾಗಿದೆ. ಜಪಾನಿನ ಕುಟಿಲ ತಂತ್ರಗಳನ್ನೆಲ್ಲ ಬಯಲು ಮಾಡಿ ಚೀನದ ಮುಸಲ್ಮಾನರು, ಜಪಾನಿನ ಆಕ್ರಮಣಗಳಿಂದ ಚೀನವನ್ನು ಕಾಪಾಡುವ, ಚೀನೀ ಸರಕಾರಕ್ಕೆ ಸಾಧ್ಯವಿದ್ದ ಎಲ್ಲಾ ಸಹಾಯಗಳನ್ನು ಕೊಡುವ ದೃಢನಿರ್ಧಾರವನ್ನು ಮಾಡಿರುವರು. ತಾವು ಅಸ್ತ್ರಶಸ್ತ್ರಗಳಿಂದ ಸುಸಜ್ಜಿತರಾಗಿ ಚೀನೀ ಸರಕಾರದ ಬೆಂಬಲಕ್ಕೆ ಬಂದಿರುವದು ಮಾತ್ರವಲ್ಲದೆ, ಪ್ರಪಂಚದ ಇತರ ಭಾಗಗಳ ಮುಸಲ್ಮಾನರೂ ಚೀನದ ಸಹಾಯಕ್ಕೆ ಬರುವಂತೆ ಅವರನ್ನು ಪ್ರೇರೇಪಿಸಿ, ಸಾವಿರಾರು ವರ್ಷಗಳಿಂದ ತಿಂದ ಚೀನದ ಉಪ್ಪಿನ ಋಣವನ್ನು ತೀರಿಸುವ ಸಣ್ಣ ಪ್ರಯತ್ನ ಮಾಡಬೇಕೆಂದು ಅವರು ಪ್ರತಿಜ್ಞೆ ತೆಗೆದುಕೊಂಡಿದ್ದಾರೆ.

ಆದರೂ ಜಪಾನಿಯರು ಅವರೊಳಗೆ ಚೀನೀ ಸರಕಾರದ ವಿರುದ್ಧ ಅಪಪ್ರಚಾರ ಮಾಡುವದನ್ನು ಬಿಟ್ಟಿರುವದಿಲ್ಲ. ಜಪಾನಿನ ಬೇಹಿನವರು ಬೇರೆ ಮುಸಲ್ಮಾನ ದೇಶಗಳಿಗೂ ಹೋಗಿ ಸಂಭಾವಿತರಂತೆ ವೇಷ ಹಾಕಿಕೊಂಡು ಚೀನದ ಮುಸಲ್ಮಾನರು ಅಲ್ಲಿಯ ರಾಷ್ಟ್ರೀಯ ಸರಕಾರದ ವಿರುದ್ಧ ಬಂಡಾಯವನ್ನೆಬ್ಬಿಸಿದ್ದಾರೆ, ಚೀನದ ಮುಸಲ್ಮಾನರು ತಮ್ಮದೇ ಆದ ಒಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಪ್ರಯತ್ನ ಮಾಡಿದ್ದಾರೆ ಎಂದು ಮೊದಲಾಗಿ ಸುಳ್ಳುವಾರ್ತೆಗಳನ್ನು ಹರಡಿಸುರುವರು. ಹೀಗೆ ಮುಸಲ್ಮಾನರೊಳಗೆ ಒಡಕು ಉಂಟಾಗುವ ಸಂಭವವನ್ನು ನೋಡಿ, ಚೀನದ ಮುಸಲ್ಮಾನರು ಈ ದೇಶಗಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ, ಸತ್ಯವನ್ನು ಅಲ್ಲಿಯ ಜನರಿಗೆ ಹೇಳಿಕೊಟ್ಟು, ಜಪಾನಿಗಳು ಕೇವಲ ತಮ್ಮ ಸ್ವಾರ್ಥಬೆಳೆಯನ್ನು ಬೇಯಿಸಲಿಕ್ಕಾಗಿಯೇ ಸುಳ್ಳು ವಾರ್ತೆಗಳನ್ನು ಹಬ್ಬಿಸುತ್ತಿದ್ದಾರೆಂದೂ, ಅವರನ್ನು ಎಷ್ಟು ಮಾತ್ರಕ್ಕೂ ನಂಬಕೂಡದೆಂದು ಹೇಳಿಕಳುಹಿಸಿದ್ದಾರೆ. ಎಂಥ ಪ್ರಸಂಗದಲ್ಲಿಯಾದರೂ ಚೀನವನ್ನು ಆಕ್ರಮಿಸಿ ಅದರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಜಪಾನಿನ ಅನ್ಯಾಯಕ್ಕೆ ತಕ್ಕ ಪ್ರತಿಕಾರ ಮಾಡದೆ ಇರಲಾರೆವೆಂದು ಚೀನೀ ಮುಸಲ್ಮಾನರು ಶಪಥ ಹಾಕಿಕೊಂಡಿರುವರು.

ಮಸೀದಿಯಲ್ಲಿ ಬೃಹತ್ಸಭೆ.

ಇತ್ತಲಾಗೆ ಹೆಂಕೋ ಪಟ್ಟಣದ ಮಸೀದಿಯಲ್ಲಿ ದೇಶದ ಎಲ್ಲಾ ಮುಸಲ್ಮಾನ ಪ್ರತಿನಿಧಿಗಳ ಒಂದು ಬೃಹತ್ಸಭೆಯು ಕೂಡಿತು. ಜಪಾನರನ್ನು ವಿರೋಧಿಸಲಿಕ್ಕೆ ಅಗತ್ಯವುಳ್ಳ ಎಲ್ಲಾ ಕೆಲಸಗಳನ್ನು ಮಾಡುವದಕ್ಕೋಸ್ಕರ ಒಂದು ಕಮಿಟಿಯ ರಚನೆಯಾಯಿತು. ಈ ಕಮಿಟಿಯು ಪರದೇಶಗಳಲ್ಲಿ ಪ್ರಚಾರಕ್ಕಾಗಿ ಕಳುಹಿಸಿದ ಮುಸಲ್ಮಾನ ಪ್ರತಿನಿಧಿಗಳೊಂದಿಗೆ ಕೂಡಿ ಕೆಲಸ ಮಾಡುವದು. ಪ್ರಾಯಕ್ಕೆ ಬಂದ ಎಲ್ಲಾ ಸಶಕ್ತ ಮುಸಲ್ಮಾನರು ಸೇನೆಗೆ ಸೇರಿ ವೈರಿಗಳೊಂದಿಗೆ ಪ್ರಾಣ ಹೋಗುವ ತನಕ ಹೋರಾಡಬೇಕು, ಹೋರಾಟಕ್ಕೆ ಬೇಕಾದ ಹಣ ಮತ್ತು ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಒದಗಿಸಿ ಕೊಡಬೇಕು, ಚೀನಕ್ಕೆ ಪ್ರಾಪ್ತವಾದ ಈ ಆಪತ್ತಿಯಲ್ಲಿ ಅದರ ಕಷ್ಟಗಳನ್ನು ದೂರ ಮಾಡಲಿಕ್ಕೆ ತ್ರಿಕರಣ ಶುದ್ಧಿಯಿಂದ ಪ್ರಯತ್ನ ಮಾಡುವದು ಎಲ್ಲಾ ಮುಸಲ್ಮಾನ ಸಹೋದರರ ಧರ್ಮ ಮತ್ತು ಕರ್ತವ್ಯವಾಗಿದೆ, ಅಂತರಾಷ್ಟ್ರೀಯ ಶಾಂತಿ ಮತ್ತು ನ್ಯಾಯ ರಕ್ಷಣೆಗಾಗಿ ಮುಸಲ್ಮಾನರೆಲ್ಲರೂ ಒಂದಾಗಿ ಚೀನದಲ್ಲಿ ಮುಂಧರಿಯಬೇಕು ಎಂದು ಮೊದಲಾದ ಆ ಸಭೆಯಲ್ಲಿ ಸರ್ವಾನುಮತಿಯ ನಿರ್ಣಯಗಳಾಗಿರುವವು. ಚೀನೀ ಮುಸಲ್ಮಾನ ಶಸ್ತ್ರ ವ್ಯವಸ್ಥೆ, ಜಾತಿಸಂಘಟನೆಗಳು, ಮೊದಲಿಗಿಂತಲೂ ದೃಢವಾಗುವಂತೆ ಎಲ್ಲಾ ಜಾತಿ ಮುಖಂಡರು ಸೇರಿ ಹಗಲಿರುಳು ದುಡಿಯುತ್ತಿದ್ದಾರೆ.

ಇದರಿಂದ ಚೀನದ 60 ಮಿಲಿಯ ಮುಸಲ್ಮಾನರೂ ಬಹಳ ಪ್ರಭಾವಿತರಾಗಿದ್ದಾರೆ. ಅವರು ತಮ್ಮ ಮಾತೃಭೂಮಿಯ ಮೇಲೆ ಜಪಾನು ನಡಿಸಿರುವ ಆಕ್ರಮಣವನ್ನು ವಿರೋಧಿಸಲಿಕ್ಕೆ ಸೊಂಟ ಕಟ್ಟಿನಿಂತಿದ್ದಾರೆ. ಹೆಂಕೋ ಪಟ್ಟಣದಲ್ಲಿ ಆಧುನಿಕ ಕ್ರಮಗಳಿಂದ ಸೈನಿಕ ಶಿಕ್ಷಣವನ್ನು ಕೊಡುವ ಒಂದು ಶಾಲೆಯು ತೆರೆಯಲ್ಪಟ್ಟಿದೆ. ದೇಶದ ಬೇರೆ ಬೇರೆ ಭಾಗಗಳಿಂದ ಬಂದ 1500 ಮಂದಿ ಮುಸಲ್ಮಾನ ಯುವಕರು ಇಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾರೆ. ಇವರು ತಮ್ಮ ತರಬೇತಿಯನ್ನು ಮುಗಿಸಿದ ಬಳಿಕ ತಮ್ಮ ತಮ್ಮ ಊರುಗಳಿಗೆ ಹೋಗಿ ಅಲ್ಲಿ ಉಳಿದವರಿಗೂ ಯುದ್ಧ ಶಿಕ್ಷಣವನ್ನು ಕೊಡುವರು. ಇದರಿಂದಾಗಿ ಇನ್ನು ಸ್ವಲ್ಪ ಸಮಯದೊಳಗಾಗಿಯೇ ಚೀನೀ ಮುಸಲ್ಮಾನರ ಮಿಲಿಯಾಂತರ ಯೋದ್ಧರು ಇರುವ ಒಂದು ದೊಡ್ಡ ಸುಶಿಕ್ಷಿತ ಸೈನಿಕ ಪಡೆಯು ಚೀನದ ರಾಷ್ಟ್ರೀಯ ಸರಕಾರದ ಸಹಾಯಕ್ಕೆ ಸಿದ್ಧವಾಗುವದು. ವಾಯುವ್ಯದ ಸಂದುಕಟ್ಟಿನ ಸ್ಥಾನಗಳಲ್ಲೆಲ್ಲಾ ಸರಿಯಾದ ಶಿಕ್ಷಣವನ್ನು ಪಡೆದ ಸ್ಥಳೀಯ ಸೇನೆಗಳು ಇದ್ದು, ಜಪಾನಿಗೆ ಚೀನವನ್ನು ಗೆಲ್ಲುವುದು ಕನಸಿನಲ್ಲಿಯೂ ಸಾಧ್ಯವಿಲ್ಲವೆಂತಾಗುತ್ತದು. ಕಟ್ಟ ಕಡೆಗೆ ಚೀನ ಸಂಪೂರ್ಣ ಜಯ ಹೊಂದುವದು.

The Estates & Agency Co., Ltd.

Incorporated in England.

ಮಿಶ್ರರಹಿತ ಟೀ ಬಗ್ಗೆ ಭದ್ರತೆ

ನಮ್ಮ ಎಸ್ಟೇಟುಗಳಲ್ಲಿ ತಯಾರಾಗುವ ಟೀಗಳನ್ನು ಈ ಕೆಳಗೆ ಸೂಚಿಸಿದ ನಿಶಾನಿ ಮತ್ತು ಅಡ್ಡಪಟ್ಟಿಗಳಿಂದ ಸುತ್ತಲಟು, ಸೀಲ್‌ಮಾಡಿದ ಪೆಟ್ಟಿಗೆಗಳಲ್ಲಿಯೇ ಮಾರಲ್ಪಡುತ್ತದೆಂದು ಎಲ್ಲರಿಗೂ ತಿಳಿಸಲು ಅಪೇಕ್ಷಿಸುತ್ತೇವೆ.



PYKARA NO. 1 DUST.
SEAFORTH NO. 1 DUST.
HIGHFOREST NO. 1 DUST.

ನಮ್ಮ ಜನಪ್ರೀತವಾದ ಮತ್ತು ಒಳ್ಳೇ ಖಾತ್ರಿಯಾದ ಮತ್ತು ಬೆರಕೆರಹಿತವಾದ ಟೀ ಪೆಟ್ಟಿಗೆಗಳನ್ನು ಡೆಲಿವರಿ ಪಡಕೊಳ್ಳುವಾಗ ನಮ್ಮ ನಿಶಾನಿಯಂತೆ ಪಟ್ಟಿ ಸುತ್ತಿದ ಮತ್ತು ಸೀಲು ಉಳ್ಳವುಗಳನ್ನು ಮಾತ್ರ ನೋಡಿ ಪಡಕೊಳ್ಳುವದು.

The Estates & Agency Company Ltd.
Head Office:-NADUVATAM P. O.
Sales Branch:-COCHIN.

ನಮಗೆ ದೇವಸ್ಥಾನಗಳು ಬೇಕೇ?

(ಹಿಂದಿನ ಸಂಚಿಕೆಯಿಂದ ಮುಂದುವರಿಸಿದುದು)

ಹಿಂದಿನ ಸಂಚಿಕೆಯಲ್ಲಿ ಆರ್ಥಿಕ ಅಥವಾ ಲೌಕಿಕ ಮಾರ್ಗದ ವಿಷಯವಾಗಿ ಸಂಕ್ಷೇಪದಲ್ಲಿ ಸೂಚಿಸಿದ್ದಾಯಿತು. ಇನ್ನು ಪಾರಮಾರ್ಥಿಕ ಮಾರ್ಗದ ವಿಷಯದಲ್ಲಿ ಸೂಚಿಸುವಾಗ, ನಾವು ದೇವಸ್ಥಾನಗಳಲ್ಲಿ ಹೇಗೆ ವರ್ತಿಸಬೇಕೆಂಬದಾಗಿ ಸ್ವಲ್ಪ ವಿಚಾರಿಸೋಣ. ದೇವಸ್ಥಾನಗಳನ್ನು ದೇವರ ಅಸ್ತಿತ್ವವನ್ನು ಸೂಚಿಸುವುದಕ್ಕಾಗಿ ನಿರ್ಮಿಸಿದ್ದೆಂಬುದನ್ನು ಈ ಮುಂಚೆ ಸೂಚಿಸಿದ್ದೇವಷ್ಟೆ. ದೇವರು ಸರ್ವವ್ಯಾಪಕನಾಗಿದ್ದರೂ ಆ ಸರ್ವವ್ಯಾಪಿತ್ವವನ್ನು ನಮ್ಮಂಥಾ ಅಜ್ಞಾನಿಗಳು ಅನುಭವಕ್ಕೆ ತರುವದು ಬಹಳ ಕಷ್ಟವಾಗಿರುವದರಿಂದ, ಪ್ರಥಮತಃ ದೇವರು ಆ ಮೂರ್ತಿಯಲ್ಲಿ ಇದ್ದಾನೆ ಎಂಬದನ್ನು ದೃಢಮಾಡಿಕೊಂಡು ಪ್ರತಿನಿತ್ಯವೂ ದೇವಸ್ಥಾನಕ್ಕೆ ಹೋಗಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ದೇವರನ್ನು ನಿತ್ಯವೂ ಪ್ರಾರ್ಥಿಸುತ್ತಿರುವಾಗ ನಮ್ಮಲ್ಲಿ ಪಾರಮಾರ್ಥಿಕ ಜ್ಞಾನಪ್ರಾಪ್ತಿಗೆ ಅನುಕೂಲವಾಗುತ್ತದೆ. ಮೇಲೆ ಹೇಳಿದಂತೆ ಪ್ರತಿನಿತ್ಯವೂ ದೇವಸ್ಥಾನಕ್ಕೆ ನಾವು ಹೇಗೆ ಹೋಗತಕ್ಕದೆಂದು ಪ್ರಥಮತಃ ವಿಚಾರಿಸೋಣ. ಹೊರಗೊಳಗೆ ಶುದ್ಧನಾಗಿಯೇ ದೇವಸ್ಥಾನವನ್ನು ಪ್ರವೇಶಿಸತಕ್ಕದ್ದು. ಹೊರಗಣ ಶುದ್ಧಿ ಎಂದರೆ ಪ್ರಾತಃಕಾಲದಲ್ಲಿ ಸ್ನಾನ ಮಾಡಿ ನಿರ್ಮಲವಾದ ವಸ್ತ್ರಗಳನ್ನು ಉಟ್ಟುಕೊಳ್ಳುವದು ಇತ್ಯಾದಿ. ಒಳಗಣ ಶುದ್ಧಿ ಎಂದರೆ ಮನಸ್ಸಿನಿಂದ ಸಕಲ ಚಿಂತೆಗಳನ್ನೂ, ದ್ವೇಷ, ಅಸೂಯೆ, ಮತ್ಸರಾದಿಗಳನ್ನೂ ತೊರೆದು ನಿರ್ಮಲಚಿತ್ತನಾಗಿರುವದು. ಈ ರೀತಿ ಬಹಿರಂತಃ ಶುದ್ಧನಾಗಿ ದೇವಸ್ಥಾನವನ್ನು ಪ್ರವೇಶಿಸುವುದರಿಂದ ದೇವರಲ್ಲಿ ನಮಗೆ ಭಯಭಕ್ತಿಗಳು ಉಂಟಾಗುತ್ತವೆ. ಅಂಥಾ ಭಯಭಕ್ತಿಗಳು ನಮ್ಮಲ್ಲಿ ಉಂಟಾಗುತ್ತಲೇ ನಮ್ಮ ಎಲ್ಲಾ ದುರ್ಗುಣಗಳು ತಾವಾಗಿಯೇ ದೂರ ತೊಲಗುವುದಲ್ಲದೆ ದೇವಸ್ಥಾನದಲ್ಲಿ ದೇವರ ಸನ್ನಿಧಿಯಲ್ಲಿ ಯಾವ ತರದ ಹಾಳುಹರಟೆಗಳನ್ನು ಮಾತಾಡುವುದಕ್ಕಾಗಲೀ ಕೇಳುವುದಕ್ಕಾಗಲೀ ನಮ್ಮ ಮನಸ್ಸು ಒಡಂಬಡುವದಿಲ್ಲ. ಈ ರೀತಿ ಪ್ರತಿನಿತ್ಯವೂ ಆಚರಿಸುವುದಲ್ಲದೆ ದೇವಸ್ಥಾನದಲ್ಲಿ ನಡೆಯುವ ಆರಾಧನೆ ಉತ್ಸವಾದಿ ವಿನಿಯೋಗಗಳ [illegible] ಕಲ್ಲಿಯೂ ಇದೇ ರೀತಿ ವರ್ತಿಸಿ ಆ ವಿನಿಯೋಗಗಳು ಸಾಂಗವಾಗಿ ನಡೆಯುವಂತೆ ನಾವು ಸಹಕರಿಸತಕ್ಕದ್ದು. ದೇವಸ್ಥಾನದಲ್ಲಿ [illegible]ಕಾದಶಿ ಮತ್ತು ಇತರ ಪವಿತ್ರ ದಿನಗಳಲ್ಲಿ [illegible]ಹ ಭಜನೆಯು ನಡೆಯುತ್ತಿದೆ. ನಾವು ದೇವರ [illegible]ಗುಣಗಳನ್ನು ಕೇಳುವುದರಿಂದಲೂ ಹಾಡುವುದರಿಂದಲೂ ನಮ್ಮಲ್ಲಿ ಭಕ್ತಿಯು ಹೆಚ್ಚಾಗುತ್ತಾ [illegible]ರುತ್ತದೆ. ದೇವಋಷಿಗಳಾದ ನಾರದರು [illegible] ವಿಷಯದಲ್ಲಿ ಅವರ ಭಕ್ತಿಸೂತ್ರದಲ್ಲಿ ಹೀ[illegible]ಮ ಹೇಳಿರುವರು — ಈ ಕಲಿಯುಗದಲ್ಲಿ [illegible]ವರ ನಾಮವನ್ನು ಹಾಡುವದು ಮತ್ತು ಕೀರ್ತನೆ ಮಾಡುವದರಿಂದ ಮನುಷ್ಯನು ಮುಕ್ತಿ ಹೊಂದಬಹುದು. ಯಾಕಂದರೆ ಮನುಷ್ಯನಿಗೆ ಈ ಕಲಿಯುಗದಲ್ಲಿ ಹಠಯೋಗ, ಪ್ರಾಣಾಯಾಮ ಇತ್ಯಾದಿ ಮಾಡುವದಕ್ಕೆ ಶಕ್ತಿಯೂ, ಬ್ರಹ್ಮಚರ್ಯದ ಬಲವೂ ಕಡಿಮೆ, ಅಲ್ಲದೆ ಆಯುಷ್ಯ ಪ್ರಮಾಣವೂ ಕಡಿಮೆ ಮತ್ತು ವೇದವೇದಾಂತಗಳನ್ನು ಓದಿ ತಿಳಕೊಳ್ಳುವ ಶಕ್ತಿಯೂ ಇಲ್ಲ. ಆದುದರಿಂದ ಮನುಷ್ಯನಿಗೆ ಭಕ್ತಿಯೇ ಮುಖ್ಯವಾಗಿ ಬೇಕೆನ್ನುವರು. ದೇವಸ್ಥಾನದಲ್ಲಿ ಪುರಾಣಪಠಣ, ಹರಿಕೀರ್ತನೆ ನಡೆಯುವ ಸಮಯಗಳಲ್ಲಿ ನಾವು ಏಕಾಗ್ರ ಚಿತ್ತರಾಗಿ ಕೇಳತಕ್ಕದ್ದು. ಈ ವಿಷಯದಲ್ಲಿ ಗರ್ಗ ಮಹರ್ಷಿಗಳು ಹೀಗೆಂದು ಹೇಳಿರುವರು — ದೇವರ ಮಹತ್ವ ಮತ್ತು ಹೊಗಳಿಕೆಯನ್ನು ಕೇಳುವುದರಿಂದಲೇ ಮನುಷ್ಯನಲ್ಲಿ ಭಕ್ತಿಯು ಉಂಟಾಗುತ್ತದೆ. ಶ್ರೀ ಶುಕದೇವನ ಬಾಯಿಂದ ಹೊರಟ ದೇವರ ಮಹತ್ವದ ವಚನಗಳನ್ನು ಕೇಳಿ ಪರೀಕ್ಷಿತ್ ರಾಜನು ಮುಕ್ತಿ ಹೊಂದಿದನು. ಮಹಾಕಳ್ಳನೆನಿಸಿಕೊಂಡ ರತ್ನಾಕರನು ನಾರದ ಋಷಿಗಳ ವಚನಗಳನ್ನು ಕೇಳಿದ ಬಳಿಕಲ್ಲವೇ ಮಹಾ ತಪಸ್ವಿಯಾಗಿ ವಾಲ್ಮೀಕಿ ಎಂಬ ನಾಮಧೇಯದಿಂದ ರಾಮಾಯಣವನ್ನು ಬರೆದುದು? ಆದುದರಿಂದ ಈ ಮೇಲೆ ಹೇಳಿದ, ಸಂಗತಿಗಳನ್ನೆಲ್ಲಾ ಗಮನಕ್ಕೆ ತಂದುಕೊಂಡು ನಮ್ಮ ವರ್ತನೆಯನ್ನು ಸರಿಪಡಿಸಿದರೆ ನಮ್ಮಲ್ಲಿರುವ ದುರ್ಗುಣಗಳು ತೊಲಗಿ ಚಿತ್ತಶುದ್ಧಿಯಾಗಿ ಪರೋಪಕಾರ ಬುದ್ಧಿಯೂ, ಪರಸ್ಪರ ಪ್ರೇಮವೂ, ಭಯಭಕ್ತಿಗಳೂ ಉಂಟಾಗಿ ಪಾರಮಾರ್ಥಿಕ ಜ್ಞಾನಪ್ರಾಪ್ತಿಗೆ ಅನುಕೂಲವಾಗುತ್ತದಲ್ಲದೆ ನಮ್ಮ ಹಿರಿಯರು ಈ ದೇವಸ್ಥಾನಗಳನ್ನು ಸ್ಥಾಪಿಸಿದ ಉದ್ದಿಶ್ಯವನ್ನು ನಾವು ಸಾಧಿಸಿದಂತೆಯೂ ಆಗುತ್ತದೆ.

ವಾಚಕ ಮಹಾಶಯರೇ, ನಮಗೆ ದೇವಸ್ಥಾನಗಳು ಅಗತ್ಯಬೇಕೆಂಬುದು ಖಚಿತವಾಯಿತು. ಆದುದರಿಂದ ನಾವು ಎಲ್ಲಾ ವಿಚಾರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ಹಿರಿಯರ ಉದ್ದಿಶ್ಯಗಳನ್ನು ಮೇಲೆ ಹೇಳಿದಂತೆ ಸಾಧಿಸಿ ಶ್ರೀ ದೇವರ ಹಾಗೂ ಹಿರಿಯರ ಕೃಪೆಗೆ ಪಾತ್ರರಾಗಬೇಕಾಗಿ ನನ್ನ ವಿನಯಪೂರ್ವಕ ಪ್ರಾರ್ಥನೆ.

ದೇವರ ಭಯವೇ ಜ್ಞಾನದ ಆರಂಭ.

ರಾಮದಾಸ.

ತಿದ್ದುಪಡಿ

ಕಳೆದ ತಾ. 17ನೇ ಸಂಚಿಕೆಯಲ್ಲಿ ನಮಗೆ ದೇವಸ್ಥಾನಗಳು ಬೇಕೇ? ಎಂಬ ಲೇಖನದ 2ನೇ ಕಲಮಿನ 5ನೇ ಸಾಲಿನಲ್ಲಿ ಭಕ್ತಶಿರೋಮಣಿಯಾದ ಹನುಮಂತನು ಎಂಬದಾಗಿ ಶಬ್ದವನ್ನು ಕೂಡಿಸಿ ಓದಿರಿ.

ನೋಟೀಸು.

Canara Bank Limited,
Manjeshwar.
ಕೆನರಾ ಬೇಂಕ್ ಲಿಮಿಟೆಡ್,
ಮಂಜೇಶ್ವರ.

ಮಂಗಲ್ಪಾಡಿ ಪೋಸ್ಟು ಪಂಜಬೈಲಿನಲ್ಲಿರುವ ಭಂಡಾರಿ ಬಂಟರ ಮಗ ದೂಮಣ್ಣ ಸೆಟ್ಟಿಯವರು ಸದರಿ ಬೇಂಕಿನಿಂದ ತಾರೀಕು 18—3—33ರಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನಾಗಲೀ ನ ಅದರ ಬಡ್ಡಿಯನ್ನಾಗಲೀ ಕ್ಲಪ್ತ ಮ್ಯಾದೆಗೆ ಕೊಡದೆ ಇದ್ದು ಆ ಕುರಿತು ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸದ್ರಿಯವರು ಇನ್ಕಾರು ಮಾಡಿ ವಾಪಾಸು ಬಂದಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದು ಏನೆಂದರೆ:—

ಸದ್ರಿ ಸಾಲಗಾರರು ಬಾಕಿ ಅಸ್ಲು ಬಡ್ಡಿಯನ್ನು ಇದೇ 1938ನೇ ಇಸ್ವಿ ಜುಲಾಯಿ ತಾ. 9ರ ಒಳಗೆ ಸಲ್ಲಿಸಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದ್ರಿ ನಗಗಳನ್ನು 1938ನೇ ಇಸ್ವಿ ಜುಲಾಯಿ ತಾ. 11ನೇ ಸೋಮವಾರ ಮಧ್ಯಾಹ್ನ ಘಂಟೆ 2ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಬೇರೆ ಯಾವುದಾದರೂ ಒಂದು ದಿವಸ ಪುನಃ ನೋಟೀಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗ ಏಲಂ ಮಾಡಲಾದೀತು.

ಲೋನ್ ನಂಬ್ರ S. L. 138/36.
ಅಸಲು ರೂಪಾಯಿ 15—0—0 ಏಲಂ ತಾರೀಕು ವರೆಗೆ ಬಡ್ಡಿ ಟಪ್ಪಾಲು ಖರ್ಚು ಕೂಡಾ ರೂ. 3-15-8. ಜುಮ್ಲಾ ರೂ. 18-15-8.
ಈ ನೋಟೀಸು ಖರ್ಚು ಅಲ್ಲದಾ.

Office of the Bank, Manjeshwar. Date 21—6—'38. — **S. V. Kini,** Agent.

ನೇಗಿಲಿನಷ್ಟೆ ಮಹತ್ವದ್ದು ಕ್ವಿನೀನು

ಬೇಸಾಯಗಾರನಿಗೆ

'ಸಿಂಚೊನಾ' ಎಂದರೆ ಒಂದು ವಿಜಾತೀಯ ಮರದ ತೊಗಟೆ. ಅದರಲ್ಲಿ ಅನೇಕ ಔಷಧೀಯ ಗುಣಗಳು ಕೂಡಿವೆ, ಕ್ವಿನೀನನ್ನು ಈ 'ಸಿಂಚೊನಾ'ದಿಂದಲೆ ಸಿದ್ಧಪಡಿಸುತ್ತಾರೆ. ಈ ಕ್ವಿನೀನಿಗೆ ವೈದ್ಯಕೀಯ ಉಪಯೋಗ ಬಹಳವಿದೆ ಕಾರಣ ಮಲೇರಿಯಾದಿಂದ ನರಳುವವರಿಗೆ, ಇನ್‌ಫ್ಲೂಯಂಜಾ ನಿವಾರಣೆಗೆ ಅದೊಂದು ದಿವ್ಯ ಔಷಧಿ.

ಈ 'ಸಿಂಚೊನಾ' ತೊಗಟೆಯ ಕುರಿತು ಹಿಂದೆ ವಿರೋಧ ಪ್ರಚಾರಣೆಯನ್ನು ನಡೆಯಿಸಿದ ಆಂಗ್ಲೇಯ ಡಾಕ್ಟರನಾದ ರೊಬರ್ಟ ಟಾಲ್ಬೋರ್‌ನ ಕುರಿತು ವಿಚಿತ್ರ ಕಥೆಯೊಂದು ಈಗ ತಿಳಿದುಬಂದಿರುತ್ತದೆ. ಸಿಂಚೊನಾದ ಬದಲಾಗಿ ಯಾವತ್ತು ಜ್ವರಗಳಿಗೆ ತನ್ನದೇ ಒಂದು 'ಕಷಾಯ'ವನ್ನು ಆತನು ರೋಗಿಗಳಿಗೆ ಕೊಟ್ಟು, ಅವರನ್ನು ಬೇಗನೆ ಗುಣಪಡಿಸುತ್ತಿದ್ದನು. ಆತನ ಈ ಕಷಾಯವು ಮಹಾ ಪ್ರಸಿದ್ಧಿಯನ್ನು ಪಡೆಯಿತು. 1678ರಲ್ಲಿ ಇಂಗ್ಲಾಂಡಿನ ಅರಸರು, ಈ ಕಷಾಯಕ್ಕಾಗಿ ಆತನಿಗೆ ಮಹಾ ಬಿರುದಿನಿಂದ ಸನ್ಮಾನಿಸುವವರಾದರು. ಟಾಲ್ಬೋರನನ್ನು ತನ್ನ ವೈದ್ಯನಾಗಿ ನೇಮಕ ಮಾಡಿದರು. ವೈದ್ಯನಾಗುವ ಯೋಗ್ಯತೆಗಳು ಆತನಲ್ಲಿ ಯಾವವು ಇಲ್ಲದ್ದಾಗ್ಯೂ, ಆತನು ವೈದ್ಯಕೀಯವನ್ನು ನಡೆಯಿಸುವಂತೆ ಆತನಿಗೆ ಅಪ್ಪಣೆಯು ಕೊಡಲಾಯಿತು. ಟಾಲ್ಬೋರನು ಅರಸರಿಗೆ ಜ್ವರ ಹಿಡಿದಾಗ ಅನೇಕ ಬಾರಿ ಗುಣಪಡಿಸಿದನು. 1679ರಲ್ಲಿ ಫ್ರೆಂಚ್ ಅರಮನೆಗೆ ಬರಲು ಟಾಲ್ಬೋರನಿಗೆ ಆಹ್ವಾನ ಬಂದೀತು, ಅಲ್ಲಿ ಅನೇಕರು ಜ್ವರಪೀಡಿತರಾಗಿ ನರಳುತ್ತಿದ್ದರು. ಟಾಲ್ಬೋರನು ಅವರೆಲ್ಲರನ್ನು ತನ್ನ ಕಷಾಯದ ಪ್ರಯೋಗದಿಂದ ಕ್ಷಣಮಾತ್ರದಲ್ಲಿ ಗುಣಪಡಿಸಿಬಿಟ್ಟನು. ಜ್ವರಪೀಡಿತರಾದವರಲ್ಲಿ ಆಗಿನ ಫ್ರೆಂಚ್ ಚಕ್ರವರ್ತಿಗಳಾದ ಹದಿನಾಲ್ಕನೆ ಲೂಯಿಸರು, ರಾಜಕುಮಾರರು, ಮಂತ್ರಿ ಕೊಲ್ಬರ್ಟರೂ ಇದ್ದರು.

ಬಹುಮಾನವಾಗಿ ಟಾಲ್ಬೋರನಿಗೆ 2000 ಫ್ರೆಂಕುಗಳ ಪೆನ್ಶನು ದೊರಕಿತು. ಅಲ್ಲದೆ 2000 ಭಂಗಾರ ಮೊಹರುಗಳ ಬಹುಮಾನವು ದೊರಕಿತು—ಒಂದು ಶರ್ತದ ಮೇಲೆ. ಟಾಲ್ಬೋರನು ತನ್ನ ಕಷಾಯದ ರಹಸ್ಯವನ್ನು ತಿಳಿಸಬೇಕೆಂದಾಯಿತು. ಆಗ ಮಹಾಖ್ಯಾತಿಯನ್ನು, ಸಂಪತ್ತನ್ನು ಪಡೆದ ಆತನು, ಗುಟ್ಟನ್ನು ತಿಳಿಸಿಬಿಟ್ಟನು. ಆ ಕಷಾಯವನ್ನು ಆತನು ಸಿಂಚೊನಾ ತೊಗಟೆಯಿಂದ ಸಿದ್ಧಪಡಿಸುತ್ತಿದ್ದನೆಂದು ತಿಳಿಸಿದನು. ತಾನು ವಿರೋಧ ಪ್ರಚಾರಣೆ ನಡೆಯಿಸುವ ಸಿಂಚೊನಾ ಹುಡಿಯಿಂದ.

ಸಾಧಾರಣ ಎರಡು ಶತಮಾನ ತನಕ ಮಲೇರಿಯಾ ನಿವಾರಣೆಗೆ ಸಿಂಚೊನಾ ತೊಗಟೆಯ ಹುಡಿಯು ಉಪಯೋಗಿಸಲಾಗಿತ್ತು. 1820ರಲ್ಲಿ ಸಿಂಚೊನಾ ತೊಗಟೆಯಿಂದ ಕ್ವಿನೀನನ್ನು ತೆಗೆಯಲಾಯಿತು. ಅದನಂತರ ಮಲೇರಿಯಾ ನಿವಾರಣೆಗೆ ಅದೊಂದೆ ದಿವ್ಯ ಔಷಧಿಯಾಗಿರುತ್ತದೆ. ಉಷ್ಣವಲಯದ ದೇಶಗಳಲ್ಲಿ ಮಲೇರಿಯಾದ ಕಾಟ ಬಹಳವಿದೆ. ಅಲ್ಲಿ ಕ್ವಿನೀನಿಂದ ಮಹದುಪಕಾರವಿದೆ. ಅಲ್ಲಿ ಕ್ವಿನೀನು ರೈತನ ಒಂದು ಅವಶ್ಯವಾಗಿರುತ್ತದೆ. ಅಲ್ಲಿ ರೈತನಿಗೆ ನೇಗಿಲು ಎಷ್ಟು ಅಗತ್ಯವೊ, ಅಷ್ಟೆ ಅಗತ್ಯವು ಕ್ವಿನೀನು. ಕಾರಣ ಮಲೇರಿಯಾ ಹಾವಳಿಯಿಂದ ಪಾರಾಗಿ ಆರೋಗ್ಯದಿಂದಿರಬೇಕಾದರೆ ಆತನಿಗೆ ಕ್ವಿನೀನು ಅತ್ಯವಶ್ಯವು.

ಡಚ್ ಇಸ್ಟ್ ಇಂಡಿಸ್ ದ್ವೀಪಗಳಲ್ಲಿ ಅನೇಕ ಸಾಗುವಳಿ ಸಂಸ್ಥೆಗಳಿವೆ. ಕೆಲಸಗಾರರಲ್ಲಿ ಕ್ವಿನೀನನ್ನು ಹಂಚಿ ಮಲೇರಿಯಾ ಬಾಧೆಯನ್ನು ನಿವಾರಿಸಿದರೆ ಹೆಚ್ಚಿನ ಲಾಭವಿದೆ ಎಂಬುದು ಅವರ ಅನುಭವವಾಗಿರುತ್ತದೆ. ಅದೇ ರೀತಿಯಲ್ಲಿ ನಮ್ಮ ದೇಶದ ಸಂಸ್ಥೆಗಳೂ ಕೂಡ ಮಳೆಗಾಲ, ಚಳಿಗಾಲದಲ್ಲಿ ಕೆಲಸಗಾರರು ಮಲೇರಿಯಾ ಇನ್‌ಫ್ಲೂಯಂಜಾ ಜ್ವರಗಳಿಂದ ಶಯ್ಯೆ ಹಿಡಿಯದಂತೆ ಕ್ವಿನೀನನ್ನು ಹಂಚುವ ಕ್ರಮವನ್ನಿಟ್ಟುಕೊಂಡರೆ, ಅದರಿಂದ ಕೆಲಸಗಾರರಿಗೆ ಮಾತ್ರ ಉಪಕಾರವಾಗುವುದಲ್ಲದೆ, ಅವರಿಗೂ ಲಾಭವಿದೆ. ಅದರಿಂದ ಮಲೇರಿಯಾ ಹಾವಳಿಯಿಂದ ಉಂಟಾಗಬಹುದಾದ ಕಷ್ಟನಷ್ಟಗಳನ್ನು ತಪ್ಪಿಸಿಕೊಳ್ಳಬಹುದು. ಇನ್‌ಫ್ಲೂಯಂಜಾ (ಗಾಂಡಿಗುಡ್ಡಿ) ಜ್ವರವನ್ನು ನಿವಾರಿಸುವರೆ ಕ್ವಿನೀನಿನಲ್ಲಿ ಶ್ರೇಷ್ಠವಾದ ಗುಣಗಳಿವೆ. ದಿನಾಲೂ 3 ಗ್ರೇನು ಕ್ವಿನೀನ ಪ್ರಕಾರ ಸೇವಿಸಿದರೆ, ಇನ್‌ಫ್ಲೂಯಂಜಾ ಜ್ವರವು ಬಾರದಂತೆ ಮಾಡಬಹುದು.

ಈ ತರದಲ್ಲಿ ಜಾಗರೂಕತೆಯನ್ನು ತೆಗೆದುಕೊಳ್ಳುವುದರಿಂದ, ಸಂಧಿಗ್ಧ ಸಮಯಗಳಲ್ಲಿ ಕಾರ್ಖಾನೆ, ಗಿರಣಿ, ಕಾಫಿ, ಚಹಾ ತೋಟ, ಶಾಲೆ, ಆಫೀಸು ಇತ್ಯಾದಿಗಳಲ್ಲಿ ಕಷ್ಟನಷ್ಟಗಳು ಉಂಟಾಗದಂತೆ ಮಾಡಬಹುದು.

ಪಿತ್ತ

ಕೆಲವು ಉದರರೋಗಗಳು ವಿಶೇಷವಾದವುಗಳು. ಕೆಲವು ಅತ್ಯಂತ ವೇದನಾಮಯವಾಗಿರುವುವು. ಮತ್ತೆ ಕೆಲವು ಅತ್ಯಂತ ಕಷ್ಟಮಯವಾಗಿರುವವು. ಪಿತ್ತವು ಹೆಚ್ಚುವುದು, [illegible] ಎಸ್. ಡಿ. ಜೆ. ಬಿ.

"ನಾನು ಪಿತ್ತ ಉಪದ್ರವದಿಂದ ಮಹಾ ಸಂಕಷ್ಟಕ್ಕೆ ಒಳಗಾಗಿದ್ದೆನು. [illegible]"

"[illegible] ಮೆಕ್ಲೀನ್ ಬ್ರೆಂಡ್ [illegible]"

"[illegible] ನವಜೀತನವು ಉಂಟಾಗುತ್ತದೆ."

[illegible]

Alex. C. Maclean

[illegible] ಉಪಯೋಗಿಸಿದ ನಂತರ ಸಂಕಟಪಡಲಾರಿರಿ.

ಇಂತಹ ನಮೂನೆಯ [illegible]

[illegible]

ಜೆ. ಎಲ್. ಮೊರಿಸನ್, ಸನ್ ಎಂಡ್ ಜೋನ್ಸ್
(ಇಂಡಿಯಾ) ಲಿಮಿಟೆಡ್,
ಸ್ಟೆಂಡರ್ಡ್ ಬಿಲ್ಡಿಂಗ್, [illegible] ರೋಡ್, ಮುಂಬಯಿ.

S. N. [illegible]

WANTED

Agents for Silk Shirting, Coating, Sarees, etc. Pay Rs. 100 T. A. Extra. Ask free samples and particulars.

Girson Knitting Works,
Ludhiana.

DIAMONDS! DIAMONDS!
BEST BRILLIANCY!

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವಯಂ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಜಂಸನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಮಂಗಳೂರಿನ ಪೇಟೆ ಧಾರಣೆ

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬಿಳಿ ಗುಡ್ಡ ಮು,	1 —14	1 —14
ರಾಶಿ ಅಕ್ಕಿ ...	3— 8	4— 0
ಸುಗ್ಗಿ ...	4 —2	4— 2
ಗುಡ್ಡ ...	4— 8	4— 8
ಊರ ಅಕ್ಕಲ್ ಬೆಳ್ತಿಗೆ	4— 7	4— 7
ರಂಗೂನು ಬೆ. ಗೋ. ಗಳ್ಳ...	7 — 2	7— 4
ಎಲ್ಲೂರು ಬೆ. ಮು. ಗಳ್ಳ...	3—14	4— 0
ಗೋದಿ ಗೋಣಿ ಗಳ್ಳ ...	13— 0	14— 8
ಕೊಗ್ರಿ ಗೋಣಿ ಗಳ್ಳ ...	11— 8	18— 8
ಹುರುಳಿ ಗೋಣಿ ಗಳ್ಳ ...	6— 0	6— 2
ಕಡಲೆ ಗೋಣಿ ಗಳ್ಳ ...	9 — 8	10 — 8
ಕೊಗಂಬೇಳೆ ಗೋಣಿ ಗಳ್ಳ...	17— 8	18— 0
ಉದ್ದು ಗೋಣಿ ಗಳ್ಳ ...	9— 0	9 — 8
ಹೆಸರು ಗೋಣಿ ಗಳ್ಳ ...	9—12	10— 8
ಊರುಬೆಲ್ಲ ಖಂಡಿ ಗಳ್ಳ ...	36— 0	40— 0
ಉಪ್ಪು ಗೋಣಿ ಗಳ್ಳ ..	4— 8	5— 4
ಕೊಪ್ಪು ಖಂಡಿ ಗಳ್ಳ ...	46 —8	46— 8
ಎಳ್ಳಿಂಡಿ ಖಂಡಿ ಗಳ್ಳ ...	25 —	26 — 0
ತೆಂಗಿನ ಎಣ್ಣೆ ಮಣ ಗಳ್ಳ...	3 — 7	3— 7
ಎಳ್ಳೆಣ್ಣೆ ಮಣ ಗಳ್ಳ ...	6— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳ...	6— 5	7— 5
ಮೋರಿಸ ಸಕ್ಕರೆ ಮು. ಗಳ್ಳ...	2— 13	2 —14
ಮೆಣಸು ...	4— 8	6— 0
ಸಾಸಿವೆ ಮುಡಿ ಗಳ್ಳ ...	5 — 8	6— 8
ಕಾಳುಮೆಣಸು ಹ ಪೇ.ಗೆ ..	16 – 0	17– 8
ಯೇಲಕ್ಕಿಬೀಜ ಮಣಗಳ್ಳ.	80— 0	85— 0
ಗೇರುಬೀಜ ಮು/ಗಳ್ಳ ...	8—14	8—15
ಕಬ್ಬಿಣ ಖಂಡಿ ಗಳ್ಳ ..	50— 0	55— 0
ತಾಂಮ್ರತಗಡು ಮ ಗಳ್ಳ...	14— 12	15— 0
ತಾಂಮ್ರಪಾತ್ರಗಳು ಮ ಗಳ್ಳ	14— 8	15— 0
ಬೀಡಬೆಳ್ಳಿ ಸೇರು ಗಳ್ಳ .	13— 8	14— 0
ಹಿತ್ತಾಳೆ ತಗಡು ಮ ಗಳ್ಳ.	12— 0	12— 0
ಸವನು ಗಳ್ಳ	22— 8	23— 0
ಘಟ್ಟಸ ಹುಳಿ ಖಂಡಿ ಗಳ್ಳ	40— 0	45— 8
ನೇಟಿವ್ ಕಾಫಿ ಖಂಡಿ ಗಳ್ಳ	140— 0	148— 0
ಪ್ಲಂಟೇರಿ ಕಾಫಿ ಖಂಡಿ ಗಳ್ಳ.	185— 0	198— 0
ಮಡಿಕೇರಿ ಏಲಕ್ಕಿ ಮಣ	35— 0	39 — 0

ಡೋಂಗರೇ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೯ನೆಯ ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಬ। ೧೩ ಶನಿವಾರದಿಂದ ಆಷಾಢ ಬ। ೪ ಶುಕ್ರವಾರದ ವರೇಗಿನ ಪಂಚಾಂಗ. (೧೯೩೭ನೇಯ ಮಿಥುನ ಕಾರ್ತೆಲ್)

25	ಶನಿ	೨೬	೬॥	ಕೃತಿಕಾ	೩೩॥	೧೧	[illegible]
26	ರವಿ	೨೭	೧।	ರೋಹಿಣಿ	೩೦	೧೨	
27	ಸೋ	೨೮	೪೯।	ಮೃಗಶಿರಾ	೨೬॥	೧೩	
28	ಕುಜ	೨೯	೪೩।	ಆದ್ರಾ	೨೨॥	೧೪	
29	ಬುಧ	೩೦	೩೬।	ಪುನರ್ವಸು	೧೮॥	೧೫	
30	ಗುರು	೧	೩೧॥	ಪುಷ್ಯಾ	೧೪॥	೧೬	
1	ಶುಕ್ರ	೨	೨೬।	ಆಶ್ಲೇಷಾ	೧೦॥	೧೭	

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ

ಜಗತ್ಪ್ರಸಿದ್ಧ ಆಯುರ್ವೇದೀಯ ಔಷಧಗಳು.

ಶ್ರೀಕರ ಕಸ್ತೂರಿ ಮಾತ್ರೆ

ಮಕ್ಕಳಿಗೆ ಸಂಜೀವನ, ಯುವಕರಿಗೆ ಮಿತ್ರ, ವೃದ್ಧರಿಗೆ ಆರೋಗ್ಯಪ್ರದ ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ದೇಶಗಳಲ್ಲೂ, ಎಲ್ಲಾ ಹವಗಳಲ್ಲೂ ಶರೀರವನ್ನು ರಕ್ಷಿಸುತ್ತದೆ ಅಜೀರ್ಣವನ್ನು ಪರಿಹರಿಸುತ್ತದೆ ಸೋಂಕುರೋಗಗಳನ್ನು ನಿವಾರಣೆ ಮಾಡುತ್ತದೆ ಆಬಾಲವೃದ್ಧರಿಗೂ ಕೆಮ್ಮು, ವಿಧವಿಧ ಜ್ವರ, ನೆಗಡಿ, ಹಲ್ಲುನೋವು, ಉಬ್ಬಸ, ಅರೋಚಕ, ಆಲಸ್ಯ ಮುಂತಾದ ಶೀತವಾತದಿಂದ ಉಂಟಾಗುವ ಸಮಸ್ತ ರೋಗಗಳನ್ನೂ ಜಾಗ್ರತೆ ಗುಣಪಡಿಸುತ್ತದೆ ಬಾಣಂತಿಯರಿಗೆ ಅಮೃತತುಲ್ಯವಾದುದು ಎಲ್ಲಾ ಕಾಲದಲ್ಲೂ ನಿಮ್ಮನ್ನು ಕಾಪಾಡುವುದು • ಬೆಲೆ —2 ಮತ್ತು 4 ಆಣೆ

ಬಾಲಸಂಜೀವಿನಿ

ಈ ಅಮೃತವು ಮಕ್ಕಳಿರುವ ಮನೆಯಲ್ಲಿ ಸರ್ವದಾ ಇರಬೇಕಾದುದು. 1 ವರ್ಷದ ಲಾಗಾಯಿತು 10 ವರ್ಷದ ವರಿವಿಗೆ ಉಪಯೋಗಿಸಬಹುದು 1-2 ಮಾತ್ರೆಗಳನ್ನು ವಯೋಗುಣವಾಗಿ ಆಗಾಗ್ಯೆ ಉಪಯೋಗಿಸಿದರೆ ಸುಖವಾಗಿ 2-3 ವೇಳೆ ಭೇದಿಯಾಗಿ ಮಕ್ಕಳಿಗೆ ಯಾವ ರೋಗವೂ ಬರಲಾರದು. ಅಸಾಧ್ಯವಾದ ಪಕ್ಕೆ ಶೀತ ವಿಧವಿಧ ವಾಯು, (Convulsions and fits), ಹೊಟ್ಟೆಯುಬ್ಬರ, ಮಂದಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ಮಲಬಂಧಗಳಲ್ಲಿ ಒಂದು ಹೊತ್ತಿನ ಔಷಧದಿಂದಲೇ ಅದ್ಭುತ ಗುಣವು ತೋರುವುದು 50 ಮಾತ್ರೆ 4 ಆಣೆ

ಗೋರೋಚನ ಮಾತ್ರೆ

ಈಗ ಹುಟ್ಟಿದ ಮಗುವಿನಿಂದ ಐದು ವರ್ಷಗಳ ವರಿವಿಗೆ ಉಪಯೋಗಿಸಬಹುದು ಬಹಳ ಸೂಕ್ಷ್ಮ ಪ್ರಕೃತಿಯುಳ್ಳ ಮಕ್ಕಳಿಗೆ ಸುಖವಾಗಿ 1-2 ವೇಳೆ ಮಾತ್ರ ಭೇದಿ ಮಾಡಿಸುವುದರಲ್ಲಿ ಈ ಮಾತ್ರೆಗಳು ಕೈಗೊಂಡ ಸಿದ್ಧಾಮೃತ ಯಾವ ಮಕ್ಕಳಿಗೆ ಗೋರೋಚನ ಮಾತ್ರೆಯಿಂದ ಭೇದಿಯಾಗುವುದಿಲ್ಲವೋ ಅಂಥಾ ಮಕ್ಕಳಿಗೆ 'ಬಾಲಸಂಜೀವಿನಿ ಮಾತ್ರೆ'ಯನ್ನು ಉಪಯೋಗಿಸಬಹುದು 24 ಮಾತ್ರೆ 6 ಆಣೆ

ಜ್ವರ ಕೇಸರಿ

ಸಮಸ್ತ ವಿಧವಾದ ಛಳಿಜ್ವರ, ಮಲೇರಿಯಾಜ್ವರ, ಪ್ಲೇಗುಜ್ವರ, ಇನ್‌ಫ್ಲುಯಾನ್ಜಾಜ್ವರ, ವಾಯುದೇ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ —8 ಆಣೆ.

ಅಮೋದಿನಿ

ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳು 25 ವರ್ಷಗಳಿಂದಲೂ ಜನರ ಪ್ರೀತಿಯನ್ನು ಸಂಪಾದಿಸಿರುವುದು. ಸಂಗೀತಗಾರರಿಗೆ ಸುಖವಾಗಿ ಹಾಡಲು ವಿಶೇಷ ಸಹಾಯ ಮಾಡುವುದು ಬಾಯಾರಿಕೆಯನ್ನು ಶಮನಮಾಡುವುದು ಸೋಂಕುರೋಗಗಳು ಶರೀರಕ್ಕೆ ಅಂಟದಂತೆ ಶರೀರವನ್ನು ಕಾಪಾಡುವುದು ಮಕ್ಕಳ ಮತ್ತು ದೊಡ್ಡವರ ಕೆಮ್ಮನ್ನು ತಕ್ಷಣ ಪರಿಹರಿಸುವುದು. ಆಬಾಲವೃದ್ಧರೂ ಪ್ರೀತಿಯಿಂದ ಸೇವಿಸಲು ಅರ್ಹವಾಗಿದೆ. ಬೆಲೆ: -0—4—0, 0—2—0

ನಮ್ಮ ನಂಜನಗೂಡು ಸದ್ವೈದ್ಯಶಾಲಾದಲ್ಲಿ ತಯಾರಾಗುವುದೇ "ನಂಜನಗೂಡು ಟೂತ್-ಪೌಡರ್" ಎಂಬುದು ಜ್ಞಾಪಕದಲ್ಲಿರಲಿ. ನಕ್ಕಲ್ ಮಾಲುಗಳನ್ನು ಕೊಂಡು ಮೋಸಹೋಗಬೇಡಿರಿ. ಕ್ಯಾಟಲಾಗನ್ನು ಬರೆದು ತರಿಸಿರಿ.

ಸದ್ವೈದ್ಯಶಾಲಾ, ನಂಜನಗೂಡು.

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction r t l. d. ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—K R. **GURU**, *Managing Director*

Use the soaps

KNOWN ALL OVER

WISCO'S.

MINAR

&

TAJAMAHAL 'Red'

Bar Soaps.

POPULAR IN THE MARKET

Sole Distributer—

P. G. KAMATH,
Kashmir House,
Marnamikatta, MANGALORE.

'DILROZ' Redg

'Dil Roz' is a sure cure for Oriental sores local sores, all kinds of deep rooted sores, skin eruptions. Pimples, Eczema, Ringworm, Sinus Fistula auxillary-Abscess

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಜಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:–

1. ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ
2. ಕುಂದಾಪುರದಿಂದ ಬಾಳೆಬರೆಗಾಗಿ ಶಿವೊಗ್ಗಾ
3. ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಹಳ್ಳಿ, ಶಿವೊಗ್ಗಾ ಹಂಹರ ವರೆಗೆ.
4. ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ.
6. ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

THE

Canara Industrial & Banking Syndicate Ltd.,

Will open new Branches **at suitable centres in** order to **extend** their facilities and service to wider areas.

Young men, preferably graduates, not above the age of 30 and of good influence and coming from business circles and respectable families, will be enrolled for training for the post of Agents and Inspectors of Branches under the following conditions:

~~A sum of Rs. 500 will have to be first paid to the~~ Syndicate by each of the candidate selected for training, which amount is not returnable in any case.

Such candidates will have to be on probation at the Head Office of the Syndicate and undergo a course of practical training for one year during which period they will have to attend 50 lectures on Banking and other allied subjects.

During the period of probation, each will be given free quarters and Rs 25 per month as stipends from the Syndicate.

They must pass an examination which will be held by the Bank at the end of one year. Those who fail will have to undergo an additional training for a period of 3 months during which period no stipends as above mentioned will be allowed.

After passing the examination or additional training as the case may be, they will be given suitable posts on a grade of Rs 40–10/2–200 (No extra allowance is given except free quarters wherever available and attached to Office premises.

Applications for the posts under the above mentioned terms are received up to 25th June, 1938, by which date they should reach the Head Office of the Syndicate. ~~Applications should be in the Applicants' own hand-~~writing and they must correctly state their age, qualification, the languages they know to read, write and speak and shall be accompanied by at least three recent testimonials (originals) regarding character, qualification etc., wherever possible they may be submitted through one of the Branches of the Syndicate.

30TH MAY 1938
"Mukund Nivas"
UDIPI

T. M. A. PAI,
Chairman.

[illegible] ರೂ. ೩-೦-೦. Established 1906. Regd. No. M. 3406. ಟಪ್ಪಾಲು ಹಾಸಲು ಸೇರಿ ರೂ. ೩-೧೨

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಲಾಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಷಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆ ಮಾಡಿಕೊಳ್ಳಲು ಬೇರೆ ಯಾವ ಮಂತ್ರ–ತಂತ್ರ–ಯಂತ್ರಗಳೂ ಇಲ್ಲ, ಗ್ರಹಶಾಂತಿಯೊಂದೇ ಉಪಾಯ. ನವಗ್ರಹ ಯಂತ್ರವೇ [illegible] ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ, ಉಳಿದುದೆಲ್ಲವೂ ಜೊಳ್ಳು! ಜೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ಜನಗಳಿಗೆ ಲಾಭವಾಗುತ್ತ ಬಂದಿದೆ. ಹಾನಿ, ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸ್ವಲ್ಪ ಬೆಲೆಗೆ ಕೊಡುವ ಎದೆಗಾರಿಕೆ ಯಾರಿಗೂ ಇಲ್ಲ. ಈ ವಸ್ತುವಿನಿಂದ ಮುಕ್ತರಾದ ಅನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ.......... ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನನ್ನ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ, ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಆಶ್ಚರ್ಯಕರವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಆವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ಇಷ್ಟವಾದ ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರಾರು-ಎಂಟೆಂಟು ಅಲ್ಲ, ಹನ್ನೆರಡು–ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಒಂದಾಣೆ ತಿಕೀಟು ಕಳಿಸಿದ್ದಲ್ಲಿ ಗ್ಯಾರಂಟೀ ಬರೆದುಕೊಡುವೆವು. ಇಷ್ಟೆಲ್ಲಾ ಇದ್ದೂ ಲಾಭವಾಗದೆ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ಮರಳಿ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸ್ವಲ್ಪನೆ ದುಡ್ಡು ಹಾಳು ಆಗುವದೆಂಬ ಭಾವನೆಯಿಂದ ಈ ಚಮತ್ಕಾರವನ್ನು ಸ್ವಲ್ಪ ತಿರಸ್ಕರಿಸಿದರೆ ಜನ್ಮಜನ್ಮಾಂತರದಲ್ಲಿಯೂ ಪಶ್ಚಾತ್ತಾಪವನ್ನು ಪಡಬೇಕಾಗುವುದು. ಈ ಮಾತನ್ನು ನೆನಪಿನಲ್ಲಿಡಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದಲ್ಲಿ ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ, ವೃದ್ಧ–ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷರ ಉಪಯೋಗಕ್ಕಾಗಿ ೩ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೨ ರೂಪಾಯಿ. ಒಟ್ಟಿಗೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪ್ಪಾಲು ಖರ್ಚು ೮ ಆಣೆ. ಬೆಳ್ಳಿಯ ಯಾತ್ರ ೩ ರೂಪಾಯಿ.



ಬಂಗಾರದ್ದು ಬೇಕಾಗಿದ್ದರೆ ೫ ರೂಪಾಯಿ ೪ ಆಣೆ. [illegible] ಒಂದರಿಂದ ನಾಲ್ಕು ತಿಂಗಳೊಳಗೆ ಉಡೀದು [illegible] ಅನ್ನು ತರಿಸಿ. ಬೆಲೆ ೫ ರೂ. ೧೧ ಆ. ಹೆಚ್ಚು ಕೆಲಸಗಳು ಶೀಘ್ರವಾಗಬೇಕಾದ್ದರೆ ಸ್ಪೆ– [illegible] ತರಿಸಿ. ಬೆಲೆ ೯ ರೂ. ೧೧ ಆ. ೩ ಸ್ಪೆ– [illegible] ಪ್ರತಿಯೊಂದಕ್ಕೂ ೮ ಆಣೆ. ಅಂಚೆವೆಚ್ಚ ಪ್ರತ್ಯೇಕವಾಗಿ. ಪರದೇಶಕ್ಕೆ ಕಳುಹುವದಾದರೆ ಪ್ರತಿಯೊಂದಕ್ಕೂ ೫ ಶಿಲಿಂಗು ಛಾರ್ಜು ಬೀಳುವುದು. ಈ ಯಂತ್ರಗಳಿಗೆ ಬೇರೆ ಯಾವ ಸಾಧನಗಳೂ ಬೇಕಾಗಿಲ್ಲ.

ಧನಸಿದ್ಧಿ— ಹೆಚ್ಚಾಗಿ ಧನಪ್ರಾಪ್ತಿಯಾಗಬೇಕೆನ್ನುವವರೂ [illegible] ಧನಪ್ರಾಪ್ತಿಯಾಗಬೇಕೆನ್ನುವವರೂ ಧನಸಿದ್ಧಿ ಕವಚವನ್ನು ತರಿಸಬೇಕು. ಇದನ್ನು [illegible] ಹತ್ತಿರ ಇಟ್ಟುಕೊಂಡ ಒಳಗೆ ಧನಪ್ರಾಪ್ತಿಯಾಗುವುದಲ್ಲದೆ ಮಾಡಿದ [illegible] ಪರಿಸ್ಥಿತಿ [illegible] ಬೆಲೆ ೩ ರೂ. ಬೆಳ್ಳಿಯದು ೩ ರೂ. ಬಂಗಾರದ್ದು [illegible] ಟಪ್ಪಾಲು ಹಾಸಲು ೮ ಆಣೆ.

ಹಸ್ತರೇಖೆ— ಹಸ್ತರೇಖೆಯನ್ನು ತೋರಿಸಲೆಟ್ಟಿಸುವ ಸ್ತ್ರೀಪುರುಷರು [illegible] ವರೆಗಿನ ನಮ್ಮ ಹಸ್ತರೇಖೆಯನ್ನು [illegible] ಹಸ್ತರೇಖಕರು ಪುರುಷರು ಬಲಗೈಯ ಹಾಗೂ ಸ್ತ್ರೀಯರು ಎಡಗೈಯ ಗುರುತನ್ನು ಕಾಗದದ ಮೇಲೆ ಕರೀ ಮಸಿಯಿಂದ ಮಾಡಿಸಿ ಕಳಿಸಿಕೊಡಬೇಕು. ಹಸ್ತರೇಖೆಯನ್ನು ನೋಡುವ ಛಾರ್ಜ [illegible] ರೂ. ಹಸ್ತರೇಖೆಯವರು ಹಸ್ತದ [illegible] ಕಾಗದದೊಂದಿಗೆ ೨ ರೂ. ೧ ಆ. ಕಳಿಸಿಕೊಡಬೇಕು.

ಎಲ್ಲಾ ಪತ್ರವ್ಯವಹಾರವನ್ನೂ [illegible] ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ, ಮಂತ್ರ, ಕವಚ, ಎಂಬ ಬೇರೆ ಬೇರೆ ಹೆಸರುಗಳನ್ನಿಡುತ್ತಾರೆ. ತಮ್ಮ ಮನಸ್ಸಿಗೆ ತೋಚಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ, ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:— ಪಂಜಾಬ್ ಸಿವಿಲ್ ಸೆಕ್ರೆಟರಿ ಸಿಮಲಾ (ಎ. ಆರ್. ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದನ್ನು ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವತ್ತಿರುವ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೨ರೂ. ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ.ಯಿಂದ ಬೇಡಿದಲ್ಲಿ ೨ ರೂ. ೧೦ ಆಣೆ ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ಹುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.